ಮಿಸ್ಟರ್ ಮತ್ತು ಮಿಸೆಸ್ ಟಾಸ್ಕರ್ ಮತ್ತು ಮ... ಯರೇ ಈ ಸೆಂಟರನ್ನು ತೆರೆಯಲು ಮಿಸೆಸ್ ಟಾಸ್ಕರ್ ... ಸಾನಿಯವರನ್ನು ಕೇಳಿಕೊಳ್ಳುವ ಮುಂಚೆ ಎರಡು ... ಗಳನ್ನು ಆಡಬೇಕೆಂತ ನನ್ನನ್ನು ಕೇಳಿಕೊಂಡಿದ್ದಾರೆ ... ಗಿನಲ್ಲಿ ರೆಡ್‌ಕ್ರಾಸ್ ಚಳವಳವು ಹೊಸದಾಗಿ ಪ್ರಾರಂ... ದದ್ದು ಕಳೆದವರ್ಷ ಸೆಂಟ್‌ಜಾನ್ ಆಂಬ್ಯುಲೇನ್ಸ್ ... ಮೆಂಬರರ ಶಾಖೆಯೊಂದು ಕೊಡಗಿನಲ್ಲಿ ಮೆ|| ಅಸ್ಪ...

ಕಾರ್ಯಪ್ಪನವರ ಆದೇಶದಲ್ಲಿ ಪ್ರಾರಂಭವಾಯಿತು. ಕಳೆದ ವರ್ಷ ಮಿಸೆಸ್ ಬಾರ್ಟನ್ ಕೊಡಗಿಗೆ ಬಂದಾಗ ಒಂದು ರೆಡ್ ಕ್ರಾಸ್ ಸಂಘವನ್ನೂ ಇಲ್ಲಿ ಸ್ಥಾಪಿಸಬೇಕೆಂತ ಹೇಳಿದ ಮೇರೆ ಕೆಲವು ಜನರು ಸೇರಿದ ಮೀಟಿಂಗ್ ಒಂದು ನಡೆಯಿತು. ಎರಡು ಸಂಘಗಳಿಗೆ ಈ ಚಿಕ್ಕ ದೇಶದಲ್ಲಿ ಎಡೆಯಿಲ್ಲವೆಂತ ತೋರಿ ಮೆ|| ಕಾರ್ಯಪ್ಪನವರಿಗೆ ವ್ಯಸನವು ಟಾಗುವಂತೆ ಸೆಂಟ್ ಜಾನ್ ಅಮ್ಬ್ಯುಲೆನ್ಸ್ ಸಂಘವೆಂಬ ಹೆಸರನ್ನು ಬಿಟ್ಟು ಅವರು ಮದುವೆಯಾಗದವರಾದರೂ ರೆಡ್‌ಕ್ರಾಸ್ ಸಂಘವೆಂಬ ಇನ್ನೊಂದು ಕೂಸನ್ನು ಪಾಲಿಸುವ ಭಾರವು ಅವರಮೇಲೆ ಬಿತ್ತು. ಈ ಸಂಘದ ಉದ್ದೇಶಗಳು ಕೊಡಗಿನ ಜನರಿಗೆ ಇನ್ನೂ ಚೆನ್ನಾಗಿ ಮನದಟ್ಟಾಗಲಿಲ್ಲ. ಅದರ ಅನೇಕ ಕಾರ್ಯಗಳಲ್ಲಿ ಮಕ್ಕಳ ಕ್ಷೇಮವನ್ನು ನೋಡುವದು ಒಂದಾಗಿದೆ.

ಈ ಚಳವಳಿವು ನಾಗರೀಕತೆಯನ್ನು ಹೊಂದಿದ ಈಗಿನ ಸಮಾಜದ ಕರ್ತವ್ಯವನ್ನು ಸಮಾಜವು ತಿಳಿದ ಎಂಬುದರ ಸೂಚನೆಯಾಗಿದೆ. ಬಾಯ್ ಸ್ಕೌಟ್ ಮತ್ತು ಗರ್ಲ್ ಗೈಡ್ ಎಂಬ ಚಳವಳಿವು ಪ್ರಾರಂಭವಾದ ಮೇಲೆ ಹದಿನಾರಿಗಿಂತ ಚಿಕ್ಕವಾದ ಕೂಸುಗಳ ಕ್ಷೇಮಕ್ಕೆ ಕೆಲಸಮಾಡಬೇಕೆಂತ ಯೋಚಿಸಿ ಜನರು ಗರ್ಭಿಣಿಯರ ಕ್ಷೇಮವನ್ನು ಸಹ ನೋಡಲು ಪ್ರಾರಂಭಿಸಿದರು. ಗರ್ಭಿಣಿಯರ ಆರೋಗ್ಯವನ್ನು ನೋಡಿಕೊಂಡು ಅವರಿಗೆ ಸರಿಯಾದ ಆಹಾರ ಕೊಟ್ಟು ಹೆತ್ತನಂತರ ಬಾಣಂತಿಯರ ಆರೋಗ್ಯವನ್ನು ಸಹ ಕಾಪಾಡಿಕೊಂಡರೆ ಒಳ್ಳೇ ಕೂಸುಗಳು ಆಗುತ್ತವೆ. ಕೂಸುಗಳನ್ನು ಚೆನ್ನಾಗಿ ನೋಡಿಕೊಂಡು ತಾಯಿಯಾಗಿ ಮಕ್ಕಳಿಗೆ ಆಹಾರ ಕೊಡಬೇಕೆಂಬುದನ್ನು ಕಲಿಸಿಕೊಟ್ಟರೆ ಪ್ರಯೋಜನಕಾರಿಯಾಗುತ್ತದೆ. ಈ ಕಾರ್ಯವು ಎಷ್ಟು ಅವಶ್ಯವಿದೆಯೆಂಬುದನ್ನು ಜನನ ಮರಣದ ಪಟ್ಟಿಯನ್ನು ನೋಡಿದರೆ ಗೊತ್ತಾಗುತ್ತದೆ. ಕೊಡಗಿನಲ್ಲಿ ಕಳೆದ ವರ್ಷ 18 ಶಿಶುಗಳು ಸತ್ತೇ ಹುಟ್ಟಿದವು. ಹುಟ್ಟಿ ಒಂದು ವಾರ ಪೂರೈಸುವದರೊಳಗಾಗಿ 250 ಶಿಶುಗಳು ಸತ್ತವು. ಒಂದು ತಿಂಗಳೊಳಗೆ 140 ಆರು ತಿಂಗಳೊಳಗೆ 180 ಸತ್ತವು. ಅಂತು ಒಂದು ವರ್ಷದಲ್ಲಿ 700 ಶಿಶುಗಳು ಸತ್ತವು. ಅಂಥಾ 700 ಚಿಕ್ಕ ಕೂಸುಗಳನ್ನು ಇನ್ನು ಮುಂದೆ ಸಾಯದಾಗಿ ಇಟ್ಟರೆ ಎಂತ ಭಾವಿಸಬೇಕು. ಇಂಥಾ ಅದ್ಭುತ ಮರಣ ಸಂಖ್ಯೆಗೆ ಕಾರಣಗಳ್ಯಾವವೆಂದರೆ ಹುಟ್ಟಿಗೆಯಲ್ಲಿ ಕಷ್ಟ, ಹೆತ್ತನಂತರ ಬಾಣಂತಿಗೆ ಬರುವ ವಿಷ ಜ್ವರ ಮೊದಲಾದ ಕಾರಣದಿಂದ ಶಿಶುವನ್ನು ಜಾಗರೂಕತೆಯಿಂದ ನೋಡದೆ ಇರುವದೇ ಕಾರಣವಾಗಿದೆ. ಜ್ವರ ಮತ್ತು ಆಹಾರ ಕೊಡುವದರಲ್ಲಿ ಕ್ರಮತಪ್ಪುವದು ಸಹ ಕಾರಣಗಳಾಗಿವೆ.

ಈ ದೇಶದ ಹೆಂಗಸು ಪ್ರಸವದ ಸಮಯದಲ್ಲಿ ಪಡುವ ಕಷ್ಟವನ್ನೂ ಮತ್ತು ಸಂಕಟವಾದದನ್ನು ಕಷ್ಟಗಳನ್ನೂ ವರ್ಣಿಸಲಸಾಧ್ಯ. ಜನರಲ್ಲಿ ತಿಳುವಳಿಕೆಯಿಲ್ಲದಿರುವದೂ ಮತ್ತು ಅನುಭವವಿಲ್ಲದ ಹಜಾಮ ಸೂಲಗಿತ್ತಿಯರೂ ಈ ಕಷ್ಟಕ್ಕೆ ಕಾರಣವಾಗಿದೆ. ಈ ಸೂಲಗಿತ್ತಿಯರು ಬಹಳ ಅಶುಚಿಯಾಗಿರುವದರಿಂದ ಬಾಣಂತಿಯರಿಗೆ ವಿಷವೇರುವದೂ ಉಂಟು. ಕಷ್ಟಬಂದಾಗ ಸಹಾಯಕೊಡಲಿಕ್ಕೂ ಅವರಿಗೂ ಗೊತ್ತಿಲ್ಲ. ಅಂಗವೇ ಇಲ್ಲದ ಶಿಶುವನ್ನು ಅನೇಕವೇಳೆ ನಾನು ಹೆರಿಗೆ ಮಾಡಿಸಿದ್ದುಂಟು. ದೇಹದ ಯಾವದಾದರೂ ಭಾಗ ಮುಂದೆ ಹೊರಬಂದರೆ ಅದನ್ನು ಬಲವದ್ಬಂದಿಯಿಂದ ಹೊರಕ್ಕೆ ಎಳೆಯುವಾಗ ಅಂಥಾ ಅಂಗವೇ ಬೇರುಸಹಿತ ಕಿತ್ತುಬಿಡುತ್ತಾರೆ. ಒಂದುಸಾರೆ ಒಂದು ಮಗುವಿನ ತಲೆಯನ್ನು ಮಾತ್ರ ಹೆರಿಗೆ ಮಾಡಿಸಿದೆ. ದೇಹವೇ ಇರಲಿಲ್ಲ. ಬಲವಾದ ಸೂಲಗಿತ್ತಿಯು ದೇಹವನ್ನು ಎಳೆದು ತಲೆಯಿಂದ ಬೇರ್ಪಡಿಸಿರಬೇಕು. ಇನ್ನು ಹೆಚ್ಚಿಗೆ ಹೇಳಿ ನಿಮ್ಮ ಮನಸ್ಸನ್ನು ನೋಯಿಸುವದಿಲ್ಲ. ಇದರಿಂದೆಲ್ಲಾ ಏನು ತಿಳಿಯುತ್ತೆಂದರೆ ಜನರಿಗೆ ತಿಳುವಳಿಕೆ ಕೊಡಲಿಕ್ಕೂ ಶಿಶುಗಳ ಮತ್ತು ಬಾಣಂತಿಯರನ್ನು ನೋಡುವವರನ್ನು ತರಬೇತು ಮಾಡಲಿಕ್ಕೆ ಸಹ ಒಂದು ಕೇಂದ್ರಸ್ಥಾನ ಬೇಕಾಗಿದೆ. ಅಸ್ವಸ್ಥ ತಾಯಿಯು ಮಗುವಿಗೆ ಆದಂಸ್ವಭಾವಿಕ ಆಹಾರವನ್ನು ಕೊಡಲು ಶಕ್ಯಳಾಗಿರುವದಿಲ್ಲ. ಆದರಿಂದ ಮಗುವು ಬದುಕುವದು ಕಷ್ಟ. ತಾಯಿಯೇನಾದರೂ ಸತ್ತರೆ ಆದಕ್ಕೆ ಬೇರೆಯವರು ಆಹಾರ ಕೊಡಬೇಕಾಗುತ್ತೆ. ಈ ಕಷ್ಟಗಳನ್ನು ನಿವಾರಣೆ ಮಾಡಲಿಕ್ಕಾಗಿಯೇ "ಬೇಬಿವೆಲ್‌ಫೇರ್ ಸೆಂಟರ್" ಎಂಬ ಈ ಸಂಸ್ಥೆಯನ್ನು ಸ್ಥಾಪಿಸುವದಾಗಿದೆ. ಕೊಡಗಿನ ಎಲ್ಲಾ ಹಂದೆತಾಯಿಗಳಿಗೆ ಸ್ವಭಾವಿಕ ಆಹಾರ ತಪ್ಪಿದರೆ ಹೇಗೆ ಆಹಾರ ಕೊಡಬೇಕೆಂಬದನ್ನು ಕಲಿಸಲು ಪ್ರಯತ್ನಿಸುತ್ತೇನೆ. ವಿಷಮಜ್ವರವು ಹೇಗೆ ಸಂಭವಿಸುವದು, ಅದನ್ನು ತಪ್ಪಿಸುವದು ಹೇಗೆ ಎಂಬದನ್ನು ಬೋಧಿಸುತ್ತೇವೆ. ಅಶುಚಿಯಾಗಿರುವದರಿಂದ ವಿಷಮವೇರುತ್ತದೆ ಎಂಬದನ್ನು ತಿಳಿಸಿಕೊಟ್ಟು ಕಷ್ಟವನ್ನು ಬಹಳಮಟ್ಟಿಗೆ ಪರಿಹರಿಸಲು ಸಾಧ್ಯವಿದೆ. ಈ ಚಿಕ್ಕ ಸಂಸ್ಥೆಗೆ ಬರುವವರಿಗೆ ಅನುಭವ ಕೊಡುತ್ತೇವೆ. ಬರಲಿಕ್ಕೆ ಸಾಧ್ಯವಿಲ್ಲದವರಿಗೆ ಛಾಪಿಸಿದ ಬೋಧನೆಗಳನ್ನು ಕಳುಹಿಸುತ್ತೇವೆ.

ಮುಗಿಸುವ ಮುಂಚೆ ಹೇಳತಕ್ಕದ್ದೇನಿದೆಯೆಂದರೆ ಮೆ|| ಹೂಟರ್ ಸಾಹೇಬರು ಹೋಗುವ ಮುಂಚೆ ಮೆ|| ಪಾಂಡಂಡ ಅಪ್ಪಯ್ಯನವರು ಯಾವರಾದರೂ ಯುಕ್ತ ಧರ್ಮಕ್ಕೆಂತ 5000 ರೂ ಗಳನ್ನು ಕೊಟ್ಟಿದ್ದಾರೆ. ಅವರಿಗೆ ನಾನು ಅಭಿವಂದಿಸುತ್ತೇನೆ. ಆ ಹಣದಲ್ಲಿ ಸ್ವಲ್ಪ ಮೊಬಲಗಿನಿಂದ ಈ ಸಂಸ್ಥೆಗೆ ಬೇಕಾದ ಸಾಮಾನುಗಳನ್ನು ಕೊಂಡುಕೊಂಡಿದ್ದೇವೆ. ಇನ್ನು ಮುಂದೆ ಇಂಥಾ ಧರ್ಮಬುದ್ಧಿಯುಳ್ಳವರ ಸಹಾಯ ಬೇಕಾಗಿದೆ.

ಈ ಸಂಸ್ಥೆಗೆ ಬೇಕಾದ ಕೊಠಡಿಯನ್ನು ಬಹಳ ಶೀಘ್ರದಲ್ಲೇ ತಯಾರಿಸಿಕೊಟ್ಟ ಇಂಜನೀಯರ್ ಹೇಗ್ ಸಾಹೇಬರಿಗೂ, ಶಿಶುಗಳಿಗೆ ಬೇಕಾದ ಬಟ್ಟೆಬರೆಯನ್ನೂ ಕೊಟ್ಟು, ಧನಸಹಾಯ ಕೊಟ್ಟ ಮಹಾಶಯರಿಗೂ ವಂದಿಸುತ್ತೇನೆ. ಮಿಸೆಸ್ ತಿಮ್ಮಯ್ಯನವರು ಬಹಳ ಶ್ರಮಪಟ್ಟು ಸಹಾಯ ಮಾಡಿದ್ದರಿಂದ ಇಂದು ಈ ಸಂಸ್ಥೆಯನ್ನು ಪ್ರಾರಂಭಿಸಲು ಸಾಧ್ಯವಾಗಿದೆ. ಇದಕ್ಕಾಗಿ ಸಹಾಯಕೊಡುವವರ ಹೆಸರುಗಳನ್ನು "ಕೊಡಗು" ಪತ್ರಿಕೆಯಲ್ಲಿ ಹಿಂದಿನಿಂದ ಪ್ರಕಟಿಸುತ್ತೇವೆ.

ಮಡಿಕೇರಿಯಲ್ಲಿ ನಡೆದ "ಬೇಬಿಡೆ" ಅಂದರೆ ಮಕ್ಕಳ ಕ್ಷೇಮಕ್ಕಾಗಿ ಕೆಲಸಮಾಡಿದ ದಿವಸ

ಬೆಳಗ್ಗೆ $10\frac{1}{2}$ ಘಂಟೆಗೆ ಆಸ್ಪತ್ರೆಯ ಒಂದು ಕಟ್ಟಡದಲ್ಲಿ ಚಿಕ್ಕ ಶಿಶುಗಳನ್ನು ಕಾಪಾಡುವ ಒಂದು ಸಂಸ್ಥೆಯು ಪ್ರಾರಂಭವಾಯಿತು. ಅದನ್ನು ತೆರೆಯುವ ಮುಂಚೆ ಸಿವಿಲ್ ಸರ್ಜನರು ಮಾಡಿದ ಭಾಷಣವನ್ನು ಇನ್ನೊಂದುಕಡೆ ಪ್ರಕಟಿಸಿದೆ. ಅನಂತರ ಶಾಲೆಗಳ ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಮೆ|| ಸಿ. ಉತ್ತಯ್ಯನವರು ಕನ್ನಡದಲ್ಲಿ ಭಾಷಣಮಾಡಿದರು. ಅವರ ಭಾಷಣವನ್ನು ಇನ್ನೊಂದುಕಡೆ ಪ್ರಕಟಿಸಿದ್ದೇವೆ. ಅನಂತರ ಕವಿ ಕರ್ನಲ್ ಸಾಹೇಬರ ಪತ್ನಿಯವರು ಚಿಕ್ಕ ಕೂಸುಗಳನ್ನು ಸಾಕುವ ಏರ್ಪಾಡು ಇಟ್ಟಿರುವ ಕೊಠಡಿಯ ಬಾಗಿಲನ್ನು ತೆರೆದರು. ತೆರೆಯುವ ಮುಂಚೆ ಭಾಷಣಮಾಡಿದರು. ನನಗೆ ಕೇಳಿಸಲಿಲ್ಲ. ಕೊಠಡಿಯೊಳಗೆ ತೊಟ್ಟಿಲುಗಳನ್ನು ಸಾಲಾಗಿ ತೂಗಿದ್ದು ಅವಕ್ಕೆ ಬೇಕಾದ ಅನುಕೂಲಗಳೆಲ್ಲಾ ಏರ್ಪಡಿಸಿತ್ತು. ಅನಂತರ ನೆರೆದಿದ್ದ ಜನರು ಅವರವರ ಮನೆಗೆ ಹೋದರು.

ಅನಂತರ $3\frac{1}{2}$ ಘಂಟೆಗೆ ಕೋಟೆಯೊಳಗೆ ಜನರು ಕೂಡಿದರು. ಒಂದು ಕಡೆಯಲ್ಲಿ ಮಿಶನ್ ಕ್ರಿಶ್ಚಿಯನ್ ಯುವಕರು ಗಂಡಿಸ್ಸು ಹಾಡುತ್ತಿದ್ದರು. ಅನಂತರ ಬಾಯ್ ಸ್ಕೌಟ್ ಎಂದರೆ ಯುವಕಸ್ವಯಂಸೇವಕರ ಡ್ರಿಲ್ ಮತ್ತು ಇತರ ಕೆಲಸಗಳು ನಡೆದವು. ಅನಂತರ ಕವಿ ಕರ್ನಲ್ ಸಾಹೇಬರು ಚಿಕ್ಕದೊಂದು ಭಾಷಣಮಾಡಿ ಚಕ್ರವರ್ತಿನಿಯವರ ಸಂದೇಶವನ್ನು ಓದಿದರು. ಅದರಲ್ಲಿ ಏನಿತ್ತೆಂದರೆ—

"ಈ ಉದ್ದೇಶವು ನನಗೆ ಬಹಳ ಪ್ರಿಯವಾದ್ದರಿಂದ ಈ ಎರಡನೇ ಸಂದೇಶವನ್ನು ಕಳುಹಿಸಿದ್ದೇನೆ. ನನ್ನ ಹಿಂದಿನ ಸಂದೇಶ ಹಿಂದೀ ಮಹಿಳೆಯರಿಗೆ ಕಳುಹಿಸಿದ್ದಾಗಿತ್ತು. ಈ ಅತ್ಯಂತ ಅವಶ್ಯವಾದ ಕೆಲಸದಲ್ಲಿ ಕೆಲಸಮಾಡುವವರಿಗೆ ಈ ಪ್ರೋತ್ಸಾಹಕರ ಮಾತುಗಳನ್ನು ಕಳುಹಿಸುವದಾಗಿದೆ. ಈ ವಿಷಯದ ಮೇಲೆಯೇ ಇಂಡಿಯಾದ ಭವಿಷ್ಯತ್ತು ಮತ್ತು ಪ್ರಪಂಚದ ಜನಾಂಗಗಳು ಇಂಡಿಯಾಕ್ಕೆ ಕೊಡುವ ಗೌರವವೂ ನಿಂತ ಕೂಡಿದೆ. 25 ವರ್ಷಗಳೊಳಗೆ ಈ ಕೆಲಸದಿಂದ ಇಂಗ್ಲೆಂಡಿನಲ್ಲಿ ಎಷ್ಟು ಪ್ರಯೋಜನವಾಗಿದೆಯೆಂಬದನ್ನು ಜ್ಞಾಪಕದಲ್ಲಿಟ್ಟುಕೊಂಡರೆ ಇಂಡಿಯಾದಲ್ಲಿ ಕೆಲಸಮಾಡುವವರಿಗೆ ಉತ್ತೇಜನವಾಗುತ್ತೆ. ಇಂಡಿಯಾದವರಿಗೆ ಕೆಲವು ವಿಶೇಷ ಅನುಕೂಲಗಳಿವೆ. ಯಾವವೆಂದರೆ—ಬಿಸಿಲು, ಸುಲಭ ಆಹಾರ ಮತ್ತು ಸುಲಭಜೀವನಕ್ರಮ ಈಗ ಬೇಕಾದದ್ದು ಯಾವದೆಂದರೆ—ತಿಳುವಳಿಕೆಯನ್ನು ಹರಡಿಸಲು ಉತ್ಸಾಹ, ದಯೆ ಮತ್ತು ಮಕ್ಕಳಮೇಲೆ ಪ್ರೀತಿಯು ಇಂಡಿಯಾದವರಿಗೆ ಸ್ವಭಾವಗುಣಗಳಾಗಿವೆ. ಶಿಶುಗಳ ಜೀವಕ್ಕೂ ಆರೋಗ್ಯಕ್ಕೂ ಅವಶ್ಯಕತೆಗಳೇನೆಂಬದನ್ನು ಅವರು ತಿಳಿದಿಲ್ಲವೆಲ್ಲದಕ್ಕೂ ಹೆಚ್ಚಾದ ವಿಷಯವೇನೆಂದರೆ—ಅನಾವಶ್ಯವಾಗಿ ಸಾಯುವ ಒಂದು ಶಿಶುವಿನ ಜೀವ ಉಳಿಸುವದರಿಂದಾಗಲೀ, ವ್ಯಸನಕರವಾಗಿ ಕಷ್ಟಪಡುತ್ತಾ ಕಳೆಯಬೇಕಾದ ಜೀವನವನ್ನು ತಪ್ಪಿಸುವದರಿಂದ ಉಂಟಾಗುವ ಸಂತೋಷವನ್ನು ನಿಮ್ಮಂತೆಯೇ ಕೆಲಸಮಾಡುವವರು ನೆನೆಸಿಕೊಳ್ಳಲಿ" ಎಂಬ ಸಂದೇಶವನ್ನು ಓದಿದರು. ಅನಂತರ ಕೂಸುಗಳಲ್ಲಿ ಬಹುಮಾನಕ್ಕೆ ಅರ್ಹರು ಯಾರೆಂಬದನ್ನು ಮೊದಲೇ ನಿಯಮಿತರಾದ ಮಹಿಳೆಯರು ಪರೀಕ್ಷಿಸಿ ನೋಡಿ 3 ತಿಂಗಳವರೆಗೆ ಇದ್ದ ಮೂರು ಶಿಶುಗಳಿಗೂ, 6 ತಿಂಗಳವರೆಗೆ ಇದ್ದ ಮೂರು ಮಕ್ಕಳಿಗೂ 3 ವರ್ಷದವರೆಗೆ ಇದ್ದ ಮೂರು ಮಕ್ಕಳಿಗೂ ಬಹುಮಾನವು ನಿರ್ಣಯವಾಗಿ ಮಿಸೆಸ್ ಟಾಕ್ಸೆಲ್ ದೊರೆಸಾನಿಯವರಿಂದ ಹಂಚಲಾಯಿತು. ಮೆ|| ಮಂಗೇಶರಾಯರ ಭಾಷಣವಾಯಿತು. ಮಕ್ಕಳಿಗೆ ಹಾಲು ಮಿಠಾಯಿ ಹಂಚಲಾಯಿತು. ಅನಂತರ ಮಕ್ಕಳ ಸಾಕುವ ಕ್ರಮವನ್ನು ತೋರಿಸುವ ಮೇಜಿಕ್ ಲ್ಯಾಂಟರ್ನ್ ಚಿತ್ರಗಳು ತೋರಿಸಲಾಯಿತು.

ಕೌನ್ಸಿಲ್ ಚುನಾವಣೆಯ ತಮಾಷೆಗಳು.

1924 ನೇ ಇಸವಿ ಜನವರಿ 15 ನೇ ತಾರೀಖಿನ ದಿನವು ಕೊಡಗಿನ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಬರೆಯಲು ಯೋಗ್ಯವಾದದ್ದು. ದೇಶವನ್ನು ಮದ್ರಾಸಿಗೆ ಸೇರಿಸಬೇಕೆಂಬ ಚಳವಳಿವು ನಿಲ್ಲಿಸಲ್ಪಟ್ಟು ಕೊಡಗು ದೇಶದ ವ್ಯಕ್ತಿತ್ವವನ್ನು ಸ್ಥಿರಪಡಿಸುವ ಸ್ವತಂತ್ರ ಕಾಯಿದೆ ಮಂಡಲಕ್ಕೆ ಈ ದಿನ ಸಭಾಸದರನ್ನಾರಿಸುವುದಾಗಿದೆ.

ಜನವರಿ 15 ನೇ ತಾರೀಖು ವಾಯುವೇಗದಿಂದ ಕಳೆದೇ ಹೋಯಿತು. ಆ ದಿನದ ಗಲಾಟೆಯನ್ನು ಏನೆಂದು ಹೇಳೋಣ! ದೇಶದ ಜನರೆಲ್ಲಾ ಕಾಯದೆ ಮಂಡಲಕ್ಕೆ ಸಭಾಸದರನ್ನಾರಿಸುವ ಗಡಿಬಿಡಿಯಿಂದ, ನಾಲ್ಕೈದು ಮೈಲಿಗಳ ದೂರದಿಂದ, "ಅವನಿಗೆ ಓಟುಕೊಡುವುದೊ, ಇವನಿಗೊ! ಬ್ಯಾರಿಸ್ಟರನಿಗೊ, ವಕೀಲನಿಗೊ, ಜಮೀನುದಾರನಿಗೊ, ವ್ಯಾಪಾರಸ್ಥನಿಗೊ?" ಎಂಬ ತರ್ಕ ವಿತರ್ಕದಿಂದ ಚುನಾವಣಾಸ್ಥಳಕ್ಕೆ ಬಂದರು! ಅಲ್ಲಿಗೆ ಬಂದಮೇಲೆ ಅರ್ಥವಾಯಿತು. ನಿಂತ ಉಮೇದುವಾರರ ಏಜಂಟರುಗಳು ಒಬ್ಬೊಬ್ಬರೂ ಬಹಳ ಉಪಾಯದಿಂದ ಕೂಗುತ್ತಿದ್ದ ಉಮೇದುವಾರ ಏಜಂಟರುಗಳ ಎದುರಿಗೆ ತಿಳಿಸಿ, ಎಲ್ಲಾ ಏಜಂಟರುಗಳಿಗೂ "ಬಂಧಿತವಾಗಿಯೂ ಓಟ್ಟು ನನಗೆ ಕೊಡುತ್ತೇನೆ" ಎಂದು ಮಾತುಕೊಟ್ಟು ಸಮಾಧಾನಿಸಿ, ಓಟುಗಳು ಮುಂದೆ ಸಾಗಿದುದಾಯಿತು. ಇಲ್ಲಿಯವರೆಗೆ ಒಂದುದೇನೋ ಸರಿ; ಇನ್ನು "ಓಟು" ಕೊಡುವ ಬಗೆ ಹೇಗೆ? ಉಮೇದುವಾರರ ಹೆಸರು ಹಿಡಿದು ಕೂಗುವುದೇ, ಉಮೇದುವಾರರನ್ನು ಹಿಡಿದು ತೆಗೆದುಕೊಂಡು ಹೋಗಿ ಚುನಾವಣಾ ಅಧಿಕಾರಿಯ ಮುಂದೆ ನಿಲ್ಲಿಸುವುದೇ ಎಂಬುದಾಗಿ, ಅಲ್ಲಿದ್ದವರನ್ನು ಕೇಳಿ ಅವರಿಂದ ಸದುತ್ತರ ದೊರೆಯದಂತೆ ಮಾತುಕೊಟ್ಟ ಉಮೇದುವಾರರನ್ನು ಬಿಟ್ಟು ಇನ್ನೊಬ್ಬ ಉಮೇದುವಾರರಿಗೆ ಓಟುಕೊಟ್ಟವರುಂಟು. ಇದರ ಫಲಿತಾಂಶವು ಇಷ್ಟರಲ್ಲೇ ಹೊರಬಿದ್ದಿರಬಹುದು.

ಉಮೇದುವಾರರ ಏಜಂಟು ಕೈರಿಕ್ ರೆಗ್ಯುಲೇಟರ್ ಮಾಡಿದಂತೆ ಓಡಿಹೋಗುತ್ತಿದ್ದುದು ಹೇಳತಕ್ಕದ್ದಾಗಿಲ್ಲ. "ಏಜಂಟರುಗಳಿಗೆ ಹಣಕೊಡುವದಿಲ್ಲ; ಮೋಟಾರು ಬಂಡಿ ಮಾಲೀಕರಿಗೆ ಸಾರಿಗೆ ಹಣ ಸಿಕ್ಕಿದೆ. ಓಟರುಗಳಿಗೆ ಒಂದು ಫಲಾಹಾರ ಅದಾಗಲಿಲ್ಲ. ಕಂಡ ಕಂಡಲ್ಲಿ ದೀರ್ಘದಂಡ ನಮಸ್ಕಾರಗಳನ್ನು ಹಾಕಿದೆನು, ಇಷ್ಟೆಲ್ಲಾ ಆದರೂ ೧೫ ನೇ ತಾರೀಖಿನ ಒಂದೇ ಒಂದು ದಿವಸಗಳಿಗೆ ಇಲ್ಲಿ ಈ ಓಟುಗಳು ಏನು ಮಾಡಿಬಿಡುವವೋ ನನಗೆ ಓಟುಕೊಡುವದೋ ಇಲ್ಲವೋ, ಕಡೆಯಲ್ಲಿ ನನ್ನ ೨೫೦ ರೂಪಾಯಿಯ ಡಿಪಾಜಿಟ್ಟಾದರೂ ವಾಪಸ್ಸು ಸಿಕ್ಕಿದ್ದರೆ ಸಾಕಾಗಿದ್ದಿತು" ಎಂದು ಅನೇಕ ಉಮೇದುವಾರರ ಮನಸ್ಸು ಹೊಡೆದುಕೊಳ್ಳುತ್ತಿತ್ತೆಂದು ಅವರ ಕಂದಿದ ಮುಖಗಳು ಸಾರುತ್ತಿದ್ದವು.

ಈ ಗದ್ದಲವು ಶಾಂತವಾಗುವಷ್ಟರಲ್ಲಿ ಚುನಾವಣಾನಂತರ ಓಟರುಗಳಿಗೆ ಊಟ ಕೊಡಬೇಕಾಗುವುದೆಂಬುವುದರ ಚಿಂತೆ! ಆದರೆ ಕೌನ್ಸಿಲ್ ಬರೋಣದಿಂದ ಹೊಟೇಲ್ ಗುತ್ತಿಗೆದಾರರಿಗೆ ಅದೃಷ್ಟ ಓಡಿಓಡಿ ಬಂದಂತೆ ತೋರುವುದು; ಹೇಗೂ ಅವರು ಈ ಕೆಲಸವನ್ನು ತೊಂದರೆಯಿಲ್ಲದೆ ಕಟ್ಟಿದರು! ಮೋಟಾರುಗಳನ್ನು ಇಟ್ಟುಕೊಂಡವರಂತೂ ಒಬ್ಬರಿಗೆ ಒಬ್ಬರು ಪೈಪೋಟಿಮಾಡಿ ಬಿಟ್ಟರು. ಹಳ್ಳಿಗಳಲ್ಲಿಯ ದಾರಿಗಳೂ ಎಂದೂ ನೋಡದ ವಾಹನಗಳ ಘನದ ಓಡಾಟದಿಂದ ಚಿತ್ರಿಸಲ್ಪಟ್ಟ ಬೋರ್ಡಿನ ಬಿದ್ದ ಮೇಲೆ ಕುಸಿದ ಬಿದ್ದಂತೆ ತೋರುವವು.

ಕಾಯಿದೆಯ ಮಂಡಲವು ದೇಶಕ್ಕೆ ಹೊಸದಾಗಿರುವುದರಿಂದ ದೇಶದ ಜನರಲ್ಲಿ ಒಂದು ಬಗೆಯ ಹೊಸ ಚೈತನ್ಯವು ತಲೆದೋರಿದೆ. ಮೊದಲು ತಮ್ಮನ್ನು ಮಾತನಾಡಿಸದೆ ಇದ್ದ ಉಮೇದುವಾರ ದೊಡ್ಡಮನುಷ್ಯರು ತಮಗೆ ಕಂಡ ಕಂಡಲ್ಲಿ ಸಲಾಂ ಮಾಡುವುದರಿಂದಲೋ ಏನೋ, ತಮಗೇನೂ ತಿಳಿಯದಿದ್ದರೂ ಈ ದೊಡ್ಡಮನುಷ್ಯರು ತಮ್ಮ ಕೈಯಲ್ಲಿ ಸಿಕ್ಕಿಬಿದ್ದಿದ್ದಾರೆ. ಇದೇ ಸಮಯ. ಓಟುಕೊಡಬೇಕಾದರೆ ಊಟ ಕೊಡಬೇಕು, ಟೀಪಾರ್ಟಿ ಮಾಡಿಸಬೇಕು ಇತ್ಯಾದಿ "ಬೇಕು" ಪರಂಪರೆಗಳನ್ನು ಒಡ್ಡಿದವರು ಅದರೆ ಪಾಪ! ಊಟಕೊಟ್ಟ ಉಮೇದುವಾರರ ಮಾನಹಾನಿ, ಆಶಾಭಂಗವಾಗುವದು ಅವರಿಗೆ ಹೇಗೆ ತಿಳಿದೀತು?

ಅದರೆ ಎಲ್ಲರೂ "ಕೌನ್ಸಿಲಿನಿಂದ ಏನು ಪ್ರಯೋಜನ? ಇವರು ಕೌನ್ಸಿಲಿಗೆ ಹೋಗಿ ಏನು ಮಾಡುವರು? ಬಡರೈತರಿಗೆ ಸಹಾಯಮಾಡುವರೋ!" ಎಂಬೀ ಸರ್ವಸಾಧಾರಣ ಪ್ರಶ್ನೆಗಳನ್ನು ಹಾಕುತ್ತಿರುವರು. ಇವು ಮುಖ್ಯವಾದ ಪ್ರಶ್ನೆಗಳೇ ಸರಿ. ಓಟರುಗಳು ಊಟ ಕೇಳುವುದರ ಬದಲು, ಉಮೇದುವಾರರು ಕೌನ್ಸಿಲಿಗೆ ಹೋಗಿ ಏನೇನು ದೇಶಹಿತ ಕಾರ್ಯಗಳನ್ನು ಮಾಡಬೇಕೆಂದಿರುವರೆಂದು ಕೇಳುವುದೇ ಕರ್ತವ್ಯವಾಗಿದ್ದಿತು. ಸಭಾಸದರು ಯಾವ ಧೋರಣವನ್ನು (Programme) ಹಿಡಿದು ಕೆಲಸಮಾಡುವರೆಂದು ಹೇಳಲಾಗುವುದಿಲ್ಲ. ದೇಶವು ಅವರ ನಿರೀಕ್ಷಣೆಯಲ್ಲೇ ಇದೆ.

ಓಟರ್.

ಕಿಗ್ಗಟ್ಟುನಾಡು ತಾಲೋಕು ಜಮ್ಮದ ಓಟರುಗಳಲ್ಲಿ ನನ್ನ ಅನೇಕ ವಿನಂತಿ.

ಮಹನೀಯರೇ,

ತಾವೆಲ್ಲರೂ ಒಮ್ಮನಸ್ಸಿನಿಂದ ದೇಶಸೇವೆ ಮಾಡಲಿಕ್ಕೆ ಎಡೆಕೊಟ್ಟು ಓಟುಕೊಟ್ಟು ನನ್ನನ್ನು ಚುನಾಯಿಸಿದಕ್ಕೆ ಎಷ್ಟು ವಂದಿಸಿದರೂ ಸ್ವಲ್ಪವೆಂದೇ ಭಾವಿಸುತ್ತೇನೆ. ಇನ್ನು ಮುಂದೆ ತಮಗಳ ಇರಾದೆಗೆ ಅನುಸಾರವಾಗಿ ಆದಷ್ಟು ಶ್ರದ್ಧೆ ತೆಗೆದುಕೊಂಡು ದೇಶಸೇವೆ ಮಾಡಲು ಬದ್ಧಕಂಕಣನಾಗಿದ್ದೇನೆ. ಇದಕ್ಕೆ ಭಗವಂತನ ಅನುಗ್ರಹಬೇಕೆಂಬುದೇ ನನ್ನ ಪ್ರಾರ್ಥನೆ.

ಮುಕ್ಕೂರು ಗ್ರಾಮ. ತಮಗಳ ವಿಧೇಯ,

ತಾ|| 26-1-24 ಪುತ್ತರನೆ ಗಣಪತಯ್ಯ.

"ಪ್ರಕಟನೆ" [2—1.]

ಕಿಗ್ಗಟ್ಟುನಾಡು ತ್ರಾಲೋಕು ಜನ್ಮದ ಓಟರುಗಳಲ್ಲಿ ವಿಜ್ಞಾಪನೆ.

ಮಹನೀಯರೆ,

ನೀವೆಲ್ಲರೂ ದಯವಿಟ್ಟು, ನನ್ನನ್ನು ಕೌನ್ಸಿಲಿಗೆ ಚುನಾಯಿಸಿದರಿಂದ ನಿಮಗೆಲ್ಲರಿಗೂ ಈ ಮೂಲಕ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಇನ್ನು ಮುಂದಕ್ಕೂ ನಿಮ್ಮ ಸಹಾಯವನ್ನು ನಿರೀಕ್ಷಿಸು ವವನಾಗಿದ್ದೇನೆ

" ಪ್ರಕಟಣೆ ' ನಿಮ್ಮ ವಿಧೇಯ,

ಪಾರ್ವಂಗಡ ಕುಶಾಲಪ್ಪ.

ವರ್ತಮಾನ ಸಂಗ್ರಹ

ಒಳದೇಶ

ಜನವರಿ ತಾರೀಖು 29 ರಲ್ಲು ಮಡಿಕೇರಿ ಮುನ್ಸಿಪಲ್ ಆಫೀಸಿನಲ್ಲು 'ಕೊಡಗು' ಕಂಪೆನಿಯ ಡೈರೆಕ್ಟರುಗಳ ಮೀಟಿಂಗು ನಡೆಯಿತು

ಜನವರಿ ತಾ|| 25 ರಲ್ಲು ಬೆಂಗಳೂರಿಂದ ಹೊರಟ ಚೀಫ್‌ಕಮಿಷನರವರು ಅದೇದಿನ ಮಡಿಕೇರಿಗೆ ಬಂದು ಇಲ್ಲಿ 29 ರ ವರೆಗೆ ಇದ್ದು 30 ರಲ್ಲಿ ಮಡಿಕೇರಿಯಿಂದ ಚಿಕ್ಕಮಂಗಳೂರಿಗಾಗಿ ಶಿವಮೊಗ್ಗಕ್ಕೆ ಹೋಗಿ ಅಲ್ಲಿಂದ ಬೆಂಗಳೂರಿಗೆ ಫೆಬ್ರವರಿ 4 ಯಾ 5 ರಲ್ಲು ಹೋಗುವರು ಅವರೊಂದಿಗೆ ಅವರ ಪತ್ನಿಯವರೂ ಅವರ ಸೆಕ್ರೆಟರಿ ಮಿ|| ಕೀಟಿಂಗರೂ ಇರುವರು

ಬೆಂಗಳೂರು ಇಂಜಿನೀಯರಿಂಗ್ ಕಾಲೇಜಿನಲ್ಲಿ ಓದುತ್ತಿದ್ದ ಮಿ|| ಪುಟ್ಟಚಂದ್ರ ಉತ್ತಯ್ಯನವರು ಕಳೆದ ಎಲೆಕ್ಟ್ರಿಕ ಇಂಜಿನಿಯರಿಂಗ್ ಟೆಕ್ನಿಕಲ್ ಬೋರ್ಡ್ ಪರೀಕ್ಷೆಯಲ್ಲಿ ಮೈಸೂರು ಸ್ಟೇಟಿನಲ್ಲಿ ಮೂರನೇಯವರಾಗಿ ತೇರ್ಗಡೆ ಹೊಂದಿರುವುದನ್ನು ತಿಳಿಸಲು ಸಂತೋಷಪಡುತ್ತೇವೆ

ಕೊಡಗು ಕಮಿಷನರವರು ಫೆಬ್ರವರಿ 4 ರಲ್ಲು ಮಡಿಕೇರಿಯಿಂದ ಕುಟ್ಟಕಡಪ್ಪಲಿಗೆ ಹೋಗಿ ಅಲ್ಲಿ ಜಮಾಬಂದಿ ನಡಿಸಿ ಮಡಿಕೇರಿಗೆ ವಾಪಾಸು ಬರುವರು. ತಾ|| ೧ ರಲ್ಲಿ ಭಾಗಮಂಡಲಕ್ಕೆ ಹೋಗಿ 7 ರಲ್ಲಿ ಅಲ್ಲಿ ಜಮಾಬಂದಿ ನಡಿಸಿ 8 ರಲ್ಲಿ ಅಲ್ಲಿದ್ದು 9 ರಲ್ಲಿ ಮಡಿಕೇರಿಗೆ ವಾಪಾಸು ಬರುವರು

ತಾ|| 28-1-24 ರಲ್ಲು ಸಾಯಂಕಾಲ 3¾ ಗಂಟೆಗೆ ಮಡಿಕೇರಿ ಪ್ರೆಸ್ಸ್ ಹಾಲಿನಲ್ಲಿ ಚೀಫ್‌ಕಮಿಷನರವರು ಕೊಡಗಿನ ಲೆಜಿಸ್ಲೇಟಿವ್ ಕೌನ್ಸಿಲನ್ನು ತೆರೆದರು ಕೌನ್ಸಿಲಿನ 30 ಮೆಂಬರುಗಳಲ್ಲದೆ ಸುಮಾರು ಇನ್ನೂರು ಪ್ರೇಕ್ಷಕರು ಹಾಲಿನೊಳಗೆ ಹಾಜರಿದ್ದರು ಮೆಂಬರುಗಳು ರಾಜಭಕ್ತಿಯ ವಿಷಯ ಪ್ರಮಾಣಮಾಡಿದನಂತರ ಅಧ್ಯಕ್ಷರ ಮತ್ತು ಕೆಲವು ಮೆಂಬರುಗಳ ಭಾಷಣಗಳಾದವು ನಂತರ ಅರಮನೆಯ ಮುಂದೆ ಗ್ರೂಫ್ ಫೋಟೋ ತೆಗೆಯಲಾಯಿತು. ಕೂಡಲೆ ಅಲ್ಲಿಯೇ ಟೀಪಾರ್ಟಿಯಾಯಿತು

ಜನವರಿ 29 ರಲ್ಲು ರಾತ್ರಿ 9½ ಗಂಟೆಗೆ ಬೊವೆರ್ ಬಂಗ್ಲೆಯಲ್ಲಿ ಚೀಫ್‌ಕಮಿಷನರವರು ಮತ್ತು ಅವರ ಪತ್ನಿಯವರು ಕೌನ್ಸಿಲು ಮೆಂಬರುಗಳಿಗೂ ಮತ್ತು ಪಿರಿದುಗಳವರಿಗೂ ಒಂದು "ಎಟ್ ಹೋಮ್" ಕೊಟ್ಟರು

ಕಳೆದ ಕೌನ್ಸಿಲು ಚುನಾವಣೆಯಲ್ಲಿ ಮಿ|| ಕೊರವಂಡ ಪೊನ್ನಪ್ಪನವರು ಮಿ|| ಖಲೀಲ ಖಾನ್ ಸಾಹೇಬರವರು ಮತ್ತು ಮಿ|| ಕೆ ಕೃಷ್ಣಮೂರ್ತಿಯವರು ತಮ್ಮ ರೇವಟಾತಿ ಹಣ 250 ರೂ ಕಳೆದುಕೊಳ್ಳುವರು

ವೀರಾಜಪೇಟೆ ಜಿ ಹೆಚ್ ರಾಸ್‌ಪ್ರೆಸ್ಸಿನ ಒಂದು ಕ್ಯಾಲೆಂಡರು ನಮ್ಮ ಕೈಸೇರಿದೆ ದಪ್ಪನಾದ ಇಂಗ್ಲೀಷು ಅಂಕೆಗಳಿಂದ ಕೂಡಿದ ಈ ಕ್ಯಾಲೆಂಡರು ಪ್ರತಿಯೊಂದು ಮನೆಗೂ ಉಪಯೋಗಕರವಾಗುದು ಎಲ್ಲರೂ ಕೊಂಡುಕೊಳ್ಳಲು ಅನುಕೂಲವಾಗುವಂತೆ ಅದಕ್ಕೆ ಬಹಳ ಕಮ್ಮಿ ಕ್ರಯ ಇಟ್ಟಿರುವರು

ಜನವರಿ ತಾ|| 29 ರಲ್ಲು ಮಡಿಕೇರಿ ಮುನ್ಸಿಪಲ್ ಆಫೀಸಿನಲ್ಲು ಸಹಕಾರಿ ಸೆಂಟ್ರಲ್‌ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ನಡೆಯಿತು

ಮಿ ಮುಖಿಯಪಂಡ ಚಿಣ್ಣಪ್ಪನವರು ತಾ|| 20-1-24 ರಲ್ಲು ಕೌನ್ಸಿಲು ಮೆಂಬರುಗಳಿಗೂ ಇನ್ನು ಕೆಲವು ಸ್ನೇಹಿತರಿಗೂ ಒಂದು "ಎಟ್ ಹೋಮ್" ನ್ನು ಮಡಿಕೇರಿಯಲ್ಲಿರುವ ತಮ್ಮ "ಫರ್ನ್‌ಬ್ಯಾಂಕ್" ಭವನದಲ್ಲಿ ಕೊಟ್ಟರು.

ಲೆಜಿಸ್ಲೇಟಿವ್ ಕೌನ್ಸಿಲಿಗೆ ಹಿಂದುಳಿದವರ ಅಂದರೆ ಹೊಲೆಯರ, ಕುರುಬರ, ಮಾದಿಗರ ಮತ್ತು ಯಾದವರ ಪರವಾಗಿ ಮೆಂಬರಾಗಿ ಮಿ|| ಕೆದಂಬಾಡಿ ಸುಬ್ರಾಯರವರನ್ನು ಸರ್ಕಾರದವರು ನೇಮಿಸಿರುವರು

ಕೌನ್ಸಿಲಿನ ಫೈನೇನ್ಸಿಯಲ್ ಕಮಿಟಿಗೆ ಸರ್ಕಾರದವರು ಫಾರೆಸ್ಟ ಡಿ|| ಕನ್‌ಸರ್ವೇಟರಾದ ಮಿ|| ಮಿನ್ಚಿನ್‌ರವರನ್ನು ಮಿ|| ಪಿ ಜಿ ಟಿಪ್ಪಿಂಗರವರನ್ನು ನೇಮಿಸಿರುವರು

ಕಮಿಷನರಾದ ಮಿ|| ಟಾಸ್ಕರವರನ್ನು ಕೌನ್ಸಿಲಿಗೆ ವೈಸ್‌ಪ್ರೆಸಿಡೆಂಟರಾಗಿ ಚೀಫ್‌ಕಮಿಷನರವರು ನೇಮಿಸಿರುವರು

ಕಳೆದ ತಾ|| 22 ರಲ್ಲು ಮಡಿಕೇರಿಯಲ್ಲಿ ಒಂದು ಪಬ್ಲಿಕ್ ಮೀಟಿಂಗು ನಡೆದು ಮಹಾತ್ಮ ಗಾಂಧಿಯವರ ಕಾಯಿಲೆಯು ಶೀಘ್ರದಲ್ಲಿಯೇ ವಾಸಿಯಾಗುವಂತೆ ಭಗವಂತನಿಗೆ ಪ್ರಾರ್ಥಿಸಿದಲ್ಲದೆ ಮಿ|| ಅಬ್ದುಲ್ ಮಜೀದ್ ಕರಾರ್‌ರವರ ಮರಣದ ವಿಷಯ ವ್ಯಸನವೂ ಸೂಚಿಸಲ್ಪಟ್ಟಿತು.

ಹಿಂದೂದೇಶ

ಮಹಾತ್ಮಗಾಂಧಿಯರ ಕಾಯಿಲೆಯು ವಾಸಿಯಾಗುತ್ತಾ ಬರುತ್ತದೆ ಇನ್ನು ನಾಲ್ಕು ವಾರಗಳಲ್ಲಿ ಕಾಯಿಲೆಯು ಪೂರ್ತಿ ವಾಸಿಯಾಗಬಹುದಂತೆ ಹಿಂದೂ ದೇಶದ ಎಲ್ಲಾ ಕಡೆಗಳಿಂದಲೂ ಅನೇಕ ತಂತಿವರ್ತಮಾನಗಳು ಬಂದಿರುತ್ತವಲ್ಲದೆ, ಅನೇಕ ದೇಶಭಕ್ತರು ದಿನೇ ದಿನೇ ಭೇಟಿಕೊಡುತ್ತಲೇ ಇದ್ದಾರೆ.

ಕೆಲಸಗಾರರ ಸಂಗಡದವರು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಮುಖ್ಯಮಂತ್ರಿಪದವಿಗಳನ್ನು ವಹಿಸಿ ರಾಜ್ಯಭಾರ ಮಾಡಲು ತೊಡಗಿದ್ದಾರೆ ಈ ಸಂಗಡದವರು ಅಧಿಕಾರಕ್ಕೆ ಬರುವಾಗ, ಹಿಂದೂ ದೇಶಕ್ಕೆ ಸ್ವರಾಜ್ಯಸಿಕ್ಕುವುದೆಂಬ ಬರವಸೆಯನ್ನು ಈ ಸಂಗಡದವರು ಪ್ರಸ್ತರು ಈ ಮೊದಲೇ ಸೂಚಿಸಿದ್ದರು ಆದರೆ ಹಿಂದೂ ದೇಶದ ಅನೇಕ ಕಡೆಗಳಿಂದ ಹೋದ ತಂತೀವರ್ತಮಾನಕ್ಕೆ ಈ ಸಂಗಡದ ಹೊಸ ಮಂತ್ರಿಯಾದ, ಮೆ ಮೆಕ್‌ಡೊನಾಲ್ಡ್‌ರವರು ಅಷ್ಟೊಂದು ತೃಪ್ತಿಕರವಾದ ಜವಾಬುಕೊಟ್ಟಿರುವುದಿಲ್ಲ ಇದರ ಜವಾಬು ಯಾವಾಗಲೂ ಹಿಂದೂ ದೇಶೀಯರು ವಿಧೇಯರಾಗಿ, ಅವರು ಹೇಳಿದಂತೆ ಕೇಳಿಕೊಂಡರೆ ಮಾರ್ಪಾಡುಗಳು ಹೆಚ್ಚಿಗೆ ಸಿಕ್ಕುತ್ತದೆಂದೂ ಕೌನ್ಸಿಲ್ ನಾಶಮಾಡುವ ಹಿಂದೀಯರ ಚಳವಳದಿಂದ ಇಂಗ್ಲೆಂಡಿನವರು ಹೆದರುವುದಿಲ್ಲವೆಂದೂ ವಗೈರೆಯಾಗಿ ಜವಾಬುಕೊಟ್ಟಿರುತ್ತಾರೆ ಇದನ್ನು ಕುರಿತು ಅನೇಕ ಹಿಂದೂ ಮುಂದಾಳುಗಳು ನಮ್ಮ ರಾಷ್ಟ್ರೀಯಾಭಿವೃದ್ಧಿಯು ನಮ್ಮ ಕೈಯಲ್ಲಿ ಇದೆಯೆಂದೂ, ಅಸಹಕಾರದಿಂದಲೇ ಸ್ವರಾಜ್ಯವು ಲಭಿಸುವುದೆಂದು ಅನೇಕ ಕಡೆ ಭಾಷಣಮಾಡಿರುವರು.

ಬಂಗಾಳ ಕೌನ್ಸಿಲು ತೆರೆಯಲ್ಪಟ್ಟ ದಿನದಲ್ಲಿ ಬಹಳ ತಮಾಷೆಗಳು ನಡೆದವು ಅನೇಕ ಕೌನ್ಸಿಲು ತೆರೆಯಲ್ಪಟ್ಟ ದಿನದಲ್ಲಿ ಬಹಳ ತಮಾಷೆಗಳು ನಡೆದವು ಅನೇಕ ಕೌನ್ಸಿಲು ಮೆಂಬರುಗಳು ಬಿಳೀ ಖದ್ದರಿನಲ್ಲಿಯೂ, ಕೆಲವರು ಹಸ್ತಗಡದ ಸುಪ್ಪುಸದಲ್ಲಿಯೂ, ಕೆಲವರು ಯೂರೋಪಿಯನ್ ದುಸ್ತಿನಲ್ಲಿಯೂ ಬಂದಿದ್ದರು ಸ್ವರಾಜ್ಯಪಾರ್ಟಿಯ ಮುಂದಾಳಾದ ದೇಶಬಂಧು ಸಿ ಆರ್ ದಾಸರು ಪ್ರಮಾಣ ಪತ್ರವನ್ನು ಓದುವಾಗ ಅನೇಕರು ನೆಗಾಡಿದರು ಒಬ್ಬ ಹಣ್ಣು ಮುದುಕನೊಬ್ಬನು ನಡೆಯಲಿಕ್ಕಾಗದೆ ಬೇರೆ ಇಬ್ಬರ ಸಹಾಯದೊಡನೆ ಪ್ರಮಾಣಪತ್ರಿಕೆಯನ್ನು ಓದಲಿಕ್ಕೆ ಬರುವಾಗ ಪ್ರೆಸಿಡೆಂಟರು ಅವರು ಕೂತಿದ್ದ ಜಾಗಕ್ಕೆ ಪತ್ರಿಕೆಯನ್ನು ತೆಗೆದುಕೊಂಡು ಹೋಗುವಂತೆ ಏರ್ಪಡಿಸಿದರಂತೆ.

ಮದ್ರಾಸು ಕಾರ್ಪೋರೇಷನ ಚೇರ್‌ಮನ್ನಿಯವರಾಗಿ ಚಕ್ರವರ್ತಿಯವರು ಮಿ|| ವಿಕ್ಸರ್ ಕಾಸ್ಟ್ರೊಟೀರವರನ್ನು ನೇಮಿಸಿರುವರು

ಲಾಹೋರಿನ ದಯಾನಂದ ಕಾಲೇಜಿನ ಒಬ್ಬ ವಿದ್ಯಾರ್ಥಿ ಯನ್ನು ಗ್ರೀಕಿನಬಳ ರೋಲೋ ಹೊಡೆದು ಸ್ವತಿ ಕಳ್ಳಸಿಬಿಟ್ಟಿಸಿದ್ದರು ಹಿಂದೂ, ಮುಸಲ್ಮಾನರ ಮತಭೇದದ ದೆಸೆಯಿಂದ ಈರೀತಿ ನಾಗಿದೆಯೆಂದು ತಿಳಿದು ಬಂದಿದೆ.

ಬಂಗಾಳ ಮಂತ್ರಿಯಾದ, ಮಿ|| ಎಸ್ ಎ ಮಾಲಿಕರ ಚುನಾವಣೆಯ ವಿಷಯ ಹೋದ ಮೊಕದ್ದಮೆಯಲ್ಲಿ ಚುನಾವಣೆಯನ್ನು ಪಂಚಾಯಿತರು ರದ್ದುಮಾಡಿರುವರಂತೆ ಆದರೆ ಮಿ|| ಮಾಲಿಕರನ್ನು ಬಂಗಾಳ ಕೌನ್ಸಿಲಿಗೆ ಎಕ್ಸಿಕ್ಯೂಟಿವ್ ಮಂತ್ರಿಯಾಗಿಯೂ, ಬರ್ದ್ವಾನ ಮಹಾರಾಜರವರನ್ನು ಸೆಂಟ್ರಲ್ ಪ್ರಾವಿನ್ಸಿನ ಗವರ್ನರಾಯೂ ನೇಮಕಮಾಡುವರೆಂದು ವರ್ತಮಾನ

ಬಂಗಾಳ ಕೌನ್ಸಿಲಿನ ಕೆಲಸಕ್ಕೆ ಪ್ರಾರಂಭಮಾಡಿದ ಪ್ರಥಮ ದಿನ ಗವರ್ನರವರು, ಎಲ್ಲಾ ಮೆಂಬರುಗಳೂ, ದರ್ಬಾರಿಗೆ ಸರಿಯಾದ ದುಸ್ತಿನಲ್ಲಿ ಬರಬೇಕೆಂದು ಮೆಂಬರುಗಳಿಗೆ ಹೇಳಿದರೂ ಸಹ, ಸ್ವರಾಜ್ಯಪಕ್ಷದ ಮೆಂಬರುಗಳು ಖದ್ದರಿನಲ್ಲಿ ಬಂದರೂ, ಯಾರೂ, ಆಕ್ಷೇಪಣೆಮಾಡಲಿಲ್ಲ.

ಅಸ್ಸಾಮಿನ ಸ್ವರಾಜ್ಯಪಾರ್ಟಿಯ ಮುಂದಾಳಾದ ಮೌಲ್ವಿ, ಫೈಜಲ್ ಅಲಿಯವರಿಗೆ ಅಲ್ಲಿಯ ಸರ್ಕಾರದವರು ಮಂತ್ರಿಪದವಿಯನ್ನು ಒಪ್ಪಿಕೊಳ್ಳಬೇಕೆಂದು ಸೂಚಿಸಿದಕ್ಕೆ ಅವರು ಆಗುವುದಿಲ್ಲವೆಂದು ಹೇಳಿದರು

ಮೈಸೂರಿಯರ ಕೌನ್ಸಿಲಿನ ಲಾ ಮೆಂಬರಾಗಿ ಮಿ|| ಶ್ಯಾಸ್ತ್ರಿಯವರ ಬದಲಾಗಿ, ಮಿ|| ಹಸನ್ ಇಮಾಮ್‌ರವರನ್ನು ನೇಮಿಸುವರೆಂದು ಪಯೋನಿಯರ್ ಎಂಬ ಪತ್ರಿಕೆಯು ಹೇಳುತ್ತದೆ

ಅಹಮ್ಮದಾಬಾದಿನಲ್ಲಿ ಹಿಂದೂ ದೇಶದ ಸೆಂಟ್ರಲ್ ಬ್ಯಾಂಕಿನ ಖಜಾಂಜಿಯು ಒಬ್ಬ ಜವಾನನ ಕೈಯಲ್ಲಿ 55 000 ರೂಪಾಯಿ ಗಂಟನ್ನು ಕೊಟ್ಟು, ಬಂಡಿಯಲ್ಲಿ ಬಂದು ಹೊಟೇಲಿಗೆ ಹೋದರು ಖಜಾಂಜಿಯು ಹೊಟೇಲಿಗೆ ಹೋದೊಡನೆ, ಜವಾನನು ಗಂಟಿನೊಡನೆ ಮಾಯವಾದನು

ಸೆಂಟ್ರಲ್ ಪ್ರಾವಿನ್ಸಸ್ (ಮಧ್ಯಪ್ರಾಂತ್ಯ) ದ ನ್ಯಾಯವಿಧಾಯಕ ಸಭೆಯಲ್ಲಿ ನೇಮಿಸಲ್ಪಟ್ಟಿರುವ ಮಂತ್ರಿಗಳಲ್ಲಿ ಕೌನ್ಸಿಲಿಗೆ ನಂಬಿಕೆ ಇಲ್ಲವೆಂತ ಠರಾವು ಚರ್ಚಿಸಲ್ಪಟ್ಟು ಬಹುಮತದಿಂದ ಮಂಜೂರಾಯಿತು. ಸ್ವರಾಜ್ಯಪಾರ್ಟಿಯವರು ಮಂತ್ರಿತ್ವವನ್ನು ಅಂಗೀಕರಿಸಲು ಒಪ್ಪುವದೂ ಇಲ್ಲ ಆದ್ದರಿಂದ ಗವರ್ನರ್‌ಸಾಹೇಬರಿಗೆ ಏನು ತೋರದೆ ಸಭೆಯನ್ನು ಮುಂದಿನ ತಾರೀಖನ್ನು ನಿರ್ಣಯಿಸದೆ ಬರಖಾಸ್ತು ಮಾಡಿದ್ದಾರೆ ಇದೇ ರೀತಿ ಬಂಗಾಳ ಸಂಯುಕ್ತಪ್ರಾಂತ್ಯದಲ್ಲಿಯೂ ಸಹ ಸ್ವರಾಜ್ಯಪಾರ್ಟಿಯವರಿಗೆ ಬಲ ಹೆಚ್ಚಾಗಿದ್ದರೂ ಇನ್ನೂ ಠರಾವನ್ನು ಸಭೆಯ ಮುಂದೆ ತಂದಿರುವದಿಲ್ಲ.

ವಿದೇಶ

ಕೆಲಸಗಾರರ (ಲೇಬರ) ಸಂಗಡದವರು ಬ್ರಿಟಿಷ್ ಚಕ್ರಾಧಿಪತ್ಯದ ರಾಜ್ಯಾಡಳಿತವನ್ನು ನಡಿಸಲಿಕ್ಕೆ ಮುಂದೆ ಬಂದಿರುತ್ತಾರೆ ಈ ಸಂಗಡದ ಮಂತ್ರಿಯಾಗಿ, ಸಾರ್ವಭೌಮರು, ಪಾರ್ಲಿಮೆಂಟಿಗೆ, ಮಿ|| ಮೆಕ್‌ಡೊನಾಲ್ಡ್ ಎಂಬವರನ್ನು ನೇಮಿಸಿರುತ್ತಾರೆ ಮುಖ್ಯಮಂತ್ರಿಯಾದ ಮಿ|| ಮೆಕ ಡೊನಾಲ್ಡ್‌ರವರು ತನ್ನ ಕೈಕೆಳಗಿನ ಎಲ್ಲಾ ಮಂತ್ರಿಗಳನ್ನು, ಇತರ ಉದ್ಯೋಗಸ್ಥರುಗಳನ್ನು ನೇಮಿಸಿರುವರು ಇದನ್ನು ಚಕ್ರವರ್ತಿಯವರು ಮಂಜೂರ್ಮಾಡಿರುತ್ತಾರೆ

ಪೂರ್ವಆಫ್ರಿಕದಲ್ಲಿರುವ ಹಿಂದೀಯರ ರಾಷ್ಟ್ರೀಯಸಭೆಯು ಶ್ರೀಮತಿ ಸರೋಜಿನಿದೇವಿಯರ ಅಧ್ಯಕ್ಷತೆಯಲ್ಲಿ ಕಳೆದವಾರದಲ್ಲಿ ಜರಗಿತು ಪ್ರತಿನಿಧಿಗಳು ಎಷ್ಟು ಸಾವಿರಕ್ಕಿಂತ ಹೆಚ್ಚಾಗಿದ್ದರು ಹಿಂದೂದೇಶದಿಂದ ಶ್ರೀನಿವಾಸಶಾಸ್ತ್ರಿ ಮೊದಲಾದವರು ತಂತೀವರ್ತಮಾನಗಳನ್ನು ಕಳುಹಿಸಿದ್ದರು ಸರೋಜಿನಿದೇವಿಯವರು ತಮ್ಮ ಭಾಷಣದಲ್ಲಿ ಹಿಂದೂದೇಶೀಯರಿಗೆ ಬಿಳೀಜನರಿಂದುಂಟಾದ ಅನ್ಯಾಯಗಳನ್ನು ಕುರಿತು ಬತ್ತಿ ಬತ್ತಿ ವಿವರಿಸಿದರು

ಲೇಬರ್‌ಪಾರ್ಟಿಯ ಮಂತ್ರಿಮಂಡಲಿಯಲ್ಲಿ ಸರ್ ಸಿಡ್ನಿ ಒಲೀವಿಯ ಎಂಬವರು ಇಂಡಿಯಾದ ಸ್ಟೇಟ್ ಸೆಕ್ರೆಟರಿಯವರಾಗಿಯೂ, ಮಿ|| ರಿಚರ್ಡ್ ಎ ಒವರು ಅಂಡರ್ ಸೆಕ್ರೆಟರಿಯಾಗಿಯೂ, ಇಂಡಿಯಾದ ವೈಸ್‌ರಾಯರಾಗಿದ್ದ ಲಾರ್ಡ್ ಚೆಮ್ಸ್‌ಫರ್ಡ್ ಪ್ರಭುಗಳು ಹಡಗು ಸೈನ್ಯದ ಮುಖ್ಯಮಂತ್ರಿಯಾಗಿಯೂ ನೇಮಿಸಲ್ಪಟ್ಟಿರುತ್ತಾರೆ

ಕಿಗ್ಗಟ್ಟುನಾಡು ತ್ರಾಲೋಕು ಪೊನ್ನಂಪೇಟೆ ಶ್ರೀಮಂಗಲನಾಡು ಜನ್ಮದ ಓಟರುಗಳಲ್ಲಿ ವಿಜ್ಞಾಪನೆಗಳು.

ಮಹನೀಯರೇ,

ಕೌನ್ಸಿಲ್ ಚುನಾವಣೆಯಲ್ಲಿ ನೀವೆಲ್ಲರೂ ನನಗೆ ಸಹಾಯಮಾಡಿದ್ದಕ್ಕಾಗಿ ನಾನು ಬಹಳ ಕೃತಜ್ಞತೆಯುಳ್ಳವನಾಗಿರುತ್ತೇನೆ ಮತ್ತು ನಿಮಗೆ ಈ ಮೂಲಕ ನನ್ನ ಮನಃಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇನೆ ಇನ್ನು ಮುಂದಕ್ಕೂ ಇದೇರೀತಿ ದೇಶದ ಅಭಿವೃದ್ಧಿಯ ಎಲ್ಲಾ ಕೆಲಸಕ್ಕೂ ನಿಮ್ಮ ಸಹಾಯವನ್ನು ನಿರೀಕ್ಷಿಸುತ್ತೇನೆ

ಮಡಿಕೇರಿ ನಿಮ್ಮ ವಿಧೇಯ

ತಾ|| 27 1-24 **ಮನಿಯಪಂಡ್ರ ಚಿಣಪ್ಪ.**

" ಪ್ರಕಟಣೆ " [2—1.]

ಕೊಡಗು ಜಮ್ಮಾದಾರರ ಸಂಘ.

(ಪ್ರಚಾರಕ ಕಾರ್ಯದರ್ಶಿಯವರಿಂದ)

God grant liberty only to those who love it, and are always ready to guard nd defend it.—Webster.

ಸ್ವತಂತ್ರವನ್ನು ಪ್ರೀತಿಸಿ ಯಾವಾಗಲು ಸಂರಕ್ಷಣೆ ಮಾಡುವವರಿಗೆ ಮಾತ್ರ ದೇವರು ಸ್ವತಂತ್ರವನ್ನು ಕೊಡುವನು ವೆಬ್‌ಸ್ಟರ್ ಮಾತೆಯು (ಕೊಡಗು) ಪ್ರತಿಯೊಬ್ಬನು ಅವನ ಕರ್ತವ್ಯವನ್ನು ಮಾಡಲು ನಿರೀಕ್ಷಿಸುವಳು ಪ್ರತಿಯೊಬ್ಬನು ಅವನವನ ನಾಡು ಮೀಟಿಂಗಿಗೆ ಸಂಘದ ವಾರ್ಷಿಕ ಚಂದಾ ಒಂದು ರೂಪಾಯಿಯನ್ನು ಒಡನೆ ಪಾವತಿ ಮಾಡಬೇಕಾಗಿ ಕೋರಿಕೆ, ಪ್ರಚಾರಕಕಾರ್ಯದರ್ಶಿಯವರು ಕೆಳಗಿನ ಕ್ರಮದಲ್ಲು ಸೂಚಿಸಿದ ಮೇರೆ ಆಯಾ ಸ್ಥಳಗಳಲ್ಲು ಮೀಟಿಂಗ್ ನಡಿಸುವರು. ಪ್ರತಿಯೊಬ್ಬ ಜಮ್ಮಾದಾರನು ಬರಬೇಕಾಗಿ ಕೋರಿಕೆ

ನಂಬರು	ನಾಡು	ಮೀಟಿಂಗ್ ಸ್ಥಳ	ತಾರೀಕು	ದಿವಸ
1	ಬಲ್ಲತ್ನಾಡು	ರಾಜಿದೇವಸ್ಥಾನದಲ್ಲು	3-2 24	ಆದಿತ್ಯವಾರ
2	ಸೆಲ್ಲಿನಾಡು	ಕಚ್ಚಟ್ಟಮಾನಿಮಂದು	4 2-24	ಸೋಮವಾರ
3	ವಾಟನಾಡು	ಕಾಳಿಮಾನಿಮಂದು	5 2 24	ಮಂಗಳವಾರ
4	ನೂರಂಬಡನಾಡು	ಬಿದ್ದಾಟಂಡವಾಡೆ	6 2-24	ಬುಧವಾರ
5	ಕಡಿಯತ್ನಾಡು	ಪಾರಾಣೆಪಲ್ಲು	7 2 24	ಗುರುವಾರ
6	ಬೆಪ್ಪುನಾಡು	ಮಾದಪಟ್ಣಪರಂಬು	8 2-24	ಶುಕ್ರವಾರ
7	ಎಡೆನಾಡು	ನಾಣ್ಯಬಾಣೆಮಂದು	10 2 24	ಆದಿತ್ಯವಾರ
8	ಪೆರವನಾಡು	ಪಟ್ಟಣಿಮಂದು	11-2 24	ಸೋಮವಾರ
9	ಪೈರವನಾಡು	ಅತ್ತಕೋಡಿಮಂದು	12-2-24	ಮಂಗಳವಾರ
10	ಅಮತ್ತಿನಾಡು	ಕಳ್ಳಿಬಾಣೆಮಂದು	13 2-24	ಬುಧವಾರ
11	ಪಾಡಿನಾಲ್‌ನಾಡು	ಕರಿಳಿಮಂದು	14-2-24	ಗುರುವಾರ
12	ಕಾಂತ್‌ಮೂರ್ನಾಡು.	ಪಾಂಡದಣಿಮಂದು	16-2 24	ಶನಿವಾರ

ಕರ್ತವ್ಯ.

ನಾವು ಈಗ ನಮ್ಮ ಜವಾಬ್ದಾರಿಕೆಯನ್ನು ಅರಿತುಕೊಳ್ಳಬೇಕಾದದ್ದು ಬಹು ಅವಶ್ಯ. ದೇಶದ ಕಲ್ಯಾಣವೆಂದರೆ ಸಮುದಾಯದ ಪ್ರಯೋಜನಕ್ಕಾಗಿರುತ್ತೆ. ಸಮುದಾಯದ ಐಕಮತ್ಯದಿಂದ ಕೂಡಿದ ಅಭಿವೃದ್ಧಿಯಿಂದಲೇ ರಾಷ್ಟ್ರೀಯ ಬೆಳವಣಿಗೆಯು ಹೊಂದುವದು. ರಾಷ್ಟ್ರೀಯ ಭಾವನೆ ಹುಂಡಿಕುಳ್ಳವರಾಗಲೇ ಸ್ವರಾಜ್ಯವು ಲಭಿಸುವದು. ಆದ ಕಾರಣ ನಾವು ನಮ್ಮ ಸ್ವರಾಜ್ಯವನ್ನು ಶೀಘ್ರದಲ್ಲೇ ಪಡೆಬೇಕಾದರೆ ನಾವು ಹ್ಯಾಗೆ ನಡೆದುಕೊಳ್ಳಬೇಕೆಂಬುದನ್ನು ಯೋಚಿಸುವ ಪ್ರತಿಯೊಂದು ವ್ಯಕ್ತಿಯಲ್ಲು ಅದನ್ನು ತಿಳಿಗೊಂಡಿರುತ್ತೆ. ಮನುಷ್ಯನು ತನ್ನ ಸ್ವಂತ ಅನುಕೂಲಕ್ಕೂ ಮತ್ತು ಕುಟುಂಬದ ಅನುಕೂಲಕ್ಕೂ, ಬೇಕಾದ ಹಗಲಿರುಳು ನಾನಾ ಪ್ರಯತ್ನಗಳನ್ನು ಮಾಡುವನು. ಆದರೆ ಸಮುದಾಯದ ಅಭಿವೃದ್ಧಿಗೆ ಪ್ರಯತ್ನಪಡುವವರು ಕಮ್ಮಿಯಾದದ್ದರಿಂದಲೇ ನಾವು ಆ ದೀನತೆಗೆ ಒಳಗಾಗಿರುವೆವು. ಆಧೀನತೆಯು ಇರುವವರೆಗೂ ಸ್ವರಾಜ್ಯ ದೊರಕಲಾರದು. ಆದ್ದರಿಂದ ನಮ್ಮ ಮೊದಲನೆಯ ಕರ್ತವ್ಯವೆಂಬ ಸ್ವರಾಜ್ಯದ ಪ್ರಯತ್ನವು ಎಲ್ಲವರ ಪ್ರಯತ್ನದಿಂದ ಬೇಕಷ್ಟೆ. ಆದ ಕಾರಣ ಎಲ್ಲವರು ಸಮ ದಾರ್ಢ್ಯದಿಂದ ಆ ದೇವಸ್ಥಿಗೆ ತಾಗವನ್ನು ಮಾಡಲು ತಯಾರಾಗಬೇಕು. ಮೋಕ್ಷದ ಸೃಷ್ಟಿಯಲ್ಲು ಎಲ್ಲವರು ಸಮಾನವಾದ ಅನುಕೂಲತೆಯಿಂದ ಕೂಡಿದವರಾಗಿಲ್ಲ. ಕೆಲವರು ಧನಿಕರು, ಕೆಲವರು ಜ್ಞಾನಿಗಳು ಮತ್ತು ಕೆಲವರು ಶರೀರಪುಷ್ಟಿಯುಳ್ಳವರಾಗಿರುತ್ತಾರೆ. ಹ್ಯಾಗೆ ಒಂದು ಮನೆಕಟ್ಟಬೇಕಾದರೆ ಇಟ್ಟಿಗೆ, ಸುಣ್ಣ, ಮರಳು ಮುಂತಾದ ನಾನಾ ತರದ ಸಾಮಾನುಗಳೂ ಮತ್ತು ಎಲ್ಲಾ ಕೆಲಸಗಾರರ ಸಹಾಯವು ಅವಶ್ಯವೋ ಹಾಗೆಯೇ ದೇಶದ ಕೆಲಸದಲ್ಲೂ ಕೂಡ ಪ್ರತಿಯೊಂದು ವ್ಯಕ್ತಿಯ ಶಕ್ತ್ಯಾನುಸಾರ ಪ್ರೋತ್ಸಾಹವು ಬಹು ಅವಶ್ಯ. ಈ ಸಮುದಾಯದ ಅಭಿವೃದ್ಧಿಯಿಂದ ಸ್ವರಾಜ್ಯ ಪಡೆಯಬೇಕಾದ ಈ ಪವಿತ್ರವಾದ ಕೆಲಸದಲ್ಲು ಯಾರು ತಾತ್ಸಾರ ಉದಾಸೀನ ಮಾಡಬಾರದು. ನಾವು ಇಷ್ಟು ವರ್ಷ ಒಬ್ಬನ ಆಳ್ವಿಕೆಗೆ ಒಳಗೊಂಡಿದೆವು. ಈಗ ಸ್ವರಾಜ್ಯದ (ಪ್ರಜಾಪ್ರಭುತ್ವದ) ತಳಪಾಯವು ಕೊಡಲ್ಪಟ್ಟರೂ ಕೂಡ ಇನ್ನು ಮುಂದಕ್ಕೆ ಒಬ್ಬನ ಕೈಕೆಳಗೊಳಪಟ್ಟು ಇರಬೇಕಾಗಿಲ್ಲ. ಈ ಪಾರತಂತ್ರವು ಸಲ್ಲವೆಂದು ಹೇಳಿದರೆ ತಪ್ಪಾಗಲಾರದು. 97 ವರ್ಷ ಬ್ರಿಟಿಷರ ಆಳ್ವಿಕೆಗೆ ಒಳಗಾಗಿಯೂ ಕೂಡ ನಿರಂತರವಾಗಿ ನಾವು ಒಳಗಾಗಿಲ್ಲವೆಂದರೆ ನಮ್ಮ ಈ ಜವಾಬ್ದಾರಿಯ ಪಟ್ಟಿನ ಜವಾಬ್ದಾರಿಕೆಯು ಉಂಟಾದಿದೆಂದು ತಿಳಿದುಕೊಳ್ಳಬೇಕಾಗಿದೆ. ಈಗಿರುವಾಗ್ಯೆ ನಮ್ಮ ಜವಾಬ್ದಾರಿಕೆಯ್ನರಿತು, ಒಂದಾಗಿ ನಮ್ಮ ಭುಜದಮೇಲೆ ಬಿದ್ದಿರುವ ಜವಾಬ್ದಾರಿಕೆಯನ್ನು ನಿರ್ವಹಿಸುವದರಲ್ಲು ನಮ್ಮ ಐಕಮತ್ಯವನ್ನು ತೋರಿಸಬೇಕಾದ ಸ್ಥಿತಿಯಲ್ಲವೇ? ದೇಶವಾತ್ಸಲ್ಯ, ದೇಶಸೇವೆಯೆಂತ್ಹ ಸೇರಿಕೊಳ್ಳುವದು ಸೇವೆಗಳಿಂದು ಚೆನ್ನಾಗಿ ಆಲೋಚಿಸಿದರೆ ಮೊದಲು ನಮ್ಮಲ್ಲಿರುವ ನ್ಯೂನತೆಗಳನ್ನು ಆಲೋಚಿಸಿ ಅಂದು ಆ ದೂರಾಗಿಸಿ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಬೇಕಾದದ್ದು ನಮ್ಮ ಕರ್ತವ್ಯವಲ್ಲವೇ? ನಮ್ಮನ್ನು ಆ ಧೀನತೆಗೆ ಒಳಪಡಿಸಿದ ಅನೇಕ ನ್ಯೂನತೆಗಳಿಗೆ ಕಾರಣವಾದಂಥ ಮುಖ್ಯವಾದದ್ದೊಂದು ನಮ್ಮ ನಿಸ್ಸಹತೆಯು ಸಮುದಾಯದಮೇಲಿನ ಪ್ರೀತಿಯಿಂದ ಹಿಡಿದ ಉತ್ಸಾಹವಿಲ್ಲದಿರುವಿಕೆ. ಈ ಪ್ರಜಾಹಿತಚಿಂತನೆಯು ನಮ್ಮಲ್ಲು ಕಡಿಮೆಯಾದ ಕಾರಣ ಸಮುದಾಯದ ಅಭಿವೃದ್ಧಿಗೆ ಬೇಕಾದ ಕೆಲಸಗಳಲ್ಲು ಉತ್ಸಾಹ ಕಡಿಮೆಯಾಗಿ ನಮ್ಮ ಒಗ್ಗಟ್ಟಿನ ಬಲಕ್ಕೆ ಕುಂದುಕಲಂದು ನಮ್ಮ ಆಧೀನತೆಗೆ ನಾವೇ ಜವಾಬ್ದಾರರಾಗಿರುತ್ತೇವೆ. ಆದ್ದರಿಂದ ನಾವು ಸಮುದಾಯದ ಅಭಿವೃದ್ಧಿಯ ಒಮತೆಯಿಂದ ನಮ್ಮ ಸ್ವಂತ ಲಾಭ, ಸ್ವಂತವಿರಾಮ, ಸ್ವಂತ ಅನುಕೂಲತೆಗಳನ್ನು ಎಣಿಸದೆ ಕೆಲಸಮಾಡಬೇಕು. ಸಮುದಾಯದ ಅಭಿವೃದ್ಧಿಯಾಗಬೇಕಾದರೆ ಮುಖ್ಯವಾಗಿ ಸಂಪೂರ್ಣ ಸ್ವತಂತ್ರವನ್ನು ಪಡೆಯಲು ನಮ್ಮ ಪ್ರಯತ್ನದಲ್ಲಿ ಈಗಿರುವ ಅನುಕೂಲತೆಗಳನ್ನು, ಸಮುದಾಯದ ಅಭಿವೃದ್ಧಿಯಲ್ಲು ನಿಗವಿಟ್ಟು, ನ್ಯಾಯವಾದ ಮತ್ತು ಧರ್ಮವಾದ ರೀತಿಯಲ್ಲು ಉಪಯೋಗಿಸಿ ಆಗುವವನ್ನು ಒಗನೆ ಸಂಪೂರ್ಣ ಸ್ವತಂತ್ರವನ್ನು ಪಡೆಯಬೇಕಾಗಿದೆ. ಅಲ್ಲದೆ ನಮಗೆ ಈಗಿರುವ ಸ್ವತಂತ್ರದ ಮಿತಿಯಲ್ಲು ಅಡಗಿರುವ ಜವಾಬ್ದಾರಿಕೆಯನ್ನು ಧರ್ಮರೀತಿಯಲ್ಲು ಕ್ರಮವಾಗಿ ನಡಿಸಲೂ ಸಹ ಬೇಕು. ಈ ಕೆಲಸದಲ್ಲು ಆಗುವಷ್ಟು ನಮ್ಮ ದೇಶದಲ್ಲಿರುವ ದೇಶಾಭಿಮಾನಿಗಳಾದ ವೃದ್ಧರು ಮತ್ತು ಯುವಕನನ್ನೂ ಸಹ ತಕ್ಕರೀತಿಯಲ್ಲು ನಡಿಸಲು ಕೈಗೊಳ್ಳಬೇಕಾದದ್ದೇ ನಮ್ಮ ಮುಖ್ಯಕರ್ತವ್ಯ.

ಪಾಡಿನಾಡು ತಾಲೋಕು ಜಮ್ಮಾದ ಓಟರುಗಳಲ್ಲಿ ವಿನಂತಿ.

ಮಹನೀಯರೆ,

ನೀವೆಲ್ಲರೂ ಓಟುಕೊಟ್ಟು ನನ್ನನ್ನು ಕೌನ್ಸಿಲಿಗೆ ಚನಾಯಿಸಿ ದೇಶಸೇವೆ ಮಾಡಲು ನೀವು ನನಗೆ ಅವಕಾಶಕೊಟ್ಟದ್ದಕ್ಕಾಗಿ ನಿಮಗೆಲ್ಲರಿಗೂ ವಿನಯಪೂರ್ವಕ ವಂದಿಸುತ್ತೇನೆ. ದೇಶಹಿತದ ಕೆಲಸಗಳಲ್ಲಿ ನಿಮ್ಮೆಲ್ಲರ ಇರಾದೆಯಂತೆ ನಡೆಸುಕೊಳ್ಳಲು ತಯಾರಾಗಿದ್ದೇನಾದು ಈಗಲೂ ತಿಳಿಸುತ್ತೇನೆ. ಕೌನ್ಸಿಲಿನಲ್ಲಿ ನಡಿಸುವ ಕೆಲಸಗಳಿಗೆ ನಿಮ್ಮ ಮತ್ತು ದೇಶಬಂಧರ ಸಹಾಯವನ್ನು ನಿರೀಕ್ಷಿಸುತ್ತಲೇ ಇರುತ್ತೇನೆ.

ನಿಮ್ಮ ವಿಧೇಯ,

"ಪ್ರಕಟಣೆ" ಪಂದ್ಯಂಡ ಬೆಳ್ಯಪ್ಪ.

ಕೊಡಗಿನ ದನಗಳು.

ಕೊಡಗಿನ ಕೇಕಡ 90 ರಷ್ಟು ಜನಸಂಖ್ಯೆಯು ಕೃಷಿಯಮೇಲೆ ಆಧಾರಿಸಿದೆ. ಕೃಷಿಗೆ ಅತ್ಯಗತ್ಯವಾಗಿ ಬೇಕಾಗಿರುವ ದನಗಳ ಆವಶ್ಯಕತೆಯು ದಿನೇ ದಿನೇ ಹೆಚ್ಚು. ಮೈಸೂರು ಜಲ್ಲೆಗೆ ತಾಗಿರುವ ಕೊಡಗಿನ ಉತ್ತರ ಭಾಗದಲ್ಲಿ ಮಾತ್ರ ಅಲ್ಪಸ್ವಲ್ಪ ಕ್ರಮವಾಗಿ ರಾಸುಗಳ ಬೆಳವಣಿಗೆ ನಡೆಯುತ್ತಿದೆನ್ನಬಹುದು.

ಕೊಡಗಿನ ದನಗಳನ್ನು ಎರಡು ಜಾತಿಗಳಾಗಿ ವಿಂಗಡಿಸಬಹುದು. ಒಂದು ದೊಡ್ಡ ಜಾತಿ, ಮತ್ತೊಂದು ಸಣ್ಣ ಜಾತಿ. ಕೊಡಗಿನ ದನಗಳ ಬಹು ಭಾಗವು ಸಣ್ಣ ಜಾತಿಗೆ ಸೇರಿದ್ದು. ದೊಡ್ಡಜಾತಿ ದನಗಳು ಉತ್ತರ ಕೊಡಗಿನಲ್ಲಿ ಮಾತ್ರ ಇವೆ. ಇವುಗಳ ಸಂಖ್ಯೆಯು ಅಲ್ಪ.

ಕೊಡಗಿನ ಯಾವನೊಬ್ಬ ರೈತನಿಗೂ ತನ್ನ ರಾಸುಗಳ ಆರೋಗ್ಯವು ಯೋಗ್ಯವಿರಬೇಕಾದರೆ ಕ್ಲಿಪ್ತ ತೀನಿಯು ಕ್ರಮವಾದ ಪೋಷಣೆಯೂ ಅಗತ್ಯವೆಂದು ತಿಳಿದಿಲ್ಲ. ಅದನ್ನು ಉತ್ತಮತರದ ವ್ಯವಸಾಯ ಕ್ರಮವೆನ್ನ ಬಹುವವನೂ ಅಲ್ಲ. ಅವನಿಗೆ ಸಾಮಾನ್ಯವಾದ ಕೆಲವೊಂದು ಸಂಗತಿಗಳು ಗೊತ್ತಿರಬಹುದು. ಕೊಡಗಿನ ಪ್ರತಿಯೊಬ್ಬ ರೈತನಿಗೂ ದನದಕರುವು ಅವರ ಮೈಕಟ್ಟು ಚಂದವಾಗಿರಲಿ ಇಲ್ಲದಿರಲಿ, ಇಲ್ಲವೆ ಅದು ಎತ್ತರವಾಗಿರಲಿ ಇಲ್ಲವೆ ಗಿಡ್ಡಾಗಿರಲಿ, ಏನೋ ಒಂದು ಸಾಧಾರಣ ಕರುವಾಗಿಯೇ ತೋರುವುದು. ಆ ಕರುವು ಗಂಡಾಗಿದ್ದರೆ ತನ್ನ ಭೂಮಿಯನ್ನು ಉಳುವುದಕ್ಕೆ ಹೇಳಿ ಆಜ್ಞಸಕಾಲದ ನೇಗಲಿನಿಂದ, ಹೊಸಮಾದರಿಯ ಉಪಕರಣದಿಂದಲ್ಲ, ಬರುತ್ತದೆ ಎಂದು ರೈತನು ಆನಂದಿತನಾಗುವನು. ಅದು ಹೆಣ್ಣಾಗಿದ್ದರೆ ಏನೋ ಕೊಂಚ ಹಾಲು ಕೊಡುವುದು, ಹೆಚ್ಚಿದರೆ ಮುಂದೆ ಅದರ ಸಂತಾನ ಬೆಳೆಯಬಹುದು ಎಂದು ಅವನು ನೆನೆಸಿರುವನು. "ನಾವೇಕೆ ಹೊಸರೀತಿಯ ವ್ಯವಸಾಯಕ್ಕೆ ಗಮನ ಕೊಡಬೇಕು, ನಮ್ಮ ತಾತ ಮುತ್ತಾತರು ಹಳೇ ಕ್ರಮವನ್ನನುಸರಿಸಿ ಉದ್ಧಾರವಾಗಲಿಲ್ಲವೇ" ಎಂದು ಹೇಳುವ ರೈತರ ಸಮೂಹವೇ ನಮ್ಮ ದೇಶದಲ್ಲಿ ಹೆಚ್ಚು. ದನಗಳ ಅರೈಕೆ ಎಂದರೆ ಹಿಂಡನ್ನು ಎಂಬುದೇ ಅವರ ಅಭಿಪ್ರಾಯ. ಹೀಗಾಗಿ ಕೃಷಿಕನ ಪ್ರತಿಯೊಂದು ಕಾರುಬಾರು ಏನೋ ಒಂದು ರೀತಿಯಲ್ಲಿರುತ್ತದೆ; ಅದು ಹೀಗೀಗೆ ಇರಬೇಕೆಂಬ ನಿಯಮವಿಲ್ಲ.

ನಮ್ಮ ದೇಶದಲ್ಲಿ ಬೀಜ ಒಡೆಸುವ ಕ್ರಮವೂ ಸಹ ಯೋಗ್ಯವಲ್ಲ. ರಾಸು ಎಳೆಯದಾಗಿರುವಾಗ ಅದರ ಬೀಜವನ್ನು ಒಡೆಯುತ್ತರದ ಬದಲು, ಅದು ಪ್ರಾಯಕ್ಕೆ ಬರುವ ತನಕ ರೈತನಿಗೆ ಈ ವಿಚಾರವೇ ಅರಿಯದು. ರಾಸು ಬಲಿತದೆಂದು ಅವನಿಗೆ ತಿಳಿದ ಹೊತ್ತು ಅವನು ಬೀಜ ಒಡೆಯುವುದಿಲ್ಲ. ನಮ್ಮ ದೇಶದ ಬೀಜ ಒಡೆಯುವ ಕ್ರಮವು (mulling) ಬಹು ಪ್ರಾಚೀನವು, ಅದು ಅವಿಚಾರವಾಗಿಯೇ ಇದೆ. ತಡವಾಗಿ ಬೀಜ ಒಡೆಯುತ್ತದರಿಂದುಂಟಾಗುವ ಪ್ರಯೋಜನವು ಏನೂ ಕಾಣೆ. ಇದರಿಂದ ಅಪ್ರಯೋಜನವೇ ಹೆಚ್ಚು. ಬೀಜ ಒಡೆಯುವುದರ ಮೊದಲು ಹೋರಿಗಳು ಇತರ ದನಗಳ ಹಿಂಡಿನಲ್ಲಿ ಮನಸ್ವೀ ಸಂಚರಿಸುತ್ತಿರುತ್ತವೆ. ದನಕಾಯುವವನು ತನ್ನ ಹಿಂಡಿನ ದನಗಳನ್ನು ಹೋರಿಗಳನ್ನು ಬೇರ್ಪಡಿಸುವುದಿಲ್ಲ. ಒಂದೇ ವೇಳೆ ಹಿಂಡಿನಲ್ಲಿ ಉತ್ತಮವಾದ ಹೋರಿ ಇದ್ದರೂ, ಇತರ ಹೋರಿಗಳು ಆ ಹಿಂಡಿನಲ್ಲಿರುವದರಿಂದ, ಅವನ ಹಸುಗಳಿಗೆ ಪ್ರಯೋಜನವು ಸಿಕ್ಕಿದುದಿಲ್ಲ. ಗೌಡರಗಡೆ ವ್ಯವಸಾಯ ಇಲಾಖೆಯವರು ಒಂದು ಗೋಶಾಲೆಯನ್ನು ಅಭಿವೃದ್ಧಿಪಡಿಸುತ್ತಾ, ಹೋರಿಗಳನ್ನು ಮಡಿಕೇರಿಯಲ್ಲಿ ಇಟ್ಟಿರುತ್ತಾರೆ. ಯಾರು ಕೇಳಿದರೂ ಈ ಹೋರಿಗಳನ್ನು ಕೊಡುವರು. ರೈತರಿಗೆ ಈ ಸಂಗತಿಯು ಗೊತ್ತಿದ್ದರೂ, ತಮ್ಮ ಹಸುಗಳನ್ನು ಹೋರಿಗಳ ಹತ್ತಿರ ಅಟ್ಟಿಕೊಂಡು ಹೋಗಿ, ಪುನಃ ಹಿಂತಿರುಗುವುದು ಕಷ್ಟವೆಂದು ತಿಳಿದುಕೊಂಡು, ತಮಗೆ ದೊರಕಿರುವ ಈ ಸೌಲಭ್ಯವನ್ನು ಉಪಯೋಗಿಸಿಕೊಂಡಿರುವುದಿಲ್ಲ. ಹೊಸರೀತಿಗಳನ್ನವಲಂಬಿಸದೆ ರೈತರು ತಮ್ಮ ರಾಸುಗಳನ್ನೂ ಅವುಗಳ ಪೀಳಿಗೆಗಳನ್ನೂ ನಾಶಮಾಡಿಕೊಳ್ಳುತ್ತಿರುವರು.

ಕೊಡಗು ರೈತನಿಗೆ ಸ್ಟಾಲ್-ಫೀಡಿಂಗ್ (Stall-Feeding) ಎಂಬುದೇನೆಂದು ತಿಳಿದು ದನಗಳು ಬಾಣೆಗಳಾಗಲಿ, ಮೈದಾನಗಳಾಗಲಿ ಹೋಗಿ ಅಲ್ಲಿ ದೊರೆಯುವ ಒಣ ಹುಲ್ಲನ್ನು ತಿಂದು ಬರುವುವು. ಕೊಟ್ಟಿಗೆಯಲ್ಲಿ ಇವುಗಳಿಗೆ ತನ್ನ ಭೂಮಿಯಲ್ಲಿ ಬೆಳೆದ ಒಣಹುಲ್ಲನ್ನು ಹಾಕಿದರೂ ಹಾಕಿದ, ಇಲ್ಲದಿದ್ದರೂ ಇಲ್ಲ. ದನಗಳಿಗೆ ಕ್ಲಿಪ್ತ ಆಹಾರದ ಮಾತೇ ಇಲ್ಲ. ಅನೇಕ ವೇಳೆ, ಮೇವಿಗಾಗಿ ಹೊರ ಹೋಗುವ ದನಗಳು ಬೇಸಿಗೆಯಲ್ಲಿ ಮಣ್ಣನ್ನು ತಿನ್ನಬಹುವುವು! ಸ್ವಲ್ಪ ಮಣ್ಣನ್ನು ತಿಂದು ಇಲ್ಲವೆ ಬರಿಹೊಟ್ಟೆಯಲ್ಲಿ ಬರಬೇಕು.

ದನಗಳ ಸ್ಥಿತಿಯು ಅತಿ ಶೋಚನೀಯವಾದದ್ದಾಗಿದೆ. ಹಗಲೆಲ್ಲ ಆಹಾರಕ್ಕಾಗಿ ಅಲೆದು ಅಲೆದು ದಣಿದು ಬರುವ ದನಗಳಿಗೆ ರಾತ್ರಿಯಲ್ಲಿ ವಿಶ್ರಮಿಸುವ ಸ್ಥಳ

ವಾದರೂ ಚೆನ್ನಾಗಿರುತ್ತೆಯೇ!! ಇಷ್ಟಾಗಿ ವಾಸದ ಜಾಗಕ್ಕೆ ಕೊಟ್ಟಿಗೆ ಎಂದು ಹೇಳುವುದು ನಮ್ಮೂರಿನ ವಾಡಿಕೆ. ಗಾಳಿಮಳೆಯ ಹೊಡೆತದಿಂದ ದನಗಳು ಅಭಾದಿತವಾಗಿರುವಷ್ಟು ಯೋಗ್ಯವಾಗಿ ಈ ಕೊಟ್ಟಿಗೆಯು ಇರುವುದಿಲ್ಲ. ಕರುಗಳು ವಿನಾ ಇತರ ದನಗಳೆಲ್ಲಾ ಈ ಕೊಟ್ಟಿಗೆಯಲ್ಲಿ ಹಾಕಲ್ಪಡುವುವು. ಸಗಣಿಯಾದರೋ ಸದಾ ಕೊಟ್ಟಿಗೆಯಲ್ಲಿರುತ್ತದೆ. ಅದನ್ನು ತೆಗೆಯುವುದೇ ಅಪರೂಪ. ಮಳೆಗಾಲದಲ್ಲಿ ನಮ್ಮ ದನಗಳ ಪಾಡು ವಿವರಿಸಲಸಾಧ್ಯ. ಮೊಣಕಾಲುದ್ದದ ಕೆಸರಿನಲ್ಲಿ ದನಗಳು ರಾತ್ರಿಯೆಲ್ಲಾ ನಿಂತಿರಬೇಕಾಗುವುದು. ಬೇಸಿಗೆಯಲ್ಲಿ ಸಗಣಿಯು ಒಣಗಿ ಪುಡಿ ಹುಡಿಯಾಗಿ ಮೆತ್ತನೆ ಹಾಸಿಗೆಯಂತಿರುವ ಕಾರಣ ದನಗಳು ಸುಖವಾಗಿ ಕೆಲ ಕಾಲವಾದರೂ ಇರುತ್ತವೆ. ಕೆಲವುವೇಳೆ, ರೈತನು ಕೊಟ್ಟಿಗೆಯಲ್ಲಿ ದಿನಾಲು ಹಸುರೆಲೆಗಳನ್ನು ಹಾಸುವನು. ಕೆಲವು ವಾರಗಳಾದಮೇಲೆ, ತನಗೆ ಸಾಕಷ್ಟು ಗೊಬ್ಬರ ಸಿಕ್ಕುವುದೆಂದು ತೋರಿದಾಗ, ಕೊಟ್ಟಿಗೆಯಲ್ಲಿರುವ ಗೊಬ್ಬರದ ಕಸವನ್ನೆಲ್ಲಾ ತೆಗೆದು ಒಂದು ಗುಂಡಿಯಲ್ಲಿ ಹಾಕುವನು. ಹಗಲೆಲ್ಲಾ ಗಾಳಿಮಳೆ ಹೊಡೆತವನ್ನು ಸಹಿಸಿಕೊಂಡು ಕೆಲಸಮಾಡುವ ದನಗಳ ಸ್ಥಿತಿಯು ಕೊಟ್ಟಿಗೆಯಲ್ಲಾದರೂ ಯೋಗ್ಯವಿದ್ದೀತೆಂದರೆ, ಇಲ್ಲಿಯೂ ಹೀನ. ಹಾಗಾದರೆ ಕೊಡಗಿನಲ್ಲಿ ದನಗಳ ಸಾವು ಹೆಚ್ಚಾಗುತ್ತಿರುವುದರಲ್ಲಿ ಸೋಜಿಗವೇನು? ಸಾಲದ ಸಾಲಿಗೆ ರೈತನಿಗೆ ದನಗಳ ಮರಣದಿ ದುಂಟಾಗುವ ನಷ್ಟವೂ ಕಷ್ಟವೂ ವಿವರಿಸಲು ಕೈಲಾಗದು. ಕೊಡಗಿನಲ್ಲಿ ಜೋಳವು ಬೆಳೆಯುವ ಬಯಲಿನ ಪ್ರದೇಶದಿಂದ ಸಾಗುವನ್ನೆಲ್ಲಾ ಕೊಚ್ಚಿಕೊಂಡು ಹೋಗುವುದರಿಂದ, ದನಗಳಿಗೆ ಸಾರವಾದ ಹುಲ್ಲೇ ದೊರೆಯಲಾರದು. ಹೀಗಿರುವಲ್ಲಿ ದನಗಳ ಸ್ಥಿತಿಯು ಎಂಥದ್ದಿರಬೇಕೂ ನೀವೇ ಊಹಿಸಿರಿ.

ದೇಶದ ಪ್ರಕೃತಿ ಲಕ್ಷಣಗಳಿಗನುಸಾರವಾಗಿ ನಾಡು ದನಗಳಲ್ಲಿ ಕೆಲವು ಭೇದಗಳಿವೆ. ದೊಡ್ಡದನಗಳು ಉತ್ತರ ಕೊಡಗಿನವರ ಆಸ್ತಿ. ದೊಡ್ಡ ದನಗಳಲ್ಲಿ ಅಮೃತಮಹಲ್, ಹಳ್ಳಿಕರ ಇತ್ಯಾದಿ ಜಾತಿಗಳು ಸೇರಿಕೊಂಡಿವೆ. ಉತ್ತರ ಕೊಡಗಿನ ದನಗಳೆಲ್ಲವೂ ಬಿಟ್ಟದಪುರದ ಕಳಗ ಸೇರಿರುವುಗಳು. ಉತ್ತರ ಕೊಡಗಿನಲ್ಲಿ ಮೇಲೆ ಹೇಳಿದ ಅಮೃತಮಹಲಿನ ಜಾತಿಗೆ ಸೇರಿದ ದನಗಳು ಹೆಚ್ಚಾಗಿಲ್ಲ, ಅಲ್ಲಲ್ಲಿ ಒಂದೊಂದು ಬೀಜಕ್ಕಾಗಿವೆ.

ಬಿಟ್ಟದಪುರದ ತಳಿಯು, ಹಳ್ಳಿಕರು ಮತ್ತು ನಾಡು ದನದ ಸಂಕರದಿಂದುಂಟಾದ ಹುಟ್ಟು. ಬಿಟ್ಟದಪುರದ ಜಾತಿಯ ದನಗಳಿಗೆ ಹಲವು ಬಣ್ಣಗಳುಂಟು. ಈ ಜಾತಿಯ ದನದ ಮೈಕಟ್ಟು ಹದವಾಗಿಯೂ, ಎತ್ತರದಲ್ಲಿ ಮೃದು ಮಧ್ಯಕರದ್ದಾಗಿಯೂ ಇದೆ. ಅದರ ಕೊಂಬುಗಳು ಅಂತು ದೊಂಕಾಗಿ ನೋಟಕ್ಕೆ ಚಂದವಿಲ್ಲ. ಈ ಜಾತಿ ದನಗಳು ಬಹಳ ಕಷ್ಟಸಹಿಷ್ಣುಗಳು. ತಕ್ಕ ಪೋಷಣೆಯಿಲ್ಲದೆಯೂ ಯೋಗ್ಯಬೀಜದ ಹೋರಿಗಳಿಲ್ಲದೆಯೂ ಈ ಜಾತಿಯು ಕ್ಷೀಣವಾಗುತ್ತಲಿದೆ.

ಕೊಡಗಿನ ಹುಟ್ಟು ದನಗಳಿಗೆ ನಾಡುದನಗಳೆಂದು ಹೆಸರು. ಇವು ಇಂಗ್ಲಿಷ್ ದನಗಳನ್ನು ಹೋಲುವುದಾದರೂ ಎತ್ತರದಲ್ಲಿ ಸಣ್ಣ. ಕೊಡಗಿನ ಮುಖ್ಯರಾಸುಗಳೆಂದರೆ ಈ ದನಗಳೇ ಆಗಿವೆ. ಈ ಜಾತಿಯ ದನದ ತಲೆಯು ಅಗಲವಾಗಿಯೂ, ಕಣ್ಣುಗಳು ಎತ್ತರವಾಗಿಯೂ, ಕತ್ತು ಗಿಡ್ಡಾಗಿಯೂ ಇದೆ. ಇದರ ಕೊಂಬು ಒಮ್ಮೊಮ್ಮೆ ಗಿಡ್ಡದ್ದಾಗಿಯೂ, ಉದ್ದ ಕಿರುದಾಗಿಯೂ ಇರುವುದುಂಟು. ಇದರ ಕಾಲುಗಳು ಶರೀರಕ್ಕೆ ತಕ್ಕ ಪರಿಮಾಣದಲ್ಲಿವೆ. ಈ ಜಾತಿಯ ದನಗಳಲ್ಲಿ ಹಲವು ತರಗಳಿವೆ. ಈ ದನಗಳ ಮೈಬಣ್ಣ ಅನೇಕ ವಿಧದ್ದು. ಇವುಗಳಲ್ಲಿ ಕಂದುಬಣ್ಣದವುಗಳೇ ಹೆಚ್ಚು.

ಮಿಶ್ರದನಗಳು ಈ ದನಗಳು ನಾಡು ದನಗಳಿಗೆ ಸಮಾನವಾದರೂ ಮೈಕಟ್ಟಿನಲ್ಲಿಯೂ ಸಹನಾಶಕ್ತಿಯಲ್ಲಿಯೂ, ಬಲದಲ್ಲಿಯೂ ವ್ಯತ್ಯಾಸವುಳ್ಳವುಗಳಾಗಿವೆ. ಆಕಾರದಲ್ಲಿ ಇವು ದೊಡ್ಡವಾಗಿಯೂ, ಮೈಕಟ್ಟಿನಲ್ಲಿ ತುಂಬಿ ಅದರ ಕೂದಲು ಗಿಡ್ಡಾಗಿಯೂ ತೆಳ್ಳಗಾಗಿಯೂ ಇದೆ. ಇದರ ಕಾಲುಗಳು ದಪ್ಪವಾಗಿಯೂ, ಗೊರಸುಗಳು ಒಳ್ಳೆ ಆಕಾರವುಳ್ಳವಾಗಿಯೂ ಬಲವಾಗಿಯೂ ಇವೆ; ಕೊಂಬುಗಳು ದಪ್ಪವಾಗಿಯೂ ಗಿಡ್ಡಾಗಿಯೂ ಇವೆ. ಈ ಜಾತಿ ಹೋರಿಗಳು ಗಾಡಿ ಎಳೆಯಲಿಕ್ಕೂ, ಹೊರಿಹೊರಲಿಕ್ಕೂ ಯೋಗ್ಯವು. ಈ ಜಾತಿ ಹಸುಗಳು ಹೆಚ್ಚು ಹಾಲುಕೊಡುತ್ತವೆ.

ಮೇಲಿನ ವಿವರಣೆಯಿಂದ ನಮ್ಮ ದನಗಳ ವೃದ್ಧಿಗಾಗಿ ಮಾರ್ಗಾದಿಗಳನ್ನು ಮಾಡುವುದು ಎಷ್ಟೊಂದು ಅವಶ್ಯವೆಂದು ತೋರುವುದು. ಪ್ರಾಕೃತಿಕ ಕಷ್ಟಗಳ ಮಾತು ಇರಲಿ. ನಮ್ಮ ದೇಶದ ಹೀನಪೋಷಣೆಯೂ ಸಹ, ನಮ್ಮ ದನಗಳ ಏಳಿಗೆಗೆ ಹಾನಿಕರವಾಗಿ ಪರಿಣಮಿಸಿದೆ. ಆಹಾ! ವಿಚಿತ್ರ! ದೇಶದ ಸಾಂಪತ್ತಿಕ ಸ್ಥಿತಿಗೆ ದನಗಳನ್ನು ಬಿಟ್ಟರೆ ಗತಿಯಿಲ್ಲ. ಪ್ರಾಣಿಸಮೂಹದಲ್ಲಿ ಮನುಷ್ಯನಿಗೆ ಗೌರವದಲ್ಲಿ ದನವು ಎರಡನೆ ಪ್ರಾಣಿಯಾಗಿದೆ. ಹೀಗಿರುತ್ತಾ, ಇತ್ತ ಜನರ ತಿರಸ್ಕಾರಕ್ಕೆ ಒಳಗಾಗಬಹುದೇ!!

M. M. B.

ಪಾಡೆ ಯೆಡೆನಾಲ್ಕುನಾಡು ತಾಲೋಕು ಜಮ್ಮದ ಓಟರುಗಳಲ್ಲಿ ವಿನಂತಿ.

ಕೌನ್ಸಿಲ್ ಚುನಾವಣೆಗೆ ತಾವುಗಳೆಲ್ಲರೂ ಉತ್ತೇಜನ ಕೊಟ್ಟದ್ದಕ್ಕಾಗಿ, ನಾನು ತಮ್ಮಗಳಿಗೆ ಬಹಳವಾಗಿ ವಂದಿಸುತ್ತೇನೆ. ಇದೇರೀತಿ ಇನ್ನು ಮುಂದಕ್ಕೆ ಎಲ್ಲಾ ದೇಶಹಿತಕಾರ್ಯಕ್ಕೂ, ತಮ್ಮಗಳ ಸಹಾಯವನ್ನು ಕೋರುತ್ತೇನೆ. ಅಲ್ಲದೆ ನನ್ನ ಪ್ರಸಿದ್ಧಪತ್ರಿಕೆಯಲ್ಲಿ ನಮೂದಿಸಿದಂತ ಕೆಲಸಗಳನ್ನು ಮಾಡಲು ನನ್ನ ಶಕ್ತಿಮೀರಿ ಪ್ರಯತ್ನಿಸುತ್ತೇನೆ.

ಬಲಮುರಿ, ತಮ್ಮಗಳ ಸೇವಕ,

ತಾ|| 25-1-24 ಕೋಟೆರ ಚಿಂಬಪ್ಪ.

" ಪ್ರಕಟಣೆ " [2—1.]

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. [ಎಡಿಟರ್]

ಡಿಸ್ಟ್ರಿಕ್ಟ್ ಬೋರ್ಡ್ ಮುಜರಾಯಿ ಮತ್ತು ಫಾರೆಸ್ಟ ಇಲಾಖೆಗಳು

ಅಯ್ಯಾ,

ಇರ್ಪು ಜಾತ್ರೆಗೆ ಹೋಗುವ ದಾರಿ ಪ್ರಣೀಕ್ಷೇತ್ರವಾದ ಇರ್ಪು ದೇವಸ್ಥಾನಕ್ಕೆ ಹೋಗುವ ರಸ್ತೆಯು ದುರದೃಷ್ಟದಿಂದ ಮೂರು ಘನ ಅಧಿಕಾರಿಗಳ ಕೈಸೇರಿದೆ (೧) ಪಿಲ್ಲೇಜ ಕಮ್ಯೂನಿಕೇಶನ್ ಎಂದು ಡಿ. ಬೋರ್ಡಿನದೂ (೨) ನರಿಮಲೆ ಬಂಗ್ಲೆದಾರಿ ಎಂದು ಫಾರೆಸ್ಟು ಡಿಪಾರ್ಟಮೆಂಟಿನದೂ (೩) ದೇವಸ್ಥಾನದ ರಸ್ತೆಯೆಂದು ಮುಜರಾಯಿ ಇಲಾಖೆಯದೂ ಆಗಿ ಯಾರಿಂದಲೂ ಮೋನತ್ತು ಹೊಂದದೆ ದುಸ್ಥಿತಿಯಲ್ಲಿ ಬಿದ್ದು ವರ್ಷ ವರ್ಷ ಹಾಳಾಗುತ್ತಾ ಬಂದು ಈಗ ರಸ್ತೆಯೆಂದೇ ಹೇಳಲಾಗದಾಗಿದೆ. ಇಂಥಾ ಕ್ಷೇತ್ರಕ್ಕೆ ಹೋಗುವುದಾಗಿಯೂ ಬ್ರಹ್ಮಗಿರಿ ಶಿಖರಕ್ಕೆ ಮತ್ತು ಫಾರೆಸ್ಟಿಗೆ ದೊಡ್ಡ ದೊಡ್ಡ ಅಧಿಕಾರಿಗಳು ಪರೀಕ್ಷೆ ಬಗ್ಗೆ ಹೋಗುವುದಾಗಿಯೂ ಅಲ್ಲದೆ ಹಳ್ಳಿ ಗ್ರಾಮನಿವಾಸಿಗಳಿಗೆ ಉಪಕಾರವಾಗಿಯೂ ಇರುವ ಈ ರಸ್ತೆಯನ್ನು ಈ ಮೂರು ಸಂಗಡಗಳಲ್ಲಿ ಒಬ್ಬರ ವಹಿಸಿಕೊಂಡು ಆದರೂ ಯಾ ಮೂರು ಸಂಗಡದವರು ಸೇರಿಯಾದರೂ ರಸ್ತೆಯನ್ನು ಮೋಟಾರು ರೋಡ್ ಮಾಡಿ ಮೋಕ್ಷಕ್ಕೂ ಯಾತ್ರಿಕರ ಧನ್ಯತೆಗೂ ಫಾರೆಸ್ಟ ಡಿಪಾರ್ಟಮೆಂಟಿನ ಲಾಭಕ್ಕೂ ದಾರಿ ಮಾಡಬೇಕಾಗಿ ನನ್ನ ವಂದನೆ.

ಅ ಚಂಗಪ್ಪ

ಮಕ್ಕಳಪೋಷಣೆ.

ಅಯ್ಯಾ,

ಚಿಕ್ಕ ಎಳೆಮಕ್ಕಳ ಪೋಷಣೆಯ ವಿಷಯ ಕಳೆದ ವಾರದ ಪತ್ರಿಕೆಯಲ್ಲಿ ಶಿಶುಗಳ ಪ್ರದರ್ಶನದಲ್ಲಿ ಮಿ|| ಪಿ. ಪಿ. ಉತ್ತಯ್ಯನವರು ಮತ್ತು ಮಿ|| ಮಂಗೇಶರಾಯರು ಮಾಡಿದ ಭಾಷಣಗಳನ್ನು ನೋಡಿ ಆನಂದವಾಯಿತು. ಈ ವಿಷಯ ಅಪ್ಪರಂಗಡ್ರ, ಸಬ್ ಜಡ್ಜ್ ಮೆ. ಕಾರಪ್ಪನವರೂ, ಮಿಸಸ್ ಕೊಡಂದೆರ ತಿಮ್ಮಯ್ಯನವರೂ ತೆಗೆದುಕೊಳ್ಳುವ ಕ್ರಮವೂ ಶ್ರದ್ಧೆಯೂ ಸ್ತೋತ್ರಾರ್ಹವಾಗಿದೆ.

ಈಗ ತಿಂಗಳೇ ಶ್ರೀಮತಿ ನೀತಮ್ಮನವರು ಕೊಡಗು ದೇಶದ ಮುಂದಣ ಜನಾಂಗದ ಅಭಿವೃದ್ಧಿಯನ್ನು ಕೋರಿ ಕೊಡಗು ದೇಶದಲ್ಲಿ ಹುಟ್ಟಿ ಸಾಯುವ ಮಕ್ಕಳ ಮರಣ ಸಂಖ್ಯೆಯನ್ನು ಕಡಿಮೆಮಾಡುವ ಉದ್ದೇಶದಿಂದ, ಈಗ ತಾನೇ, ಎಳೆ ಕೂಸುಗಳನ್ನು ಸಾಕಲಿಕ್ಕೆ ಮಡಿಕೇರಿ ಆಸ್ಪತ್ರೆಯಲ್ಲಿ ಎಂಟು ಹತ್ತು ತೊಟ್ಟಿಲುಗಳನ್ನು ಗತಿಯಿಲ್ಲದ ಬಡಬಗ್ಗರ ಮಕ್ಕಳನ್ನು ಸಾಕಲಿಕ್ಕೆ ಹಕ್ಕ ಸಾಮಗ್ರಿಗಳನ್ನು ಒದಗಿಸಿಟ್ಟಿರುತ್ತಾರೆ. ಮಕ್ಕಳ ಜಾಯಿಯಾದ ಕ್ರಿಮಿಗಳನ್ನೂ ಇಂಥಾ ಶ್ಲಾಘನೀಯವಾದ ಏರ್ಪಾಡನ್ನು ತನ್ನ ಕೈಯಿಂದ ಅನೇಕ ರೂಪಾಯಿ ಖರ್ಚುಮಾಡಿ, ಮಿ|| ಅಪ್ಪರಂಗಡ್ರ ಬಿ ಕಾರ್ಯಪ್ಪನವರ ಸಹಾಯದಿಂದ ಪ್ರಾರಂಭ ಮಾಡಿರುತ್ತಾರಲ್ಲದೆ, ಗ್ರಾಮಗಳಿಗೆ ಹೋಗಿ ಮಕ್ಕಳನ್ನು ಹಡೆದ ತಾಯಿಯರನ್ನು ಕಾಣಿಸಿ, ಮಕ್ಕಳ ಪೋಷಣಾಕ್ರಮವನ್ನು ಬೋಧಿಸಬೇಕೆಂದು ನಿರ್ಧರಿಸಿರುತ್ತಾರೆ. ಗ್ರಾಮಗಳಲ್ಲಿ ಶಿಶುಗಳ ಮರಣ ಸಂಖ್ಯೆಯನ್ನು ಕಡಿಮೆಮಾಡುವ ಮತ್ತು ಅವರ ಆರೋಗ್ಯದ ವಿಷಯ ಮಾಡುವ ಸಂಗತಿಯನ್ನಾದರೂ ತಿಳುವಳಿಕೆ ಕೊಡಲಿಕ್ಕೆ ಅದರ ಪ್ರೋತ್ಸಾಹಕರು ಉತ್ಸಾಹಿಗಳಾಗಿರುತ್ತಾರೆ. ಮಗುವನ್ನು ಹಡೆದು ಹೆತ್ತ

ಕೂಡಲೇ ತಾಯಿ ಸಾಯುವ ಬಡಬಗ್ಗರು, ಅಂಥಾ ಮಕ್ಕಳನ್ನು ತತ್ಕಾಲದ ಪೋಷಣೆಗೆ ಮಡಿಕೇರಿಯಲ್ಲಿರುವ ಶಿಶುಪೋಷಣಾಕರ್ತರಿಗೆ ಕಳುಹಿಸಿಕೊಟ್ಟರೆ, ಬಹಳ ಒಳ್ಳೆಯದಾಗಿ ಕಾಣುತ್ತೆ. ಮಡಿಕೇರಿಗೆ ಬರುವ ಪ್ರತಿ ಒಬ್ಬ ಪುರುಷನೂ ಸ್ತ್ರೀಯೂ ಈ ಏರ್ಪಾಡನ್ನು ನೋಡಿ ಅನೇಕ ಸಂಗತಿ ತಿಳಿದುಕೊಳ್ಳುವುದು ಉತ್ತಮ.

(ನೋಡಿದವ)

ವಾಣಿಜ್ಯಮಸ್ತ್ವಕೇ, ವಾಣಿಯೊಳುಸೇಲಸ,
ಪೀಸೆಪುಸ್ತಕವಾಣಿ ವಿದ್ಯೆಶ್ರೇಣಿಸೇ ಸಲಹೆ,
ಎಂಬಂತೆ – (ತುಳುವರ)

ಘಟ್ಟತಿಲ್ ಕಾಟ್ ಪಟ್ಟ ಜನಳೆಯೆನಾ | ತುಳುಬೀದ ರ್ ಗಟ್ಟ ಗೇಡ್ ಬುದ್ಧಿಕ್ಕಳ || ಇತಿಕಾಂಟುಟು ಆಸ್ತಿ ಸಂಗಟ್ | ಇತ್ತ್ ಸಂಸಾರ ಲೆಕ್ಕೋ ಎಣಿ ಮಿಳ್ಳ ತುವೇರ್ | ಬತ್ತಿ ಪತ್ತೋಟ್ಟೂ, ಸಂಟ್ | ಕೈತಿಕ್ಕಿ ಪಿಕಲ್ ಮೊಂತಮು ಅರ್ಗೆ ಟ್ ಪೆರ್ || ಅದ್ ನಾಚಾಪೇರ್ ಮೈ ಪೇರ್ ವಿಕ್ಕಿ ಆಳನೆಂಡ್ ಮನಾದ ತ್ಮಾ ಕಟ್ಟಿಪೇರ್ | ನೀರ್ ಆಟ್ ನಾ ಳಿನ ವಸಾರ್ ತಾದುಡ್ಡಾ ದಂಬ ತೆಡದ್ ಗೊಬ್ಬಿ ಆ ಹಾಳ್ ವಾಳ್ವೇರ || ನ ಊಡುಗುಟ್ಟೊಕ್ಕ ಂಗಾರ ಕೊಡಗರನ್ನಾ | ಮನ್ ಕೊತ್ ದೇ ಕೋಲ ಪೊರ್ಬು ಪಾಳ್ವೇರ್ || ನಸ್ಸ ನಾಗುತ್ತಿ ಗೆಬಿಡ್ | ಬ್ಯಾತಿಬೂರ್ ಟ್ ಲೇ ಪ್ಪು ಪೇರ್ ಪೆಣವುಗೂ | ಜೀವನಾತಿನ್ ಇತ್ತಿ ಪಣವಟ್ಟೂ ಟ್ಟಿ ಪಾಳಿ ಕೊಕ್ಕೊ ಕಿಸ್ ಗ ಮೋ ನ ವಾಳ್ಪೇರ್ || ಸ್ಟಾ ಕೊಡಗೆರ ನಾಚಾ ಬೇಲ್ ಲೆತ್ತಾತ್ | ವ ಲ ಕಾಳಿ ಕೋ ಳನಪ್ಪೊಲ ವಾಳ್ಪೇರ್ | ಸರಕಾರಿಪಣವುಗೂ ಕರಜಂಗ್ರೇಕ | ಜುಮ್ಮತಗಳ್ ಸಿಕ್ಕಾರ್ದ್ ಹಡ್ಡಮುಸಿದ || ಕಾಂಡೆ ಕಾತ್ ಒಲೆತ್ ಮುಚ್ಚಿಳ್ | ಹಡ್ ಕೂಡಿ ದನಪಟ್ಟ್ ಬತ್ತಿ ಬಡುಪೆರ್ || ಕೆಸ್ತ್ ಗಾನಾಗಾವಿ ಕಟ್ಟಾಂತೇ | ಜಾಮಿನ್ ತಯಿಭೂಮಿಮಾರಾ ಶೀಲ ದೋಡು ಸುಂದರ ಕೊಡಗೆರೆನ್ ನಾಣ ಟ್ಟು | ಪ್ರೋ ಜನಕ ಜಾಮಿನ್ ಎಂಪು ಪಿ ಭೂಮಿ ಕಳ್ಳಾಡೇ || ವಿನಾ ರಿವಾಳ್ ಗೂಡ ವಿಜ್ಞೋನುಗ್ ಪಾರಿ ಪೋಯಿ ಬೂರಿಯಾ ಕ್ಕ ಸಿಗ್ಗಾಳ್ ಬುರಾಣ್ಯೆ || ಕಳ ಪರಿಯಾದಾರು ದುಡ್ಡ ಅದ್ದ ಟ್ಟ ನೀಂ ಪಣತ್ ನಿರ್ದು ಳೋಟು ಪ್ಪುಚ್ಚೆದ್ದೇ ಪೋ | —

ಹಾಸಿಯರೇ ಈ ಮೇಲಿನ ಪದವನ್ನು ಓದಿನೋಡಿ ಬನ್ನಾರು ಒಬ್ಬ ವರೆಗೆ ಜಾತಿಯಾನ ನಿಂತು ಸಿಮ್ಮಿ ಬಲ್ಲಿ ಮಾ ನನ್ನ ಬಳಕೊಳ್ಳಬೇಡಿರಿ, ಬರುವ ತಿಂಗಳಲ್ಲಿ ನೀಂದಿಯಾನ ನಿಪದೇವಿಯ ಮದುವೆ ನಡೆಯುದು. ಇದನ್ನು ಹಿವಿದ ತಾವು ಜಾಣೆರಾಗಿಲ್ಲ ಭಾರದಲ್ಲಿ ಬುದ್ಧಿಹೀನರಾದ ನಿಮ್ಮ ಮಿತ್ರರಿಗೂ ಇದನ್ನು ತಿಳಿಸಿ ಪಂಸ್ನು ಸದ ಸರಿ ಮದುವೆ (ಗುತ್ತಿಗೆಹರಾಜು) ಹೋಗದಂತೆ ಮಾಡುವರಿಯಾಗಿ ಕೊಡಗು ಜಮ್ಮಗಾರಿಗೆ ವಿನಂತಿ.

ಉದಿಯಾಂಡ

ಸ ಹಾಶಯರೇ,

ಕೊಡಗು ಗೌಡ ವಿದ್ಯಾವರ್ಧಕ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರಿಗೆ ಕೂಡ ವಿನಂತಿ.

ಕಳೆದ ವರ್ಷ ಮಾರ್ಚಿಯಲ್ಲಿ ಸಭೆ ಸೇರಿದಾಗ ದ ನಿರ್ಣಯ ಪ್ರಕಾರ ಮೆಂಬರರಿಂದ ವಸೂಲಾಗತಕ್ಕ ಚಂದಾಹಣಗಳನ್ನು ವಸೂಲುಮಾಡುವರೆ ಒಪ್ಪಿಕೊಂಡ ಮಹನೀಯರು ಎಷ್ಟು ರೂಪಾಯಿ ವಸೂಲಿ ಮಾಡಿ ತಮ್ಮ ಸ್ವಾಧೀನ ಕೊಟ್ಟಿರುವರು. ವಸೂಲಾದ ಹಣಗಳನ್ನು ಸಂಘದಲ್ಲಿಟ್ಟು ವೃದ್ಧಿಸುವ ಏರ್ಪಾಡು ನಡೆಸಿರುವರೇ? ಒಂದು ವೇಳೆ ಹಾಗೆ ಮುಂದರಿಸಲಿಕ್ಕೆ ಅನಾನುಕೂಲತೆಗಳಾಗಿದ್ದರೆ ಸೆಂಟ್ರಲ್ ಬ್ಯಾಂಕಿನಲ್ಲಿ ಡೇಪಾಜಿಟ್ ಇಡಲಿಕ್ಕೆ ಅನುಕೂಲವಿಲ್ಲವೋ! ಹಣ ಇಟ್ಟರೆ ನ್ಯೂನತೆಗಳೇನಾದರೂ ಇದೆಯೋ? ಮಹಾಸಭೆಯು ಕಳೆದ ನಂತರ ಇದುವರೆಗೆ ಎಷ್ಟು ಆಡಳಿತ ಸಭೆಗಳಾಗಿವೆ? ಸಭೆಯಲ್ಲಿ ಯೇನೇನು ನಿರ್ಣಯಗಳಾದವು? ಒಂದು ವೇಳೆ ಅನಾನುಕೂಲತೆಯಿಂದ ಬಾಕಿಯಾದರೆ, ಸಭೆ ಸಹಾ ನಾರ್ಥವಾಗಿ ತೆಗೆಯುವರೆ ನಿರ್ಣಯಿಸಿದ ಸಭೆಯನ್ನು ಕ್ಲುಪ್ತವಾಯಿದೆಗೆ ತೆಗೆಯಲಾಯಿತ್ತೋ? ಮುಂದೆ ಯಾವಾಗ್ಗೆ ನೋಡಿ ತೆಗೆಯಲಾಗುವದು? ಸದರಿ ಕೆಲಸದ ಕಾರ್ಯವಿವರಣೆ ಹರದು ಸರ್ವರ ಅವಗಾಹನೆಗಾಗಿ ಕೊಡಗು ಪತ್ರದಲ್ಲಿ ಪ್ರಕಟಿಸಿದ್ದುಂಟೋ? ಇನ್ನು ಮುಂದೆ ಯಾವಾಗ್ಗೆ ನೋಡಿ ತೆಗೆಯಲಾಗುವದು?

ನೋಡಿದರು ಟಕ್ಕೇಟುಪೂರ್ವಕವಾಗಿ ಸಿಕ್ಕಿದ ಹಣ ನೋಡಿ ಅಮಿಟಿ ಕಕ್ಷದಾರರುಗಳು ತಮ್ಮ ಸ್ವಾಧೀನ ಇಟ್ಟುಕೊಳ್ಳುವದಕ್ಕಿಂತ ಕೊಡಗು ಸೆಂಟ್ರಲ್ ಬ್ಯಾಂಕಿನಲ್ಲಿ ಮುಂದರಿಸಿ ವಾಯಿದೆವರೆಗೆ ಡೇಪಾಜಿಟಾಗಿ ಇಟ್ಟು ವೃದ್ಧಿಪಡಿಸುವದಾದರೂ ಒಳ್ಳೆಯದು. ಉತ್ಪತ್ತಿ ಸಿಕ್ಕಲಾರದೇ? ಕಳೆದ ವರ್ಷದಲ್ಲಿ ಮಹಾಸಭೆಗೆ ಕೊಡಲು ಸಂ

ದಿಂದ ಸಂಬಳಕೊಟ್ಟು ಹಣ ಸಾಯಿದ ಶಗದು ವರೂಲಿಗೆ ಬಾಕಿ ಇಕ್ಕಷ್ಟು? ನಿವಾಹು ಘೋಷಣಾಪತ್ರಾಗುವದೇ? ಅದು ಯಾರ ಕೈಯಲ್ಲಿ ಇದೆ! ಪಾವತಿಯಾಗಿ ಬಿಲ್ಲು ಸ್ಕಿ ಬಿಕ್ತಿಯಲ್ಲಿ ಸವರಕ್ಷಿಂತ ಸೆಂಟ್ರಲ್ ಬ್ಯಾಂಕಿನ ಅಲ್ಲಾಲಿ ಸೇವಿಂಗ್ಸ್ ಬ್ಯಾಂಕಿನಲ್ಲಾಗಲಿ ಇಟ್ಟಿದೆ ದೇ? ಈ ಮೇಲಿನ ಆಕ್ಷೇಪಣೆಯುಗಳನ್ನು ಕೂಲಂಕಷ ತಿಳಿಯ ಬಯಸ್ತಿಸುವ.

ಅಭಿಮಾನಿ

ತಾ|| ೧೯-೧-೨೪ ರಲ್ಲಿ ಪ್ರೇಕ್ಷಕದರ್ಶಿಗೆ ಉತ್ತರವಾಗಿ ಬರೆದ ಬಾತ್ಮಿಯನ್ನು ಬದಿ ಅಭಿಪ್ರಾಯವಾಯಿತು. ನಿಮ್ಮ ಬಾತ್ಮಿಯನ್ನು ಬಗ್ಗುವಾಗ, ನನ್ನ ಬಾತ್ಮಿಯಲ್ಲಿ ಎಷ್ಟು ಸುಳ್ಳು ವರ್ತಮಾನಗಳಿವೆಯೆಂದು ನೀವು ಹೇಳುತ್ತೀರೋ, ಅಷ್ಟೇ ನಿಜವಾದ ವರ್ತಮಾನಗಳು ಇರಬಹುದೆಂದಾಗಿ ನನಗೆ ತೋರುತ್ತೆ. ಆದರೆ ಅಯ್ಯಾ, ನೀವುಗಳು ನನ್ನ ಬಾತ್ಮಿಯನ್ನು ತಪ್ಪು ಬದಿ ಅಭಿಪ್ರಾಯವಾಡಿಕೊಂಡಿದ್ದೀರೋ ಏನೋ, ಕೆಳಗೆ ಬರೆದ ಪ್ರೇಕ್ಷಕದರ್ಶಿ (Spectator) ಎಂಬ ಶಬ್ದದ ಅರ್ಥವನ್ನು ಯೋಚಿಸದೆ ನೋಡುದರಿಂದಲೇ ನಾನು ಬರೆದುದೆಲ್ಲವೂ ಸುಳ್ಳೆಂದು ನಿಮಗೆ ತೋರಬಹುದು, ಎಂದು ನನಗೆ ತೋರುತ್ತೆ. ಕೆಲವು ಜನರು ತಿಳಿದುಕೊಂಡಂತೆ ಪ್ರೇಕ್ಷಕದರ್ಶಿ ಎಂದರೆ ಸಿ. ಐ. ಡಿ. ಡಿಪಾರ್ಟ್‍ಮೆಂಟಿನವರೆಂಬ ಅರ್ಥವಾಗಲು ಕಾರಣವೇ ಇಲ್ಲ. ಆದರೆ, ನನ್ನ ವ ನಸ್ಸಿನಲ್ಲಿ, ಪ್ರೇಕ್ಷಕದರ್ಶಿ ಎಂದರೆ, ಅಲ್ಲಿ ತಮಾಷೆಯನ್ನು ನೋಡಲು ನೆರೆದಿದ್ದವರ ಪೈಕಿ ಒಬ್ಬನೆಂದು ತೋರುತ್ತೆ. ಅದಂತಿರಲಿ.

ನಾಲ್ಕು ಕಣ್ಣುಗಳು ಎರಡು ಕಣ್ಣುಗಳಿಗಿಂತ ಎಷ್ಟೋ ಹೆಚ್ಚು ವಿಶೇಷಗಳನ್ನು ಕಾಣಬಹುದಲ್ಲವೇ. ಆದರೇ ನನ್ನ ಎರಡು ಕಣ್ಣುಗಳು ಮಾತ್ರವೇ, ಎರಡು ಜನರ ಕಣ್ಣುಗಳು ಕಾಣುವಷ್ಟು ಕಾಣದ್ದರಿಂದ ನಿಮ್ಮ ಕಣ್ಣುಗಳಿಗೆ ಕಂಡ ಅನೇಕ ಸಂಗತಿಗಳನ್ನು, ನಾನು ಕಾಣದೆ, ನನ್ನ ಬಾತ್ಮಿಯಲ್ಲಿ ಬಿಟ್ಟಿರಬಹುದು. ಆದರೆ, ನನ್ನ ಕಣ್ಣುಗಳು ಕಾಣದ ಯಾವ ಸಂಗತಿಗಳನ್ನಾ ನಾನು ಬರೆದುದಿಲ್ಲವೆಂದು ನನ್ನ ಮನಸ್ಸು ಹೇಳುತ್ತೆ. ಇದರ ಮೇಲೂ ಕೆಲವು ಜನರ ಹೆಸರುಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಿದ್ದು ಅವರನ್ನು ಅವಮಾನಿಸುವದೆಂದು ಯೋಚಿಸಿಕೊಂಡಿರುವುದು ನ್ಯಾಯವಾದರೆ ಸರಿ. ಜನರಿಗೆ ಗೊತ್ತಿರುವುದೇ? ಜನರ ಅನ್ಯಾಯಗಳನ್ನು ಜಾರಿಪಡಿಸುವವರಿಗೆ ತಿಳಿಸುವುದಕ್ಕಲ್ಲವೇ. ಅಗ, ಅವರ ಅಭಿಪ್ರಾಯಗಳನ್ನು ಬೇರೆ ಜನರಿಗೆ ತಿಳಿಸುವುದಕ್ಕಾಗಿ ಪತ್ರಿಕೆಯಲ್ಲಿ ಪ್ರಕಟಿಸುವುದರಲ್ಲಿ ಏನು ಅವಮಾನವೋ? ... ಗೆ ಮಾಡುವುದರಿಂದ ಅವರಿಗೆ ಮರ್ಯಾದೆಯೂ ಲೋಕಕ್ಕೆ ಪ್ರಯೋಜನವೂ ಇಲ್ಲವೆ? ಇದೆಲ್ಲವೂ ಅವರನ್ನು ದೂಷಿಸುವುದು ಎಂಬುದಾಗಿ ಅರ್ಥಮಾಡಿಕೊಂಡರೆ ಪತ್ರಿಕೆಯ್ಲೂ ಮಾತಾಡುವುದೆಲ್ಲವೂ ತಪ್ಪನ್ನು ತಾವೇ ದೂಷಿಸಿಕೊಳ್ಳುವುದು ಎಂದಾಗಿ ಯಾರಿಗೆ ಯೋಚಿಸಿಕೊಳ್ಳಬಾರದು. ಆಗ ನೀವು ನನ್ನ ಬಾತ್ಮಿಯನ್ನು ಓದಿ ಅದರಲ್ಲಿ ಕೆಲವು ಹೆಸರುಗಳನ್ನು ಅಂದರೆ ಮಾತ್ರ ಕೈ, ಕಾಲ್ಗಳನ್ನು ಬಿಟ್ಟು, ಒಳನಾಥನೆಂಬ ಪಿಶಾಚಿಗೆ ಬಲಿಯಾಗಿ ನಿಮ್ಮ ಬಾತ್ಮಿಯನ್ನು ಬರೆದಿರಬಹುದೆಂದು ನನಗೆ ತೋರುತ್ತೆ.

ಪ್ರೇಕ್ಷಕದರ್ಶಿ.

ಅಯ್ಯಾ,

ಕೊಡಗು ಪತ್ರಿಕೆಯ ತಾ 11-1-1924 ರ 7 ನೇ ಪುಟದ ಪ್ರಥಮವಾಗಿ ಮೊದಲಿನ ವಾರ್ತೆಯನ್ನು ನೋಡಲಾಯಿತು. ವಿರಾಜಪೇಟೆ ಪಟ್ಟಣಕ್ಕೆ ಅಪ್ಪನರಸ್ತೆಯನ್ನು ಕಳುಹಿಸಿದ್ದಾರೆ. ಇದು ನಿಜ. ಇದಕ್ಕೆ ತಿರಿಗೂ ಏನೂ ಸಹ ಯಾವುದು ಇರಲಿಲ್ಲ. ಇದರ ಅರ್ಥವೇನು? ಉಳಿದ ಸಂಗಡದವರೂ ಇ... ವಿಸಿಗೋ... ಯಾ, ಬಂದು ಸಂಗಡದವರು ಒಳಗೆ ಬಂದು ಸಂಗಡವರು ಹೊರಗಿದ್ದರೆ ವಿರಾಜಗೋ ಇದು ನಮಗೆ ನ್ಯಾಯವೋ?

ತಕ್ಕರು ಅಯಿರಿ ಹೆಗ್ಗಡೆಗಳಿಗೆ ನಾಳು ಮುಂದಿನಲ್ಲಿ ಕೇಳಿದರೆ ಪ್ರತ್ಯೇಕ ಮಂದು ಕೊಡಬಹುದೆಂದು ಹೇಳಿದ್ದು ಸೋಜಿಗದ ಮಾತಾಗಿದೆ. ಆ ಮಂದು ಮನೆಯ ಕೊಟ್ಟನಿಗೂ ಕೋಲು ಹೊಡೆಯಲಿಕ್ಕೆ ಮಕ್ಕಳಿಗಾಗ ನಮಗೆ ಹಕ್ಕಿದೆಯೆಂಬದನ್ನು ಮರೆತರೋ? ಇದು ತಕ್ಕರಿಗೆ ಮಾತ್ರ ತಿಳಿಯುವುದಿಲ್ಲವೆ. ದಯವಿಟ್ಟು ಅವರ ಭಾಗವನ್ನು ನಮಗಳಿಗೆಲ್ಲಾ ಎಂಗಡಿಸಿ ಕೊಟ್ಟು ಅವರಿಗೆ ಬಡಿವಾಗಬೇಕು?

ಅಯಿರಿ ಹೆಗ್ಗಡೆಯರು ರುಮಾಲು ಕಟ್ಟುವುದು ಈ ಹುತ್ತರಿ ಕೋಲು ತೆರದಂದಿನಿಂದ ಮಾತ್ರ ಸುರುಮಾಡಿದರೋ? ಯಾ, ನೀವು ತಿಳಿದಾರಿಗ್ಗೆ ಕಟ್ಟುತ್ತಿದ್ದರೋ? ಆಗಾದರೆ ಬೀಡೆಕತ್ತಿಯನ್ನು ಎಡಬದಿ ಬಲಕ್ಕೆ ಸಿಕ್ಕಿಸಿಕೊಳ್ಳಲೇಕೆಂದು ಆಡಕೆ ಬರೆಯಲಿಕ್ಕೆ ಕಾರಣ? ಆ ಕತ್ತಿಯ ಪಾಳೆಯನ್ನು ಸೊಂಟಕ್ಕೆ ಸಿಕ್ಕಿಸಿದ್ದು ನಿಮ್ಮ ಜೀವನದಲ್ಲಿ (ನಾವು ತಿಳಿಯುವಂದ್ದರಿಂದ) ಒಂದಾವೃತ್ತಿಯಾದರೂ ನೋಡಿದ್ದಿರಾ? ಕಾಸ್ತ್ರಪಟ ಮುಂಡೆ ಗೋಟು ಹಾಕುವರು ವಯೋವೃದ್ಧರಾಗಿದ್ದು ತಾಂಬೂಲವನ್ನು ಉಪಯೋಗಿಸುವವರೆಲ್ಲರೂ ಹಾಕುತ್ತಾರೆ. 1೬ ಮೊನ್ನೆ ನಡೆದ ಕೌನ್ಸಿಲ್ ಚುನಾವಣೆಯ ದಿನ ವಿರಾಜಪೇಟೆ ಮತ್ತು ನಾಪೋಕ್ಲಿನಲ್ಲಿ 7 ಮತ್ತು 4 ಜನ ವಯೋವೃದ್ಧರಾದ ಕೊಡಗ ಮಹನೀಯರನ್ನು ಪ್ರತ್ಯಕ್ಷ ನೋಡಿದ್ದು ಉದಾಹರಣೆ. ಆದರೆ ಅಲ್ಲಿ ಒಬ್ಬ ಅಯಿರಿಯವನಾಗಲೀ ಹೆಗ್ಗಡೆಯವನಾಗಲೀ ಆ ರೀತಿ ಕಟ್ಟಿದ ಧರಿಸಿಲಿಲ್ಲ. ಇದಕ್ಕೇನನ್ನುವಿರಿ? (ಕಂಡದ್ದು ಹೇಳಿದರೆ ಕೆಂಡದಂಥ ಕೋಪ ಇದು ಹಾಗಿರಲಿ)

ನಿಮ್ಮ ಮನೆಗೆ ನಾವು ಬಂದರೆ ಮುಂದಿನ ಜಗುಲಿಯಲ್ಲಿ ಕುಳಿಕ್ಕೆ ನಿಮ್ಮ ನಮ್ಮ ದಿನಚರಿ ಉಡುಪು ಒಂದೇ ಮಾದರಿಯಾಗಿರುವದರಿಂದಲೇ ನಾವು ಅಲ್ಲಿ ಜಗುಲಿಯಲ್ಲಿ ಕೂರುವ ಪದ್ಧತಿಯಾಗಿದೆ. ಹೆಚ್ಚು ಜನರಿದ್ದು ಜಾಗವಿಲ್ಲದಲ್ಲಿ ಮನೆಯೋ ಚಾವಡಿಯೋ ಆಗಬಹುದಲ್ಲವೇ? ಊಟ ಉಪಚಾರಕ್ಕಾಗಿ ಪಡಸಾಲೆ ಬಾಗಿಲಿಗಾಗಿ ಬರುವವರೆಂಬದಕ್ಕೆ ಎಲ್ಲಿ ಅಯಿರಿ ಹೆಗ್ಗಡೆಯರು ೦೦೦೦೦೦ ಅಂದ್ದರೋ ಆ ಊರಿನಲ್ಲಿ ಮಾತ್ರ ನಡೆದಿರಬಹುದಾಗಿ ತೋರುತ್ತೆ. ಮುಂದಿನಲ್ಲಿ ಕೇಳಿಬರುವ ಅರ್ಥವಿಲ್ಲದಕ್ಕೆ ಅಯಿರಿಗಳು ಅವರ ಹೆಸರಿನ ನೋಡಿ ತಂದಿದ್ದೀರಾ ... ಆ ತಪ್ಪಿಗಾಗಿ ಅಲ್ಲವೇ ನಿಮ್ಮಲ್ಲಿ ಊಟಮಾಡಿ ನಮ್ಮ ಎಂಜಲನ್ನು ನಾವೇ ತೆಗೆಯುವ ವಾಡಿಕೆ? ಮುತ್ತದ ಆಂತರ್ಯವನ್ನು ಇಲ್ಲಿ ಹೇಳ ಸಂದವಿಲ್ಲ. ದಯವಿಟ್ಟು ನೀವು ಒಂದು ವ್ಯಕ್ತಿ ಮನೆಗಳ ವಿಚಾರದ ಪ್ರಮಾಣವನ್ನು ಸ್ವಲ್ಪ ತೆಗೆದು ನೋಡಿದರೆ ವೇದ್ಯವಾಗಬಹುದಲ್ಲವೇ?

ನಿಮ್ಮ ಈ ಬಾತ್ಮಿಯನ್ನು ಅನುಕೂಲವಾಗಿ ಪರಾಂಬರಿಸಿದರೆ ನಾಳೆಯ ಹಬ್ಬದಲ್ಲಿ ಮಾತ್ರ ನೀವು ನಮಗಳ ವೇಷವನ್ನೇ ಬದಲಾಯಿಸಿರುವಿರೆಂದು ಅರ್ಥವಾಗುತ್ತೆ. ಇದರಿಂದ ನಮಗಿರುವ ಲಾಭವೇನು?

ಜಾತಿಭೇದದ ಮಾತಿನಿಂದ ಇಲ್ಲಿ ಪ್ರಯೋಜನವೇನೂ ಇರುವಂತೆ ಕಾಣುವುದಿಲ್ಲ. ಆಚಾರಗಳನ್ನು ಕುರಿತು ಬರೆದ ನಿಮ್ಮ ಬಾತ್ಮಿಗೆ ನೀವೇ ಹುಂಬು ವ್ಯಸನಪಡಬೇಕಾಯಿತೆಂದು ಬರೆದದ್ದನ್ನು ಗ್ರಹಿಸಿದಲ್ಲಿ ನಿಮ್ಮ ಅಜ್ಞಾನ ಸಂತೋಷವು ಬರುವ ಕಾಲವು ಯಾವುದೆಂದು ಯೋಚಿಸಿ ನೋಡಬೇಕಾಗಿದೆ.

ಮೇಲಿನ ತಾರೀಖಿನ ಅದೇ ಪುಟದ 2 ನೇ ಕಾಲಂನ ಬಾತ್ಮಿಯಲ್ಲಿ 1919 ರಿಂದ 2 ವರ್ಷ ಕೋಲು ಟೆನ್ನಿಸ್ ನಡೆಯಿತೆಂಬುದು ನಿಜ. ಅನಂತರ ಅದರ ಬಾಧೆಯನ್ನು ನಿವಾರಣೆ ಮಾಡಲು ಪರಿಹಾರ ಹೇಳಿ ನಂಬಿರದ ಸುದ್ದಿಯಾಕೆ? ಕಾಲು ಕತ್ತರಿಸುವನ್ನು ಪೋಷಿಸಲಿಕ್ಕೆ ಇದೆ ನಿಮ್ಮ ಬದನ್ನು ಹುಡುಕಬೇಕಾದ ಪಕ್ಷದಲ್ಲಿ ಮಹಮೆಯನ್ನು ನಿಲ್ಲಿಸಿದ್ದರೆ ಚೆನ್ನಾಗಿತ್ತಲ್ಲವೇ?

ಅಯಿರಿ ಹೆಗ್ಗಡೆಯರ ಪ್ರಕಾರ ಬರೆದಿದ್ದರೆ ನೀವಾಗಿ ಯಾಕೆ ಅವರ ಭಾವವನ್ನು ವಹಿಸಿ ಪತ್ರದಲ್ಲಿ ಗ್ರಾಹಕತ್ತೀರಿ? ಮೇಲಿನವರಿಗೆ ಹೊಟ್ಟೆ ನೋವಾಗದ್ದು ನಿಮಗಳಿಗೆ ಪ್ಯಾಗೆ ತಿಳಿಯಿತು? ಹೀಗೆ ಒಬ್ಬರ ಸಂಕಟವು ಇನ್ನೊಬ್ಬರಿಗೆ ಹೇಳದೆ ತಿಳಿಯುವ ಶಕ್ತಿಯಿದ್ದರೆ ಕಾಯಿಲೆಯ ಒಳ ಸುಖವಾಗುತ್ತಿಯೆಂದಲೇ ತಿಳಿಯದೆ ವಾಸಿಯಾಗುತ್ತಿತ್ತಲ್ಲವೇ?

ತಕ್ಕರ ತಾ|| 10-11-23 ರ ಸಿಂಹಾಸನದ ಪರಿಣಾಮ ರವು ಬಂದನೆ ಬಾತ್ಮಿದಾರರಕ್ಕೆ ಕೊಟ್ಟ ಪಾಪಾರಿಸಂತೆ ಲ್ಲದೆ ಜೋಡಿಯಲ್ಲಿ ಅಮ್ಮಣಿಗಾ ಮಾಡದನ್ನು ಅನಂತ ವಿಧ ಹೆಸರುಗಳಿ ನೋಡಿಕಲಿಕ್ಕೆ ನಮಗಳ ಬಟ್ಟೆಯಿಲ್ಲವೋ? ಯಾರಾದ್ರು ಏನೇನು ಹೇಳಿದರೆಂದು ಪತ್ರಿಕೆಯಲ್ಲಿ ಬರದದ್ದು ಸರಿಯ ಬಂತಿದಾದ್ದರಿಂದಲ್ಲವೇ? ಅನ್ಯಥಾ ಬರೆಯಲಿಕ್ಕೆ ಕೈ ಹ್ಯಾಗೆ ಬರತ್ತಿತು? ಅದಕ್ಕೆ ನೀವೂ 1 ನೆಯವರ ಹೆ ವ್ಯಸನದ ಪರಿಹಾರದರೆ ಸುಖಿಸುವ ಸಮಯವು ಯಾವುದು? ಇದೂ ಸೋಜಿಗವಲ್ಲವೇ?

ತಾ 7-12-23 ರಲ್ಲಿ ಹೆಗ್ಗಡೆಯರಂತೆಯೇ ಅಯಿರಿಗಳು "ಒಗ್ಗಟ್ಟು" ಎಂಬ ಶಿರೋಲೇಖನವಿಟ್ಟು ಬರೆದ ಬಾತ್ಮಿಯನ್ನು ಗಮನಿಟ್ಟು ನೋಡಿ! ಇದಕ್ಕೆ ತಕ್ಕರ ರುಜುವಾತ ಜವಾಬು ಸಿಕ್ಕದ ಕಾರಣ ಮುಂದಿನ ಸುಟ ವಿಳಂಬವಾಯಿತು. ಮಾಪಿಳ್ಳೆಯರು, ಕಣಿಯರು, ಕೊಲ್ಲರು, ಮೆತ್ತು ಚೆಟ್ಟಿಗಳು ಇವರೆಲ್ಲರೂ ಜನಸ್ಥಾನದ ಕಾರಣಗಳಿಂದ ಕೋಲು ಸೇರದೆ ನಿಂತಿದ್ದರೆಂಬುದು ಅವರವರಿಗೇ ಗೊತ್ತು. 20 ನೇ ಶತಮಾನದಲ್ಲಿ ಕಾಲವಿದ್ದ ತಿಯು ಬರಲಾಯಿತಷ್ಟವರು ಹೊಂದ್ಯದ ಮಾತಾಗಿದೆ. ಹಬ್ಬ, ಮದುವೆ, ಸಾವು ಮತ್ತು ಅಕ್ಷ ನಂತಾದ್ದರಲ್ಲಿ ಬರೆತಾವದೇನೆಂದರೆ ಇದರಲ್ಲಿ ಘೋಪ್ಪದ ಹದ್ದು ಮೀರಿ ಮಾರೆಗಾಬ್ಬರೂ ಪ್ರವರ್ತಿಸಿರುತ್ತಿದ್ದು.

ಅಯಿರಿ ಹೆಗ್ಗಡೆಗಳನ್ನು ಜೊತೆಯಲ್ಲಿ ಕೋಲು ಹೊಡೆಯಲಿಕ್ಕೆ ಸೇರಿಸಿದ್ದಲ್ಲಿ ಮಾತ್ರ ಬಂದ ಸ್ವರಾಜ್ಯ ಸಿಕ್ಕುತ್ತಿಗೆಂದು ಬರೆದದ್ದು ನಿಸ್ಸಾರವಾದದ್ದು. ಕೋಲದ ಅವಯವಗಳಂದ ಕಣ್ಣು, ಮೂಗು, ಬಾಯಿ, ಕೈ, ಕಾಲು, ಮತ್ತು ಹೊಟ್ಟೆ ಇವೆಲ್ಲಾ ಸೇರಿ ಹೀಗೆ ಹೇಳಿದ ನಂತೆ ನಾವೆಲ್ಲಾ ದುಡಿದು ಈ ಹಾಳು ಹೊಟ್ಟೆಗೆ ಹಾಕುತ್ತೇನೆ. ಇದು ಏನೂ ಮಾಡುವುದಿಲ್ಲ, ಅದ್ದರಿಂದ ನಾವ್ಯಾರೂ ಕೆಲಸಮಾಡದಿದ್ದರೆ ಇದರ ಸೊಕ್ಕು ಮುರಿಯುವುದೆಂದು ಹೇಳಿ ಅವುಗಳ ಕೆಲಸ ಮಾಡಲಿಲ್ಲವಷ್ಟೇ. ಕಡೆಗೆ ಹೊಟ್ಟೆಗೆ ಅನ್ನವಿಲ್ಲದೆ ಎಲ್ಲಾವೇ ಮುದಿಕಟ್ಟಿ ಹೋಗುವ ಸ್ಥಿತಿಗೆ ಬಂತೆಂಬ ಕಟ್ಟ ಕಥೆಗೆ ಹೋಲುವುದಲ್ಲದೆ ಬೇರೆ ಇಲ್ಲ.

ಪೂರ್ವೀಕರಂತೆ ಅಯಿರಿಗಳನ್ನು ಆ ಅಯಿರಿ, ಈ ಅಯಿರಿ, ಹೆಗ್ಗಡೆಗಳನ್ನು ಆ ಹೆಗ್ಗಡೆ, ಈ ಹೆಗ್ಗಡೆ ಎಂದು ಕರೆಯಲಿಕ್ಕೆ ಹಾರಂದರೂ ನಿಮಗಳನ್ನು ಅಣ್ಣನವ ರೆನ್ನುತ್ತಾರೆಯೋ? ಇದನ್ನು ಕರೆಯುತ್ತೀರಲ್ಲ! ಭಾಷಾ ಭೇದದಿಂದ ನಿಲಿಸಬೇಕಾಗಿದ್ದಲ್ಲಿ ಅವರವರ ನಮ್ಮ ಬದಿಗ ದೂರವಾಗಿದ್ದಲ್ಲವೇ? ನಮ್ಮನ್ನು ಪ್ರಥಮ ವ್ಯವಸ್ಥೆಗೆ ತಿರುಗಿಸಲು ಹೇಳಲಿಕ್ಕೆ ನೀವು ಅವನು ವರಕ್ಕಿದ್ದಲ್ಲವೇ. ಈ ಮೇಲಿನ ಪ್ರಶ್ನೆ ಒಂದಕ್ಕಾದರೂ ದಸ್ಸು ಸೇರಿಸಿ ಬಂದ ತಪ್ಪುದಾರಿಯನ್ನು ಹಿಡಿಯಬಾರದು. ಹಾಗಿದ್ದರೂ ಹಿಂದಿನದ ನಾವು ಒಂದು ಹೆಜ್ಜೆ ಮುಂದೆ ಬರಬೇಕು. ನೀವುಗಳು ಪರಮಾರ್ಥವನ್ನು ಬಿಟ್ಟು ಹಣ, ಗನ್ನ ಇತ್ಯಾದಿ ನಾಮಗಳನ್ನಾದರೂ ಇಡಲಿಕ್ಕೆ ಇನ್ನು ಮರೆಯಬೇಡ.

ತಾ|| 18-1-1924 ರ ಪತ್ರಿಕೆಯ 7 ನೇ ಪುಟದ 2 ನೇ ಪ್ಯಾರಾದಲ್ಲಿ ಕಾಣಿಸಿರುವಂತೆ ಅಮ್ಮಕೊಡವ ಗ್ರಾಮದವರು ಅಂಥ ತಪ್ಪು ಮಾಡಿರಲಿಕ್ಕಿಲ್ಲ. ಆದರೆ ಪರಗ್ರಾಮದವರು ಮಾಡಿರಲಿಕ್ಕೆ ತಪ್ಪು ಈ ಬಾತ್ಮಿದಾರರಿಗೆ ಹ್ಯಾಗೆ ತಿಳಿಯಿತು? ಅದ್ದರಿಂದ ಅವರೇ ಅದಕ್ಕೆ ಜವಾಬ್ದಾರರೆಂದು ಹಾಕಬಾರದೇ ಹೇಳಬಹುದಲ್ಲವೇ? ಮಾಡಿದ ಕಾರ್ಯಕ್ಕೆ ನೀವೂ ಸಹ ಹೊರಡಿನ 2 ಬಾತ್ಮಿದಾರರಂತೆಯೇ ಯಾಕೆ ವ್ಯಸನಪಡುವಿರಿ? ಅಯಿರಿ ಹೆಗ್ಗಡೆಯರನ್ನು ಬಿಟ್ಟು ನಾವಿರುವವರೊಬ್ಬರು ಕೈಬಿಡಲಿಕ್ಕೆ ನೀವು ಕೋಲು ಹೊಡೆಯಲಿಕ್ಕೆ ಕಾರಣವೇನು? ಹಾಗಾದರೆ ಇದು ಪೂರ್ವಿಕರ ಪದ್ಧತಿಗೆ ವಿರೋಧವಾಗಿದ್ದಲ್ಲಿ ಅವರನ್ನು ಎಲ್ಲದರಲ್ಲಿ ಹಿಡಿದುತಂದು ಬಿಟ್ಟದ್ದು ಕೋಲು ಹೊಡೆಯಲಿಕ್ಕೆ ಇಳಿದ ತಿದ್ದರೋ? ಇದು ಪ್ರೇಕ್ಷಕದರ್ಶಿಯವರಿಗೆ ಕೂಡ ಸಿದ್ಧ ಅಭಿಪ್ರಾಯ ತೋರಲಿಲ್ಲವೇ? ಅಯಿರಿ ಹೆಗ್ಗಡೆಯನ್ನು ತಳ್ಳುವ, ಗೋಳುವುದ ಇದಕ್ಕೆ ಸಮಾಗಗಳು ನಿಮಗಳಿಗೆ ಗೊತ್ತು ಇದೆ. ಹರವಾಕೆಯವರಿಗೆ ಹೇಳಿಕೊಟ್ಟ ಕಾರಣ ಒಗ್ಗಟ್ಟಾಗುವ ಮಾತು ಇದಕ್ಕೆ ಬಗ್ಗಬಾರದಿಲ್ಲವೆಂದ್ದರಿಂದ ಅರ್ಥ ಜನಮನ ಹೊಟ್ಟೆದ ಸ್ವರಮೇಲು ಇದು ಸರಿಯಲ್ಲ. ಪೂರ್ವದ ಅಚಾರಗಳು ಎಲ್ಲಿ ತಪ್ಪಿವೆ? ಹಾಗಾದರೆ ಜನಮಂದಿ ಹಟ್ಟಿಯಲ್ಲಿಯೂ ಅಯಿರಿ ಹೆಗ್ಗಡೆಯರು ನಾಮಗಳೂ ಬರಬೇಕಾಗಿತ್ತಲ್ಲವೋ? ಇದು ಪ್ರೇಕ್ಷಕದರ್ಶಿಯವರಿಗಿಂತಲೂ ನಿಮ್ಮ ಗೋಚರಕ್ಕೆ ಬಾರದೆ ಹೋಯಿತೇ? ಅಯಿರಿ ಹೆಗ್ಗಡೆಗಳಿಗೆ ಅವರಾರೇ ನಿಷ್ಠಾರೇ ಗೊತ್ತಿದ್ದಾಗ ಹೇಳಲಿ ಮಾಡಿದರೂ ಕೇಳುವದಿಲ್ಲ. ನಾ ಯಾವಂತ ಸಡೆದರೆ ನಾಳು ಪ್ರಗತಿ ಗೊತ್ತಾದ ನಮಗೆ ಕೊಟ್ಟು ನಿಮ್ಮ ತೋಟವನ್ನು ಬಂದು ಬೇಳಿಸಿಕೊಳ್ಳಬೇಕು.

ಅದ್ದರಿಂದ ಜನಸ್ಥಾನ ಸಂಬಂಧದಲ್ಲಿ ... ಪ್ಯಾಗೆ ಬಂದಿದೆ ನೀವು Old Sultan ಎಂಬ ಹಳೆ ಸ್ವರೂಪವಿರೆ ನೋಡಲಿಲ್ಲವೋ? ಅದ್ದರಿದ್ದರೆ ತುಂಬ ಕುರಿಯ ಬೇರೂ ಎಂಬ ಕಥೆಯಂತೆ ನಮ್ಮನ್ನಾಗಿ ತೊಡದು ಹೊರಡಿಸಿ ಬಿಟ್ಟಿರೆಂಬುದು ನಾವಿರಲಿಕ್ಕೆ ಹೇಳುವುದು ಜನ ಜನವ್ವವೂ ನ್ಯಾಯವಿದ್ದವೂ ಅದು ಸಂಗತಿಯಲ್ಲವೇ?

ತಾ 28-12-23 ರಲ್ಲಿ "ಬಿಸ್ಸಿ ಒ ಧು" ಎಂಬುವರು ಹೇಳಿದಂತೆ ಕಾಣಸಾವು ಜನ್ಮದಲ್ಲಿ ಮಾಡಿದುದನ್ನು ಮರೆತು ಹೊಗಳುವವರು ನಿರುಪದ್ರವಿಗಳೆಂದು ಯಾರು ಬಾರೆ ತಿಳಿಯಲಿಕ್ಕಿಲ್ಲ. ಇಷ್ಟು ನಿಮ್ಮ ಬಹುಕಾಲ ಇತ್ತೆಂದು ಎಲ್ಲರೂ ತಿಳಿದಂತೆ ದೇವರು ಮಾಡಿರುವದರಲ್ಲಿ ಕಟ್ಟಿಕೊಟ್ಟ ಬಾತ್ಮಿಯಲ್ಲಿ ... ಬಿಡಿನವನ್ನು ಕರಗಿಸಿಕ್ಕೆ ಕಲಿತಿರುವ ಅಭಿಪ್ರಾಯವನ್ನು ಕೈಬಿಡಲಿಕ್ಕೆ ಮಾರು ಬರುವವರೇ ಎಂದು ಅಂಥ ಗುಣಿಗೇನೂ ಹೆಚ್ಚು ತ ಕಾಣಲಿಲ್ಲ. ನಾಚಿಕೆಯ ಬದಲು ಇವರಾದರೂ

ಇನ್ನು ಮುಂದೆ ನಮಗಳ ಕ್ಷೇಮಚಿಂತನೆಯಲ್ಲಿ ಮಗ್ನ ರಾಗಿರುವರೋ ?

ತಾ| ೪-೧-೨೪ "ಸ್ವಜನಪ್ರೀತರು" ಲೇಖಿಸಿ ದಂತೆ ನ್ಯಾಯವೆಂದು ಕಂಡು ಬಂದಲ್ಲಿ ಇಡೀ ವರುಷದ 365¼ ದಿನದಲ್ಲಿ ಒಬ್ಬೇ ಹತ್ತು ನಿಮಿಷ ಕಾಣಿಸುವ ನಾಡು "ಕೊಡಗು" ಪತ್ರಿಕೆಯಲ್ಲಿ ಲೋಕಕ್ಕೆ ನಾಚಿಕೆ ಯಾಗುವಂತೆ ಬರೆದು ನಮಗೆ ಅಜ್ಞಾನವನ್ನು ತಿಳಿಸಿ ದಂತಾಗುವದಿಲ್ಲವೇ ? ಇಲ್ಲದ ಸಲ್ಲದ ಸಂಗತಿಯಾಗಿ ದ್ದರೆ ಸಾರ್ವಜನಿಕ ಕಾರ್ಯದವರು ತಿದ್ದುವ ಪೂರ್ವಕರು ನಮಗೊಂದು ಮುಂದು ಊರಿನಲ್ಲಿಯೂ ಅದೇ ನಾಡಿನ ಲ್ಲಿಯೂ ತರೆಯುತ್ತಿಲ್ಲವೇನು ?

ಈ ಪವಿತ್ರ ದೇಶದಲ್ಲಿ ಕೇಳಡಾ 75 ರಂತೆ ವ್ಯಾಪ ತಿವಂತ [illegible] 5 ಕಡಿಮೆ ಯಾಗಿರುವ ನಾವುಗಳು ನಿಮ್ಮಗಳೊಂದಿಗೆ ಹೋರಾಟ ಕ್ಕೆ ಬಾರದೇನು ? ಸಾಧ್ಯವಾದೀತೇನು ? ಬಲಶಾಲಿಯ ತಪ್ಪು The poor man and the rich man ಎಂಬ [illegible] ತಮ್ಮ ಮನಸ್ಸಿನಲ್ಲಿ ವಾಗ [illegible] ಸತ್ಯವಿದ್ದಲ್ಲಿ ಇದು ಏಕೆ

[illegible] 5 [illegible] ಕಡಿಮೆ [illegible] ನಿಮಗಳಿಗೆ [illegible] ನಿಮ್ಮಗಳನ್ನು [illegible] ದೇವರೇ [illegible] [illegible] ಮುಂದೆ [illegible] ಅನು ಗ್ರಹಿಸು

"ಆಮೆರಿ"

COORG FOREST DEPARTMENT

TIMBER SALE NOTICE.

Mercara, the 24th January 1924.

It is hereby given for general information that some or all of the following quantities of timber lying at the Coorg Forest Depot, Hunsur, will be sold by public auction in convenient lots at Hunsur on 24th February 1924 at 2 p m

Teak (Tectona grandis)	10 000 c ft
Honne (Pterocarpus marsupium)	2,500 „
Nandi (Lagerstroemia lanceolata)	1,000 „
Total	13,500 c ft

All the timber is open to inspection

For further particulars apply to the Divisional Forest Officer, South Coorg, Mercara

O. S. Association Magazine.

C. H. SCHOOL,

MERCARA.

Edited by Mr. B. S. KUSHALAPPA B A.,

Published under the distinguished Patronage of

T J TASKER ESQ., I. C S

Commissioner of Coorg

and

Rao Bahadoor K. CHENGAPPA B A,

District Magistrate of Coorg

No. 2

January 1924, will be out in the 1st week of February 1924.

SUBSCRIPTION.

Members of the Association	Re. 1-0 0 Postage free
Non-members	Re. 1-0 0 Postage extra
Single copy	As. 0 6 0 „

CONTENTS.

1. A forgotten chapter from Coorg History
2. Confessions and advertisement of
3. A scene from a Ranger's life.
4. Two! A tale for children.
5. Swami Vivekananda—by a "Student."

etc., etc., etc.,

Only limited number of copies are published.

To avoid disappointment

Register Your Orders.

ನೋಟೀಸು.

ಜಮೀನುದಾರರ ಸಂಘದ ಎಗ್ಜಿಕ್ಯೂಟಿವ್ ಮೀಟಿಂಗು ತಾರೀಖು 7-2-24 ನೇ ದಿನ ಸಾಯಂಕಾಲ 4 ಗಂಟೆಗೆ ಓಂಕಾರೇಶ್ವರ ದೇವಸ್ಥಾನದ [illegible] ನಡೆಯುವುದು

ಚರ್ಚಿಸತಕ್ಕ ವಿಷಯಗಳು.—

[illegible]

[illegible] ನಿರ್ಣಯಿಸುವುದು.

ಮಡಿಕೇರಿ, ಸಿ. ಎಂ. ವೆಂಕಪ್ಪಯ್ಯ,

27 1-1924. ಜನರಲ್ ಸೆಕ್ರೆಟರಿ.

WANTED.

Two Second-hand Motor Bicycles

M M. SIDDEEK,

22—1 MERCARA.

[illegible]

[illegible] ವೈದ್ಯಶಾಲೆಯಲ್ಲಿ ಒಂದು [illegible] ಇಲ್ಲಿ [illegible] ಚಿಕಿತ್ಸೆ [illegible] ವಿವರವನ್ನು ತಿಳಿಸುಕೊಳ್ಳಬಹುದು

ನಾರಾಯಣನಂಬೀಶನ್,

[illegible]

12 2 [illegible]

FOR SALE.

A Small Pony Mare Good and Sound, Quiet, Complete with Semi military Saddle, numdah, Double reins, Martingales etc. Rs 160 or nearest offer. Inspection any time

Apply.—

R. C Kothandramiah,

Mathikadu Estate,

4—2 Sunticoppa, COORG

BUMPER CROPS

Always follow on application of our fertilisers.

ದೊಡ್ಡ ಕಾಫಿ ಫಸಲು.

ಸಿಕ್ಕಬೇಕಾದರೆ ನಮ್ಮ ಕಾಫಿ ಫಟಿ ಲೈಸರುಗಳನ್ನು ಉಪಯೋಗಿಸಿರಿ.

ನಮ್ಮ ಕಾರ್ಖಾನೆಯಲ್ಲು ಎಲ್ಲಾ ಕಲಸದ ರಸಗೊಬ್ಬರ ಹೊಸ (fresh) ಗೊಬ್ಬರ ತಯಾರಾಗುತ್ತದೆ.

Siddeek's Mannure Works

21—3 MERCARA.

ಆರೋಗ್ಯ ಚಂದ್ರಿಕೆ.

ಇದು ಪ್ರಜಾಕ್ಷೇಮಕ್ಕಾಗಿ ಆರೋಗ್ಯಮಾರ್ಗವನ್ನೂ ತತ್ವವನ್ನೂ ಬೋಧಿಸುವ ಒಂದು ಮಾಸಪತ್ರಿಕೆ ಇದರ ಸಂಪಾದಕರು ಮದ್ರಾಸಿನಲ್ಲಿ ಪ್ರಸಿದ್ಧರಾದ ಡಾಕ್ಟರ್ ಯು. ರಾಮರಾವ್ ಎಮ್. ಎಲ್ ಸಿ ಯವರು. ಇದರಲ್ಲಿ ಅನೇಕ ಪ್ರಸಿದ್ಧ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರುಗಳ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವವು.

ಟಪಾಲುಹಾಸಲು ಸೇರಿ ಈ ಪತ್ರಿಕೆಯ ವಾರ್ಷಿಕ ಚಂದ 1—8—0 ರೂ. ಮಾತ್ರ. ಬಿಡಿ ಪತ್ರಿಕೆ ಒಂದಕ್ಕೆ 0—2—0 ಆಣೆ.

ಏಜೆಂಟರು :—	ವಿಳಾಸ :—
ಮ|| ರಾ|| ರಾ|| ಎಸ್. ಕೆ. ಕಸ್ತೂರಪ್ಪ, ಭಾಗಮಂಡಲ, ಕೊಡಗು.	ಮೇನೇಜರ್, ಆರೋಗ್ಯಚಂದ್ರಿಕೆ ಆಫೀಸು, 323, ತಂಬುಚೆಟ್ಟಿ ರೋಡ, ಮದ್ರಾಸು.

]12—7]

For your requirements of high grade Arms, Ammunition, Wine and Spirits,

APPLY TO:—

Mc. DOWELL & Co., Ltd.,

24—14 MERCARA.

ಪ್ರೊ ಸ್ಪೆ ಕ್ಟ ಸ್.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್,

[illegible]

ಶೇರ್ ಬಂಡವಾಳ	50 000
[illegible]	6·820
[illegible]	30 849

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ [illegible]

[illegible] 5 [illegible] 5 [illegible]

[illegible]

ಪ್ರೆಸಿಡೆಂಟರು [illegible]

[illegible]

[illegible]

[illegible]

ತಾರೀಖು 1—9—23.

HEALTH IS WEALTH.

WANTED all to improve health strength and vitality [illegible] our nation from physical [illegible] Send half-anna stamp and get [illegible] specimen photographs with full particulars from

Director Physical Culture,

P.O Basavanagudi,

BANGALORE CITY

ಜೀವವಿಮೆ.

ಸಾವಿರಾರು ಕುಟುಂಬಗಳಲ್ಲಿ ಸಂಪಾದನೆಯ ಯಜಮಾನನು ಮೃತಪಟ್ಟರೆ ಉಂಟಾಗಬಹುದಾದ ತೊಂದರೆಗಳನ್ನು ನಿವಾರಿಸುವುದೇ ಜೀವವಿಮೆ.

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬದ ಜೀವನಾಧಾರಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ.

ಅತಿ ಕಡಮೆ ದರದಲ್ಲಿ ಯಾವ ಲೋಪವೂ ಬಾರದಂತೆ ಕ್ಷಿಪ್ರದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ಮೈಸೂರಿನ ಸರಕಾರದ ಭದ್ರತೆಯುಳ್ಳ ಜೀವವಿಮೆ ಕಂಪೆನಿ

ಬಹುಶಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ದಾಲಖಾಗಿ ಹಣವನ್ನು ಒದಗಿಸಿ ಸ್ವರಾಷ್ಟ್ರಗಳನ್ನೂ ಕೊಂಡು ಕಟ್ಟಿ ದೇಶದ ಆರ್ಥಿಕ ಸಂಪತ್ತನ್ನು (Economic Condition) ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೆ!

ಲೈಫ್ ಇನ್ಶೂರೆನ್ಸ್ ಆಕ್ಟಿನ ಮೇರೆ ಇಂಡಿಯಾ ಗವರ್ನಮೆಂಟ್ ಸೆಕ್ಯೂರಿಟಿಗಾಗಿ ಸಲ್ಲಬೇಕಾದ 12 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿಗೆ ಸಲ್ಲಬೇಕಾದ 1 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನ ಮದ್ರಾಸಿನ ಶಾಖೆಯಲ್ಲು 1 ಲಕ್ಷ ಗವರ್ನಮೆಂಟ್ ಆಫ್ ಇಂಡಿಯ ಸೆಕ್ಯೂರಿಟಿಯನ್ನು ಅರ್ಧಲಕ್ಷ ಮೈಸೂರು ಸೆಕ್ಯೂರಿಟಿಯನ್ನು ಡಿಪಾಜಿಟ್ಟಾಗಿ ಇಟ್ಟಿರುತ್ತೆ. ಬಾಕಿ ಒಂದು ಲಕ್ಷ ಇಂಡಿಯ ಗವರ್ನಮೆಂಟ್ ಸೆಕ್ಯೂರಿಟಿಗೆ ಬ್ಯಾಂಕ್ ಮೂಲಕ ಏರ್ಪಾಡು ಮಾಡಿರುತ್ತೆ.

ಬಿ. ಎಂ. ಅರಾಧ್ಯ,

ಲೈಫ್ ಅಂಡ್ ಮ್ಯಾರೇಜ್ ಆಫೀಸ್ ಮಡಿಕೇರಿ

Printed & Published by D. S. Krishnaswami, Proprietor, at Sreenivas Electric Press, Mysore "Kodagu" Ltd.. Mercara—1-1-1924.

If not delivered please return
[illegible] Office, Mercara
Reg. No. M. 1550.

[illegible]

ಪ್ರತಿ ಶುಕ್ರವಾರ ಪತ್ರಿಕೆಯು ಪ್ರಕಟಿಸಲ್ಪಡುವುದು.

ಸಂಪುಟ ೩] ಕೊಡಗು, [illegible] ನವಂಬರ [illegible] ಶುಕ್ರವಾರ. [ಸಂಚಿಕೆ [illegible]

ಪ್ರಿಂಟಿಂಗ

[illegible]

Srinivas Electric Press,
MYSORE

The [illegible] Publishing Company

[illegible]

[illegible]	0	6	0
[illegible]	0	10	0
3 [illegible]	0	12	0
4 [illegible]	0	8	0
5 [illegible]	0	4	0
5 [illegible]	0	4	0
6 [illegible]	0	4	0

[illegible]

ಸರಸ್ವತಿ.

[illegible]

SARASWATHI PUBLISHING CO.,
Fost [illegible] No. 5 [illegible] City

ಕಿರ್ಲೋಸ್ಕರ [illegible]

[illegible]

ಕಿರ್ಲೋಸ್ಕರ ಬಂಧು ಲಿಮಿಟೆಡ್,

[—16] [illegible]

When you think of going to Bombay
THINK OF
THE WELCOME HOTEL.
Girgaum Back Road, BOMBAY.
Most airy accomodation—Most central situation—Excellent Meals
Every Convenience

ವೆಲ್ಕಂ ಹೋಟೆಲ್.

ಗಿರ್ಗಾಂವ್ ಬ್ಯಾಕ್ ರೋಡ್, ಬೊಂಬಾಯಿ

[illegible]

[12—12]

ಸ್ಪೆನ್ಸರ್ ಕಂಪನಿಯ ಸಾಮಾನುಗಳ [illegible]

[illegible] (Prune [illegible] lb)	0	14	0
[illegible]	0	7	0
[illegible]	1	4	0
[illegible]	1	14	0
[illegible]	0	11	0
[illegible] (O [illegible] Highland [illegible] Whisky)	6	0	0
[illegible]	6	0	0
[illegible] Brandy)	6	7	0
[illegible] (Cricket [illegible])		5	0
[illegible] per dozen)	21	4	0

SPENCER & Co. Ltd
Mercara and Pollibetta Coorg

[24—15]

ಆರೋಗ್ಯ ಚಂದ್ರಿಕ.

[illegible]

[12—8]

WANTED.

Two Second hand Motor Cycles
M. M. SIDDEEK,
MERCARA.

22—2

BUMPER CROPS
Always follow on application of our fertilisers

ದೊಡ್ಡ ಕಾಫಿ ಫಸಲು.

[illegible]

Siddeek's Mannure Works.
MERCARA.

24—4

"ಕೊಡಗು"

೧೯೨೪ ನೇ ಇಸವಿ ಫೆಬ್ರವರಿ ತಾ|| ೮ ನೇ ಶುಕ್ರವಾರ.

ಮೈಸರಾಯರ ಆಶೀರ್ವಚನವೂ, ಚೀಫ್ ಕಮಿಷನರವರ ಭಾಷಣವೂ

ಜನವರಿ ತಾರೀಖು 28 ರಲ್ಲು ಮಡಿಕೇರಿಯ ಕೋಟೆಯೊಳಗೆ ಚೀಫ್ ಕಮಿಷನರವರು ಕೊಡಗಿನ ಪ್ರಥಮ ಲೆಜಿಸ್ಲೇಟಿವ್ ಕೌನ್ಸಿಲನ್ನು ತೆರೆಯುವ ಸಮಾರಂಭದಲ್ಲಿ ಚೀಫ್ ಕಮಿಷನರವರು ಓದಿದ ಮೈಸರಾಯರವರ ಆಶೀರ್ವಚನವು ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಅದರಲ್ಲಿ ಒಂದು ಕಡೆ "ಕೊಡಗಿನ ನಿವಾಸಿಗಳಿಗೆ ದೇಶದ ಕಾರ್ಯಗಳಲ್ಲಿ ಹೆಚ್ಚಿನ ಭಾಗಿಗಳಾಗಲಿಕ್ಕೂ ನ್ಯಾಯವಾದ ಅನುಕೂಲಗಳು ಹೊಸ ಕೌನ್ಸಿಲಿನಿಂದ ದೊರೆತೀತೆಂಬುದೂ ಮತ್ತು ದೇಶದ ಶಕ್ತಿಯನ್ನು ಹೆಚ್ಚಾಗಿ ಪ್ರಕಾಶಿಸಲಿಕ್ಕೂ ರಾಜಕೀಯ ಬೆಳವಣಿಗೆಗೂ ಇದು ಮೊದಲನೇ ಮೆಟ್ಟಲಾದೀತೆಂಬುದೂ ನನ್ನ ಮನಃಪೂರ್ತಿ ಆಶೆಯಾಗಿದೆ" ಎಂದು ಹೇಳಲ್ಪಟ್ಟಿದೆ. ದೇಶೀಯರ ಅಭಿಲಾಷೆಯಂತೆಯೇ ಮೈಸರಾಯರು ಆಶೆಯನ್ನಿಟ್ಟಿರುವದು ಸಂತಸನೀಯವೆ. ಸ್ಥಳೀಯ ಸರ್ಕಾರವು ಅದರಂತೆಯೇ ಮನಃಪೂರ್ತಿಯಾಗಿ ಸಹಾನುಭೂತಿಯುಳ್ಳವರಾಗಿ ಇದ್ದರೇನೇ ಉಭಯಕಡೆಗಳ ಅಪೇಕ್ಷೆಯು ಕೈಗೂಡುವುದು. ಇಲ್ಲಿ ದೇಶೀಯರೆಲ್ಲರೂ ಶಾಂತಸ್ವಭಾವದವರಾಗಿ ಆಗಾಗಾಯಿತೆಂಬುದೂ ಸರ್ಕಾರದವರೊಂದಿಗೆ ರಾಜಕೀಯ ಬೆಳವಣಿಗೆಗೆ ಹೋರಾಡುತ್ತಿರುವುದರಿಂದ ಸರ್ಕಾರವು ಕೌನ್ಸಿಲಿನಲ್ಲಿ ಪ್ರಜಾಪ್ರತಿನಿಧಿಗಳೊಡನೆ ಸಹಕರಿಸುವುದೆಂದೇ ನಂಬಬೇಕಾಗಿದೆ. ಮೈಸರಾಯರವರು ಸೂಚಿಸಿರುವಂತೆ ಈ ಕೌನ್ಸಿಲನ್ನು ದೇಶೀಯರು ದೇಶದ ಶಕ್ತಿಯನ್ನು ಹೆಚ್ಚಾಗಿ ಪ್ರಕಾಶಿಸಲಿಕ್ಕೂ ಮತ್ತು ರಾಜಕೀಯ ಬೆಳವಣಿಗೆಗೆ ಪ್ರಥಮಮೆಟ್ಟಲೆಂದೂ ಒಪ್ಪಿಕೊಂಡದ್ದು ಮಾತ್ರವಲ್ಲ. ಇದು ಬ್ರಿಟಿಷ್ ಸಾಮ್ರಾಜ್ಯದೊಳಗೆ ನಾವು ಪಡೆಯಬೇಕೆಂದು ಬದ್ಧಕಂಕಣರಾಗಿರುವ ಪೂರ್ತಿ ಸ್ವರಾಜ್ಯದ ಪ್ರಥಮ ಮೆಟ್ಟಲೆಂದು ತಿಳಿಯಬೇಕಾಗಿದೆ.

ಯಾರ ಪ್ರತಿನಿಧಿಗಳಾಗಿ ಇವರು ಆರಿಸಲ್ಪಟ್ಟಿದ್ದಾರೋ ಅವರ ಕ್ಷೇಮಗಳನ್ನು ಬಹು ಜಾಗರೂಕತೆಯಿಂದ ಯಾವಾಗಲೂ ಕಾದುಕೊಳ್ಳಬೇಕೆಂಬುದನ್ನೂ, ಖಾನೂನಿಗೆ ಗೌರವವೂ ಆಡಳಿತದ ಭದ್ರತೆಯೂ ಬಹು ಪ್ರಾಮುಖ್ಯವೆಂಬುದನ್ನು, ಜ್ಞಾಪಕದಲ್ಲಿಡಬೇಕೆಂತ ಮೈಸರಾಯರು ಹೇಳುತ್ತಾರೆ. ಹೀಗೆ ಬರೆಯುವಾಗ್ಗೆ ಮೈಸರಾಯರು ಹಿಂದೂದೇಶದ ಇತರ ಭಾಗಗಳಲ್ಲಿರುವ ಅಸಹಕಾರ ಚಳವಳಿಯನ್ನು ಮುಂದಿಟ್ಟುಕೊಂಡಿದ್ದಿರಬಹುದೋ ಅಥವಾ ನಮ್ಮ ದೇಶದಲ್ಲಿ ಅವರಿಗೆ ಖಾನೂನಿಗೆ ಗೌರವವೂ ಆಡಳಿತದ ಭದ್ರತೆಯೂ ಬಹು ಪ್ರಾಮುಖ್ಯವೆಂಬುದನ್ನು ನಾವು ಮರೆತಿರುವೆವೆಂದು ಅವರು ಭಾವಿಸಿಕೊಂಡರೋ ತಿಳಿಯಲಾಗುವುದಿಲ್ಲ. ಅವರು ಹಾಗೆ ಭಾವಿಸಿಕೊಂಡಿದ್ದ ಪಕ್ಷ, ಅಂಥ ತಪ್ಪುತಿಳುವಳಿಕೆಗೆ ದೇಶೀಯರು ಎಂದೂ ಎಡೆಕೊಟ್ಟಿರುವದಿಲ್ಲವೆಂದು ಹೇಳಬಲ್ಲೆವು. ಇನ್ನಾದರೂ ಎಡೆಕೊಡುವುದಿಲ್ಲ. ಚುನಾವಣೆಯು ಇದೇ ಪ್ರಥಮತಃವಾಗಿರುವುದರಿಂದ ಪ್ರತಿನಿಧಿಗಳು ಓಟರುಗಳ ಕ್ಷೇಮಗಳನ್ನು ಬಹು ಜಾಗರೂಕತೆಯಿಂದ ಕಾದುಕೊಳ್ಳಬೇಕೆಂದು ಅವರು ಸೂಚಿಸುವುದು ನ್ಯಾಯವೆ. ಪ್ರತಿನಿಧಿಗಳು ಕೌನ್ಸಿಲಿನಲ್ಲಿ ಪ್ರಜೆಗಳ ಹಿತವನ್ನೇ ಮುಂದಿಟ್ಟುಕೊಂಡು ಕಾರ್ಯನಿರ್ವಹಿಸುವರೆಂದು ನಮಗೆ ಭರವಸೆ ಇದೆ. ಬಲವಾದದ್ದೂ ಸಹಾನುಭೂತಿ ಇರುವ ಸರ್ಕಾರವು ದೇಶದ ಸುರಕ್ಷಿತೆಗೆ ಅವಶ್ಯವೆಂಬುದು ನಿಜವಾದರೂ ಸಹಾನುಭೂತಿಯು ಜಾತಿ ಮತ ಭೇದವಿಲ್ಲದೆ ದೇಶದ ಎಲ್ಲಾ ಜನರಿಗೂ ವ್ಯಾಪಿಸತಕ್ಕದ್ದು ಅತ್ಯಾವಶ್ಯಕವಾಗಿದೆ. ಇಲ್ಲವಾದರೆ ಎಲ್ಲಾ ಭಾಗದ ಜನರ ಸ್ವಾತಂತ್ರ್ಯವೂ ಆಸ್ತಿಗಳೂ, ಹಕ್ಕುಗಳೂ ಕಾಪಾಡಲ್ಪಡುತ್ತವೆಂಬ ಭರವಸೆಯು ಮತ್ತು ಜನರು ಮುಂದರಿಸಿ ಅಭಿವೃದ್ಧಿ ಹೊಂದುವ ಸ್ಥಿತಿಯು ಸಂಭವಿಸಲಾರದು.

ಕೌನ್ಸಿಲನ್ನು ತೆರೆದ ಸಮಯದಲ್ಲೇ ಚೀಫ್ ಕಮಿಷನರವರು ಮಾಡಿದ ಭಾಷಣವನ್ನು ಇನ್ನೊಂದು ಕಡೆ ಪ್ರಕಟಿಸಿರುವೆವು. ಅದರ ಪ್ರಥಮಭಾಗದಲ್ಲು ಕೊಡಗಿನ ಚರಿತ್ರೆಯನ್ನೇ ಹೆಚ್ಚಾಗಿ ಸೂಚಿಸಿರುವರು. 1792 ನೇ ಇಸ್ವಿಯಲ್ಲಿ ಟಿಪ್ಪುಸುಲ್ತಾನನಿಗೂ ಬ್ರಿಟಿಷ್ ಸರ್ಕಾರಕ್ಕೂ ಒಡಂಬಡಿಕೆ ನಡೆದಾಗ ಕೊಡಗು ದೇಶವು ಸ್ವಾತಂತ್ರ್ಯವಾಗಿರಬೇಕೆಂದು ಬ್ರಿಟಿಷ್ ಸರ್ಕಾರವು ನಿರ್ಧರಿಸಿದರೆಂದು ಚೀಫ್ ಕಮಿಷನರವರು ಹೇಳಿರುವರು. ಅಂಥಾ ಬ್ರಿಟಿಷ್ ಸರ್ಕಾರದವರು ಈಗ ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ಕೊಡಲು ಹಿಂಜರಿಯಲಿಕ್ಕಿಲ್ಲವೆಂದು ನಾವು ನಂಬುತ್ತೇವೆ. 1834 ನೇಯ ಇಸವಿಯಲ್ಲಿ ದೇಶೀಯರ ಕೋರಿಕೆಯಮೇರೆ ಈ ದೇಶವನ್ನು ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿಸಲ್ಪಟ್ಟಿದೆ. ಅಲ್ಲದೆ ಯುದ್ಧದಲ್ಲಿ [illegible] ನಮ್ಮ ದೇಶವನ್ನು ಬ್ರಿಟಿಷರಿಗೆ [illegible] ಹೀಗೆ ಮಾಡತಕ್ಕದ್ದ ಅವರನ್ನು ನಷ್ಟಗೊಳಿಸದೆ ಅವರ ಆಳಿಕೆಗೆ ಒಳಪಟ್ಟು ಸುಮಾರು ಒಂದು ಶತಮಾನವಾಗುವುದಲ್ಲದೆ ಆಚೆಗೆ ಅಮರಸುಳ್ಯ ಕಾಟಕಾಯಿಯಲ್ಲಿ ದೇಶದ ಎಲ್ಲಾ ಜನಾಂಗದವರು ಬ್ರಿಟಿಷರಿಗೆ ಸಹಾಯಕರಾಗಿ ಹೋಗಿ ದಂಗೆಯನ್ನು ಅಡಗಿಸಿದರು. ಒಂದು ಶತಮಾನಕ್ಕೆ ಮೊದಲೇ ನಾವು ಸ್ವತಂತ್ರರಾಗಿರಲು ಅರ್ಹರೆಂದು ಯೋಚಿಸಿದ ಇದೇ ಸರ್ಕಾರವು ಈಗ ಅರ್ಹರಲ್ಲವೆಂದು ಹೇಳಲು ಕಾರಣವಿಲ್ಲ. ಅರ್ಹರಲ್ಲವೆಂದರೆ ಒಂದು ಶತಮಾನದ ಬ್ರಿಟಿಷ್ ಆಡಳಿತೆಯೇ ನಮ್ಮ ಅರ್ಹತೆಯನ್ನು ಹೋಗಲಾಡಿಸಿತೆಂದು ತಿಳಿಯಬೇಕಾಗಿದೆ. ಅಂಥಾ ಅಭಿಪ್ರಾಯಕ್ಕೆ ಬ್ರಿಟಿಷ್ ಜನಾಂಗವು ಆಸ್ಪದಕೊಡಲಿಕ್ಕಿಲ್ಲವೆಂದು ನಾವೇ ಅಲ್ಲ, ಇಡೀ ಹಿಂದೂದೇಶವೇ ನಂಬಿ ಇದೆ. ಕೊಡಗಿನಲ್ಲಿ ಪೂರ್ವದಲ್ಲಿದ್ದ ಒಬ್ಬ ಮನುಷ್ಯನ ಆಳಿಕೆಯು ಕ್ರಮ ತಪ್ಪಿದ್ದರಿಂದ ಈ ದೇಶವು ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಬೇಕಾಯಿತೆಂದು ಒಂದು ಕಡೆ ಚೀ|| ಕಮಿಷನರವರು ಹೇಳಿರುವರು. ನಮ್ಮ ಪೂರ್ವಿಕರು ಕ್ರಮತಪ್ಪಿದ ಒಬ್ಬನ ಆಳಿಕೆಯನ್ನು ಹ್ಯಾಗೆ ತ್ಯಜಿಸಿದರೋ ಹಾಗೆಯೇ ಅವರ ಸಂತತಿಯವರೂ ಕ್ರಮತಪ್ಪಿದ ಮತ್ತು ಪ್ರಜೆಗಳ ಹಿತವನ್ನು ಬಯಸದ ಸರ್ಕಾರವನ್ನು ಎಂದಿಗೂ ಪ್ರೀತಿಸಲಿಕ್ಕಿಲ್ಲ.

ಬ್ರಿಟಿಷ್ ಆಡಳಿತೆಯಲ್ಲಿ ಅಭಿವೃದ್ಧಿಹೊಂದಿದ ಕಾಫಿ ವ್ಯವಸಾಯದ ದೆಸೆಯಿಂದ ದೇಶದ ಐಶ್ವರ್ಯವು ಹೆಚ್ಚಿದೆ ಎಂಬದಾಗಿಯೂ ಒಳ್ಳೇ ರಸ್ತೆಗಳು ವಿದ್ಯಾಭ್ಯಾಸವೂ ದೇಶದ ಎಲ್ಲಾ ಕಡೆಯಲ್ಲಿ ಇವೆ ಎಂಬದಾಗಿಯೂ ಹೇಳಿದ್ದಾರೆ. ಕಾಫಿ ವ್ಯವಸಾಯದಿಂದ ದೇಶದ ಐಶ್ವರ್ಯವು ಹೆಚ್ಚಿದೆಯೆಂಬುದು ಸಂಶಯಾಸ್ಪದವಾಗಿದೆ. ಕಾಫಿ ವ್ಯವಸಾಯದಿಂದ ಐಶ್ವರ್ಯವಂತರಾದ ದೇಶೀಯರು ಬಹಳ ಕಡಿಮೆ. ಕಡಿಮೆ ಬಡ್ಡಿಯಲ್ಲಿ ದೊರೆಯುವ ಧನಸಹಾಯವಿಲ್ಲದೆ ಕಾಫಿ ವ್ಯವಸಾಯಕ್ಕೆ ಕೈಹಾಕಿದ ದೇಶೀಯರನೇಕರು ನಷ್ಟಕ್ಕೆ ಒಳಗಾದರೆಂದೇ ಹೇಳಬಹುದು. ಉಳಿದ ದೇಶಾಭಿವೃದ್ಧಿಯ ಕಾರ್ಯಗಳು ಯಾವ ಸರ್ಕಾರವೂ ಮಾಡಬೇಕಾದವೇ. ಅದರಂತೆಯೇ ಬ್ರಿಟಿಷ ಸರ್ಕಾರವು ಚೆನ್ನಾಗಿ ಮಾಡಿರುತ್ತಾರೆ.

ಚೀಫ್ ಕಮಿಷನರವರು ಅವರ ಭಾಷಣದಲ್ಲಿ ಹೇಳಿರುವಂತೆ ಇಷ್ಟು ಸಣ್ಣದೇಶಕ್ಕೆ ಪ್ರತ್ಯೇಕ ಸರ್ಕಾರವನ್ನು ಏರ್ಪಡಿಸುವುದು ಸುಲಭಸಾಧ್ಯವಲ್ಲವೆಂಬುದನ್ನು ತಿಳಿದೇ ಜನರು ಈ ದೇಶವನ್ನು ಮದ್ರಾಸು ಪ್ರಾಂತ್ಯಕ್ಕೆ ಸೇರಿಸಬೇಕೆಂದು ಕೇಳಿದ್ದಲ್ಲದೆ ಸಾವಿರ ವರ್ಷಗಳಿಂದ ಪ್ರತ್ಯೇಕವಾಗಿದ್ದ ಜನಾಂಗತ್ವವನ್ನು ಕಳಕೊಳ್ಳಬೇಕೆಂದು ಮಾಡಿದ್ದಲ್ಲವೆಂದು ತೋರುತ್ತದೆ. ಈಗ ಅಂಥಾ ಪ್ರತ್ಯೇಕ ಕೌನ್ಸಿಲ್ ಸರ್ಕಾರವೂ ಮಂಜೂರಾಗಿರುವುದರಿಂದ ದೇಶೀಯರೆಲ್ಲರೂ ಅದನ್ನು ನಡಿಸಲು ಒಪ್ಪಿಕೊಂಡಿರುವುದು ನ್ಯಾಯವೆ. ಮೋರ್ಲಿ ಮಿಂಟೋ ಮಾದರಿಯ ಕೌನ್ಸಿಲಿಗಿಂತ ಈ ಕೌನ್ಸಿಲಿನಲ್ಲಿ ಚುನಾಯಿತ ಮೆಂಬರುಗಳ ಬಹುಮತವೂ ಪ್ರೆಸಿಡೆನ್ಸಿ ಕಮಿಟಿಯೂ ಸೀದಾ ಚುನಾವಣೆಯೂ ಹೆಚ್ಚಿನ ಓಟಾಧಿಕಾರವೂ ಇದೆಯೆಂದು ಇದಕ್ಕೆ ಹೊಗಳಿ [illegible] ತಿಳಿದಿದ್ದಾರೆ. ಆದರೂ ಜನರ ಪ್ರತಿನಿಧಿಗಳಿಗೆ ಅಧೀನವಾದ ಮಂತ್ರಿತ್ವವೂ, ಆದಾಯ ಮುಖ್ಯದ ಮೇಲೆ ಸ್ವತಂತ್ರವೂ ಇಲ್ಲವೆ ಇರುವುದರಿಂದಲೇ ಈ ತರದ ಸಿಸ್ಟಂ ಹೊಂದಿಸುವ ಕೌನ್ಸಿಲಿನಿಂದ ಜನರಿಗೆ ಪೂರ್ತಿ ತೃಪ್ತಿಯಾಗದೆ ಇರುವುದಕ್ಕೆ ಕಾರಣ. ಚೀಫ್ ಕಮಿಷನರವರ ಹೇಳಿಕೆಯಂತೆಯೇ ಸ್ಥಳೀಯ ಸರ್ಕಾರವು ದೇಶಹಿತದ ಕಾರ್ಯಗಳಲ್ಲಿ ಪ್ರತಿನಿಧಿಗಳೊಂದಿಗೆ ಸಹಕರಿಸುವರೆಂದು ನಾವು ಆಶಿಸುತ್ತೇವೆ. ಸ್ವರಾಜ್ಯವು ನಿಜವಾಗಿಯೂ ದೊರೆಯಬೇಕೆಂದಿದ್ದರೆ ಈಗಿನ ಮಾದರಿಯು ಓಟರರ ಮತ್ತು ಪ್ರತಿನಿಧಿಗಳ ತರಬೇತಿಗೆ ಅನುಕೂಲವಾಗಿದೆಯೆಂದು ಮಂತ್ರಿಗಳ ಕೂಟದಲ್ಲಿ ಸೂಚಿಸುತ್ತಾರೆ. ಸ್ವರಾಜ್ಯವು ನಿಜವಾಗಿಯೂ ದೊರೆಯಬೇಕೆಂದಿದ್ದರೆ ಎಂಬ ಶರತ್ತಿನ ಮಾತು ಯಾರಿಗೂ ಒಪ್ಪತಕ್ಕದ್ದಲ್ಲ. ಸ್ವರಾಜ್ಯವನ್ನು ಪಡೆಯಬೇಕೆಂಬ ಉದ್ದೇಶವು ಎಲ್ಲರಲ್ಲಿಯೂ ನೆಲೆಗೊಂಡಿದೆ. ಯಾವಾಗ ಹ್ಯಾಗೆ ಅದನ್ನು ಪಡೆಯಬೇಕೆಂಬುದನ್ನು ಕುರಿತು ನಾವು ಕಾರ್ಯವನ್ನು ಕೈಗೊಳ್ಳಬೇಕಲ್ಲದೆ ಬೇರೆ ಏನೂ ಇಲ್ಲ.

ಮಾಪ್ಪ ಕೋಟ್ ಫಾರೆಸ್ಟ್.

ಮಾಪ್ಲಕೋಟ್ ಫಾರೆಸ್ಟುಗಳಿಂದ ಸಿಕ್ಕುವ ಮರಗಳನ್ನು ಕೊಯ್ಯುವ ಕಂಟ್ರಾಕ್ಟನ್ನು ಪಡೆಯಲು ತಯಾರಿರುವವರು ಯಾವ ದರದ ಲಾಭ ಕೊಡಲು ತಯಾರಿದ್ದಾರೆಂಬುದನ್ನು ತಿಳಿಸಬೇಕಾಗಿ ಮದ್ರಾಸು ಸಂಗತಿಗಳನ್ನು ಸೂಚಿಸುತ್ತ ಪ್ರಕಟನಾಪತ್ರಗಳು ಡೆಪ್ಯುಟಿ ಕನ್ಸರ್ವೇಟರ್ ಸಾಹೇಬರು ಕಳುಹಿಸಿದವನ್ನು ಬೇರೆ ಕಡೆ ಪ್ರಕಟಿಸಿದ್ದೇವೆ. ಮರ ವ್ಯಾಪಾರದಲ್ಲಿ ಅನುಭವ ಇರುವವರು ಮಾತ್ರ ಪ್ರಕಟಣೆಯಲ್ಲಿ ನಮೂದಿಸಿರುವ ಶರತ್ತುಗಳ ಗುಣದೋಷಗಳನ್ನು ತಿಳಿಸಲಿಕ್ಕೆ ಶಕ್ತರಷ್ಟೆ. ಪ್ರಯೋಜನವಿದೆಯೆಂತ ತಿಳಿದವರು ಹೇಳಿದರೆ ಹಣಗಾರರು ಪ್ರಯತ್ನಿಸಿ ನೋಡಬೇಕಾದ ವಿಷಯವಾಗಿದೆ. ಒಬ್ಬೊಬ್ಬನಿಂದ ಮಾತ್ರ ಸಾಧ್ಯವಾಗುವ ಕೆಲಸವಲ್ಲ. ಇದಕ್ಕಾಗಿಯೇ ಜಾಯಿಂಟ್ ಸ್ಟಾಕ್ ಕಂಪೆನಿಯೊಂದು ಏರ್ಪಾಡಾಗಬೇಕು. ಇಷ್ಟು ದೊಡ್ಡ ಒಂದು ಕೆಲಸವನ್ನು ನಮ್ಮ ಈ ಚಿಕ್ಕ ದೇಶದಲ್ಲಿ ಎತ್ತುವುದು ಸಾಧ್ಯವಿದೆಯೆಂತ ನಮಗೆ ತೋರುವದಿಲ್ಲ. ಯಾರಾದರೂ ಹೊರಗಿನ ವ್ಯಾಪಾರಿಗಳಾಗಲೀ ಕಂಪೆನಿಗಳಾಗಲೀ ಈ ಕಾರ್ಯಕ್ಕೆ ಇಳಿಯುವವರಾದರೆ ಅವರ ಸಂಗಡ ದೇಶೀಯ ಹಣ ಸೇರಿಕೊಳ್ಳತಕ್ಕದ್ದು ಯುಕ್ತವಾಗಿದೆ. ಸುರುವಿನಲ್ಲಿ ಮದರಾಸ್ ಪಟ್ಟಣದಲ್ಲಿರುವ ಪ್ಯಾರಿ ಕಂಪೆನಿಯವರು ಕೊಡಗು ಸರ್ಕಾರದೊಂದಿಗೆ ಒಪ್ಪಂದ ಮಾಡುತ್ತೇವೆಂತ ವರ್ತಮಾನವಿತ್ತು. ಅನಂತರ ಇಚ್ಛೆ ಇರುವವರು ದರಖಾಸ್ತು ಮಾಡಿಕೊಳ್ಳಬಹುದೆಂತ ಪ್ರಕಟಣೆ ಇದೆ. ಇದು ಸರಿಯಾದ ದಾರಿಯು. ಪ್ರಕಟಿಸದೆ ಯೂರೋಪಿಯನ್ ಕಂಪೆನಿಯೊಂದಿಗೆ ಕಂಟ್ರಾಕ್ಟ್ ಮಾಡಿಕೊಂಡಿದ್ದರೆ ಕೊಡಗು ಸರ್ಕಾರವು ದೂರಿಗೆ ಗುರಿಯಾಗುತ್ತಿತ್ತು. ದೇಶೀಯ ಹಣಗಾರರಿಗೆ ಸಹ ಅವಕಾಶ ಕೊಟ್ಟಿದ್ದಾರೆ. ಯಾರು ಮುಂದೆ ಬರುತ್ತಾರೆಂಬದನ್ನು ಎದುರುನೋಡುತ್ತಾ ಇದ್ದೇವೆ.

ಹಿಂದಿನ ಪ್ರಕಟಣೆಯಲ್ಲಿ ವರ್ಷಕ್ಕೆ 6000 ಟನ್ ಮರ ಕೊಡುವ ಶರತ್ತಿಗೆ ಕೊಡಗು ಫಾರೆಸ್ಟ್ ಇಲಾಖೆಯವರು ಒಪ್ಪುತ್ತಾರೆಂತ ಇತ್ತು. ಈಗಿನ ಪ್ರಕಟಣೆಯಲ್ಲಿ ಕಾಲಿಯಾನಾ 3000 ಟನ್ ಮರ ಕೊಡುವ ಶರತ್ತಿದೆ ಎಂತ ಬರೆದಿದ್ದಾರೆ. ಮೊದಲಿಗಿಂತ ಅರ್ಧವಾಸಿ ಕಡಿಮೆಯಾಗಲು ಕಾರಣವೇನು? ಆಗ ಮಾಡಿದ ಲೆಕ್ಕ ತಪ್ಪೇ ಅಲ್ಲ, ಕೆಲಸಗಾರರು ಕೆಲಸ ಮಾಡಲು ಹಿಂಜರಿಯುತ್ತಾರೋ? ಹೇಗೂ ಸಾಧ್ಯವಿದ್ದಷ್ಟು ಮರವನ್ನು ಕೊಡುವದು ಇಲಾಖೆಯ ಕೆಲಸವಾಗಿದೆ. ಮಾತ್ರವಲ್ಲ ಅನಾವಶ್ಯವಿರುವ ಉದ್ಯೋಗಗಳನ್ನು ತೆಗೆದುಹಾಕುವ ಅವಶ್ಯಕತೆಯೂ ಇದೆ. ಈ ವಿಷಯ ಇನ್ನೊಂದಾವರ್ತಿ ಬರೆಯಬಹುದು.

ಮೇಲ್ವಿಚಾರಣಾ ಬೋರ್ಡಿನವರ ಅಧಿಕಾರಕ್ಕೆ ಒಳಪಟ್ಟು ಕಾರ್ಪೊರೇಷನಿಯ ಕೆಲಸ ನಡಿಯಬೇಕೆಂತ ಇದೆ. ಈ ಬೋರ್ಡಿಗ ಮೆಂಬರರು ಯಾರು, ನೇಮಿಸುವವರು ಯಾರು, ದೇಶದವರಿಗೆ ಇದರಲ್ಲಿ ಎಷ್ಟು ಇರುತ್ತೆ ಇತ್ಯಾದಿ ವಿಷಯಗಳನ್ನು ವಿವರಿಸುವದಿಲ್ಲ. ದೇಶೀಯರಿಗೆ ಈ ಬೋರ್ಡಿನಲ್ಲಿ ಪ್ರತಿನಿಧಿತ್ವ ಕೊಡುವದು ಅವಶ್ಯವಿದೆ.

ಏನೂ ಪ್ರಯೋಜನವಿಲ್ಲದೆ ಬಿದ್ದಿರುವ ಹತ್ತು ಲಕ್ಷ ರೂಪಾಯಿಯಿಂದ ಏನಾದರೂ ಪ್ರಯೋಜನ ದೊರೆಯುವದು ಉತ್ತಮವೇ. ಕೌನ್ಸಿಲಿನಲ್ಲಿ ಬಡ್ಜೆಟ್ ಚರ್ಚೆಯಾಗುವ ಮುಂಚೆ ಟೆಂಡರ್ ಪ್ರಕಟವಾಗಿದ್ದರೆ ಉತ್ತಮವಾಗಿತ್ತು.

ಲೆಜಿಸ್ಲೇಟಿವ್ ಕೌನ್ಸಿಲ್ ತೆರೆಯುವ ಸಮಾರಂಭದಲ್ಲಿ ಚೀಫ್‌ಕಮಿಶನರು ಮಾಡಿದ ಭಾಷಣ.

ಚಕ್ರವರ್ತಿಯವರ ಸರಕಾರದವರು ದಯವಿಟ್ಟು ಕೊಡಗಿಗೆ ಮಂಜೂರುಮಾಡಿದ ನ್ಯಾಯವಿಧಾಯಕ ಸಭೆಯನ್ನು ತೆರೆಯಲು ಈ ದಿನ ಇಲ್ಲಿ ಸೇರಿದ್ದೇವೆ. ಹೊಸದಾಗಿ ಚುನಾಯಿತರಾದ ಮೆಂಬರುಗಳಿಗೆ ನನ್ನ ಸ್ವಾಗತವನ್ನು ಕೊಡುತ್ತೇನೆ. ಪ್ರಜೆಗಳ ಜವಾಬ್ದಾರಿ ಸರಕಾರದ ಕಡೆಗೆ ಹೋಗಲು ಈ ಮುಖ್ಯ ಮೆಟ್ಟಲನ್ನು ಏರಿದ್ದಕ್ಕೆ ಕೊಡಗಿಗೆ ನನ್ನ ಅಭಿವಂದನೆಯಿದೆ.

ಕೊಡಗರ ಮೂಲವು ಏನೆಂದು ಗೊತ್ತಿಲ್ಲ. ಪುರಾಣಗಳಲ್ಲಿ ಹೇಳುವ ವಿಷಯವನ್ನು ನಂಬಲೀ ನಂಬದಿರಲಿ [illegible] ಜನಾಂಗವು ಬಹಳ ಪುರಾತನಕಾಲದ್ದು ಎಂಬುದರ [illegible] ಒಂದುಸಾವಿರ ವರ್ಷಕ್ಕಿಂತ ಹೆಚ್ಚು ಕಾಲದಿಂದ ಈ [illegible] ನಾದ ಬೆಟ್ಟಶ್ರೇಣಿಯಲ್ಲಿ ಪ್ರತ್ಯೇಕವಾಗಿಯೂ ಸ್ವತಂತ್ರವಾಗಿಯೂ ಇತ್ತೆಂಬುದರಲ್ಲಿ ಏನೂ ಸಂಶಯವಿಲ್ಲ. ಕ್ರಿಸ್ತ [illegible] 9 ನೇ ಶತಮಾನದಲ್ಲಿ ಚರಿತ್ರೆಯು ಪ್ರಾರಂಭವಾದಾಗ [illegible] [illegible] ರಾಜಕೀಯ [illegible] ಕೊಡಗು ಸೇರಿತ್ತು. ಯಾವುದೋ ಒಂದು [illegible] [illegible] ಸಂಬಂಧದಿಂದ ಗಂಗರ [illegible] ಒಳಪಟ್ಟಿತ್ತು. ಎರಡು ಶತಮಾನಗಳ ನಂತರ ಗಂಗರ [illegible] ಚೋಳರು ಸೋಲಿಸಿದ ನಂತರ ಕೊಡಗು [illegible] ಇದ್ದ [illegible] ಚೋಳ ರಾಜನಿಗೆ [illegible] ಅನಂತರ [illegible] ಚೋಳರ ಸ್ಥಾನವನ್ನು ಪಡೆದು [illegible] ಸ್ಥಾನದಲ್ಲಿ [illegible] [illegible] ದಲ್ಲಿ ವಿಜಯನಗರ ಸಂಸ್ಥಾನವು [illegible] ಕೊಡಗು [illegible] ಅಧೀನ [illegible] ವಾಗಿತ್ತು, [illegible] ನಂತರ ಕೊಡಗರು ಸ್ವತಂತ್ರರಾಗಿದ್ದರೆಂಬ [illegible] ಸುಮಾರು ಒಂದುನೂರು ವರ್ಷದ ನಂತರ ಇಕ್ಕೇರಿ [illegible] ಸ್ಥಾನದ ಅರಸನೊಬ್ಬನು ಪ್ರತ್ಯೇಕಪ್ರತ್ಯೇಕವಾಗಿದ್ದ ನಾಯಕರನ್ನು ಒಟ್ಟುಗೂಡಿಸಿದನು. ಈ ಒಗ್ಗಟ್ಟಿನಿಂದಲೇ ಪಶ್ಚಿಮಸಮುದ್ರತೀರಕ್ಕೆ ಸೇರಲು ಅಡ್ಡವಾಗಿ ದಾರಿಯಲ್ಲಿದ್ದ ಕೊಡಗನ್ನು ಅಧೀನಪಡಿಸಬೇಕೆಂದಿದ್ದ ಹೈದರ ಮತ್ತು ಟಿಪ್ಪುಸುಲ್ತಾನರಿಗೆ ಧೈರ್ಯದಿಂದ ಎದುರುನಿಂತರು. ಈ ಸಂದರ್ಭದಲ್ಲಿ ಬ್ರಿಟಿಷರ ಸಂಗಡ ಸ್ನೇಹ ಬೆಳೆದು ಶ್ರೀರಂಗಪಟ್ಟಣದ ಮೊದಲನೇ ಮುತ್ತಿಗೆಯಾದವಳನೆ ಕೊಡಗಿನ ಸ್ವಾತಂತ್ರ್ಯವನ್ನು ಒಪ್ಪಿಕೊಳ್ಳಬೇಕೇಕೆಂತ ಬ್ರಿಟಿಷರು ಹಟಮಾಡಿದರು. [illegible] ವರ್ಷಗಳ ನಂತರ ಕೊಡಗರ ಅಪೇಕ್ಷೆಮೇರೆ ಕೊಡಗು ವಿಸ್ತೃತ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಲೀನವಾಯಿತು. 17 ನೇ ಶತಮಾನದ ಸ್ಥಾಪಿತವಾದ ವ್ಯಕ್ತಿಯ ಆಡಳಿತ [illegible] [illegible] ಕಾಲಾ [illegible] ಸಂತತಿ ದತ್ತಿ [illegible] [illegible]

ಲ್ಲಿ ಕೊಡಗರು ಸಹಾಯ ಮಾಡಿದರು. 1857 ನೇ ಇಸ್ವಿ ದಂಗೆಯಲ್ಲಿ ಇವರು ಇಂಗ್ಲಿಷ್ ಸರಕಾರಕ್ಕೆ ಸಹಾಯ ಮಾಡಿ ಅವರ್ನ್‌ಮೆಂಟಿನ ವಿನಾಶವನ್ನು ತಪ್ಪಿಸಿದರು.

90 ವರ್ಷದ ಬ್ರಿಟಿಷ್ ಆಡಳಿತದಿಂದ ಕೊಡಗು ಒಳ್ಳೆ ಅಭಿವೃದ್ಧಿ ಹೊಂದಿದೆ. ರಸಾಯನಶಾಸ್ತ್ರಕ್ಕೆ ಯೋಗ್ಯವಾಗಿ ಕಾಫಿ ವ್ಯವಸಾಯ ಮಾಡಿದ್ದರಿಂದ ದೇಶದ ಆರ್ಥಿಕ ಅಭಿವೃದ್ಧಿ ಹೆಚ್ಚಿದೆ. ಒಳ್ಳೇ ರಸ್ತೆಗಳು ದೇಶದಲ್ಲಿ ಮಾಡಲ್ಪಟ್ಟಿವೆ. ವಿದ್ಯಾಭಿವೃದ್ಧಿಯು ಬೆಳವಣಿಗೆ ಹೊಂದುತ್ತಾ ಇದೆ. [illegible] ದೇಶದ ಅಭಿವೃದ್ಧಿಯಲ್ಲಿಯೂ ಇಂಡಿಯಾ ಸರಕಾರವು ಯಾವಾಗಲೂ ಬಹಳ ಅಭಿರುಚಿ ತೆಗೆದುಕೊಂಡಿದ್ದಾರೆ.

ರಾಜಕೀಯ ಸುಧಾರಣೆಯ ಶಕ್ಯ ಒದಗಿದ್ದು ಇಂಡಿಯಾದಲ್ಲಿ ಸ್ಥಾಪಿತವಾದ ಹೊಸ ರಾಜಕೀಯ ಸಭೆಗಳಲ್ಲಿ ಕೊಡಗು ಸೇರಲಿಲ್ಲವೆಂಬ ದೇಶದಲ್ಲಿ ಅತೃಪ್ತಿಯುಂಟಾಯಿತು. ಈ ಚಿಕ್ಕ ಪ್ರಾಂತ್ಯದಲ್ಲಿ [illegible] ಆಡಳಿತ ಪದ್ಧತಿಯನ್ನು ವಿಸ್ತರಿಸುವದಕ್ಕೆ [illegible] ದರೆಯನ್ನು ಬಹಳ ಯೋಚಿಸಿದಾರರು. ಮುಂದುವರಿಸಿ ಕೆಲಸಮಾಡುವ ರಾಜಕೀಯ ಕಾರ್ಯಾಲೋಚನ ಮಾಡುವವರು ಒಂದು ನೂರು ವರ್ಷದಿಂದ ನಡೆದ ಒಂದು ಪ್ರತ್ಯೇಕ ಸ್ವತಂತ್ರ್ಯವನ್ನು ಕಳಕೊಂಡಾದರೂ [illegible] ಬಿಡಬೇಕೆಂತ ಹೇಳುವ ಮನಸ್ಸು ಮಾಡಿದರು. [illegible] ಒಪ್ಪಿಗೆ ಇದೆಯೆಂತ ತಿಳಿದಮೇಲೆ ಇಂಡಿಯಾ ಸರಕಾರದ [illegible] ಈ ದಿವಸ ತೆರೆಯುವ ಈ ಕೌನ್ಸಿಲನ್ನು ಸ್ಥಾಪಿಸಿದರು. [illegible]

[illegible]

ಕ್ಕ ಈ ಕೌನ್ಸಿಲ್ ಅನುಕೂಲ ದೊರಕಿಸಿಕೊಟ್ಟಿ [illegible] ನೀಯರೇ ದೇಶದ ಅಭ್ಯುದಯಕ್ಕಾಗಿ ಈ [illegible] ಯನ್ನು ಉಪಯೋಗಿಸುವದರಲ್ಲಿ ನೀವು ಸಹಕಾರ [illegible] ತ್ತೀರಿ ಎಂತ ನಾನು ನಿರೀಕ್ಷಿಸುತ್ತೇನೆ.

ಮೆ|| ಚಂಗಪ್ಪನವರು ಕೌನ್ಸಿಲಿನ [illegible] ವನ್ನು ಸ್ವೀಕರಿಸುವ ಸಂದರ್ಭದಲ್ಲಿ ಮೆ|| ಸಿ ಯಮ್ ವೆಂಕಪ್ಪಯ್ಯನವರು ಮಾಡಿದ ಭಾಷಣ.

ನಿಜವಾದ ಸ್ವತಂತ್ರವನ್ನು ಪಡೆಯಲಿಕ್ಕೆ ಈ ಅನುಕೂಲ ಕೊಟ್ಟದ್ದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಾವು ವಂದಿಸಬೇಕು. ಪ್ರಜೆ [illegible] ಕೌನ್ಸಿಲಿನ ಸಂಗಡಲೇ ಕೊಡಬೇಕೆಂತ [illegible] ದ್ದರು. ಆದರೆ ಈ ಹಕ್ಕು ಮೊದಲೇ ಕೊಡಬೇಕಾದ್ದು [illegible] ಗವರ್ನ್‌ಮೆಂಟ್ ಆಫ್ ಇಂಡಿಯಾ ಆಕ್ಟನ್ನು ಪಾರ್ಲಿಮೆಂಟಿನಲ್ಲಿ ತಿದ್ದಬೇಕಾಗಿತ್ತು. ಈ ಕೌನ್ಸಿಲ್ ಮೊದಲಿನಿಂದ ಇಂಡಿಯಾ ಸರಕಾರದವರು ಈ ಕೌನ್ಸಿಲಿನ [illegible] ಯನ್ನು ತೆಕ್ಕೊಂಡು ಸ್ಟೇಟ್ ಸೆಕ್ರೆಟರಿಯವರ ಅನುಮತಿ ಪಡೆದು ನಮ್ಮ ಈ ದೇಶವನ್ನು ಗವರ್ನರ ಪ್ರಾಂತ್ಯವಾಗಿ ಮಾಡಿ ಚೀಫ್ ಕಮೀಶನರನ್ನು ಗವರ್ನರಾಗಿಯೂ ಮಾಡಬೇಕು. ವೈಸ್‌ರಾಯರು ಪ್ರಿನ್ಸಿಪಲ್ ಪದ್ಧತಿಯ ಶೀಘ್ರವಾಗಿಯೇ ಈ ದೇಶಕ್ಕೆ ಪೂರ್ತಿ ಸ್ವತಂತ್ರ ದೊರಕಿಸಿಕೊಳ್ಳಲು ಇಂಡಿಯಾ ಸರಕಾರದವರು ಸಹಾಯಕರಾಗಬೇಕೆಂಬ ನಂಬಿಕೆಯು ಹುಟ್ಟಿದೆ ಇರುತ್ತದೆ.

ಕಿಗ್ಗಟ್ಟುನಾಡು ತ್ರಾಲೋಕು ಜಮ್ಮದ ಓಟರುಗಳಲ್ಲಿ ನನ್ನ ಅನೇಕ ವಿನಂತಿ.

ಮಹಾಶಯರೇ,

ತಾವೆಲ್ಲರೂ ಒಮ್ಮತದಿಂದ ದೇಶಸೇವೆ ಮಾಡಲಿಕ್ಕೆ ಎಡೆಕೊಟ್ಟು ಓಟು ಕೊಟ್ಟು ನನ್ನನ್ನು ಚುನಾಯಿಸಿದ್ದಕ್ಕೆ ಎಷ್ಟು ವಂದಿಸಿದರೂ ಸ್ವಲ್ಪವೇ ಎಂದು ಭಾವಿಸುತ್ತೇನೆ. ಇನ್ನು ಮುಂದೆ ತಮಗಳ ಇರಾದೆಗೆ ಅನುಸಾರವಾಗಿ ಆದಷ್ಟು ಶ್ರದ್ಧೆ ತೆಗೆದುಕೊಂಡು ದೇಶಸೇವೆ ಮಾಡಲು [illegible] ಆರೋಗ್ಯವನ್ನು ಕೊಡಬೇಕೆಂದು ನನ್ನ ಪ್ರಾರ್ಥನೆ ಮಾಡುತ್ತೇನೆ. ತಮಗಳ ವಿಧೇಯ,

ತಾ|| 26-1-24 ಪೃಕ್ತಮನೆ ಗಣಪಯ್ಯ

"ಪ್ರಕಟಣೆ" [2—2]

ತ್ರಾವ್ಪನಾಡು ಕಮಿಟಿ ಮೀಟಿಂಗ್ ವಿವರ.

ಸನ್ 1924 ನೇ ಇಸವಿ ಜನವರಿ ತಾರೀಖು 30 ರಲ್ಲು ಕೊಡಗು ಬಿದಾತ್ತಾರು ಸಂಘದ ಪ್ರಚಾರಕ ಕಾರ್ಯದರ್ಶಿಯವರು ಕೊಟ್ಟ ನೋಟೀಸು ಮೇರೆ ತ್ರಾವ್ಪನಾಡಿನ ನಾ [illegible] ವಿಟಿಂಗ್ ನಡೆಯಿತು. ಶ್ರೀಮಾನ್ ಕಲಿಕಾಮೇರಿ ಪದ್ಮನಾಭಾಚಾರರು ಸೂಚಿಸಿದಮೇರೆ [illegible] ಶಿರಕಜ್ಜೆ ಪೊನ್ನಪ್ಪನವನ್ನು ಸಭೆಗೆ ಅಧ್ಯಕ್ಷರನ್ನಾಗಿ ಮಾಡಿಕೊಂಡರು. ಅಧ್ಯಕ್ಷರು ಸಭೆಗೆ ವಂದಿಸಿದ ಬಳಿಕ ಸದ ನಂತರ ಮೀಟಿಂಗಿನ ಉದ್ದೇಶವನ್ನು ತಿಳಿಸಿ ಪ್ರಚಾರ ಕಾರ್ಯದರ್ಶಿಯವರನ್ನು ಸಂಘದ ವಿಷಯ ಹೇಳಬೇಕೆಂದು ಕೇಳಿಕೊಂಡ ಮೇರೆ ಪ್ರಚಾರಕ ಕಾರ್ಯದರ್ಶಿಯವರು ಹೇಳಿದ್ದೇನೆಂದರೆ:

ಸಂಘವು ಸ್ಥಾಪಿತವಾಗಿ 10 12 ವರ್ಷಗಳು ಮಾಡಿದ ಕೆಲಸಗಳ [illegible]

[illegible]

ಅಧ್ಯಕ್ಷ [illegible] ಈ ಸಂಘದ [illegible] ಸಂಘವನ್ನು [illegible] ಮೇರಿ ಪದ್ಮನಾಭಾಚಾರರು ಮಾ [illegible] ಈ ಕಾಗೆ ಸಮೂದುಳ್ಳ ಮೆಂಬರುಗಳನ್ನು [illegible] ಸಂಘದ ತ್ರಾವ್ಪನಾಡು ಕಮಿಟಿಗೆ [illegible] ಯಲ್ಪಟ್ಟರು.

ತ್ರಾವ್ಪನಾಡು ಕಮಿಟಿ ಮೆಂಬರುಗಳ ಪಟ್ಟಿ

ಅಧ್ಯಕ್ಷರು—ಮೆ|| ಶಿರಕಜ್ಜೆ ಪೊನ್ನಪ್ಪನವರು
ಕಾರ್ಯದರ್ಶಿ—ಮೆ|| ಅ ಮ ವ [illegible] ಯ್ಯನವರು
ಖಜಾಂಚಿ—ಮೆ|| ಪಾನಾಂದ ಪೊನ್ನಪ್ಪನವರು

ಕಮಿಟಿ ಮೆಂಬರುಗಳು.

ಭಾಗಮಂಡಲ—ಮೆ|| ಭಾಗಮಂಡಲ ಕೃಷ್ಣಶಾಸ್ತ್ರಿಗಳು
" ಮೆ|| ಬಾ [illegible] ಶ್ರೀನಿವಾಸಯ್ಯನವರು
ತಾವೂರು—ಮೆ|| ಅಮೆ ಸುಬ್ಬಯ್ಯನವರು.
" ಮೆ|| [illegible] ಕರುಂಬಯ್ಯನವರು
ಚೇರಂಗಾಲ—ಮೆ|| ತಲೆಕಾವೇರಿ ಕೃಷ್ಣಚಾರರು
" ಮೆ|| ಮೂಲೆಮನೆ ಮಲ್ಲಿಯ್ಯನವರು
ತಂಣಿಮಾನಿ—ಮೆ|| ಕಲಕಾಮೇರಿ ಪದ್ಮನಾಭಾಚಾರರು
" ಮೆ|| ಕುದುಪಜ್ಜೆ ಕುಶ್ಯಯ್ಯನವರು
ಕೋರಂಗಾಲ—ಮೆ|| ನಂಗಾರು ಸುಬ್ಬಯ್ಯನವರು
" ಮೆ|| ಸಿಳ್ಳದ ಬೋಪ್ಪಯ್ಯನವರು

ಸಂಘದ ವಾರ್ಷಿಕ ಚಂದ 13 ರೂ ವಸೂಲಾದ ನಂತರ ಅಧ್ಯಕ್ಷರಿಗೆ ವಂದಿಸಿ ಸಭೆಯು ಮುಕ್ತಾಯವಾಯಿತು.

ಶಿರಕಜ್ಜೆ ಪೊನ್ನಪ್ಪನವರು.
ಅಧ್ಯಕ್ಷರು.

೧೯೨೪ ನೇ ಇಸವಿ ಜನವರಿ ತಾರೀಖು ೨೯ ನೇ ದಿನ ಸಾಯಂಕಾಲ ೫ ಗಂಟೆಗೆ ಮಡಿಕೇರಿ ಮುನಿಸಿಪಲ್ ಆಫೀಸಿನಲ್ಲಿ ನಡೆದ ಕೊಡಗು ಕಂಪೆನಿಯ ಡೈರೆಕ್ಟರುಗಳ ಮೀಟಿಂಗಿನ ವಿವರ—

ಹಾಜರಿದ್ದ ಮೆಂಬರುಗಳು ೧ ಮೆ|| ಕೆ. ಕುಟ್ಟಯ್ಯನವರು, ಆರ್ ಬಿ (ಅಧ್ಯಕ್ಷರು) ೨ ಎಂ ಎ. ಚಿಣ್ಣಪ್ಪನವರು, ೩. ಎಕ್ ಆರ್ ಸುಬ್ಬಯ್ಯನವರು, ೪ ಪಿ ಟಿ ಕಾಳಪ್ಪನವರು, ೫ ಸಿ ಎಕ್ ವೆಂಕಟ್ಟಯ್ಯನವರು, ಬಿ. ಎ. ಬಿ ಎಲ್ ೬ ಉದಿಯಂಡ ಮಾಚಯ್ಯನವರು

ಗೈರುಹಾಜರು ಆಗಿದ್ದ ಮೆಂಬರುಗಳು:—

೧ ಓ ಜಿ ಮೇದಪ್ಪನವರು, ಬಿ ಎ ಬಿ. ಎಲ್ ೨ ಟಿ ವಿ ನಾಗರಪ್ಪಶೆಟ್ಟಿಯವರು, ಬಿ ಎ ಬಿ ಎಲ್ ೩ ಶೆಕ್ಕರ ಪೂವಯ್ಯನವರು, ೪. ಬಿ ಎಂ. ಕಾರ್ಯಪ್ಪನವರು, ೫ ಪುಲಿಯಂಡ ಉತ್ತಯ್ಯನವರು, ೬ ಕೇಟೋಳಿರಂಡ ಮಾದಯ್ಯನವರು, ಆರ್ ಬಿ ೭. ಸಿ ಎಸ್ ಉತ್ತಯ್ಯನವರು, ೮ ಎ ಬಿ ಚಂಗಪ್ಪನವರು, ೯ ಕಮ್ಮೆಟ್ ಮಾದಪ್ಪನವರು

೧ ಕಳೆದ ತಾರೀಖು ೩-೧೦-೧೯೨೩ ರ ಡೈರೆಕ್ಟರುಗಳ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಲಾಗಿ ಒಪ್ಪಲ್ಪಟ್ಟಿತು

೨ ಡಬ್ಬಲ್ ಅರ್ಗ ಪ್ರೆಸ್ಸನ್ನು ಗವರ್ನ್‌ಮೆಂಟ್ ಪ್ರೆಸ್ಸ್ ಹಾಲಿನಿಂದ ತೆಗದು ಬೇರೆ ಇರುವಲ್ಲಿಂದ ವಿದ್ಯುತ್ತಶಕ್ತಿಯಿಂದ ನಡೆಸುವದಕ್ಕಾಗಿ ಸದರಿ ಪ್ರೆಸ್ಸನ್ನು ಇಡಲಿಕ್ಕೆ ಒಂದು ಮನೆ, ಪ್ರಿಂಟಿಂಗ್ ಸಾಮಾನು ಇವು ಬೇಕಾಗುವ ಸಾಹಿತ್ಯವನ್ನು ಏರ್ಪಡಿಸಿ ಪ್ರಿಂಟಿಂಗ್ ಕೆಲಸ ಸರಿಯಾಗಿ ನಡೆಯುವಂತೆ ಕರಾರು ತೆಗೆದುಕೊಳ್ಳಲಿಕ್ಕಾಗಿ ಈ ಕೆಳಗೆ ಕಂಡ ಸಬ್ ಕಮಿಟಿಯು ಏರ್ಪಡಿಸಲಾಯಿತು.

೧ ಮೆ|| ಕೆ ಕುಟ್ಟಯ್ಯನವರು, ಆರ್ ಬಿ
೨ ಮೆ|| ಸಿ ಎಸ್ ವೆಂಕಟ್ಟಯ್ಯನವರು,
೩ ಎಂ ಎಂ ಚಿಣ್ಣಪ್ಪನವರು,
೪ ಪಿ ಟಿ ಕಾಳಪ್ಪನವರು,
೫ ಪಿ ಎಂ [illegible]

[illegible]

೫ ಮೆ|| ಕೆ ಪಿ ಚಿಣ್ಣಪ್ಪನವರು [illegible]

[illegible]

ಶ್ರೀ ಕುಟ್ಟಯ್ಯ,
ಅಧ್ಯಕ್ಷರು, ೨೯-೧-೨೪

ಕಿಗ್ಗಟ್ಟುನಾಡು ತ್ರಾಲೋಕು ಪೊನ್ನಂಪೇಟೆ ಬಿ ಶ್ರೀಮಂಗಲನಾಡು ಜಮ್ಮದ ಓಟರುಗಳಲ್ಲಿ ವಿಜ್ಞಾಪನೆಗಳು.

ಮಹಾಶಯರೇ,

ಕೌನ್ಸಿಲ್ ಚುನಾವಣೆಯಲ್ಲಿ ನೀವೆಲ್ಲರೂ ನನಗೆ ಸಹಾಯ ಮಾಡಿದ್ದಕ್ಕಾಗಿ ನಾನು ಬಹಳ ಕೃತಜ್ಞತೆಯುಳ್ಳವನಾಗಿರುತ್ತೇನೆ ಮತ್ತು ನಿಮಗೆ ಈ ಮೂಲಕ ನನ್ನ ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇನೆ. ಇನ್ನು ಮುಂದಕ್ಕೂ ಅನೇಕ ದೇಶದ ಅಭಿವೃದ್ಧಿಯ ಕೆಲಸಕ್ಕೂ ನಿಮ್ಮ ಸಹಾಯವನ್ನು ನಿರೀಕ್ಷಿಸುತ್ತೇನೆ.

ಮಡಿಕೇರಿ. ನಿಮ್ಮ ವಿಧೇಯ,

ತಾ|| 27-1 24. ಮಣಿಯಪಂಡ್ರ ಬೆಳಿಯಪ್ಪ

"ಪ್ರಕಟಣೆ" [2—2]

ಕೊಡಗು ಪತ್ರಿಕೆಯ ಚಂದಾದಾರರಲ್ಲಿ ವಿನಂತಿ.

ಈ ಪತ್ರಿಕೆಯು ಹೊರಟು ಮೂರು ವರ್ಷಗಳಲ್ಲಿ ದೇಶಕ್ಕೆ ಎಷ್ಟರ ಮಟ್ಟಿಗೆ ಪ್ರಯೋಜನವಾಗಿದೆಯೆಂಬುದು ಎಲ್ಲರಿಗೆ ವೇದ್ಯವಿದೆ. ಕಳೆದ ಒಂದು ಶತಮಾನದಿಂದ ಆಗಬಹುದಾದ ಜನರ ತಿಳುವಳಿಕೆಯನ್ನು ಈ ಪತ್ರಿಕೆಯು ಬರೀ ಮೂರು ವರ್ಷದಲ್ಲಿ ಮಾಡಿರುತ್ತೆ. ದೇಶದ ಮೌಢ್ಯವೆಂಬ ಕತ್ತಲೆಯನ್ನು ಹೋಗಲಾಡಿಸಿ ಜನಸಮುದಾಯದ ಅಭಿವೃದ್ಧಿಗಾಗಿ ಮಾಡಿದ ಕೆಲಸ ಕಳೆದ ಮೂರು ವರ್ಷದಿಂದುಂಟಾದ ದೇಶದ ಚಳವಳಿಗಳಿಂದಲೇ ವೇದ್ಯವಾಗುತ್ತೆ.

ಹೀಗಿದ್ದರೂ, ಸಹ, ಅನೇಕ ಚಂದಾದಾರರು ಪ್ರಥಮ ವರ್ಷದಲ್ಲಿ ಪತ್ರಿಕೆಯನ್ನು ಒಂದು ವರ್ಷದವರೆಗೆ ಓದಿ ವಾರ್ಷಿಕ ಚಂದಾವನ್ನು ಪಾವತಿಮಾಡದೆ, ಕಂಪೆನಿಗೆ ಸಾವಿರಾರು ರೂಪಾಯಿಗಳನ್ನು ನಷ್ಟಮಾಡಿದರು. ಇಷ್ಟೇ ಅಲ್ಲ, ಕಳೆದ ವರ್ಷದಿಂದೀಚೆಗೆ ಅನೇಕ ಸದ್ಗೃಹಸ್ಥರಾದ, ಮಹಾನುಭಾವರು ಪತ್ರಿಕೆಯನ್ನು ಓದಬೇಕೆಂಬ ಕುತೂಹಲದಿಂದ ಚಂದಾಹಣವನ್ನು ಒಡನೇ ಕಳುಹಿಸಿಕೊಡುತ್ತೇವೆಯೆಂದು ವಾಗ್ದಾನಮಾಡಿ ಪತ್ರಿಕೆಯನ್ನು ತರಿಸಿಕೊಂಡು ಈವರೆಗೂ ತಮ್ಮ ಬಾಕಿಯನ್ನು ಕಳುಹಿಸಿರುವುದಿಲ್ಲ. ಈ ಕಾರಣಗಳಿಂದ ನಮ್ಮ ಈ ಧರ್ಮಭೂಮಿಯಲ್ಲಿಯೂ ಈತರದ ಜನರು ಇದ್ದಾರೋ ಎಂಬುದನ್ನು ಸಹ ಯೋಚಿಸಬೇಕಾಗಿದೆ.

ಈ ಪತ್ರಿಕೆಯು ಮಾಡಿದ ಒಳ್ಳೆ ಕೆಲಸಗಳನ್ನು ನಮ್ಮ ಜನರನೇಕರು ತಿಳಿಯದಿದ್ದರೂ, ಸರಕಾರವು ಇದರ ಒಳ್ಳೆ ಕೆಲಸಗಳನ್ನು ಶ್ಲಾಘಿಸಲಿಕ್ಕೆ ಪ್ರಾರಂಭಿಸಿದೆ. ಇನ್ನು ಮುಂದಕ್ಕೂ ದೇಶಕ್ಕೆ ಕೌನ್ಸಿಲ್ ಬಂದದ್ದರಿಂದ ಪತ್ರಿಕೆಯನ್ನೋದುವ ಅಭಿರುಚಿಯು ಮತ್ತಷ್ಟು ಹೆಚ್ಚುವುದಲ್ಲದೆ ಕಡಿಮೆಯಾಗಲಾರದು. ದೇಶದವರೆಲ್ಲರೂ ಕೂಡಿ ಏರ್ಪಡಿಸಿದ ಒಂದೇ ಒಂದು ಪತ್ರಿಕೆಯನ್ನು ಕೊನೆಗಾಣಿಸುವ ಯೋಗ್ಯತೆಯು ನಮ್ಮಲ್ಲಿ ಇಲ್ಲವೆಂದು ಹೇಳಿದರೆ ಆ ಆಕ್ಷೇಪಣೆಗೆ ಗುರಿಯಾರು. ಇಂಥಾ ಕುಂದುಕವನ್ನು ಹೋಗಲಾಡಿಸಲು ದೇಶಾಭಿಮಾನಿಗಳಾದ ಎಲ್ಲಾ ಜನರ ಮನಃಪೂರ್ತಿಯಾದ ಉತ್ಸಾಹ ವಿನಹ ವಿಧಿಯಿಲ್ಲ.

ಆದ್ದರಿಂದ ಈಗಾಗಲೇ ಬಾಕಿದಾರರಾಗಿರುವ ಚಂದಾದಾರರು ಒಡನೇ ತಮ್ಮ ಪೂರ್ತಿ ಬಾಕಿಯನ್ನು ಸಲ್ಲಿಸಬೇಕಾಗಿಯೂ, ಹಣ ಪಾವತಿಮಾಡಿದವರೂ ಸಹ ತಮ್ಮ ನೆರೆಹೊರೆಯವರಿಗೂ, ಇಷ್ಟಮಿತ್ರರಿಗೂ ಈ ಪತ್ರಿಕೆಯಿಂದುಂಟಾದ ಪ್ರಯೋಜನವನ್ನು ವಿವರಿಸಿ, ಪ್ರತಿ ಒಬ್ಬ ಚಂದಾದಾರರೂ ಕಡಿಮೆ ಪಕ್ಷ ಐದೈದು ಜನರನ್ನು ಸೇರಿಸಿದರೆ, ನಮ್ಮ ಪತ್ರಿಕೆಯ ಸ್ಥಿತಿಯು ಜಂಡಿಕವಾಗಿಯು ವೃದ್ಧಿಯಾಗುತ್ತದೆ. ದೇಶದ ಹೆಚ್ಚಿನ ಅಭಿವೃದ್ಧಿಗೆ ಈ ಪತ್ರಿಕೆಯು ಬಹಳ ಸಹಾಯ ಮಾಡುವುದರಿಂದ ಈ ಪತ್ರಿಕೆಯನ್ನು ಶಾಶ್ವತವಾಗಿ ನಿಲ್ಲಿಸಲು, ಎಲ್ಲರೂ ಪ್ರೀತಿಯಿಂದ ಸಹಾಯ ಮಾಡಬೇಕಾಗಿ ಈ ಮೂಲಕ ದೇಶಾಭಿಮಾನಿಗಳಲ್ಲಿ ಅರಿಕೆಮಾಡಿಕೊಳ್ಳುತ್ತೇವೆ.

ಕೆ. ಬಿ. ಚೆಣ್ಣಪ್ಪ,
ಕೊಡಗು ಪತ್ರಿಕೆಯ ಏಜಂಟರು.

ವರ್ತಮಾನ ಸಂಗ್ರಹ

ಒಳದೇಶ.

ಡಿಶಂಬರು ತಾರೀಕು 18 ರಲ್ಲು ನಡೆದ "ಬೇಬಿಡೆ" ಸಮಾರಂಭದಲ್ಲಿ ಮಡಿಕೇರಿ ಆಸ್ಪತ್ರೆಯಲ್ಲಿ ಒಂದು ಭಾಗವನ್ನು ಬೇಬಿವೆಲ್‌ಫೇರ್ ಸೆಂಟರಾಗಿ ಶ್ರೀಮತಿ ಕೊಡಂದೇರ ಸೀತವ್ವನವರು ತೆರೆದದ್ದಾಗಿದೆ. ಇಂಥಾ ಬಹುಮಾನವು ಕೊಡಗಿನಲ್ಲಿ ಇಂಡಿಯನ್ ಮಹಿಳೆಯರಿಗೆ ದೊರೆತದ್ದು ಇದೇ ಮೊದಲು ಎಂದು ತಿಳಿಯಬರುತ್ತದೆ.

ಕಳೆದ ತಾರೀಕು 29 ರಲ್ಲು ಮಡಿಕೇರಿ ಕೋಟೆಯಲ್ಲಿ ಮಡಿಕೇರಿಯ ಯೂರೋಪಿಯನ್ ನಿವಾಸಿಗಳು ಮಿಸೆಸ್ ಮತ್ತು ಮಿಸ್ಟರ್ ಬಾರ್ಟ್ಲರವರಿಗೆ "ಟೀ" ಪಾರ್ಟಿಯನ್ನು ಕೊಟ್ಟರು. ಕೆಲವು ಇಂಡಿಯನ್ ಸನ್ಮಾನಿತ ಮಹಿಳೆಯರು ಮತ್ತು ಮಹನೀಯರು ಹಾಜರಿದ್ದರು.

ಡಿಸೆಂಬರು ತಾರೀಕು 29 ರಲ್ಲು ಲೆಜಿಸ್ಲೇಟಿವ್ ಕೌನ್ಸಿಲಿನ ಉದ್ಯೋಗಸ್ಥರಲ್ಲದ 15 ಮೆಂಬರುಗಳು ಸೇರಿ ಮೆ|| ಎಸ್. ಎಮ್. ಪಿಂಟೋರವರ ಅಧ್ಯಕ್ಷತೆಯಲ್ಲಿ ಮೆ|| ಪಾರ್ವಂಗಡ ಕುಶಾಲಪ್ಪನವರು, ಮೆ|| ಸಿ. ಎಚ್. ಮೊಣ್ಣಯ್ಯನವರು ಮತ್ತು ಮೆ|| ಪಂದ್ಯಂಡ ಬೆಳ್ಳಪ್ಪನವರು ಇವರು ಮೂವರನ್ನು ಫೈನೇನ್ಸ್ ಕಮಿಟಿಗೆ ಚುನಾಯಿಸಿದರು.

ಇಂಪೀರಿಯಲ್ ಮಲಬಾರ್ ಸರ್ಕಸಿನವರು ಕೌನ್ಸಿಲು ಚುನಾವಣೆಯ ಸಮಯದಲ್ಲಿ ವೀರರಾಜಪೇಟೆಯಲ್ಲಿದ್ದವರು ಕಳೆದ ಒಂದುವಾರ ಮಡಿಕೇರಿಯಲ್ಲಿ ಒಂದು ಆಟವಾಡಿ 3 ನೇ ತಾರೀಕಿನಲ್ಲು ತಲಚೇರಿಗೆ ಹೊರಟು ಹೋದರು.

ಡಿಸೆಂಬರು ತಾ|| 28 ರಲ್ಲು (ಕಳೆದವಾರ 29 ರಲ್ಲು ಎಂದು ತಪ್ಪಾಗಿ ಪ್ರಕಟವಾಗಿತ್ತು.) ರಾತ್ರಿ ಬೊವೆಸ್ ಬಂಗ್ಲೆಯಲ್ಲಿ ಚೀಫ಼ ಕಮಿಷನರವರು ಮತ್ತು ಅವರ ಪತ್ನಿಯವರು ಕೊಟ್ಟ "ಎಟ್‌ಹೋಮ್" ನಲ್ಲಿ ಕೌನ್ಸಿಲು ಮೆಂಬರುಗಳು ಮತ್ತು ಬಿರುದುಗಳುಳ್ಳವರು ಮಾತ್ರವಲ್ಲದೆ ಗಜೆಟೆಡ್ ಉದ್ಯೋಗಸ್ಥರೂ ಮಡಿಕೇರಿಯ ಕೆಲವು ಮಾನ್ಯಗೃಹಸ್ಥರೂ, ಮಹಿಳೆಯರೂ ಹಾಜರಿದ್ದರು. ಯುದ್ಧದ ಸಮಯದಲ್ಲಿ "ರೆಡ್‌ಕ್ರಾಸ್" ಕೆಲಸವನ್ನು ಬಹಳ ಚೆನ್ನಾಗಿ ಮಾಡಿದಕ್ಕೆ ಮಿಸೆಸ್ ಬಕ್‌ಸಲ್‌ರವರಿಗೆ ಒಂದು "ಕೈಸರ್‌ಹಿಂದ್" ಮೆಡಲನ್ನೂ ಟೆರಿಟೋರಿಯಲ್ ಪಟಾಲಮಿಗೆ ರಿಕ್ರೂಟಿಂಗ್ ಕೆಲಸವನ್ನು ಚೆನ್ನಾಗಿ ಮಾಡಿದಕ್ಕೆ ರಾವ್‌ಬಹದ್ದೂರ್ ಬಿರುದನ್ನು ಮೆ|| ಕೇಟೋಳಿರ ಚಂಗಪ್ಪನವರಿಗೂ ಚೀಫ್‌ಕಮಿಷನರವರು ಅಲ್ಲಿ ಕೊಟ್ಟರು.

ಲೆಜಿಸ್ಲೇಟಿವ ಕೌನ್ಸಿಲಿನ ಫೈನೇನ್ಸ್ ಕಮಿಟಿಯು ಫೈನೇನ್ಸ್‌ಸ್ಟೇಟ್‌ಮೆಂಟನ್ನು ಚರ್ಚಿಸಲು ಇದೇ ತಾರೀಕು 9 ರಿಂದ ಪ್ರಾರಂಭಿಸುವುದು.

ಕಳೆದವಾರದ ಒಳದೇಶದ 5 ನೇ ವರ್ತಮಾನದ 4 ನೇ ಪಂಕ್ತಿಯಲ್ಲಿ "ಕೌನ್ಸಿಲಿನ 30 ಮೆಂಬರುಗಳಲ್ಲದೆ" ಎಂಬದನು "ಕೌನ್ಸಿಲಿನ 20 ಮೆಂಬರುಗಳಲ್ಲದೆ" ಎಂದು ಓದತಕ್ಕದ್ದು.

ತಾರೀಕು 18-12-23 ರಲ್ಲು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಮೆ|| ಕೆ. ಚಂಗಪ್ಪನವರಿಗೆ ಮಡಿಕೇರಿಯಲ್ಲಿ ಕೊಟ್ಟ "ಎಂಟರ್‌ಟೈನ್‌ಮೆಂಟ್" ನಲ್ಲಿ ಇಂಡಿಯನ್ ಮಹಿಳೆಯರ ಪರವಾಗಿ ಎಂದು ಒಂದು ಬಹುಮಾನ ಪತ್ರವು ಮೆ|| ಕಾಮತರವರ ಪುತ್ರಿಯಿಂದ ಓದಲ್ಪಟ್ಟದ್ದು. ಎಂಟರ್‌ಟೈನ್‌ಮೆಂಟ್ ಕಮಿಟಿಯವರಿಗೆ ತಿಳಿದಾಗಲೀ, ಬೇರೆ ಯಾವ ಮಹಿಳೆಯರನ್ನು ಕೇಳಿಯಾಗಲೀ ಮಾಡಿದ್ದಲ್ಲವೆಂದು ಆ ಕಮಿಟಿಯ ಮೆಂಬರೊಬ್ಬರು ತಿಳಿಸುತ್ತಾರೆ.

ಕೊಡಗು ಜಮಾನ್ದಾರರ ಸಂಘದ ಎಗ್ಸಿಕ್ಯೂಟಿವ್ ಕಮಿಟಿ ಮೀಟಿಂಗ ಈ ತಾರೀಕು 7 ನೇ ದಿನ ಸಾಯಂಕಾಲ 4 ಗಂಟೆಗೆ ಓಂಕಾರೇಶ್ವರ ದೇವಸ್ಥಾನದ ಮಹಡಿಯಲ್ಲಿ ನಡೆಯಿತು.

ಮಡಿಕೇರಿ ತಾಲ್ಲೂಕ ಹೆಡ್ಡಕ್ಲಾರ್ಕ್ ಆಗಿರುವ ಮೆ|| ಪೊಡನೋಲಂಡ ತಿಮ್ಮಯ್ಯನವರಿಗೆ ತಾ|| 1-2-1924 ರಿಂದ 31-3-1924 ರ ವರೆಗೆ 2 ತಿಂಗಳು ಪ್ರಿವಿಲೇಜ ರಜೆಕೊಟ್ಟು, ತದನಂತರ ರಿಟ್ರೆಂಚ್‌ಮೆಂಟು ಉದಿಷ್ಟ ರಿಟಯರ್ ಆಗಬೇಕಾಗಿ ಆರ್ಡರ್ ಆಗಿದೆಯಂತೆ.

ಅರ್ವಟು ಗ್ರಾಮದ ಚೆಕ್ಕಮಕ್ಕಾಟಿರ ಮುತ್ತಣ್ಣನವರ ಭೂಮಿ ಕಳೆದ ಮಳೆಗಾಲದಲ್ಲಿ ಹೊಳೆ ನೆರೆಯಿಂದ ನಷ್ಟವಾದ ಕಾರಣ ಅವರಿಗೆ ಕೊಡಗು ರಿಲೀಫ್ ಫಂಡಿನಿಂದ 50 ರೂ ಧರ್ಮಾರ್ಥವಾಗಿ ಕೊಡಲ್ಪಟ್ಟಿದೆ. ಇನ್ನು ಸದ್ರಿ ಫಂಡಿನಲ್ಲು 71-12-0 ಅಣ, ಮಾತ್ರ ಬಟವಾಡೆ ಮಾಡಲಿಕ್ಕೆ ಬಾಕಿ ಇದೆ.

ಕೊಡಗು ಕಂಪೆನಿಯ ಶೇರುದಾರರು. ತಮ್ಮ ಬಾಕಿ 2 ನೇ ಮತ್ತು 3 ನೇ ಕಾಲಿನ ಶೇರು ಹಣ ಪಾವತಿಮಾಡದ ಉದಿಷ್ಟ ಬಡ್ಡಿ ಚಾರ್ಜು ಮಾಡುತ್ತೇವೆಂಬದಾಗಿ ನೋಟೀಸು ಕೊಡುವಂತೆ ಮೀಟಿಂಗಿನಲ್ಲಿ ಠರಾವು ಆದ್ದರಿಂದ ಪಾವತಿಮಾಡಲು ಬಾಕಿಯಾದ ಮಹನೀಯರೆಲ್ಲರೂ ಪಣ್ಣೆ ತಮ್ಮ ಬಾಕಿ ಶೇರುಹಣವನ್ನು ಪಾವತಿಮಾಡಲು ನಿಗ ತೆಗೆದುಕೊಳ್ಳುವರಾಗಿ ನಂಬುತ್ತೇವೆ.

ಈ ತಾರೀಕು 2 ನೇ ಶುಕ್ರವಾರ 5-30 ಗಂಟೆಗೆ ಡಿಬೇಟಿಂಗ್ ಸೊಸೈಟಿಯ ಮತ್ತು ಸ್ಟೂಡೆಂಟ್ಸ್ ಹೋಮ್ ರೀಡಿಂಗ್ ಯೂನಿಯನಿನ ವಾರ್ಷಿಕ ಮೀಟಿಂಗ್ ಮಡಿಕೇರಿ ಹೈಸ್ಕೂಲು ಹಾಲಿನಲ್ಲಿ ಮೆ|| ಪಾರ್ವಂಗಡ ಕುಶಾಲಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ತಾರೀಖು 3-2-1924 ನೇ ದಿನ ಸಾಯಂಕಾಲ 5½ ಗಂಟೆಗೆ ಬಾಲಸನ್ಮಾರ್ಗ ಸಮಾಜದ ವಾರ್ಷಿಕ ಮೀಟಿಂಗು ಮೆ|| ಪಾಲೇಕಂಡ ಮೇದಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕೊಡಗು ಕಂಪೆನಿಯ ಚಂದಾದಾರರು. ಪತ್ರಿಕೆ ಕಳಿಸಿಕೊಂಡು ಹಣ ಪಾವತಿಮಾಡದಕ್ಕಾಗಿ ಪಣ್ಣೆ ಪಾವತಿಮಾಡುವಂತೆ ನೋಟೀಸು ಕೊಡಬೇಕಾಗಿಯೂ, ಹಾಗೆ ಕೊಡಲು ತಪ್ಪಿದರೆ ಪೇಪರನ್ನು ನಿಲ್ಲಿಸಿ ಬಾಕಿಯಾದ ಮೊಬಲಗು ವಸೂಲಾತಿಗೆ ಕ್ರಮಗಳು ತೆಗೆದುಕೊಳ್ಳಲಾಗುತ್ತೆಯಾಗಿ ಮೀಟಿಂಗಿನಲ್ಲಿ ಪಾಸ್‌ಮಾಡಿರುವುದರಿಂದ ಸರ್ವರೂ ತಮ್ಮ ವಾರ್ಷಿಕ ಚಂದವನ್ನು ಪಣ್ಣೆ ಪಾವತಿ ಮಾಡಬೇಕಾಗಿ ಕೋರುತ್ತೇವೆ.

ಇಂಪೀರಿಯಲ್ ಮಲಬಾರ್ ಸರ್ಕಸ್ ನವರು ತಾರೀಖು 2 ನೇ ಶನಿವಾರ ದಿನ ಸಾಯಂಕಾಲ ಆಡಿದ ಆಟದ ವಸೂಲು ಪೈಕಿ 100 ರೂಪಾಯಿಯನ್ನು ಬೇಬಿವೆಲ್‌ಫೇರ್ ಸಂಘಕ್ಕೆ ಕೊಟ್ಟಿರುವದಾಗಿ ತಿಳಿಯಬರುತ್ತದೆ.

ಹಿಂದೂದೇಶ

ಮಹಾತ್ಮ ಗಾಂಧಿಯವರನ್ನು ತಾರೀಖು 5-2-24 ನೇ ಮಂಗಳವಾರದ ದಿವಸ ಮಧ್ಯಾಹ್ನ ಜೈಲಿನಿಂದ ಯಾವ ವಿಧವಾದ ಷರತ್ತೂ ಇಲ್ಲದೆ ಬಿಡುಗಡೆ ಮಾಡಿರುತ್ತಾರೆ.

ಅಖಿಲಭಾರತ ಕಾಂಗ್ರೆಸಿನ ವರ್ಕಿಂಗ್ ಕಮಿಟಿ ಮೀಟಿಂಗು ಕಳೆದ ತಾ|| 30 ರಿಂದ ಬೊಂಬಾಯಿಯಲ್ಲಿ ಪ್ರಾರಂಭವಾಗಿದೆ. ಮಹಾತ್ಮ ಗಾಂಧಿಯವರನ್ನು ಸಂಕಷ್ಟದಿಂದ ಪಾರುಮಾಡಿದ್ದರಿಂದ ದೇವರಿಗೆ ಪ್ರಾರ್ಥಿಸಿ ಫೆಬ್ರವರಿ 18 ರಿಂದ ಮಾರ್ಚಿ 18 ರ ವರೆಗೆ ಹಿಂದೂ ದೇಶದವರೆಲ್ಲಾ ಗಾಂಧಿ ತಿಂಗಳಾಗಿ ಆಚರಿಸಿ ಇಡೀ ಜನಾಂಗವಕ್ಕೇ ಖಾದೀ ಬಟ್ಟೆ ಧರಿಸುವಂತೆ ಮಾಡುವಂತೆಯೂ, ಆದಷ್ಟು ಜನರನ್ನು ಕಾಂಗ್ರೆಸ್ಸಿಗೆ ಮೆಂಬರುಗಳಾಗಿ ಸೇರಿಸುವಂತೆಯೂ, ತಿಲಕಸ್ವರಾಜ್ಯ ಫಂಡಿಗೆ ಸಾಧ್ಯವಾದಷ್ಟು ಹಣವನ್ನು ಶೇಖರಿಸುವಂತೆಯೂ ಪ್ರತಿಯೊಬ್ಬ ದೇಶಾಭಿಮಾನಿಯಾದ ಹಿಂದೀಯನು ಪ್ರಯತ್ನಿಸಬೇಕೆಂದು ತೀರ್ಮಾನಿಸಿರುವುದು.

ಫೆಬ್ರವರಿ 3 ರಲ್ಲು ಡೆಲ್ಲಿಯಲ್ಲಿ ಡೆಲ್ಲಿಯಲ್ಲಿ ಲೆಜಿಸ್ಲೇಟಿವ್ ಕೌನ್ಸಿಲು ಮೆಂಬರುಗಳ ಮತ್ತು ಸ್ವರಾಜ್ಯಪಾರ್ಟಿಯವರ ಮೀಟಿಂಗು ಒಂದು ನಡೆಯಿತು.

ಮಹಾತ್ಮ ಗಾಂಧಿಯವರ ಕಾಯಿಲೆಯು ವಾಸಿಯಾಗುತ್ತಾ ಬರುತ್ತಿದೆ. ಎಲ್ಲವೂ ವಾಡಿಕೆ ಸ್ಥಿತಿಗೆ ಬಂದಿದೆ. ತಾ|| 31-1-24 ರಲ್ಲು ಮೆ|| ಸಿ. ಆರ್. ದಾಸ್‌ರವರೂ ಮತ್ತು ಅವರ ಪತ್ನಿಯವರು ಮಹಾತ್ಮರ ದರ್ಶನವನ್ನು ಮಾಡಿ ಅವರ ಸಂಗಡ ಮಾತಾಡಿದರು.

ಅಹ್ಮದಾಬಾದಿನ ಮ್ಯುನ್ಸಿಪಾಲಿಟಿಯ ಹೊಸಚುನಾವಣೆಯಲ್ಲಿ ಮ್ಯುನ್ಸಿಪಲ್ ಬೋರ್ಡಿನ 60 ಮೆಂಬರುಗಳ ಪೈಕಿ 35 ಜನರು ಅಸಹಕಾರಿಗಳಾಗಿರುವದರಿಂದ ಪ್ರಸಹ ಅಲ್ಲಿ ಅಸಹಕಾರಿಗಳ ಬಹುಮತವೇ ಆಯಿತು.

ತಾ|| 31-1-24 ರಲ್ಲು ಡೆಲ್ಲಿಯಲ್ಲಿ ಲೆಜಿಸ್ಲೇಟಿವ್ ಎಸೆಂಬ್ಲಿಯನ್ನು ತೆರೆದಾಗ ವೈಸರಾಯರು ಹೇಳಿದ್ದೇನೆಂದರೆ, "ಸ್ವರಾಜ್ಯ ಪಾರ್ಟಿಯವರು ಮಧ್ಯಪ್ರಾಂತದ ಕೌನ್ಸಿಲಿನಲ್ಲಿ ಮಾಡಿದ ತಂಟೆಯಿಂದ ರಿಫಾರ್ಮುಗಳ ಅಭಿವೃದ್ಧಿಗೆ ಕುಂದುಕವುಂಟಾಗುವ ಸಂಭವವಿದೆ. ಎಸೆಂಬ್ಲಿಯವರು ಹಾಗೆ ಮಾಡಲಿಕ್ಕಿಲ್ಲವೆಂದು ನಂಬುತ್ತೇನೆ. ಬ್ರಿಟಿಷರವರು ತಮ್ಮ ಇರಾದೆಗೆ ವಿರೋಧವಾಗಿ ಈ ವಿಧಾನಗಳಿಗೆ ಹೆದರಿ ಎಂದಿಗೂ ಇಂಡಿಯಾಕ್ಕೆ ಮಾರ್ಪಾಡುಗಳನ್ನು ಕೊಡಲಿಕ್ಕಿಲ್ಲ. ಮಾರ್ಪಾಡಿನ ಸ್ನೇಹಿತರೆಲ್ಲರೂ ಕೌನ್ಸಿಲುಗಳ ಕೆಲಸವನ್ನು ಎದುರುನೋಡುತ್ತಿದ್ದಾರೆ. ಬುದ್ಧಿವಂತಿಕೆಯ ದಾರಿಯನ್ನು ಹಿಡಿಯಿರಿ, ಇಲ್ಲವಾದರೆ ಏನಾಗುವುದೆಂದು ನಿಮಗೆ ಗೊತ್ತಿದೆ. ಪ್ರಾಂತಿಕ ಸರಕಾರಗಳ ಸ್ಥಿತಿಯು ಕಷ್ಟಕ್ಕೆ ಬಂದರೆ ಅವುಗಳಿಗೆ ನನ್ನ ಪೂರ್ಣ ಉತ್ಸಾಹ ಇದೆ." ಈ ಭಾಷಣವು ಎಸೆಂಬ್ಲಿಯ ನಾನ್ ಅಫೀಶ್ಯಲ ಮೆಂಬರುಗಳಿಗೆ ಮುಖ್ಯವಾಗಿ ಸ್ವರಾಜ್ಯ ಮತ್ತು ಇಂಡಿಪೆಂಡೆಂಟ್ ಪಂಗಡದವರಿಗೆ ಬಹಳ ಅತೃಪ್ತಿಯನ್ನು ಉಂಟುಮಾಡಿದೆ.

ಎಸೆಂಬ್ಲಿಯಲ್ಲಿರುವ ಸ್ವರಾಜ್ಯ ಪಂಗಡದವರು ಪಂಡಿತ ಮೋತಿಲಾಲ್ ನೆಹರುರವರನ್ನು ತಮ್ಮ ಮುಂದಾಳಾಗಿಯೂ ಮೆ|| ವಿ. ಜೆ. ಪಟೇಲರವರನ್ನು ಉಪಮುಂದಾಳಾಗಿಯೂ ಮೆ|| ಎನ್. ಸಿ. ಕೆಲ್ಕಾರ್‌ರವರನ್ನು ಮುಖ್ಯ (ವ್ಹಿಪ್) ಸಹಾಯಕನಾಗಿಯೂ ಮೆ|| ಎ. ರಂಗಸ್ವಾಮಿಐಯ್ಯಂಗಾರ್‌ರವರನ್ನು ಸೆಕ್ರೆಟರಿಯಾಗಿಯೂ ನೇಮಿಸಿಕೊಂಡಿರುವರು. ಇಂಡಿಪೆಂಡೆಂಟ್ ಪಂಗಡದ ಮುಂದಾಳು ಪಂಡಿತ ಮದನ ಮೋಹನ ಮಾಲವೀಯರಾಗಿರುವರು.

ಎಸೆಂಬ್ಲಿಯ ಇಂಡಿಪೆಂಡೆಂಟ್ ಪಾರ್ಟಿಯ ಮುಂದಾಳಾಗಬಹುದೆಂದು ಭಾವಿಸಲ್ಪಟ್ಟಿದ್ದ ಮೆ|| ರಂಗಚಾರ್ಯಾರ್‌ರವರು ಎಸೆಂಬ್ಲಿಯ ಡೆಪ್ಯುಟಿ ಪ್ರೆಸಿಡೆಂಟಾಗುವರೆಂಬ ವರ್ತಮಾನ.

ಎಸೆಂಬ್ಲಿಯಲ್ಲಿ ವೈಸರಾಯರು ಮಾಡಿದ ಭಾಷಣಕ್ಕೆ ಅತೃಪ್ತಿಯನ್ನು ಸೂಚಿಸಲಿಕ್ಕಾಗಿ ಸ್ವರಾಜ್ಯಪಾರ್ಟಿಯವರು, ಪಂಡಿತ ಮಾಲವೀಯರೇ ಮೊದಲಾದ ಕೆಲವು ಇಂಡಿಪೆಂಡೆಂಟ್ ಮೆಂಬರುಗಳೂ ವೈಸರಾಯರಿಗೆ ಕೊಟ್ಟ ಗಾರ್ಡನ್ ಪಾರ್ಟಿಗೆ ಹೋಗಲಿಲ್ಲ.

ಮಹಾತ್ಮ ಗಾಂಧಿಯವರ ಬಿಡುಗಡೆಯ ವಿಷಯ ಎಸೆಂಬ್ಲಿಯಲ್ಲಿ ಚರ್ಚಿಸಲು ಪಂಡಿತ ಮಾಲವೀಯರು ಮುಂದಾಳಾಗುವರು. ಆ ಚರ್ಚೆಯು ತಾ|| 5 ರಲ್ಲಿ ನಡೆಯಲಿಕ್ಕಿತ್ತು.

ಲಕ್ನೋಪಟ್ಟಣದ ಅಲಂಬಾಗಿನಲ್ಲಿ ರೈಲ್ವೆ ಇಲಾಖೆಯವರು ಶಿವದೇವಸ್ಥಾನಗಳನ್ನೂ ಎರಡು ಸಮಾಧಿಗಳನ್ನೂ ನಾಶಪಡಿಸಿದ್ದಕ್ಕಾಗಿ ತಾ|| 20-1-24 ರಲ್ಲು ಅಲ್ಲಿ ಸುಮಾರು [illegible] ಸಾವಿರ ಜನರು ಒಂದು ಸಭೆ ಸೇರಿ ಮೂರು ದಿವಸದೊಳಗೆ ಆ ಇಲಾಖೆಯವರು ಜನರ ಶರತ್ತುಗಳನ್ನು ನಡಿಸಿಕೊಡದೆ ಹೋದರೆ ಜನರೇ ಆ ದೇವಸ್ಥಾನಗಳನ್ನು ಕಟ್ಟಲು ಪ್ರಾರಂಭಿಸುವರೆಂದು ತೀರ್ಮಾನಿಸಿರುವರು.

ಮಹಾತ್ಮ ಗಾಂಧಿಯವರು ಈಗ ಮಂಚದಮೇಲೆ ಸ್ವಲ್ಪ ಹೊತ್ತು ಕೂತುಕೊಳ್ಳಲು ಶಕ್ತರಾಗಿರುವರು. ಅವರು ಆಸ್ಪತ್ರೆಯಿಂದ ಬಿಡುಗಡೆಯಾದೊಡನೆ ಎರಡು ತಿಂಗಳುಗಳವರೆಗೆ ಆರೋಗ್ಯಕರವಾದ ಸ್ಥಳದಲ್ಲಿ ಅವರು ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಡಾಕ್ಟರುಗಳ ಬುದ್ಧಿವಾದ.

ಇಂಗ್ಲೆಂಡಿನಿಂದ ಆದಿನವೇ ಬೊಂಬಾಯಿಗೆ ತಲುಪಿದ ಮೆ|| ಸಿ. ಎಫ್. ಆಂಡ್ರ್ಯೂಸ್‌ರವರು ತಾ|| 1 ರಲ್ಲು ಹೀಗೆಂದು ತಂತೀ ವರ್ತಮಾನ ಕಳುಹಿಸಿರುವರು: "ಇಮಿಗ್ರೇಶನ್ ಬಿಲ್ಲಿನ ವಿಷಯ ವೈಸರಾಯರ ಭಾಷಣವು ಅತೃಪ್ತಿಕರ. ಇಂಪೀರಿಯಲ್ ಕಾನ್ಫರೆನ್ಸಿನವರು ನಿರ್ಧರಿಸುವಂತೆ ಕಮಿಟಿಯವರು ಬರುವ ಮುಂಚೆ ಈ ಬಿಲ್ಲನ್ನು ಮಂಜೂರು ಮಾಡುವರೆಂದು ತೋರುತ್ತದೆ."

ಎಸೆಂಬ್ಲಿಯಲ್ಲಿ ಮಹಾತ್ಮ ಗಾಂಧಿಯವರನ್ನು ಜೈಲಿನಿಂದ ಬಿಡುಗಡೆ ಮಾಡಬೇಕೆಂದು ಕಳುವ ಠರಾವನ್ನು ಬದಲಾಯಿಸಿ ಅವರೊಂದಿಗೆ ಹಲರ್‍ ಮೋಹಿನಿಯವರನ್ನು ಬಿಡುಗಡೆಮಾಡಬೇಕೆಂದು ಸೇರಿಸಬೇಕೆಂದು ಎಸೆಂಬ್ಲಿ ಮೆಂಬರಾದ ಮ॥ ವಿಯರ್ [illegible] ಆಸಾಜಖುಲ್ಲರವರು ಸೂಚಿಸಿರುವರು.

ಎಸೆಂಬ್ಲಿಯಲ್ಲಿ ವೈಸರಾಯರ ಭಾಷಣವನ್ನೇರಿ ಬೇರೆ ಬೇರೆ ಪಂಗಡಗಳ ಮುಂದಾಳುಗಳು ಆಗಾಗ್ಗೆ ಮಿಟಿಂಗು ಮಾಡುತ್ತಾ ಹಿಂದೂ ದೇಶಕ್ಕೆ ಬೇಕಾಗಿರುವ ಸುಧಾರಣೆಗಳನ್ನು ಚರ್ಚಿಸುತ್ತಿರುವರು. ಎಲ್ಲಾ ಪಂಗಡದವರೂ ಸೇರಿ ಒಗ್ಗಟ್ಟಾಗಿ ದೇಶಕ್ಕೆ ಬೇಕಾದುದನ್ನು ಕೇಳುವ ಸಂಭವವು ಇದೆಯೆಂದು ತಾ॥ 1 ರ ವರ್ತಮಾನ.

ತಂಜಾವೂರಿನಲ್ಲಿ ಸೆಟ್ಲ್‌ಮೆಂಟಿನ ಹೆಚ್ಚಿನ ಕಂದಾಯ ಕೊಡದೆ ಸತ್ಯಾಗ್ರಹವನ್ನು ಕಾಳಿದವರ ಜಪ್ತಿಮಾಡಿದ ಭೂಮಿಗಳನ್ನು ಬಿಡುಗಡೆಮಾಡಿ ಚರಸೊತ್ತುಗಳನ್ನು ಮಾತ್ರ ಜಪ್ತಿಮಾಡತಕ್ಕದೆಂದು ಸರ್ಕಾರದ ಈಗಿನ ಹುಕುಂ ಅಂತೆ.

ವಿದೇಶ.

ಫೆಬ್ರವರಿ 1 ರಲ್ಲಿ ಒಪರ್ [illegible] ದೇಶದ ಪಾರ್ಲಿಮೆಂಟನ್ನು ಮುಂದುಹಾಕಿರುವರು. ಇದು ಇಷ್ಟು ಥಕ್ಕನೆ ಆಗುವದೆಂದು ಅಲ್ಲಿಯವರ್‍ಯಾರೂ ಯೋಚಿಸಿರಲಿಲ್ಲ.

ಕೆನಡ ಸರ್ಕಾರದವರು ಸರ್ ಆರ್ಥರ್ ಕರ್‍ರಿಯವರನ್ನು ಅಮೇರಿಕದ ಯುನೈಟೆಡ್ ಸ್ಟೇಟ್ಸಿನಲ್ಲಿ ತಮ್ಮ ಮೊದಲನೇ ಪ್ರತಿನಿಧಿ [illegible] ಕಾರ್ಯಚಾರಿಯಾಗಿ ನೇಮಿಸಿರುವರು.

ಜರ್ಮನಿಯ ರೂರ್ ಪ್ರಾಂತ್ಯದಲ್ಲಿ ಫ್ರೆಂಚರು ತಮ್ಮ ಆಯುಧಧಾರಿಗಳಾದ ಸೈನಿಕರನ್ನು 40 ಸಾವಿರದಿಂದ 30 ಸಾವಿರಕ್ಕೂ ಬೆಲ್ಜಿಯನರು 7000 ದಿಂದ 4000 ಕ್ಕೂ [illegible] ದರು.

ಅರೇಬಿಯದ ಮಧ್ಯಪ್ರಾಂತ್ಯದ ಬಹಳ ಬಲಿಷ್ಠನಾದ ಅರೇಬಿ ರಾಜಕುಮಾರ ಸುಲ್ತಾನ್ ಇಬ್ನ್ ಸಾವುದ್‌ರವರು ತಾ॥ 31-1-24 ರಲ್ಲಿ ಮೃತಪಟ್ಟರು. ಶಾಂತಿಗಾಗಿ ಬ್ರಿಟಿಷರವರು ಇವರಿಗೆ 60,000 ಪೌನು ವರ್ಷಂ ಪ್ರತಿ ಕೊಡುತ್ತಿದ್ದರು.

ಕಾಯಿಲೆಯ ದೆಸೆಯಿಂದ ಮ॥ ವೆನಿಜಲಸ್‌ರವರು ಗ್ರೀಸ ಪ್ರಧಾನಮಂತ್ರಿತ್ವಕ್ಕೆ ರಾಜೀನಾಮೆ ಕೊಟ್ಟಿರುವರು. ಆದರೆ ಮಂತ್ರಿಮಂಡಲದವರ ಕೋರಿಕೆಮೇರೆ [illegible] ಗೆ ಹೋಗಿದ್ದರೂ ತತ್ಕಾಲ ಆ ಕೆಲಸವನ್ನು ನಡೆಸುತ್ತೇನೆಂದು ಒಪ್ಪಿಕೊಂಡಿರುವರು.

ಇಂಗ್ಲೆಂಡಿನಲ್ಲಿ ಅಧಿಕಾರಕ್ಕೆ ಬಂದಿರುವ ಲೇಬರ್ ಸರ್ಕಾರದವರು ರಷ್ಯಾದ ಸೋವೈಟ್ ಸರ್ಕಾರವನ್ನು ಒಪ್ಪಿಕೊಂಡಿರುವರು. ಅಲ್ಲದೆ ಎಲ್ಲಾ ಸಂಗತಿಗಳನ್ನು ಚರ್ಚಿಸಿ ನಿರ್ಧರಿಸಲು ರಷ್ಯಾದ ರಾಯಭಾರಿಯನ್ನು ಲಂಡನಿಗೆ ಕಳುಹಿಸುವಂತೆ ಸೋವೈಟ್ ಸರ್ಕಾರವನ್ನು ಕೇಳಿರುವರು.

೧೯೨೪ ನೇ ಇಸವಿ ಜನವರಿ ತಾರೀಖು [illegible] ಸಾಯಂಕಾಲ ೪ ಗಂಟೆಗೆ ಮಡಿಕೇರಿ ಮುನ್ಸಿಫ ಆಫೀಸಿನಲ್ಲಿ ನಡೆದ ಕೊಡಗು ಸೆಂಟ್ರಲ್ ಸಹಕಾರ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗಿನ ವಿವರ.

ಹಾಜರಿದ್ದ ಮೆಂಬರುಗಳು: [illegible] ಶ್ರೀ [illegible] ನವರು ಬಿ. ಎ. ಮೆ॥ ಪಿ. ಐ. [illegible] ಯ್ಯನವರು, [illegible] ಮೆ॥ ಎಂ. ಎಂ. ಚಿಣ್ಣಪ್ಪನವರು, ೪ ಮೆ॥ ಪಿ. ಚಿಣ್ಣಪ್ಪನವರು, ೫ ಮೆ॥ ಪಿ. ಪೊನ್ನಪ್ಪನವರು, [illegible] ಉದಿಯಾಂಡ ಮಾಚ್ಚಯ್ಯನವರು, ೭ ಮೆ॥ [illegible] ವೆಂಕಟೈಯ್ಯನವರು, ಬಿ. ಎ. ಬಿ. ಎಲ್. [illegible], ಮೆ॥ ಎಂ. ಭುಜಂಗರಾಯರು, ಬಿ. ಎ. ಬಿ. ಟ್ರೆಜರರ್ (ಖಜಾನಿಚಿ)

೧ ಕಳೆದ ಮೀಟಿಂಗಿನ ಪ್ರೋಸೀಡಿಂಗ್ಸ್ ಓದಲಾಯಿತು.

[illegible] ಮಗ್ಗುಲ ಸೊಸೈಟಿಯವರು ಹೊಂದಿಕೊಂಡ [illegible] ಪೊಬಲಗು ಈವರೆಗೆ ಪಾವತಿ ಮಾಡದ್ದರಿಂದ [illegible] ಗೆ ತಗಾದೆ ನೋಟೀಸು ಕಳುಹಿಸಲು ತೀರ್ಮಾನವಾಯಿತು.

೩ ಕೊಳಗದಾಳು ಸೊಸೈಟಿಯವರ ಸಾಲದ [illegible] ಓದಲಾಗಿ, ಅವರಿಗೆ ೩೦೦ ರೂಪಾಯಿ ಕೊಡಲು [illegible] ರಾಯಿತು. ಸದರಿ ಸಾಲವನ್ನು ತಾರೀಖು [illegible] ೧೯೨೪ ರ ವಳಗೆ ವಾಪಸು ಪಾವತಿ ಮಾಡುವ ತೀರ್ಮಾನವಾಯಿತು.

[illegible] ಕಾಟಕೇರಿ ಗ್ರಾಮದ ದವಸದ ಭಂಡಿನ ಸೊಸೈಟಿ [illegible] ರ ಸಾಲದ ಅರ್ಜಿ ಓದಲಾಯಿತು. [illegible] ವರು ಭತ್ತ ಕುಂಬಲಿಕ್ಕೆ ತೆಗೆದುಕೊಂಡ ಭತ್ತದ [illegible] ಗಿರ್ವಿಮೇಲೆ (ಅದೂ ಅಲ್ಲದೆ ಸದರಿ ಸೊಸೈಟಿ [illegible] ಪ್ರನೋಟು ಬರೆದು ಕೊಡಲು ಹೊಂದಿಕೊಳ್ಳಬೇಕಾ) [illegible] ರೂಪಾಯಿ ಸಾಲಕೊಡಲು ಮಂಜೂರಾಯಿತು. [illegible] ರಿಂದ ರೂಪಾಯಿ ಶೈಕಿ ೫೦ ರೂಪಾಯನ್ನು ಈ [illegible] ಜೂನ್ ತಾರೀಖು ಅಕ್ಕೆರುವಳಗೂ, ೧೦೦ ರೂ [illegible] ಬರುವ ೧೯೨೪ ನೇ ಇಸವಿ ಮಾರ್ಚಿ ತಿಂಗ[ಳ] [illegible] ರುವಳಗೂ ಬಾಕಿಯಾದ ೧೫೦ ರೂಪಾಯನ್ನು

೧೯೨೪ ನೇ ಇಸವಿ ಮಾರ್ಚಿ ತಿಂಗಳ ಅಕ್ಕೆರುವಳಗೂ ಪಾವತಿ ಮಾಡುವಂತೆ ತೀರ್ಮಾನವಾಯಿತು.

೪ ಉಕ್ಕಡ ಕೊಡಗು ಜಾತ್ರೆ ಸುಧೇದಾರರ ನಂಬರು [illegible] ರ ಕಾಗದ ಓದಲಾಯಿತು. ಆದರೆ ಅವರು ಕೇಳುವಷ್ಟು ಹಣವನ್ನು ಡಿಪಾಜಿಟ್ಟು ಅವಧಿಯು ತೀರುವವರೊಳಗೆ ಕೊಡಲಿಕ್ಕಾಗುವುದಿಲ್ಲವಾದ ಸಂಗತಿ ತಿಳಿಸಬೇಕಾಗಿ ತೀರ್ಮಾನವಾಯಿತು.

೬ ಕಳೆದ ಡಿಸೆಂಬರ್ ತಿಂಗಳ ಅಂತ್ಯದವರೆಗಿನ ಲೆಕ್ಕ ಓದಲಾಯಿತು.

ಹಿಂದಳ ಬಾಕಿ	7367-12-10
ವರಾವಿ	388-15-0
ಬಟವಾಡೆಮಾಡಿದ್ದು	50-0-0
ಕೈಯಲ್ಲಿರುವ ಹಣ	7706-11-10

೭ ಕಳೆದ ಜನವರಿ ತಾರೀಖು ೧ ರಿಂದ ಶಾಂಡೀರ ಸುಬ್ಬಯ್ಯನಿಗೆ ಈ ಬ್ಯಾಂಕಿನ ಜವಾನ ಕೆಲಸ ನೋಡುವುದಕ್ಕಾಗಿ ತಿಂಗಳಿಗೆ ಒಂದು ರೂಪಾಯಿ ಮೇರೆ ಎಲೊವೆನ್ಸ್ ಕೊಡುವ ಹಾಗೆ ಮಂಜೂರಾಯಿತು.

ಕೆ. ಕುಟ್ಟಯ್ಯ ಅಧ್ಯಕ್ಷರು, ೨೫-೧-೨೪

> ## ಪಾಡಿ ಯೆಡೆನಾಲ್ಕುನಾಡು ತಾಲ್ಲೋಕು ಜನ್ಮದ ಓಟರುಗಳಲ್ಲಿ ವಿನಂತಿ.
>
> ಕೌನ್ಸಿಲ್ ಚುನಾವಣೆಗೆ ತಾವುಗಳೆಲ್ಲರೂ ಉತ್ತೇಜನ ಕೊಟ್ಟದ್ದಕ್ಕಾಗಿ ನಾನು ತಮ್ಮಗಳಿಗೆ ಬಹಳವಾಗಿ ವಂದಿಸುತ್ತೇನೆ. ಇದೇರೀತಿ ಇನ್ನು ಮುಂದಕ್ಕೆ ಎಲ್ಲಾ ದೇಶಹಿತಕಾರ್ಯಕ್ಕೂ ತಮ್ಮಗಳ ಸಹಾಯವನ್ನು ಕೋರುತ್ತೇನೆ. ಅಲ್ಲದೆ ನನ್ನ ಪ್ರಸಿದ್ಧಪತ್ರಿಕೆಯಲ್ಲಿ ಸೂಚಿಸಿದಂತ ಕೆಲಸಗಳನ್ನು ಮಾಡಲು, ನನ್ನ ಶಕ್ತಿಮೀರಿ ಪ್ರಯತ್ನಿಸುತ್ತೇನೆ.
>
> ಒಬಳಿಕುಪ್ಪೆ, ತಾ॥ 25-1-24 — ತಮ್ಮಗಳ ಸೇವಕ ಕೋಟೆರ ಚಿಣ್ಣಪ್ಪ
>
> ಪ್ರಕಟಣೆ" [2—2]

ಕೌನ್ಸಿಲ್ ತೆರೆಯುವ ಸಮಾರಂಭ.

ಕೌನ್ಸಿಲ್ ತೆರೆಯುವ ದಿನ ಹಾಜರಾಗಲು ಸಾಧ್ಯರಾ 200 ಜನರಿಗೆ ಆ ಮಂತ್ರಣ ಪತ್ರ [illegible] ದಲ್ಲಿ ೧೪ ಗಂಟೆಗೇ ಸಭಿಕರು ತಮ್ಮ ತಮ್ಮ ಸ್ಥಳದಲ್ಲಿ ಕೂತಿರಬೇಕೆಂತಲೂ ಅನಂತರ ಕೌನ್ಸಿಲ್ ಹಾಲಿನ [illegible] ಬಾಗಿಲು ಮುಚ್ಚಲ್ಪಡುತ್ತೆಂತಲೂ [illegible] ದ [illegible] ಕೊಡವ [illegible] ಕೌನ್ಸಿಲ ಚುನಾಯಿತ ಮೆಂಬರುಗಳು ಸ[ಹ] [illegible] ಗಂಟೆಗೆ ಸರಿಯಾಗಿ ಹಾಜರದ್ದರು. ಚುನಾಯಿತ ಮೆಂಬರುಗಳು ಚೀಫ ಕಮಿಷನರ್ ಸಾಹೇಬರು ಕೋಟೆ ಮೊಳಗೆ ತಲಪುವವರೆಗೆ ಹಾಲಿನ [illegible] ಇದ್ದರು. 3-40 ಗಂಟೆಗೆ ಸರಿಯಾಗಿ ಚೀಫ್ ಕಮಿಷನರ್ ಸಾಹೇಬರು ಇವರ ಪತ್ನಿ [illegible] ಮತ್ತು ಸೆಕ್ರಿಟರಿಯವರು ಸಹ ಕೋಟೆಯೊಳಕ್ಕೆ ತಲಪಿದರು. ಉದ್ಯೋಗಸ್ಥ ಮೆಂಬರುಗಳು ನಾಲ್ಕು ಜನರು ಇವರನ್ನು ಎದುರುಗೊಳ್ಳುವುದಕ್ಕಾಗಿ [illegible] ಕಾಲಾ ಇನ್ಸ್‌ಪೆಕ್ಟರ್ ಯೇಟ್ಸ್ ಧೊರೆಗಳ ಮೋಟಾರ್ ದಾರಿಯಲ್ಲಿ ಕಟ್ಟಿ ಹೋಗಿದ್ದರಿಂದ ಹಾಜರಿರಲಿಲ್ಲ. [illegible] ವರು ಸಾಹೇಬರನ್ನು ಎದುರುಗೊಂಡರು. ಕೌನ್ಸಿಲ್ ಹಾಲಿನ ಹೊರಗೆ ಕೊಡಗು ಟೆರಿಟೋರಿಯಲ್ ಫೋರ್ಸಿನವರು [illegible] ಗು ಪು [illegible] ನಿಲ್ಲಿಸಲ್ಪಟ್ಟವರಿಂದ ಸಲಾಮನ್ನು ಸ್ವೀಕರಿಸಿ [illegible] ವ ಕೌನ್ಸಿಲ್ ಹಾಲಿಗೆ ಪ್ರವೇಶಿಸಲು [illegible] ಹಾಜರಿದ್ದವರೆಲ್ಲರೂ ಎದ್ದು ನಿಂತು, ಚೀಫ್ ಕಮಿಷನರು ಕುಳಿತನಂತರ ಕುಳಿತುಕೊಂಡರು. ಮೆಂಬರುಗಳು ಮಾತ್ರ ನಿಂತೇ ಇದ್ದರು. ಚೀಫ್ ಕಮಿಷನರವರ ಸೆಕ್ರಿಟರಿಯವರು ಚೀಫ್ ಕಮಿಷನರ ಅನುಮತಿ ಪಡೆದು ಕೌನ್ಸಿಲು ಸೆಕ್ರಿಟರಿಯವರಾದ ಮೆ. ರಾಯ ಬಹದ್ದೂರ್ ಕೇಟೋಳಿ ಚೆಂಗಪ್ಪನವರನ್ನು ಪ್ರಮಾಣ ಮಾಡಿಸಲು [illegible] ದ ವಚನವಾಕ್ಯಗಳೇನೆಂದರೆ "ಚುನಾಯಿತ ಅಥವಾ ನಿಯಮಿತ ಮೆಂಬರಾದ ನಾನು ಇ[ಂ]ಡಿಯಾ ಚಕ್ರವರ್ತಿಯವರಿಗೆ ರಾಜಭಕ್ತನಾಗಿರುತ್ತೇನೆ ಮತ್ತು ಈಗ ಕೈಕೊಳ್ಳುವ ಕೆಲಸವನ್ನು ಪ್ರಾಮಾಣಿಕತೆಯಿಂದ ನಡೆಸುತ್ತೇನೆ" ಕೌನ್ಸಿಲ್ ಸೆಕ್ರಿಟರಿಯವರ ಪ್ರಮಾಣವಾದ ನಂತರ ಇವರು ಕಮಿಷನರ ಫೈನೆನ್ಶಿಯಲ್ ಅಸಿಸ್ಟೆಂಟರಿಗೂ ಮತ್ತು ಚುನಾಯಿತ 15 ಮೆಂಬರುಗಳಿಗೂ ನಿಯಮಿತ ಮೆಂಬರಾದ ಕೆರಂಬಾಡಿ ಸುಬ್ರಾಯರಿಗೂ ಪ್ರಮಾಣಮಾಡಿಸಿದರು. ಮೆ॥ ಗಣಪತಿಯ್ಯನವರಿಗೂ, ಮೆ॥ ಸುಬ್ರಹ್ಮಣ್ಯಯ್ಯನವರಿಗೂ ಕನ್ನಡದಲ್ಲಿ ಪ್ರಮಾಣದ ವಾಕ್ಯಗಳನ್ನು ಹೇಳಿಸಿದರು. ಪ್ರಮಾಣವಾದನಂತರವೇ ಮೆಂಬರುಗಳು ತಮ್ಮ ತಮ್ಮ ಸ್ಥಳದಲ್ಲಿ ಕುಳಿತುಕೊಂಡರು. ಅಫೀಷಿಯಲ್ ಮೆಂಬರುಗಳಿಗೂ ಪ್ರೆಸಿಡೆಂಟರ (ಚೀಫ್ ಕಮಿಷನರ) ಎರಡು ಬಾರಿಯಲ್ಲಿ ಕೊಂಚ ಓರೆಯ ಎರಡೆರಡು ಸೀಟು ಏರ್ಪಡಿಸಿದ್ದರು. ಉದ್ಯೋಗಸ್ಥರಲ್ಲದ ಮೆಂಬರುಗಳಿಗೆ ಎರಡು ಸಾಲಿನಲ್ಲಿ ಎದುರಾಗಿ ಕುರ್ಚಿಗಳು ಇಡಲ್ಪಟ್ಟಿದ್ದವು. ಒಂದು ಬದಿಯಲ್ಲಿ ಮೆ॥ ಟಿಪ್ಪಿಂಗ್ ಸಾಹೇಬರೂ, ಮೆ॥ ಎ. ಬಿ. ಚೆಂಗಪ್ಪನವರೂ, ಮೆ॥ ನಿಕ್ಕಲ್ಸ್ ಸಾಹೇಬರೂ, ಮೆ॥ ಬಿ. ಮೇದಪ್ಪನವರೂ, ಮೆ॥ ಯಸ್. ಯಂ. ಪಿಂಟೋರವರೂ, ಮೆ॥ ಕೆಂಬಡ್ರಂಡ ನಾರಾಯಣನವರೂ ಮತ್ತು ಮೆ॥ ಕೆರಂಬಾಡಿ ಸುಬ್ರಾಯರೂ ಕುಳಿತುಕೊಂಡರು. ಇನ್ನೊಂದು ಬದಿಯಲ್ಲಿ ಮೆ॥ ಕೊಂದಿಯಂಡ ಬೆಳ್ಯಪ್ಪನವರೂ, ಮೆ॥ ಕೋಟೆರ ಚಿಣ್ಣಪ್ಪನವರೂ, ಮೆ॥ ಬಿ. ಗಣಪತಿಯ್ಯನವರೂ, ಮೆ॥ ಸಿ ಯರ್. ವೆಂಕಟೈಯ್ಯನವರೂ, ಮೆ॥ ಸುಬ್ರಹ್ಮಣ್ಯನವರೂ, ಮೆ॥ ಯಂ. ಚಿಣ್ಣಪ್ಪನವರೂ, ಮೆ॥ ಪಿ. ಕುಶಾಲಪ್ಪನವರೂ, ಮೆ॥ ಬಿ. ಕಾಳಪ್ಪನವರೂ ಕುಳಿತುಕೊಂಡರು.

ಅನಂತರ ಚೀಫ್ ಕಮಿಷನರು ಸಾಹೇಬರು ಎದ್ದು ವೈಸರಾಯರ ಪತ್ರವನ್ನು ತನ್ನ ಭಾಷಣವನ್ನೂ ಓದಿದರು. ವೈಸರಾಯರ ಪತ್ರವನ್ನು ಓದುವಾಗ ಹಾಜರಿದ್ದವರೆಲ್ಲರೂ ಎದ್ದುನಿಂತರು. ಈ ಪತ್ರಗಳು ಬೇರೆ ಕಡೆ ಛಾಪಿಸಿದೆ. ಅನಂತರ ಮೆ॥ ಅಪ್ಪಾರಂಡ ಚಂಗಪ್ಪನವರು ವೈಸರಾಯರ ಪತ್ರಕ್ಕೆ ಸಭೆಯ ಧನ್ಯವಾದವನ್ನು ಚಕ್ರವರ್ತಿಯವರಿಗೆ ದೇಶದ ರಾಜಭಕ್ತಿಯನ್ನು ಸೂಚಿಸುವ ಠರಾವನ್ನು ಸಭೆಯ ಮುಂದೆ ಇಟ್ಟರು. ಇವರ ಭಾಷಣವು ಇನ್ನೂ ನಮ್ಮ ಕೈಸೇರಿರುವದಿಲ್ಲ. ಅನಂತರ ಮೆ॥ ಕುಶಾಲಪ್ಪನವರು ಮೆ॥ ಸಿ. ಯರ್. ವೆಂಕಟೈಯ್ಯನವರು ಮೆ॥ ಟಿಪ್ಪಿಂಗ್ ಸಾಹೇಬರು ಮತ್ತು ಕಮಿಷನರ್ ಸಾಹೇಬರು ಸಹ ಭಾಷಣಮಾಡಿದ [illegible] ರಾವನ್ನು ಮೆಂಬರುಗಳೆಲ್ಲಾ ಎದ್ದುನಿಂತು ಮಂಜೂರ್ ಮಾಡಿಕೊಂಡರು. ಕಮಿಷನರ್ ಸಾಹೇಬರ ಭಾಷಣದ ಪ್ರತಿಯು ನಮ್ಮ ಕೈಸೇರಿರುವದಿಲ್ಲ. ಅದರ ಸಾರಾಂಶವೇನೆಂದರೆ ಚುನಾಯಿತ ಮೆಂಬರುಗಳಂತೆ ಉದ್ಯೋಗಸ್ಥ ಮೆಂಬರುಗಳು ಸಹ ಪ್ರಮಾಣ ಮಾಡಿದ್ದೇವೆ. ಎಲ್ಲಾ ಸಿವಿಲ್ ಸರ್ವಿಸಿನವರಿಗೂ ದೇಶದ ಹಿತಚಿಂತನೆ ಇರುವಂತೆ ನನಗೂ ಇತರ ಮೆಂಬರುಗಳಂತೆಯೇ ದೇಶದ ಹಿತದಮೇಲೆ ದೃಷ್ಟಿ ಇದೆ. ಈ ದೇಶದಲ್ಲಿ 10560 ಓಟರುಗಳಲ್ಲಿ 7821 ಓಟುಗಳು ಓಟ್ ಕೊಟ್ಟಿದ್ದಾರೆ. ಇದರಿಂದ ಕೌನ್ಸಿಲಿನಮೇಲೆ ದೇಶಕ್ಕೆ ಇರುವ ಉತ್ಸಾಹ ತಿಳಿಯುತ್ತೆ. ಎಂತ ಭಾಷಣ ಮಾಡಿದರು.

ಮರುದಿನ ದಿನ ಬೆಳಗ್ಗೆ 11 ಗಂಟೆಗೆ ಉದ್ಯೋಗಸ್ಥರಲ್ಲದ ಮೆಂಬರುಗಳು ಸೇರಿ ಫೈನಾನ್ಶಿಯಲ್ ಕಮಿಟಿಗೆ ಮೂವರನ್ನು ಚುನಾಯಿಸಿ ಹೆಸರು ಕೊಡಬೇಕೆಂತ ತಿಳಿಸಿ ಸಭೆಯನ್ನು ಬರಖಾಸ್ತು ಮಾಡಿದರು. ಅನಂತರ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರು ಮುಂದಾಗಿಯೂ ಚಿನ್ನದ ಗೊಂಡೆಯುಳ್ಳ ಬೆಳ್ಳಿ ಕಟ್ಟಿಗೆಗಳನ್ನು ಹಿಡಿದ ಇಬ್ಬರು ಜವಾನರೂ ಅವರ ಹಿಂದೆ ಚೀಫ್ ಕಮಿಷನರ್ ಸಾಹೇಬರೂ ಅವರ ಹಿಂದೆ ಕೌನ್ಸಿಲ ಮೆಂಬರುಗಳು ಇಬ್ಬಿಬ್ಬರಾಗಿಯೂ ಸಭಾಮಂಟಪದ ಹೊರಕ್ಕೆ ತೆರಳಿದರು. ಇತರ ಸಭಿಕರೆಲ್ಲರೂ ಕೂತೇ ಇದ್ದರು. ಕೌನ್ಸಿಲ್ ಮೆಂಬರುಗಳೆಲ್ಲಾ ಅದಮುಂದಿನ ದಿನ ಸ್ಥಳಕ್ಕೆ ಹೋಗಿ ಚೀಫ್ ಕಮಿಷನರೊಂದಿಗೆ ಫೊಟೋಗ್ರಾಫ್ ತೆಗೆದುಕೊಂಡು ಪ್ರೋಟೋ [illegible] ಗೆಸಿದರು. ಅನಂತರ ಇತರ ಸಭಿಕರು ಅಲ್ಲಿಗೆ ಸೇರಿ ಚೀಫ್ ಕಮಿಷನರಿಗೆ ಪರಿಚಿತಿ ಮಾಡಿಸಲ್ಪಟ್ಟು ಕೇಕ್ ಷ್ಯಾಂಪೇನ್ ತೆಗೆದುಕೊಂಡರು. ಅನಂತರ ಫಲಹಾರ ಟೀ ಸರಬರಾಯಿ ಆಯಿತು. 6-30 ಘಂಟೆಗೆ ಸಭೆಯು ತೀರಿಯಿತು.

ರಾತ್ರಿ 9-30 ಗಂಟೆಗೆ ಚೀಫ್ ಕಮಿಷನರ ಸಾಹೇಬರ ಬಂಗಲೆಗೆ 'ಎಟ್‌ಹೋಮ್' ಗೆ ಕೌನ್ಸಿಲ್ ಮೆಂಬರುಗಳೂ ಇನ್ನೂ ಕೆಲವರು ಕರೆಯಲ್ಪಟ್ಟಿದ್ದರು. ಅಲ್ಲಿನ ಏರ್ಪಾಡು ಚನ್ನಾಗಿರಲಿಲ್ಲ. ಕುಳಿತುಕೊಳ್ಳಲಿಕ್ಕೆ ಸ್ಥಳಸಾಲದೆ ಇದ್ದದ್ದರಿಂದ ಎಲ್ಲರೂ ನಿಂತೇ ಇದ್ದರು. ಬಿಕ್ನೆಲ್ ಸಾಹೇಬರ ಪತ್ನಿಯವರು ಮತ್ತು ನಾ[illegible]ರದಲ್ಲಿ ಸಹಾಯಮಾಡುತ್ತಿದ್ದಕ್ಕಾಗಿ ಇವರಿಗೆ ಕೈಸರಿ ಹಿಂದ್ ಮೆಡಲ್ ಮತ್ತು ಮೆ॥ ಕೋಟೋಳಿ ಚೆಂಗಪ್ಪನವರು ರಿಕ್ರೂಟಿಂಗ್ ಕೆಲಸಮಾಡಿದ್ದಕ್ಕಾಗಿಯೂ ಇತರ ವಿಶೇಷ ಶಕ್ತಿಗಾಗಿಯೂ ರಾಯ್‌ಬಹದ್ದೂರ್ ಬಿರುದು ಪಡೆದಿದ್ದರಿಂದ ಇವರಿಗೆ ಆ ಬಿರುದಿನ ಮೆಡಲ್ ಸಹ ಚೀಫ್ ಕಮಿಷನರ್ ಸಾಹೇಬರು ಕೊಟ್ಟರು. 11 ಘಂಟೆಗೆ "ಎಟ್‌ಹೋಮ್" ತೀರಿತು.

ಕೊಡಗು ಜಮೀನ್ದಾರರ ಸಂಘ.

ಪ್ರಚಾರಕ ಕಾರ್ಯದರ್ಶಿಯವರಿಂದ.

BE STRONG!

" We are not here to play, to dream to drift,
We have hard work to do, and loads to lift,
Shun not the struggle; face it, 'Tis God's work."

M D Babcock

ಗಟ್ಟಿಮನಸುಳ್ಳವರಾಗಿರಿ! ನಾವು ಆಟವಾಡುವದಕ್ಕಾಗಲಿ, ಮನೋರಥಕಲ್ಪನೆ ಶಕ್ತಿಯಿಂದ ಕಾಲಕಳೆಯಲಿಕ್ಕಾಗಲಿ ಇರತಕ್ಕವರಲ್ಲ. ಇನ್ನು ಮೇಲೆ ಯಥೇಷ್ಟ ಜವಾಬ್ದಾರಿಕೆಯುಳ್ಳ ಕಠಿಣತರದ ಕೆಲಸಗಳನ್ನು ಕೈಕೊಳ್ಳತಕ್ಕದಿದೆ. ಈ ಕಠಿಣತರದ ಕೆಲಸಗಳಲ್ಲಿ ಹೇಡಿಗಳಾಗದೆ ಧೈರ್ಯದಿಂದ ನಡಿಸಿರಿ. ಈ ನಮ್ಮ ಕರ್ತವ್ಯವು ದೇವರ ಕೆಲಸವಾಗಿದೆ.

ಬ್ಯಾಬ್‌ಕಾಕ್

ಸಂಘದ ಉದ್ದೇಶಗಳನ್ನು ನೆರವೇರಿಸಲಿಕ್ಕಾಗಿ 25,000 ಜನರು ಸಂಘಕ್ಕೆ ವಾರ್ಷಿಕ ಮೀಟಿಂಗಿಗೆ ಮೊದಲು ಮೆಂಬರಾಗಿ, ವಾರ್ಷಿಕ ಚಂದಾ ಒಂದುರೂಪಾಯನ್ನು ಈಕೆಳಗಿನ ನಾಡುಕಮಿಟಿಗಳಿಗೆ ಪಾವತಿಮಾಡಬೇಕಾಗಿ ವಿನಂತಿ.

ನಂಬರು.	ನಾಡು.	ಮೀಟಿಂಗ್ ಸ್ಥಳ.	ತಾರೀಖು	ದಿವಸ
1	ಎಡೆನಾಡು	ನಾಣ್ಯಬಾಣೆಮುಂದು	10—2—24	ಆದಿತ್ಯವಾರ
2	ಬೇಪನಾಡು	ಪಟ್ಟಿಬಾಣೆಮುಂದು	11—2—24	ಸೋಮವಾರ
3	ಬೈರವನಾಡು	ಅಡ್ಡಕೊಡಿಯಮುಂದು	12—2—24	ಮಂಗಳವಾರ
4	ಅಮ್ಮತ್ತಿನಾಡು	ಕಳ್ಳಿಬಾಣೆಮುಂದು	13—2—24	ಬುಧವಾರ
5	ಪೊರೆನಾಲ್‌ನಾಡು	ಕುರುಳಿಮುಂದು	14—2—24	ಗುರುವಾರ
6	ಕಾಂತಮೂರ್ನಾಡು	ಪಾಂಡಂಡಾಣೆಮುಂದು	15—2—24	ಶುಕ್ರವಾರ

ನಮ್ಮ ಜಮೀನ್ದಾರರಸಂಘದ ವಾರ್ಷಿಕಸಭೆಯು, ಸಾಧಾರಣವಾಗಿ ಪ್ರತಿವರ್ಷವೂ ಏಪ್ರೀಲ್ ತಿಂಗಳ ಮಧ್ಯಭಾಗದಲ್ಲಿ ನಡೆಯುವದು ವಾಡಿಕೆ. ಪ್ರಪಂಚದಲ್ಲೆಲ್ಲಾ ಕಾಲಸ್ಥಿತಿಗಳು ಬದಲಾವಣೆಯಾಗುತ್ತಾ ಬಂದಹಾಗೆ ನಮ್ಮದೇಶದ ಸ್ಥಿತಿಗತಿಗಳು ಬದಲಾವಣೆಯಾಗುತ್ತಾ ಬರುತ್ತಿರುವದೆಂದರೆ ನಿಜವಾದ ಸಂಗತಿಯಾಗಿರುತ್ತೆ. ನಮ್ಮ ದೇಶದ ಈಗಿನ ಸ್ಥಿತಿಯಲ್ಲು ದೇಶದಲ್ಲು ಜನಸಂಖ್ಯೆ ಹೆಚ್ಚಿ, ನಾನಾತರದ ಖಾಯಿಲೆಗಳು ಮತ್ತು ನಿರ್ಧಾರದಗಳು ಅಧಿಕವಾಗಿ ದೇಶವು ದಿನೇದಿನೇ ಕ್ಷಯವಾಗುತ್ತಾ ಬರುತ್ತಿರುವದು ನಮಗೆಲ್ಲರಿಗೂ ತಿಳಿದ ಸಂಗತಿಯಾಗಿರುತ್ತೆ. ಈ ವಿಷಯದಲ್ಲಿ ಅನೇಕ ಕಾವರ್ತಿ ಚರ್ಚಿಸಲ್ಪಟ್ಟಿದೆ. ಆದರೆ ನಾವು ವೃಥಾ ಚರ್ಚೆ ಮಾಡುವದ್ದಲ್ಲದೆಲೂ, ಸರಕಾರದವರನ್ನು [illegible] ಮಾಡಿಸಿದ ಮಾತ್ರಕ್ಕೇನೆ ನಮ್ಮ ಸ್ಥಿತಿಗತಿಗಳು ಯಾವ ಕಾಲಕ್ಕೂ ಅಭಿವೃದ್ಧಿಹೊಂದಲಾರವು. ನಮ್ಮ ಕಾಲಿನಮೇಲೆ ನಾವು ನಿಲ್ಲಬೇಕಂತಲೂ, ನಮ್ಮ ಪ್ರಯೋಜನಕ್ಕೆ ಬೇಕಾದ ಕೆಲಸಗಳನ್ನು ನಮ್ಮ ಸ್ವಂತ ಪ್ರಯತ್ನಗಳಿಂದ ಮಾಡಬೇಕಂತಲೂ, ನಮ್ಮ ಪ್ರಯತ್ನಗಳಿಂದ ಅಭಿವೃದ್ಧಿಹೊಂದುತ್ತಾ ಬಂದಹಾಗೆ ನಾವು ಹೆಚ್ಚಿನ ಸ್ವಾತಂತ್ರ್ಯರಾಗಿ ಸ್ವರಾಜ್ಯದ ಕಲಸಕ್ಕೆ ಯೋಗ್ಯರಾಗುವೆವೆಂದು ಅನೇಕಾವರ್ತಿ ಸೂಚಿಸಿಯಾಗಿದೆ. ಈ ಕಲ ನಮ್ಮ ಜವಾಬ್ದಾರಿಕೆ ಕಲಸಗಳನ್ನು ಮಾಡುವಾಗ್ಯ ಸ್ವಂತ ಆದಾಯ, ಸ್ವಂತ ವಿರಾಮ, ಸ್ವಂತ ಅನುಕೂಲತೆಗಳನ್ನು ಬಿಟ್ಟು ಅದಷ್ಟು ಮಟ್ಟಿಗೆ ಪ್ರಾಮಾಣ್ಯದಿಂದ ಸಂಘವು ಈಗ ಕೈಕೊಂಡ ಉದ್ದೇಶಗಳನ್ನು ನೆರವೇರಿಸಿ ಸಂಘವು ಇನ್ನು ಮುಂದಕ್ಕೆ ಮಾಡಲು ಪ್ರಯತ್ನಪಡುವ ಅನೇಕ ಕಾರ್ಯಗಳಿಗೆ ಎಲ್ಲಾ ಜಮೀನ್ದಾರರು ಪ್ರೋತ್ಸಾಹಕರಾಗಿ ಸಹಾಯಕರಾಗಬೇಕಾಗಿ ಅತಿ ವಿನಯದಿಂದ ಬೇಡುತ್ತೇನೆ.

ತಾ|| 28-1-24 ರಲ್ಲಿ ಚೀಫ್ ಕಮೀಷನರವರು ಕೌನ್ಸಿಲನ್ನು ತೆರೆದಾಗ ಶಿಟ್ಟೆಕ್ಕೆ ರರಾವನ್ನು ಕುರಿತು ಸ್ರೀ|| ಅಪ್ಪಾರಂಡ ಚಂಗಪ್ಪನವರು ಮಾಡಿದ ಭಾಷಣ

ಅಧ್ಯಕ್ಷರೇ,

ಮೈಸೂರಾಧೀಶರ ಆಶೀರ್ವಚನಗಳ ಕುರಿತ [illegible] ವ ಠರಾವನ್ನು ತರಲು ನನಗ ಅಪ್ಪಣೆಯಾಗಬೇಕು.

ಇಲ್ಲಿ ಅಧ್ಯಕ್ಷರು ತಲೆಯನ್ನಾಡಿಸಿ [illegible] ಸೂಚಿಸಿದರು.

ಈ ಠರಾವನ್ನು ತರುವಲ್ಲಿ ಚಕ್ರವರ್ತಿಸಾರ್ವಭೌಮರಿಗೆ ಕೌನ್ಸಿಲಿನ ವಿಶೇಷ ರಾಜಭಕ್ತಿಯನ್ನೂ ಗೌರವವನ್ನೂ ಒಪ್ಪಿಸುವದಲ್ಲದೆ ಈ ಸಮಾರಂಭದಲ್ಲಿ ಪಾಲುಗೊಂಡಿರುವ ಮೈಸೂರಿಯು ಸಾಹೇಬರಿಗೆ ಅಭಿವಂದನೆಗಳನ್ನು ನಾನು ಅರ್ಪಿಸುತ್ತೇನೆ.

ಈಗ ಸ್ಥಾಪಿಸುವ ಈ ಸಭೆಯು ಹಿಂದೂ ದೇಶದ ಸಭೆಗಳಲ್ಲಿ ಕಿರಿಯದಾಗಿದೆ. ದೇಶೀಯರು ಅದರಲ್ಲಿ ಭಾಗಿಗಳಾಗಲು ಬಹಳ ಕುತೂಹಲವನ್ನು ತೋರಿಸಿರುವರು. ಆದರ ಸಮಾರಂಭವು ತಮ್ಮ ಪಾಲಿಗೆ ನೇರಿದ್ದಕ್ಕೆ ನಾವು ಸಂತೋಷಪಡುತ್ತೇವೆ ಮತ್ತು ತಮ್ಮಿಂದ ಮುಂದೆ ಪೂರ್ಣವಾದ ಸ್ಥಳೀಯ ಸ್ವರಾಜ್ಯವನ್ನು ಸಂಪಾದಿಸುವ ರಾಜಕೀಯ ಬೆಳವಣಿಗೆಗೆ ಹಿಂದೂ ದೇಶದ ಇತರ ಪ್ರಾಂತಗಳೊಡನೆ ಸಮಗೂಡುವುದೆಂದು ನಂಬುತ್ತೇವೆ.

ಭಗವಂತನ ಕೃಪೆಯಿಂದ ಬ್ರಿಟಿಶ ಸರಕಾರವನ್ನೂ ಸರಕಾರದ ಮಂತ್ರಾಲೋಚನೆಯನ್ನೂ ಈ ಚುನಾಯಿತ ಸಭೆಯು ಒದಗಿಸಿಕೊಂಡು ಕಾರ್ಯವನ್ನು ಕೈಗೊಳ್ಳುವುದರಿಂದ ದೇಶಕ್ಕೆ ಏಳಿಗೆಯಾಗಬಹುದು.

ಅಲ್ಲದೆ ಈ ಸಭೆಯ ಮೇಲೆ ಬಿದ್ದಿರುವ ಜವಾಬ್ದಾರಿಯನ್ನು ಕ್ರಮವಾಗಿ ಉಪಯೋಗಿಸಿ ಹೆಚ್ಚಿನ ವಿಶ್ವಾಸಕ್ಕೆ ಪಾತ್ರರಾಗುತ್ತೇವೆಂಬ ಧಂವನಯನ್ನು ಮೈಸೂರಾಯನಾಹೇಬರಲ್ಲಿರುವ ತಮ್ಮನ್ನು ನಾವು ವಿನಯಪೂರ್ವಕ ಕೇಳಿಕೊಳ್ಳುತ್ತೇವೆ.

ಮತ್ತು ಈ ಕೌನ್ಸಿಲನ್ನು ನಮಗೆ ಒದಗಿಸಿಕೊಡಲು ತಾವು ಪಟ್ಟಕೃಷಿಗೆ ನಾವು ಐಕ್ಯಮತ್ಯದಿಂದ ವಂದಿಸುವಲ್ಲದೆ 1834ನೇ ಇಸವಿಯಿಂದ ಈಗಿನ ತನಗೆಯೇ ಮುಂಬಕ್ಕಾ ಪಥೇಯರಾಗಿಯೂ ಭಕ್ತರಾಗಿಯೂ ನಡಕೊಳ್ಳುತ್ತೇವೆ.

ನನ್ನ ಕೊನೇಸಂದರೆ— ಮೈಸೂರಾಯಸಾಹೇಬರ ಆಶೀರ್ವಚನಗಳಿಗಾಗಿ ಈ ದೇಶದ ಪರವಾಗಿ, ಪ್ರಥಮ ಕೌನ್ಸಿಲಾದ ಈ ಸಭೆಯು ಅವರಿಗೆ ಪೂರ್ಣ ಸಂತೋಷದಿಂದ ಅಭಿವಂದಿಸುತ್ತದೆ ಮತ್ತು ಚಕ್ರವರ್ತಿ ಸಾರ್ವಭೌಮರಿಗೆ ದೇಶದ ವಿಶೇಷ ರಾಜಭಕ್ತಿಯನ್ನು ಅರ್ಪಿಸುವಂತೆ ಅವರನು ಬೇಡಿಕೊಳ್ಳುತ್ತದೆ.

ತಾ|| 28—1—24 ರಲ್ಲು ಕೊಡಗು ಕೌನ್ಸಿಲು ತೆರೆದಾಗ ಶ್ರೀ|| ಪಾರ್ವತಿಗಡ ಕ ಶ [illegible] ಮಾಡಿದ ಭಾಷಣ

ನಮ್ಮ ದೇಶಕ್ಕೆ ದೊರಕಿರುವ ಈ ಪ್ರಥಮ ಕೌನ್ಸಿಲಿನ ಮುಂದಿಟ್ಟ ಠರಾವನ್ನು ಅನುಮೋದಿಸುವ ಸಂಗ್ರ ಕೆಲವು ಮಾತುಗಳನ್ನಾಡಬೇಕೆಂದಿದ್ದೇನೆ. ನನ್ನ ಚಿಕ್ಕ ವಾಕ್ಯ ಕೌನ್ಸಿಲನ್ನು ಮುಗಿಸುವ ಪ್ರಾರ್ಥನೆ, ಮತ್ತು ಅದನ್ನು ಕುರಿತು ಆಶೀರ್ವಚನಗಳನ್ನು ಕಳುಹಿಸಿದುದಕ್ಕಾಗಿ ಮೈಸೂರಾಯರ ಸರ್ಕಾರಕ್ಕೆ ನಾವು ವಂದಿಸುವಲ್ಲದೆ ನಮ್ಮ ದೇಶಕ್ಕೆ ಅಭಿವೃದ್ಧಿಯ ಮತ್ತು ಸುಭಿಕ್ಷದ ಕಾಲವು ಒದಗಿತೆಂದು ನಾವು ನಂಬುತ್ತೇವೆ. ಇಂಥಾ ಕೌನ್ಸಿಲು ನಮಗೆ ಬಹಳ ಮೊದಲೇ ದೊರೆಯಬೇಕಾಗಿದ್ದರೂ ಈಗ ಅದು ನಮಗೆ ತೃಪ್ತಿಕರವಾಗಿಲ್ಲದಿದ್ದರೂ ಕೂಡ ಬ್ರಿಟಿಷ್ ಸಾಮ್ರಾಜ್ಯದೊಳಗೆ ಸ್ವರಾಜ್ಯವನ್ನು ಪಡೆಯುವ ಅನುಕೂಲಗಳು ಬೇಗನೆ ಲಭಿಸಬಹುದೆಂಬ ಭರವಸೆಯಿಂದ ಈ ಕೌನ್ಸಿಲನ್ನು ನಾವು ಸಂತೋಷದಿಂದ ಅಂಗೀಕರಿಸುತ್ತೇವೆ. ಬ್ರಿಟಿಷ್ ರಾಜಕೀಯ ಸ್ಥಿತಿಯಲ್ಲಿ ಈಗತಾನೇ ಆಗಿರುವ ಬದಲಾವಣೆಗಳಿಂದ ನಾನು ಹೀಗೆ ಹೇಳಲು ಕಾರಣವಿದೆ. ಇಂಗ್ಲೆಂಡಿನಲ್ಲಿ ಈಗ ಅಧಿಕಾರಕ್ಕೆ ಬಂದಿರುವ ಲೇಬರ್ ಸರ್ಕಾರವು ಬ್ರಿಟಿಷ್ ರಾಜನೀತಿಯಲ್ಲಿ ವಿಶೇಷ ಬದಲಾವಣೆಯನ್ನು ಉಂಟುಮಾಡುವುದೆಂದು ಬಹುಕಾಲದಿಂದಲೇ ನಿರೀಕ್ಷಿಸಲಾಗಿದೆ. ಸ್ವರಾಜ್ಯವು ಪ್ರತಿಯೊಂದು ಜನಾಂಗದ ಜನ್ಮ ಹಕ್ಕಾಗಿರುವುದರಿಂದಲೂ ಸುಮಾರು ಒಂದು ಶತಮಾನದವರೆಗೆ ಬ್ರಿಟಿಷ್ ರಾಜ್ಯಭಾರದಲ್ಲಿದ್ದು ನಮ್ಮ ದೇಶವು ರಾಜ್ಯಾವಳಿತದಲ್ಲಿ ನ್ಯಾಯವಾದ ಹಕ್ಕು ಪಡೆಯಲು ತಯಾರಾಗಿರುವುದರಿಂದಲೂ ಹಿಂದೂದೇಶದ ಬೇರೆ ಭಾಗಗಳಂತೆ ನಾವೂ ಲೇಬರ್ ಸರ್ಕಾರದಿಂದ ಬಹಳ ನಿರೀಕ್ಷಿಸುತ್ತೇವೆ. ಕಳೆದ ಆನಾವಶ್ಯ ತಪ್ಪಿಸು ಮತ್ತು ಈಚಿನ ಕೆಲವು ವರ್ಷಗಳಿಂದ ದೇಶದನು ನಡಿಸುತ್ತಿರುವ ರಾಜಕೀಯ ಚಳವಳಿಗಳು ದೇಶೀಯರಿಗೆ ರಾಜಕೀಯ ಸಂಗತಿಯಲ್ಲಿರುವ ಕುತೂಹಲದ ದೃಷ್ಟಾಂತವಾಗಿರುವದರಿಂದ ಈ ವಿಷಯ ನಾನು ಹೆಚ್ಚು ಹೇಳಬೇಕಾದುದಿಲ್ಲ. ಅಂತ್ಯದಲ್ಲಿ ಬ್ರಿಟಿಷ್ ಸಾರ್ವಭೌಮರಲ್ಲಿ ದೇಶೀಯರಿಗಿರುವ ರಾಜಭಕ್ತಿಯನ್ನು ಅರ್ಪಿಸುತ್ತೇನೆ.

ಪತ್ರವ್ಯವಹಾರಗಳು.

ಬಾಹ್ಯದಾರರು ಬರುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. [ಎಡಿಟರ್]

ಅಯ್ಯಾ ಎಡಿಟರೇ,

ಈ ಕೆಳಗೆ ಬರಾಸಿ ಮಿಲಿಟರಿ ಸರ್ವಿಸ್ (Oversea Military Service) ಗಾಗಿಯೂ ವ [illegible] ಅಂಥಾ ಸರ್ವಿಸಿಗೆ ಸಲ್ಲತಕ್ಕ ಮೆಡಲುಗಳ ವಿಷಯವಾಗಿಯೂ ಬರೆದದ್ದನ್ನು ಸಂಬಂಧಪಟ್ಟವರಿಗೆ ತಿಳಿಸುವ ಹಾಗೆ ಕೊಡಗು ಪೇಪರಿನಲ್ಲಿ ಬರೆದು ತಿಳಿಸಬೇಕಾಗಿ ಕೋರುತ್ತೇನೆ —

ನನ್ನ ಈಪ್ಟ್ ಆಫ್ರಿಕದ ಮಿಲಿಟರಿ ಸರ್ವಿಸಿ (೩-೧೧-೧೬—೭೧-೧- ೯೧೯) ಗಾಗಿ [illegible] ಕಾರಕ್ಕೆ ಈಗ್ಗೆ ಎರಡು ಮೂರು ವರ್ಷಗಳಿಗೆ ಹಿಂದೆ ನಾನು ಮೊದಲು ರಿಕ್ರೂಟ ಆದ ಮಿಲಿಟರಿ ಸೆಕ್ಷನ್ ಆಫೀಸಿನ ಮೂಲ (Bangalore Brigade Office) ಮೆಡಲು ರೋಲ್‌ಗಳನ್ನು ಅರ್ಜಿಸಹಿತ ಕಳುಹಿಸಿದ್ದೆನು. ಇದಕ್ಕೆ ಈ ವರ್ಷದ ಸುರುವಿನಲ್ಲಿ ಕಲ್ಕತ್ತೆ ಪಟ್ಟದ ಮೆಡಲು ಆಫೀಸರು ನಾನು ಮಿಲಿಟರಿ ಮೆಡಲುಗಳನ್ನು ಹೊಂದಲಿಕ್ಕೆ ಯೋಗ್ಯನೋ ಅಥವಾ ಯೋಗ್ಯನಲ್ಲವೋ ಎಂಬುವುದನ್ನು ತಿಳಿಸಲಿಕ್ಕೆ [illegible] ಆಫೀಸಿಗೆ ಬರೆದು ಕೇಳಿದ್ದೇನೆ ಎಂಬುದಾಗಿ ಉತ್ತರ ಬರೆದಿದ್ದರು. ಕೆಲವು ತಿಂಗಳು ಕ ಹಿಂದೆ ಅಲ್ಲಿಂದ [illegible] ಕ್ಷನ್ (Sanction) [illegible] ಮೆಡಲು ಆಫೀಸರು ನನ್ನ ಹೆಸರಿಗ [illegible] ಲು (War Medal) ಮತ್ತು ಇನ್ನೊಂದು ವಿಕ್ಟರಿ ಮೆಡಲು (Victory Medal) ಎಂಬ ಎರಡು ಮೆಡಲುಗಳನ್ನು ಮತ್ತು ಇದಕ್ಕೆ ಸರಿಯಾದ ರಿಬ್ಬ (Ribbons) ಗಳನ್ನು ಕಳುಹಿಸಿಕೊಟ್ಟಿದ್ದರು. [illegible] ಸಿನ್ನೆ [illegible] ನನ್ನ ಕೈಸೇರಿರುವವು. ಇದೇ ಮೇರೆ [illegible] ಸರ್ವಿಸ [illegible] ದೇಶದ ಸರ್ವಿಸು [illegible] ವರ್ಷಕ್ಕೆ ಕಮ್ಮಿಯಾಗದೆ ಮಾಡಿದವರು [illegible] ರೀತಿ ಅವರವರ [illegible] ಳನ್ನು [illegible] ಯೋಗ್ಯತೆಯನ್ನು [illegible] ಮೆಡಲುಗಳನ್ನು ದೊರಕಿಸಿ [illegible] ನಂಬುತ್ತೇನೆ.

ಸಿ. ಎಂ. ಪಿದ್ದೈಯ್ಯ, (ಬೈರ ಬಾರ

ಅಯ್ಯಾ ಎಡಿಟರೇ,

[illegible]

[illegible]

[illegible]

ಕೊಡಗಿನ ಜನರ ಉಪಯೋಗಕ್ಕಾಗಿ ಶ್ರೀಮಂತರಾದವರು ಆಸ್ಪತ್ರೆಯ ಸಂಗಡ ನೆರವು ಕೊಡುವದಕ್ಕೆ ಹತ್ತಿರದಲ್ಲಿ ಯಾವದಾದರೂ ಸ್ಥಳ ಒದಗಿಸಿದ್ದರೆ ಅಂತವರು ಅಲ್ಲಿಂದ ಕೆಲವು ಸೌಕರ್ಯಗಳನ್ನು ಯಥವಾಗಿ ಪಡೆದುಕೊಂಡು ತಮ್ಮ [illegible] ಕಾಲಗಳಲ್ಲಿ ಓದಿಕೊಂಡು ವಿದ್ಯೆಯನ್ನು [illegible] ಸಬಹುದಾಗಿತ್ತು. ಆದರೆ ನಮ್ಮಲ್ಲಿ ಅಂತ ಯಾವ ಅನುಕೂಲವೂ ಇಲ್ಲದಿರುವದರಿಂದ ಅನೇಕರಿಗೆ ತೊಂದರೆಯಾಗಬಹುದು. ಅದುದರಿಂದ ಈ ಮೇಲೆ ಹೇಳಿದ ಗ್ರಾಮಸ್ಥರೆಲ್ಲಾ ಸೇರಿದರು. ಈ ಕಾರ್ಯವನ್ನು ಕೈಗೊಂಡು ಇತರ ಸಹಾಯದಿಂದ ಒಂದು ಪುಸ್ತಕ ಭಂಡಾರವನ್ನು ಸ್ಥಾಪಿಸಬೇಕೆಂಬ ನನ್ನ ಕೋರಿಕೆ. [illegible] ಭಂಡಾರಕ್ಕೆ ಸಾಲುವಂದದಾಲೆಯು ಅನುಕೂಲವಾಗಬಹುದೆಂದು ನಂಬುತ್ತೇನೆ. ಅಥವಾ ಬೇರೆ ಯಾವುದಾದರೂ ಈ ಮೇಲೆ ಹೇಳಿದ ಎರಡು ಗ್ರಾಮಗಳಿಗೆ [illegible] ಕೂಲವಾದ ಸ್ಥಳವನ್ನು ಚುನಾಯಿಸಿ ಸ್ಥಾಪಿಸಿದರೆ [illegible] ಕೂಲವಾಗಬಹುದು.

ಅಂತಾ ಸ್ಥಾಪಿತವಾದ ಭಂಡಾರಕ್ಕೆ ನಾನು [illegible] ದು ಕನ್ನಡ ಪುಸ್ತಕಗಳನ್ನು ಉಚಿತವಾಗಿ, ಈ ನನ್ನ ಕೋರಿಕೆಗೆ ಕೊಡಗು ಪೇಪರಿನ ಮೂಲಕ [illegible] ಕಳುಹಿಸಿದರೆ ಪುಸ್ತಕಗಳಿಗೆ ಕೊಡಬೇಕಾದ [illegible] ಕಳುಹಿಸಲ್ಪಡುವವು.

ಸಿ. ಯಂ. ಬಿದ್ದೈ

ಶ್ರೀರಾಮಲಿಂಗೇಶ್ವರಾಯನಮಃ

ಹಾರಂಗಿನಾಲೆ ಮಾತಾಪಿತೃಗಳ ವಾಕ್ಯಪರಿಪಾಲನೆ

ಓ ಜಮಿಾನ್ದಾರಿ ಸಂಘದ ಪುತ್ರರುಗಳಿರಾ! ತಾಯಿಯು ಮಕ್ಕಳನ್ನು ಪೋಷಿಸುವಂತೆ ಜಮಿಾನ್ದಾರಿ ಸಂಘವೆಂಬ ಮಾತೆಯು, ಬಹರ್ರೈತ ಕಷ್ಟನಿವಾರಣೆಗಾಗಿ ಈಗ ಸುಮಾರು ೧೦-೧೫ ವರ್ಷಗಳಿಂದ ಕಷ್ಟಪಟ್ಟು ಅಲ್ಪಸ್ವಲ್ಪ ಅನುಕೂಲವನ್ನು ಪಡೆದಿರುವುದು ಸರ್ವವೇದ್ಯವಾದ ಸಂಗತಿಯಾಗಿದೆ. ಈ ತಾಯಿಯು ಅನೇಕ ಮಕ್ಕಳನ್ನು ಹೆತ್ತು ರಾಜಕೀಯವಿಷಯಗಳಲ್ಲಿ ಪೂರ್ಣರಾಗಿ ತರಬೇತುಮಾಡಿ, ಶ್ರೀ ಕಾವೇರಮ್ಮನವರ ವರಪ್ರಸಾದದಿಂದ ದೊರೆತ ಕೌನ್ಸಿಲ್ ಸಭೆಗೆ ಸ್ವಲ್ಪ ಹೆಚ್ಚು ಕಡಿಮೆ ತನ್ನ ಪುತ್ರರೇ ಮೆಂಬರುಗಳಾಗುವಂತೆ ಆಶೀರ್ವಾದಿಸಿರುವುದು ಪಠಕವಾಕ್ಷ ಯೋಗ್ಯವೇ ಸರಿ!

ಓ ಕೌನ್ಸಿಲ್ ಮೆಂಬರುಗಳಿರಾ, ನಿಜವಾದ ಪುತ್ರರುಗಳಿರಾ, ದಯವಿಟ್ಟು ತಾಯಿಯ ಪ್ರಯತ್ನಗಳನ್ನೆಲ್ಲಾ ಜ್ಞಾಪಕಕ್ಕೆ ತಂದುಕೊಂಡು ಎಲ್ಲವೂ ನೆರವೇರುವಂತೆ ಘನ ಸರಕಾರದ ಚಿತ್ತವನ್ನು ಬಹರ್ರೈತರ ಕಷ್ಟಗಳ ನಿವಾರಣೆಯ ಕಡೆಗೆ ತಿರುಗುವಂತೆ ಮಾಡಿ ತಾವುಗಳಲ್ಲರೂ ಒಳಗಿನ ಮಾತ್ಸರ್ಯವನ್ನು ಬಿಟ್ಟುಕೊಟ್ಟು, ಸಹೋದರಭಾವದಲ್ಲಿ ಮಾತೃಸೇವೆಯಲ್ಲಿ ದುರಂಧರರಾಗಿ ಒಮ್ಮನಸ್ಸಿನಿಂದ ಮುಂದೆ ಹೆಜ್ಜೆ ಇಡುವಿರಾಗಿ ನನ್ನ ಮೊದಲನೆಯ ಪ್ರಾರ್ಥನೆ.

ಅಲ್ಲದೆ ಕೊಡಗಿನಲ್ಲಿ ಬಜ್ಜೆಪೇಟೆಯ ವಿನಹ ಬಾಕಿ ಎಲ್ಲಾ ಭಾಗಗಳಲ್ಲಿಯೂ ವ್ಯವಸಾಯಕ್ಕೆ ನೀರಿನ ವಸತಿಯು ಅನುಕೂಲವಾಗಿರುವುದು. ಇದೊಂದು ಮೂಲೆಯಲ್ಲಿ ಮಳೆ ಹೊಯ್ದರೆ, ಬೆಳೆ ಬೆಳೆಯಲು, ಇಲ್ಲವಾದರೆ, ಬಹರ್ರೈತರೆಲ್ಲಾ ಆಕಾಶದ ಕಡೆಗೆ ನೋಡುತ್ತಾ ಬಾಯಿ ಬಿಡಬೇಕಾಗುವುದು. ಹೀಗಾಗಿ ಈವರ್ಷ ಬಿತ್ತಿದ ಹಿಂಗಾರು ಬೆಳೆಯು ನೆಲದಿಂದ ಅಂಕುರಿಸಲೇ ಇಲ್ಲ. ಬಿತ್ತಿದ ಬೀಜವೂ ಕೂಡ ಹಾಳಾದುದಲ್ಲದೆ ಸರ್ಕಾರದ ಕಂದಾಯ ತೆರಲು ಸಹ ತಿಳಿಯದೆ ಹೊಟ್ಟೆ [illegible], ಗೃಹಕೃತ್ಯದ ಖರ್ಚಿಗೂ ನಿರ್ಗತಿಕರಾಗಿ ಬಾಯಿಬಾಯಿ ಬಿಡುತ್ತಿರುವ ಬಹರ್ರೈತರ ಗೋಳು ಪರಮಾತ್ಮನೊಬ್ಬನಿಗೇ ಗೊತ್ತು. ಇಂತಹ ಅನಾವೃಷ್ಟಿ ಕಾಲದಲ್ಲಿಯೂ ಸಹ ಘನ ಸರಕಾರದ ದೃಷ್ಟಿಯು ಈ ಪ್ರಾಂತ್ಯ ಬೀಳಲಾರದಷ್ಟು ಇಲ್ಲಿನ ನಿವಾಸಿಗಳಾದ ನಾವು [illegible]ಗಳಾಗಿರುತ್ತೇವೆ. ಅಂತು ಜಮಿಾನ್ದಾರಿ ಪುತ್ರರಾಗಿ ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳಾಗಿದ್ದು ಈಗ ಕೌನ್ಸಿಲ್ ಮೆಂಬರುಗಳಾಗಿರುವ ಮಹನೀಯರ [illegible] ಯಾವರೂ ಈ ಸಾರಿ ಕಣ್ಣು ಬೀಳದಿರಲಾರದು.

ಸೂರ್ಯ ಚಂದ್ರರ ಕಿರಣಗಳು, ಇದು ಒಳ್ಳೆಯ ಅಥವಾ ಕೆಟ್ಟ ಸ್ಥಳ ಎಂದು, ವಸ್ತುವೆಂದು ನೋಡದೆ ಎಲ್ಲೆಲ್ಲಿಯೂ ಪ್ರಕಾಶವನ್ನು ಬೀರುವ ರೀತಿ, ತಾಯಿಯು ತನ್ನ ಮಕ್ಕಳನ್ನೆಲ್ಲಾ ಸಮ [illegible] ಒಂದೇ ಸಮನಾಗಿ ಆಹಾರವನ್ನಿತ್ತು ಪೋಷಿಸುವಂತೆ [illegible] ಬಾಹುಗಳೋಪಾದಿಯಲ್ಲಿರುವ ಕಷ್ಟನಷ್ಟ [illegible] ಬಗಲಲ್ಲಿ ಸಿಕ್ಕಿಬಿದ್ದು ಅನಾರೋಗ್ಯ [illegible]ವಾಗಿ, ಈ ನಮ್ಮ ಕೊಡಗಿಗೆ ಕ್ಷಾಮಮಾತ್ರ [illegible] ಗಿಲ್ಲೋಪಾದಿಯಲ್ಲಿರುವ ಈ ಕಣಿವೆ [illegible] ನಿವಾಸಿಗಳನ್ನು ಸಹೋದರಭಾವದಿಂದ [illegible] ಅತ್ಯಂತ ಉಪಯುಕ್ತವಾಗಿಯೂ, [illegible]ಯೂ, ಕ್ಷಾಮಬಾಧೆಯನ್ನು ತಪ್ಪಿಸುವುದಾಗಿಯೂ [illegible] ಹೆಚ್ಚಾಗಿರಿಗೆ ಬೀಗಮುದ್ರೆಯ ರೂಪವಾಗಿಯೂ, ಬಹರ್ರೈತರಾಗಿ ನೆಂಸುತ್ತಿರುವ ನಿಮ್ಮ [illegible] ನಮ್ಮನ್ನು ಬಲ್ಲಿಗರನ್ನಾಗಿ ಮಾಡುವ [illegible]ವಾದ ಹಾರಂಗಿನಾಲೆಯ ಕೆಲಸವನ್ನು [illegible], ನಿವರಿ ಸರ್ಕಾರಕ್ಕೆ ಸಹೋದರ ಭಾವದಿಂದ [illegible]ಸುವ ಕೌನ್ಸಿಲ್ ಸಭೆಯೂ, ದುರುಪಯೋಗವಾಗಿ [illegible] ನಮ್ಮನ್ನು ಉದ್ಧಾರ ಮಾಡಬೇಕಾಗಿ [illegible]ವ, ಬಹರ್ರೈತನಡಲ್ಲಿರುವ ರೈತರೆಲ್ಲೊಬ್ಬ

[illegible] ಮಹನೀಯರುಗಳವರ ಸಮಕ್ಷಮದಲ್ಲೊಂದು ವಿನಂತಿ.

ಮಹನೀಯರೆ,

ಜನವರಿ ತಾರೀಖು [illegible] ಬೆಂಪಟಿನ [illegible] [illegible] ಜಿಗ್ಗಡಿ [illegible] ಈ ಮಾತ [illegible] ವಿಷಯದಲ್ಲಿ ಮೆ|| [illegible] ಮಾದಪ್ಪನವರು [illegible] ಸಿರುವದು ಸರಿಯಷ್ಟೇ. ವಾದವುಟ್ಟು [illegible] [illegible] ಹೊಡಿಯುವದು ಮತ್ತು ಕೊಡಗಿಗೆ ನಿ[illegible] ಮೇಲ್ಕಂಡ ಮಹಸ್ತರಿಗೆ ಆಪತ್ತಿಯಾಗಿ ಸಹ [illegible]ಡಗು ರಾಜರಕಾಲದಿಂದಲೇ ನಡದು ಬಂದು [illegible] ವಾಡಿಕೆಯಾಗಿ ನಡಿಯುತ್ತಾ ಇದೆ. [illegible] [illegible] ಎನ್ನುವಿನಲ್ಲು ಕೋಲು ಹೊಡಿಯು[illegible]

ಇದ್ದದು ಮುವತ್ತು ವರುಷದವರಿಗೆ ನಾಡುಕೋಲು ಯಾತಕ್ಕೋಸ್ಕರ ನಿಂತು ಹೋಗಿಯಿದ್ದಿತು ಎಂಬದು ಈ ಮೆ|| ಮಾದಪ್ಪನವರು ವಿವರಿಸುವದಿಲ್ಲ ಅವನ್ನು ವಿವರಿಸದೆ ಇರುವದು ನೋಡುವಾಗ ಈ ಮಾದಪ್ಪನವರಿಗೆ ಸ್ವಾರ್ಥ ದೇಶದ ನಡವಳಿಕೆ ಚನ್ನಾಗಿ ಅನುಭವ ಇದ್ದರೆ ಹೀಗೆ ಪ್ರಕಟ್ಟಿಸುತ್ತಿರಲಿಲ್ಲ. ಜಮಿಾನ್ ಹಂಡಿಸ ವಿಾಟಿಂಗ್‌ನಲ್ಲು ಈ ಸಂಚಾಯಿತ್ತಿಗೆ ತಿಳದು ಮಾನಸೀಮಾನರ್ ಸಹ ಹೀಗೆ ಇರುವಾಗ ಇದನ್ನೇ ಪುನಹ ಎತ್ತುತ್ತಾ ಇರುವದು ನ್ಯಾಯವೋ? ನಾಡು ಪರಂಬಿನ ಕೋಲು ಹೊಡಿಯುವದರಲ್ಲು ಮುಂದರಿಸುವದಲ್ಲದೆ ಬಾಕಿ ದೇಶದವರ ಕೆಲಸ ಅಂದರೆ ಪೂರು ದೇವರಲ್ಲಿ ಹಕ್ಕ ಚಂಗಲ್ಲ ಎಂಬ ಮುಂದು ಮುಕ್ತಿಯುವದನ್ನು ಸಹ ಏಕೆ ತೋರಿಸಿ ಇರುವದಿಲ್ಲ. ದೇವರ ಕೆಲ್ಸ ಮುಖ್ಯಸ್ಥರಾಗಿ ಇರಲೇ ಬೇಕೆಂತಲು ಎರಿಗೆ ತೆರಿಗೆ ತೆರಲಿಕ್ಕೆ ಬದ್ಧರಾಗಬೇಕೆಂತ ಧೂ ಇಂತ ಸಂಗ್ತಿಯಲ್ಲಿ ಬಹಳ ಪ್ರೀಯರಂತೆ ಬೋಲನೆ ಇದೆ. ಇದು ಯಾವ ಧರ್ಮವಾರ್ಗವೋ. ಒಂದು ಕೆಲ್ಸ ವಾಡುವಾಗ ಐಕ್ಯಮತ್ಯಂತ ಕಮ್ಮಿಯಿದ್ದರೆ ಬೇಡ ಅಲ್ಲವೋ. ಇದೇ ರೀತಿ ಜನಸಂಖ್ಯೆ ಕಮ್ಮಿಯಾದವರು ಮಾನವನ್ನು ಆಲೋಚಿಸಬಹುದು. ಪೂರ್ವಿಕರ ಮಂತಿಮೋರೆಯೇ ಇದ್ದೇನೆ ಎನ್ನು ಕಾಲರ್ ಬೂಟ ಬಟ್ಲರ್ ತಾವಿಟ್ಟ ಬಂದದರಿಂದ ಸ್ವದೇಶ ಧರ್ಮವನ್ನು ಹೋಗಲಾಡಿಸಬೇಕಾಗಿಯು ಉತ್ತಮಸ್ಥಿತಿಯನ್ನು ಹಿಡುಕಳಿಸುವದು ಮಾದಪ್ಪನವರ ಯಾವ ಗುಣಭಾವವೋ. ಕೊಟ್ಟು ವರಂಬುವಿಳದಲ್ಲು ನಿತಾ ದೇವಿಯು ವಾಸವಾಗಿ ನಿಂತು ಇರುವದರಿಂದಲೋ, ಒಂದು ಮಗು ಹುಟ್ಟಿತ್ತರೇ ಅದಿನದಲ್ಲು ನಾಮಕರಣವನ್ನು ಮಾಡುವದಲ್ಲವೆ. ಅವನ್ನು ಬದ್ಲಾಣೆಬೇಕಾದರೆ ಕಣಿಯನ್ನು ಜಾತಗಮಾಡುವಾಗ ಬದಲಾಯಿಸಬಹುದೋ. ಅವರವರ ಟೈಟಲ್ ಅವರವರಿಗೆ ಇದ್ದೇ ಇರುತ್ತೆ. ಮತಾಚಾರ ಗುರುಮಟ್ಟ ಮೂಲಧನವಲ್ಲವೇ.

(ಸಿ. ಯಂ. ಮುತ್ತಣ್ಣ.)

ದೇಶಬಾಂಧವರುಗಳಲ್ಲಿ ನನ್ನ ವಿನಂತಿ

ಮಹಾಶಯರೇ—ಈ ನಮ್ಮ ಕೊಡಗು ಸಂಸ್ಥಾನಕ್ಕೆ ಈಗ್ಯೆ ಹೊಸದಾಗಿ ಜಾರಿಗೆ ಬಂದಿರುವ ಕೌನ್ಸಿಲ್ ಜಮಿಾನ್ದಾರಸಂಘ ಗ್ರಾಮಾಭಿವೃದ್ಧಿ ಸಂಘ ಪ್ರಜಾಪ್ರತಿನಿಧಿಸಭೆಗಳಿಗೆ ಮೆಂಬರುಗಳಾಗಲು ಚುನಾವಣೆ ಒಗ್ಗೆ ಕೆಲವು ಪರದೇಶಸ್ಥರು ನಮ್ಮ ದೇಶದಲ್ಲಿ ಸರ್ಕಾರ ನೌಕರರಾದವರೂ ಮತ್ತು ಇತರ ದೊಡ್ಡ ಮನುಷ್ಯರೂ ಸಹ ಒಟ್ಟು ಚುನಾವಣೆ ನಡೆಯುವ ಎಲ್ಲಾ ತಾಲೋಕು ಹೆಡ್‌ಕ್ವಾರ್ಟರ್ ಸ್ಥಳಗಳಿಗೆ ವೋಟರುಗಳನ್ನು ಹಾಕಿಕೊಂಡು ಅತಿವೇಗವಾಗಿ ನಾಗಲೋಲಟವಂತೆ ಪ್ರಯಾಣ [illegible] ಎಲ್ಲಾ ಮಹನೀಯರುಗಳಿಗೆ ನನಗೆ [illegible]

[illegible]

ಎಂದು ನನ್ನ ಅಭಿಪ್ರಾಯ. ನಮ್ಮ ದೇಶದಲ್ಲಿ ನಾಡಿಗೊಂದು ಸರ್ಕಾರಿ ಸ್ಕೂಲ್ಗಳಿರುವುದು ಇದು ಎಲ್ಲರಿಗೂ ತಿಳಿದೇ ಇರುವಷ್ಟೆ. ನಾಲ್ಕು, ಐದು, ಆರು, ಏಳುವರುಷದ ಬಾಲಕ ಬಾಲಿಕೆಯರು ಮೂರು ನಾಲ್ಕು ಮೈಲ್ ದೂರ್ಸ್ಥಯಿಂದ ಸ್ಕೂಲಿಗೆ ವಿದ್ಯಾಭ್ಯಾಸಂಗಕ್ಕೆ ಬರುವುದಕ್ಕೆ ಹಳ್ಳ ಪಗೇರಿಗಳನ್ನು ಹಾಯ ಬರುವುದು ಅಸಾಧ್ಯವಾದ್ದರಿಂದ ಗ್ರಾಮಗಳಲ್ಲಿ ಪ್ರತಿಯೊಂದು ಸ್ಥಳದಲ್ಲಿ [illegible] ಜನ ಬಾಲಕಬಾಲಿಕೆಯರು ಸೇರತಕ್ಕ ಗ್ರಾಮದ ಮಧ್ಯಸ್ಥಳಗಳಿಗೆ ಸರ್ಕಾರಿ ಸ್ಕೂಲ್ ಯಾ ಗ್ರಾಂಟ್ ಇನ್‌ಏಡ್ ಸ್ಕೂಲ್ಗಳನ್ನಾಗಲಿ ಮೆಂಬರುಗಳು ಗೌರ್ನಮೆಂಟ್ ಆರ್ಡರ್ ಮೇರೆ ಪ್ರತಿಗ್ರಾಮಗಳಿಗೂ ಸ್ಕೂಲುಗಳನ್ನು ಇಡಿಸಬೇಕಾಗಿ ನಾನು ಇದರಿಂದ ಸರ್ವರಿಗೂ ವೇಧ್ಯಪಡಿಸುತ್ತೇನೆ. ಟಿ. ಬಿ. ಮುತ್ತಯ್ಯ.

ಕೂದಚೇರಿಗ್ರಾಮ, ಹಾಲಿ ಮೂಡಗೆರೆ ತಾಲೋಕು.

ಬಾಲೂರುಗ್ರಾಮ.

---

1. ಆಯ್ಯಾ ಸಂಪಾದಕರೆ! ನಮ್ಮ ಕೊಡಗು ಪತ್ರಿಕೆಯಲ್ಲಿ ಈ ಕೆಳಗೆ ನಮೂದಿಸಿದ ಬಾತ್ತಿಯನ್ನು ಪ್ರಕಟಿಸಲು ಸ್ವಲ್ಪ ಎಡೆ ಕೊಟ್ಟು ನಮ್ಮ ಕಿಗ್ಗಟ್ಟುನಾಡಿನ ಸರ್ವರಿಗೂ ತಿಳಿಯುವಂತೆ ಮಾಡಬೇಕಾಗಿ ಅಪೇಕ್ಷಿಸುತ್ತೇನೆ.

2. ಕಿಗ್ಗಟ್ಟುನಾಡಿನ ದೇಶಬಿತ್ತೈಕಿಗಳೆ! ನಮ್ಮ ತಾಲೋಕಿನಲ್ಲಿ ಕಳೆದ 1920 ನೆ ಇಸವಿಯಲ್ಲು ಪೊನ್ನಂಪೇಟೆಯಲ್ಲು ನಡೆದ ಕೊಡಗು ಜಮಿಾನುದಾರ ಸಂಘದ ವಿಾಟಿಂಗಿಗೆ ಸೇರುವ ದೇಶದ ಎಲ್ಲಾ ಮೆಂಬರುಗಳಿಗೂ ಊಟ ಉಪಚಾರ ಮತ್ತು ಚಪ್ಪರ ವಗ್ಯೆರೆಗಳಿಗೆ ನಮ್ಮ ತಾಲ್ಲೋಕಿನ ಬಹುಮಾನಾರ್ಥವಾಗಿ ನಮ್ಮ ತಾಲೋಕಿನ ಎಲ್ಲಾ ಜಮಿಾನ್‌ದಾರರಿಂದ ಚಂದ ವಸೂಲುಮಾಡಿ ಜಮಿಾನ್‌ದಾರ ಸಂಘದ ಎಲ್ಲಾ ಜನರಿಗೂ ಊಟ ಉಪಚಾರಗಳನ್ನು ನಮ್ಮ ಕೈಯ್ಯಲ್ಲಾದಮಟಿಗೆ ನಡಸಿದ್ದೇನೋ ನಿಜ. ಆದರೆ ವಿಾಟಿಂಗ್ ಮುಕ್ತಾಯವಾದ ನಂತರ ಮಿಕ್ಕಿದ ಸಾಮಾನುಗಳನ್ನು ನಮ್ಮ ತಾಲೋಕಿನ ಸ್ವಾಗತಸಮಿತಿ ಅಧ್ಯಕ್ಷರು ಮೆ|| ಮಸೆಯಪಂಡನಾಚಪ್ಪನವರ ರೂಬರೂಬು ಹರಾಜು ಮಾಡಲ್ಪಟ್ಟ ಸಾಮಾನುಗಳ ಕ್ರಯದ ಮೊತ್ತ ಎಷ್ಟು? ಅದು ಏನಾಯಿತು? ಯಾರ ಸ್ವಾಧೀನ ಇಡಲ್ಪಟ್ಟಿದೆ? ಅಥವಾ ಬ್ಯಾಂಕಿನಲ್ಲಿದೆಯೋ? ಬಡ್ಡಿ ಹ್ಯಾಗೆ? ಯಾವ ಬ್ಯಾಂಕಿನಲ್ಲಿ ಇಡಲ್ಪಟ್ಟಿದೆ? ಅಥವಾ ತಾಲ್ಲೋಕಿನ ಜನರ ಉಪಯೋಗಾರ್ಥವಾಗಿ ಪ್ರಯೋಗಿಸಲ್ಪಟ್ಟಿತೋ? ಬೇರೆ ಯಾವದಾದರೂ ಫಂಡು ಇಡಲ್ಪಟ್ಟಿದೆಯೋ? ಎಂಬದಾಗಿ ನಮ್ಮ ಚಂದಾದಾರಿಕೆಯ ಕೆಲವು ಮಹನೀಯರು ಅವರ ಪರಿಸರಿಗೆ ಸಂದೇಹದ ಪ್ರಸ್ತಾಪಮಾಡಿಕೊಳ್ಳುತ್ತಾ ಇದ್ದಾರೆ.

3. ಆದರೆ ಇದೇ ಸಂಘದ ವಾರ್ಷಿಕ ಜನರಲ್ ವಿಾಟಿಂಗು ಈ ವರ್ಷವೂ ಮೊದಲಿನಂತೆಯೇ ಪೊನ್ನಂಪೇಟೆಯಲ್ಲು ಆಗುವದಾದರೆ ಮೊದಲಿನಂತೆ ಊಟ ಉಪಚಾರ ವಿಾಟಿಂಗ್ ನಡಿಸಲಿಕ್ಕೆ ಇರುವ ಚಪ್ಪರ ವಗ್ಯೆರೆ ಆಗಬೇಕಾದರೆ ಚಂದಾ ವಸೂಲಿ ಎತ್ತಬೇಕಲ್ಲವೆ? ಮೊದಲಿನಂತೆಯೇ ಈ ವರ್ಷವೂ ಚಂದಾ ಎತ್ತಿ ಮಿಕ್ಕಿದ ಸಾಮಾನುಗಳನ್ನು ಹರಾಜುಮಾಡಿದಲ್ಲಿ ಕಳೆದಸಾರಿ ಮಿಕ್ಕಿದ ಹಣದ ಲೆಕ್ಕಾಚಾರ ಗೊತ್ತಿಲ್ಲದಂತೆ ಹಾಗ್ಯೆ ಕಾಣುವ ರೀತಿ ಆಗಬಹುದಾಗಿ ಅನೇಕರು ಬರವಸೆ ಇಲ್ಲದೆಯೂ ಚಂದಾ ವಸೂಲಿಗೆ ಕೊಡದೆಯೂ ತೋರುವದೆ ಯಾರು ಮುದ್ದಾಗಿ ಸಂಶಯಪಡಬೇಕಾಗಿದೆ.

4. ಅದ್ದರಿಂದ ಕಳೆದಸಾರಿ ಆದ ಸ್ವಾಗತ ಸಮಿತಿ ಅಧ್ಯಕ್ಷರವರಿಗಾಗಿ ಮೇಲ್ಕಂಡ ಹಣ ಎಷ್ಟು? ಏನಾಯಿತು? ಯಾರ ಸ್ವಾಧೀನ ಇಡಲ್ಪಟ್ಟಿದೆ? ಅಥವಾ ಯಾವ ಕೆಲಸಕ್ಕೆ ವಿನಿಯೋಗಿಸಲ್ಪಟ್ಟಿತು? ಎಂಬ ವಿವರವನ್ನು ನಮ್ಮ ಈ ಕೊಡಗು ಪತ್ರಿಕೆಯಲ್ಲು ಪ್ರಕಟ ಪಡಿಸಿದಲ್ಲಿ ನಮ್ಮ ತಾಲೋಕಿನ ಮುಂದಿನ ಕೆಲಸಕ್ಕೆ ತೊಂದರೆ ಬಾರದಂತೆಯೂ ಪ್ರತಿ ಒಬ್ಬರೂ ಸಂಶಯಪಡದಂತೆಯೂ ಆಗುತ್ತದೆ.

5. ಅದ್ದರಿಂದ 1920ನೇ ಇಸವಿಯಲ್ಲು ನಮ್ಮ ತಾಲೋಕಿನ ಪೊನ್ನಂಪೇಟೆಯಲ್ಲು ಆದ ಜಮಿಾನ್‌ದಾರ ಸಂಘ ಕಳೆದನಂತರ ಮಿಕ್ಕಿದ ಸಾಮಾನುಗಳನ್ನು ಹರಾಜುಮಾಡಿ ಬಂದ ಹಣವನ್ನು ಮೇಲ್ಕಂಡ ಯಾವ ರೀತಿ ಆಯಿತೆಂಬ ವಿವರವನ್ನು ಈ ಪತ್ರಿಕೆಯಲ್ಲು ಪ್ರಕಟಪಡಿಸಬೇಕಾಗಿ ಕೋರುತ್ತೇನೆ.

6. ಮೇಲ್ಕಂಡ ರೀತಿ ಹಣದ ಸಂಗ್ತಿಯನ್ನು ವಿವರ ಪ್ರಕಟಿಸದಲ್ಲು ನಮ್ಮ ತಾಲೋಕಿನ ಸರ್ವರಿಗೂ ತಿಳದು ಮುಂದಿನ ಅಭಿವೃದ್ಧಿಗೆ ತೊಂದರೆಯಾಗದಂತೆ ಆಗ ಬಹುದಾಗಿ ನಂಬಿರುವ ಜ. ಸ್ವ. ದ. ಒಬ್ಬ ಮೆಂಬರು

ಜರಿಮದಂಡ್ರ (ಉ. ನಂ.) ನಂಜಪ್ಪ.

ಕೊಡಗು ಜಮಾನದಾರರ ಸಂಘದವರಿಗೆ ಅಪೀಲು.

ಮಹನೀಯರೇ, ಈ ತಾರೀಖು ೨೮ ರಲ್ಲಿ ನಡದ ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ [illegible] ಕೊಡಗಿನ ಎಲ್ಲಾ ಭಾಗದ [illegible] ಉದ್ಯೋಗಸ್ಥರಿಗೂ, ಪಿಂಚಣಿದಾರರಿಗೂ [illegible] ಆದರೆ ಈ ಪತ್ರವು ಯಾರಿಗೆ, ಎಷ್ಟು ರೂಪಾಯಿ ಆದಾಯದವರಿಗೆ, ಮಾನಸ್ಥರೆಂದರೆ ಕೊಟ್ಟಮನೆಯವರಿಗೋ ಎಷ್ಟು ಒಟ್ಟು ಭೂಮಿ [illegible] ಎಷ್ಟು [illegible] ಭೂಮಿ ಅಂದರೆ [illegible] ದಲ್ಲಿ [illegible] ಯುದ್ಧ [illegible] ಪಿಂಚಣಿದಾರರಿಗೋ ? ಉದ್ಯೋಗಸ್ಥರೆಂದರೆ ಎಷ್ಟು ರೂಪಾಯಿ [illegible] ಎಷ್ಟು ರೂಪಾಯಿ [illegible] ಸರಕಾರದ [illegible] ಎಂಬ [illegible] ಕೊಟ್ಟಿಗೆ [illegible] ಪತ್ರಗಳನ್ನು [illegible]

[illegible]

ಈ ಮೇಲೆ ಪತ್ರಿಕೆಯನ್ನು [illegible] ಮನಸ್ಸನ್ನೂ [illegible] ಪಿಂಚಣಿದಾರರನ್ನೂ ಉದ್ಯೋಗಸ್ಥರನ್ನೂ [illegible]

[illegible]

ಉಬಿಯಂಡ [illegible]

* * *

ಅಯ್ಯಾ, [illegible] ಪ್ರೈವೇಟ್ ಸ್ಕೂಲಿ [illegible] ವಿದ್ಯಾಭಿವೃದ್ಧಿ [illegible]

[illegible]

ವಿದ್ಯಾಭಿಲಾಷಿ

ಕೊಡಗು ಗೌಡರ ವಿದ್ಯಾಭಿವೃದ್ಧಿ ನಿಧಿ ಸಂಘದ ಪ್ರೆಸಿಡೆಂಟರು ಮತ್ತು ಕಮಿಟಿ ಮೆಂಬರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,—

[illegible] 15 ನೆ [illegible]

ಆದುದರಿಂದ [illegible] ಈ ಕೊಡಗು ಪತ್ರಿಕೆಯ ಮೂಲಕ [illegible]

ಸಂಘದ ಮೆಂಬರು [illegible] ಮುದ್ದಪ್ಪ

FOR SALE.

A Small Pony Mare Good and Sound. Quiet Complete with Semi military Saddle, namdah, Double reins, Martingales etc, Rs 160 or nearest offer. Inspection any time.

Apply —

R. C Kothandramiah,
Mathikadu Estate,
4—3 Sunticoppa, COORG.

ಮಲಯಾಳ ವೈದ್ಯಶಾಲಾ

ಮಲಬಾರಿನ ನಂಬೀಶನ್ ಮತ್ತು ಕಂಪೆನಿ ಎಂಬ ಆಯುರ್ವೇದ ವೈದ್ಯಶಾಲೆಯಲ್ಲಿ ಒಂದು ಶಾಖೆಯು ವೀರರಾಜೇಂದ್ರಪ್ಯಾಟೆಯಲ್ಲಿ ತೆರೆದಿರುತ್ತೆ. ಇಲ್ಲಿ ಯಾವವಿಧದ ಖಾಯಿಲೆಯಾಗಿದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧಿ ಕೊಟ್ಟು ಗುಣಪಡಿಸಲ್ಪಡುತ್ತೆ. ಔಷಧದ ಚಾರ್ಜು ಬಹಳ ಕಡಿಮೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು

ನಾರಾಯಣನಂಬೀಶನ್,
ಆಯುರ್ವೇದ ವೈದ್ಯರು,
12—3 ವೀರರಾಜೇಂದ್ರಪ್ಯಾಟೆ

O. S. Association Magazine.

C. H SCHOOL,
MERCARA

Edited by MR. B. S. KUSHALAPPA B.A.,
Published under the distinguished Patronage of
T. J. TASKER Esq I C S
Commissioner of Coorg
and
Rao Bahadoor K CHENGAPPA B.A.,
District Magistrate of Coorg

No 2

January 1924, will be out in the 1st week of February 1924.

SUBSCRIPTION

Members of the Association	Rs. 1-0-0 Postage free
Non-members	Re. 1 0 0 Postage extra
Single copy	As 0 6 0 "

CONTENTS

1. A forgotten chapter from Coorg History
2. Confessions and advertisement of
3. A scene from a Ranger's life
4. Two! A tale for children
5. Swami Vivekananda—by a "Student."

etc., etc., etc.,

Only limited number of copies are published

To avoid disappointment

4—2 Register Your Orders.

For your requirements of high grade Arms, Ammunition, Wine and Spirits,

APPLY TO:—

K. C. COWELL & Co., Ltd.,
24—15 **MERCARA.**

ಪ್ರಕಟನೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್

ಕೋ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ

	ರೂ
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	6,820
ಜಮಾ ಬಂದ ಠೇವಣಾತಿ	30,849

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇ [illegible]

ಒಂದು ವರುಷ ಮಾಯಿದೆ ಅಥವಾ ಜಾಸ್ತಿ ಮಾಯಿದೆಯ ಠೇವಣಾತಿಗಳಿಗೆ ಶೇಕಡ ನೂರಕ್ಕೆ 5 ರ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ಮಾಯಿದೆಯ ಠೇವಣಾತಿಗಳಿಗೆ ಶೇಕಡ [illegible] 5 ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ

ಪ್ರೆಸಿಡೆಂಟರು — ಕೊಡಂದೆರ ಕುಟ್ಟಯ್ಯನವರು, ರಾಯ್ ಬಹದ್ದೂರ್
ಟ್ರೆಝರ್. — ಯು.ಎಂ. ಭುಜಂಗರಾಯರು. ಬಿ. ಎ ಬಿ ಎಲ್.
ಸೆಕ್ರೆಟರಿ. — ಸಿ. ಎಮ್. ವೆಂಕಪ್ಪಯ್ಯನವರು ಬಿ ಎ ಬಿ ಎಲ್.

ತಾರೀಕು 1—9—23

HEALTH IS WEALTH.

WANTED all to improve health strength and vitality and thus save our nation from physical degeneracy. Send half-anna stamp and get 13 specimen photographs with full particulars from

Director Physical Culture,
P.O Basavanagudi,
BANGALORE CITY

ಜೀವ ವಿಮೆ

[illegible] ಸಂಪಾದನೆಯ [illegible] ಉಂಟಾಗದ [illegible] ನ್ನು [illegible] ವುದೇ ಜೀವವಿಮೆ

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬದ ಜೀವನಾಧಾರಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ.

ಅತಿ ಕಡಿಮೆ ದರದಲ್ಲಿ ಯಾವ ಲೋಪವೂ ಬಾರದಂತೆ ಕ್ಷಿಪ್ರದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ಮೈಸೂರು ಸರಕಾರದ ಭದ್ರತೆಯುಳ್ಳ ಜೀವವಿಮೆ [illegible]

[illegible] ಕುಟುಂಬದ ಜೀವನ [illegible] ಕಾಲವಾಗಿ ಹಣವನ್ನು ಒದಗಿಸಿ ಸ್ಥಿರಾಸ್ತಿಗಳನ್ನು ಕೂಡು ಕಟ್ಟು ದೇಶದ ಆರ್ಥಿಕ ಸಂಪತ್ತನ್ನು (Economic Condition) ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೆ!

ಲೈಫ್ ಇನ್ಶ್ಯುರನ್ಸ್ ಆಕ್ಟಿನ ಮೇರೆ ಇಂಡಿಯಾ ಗವರ್ನಮೆಂಟ್ ಸೆಕ್ಯುರಿಟಿಗಾಗಿ ಸಲ್ಲಬೇಕಾದ 12 ಲಕ್ಷ ರೂಪಾಯಿ ಸೆಕ್ಯುರಿಟಿಗಾಗಿಯೂ ಮೈಸೂರು ಗವರ್ನಮೆಂಟ್ ಸೆಕ್ಯುರಿಟಿಗೆ ಸಲ್ಲಬೇಕಾದ 1 ಲಕ್ಷ ರೂಪಾಯಿ ಸೆಕ್ಯುರಿಟಿಗಾಗಿಯೂ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನ ಮದ್ರಾಸಿನ ಶಾಖೆಯಲ್ಲು 1 ಲಕ್ಷ ಗವರ್ನಮೆಂಟ್ ಆಫ್ ಇಂಡಿಯಾ ಸೆಕ್ಯುರಿಟಿಯನ್ನು ಅರ್ಧ ಲಕ್ಷ ಮೈಸೂರು ಸೆಕ್ಯುರಿಟಿಯನ್ನು ಡಿಪಾಜಿಟ್ಟಾಗಿ ಇಟ್ಟಿರುತ್ತೆ. ಬಾಕಿ ಒಂದು ಲಕ್ಷ ಇಂಡಿಯಾ ಗವರ್ನಮೆಂಟ್ ಸೆಕ್ಯುರಿಟಿಗೆ ಬ್ಯಾಂಕ್ ಮೂಲಕ ಏರ್ಪಾಡು ಮಾಡಿರುತ್ತೆ.

ಬಿ. ಎಂ. ಆರಾಧ್ಯ,
ಲೈಫ್ ಅಂಡ್ ಮ್ಯಾರೇಜ್ ಆಫೀಸ್ ಮೈಸೂರು

Printed & Published by D. S. Krishnaswamiengar Proprietor, at Sreenivas Electric Press, Mysore "for Kodagu" Ltd., Mercara—8 2 1924.

If not delivered please return to "Kodagu Office, Mercara"
Reg. No. M. 1550.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾನೀತಿ ಪ್ರಯುಕ್ತತಃ । ಏಕಾತ್ಮ್ಯೇನದೇಶಾನಾಂ ಸುಸ್ಥಿರಾ ರಾಜ್ಯಸಂಪದಃ ॥

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು. " ಎಡಿಟರ್ ಪಂದ್ಯಂಶ ಐ ಜ್ಯೇಷ್ಠ

ಸಂಪುಟ ೩] ಕೊಡಗು, ಸನ್ ೧೯೨೪ ನೇ ಇಸವಿ ಫೆಬ್ರವರಿ, ತಾ॥ ೧ನೆ ನೆಯ ಶುಕ್ರವಾರ. [ಸಂಚಿಕೆ ೩೭

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನ್ನಡ ಪ್ರಿಂಟಿಂಗ್ ರೂಲಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ಇದ್ದರೂ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ವಂತೆ ಜಾಗ್ರತೆಯಾಗಿಯೂ ಸುಲಭಛಾರ್ಜಿಗೂ ಮಾಡಿ ಕೊಡುತ್ತೇವೆ

Srinivas Electric Press,
MYSORE

The Saraswathi Publishing Company
ಶಾರದಾಗ್ರಂಥಮಾಲಾ.

ಈ ಗ್ರಂಥಮಾಲೆಯಲ್ಲಿ ಭಾರತಮಹಿಳೆಯರ ಇತರ ವಿಷಯಾಭ್ಯುದಯಗಳನ್ನು ಬೋಧಿಸತಕ್ಕ ಗ್ರಂಥಗಳು ಆಗಾಗ್ಗೆ ಪ್ರಕಟಿಸಲ್ಪಡುವವು ಇದುವರೆಗೆ ಪ್ರಕಟವಾಗಿರುವ ಗ್ರಂಥಗಳು —

	ರೂ	ಆ	ಪೈ
ಪ್ರಿಯಂವದೆ (ವರದಕ್ಷಿಣೆಯಿಂದಾಗುವ ಕಷ್ಟನಷ್ಟಗಳು)	0	6	0
ಸ್ನೇಹಲತೆ (ವಂಗಕನ್ಯೆಯ ಚರಿತ್ರೆ)	0	10	0
ಸಿಭಾಗ್ಯವತಿ (ಹಿಂದೂವಿಧವೆಯ ಶೋಚನೀಯಾವಸ್ಥೆ)	0	12	0
ಶಿವ ಕಲಿ (ಸಂಘಟಿತ ಸುಧಾರಣೆಯ ನಾಟಕ)	0	8	0
ಬಂದೂಭಾಗ್ಯೋದಯ (ನಾಟಕ)	0	4	0
ದರ್ಪಭಂಗ (ನಾಟಕ)	0	4	0
ಹುಡುಗರು ಹಾಡ ಗಿಯರು (ನಾಟಕ)	0	1	0

ಈ ಎಲ್ಲಾ ಪುಸ್ತಕಗಳನ್ನೂ ಒಟ್ಟಿಗೆ ತರಿಸುವವರಿಗೆ ರೂಪಾಯಿ 2—12—0 ಗೆ ವಿ ಪಿ ಪಾರ್ಸಲ್ಲಿನಲ್ಲಿ ಕಳಿಸ ಲಾಗುವುದು ಪ್ರಿಂಟಿಸಲ್ ರ ಗ್ರಂಥಗಳು [illegible]

ಸರಸ್ವತಿ

ಸಿತ್ರಮವರ್ಗದ ಶ್ರೇಷ್ಠವಾದ ಕನ್ನಡ ಮಾಸಪತ್ರಿಕೆ

ನಾಲ್ಕನೆಯ ಸಂಪುಟದ ಪ್ರಥಮ ಸಂಚಿಕೆಯು ಈ ತಿಂಗಳ ಮೊದಲ ವಾರದಿಂದ ಪ್ರಾರಂಭವಾಗಿರುವುದು ಇದರಲ್ಲಿ ಬಾಲಕಿಯರಿಗೂ ಸ್ತ್ರೀಯರಿಗೂ ತಿಳಿಯುವಂತಹ ಸುಲಭವಾದ [illegible] ನಾಟಕ ಕಾದಂಬರಿಗಳೂ ಮುಂತಾದ [illegible] ಲೇಖನಗಳೂ ಪ್ರಕಟಿಸಲ್ಪಡುವವು ಹೊಸದಾಗಿ ಚಂದಾದಾರರಾಗತಕ್ಕವರು ಚಂದಾಹಣವನ್ನು ಮುಂಗಡವಾಗಿ ಕಳುಹಿಸಬೇಕು. ಗ್ರಂಥಮಾಲೆಯ ಪ್ರಕಟಣೆಗಳಲ್ಲಿ ಒಂದು ಪುಸ್ತಕವು ಬಹುಮಾನವಾಗಿ ಕೊಡಲ್ಪಡುವುದು ಇಷ್ಟಪಟ್ಟವರಿಗೆ ಮಾದರಿ ಸಂಚಿಕೆ ಉಚಿತವಾಗಿ ಕಳುಹಿಸಲ್ಪಡುವುದು.

ವಾರ್ಷಿಕ ಚಂದಾ ರೂಪಾಯಿ 3—0—0 ಮಾತ್ರ.

SARASWATHI PUBLISHING CO.,
Post Box No 57. Bangalore City

HEALTH IS WEALTH

WANTED all to improve health [illegible]gth and vitality and thus save our [illegible]n from physical degeneracy Send [illegible] anna stamp and get 13 specimen [illegible]graphs with full particulars from

Director Physical Culture,
P O Basavanagudi,
BANGALORE CITY

For your requirements of high grade Arms, Ammunition, Wine and Spirits,
APPLY TO:-
DOWELL & Co., Ltd.,
MERCARA.

ಸ್ಪೆನ್ಸರ್ ಕಂಪನಿಯ ಸಾಮಾನುಗಳ ಕ್ರಯ.

ಉಗ್ರಾಣ ಸಾಮಾನ್.

ಪ್ರೂನ್ಸ್ ಪರ್ ಪೌಂಡ್ (Prunes per lb)	0	14	0
ಫ್ರೆಷ್ ಹೆರಿಂಗ್ಸ್ (Fresh herrings)	0	7	0
ಸನ್‌ಲೈಟ್ ಸಾಬೂನ್ (Sunlight Soap)	1	4	0
ಟಾಫೀ ಪೌಂಡ್ (Toffee per lb)	1	14	0
ಸ್ವೀಟ್ಸ್ ಪೌಂಡ್ (Sweets [illegible])	0	11	0
ಕಳ್ಳು			
ಓಲ್ಡ್ ಹೈಲ್ಯಾಂಡ್ ಮಾಲ್ಟ್ ವಿಸ್ಕಿ (Old Highland Malt Whisky)	6	0	0
ಲಾ ರುಫಿ ಬ್ರಾಂಡಿ (La Rupe Brandy)	6	0	0
ಮಾರ್ಟೆಲ್ಸ್ ಸ್ಪೆಷಲ್ ಬ್ರಾಂಡಿ (Martell's Special Brandy)	6	7	0
ಆಟದ ಸಾಮಾನು			
ಕ್ರಿಕೆಟ್ ಬೆಂಡು ಒಂದಕ್ಕೆ (Cricket Ball)		5	0
ಟೆನ್ನಿಸ್ ಚೆಂಡ್ ಡಜನ್ (Tennis Balls per dozen)	21	4	0

SPENCER & Co Ltd
Mercara and Pollibetta, Coorg

[24—16]

BUMPER CROPS
Always follow on application of our fertilisers

ದೊಡ್ಡ ಫಸಲು ಫಲ

ನಿಶ್ಚಯವಾಗಿ ನಮ್ಮ ಗೊಬ್ಬರ ಹಾಕುವುದರಿಂದ [illegible]

ನಮ್ಮ ಕಾರ್ಖಾನೆಯಲ್ಲಿ ತಯಾರಾದ [illegible] ಹೊಸ (fresh) ಗೊಬ್ಬರ ತಯಾರಾಗುತ್ತದೆ

Siddeek's Mannure Works
24—1 MERCARA

ಜೀವವಿಮೆ

ಸಂಸಾರಿಗಳು ಕುಟುಂಬಗಳಲ್ಲಿ ಸಂಪಾದಿಸುವ ಮನುಷ್ಯನು ಮೃತಪಟ್ಟರೆ ಉಂಟಾಗಬಹುದಾದ ತೊಂದರೆಗಳನ್ನು ನಿವಾರಿಸುವುದೇ ಜೀವವಿಮೆ

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬದ ಜೀವನಾಧಾರಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ

ಅತಿ ಕಡಿಮೆ ದರದಲ್ಲಿ ಯಾವ ಲೋಪವೂ ಬಾರದಂತೆ ಕ್ಷಿಪ್ರದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದದ್ದೂ ಮೈಸೂರಿನ ಸರಕಾರದ ಪದ್ಧತಿಯುಳ್ಳ ಜೀವವಿಮೆ ಕಂಪೆನಿ

ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ಸಾಲವಾಗಿ ಹಣವನ್ನು ಒದಗಿಸಿ ಸ್ಥಿರಾಸ್ತಿಗಳನ್ನೂ ಕೊಂಡು ಕೊಟ್ಟು ದೇಶದ ಆರ್ಥಿಕ ಸಂಪತ್ತನ್ನು (Economic Condition) ವೃದ್ಧಿಗೊಳಿಸುವ ಸಂಸ್ಥೆಯಾದದ್ದೂ ಇದೊಂದೇ!

ಲೈಫ್ ಇನ್ಶೂರೆನ್ಸ್ ಆಕ್ಟಿನ ಮೇರೆ ಇಂಡಿಯಾ ಗವರ್ನಮೆಂಟ್ ಸೆಕ್ಯೂರಿಟಿಗಳಿಗೆ ಸಲ್ಲಬೇಕಾದ 12 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿಗೆ ಸಲ್ಲಬೇಕಾದ 1 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನ ಮದ್ರಾಸಿನ ಶಾಖೆಯಲ್ಲಿ 1 ಲಕ್ಷ ಗವರ್ನಮೆಂಟ್ ಆಫ್ ಇಂಡಿಯಾ ಸೆಕ್ಯೂರಿಟಿಯನ್ನು ಅರ್ಧಲಕ್ಷ ಮೈಸೂರು ಸೆಕ್ಯೂರಿಟಿಯನ್ನು ಠೇವಣಿ ಇಟ್ಟಿರುತ್ತೆ ಬಾಕಿ ಒಂದು ಲಕ್ಷ ಇಂಡಿಯಾ ಗವರ್ನಮೆಂಟ್ ಸೆಕ್ಯೂರಿಟಿಗೆ ಬ್ಯಾಂಕ್ ಮೂಲಕ ಏರ್ಪಾಡು ಮಾಡಿರುತ್ತೆ.

ಬಿ. ಎಲ್. ಆರಾಧ್ಯ,
ಲೈಫ್ ಅಂಡ್ ಪ್ಲ್ಯಾನೇಜ್ ಆಫೀಸ್ ಮಡಿಕೇರಿ

ಮುಲ್‌ಯಾಳ್ ವೈದ್ಯಶಾಲಾ

ಮಲಬಾರಿನ ನಂಬೀಶನ್ ಮತ್ತು ಕಂಪೆನಿ ಎಂಬ ಆಯುರ್ವೇದ ವೈದ್ಯಶಾಲೆಯಲ್ಲಿ ಒಂದು ಶಾಖೆಯು ವೀರರಾಜೇಂದ್ರಪೇಟೆಯಲ್ಲಿ ತೆರೆದಿರುತ್ತೆ ಇಲ್ಲಿ ಯಾವವಿಧದ ಖಾಯಿಲೆಯಾಗಿದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧಿ ಕೊಟ್ಟು ಗುಣಪಡಿಸಲ್ಪಡುತ್ತೆ ಔಷಧದ ಚಾರ್ಜು ಬಹಳ ಕಡಿಮೆ ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು

ನಾರಾಯಣನಂಬೀಶನ್,
ಆಯುರ್ವೇದ ವೈದ್ಯರು,
ವೀರರಾಜೇಂದ್ರಪೇಟೆ

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕು ಲಿಮಿಟೆಡ್

ಕೋ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ

	ರೂ
ಶೇರ್ ಬಂಡವಾಳ	50 000
ವಸೂಲಾದ ಶೇರ್ ಮೊಬಲಗು	6 820
ಜಮಾ ಬಂದ ಠೇವಣಾತಿ	30,849

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು

ಒಂದು ವರುಷ ವಾಯಿದೆ ಅಥವಾ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದೊರೆಯುತ್ತೆ

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟು ಮಾಡುತ್ತಾರೆ.

ಪ್ರೆಸಿಡೆಂಟರು — ಕೂಡಂಡೆರ ಕುಟ್ಟಯ್ಯನವರು, ಬಿ.ಏ., ರಾವ್ ಬಹದ್ದೂರ್

[illegible] ಏರ್ಪಾಡು ಮಾಡಿದೆಯೂ ಇರುವುದು ನೋಡಿ ದರೆ ಯಾರ ಮನಸ್ಸು [illegible] ಸೇರಿ ಬತ್ತದಲ್ಲಿ ಅಂದಾಜು 25 30 ಹುಡುಗರಿರುವರು. ಸದರಿ ಹುಡುಗರೂ ಸಹ ತೃಯವಾಗಿ ಮಲಗಲಿಕ್ಕೆ ಸ್ಥಳವಿಲ್ಲದೆ ಮಲಗುವುದರ ವಿಷಯ ಹುಡುಗರು ಸಂಕಟಪಡುವದನ್ನು ನೋಡಿ ನಾನು ಬಹಳ ಚಿಂತಾಕ್ರಾಂತನಾದನು. ಕೆಲವು ಹುಡುಗರು ಮಂಚದಮೇಲೂ, ಕೆಲವರು ನಂ[illegible] ಚದರಗಳಲ್ಲೂ, ಕೆಲವರು ನೆಲದ ಕೆಲವು ಮೂಲೆಗಳಲ್ಲಿ [illegible] ಕೆಲವರು ಸ್ಟೋರ್ ರೂಮಿನಲ್ಲಿ ನೆಲದಮೇಲೆ ಹಾಸಿಗೆ ಹಾಕಿಕೊಂಡು ಮಲಗಿರಲು [illegible] ವಿದ್ಯಾರ್ಥಿಗಳು ವಿದ್ಯೆ ಕಲಿತು ಅರೋಗ್ಯಸ್ಥರಾಗಿದ್ದಾರು? ಇದನ್ನು ಸ್ಕೂಲ್ ಇನ್ಸ್‌ಪೆಕ್ಟರ್ ಮುಂತಿನವರು ಈವರೆಗೂ ತೊಂದರೆ ತೆಗೆದುಕೊಂಡು ಕೆಲಸಮಾಡಿಸದ ಬಾಬಿನಲ್ಲಿ [illegible] ಸರಿ [illegible] ಜಾಗವು ಬೋರ್ಡಿಂಗಿಗೆ [illegible] ಸ್ಕೂಲಿನ ಭೂಮಿ ಸಹ ಹತ್ತರದಲ್ಲಿ ಇರುವದರಿಂದ ಅದನ್ನು ಬೋರ್ಡಿಂಗ್‌ಗೆ [illegible] ಸಂಸ್ಥೆಯು [illegible] ಒಳ್ಳೆಯದೆಂದು ನಾನು ಅಭಿಪ್ರಾಯಪಡುತ್ತೇನೆ. ಈಗ ಇರುವ [illegible] ನ್ಯಾಯವಾಗಿ [illegible] ಇಳಿಸಿ ದುರಸ್ತುಮಾಡಿದರೆ ಅಂದಾಜು 50-60 ಹುಡುಗರ ಮೇಲ್ಪಟ್ಟು ಬೋರ್ಡಿಂಗಿನಲ್ಲಿದ್ದುಕೊಂಡು ತಮ್ಮ [illegible] ವಿದ್ಯಾಭ್ಯಾಸವನ್ನು ಹರಕತ್ತು ಇಲ್ಲದೆ ಕಲಿಯಬಹುದು

[illegible]

ಕೊಡಗು ಜಮೀನ್ದಾರರ ಸಂಘದವರಿಗೆ ವಿನಂತಿ

ಮಹಾನುಭಾವರೇ ಕೊಡಗು ಪತ್ರಿಕೆಯಲ್ಲಿ [illegible] ದಿ ಗುತ್ತಿಗೆ ಪಡೆದವರ ಸಾಲಕ್ಕಾಗಿ ಜಾಮೀನ್ ನಿಲ್ಲುವ ಬಾಬಿನಲ್ಲಿ ಒಂದು ಕಾಲುವದ ನೋಡಿದೆನು. ಅದೇನೋ ಸಹಜವಾದ ಸಂಗತಿಯಾಗಿದೆ. ಸದರಿಮೇರೆ [illegible] ದಿ ಗುತ್ತಿಗೆ ತೆಗೆದವರಿಗೆ ಜನ್ಮದ (ಹಿಲ್ಪು) ಭೂಮಿಯುವ [illegible] ಬೇಕಾಗುವಾದ ಪೂರವಣೆ [illegible] ಜಾಮೀನ್ ನಿಂತು ಲೈಸನ್ಸ್‌ದಾರನು [illegible] ಜಾಮೀನದಾರನ ಹಿಡುವಳಿ [illegible] ಗ್ರಾಮಸ್ಥರಾದ [illegible] ಗ್ರಾಮದ [illegible] ಅವರು ಮೂರು ಲಕ್ಷ [illegible] ಗಳಿಗೆ ಕೊಂಡುಕೊಂಡಿದ್ದಾರೆ. ಕೊಡಗುದೇಶದಲ್ಲಿ ಹುಟ್ಟಿ ಬೆಳೆದ ಜಮೀನ್ [illegible] ಮಾಡಿಕೊಂಡ (Credit) ಪರಸ್ಪರ ಲೇವಾದೇವಿ ಸಂಘಗಳಲ್ಲಿ ಸಾಲ ಹೊಂದಿ [illegible] ವಾಗಿ ಜನ್ಮದ (ತಮ್ಮ ಜಮ್ಮದ) ಭೂಮಿಯನ್ನು ಸಘವರಿಗೆ ಗಿರ್ವಿ [illegible] ಪಾಹೇಬರವರ [illegible] ಹೊಸ ಗಿರ್ವಿ [illegible] ದೇಶಿಯರ ಈ ದೇಶಕ್ಕೆ [illegible] ಗುತ್ತಿಗೆ ಮತ್ತು [illegible] ಸಾಹುಕಾರಗಾದರೆ [illegible] ಸಾಧ್ಯವೆ [illegible] ಜನ್ಮದ ಭೂಮಿಯನ್ನು [illegible] ವಿರೋಧವಾಗಿ ಗಿರ್ವಿ [illegible] ಹರಾಜು ಮಾಡಿ [illegible] ಜೀವನ [illegible] ಭಂಗವಾಗುವದು ಯಾವ ಧರ್ಮ? [illegible] ಮುಂಚಿನ ರಾತ್ರಿ [illegible] ಗಿರ್ವಿ [illegible] ಹರಾಜುಮಾಡಿದರೆ [illegible] ಇರುವುದು? [illegible] ಜಾಮೀನು [illegible] ಗುತ್ತಿಗೆ ಹರಾಜಿನಲ್ಲಿ [illegible] ಗಿರ್ವಿ [illegible] ಮುಂದಿನ [illegible] ಇಲ್ಲಿಯೇ [illegible] ಸಂಗತಿಯನ್ನು ಕೊಡಗು ಜಮೀನ್ ದಾರರ ಸಂಘದವರು ಸರಕಾರದವರಿಗೆ ಕೇಳಿ ಹಾಗೆ ಮುಂಚಾಗಿ [illegible] ಈಗ ಬರಾ [illegible] ಸರಕಾರಕ್ಕೆ ಇರುವುದು [illegible] ಪ್ರೀತಿ ವಾತ್ಸ ಈ ಸಂಘಕ್ಕೆ ಸೇರಲು ಪ್ರೋತ್ಸಾಹ [illegible] ಈ ಬಾಬಿನಲ್ಲಿ [illegible] ಇಲ್ಲದೆ [illegible] ವಿನಂತಿ

"ದೇಶಹಿತೈಷಿ"

ಶ್ರೀ ರಾಮಲಿಂಗೇಶ್ವರ ಸಹಾಯಕ ಜಮೀನ್ದಾರಿ ಸಂಘದಿಂದ

ಇದಲ್ಲವೇ ಉದಾರಗುಣ! ಮಹಾತ್ಮರೆನಿಸಿ ಜನಿಸಿ ದೇಶಸೇವೆಯನ್ನು ಮಾಡುವವರ ಲಕ್ಷಣ!

ಕಣ್ವ ಹೋಬಳಿಯಲ್ಲಿ ಶ್ರೀ ರಾಮಲಿಂಗೇಶ್ವರ ಸಹಾಯಕ ಜಮೀನ್ದಾರಿ ಸಂಘವು ಸ್ಥಾಪಿಸಲ್ಪಟ್ಟು ಬಾಲ್ಯದಲ್ಲಿರುವುದು ಸರ್ವರಿಗೂ ತಿಳಿದ ಸಂಗತಿಯಾಗಿದೆ. ಈ ತನ್ಮಧ್ಯೆ ಸದರಿ ಸಂಘದವರ ಪುಣ್ಯಪ್ರಭಾವದಿಂದ ಮ॥ ರಾ॥ ಹೈಕೋರ್ಟು ವಕೀಲ್ ನಾಗರತ್ನಪಿಳ್ಳೆ ಬಿ. ಎ. ಬಿ. ಎಲ್. ರವರು ಸದರಿ ಸಂಘಕ್ಕೆ ದಯಮಾಡಿಸಿ ಇಲ್ಲಿನ ರೈತರ ಕಷ್ಟವನ್ನು ನೋಡಿದವರಾಗಿ ಈ ಹೋಬಳಿಗೆ ನಾಲೆ ಇಲ್ಲದಿರುವುದೇ ಇಲ್ಲಿಯ ಜನರ ಬಡತನಕ್ಕೂ ಕಷ್ಟನಷ್ಟಗಳಿಗೂ ಕಾರಣವೆಂದು ತಿಳಿದು, ತಮ್ಮ ಘನವಾದ ಚಿತ್ತವನ್ನು ದೇಶಸೇವೆಯ ಕಡೆಗೆ ತಿರುಗಿಸಿ ಈ ಹಾರಂಗಿ ನಾಲೆಗಾಗಿ ಚೀಫ್ ಕೋರ್ಟು ಮತ್ತು ನ್ಯಾಸರಾಯಿ ಕೌನ್ಸಿಲ್‌ವರೆಗೂ ತಾವು ಪ್ರಯತ್ನಪಟ್ಟು ನೋಡುವುದಾಗಿಯೂ ಇದಕ್ಕಾಗಿ ರೈತರು ಧನಸಹಾಯ ಮಾಡುವುದಾಗಿಯೂ ಪರಸ್ಪರ ವಾಗ್ದಾನವಾಗಿರುವುದು ಸರ್ವರಿಗೂ ತಿಳಿಯದ ವಿಷಯವಾಗಿರುವುದಿಲ್ಲ.

ಸದರಿಯವರು ಕೈಗೊಂಡ ಪ್ರತಿಯೊಂದರಲ್ಲೂ, ಅಲ್ಲವೆ ನಮ್ಮಗಳ ಪ್ರಾಚೀನ ಫಲದಿಂದಲೋ ಮೇಲ್ಕಂಡ ಸೌಕರ್ಯಗಳನ್ನು ಇಲ್ಲಿಯೇ ಒದಗಿಸಿಕೊಳ್ಳುವಂತೆ ನಮ್ಮ ದೇಶಕ್ಕೆ ಕೌನ್ಸಿಲ್ ಸಭೆಯು ದೊರೆತುದರ ಅನುಕೂಲಗಳನ್ನು ಎಷ್ಟು ಬರೆದರೂ ಸಾಲದಾಗಿದೆ. ಸದ್ರಿ ಸಭೆಯು ದೊರೆತಕೂಡಲೇ ಹೈಕೋರ್ಟು ವಕೀಲ್ ಮ॥ ರಾ॥ ನಾಗರತ್ನಪಿಳ್ಳೆಯವರು ಕಳೆದ ಡಿಸೆಂಬರ್ 10 ರಲ್ಲಿ ನಡೆದ ಮೇಲ್ಕಂಡ ಸಂಘದ ವಿಷಯಕ್ಕಾಗಿ ದಯಮಾಡಿಸಿ ಕೌನ್ಸಿಲ್ ಸಭೆಯಿಂದ ಉಂಟಾಗತಕ್ಕಂಥಾ ಅನುಕೂಲಗಳನ್ನು ರೈತರೆಲ್ಲರಿಗೂ ವಿವರಿಸಿ ತಾವು ಮೊದಲು ಯೋಚಿಸಿದಂತೆ ಸದ್ಯದಲ್ಲಿ ಚೀಫ್ ಕೋರ್ಟು ಮತ್ತು ನ್ಯಾಸರಾಯಿ ಕೌನ್ಸಿಲ್‌ವರೆಗೆ ಹೋಗಿ ಕ್ರಮಪಡುವ ಅವಶ್ಯವಿರುವುದಿಲ್ಲವಾಗಿಯೂ ಸದರಿ ಸಭೆಯಿಂದಲೇ ಅಂಥಾ ಸೌಕರ್ಯಗಳನ್ನು ಇಲ್ಲಿಯೇ ಒದಗಿಸಿಕೊಳ್ಳಬಹುದಾಗಿಯೂ ಹಾಗೆ ನಾಲೆಯು ಏರ್ಪಡಿಸಿಗಾಗಿ ತಾವು ಒಬ್ಬ ರೈತರೋಪಾದಿಯಲ್ಲಿ ಕೌನ್ಸಿಲ್ ಸಭೆಯ ಒಳಗೂ ಹೊರಗೂ ಇದ್ದು ತಮ್ಮ ಸರ್ವಪ್ರಯತ್ನವನ್ನು ನಡೆಯಿಸುವುದಾಗಿಯೂ ಹಾಗೆ ದೇಶದಿಂದ ಹೊರಗೆ ಹೋಗದಂತೆ ಸದರಿ ಸಭೆಯಿಂದಲೇ ಹಾರಂಗಿನಾಲೆಯು ಪೂರ್ತಿಯಾದ ಪಕ್ಷದಲ್ಲಿ ರೈತರು ತಮಗೆ ಮಾಡುತ್ತೇವೆಂದು ಹೇಳಿದ್ದ ಧನಸಹಾಯವು ತಮಗೆ ಬೇಕಾಗಿಯೂ ರೈತರ ಕಷ್ಟವನ್ನು ನೋಡಿ ಸದರಿ ಧನವನ್ನು ಅವರಿಗೇ ಮುಫತ್ತಾಗಿ ಬಿಟ್ಟುಬಿಟ್ಟಿರುತ್ತೇನೆಂಬದಾಗಿ ನೆರೆದಿದ್ದ ಸಭೆಯಲ್ಲಿ ಎಲ್ಲರ ಮನಸ್ಸಂತೋಷವಾಗುವಂತೆ ಘಂಟಾಘೋಷವಾಗಿ ಪ್ರಕಟಮಾಡಿದರು. ಈ ರೀತಿಯಲ್ಲಿ ಪ್ರತ್ಯಪೇಕ್ಷೆಯನ್ನು ತೊರೆದು, ಬಡರೈತರ ಕಷ್ಟವನ್ನು ನೋಡಿ ಮರುಗಿ ಸರ್ವಪ್ರಯತ್ನದಿಂದಲೂ ನಾಗರತ್ನಂ ಪಿಳ್ಳೆಯವರು ಈ ಜವನ್ನು ಕಣ್ವ ಹೋಬಳಿಯಲ್ಲಿ ಚಿರಸ್ಥಾಯಿಯಾಗಿ ಜನ್ಮಕೊಡಿಸಿ ಸಭೆಯಿಂದ ಅನುಮತಿ ಹೊಂದಿ ದಯಮಾಡಿಸಿದರು.

ಇಂತಹ ಮಹನೀಯರಲ್ಲವೇ ಮುಂದೆ ದೇಶಸೇವೆಗಾಗಿ ಮಹಾತ್ಮರಾಗಿಯೂ, ಗೃಹಸ್ಥಾಶ್ರಮದವರಿಗೆ ಶ್ರೇಷ್ಠ ಮೋಕ್ಷಪ್ರಾಪ್ತಿಯಾಗಿಯೂ ಜನಿಸುವವರು ? ಸದ್ರಿಯವರ ಉದಾರಗುಣಕ್ಕೂ, ದೇಶಸೇವೆಯ ಸಲುವಾಗಿ ಸದರಿಯವರಿಗೂ ಮತ್ತು ಅವರ ಕುಟುಂಬಕ್ಕೂ ಭಗವಂತನು ಸದಾ ಆಯುರಾರೋಗ್ಯ ಮಂಗಳವನ್ನುಂಟು ಮಾಡಲಿ.

ಹನುಮಂತರಾಯರು
ಸಭಾಧ್ಯಕ್ಷರು

ಬಿ ದೇವಯ್ಯ,
ಸೆಕ್ರಟರಿ.

ಅಯ್ಯಾ,

ದನಪ್ರದರ್ಶನ ಒಂದು ವಸ್ತುಪ್ರದರ್ಶನ ಇವೆರಡೂ ದಿನದಿನವೂ, ಶಿಶುಪ್ರದರ್ಶನವೆಂಬುದು ಮತ್ತೊಂದು. ದಿನದಿನವೂ ತಂತತವದ ಸಾಹಿತ್ಯಗಳನ್ನು ಉತ್ಕೃಷ್ಟ ಅಭಿವೃದ್ಧಿ ಬಗ್ಗೆ ನಮ್ಮ ಘನ ಸರಕಾರದವರು ಜಾರಿಗೆ ತರುತ್ತಲಿರುವುದು ಬಹು ಸಂತೋಷ. ಇದೀಗ ಬೇಕಾದ್ದು. ಇದಕ್ಕಾಗಿ ಒಂದು ಜನಾಂಗವನ್ನು ನವನಾಗರೀಕತೆಯ ರಜಸ್ಸಿಗೆ ಒಳಪಡಿಸುವುದು ಆಗಬೇಕಾದ ಸಾಹಿತ್ಯ ಸಾಮಗ್ರಿಗಳಾಗಲಾರವು. ಇದೇನು ಕಾಲಾವಸ್ಥೆಯೋ ಅಲ್ಲ ನವನಾಗರೀಕತೆಯ ಫಲಿತಾಂಶವೋ ಹೀಗೆ ತನ್ನ ಮನೆಯ ದಾರಿದ್ರ್ಯಗಳನ್ನು ನೀಗಲು ತಿಳಿಯದೆಹೋದದ್ದು ಅಲ್ಲ ದಾರಿದ್ರ್ಯಗಳನ್ನು ಶ್ರೀಮನ್ನಾಮಸಂವತ್ಸರದ ಸನ್ನಿಹಿತವಾದವರ ಅಳಿವಿಗೋ? ಭೀಮಾರ್ಜುನರಂತೆ ದೃಢಾಂಗರಾಗಿಯೂ ದೀರ್ಘಾಯುಗಳಾಗಿಯೂ ಇರುವ ಮಕ್ಕಳನ್ನು ಪಡೆಯಬೇಕಾದರೆ ಆ ಮಕ್ಕಳ ತಾಯಿ ತಂದೆಗಳು ಹೊಂದು ತಿದ್ದಿಯಿರುವಂತಹ ಆಹಾರವನ್ನು ಉಣ್ಣಬೇಕಲ್ಲವೇ! ಇಂಥ ತಂದೆ ತಾಯಿಗಳಿಗೆ ಅವರ ಮನೆ ಎದೆಹಾಲು ಅಲ್ಲದೆ ಹಸುಗಳ ಅವರ ಮಕ್ಕಳನ್ನಾದರೂ ಕಾಪಾಡುವರೆಷ್ಟು ಜನರು ಕಂಡುಹಿಡಿದವರುಂಟೋ? ಅದು ಹೋಗಲಿ ಮೊದಲು ಹತ್ತು ಗಂಗಳದಲ್ಲಿ ಗಳಗಾಗುವಂತ ಊಟ ಮಾಡದೇ ವಾಸಿಸುವವರು ಹೆಚ್ಚು ಕಮ್ಮಿ ಕೇವಲ ೩೦ ಕ್ಕೆ ಕಮ್ಮಿಯಿಲ್ಲದಿರುವಾಗ ವರ್ಷ ಒಂದಕ್ಕೆ ಒಂದು ವರ್ಷ ವಯಸ್ಸಿನೊಳಗಿನ ೩೦೦ ಶಿಶುಗಳು ಸಾಯುವುದರಲ್ಲೇನು ಆಶ್ಚರ್ಯ? ಅದು ದಿನಕ್ಕೊಂದು, ಒಂದು ತಿಂಗಳಿಂದ, ಒಂದು ವರ್ಷದಿಂದ ಸಣ್ಣಕ್ಕೆ ನೆನೆದು ರೂಪಲ್ಲಿಂದ ಕಾಯುವುದಕ್ಕೆ ಮಳೆಗಾಲಗಳಲ್ಲಿ ಬೇಳೆಯುವಂತ ಉಂಡು ಉಣ್ಣದೆ ಜೀವಿಸುವದಲ್ಲದೆ ದೃಢಾಂಗರಾಗಿಯೂ ದೀರ್ಘಾಯುಗಳಾಗಿಯೂ ಇರಲು ಯೋಗ್ಯವಾದ ಶುದ್ಧ ಬೆಣ್ಣೆ ಹಾಲು ಮಜ್ಜಿಗೆ ತುಪ್ಪವಾಗಿ ಒಂದುದಿನವಾದರೂ ಉಂಡು ಸುಖಿಸುವವರೆಷ್ಟು ಮಂದಿ ಇರಬಹುದು? ಹೀಗಿರುವಾಗ ಮೃತ್ಯುದೇವತೆ ಕೊಡಲಿ ಎಳೆಯುತ್ತಿಲ್ಲೆಂದು ಹಿಂಜರಿಯುತ್ತಾಳೆಯೇ? ಅನ್ಯರ ದೇಶ ನೀವು ಇಂಗ್ಲೆಂಡಿನಲ್ಲಿ ಈ ತರದ ಶಿಶುಪ್ರದರ್ಶನವಮಾಡಿ ಬಹು ಕಮ್ಮಿ ವರ್ಷದಲ್ಲೇ ಶಿಶುಗಳ ಮರಣಸಂಖ್ಯೆ ಬಹುಕಮ್ಮಿಗೆ ಇಳಿಯಿತಂತೆ. ಅವರು ಅದನ್ನು ನಮ್ಮ ಈ ಬಡಕೊಡಗಿಗೂ ತಂದಿರುವದು ನೋಡಿದರೆ ಕೇಳಿಯು ಮುಂದೆ ಹೆಚ್ಚಾಗಿ ಮೊಟ್ಟ ಮೊದಲಾಗಿ ನಿನ್ನೂ ಹೀಗೆ ತೋರದಾದ ಮೊಟ್ಟ ದಾಳು ಪಾಲು! ಎಂದಹಾಗೆ ಆಯಿತು. ಇಂಗ್ಲೆಂಡಿನಲ್ಲಿ ಇಲ್ಲಿ ಮಹಾನ್ ದನಕರುಗಳಿಗೆ ಮೇಯಲು ಅಂಗೈ ಅಗಲ ಜಾಗವಿಲ್ಲದಂತೆ ಬಂಡಿಜನದಿಂದ ತುಂಬಿದೆಯೋ? ಇಂಗ್ಲೆಂಡಿನಲ್ಲಿ ಇಲ್ಲಿಯಂತೆ ಮುಖ್ಯ ಆಹಾರವಾದ ಬತ್ತದ ಬೆಳೆಗೆ ಯೋಗ್ಯವಾದ ಅನೇಕ ಸಾವಿರ ಎಕರೆ ಜಮೀನುಗಳನ್ನು ಬಿಡವರ್ಜಮಾಡಿ ದೇವಿಯು ವಿನೋದಕ್ಕೆ ಸಾವಿರಗಟ್ಟಲೆ ಕಾಡುಗಳನ್ನು ಸಂಪತ್ತು ರಾಜರೇ? ಎರಡು ಸ್ವರಕಳಿದು ಸಿಕ್ಕಿದ ಚಾಕರಿ ತಪ್ಪಿತೂ ಪೂರ್ವಿಕರು ಸಂಪಾದಿಸಿದ ಒಂದೆರಡು ಎಕರೆ ಭೂಮಿ ಕೆಡಿಸಿಕೊಂಡು ಉಂಡು ಉಣ್ಣದೆ ಜೀವನವನ್ನು ನಡಿಸುತ್ತಿರುವ ನಮಗೆ ಸಾಧ್ಯವಾದರೆ ಒಂದೊತ್ತು ಊಟಮಾಡಿಕೊಂಡೋ ಅಥವಾ ಊಟವಮಾಡದೇನೇ ದೃಢಾಂಗವಾಗಿಯೂ ದೀರ್ಘಾಯುಗಳಾಗಿಯೂ ಬೆಳೆಯುವ ವಿಧಾನವೇನಾದರೂ ಇದ್ದರೆ ಅದನ್ನು ಪ್ರದರ್ಶನಮಾಡಿದರೆ ಮೇಲು. ವಾಗಿ ಹೊಟ್ಟೆತುಂಬ ಚೆನ್ನಾಗಿ ಊಟಮಾಡಿಕೊಂಡು ಹೊಟ್ಟೆಬಿಟ್ಟಿಗೆ ಮಾಡಿಸದೆ ಹಳ್ಳಿ ಸೂಳಿಗಿತ್ತಿಯರಾದ ಹೆಂಗಸರು ಮತ್ತು ಮಗನಿಗೆ ತುಂಬಿದ ಹೊಟ್ಟೆ ಹಾಲು ಸೇರಿಸಿಕೊಳ್ಳಲು. ಶಿಶುವು ಪಾಲನೆಯನ್ನು ಪ್ರತ್ಯೇಕವಾಗಿ ತೋರದೆ ಎಂದೂ ಮನಸ್ಸಿಗೆ ತರಬೇಕಾಗುವದರ ಬಗ್ಗೆ ವಾದವು. ಇದಲ್ಲದೆ ನಮ್ಮ ನಾಡಿನ ಈ ಶಿಶುಪ್ರದರ್ಶನದಿಂದ ಒಂದು ಪ್ರಯೋಜನವಿದೆ ಎಂದೆನ್ನುವವರಿಗೂ ಇತರ ಪ್ರದರ್ಶನದ ಸಭೆ ಕೂಟ ಮೊದಲಾದವುಗಳಿಗೆ ನಮ್ಮ ಮನೆಯವರಿಗೆ ಸ್ಥಳವು ಇಲ್ಲ ಇನ್ನು ಕೂಡಲಿಲ್ಲ. ಶಿಶುಪ್ರದರ್ಶನ ತೋರಿಸಿದ್ದರಿಂದ ನವನಾಗರೀಕತೆಯು ಮುಂದುವರಿದಿದೆಯೆಂದು ನಮ್ಮವರ್ ಕಾಣಿಸಿಕೊಂಡು ತಮ್ಮ ತಮ್ಮ ಉಳುಮೆ ಕುಲಕಸುಬನ್ನು ಅವಲಂಬಿಸಿ ಉದರಪೋಷಣೆಗಾಗಿ ನಡೆಸುವ ವಿಧಾನವನ್ನು ಹಳ್ಳಿಗಾಡಿನ ಹಿರಿಯರೆಲ್ಲರಿಗೂ ಪ್ರದರ್ಶನ ಕಲಿಸಲು ಬಹಳ ಅನುಕೂಲವಾಯಿತು ಎಂದು ಇದು ಇದ್ದೇ ಇದೆ.

ಸಹೋದರ ಸಹೋದರಿಯರೇ, ಪ್ರಾಣಿ ಮಾತ್ರವನ್ನು ಅವಲಂಬಿಸಿ ತೋರಗೊಡದ ಏಕಕಾಲದಲ್ಲಿ ಸಾಧ್ಯ ಈ ಸ್ಥಿತಿಗೆ ಇಳಿದದ್ದು ಸಾಲದೆ ಕೈಗೆಟಕುವ ಅಷ್ಟು ಸ್ವಲ್ಪ ಹಣವನ್ನು ಹಾಕಿ ಊಟ, ಕಾಫಿ, ಟೀಗಳಿಗೆ ವೆಚ್ಚಮಾಡಿ ಕಡಿಮೆ ಮಾಡಿ ಮಕ್ಕಳು ಗೋರೆಯೊಂದೆ ಇಟ್ಟುಕೊಂಡು ಜೀವನವನ್ನು ಕಂಗಾಲಿಕ್ಕೆ ಇಡಿಸಿಕೊಂಡು ಸ್ವಲ್ಪ ಆಯುಷ್ಯವಾಗಿ ವಿದೇಶಿಯ ಮಾರಿ ಮುನ್ನಡೆಸುವ ಅನ್ನಕ್ಕಾಗಿ ಸಾಕಾಗುತ್ತಿರುವವರನ್ನು ನೋಡಿ ನಮ್ಮ ಪೂರ್ವಿಕರ ಶ್ರೇಷ್ಠ ಜನ್ಮವನ್ನು ಪ್ರವೃತ್ತಿಗಳನ್ನು ಕಣ್ಣಿಗೆ ಕಂಡು ಕರೆದವನ್ನು ಕಲ್ಪಿಸಿ ಗೌರವಿಸಿ ಕಾಯ್ದು ಕೊಂಡು ಜನಪದವನ್ನು ಬಾಳಿಸುತ್ತಿದ್ದ ಆ ಮಹಾನುಭಾವರ ಮಾರ್ಗವನ್ನೇ ಅವಲಂಬಿಸುವವರಾಗಿ ನಮಗೆ ಸದಾ ಸರಿ ಆಯುಷ್ಯ ಎಲ್ಲಕ್ಕೂ ಇಳಿದಿರುವ ಬಲ್ಲವರು ಹೇಳುತ್ತಿರುವರು. ಇನ್ನು ನಮಗೆ ಹಿಡಿದುಕೊಂಡಿರುವ ನವನಾಗರೀಕತೆಯ ಮಹಿಮೆಯಲ್ಲವೇ!

ಪಿ. ಪಿ. ಮಾದಪ್ಪ

ದೇಶಬಾಂಧವರೇ,

ತಾರೀಖು ೨೫-೧-೨೪ ರಲ್ಲಿ ಚೆಪ್ಪನಾಡು ನಾಡು ಕೋವಿನ ಸಿಕ್ಕಿನವಾಗಿ ನಾಡು ಕಸ್ತೂರಗಾರು ಮುಕ್ಕೊಟ್ಟಿ, ಕೊಳಕೇರಿ, ಚೆಯ್ಯಂಡಾಣೆ, ಮನೆಯವರು ಅಮರಿ ಹೆಗ್ಗಡೆಗಳಿಗೆ ತಾರೀಖು ೭-೧-೨೪ ರ ಲೇಖನದಲ್ಲಿ ಇದ್ದ ಕಟ್ಟುಗಳನ್ನು ನೋಡಿದಾಯಿತು. ಕಟ್ಟುನಾಡಿನ ಎಲ್ಲಾ ಕಕ್ಷಿ ಮುಖ್ಯಸ್ಥರು ಸೇರಿ ತಾರೀಖು ೧೯-೧೧-೨೩ ರಲ್ಲಿ ವಿಚಾರಮಾಡಿದ ವಿಷಯ ದುಷ್ಟಪ್ರಭಾವಯುತವಾಗಿ ಕಂಡದ್ದಲ್ಲವಾಗಿ ಅನೇಕ ವಿಧದಿಂದ ಹೋರಾಡಲಾಗಿನಷ್ಟೆ ಮುಂದಿಟ್ಟು ಅವರ ರದ್ದುಪಡಿಸುವವರಾಗಿಯೂ ಅಮರಿ ಹೆಗ್ಗಡೆಗಳ ಪೂರ್ವ ಆಚಾರವಿಚಾರವನ್ನು ಸ್ವತಂತ್ರವಾಗಿ ವಿಚಾರದಿಂದ ವಿಳಿಸಬೇಕೆಂಬ ಅಭಿಪ್ರಾಯವು ಹುಟ್ಟಿದೆ ಎಂದು ಮರೆತಿರುತ್ತಾರೆ.

ದೇಶಬಾಂಧವರಿಗೆ ಚಪ್ಪರದೊಳಗೆ ಕೊಳ್ಳಬಂದರೆ ಯಾರೂ ಜಾತಿಯಲ್ಲೋ ಮಾಡಬಾರದೆಯೋ ಇದನ್ನು ಅರಮನೆಯ ಮುಖ್ಯಸ್ಥರು ಕಟ್ಟು ಮಹಾರ್ಗದ ಮಾಡಲಿಲ್ಲವಾಗಿಯೂ ನೀರು ಇತರೆ ಮತ್ತು ಹೂವಾಳೆ ಗಂಧಪ್ರಸಾದ ತೋರಿಸದೆ ಹೋದದಾಗಿ ಸದಾ ಬರದ ಬುತ್ತಿಗಳು ಇವರು ಅರ್ಥಮಾಡಿಕೊಂಡದ್ದಲ್ಲದೆ ಈ ದಮ್ಮಿದಿಗ್ವಿಸ್ತರು ಮೂಡಕಣ್ಣ ಕೇಳುವಲ್ಲ ವಸ್ತ್ರದ ತಂಬಟ್ಟು ನೀಳೆಯುವ ಚಪ್ಪರದಾಚೆ ಆದ ತಯಾರಿ ನಿಷ್ಪ್ರಯೋಜಕರೆ. ಇದಕ್ಕೆ ಕಳ್ಳರು ಅವರಿಗೆ ಒಂದು ದಾಳಿಯು ಇದ್ದಾಂಕೂಡುವದುಂಟು. ಮತ್ತು ನೀರು ಇಡುವ ಮುಹೂರ್ತವೆ ನಮಗೆ ಯಾರಿಗೂ ಗೊತ್ತು ಸಾಲದು. ಕೃಷಿ ಸಂಬಂಧ ಯಾರಾದರೂ ನೀಡಬೇಕೆಂದು ಕೇಳಿಕೊಂಡರೆ ಕೊಡುವ ಆವಶ್ಯಕತೆ ಇದೆ. ನಾಡು ದೇವಸ್ಥಾನದ ಶಾಂತಿಗಾರರು ಹೂವಾಳೆ ಗಂಧಪ್ರಸಾದ ಕೊಡಲು ತಾಂಬೂಲವನು ಈ ಗಲಭೆಯಿಂದ ನಿಂತು ನಮ್ಮ ಕಾಪಾಡುತ್ತಾ ಇದ್ದರು. ಪಂಚಾಯಿತಿಯ ಗದ್ದಲವು ಹೆಚ್ಚಾಗುತ್ತಾ ಕಾಲವಿದಾರಿದ್ದರಿಂದ ಈ ಕೆಲಸ ಬಾಕಿ ಮಾಡಿರುವ ಕಾರಣ ಬೇರೆ ಯಾವ ಕಾರಣವೂ ಇಲ್ಲ.

ಹೊಳೆಯನ್ನು ಮುಂದಿಗೆ ಹತ್ತಿಸುವವರಿಗೆ ಪ್ರಾಯಶ್ಚಿತ್ತರು ಅವರೆ ಮಾಡಿಸುವರು ಬೇಕಿಲ್ಲವಾಗಿ ಬರದಷ್ಟು ಕಲ್ಪನೆಯಾಗಿದೆ. ಚಪ್ಪರದೊಳಗಿನ ಜಡೆಗಳು ಹೆಚ್ಚುಗುತ್ತಾ ಮುಂದಿನಲ್ಲಿ ಗುಂಪುಗುಂಪಾಗಿ ಜಡೆಸುತ್ತಿದ್ದಗಳಿಗೆ ಇದೇನು ವಿಪರೀತ ಸಂಗತಿ ಮುಂದಾಗಿ ಅವರ ಕೋಲಾಟವನ್ನು ನಿಲ್ಲಿಸಿಕೊಳ್ಳುವುದಕ್ಕೂ ಕ್ಷಮೆ ಸಿಂತ್ರಿ ಪ್ರಶ್ನೆ ಹೋರ್ಟು ಬೇರೆ ಯಾವ ಅಭಿಪ್ರಾಯವಿಲ್ಲ. ಅಮರಿ ಹೆಗ್ಗಡೆಗಳಿಗೆ ವಿರೋಧಿಸುವ ಗ್ರಾಮಸ್ಥರು ಹೊಳೆಯನ್ನು ಹತ್ತಿಸುವ ಪ್ರಯತ್ನವಿದುವದೇ? ಇಂಥಾ ವಿಷಯವನ್ನೆಲ್ಲಾ ಮುಂದಿನಲ್ಲಿ ಸೇರಿದ್ದ ಕಕ್ಷಿ ಮುಖ್ಯಸ್ಥರು ಅರಿತೆ ಏನನ್ನೂ ಮಾಡಬೇಕಲ್ಲದೆ ಅದಮೇರಿಗಾರರನ್ನು ನಿಂದನೆಮಾಡುವದು ಪೂರ್ವವಿರೋಧವಾಗಿದೆ.

ನಾಡು ಕಳವು ಮಾಡಿದ! ಈ ಅಮರಿ ಹೆಗ್ಗಡೆಗಳ ವಿಷಯ ಅಷ್ಟು ದಿನದಾಗಿ ಪ್ರಯತ್ನಪಡುವ ನೀವುಗಳು ನಮ್ಮ ನಾಡು ದೇವಸ್ಥಾನದ ಪೆಮ್ಮ ತಮ್ಮ ದಾಸೋಹಕ್ಕೆ ಪೂರ್ವಿಕರ ಅಲುಗದ ಪ್ರೋತ್ಸಾಹವನ್ನು ಪೂರ್ವದ ಪಾಲುದ ವಿಷಯವಾಗಿ ಪೂಜೆವಗ್ಗೆರೆ ಕಟ್ಟಳೆ ಬಿಡಿಸಲು ಮರೆತಿರುವವರಾಗಿಯೂ ೩೦ ವರ್ಷಗಳವರೆಗೂ ನಿಂತು ಹೋಗಿದ್ದ ನಾಡು ಮುಂದು ಕೋಲನ್ನು ಬಾಲಿಸಬಾರದೆ ಕೋಲುಹೊತಿಯುತ್ತಾ ನಾಡು ದೇವಸ್ಥಾನದ ಪೂಜೆ ಮತ್ತು ಕಟ್ಟಳೆಗಳನ್ನು ನಿರವಹಿಸಿಕೊಂಡು ಬರುವ ಅದಮೇರಿ ಗ್ರಾಮಸ್ಥರು ಮಾತ್ರರಾದರು. ನೀವುಗಳು ತಮ್ಮ ತಮ್ಮ ತಪ್ಪುಗಳನ್ನು ಮರೆಮಾಡಿಸಿ ಎತ್ತಿಯುವವನ್ನು ಗುರಿಪಡಿಸುವದು ಮರ್ಯಾದೆಯೋ ?

ನಮ್ಮ ನಾಡು ಅರ್ಚಿಪತ್ರದೊಂದು ಈ ಬೇಕೆ ಜನಸಂಖ್ಯೆಯನ್ನು ಎಣಿಸಲಾಗಿಯೂ ಹೊಸದಾಗಿ ಅಲ್ಲ ಒಂದನೇಗಿಯೂ ಇದೇ ವಿಷಯವು ಸರ್ವರಿಗೂ ತಿಳಿದ ವಿಷಯವಾಗಿದೆ. ಅವರೆ ತಾಗಿನ ಚಾವಡಿ ಅಮರಿ ಹೆಗ್ಗಡೆಗಳ ಸ್ವಿತ್ವಾಸಹೋದರರಿಂದ ಮಿಳಕ ಮಾಡಿ ಕೊಳ್ಳು ಹೊಡೆಯಬೇಕು ವಗ್ಗೆರೆ ಅವಿವೇಕ ಪೂರ್ವಕ ಮಾಡಿಸುವವರಾಗಿದ್ದ ಎಲ್ಲರನ್ನು ಸೇರ್ಪಡಿಸಬೇಕೆಂದು ನಿರ್ಧರಿಸಿದ್ದಾರೆ ಇದು ನ್ಯಾಯವಲ್ಲವೇ?

ಹಳೆಯ ಕಾಲದ ಎಲ್ಲಾ ವ್ಯಾಪಾರಗಳೂ ಸ್ವಾತಂತ್ರ್ಯವಾಗಿ ಅಗ್ನಿ ಸಾಕ್ಷಿ ತಮ್ಮ ತಮ್ಮ ಇಂಗ್ಲಿಷಿಯಿಂದ ಪಡೆದ ಸ್ವಾತಂತ್ರ್ಯವನ್ನು ಹಾಳ್ಗೆಡಿಸುವುದಲ್ಲದೆ ಹೀನಾಯವನ್ನು ಪಡೆಸುವದಿಲ್ಲ. ಅಮರಿ ಹೆಗ್ಗಡೆಗಳು ಬಂದು ಕೆಟ್ಟ ಮುಂದೆ ಬರಮಾಡಿದ ಎಂಬುವಾಗಿ ನಮ್ಮನ್ನು ಕೇಳುವಾಗ್ಗೆ ನಾವುಗಳು ಒಂದು ಹೆಜ್ಜೆ ಹಿಂದಕ್ಕೆ ಹಿಡಿಯುವಾ ಹಿತಕರವೇ? ಅದು ನ್ಯಾಯವೇ? ಪಿಸುಮಾತುಗಳನ್ನು ಮುದಿತನವನ್ನು ಬಿಡಿಸಿ ಶಿಥಿಲತೆ ಮಾಡುವುದೆಂದರಂತೆ ಸ್ವಾರ್ಥ ಮನೋಧರ್ಮವ ಇಂತಹ ಕ್ಷೇತ್ರದಿಂದ ಸಾಧ್ಯವೇ ಶಾಂತಿಯಿಂದ ಸಿಂಹವೂ ಯಿಷ್ಟರಮಟ್ಟಿಗೆ ಹಸಿವೆಯಿಂದ ತಿಂದು ಬಿದ್ದ ಅನೇಕ ಬಾಳುವಲ್ಲಿ ಕೊಡು ಅದರ ಮಾಂಸವನ್ನು ತಿನ್ನಬಯಸ್ತುವುದಲ್ಲದೆ ಬಿಸಲಿಗೋಸ್ಕರ ಹುಲ್ಲನ್ನು

ತಿನ್ನುವುದೇ? ಶಾಲೆಯಲ್ಲಿ ಬಾಲಕರು ದಗ್ಗಾಗಿ ತಮ್ಮ ತಮ್ಮ ತರಗತಿಯ ಪಾಠಗಳನ್ನು ಉಪಾಧ್ಯಾಯರಿಗೆ ತೃಪ್ತಿಕರವಾಗಿ ಒಪ್ಪಿಸದಿದ್ದರೆ ಆಗಾಗ (ಪ್ರೊಮೋಶನ್ ಕೊಡುವದೆಂದು) ಕೆಳಗಿನ ತರಗತಿಗೆ ಇಳಿಸಿಲ್ಲವು ವದು, ಹಾಗೆ ನಮಗೂ ಸಹಾ ಇಲ್ಲವೆನೋ. ದಿ ಪ್ರೆಸಿಡೆಂಟ್ ನಮ್ಮ ಶಿಕ್ಷಕರು ಹಿಡಿಸುತ್ತಾರೆ ಬದು ನೆನಸುವೆನು.

"ನಾಡಾಮಂದಿ ಅಪ್ಪರೆಲ್ಲಾ ಲಭಿಸಿ ಬರ್ಗ ಮುಖ್ಯಸ್ಥಂಗ ಆಳಿತಲ್ಲಿ ಆಯಿರಿ ಬೆಗ್ಗಡೆಯು ಮೋಗಿಯಂದು ಒಪ್ಪಿಯೂರ್ ತೀಕ್ಷ್ಣ ಕತ್ತರಿಸಾಜಾವಾಗುವ ಪ್ಲಿಲಿಟ್ಸ್ ಆತ್ತು ಕಾಲ್‌ಪ್ರಜಿಜತ್ ಎಂದಾವ ಸುದ್ದಿ ಕಲ್ಪಿಯದೆಲ್ಲ ಮನ್ನವಾಗೊಂಡುಂದೆಣ್ಣಾವ್ ಇದುದಾರು ಬೊಳ್ಳಂದಾಕ"

ಅಯ್ಯಾ, ನನ್ನ ತಾರೀಖು ೧೧-೧-೨೪ ರ ಲೇಖನದಲ್ಲಿ ಕೆಲವು ಅಪಶಬ್ದಗಳಿಂದ ಪ್ರಕಟಿಸಿದಾಗಿ ಇದ್ದ ಕಾರಣ ಅನೇಕ ವಾಚಕರಿಗೆ ಮುಂದಟ್ಟಗಲಾರವದ್ದರಿಂದ ಪುನಃ ಸರಿಯಾಗಿ ಪ್ರಕಟಿಸುವಂತೆ ಸೂಚಿಸಿದ್ದಾಗಮ ನಕ್ಕೆ ತಾರದ ವಿಷಯ ಬೇಸರಿಸುತ್ತೇನೆ. ಆಯಿರಿ ಪೆಗ್ಗಡೆಗಳ ಲೇಖನಕ್ಕೆ ಪತ್ರಿಕೆಯಲ್ಲಿ ಧಾರಾಳವಾದ ಸ್ಥಳ ಸಿಕ್ಕುವಂತೆ ನನ್ನ ಲೇಖನಕ್ಕೆ ಸ್ವಲ್ಪ ಎಡೆಕೊಡಬೇಕಲ್ಲದೆ ಹಿಂದಿನ ನನ್ನ ಬಾತ್ಮಿಯನ್ನು ರಾಷ್ಟ್ರಕೇತುಗಳೋ ಪಾದವಾಡಿದಂತಾಗಲಾರದೆಂದು ನಂಬುತ್ತೇನೆ.

ಕೆ ಎ ಪೂವೈಯ್ಯ

[ಈ ವಿಷಯ ಎರಡು ಕಡೆಯಿಂದ ಬಾತ್ಮಿಗಳಿಗೂ ಸಾಕಷ್ಟು ಎಡೆಕೊಡಲಾಗಿದೆ, ಇನ್ನು ಮುಂದೆ ಈ ಸಮ್ಮಂಧ ಬಾತ್ಮಿಗಳು ಪ್ರಕಟಿಸಲಾಗುವುದಿಲ್ಲ

ಸಂಪಾದಕ]

ಈ "ವಿದ್ಯಾರ್ಥಿ" ಎಂಬ ಬಾತ್ಮೀದಾರರೆ, ಕಳೆದ ನವೆಂಬರ್ ತಾರೀಖು ೧೩. ರ ಬಾಬತ್ತು ನಿಮ್ಮ ಬಾತ್ಮಿಯನ್ನು ನೋಡಲಾಯಿತು ಆದರೆ ಅಂಥಾ ಬಾತ್ಮಿಯನ್ನು ವಿದ್ಯಾರ್ಥಿಗಾಗಿ ಉಪಾಧ್ಯಾಯರು ಕಳುಹಿಸಿದ್ದಲ್ಲದೆ ಅನ್ಯಥ ಅಲ್ಲವೆಂದು ನಂಬತಕ್ಕದ್ದಾಗಿದೆ.

ಆದರೆ ಅಂಥ ವಿದ್ಯಾರ್ಥಿ ಮಂಡಲಿಗಳು ಕ್ರಮಗಳನ್ನು ಯಾತಕ್ಕೋಸ್ಕರವಾಗಿ ದ್ವೇಷಿಸಿ ಬರೆಯುತ್ತಾರೆಂಬದು ವೇದ್ಯವಾಗಲಿಲ್ಲ. ಓ, ಹೋ, ವಾಚಕ ಮಹಶಯರೇ, ಯಾಕೆಂತಕೇಳುತ್ತೀರೋ, ಸಾವಧಾನದಿಂದ ಕೇಳಿ ಹೇಳುತ್ತೇನೆ.

ಏಕೆಂದರೆ, ಆರೀತಿಯಲ್ಲಿ ಕೂಲಿಮಠಗಳನ್ನು ನಿಷೇಧಿಸಿ ಬರೆದದ್ದನ್ನು ಅವರ ಮೇಲಾಫೀಸರುಗಳು ನೋಡಿ ಮೇಲೆ ಸೂಚಿಸಿದಂತ್ತಾ ಉಪಾಧ್ಯಾಯರಗಳು ಬಹಳ ಮುತುವರ್ಜಿಯಿಂದ ಕೆಲಸಮಾಡುತ್ತಾರೆಂತಲೂ, ಹಾಗೂ, ಹೀಗೂ, ಮಾಡಿ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸುತ್ತಾರೆಂತಲೂ, ಮೇಲಾಫೀಸರುಗಳಿಗೆ ವಿಧೇಯರಾಗಿ ನಡೆಕೊಳ್ಳುತ್ತಾರೆಂತಲೂ ತಿಳಿದು ಅವರ ವೇತನವನ್ನೂ ಪದವಿಯನ್ನು ಹೆಚ್ಚಿಸಲಿಲ್ಲದೆ ಮತ್ತೆ ಯಾವ ಅವಶ್ಯಕತೆಯೂ ಇರುವುದಿಲ್ಲ. ಅಯ್ಯೋ, "ಭಗವಂತನೇ" ಆ ಮಾತ್ರಕ್ಕೆ ಕ್ರಮಗಳನ್ನು ನಿಶೇಧಿಸಿ ಬರೆಯಬೇಕೆ? ಹಾ, ಶಿವನೇ, ಅದಲ್ಲವೇ ಅವರ ಜನ್ಮದಾರಭ್ಯ ಕರ್ತವ್ಯವೆಂದು ನಂಬಬೇಕಾದುದ್ದು ....

ಆದರೆ ಅವರು ಆರೀತಿ ಬರೆಯಬೇಕಾದದ್ದೇನೋ ಸಹಜ. ದೇಶದ ಮಹಾಜನರೇ, ಏಕೆಂದು ಕೇಳುತ್ತಿರೋ ಸರ್ಕಾರಿ ಶಾಲೆಗಳಲ್ಲಿರುವ ಹಾಗೆ ಕೂಲಿ ಮಠಗಳಲ್ಲಿ ಓದುವ ಮಕ್ಕಳಿಗೆ ಕೂರಲಿಕ್ಕೆ ಕಾಲ್ಮಣೆಗಳೂ (Benches) ಬರೆಯಲಿಕ್ಕೆ ಇಳಿಜಾರು ಮೇಜುಗಳೂ (Desks) ಕಪ್ಪು ಹಲಿಗೆಗಳೂ (Black Boards) ಸುಣ್ಣಗಳೂ (Chalk Sticks) ಕಣ್ಣಿಗೆ ಹೊಳವನ್ನುಂಟುಮಾಡುವ ವಿಚಿತ್ರತರದ ಚಿತ್ರಪಟಗಳೂ, (So many kinds of Pictures) ಭೂಪಟಗಳೂ, (maps) ಇರುವುದಿಲ್ಲ. ಆದ್ದರಿಂದಲೇ ಬಾಲಶಿಕ್ಷೆಯ (Ist. Standard) ಹುಡುಗರನ್ನು ಮರಳಲ್ಲಿ ಬರೆಸುವುದು. ಅದೂ ಅಲ್ಲದೆ ಮಕ್ಕಳ ತಂದೆ ತಾಯಿಗಳು "ತಮ್ಮ ಹುಡುಗರನ್ನು ಮೊದಲು ಅಕ್ಷರಗಳು ಮುಂದಟ್ಟುಗುವವರೆಗೆ ಮರಳಲ್ಲಿಯೇ ಬರೆಸಬೇಕು" ಎಂದು ಹೇಳಿದಮೇರೆ ಮರಳಲ್ಲಿಯೇ ಬರೆಸುವರು.

ಕೂಲಿಮಠಗಳು ಈಗಿನ ನವನಾಗರೀಕತನದ ಸರ್ಕಾರಿ ಶಾಲೆಗಳ ಕಟ್ಟಡಗಳ ಹಾಗೆ ಕಟ್ಟಿಸಿರುವುದಿಲ್ಲವೆಂಬು ಎಲ್ಲರಿಗೂ ವೇದ್ಯವಾಗಿದೆಯಷ್ಟೆ. ಆದುದರಿಂದಲೇ ಆಯಾಯ ಊರುಗಳಲ್ಲಿರುವ ದೇವಸ್ಥಾನಗಳೇ ಮಠಗಳಾಗಿವೆ. ಕೂಲಿಮಠಗಳನ್ನು ದ್ವೇಷಿಸಿ ಬರೆಯುವಂತೆ ಸಂಪನ್ನರು ಅವರ ಸ್ವಂತಹಣದಿಂದ ಸರ್ಕಾರಿ ಶಾಲೆಗಳನ್ನು ಕಟ್ಟಿಸಿದೋಪಾದಿ ಕೂಲಿಮಠಗಳ ಕಟ್ಟಡವನ್ನು ಕಟ್ಟಿಸಿಕೊಡುವುದು ಅವರ ಮರ್ಯಾದೆಗೆ ಹಾನಿಯುಂಟುಮಾಡುವುದು ಸ್ವಪ್ನದಲ್ಲಿಯೂ ಸಹ ಗ್ರಹಿಸದಿರುವುದು ಶೋಚನೀಯವಾದ ಸಂಗತಿಯಾಗಿದೆ

ಹುಡುಗರು ಕೂಡುವ ವಿಷಯ ತೆಗೆದುಕೊಂಡರೆ ಅದನ್ನು ಸಹ ಇಲ್ಲಿ .... ಹೇಗೆಂದರೆ, ಸರ್ಕಾರಿ ಶಾಲೆಗಳಲ್ಲಿ .... ಮುರಿದ ಬೆಂಚುಗಳು, (ಡೆಸ್ಕುಗಳು) ಉಪಾಧ್ಯಾಯರಿಗೆ ಮಾತ್ರ ನ್ಯಾಯವಾದ ಮುರಿದ ಕುರ್ಚಿಗಳೇ ಇವೆ ಮೇಲೆ ಹೇಳಿದ ರೀತಿ ಬೆಂಚುಗಳನ್ನು ಸಹ ಅವರ ಸ್ವಂತ ಹಣದಿಂದ ಮಾಡಿಸಿದ್ದೋ ಎಂದು ಆಗಾಗ್ಗೆ ಕೇಳಿಕ್ಕೆ ನನಗೆ ನಾಚಿಕೆಯಾಗುತ್ತೆ.

ಈಗ ಪಾಠಕ ಮಹಾಶಯರು ಚಿತ್ರದ ಕಡೆಗೆ ಸ್ವಲ್ಪ ಗಮನಕೊಡತಕ್ಕದ್ದು ಏನೆಂದರೆ, ಪೂರ್ವದ ಹಾಗೆ ಈಗ ಕೂಲಿ ಮಠದಲ್ಲಾಗಲಿ, ಸರ್ಕಾರಿ ಶಾಲೆಗಳಲ್ಲಾಗಲಿ ಹುಡುಗರನ್ನು ಬೆತ್ತದಿಂದ ಶಿಕ್ಷಿಸುವುದು ಬಹಳ ಅಪರೂಪ ಹೈಸ್ಕೂಲ್ ಅಂಥಾ ದೊಡ್ಡ ಶಾಲೆಗಳಲ್ಲಿಯೇ ಒಂದಲ್ಲ ಒಂದು ಬಗೆಯ ಶಿಕ್ಷೆಕೊಡುವಾಗ ಬಾಕಿ ಇರುವ ಸರ್ಕಾರಿ ಪ್ರೈಮರಿ ಶಾಲೆಗಳಲ್ಲೂ, ಕೂಲಿಮಠಗಳಲ್ಲೂ, ಬೆತ್ತದಿಂದ ಸ್ವಲ್ಪಮಟ್ಟಿಗೆ ಶಿಕ್ಷೆಮಾಡುವುದು ಅಷ್ಟೇನೂ ವಿಶೇಷವಲ್ಲವೆಂದು ಕೂಲಿಮಠಗಳನ್ನು ವರ್ಣಿಸಿ ಬರೆದ ಲೇಖಕರು ತಿಳಿಯದಿರುವದು ವ್ಯಸನಕರವಾಗಿದೆ. ಆದರೆ ಆರೀತಿ ಶಿಕ್ಷೆಮಾಡಬೇಕೆಂತಲೂ, ಅಲ್ಲ. ಮಾಡುತ್ತಾರೆಂತಲೂ ಅಲ್ಲ ಕೂಲಿಮಠಗಳ ಉಪಾಧ್ಯಾಯರುಗಳು ಉದ್ದವಾದ ಬೆತ್ತ ಹಿಡಿದುಕೊಂಡು ಮಕ್ಕಳಿಗೆ ಕಂಡಾ ಬಿಟ್ಟೆ ಹೊಡೆಯುತ್ತಾರೆಂದು "ವಿದ್ಯಾರ್ಥಿ" ಎಂಬ ಬಾತ್ಮಿದಾರರು ಬರೆದದ್ದಕ್ಕೆ ಈ ರೀತಿ ಬರೆದದ್ದಲ್ಲದೆ ಅನ್ಯಥ ಅಲ್ಲ

ಈಗ ಹೊಗೆಸೊಪ್ಪಿನಿಂದಾಗುವ ಬೀಡಿ, ಶಿಗರೇಟು ವಗೈರೆ ನಿಷಾದಪದಾರ್ಥಸೇವನೆಯ ವಿಷಯ ಸ್ವಲ್ಪ ಬರೆಯಬೇಕಾಗಿದೆ. ಆದ್ದರಿಂದ ಅದನ್ನು ಸ್ವಲ್ಪ ವಿವರಿಸುವ, ಮೇಲ್ಕಂಡ ನಿಷಾದಪದಾರ್ಥವನ್ನು ಸೇದುವುದರಿಂದ ಮೆದುಳಿಗೂ, ಉದ್ಯೋಗಕ್ಕೂ ಮರ್ಯಾದೆಗೂ ವಿರೋಧವಾಗಿರುವುದರಿಂದ ಅದನ್ನು ಸರ್ಕಾರಿ ಶಾಲೆಗಳಲ್ಲೂ, ಕೋರ್ಟು ಕಚೇರಿಗಳಲ್ಲೂ ಸೇದಬಾರದೆಂಬ ರೂಲ್ಸು ಪೂರ್ವಕಾಲದಿಂದಲೇ ಜಾರಿಗೆ ತಂದಿದ್ದರೂ ಸರ್ಕಾರಿ ಶಾಲೆಗಳಲ್ಲಿನ ವಿದ್ಯಾರ್ಥಿಗಳೇ, ಅನೇಕ ತರಹದ ನವೀನ ಚಾಪಿನ ಸಿಗರೇಟುಗಳನ್ನು ಆಡಂಬರದಿಂದ ಸೇದುತ್ತಿರುವಾಗ್ಯೆ ಸರ್ಕಾರಿ ಶಾಲೆಗಳ ಉಪಾಧ್ಯಾಯರ, ಕೂಲಿಮಠಗಳ ಉಪಾಧ್ಯಾಯರ ಮತ್ತು ಇತರರ ಪಾಡೇನು ಎಂಬದನ್ನು ತಿಳಿದು "ವಿದ್ಯಾರ್ಥಿ" ಎಂಬ ಬಾತ್ಮಿದಾರರು ಅದರ ವಿಷಯ ಸ್ವಲ್ಪ ಎತ್ತಬಾರದು ಎಂಬವನ್ನು ಈಗ ಮರೆತಿದ್ದರೂ, ಇನ್ನು ಮುಂದಕ್ಕಾದರೂ ಅದನ್ನು ನೆನೆದುಕೊಂಡು ಆ ದುರಭ್ಯಾಸವನ್ನು ತ್ಯಜಿಸಿದರೆ ತನಗೆ ಮಹೋಪಕಾರವಾಗುವುದಲ್ಲದೆ ದೇಶಸೇವೆಯನ್ನು ಸಹ ಮಾಡಿದಂತಾಗುವುದು ಅಲ್ಲದೆ "ತಾನು ಕಳ್ಳ ಪರರ ನಂಬ" ಎಂಬ ನಾಣ್ಣುಡಿಯಂತೆ ತನ್ನ ಹಾಗೆ ಎಲ್ಲರೂ ಸೇದುತ್ತಾರೆಂದು ನಂಬಿರುವ ತಿಳುವಳಿಕೆಯನ್ನೂ ಸಹ ಮರೆಯಬೇಕಾಗಿದೆ.

ಇವೆಲ್ಲಾ ಆಯಿತು ಇನ್ನು ಪುಸ್ತಕಗಳ ವಿಷಯ ಸ್ವಲ್ಪಮಟ್ಟಿಗೆ ಲಾಲಿಸಬೇಕಾಗಿ ನಾನು ಮಹಾಜನರನ್ನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಪುಸ್ತಕಗಳ ವಿಷಯ ತೆಗೆದುಕೊಂಡರೆ ಅದನ್ನೂ ಸಹ ನುಡಿತಕ್ಕದ್ದೇ, ಹೇಗೆಂದರೆ, ಸರ್ಕಾರಿ ಶಾಲೆಗಳಲ್ಲಿ ಗೋಡೆಗಳ ಮೇಲೆ ತರತರದ ವಿಚಿತ್ರ ಪಟಗಳಿರುತ್ತ ಕೋಣೆ ತುಂಬಾ ಬೆಂಚುಗಳೂ, ಇಳಿಜಾರು ಮೇಜುಗಳೂ, ಇರುವಲ್ಲಿ ಎಲ್ಲೋ ಮೂಲೆಯಲ್ಲಿ ಬಿದ್ದಿರುವ ಹರಕು ಪುಸ್ತಕಗಳನ್ನು ಥಟ್ಟನೆ ಕೋಣೆಯೊಳಗೆ ನುಗ್ಗಿದ ಜನರಿಗೆ ಗೋಚರವಾಗುವುದು ದುರ್ಲಭ ಆದರೆ ಕೂಲಿಮಠಗಳಲ್ಲಿ ನೋಟಕಾರರ ಕಣ್ಣಿಗೆ ಮಂಕುಬೂದಿಚೆಲ್ಲುವ ವಿಚಿತ್ರತರಹದ ಪಟಗಳೂ ಬೆಂಚುಗಳೂ, ಇಳಿಜಾರು ಮೇಜುಗಳೂ ಇಲ್ಲದಿರುವುದರಿಂದ ಅವರ ಕಣ್ಣುಗಳಿಗೆ ಎಲ್ಲೋ ಮೂಲೆಯಲ್ಲಿ ಬಿದ್ದಿರುವ ಹರಕು ಪುಸ್ತಕಗಳೇ ಗೋಚರವಾಗುವುದೇನೋ ವಾಸ್ತವ್ಯ ಆದರೆ "ವಿದ್ಯಾರ್ಥಿ" ಎಂಬ ಬಾತ್ಮಿದಾರರು ವಿದ್ಯೆಕಲಿಯಲಿಕ್ಕೆ ಶಾಲೆಗೆ ಹೋದಲ್ಲಿಂದ ಶಾಲೆ ಬಿಡುವವರೆಗೂ ಹರಕು ಪುಸ್ತಕಗಳಲ್ಲಿ ಓದದೇ ಇದ್ದದ್ದು ನೋಡಿದರೆ ವಿಶೇಷವೇ ಸರಿ. ಒಂದು ವೇಳೆ ಓದಿದ್ದರೂ ಅದನ್ನು ಮರೆಮಾಚಿದ್ದು ಮತ್ತಷ್ಟು ದೊಡ್ಡಸ್ತಿಕೆಯೆಂದು ನಂಬತಕ್ಕದ್ದು

ಸರ್ಕಾರಿ ಶಾಲೆಗಳಲ್ಲಿನ ವಿದ್ಯಾಧುರೀಣರಾದ ಉಪಾಧ್ಯಾಯರೇ, ಹಳೇ ಹುಡುಗರಿಂದ ಹೊಸಹುಡುಗರಿಗೆ ಪಾಠ ಹೇಳಿಸಿ ಬರೆಸುತ್ತಿರುವಾಗ ಕೂಲಿಮಠಗಳಲ್ಲಿ ಅದೇ ರೀತಿಯಾಗುವುದು ಆಶ್ಚರ್ಯವೇನಲ್ಲ ಮೇಲೆ ಹೇಳಿದ ಗುಣ ಅವಗುಣಗಳ ವಿಷಯ ತನ್ನಂತೆ ಪರರನ್ನು ಗ್ರಹಿಸಿಕೊಳ್ಳುವುದು "ವಿದ್ಯಾರ್ಥಿ" ಎಂಬ ಬಾತ್ಮಿದಾರರ ಮರ್ಯಾದೆಗೆ ಕುಂದುಕೊಡುವದನ್ನು ಮನಸ್ಸಿಗೆ ತಕ್ಕೊಳ್ಳದೇ ಇರುವುದು ಬಹಳ ಮಟ್ಟಿಗೆ ಅಧಿಕ

ಕೂಲಿ ಮಠಗಳಿಂದ ಪ್ರೈವೆಟ್ ಸ್ಕೂಲುಗಳ ಹಾಗೆ ತೃಪ್ತಿಯನ್ನು ಹೊಂದಿದ ವಿದ್ಯಾರ್ಥಿಗಳ ಮೇಲೆ ವರ್ಣಿಸಿದ ಸಲಕರಣೆಗಳೇ ಕಾರಣ ಅದನ್ನು ಆಗಾಗ್ಯೆ ಬಿತ್ತರಿಸಬೇಕೆಂಬ ಅವಶ್ಯಕತೆ ಇಲ್ಲದಿದ್ದರೂ "ವಿದ್ಯಾರ್ಥಿ" ಎಂಬ ಬಾತ್ಮೀದಾರರು ಪುನಹ ಪುನಹ ಹೇಳುವುದು ನೋಡಿದರೆ ನನಗೆ ಬಹಳ ಮಟ್ಟಿಗೆ ವ್ಯಾಕುಲ

ಕೂಲಿಮಠಗಳನ್ನು ನಿಶೇಧಿಸಿ ಬರೆದ "ವಿದ್ಯಾರ್ಥಿ" ಎಂಬ ಬಾತ್ಮಿದಾರರನ್ನು ಮುಂದಿಟ್ಟು ಬರೆದ ಸರ್ಕಾರಿ ಶಾಲೆಗಳ ಉಪಾಧ್ಯಾಯರನ್ನು ಈರೀತಿ ಹೊಗಳದ್ದು ನನಗೇನೇ ಮನಸ್ಸು ಸಮಾಧಾನವಿಲ್ಲ ಆದರೇನು ಮಾಡುವುದು! ನಿರ್ವಾಹವಿಲ್ಲ.................................

ಪ್ರೈವೆಟ್ ಸ್ಕೂಲ್ ಹಿತಚಿಂತಕ ಮತ್ತು
ವಿದ್ಯಾಭಿಮಾನಿ

ಆರೋಗ್ಯಚಂದ್ರಿಕೆ

ಇದು ಪ್ರಜಾಕ್ಷೇಮಕ್ಕಾಗಿ ಆರೋಗ್ಯಮಾರ್ಗವನ್ನೂ ಚಿಕಿತ್ಸವನ್ನೂ ಬೋಧಿಸುವ ಒಂದು ಮಾಸಪತ್ರಿಕೆ. ಇದರ ಸಂಪಾದಕರು ಮದ್ರಾಸಿನಲ್ಲಿ ಪ್ರಸಿದ್ಧರಾದ ಡಾಕ್ಟರ್ ಯು. ರಾಮರಾವ್ ಎಮ್. ಎಲ್. ಸಿ ಯವರು ಇದರಲ್ಲಿ ಅನೇಕ ಪ್ರಸಿದ್ಧ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರುಗಳ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವವು.

ಟಪಾಲುಹಾಸಲು ಸೇರಿ ಈ ಪತ್ರಿಕೆಯ ವಾರ್ಷಿಕ ಚಂದ 1—8—0 ರೂ. ಮಾತ್ರ. ಬಿಡಿ ಪತ್ರಿಕೆ ಒಂದಕ್ಕೆ 0—2—0 ಆಣೆ

ಏಜೆಂಟರು :—	ವಿಳಾಸ :—
ಮ॥ ರಾ॥ ರಾ॥ ಎಸ್. ಕೆ.	ಮೇನೇಜರ್,
ಕೃಷ್ಣಪ್ಪ,	ಆರೋಗ್ಯಚಂದ್ರಿಕೆ ಆಫೀಸ್.
ಭಾಗಮಂಡಲ,	323 ತಂಬುಚೆಟ್ಟಿಬೀದಿ,
ಕೊಡಗು.	ಮದ್ರಾಸು

[12—10]

WANTED.

Two Second-hand Motor Bicycles

M. M. SIDDEEK,

22—4 MERCARA.

O. S. Association Magazine.

C. H SCHOOL,

MERCARA.

Edited by MR. B. S KUSHALAPPA B.A.,
Published under the distinguished
Patronage of
T. J. TASKER ESQ., I C S.
Commissioner of Coorg
and
Rao Bahadoor K. CHENGAPPA B A ,
District Magistrate of Coorg

No 2

January 1924, will be out in the 1st week of February 1924

SUBSCRIPTION.

Members of the Association Re. 1-0-0 Postage free
Non-members Re. 1 0 0 Postage extr
Single copy As 0 6 0 „

CONTENTS

1. A forgotten chapter from Coorg Histor
2. Confessions and advertisement of
3. A scene from a Ranger's life.
4. Two! A tale for children
5. Swami Vivekenand—by a "Student.
etc , etc , etc ,

Only limited number of copies ar published

To avoid disappointment

4—4 Register Your Order

Printed & Published by D S Krishnaswamieng Proprietor, at Sreenivas Electric Press, Myso "for Kodagu' Ltd., Mercara—22 2 1924

If not delivered please return to "Kodagu Office, Mercara"
Reg. No. M. 1550.

ಕೊಡಗು.

ಸತ್ಯೇನ ಧರ್ಮೇಣ ... ಸಂಪದ ‖

" ಎಡಿಟರ್ ಕಂಬ್ಯಂಡ ... ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವುದು.

[ಸಂಚಿಕೆ ೩೯

ಸಂಪುಟ ೩] ಕೊಡಗು, ಸರ್ ೧೯೨೪ ನೇ ಇಸವಿ ಫೆಬ್ರುವರಿ, ತಾರೀಖು ೨೯ ನೆಯ ಶುಕ್ರವಾರ.

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನ್ನಡ ಪ್ರಿಂಟಿಂಗ್ ಎಲಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವುದೇ ... ದ್ದರೂ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ... ಜಾಗ್ರತೆಯಾಗಿಯೂ ಸುಲಭಕ್ರಯದಲ್ಲಿಯೂ ಮಾಡಿ ಕೊಡುತ್ತೇವೆ.

Srinivas Electric Press,
MYSORE.

The Saraswathi Publishing Company
ಶಾರದಾಗ್ರಂಥ ಪ್ರಕಟನಾಲಯ.

ಈ ಗ್ರಂಥಮಾಲೆಯ ... ಇದುವರೆಗೆ ಪ್ರಕಟವಾಗಿರುವ ಗ್ರಂಥಗಳು —

		ರು	ಆ	ಪೈ
1	ಪ್ರಿಯಂವದೆ (...) ...	0	6	0
	...	0	10	0
2	ಸ್ನೇಹಲತೆ (ವಂಗಸಾಹಿತ್ಯದ ಭಾಷಾಂತರ)			
3	...	0	12	0
	...	0	8	0
4	ಕಮಲೆ (... ನಾಟಕ)	0	4	0
5	... (ನಾಟಕ)	0	4	0
5	... (ನಾಟಕ)	0	4	0
6	... (ನಾಟಕ)			

... ಚಂದಾದಾರರಿಗೆ ... ರಿಯಾಯಿತಿ ...

ಸರಸ್ವತಿ.

ಉತ್ತಮವಾದ ಶ್ರೇಷ್ಠವಾದ ಕನ್ನಡ ಮಾಸಪತ್ರಿಕೆ

... ವಾರ್ಷಿಕ ಚಂದಾ ರೂಪಾಯಿ 3—0—0 ...

SARASWATHI PUBLISHING Co.,
Post Box No. 57, ... City

HEALTH IS WEALTH

WANTED all to improve health strength and vitality and thus save our nation from physical degeneracy. Send half-anna stamp and get 13 specimen photographs with full particulars from

Director Physical Culture,
P O Basavanagudi,
BANGALORE CITY.

For your requirements of high grade Arms, Ammunition, Wine and Spirits,

APPLY TO:-

Mc. DOWELL & Co., Ltd.,
MERCARA.

24—18

ಸ್ಪೆನ್ಸರ್ ಕಂಪನಿಯ ಸಾಮಾನುಗಳ ಕ್ರಯ

ಉಗ್ರಾಣ ಸಾಮಾನು.

... (Prunes per lb)	0	14	0
... (Fresh herrings)	0	7	0
ಸನ್‌ಲೈಟ್ ಸಾಬೂನ್ ... (Sunlight Soap)	1	4	0
ಟಾಫೀ ಪೌಂಡಿಗೆ Toffee per lb)	1	14	0
... (Sweets per lb)	0	11	0
ಕಳ್ಳು.			
ಓಲ್ಡ್ ಹೈಲ್ಯಾಂಡ್ ಮಾಲ್ಟ್ ವಿಸ್ಕಿ (Old Highland Malt Whisky)	6	0	0
... (Le Rupee Brandy)	6	0	0
ಮಾರ್ಟೆಲ್ಸ್ ಸ್ಪೆಷಲ್ ಬ್ರಾಂಡಿ (Martell's Special Brandy)	6	7	0
ಆಟದ ಸಾಮಾನು.			
... (Cricket Ball at)		5	0
ಟೆನಿಸ್ ಬಾಲ್ ... (Tennis balls per dozen)	21	4	0

SPENCER & Co. Ltd
Mercara and Pollibetta, Coorg
[24—18]

BUMPER CROPS

Always follow on application of our fertilisers

ದೊಡ್ಡ ಬೆಳೆ ...

... ನಮ್ಮ ... fresh ...

Siddeek ... Works,
MERCARA

21—7

ಮಲೆಯಾಳ ವೈದ್ಯಶಾಲಾ

ಮಲೆಯಾಳದ ನಂಬೀಶನ್ ಮತ್ತು ... ಎಂಬ ಆ ಯುರ್ವೇದ ವೈದ್ಯಶಾಲೆಯಲ್ಲಿ ಒಂದು ಶಾಖೆಯು ವೀರ ರಾಜೇಂದ್ರಪೇಟೆಯಲ್ಲಿ ತೆರೆದಿರುತ್ತೆ. ಇಲ್ಲಿ ಯಾವವಿಧದ ವ್ಯಾಧಿಯಾಗಿದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧ ಕೊಟ್ಟು ಗುಣಪಡಿಸಲ್ಪಡುತ್ತೆ. ಔಷಧದ ಚಾರ್ಜು ಬಹಳ ಕಡಿಮೆ. ... ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು.

ನಾರಾಯಣನಂಬೀಶನ್,
ಆಯುರ್ವೇದ ವೈದ್ಯರು,
ವೀರರಾಜೇಂದ್ರಪೇಟೆ.

12—6

ಜೀವ ವಿಮೆ.

ಸಾವಿರಾರು ಕುಟುಂಬಗಳಲ್ಲಿ ಸಂಪಾದನೆಯ ಮಾ ... ಮರಣದ ನಂತರ ... ಅನ್ನ ಸಿಗದೆ ...

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬದ ಜೀವನಾ ... ಧಾರಕ್ಕೆ ... ಒದಗಿಸುವುದೇ ಜೀವವಿಮೆ.

ಅತಿ ಕಡಿಮೆ ದರದಲ್ಲಿ ... ಲಾಭ ... ದರಂತೆ ... ಸಂಸ್ಥೆಯಾದರೂ ... ಮೈಸೂರಿನ ಸರಕಾರದ ... ಜೀವವಿಮೆ ... ಜೀವನಾಧಾರಕ್ಕೆ

ಬದುಕಿರುವಾಗಲೇ ... ಒಂದು ... ಒದಗಿಸುವ ... (Economic ... Condition) ... ಮೂರೆ!

... 12 ... ಪಾಲಿಸಿಗಳು ... ಸೆಕ್ಯೂರಿಟಿಗಾಗಿಯೂ ... ಗವರ್ನ್‌ಮೆಂಟ್ ... 1 ಲಕ್ಷ ರೂಪಾಯಿ ... ಬ್ಯಾಂಕಿನ ... ಗವರ್ನ್‌ಮೆಂಟ್ ... ಪಾಲಿಸಿ ... ಬ್ಯಾಂಕ್ ... ವಿಚಾರಿಸಿರಿ.

ಬಿ. ಎಸ್. ಅರಾಧ್ಯ
ಲೈಫ್ ಇನ್ಸೂರೆನ್ಸ್ ಆಫೀಸ್ ...

ಪ್ರಕಟನೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್
ಲಿಮಿಟೆಡ್.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

	ರೂ.
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	6,820
ಬಾಕಿ ಬರುವ ಶೇರ್ ...	47,950

ಈ ಬ್ಯಾಂಕಿನಿಂದ ಕೊಡಗು ಜಿಲ್ಲೆಯ ಸಹಕಾರಿ ಸಂಘಗಳಿಗೆ ... ಸಾಲ ಕೊಡತಕ್ಕದ್ದು.

... ವಾಯಿದೆ ಅಥವಾ ಹೆಚ್ಚಿನ ವಾಯಿದೆಯ ... ಸಾಲಿಯಾನ 6-4-0 ... ಬಡ್ಡಿ ದರದಲ್ಲಿ ... ಕಡಿಮೆ ವಾಯಿದೆಯ ... ಸಾಲಿಯಾನ 5 ರ ಬಡ್ಡಿ ...

... ಬ್ಯಾಂಕ್ ... ಮಾಡುತ್ತಾರೆ.

ಪ್ರೆಸಿಡೆಂಟು ... ಕಟ್ಟೆಮನೆಯವರು, ... ರಾವ್ ಬಹದ್ದೂರ್ ಬಿ. ಎ. ಬಿ. ಎಲ್.

ಸೆಕ್ರೆಟರಿ.
... ಬಿ. ಎ. ಬಿ. ಎಲ್.

ತಾರೀಖು 22—2—1924.

“ಕೊಡಗು”

೧೯೨೪ ನೇ ಇಸವಿ ಫೆಬ್ರವರಿ ತಾ|| ೨೯ ನೇ ಶುಕ್ರವಾರ.

1922-23 ರ ಆಡಳಿತೆ ವರದಿ.

ನಂ 2

1922-23 ನೇ ವರ್ಷದಲ್ಲಿ ಈ ದೇಶದ ಸರಕಾರದ ಉತ್ಪತ್ತಿಯು 1847270 ರೂ ಆಗಿತ್ತು. ಖರ್ಚು 1501736 ರೂ ಆಯಿತು. ಒಟ್ಟು ಉಳಿದ 345531 ರೂ ಈ ಬೊಬಲಗೆಲ್ಲಾ ಇಂಡಿಯಾ ಸರಕಾರಕ್ಕೆ ಹೋಯಿತು. ಈ ಲೆಖ್ಖದಷ್ಟೈಕಿ ಫಾರೆಸ್ಟ್ ಇಲಾಖೆಯ ಉತ್ಪತ್ತಿ 9 6238 ರೂ ಖರ್ಚು 546594 ರೂ ಅಂತು ಉಳಿದದ್ದು 399644 ರೂ ಈ ರೀತಿ ದೇಶದ ಜನಗಳಿಗೆ ಬೇಕಾದದಕ್ಕಿಂತ ಹೆಚ್ಚಾಗಿ ಫಾರೆಸ್ಟ್ ಇಲಾಖೆಯ ಉತ್ಪತ್ತಿಗಳನ್ನು ಉಪಯೋಗಿಸಿಕೊಳ್ಳುವದು ದೇಶಕ್ಕೆ ತುಂಬಾ ಅನ್ಯಾಯವಾಗಿದೆ. ದೇವರು ಕೊಟ್ಟ ಗಂಧದಮರ ಮತ್ತು ಇತರ ಕಾಡಿನ ಮರಗಳನ್ನು ಅವಶ್ಯಕ್ಕಿಂತ ಹೆಚ್ಚಾಗಿ ಮಾರಿದ್ದರಿಂದ ದೇಶಕ್ಕೆ ನಷ್ಟವೆಷ್ಟಾಯಿತೆಂಬದು ಮೇಲಿಂದಮೇಲೆ ನೋಡುವವರಿಗೆ ಗೊತ್ತಾಗಲಾರದು. ಇಂಥಾ ಅಮೂಲ್ಯಸಾಧನವನ್ನು ದೇಶಕ್ಕೆ ಕಷ್ಟ ಬಂದಾಗ ಉಪಯೋಗಿಸಿಕೊಳ್ಳಲಿಕ್ಕಾಗಿ ಕಾದಿಡಬೇಕೇ ಹೊರತು ಅವಶ್ಯವಿಲ್ಲದೇ ಇರುವಾಗ ಕಡಿದು ಮಾರಿದ್ದು ಯಾಕೆಂಬದನ್ನು ಸರಕಾರದವರು ರೈತರಿಗೆ ಸಮಾಧಾನ ಕೊಡಬೇಕಾಗಿದೆ. ಕಾಡುಮರಗಳು ಕೊಳೆತು ಹಾಳಾಗುತ್ತಿದ್ದವೇ? ಅನಾವಶ್ಯವಾಗಿ ಸಿಬ್ಬಂದಿಗಳನ್ನು ಹೆಚ್ಚಿಸಿಕೊಂಡು ಇವರಿಗೆ ಕೆಲಸ ಕೊಡಲಿಕ್ಕಾಗಿ ಅವಶ್ಯಕ್ಕಿಂತ ಹೆಚ್ಚಿನ ಮರಗಳನ್ನು ಕಡಿದು ಮಾರಿದ್ದಾದರೆ ಸರಕಾರದ ತಪ್ಪು ಇನ್ನೂ ಹೆಚ್ಚಾಯಿತು. ಮರಗಳಿಗೆ ಕ್ರಯ ಸ್ವಲ್ಪಮಟ್ಟಿಗೆ ಹೆಚ್ಚಿಗೆ ಸಿಕ್ಕಿದ್ದರಿಂದ ಹೆಚ್ಚು ಉತ್ಪತ್ತಿಗೆ ಕಾರಣವಿರಬಹುದು. ಆದರೆ ಹೆಚ್ಚಿಗೆ ಕ್ರಯವಿರುವ ವರುಷದಲ್ಲಿ ಹೆಚ್ಚಿಗೆ ಮರಗಳನ್ನು ಕಡಿದಿರೆಯೆಂತ ರಿಪೋರ್ಟಿನಿಂದಲೇ ತಿಳಿಯಬರುತ್ತೆ. ಈ ದೊಡ್ಡ ಉತ್ಪತ್ತಿಯ ಪೈಕಿ ಮಾಕೂಟದ ಟ್ರಾಮ್‌ವೈನಿಗ 130558 ರೂ ಖರ್ಚು ಮಾಡಿದಹಾಗೆ. ಈ ಟ್ರಾಮ್‌ವೈನಿನ ಮೂಲಕ ಪ್ರಯೋಜನವೇನೂ ಆಗದೆ ಇರುವಾಗ ಪುನಃ ಪುನಃ ಅದಕ್ಕೆ ಖರ್ಚುಮಾಡುತ್ತಾ ಹೋಗುವದರಲ್ಲಿ ನ್ಯಾಯವಿಲ್ಲ. ಇಂಥಾ ಅನಾವಶ್ಯದ ಖರ್ಚುಮಾಡಿಯೂ ಸಹ ಸುಮಾರು 4 ಲಕ್ಷ ರೂಪಾಯಿ ಉಳಿತಾಯಮಾಡಿ ಇಂಡಿಯಾ ಸರಕಾರಕ್ಕೆ ಈ ಬಡದೇಶದಿಂದ ಕೊಟ್ಟದ್ದು ತುಂಬಾ ಅತೃಪ್ತಿಕರ. ಇಷ್ಟು ಹೆಚ್ಚಿಗೆ ಉತ್ಪತ್ತಿಮಾಡುವ ಯೋಚನೆ ಇದ್ದಿದ್ದರೆ ರೈತರಿಂದ ವಸೂಲ್‌ಮಾಡುವ ಕಂದಾಯದಪೈಕಿ ಯಾವದನ್ನಾದರೂ ರೈತರಿಗೆ ಮಾಫಿ ಬಿಡಬೇಕಾಗಿತ್ತು. ಮಾಫಿ ಮಾಡುವದರ ಬದಲು ಇನ್ನೂ ಅರ್ಧಆಣೆ ಸೆಸ್ ಹೆಚ್ಚಿಗೆ ವಸೂಲಮಾಡಿದರು. ಇದಕ್ಕಾಗಿಯೇ ರೈತರ ಅಧೀನವಾಗಿರುವ ಸರಕಾರ ಬೇಕೆಂತ ಕೂಗಿಕೊಳ್ಳುವದಾಗಿದೆ.

ಫಾರೆಸ್ಟ್ ಇಲಾಖೆಯಲ್ಲಿ ಉತ್ಪತ್ತಿ ಇದೆ ಎಂಬ ಕಾರಣದಿಂದ ದೊಡ್ಡ ಸಂಬಳದ ಆಫೀಸರುಗಳನ್ನೂ ಹೆಚ್ಚಿಸಿಕೊಂಡಿದ್ದಾರೆ. ಕೌನ್ಸಿಲ್ ಬಂದರೂ ಸಹ ಈ ಆಫೀಸರುಗಳ ಸಂಬಳ ಕಡಿಮೆಮಾಡಲಿಕ್ಕಾಗಲೀ, ಕೆಲಸವನ್ನೇ ವಜಾಮಾಡಲಿಕ್ಕಾಗಲೀ ಕೌನ್ಸಿಲಿಗೆ ಪವರ್ ಇಲ್ಲ. ಕೌನ್ಸಿಲ್ ಬರುವ ಮುಂಚೆ 300 ರೂ. ಸಂಬಳ ಇದ್ದ ಇಂಜಿನಿಯರ್ ಸಾಹೇಬರಿಗೆ 800 ರೂ ಗೆ ಹೆಚ್ಚಿಸಿಕೊಂಡರೆಂತ ವರ್ತಮಾನವಿದೆ. ಇಷ್ಟು ದೊಡ್ಡ ಸಂಬಳದ ಇಂಜಿನೀಯರ್ ಈ ಚಿಕ್ಕದೇಶದ ಚಿಕ್ಕಕೆಲಸಕ್ಕೆ ಯಾತಕ್ಕೆ? ಆದರೂ ಈ ಆಫೀಸರು ಮಾಕೂಟದ ಕೆಲಸಕ್ಕಾಗಿಯೇ ಇರುವವರಂತೆ. ಇವರಿಗೆ ಖಾಯಂವಾಸ ಮಡಿಕೇರಿಯಲ್ಲಿ. ಇದರಿಂದಲೇ ಇವರ ಸಹಾಯವೇ ಮಾಕೂಟದ ಕೆಲಸಕ್ಕೆ ಅವಶ್ಯವಿಲ್ಲವೆಂತ ಗೊತ್ತಾಗುತ್ತೆ. ಒಟ್ಟು ಇಂಡಿಯಾದಲ್ಲಿ ಫಾರೆಸ್ಟ್ ಇಂಜಿನೀಯರುಗಳು 13 ಜನರಿರುವರಂತೆ. ಈ 13 ಜನರಲ್ಲಿ ಒಬ್ಬನನ್ನು ಈ ಚಿಕ್ಕರಾಜ್ಯದಲ್ಲಿ ಇಟ್ಟುಕೊಳ್ಳುವದೆಂದರೆ ಬಡವನ ಮನೆಯಲ್ಲಿ ಆನೆ ಸಾಕಿದಂತೆ ಅಲ್ಲವೇ. ಇಂಥಾ ಇಂಜಿನೀಯರ್ ಬೇಕೆಂತಾದರೆ ನಾಲ್ಕಾರು ಜಿಲ್ಲೆಗಳಿಗೆ ಒಬ್ಬನಂತೆ ಇಟ್ಟುಕೊಂಡರೆ ಸಾಲದೇ? ಈ ವಿಷಯವನ್ನು ಕೌನ್ಸಿಲ್ ಮೂಲಕ ದೇಶಕ್ಕೆ ಸರಕಾರದವರು ಸಮಾಧಾನ ಕೊಟ್ಟಾರೆಂತ ನಮಗೆ ತೋರುತ್ತೆ. ಅನಾವಶ್ಯ ಆಫೀಸರುಗಳು ಇನ್ನೂ ಅನೇಕ ಇದ್ದಾರೆ. ರೈತರ ಸ್ಥಿತಿ ಹೇಗಿದೆ ಎಂತ ನೋಡೋಣ. ಜನನಸಂಖ್ಯೆ 1921-22 ಕ್ಕಿಂತ 222 ಕಡಿಮೆ. ಮರಣಸಂಖ್ಯೆ 4679 ರಿಂದ 5668 ಕ್ಕೆ ಹೆಚ್ಚಿದೆ. ವಿಶೇಷ ಅಂಟುರೋಗಗಳೇನೂ ಇಲ್ಲವೆಂತಲೂ ಬರೆದಿದೆ. ಇಂಥಾ ವರ್ಷದಲ್ಲೇ ಜನನ ಕಡಿಮೆ, ಮರಣ ಹೆಚ್ಚಾಗಲೂ ಇರುವಾಗ ಬಡತನವೇ ಇದಕ್ಕೆ ಕಾರಣವೆಂತ ಧೈರ್ಯವಾಗಿ ಹೇಳಬಹುದಷ್ಟೆ. ಈ ರೀತಿ ಬಡತನವೂ ಅನಾರೋಗ್ಯವೂ ಹೆಚ್ಚಿದರೂ ಸಹ ಆಸ್ಪತ್ರೆಗಳು ಹೆಚ್ಚುವದಿಲ್ಲ. ಆರೋಗ್ಯ ಸಾಧಕಗಳು ಹೆಚ್ಚುವದಿಲ್ಲ. ಔಷಧಿ ಕೊಂಡುಕೊಳ್ಳುವದು ಕಡಿಮೆಯಾಗುತ್ತೆ. ಸರಕಾರದಿಂದ ವಿದ್ಯೆಗೆ ಖರ್ಚುಮಾಡುವದೂ ಕಡಿಮೆಯಾಗುತ್ತೆ. ಇದನ್ನೆಲ್ಲಾ ನೋಡುವಾಗ ರೈತರ ಮುಂದಿನ ಸ್ಥಿತಿಯು ಬಹಳ ಶೋಚನೀಯವಾಗಿ ಕಾಣುತ್ತೆ. ಕೌನ್ಸಿಲಿಗೆ ಹೋದವರು ಮರ್ಯಾದೆಗೂ ಕಿತಾಬುಗಳಿಗೂ ಮರುಳಾಗದೆ ಬಡರೈತರ ಕ್ಷೇಮವನ್ನು ಅಭಿವೃದ್ಧಿಗೊಳಿಸಲು ತಮ್ಮಿಂದ ಸಾಧ್ಯವಿರುವ ಸರ್ವಪ್ರಯತ್ನ ಮಾಡಿಯಾರೆಂತ ಹಾರೈಸುತ್ತೇವೆ. ಈ ಕೌನ್ಸಿಲಿನಿಂದ ವಿಶೇಷ ಸಾಧ್ಯವಿದೆಯೆಂತ ನಾವು ಊಹಿಸುವದಿಲ್ಲ. ಆದರೂ ಈಗಿನ ಆಡಳಿತಕ್ರಮವು ವ್ಯಾಪಾರಿಗಳ ಕ್ರಮವಾಗಿದೆಯೆಂಬದನ್ನು ಸರಕಾರಕ್ಕೆ ತಿಳಿಸಿಕೊಡುವದಾದರೂ ಕೌನ್ಸಿಲಿನಿಂದ ಸಾಧ್ಯವಿದೆಯೆಂತ ನಮಗೆ ತೋರುತ್ತೆ. ಮಲೇರಿಯಾ ಜ್ವರವು ಮರಣಸಂಖ್ಯೆಯು ಹೆಚ್ಚಿಸಲಿಕ್ಕೆ ಕಾರಣವಾಗಿದೆ. ಈ ಹಾವಳಿಯನ್ನು ನಿವಾರಿಸಲಿಕ್ಕೆ ಹಾಳುಬಾವಿಗಳನ್ನು ಮುಚ್ಚುವದು, ಕಚ್ಚಡ ತೆಗೆಯುವದು, ಮಲಿನಪದಾರ್ಥಗಳನ್ನು ಊರಿನಿಂದ ದೂರಕ್ಕೆ ಸಾಗಿಸುವದು, ಶಾಲೆಗಳಿಗೆ ಕೊಯಿನಾ ಪುಡಿಯನ್ನು ಮಫತಿಯಾಗಿ ಕೊಡುವದು. ಈ ಕೆಲಸಗಳನ್ನು ಮಾಡುತ್ತಾರಂತೆ. ಹಾಳುಬಾವಿ ಮುಚ್ಚಿಸುವದು, ಕಾಡುಕಡಿಸುವದು ಎಲ್ಲಿ ಮಾಡುತ್ತಿದ್ದಾರೆಂಬದನ್ನು ನಾವು ತಿಳಿಯಬೇಕಾಗಿದೆಯಷ್ಟೆ. ಸ್ಕೂಲುಗಳಿಗೆ ಕೊಯಿನಾಪುಡಿಯನ್ನು ಸರಬರಾಯಿ ಮಾಡಿ ತಪ್ಪದೆ ಅದನ್ನು ಸ್ಕೂಲಿಗೆ ಮಾತ್ರ ಮಾಡಿದರೆ ಸಾಲದು. ಪಟೇಲರ ಮೂಲಕ ಪ್ರತಿಮನೆಗೂ ಮಫತಿಯಾಗಿ ಕೊಯಿನಾ ಕಳಿಸಬೇಕು. ಗ್ರಾಮಪಂಚಾಯತಿಗಳನ್ನು ಮಾಡಿ ಇವರ ಮೂಲಕ ಸ್ವಲ್ಪಕ್ರಯವಾಗಿಲ್ಲ ಬಡವರಾದರೆ ಕೊಯಿನಾ ಮಫತಾಗಿ ದೊರಕುವಂತೆ ಮಾಡಿಕೊಡಬೇಕು. ಈ ವರುಷದ ಬಜೆಟ್ಟಿನಲ್ಲಿ ಆದರೂ ಕೌನ್ಸಿಲರುಗಳು ಈ ಸಹಾಯ ಪ್ರಜೆಗಳಿಗೆ ಸಿಕ್ಕುವಂತೆ ಮಾಡಿಕೊಡಬೇಕಾಗಿದೆ. ಊರುಗಳಿಗೆ ತಿರುಗಿ ಔಷಧಿ ಕೊಡುವ ಆಸ್ಪತ್ರೆಗಳು ದೇಶಕ್ಕೆ ಇರುವ ಕಡಲೇ ಸಾಧವಿಲ್ಲದಿದ್ದರೆ ಕೊಯಿನಾ ಪುಡಿಯಾದರೂ ದೊರಕುವಂತೆ ಮಾಡಿಕೊಡಬೇಕು. ಪ್ರೋಫೆಸಿಗಳ ಮೂಲಕ ಮಲೇರಿಯಾ ತಡೆಯುವ ಕೆಲಸ ಬೇಗನೆ ದೊರಕುವಂತೆ ಮಾಡಿಕೊಡಬೇಕು.

ಪ್ರೈಮರಿ ವಿದ್ಯಾಭ್ಯಾಸವನ್ನು ಸಂಪೂರ್ಣವಾಗಿ ಮಫತುಮಾಡುವ ಯೋಚನೆ ಇಟ್ಟುಕೊಂಡು ಕೂಡಲೇ ಫ್ರೀಶಿಪ್ ಶೇಕಡ 50 ಕ್ಕಾದರೂ ಹೆಚ್ಚಿಸಬೇಕು. ಫ್ರೀಶಿಪ್ಪಿಗೆ ಹೆಚ್ಚಿಗೆ ಅರ್ಜಿಗಳು ಬಂದವೆಂಬದು ಇದರಿಂದ ಜನರ ಸ್ಥಿತಿ ಹೆಚ್ಚಿದೆಯೆಂಬದು ವಿಶದವಾಗುತ್ತದೆ. ಬರೆದಿದೆ. ಇಂಗ್ಲಿಷ್ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದೆಯೆಂತಲೂ ಇದಕ್ಕೆ ಕಾರಣವೇನೆಂದರೆ ಇಂಗ್ಲಿಷ ಕಲಿಯಬೇಕಾದರೆ ಕೊಡಬೇಕಾದ ಹೆಚ್ಚಿನ ಫೀಸನ್ನು ಕೊಡಲಿಕ್ಕೆ ರೈತರಿಗೆ ಶಕ್ತಿ ಇಲ್ಲದಿರುವದೇ ಕಾರಣವಿರಬೇಕೆಂತ ಬರೆದಿದೆ. ಈ ರೀತಿ ಮೇಲಿಂದಮೇಲೆ ಪ್ರಜೆಗಳ ಬಡತನವನ್ನು ಒಪ್ಪುವದು ಬಹಳ ತೃಪ್ತಿಕರ. ರೈತರು ಬಹಳ ಅಸುಖದಲ್ಲಿದ್ದಾರೆ ಕಷ್ಟವಾಗಿದ್ದಾರೆ ಎಂತ ಈಗಿನ ಸ್ಥಿತಿಯಲ್ಲಿ ಬರೆದರೆ ಅಧಿಕಾರಿಗಳಿಗೂ ಪ್ರಜೆಗಳಿಗೂ ತಪ್ಪು ಅಭಿಪ್ರಾಯ ಕೊಟ್ಟಂತಾಗುತ್ತೆ. ರೈತರು ಸಂತೋಷವಾಗಿ ಇದ್ದದ್ದು ಇದ್ದಂತೆಯೇ ತಿಳಿದುಕೊಂಡು ಅದಕ್ಕೆ ಪರಿಹಾರವನ್ನು ಯೋಚಿಸಿಕೊಳ್ಳುವದು ಅವಶ್ಯ. ವಿದ್ಯೆಗಾಗಿ 1920-21 ರಿಂದ ಈಚೆಗೆ ಯಾವಯಾವ ಬಾಬಿನಿಂದ ಎಷ್ಟು ಹಣ ವೆಚ್ಚವಾಗಿದೆಯೆಂಬದನ್ನು ರಿಪೋರ್ಟಿನಲ್ಲಿರುವ ಈ ಕೆಳಗಿನ ಪಟ್ಟಿಯಿಂದ ತಿಳಿಯುತ್ತೆ.

	1920 21	1921 22	1922 23
ಸರಕಾರ	62.18	65 72	54 36
ಲೋಕಲ್ ಫಂಡ್	14 78	12 87	18 66
ಮ್ಯುನಿಸಿಪಾಲಿಟಿ	1 59	1 94	
ಫೀಸ್	11 71	13 31	22 81
ಇತರ ಬಾಬು	7 24	6 16	4 07

ಈ ಪಟ್ಟಿಯನ್ನು ನೋಡಿದರೆ ಸರಕಾರದ ವದಲಿಕೆ ಕಡಿಮೆಯಾಗಿದೆ. ಇದು ಯಾಕೆ? ಬಡತನವು ತುಂಬಿ ಇದೆ ಎಂತ ಒಪ್ಪುವಾಗ ಫೀಸಿನ ಉತ್ಪತ್ತಿ ಹೆಚ್ಚಿಸಿ ಸರಕಾರದ ಖರ್ಚು ಕಡಿಮೆಮಾಡುವದು ಎಂದೂ ನ್ಯಾಯವಾದದ್ದಲ್ಲ. ಮೇಲೆ ನಾವು ತೋರಿಸಿರುವಂತೆ ಅವಶ್ಯಕ್ಕಿಂತ ಹೆಚ್ಚಾಗಿ ಉತ್ಪತ್ತಿಯು ಸರಕಾರವು ಮಾಡಿಕೊಳ್ಳುತ್ತಿರುವಾಗ ಗರೀಬರಿಂದ ಇನ್ನೂ ಹೆಚ್ಚು ಫೀಸ್ ತೆಗೆದುಕೊಳ್ಳುವದು ನ್ಯಾಯವಲ್ಲ.

ಪಂಚಮರ ಸಭೆಯ ಮೂಲಕ ತಮ್ಮ ಜಾತಿಯವರಿಗೆ ವಿದ್ಯೆಕ್ಕೆ ಹೆಚ್ಚಿಗೆ ಸಹಾಯ ಬೇಕೆಂತ ಕೇಳಿಕೊಂಡಿದ್ದಾರಂತೆ. ಈ ಸಹಾಯಕೊಡಲಿಕ್ಕೆ ಮಕಳಪ್ಪ ತಯಾರಾಗಿದೆಯೆಂತೆ. ಹಣವಿಲ್ಲದೇನೇ ಜಾತಿಯಂತೆ. ಈಗ ಬಂದಿರುವ ಕೌನ್ಸಿಲ್ ಮೂಲಕವಾಗಿಯಾದರೂ ಹಣ ದೊರಕಿಸಿಕೊಳ್ಳುವದು ಅವಶ್ಯ. ಈ ಅಸ್ಪೃಶ್ಯರಿಗೆ ಪ್ರತ್ಯೇಕ ಸ್ಕೂಲುಗಳು ಇಡುವದಕ್ಕಿಂತ ಜಾತಿಜನಗಳ ಸ್ಕೂಲ್‌ಗಳಿಗೇನೇ ಇವರನ್ನು ಸೇರಿಸಿಕೊಳ್ಳುವದು ಉತ್ತಮವೆಂತ ಸರಕಾರದ ಮತವಾಗಿದೆ. ಈಗಾಗಲೇ ಪಂಚಮರು “ಉತ್ತಮ” ರ ಶಾಲೆಗೆ ಹೆಚ್ಚಾಗಿ ಸೇರಿಕೊಳ್ಳುತ್ತಿದ್ದಾರಂತೆ. ಈ ರೀತಿಯಲ್ಲಿ ಮಹಾತ್ಮರ ಬೋಧನೆಯನ್ನು ಪ್ರಜೆಗಳು ಶೀಘ್ರದಲ್ಲೇ ಜಾರಿಗೆ ತಂದುಕೊಂಡರೆ ಅಸ್ಪೃಶ್ಯತೆ ಎಂಬ ರೋಗವು ನಮ್ಮ ದೇಶದಲ್ಲಿ ಪ್ರಬಲವಾಗಲಾರದು. ಜುಲುಮಿನಿಂದ ಜನರ ಮನಸ್ಸಿಗೆ ವಿರೋಧವಾಗಿ ನಡಿಸಬೇಕೆಂತ ನಾವು ಹೇಳುವದಲ್ಲ. ಜನರಲ್ಲಿಯೇ ನಾವು ಕೋರಿಕೊಳ್ಳುವದೇನೆಂದರೆ—ಸ್ವಜಾತಿಯಲ್ಲಿ ಹುಟ್ಟಿದ ಪ್ರತಿಯೊಬ್ಬನಿಗೂ ಜ್ಞಾನದ ಸಂಪಾದನೆಗೆ ಒಂದೇ ತರಹದ ಅನುಕೂಲ ಕೊಡಿರಿ ಎಂದು ಕೇಳುವದಾಗಿದೆ.

ಪಿ ಡಬ್ಲ್ಯು ಇಲಾಖೆಯಲ್ಲಿ ಯಾವ ಹೊಸ ಕೆಲಸಗಳೂ ಇಲ್ಲದೆ 215 000 ರೂ ಖರ್ಚಾಯಿತಂತೆ. ಇದರಲ್ಲಿ 1 84 000 ರೂ ರಸ್ತೆಗಳಿಗೇನೇ ಖರ್ಚು. ಮಳೆಯಿಂದ ರಸ್ತೆಗಳು ಸೇತುವೆಗಳು ಹೆಚ್ಚಾಗಿ ಹಾಳಾಗಿಲ್ಲದ ವರ್ಷದಲ್ಲಿ ರಸ್ತೆಗಳಿಗೆ ಇಷ್ಟು ಖರ್ಚುಮಾಡುವದು ತೃಪ್ತಿಕರವಲ್ಲ. ರಸ್ತೆಗಳಿಗೆಲ್ಲಾ ಇಷ್ಟೆಲ್ಲಾ ಖರ್ಚಾದರೂ ರೈತರಿಗೆ ಮುಖ್ಯವಾಗಿ ಪ್ರಯೋಜನವಾಗುವ ರಸ್ತೆಗಳಿಗೆ ಸಿಗವಿಲ್ಲ. ವಿಶೇಷ ಟೂರುಗಳು ತಿರುಗುವ ರಸ್ತೆಗಳಿಗೇನೇ ಸಿಗ. ಇಂದಾದರೂ ಹೆಚ್ಚಾಗಿ ತಿರುವ ರೈತರ ರಸ್ತೆಗಳಿಗೂ ತಕ್ಕ ಭಾಗದ ಖರ್ಚು ಸಿಕ್ಕುವಂತೆ ಕೌನ್ಸಿಲರುಗಳು ಮಾಡಿಯಾರೆಂತ ಆಶಿಸುತ್ತೇವೆ.

ರಿಜಿಸ್ಟ್ರೇಶನ್ ಇಲಾಖೆಯಲ್ಲಿ 1300 ರೂ ಉಳಿದಿಯಂತೆ. ಆದರೂ ಈ ಇಲಾಖೆಯಲ್ಲಿ ಸಿಬ್ಬಂದಿ ಜಾಸ್ತಿಯಾದಂತೆ ಇನ್ಸ್ಪೆಕ್ಷನ್‌ದಲ್ಲಿಯೂ ಇಲ್ಲ. ಈ ಇಲಾಖೆಗೆ ತಕ್ಕಷ್ಟು ಸಿಬ್ಬಂದಿಯನ್ನು ಶೀಘ್ರದಲ್ಲೇ ಒದಗಿಸಿಕೊಡಬೇಕಾದದ್ದು ಅತ್ಯಂತ ಅವಶ್ಯವಿದೆ.

ಪೋಲೀಸ್ ಇಲಾಖೆಯಲ್ಲಿ 17 ರಾಜೀನಾಮೆಗಳೂ 6 ಡಿಸ್ಮಿಸ್ ಆಡರುಗಳೂ ಆದವಂತೆ. ಇದರಿಂದ ಏನು ಊಹಿಸಬಹುದೆಂದರೆ—ಜನಸಾಮಾನ್ಯವಾಗಲೇ ತಕ್ಕಷ್ಟು ಎಚ್ಚರದಿಂದ ನಡೆಯುವದಿಲ್ಲ. ಕೆಲಸದಲ್ಲಿದ್ದವರು ಯಾಕೆ ಹೆಚ್ಚಾಗಿ ರಾಜೀನಾಮೆ ಕೊಡುತ್ತಾರೆಂಬದನ್ನು ಇಲಾಖೆಯವರು ತಿಳಿಸಿಕೊಡಬೇಕಷ್ಟೆ.

ಕೌನ್ಸಿಲಿನ ಸಹಾಯದಿಂದ ಪ್ರಾರಂಭವಾಗುವ 1924 ನೇ ಸಾಲಿನ ರಿಪೋರ್ಟಿನ ಮೇಲಾದರೂ ತೃಪ್ತಿಕರವಾದ ಟೀಕೆ ಬರೆಯಲಿಕ್ಕೆ ಸಾಧ್ಯವಾಗುವಂತೆ ಹೊಸ ಕೌನ್ಸಿಲರು ಸಹ ಅನುಕೂಲಮಾಡುವರೆಂದು ನಿರೀಕ್ಷಿಸುತ್ತಾ ಇರುತ್ತೇವೆ.

ವಿಮರ್ಶೆ.

ಅಭಿಮನ್ಯು.—ಲೇಖಕ —ಯಂ ರಾಮರಾವ್ ಬೆಂಗಳೂರು (ದಂಡು) ಬೆಲೆ 2 ಆಣೆ.

ವೆ! ಎಂ ರಾಮರಾಯರು ಕೆಲಕಾಲದಿಂದ ಸುಬೋಧ ಗ್ರಂಥಮಾಲೆಯಲ್ಲಿ ದಿವ್ಯಜಾತಕ ಪುರುಷರ ಜೀವಚರಿತ್ರೆಗಳನ್ನು ಪ್ರಕಟಿಸುತ್ತಿರುವರು. ಇದರಲ್ಲೀ ಧ್ರುವ ಪ್ರಹ್ಲಾದ ಕರ್ಣ ಭೀಷ್ಮ ಮುಂತಾದ ಹಿಂದಿನಕಾಲದ ವೀರರ ಚರಿತ್ರೆಗಳು ಮತ್ತು ಈಗಿನಕಾಲದ ಮಹಾತ್ಮಗಾಂಧಿ, ತಿಲಕ ನವರೋಜಿ ಇತ್ಯಾದಿ ರಾಜಕಾರ್ಯಪ್ರಮುಖರ ಚರಿತ್ರೆಗಳು ಪ್ರಕಟವಾಗಿರುವುವು.

ಅಭಿಮನ್ಯು ಎಂಬ ನಾಮಾಂಕಿತದ ಸಣ್ಣ ಗ್ರಂಥವು ಈಗ ನಮ್ಮ ಕೈಸೇರಿರುವುದು. ಇದರ ಭಾಷೆಯು ಇಂಪಾಗಿರುವುದಲ್ಲದೆ ಶೈಲಿಯೂ ಸೊಗಸಾಗಿರುವುದು. ಈ ಸುಲಭವಹಿಗಳನ್ನು ಆಬಾಲವೃದ್ಧರು ಓದುವುದರಿಂದ ಹೆಚ್ಚು ಲಾಭ ದೊರಕುವುದು. ಬೆಲೆ ಬಹಳ ಕಡಿಮೆ. ಅತ್ಯಂತ ಗರೀಬರು ಸಹ ಈ ಮಾಲೆಯ ಗ್ರಂಥಗಳನ್ನು ತರಿಸಿ ಓದಬಹುದು. ಕನ್ನಡ ಭಾಷಾಪ್ರೇಮಿಗಳಾದ ರಾಮರಾಯರು ರಚಿಸಿದ ಗ್ರಂಥಗಳು ಉತ್ಕೃಷ್ಟವಾದುವುಗಳೆಂದೇ ನಮ್ಮ ಭಾವನೆ. ಅಭಿಮನ್ಯುವು ಎಂಥ ರಣವೀರನೆಂದೂ ದ್ರೋಣಾಚಾರ್ಯರಿಂದ ರಚಿತವಾದ ಪದ್ಮವ್ಯೂಹದಲ್ಲಿ ತನ್ನ ಶತ್ರುಗಳೊಂದಿಗೆ ಹೇಗೆ ಹೋರಾಡಿದನೆಂದೂ ವೈರಿಗಳು ಮೋಸದಿಂದ ಹಿಂದಿನಿಂದ ಅವನ ಕೈಗಳನ್ನು ಕತ್ತರಿಸಿದಾಗಲೂ ಸ್ವಲ್ಪ ಧೈರ್ಯಗುಂದದೆ ಯಾವರೀತಿಯಲ್ಲಿ ಸಾಯುವವರೆಗೆ ಕಾದಾಡಿದನೆಂದೂ ತಿಳಿಯಬೇಕಾದರೆ ಈ ಪುಟ್ಟ ಪುಸ್ತಕವನ್ನು ಓದಿರಿ.

“ರಾಮು”

ದೇವನಿಬೇಟೆಂಗಾ ಸೊಸೈಟಿಯ ವರ್ಷೋತ್ಸವ.

(ಸೆಕ್ರೆಟರಿಯವರಿಂದ)

ಈ ಸಂಘದ 15 ನೇ ವಾರ್ಷಿಕ ಸಮ್ಮೇಳನವು ಶ್ರೀಯುತ ಪಿ ಟಿ ಕುಶಾಲಪ್ಪ, ಎಂ ಎಲ್ ಸಿ ಇವರ ಅಧ್ಯಕ್ಷತೆಯಲ್ಲಿ ಹೈಸ್ಕೂಲು ಹಾಲಿನಲ್ಲಿ ಇದೇ ತಾ|| 2 ನೇ ಶನಿವಾರ ನೆರವೇರಿತು. ಮಂದಿರವು ಸುಂದರವಾದ ಭಾವಚಿತ್ರಗಳಿಂದ ಶೋಭಿತವಾಗಿ ಮನೋಹರವಾಗಿದ್ದಿತು. ಸಾಯಂಕಾಲ 5½ ಗಂಟೆಗೆ ಅಧ್ಯಕ್ಷರು ಸಭಾಸ್ಥಾನವನ್ನು ಅಲಂಕರಿಸಿದರು. ಹೈಸ್ಕೂಲು ಮಂದಿರವು ಕಿಕ್ಕಿರಿಯುವಂತೆ ತುಂಬಿತು. ವಾರ್ಷಿಕ ರಿಪೋರ್ಟು ಓದಿದ ನಂತರ ಮೆ|| ಪಿ ಟಿ ಕುಶಾಲಪ್ಪನವರು ಸ್ವಾರಸ್ಯವಾಗಿಯೂ, ಹೃದಯಂಗಮವಾಗಿಯೂ ಇದ್ದ ಒಂದು ಭಾಷಣವನ್ನು ಮಾಡಿದರು. ಇದು ಕೆಳಗೆ ಪ್ರಕಟಿಸಲ್ಪಟ್ಟಿದೆ. ಸಭೆಗೆ ದಯಮಾಡಿಸಲು ಕಳುಹಿಸಿದ ಆಮಂತ್ರಣಕ್ಕೆ ಮೆ|| ಎಂ ಎಸ್. ಹೆಚ್ ಥಾಂಪಸನ್, ಬಿ ಎ ಯವರ ಮುದ್ರಿಕೆಯಿಂದ ಶಾಂತಿಯೂ ಮೆ|| ಐ ಕೆ ದೇವಯ್ಯ, ಮೆ|| ಟಿ ಬಿ ಮೇದಪ್ಪ ಮೊದಲಾದ ಹಳೆ ವಿದ್ಯಾರ್ಥಿಗಳಿಂದ ಕಾಗದಗಳೂ ಮಹಿಳೆಯರ

...ಪ್ಪುಗಳೂ ತಾವು ಬರಲು ಅನಾನುಕೂಲವಾಗಿದಕ್ಕೆ ವ್ಯಸನಪಟ್ಟು ಸಂಘಕ್ಕೆ ಶುಭಸಂತೋಷಗಳುಂಟಾಗಲೆಂಬ ಸೂಚನೆಗಳಿಂದೊಡಗೂಡಿದ್ದವು ಅನಂತರ ಮಿ|| ಬಿ ಎಸ್ ಕುರಾಪ್ಪ, ವೈಸ್‌ಪ್ರೆಸಿಡೆಂಟರವರ ಭಾಷಣವಾಗಿ ಇಂಗ್ಲಿಷು ನಾಟಕವು ಪ್ರಾರಂಭವಾಯಿತು. ಪ್ರೇಕ್ಷಕರು ತುಂಬಾ ಆನಂದಪಟ್ಟರು. ನಮ್ಮನ್ನಾಳುವ ಸಾರ್ವಭೌಮರ ಶ್ರೇಯ ಪ್ರಾರ್ಥನೆಯು ತೀರಿ ಸಂಘವು ಸಮಾಪ್ತವಾಯಿತು.

ಮಿ|| ಪಾಡುವಂಗಡ ಕುಶಾಲಪ್ಪನವರ ಭಾಷಣ.

ಸಹೋದರ, ಸಹೋದರಿಯರೇ,

ನಿಮ್ಮ ವಾರ್ಷಿಕೋತ್ಸವದಲ್ಲಿ ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿ ಬಹುಮಾನಿಸುತ್ತಿರುವುದಕ್ಕೆ ನಾನು ತುಂಬ ವಂದಿಸುತ್ತೇನೆ. 'ಇಲ್ಲಿ ಮಿಳಿತವಾಗಿರುವ ದೇವಿ ಡಿಬೇಟಿಂಗ್' ಸಂಘವೂ ಬೋರ್ಡಿಂಗಿನ 'ರೀಡಿಂಗ್' ಯೂನಿಯನ್ನೂ ನನಗೆ ಕೇವಲ ಪ್ರೀತಿಯುಕ್ತವಾದುವು. ಮೊದಲನೆಯ ಸಂಘವು ಪುರಾತನವಾದರೂ ಅದರ ಈಗಿನ ಹೆಸರು ಗತಿಸಿದ ಕೊಡಂಡ ದೇವಯ್ಯನವರ ಜ್ಞಾಪಕಾರ್ಥವಾಗಿ ಈಚೆಗೆ ಸುಮಾರು ಹದಿನೈದು ವರ್ಷದಿಂದ ಬಂದದ್ದಾಗಿದೆ.

ಅವರು ಈ ನಮ್ಮ ಹೈಸ್ಕೂಲಿನಲ್ಲಿ ವಿದ್ಯೆ ಕಲಿತವರ ಪೈಕಿ ಅದ್ವಿತೀಯರು. ಪಾಠಪರೀಕ್ಷೆಗಳಲ್ಲಿ ಮಾತ್ರವಲ್ಲ, ಸುಗುಣಗಳಲ್ಲೂ ಸಹ ಅಸಮಾನರಿದ್ದರು. ಆತ್ಮಜ್ಞಾನ ಭಾವ ಭಾವಗಳೆಲ್ಲವರನ್ನು ವಿದ್ಯಾರ್ಥಿಯರ ಪರಮ ಪ್ರಿಯನನ್ನಾಗಿ ಮಾಡುತ್ತಿದ್ದವು. ಅವರಿಗೆ ಜಾತಿಮತ ಇತ್ಯಾದಿ ಭೇದವಿರಲಿಲ್ಲ. ಒಡನಾಡಿಗಳಿಗೆ ಅವರಲ್ಲಿ ಕೆಚ್ಚು ಇದ್ದಿತೆಂದು ಹೇಳಲಾಗುವುದಿಲ್ಲ. ಎಂದರೆ ದೇವಿಷುವರು ನಮ್ಮ ಶಾಲೆಯ ಮಣಿಯಾಗಿದ್ದರು. ಆದರಿಂದಲೇ ಪೂರ್ವ ಒಂದು ದುಸ್ಥಿತಿಯಲ್ಲಿದ್ದ ಸಂಘವು ಅವರ ಹೆಸರನ್ನು ಹೊಂದಿದುದರಿಂದ ಈಚೆಗೆ ಅತ್ಯಂತ ಪ್ರಯೋಜನಕರವಾಗಿ ಪರಿಣಮಿಸಿದೆ. ಆ ಹೆಸರನ್ನಿಕ್ಕಿರುವುದರಿಂದ ವಿದ್ಯಾಪ್ರಿಯೆಯಾದ ಶ್ರೀ ಶಾರದೆಯೇ ಸಂಘದ ಶ್ರೇಯೋಭಿವೃದ್ಧಿಗೆ ತವರಾಗಲೆಂದು ಪ್ರಾರ್ಥಿಸುವ.

ಬೋರ್ಡಿಂಗಿನ 'ರೀಡಿಂಗ್' ಯೂನಿಯನ್ನಿನ ಆದಿ ಹೊತ್ತಿಯು ದಶವರ್ಷಾಗಿದ್ದರೂ ನನ್ನನ್ನು ಕುರಿತ ಅಂಶಗಳಿರುವುದರಿಂದ ಅದನ್ನು ನಾನು ಪ್ರಸ್ತಾಪಿಸುವುದಿಲ್ಲ. ಈ ಸಂಘದ ಸ್ಥಾಪನೆಯಲ್ಲಿ ಕೇವಲ ಸಹಾಯಕರಾಗಿದ್ದ ನಮ್ಮ ಸ್ಕೂಲಿನ ಉಪಾಧ್ಯಾಯರಾದ ದಿವಂಗತ ಐಚೆಟ್ಟಿರ ಮೊಣ್ಣಯ್ಯನವರನ್ನು ವಂದಿಸುವುದಕ್ಕೆ ನಾವು ಈ ದಿನ ಮರೆಯಬಾರದು. ಈ ಶಾಲೆಯ ಹೆಡ್ಮಾಸ್ಟರಾಗಿದ್ದ ಮಿ|| ಸಿ. ರಾಸ್ತ ಫರ್ನಾಂಡಸರು ಯೂನಿಯನ್ನನ್ನು ಸ್ಥಾಪಿಸುವ ವಿದ್ಯಾರ್ಥಿಯರ ಶ್ರದ್ಧೆಯನ್ನು ನೋಡಿ ಅದಕ್ಕಾಗಿ ಅವರು ಈಗಿರುವ ಕೊಠಡಿಯನ್ನೂ ಪೆಟ್ಟಿಗೆ ಪುಸ್ತಕಗಳಿಗಾಗಿ ಉದಾರವಾಗಿ ಹಣವನ್ನೂ ಮಂಜೂರು ಮಾಡಿಕೊಟ್ಟಿದ್ದಕ್ಕೆ ನಮ್ಮ ಕೃತಜ್ಞತೆಯನ್ನು ಸೂಚಿಸುವ.

ಅವರು ಹಿಂದೆ ಇಂತಹ ಒಂದು ಉತ್ಸವದಲ್ಲಿ ಇಲ್ಲಿನ ಜನರೊಳಗೆ ಈತರದ ಸಂಸ್ಥೆಗಳೇನೂ ಇರಲಿಕ್ಕಿಲ್ಲವಾಗಿ ಭಾವಿಸಿದ್ದೆವೆಂದು ಆಶ್ಚರ್ಯಪಟ್ಟರು. ಇವು ನಮ್ಮ ದೇಶದ ಪುರೋಭಿವೃದ್ಧಿಗೆ ಮಾತ್ರವಲ್ಲ, ಹೊರಗಿನ ಜನರಲ್ಲಿ ಈ ದೇಶದ ವಿಷಯ ನ್ಯಾಯವಾದ ಗೌರವವನ್ನುಂಟುಮಾಡಲಿಕ್ಕೂ ಸಹ ಅತ್ಯಾವಶ್ಯಕವಾಗಿವೆ. ಸಭಿಕರೇ, ನಮ್ಮನ್ನು ಇಲ್ಲಿ ಸೇರಿಸಿದ ಈ ಎರಡು ಸಂಸ್ಥೆಗಳೂ ನಮ್ಮ ದೇಶದ ಮುಂದಣ ಅಭಿವೃದ್ಧಿಗೆ ಕಾರಣಭೂತರಾಗಲೆಂದು ಪ್ರಾರ್ಥಿಸುವ.

ಅವರು ಈ ಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ, ಇತ್ಯಾದಿ ಸ್ಥಿತಿಗಳಿಗೆ ಕೊಂಚ ಗಮನಕೊಡಬೇಕು. ವಿದ್ಯಾರ್ಥಿಯು ಈ ವಿಷಯಗಳನ್ನರಿತುಕೊಳ್ಳದಿದ್ದರೆ ಪಾಂಡಿತ್ಯವನ್ನು ಸಂಪಾದಿಸಲಾರನು. ಮೊದಲಿದ್ದ ವಿದ್ಯಾರ್ಥಿಯರು ತಮ್ಮ ಪಾಠಪುಸ್ತಕಗಳಲ್ಲೇ ಮಗ್ನರಾಗಿದ್ದರೆ ಈತರದ ಸಂಸ್ಥೆಗಳು ಅಗತ್ಯವಿರಲಿಲ್ಲ. 1917—3—9 ನೇ ಇಸವಿಗಳಲ್ಲಿ ಭಾರತ ವರ್ಷವು [illegible] ಹುಟ್ಟಿದ್ದನ್ನು ನೋಡಿ ಇಲ್ಲಿಯವ [illegible]ಲಿಲ್ಲ. ನಮ್ಮ ಶಾಲೆಯ ಪತ್ರಿಕೆಯ ಕಳೆದ ಸಂಚಿಕೆಯಲ್ಲಿ ಮಿ|| ಸೂಟಾರವರು ಬರೆದಿರುವುದು ನಿಮ್ಮ ಜ್ಞಾಪಕದಲ್ಲಿರಬಹುದು. ಸರಕಾರದವರೂ ಪ್ರಜೆಗಳಿಗೂ ನಮ್ಮಂಥವಾದ ಜೀವನವನ್ನು ಕುರಿತು ಸರಿಯಾಗಿ ಅರಿತುಕೊಳ್ಳುವ ಬಗ್ಗೆ ವಿದ್ಯಾರ್ಥಿಯರು ರಾಜಕೀಯ ವಿಷಯ ಓದಬೇಕು. ಆದರೆ ಅದನ್ನು ಕುರಿತು ವಿನಯದಿಂದ ವಾದಿಸುವುದರಿಂದ ಬಹಳ ಪ್ರಯೋಜನವಿದೆಯೆಂದು ಮುಂತಾಗಿ ಹೇಳಿದ್ದಾರೆ. ಅಂತಹ ಅರಿವಿಲ್ಲದಿದ್ದರೆ ನಾವು ಮನುಷ್ಯರೆನಿಸಿಕೊಳ್ಳಲಾರೆವು. ಯಾವನು ಹೆಚ್ಚು ಬಲ್ಲನೋ ಅವನೇ ದೊಡ್ಡವನು.

ಯಾವ ವಿದ್ಯಾಭ್ಯಾಸದಿಂದ ಆತ್ಮಸಿದ್ಧಿಯುಂಟಾಗುವುದಿಲ್ಲವೋ ಆ ವಿದ್ಯೆಯು ನಿಷ್ಫಲವಾದದ್ದು. ಅದನ್ನರಿಯದ ಮನುಷ್ಯನು ದೇವರ ಸರಕಾರದ ಮತ್ತು ದೇಶದ ಸೇವೆಗೆ ಪೂರ್ತಿ ತಯಾರಾಗಿರುವುದಿಲ್ಲ. ಎಂದರೆ ಆತ್ಮಸಿದ್ಧಿಯಿಲ್ಲದಿದ್ದರೆ ಸೇವೆಗೂ ತ್ಯಾಗಕ್ಕೂ ನಾವು ಹಿಂಜರಿಯುತ್ತೇವೆ. ಆದರಿಂದಲೇ ಈಗಿನ ಜೀವನದಲ್ಲಿ ಅಲ್ಲಲ್ಲಿ ಕುಂದುಕೊರತೆಗಳು ಕಾಣಬರುತ್ತಿರುವವು.

ನಿಮ್ಮಲ್ಲಿ ಕೆಲವರು ಸರಕಾರಿ ಹುದ್ದೆಗಳ ಕೆಳಗಿಂದ ಮುಂದೆ ಪ್ರಜೆಗಳ ಸೇವೆಗೂ ಕಟ್ಟಿಬೀಳಬಹುದು. [illegible] ದವರೂ ದೇಶದ ಪ್ರೀತಿವೇಷದ ವೃದ್ಧಿಯನ್ನೇ ಮುಂದಿಟ್ಟುಕೊಂಡಿರಬಹುದು. ಆದ್ದರೆ ಮೊದಲನೆಯವರಲ್ಲೂ ಕೇವಲ ಏಸ ಕನಸಿನಲ್ಲು ಮಗ್ನವಾಗಿರುವ ನಮ್ಮ ದೇಶದ ಜನಸಾಮಾನ್ಯವು ನಿಸ್ಸ್ವಾರ್ಥ ಸಾಮರ್ಥ್ಯರನ್ನು ಎದುರುನೋಡುತ್ತಿದೆ. ಜಾತಿವರ್ಗಗಳ ವಿಧವಿಧವಾದ ಸಾಧನೆಗಳಿಗೊಳಗಾಗಿರುವ ಪ್ರಜಾಪಕ್ಷಕ್ಕೆ ಅಧಿಕಾರ ಬಲವಿರುವ ಸರಕಾರಿ ಹುದ್ದೆಗಿಂತಲೂ ನಿಮ್ಮ ಶಕ್ತಿ ಅತಿಸಾಮರ್ಥ್ಯರಾದವರ ಸಹಾಯವು ಬೇಕಾಗಿದೆ. ಹಾಗೆಂದರೆ ಅಧಿಕಾರದಲ್ಲಿ ಒಳ್ಳೆಜನರಿರಬೇಕಿಲ್ಲವೆ ಎನಿಸುವಷ್ಟು ಮುಖ್ಯ [illegible] ಒಳ್ಳೆಯವರು ಬೇಕು. ಈ ಜಾತಿ ಹುದ್ದೆದಾರರಿಂದಲೂ ಪ್ರಜಾಪಕ್ಷಕ್ಕೆ ಪರಿಸ್ಥಿತಿ ಅನುರಾಗನ್ಯಾಯವಾಗುತ್ತಿದೆಯೆಂದು ಎಳೆದು ವ್ಯಸನಪಡುತ್ತೇನೆ. ಹಾಗಿದ್ದರೆ ಅವನ್ನು ಹೋಲಾಡಿಸುವುದು ಅತ್ಯಗತ್ಯ. ದೇಶಾಡಳಿತದಲ್ಲಿ ಅನ್ಯಯತ್ತರಿಗೂ ಸಮನಾದ ಅವಕಾಶವೊದಗಲ್ಲದೆ ಒಂದೇ ಕುಲದ ಪ್ರಜಾಪಕ್ಷಕ್ಕೆ ಅವರಲ್ಲಿ ಅನುರಾಗ ಉಂಟಾಗಲಾರದು. ಈಗ ಶಾಸನ ಸಭೆಗೆ ಒದಗಲಿರುವ ಪ್ರಜಾಪ್ರತಿನಿಧಿ ಸಂಸ್ಥೆಗಳ ಮೂಲಕ ಸ್ಥಿತಿಯು ಉತ್ತಮವಾಗಲಿದೆ. ಹಾಗೆಯೇ ನಮ್ಮ [illegible] ಈ ದೇಶದ ಸ್ವತಂತ್ರದ ಮೊಳಕೆಯೆಂದು ನಾವು ಭಾವಿಸುವ ಅದನ್ನು ಯಾವಾಗ ಪಡೆಯಲು ಯೋಗ್ಯರೆಂಬುದನ್ನು ಮಾತ್ರ ತೋರಿಸುವುದು ನಮ್ಮ ಭಾರವಾಗಿದೆ. ಇನ್ನಾದರೂ ನಾವು ಯಾರೆಂದು ತಿಳಿದುಕೊಳ್ಳಲು ಕಾಲವಿಡವಿಲ್ಲ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಹಳೆ ಹೊಸ ವಿದ್ಯಾರ್ಥಿಗಳ ತ್ರೈಮಾಸಿಕ ಪತ್ರಿಕೆ.

ಸಭಾಸ ಸಂಚಿಕೆಯನ್ನು ಕನ್ನಡ ಸಹಚಾರಿಯು ತನ್ನ ಜನವರಿ ಫೆಬ್ರವರಿ ಸಂಚಿಕೆಯಲ್ಲಿ ವಿಮರ್ಶಿಸುವಾಗ ಹೀಗೆ ಬರೆದಿರುತ್ತದೆ "ಈ ಪತ್ರಿಕೆಯನ್ನು ಕನ್ನಡದಲ್ಲಿಯೇ ಪ್ರಕಟಿಸಿದ್ದರೆ ಚೆನ್ನಾಗಿತ್ತೆಂದು ನಮಗೆ ತೋರುತ್ತದೆ."

ಈ ಪತ್ರಿಕೆಯು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಕಟವಾದ ಮಾತ್ರಕ್ಕೆ ಕೊಡಗಿನವರಿಗೆ ಇಂಗ್ಲೀಷಿನ ಮೇಲೆ ಪ್ರೀತಿ ಹೆಚ್ಚೆಂದೂ, ಕನ್ನಡದ ಮೇಲೆ ದ್ವೇಷವಿದೆಯೆಂದೂ ಊಹಿಸುವುದು ಬೇಕಿಲ್ಲ. [illegible]ನ್ನತಿಗಾಗಿ ಅದರ ಸಾಹಿತ್ಯವನ್ನು ಬೆಳಸಬೇಕಾದರೆ, ಅದನ್ನು ಉದ್ಧಾರವನ್ನಾಗಿ ಮಾಡಬೇಕಾದರೆ, ಇಂಗ್ಲೀಷಿನ ಸಹಾಯವಿಲ್ಲದೆ ಆಗಲಾರದು. ಕನ್ನಡದ ಪ್ರಾಚೀನ ಸಾಹಿತ್ಯದ ಮಹತ್ವವು ಪ್ರಕಾಶಕ್ಕೆ ಬಂದದ್ದು ಇಂಗ್ಲೀಷನ್ನು ಕಲಿತಿದ್ದ ಕಿಟ್ಟೆಲ್ ಮುಂತಾದ ರೈಸ ಧೊರೆಗಳಿಂದಲೇ ಅಲ್ಲವೇ? ಸಂಸ್ಕೃತವು ಈಗ [illegible] ಉಳಿದಿರುವುದು ಇಂಗ್ಲೀಷಿನ [illegible] ಅಲ್ಲವೇ? ಹೀಗಿರುವಲ್ಲಿ ಕನ್ನಡವನ್ನು ಉದ್ಧಾರಮಾಡಬೇಕಾದರೆ, ಇಂಗ್ಲೀಷಿನ [illegible] ಅವಶ್ಯವೆಂದು ಹೈಸ್ಕೂಲಿನ ಹಳೆ ವಿದ್ಯಾರ್ಥಿಗಳು ತಿಳಿದುಕೊಂಡು ಈ ಪತ್ರಿಕೆಯನ್ನು ದ್ವಿಭಾಷೆಯಲ್ಲಿ ಹೊರಡಿಸಿರುವುದು ಅವರ ತಪ್ಪೇನಲ್ಲ.

ಮೈಸೂರಿನ ಕನ್ನಡ ಪತ್ರಗಳು ಅದಕ್ಕಿಂತ, ಬೆಂಗಳೂರ ಪತ್ರಿಕೆಗಳೂ, ಮಂಗಳೂರಿನ ಕಂಠೀರವ ಪತ್ರಿಕೆಯೂ, ಒಮ್ಮೊಮ್ಮೆ ನಿರ್ವಾಹವಿಲ್ಲದೆ ಇಂಗ್ಲೀಷು ಲೇಖನಗಳನ್ನು ಪ್ರಕಟಿಸುತ್ತಿರುವುವು. ಇದು ಏಕೆ? ಇಂಗ್ಲೀಷಿಗೆ ಅಂಥ [illegible]ವಿದೆ, ಪ್ರಾಧಾನ್ಯವಿದೆ. ಇದು ವಿಶ್ವಭಾಷೆ ಎನ್ನಿಸಿಕೊಂಡಿದೆ. ಇಂಗ್ಲೀಷು ಭಾಷೆಯ ಸಹಾಯವಿಲ್ಲದೆ ಕನ್ನಡಿಗರಾಗಲಿ, ತಮಿಳರಾಗಲಿ ಅವರವರ ಮಾತೃಭಾಷೆಯನ್ನು ಮೇಲ್ಗೆ ತರಲು ಅವಕಾಶವಿಲ್ಲ.

ಕನ್ನಡವನ್ನೇ ಓದಬೇಕಾದರೂ ಇಂಗ್ಲೀಷ್ ಕಲಿತವರು ಓದುವುದು ಹೆಚ್ಚು. ಇಂಗ್ಲೀಷ್ ತಿಳಿಯದ ಕನ್ನಡಿಗರು ಓದುವುದು ಬಹಳ ಕಡಿಮೆ. ಅನ್ನಂತೆ ಎಲ್ಲ ಪತ್ರಿಕೆಗಳೂ ಕನ್ನಡದಲ್ಲಿಯೇ ಇರಬೇಕೆಂದ ಸಹಚಾರಿಯ ಅಪೇಕ್ಷೆಯು ಸಮಂಜಸವಾದದ್ದಲ್ಲ. ಕನ್ನಡ ನಾಡು ಉದ್ಧಾರವಾಗಬೇಕಾದರೆ ಕನ್ನಡ ನುಡಿ ಎಲ್ಲರ ಬಾಯಿಯಲ್ಲಿಯೂ ಇರಬೇಕು. ಮೊದಲು ಇಂಗ್ಲೀಷ್ ಕಲಿತ ಮಹನೀಯರ ಬಾಯಿಯಿಂದ ಕನ್ನಡ ನುಡಿ ಹೊರಡುವಂತೆ ಮಾಡಬೇಕು. ಪ್ರಯೋಜಕರು ಎಲ್ಲರೂ ಕನ್ನಡವನ್ನೇ ಆದರಿಸಬೇಕು. ಕನ್ನಡ ಕಲಿತ ಕನ್ನಡಿಗರೂ ಇಂಗ್ಲೀಷ್ ಕಲಿತ ಕನ್ನಡಿಗರೂ ಕನ್ನಡ ಭಾಷೆಯ ಏಳಿಗೆಗೆ ನೆರವಾಗಬೇಕೆಂದೇ ದ್ವಿಭಾಷೆಯಲ್ಲಿ ಈ ಪತ್ರಿಕೆಯನ್ನು ಹೊರಡಿಸಲಾಯಿತು.

"ಮುಕ್ತಿವಿಚಾರ" ಎಂಬ ಪದ್ಯಸ್ತೋತ್ರವು ಅತ್ಯುತ್ತಮವಾಗಿದೆ, ಅಂತಹ ವಿಷಯಗಳನ್ನೊಂದನ್ನು ದಯಾ ದೊರಕಿಸಿಕೊಂಡುದಕ್ಕಾಗಿ ನಮ್ಮ ಅಭಿವಂದನೆಗಳವರಿ.

[illegible] 1 ನೇ [illegible] ಸಹಚಾರಿ [illegible] ಯೋಗ್ಯಲೇಖನ [illegible] ಪ್ರಾಯದ ಮೇಲೆ ತಪ್ಪುದನ್ನು ಹಾಕಿ [illegible] ಕೆಳಗಿನ ಕಾಲ ಬಂದೀತೆಂದು ನಮ್ಮಂತಹ ಬಡವರು [illegible] ಯೋಗ್ಯನಿದ್ದಲ್ಲಿ ಯೋಗ್ಯನೆಂದೂ, ಅಯೋಗ್ಯನಿದ್ದಲ್ಲಿ ಅಯೋಗ್ಯನೆಂದೂ ಏಕೆ ನುಡಿಯಬಾರದು! ಇಲ್ಲಿನ ಒಂದೆರಡು ಲೇಖನಗಳು [illegible] ಸ್ಪಷ್ಟವಾಗಿ ಬರೆಯುವುದಕ್ಕಿಂತ [illegible] ಬರೆದಿದ್ದರೆ ಲೇಸಲ್ಲವೇ? ಈಗ ನಮ್ಮ ಪತ್ರಿಕೆಯಲ್ಲಿ ಉತ್ತಮ ಲೇಖನಗಳು [illegible] ಎಂದು ತಿಳಿಯಬಹುದಿತ್ತು.

ಚಂದಾ ಎಂಬ ಊರಲ್ಲಿ ಶ್ರೀಯುತ ಸಿ. ರಾಜಗೋಪಾಲಾಚಾರ್ಯರು ಮಾಡಿದ ಭಾಷಣದ ಸಾರ.

ಮಹಾತ್ಮಾ ಗಾಂಧಿಯವರನ್ನು ಜೈಲಿನಿಂದ ಬಿಟ್ಟದ್ದಕ್ಕೆ ನಾವು ಸಂತೋಷಪಟ್ಟರೆ ಸಾಲದು. ಅವರನ್ನು ನಮ್ಮ ಲೀಡರಾಗಿ ಮಾಡಿಕೊಳ್ಳಲು ತಯಾರಾಗಬೇಕು. ಹಿಂದುಸ್ಥಾನದಲ್ಲಿ ಈಗ ಮುಖ್ಯವಾಗಿ ಗೊತ್ತುಮಾಡಬೇಕಾದ ವಿಷಯ ಯಾವುದೆಂದರೆ ಹಿಂದೂಮುಸಲ್ಮಾನರು ಆ ಸ್ನೇಹ ಪ್ರೀತಿಯನ್ನು ಬೆಳೆಸಬೇಕಾದದ್ದು. ಈ ಕಾರ್ಯಕ್ಕೆ ಮಹಾತ್ಮರ ಬಿಡುಗಡೆಯಿಂದ ಬಹಳ ಸಹಾಯವಾಯಿತು. ಮಹಾತ್ಮರು ತೋರಿಸುವ ದಾರಿಯಲ್ಲಿ ಹೋದರೆ ಮಾತ್ರ ಈ ಪ್ರೀತಿಯು ಸಾಧ್ಯವಾದೀತಷ್ಟೆ. ಅವರ ಬೋಧನೆಯು ಉತ್ತಮವಾದರೂ ಸಾಧ್ಯವಲ್ಲವೆಂತ ಕೆಲವರಿಗೆ ತೋರಬಹುದು. ನಮಗೆ ಸ್ವತಂತ್ರ ಬೇಕು. ಇಲ್ಲವಾದರೆ ಪರತಂತ್ರದಲ್ಲೇ ಇರಬೇಕು. ನಮ್ಮೊಳಗೆ ಅನ್ಯೋನ್ಯ ಹೊಂದಾಣಿಕೆ ಇರುತ್ತಿದ್ದರೆ ಪರತಂತ್ರದಲ್ಲೇ ಬಂಧಿತರಾಗಿ ಇರಬೇಕಾಗುತ್ತಿತ್ತೆ? ನಮಗೆ ಸ್ವರಾಜ್ಯ ಬೇಕಾದರೆ ಹಿಂದೂ ರಾಜ್ಯ ಅಥವಾ ಮುಸಲ್ಮಾನರಾಜ್ಯ ಸಾಧ್ಯವಿಲ್ಲವೆಂತ ಎಲ್ಲರೂ ತಿಳಿಯಬೇಕು. ಸ್ನೇಹಕ್ಕೆ ಬೆಲೆ ಕಟ್ಟಕೂಡದು. ನಮ್ಮೊಳಗೆ ಸ್ನೇಹವಿರಬೇಕಾದರೆ ಇದಾಗಬೇಕು, ಅದಾಗಬೇಕೆಂತ ಹೇಳಿದರೆ ಆಗುವದಿಲ್ಲ. ಅದೇರೀತಿಯಲ್ಲಿ ಹಿಂದೂ ಮುಸಲ್ಮಾನರೊಳಗೆ ಸ್ನೇಹವಿರಬೇಕಾದರೆ ಇನ್ನೊಂದು ವರ್ಗದವರು ಕೇಳುವ ಎಲ್ಲವನ್ನೂ ಸ್ನೇಹಿತನು ಕೊಟ್ಟುಬಿಡುವಂತೆ ಪ್ರತಿಫಲ ನಿರೀಕ್ಷಿಸದೆ ಕೊಟ್ಟುಬಿಡಬೇಕು. ನಾನು ಹಿಂದುವಾಗಿ ಹೇಳುವದೇನೆಂದರೆ—ಮುಸಲ್ಮಾನರು ಏನೇನು ಕೇಳುತ್ತಾರೋ ಅದನ್ನೆಲ್ಲಾ ತಕರಾರಿಲ್ಲದೆ ಕೊಟ್ಟುಬಿಡಬೇಕು. ಇದೇ ಮಹಾತ್ಮರ ಬೋಧನೆ. ನಮಗೆ ಪ್ರತಿಫಲವನ್ನು ದೇವರೇ ಕೊಡಬೇಕಷ್ಟೆ. ಪ್ರತಿಫಲಕ್ಕೆ ದೇವರನ್ನೇ ಬೇಡಿಕೊಳ್ಳಬೇಕು. ನಾವು ಭೂಮಿಯಲ್ಲಿ ಬೀಜ ನಟ್ಟರೆ ಗಿಡವಾಗುತ್ತೆ. ಆದರೆ ಭೂಮಿಯೊಂದಿಗೆ ಕಂಟ್ರಾಕ್ಟು ಮಾಡಿಕೊಳ್ಳುವದಿಲ್ಲ. ಮುಸಲ್ಮಾನರ ಪ್ರೀತಿಯೆಂಬ ಬೀಜವನ್ನು ನಟ್ಟು ಗಿಡವೆಂಬ ಪ್ರತಿಫಲ ಕೊಡಬೇಕಾದ ದೇವರನ್ನು ನಂಬಿಕೊಳ್ಳಬೇಕು. ಇದು ಸಾಧ್ಯವಿಲ್ಲವೆಂತ ತೋರಬಹುದು. ಇದು ಸಾಧ್ಯವಿಲ್ಲದಿದ್ದರೆ ನಾವು ಅನ್ಯೋನ್ಯ ಜಗಳವಾಡುತ್ತಿರಬೇಕಷ್ಟೆ. ಇದಕ್ಕೆ ಪ್ರತಿಫಲ ದೊರೆಯುವದೇನೆಂದರೆ ಪರರಿಗೆ ಅಧೀನತೆ. ಅದ್ದರಿಂದ ನಾವು ಸ್ವಾರ್ಥತ್ಯಾಗಕ್ಕೆ ತಯಾರಿದ್ದರೆ ಮಾತ್ರ ಮಹಾತ್ಮರ ಬಿಡುಗಡೆಗೆ ಸಂತೋಷಪಡಬೇಕಷ್ಟೆ. ಈ ಕಾರ್ಯಸಾಧನೆಯಾದನಂತರ ಅಸ್ಪೃಶ್ಯತೆ, ಖಾದಿ, ಅಹಿಂಸೆ ಮುಂತಾದ ಕಾರ್ಯಕ್ರಮವನ್ನು ಜರುಗಿಸಲು ಸಾಧ್ಯವಾದೀತು.

ವಿಮರ್ಶೆ.

ರಾಜಾಮಲಯಸಿಂಹ—

ಲೇಖಕರು—ದಿವಂಗತ ಎಂ. ಎ ಶ್ರೀನಿವಾಸಾಚಾರ್ಯರು ಬೆಲೆ ರೂ. 2—4—0 ದೊರೆಯುವ ಸ್ಥಳ—ಕರ್ನಾಟಕ ಪಬ್ಲಿಷಿಂಗ್ ಏಜನ್ಸಿ, ಮಲ್ಲೇಶ್ವರ ಬೆಂಗಳೂರು ಮತ್ತು ಎಂ. ಎಸ್. ರಾವ್ ಅಂಡ್ ಕಂಪನಿ, ಬೆಂಗಳೂರು.

ಮೇಲಿನ ಪುಸ್ತಕವು ಲೋಕಪ್ರಸಿದ್ಧನಾದ ಫ್ರೆಂಚ ದೇಶದ ಅಲೆಕ್ಸಾಂಡರ್ ಡೂಮಾಸ್ ಎಂಬ ಕಾದಂಬರಿಕಾರನಿಂದ ಕ್ರಿಸ್ತಶಕ 1845 ರಲ್ಲಿ [illegible] ಸಂಪುಟಗಳಲ್ಲಿ ಫ್ರೆಂಚ ಭಾಷೆಯಲ್ಲಿ ಬರೆಯಲ್ಪಟ್ಟಿತು. ಇತ್ತೀಚೆಗೆ ಈ ಗ್ರಂಥವು ಹಲವು ಅರ್ವಾಚೀನ ಭಾಷೆಗೆ ಪರಿವರ್ತಿಸಲ್ಪಟ್ಟಿದೆ. ಇದನ್ನು ನಮ್ಮ ದಿವಂಗತ ಶ್ರೀನಿವಾಸಾಚಾರ್ಯರು ಕನ್ನಡಕ್ಕೆ ಪರಿವರ್ತಿಸಿರುವುದು [illegible] ಮಿ|| [illegible] ಯುಕ್ತವಾದ ಮುನ್ನುಡಿಯನ್ನು ಬರೆದು ಗ್ರಂಥದ ಹೆಚ್ಚುಗಾರಿಕೆಯನ್ನು ತೋರಿಸಿರುವರು.

ಹದಿನೆಂಟನೆಯ ಶತಮಾನದಲ್ಲಿ ಫ್ರಾನ್ಸ್ ದೇಶದಲ್ಲಿ ನಡೆದ ರಾಜ್ಯಕ್ರಾಂತಿಯ ವಿಚಾರವೂ, ಆ ದೇಶದ ಜನರ ಆಚರಣೆಯೂ ಬೇಗನೆ ತಿಳಿಯುವುದು ಈ ಗ್ರಂಥಾವಲೋಕನದಿಂದ ತೋರಿಬರುವುದು. ಶ್ರೀಕೃಷ್ಣ ಪರಮಾತ್ಮನ ಅವತಾರದಿಂದ ಕಳೆಯಲ್ಪಟ್ಟ "ದುಷ್ಟನಿಗ್ರಹ ಶಿಷ್ಟಪರಿಪಾಲನೆ" ಯ ವಿಚಾರವು ಸುಲಕ್ಷಣವಾಗಿ ಈ ಗ್ರಂಥದಲ್ಲಿ ವಿವೃತವಾಗಿದೆ. ದಯಾಳುವಾದ ನೆಪೋಲಿಯನ್ನನು ಎಲ್ಲಾ ಪ್ರೇಮದ ರಕ್ಷಕನಾಗಿ ಕಥೆಯಲ್ಲಿ ಬರುವನು.

"[illegible] ನವೆಂಬರ [illegible] ನೆಯಲ್ಲಿ ಮೋರಿ, ಬಾಳಿ, [illegible]

ಚಿಕ್ಕಂದಿನಿಂದು ಯಾವನು ಎಂತಹವನೋ ಅಂತಹವನಿಗೆ ತಾನು ಆಂತಹನಾಗಿರುವುದು ಧರ್ಮವೆಂದೆಣಿಸಿ ತನಗೆ ಅಪಕಾರಮಾಡಿದ ಕೇಡಿಗರಿಗೆ ಪ್ರತೀಕಾರವನ್ನು ಉಪಕಾರಿಗಳಿಗೆ ಉಪಕಾರವನ್ನೂ ಆಚರಿಸಿ ಸಂಧ್ಯಾಮುವನ್ನೈದಿದನು "

ಭಾಷೆಯು ರಸಭರಿತವಾಗಿಯೂ ಸರಳವಾಗಿಯೂ ಇದೆ. ಕಥಾಸಂವಿಧಾನವು ಮೂಲಗ್ರಂಥದಿಂದ ಬೇರೆಯಾಗಿರುವಂತೆ ತೋರುವುದಿಲ್ಲ. ಗ್ರಂಥಕಾರರು ಫ್ರೆಂಚರ ಹೆಸರಿಗೆ ಪ್ರತಿಯಾಗಿ ಕನ್ನಡದ ಅನ್ಯ ಹೆಸರುಗಳನ್ನು ಕೊಟ್ಟಿರುವರು. ಓದುವಾಗ ಹೆಚ್ಚು ಆಸಕ್ತಿಯೂ ರಸವೂ ಆಗುವುದಕ್ಕಾಗಿ ಯೋಗ್ಯವಿದ್ದಲ್ಲೆಲ್ಲಾ ಅವರ ಚಿಹ್ನೆಗಳಿದ್ದರೆ ಪ್ರಯೋಜನವಿರುತ್ತಿತ್ತು. ಮೂಲಗ್ರಂಥವನ್ನು ಓದಲರಿಯದ ನಮ್ಮ ಕನ್ನಡಿಗರು ಈ ಕನ್ನಡ ಪರಿವರ್ತನೆಯ ರಸಾಸ್ವಾದನೆಯನ್ನು ಮಾಡಬಹುದಾಗಿದೆ.

ಕಥೆಯು ಅಪೂರ್ಣವಾಗಿದೆ; ಸೊರಬಿ-ಲಿಖಿತ್ಯರ ದ್ವಿತೀಯ ಭಾಗದಲ್ಲಿ ಪೂರ್ಣವಾಗುವುದೆಂದು ತೋರುತ್ತದೆ. ಇದು ಎಲ್ಲಶಾಲೆಗಳ ಮೇಲ್ತರಗತಿಯ ಹುಡುಗರು ಓದಲರ್ಹವಾದ ಗ್ರಂಥ. ಛೀಪಿನ ಸ್ವಾಲ್ಪತ್ವಗಳು ಹೆಚ್ಚಿಲ್ಲದೆ, ಗ್ರಂಥವು ಅಚ್ಚುಕಟ್ಟಾಗಿ ಉತ್ತಮವಾದ ಕಾಗದದಲ್ಲಿ ಮುದ್ರಿತವಾಗಿದೆ. ರಾವ.

ವರ್ತಮಾನ ಸಂಗ್ರಹ

ಒಳದೇಶ.

ಮಡಿಕೇರಿ [illegible] ಕ್ಕೆ [illegible] ತಳೆದೋರಿದೆ [illegible] ತಿಳಿಯಬರುತ್ತದೆ.

[illegible]

ಮಾರ್ಚ್ ತಾರೀಖು 13 ನೇ ಗುರುವಾರದ ದಿನ ಮಡಿಕೇರಿಯಲ್ಲಿ ಹೂವು, ಕಾಯಿಪಲ್ಯ, ಕೋಳಿ, ನಾಯಿ ಮೊದಲಾದವುಗಳ ಪ್ರದರ್ಶನ ನಡೆಯಲಿಕ್ಕಿದೆ.

ಶಿವರಾತ್ರಿಯಾದ ಮಾರ್ಚ್ ತಾ|| 3 ನೇ ಸೋಮವಾರ ರಾತ್ರಿ ಮಡಿಕೇರಿ ಹೈಸ್ಕೂಲಿನ ಹಳೇ ವಿದ್ಯಾರ್ಥಿಗಳ ಸಂಘದವರು "ವಿಷ್ಣುಲೀಲಾ" ವೆಂಬ ನಾಟಕವನ್ನು ಅಭಿನಯಿಸುವರು. ಉದಾರಭಾವದ ಮಹನೀಯರೆಲ್ಲರೂ ನಾಟಕಕ್ಕೆ ದಯಮಾಡಿಸಿ ಸದರಿ ಸಂಘಕ್ಕೆ ಉತ್ತೇಜನ ಕೊಡಬೇಕಾಗಿ ಕೋರಿಕೆ.

ಈ ತಾ|| 18 ರಲ್ಲು ತಿತಿಮತಿಯಲ್ಲು ಒಂದು ಆನೆಯು ಕಪ್ಪಕ್ಕೆ ಬಿದ್ದದನ್ನು ಮೇಲಕ್ಕೆ ಹತ್ತಿಸುವಾಗ್ಗೆ ಅನೇಕ ಜನರು ಅದನ್ನು ನೋಡಲಿಕ್ಕೆ ಬಂದಿದ್ದರು. ಈ ಆನೆಗೆ ಮಧ್ಯವಯಸ್ಸಾಗಿದ್ದದರಿಂದ ಕಪ್ಪದಲ್ಲಿ ಬಹಳ ಪುಂಡುಮಾಡುತ್ತಿತ್ತು. ಅದರ ಒದರುವಿಕೆಯಿಂದ ಒಂದು ಕೋಡು ಮುರಿದುಬಿಟ್ಟಿತು. ಇದನ್ನು ನೋಡಲಿಕ್ಕೆ ಮಡಿಕೇರಿಯಿಂದ ಮೇಜರ್ ಪ್ಲಮರ್‌ರವರು ಮತ್ತು ಎಗ್ಸಿಕ್ಯುಟಿವ್ ಇಂಜಿನಿಯರಾದ ಮೆ|| ರಂಗದರ್ಶನರು ಬಂದಿದ್ದರೆಂದು ಅಲ್ಲಿಯವರೊಬ್ಬರು ಬರೆಯುತ್ತಾರೆ.

ತಾ|| 21 ರಲ್ಲು ಬಲಮುರಿಯ ಕೊಡಂಬಾಣೆಯಲ್ಲಿ ಎಲ್ಲಾ ಕುಂಬಾರರ ಜಾತಿಸಮ್ಮಂಧ ಒಂದು ಮೀಟಿಂಗು ನಡೆಯಿತು.

ವೀರರಾಜಪೇಟೆ ಹೈಸ್ಕೂಲಿನಿಂದ 32 ರ ಪೈಕಿ 22 ವಿದ್ಯಾರ್ಥಿಗಳನ್ನು ಸ್ಕೂಲ್ ಫೈನಲ್ ಪರೀಕ್ಷೆಗೆ ಹೋಗಲು ಸೆಲೆಕ್ಟ್ ಮಾಡಿರುವರು. ಇದರ ಅವತು ಮಾರ್ಚ್ 24 ರಲ್ಲು ನಡೆಯುವ ಈ ಪರೀಕ್ಷೆಗೆ ಮಡಿಕೇರಿಗೆ ಬರಬೇಕಾಗಿದೆ.

ಕುಕ್ಲೂರು ಗ್ರಾಮದ ರಿಟಯರ್ಡ್ ಹೆಡ್‌ಕ್ಲಾರ್ಕರಾಗಿದ್ದ ಮೆ|| ಮಂಡೇಪಂಡ ಮಾದಪ್ಪನವರು ತಾರೀಖು 22-2-24 ರಲ್ಲು ಶಿವಾಧೀನರಾದರು.

ಕೆಮ್ಮಲು, ಜ್ವರ ಶಲೆನೋವು ವಗೈರೆಯಿಂದ ಕೂಡಿದ ಒಂದು ತರದ ಕಾಯಿಲೆಯು ದೇಶದಲ್ಲೆಲ್ಲಾ ಹರಡಿಕೊಂಡಿದೆ.

ಮೆ|| ಕೆಂಬದಕಂಡ ಪೊಣ್ಣಪ್ಪನವರು ತನ್ನ ಮಗನಿಗೆ ಕೌನ್ಸಿಲು ಚುನಾವಣೆಯಲ್ಲಿ ಸಿಕ್ಕಿದ ಸಂತೋಷಕ್ಕಾಗಿ ಮೂರ್ನಾಡಿನಲ್ಲಿ ಮುಸಲ್ಮಾನರಾದ ಬಟ್ಟಕ್ಲಿ ವಗೈರೆಯವರಿಂದ ಒಂದು "ರಾತಿಫ್" ಮಾಡಿಸಿದರು. ಬಹಳ ಜನರು ಸೇರಿದ್ದರು. "ರಾತಿಫ್" ನಲ್ಲಿ ಅನೇಕ ಚಮತ್ಕಾರಗಳು ನಡೆದವೆಂದೂ, ಮುಸಲ್ಮಾನರ ನಿಶ್ಚಲವಾದ ದೇವಭಕ್ತಿಗೆ ನೋಡಿದವರು ಬೆರಗಾದರೆಂದೂ ಒಬ್ಬರು ತಿಳಿಸುತ್ತಾರೆ.

ವೀರರಾಜಪೇಟೆಯಲ್ಲು ಕಳೆದವಾರ ಭತ್ತ ಗಾಡಿ ಒಂದಕ್ಕೆ ರೂ 78 ರಿಂದ 82 ರವರೆಗೂ ಕಾಫಿ ಖಂಡಿ ಒಂದಕ್ಕೆ ರೂ. 390 ರಿಂದ 400 ರವರೆಗೂ ಮಡಿಕೇರಿಯಲ್ಲಿ ಕಾಫಿ ಖಂಡಿಗೆ ರೂ. 310 ರಿಂದ 320 ರವರೆಗೂ ಇತ್ತು.

ರಿಟಯರ್ಡ್ ಶಿರಸ್ತೇದಾರರಾಗಿದ್ದ ಮೆ|| ಬಲ್ಲಚಂಡ ಕಾಳಪ್ಪನವರು ತಾ|| 18 ರಲ್ಲು ಮೃತಪಟ್ಟರು. ಇವರು ಸುಮಾರು 33 ವರ್ಷ ಪಿಂಚಿನ್ ಅನುಭವಿಸಿದರೆಂದೂ, ಇಷ್ಟು ವರ್ಷ ಪಿಂಚಿನ್ ಪಡೆದವರು ಬಹಳ ಅಪರೂಪವೆಂದೂ ತಿಳಿಯಬರುತ್ತದೆ.

ಕೊಡಗು ಪತ್ರಿಕೆಯ ಚಂದಾ ಬಾಕಿದಾರರಿಗೆ ನೋಟೀಸು ಕಳುಹಿದಕೂಡಲೇ ಅನೇಕರು ತಮ್ಮಗಳ ಚಂದಾವನ್ನು ಏಜಂಟರಿಗೆ ಪಾವತಿಮಾಡುವುದರಲ್ಲಿಯೂ, ಇನ್ನು ಕೆಲವರು ಮನಿಯಾರ್ಡರ್ ಮಾಡಿ ಕಳುಹಿಸುವುದರಲ್ಲಿಯೂ ಜಾಗರೂಕರಾಗಿರುತ್ತಾರೆ. ಎಲ್ಲಾ ಬಾಕಿದಾರರೂ ಹೀಗೆಯೇ ಪ್ರೋತ್ಸಾಹ ಕೊಡುವರೆಂದು ನಂಬುತ್ತೇವೆ.

ಇದೇ ತಾ|| 19 ನೇ ಮಂಗಳವಾರ ಸಾಯಂಕಾಲ ಬಾಳೆಲೆಗ್ರಾಮದ ಅದೇಂಗಡ ಚಿಟ್ಟಿಯಪ್ಪನವರ ಬಾಲಕಿ 17 ವರ್ಷ ಪ್ರಾಯದ ಚಿನ್ನಮ್ಮನೆಂಬವಳು ಬಾವಿಯಲ್ಲಿ ನೀರು ಸೇದುತ್ತಿರುವಾಗ್ಗೆ ಅಕಸ್ಮಾತ್ ಬಾವಿಗೆ ಬಿದ್ದು ಮೃತಪಟ್ಟಳು. ಪೋಲೀಸು ವಿಚಾರವಾದ [illegible] ದ ಶವವು ದಫನ್ ಮಾಡಲಾಯಿತೆಂದು ತಿಳಿಯಬರುತ್ತದೆ.

ತಾ|| 24 ರಲ್ಲು ಹಳ್ಳಿಗಟ್ಟುಗ್ರಾಮದ ಅಚ್ಚಿಯಂಡ ಮನೆಯವರು ಕಿಗ್ಗಟ್ಟುನಾಡು ತಾಲೋಕಿನ ಕೌನ್ಸಿಲು ಮೆಂಬರುಗಳಿಗೆ ಪೂಜೆಸಂತೋಷಗಳಿಂದ ಒಂದು ಔತಣವನ್ನು ಕೊಟ್ಟರು.

ಮಡಿಕೇರಿ ಅಪೆಚ್ಯುವರ್ ಡ್ರಾಮೆಟಿಕ್ ಎಸೋಸ್ಸಿಯೇಶನಿನವರು ಶಿವರಾತ್ರಿಯಲ್ಲಿ "ಶ್ರೀಮತಿಪರಿಣಾಮ" ವೆಂಬ ನಾಟಕವನ್ನು ಅಭಿನಯಿಸುವರು.

ಒಂದೂದೇಶ

ಬಂಗಾಳ ಲೆಜಿಸ್ಲೇಟಿವ ಕೌನ್ಸಿಲಿನ [illegible] ವೆಂಬರುಗಳು ಒಟ್ಟು [illegible] ತಾ|| 19 ರಲ್ಲು ಒಂದು ಮೀಟಿಂಗು [illegible] ಪಾರ್ಟಿ [illegible] ಹೇಳಿದರು [illegible] ಪಾರ್ಟಿ ' ಎಂದು [illegible] 70 [illegible] ಸಂಘವಿದೆ.

[illegible] ಮೆ|| [illegible] ಗವರ್ನರವರು [illegible] ಬೇಕೆಂದು ಕೇಳಿರುವರು.

ಬಂಗಾಳದ ಸಬ್ಇನ್ಸ್‌ಪೆಕ್ಟರರಾದ ಮೆ|| [illegible] ತಾ|| 21 ರಲ್ಲು [illegible] ಯನ್ನು ದೋಣಿಯಲ್ಲಿ [illegible] ಅಕಸ್ಮಾತ್ ಹೊಳೆಗೆ ಬಿದ್ದು ಮೃತರಾದರು.

ಜೇಗನೆ ವಿಚಾರಣೆಗಳಿಕ್ಕಿರುವ ಕೆನ್ಯಾ ಕಮಿಟಿಗೆ ಡಾಕ್ಟರ್ ಟೆಜ್‌ಬಹದ್ದೂರ್ ಸಾಪ್ರುರವರನ್ನು ಚೇರ್‌ಮನ್‌ರನ್ನಾಗಿ ಮಾಡುವುದು ಉತ್ತಮವೆಂದು "ಸರ್ವೆಂಟ್ ಆಫ್ ಇಂಡಿಯಾ" ಪತ್ರಿಕೆಯು ಸೂಚಿಸುತ್ತದೆ.

ಕೆಲವು ಸಮಯ ಸಿಖ್ ಲೀಗಿನ ಸೆಕ್ರೆಟರಿಯಾಗಿದ್ದ ಸರ್ದಾರ್ ಭಗತ್‌ಸಿಂಗ್‌ರವರನ್ನು ತಾ|| 21 ರಲ್ಲಿ ಸೆರೆಹಿಡಿದಿರುವರು. ಇಷ್ಟರವರೆಗೆ ಭಾಯಿಪೆರುವಿನಲ್ಲಿ 1250 ಸಿಖ್ಖರನ್ನು ಸೆರೆಹಿಡಿದಿರುವರು.

ಅಮೇರಿಕದ "ನ್ಯೂಯಾರ್ಕ್‌ಟೈಮ್ಸ್" ನ ಪ್ರತಿನಿಧಿಯಾದ ಮೆ|| ಜೆ ಮಾಂಡ್‌ರವರು ತಾ|| 20 ರಲ್ಲು ಡಾ|| ಕಿಚ್ಲು, ಮೆ|| ಗಿಡ್ವಾನಿ ಮತ್ತು ಮಂಗಲ್‌ಸಿಂಗ್‌ರವರ ಸಂಗಡ ಜೈತೊಕ್ಕೆ ಹೋಗಿರುವರು. ಶಾಹಿದಿ ಅಕಾಲಿ ಜಾತದ 500 ಜನರು ಅಲ್ಲಿಗೆ ತಲುಪುವಾಗ ಏನಾಗುವುದೆಂದು ನೋಡಲಿಕ್ಕೆ ಇವರು ಅಲ್ಲಿಗೆ ಹೋಗಿರುವುದಾಗಿದೆ.

ಬೊಂಬಾಯಿಯಲ್ಲಿ ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದಿರುವ ಕೂಲಿಗಾರರ ಪರವಾಗಿ ಮೆ|| ಜೇವ್‌ಟೆಕ್ಕ, ಮೆ|| ಜಿನ್‌ವಾಲ ಬಾನ್‌ವಾಲ ಮತ್ತು ಕಾಂಜಿದ್ವಾರಕದಾಸ್‌ರವರು ಗವರ್ನರಲ್ಲಿಗೆ ಡೆಪ್ಯುಟೇಶನ್ ಹೋಗಿದ್ದರು. ಮಾತುಗಳು ಗುಟ್ಟಾಗಿ ನಡೆದಿರುವವು. ಮುಷ್ಕರದಲ್ಲಿ ಏನೊಂದೂ ವ್ಯತ್ಯಾಸವುಂಟಾಗಿರುವುದಿಲ್ಲ.

ಕಲ್ಕತ್ತಾ ಮುನ್ಸಿಪಾಲಿಟಿಯು ಉದಾಹರಣೆಯನ್ನು ಅನುಸರಿಸಿ ಬಂಗಾಳದ ಬೇರೆ ಮುನ್ಸಿಪಾಲಿಟಿಗಳೂ, ಡಿಸ್ಟ್ರಿಕ್ಟ್ ಬೋರ್ಡುಗಳೂ ಮಹಾತ್ಮ ಗಾಂಧಿಯವರನ್ನು ಜೈಲಿನಿಂದ ಬಿಟ್ಟದ್ದಕ್ಕೆ ಸಂತೋಷ ಸೂಚಕವಾದ ಠರಾವುಗಳನ್ನು ಪಾಸುಮಾಡುತ್ತಿರುವವು.

ಇಂಪೀರಿಯಲ್ ಕೆನ್ಯಾ ಕಮಿಟಿಯು ಹೇಗ್ ಮೇಲ ಆಗಿರಲು ಸಾಧ್ಯವಿಲ್ಲವೆಂದು ಲಾರ್ಡ ವೆಲ್ಲಿಂಗ್ಟನ್‌ರವರು ಹೇಳುವುದಿಲ್ಲವಾಗಿ ಈಚೆಗೆ ತಿಳಿಯಬರುತ್ತದೆ.

ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಯಾದ ಪಂಡಿತ ಗೌರಿಶಂಕರ್ ಮಿಶ್ರರವರು ತಾ|| 20 ರಲ್ಲು ಬೆಂಗಳೂರಿಗೆ ಬಂದಿದ್ದಾಗ ಅವರು ಅಲ್ಲಿ ಭಾಷಣ ಮಾಡಕೂಡದೆಂದು ಮೆಜಿಸ್ಟ್ರೇಟರು ಹುಕುಂ ಮಾಡಿದರು. ಅದಕ್ಕೆ ಸಂಬಂಧಿಸಿದ ಕಾಗದಗಳನ್ನು ಸರಕಾರಕ್ಕೆ, ಇಂಥ ನ್ಯಾಯವಲ್ಲದ ಹುಕುಂಗಳು ಮಹಾರಾಜರವರ ರಾಜ್ಯದಲ್ಲಿ ಜಾರಿಗೆ ಬರುತ್ತಿರುವರು [illegible] ಬರೆದಿರುವರಂತೆ.

ಸ್ವರಾಜ್ಯಪಾರ್ಟಿಯವರ ದೆಸೆಯಿಂದ ದಿಲ್ಲಿಯಲ್ಲಿ ಮಧ್ಯಪ್ರಾಂತ್ಯದ ಲೆಜಿಸ್ಲೇಟಿವ್ ಕೌನ್ಸಿಲಿನ ಮೀಟಿಂಗು ಸಹ ಮಾರ್ಚಿ 4 ರಲ್ಲಿ ಪ್ರಾರಂಭವಾಗುವುದು.

ತಾ|| 22 ರಲ್ಲು ನಾಭಾಸ್ಟೇಟಿನಲ್ಲಿರುವ ಜೈಟೋದ ಗುರುದ್ವಾರಕ್ಕೆ ಹೊರಟ 500 ಸಿಖ್ ಜನರ ಜಾತದ ಮುಂದುಗಡೆ 6000 ಸಿಖ್ ಜನರು ಮೆರವಣಿಗೆಯಲ್ಲಿ ಹೋಗುತ್ತಿದ್ದನ್ನು ಮುಂದು ಹಾಗೆ ಹೋಗಕೂಡದೆಂದು ಅಲ್ಲಿಯ ಅಧಿಕಾರಿಯು ಹುಕುಂ ಮಾಡಿದರು. ಅದಕ್ಕೆ ಸಿಖ್ಖರು ಗಮನಿಸದೆ ಮುಂದುವರಿದುದರಿಂದ ಅಧಿಕಾರಿಯು ಸಿಪಾಯಿಗಳಿಂದ ಅವರ ಮೇಲೆ ಗುಂಡು ಹಾರಿಸಿದುದರಿಂದ 11 ಜನರು ಮೃತಪಟ್ಟಿರುವರು. 34 ಜನರಿಗೆ ಗಾಯವಾಗಿದೆ. [illegible] ಅಲ್ಲಿಗೆ ಹೋದ ಡಾ|| ಕಿಚ್ಲು ಮತ್ತು ಪ್ರೊ|| ಗಿಡ್ವಾನಿಯವರನ್ನು ಸೆರೆಹಿಡಿದಿರುವರು. ಅಮೇರಿಕದ ಪತ್ರಿಕಾ ಪ್ರತಿನಿಧಿಯಾದ ಮೆ|| ಜೆಮಂಡ್‌ರವರನ್ನು ಎಸೆಂಬ್ಲಿ ಮೆಂಬರುಗಳಾದ [illegible] ಮತ್ತು [illegible] ರನ್ನು ಅಲ್ಲಿಗೆ ಹೋಗಲಿಕ್ಕೆ ಬಿಡದೆ ಹಿಂದಕ್ಕೆ ಕಳುಹಿಸಿಬಿಟ್ಟಿರುವರು.

ತಾ|| 23 ರಲ್ಲು ಡಾ|| ಅಸಿಬೆಸೆಂಟಮ್ಮನವರ ಹಿಂಬಾಲಕರ ಮತ್ತು ಮಾಡರೇಟರ ನೇಶನಲ್ ಕಾನ್ಫರೆನ್ಸಿನ ಎರಡನೇ ಮೀಟಿಂಗು ಡೆಲ್ಲಿಯಲ್ಲಿ ನಡೆಯಿತು. ಡಾಕ್ಟರ್ ಟೆಜ್ ಬಹದ್ದೂರ್ ಸಾಪ್ರುರವರ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಹೆಚ್ಚಿನ ಜನರೇನೂ ಸೇರಿರಲಿಲ್ಲವಂತೆ. [illegible] ನೇಶನಲ್ ಪಾರ್ಟಿಯ ಮೆಂಬರುಗಳಲ್ಲಿ [illegible] ಮಾತ್ರ ಹಾಜರಿದ್ದರಂತೆ.

[illegible] ಗಾಂಧಿ [illegible] ಕಾಯಿಲೆಯು [illegible] ಶೀಘ್ರದಲ್ಲಿ ವಾಸಿಯಾಗುತ್ತಿರುವುದಿಲ್ಲ [illegible] ಅವರ ಹೆಚ್ಚಿನ ಕುಶಲಕ್ಕೆ ಕಾರಣವಿರುವುದಿಲ್ಲ.

[illegible] ಕಾಲದಲ್ಲಿ [illegible] ಮೆ|| [illegible] ಮೂಲಕ ಗಾಂಧಿಯವರಿಗೆ [illegible] ಸಿರುವರು.

ಪರದೇಶ

ಪ್ರಜೆಗಳ ರಾಜ್ಯಕ್ಕೂ ಇರುವ ಸಮ್ಮಂಧವನ್ನು [illegible] ಲಂಡನಿನಲ್ಲಿ ಒಂದು ಕಾನ್ಫರೆನ್ಸು ನಡಿಸುವಂತೆ ಪ್ರಯತ್ನಗಳು ನಡೆಯುತ್ತಿವೆ. ಈ ಕಾನ್ಫರೆನ್ಸು ಮಾರ್ಚ್ ಮಧ್ಯದಲ್ಲಿ ನಡೆಯುವುದೆಂದು ನಂಬಲಾಗಿದೆ.

'ಇಂಡಿಪೆಂಡೆಂಟ್' ಲೇಬರ್ ಪಾರ್ಟಿಯವರು ಇಂಗ್ಲಿಷ ಸರ್ಕಾರವನ್ನು ಹೀಗೆ ಮಾಡಬೇಕೆಂದು ಕೇಳಿಕೊಂಡಿರುವರು:—ಇಂಡಿಯನರು ಹೋರಾಡುತ್ತಿರುವ ರಾಜಕೀಯ ಪಕ್ಷಗಳಲ್ಲಿ ತಮಗೆ ಪೂರ್ತಿ ಸಹಾನುಭೂತಿಯಿದೆ. ಗಾಂಧಿಯವರನ್ನು ಬಿಟ್ಟದ್ದು ಸಂತೋಷಕರ. ರಾಜಕೀಯ ಕೈದಿಗಳನ್ನೆಲ್ಲಾ ಏನೊಂದೂ ಶರತ್ತಿಲ್ಲದೆ ಬಿಡುಗಡೆಮಾಡಬೇಕು. ಕನ್ಯಾತೀರ್ಮಾನವನ್ನು ಪುನಃ ಆಲೋಚನೆಗೆ ತರಬೇಕು. ಇಂಡಿಯಾ ಗವರ್ಮೆಂಟಿನ ಆಕ್ಟನ್ನು ಬದಲಾಯಿಸಲಿಕ್ಕೆ ಒಂದು ಕಮಿಷನನ್ನು ನೇಮಿಸಬೇಕು. ಪಂಡಿತ ನೆಹರುರವರ ಸೂಚನೆಯ ಠರಾವು ಎಸೆಂಬ್ಲಿಯಲ್ಲಿ ಪಾಸಾಗಿರುವುದರಿಂದ ಹಿಂದೂ ದೇಶದ ಎಲ್ಲಾ ಪಂಗಡಗಳ ಪ್ರತಿನಿಧಿಗಳನ್ನು ಸೇರಿಸಿ ಒಂದು ಕಾನ್ಫರೆನ್ಸಿಗೆ ಸಂಪೂರ್ಣ ಸ್ವರಾಜ್ಯಕೊಡಲು ಅನುಕೂಲಿಸುವ ವಿಷಯ ಕಾರಣವನ್ನು ಯೋಚಿಸಬೇಕಾಗಿದೆ.

ಇಂಡಿಯಾ ಸ್ಟೇಟ್ ಸೆಕ್ರೆಟರಿಯಾದ ಲಾರ್ಡ್ ಒಲಿವಿಯರ್‌ರವರು ಇಂಡಿಯಾದ ಭವಿಷ್ಯತ್ತಿನ ವಿಷಯ ತೀರ್ಮಾನಿಸಲು ಬೇಕಾಗಿರುವ ರೌಂಡ್‌ಟೇಬಲ್ ಕಾನ್ಫರೆನ್ಸಿನ ವಿಷಯದಲ್ಲಿ ಸಹಾನುಭೂತಿ ತೋರಿಸುತ್ತಿದ್ದಾರೆಂದೂ, ಆದರೆ ಇದು ಸರ್ ವರಾಳಕರು ಹೈಲಿಯವರು ಎಸೆಂಬ್ಲಿಯಲ್ಲಿ ಹೇಳಿದ ವಿಷಯಕ್ಕೆ ವಿರೋಧವಾಗಿದೆಯೆಂತಲೂ ಲಂಡನಿನಲ್ಲಿ ವರ್ತಮಾನವು ಬಲವಾಗುತ್ತಿದೆಯೆಂದು ತಾ|| 22 ರ ಸುದ್ದಿ.

ಕೆನಿಯಾದಲ್ಲಿ ಇಂಡಿಯನರಮೇಲೆ ಹೊರಿಸಿರುವ ಪೋಲ್‌ಟೇಕ್ಸನ್ನು ಕೊಡದೆ ಮುಷ್ಕರ ಹಿಡಿದಿರುವ ಇಂಡಿಯನರನ್ನು ಅಲ್ಲಿಯ ಸರ್ಕಾರದವರು ಸೆರೆಹಿಡಿಯಲು ಪ್ರಾರಂಭಿಸಿರುವರು.

ಸಿ. ಎಫ್. ಆಂಡ್ರೂಸರು ಮ್ಯಾಂಚೆಸ್ಟರ್ ಗಾರ್ಡಿಯನ್ ಎಂಬ ಪತ್ರಿಕೆಗೆ ಬರೆದ ಪತ್ರದ ಸಾರಾಂಶ.

ಇಂಡಿಯದಲ್ಲಿ ಈಗ ಆಗಿರುವ ಚುನಾವಣೆಯು [illegible] ಶಿಕ್ಷಿತರಾದ ದೇಶದ ನಿಜವಾದ ಮನಸ್ಸಿನ ಸ್ವಲ್ಪಭಾಗವನ್ನು ಸೂಚಿಸಿದೆಯಷ್ಟೆ. ಚುನಾವಣೆಗೆ ಕೆಲವು ವಾರ [illegible] ಮುಂಚೆಯಷ್ಟೆ ಸ್ವರಾಜ್ಯಪಾರ್ಟಿಯವರಿಗೆ ಚುನಾವಣೆಗೆ [illegible] ನಿಲ್ಲಲು ಅನುಮತಿದೊರೆಯಿತಷ್ಟೆ. ಮುಷ್ಕರ [illegible]

ಗಾದ ಹಿಂಬಾಲಕರು ಚುನಾವಣೆಗೆ ಸೇರಲಿಲ್ಲ. ಅದ್ದ
ರಿಂದ ಅಸಹಕಾರದ ಪೂರ್ಣಬಲವು ಸ್ವರಾಜ್ಯಪಕ್ಷದವ
ರಲ್ಲಿ. ಅಸಹಕಾರದ ಪೂರ್ಣಬಲವಿದ್ದರೆ ದೇಶ
ದವರಿಗೆ ಚುನಾವಣೆಯು ಆಕೆ ಇರುತ್ತಿರಲಿಲ್ಲ.. . . .

. . . .

ಇಂಗ್ಲೆಂಡಿಗೆ ನಾನು ಎಂದಿನಂತೆ "ಮಹಾತ್ಮ" ಎಂಬ
ಶಬ್ದದ ಅರ್ಥವನ್ನು ತಿಳಿಸಬೇಕಾಗಿ ಬಂದಿದೆ. ಮಹಾ
ತ್ಮರೆಂದರೆ ಗೂಢಶಕ್ತಿ ಇರುವವ ಎಂಬ ಮುಂತಾದ ಅರ್ಥ
ವೇನೂ ಇಲ್ಲ. ಮಹಾಪುರುಷನೆಂಬ ಅರ್ಥವಿದೆಯು
ಷ್ಟೆ. ದಕ್ಷಿಣ ಆಫ್ರಿಕಾದ ಸತ್ಯಾಗ್ರಹ ನಡಸಿದ ನಂತರ
ಮಹಾತ್ಮಾ ಗಾಂಧಿಯವರಿಗೆ ಮಹಾತ್ಮ ಎಂಬ ಹೆಸರನ್ನು
[illegible] ಕೊಟ್ಟರು.

ಚುನಾವಣೆಯಲ್ಲಿ ಸೇರಿದರೆ ಸರ್ಕಾರದ ಅಧಿಕಾ
ರಕ್ಕೆ ಸೇರಿದಂತಾಗುತ್ತದೆ. ಅದ್ದರಿಂದ ಸೇರಲೇ ಬಾರದು.
[illegible] ಮಹಾತ್ಮರ ಬೋಧನೆ. ಇಂಡಿಯದಲ್ಲಿ ಚುನಾವಣೆ
ಕ್ರಮವು ಪರದೇಶೀಯವಾಗಿದೆ. ಅದು ಇನ್ನೂ ಗ್ರಾ
ಮಗಳಿಗೆ ಹರಡಲಿಲ್ಲ. ಇಂಡಿಯದಲ್ಲಿ ಜನಸಮುದಾ
ಯದ ವಿಷಯವನ್ನು ಮಹಾತ್ಮಾ ಗಾಂಧಿಯವರಷ್ಟು ಚನ್ನಾ
ಗಿ ತಿಳಿದವರು ಯಾರೂ ಇಲ್ಲ. ಜನಸಮುದಾಯವನ್ನು
[illegible]

ಕೊಡಗು ಜಮ್ಮಾ ಸ್ವಾಧಾರರ ಸಂಘ

ಪ್ರಚಾರಕ ಕಾರ್ಯದರ್ಶಿಯವರಿಂದ.

ಸಂಘದ ಉದ್ದೇಶಗಳನ್ನು ನೆರವೇರಿಸಲಿಕ್ಕಾಗಿ 25 ಸಾವಿರ ಜನರು ಸಂಘಕ್ಕೆ ಸಾಮಾಜಿಕರಾಗಿ [illegible] ಒಂದು ರೂಪಾಯಿಯನ್ನು ಆಯಾಯ ನಾಡು [illegible] ಕೊಟ್ಟು [illegible] ವಿನಂತಿ.

ಈ ಕೆಳಗಿನ ತಖ್ತೆಯಲ್ಲಿ ಸೂಚಿಸಿದ ಸ್ಥಳಗಳನ್ನು ಸಂಘದ ನಾಡುಕಮಿಟಿಗಳನ್ನು ಏರ್ಪಡಿಸಲಿಕ್ಕಾಗಿ [illegible] ಗಳು [illegible] ಕೆಲವು ಕಡೆಗಳಲ್ಲಿ ಗ್ರಾಮದಲ್ಲಿ ಎಲ್ಲರಿಗೂ ನೋಟೀಸು [illegible] ಒಂದು ಗ್ರಾಮದಲ್ಲಿ ಪ್ರತಿನಿಧಿ [illegible] ತಿಳಿಯದಿರುವ ಕಾರಣ ಅಸಾಧ್ಯ. ಅದ್ದರಿಂದ ನೋಟೀಸು [illegible] ನೋಟೀಸು [illegible] ಪತ್ರಿಕೆಯಲ್ಲಿರುವ ಕೋರಿಕೆಯನ್ನು ಮನಸ್ಸಿಗೆ ತೆಗೆದುಕೊಳ್ಳಬೇಕಾಗಿ ಕೋರಿಕೆ.

ನಂಬ್ರ.	ನಾಡು.	ಮೀಟಿಂಗಿನ ಸ್ಥಳ	ತಾರೀಖು.	ದಿವಸ.
1	ಮರೆನಾಡು	ಬಿರುನಾಣಿ ಮಂದು	28—2—1924	ಗುರುವಾರ
2	[illegible]	[illegible]	29—2—1924	ಶುಕ್ರವಾರ
3	ನಾಲ್ಕ್‌ನಾಡು	[illegible]	1—3—1924	ಶನಿವಾರ
4	ಶ್ರೀಮಂಗಲನಾಡು	[illegible]	2—3—1924	ಆದಿತ್ಯವಾರ
5	ಇರುಪ್ಪು ಜಾತ್ರೆ	ಇರುಪ್ಪು ದೇವಸ್ಥಾನ	4—3—1924	ಮಂಗಳವಾರ 2. P. M.
6	ಅಂಜಿಗೇರಿನಾಡು	ದೊಡ್ಡ ಮುಕ್ಕೋಡಿ	5—3—1924	ಬುಧವಾರ
7	[illegible] ನಾಡು ನಂಬ್ರ 1	[illegible] ದೇವಸ್ಥಾನ	6—3—1924	ಗುರುವಾರ
8	ನಂಬ್ರ 2.	[illegible]	7—3—1924	ಶುಕ್ರವಾರ
		[illegible]	8—3—1924	ಶನಿವಾರ
9	[illegible]	[illegible]	9—3—1924	ಆದಿತ್ಯವಾರ
10	[illegible]	[illegible]	10—3—1924	ಸೋಮವಾರ
11	[illegible]	[illegible]		

[illegible] ಕಮಿಟಿಗಳು [illegible]

ರುಗಳ ವಿವರ —

[illegible]

[illegible]

ವೀರರಾಜಪೇಟೆ.

"ವಾಣಿವಿಲಾಸ ಮಹಿಳಾಸಭಾ"

ತಾರೀಖು 3—2—1924 ರಲ್ಲಿ ಮೇಲ್ಕಂಡ ಸಮಾಜದ ಕಾರ್ಯನಿರ್ವಾಹಕ ಮೀಟಿಂಗೊಂದು ಸಮಾಜದ ಪಾಯಂ ಅಧ್ಯಕ್ಷರು ಶ್ರೀಮತಿ ಕೊಳುವಂಡ್ರ ಅಕ್ಕಮ್ಮನವರ ಅಧ್ಯಕ್ಷತೆಯಲ್ಲಿ ಜರಗಿತು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಮಾಜದ ಸದಸ್ಯರ ಪ್ರಯೋಜನಕ್ಕಾಗಿ ಕೆಲವು ಪತ್ರಿಕೆಗಳನ್ನು ತರಿಸಬೇಕೆಂದೂ, ಅಲ್ಲದೆ ಕೆಲವು ಪುಸ್ತಕಗಳನ್ನು ತರಿಸಿ ಪುಸ್ತಕಭಂಢಾರವೊಂದನ್ನು ಸ್ಥಾಪಿಸಬೇಕೆಂದೂ; ಸದಸ್ಯರು ತಮ್ಮ ಅನುಕೂಲ ವರಿತು ಈ ಪುಸ್ತಕಭಂಢಾರಕ್ಕೆ ಪುಸ್ತಕಗಳನ್ನು ಉಚಿತವಾಗಿ ಕೊಡಬೇಕೆಂದೂ; ಅಲ್ಲದೆ ತಿಂಗಳಿಗೊಮ್ಮೆ ಸಭೆಸೇರಿ ದಿವ್ಯ ವಿಷಯಗಳಲ್ಲಿ ಪ್ರಭಂಧ ಪ್ರಸಂಗ ವಗೈರೆಗಳನ್ನು ಕೇಳಬೇಕೆಂದೂ, ಹಿಂದೂದೇಶದ ಎಲ್ಲಾ ಕಡೆ ಹಬ್ಬುತ್ತಿರುವ ಮಡಿಕೇರಿಯಲ್ಲಿ ಈಗತಾನೇ ಬೇರೂರಿರುವ ಶಿಶುಪಾಲನಾಸಂಘಕ್ಕೆ (Baby Welfare Society) ಆದಷ್ಟು ಪ್ರೋತ್ಸಾಹವನ್ನು ಕೊಡಬೇಕೆಂದೂ ವಿವರಿಸಿ ಹೇಳಿದರು.

ನಂತರ ಸಮಾಜಕ್ಕೆ ಬೇಕಾಗತಕ್ಕ ಕೆಲವು ಉದ್ಯೋಗಸ್ತರನ್ನು ನಿಯಮಿಸಿದೆವು. ಸಮಾಜಕ್ಕೆ ಯಾವ್ಯಾವ ಪತ್ರಿಕೆಗಳನ್ನು ತರಿಸಬೇಕೆಂದು ನಿಶ್ಚಯಮಾಡಿದೆವು. ಅನಂತರ ಮಂಗಳಂ ಹಾಡಿ ಸಭಾಧ್ಯಕ್ಷರಿಗೆ ಸೆಕ್ರಟರಿಯವರ ವಂದನೆಯೊಡನೆ ಅಂದಿನ ಸಭೆಯು ಮುಕ್ತಾಯವಾಯಿತು.

ಸಭೆಯ ವೈಸ್‌ಪ್ರೆಸಿಡೆಂಟ್.

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. [ಎಡಿಟರ್]

ನಾಪೋಕ್ಲು ಗ್ರಾಮಸ್ಥರಿಗೆ ನನ್ನದೊಂದು ವಿನಂತಿ

ಅಣ್ಣಂಗಳೆ ನಾಪೋಕ್ಲು ತಕ್ಕರ ದಯಮಾಡಿ ಕೇಳಿ—

ತಾವುಗಳೆಲ್ಲರೂ ಸೇರಿ ಒಮ್ಮನಸ್ಸಿನಿಂದ ಮೀಟಿಂಗ್ ಮಾಡಿ ಮೀಟಿಂಗ್‌ನಲ್ಲಿ ಇನ್ನು ಮುಂದಕ್ಕೆ ನಮ್ಮ ಊರಲ್ಲಿ ಸೇಂದಿ ವಗೈರೆ ನಿಶಾದೇವಿಯನ್ನು ಇಳಿಯಿಸಕೂಡದೆಂಬುದಾಗಿ ಠರಾವು ಮಂಜೂರ್ಮಾಡಿದ್ದು ಸರಿಯಷ್ಟೆ. ಇದಕ್ಕೆ ನಾವು ಎಷ್ಟು ಒಂದಿಸಿದರೂ ಸಾಲದು.

ಆದರೆ ಈ ಠರಾವು ಮಂಜೂರ್ಮಾಡಿದಂತೆ ನಡೆದು ಬಂದು ಎರಡು ಮೂರು ವರುಷವಾದಾಗ್ಯೂ ನಿಷಾದೇವಿಯನ್ನು ಸೇವನೆ ಮಾಡುವ ಅಭ್ಯಾಸವನ್ನು ತ್ಯಜಿಸಬೇಕೆಂಬುದಾಗಿ ಕಟ್ಟಳೆ ಮಾಡಿರುವದು ಎಷ್ಟು ಅಭಿರುಚಿ ಇಲ್ಲದ ಸಂಗತಿಯಾಗಿದೆ.

ಅಲ್ಲದೆ ಈ ನಾಪೋಕ್ಲು ಊರವರು ಈ ಕೊಡಗುಪೇಟೆಯ ಜನನವಾದಂದಿನಿಂದ ತಮ್ಮಂಥ ಎಷ್ಟೋ ಊರವರು ಮಧ್ಯಪಾನ ಸೇವನೆ ನಡೆಸದೆ ನಿಲ್ಲಿಸಿರುವಂಥಾದ್ದನ್ನು ಸದಾ ನೋಡುತ್ತಿದ್ದು ಕಂಡು ಕೇಳಿ ಓದಿನೋಡಿ ಕೂಡ ತಮ್ಮ ಊರಲ್ಲಿ ಆ ನಿಷಾ ದೇವಿಗೆ ಬಹಿಷ್ಕಾರ ಮಂಜೂರ್ಮಾಡುವದನ್ನು ನಿಲ್ಲಿಸಬಹುದು ಎಷ್ಟು ನಾಚಿಕೆಕರವಾದ ಸಂಗತಿಯಾಗಿದೆ?

ಆದ್ದರಿಂದ ಪ್ರತಿಒಬ್ಬ ಮನುಷ್ಯನ ಕರ್ತವ್ಯವು ಏಣಿಯ ಒಂದೊಂದು ಮೆಟ್ಟಲನ್ನೇ ದಿನೇದಿನೇ ಏರಿಸಿಕೊಂಡು ಹೋಗುವದಲ್ಲದೆ ಕೆಳಗೆ ಇಳಿಯುವದಲ್ಲವಾಗಿರುವಾಗ್ಯೆ ಒಂದು ಠರಾವು ಮಂಜೂರ್ಮಾಡಿದಂತೆಯೇ ದುಡ್ಡು ಖರ್ಚುಮಾಡಿ ನಷ್ಟ ಮತ್ತು ಕಷ್ಟವಹುವ ದಾರಿಯನ್ನು ನಿಲ್ಲಿಸಲಿಕ್ಕೆ ಇನ್ನೊಂದು ಕಟ್ಟಳೆಯನ್ನು ನಿಷಾದೇವಿಯನ್ನು ಸೇವಿಸದಂತೆ ತಮ್ಮ ಊರಿನ ಮುಂದಾಳುಗಳು ಕೈಕೊಂಡು ಶೀಘ್ರದಲ್ಲಿಯೇ ಜಾರಿಗೆ ತರುವರೆಂದು ನನ್ನ ಕೋರಿಕೆ.

ಕೆ ಯಂ ಗಣಪತಿ.

ಕಣಿವೆ ಹೋಬಳಿಯ ಕ್ಷಾಮಬಾಧೆ.

ಮಹಾಶಯರೇ ನಮ್ಮ ದೇಶದಲ್ಲಿ ಐತೀಮತಳೆ ಗೋಣಿಕೊಪ್ಪಲಿನ ಕಣಿವೆಹೋಬಳಿ ಬಡರೈತರು ... ವರುಷದ ಅತಿವೃಷ್ಟಿ ಅನಾವೃಷ್ಟಿಯಿಂದ ಉಂಟಾಗಿರುವ ಕ್ಷಾಮಬಾಧೆಯನ್ನು ಕಾಲಕೇಳುವ ... ಬಡ ರೈತರ ಜಮಾಬಂಗಳನ್ನು ಎಣಿಕೆಗೆ ತಾರದ ವಸೂಲ್ ಮಾಡುತ್ತಿರುವ ಗೌರ್ನಮೆಂಟ್ ಕಂದಾಯಕ್ಕೆ ಎಡೆ ಕೊಡದೆ ... ಠರಾಯಿಸಿರುವ ನಾಲ್ಕಾರು ವರ್ಷಗಳಿಂದೆ ಪಾರುಪತ್ತೆಗಾರರು ಜಮಾಬಂದಿ ಸುಭೇದಾರರ ಜಮಾಬಂದಿ ಅಸಿಸ್ಟೆಂಟ್ ಕಮೀಷನರ ಜಮಾಬಂದಿ ಆಪೀಸಿನವ ... ಕಮೀಷನರ್ ಜಮಾಬಂದಿಗಳನ್ನು ತೀರಿಸಿ ರೈತರ ಕಷ್ಟಸುಖಗಳಿಗನುಸಾರವಾಗಿ ಕಂದಾಯ ವಸೂಲ್ ಮಾಡುತ್ತಿದ್ದರು. ಈಗಲಾದರೋ ಹೋಬಳಿ ಪಾರುಪತ್ಯಗಾರರು ಜಮಾಬಂದಿ ಬದಲಿಗೆ ಫೆಬ್ರವರಿ 10 ರಿಂದಲೇ ತುರ್ತು ಕಂದಾಯಕ್ಕೆ ವಸೂಲಿಗೆ ನಿಂತಿದ್ದಾರೆ. ರಾಜಧರ್ಮವನ್ನು ಯೋಚಿಸಿದರೆ ರೈತರ ಕಾಲಾವಧಿ ಕಾಲದಲ್ಲಿ ತಂದೆಯಾದ ಗೌರ್ನಮೆಂಟು ನಾಲ್ಕಾರು ಜಮಾಬಂದಿ ನಡೆಯಿಸಿ ಮಕ್ಕಳ ದೂರು ಬಾರುಗಳನ್ನು ವಿಚಾರಿಸಿ ರೈತರಿಂದ ಕಂದಾಯ ವಸೂಲ್‌ಮಾಡುತ್ತಿದ್ದುದು ರಾಜಧರ್ಮವಾಗಿತ್ತು. ಕಣಿವೆ ಹೋಬಳಿಯ ಸ್ಥಿತಿಯನ್ನು ನೋಡಿದರೆ ತಂದೆಯಿಲ್ಲದೆ ಹುಟ್ಟಿದ ಮಗನೋಪಾದಿಯಲ್ಲಿ ಅಳೆಯಬೇಕಾಗಿದೆ. ನರೆ ನೀರಿನ ಹಾವಳಿಯಿಂದ ಉಂಟಾಗಿರುವ ಕ್ಷಾಮಬಾಧೆಯನ್ನು ಕೊಂಚವಾದರು ತಂದೆಯಲ್ಲಿ ಎಣಿಕೆಗೆ ಕೊಟ್ಟು ಕೊಂಚ ದಿವಸವಾದರೂ ಅಂಬಲಿಯನ್ನು ಕುಡಿಯಬೇಕೆಂದಿದ್ದರೆ ಕೇಳುವ ಮಹಾಶಯನೇ ಈ ಹೋಬಳಿಯಲ್ಲಿಲ್ಲ. ಈ ಹಿಂದಿನ ಜಮಾಬಂದಿಗಳಲ್ಲಿ ನೂರಕ್ಕೆ ಹತ್ತಾದರೂ ... ಪರಿಹಾರ ... ದರೋ ... ವಸೂಲ್ ಆದ ನಂತರ ... ಕಮಿಷನರ್ ಜಮಾಬಂದಿ ನಡೆಯಿಸಲು ಏರ್ಪಡಿಸಿರುತ್ತಾರೆ. ಅದರಿಂದ ಜಮಾಬಂದಿ ಎಂಬುದರ ಅರ್ಥವೇ ಗೊತ್ತಿಲ್ಲದೆ ಇರುತ್ತೇವೆ. ನಿಜವಾಗಿಯೂ ರೈತರ ಹವಾಲುಗಳನ್ನು ಕೇಳುವದಾಗಿದ್ದರೆ ಕಂದಾಯ ವಾಯಿದೆ ಮುಂದೆ ಜಮಾಬಂದಿ ನಡೆಯಿಸಬೇಕಾಗಿತ್ತು. ಅದು ಹಾಗಿರದು. ಆದ್ದರಿಂದ ಹೀಗಾದುದು ... ಹಾಸ್ಯಯಾರೆ ಜಮಾಬಂದಿ ಎಂಬುದರ ಅರ್ಥವನ್ನು ವಿವರಿಸಿ ನನ್ನ ಅನುಮಾನ ಪರಿಹಾರ ಮಾಡಿಕೊಡಬೇಕಾಗಿ ಬೇಡುತ್ತೇನೆ.

ಕಂದಾಯ ಕೊಡಲಿಕ್ಕೆ ... ಹವಾಲು ಕೇಳಲಿಕ್ಕೆ ಇದ್ದವ.

-

ನಮ್ಮ ಕೊಡಗಿನ ವಿದ್ಯಾಭಿಮಾನಿ ಪೌರರ ... ಪಟ್ಟಿ ... ಸದಸ್ಯರೇ,

ಹಳೆವಿದ್ಯಾರ್ಥಿಗಳ ಸಂಘದ ಮಾಸಪತ್ರಿಕೆಯಲ್ಲಿ ಬರೆದಂಥಾ "ಪೊನ್ನಂಗಲತಮ್ಮನ ಪೂರ್ವ ಚರಿತ್ರೆ"ಯನ್ನು ನಾನು ಓದಿನೋಡಿದೆನು. ... ಚೆನ್ನಾಗಿತ್ತು ಮತ್ತು ನನಗೆ ಯಥೋಚಿತವಾಗಿ ಮನಸ್ತೃಪ್ತಿಯನ್ನುಂಟು ಮಾಡಿತು. ಆದರೆ ಇದನ್ನು "ಲುವಿಸ್ ರೈಸ್" (Lewis Rice) ಎಂಬುವ ಇಂಗ್ಲೀಷಿನಲ್ಲಿ ಬರೆದಂಥಾ ಗೆಝೆಟಿಯರ್ ಎಂಬ ಕೊಡಗು ಚರಿತ್ರೆಯಿಂದ ತೆಗೆದು ಭಾಷಾಂತರಿಸಲ್ಪಟ್ಟದಾಗಿ ಕಂಡು ಬರುವುದು (A literal word for word Translation) ಪೂರ್ವದಿಂದಲೇ ಈ ಕಥೆಯು ಎಲ್ಲರಿಗೂ ತಿಳಿದ ಸಂಗತಿಯಾಗಿರಬಹುದು. ಇದರಲ್ಲಿ ನವೀನತೆಯೇನೂ ಕಂಡು ಬರುವುದಿಲ್ಲ. ಇಂಥಾ ಬರವಣಿಗೆಗಳ ವಿಷಯವಾಗಿ ಡಾಕ್ಟರ್ ಜಾನ್‌ಸನ್ (Dr Johnson) ರವರು ತಿಳಿಸುವುದೇನೆಂದರೆ —

1. He that teaches us anything which we knew not before is undoubtedly to be reverenced as a master

2 He that conveys knowledge by more pleasing ways may be properly loved as a benefactor.

3 He that supplies life with innocent amusement will be certainly caressed as a pleasing companion.

4 He that collects particles of science which are often very widely scattered is very laudably employed, for he facilitates the progress of others.

ತರ್ಜುಮೆ —

1 ನಮಗೆ ಇದರ ಹಿಂದೆಗೂ ತಿಳಿಯದೆ ಇದ್ದಂಥಾ ನವೀನವಾದ ಸಂಗತಿಗಳನ್ನು ಬೋಧಿಸುವವನು ಗುರುವೆಂದು ಹೇಳಿಸಿಕೊಳ್ಳಲಿಕ್ಕೆ ನಿಸ್ಸಂದೇಹವಾಗಿಯೂ ಅರ್ಹನು.

2 ಮನಸ್ಸಿಗೆ ಆಹ್ಲಾದ ಉಂಟಾಗುವಂತೆ ನವಿ ಯಾವ ಭಾಷೆಯಲ್ಲಿ ಬರೆಯುವಂಥಾವನನ್ನು ನಾವು ಉಪಕಾರಿಯೆಂದೇ ಪ್ರೀತಿಸಬಹುದು.

3 ಕಾದಂಬರಿಗಳನ್ನು ಬರೆದು ಸಂತೋಷದಲ್ಲಿ ಕಾಲಹರಣ ಮಾಡುವ ಅನುಕೂಲತೆಗಳನ್ನು ಕೊಡುವಂಥಾವನನ್ನು ನಾವು ಪ್ರಿಯ ಮಿತ್ರನೆಂದೇ ಭಾವಿಸಬಹುದು.

4 ಅಲ್ಲದೆ ಅನೇಕಾನೇಕ ಗ್ರಂಥಗಳಲ್ಲಿ ಹಬ್ಬಿಕೊಂಡಿರುವಂಥಾ ನುಡಿಗಳನ್ನೂ ಮತ್ತು ಇತರ ವಿಷಯಗಳನ್ನು ಕೊಂಚಕೊಂಚವಾಗಿ ಆರಿಸಿ ತೆಗೆದು ಒಂದುಗೂಡಿಸಿ ಬರೆಯುವವನು ಜ್ಞಾನಾರ್ಜನೆಗೆ ಬಹಳ ಸಹಾಯಮಾಡುವನು.

ಈ ನಾಲು ನಿಯಮಗಳಲ್ಲೂ (statements) ಅಡಗದ ಬರವಣಿಗೆಗಳು ನಿಷ್ಪ್ರಯೋಜನವಾಗಿ ಸಮಯವನ್ನು ಕೊಲ್ಲಲು ಬರೆದವುಗಳೆಂದು ಡಾಕ್ಟರ್ ಜಾನ್‌ಸನ್ (Dr Johnson) ರವರು ಅಭಿಪ್ರಾಯಪಟ್ಟರು. ಇದನ್ನು ವಾಷಿಂಗ್‌ಟನ್ ಅರ್ವಿಂಗ್ (Washington Irving) ಮೊದಲಾದ ದೊಡ್ಡ ವಿದ್ವಾಂಸರು ಅನುಮೋದಿಸಿರುವರು.

ಈ ನಾಲ್ಕು ನಿಯಮಗಳ ಪ್ರಕಾರವೇ ಅಲ್ಲದೆ ಬೇರೆ ಯಾವರೀತಿಯಲ್ಲಿ ನೋಡಿದರೂ ನಮ್ಮ "ಹಿಯಸ್ ಮ್ಯಾಗಜೀನ್"ನಲ್ಲಿ ಪ್ರಕಟಿಸಿದ "ಪೊನ್ನಂಗಲತಮ್ಮ"ನ ಕತೆಯು ಅವುಗಳಿಗೆ ಸರಿಹೋಗುವದಿಲ್ಲ. ಯಾಕೆಂದರೆ ಇದು ಮೇಲೆ ಹೇಳಿದಂತೆ "ರೈಸ್" (Rice) ಎಂಬುವರು ಬರೆದ ಪುಸ್ತಕ (Mysore and Coorg Gazetteer Vol III) 257—258 ನೇ ಪುಟದಿಂದ ತೆಗೆದು ಭಾಷಾಂತರಿಸಲ್ಪಟ್ಟದಾಗಿ ಕಂಡುಬರುವುದು. ಆದುದರಿಂದ ಇಂಥ ಲೇಖನವನ್ನು ಬರೆಯುವವರು ಶ್ಲಾಘನೆಗೆ ಅರ್ಹರಲ್ಲ. ಈ ಲೇಖನವು ಲೇಖಕರ ಸ್ವಂತಬುದ್ಧಿಯಿಂದ ಬರೆದುದಾಗಿದ್ದರೆ ಆದರಲ್ಲಿ ಅವರ ಹೆಸರನ್ನಾದರೂ ತಿಳಿಸಬೇಕಾಗಿತ್ತು. ಹಾಗಿಲ್ಲದೆ ಪುಸ್ತಕದಲ್ಲಿ ಇಂಗ್ಲೀಷಿನಲ್ಲಿ ಬರೆದ ಕೊಡಗು ಚರಿತ್ರೆಯಿಂದ ತೆಗೆದು ಭಾಷಾಂತರಿಸಲ್ಪಟ್ಟದ್ದಾಗಿದ್ದರೆ ಆ ಗ್ರಂಥಕರ್ತರ ಹೆಸರನ್ನಾದರೂ ಬರೆಯಬೇಕಾಗಿತ್ತು. ಹೀಗೆ ಬೇರೊಂದು ಗ್ರಂಥದಿಂದ ತೆಗೆದು ಬರೆಯುವುದು ಯಾರಿಗೆ ತಾನೆ ಅಸಾಧ್ಯ? ನಾನೂ ಬರೆಯಬಹುದು. ಬೇಕಾದವರು ಬರೆಯಬಹುದು. ಅಭ್ಯಾಸವಾದವರು ಯಾರೂ ಇಲ್ಲ. ಆದರೆ ಅದನ್ನು ಓ. ಯಸ್. ಮ್ಯಾಗಜಿನಿನಲ್ಲಿ ಪ್ರಕಟಿಸಿದುದಾಗಿತ್ತು. ಪ್ರಕಟಿಸಿದ್ದೇನೆಂದು ... ಯಿತು. ಇನ್ನು ಮುಂದಕ್ಕಾದರೂ ಇಂಥ ಲೇಖನವನ್ನು ಪ್ರಕಟಿಸುವುದಾದರೆ ಲೇಖಕರ ಹೆಸರು ಮತ್ತು ಅದನ್ನು ಯಾರ ಮತ್ತು ಯಾವ ಗ್ರಂಥದಿಂದ ತೆಗೆದು ಭಾಷಾಂತರಿಸಿದ್ದು ಎಂಬುದನ್ನು ತಿಳಿಸುವಿರೆಂದು ನಾನು ನಂಬುತ್ತೇನೆ.

ಮತ್ತು ಈ ಲೇಖನದ ಅಗ್ರಲೇಖವು "ಪೊನ್ನಂಗಲತಮ್ಮ" ಎಂಬುದಾಗಿದೆ. ಇದನ್ನು ಬರೆದವರನ್ನು ನಾನ ಹಿಂದುಮುಂದು ಭಾವಿಸುತ್ತೇನೆ. ಆದರೆ ಇದನ್ನು ಸ್ವಂತಬುದ್ಧಿಯಿಂದಲೋ ಅಥವ ಯಾರಿಂದಲಾದರೂ ಕೇಳಿಯೋ ಬರೆಯಲಿಲ್ಲ. ಆ "ಪೊನ್ನಂಗಲತಮ್ಮ"ನ ಹೆಸರನ್ನು ಇಂಗ್ಲೀಷಿನಲ್ಲಿ "Ponnangalathamma" ಎಂದು ಬರೆದಿರುವರು. ಆದರೆ ಪನ್ನಂಗಾಲತಮ್ಮ ಎಂದು ಬರೆದಿದ್ದರೆ ಸರಿಯಾಗುತ್ತಿದ್ದಿತು. ಆದ್ದರಿಂದ ಇದರ ಅಗ್ರಲೇಖವೂ ಸಹ ಇಂಗ್ಲೀಷಿನಲ್ಲಿ ಭಾಷಾಂತರಿಸಲ್ಪಟ್ಟದೆಂದು ನಾನು ಧೈರ್ಯವಾಗಿ ಹೇಳುತ್ತೇನೆ. ಯಾವುದಾದರೂ ಒಂದು ಲೇಖನವನ್ನು ಬರೆದರೆ ಅದು ಯಾರಿಗೂ ಇದಕ್ಕಿಂತ ಮುಂಚೆ ತಿಳಿಯದ ಸಂಗತಿಯಾಗಿರಬೇಕು. ಆದದರಿಂದ ತಿಳಿಯದೆ ಇರುವಂಥಾ ಸಂಗತಿಗಳನ್ನು ಜನರಿಗೆ ತಿಳಿಯಪಡಿಸುವುದರಿಂದ ಗ್ರಂಥಕರ್ತರಿಗೆ ನಿಜವಾದ ಕೀರ್ತಿಯು ಬರುವುದು. ಇಂಥಾ ಲೇಖನಗಳನ್ನು ಬರೆಯಬೇಕಾದರೆ ಚೆನ್ನಾಗಿ ಕಷ್ಟಪಡಬೇಕು. ಹಾಗೆ ಕೊಂಡರೆ ತೆಗೆದುಕೊಳ್ಳದಿದ್ದರೆ ಅದು ಯಾರಿಗಾದರೂ ಅಸಾಧ್ಯವೇ. ಕೊಡಗಿನ ಎಲ್ಲಾ ಪ್ರಾಂತ್ಯಗಳಲ್ಲಿಯೂ ಸಂಚರಿಸಿ ಸಂಗತಿಗಳನ್ನು ಚೆನ್ನಾಗಿ ವಿಚಾರಿಸಿಕೊಳ್ಳುತ್ತಲೂ ಮತ್ತು ಶಿಲಾಶಾಸನಗಳಲ್ಲಿರುವ ಬರವಣಿಗೆಗಳನ್ನು (inscriptions) ಚೆನ್ನಾಗಿ ತಿಳಿದುಕೊಳ್ಳುತ್ತಲೂ ತಿಳಿದ ಸಂಗತಿಗಳನ್ನೆಲ್ಲಾ ಒಂದುಗೂಡಿಸಿ ಸ್ವಂತಬುದ್ಧಿಯನ್ನು ಉಪಯೋಗಿಸಿ ಒಂದು ಗ್ರಂಥವನ್ನಾದರೂ ಬರೆದರೆ ಕೊಡಗಿನ ಮಹಾಜನಗಳಿಗಲ್ಲಾ ಮಹದುಪಕಾರವನ್ನು ಮಾಡಿದಂತಾಗುವದಲ್ಲದೆ ಇದುವರೆವಿಗೂ ಕತ್ತಲೆಯಲ್ಲಿ ಅಡಗಿದ್ದಂಥಾ ಸಂಗತಿಗಳನ್ನು ಬೆಳಕಿಗೆ ತಂದಂತಾಗುವುದು.

ಇದರಸಂಬಂಧವಾಗಿ ಡಾಕ್ಟರ್ ಜಾನ್‌ಸನ್ನರು ಮತ್ತು ಹೇಳುವುದೇನೆಂದರೆ —

(He that reproduces subjects written in other books is nothing but a Plagiarist) ಯಾವನು ಬೇರೊಂದು ಗ್ರಂಥದಿಂದ ತೆಗೆದು ಬರೆಯುವನೋ ಅವನು ನಿಸ್ಸಂದೇಹವಾಗಿಯೂ ಪರಸ್ವಾಪಹಾರನು. ಆದುದರಿಂದ ತಾವು ಹೀಗೆ ಬರೆಯುವುದರಿಂದ ಏನೂ ಪ್ರಯೋಜನವಿಲ್ಲ. ಬರೆದರೂ ತಮ್ಮ ಸ್ವಂತವಾಗಿರಬೇಕು. ಹಾಗೆ ಬರೆದರೆ ತಾವು ನಿಜವಾಗಿಯೂ ಶ್ಲಾಘನೆಗೆ ಅರ್ಹರಾಗುವಿರಿ. ಆದುದರಿಂದ ಇನ್ನು ಮುಂದಕ್ಕಾದರೂ ತಾವು ಎಂದೂ ಹೊರಕ್ಕೆ ಬೀಳದ ಸಂಗತಿಗಳನ್ನು ಹೊರಪಡಿಸಿದರೆ ಎಲ್ಲರಿಗೂ ಮಹದುಪಕಾರಮಾಡಿದಂತಾಗುವುದು.

ಸಿ ರೀ ಪ.

ಶ್ರೀ ಕಾವೇರಿ ಬಸ್ ಸರ್ವೀಸು.

ಸ್ವಾಮಿಯರೆ,

ನಮ್ಮ ದೇಶದಲ್ಲಿ ಬಸ್ಸು ಸರ್ವೀಸು ಪ್ರಾರಂಭ ದಿವಸದಿಂದ ಸಂದೇಹಸ್ಥರಾಗಿರುತ್ತಾರೆ. ಹೊಸಗಿನವರ ಬಸ್ಸು ಸರ್ವೀಸು ನಡೆಯುತ್ತಿದ್ದಾಗ ಅವುಗಳಿಂದ ದೇಶಕ್ಕೆ ಬಹಳ ನಷ್ಟವೆಂತಲೂ, ಅವುಗಳಲ್ಲಿ ಪ್ರಯಾಣದ ಚಾರ್ಜು ಬಹಳ ಹೆಚ್ಚೆಂತಲೂ, ಅವುಗಳು ಪ್ರಯಾಣಿಕರಿಗೆ ಅನುಕೂಲವಾದ ಕಾಲಗಳಲ್ಲಿ ನಡೆಯುವುದಿಲ್ಲ ಎಂತಲೂ ಮುಂತಾದ ಅನೇಕ ಪ್ರಕಾರಗಳು ಇದೇ "ಕೊಡಗು" ಪತ್ರಿಕೆಯ ಮೂಲಕ ಪದೇ ಪದೇ ಹೊರಬರುತ್ತಿದ್ದವು. ಈ ವಿಷಯಗಳಿಗೆಲ್ಲಾ ಪ್ರಜಾಪರಿಪಾಲಕರಾದ ಸರ್ಕಾರದವರೂ ಗಮನ ಕೊಡಬೇಕೆಂದು [illegible] ಇದೆಯೆಂದು ತೋರುತ್ತದೆ. ಅಲ್ಲದೆ ನಮ್ಮ ದೇಶೀಯರೇ ಅಂಥಾ ಬಸ್ಸು ಸರ್ವೀಸನ್ನು ಇಟ್ಟು ನಮ್ಮ ದೇಶದ ಜನರಿಗೆ ಬಹಳ ಅನುಕೂಲ ಉಂಟು ಮಾಡಬೇಕೆಂಬ ಅಭಿಪ್ರಾಯಗಳು ಕೂಡ ಆಗಾಗ್ಗೆ ಪ್ರಕಟವಾಗುತ್ತಿದ್ದವು. ಜನರ ಅಭಿಪ್ರಾಯದ [illegible] ದೇಶದ ಜನರಿಗೆ ಹಿತವನ್ನುಂಟುಮಾಡಬೇಕೆಂಬ [illegible] ವ್ಯಾಪಾರದ ಲಾಭದ ದೃಷ್ಟಿಯಿಂದಲೋ, ಯಾವ ಕಾರಣದಿಂದಲೇ ಆಗಲಿ ನಮ್ಮ ದೇಶದವರೇ ಬಸ್ಸು ಸರ್ವೀಸುಗಳನ್ನು ನಡಿಸಲು [illegible] ಲವು ತಿಂಗಳುಗಳಿಂದವು [illegible] ಪ್ರಯಾಣಿಕರಿಗೆ [illegible] ಸಬಹುದೆಂದಿದ್ದ ಅನುಕೂಲಗಳು [illegible] ಇನ್ನೂ [illegible] ಗಿರುವುದಿಲ್ಲವೆಂದೇ ಹೇಳಬೇಕು. ಅದರ ಬದಲು ಪ್ರಯಾಣದ ಚಾರ್ಜು ಹೆಚ್ಚಿಸಲ್ಪಟ್ಟಿದೆ. ಇದೂ ಒಂದು [illegible] ರದ ಅನುಕೂಲವೇ? ಕೆಲವರ ಭಾವನೆ. ಯಾಕಂದರೆ, ಬಡವರು ಬಸ್ಸಿಗೆ ಹಣ ಕೊಡಲಾರದೆ [illegible] ಪೂರ್ವದಂತೆ ಕಾಲ್ನಡೆಗೆಯಲ್ಲಿ ತಿರುಗುವರು. [illegible]! ಎಂತಾ ಉಪಕಾರ! ಬಡವರಿಗೆ [illegible] ದಂತೂ ಆಯಿತು; ಬಸ್ಸಿನವರಿಗೆ ಲಾಭ ಸುಖಾವನೆ [illegible] ದಂತೂ ಆಯಿತು. ಪ್ರಯಾಣಿಕರಿಗೆ ಇವಕ್ಕಿಂತ [illegible] ಮತ್ತಾವ ಉಪಕಾರ ಬೇಕು?

ಬಸ್ಸು ಸರ್ವೀಸು ಪ್ರಾರಂಭವಾಗುವಾಗ್ಗೆ ಹೆಚ್ಚು ಖರ್ಚಾಗುವುದರಿಂದ ಹೆಚ್ಚು ಚಾರ್ಜು ಮಾಡಲು ಕಾರಣವೆಂದು ಕೆಲವರು ಹೇಳುತ್ತಿದ್ದನ್ನು ಕೇಳಿರುವೆನು. ಅದು ಪ್ರಾರಂಭವಾಗಿ ನಾಲ್ಕೈದು ತಿಂಗಳಾದುವು. ಇನ್ನಾದರೂ ಚಾರ್ಜನ್ನು ಕಡಿಮೆಮಾಡಲು ಆಲೋಚಿಸುವರಿಗೆ ಯೋಚನೆ ಬಂದಿರುವುದಿಲ್ಲವೇ? ಬರಸೀಮೆಯವರು ಇಟ್ಟಿದ್ದ ಮೈಲಿಗೆ ಒಂದಾಣೆ ಚಾರ್ಜಿಗಿಂತ ಸ್ವಲ್ಪವಾದರೂ ಕಡಿಮೆಮಾಡಿ ಯಾ ಪೂರ್ತಿ ಪ್ರಯಾಣಕ್ಕೂ ಸ್ವಲ್ಪಸ್ವಲ್ಪ ಪ್ರಯಾಣಕ್ಕೂ ಇರುವ ಅನ್ಯಾಯವಾದ ಬೇರೆ ಬೇರೆ ದರಗಳನ್ನು ಹೋಗಲಾಡಿಸಿ ಯಾ ಪ್ರಯಾಣಿಕರಿಗೆ ದೇಶೀಯ ಕಂಪೆನಿಗಳಿಂದ ಉಂಟಾಗಬಹುದೆಂದಿದ್ದ ಅನುಕೂಲಗಳನ್ನು ವಿಶದ ಪಡಿಸಲು ಇದೀಗ ಸಮಯವಲ್ಲವೇ? ಅಲ್ಲದೆ ವೀರರಾಜಪೇಟೆಗೆ ಬಸ್ಸು ಹತ್ತಲು ಅನೇಕರು ಗ್ರಾಮಾಂತರಗಳಿಂದ ಬರುವುದರಿಂದ ಬೆಳಿಗ್ಗೆ ೯ ಬಸ್ಸು 8 ಗಂಟೆಯ ಬದಲು 8½ ಗಂಟೆಗೂ, ಸಾಯಂಕಾಲ ಪೋಸ್ಟ್ ಆಫೀಸಿಯ ಮತ್ತು ಬೇರೆ ಕೆಲಸಗಳನ್ನು ತೀರಿಸಿ ಹೊರಡಬೇಕಾಗಿರುವುದರಿಂದ 3 ಗಂಟೆಯ ಬದಲು 4 ಗಂಟೆಗೂ [illegible] ಮಾಡಿದರೆ ಪ್ರಯಾಣಿಕರಿಗೆ ಬಹಳ ಅನುಕೂಲವಾಗುವುದು. ಪ್ರಯಾಣಿಕರ ಹಿತವನ್ನು ಬಯಸಿ ಬಸ್ಸನ್ನು ಇಟ್ಟಿರುವ ಮಹನೀಯರು ಪ್ರಯಾಣಿಕರ ಅನುಕೂಲಗಳನ್ನು ಸ್ವಲ್ಪ ಮಟ್ಟಿಗಾದರೂ ಗಮನಕ್ಕೆ ತೆಗೆದುಕೊಳ್ಳುವರೆಂದು ನಂಬಿರುವೆ.

"ಪ್ರಯಾಣಿಕ"

ಮಹಾತ್ಮ ಗಾಂಧಿಯವರನ್ನು ಯಾವದೊಂದು [illegible] ಇಲ್ಲದೆ ತಾ|| 5 ರಲ್ಲಿ ಜೈಲಿನಿಂದ ಬಿಟ್ಟ ವರ್ತಮಾನವನ್ನು ಕೇಳಿದಕ್ಕಾಗಿ, ಬಿಟ್ಟಂಗಾಲ ಗ್ರಾಮದ ಗ್ರಾಮಸ್ಥರು ತಾ|| 9 ರಲ್ಲಿ ಶ್ರೀ ಭಗವತಿದೇವಸ್ಥಾನದಲ್ಲಿ ಸಭೆ ಸೇರಿದರು. ಮೆ|| ಪ್ರೊಸ್ಸೆಕ್ಯೂಟರ ಗಣಪತಿಯವರು ಅಧ್ಯಕ್ಷತೆಯನ್ನು ವಹಿಸಿದ್ದರು. ಮೆ|| ನಾಯಕ ಚೆಕ್ಯ ಅಧ್ಯಕ್ಷತೆಯನ್ನು [illegible] ಮಹಾತ್ಮರ ಉಪದೇಶ ಮತ್ತು ತತ್ವದ ವಿಷಯವಾಗಿ ಸ್ವಾರಸ್ಯವಾಗಿ ಭಾಷಣ ಮಾಡಿದರು. ತರುವಾಯ, ಎಲ್ಲವರೂ, ಸಂತೋಷವನ್ನು ಸೂಚಿಸಲಿಕ್ಕಾಗಿ ಆ ಮಹಾತ್ಮನನ್ನು ಐಗು ನಿಮಿಷದ ತನಕ ಆತ್ಮದಲ್ಲಿ ಧ್ಯಾನಿಸಿ, ನಮ್ಮ ಸಂತೋಷವನ್ನು ಕೊಡಗು ಪತ್ರಿಕೆಯಲ್ಲಿ ಸೂಚಿಸಿ, ಪ್ರಕಟಿಸಬೇಕಾಗಿ ಎಲ್ಲವರೂ ಅಭಿಪ್ರಾಯಪಟ್ಟು, ಜಯಘೋಷದಿಂದ ನಮ್ಮ ದೇವತೆಗೆ ಪೂಜೆಮಾಡಿಸಿ, ಪ್ರಸಾದಗಳಿಂದ ಸಭೆಯಿಂ ಮುಕ್ತಾಯ [illegible] ತೆರಳಿದರು.

'ಊರವ'

ಅಯ್ಯಾ,

ಕೊಡಗು ಕೌನ್ಸಿಲುಗಳು ಮೆಂಬರುಗಳಾದ ಮಹಾನೀಯರುಗಳೆ—ಜವಾಬುದಾರಿಕೆಯುಳ್ಳ ದೇಶದ ಆಡಳಿತದ ಕೆಲವು ಭಾಗವು ತಮ್ಮಗಳ ಕೈವಶವಾಗಿವೆಯೆಂದು ಕೆಲವರು ಹೇಳುತ್ತಿರುವ ದೇಶದವರ ಹಿತವನ್ನು ಬಯಸಿ ಸರಕಾರದವರೊಂದಿಗೆ ಹೋರಾಡಿದವರೊಂದಿಗೆ ಹೋರಾಡಿದರೆ ಅದನ್ನೆಲ್ಲಾ ನಿಮಿಷಾರ್ಧದಲ್ಲಿ ಕತ್ತರಿಸುವ ಅಧಿಕಾರವು ನಮ್ಮ ಹಜರತ್ [illegible] ಸಾಹೇಬರವರ [illegible] ಕೈಯಲ್ಲಿದೆಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಆದರೆ ತಾವ್ಗಳೆಲ್ಲ ಒಂದಾಗಿ ಸೇರಿ ಸರಕಾರದೊಂದಿಗೆ ಹೋರಾಡಿ ದೇಶದ ಮಹಾಮಾರಿಯಾದ ನಿಷೇಧ [illegible] ದೇಶದ ಹೊರಕ್ಕೆ ಓಡಿಸಿದರೂ, ವಾಪಿ ಮತ್ತು [illegible] ದ ವಿದ್ಯಾಭ್ಯಾಸವನ್ನು ಪ್ರಚಾರಕ್ಕೆ ತಂದರೂ, [illegible] ರಿಯಾಯತಿಗಳನ್ನು ಸರಿಪಡಿಸಿದರೂ ರಿಜರ್ವ್ ಪಾರೆಸ್ಟಿನಲ್ಲಿ ಛತ್ತದ ಒಳಗೆ ಯೋಗ್ಯವಾದ ಎತ್ತು [illegible] ಗಳನ್ನು ರೈತರಿಗೆ ಮುಕ್ತಿಯಾಗಿ ಕೊಡಿಸಿದರೂ [illegible] ಜವಾಬುದಾರಿಯುಳ್ಳ ಕೌನ್ಸಿಲನ್ನು ತಾವು [illegible] ತಾವುಗಳು ದೇಶದವರಿಗೂ ರಾಜನಿಗೂ [illegible] ಮಾಡಿದ ತಪ್ಪೇ [illegible] ಇವರೆಲ್ಲರಿಗೂ [illegible] ರಿಯಾಗಿ [illegible] ಘಟಸಾಧನೆಯ ಕೆಲಸವನ್ನು [illegible] ಇರದಲ್ಲಾ [illegible] ಸ್ವಸ್ಥವಾದ ಕೀರ್ತಿಯನ್ನು [illegible] 1857 ನೇ ಇಸವಿಯಲ್ಲಿ [illegible] ಇಂಡಿಯಾ ಕಂಪನಿಯು [illegible] ಆಡಳಿತವನ್ನು ನಮ್ಮ [illegible] ವಹಿಸಿಕೊಂಡಾಗ [illegible] ಪ್ರತಿಷ್ಠಾಪಿಸಲು ಪ್ರಯತ್ನಿಸಿ [illegible] ನಡೆದ ದಿನಿಂದ ಅನೇಕ [illegible] ಇತರ ಅಧಿ [illegible] ಹಲವರು [illegible]. ಹಲವರು ಅವರ [illegible] ಮಾಡಿಕೊಂ [illegible] ಬಿಟ್ಟು [illegible] ಇಲ್ಲ [illegible] 66 ವರ್ಷಗಳಾಯಿತು [illegible] ಇಲ್ಲ.

ಅಂದು ಒಂದೇ [illegible] ಎತ್ತರದ ಬಿದಿರು ಕಟ್ಟಿ [illegible] ಮಳೆ ಬಿಟ್ಟಾಗ ಅನ್ನವನ್ನು ಬೇಯಿಸಿ ತಿಂದುಕೊಂಡು [illegible] ಆ ಬಡತನದಲ್ಲಿ [illegible] ಎತ್ತಿ ಕಾಲ [illegible] ಸ್ಥಿತಿಗೆ [illegible] ದಾನವನ್ನಾಡಿಕೊಂಡಿ [illegible] ಸೂರಾಯಿ [illegible] ಗುಡಿಸಲುಗಳಲ್ಲಿ [illegible] ಉತ್ತಮಸ್ಥಿತಿಗೆ ತರಲಿಲ್ಲ. ಅವರು ನಮ್ಮ [illegible] ಪ್ರವರ್ತಿಸುವ [illegible] ಇಲ್ಲವೇ? ಇವರೂ [illegible] ಅದಾಗಿದೆ ಇಲ್ಲವೇ? ಇವರಿ [illegible] ರಾಜರ [illegible] ಬಾಯಿಗೆ [illegible] ಬಿಡಬೇಕು? [illegible] ಇವರ [illegible] ತೊಲಗಿಲ್ಲವೆಂದರೆ [illegible] ವೇ?

ಮಹಾನೀಯರೇ ನಮ್ಮ ಪಟ್ಟಣಕ್ಕೆ ಪ್ರತ್ಯೇಕವಾದ ಒಂದು ಕೌನ್ಸಿಲು [illegible] ಇದು ವಿಶೇಷ ಸಂಗತಿಯೆಂದು ಹಲವರು ಹೇಳುವರು. ಈ ವಿಶೇಷದಿಂದ ಕೌನ್ಸಿಲಿನಿಂದಲೇ ಆ [illegible] ಜೀವನವು ಉತ್ತಮ ಸ್ಥಿತಿಗೆ ತರಲು ಸರಕಾರದ ನ್ಯಾಯವಾದ [illegible] ಇಲಾಖೆ [illegible] ಕೀರ್ತಿಯನ್ನು ಪಡೆಯಬೇಕಾಗಿ ಕೋರುವ,

ಜ ಪಿ ಮಾದಪ್ಪ.

ಅಯ್ಯಾ,

ಕೊಡಗು ದೇಶದ ಪ್ರಜೆಗಳ ಕ್ಷೇಮಕ್ಕಾಗಿ ಈ ದೇಶದಲ್ಲಿ ನಿಷಿಸಿಕೆಟ್ಟದನಿಸಬೇಕಾಗಿ ಅನೇಕ ವರುಷಗಳಿಂದ ಪ್ರಯತ್ನ ಪಡುವುದಲ್ಲದೆ ಈ ಕೊಡಗು [illegible] ರು ಹುಟ್ಟಿದನಂತರ ಪ್ರತಿವಾರವೂ ಒಬ್ಬೊಬ್ಬ [illegible] ರು ವಾರಕ್ಕೊಂದೊಂದು ಆರ್ಟಿಕಲ್ ಬರೆಯುತ್ತಿರುವುದು ನಾನು ನೋಡುತ್ತಾ ಇದ್ದೇನೆ. ಆದರೂ ಜನರು ತಾತ್ರ ಕಲಿಸಿ ಬುದ್ಧಿ ಬಿಡುವುದಿಲ್ಲ. ಅದ್ದರಿಂದ ನಾನು ಒಂದು ವಿಧದ ಆಲೋಚನೆಯನ್ನು ಪ್ರಕಟಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಸೇಂದಿ ಸಾರಾಯಿ ಎಂಬುದು ಒಂದು ವಿಧದ ಮೋಹಿನಿಯಾಗಿರುತ್ತದೆ. ಇದನ್ನು ಕಲ್ಪನೆಲ್ಲಿ ಕಂಡರೆ ಅಭ್ಯಾಸವಿರುವವರಿಗೆ ಬಿಡುವುದಕ್ಕೆ ಏನುಕೂಡಬೇಕೆಂದರೆ—1 ಸೇಂದಿ ಎಂಬುದು ಯಾವ ಮನುಷ್ಯನ ದೇಹಕ್ಕೂ ಒಪ್ಪಿಯದಲ್ಲ. ಇದರಿಂದ ಔಷದಿ ಇಲ್ಲ. ಕಾಯಿಲೆಸ್ಥರಿಗೆ ಯಾವವಿಧದಲ್ಲಿಯೂ ಔಷಧಿಯಾಗಿ ಉಪಯೋಗಿಸುವುದಿಲ್ಲ. ಇದು ಏಳೇಳು ತಲೆಯಾಂತರ ಉಪಯೋಗಿಸುತ್ತಿದ್ದಂತೆ ಉತ್ತಮವಾದ ಪದಾರ್ಥವಲ್ಲ. ಈ ಬ್ಯೆನೆ ಸೇಂದಿ ಎಂಬುದು 1860 ನೇ ಇಸವಿಗಿಂತ ಮೊದಲು ದೇಶದಲ್ಲಿ ಇರಲೇ ಇಲ್ಲ. ಅದು ಮೈಸೂರು ದೇಶದಿಂದ ದೇವರು ಮಳ್ಳೆಂಬ ಒಂದು ಜಾತಿ ಇತ್ತಾಗಿ ಕನ್ನಡ, ಮಲೆಯಾಳ ಜಿಲ್ಲೆಯಿಂದ ತೀಯರು ಬಲ್ಲವರು ಹೆಚ್ಚಾಗಿ ಬರಲಿಕ್ಕಾಗಿಯೂ ಅವರ ಹೊಟ್ಟೆಪಾಡಿಗಾಗಿಯೂ ಬೈನೆಮರ ಕಟ್ಟಲಿಕ್ಕೆ ಪ್ರಾರಂಭಿಸಿ ಈ ದೇಶದ ಜನರಿಗೆ ಕೆಡುವಕಾಲ ಬಂತು. ಈ ಸೇಂದಿ ಸುತ್ತಿಗೆ ಹರಾಜುಮಾಡುವದನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡಬೇಕು.

2 ಸಾರಾಯಿವೆಂಬುದು ಈಗ ಸರ್ಕಾರಿ ಮೂಲಕ ಮಾರುವಂತಾಯ್ತು. ಮೊದಲು ಇಲ್ಲವಿದ್ದರೂ ಭತ್ತದ ಸಾರಾಯಿ ಎಂಬುದು ನೂರು ವರ್ಷಗಳಿಂದ ಈ ದೇಶದಲ್ಲಿ ಮಾಡುತ್ತಾ ಕುಡಿಯುತ್ತಾ ಇದ್ದುದು ವಾಸ್ತವ್ಯವಾಗಿದೆ. ಇದು ಔಷಧಿಗಾಗಿಯೂ ಉಪಯೋಗಿಸುತ್ತಾರೆ. ಇಂಥಾದನ್ನು ಒಂದೇದಫ ನಿಲ್ಲಿಸಿಬಿಟ್ಟದ್ದಾದರೆ ಬಂದೊಂದು ತರಹದ ಕಾಯಿಲೆ ಒಂದು ಜನರಿಗೆ ಬಹಳ ತೊಂದರೆ ಉಂಟಾದೀತಾದ್ದರಿಂದ ಅನೇಕ ಸ್ಥಳಗಳಲ್ಲಿ ಅಂಗಡಿಗಳನ್ನು ಹರಾಜು ಮಾಡುವ ಪದ್ಧತಿ ನಿಲ್ಲಿಸಿ ಮಡಿಕೇರಿ, ವೀರರಾಜೇಂದ್ರಪೇಟೆ ಮತ್ತು ಸೋಮವಾರಪೇಟೆ ಈ ನಾಲ್ಕು ಸ್ಥಳದಲ್ಲಿ ಡಿಸ್ಟಿಲರಿಯಲ್ಲಿ ಇಟ್ಟು ಕಾಲು, ಅರ್ಧ, ಒಂದು ಮತ್ತು ಎರಡು ಡ್ರಾಮ್ ಈ ಮೇರೆ ಚಿಲ್ಲರೆಯಾಗಿ ಮಾರದೆ ಸರ್ಕಾರಿ ಉದ್ಯೋಗಸ್ಥರ ಮೂಲಕ ಸರಿಯಾದ ಡಿಗ್ರಿಯಲ್ಲಿ ಒಂದೇ ತರಹದ [illegible] ಯದಲ್ಲಿ ಕುಪ್ಪಿಗಟ್ಲೆ ಮತ್ತು ಗೋಣಿಗಟ್ಲೆಯಾಗಿ ಮಾರುವಂತೆ ಏರ್ಪಾಡುಮಾಡಿದರೆ ಬಹಳ ಒಳ್ಳೇದಾಗುತ್ತೆ. ಅಗತ್ಯವಾಗಿ ಕುಡಿಯಬೇಕಾದವರು ಮತ್ತು ಕಾಯಿಲೆ ಮಗ್ಗರಿಗೆ ಬೇಕಾದವರು ಕುಪ್ಪಿಲೆಕ್ಕದ ಮೇರೆಯಾಗಿ ಯಾಗಲಿ, ಗ್ಯಾಲನ್ ಲೆಕ್ಕದ ಮೇರೆಯಾಗಿ ಯಾಗಲಿ ತರಿಸಿಕೊಂಡು ಇಟ್ಟುಕೊಳ್ಳುತ್ತಾರೆ.

ಈ ಮೇರೆ ಮಾಡಿದರೆ ಸರ್ಕಾರಕ್ಕೆ ಸಲ್ಪ ರೆವಿನ್ಯೂ ಕಮ್ಮಿಯಾಗುತ್ತೆ. ದೇಶದ ಜನರಸೌಖ್ಯಕ್ಕಾಗಿ ರೆವಿನ್ಯೂ ಕಮ್ಮಿಯಾದರೆ ಸರ್ಕಾರದವರು ಅದನ್ನು [illegible].

ಈ ದುರಾಚಾರದ ಹೆಂಡ ಸಾರಾಯಿ [illegible] ವುದರಿಂದ ಗಂಡಸರಿಗೂ ಹೆಂಗಸರಿಗೂ [illegible] ವವಾಗುವ ಮಕ್ಕಳಿಗೆ [illegible] ಪ್ರಾಯದಲ್ಲಿ ಹೆಚ್ಚು [illegible].

ಇಂಗ್ಲೆಂಡ್ ಮತ್ತು [illegible] ದ ಸಭೆ [illegible] ತಾರೀಖು 15 [illegible] ಪಬ್ಲಿಕ್ ಮಾಡಿದಲ್ಲಿ [illegible] ಕಾರದವರು ತಿಳಿಯುತ್ತಾರೆ.

[illegible] ಸೇಂದಿ [illegible] ತ್ತು ಸಾರಾಯಿ [illegible] ಪ್ರವೃತ್ತಿ [illegible] ಸ ಪ್ರಸಕ್ತ [illegible] ಪ್ರವಿಷ್ಟ [illegible] ಲಾದ [illegible] ಗಳು [illegible] ಕೌನ್ಸಿ [illegible] ಮೆಂಬರುಗಳು [illegible] ರನ್ನು ಕೇಳಿದರೆ ಸೇಂದಿ ಸಾರಾಯಿ [illegible] ಹದ [illegible] ನಿಲ್ಲಿಸುವುದು ಸಾಧ್ಯ [illegible].

ಹಾಗೆ ಮಾಡಿದರೆ ಸರ್ಕಾರವನ್ನು [illegible] ರಿಸುವುದನ್ನು [illegible] ಬೇಕಾದಷ್ಟು [illegible] ವೀರರಾಜೇಂದ್ರಪೇಟೆ [illegible] ಕಾದಷ್ಟು [illegible] ಗಳಿಗೆ [illegible] ಸೋಮವಾರಪೇಟೆ [illegible] ಸುವ [illegible] ಕಮ್ಮಿಯಾಗುತ್ತೆ. [illegible] ಮೇಲ್ಕಂಡ ಎಲ್ಲಾ ಮೆಂಬರುಗಳು [illegible] ಕೊಂಡರೆ ದೇಶಕ್ಕೆ ಒಳ್ಳೆಯದಾಗುವುದಕ್ಕೆ [illegible] ಸ್ವಲ್ಪ ಅನುಮಾನವಿರುವುದಿಲ್ಲ. ಹಾಗೆ [illegible] ದರೆ ಈ ದುರಭ್ಯಾಸವನ್ನು ನಿಲ್ಲಿಸುತ್ತವೆ [illegible] ಸಾಧ್ಯವಿಲ್ಲ. ದೇಶಕ್ಕೆ ಹಾಗೂ ಕ್ಷೇಮವಿಲ್ಲ. [illegible] ಒಳ್ಳೆ ಮನಸ್ಸು ಮಾಡಿ ತುಂಬಾ [illegible] ಮಾಡಿಕೊಳ್ಳಬೇಕಾಗಿ ಬೇಡುವೆ,

ದಕ್ಷಿಣಕೊಡಗಿನ ಒಬ್ಬ ಹಳಬ ದೇಶಾಭಿಮಾನಿ.

ಸರಕಾರದವರ ಗಮನಕ್ಕೆ ಇನ್ನಾದರೂ ಬರುವದೇ ?

ಲೋಕೋಪಕಾರದ ಉದ್ದಿಶ್ಯ ಪುಣ್ಯನದಿಯಾಗಿ ಬ್ರಹ್ಮಗಿರಿ ಶಿಖರದಲ್ಲುದ್ಭವಿಸಿ ಪವಿತ್ರ ತೀರ್ಥವೆಂದು ಪ್ರಸಿದ್ಧಿ ಪಡೆದು, ಅಲ್ಲಿಂದ ಬಲಮುರಿ ತೀರ್ಥವೆಂತಲೂ, ಗುಪ್ತತೀರ್ಥವೆಂತಲೂ ಸಮುದ್ರಗಾಮಿನಿಯಾದ ಶ್ರೀ ಲೋಕಪಾವನಿ ಕಾವೇರಮ್ಮನವರು ಜಗತ್ಪ್ರಸಿದ್ಧಿಯಾಗಿದ್ದಾರೆ.

ಈ ಎರಡನೇ ತೀರ್ಥವಾದ ಬಲಮುರಿಗಾಗಿ ಹರಿದು ಹೋಗುವ ಕಾವೇರಿನದಿಯು ಎಡದಲ್ಲಿ ತುಲಾ ಸಂಕ್ರಮಣದ ಮರುದಿನ ಸಾವಿರಾರು ಜನರು ಬಂದು ನದಿಸ್ನಾನಮಾಡಿ ದೇವತಾ ದರುಶನದಿಂದ ಸದ್ಗತಿ ಹೊಂದತಕ್ಕ ಅನಾದಿಸಿದ್ಧವಾದ ಅಗಸ್ತ್ಯೇಶ್ವರ ದೇವಾಲಯವೂ, ಮತ್ತು ಪೂರ್ವರಾಜರಿಂದ ಇಲ್ಲಿ ಈ ದೇವಾಲಯ ಸಮ್ಮಂದವಾಗಿ ಧರ್ಮಾದಾಯ ನಡೆಯಬೇಕಾಗಿ ಬಿಡಲ್ಪಟ್ಟ ಒಂದು ಜಂಗಮ ಮಠವು ಇದೆ. ಈ ಪರ್ಣಗಾಗಿ ಸರ್ಕಾರದಿಂದ ಮುನ್ನೂರಬಟ್ಟೆ ಭೂಮಿಯು ಕಾಫಿ ತೋಟ ಬಾಣೆ ಸಹಾ ಕಂದಾಯ ವಿರಹಿತವಾಗಿ ಜಹಗೀರುಮಾಡಿ ಉತ್ತಾರರೂಪವಾಗಿ ಮಠಕ್ಕೆ ಬಿಟ್ಟಿರಲ್ಪಟ್ಟಿರುತ್ತದೆ. ಈಮಠದ ಕಾರುಭಾರ ನಡೆಸುವರೇ ಒಬ್ಬ ಯೋಗ್ಯಜಂಗಮನನ್ನು ಏಜಂಟಾಗಿ ನಿಯಮಿಸಿ ಇಲ್ಲಿನ ಕಾರುಭಾರಗಳನ್ನು ಲೋಪವಿಲ್ಲದ ರೀತಿ ನಡೆಸುವ ಕರ್ತವ್ಯವು ಗವರ್ನಮೇಂಟಿನವರದಾಗಿದೆ ಮತ್ತು ಇದರ ಎಚ್ಚರ ತೆಗೆದುಕೊಂಡು ಯೋಗ್ಯರೀತಿ ನಡೆಸುವಂತೆಯೂ ತಪ್ಪಿದರೆ ಸರಕಾರಕ್ಕೆ ತಿಳಿಸಿ ಅವರ ಮುಖಾಂತರ ಸರಿಯಾಗಿ ನಡೆಸುವ ತರದೂದು ಮಾಡುವದು ಗ್ರಾಮಸ್ಥರಿಗೆ ಸಹ ಕೂಡಿರುತ್ತದೆ.

ಅಲ್ಲಿ ಸೇರುವ ಅತಿಥಿ ಅಭ್ಯಾಗತರ ಸತ್ಕಾರ ಮಾಡುವುದೂ ದೇವಾಲಯಕ್ಕೆ ಅನಾದಿಯಿಂದ ನಡೆಕೊಂಡು ಬರುವ ವಿನಿಯೋಗಗಳನ್ನು ನಡೆಸುವದೂ ಅಲ್ಲಿ ದಿನಂಪ್ರತಿ ಶಿವಪೂಜೆ ನಡೆಸುವುದೂ ಮುಂತಾದ್ದು ಈ ಮಠದಲ್ಲಿರತಕ್ಕ ಏಜಂಟನ ಕರ್ತವ್ಯವಾಗಿರುತ್ತದೆ.

ಇದಕ್ಕಾಗಿಯೆ ಪೂರ್ವರಾಜರು ಮಠ ಸ್ಥಾಪಿಸಿ ಈ ಸತ್ಕಾರ್ಯವನ್ನು ನಡೆಸುವಬಗ್ಗೆ ಮಠದಲ್ಲಿ ಕಾಯಂ ಒಬ್ಬ ಯೋಗ್ಯನಾದ ಜಂಗಮನನ್ನು ನಿಯಮಿಸಿದ್ದಾಗಿದೆ.

ಮಠದಲ್ಲಿರತಕ್ಕ ಈ ಏಜಂಟರಿಗೆ ಕ್ರಮಪ್ರಕಾರವಾಗಿ ತಮ್ಮ ಕರ್ತವ್ಯವನ್ನು ಅಲ್ಲಿಯೇ ಇದ್ದು ನಡೆಸಿಕೊಂಡು ಬರುವ ಹಕ್ಕೇ ಹೊರತು ಆತನಿಗೆ ಈ ಮಠಕ್ಕೆ ಬಿಟ್ಟಿರುವ ಆಸ್ತಿಗಳನ್ನು ಪರಾಧೀನಮಾಡುವದಕ್ಕಾಗಲಿ, ಈ ಮಠವನ್ನು ತಾನು ಬಿಟ್ಟುಹೋಗುವದಕ್ಕಾಗಲಿ, ಈ ಮಠದಲ್ಲಿ ಬೇರೆ ಯಾರನ್ನಾದರೂ ಇರಿಸತಕ್ಕ ಯಾವವಿಧದ ಹಕ್ಕೂ ಇರುವುದಿಲ್ಲ.

ಮಠಕ್ಕೆ ಮುಂದೆ ಒಬ್ಬ ಜಂಗಮನನ್ನು ಏಜಂಟಾಗಿ ನಿಯಮಿಸಿದ ಬಾಗಾಯಿತಿನಿಂದ ಆತನನಂತರಗು ಅಲ್ಲಿನ ಕಾರುಭಾರಗಳನ್ನು ಬಾಗಾಯಿತಿನಿಂದಲೇ ಅಲ್ಲಿಯೇ ಇದ್ದು ನಡೆಸಿಕೊಂಡು ಬಂದರೂ ಮಠದ ಕೃತ್ಯಗಳನ್ನು ನೋಡಿ ಸರಿಯಿಲ್ಲದಿದ್ದರೆ ಬೇರೊಬ್ಬ ಜಂಗಮನನ್ನು ನಿಯಮಿಸುವ ಹಕ್ಕು ಸರಕಾರದಲ್ಲಿ ಉಳಿದಿರುವುದರಿಂದ ಈ ಮಠದ ಹಕ್ಕು ಕ್ರಮವಾಗಿ ಸಂಸಾರಪಾರಂಪರ್ಯದ ಹಕ್ಕಾಗುವುದಿಲ್ಲ. ಪರಂತು ಲೋಪವಿಲ್ಲದೆ ಸರಿಯಾಗಿ ಇದ್ದರೆ ಮಾತ್ರ ಈ ಹಕ್ಕು ಸಂಬಂಧಿಸುತ್ತದೆ ಹಾಗೆಯೇ ನಡೆಕೊಂಡು ಬಂದದ್ದಾಗಿದೆ ಸದರಿ ಈ ಮಠದ ಜಹಗೀರಾದ ಭೂಮಿಯು ಒಹು ಜನರ ಮತ್ತು ಸರಕಾರದವರ ಆಡಳಿತದಲ್ಲಿ ದೇವಕ್ಷೇಮಕ್ಕೋಸ್ಕರ ಧರ್ಮ ನಡೆಯಲಿಕ್ಕಾಗಿ ಪೂರ್ವರಾಜರಿಂದ ಬಿಡಲ್ಪಟ್ಟ ಜಮೀನಾಗಿರುತ್ತದೆ

ಹೀಗಿರುತ್ತಾ ಪ್ರಕೃತ ಈ ಮಠದ ಆಡಳಿತೆದಾರನಾದ ಸಿದ್ದಪ್ಪನವರು ತನಗೆ ಆಡಳಿತೆ ಸಿಕ್ಕಿದಬಾಗಾಯಿತಿನಿಂದಲೂ ತಾನು ಇಲ್ಲಿ ವಾಸಮಾಡದೆ ಇಲ್ಲ್ಯೇ ಯಾವದೊಂದು ಸತ್ಕಾರ್ಯವನ್ನು ನಡೆಸುವುದಿಲ್ಲವಾಗಿದೆ ಮಾತ್ರವಲ್ಲ, ಈ ಆಸ್ತಿಯನ್ನು ತನ್ನ ಸ್ವಪ್ರಯೋಜನಕ್ಕೋಸ್ಕರ ಸಾಲ ಮಾಡಿಕೊಂಡು ಇದರ ಪರಿಹಾರ ಬಗ್ಗೆ ಗ್ರಾಮಸ್ಥರಲ್ಲಿ ಕೆಲವರನ್ನು ಒಳಹೊಕ್ಕು ಸ್ವಾಧೀನಪಡಿಸಿಕೊಂಡು ತೊಂಬತ್ತೊಂಬತ್ತು ವರ್ಷಗಳ ಅವಧಿಗೆ ಗೇಣಿಗೆ ಕೊಡುವ ಕರಾರಿನಮೇರೆ ಪರಾಧೀನ ಪಡಿಸುತ್ತಾರೆಂಬದಾಗಿ ತಿಳಿಯುತ್ತೇವೆ. ಈ ವಿಷಯದಲ್ಲಿ ಸರ್ಕಾರದವರ ಮಂಜೂರಾತಿ ಇಲ್ಲದೆ ಮಾಡಿದರೂ, ಸರಕಾರದವರು ಈ ವಿಷಯದಲ್ಲಿ ನಿಗಾ ಇಡದೆ ಹೀಗೆ ಪರಾಧೀನ ಮಾಡಿದರೆ ಮಾಡಿದಬಾಗಾಯಿತಿನಿಂದ ಅವಧಿ ವರೇಗೆ ಸಾಲಿನಾಡಿ ಕಂದಾಯ ಮಾತ್ರ ಕೊಡಬೇಕೆಂಬ ಹುಕುಂ ಕೊಟ್ಟಿರುತ್ತಾರೆಂಬ ವರ್ತಮಾನ ಕೇಳಬರುತ್ತಿದೆ, ನಿಜವಾಗಿ ಸರಕಾರದವರು ಮೇಲಿನ ಎಚ್ಚರಿಕೆ ತೆಗೆದುಕೊಂಡು ಯೋಗ್ಯರೀತಿ ಮಠವನ್ನು ನಡೆಸತಕ್ಕ ಹಕ್ಕಿರುತ್ತ.

ಈ ವಿಷಯದಲ್ಲಿ ಯಾವದೊಂದು ಪ್ರತಿಬಂಧಕವಾಗದೆ ಕಟಿಬದ್ಧರಾಗಿರುವದು ದೇಶಪ್ರಜೆಗಳಿಗೆ ತುಂಬಾ ಅಸಮಾಧಾನಕರವಾದ ಸಂಗತಿಯಾಗಿದೆ, ಈ ಸಿದ್ದಪ್ಪನವರಿಗೆ ಆಡಳಿತ ಜವಾಬ್ದಾರಿಕೆ ಸಿಕ್ಕುವ ಸಮಯದಲ್ಲಿ ಗ್ರಾಮಸ್ಥರೆಲ್ಲರೂ ಸೇರಿ ಈ ಮಠಕ್ಕೆ ಈತನನ್ನು ನಿಯಮಿಸಿದರೆ ನ್ಯಾಯವಾಗಿ ಈತನು ಮಠದ ಕರ್ತವ್ಯವನ್ನು ಕಾಪಾಡಲಿಕ್ಕಿಲ್ಲವೆಂದೂ ಮಠಕ್ಕೆ ಬಿಟ್ಟಿರುವ ಆಸ್ತಿಗಳನ್ನು ಪರಾಧೀನ ಮಾಡಬಹುದೆಂಬ ಸಂಶಯದಿಂದ ಹದಿನಾಲ್ಕನೇ ಇಸವಿಯಲ್ಲೇ ಅರ್ಜಿಮುಖಾಂತರ ಸರಕಾರದ ಜಾಹೀರಾತಿಗೆ ತಂದಿರುತ್ತಾ ಪ್ರಜೆಗಳ ಕೇಳಿಕೆಯನ್ನು ಲಕ್ಷ್ಯಕ್ಕೆ ತಾರದೆ ಆಡಳಿತ ನಿಯಮಿಸಿದರಿಂದ ಈಗ ಈ ಅವಸ್ಥೆಗೆ ಗುರಿಯಾಗಲು ಕಾರಣವಾಯಿತು, ಇದೇ ಕಳೆದ ಇಪ್ಪತ್ತುಮೂರನೇ ಇಸವಿಯಲ್ಲಿ ಸಹ ಈ ವಿಷಯ ಕುರಿತು ಸರಕಾರದವರ ಗಮನಕ್ಕೆ ತಂದಿರುತ್ತಾ ಅದನ್ನು ಸಹ ಪರ್ಯಾಲೋಚಿಸದೆ ಮೂಲೆಗೊತ್ತಿದಿದ್ದ ಸರಕಾರದವರಿಗೆ ಹೆಚ್ಚಿನ ಕಂದಾಯ ಮಾತ್ರ ಸಿಕ್ಕಿದರೆ ಸಾಕೆಂಬ ಉದ್ದೇಶದಿಂದ ಯಾವ ವಿಲೇವಾರಿ ಮಾಡದೆ ತಟಸ್ಥರಾಗಲು ಕಾರಣವೆಂದು ಸಂಶಯಕ್ಕಾಗಿದೆ ಒಹು ಜನರು ಸೇರತಕ್ಕ ಈ ದೇವಾಲಯಕ್ಕೆ ನಡೆಯತಕ್ಕ ವಿನಿಯೋಗಕ್ಕೆ ಭಂಗ ಬಂದಿರುವುದರಿಂದಲೂ ಪೂರ್ವದ ಆಚರಣೆ ಕೆಟ್ಟುಹೋಗಿರುವುದರಿಂದಲೂ, ಸರಿಯಾಗಿ ನಡೆಸತಕ್ಕ ಕರ್ತವ್ಯವೂ ನಮ್ಮ ಈ ಸರಕಾರಕ್ಕೆ ಇದೆ, ಈ ವಿಚಾರಗಳ ಕುರಿತು ಸರಕಾರವನ್ನು ಕೇಳತಕ್ಕ ಹಕ್ಕು ಗ್ರಾಮಸ್ಥರಾದ ನಮ್ಮಲ್ಲಿ ಉಳಿದಿರುತ್ತದೆ ಅರ್ಜಿಮೂಲಕ ಸರಕಾರದವರನ್ನು ಕೇಳಿಕೊಂಡಲ್ಲಿ ಯಾವದೊಂದು ವಿಲೇವಾರಿಯಾಗದ್ದರಿಂದ ಸರ್ವ ಜನರಿಗೂ ತಿಳಿಯಲಿಕ್ಕೆ ಈ ಕೊಡಗು ಪತ್ರಿಕಾ ಮೂಲಕ ನಾವು ಘನಸರಕಾರದವನ್ನು ಕೇಳುವದಾಗಿರುತ್ತದೆ. ಆದ್ದರಿಂದ ಇನ್ನಾದರೂ ನಮ್ಮ ಘನ ಸರಕಾರವು ಎಚ್ಚತ್ತು ಪ್ರಾಮಾಣಿಸಿ ಈ ಮಠದ ಜಹಗೀರು ಉಳಿಸಿ ಮುಂದೆ ನಡೆಸಿಕೊಂಡು ಒಂದಂತೆ ಧರ್ಮ ಪೀಠವು ನಡೆಸುವ ಏರ್ಪಾಡು ತಕ್ಕ ರೀತಿಯಲ್ಲಿ ಮಾಡಬೇಕಾಗಿ ಬಲಮುರಿ ಗ್ರಾಮಸ್ಥರ ಅರಿಕೆಯಾಗಿದೆ

ಬಲಮುರಿ ಗ್ರಾಮಸ್ಥ

ಈಗತಾನೇ ಬಂದಿರುವ ಹೊಸಹೊಸ ಟೈಪುಗಳಿಂದ

ಸ್ವಾ ಇಂಕಿನಿಂದ ಮಾಡುವ ಚಾರ್ಜಿಗೇ

ಪರ್ಗ ಬಣ್ಣದ ಚಿನ್ನದ ಗಿಲ್ಟ್ ಹಾಕಿ

ಲಗ್ನಪತ್ರಿಕೆಗಳನ್ನು ಮಾಡಿಕೊಡುತ್ತೇವೆ !

ಅಲ್ಲದೆ ಒಂದು, ಎರಡು, ಮೂರು ಅಥವ ಇನ್ನೂ ಅನೇಕ ಬಣ್ಣಗಳಿಂದ ಸುಂದರವಾಗಿಯೂ, ಸುಲಭ ಚಾರ್ಜಿನಿಂದಲೂ ಎಲ್ಲಾ ಕೆಲಸಗಳನ್ನು ಆದಷ್ಟು ಶೀಘ್ರದಲ್ಲಿಯೇ ಮಾಡುತ್ತೇವೆ ಎಡ್ವಾನ್ಸು ಸಹಿತ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಜೆ ಎಚ್. ಹೌಸ್‌ಪ್ರೆಸ್,

ವೀರರಾಜೇಂದ್ರಪೇಟೆ, (ಕೊಡಗು).

[4—1]

ಆರೋಗ್ಯಚಂದ್ರಿಕೆ

ಇದು ಪ್ರಜಾಕ್ಷೇಮಕ್ಕಾಗಿ ಆರೋಗ್ಯಮಾರ್ಗವನ್ನೂ ಚಿಕಿತ್ಸವನ್ನೂ ಬೋಧಿಸುವ ಒಂದು ಮಾಸಪತ್ರಿಕೆ ಇದರ ಸಂಪಾದಕರು ಮದ್ರಾಸಿನಲ್ಲಿ ಪ್ರಸಿದ್ಧರಾದ ಡಾಕ್ಟರ್ ಯು. ರಾಮರಾವ್ ಎಲ್. ಎಂ. ಎಸ್. ಯವರು ಇದರಲ್ಲಿ ಅನೇಕ ಪ್ರಸಿದ್ಧ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರುಗಳ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು.

ಟಪಾಲುಹಾಸಲು ಸೇರಿ ಈ ಪತ್ರಿಕೆಯ ವಾರ್ಷಿಕ ಚಂದ 1—8—0 ರೂ. ಮಾತ್ರ. ಬಿಡಿ ಪತ್ರಿಕೆ ಒಂದಕ್ಕೆ 0—2—0 ಆಣೆ

ಏಜೆಂಟರು :—	ವಿಳಾಸ :—
ಮ॥ ರಾ॥ ರಾ॥ ಎಸ್. ಕೆ.	ಮೇನೇಜರ್,
ಈ ಶ್ವ ರ ಪ್ಪ,	ಆರೋಗ್ಯಚಂದ್ರಿಕೆ ಆಫೀಸು,
ಭಾಗಮಂಡ್ಲ,	323, ತಂಬುಚೆಟ್ಟಿಬೀದಿ,
ಕೊಡಗು.	ಮ ದ್ರಾ ಸು.

[12—11]

ಕೊಂಕ್ ಕಾರಂಟ್.

(ಎರಡೇ ಎತ್ತುಗಳದು)



ಇದು ಒಹಳ ಹಗುರಿರುತ್ತದೆ. ಒತ್ತದ ಭೂಮಿಗೆ ಉಪಯೋಗ ಬೀಳುತ್ತದೆ. ಇದರ ಈಸ (ಉಪ್ಯಪಾದು) ಪೂರ್ದ್ದಾಗಿದೆ. ಇದರ ಬಿಡಿ ಭಾಗಗಳು ಕೇಳಿದಾಗ್ಗೆ ದೊರೆಯುತ್ತವೆ.

ನಮ್ಮಲ್ಲಿ ಭೂಮಿಗೆ ಕಬ್ಬ ಕಣ್ಣ ದೊಡ್ಡ ನೇಗಿಲು ಕಬ್ಬಿನಗಾಣ ಮುಂತಾದ ಸಾಮಾನುಗಳು ದೊರೆಯುತ್ತವೆ

'ಕೊ' ಕ್ಯಾಟಲಾಗನ್ನು ತರಿಸಿಕೊಳ್ಳಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್,

[16-1] ಕಿರ್ಲೋಸ್ಕರವಾಡಿ ಜಿಲ್ಲಾ ಸಾತಾರಾ

WANTED.

Two Second-hand Motor Bicycles

M. M SIDDEEK,

22—5 MERCARA.

O. S. Association Magazine.

C. H. SCHOOL,

MERCARA,

Edited by MR. U. S. KUSHALAPPA B A

Published under the distinguished

Patronage of

T. J. TASKER ESQ., I. C. S.

Commissioner of Coorg

and

Rao Bahadoor K. CHENGAPPA B.A.,

District Magistrate of Coorg

No 2

January 1924, will be out in the 1st week of February 1924.

SUBSCRIPTION

Members of the Association	Re. 1-0-0	Postage free
Non-members	Re. 1 0 0	Postage extr
Single copy	As 0-6 0	"

CONTENTS

1. A forgotten chapter from Coorg History
2. Confessions and advertisement of
3. A scene from a Ranger's life.
4. Two! A tale for children.
5. Swami Vivekananda—by a "Student etc, etc, etc.,

Only limited number of copies are published

To avoid disappointment

6—5 Register Your Orders

Printed & Published by D. S. Krishnaswamiengar Proprietor, at Sreenivas Electric Press, Mysore "for Kodagu" Ltd., Mercara—29 2-1924.

If not delivered please return to "Kodagu Office, Mercara." Regd. No. M. 1550.

ಕೊಡಗು.

ಪುಸ್ತಕ ೨ — ಸಂಚಿಕೆ ೯ (?)

ಸತ್ಯೇನ ಧರ್ಮದಯಯಾ ವಿದ್ಯಾನೀತಿ ಪ್ರಯುಕ್ತಃ । ಏಕಮೈಕ್ಯೇನದೇಶಾನಾಂ ಯಸ್ಯಿ ರಾ ರಾಷ್ಟ್ರ ಸದ ॥

ಪ್ರತಿ ಶುಕ್ರವಾರ ಮಡಿಕೇರಿಯಲ್ಲಿ ಪ್ರಕಟಿಸಲ್ಪಡುವುದು. " ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ

ಸಂಪುಟ ೩] ಕೊಡಗು, ಸನ ೧೯೨೪ ನೇ ಇಸವಿ ಮಾರ್ಚಿ, ತಾರೀಖು ೭ ನೆಯ ಶುಕ್ರವಾರ. [ಸಂಚಿಕೆ ೪೦

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನ್ನಡ ಪ್ರಿಂಟಿಂಗ್ ರೂಲಿಂಗ್ ಮತ್ತು ಬೈಂಡಿಂಗ್ [illegible] ಇದ್ದರೂ ನಮ್ಮಲ್ಲಿಗೆ ಕಳುಹಿಸಿದಲ್ಲಿ [illegible] ಅಂತೆ ಜಾಗ್ರತೆಯಾಗಿಯೂ ಸುಲಭವಾಗಿ [illegible] ಕೊಡುತ್ತೇವೆ

Srinivasa Electric Press

MYSORE

The Sarraswathi Publishing Company
ಶಾರದಾಗ್ರಂಥಸಂಚಿ

ಈ ಗ್ರಂಥಮಾಲೆಯಲ್ಲಿ ಭಾರತ [illegible] ರೂಪಗಳನ್ನು [illegible] ಓದುವವರಿಗೆ ಪ್ರಕಟ [illegible]

1	ಪ್ರಿಯಂವದೆ (ವಾದಕ್ಕಿಡಿ [illegible]) ರವನ್ನುದರೂ)	0	6	0
2	ಸ್ನೇಹ (ವಂಗಕಥ್ಯ [illegible])	0	10	0
3	ಕಿರಾಣ ವನಿತೆ ([illegible])	0	12	0
4	ಕಮಲ ([illegible])		8	[illegible]
5	ಓದುಮಾತಿನ [illegible]	[illegible]	6	[illegible]
5	[illegible]	0	4	0
6	[illegible]		[illegible]	0

[illegible]

ಸರಸ್ವತಿ.

ಉತ್ತಮವಾದ ಸ್ತ್ರೀಯರಿಗಾಗಿ ಕನ್ನಡ ಮಾಸಪತ್ರಿಕೆ

[illegible]

ವಾರ್ಷಿಕ ಚಂದಾ ರೂಪಾಯಿ 3—0—0 ಮಾತ್ರ,

SARASWATHI PUBLISHING Co.,
Post Box No. 57. Bangalore City

ಸ್ಪೆನ್ಸರ್ ಕಂಪೆನಿಯ ಸಾಮಾನುಗಳ ಕ್ರಯ

ಉಗ್ರಾಣಸಾಮಾನ್.

ಪ್ರೂನ್ಸ್ ಪೌಂಡ್ (Prunes per lb)	0	14	0
ಫ್ರೆಶ್ ಹೆರಿಂಗ್ಸ್ (Fresh herrings)	0	7	0
ಸನ್‌ಲೈಟ್ ಸಾಬೂನ್ ಪೆಟ್ಟಿಗೆ (Sunlight Soap)	1	4	0
ಟಾಫಿ ಪೌಂಡ್ (Toffee per lb)	1	14	0
ಸ್ವೀಟ್ಸ್ ಪೌಂಡ್ (Sweets per lb)	0	11	0
ಕಳ್ಳು.			
ಓಲ್ಡ್ ಹೈಲ್ಯಾಂಡ್ ಮಾಲ್ಟ್ ವಿಸ್ಕಿ (Old Highland Malt Whisky.)	6	0	0
ಲಾ ರುಪಿ ಬ್ರಾಂಡಿ (La Rupee Brandy)	6	0	0
ಮಾರ್ಟೆಲ್ಸ್ ಸ್ಪೆಶಲ್ ಬ್ರಾಂಡಿ (Martell s Special Brandy)	6	7	0
ಆಟದಸಾಮಾನು.			
ಕ್ರಿಕೆಟ್ ಬಾಲ್ (Cricket Ball at)		5	0
ಟೆನ್ನಿಸ್ ಬಾಲ್ ಡಜನ್ (Tennis Balls per dozen)	21	[illegible]	0

SPENCER & Co., Ltd., Mercara and Pollibetta, Coorg

[24—19]

BUMPER CROPS
always follow on application of our fertilisers

ದೊಡ್ಡ ಕಾಪಿ ಫಸಲು.

[illegible] ನಮ್ಮ ಫರ್ಟಿಲೈಸರುಗಳನ್ನು ಉಪಯೋಗಿಸಿರಿ

ನಮ್ಮ [illegible] ತರಹದ ಹೊಸ (fresh) ಗೊಬ್ಬರ ತಯಾರಾಗುತ್ತದೆ.

Siddeek's Manure Works

21 MERCARA

ಜೀವವಿಮೆ.

[illegible] ಉಂಟಾಗುವುದಾದ ತೊಂದರೆಗಳನ್ನು ನಿವಾರಿಸುವುದೇ ಜೀವವಿಮೆ.

ವೃದ್ಧಾಪ್ಯಕಾಲದಲ್ಲಿ ನುತ್ತು ಕುಟುಂಬದ ಜೀವನಾಧಾರಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ

ಅತಿ ಕಡಿಮೆ ದರದಲ್ಲಿ ಯಾವ ಲೋಪವೂ ಬಾರದಂತೆ ಕ್ಷಿಪ್ರದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ಮೈಸೂರಿನ ಸರಕಾರದ ಭದ್ರತೆಯುಳ್ಳ ಜೀವವಿಮೆ ಕಂಪೆನಿ

ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ [illegible] ಹಣವನ್ನು ಒದಗಿಸಿ ಸ್ಥಿರಾಸ್ತಿಗಳನ್ನೂ ಕೊಂಡು ಕೊಟ್ಟು ದೇಶದ ಆರ್ಥಿಕ ಸಂಪತ್ತನ್ನು (Economic Condition) ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೇ।

ಲೈಫ್ ಇನ್ಶೂರೆನ್ಸ್ ಆಕ್ಟಿನ ಮೇರೆ ಇಂಡಿಯಾ ಗವರ್ನಮೆಂಟ್ ಸೆಕ್ಯೂರಿಟಿಗಾಗಿ ಸಲ್ಲಬೇಕಾದ 12 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿಗೆ ಸಲ್ಲಬೇಕಾದ 1 ಲಕ್ಷರೂಪಾಯಿ ಸೆಕ್ಯೂರಿಟಿಗಾಗಿಯೂ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನ ಮದ್ರಾಸಿನ ಶಾಖೆಯಲ್ಲು 1 ಲಕ್ಷ ಗವರ್ನಮೆಂಟ್ ಆಫ್ ಇಂಡಿಯ ಸೆಕ್ಯೂರಿಟಿಯನ್ನು ಅರ್ಧಲಕ್ಷ ಮೈಸೂರು ಸೆಕ್ಯೂರಿಟಿಯನ್ನು ಡಿಪಾಜಿಟ್ಟಾಗಿ ಇಟ್ಟಿರುತ್ತೆ. ಬಾಕಿ ಒಂದು ಲಕ್ಷ ಇಂಡಿಯಾ ಗವರ್ನಮೆಂಟ್ ಸೆಕ್ಯೂರಿಟಿಗೆ ಬ್ಯಾಂಕ್ ಮೂಲಕ ಏರ್ಪಾಡು ಮಾಡಿರುತ್ತೆ.

ಬಿ. ಎಸ್. ಆರಾಧ್ಯ,
ಲೈಫ್ ಅಂಡ್ ಮ್ಯಾರೇಜ್ ಆಫೀಸ್ ಮಡಿಕೇರಿ.

ನಾರಾಯಣ ವೈದ್ಯಶಾಲೆ

ಮುಂಬಾಯಿನ ನಾರಾಯಣ ಸಂಭೀರ್ಕ ಮತ್ತು ಕಂಪೆನಿ ಎಂಬ ಆಯುರ್ವೇದ ವೈದ್ಯಶಾಲೆಯಲ್ಲಿ ಒಂದು ಶಾಖೆಯು ವೀರರಾಜೇಂದ್ರಪ್ಯಾಟೆಯಲ್ಲಿ ತೆರೆದಿರುತ್ತೆ. ಇಲ್ಲಿ ಯಾವವಿಧದ ಕಾಯಿಲೆಯಾಗಿದ್ದರೂ ನಾಡಿ ಪರೀಕ್ಷೆ ಮಾಡಿ ಔಷಧಿ ಕೊಟ್ಟು ಗುಣಪಡಿಸಲ್ಪಡುತ್ತೆ. ಔಷಧದ ಚಾರ್ಜು ಬಹಳ ಕಡಿಮೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು.

ನಾರಾಯಣಸಂಭೀರ್ಕ,
ಆಯುರ್ವೇದ ವೈದ್ಯರು,
ವೀರರಾಜೇಂದ್ರಪ್ಯಾಟೆ.

12—7

ಪ್ರಕಟನೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ

	ರೂ.
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	6,820
ಜಮಾ ಒಂದ ಶೇರ್‌ವಶಾತಿ	47,990

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರುಷ ದಾಯಿದೆ ಅಥವಾ ಕಟ್ಟಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 6–4–0ರ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದೊರೆಯುತ್ತೆ.

ದರ್ಖಾಸ್ತುಗಳನ್ನು ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು	ಟ್ರೆಜರ್.
ಕೊಡಂದೆರ ಕುಟ್ಟಯ್ಯನವರು, ರಾಯ್ ಬಹದ್ದೂರ್	ಯಂ. ಭುಜಂಗರಾಯರು ಬಿ. ಎ, ಬಿ. ಎಲ್

ಸೆಕ್ರೆಟರಿ.

ಸಿ. ಯಸ್. ವೆಂಕಪ್ಪಯ್ಯನವರು ಬಿ. ಎ. ಬಿ. ಎಲ್.

ತಾರೀಖು 22—2—1924.

HEALTH IS WEALTH.

WANTED all to improve health strength and vitality and thus save our nation from physical degeneracy. Send half-anna stamp and get 13 specimen photographs with full particulars from

Director Physical Culture,
P O, Basavanagudi,
BANGALORE CITY.

For your requirements of high grade Arms, Ammunition, Wine and Spirits,

APPLY TO.—

DOWELL & Co., Ltd.,
MERCARA.

“ಕೊಡಗು”

೧೯೨೪ ನೇ ಇಸವಿ ಮಾರ್ಚ ತಾ|| ೭ ನೇ ಶುಕ್ರವಾರ.

ಜೈಟೋದಲ್ಲಿ ಸಿಖ್ಖರ ಜಾತ್ರೆ.

ಎರಡು ಮೂರು ವರ್ಷಗಳಿಂದ ಪಂಜಾಬಿನ ಸಿಖ್ಖ ಜನರ ಅಕಾಲಿ ಚಳವಳಿಯು ದಿನೇದಿನೇ ಪ್ರಬಲವಾಗುತ್ತಾ ಬರುತ್ತಿದೆ. ಕಳೆದ ಫೆಬ್ರವರಿ ತಾರೀಖು 21 ರಲ್ಲಿ ನಾಭಸ್ಟೇಟಿನಲ್ಲಿರುವ ಜೈಟೋದ ದೇವಸ್ಥಾನಕ್ಕೆ ಹೋದ ಸಿಖ್ಖ ಜನರ ಜಾಥಾದಮೇಲೆ ಗುಂಡುಹಾರಿಸಿ ಅನೇಕರಿಗೆ ಗಾಯವಾಗಿದೆ ಮಾತ್ರವಲ್ಲ, ಕೆಲವರು ಮೃತಪಟ್ಟು ಹೋಗಿರುವರು. ಈ ಕೃತ್ಯವು ಎಲ್ಲ ಸಿಖ್ಖ ಜನರಲ್ಲಿಯೂ ಮಾತ್ರ ಹಿಂದೂದೇಶದ ಎಲ್ಲವರಲ್ಲಿಯೂ ವಿಸ್ಮಯವನ್ನುಂಟುಮಾಡಿದೆ. ಈ ವಿಷಯ ಇಂಗ್ಲೆಂಡಿನಲ್ಲಿ ಅಧಿಕಾರದಲ್ಲಿರುವ ಲೇಬರ ಪಾರ್ಟಿಯ ಮುಖ್ಯಮಂತ್ರಿಯವರಾದ ರಾಮ್ಸೆ ಮೆಕ್ಡೊನಾಲ್ಡರವರಿಗೆ ಅಕಾಲಿ ಸಹಾಯಕ ಸಂಘದ ಸೆಕ್ರೆಟರಿಯವರು ತಂತೀಮೂಲಕ ಕಳುಹಿಸಿರುವ ಕಾಗದದ ಸಾರಾಂಶವೇನೆಂದರೆ—1921 ನೇ ಫೆಬ್ರವರಿಯಲ್ಲಿ ನಾಂಕಾನ ದೇವಸ್ಥಾನದ ಮಹಂತರು ಸುಮಾರು 200 ಸಿಖ್ ಯಾತ್ರಿಕರನ್ನು ಕೊಂದು ಸುಟ್ಟು ಹಾಕಿಸಿ [illegible] ಬಿಟ್ಟರು. ಸರ್ಕಾರದ ಉದ್ಯೋಗಸ್ಥರು ಅಲ್ಲಿಯಲ್ಲೇ ಇದ್ದರು. ಇದು ಸಿಖ್ಖ ಜನರ ಕಣ್ಣನ್ನು ತೆರೆಸಿತು. ಅವರೆಲ್ಲರೂ ಒಟ್ಟಾಗಿ ತಮ್ಮ ಮತದ [illegible] ಸ್ಥಾನವನ್ನಾದರೂ ಕಳಕೊಳ್ಳಲು ತಯಾರಾದರು. 1922 ರಲ್ಲಿ ಸಿಖ್ಖ ಜನರ ಬೇರೆಬೇರೆ ದೇವಸ್ಥಾನಗಳಲ್ಲಿ ವಿಧವಿಧದ ಕಷ್ಟಗಳಿಗೆ ಒಳಗಾದರು. ಎಲ್ಲವನ್ನೂ ತಾಳ್ಮೆಯಿಂದ ಸಹಿಸಿಕೊಂಡರು. ಅಮೃತಸರ ಡಿಸ್ಟ್ರಿಕ್ಟಿನಲ್ಲಿರುವ ಗುರುಕಾಬಾಗ್ ದೇವಸ್ಥಾನಕ್ಕೆ ಹೋದ ಅನೇಕ ಜನರಿಗೆ ಹೊಡೆದು [illegible]. ಸುಮಾರು 2 ಸಾವಿರ ಸಿಖ್ಖರು ಹೀಗೆ ಹೊಡೆಯಲ್ಪಟ್ಟರು. ಸಾವಿರಾರು ಜನರು ಜೈಲಿಗೆ ಹಾಕಲ್ಪಟ್ಟರು. 1923 ರಲ್ಲಿ ಸರ್ಕಾರದವರು [illegible] ನಾಭಸ್ಟೇಟಿನ ಸಿಖ್ಖ ಮಹಾರಾಜರನ್ನು ದೇಶದಿಂದ ಹೊರಗೆ ಕಳುಹಿಸಿಬಿಟ್ಟು ಅವರ ಬದಲಿಗೆ ಬ್ರಿಟಿಷ್ ಅಧಿಕಾರಿಯನ್ನು ಇಟ್ಟಿರುವರು. ಇದಕ್ಕೆ ಸಿಖ್ಖರ ಪ್ರತಿನಿಧಿಗಳು ಎಷ್ಟು ವಿರೋಧಿಸಿದರೂ ಸರ್ಕಾರದವರು ಗಮನಕೊಡಲಿಲ್ಲ. ಇದರ ಬದಲು ಸಿಖ್ಖರ ಪ್ರತಿನಿಧಿ ಕಮಿಟಿಗಳನ್ನು ರಾಜದ್ರೋಹದ ಸಂಘಗಳೆಂದು [illegible] ಗಳನ್ನು ಸೆರೆಹಿಡಿದರು. ಹೀಗೆ ಸೆರೆಹಿಡಿಯಲ್ಪಟ್ಟು ಪವಿತ್ರವಾದ ಅವರ ದೇವಸ್ಥಾನಗಳಿಗೆ [illegible] ಶಪಿಸಿಬಿಟ್ಟ ಸಿಖ್ಖ ಜನರಿಗೆಲ್ಲಾ [illegible] ತಮ್ಮ ಮತಭಕ್ತಿಯ ಕಾರ್ಯವನ್ನು [illegible] ಹಟವು ಅವರಲ್ಲಿ ಹುಟ್ಟಿತು. ಹೀಗೆಯೇ ನಾಭಸ್ಟೇಟಿನಲ್ಲಿರುವ ಜೈಟೋ ದೇವಸ್ಥಾನಕ್ಕೆ ಹೋದ ಕೆಲವರನ್ನು ಅಲ್ಲಿ ಪ್ರಾರ್ಥಿಸಕೂಡದೆಂತಲೂ ಅವರು ರಾಜಕೀಯ ಸಂಘದ [illegible] ಸೇರಿದವರೆಂತಲೂ ಹೊರಗೆ ಕಳುಹಿಸಿಬಿಟ್ಟರು. ಬ್ರಿಟಿಷ್ ಸರ್ಕಾರದವರಿಗೆ ಅನೇಕವೇಳೆ ಯುದ್ಧದಲ್ಲಿ ಸಹಾಯ ಮಾಡಿ ಬಹು ರಾಜಭಕ್ತಿಯಿಂದ ನಡೆದುಕೊಂಡು ಬಂದ ಸಿಖ್ಖ ಜನಾಂಗಕ್ಕೆ ಸರ್ಕಾರದವರು ಮಾಡಿದ ಉಪಕಾರವು ಇದಲ್ಲವೇ ಎಂದು ಮೊದಲಾಗಿ ಬರೆದಿರುವರು.

ನಾಭಸ್ಟೇಟಿನ ಜೈಟೋದಲ್ಲಿರುವ ದೇವಸ್ಥಾನದಲ್ಲಿ ಪ್ರಾರ್ಥನೆಗೆ ನಿಷೇಧವಿದ್ದುದರಿಂದ ತಮ್ಮ ಮತಸ್ವಾತಂತ್ರ್ಯದ ಹಕ್ಕನ್ನು ಸ್ಥಾಪಿಸಲಿಕ್ಕಾಗಿ 500 ಜನ ಸಿಖ್ಖ ಭಕ್ತರು ಅಮೃತಸರದಿಂದ ಹೊರಟು ಫೆಬ್ರವರಿ ತಾರೀಖು 21 ರಲ್ಲಿ ಜೈಟೋಗೆ ಹೋಗಿ ತಲುಪಿದರು. ಪ್ರಾಣವನ್ನು ಕೊಡಲು ತಯಾರಾಗಿದ್ದ ಅವರ ಭಕ್ತಿಯನ್ನು ನೋಡಿ ಸಾವಿರಾರು ಜನರು ಅವರ ಹಿಂದುಗಡೆ [illegible] ಸೇರಿದರು. ಸುಮಾರು 25 ಸಾವಿರ ಜನರು ಸೇರಿದ್ದರೆಂದು ಹೇಳುತ್ತಾರೆ. ಇವರು [illegible] ಗೂಡಿದ್ದರೆಂದು ಸರ್ಕಾರದವರೂ, ಭಕ್ತಿಪೂರ್ವಕವಾದ ಶಾಂತಿಯಿಂದ ದೇವತಾಸ್ತೋತ್ರ ಮಾಡುತ್ತಾ ಹೋಗುತ್ತಿದ್ದರೆಂದು ಬೇರೆ ಜನರೂ ಹೇಳುತ್ತಾರೆ. ಅಂತೂ ಅವರು ದೇವಸ್ಥಾನದ [illegible] ಒಂದಾಗಿ ಮುಂದರಿಸಕೂಡದೆಂದು ನಾಭಸ್ಟೇಟಿನ ಅಧಿಕಾರಿಗಳು ಹೇಳಿದ್ದಕ್ಕೆ ಜನರು ಗಮನಿಸದೆ ಮುಂದುವರಿದುದರಿಂದ ಅವರಮೇಲೆ ಪೋಲೀಸಿನವರು ಗುಂಡುಹಾರಿಸಿದರು. ಜನರೇ ಮೊದಲು ಗುಂಡುಹಾರಿಸಿದರೆಂದು ಸರ್ಕಾರದವರೂ, ಅಧಿಕಾರಿಗಳು ಆಡಿದ ಮಾತನ್ನು ಕೇಳದೆ ಕೇವಲ ಶಾಂತತೆಯಿಂದ ಮುಂದುವರಿಯುತ್ತಿದ್ದ ಜನರ ಮೇಲೆ ಪೋಲೀಸಿನವರು ಎರಡು ಮೂರು ಸಾರಿ ಗುಂಡುಹಾರಿಸಿದರೆಂದು ಬೇರೆ ಜನರೂ ಹೇಳುವುದಾಗಿದೆ. ಹೇಗಾದರೂ ಸುಮಾರು 5 ಜನರು ಮರಣಹೊಂದಿರುವರೆಂದೂ ಸುಮಾರು 55 ಜನರಿಗೆ ಗಾಯವಾಗಿದೆಯೆಂದೂ [illegible] ಎಸೆಂಬ್ಲಿಯ ಮೆಂಬರೊಬ್ಬರು ತಿಳಿಸುತ್ತಾರೆ. 100 ರಿಂದ 150 ಜನರವರೆಗೆ ಗುಂಡಿನಪೆಟ್ಟು ತಗಲಿರುವುದಾಗಿ [illegible] ಸೂಚಿಸಿರುವರು. ಇದರಿಂದ ಕೂಡಲೆ ಆ ಸ್ಥಳಕ್ಕೆ ಹೋದ ಕೆಲವು ಎಸೆಂಬ್ಲಿಯ ಮೆಂಬರುಗಳನ್ನೂ ಅಮೇರಿಕದ “ನ್ಯೂಯಾರ್ಕ್ ಟೈಮ್ಸ್” ನ ಪ್ರತಿನಿಧಿಯಾದ ಮಿ|| ಜಿಮ್ಮರ್ಮನ್ ರವರನ್ನು ಅಧಿಕಾರಿಗಳು ವಾಪಾಸು ಕಳುಹಿಸಿಬಿಟ್ಟದಲ್ಲದೆ ಡಾಕ್ಟರ್ ಕಿಚ್ಲು ಮತ್ತು ಪ್ರೊಫೆಸರ್ ಗಿಡ್ವಾನಿಯವರನ್ನು ಸೆರೆಹಿಡಿದಿರುವರು.

ಈ ಸಮಯದಲ್ಲಿ ಡೆಲ್ಲಿಯಲ್ಲಿ ಎಸೆಂಬ್ಲಿ ಮೀಟಿಂಗು ನಡೆಯುತ್ತಿದ್ದುದರಿಂದ ಈ ವಿಶೇಷ ಸಂಗತಿಯನ್ನು ಚರ್ಚಿಸಲಿಕ್ಕಾಗಿ ಮೀಟಿಂಗನ್ನು ಮುಂದರಿಸಬೇಕೆಂದು ತಾರೀಖು 25-2-24 ರಲ್ಲಿ ಪಂಡಿತ ಮಾಲವೀಯರು ಎಸೆಂಬ್ಲಿಯಲ್ಲಿ ಸೂಚಿಸಿದರು. ಇದು [illegible] ವಿರೋಧವೆಂದು [illegible] ತಳ್ಳಿಬಿಟ್ಟದ್ದರಿಂದ [illegible] ಮೀಟಿಂಗಿನಿಂದ ಹೊರಗೆ ಬಂದುಬಿಟ್ಟರು. ಮರುದಿನ ಅಕಾಲಿ ಜಾಥಾದ ವಿಷಯ ಎಸೆಂಬ್ಲಿಯಲ್ಲಿ ತರಲ್ಪಟ್ಟ ಠರಾವು ಚರ್ಚಿಸಲ್ಪಟ್ಟು ಅದನ್ನು [illegible] ಒಂದು ಕಮಿಟಿಯನ್ನು [illegible]. ಡೆಲ್ಲಿಯ [illegible] ಅಧ್ಯಕ್ಷತೆಯಲ್ಲಿ ಒಂದು ಮಹಾಸಭೆ ನಡೆದು ಜೈಟೋದಲ್ಲಿ ಅಧಿಕಾರಿಗಳು ನಡೆಸಿದ ದಬ್ಬಾಳಿಕೆಯ ವಿಷಯಕ್ಕೆ [illegible] ಅದನ್ನು ವಿಚಾರಿಸಲು [illegible] ಒಂದು ಕಮಿಟಿಯನ್ನು [illegible] ಬೇಕೆಂದು ಸರ್ಕಾರದವರನ್ನು ಕೇಳಿರುವರು.

ಆಸ್ಪತ್ರೆಯಿಂದ ಬಿಡುಗಡೆಯಾಗಿ ಬಂದ ಮಹಾತ್ಮ ಗಾಂಧಿಯವರಿಗೆ ಪೂನಾದಲ್ಲಿ ಒಂದು ತಂತಿವರ್ತಮಾನವು ತಲುಪಿತು. [illegible] ಗಾಂಧಿಯವರು ತಾನು [illegible] ಸಂಗತಿ ತಾನು [illegible] ವ್ಯಸನಪಡು [illegible], ಸಿಖ್ಖ ಜನರು [illegible] ಹಿಂದೂದೇಶದ [illegible] ದಾರಿಗಳ [illegible] ತೆಗೆದ [illegible] ಅವರು [illegible] ಸಂದೇಶವನ್ನು ಕಳುಹಿಸಿರುವರು. ಅದರ [illegible] ತಾ|| 28-2-24 ರಲ್ಲಿ ಜೈಟೋಗೆ [illegible] ಮಹಾತ್ಮ ಗಾಂಧಿಯವರಿಗೆ [illegible] ಸಂದೇಶವನ್ನು [illegible] ತಾ|| 28 ರಲ್ಲಿ [illegible] ಬ್ರಿಟಿಷ್ ಸರ್ಕಾರದವರು [illegible] ಸಿದ್ಧರು! ಇನ್ನಾದರೂ ಅಧಿಕಾರಿಗಳೂ ಪ್ರಜೆಗಳೂ ಒಂದು ನ್ಯಾಯವಾದ ತೀರ್ಮಾನಕ್ಕೆ ಬಂದು [illegible] ನೆಲೆಗೊಳಿಸಬೇಕಾಗಿ ನಮ್ಮ ಪ್ರಾರ್ಥನೆ.

ಎಸೆಂಬ್ಲಿಯಲ್ಲಿ ಸ್ವರಾಜ್ಯಕ್ಕೆ ವಾದವೂ ಅನಂತರದ ಸ್ಟೇಟ್ ಸೆಕ್ರೆಟರಿಯವರ ಭಾಷಣವೂ.

ನಾವು ತಾ|| 2?-2-24 ರ ಸಂಚಿಕೆಯಲ್ಲಿ ಬರೆದ ಅಗ್ರಲೇಖನದಲ್ಲಿ ವಿವರಿಸಿದ ಎಸೆಂಬ್ಲಿ ಚರ್ಚೆಯಲ್ಲಿ ಸ್ವರಾಜ್ಯದ ಪರ ಠರಾವು ಬಹುಮತದಿಂದ ಪಾಸಾಯಿತು. ಅದರೆ ಆ ಲೇಖನದಲ್ಲಿ ಸೂಚಿಸಿರುವ ಸಮ್ಮತಿಯು ಪ್ರಯೋಜನವಾಗುವುದಿಲ್ಲ. ಹಿಂದುಸ್ಥಾನಕ್ಕೆ ಈ ಚರ್ಚೆಯಿಂದ ಪ್ರಯೋಜನವಾಗಬೇಕೆಂದು [illegible] ಈ ಠರಾವು ಪಾಸಾದದ್ದೇ [illegible] ಕೊಟ್ಟಿರುವ ಆಧಾರ [illegible] ಪೂರ್ತಿ ಸ್ವತಂತ್ರ್ಯ ಬೇಕಾದ ವಿಚಾರವನ್ನು [illegible] ನಡೆದೀತೆಂಬ ಆಶೆಯು ನಿರಾಶೆಯಾಯಿತು. ಈ ಠರಾವಿನಮೇಲೆ ಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ಒಲಿವಿಯರು ಎಂಬುವರು ತಾ|| 26-2-24 ರಲ್ಲಿ ಹೌಸ್ ಆಫ್ ಲಾರ್ಡ್ಸ್ ಎಂಬ ಪಾರ್ಲಿಮೆಂಟ್ ಸಭೆಯಲ್ಲಿ ಮಾಡಿದ ಭಾಷಣದಿಂದ ಇಂಡಿಯಾದೇಶದ ಆಶೆಯೆಲ್ಲಾ ನಿರಾಶೆಯಾಗಿ ಹಾರಿಹೋಗಿದೆ. ಈಗ ಇಂಗ್ಲೆಂಡಿನಲ್ಲಿ ಅಧಿಕಾರಕ್ಕೆ ಬಂದ ಕೂಲಿಕಾರರ ಪಕ್ಷದವರಿಂದ ಇಂಡಿಯಾಕ್ಕೆ ತುಂಬಾ ಪ್ರಯೋಜನವಾದೀತೆಂತ ಇಂಡಿಯಾದಲ್ಲಿ ಬಹುಜನರು ನಂಬಿದ್ದರು. ಈ ನಂಬಿಕೆಗೆ ಆಧಾರವೇ ಇಲ್ಲದೆಹೋಯಿತು. ಇಂಡಿಯಾದೇಶದವರು ಕೇಳಿಕೊಳ್ಳುವ ಸ್ವತಂತ್ರವನ್ನು ಅವರಿಗೆ ಕೊಡಲೇಬೇಕು ಎಂತ ಈಗ ಮಂತ್ರಿಗಳಾಗಿರುವ ಪಾರ್ಟಿಯವರು ಮೊದಲು ಹೇಳುತ್ತಿದ್ದರು. ಈ ತರಹದ ಭಾಷಣಗಳಿಂದ ಹಿಂದುಸ್ಥಾನದಲ್ಲಿ ಆಶೆ ಹುಟ್ಟಲಿಕ್ಕೆ ಕಾರಣವೇನೋ ಇತ್ತು. ಆದರೆ ಸ್ಟೇಟ್ ಸೆಕ್ರೆಟರಿಯವರು ಭಾಷಣದಿಂದ ಈ ಪಾರ್ಟಿಯಿಂದಲೂ ಹಿಂದುಸ್ಥಾನಕ್ಕೆ ಪ್ರಯೋಜನವಿಲ್ಲವೆಂಬುದು ಸ್ಪಷ್ಟವಾಯಿತು. ಇವರಿಗಿಂತ ಮೊದಲು ಮಂತ್ರಿಯಲ್ಲಿ ಇದ್ದ ಕನ್ಸರ್ವೇಟಿವ್ ಪಕ್ಷದವರು ಹೇಳುತ್ತಿದ್ದಂತೆಯೇ ಇವರೂ ಸಹ ಹೊಸ ಸುಧಾರಣೆ ಕೊಟ್ಟು ಮೂರುವರ್ಷವಾಯಿತಷ್ಟೆ, ಈಗಾಗಲೇ ಅದನ್ನು ಬದಲಾಯಿಸಲು ಸಾಧ್ಯವಿಲ್ಲವೆಂತ ಹೇಳಿದ್ದಾರೆ. ಈ ಕೂಲಿಕಾರರ ಸಂಗಡದ ಪಡಿವಿರೋಧಿಗಳೂ ಕನ್ಸರ್ವೇಟಿವ್ ಸಂಗಡದವರೂ ವ್ಯತ್ಯಾಸವೇನೋ ಸ್ಪಷ್ಟಪಟ್ಟಿಗ ಇದೆ. ಇವರಲ್ಲಿ ಕೆಲವು ಇಂತಾಗುವ ಕೆಲವು [illegible] ಸ್ವರಾಜ್ಯಸಂಗಡದ ಧ್ಯೇಯವಾದ ಸ್ವರಾಜ್ಯಸ್ಥಾಪನೆಯೇ ಬ್ರಿಟಿಷ್ ಸರಕಾರದ ಉದ್ದೇಶವೂ ಆಗಿದೆಯೆಂತ ಹೇಳಿದ್ದಾರೆ. ಮಾತ್ರವಲ್ಲ ಸ್ವರಾಜ್ಯ [illegible] ಬ್ರಿಟಿಷ್ ಸರಕಾರದಲ್ಲಿ [illegible] ಯೋಚಿಸಿ ಒಪ್ಪಿದ್ದಾರೆ. ಕನ್ಸರ್ವೇಟಿವ್ ಪಾರ್ಟಿ ಮತ ಠರಾದ್ದರೆ ಈ ಸ್ವರಾಜ್ಯಪಾರ್ಟಿಯವರು ಬ್ರಿಟಿಷ್ ಸಾಮ್ರಾಜ್ಯದ ಶತ್ರುಗಳು, ರಾಜದ್ರೋಹಿಗಳು ಮುಂತಾಗಿ ಬಾಯಿಗೆ ಬಂದಂತೆ ಆಡುತ್ತಿದ್ದರು. ಇಂಡಿಯಾದೇಶದ ದೇಶಭಕ್ತರ ಉದ್ದೇಶವನ್ನು ಸರಿಯಾಗಿ ತಿಳಕೊಂಡಿದ್ದಾರೆಂಬುದೊಂದು ಸಂತೋಷದ ವಿಷಯವೇ.

ಸ್ವರಾಜ್ಯಸಂಗಡದವರಿಗೆ ಸಂಜಗೆ [illegible] ಕೆಲವು [illegible] ಗಳನ್ನು ಸೂಚಿಸಿದ್ದಾರೆ. ಇಂಗ್ಲಿಷ್ [illegible] ಸರಕಾರ [illegible] ಈ ಉದ್ಯೋಗಸ್ಥರಿಗೆ [illegible] ಎಂದು [illegible] ಅವಶ್ಯವೆಂತ ಹಿಂದೀಯರ [illegible] 2 ನೇ ದರ್ಜೆಯ [illegible] ವಿದ್ಯಾ, ಆರೋಗ್ಯ ಮುಂತಾದ ಇಲಾಖೆಗಳ [illegible] ಬ್ರಿಟಿಷ್ [illegible] ಬೇಕಾದ ಸಾಧನಗಳನ್ನು ಬ್ರಿಟಿಷ್ [illegible] ರಾಜಕೀಯ [illegible] ದಬ್ಬಾಳಿಕೆ [illegible] ಒಲಿವಿಯರ್ ಸಾಹೇಬರಾಗಿನಲ್ಲಿ [illegible] ಹೌಸ್ ಆಫ್ ಲಾರ್ಡ್ಸ್ ನಲ್ಲಿ [illegible]. ಉಪ್ಪಿನ ಸುಂಕವನ್ನು ಎಸೆಂಬ್ಲಿಯವರಿಗೆ ವಿರೋಧವಾಗಿ ಹಾಕಿದ [illegible] ಮಾತ್ರ ಯಾವ [illegible] ಈ ದಬ್ಬಾಳಿಕೆಯ ಬ್ರಿಟಿಷ್‌ಮಂತ್ರಿಯು [illegible] ಪಾರ್ಲಿಮೆಂಟಿನಲ್ಲಿಯೇ ಒತ್ತಾಯದ [illegible] ಈ ಮಾತುಗಳು ಹಿಂದಿಯರ [illegible] ಕಲವು ವರ್ಷಗಳಿಗೆ [illegible] ಈಗ ಸಹ ಬಂತೆಂದರೆ ರಾಜದ್ರೋಹವೆಂತ [illegible] ಈಗ [illegible] ದೇಶದ ಮುಂದಾಳುಗಳು [illegible] ಈ ಧ್ಯೇಯ [illegible] ಪ್ರಯೋಜನವಾದೀತು [illegible] ಎಲ್ಲಿಯಾದರೂ [illegible] ಈ ರೀತಿ [illegible] ಬ್ರಿಟಿಷ ಮಂತ್ರಿಮಂಡಲದ [illegible] ಕೂಲಿಕಾರರ ಪಾರ್ಟಿಯ [illegible] ಸ್ವರಾಜ್ಯಸಂಗಡದ [illegible] ನಮ್ಮ ದೇಶವು [illegible] ದ [illegible] ಬಂದೀತೆ!

ಭಾರತಮಹಾಜಾತಿಗಳು ದೇಶದ [illegible]

(ಹಿಂದಿನ ಸಂಚಿಕೆಯಿಂದ)

[illegible] ಕ್ಷತ್ರಿಯರಾಗಿರು [illegible] ಭಾರತವರ್ಷದ [illegible] ಎಂಬ ಪ್ರಶ್ನೆಯು [illegible] ನಾನು [illegible] ಉದ್ಭವ [illegible]

[illegible] (ದಕ್ಷಿಣ) [illegible] ಇದು [illegible] ನಿರ್ಮಾಣ [illegible] ಹೆಂದ್ರವರ್ಮರ [illegible] (ಮಹಾರಾಜರು) ಪಕ್ಷದವರು [illegible] ಮತ್ತು [illegible] ಈಗಲೂ ಮಹಾಭಾರತದಲ್ಲಿಯೂ [illegible] ತಾಳಿ ಕೊನೆಗೆ [illegible] ಧಾರಣೆಯಿಂದ [illegible] ವನ್ನು ಪವಿತ್ರಗೊಳಿಸಿದರು. ಆದ್ದರಿಂದ ನಮ್ಮ [illegible] ನಿರ್ಧಾರವಾಗಿ ಮಹಾದೇವನ [illegible] ಪೊನ್ನಪ್ಪೈಮ್ಮಯ ದೇವಾಲಯಗಳಿರುವುವು.

ಕ್ಷತ್ರಿಯ ಜನಾಂಗಕ್ಕೆ ಸೇರಿದವರೆಲ್ಲರು [illegible] ಎಂಬುವುದಕ್ಕೆ ಸಂದೇಹವಿಲ್ಲ. [illegible] ಯುದ್ಧಕ್ಕೆ [illegible] ಗಳಾಗಲೂ ಮತ್ತು ಯುದ್ಧೋನ್ಮತ್ತರಾಗಿ [illegible] “ಹರಹರ ಮಹಾದೇವ” ಎಂದು ಜಯಘೋಷವೆಬ್ಬಿಸುವರು. ಅದು ವಿನಹ ಮತ್ತೆ ಯಾವ ಮಂತ್ರ [illegible] ನಾಮವನ್ನು ಹೇಳುವುದಿಲ್ಲ.

ಹೀಗಿರುವಾಗ್ಗೆ ಇವರೀರ್ವ ಬಾರ್ ಎಂಬ ಗುಣಗಳುಳ್ಳ ಬಾಳ ಮೊದಲಾದ ಧೂಳಿಪಿಶಾಚಿಗಳನ್ನು ಪೂಜಿಸುವುದು ಎಂಬುದು ಎಲ್ಲರೂ ಒಪ್ಪಿಗೊಳ್ಳಬಹುದು. ಈ ವಿಷಯದಲ್ಲಿ ನನಗೆ ತಿಳಿಯುವವರೆಗೂ ನಾನು ಹೇಳುವುದೇನೆಂದರೆ—

ನಮ್ಮ ಜನಾಂಗದವರ ಜನಸಂಖ್ಯೆಯು ಅಭಿವೃದ್ಧಿ ಹೊಂದಿದಹಾಗೆ ನಮ್ಮ ಅಜ್ಞಾನ ಇತ್ಯಾದಿಗಳನ್ನು ಮಾಡಲಿಕ್ಕೆ ನಮಗೆ ಸಂದೇಹದ ಜನರ ಸಹಾಯವು ಬೇಕಾಯಿತು. [illegible]

[illegible]

ಅವರು ನಮ್ಮ ಕಲಶಕ್ಕೆ [illegible]

[illegible]

ಅದಲ್ಲದೆ ಐಯ್ಯಪ್ಪದೇವರು [illegible]

[illegible]

ನಮ್ಮ ಪೂರ್ವಿಕರು [illegible]

[illegible]

ಆದ ದರಿಂದ [illegible] ಎಂದು ಹಾಡುತ್ತೇವೆ [illegible] ಎಂದು ನಡ [illegible] ವ ಹಿಡಮುಂದು [illegible] ದರಿಂದ ನಾವು [illegible] ಎಂದು [illegible] ಅಲ್ಲದೆ ನಮ್ಮ [illegible] ಸ್ವಾರ್ಥನೆಯು ಪದದಲ್ಲಿ [illegible] ಲ್ಲದ ಈ ಭೂತಪಿಶಾಚಿಗಳ ಸಂಸ್ಕೃತವಿಲ್ಲ.

"N N B"

[illegible]ಂದೂದೇಶದ ಸಿಜಸ್‌ದ ಆರಸು.

(ಸಿ. ಎಫ್. ಆಂಡ್ರೂಸ್‌ರವರಿಂದ)

[illegible]ನು ಇಂಗ್ಲೆಂಡಿನಿಂದ [illegible] ಬಂದಾಗ ಪೂ[illegible]ಸೂನ್ ಆಸ್ಪತ್ರೆಯಲ್ಲಿ ಮಹಾತ್ಮ ಗಾಂಧಿಯವರ [illegible]ನ್ನು ನೋಡಿ ಕಣ್ಣೀರುಗೊಂಡೆನು [illegible] ಮೊದಲು ಅವರ ಸ್ಥಿತಿಯನ್ನು ನೋಡಿದ್ದರೆ [illegible] ಹೆಚ್ಚು [illegible] ಅವರ [illegible] ಹೇಳಬಹುದು. [illegible] ಈ ದೇಶವನ್ನು [illegible] ನನಗೆ ಕೊಡಲೆ [illegible] ಅವರ [illegible]

ಗಳೆಯ ಹುಟ್ಟು ಇನ್ನೂ ಬಂದಿರಲಿಲ್ಲ. [illegible] ಭಾವನೆಯಲ್ಲಿ ಈ ವಿಷಯ [illegible] ಇಲ್ಲ. ಇನ್ನು [illegible] ಸ್ವಾಭಾವಿಕವಾದ ಶಾಂತಿಯು [illegible]

[illegible]

ಅನೇಕ ವರ್ಷಗಳಿಂದ [illegible] ಮಹಾತ್ಮ ಗಾಂಧಿಯವರು [illegible] ಈ ಆಸ್ಪತ್ರೆಯಲ್ಲಿ [illegible] ಹಿಂದೀಯರು ಪೂಜಿಸುತ್ತಾರೆ. ಈ ಆಸ್ಪತ್ರೆಯಲ್ಲಿ ಡಾಕ್ಟರ್ [illegible]

[illegible] ಗಾಂಧಿ ಎಂಬ [illegible] ಮಹಾತ್ಮ ಗಾಂಧಿ [illegible]

ಸತ್ಯವಾದ [illegible] ಮಹಾತ್ಮಾ ಗಾಂಧಿಯವರು [illegible]

[illegible] ದೀನ ಇಟ್ಟುಕೊಳ್ಳಬೇಕಾಗಿದೆ. ಇಂಥಾವರ ಪ್ರಸಾದವು [illegible] ಗಟ್ಟಿಯಾಗಿ ಹಿಡಿಯುವುದೇ ಜೀವನದ ಕರ್ತವ್ಯವಾಗಿದೆ.

"ಯಂಗ್ ಇಂಡಿಯಾ"

ಮಂಗಳೂರು "ಕೊಡಗು" ಸಂಘದ ವಾರ್ಷಿಕಸಭೆ.

ಇದೇ ತಾರೀಖು 17 ನೇ ಭಾನುವಾರ ಮ|| ರಾ|| ಶ್ರೀ [illegible]ಯ್ಯನವರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಕೊಡಗರ ಸಂಘದ ಮೂರನೆಯ ಸಭೆ ನಡೆಯಿತು.

ಈ ವರ್ಷ ಈ ಸಂಘದ ಮೆಂಬರುಗಳಲ್ಲಿ ಅನೇಕರು ಸಮ್ಮತವು ವಿದ್ಯಾಭಿವೃದ್ಧಿಗೋಸ್ಕರ ಇಲ್ಲಿಂದ ಪರದೇಶಕ್ಕೆ ಹೋಗುವ ಕಾರಣ ಹೊಸ ಅಧಿಕಾರಿಗಳನ್ನು ಚುನಾಯಿಸಬೇಕೆಂಬುದೇ ಈ ಸಭೆಯ ಮುಖ್ಯ ಉದ್ದೇಶವಾಗಿತ್ತು.

ಈ ಸಂಘದ ಪ್ರೆಸಿಡೆಂಟರಾದ ಮ|| ರಾ|| ಶ್ರೀ [illegible] ಮತ್ತು ಇಲ್ಲಿರುವ ವಿದ್ಯಾರ್ಥಿಗಳಲ್ಲಿ ಅನೇಕರು ಹಾಜರಿದ್ದರು.

ಅಧ್ಯಕ್ಷರು ಈ ಸಂಘದ ಉದ್ದೇಶ ಮತ್ತು ಪ್ರಯೋಜನವನ್ನು ಕುರಿತು ಸ್ವಲ್ಪ ಭಾಷಣಮಾಡಿದನಂತರ ಈ ಕೆಳಗೆ ನಮೂದಿಸಿರುವ ಪಟ್ಟಿಪ್ರಕಾರ ಹೊಸ ಅಧಿಕಾರಿಗಳು ನೇಮಿಸಲ್ಪಟ್ಟರು.

ಕಾರ್ಯದರ್ಶಿ—ಮ|| ರಾ|| [illegible] ಗಣಪತಿಯ್ಯನವರು
ಖಜಾಂಚಿ— ,, [illegible] ದೇವಯ್ಯನವರು

ಕಮಿಟಿ ಮೆಂಬರುಗಳು

ಮ|| ರಾ|| ಶ್ರೀ [illegible] ಮಂದಣ್ಣನವರು
,, [illegible] ದೇವಯ್ಯನವರು
,, [illegible]ಪ್ಪನವರು
,, [illegible]ಯ್ಯನವರು
,, [illegible]ಪ್ಪನವರು

ನಂತರ ಈಗ ನಡೆಯುತ್ತಿರುವ "[illegible]" [illegible] ಪ್ರಸ್ತಾಪವನ್ನು ಎತ್ತಿದರು. ಈ ವಿಷಯ [illegible] ತೀರ್ಮಾನವಾಯಿತು.

ಈ ವಸತಿಯ ಉಪಯೋಗಕ್ಕಾಗಿ ನಾವು ಕೊಡಗಿನಲ್ಲಿ ಎಷ್ಟು [illegible] ಹಣ ಸಂಪಾದಿಸಲು ಯತ್ನಿಸಿದರೂ ಆ ಪ್ರಯತ್ನವೆಲ್ಲ ವ್ಯರ್ಥವಾಗುವಂತೆ ತೋರುತ್ತದೆ. ಆದ್ದರಿಂದ ಇನ್ನು ಮೊದಲು ಈ ಮನೆಯ ಉಪಯೋಗಕ್ಕಾಗಿ ಹಣ ವಸೂಲಿ ಮಾಡುವುದು [illegible], [illegible] ಈ ಮನೆಯನ್ನು [illegible] ತೀರ್ಮಾನವಾಯಿತು.

ಇದಾದಮೇಲೆ ಸಭೆಯು ಮುಕ್ತಾಯವಾಯಿತು.

ಕಾರ್ಯದರ್ಶಿ.

ವರ್ತಮಾನ ಸಂಗ್ರಹ

ಒಳದೇಶ.

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಮೆ|| ಕೆ ಚಂಗಪ್ಪ ಮತ್ತು ಅವರ ಪತ್ನಿಯವರಿಗೆ ಕೋದಂಡ ಮನೆಯವರು ತಾ|| 2—3—24 ರಲ್ಲು ಬೆಳ್ಳುಮಾಡಿನಲ್ಲಿರುವ ಅವರ ಐನ್ ಮನೆಯಲ್ಲು ಒಂದು ಔತಣವನ್ನು ಕೊಟ್ಟರು

ಅಲ್ಪ ದಿವಸಗಳ ಹಿಂದೆ ಟ್ರೆಜರಿ ಅಸಿಸ್ಟೆಂಟ್ ಕವಿಾಷನರಾಗಿಯುವ ಮೆ|| ಕೌಮುಕಂಡರ ಮಗನು ಮಡಿಕೇರಿಗೆ ಬಂದಿರುವ ಶಿವಮೊಗ್ಗದ ಮೆ|| ಎಸ್ ಶ್ರೀನಿವಾಸರಾಯರೆಂಬ ಜೋಯಿಸ್ಯರೊಬ್ಬರು ಪೂಜೆ ಮಾಡುತ್ತಿರುವಾಗ್ಗೆ ಆ ಕೊಠಡಿಯೊಳಗೆ ಒಂದು ಹಾಕಿಕೊಂಡು ಹೋದದ್ದಕ್ಕ ಜೋಯಿಸರು ಮೆ|| ಕಾಮುಕರವರಿಗೆ ಒಂದು ಕಾಗದವನ್ನು ಬರೆದಮೇಲೆ ಮೆ|| ಕಾಮುಕರವರು ಜೋಯಿಸ್ಯರ ಮನೆಗೆ ಹೋಗಿ ತನ್ನ ಎದುರು ಸ್ವೀಕಿಸಿದನು ಮತ್ತು ಒಬ್ಬ ಪೋಲೀಸ್ ಸಬ್ ಇನ್‌ಸ್ಪೆಕ್ಟರು ಮತ್ತು ಒಬ್ಬ ಹೆಡ್ ಕಾನ್‌ಸ್ಟೇಬಲ್ ಇವರು ಬಂದ ಎದುರಿಗೆ ಜೋಯಿಸ್ಯರನ್ನು ಬೈದು ಹೊಡೆಯಲಿಕ್ಕೆ ಹೋದರು ಎಂಬ ಫಿರ್ಯಾದು ಉಂಟಾಗಿ ಆ ವಿಷಯ ವಿಚಾರಿಸುವ ಬಗ್ಗೆ ಕವಿಾಷನರವರು ತಾರೀಕು 28—2—24 ರಲ್ಲು ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರಾದ ಟಿ ಬಿ ಚಾರ್ಲ್ ಡಿಪ್ಯುಟಿ ಡೈರೆಕ್ಟರವರಿಗೆ ಕಳುಹಿಸಿ, ಈ ಮೊಕದ್ದಮೆಯನ್ನು ಬೇಗ ಸಾಕ್ಷಿಗಳನ್ನು ಏರ್ಪಾಟು ಮಾಡಲಿಕ್ಕೆ ತಿಳಿಸಿ ಮಾಡುತ್ತಿರುವರು ತಾ|| 4-3-24ರ ವರೆಗೆ ವಿಚಾರವು ಮುಗಿದಿರಲಿಲ್ಲ

ಮಹದೇವಪೇಟೆಯಲ್ಲಿ ಮೆ|| ನಾಯಡ ರವರ ಕಟ್ಟಡದಲ್ಲಿದ್ದ "ಕೊಡಗು" ಆಫೀಸು ಈಗ ಲೇಸ್ ಕೋರ್ಟಿನ ಒಳ ಇರುವ ಮೆ|| ಪಯಸ ರವರ ಹೊಸ ಕಟ್ಟಡಕ್ಕೆ ವರ್ಗಾಯಿಸಲ್ಪಟ್ಟಿದೆ

ಮಡಿಕೇರಿಯ "ಯೂನಿಯನ್" ಮತ್ತು ಯಂಗ್ ಮೆನ್ಸ್ ಕ್ಲಬ್‌ಗಳನ್ನು ಜೊತೆ ಸೇರಿಸಬೇಕೆಂದು ಕೆಲವು ವರ್ಷಗಳಿಂದ "ಯೂನಿಯನ್"ನವರು ಎಷ್ಟು ಪ್ರಯತ್ನ ನಡೆಸಿದರೂ ಸಾಧಿಸದ ಹೋಯಿತು ಆದರೆ ಕಳೆದ ತಿಂಗಳಲ್ಲಿ "ಯಂಗ ಮೆನ್ಸ" ನವರೇ ಇದಕ್ಕೆ ಸಮ್ಮತಿಕೊಟ್ಟು ಎರಡು ಕ್ಲಬ್‌ಗಳು ಸೇರಿ ಒಂದಾದುದು ಸಂತೋಷಕರ ಆ ಹೊಸ ಕ್ಲಬ್ಬಿಗೆ "ಯುನೈಟೆಡ" ಕ್ಲಬ ಎಂಬ ನಾಮಕರಣವನ್ನು ಮಾಡಿರುವರು ಈ ಸಮಾರಂಭಕ್ಕಾಗಿ ತಾ|| 1 ರಲ್ಲು ಮೆಂಬರುಗಳಿಗೆಲ್ಲಾ "ಯಂಗ ಮೆನ್ಸ" ಕಟ್ಟಡದಲ್ಲಿ ಒಂದು ಟೀ ಪಾರ್ಟಿ ನಡೆಯಿತು.

ತಾ|| 5 ರಲ್ಲು ಮಡಿಕೇರಿ ಮುನಿಸಪಲ ಹಾಲಿನಲ್ಲಿ ಕೋ ಆಪರೇಟಿವ್ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ನಡೆಯಿತು

ತಾ|| 18 ರಲ್ಲು ಮಡಿಕೇರಿಯಲ್ಲಿ ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರುಗಳ ಮೀಟಿಂಗು ಕೌನ್ಸಿಲ್ ಚೇಂಬರಿನಲ್ಲಿ ನಡೆಯಲಿಕ್ಕಿದೆ

ಇಂಗ್ಲೆಂಡಿನಲ್ಲಿ ನಡೆಯುವ ಬ್ರಿಟಿಷ್ ಎಂಪಯರ್ ಪ್ರದರ್ಶನಕ್ಕೆ ಹೋಗುವವರಿಗೆ ಎಲ್ಲಾ ಕಾಲದಲ್ಲು ಸಹಾಯ ಮಾಡಲು ಖಾಸಗಿ ಸಂಘವಾದ ಬ್ರಿಟಿಷ ಇಂಡಿಯನ್ ಯೂನಿಯನ್‌ನವರು ತಯಾರಾಗಿರುವುದರಿಂದ ಹಾಗೆ ಇಂಗ್ಲೆಂಡಿಗೆ ಹೋಗಬಿಚ್ಛೈಸುವವರು 200 ಪ್ಯಾಲೇಸ್ ಚೇಂಬರ್ ಬ್ರಿಡ್ಜ್ ಸ್ಟ್ರೀಟ್ ವೆಸ್ಟ್‌ಮಿನಿಸ್ಟರ್, ನಲ್ಲಿರುವ ಆ ಸಂಘದ ಸೆಕ್ರೆಟರಿಯವರೊಂದಿಗೆ ಪತ್ರವ್ಯವಹಾರ ನಡೆಸತಕ್ಕದ್ದೆಂದು ಪ್ರಕಟಿಸಲ್ಪಟ್ಟಿದೆ

ಕಳೆದವಾರ ಮಡಿಕೇರಿಯಲ್ಲಿ ಕಾಫಿ ಖಂಡಿಗೆ 330 ರಿಂದ 333 ರೂಪಾಯಿವರೆಗೆ ಕ್ರಯವಿತ್ತು

ಮಡಿಕೇರಿ ತಾಲ್ಲೋಕು ಶಿರಸ್ತೇದಾರರು ರಜದಲ್ಲಿ ಹೋದದ್ದರಿಂದ ಅವರ ಬದಲಿಗೆ ಮೆ|| ಪಟ್ಟಮಾಡಮಂಡ ಕೃಷ್ಣನವರನ್ನು ನೇಮಿಸಿರುತ್ತಾರೆ

ಸಬಾರ್ಡಿನೇಟ್ ಜಡ್ಜಿಯವರ ಕೋರ್ಟಿನಲ್ಲು ಕ್ಲಾರ್ಕ್ ಆಗಿದ್ದ ಮೆ|| ಮುಂಡಂಡ ಚಿಟ್ಟಿಯಪ್ಪನವರು ತಾ|| ದಿವಸದಿಂದ 4 ತಿಂಗಳು ರಜದಲ್ಲಿ ಹೋಗಿರುವರು

ಫಾರೆಸ್ಟ್ ಡಿಪ್ಯುಟಿ ಕನ್ಸರ್ವೇಟರವರಿಗೆ ಇನ್ನು ಮುಂದಕ್ಕೆ ಅವರ ಹೆಸರಿನ ಬದಲು ಚೀಫ ಫಾರೆಸ್ಟ್ ಆಫೀಸರು ಎಂಬ ಹೆಸರು ಬದಲಾವಣೆ ಆಗಿದೆಯೆಂದು ತಿಳಿಸಿರುತ್ತಾರೆ

ಕೊಡಗು ಜವಿಾನ್ದಾರರ ಸಂಘದ ವಾರ್ಷಿಕ ಜನರಲ ಮೀಟಿಂಗು ಬರುವ ಏಪ್ರಿಲ್ ತಾರೀಖು 19 ಮತ್ತು 20 ರಲ್ಲು ಮೆ|| ಕೋದಂಡ ಉತ್ತಯ್ಯನವರ ಅಧ್ಯಕ್ಷತೆಯಲ್ಲು ಪೊನ್ನಂಪೇಟೆಯಲ್ಲು ನಡಿಯುವುದು ದೇಶದ ಎಲ್ಲಾ ಜಮಾನ್ದಾರರು ತಮ್ಮಗಳ ಬಾಬ್ತು ಚಂದಾ ಮೊದಲಗು ಒಂದು ರೂಪಾಯಿಯನ್ನು ಮೇಲ್ಕಂಡ ಮೀಟಿಂಗಿಗೆ ಮೊದಲು ವಾಪತಿವಾಡಿ ಆರ್ಗನೈಜಿಂಗ್ ಸೆಕ್ರೆಟರಿಯವರಾದ ಮೆ|| ಚಿದ್ದಂಡ ಕಾರ್ಯಪ್ಪನವರ ಕೆಲಸಕ್ಕೆ ಉತ್ತೇಜನ ಕೊಡುವರಾಗಿ ನಂಬುತ್ತೇವೆ.

ತಾರೀಖು 1—4—1924 ರಿಂದ 31—3—25ರ ವರೆಗೆ ಮಾರಲ್ಪಡುವ ಸಾರಾಯಿ ಅಂಗಡಿಗಳ ಹರಾಜು ಇದೇ ಮಾರ್ಚ ತಾರೀಖು 7 ನೇ ದಿನ ಮಡಿಕೇರಿಯಲ್ಲು ಕೊಡಗು ಕವಿಾಷನರ್ ಸಾಹೇಬರವರ ಮುಂದೆ ಹರಾಜು ಹಾಕಲ್ಪಡುತ್ತೆ.

ಮಡಿಕೇರಿ ವೀರರಾಜೇಂದ್ರಪೇಟೆ ಮತ್ತು ಗೋಣಿಕೊಪ್ಪಲುನಲ್ಲಿ ಸಹ 1—4—1924 ರಿಂದ 31—3—25ರ ವರೆಗೆ ಮಾರಲ್ಪಡುವ ನೇಟಿವ್ ಬೀರ್ ಅಂಗಡಿಗಳ ಹರಾಜು ಇದೇ ತಾರೀಖು 7 ನೇ ದಿನ ಮಡಿಕೇರಿಯಲ್ಲಿ ಕೊಡಗು ಕವಿಾಷನರ ಸಾಹೇಬರವರ ಮುಂದೆ ಹರಾಜು ಹಾಕಲ್ಪಡುತ್ತೆ

ಮೆ|| ಕೊಂಗಂಡ ಅಪ್ಪಯ್ಯನವರು ತಾ|| 5 ರಲ್ಲು ಡೆಪ್ಯುಟಿ ಡೈರೆಕ್ಟರವರಿಂದ ಟ್ರೆಜರಿಯ ಚಾರ್ಜನ್ನು ವಹಿಸಿಕೊಂಡು ತಾತ್ಕಾಲಿಕ ಟ್ರೆಜರಿ ಅಸಿಸ್ಟೆಂಟ್ ಕವಿಾಷನರವರ ಕೆಲಸವನ್ನು ನೋಡುತ್ತಿರುವರು.

ಹಿಂದೂದೇಶ

ಹಿಂದೂದೇಶದ 1924-25 ರ ಇಂಪೀರಿಯಲ್ ಬಡ್ಜೆಟು ತಾ|| 29 2-24 ರಲ್ಲು ಎಸೆಂಬ್ಲಿಯಲ್ಲಿ ಚರ್ಚೆಗೆ ಇಡಲ್ಪಟ್ಟಿತು 1923 24 ರ ಬಡ್ಜೆಟ್‌ನಲ್ಲಿ ಆದಾಯ 129 52 ಖರ್ಚು 129 0 ಕೋಟಿ ರೂಪಾಯಿಗಳು 1924-25 ರ ಆದಾಯ ಬಡ್ಜೆಟ್‌ನಲ್ಲಿ ವರಮಾನ 1[illegible]7 93 ಖರ್ಚು 104 57 ಕೋಟಿ ರೂಪಾಯಿಗಳು 1923-24 ರಲ್ಲು ಆದಾಯಕ್ಕಿಂತ 38 ಲಕ್ಷ ಖರ್ಚು ಹೆಚ್ಚಾಗಿತ್ತು ಆದರೆ 1924-25 ರಲ್ಲು ಖರ್ಚಿಗಿಂತ 3 30 ಕೋಟಿ ರೂಪಾಯಿ ಆದಾಯ ಹೆಚ್ಚು ಇದರಲ್ಲು 1, 82 ಕೋಟಿಯನ್ನು ಉಪ್ಪಿನ ಸುಂಕ ಮಣ ಒಂದಕ್ಕೆ ಇರುವ 2 8 0 ನ್ನು 2-0-0 ಗೆ ಇಳಿಸಲಿಕ್ಕೂ 1 5 ಕೋಟಿಯನ್ನು ಪ್ರಾಂತಿಕ ಸರಕಾರಗಳು ಪ್ರಥಮ ಸರಕಾರಕ್ಕೆ ಕೊಡುವ ಸಿಕರ ಪೊಳ್ಳಿಗನ್ನು ಕಡಿಮೆಮಾಡುವುದಕ್ಕೆ ಉಪಯೋಗಿಸಬೇಕೆಂದು ಸರಕಾರದವರ ಶಿಫಾರಸ್ಸು

ತಾ|| 21-2-24 ರಲ್ಲು ನಾಭಾ ಸ್ಟೇಟಿನಲ್ಲಿರುವ ಜೈಟೋದ ದೇವಸ್ಥಾನಕ್ಕೆ ಹೋದ 500 ಜನ ಸಿಖ್ಖರ ಜಾತಕ್ಕೆ ಅಲ್ಲಿಯ ಅಧಿಕಾರಿಗಳು ಪೋಲೀಸರವರಿಗೆ ಗುಂಡ ಹಾರಿಸಿರುವರು ಈ ವಿಷಯ ವಿವರವಾಗಿ ಅಗ್ರಲೇಖನದಲ್ಲಿ ಬರೆದಿರುವೆವು

ಜೈಟೋದಲ್ಲಿ ನಡೆದಿರುವ ಅನ್ಯಾಯ ಕೃತ್ಯವು ಹಿಂದೂದೇಶದ ಎಲ್ಲರ ಮನಸ್ಸಿಗೆ ದುಃಖವನ್ನುಂಟುಮಾಡಿದೆ. ಅನೇಕ ವಿಾಟಿಂಗುಗಳು ಈ ಪ್ರಕಾರ ನಡೆಯುತ್ತಿವೆ ತಾರೀಖು 29 2-24 ರಲ್ಲಿ ಲಾಹೋರಿನಲ್ಲಿ ಪಂಜಾಬಿನ ಲೆಜಿಸ್ಲೇಟಿವ್ ಕೌನ್ಸಿಲಿನ 40 ಚುನಾಯಿತ ಮೆಂಬರುಗಳು ಸೇರಿ ಒಂದು ದೊಡ್ಡ ಸಭೆ ನಡಿಸಿ ಆ ಕೃತ್ಯದ ವಿಷಯ ಅಪವಾದವನ್ನು ಸೂಚಿಸಿ ದನ್ನು ಚೆನ್ನಾಗಿ ವಿಚಾರಿಸಲು ಒಂದು ಕಮಿಟಿಯನ್ನು ಏರ್ಪಡಿಸಬೇಕೆಂದು ಸರಕಾರದವರನ್ನು ಕೇಳಿರುವರು.

ಬಂಗಾಳ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಬಡ್ಜೆಟ್ಟು ಚರ್ಚೆ ನಡೆದ ಸಮಯದಲ್ಲಿ ಮೆ|| ಸಿ ಆರ್ ದಾಸರವರು, ಸರಕಾರದವರು ಐದು ಕೋಟಿ ರೂಪಾಯಿ ಸಾಲತೆಗೆದು ಒಂದು ಕೋಟಿ ಪ್ರೈಮರಿ ವಿದ್ಯೆಗೂ 1 ಕೋಟಿ ಕೈಗಾರಿಕೆ ವಿದ್ಯೆಗೂ 30 ಲಕ್ಷ ಮತ್ತು ದೇಶೀಯರ ವಿದ್ಯೆಗೂ 30 ಲಕ್ಷ ಹಿಂದುಳಿದವರ ವಿದ್ಯೆಗೂ 1 ಕೋಟಿ ಹಳ್ಳಿಗಳಲ್ಲಿ ಕೈಗಾರಿಕೆಗೂ 1 ಕೋಟಿ ಮಲೇರಿಯ ಮೊದಲಾದ ಜ್ವರಗಳನ್ನು ಹೋಗಲಾಡಿಸಲಿಕ್ಕೂ 40 ಲಕ್ಷ ಕೃಷಿ ಕಸುಬಿನ ವೃದ್ಧಿಗೂ ಉಪಯೋಗಿಸಬೇಕೆಂದು ಸೂಚಿಸಿರುವರು

ತಾ|| 29-2 24 ರಲ್ಲು ಡಾಕ್ಟರ್ ಆನಿಬೆಸೆಂಟಮ್ಮನವರು, ಬೊಂಬಾಯಿಯಲ್ಲಿ ಮೆ|| ಜಮ ದಾಸ್ ದ್ವಾರಕದಾಸ್ ರವರ ಅಧ್ಯಕ್ಷತೆಯಲ್ಲಿ ಒಂದು ದೊಡ್ಡ ಸಭೆಯನ್ನು ಕೂಡಿಸಿ ನೇಶನಲ ಕನ್‌ವೆನ್ಶನ ವಿಷಯ ಭಾಷಣಮಾಡಿದರು

ಲಾರ್ಡ ಒಲಿವಿಯರವರ ಭಾಷಣವು ಹಿಂದೂದೇಶದವರಿಗೆ ಲೇಬರ್ ಸರಕಾರದವರ ಮೇಲಿದ್ದ ಆಶೆಯು ಕಡಿಮೆ ಮಾಡಿದೆ ಚುನಾಯಿತ ಕೌನ್ಸಿಲ ಮೆಂಬರುಗಳೆಲ್ಲರೂ ಈ ಭಾಷಣದಿಂದ ಅತೃಪ್ತರಾಗಿರುವರು ಎಸೆಂಬ್ಲಿಯಲ್ಲಿ ನೇಶನಲ ಪಾರ್ಟಿಯವರು ಇನ್ನು ಮುಂದೆ ಹ್ಯಾಗೆವರ್ತಿಸುವರೆಂಬದನ್ನು ತಾ|| 2-3-24 ರಲ್ಲು ಡೆಲ್ಲಿಯಲ್ಲಿ ನಡೆಯುವ ಅವರ ವಿಾಟಿಂಗಿನಲ್ಲಿ ತೀರ್ಮಾನಿಸಲಿಕ್ಕಿರುವರು

ಒರಿಸ ಇಂಡಿಯನ್ ನೇಶನಲ ಕಾಂಗ್ರೆಸ್ ಮಹಾಸಭೆಯನ್ನು ಬೆಲ್ಗಾಮಿನಲ್ಲಿ ನಡಿಸಬೇಕೆಂದು ತೀರ್ಮಾನಿಸಿರುವರು ಇದಕ್ಕೆ ಮಂಗಳೂರಿನವರು ವಿರೋಧ ಅಭಿಪ್ರಾಯವನ್ನು ವಿಾಟಿಂಗುಗಳ ಮೂಲಕ ಸೂಚಿಸಿರುವರು

ಯುನೈಟೆಡ್ ಪ್ರೋವಿನ್ಸ ಕೌನ್ಸಿಲಿನ ಮೆಂಬರುಗಳು ಒಂದು ನೇಶನಲಿಸ್ಟ ಪಾರ್ಟಿಯನ್ನು ಏರ್ಪಡಿಸಿರುವರು ಇದಕ್ಕೆ 31 ಸ್ವರಾಜ್ಯ ಪಾರ್ಟಿ ಮೆಂಬರುಗಳಲ್ಲದೆ ಅನೇಕ ಇಂಡಿಪೆಂಡೆಂಟ ಮೆಂಬರುಗಳು ಸೇರಿರುವರು ಈ ಪಂಗಡವು ಎಸೆಂಬ್ಲಿಯ ನೇಶನಲಿಸ್ಟ ಪಂಗಡದವರಂತೆಯೇ ವರ್ತಿಸುವರು

ಜುಡಿಶ್ಯಲ್ ಇಲಾಖೆಯಿಂದ ಎಗ್ಸಿಕ್ಯುಟಿವ ಇಲಾಖೆಯನ್ನು ವಿಂಗಡಿಸಬೇಕೆಂಬ ಠರಾವು ಸಂಯುಕ್ತಪ್ರಾಂತ್ಯದ ಕೌನ್ಸಿಲಿನಲ್ಲಿ ಮಂಜೂರಾಗಿ ಸರಕಾರದವರು ಒಪ್ಪಿಕೊಂಡಿರುವರು

ಫೆಬ್ರುವರಿ ತಾ|| 26 ಮತ್ತು 27 ರಲ್ಲು ಮೌಲಾನ ಮಹಮ್ಮದ್ ಅಲಿಯವರ ಅಧ್ಯಕ್ಷತೆಯಲ್ಲಿ ನಡೆದ ಆಲ್ ಇಂಡಿಯ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೀಟಿಂಗಿನಲ್ಲಿ ಸಿಖ್ಖರ ಜೈಟೋ ಜಾತದಲ್ಲಿ ನಡೆದ ಸಂಗತಿಗೆ ಸಹಾನುಭೂತಿಯನ್ನು, ಅವರ ಧೈರ್ಯಕ್ಕೆ ಅಭಿನಂದನೆಗಳನ್ನು ಅರ್ಪಿಸುವಂತೆ ತೀರ್ಮಾನವಾಯಿತು.

ಮಧ್ಯಪ್ರಾಂತ್ಯದ ಕೌನ್ಸಿಲಿನಲ್ಲಿ ಸ್ವರಾಜ್ಯ ಪಂಗಡದ ಮೆಂಬರುಗಳು ಬಡ್ಜೆಟ್ಟಿಗೆ ವಿರೋಧಿಸಿದರೆ ಟ್ರಾನ್ಸ್‌ಫರ್ಡ್ ಇಲಾಖೆಗಳನ್ನು ಗವರ್ನರವರೇ ತೆಗೆದುಕೊಂಡು ಮಂತ್ರಿಗಳಿಂದ ರಾಜಿನಾಮೆಕೊಡಿಸಿ, ಎಗ್ಸಿಕ್ಯುಟಿವ್ ಕೌನ್ಸಿಲ ಮೆಂಬರುಗಳನ್ನು ಹೆಚ್ಚಿಸಿ ಅವರ ಮೂಲಕ ಆಡಳಿತವನ್ನು ನಡಿಸುವಂತೆ ವೈಸರಾಯರು ಅಲ್ಲಿಯ ಗವರ್ನರಿಗೆ ಸೂಚಿಸಿರುವರು ಎಂದೂ, ಕೌನ್ಸಿಲನ್ನೇ ಮುರಿದುಹಾಕುವರೆಂಬ ವರ್ತಮಾನ ನಿಜವಾಗಿಲಿಕ್ಕಿಲ್ಲವೆಂದೂ ನಾಗಪೂರದ 'ಹಿತವಾದಿ' ಪತ್ರಿಕೆಯು ತಾ|| 28 2-24 ರಲ್ಲು ಸೂಚಿಸಿದೆಯಂತೆ

ಜೈಟೋ ದೇವಸ್ಥಾನಕ್ಕೆ ಅಮೃತಸರದಿಂದ ತಾ||28 2-24 ರಲ್ಲು 500 ಜನ ಸಿಖ್ಖರ ಇನ್ನೊಂದು ಜಾತವು ಹೊರಟಿದೆ ತಾ|| 21 ರ ಜಾತದಲ್ಲಿ 19 ಜನರು ಮೃತರಾದರೆಂದೂ 60 ಜನರಿಗೆ ಗಾಯವಾಗಿದೆಯೆಂದೂ ತಾ|| 23ರ ವರ್ತಮಾನ.

ಕನಕ್ಕನೂರಿನಲ್ಲಿ ನಡೆಸಲಿಕ್ಕಿರುವ ಉತ್ಕಲ ಮುಸಲ್ಮಾನರ ಡಿಸ್ಟ್ರಿಕ್ಟ್ ಕಾನ್ಫರೆನ್ಸಿನಲ್ಲಿ ಅಧ್ಯಕ್ಷರಾಗಿರಲು ಮೆ|| ಯಾಕೂಬ್ ಹುಸೇನರವರು ಒಪ್ಪಿಕೊಂಡಿರುವರು

ಕೇರಳ ಮೂರನೆ ಪ್ರಾಂತಿಕ ಕಾನ್ಫರೆನ್ಸಿನ ಅಧ್ಯಕ್ಷಸ್ಥಾನವನ್ನು ಅಲಂಕರಿಸಲು ಮೌಲಾನ ಶೌಕತ್ ಅಲಿಯವರನ್ನು ಪ್ರಾಂತ್ಯ ಕಾಂಗ್ರೆಸ್ ಕಮಿಟಿಯವರು ಕೋರಿಕೊಂಡಿರುವರು

ಪಂಜಾಬಿನಲ್ಲಿ ಹೆಚ್ಚಿನ ಕಂದಾಯ ಕೊಡದೆ ಸತ್ಯಾಗ್ರಹವನ್ನು ಆಚರಿಸುತ್ತಿರುವವರನೇಕರ ದನಗಳನ್ನು ಜಪ್ತಿಮಾಡಿ ಹರಾಜು ಮಾಡುತ್ತಿರುವರು ಹರಾಜಿನಲ್ಲಿ ಕೊಳ್ಳುವವರೇ ಕಡಿಮೆ ಒಂದುಕಡೆ .88 ರೂ ಕ್ರಯದ ಎಕ್ಕೆಯನ್ನು 1 ರೂ ಗೆ ಒಬ್ಬ ಸರಕಾರಿ ನೌಕರನು ಕೊಂಡನಂತೆ!

ದಕ್ಷಿಣ ಮಹಾರಾಷ್ಟ್ರದ ಬಹುಜನರು ರಾಜಕೀಯ ಕೈದಿಗಳನ್ನು ಬಿಡಬೇಕೆಂದು ಕೇಳಿಕೊಂಡ ಅರ್ಜಿಯನ್ನು ಕೊಟ್ಟಿರುವರಂತೆ

ಮಹಾತ್ಮಾ ಗಾಂಧಿಯವರ ಕಾಯಿಲೆಯು ನಿಧಾನವಾಗಿ ಎದರೆ ಕ್ರಮವಾಗಿ ಮತ್ತು ಖಂಡಿತವಾಗಿ ವಾಸಿಯಾಗುತ್ತಾ ಬರುತ್ತಿದೆ

ಲಾಹೋರಿನಲ್ಲಿ ಪ್ರಬಲವಾಗುತ್ತಿರುವ ಪ್ಲೇಗು ವ್ಯಾಧ್ಯವನ್ನು ಕಡಿಮೆ ಮಾಡಲಿಕ್ಕಾಗಿ ಬೇರೆ ಬೇರೆ ಇಲಾಖೆ ದಾರರ ಮತ್ತು ಬೇರೆ ಮತೀಯರುಗಳ ಒಂದು ಕಾರ್ಯಕಾರಿ ಸಭೆ ಮಾಡುವಂತೆ ಅಲ್ಲಿಯ ವಿದ್ಯಾ ಇಲಾಖೆಯ ಮಂತ್ರಿಯವರು ಏರ್ಪಡಿಸಿರುವರು

ವಿದೇಶ

ಪಿಲೇಫತ್ತಿನ ವಿಷಯ ತುರ್ಕಿಸ್ಥಾನದಲ್ಲಿ ಮೂರು ತರ ಅಭಿಪ್ರಾಯಗಳ ಪಂಗಡಗಳಿಗೆ ಈ ವಿಷಯದಲ್ಲಿ ಯಾವ ಬದಲಾವಣೆಯೂ ಬೇಡವೆಂಬ ಒಂದು ಚಿಕ್ಕ ಪಂಗಡ ರಾಜಕೀಯದಿಂದ ಮತಸಂಬಂಧ ಸಂಗತಿಗಳನ್ನು ವಿಂಗಡಿಸಿ ಪಿಲೇಫತ್ತನ್ನು ಯಾವದಾದರೂ ಒಂದು ವಿಧದಲ್ಲಿ ಇಟ್ಟುಕೊಳ್ಳಬೇಕೆಂಬ ಇನ್ನೊಂದು ಪ್ರೋಗ್ರೆಸ್ಸಿವ್ ಪಂಗಡ ಖಲೀಫತ್ತನ್ನು ತೆಗೆದೇ ಬಿಡಬೇಕೆಂಬುದು ಮೂರನೇ ಪಂಗಡ ಈ ಪಂಗಡಕ್ಕೆ ಮುಸ್ತಾಫ ಕೆಮಾಲ್‌ಪಾಷರವರು ನಾಯಕರ ಈ ವಿಷಯ ಖಲೀಫನ ಕುಟುಂಬದವರಿಗೆ ಮನಸ್ತಾಪ ಮಾಡಿದೆಯಂತೆ ಆದರೆ ಖಲೀಫರು ಬಂದ ಪರಿಣಾಮವನ್ನು ಎದುರಿಸಲು ತಯಾರಾಗಿರುವರಂತೆ

ಫೆಬ್ರುವರಿ ತಾ|| 26 ರಲ್ಲಿ ಇಂಡಿಯಾಸ್ಟೇಟ ಸೆಕ್ರೆಟರಿಯಾದ ಲಾರ್ಡ ಒಲಿವಿಯರ್‌ರವರು ಲಾರ್ಡ್ಸ್ ಸಭೆಯಲ್ಲಿ ಇಂಡಿಯಾದ ಮಾರ್ಪಾಡುಗಳ ವಿಷಯವಾಗಿ ಭಾಷಣವನ್ನು ಕೊಟ್ಟರು ಅದರ ಸಾರಾಂಶವನ್ನು ಬೇರೆ ಕಡೆ ಒಂದು ಲೇಖನದಲ್ಲಿ ಪ್ರಕಟಿಸಿರುವೆವು ಈ ಭಾಷಣದಿಂದ ಹಿಂದೀಯರಿಗೆಲ್ಲರಿಗೂ ಬಹಳ ಆಶಾಭಂಗವಾಗಿದೆ ಲೇಬರ್ ಸರಕಾರದ ಮೇಲಿದ್ದ ಭರವಸೆಯು ಕಡಿಮೆಯಾಗಿದೆ

ಲಾರ್ಡ ಒಲಿವಿಯರವರ ಭಾಷಣದನಂತರ ಮೆ|| ಪೋಲಕ್ ಮತ್ತು ಮೆ|| ಗ್ರಾಹ್ಯಾಮ್ ಪೋಲ್‌ರವರು ಇಂಡಿಯಾದ ರಾಜಕೀಯ ಗೊಂದಲದಲ್ಲು ಶಕ್ತ್ಯಸಾಧ್ಯವಾದರೂ ಲೇಬರ್ ಸರಕಾರದವರು ಸಹಾನುಭೂತಿಯ ಯೋಚನೆ ಮಾಡಿರುವುದು ಇಂಡಿಯಾದ ಎಲ್ಲಾ ಪಂಗಡಗಳ ಸಹಾಯ ಪಡೆಯಲಿಕ್ಕಾಗಿದೆ, ಹೀಗೆ ಎಲ್ಲರೂ ಸಹಕರಿಸಿದರೆ ಸರಿಯಾಗಿ ಹೋರಾಡಿದರೆ ಬೇಗನೆ ಬೇಕಾದ ಮಾರ್ಪಾಡುಗಳು ಸಿಕ್ಕುವುದರಲ್ಲಿ ಸಂಶಯವಿಲ್ಲವೆಂದು ಇಂಗ್ಲೆಂಡಿನಲ್ಲಿರುವ ಇಂಡಿಯನರಾದ ಮುಂದಾಳುಗಳಿಗೆ ತಂತೀವರ್ತಮಾನ ಕಳುಹಿಸಿರುವರು

ದಕ್ಷಿಣ ಆಫ್ರಿಕದ ಪ್ರಿಟೋರಿಯದಲ್ಲಿ ಒಂದು ಸಭೆಯಲ್ಲಿ ಶ್ರೀಮತಿ ಸರೋಜಿನಿದೇವಿಯವರು ಸಾಧ್ಯವಿದ್ದರೆ ಸಾಮ್ರಾಜ್ಯದೊಳಗೆ ಅವಶ್ಯವಿದ್ದರೆ ಸಾಮ್ರಾಜ್ಯದ ಹೊರಗೆ ಸ್ವಾತಂತ್ರ್ಯಕ್ಕಾಗಿ ದಕ್ಷಿಣ ಆಫ್ರಿಕವು ಈ ವಿಷಯವನ್ನು ವರ್ತಿಸುವುದು ಎಂದು ತನ್ನ ಸಂದೇಶವನ್ನು ಕೊಟ್ಟರು

ಟರ್ಕಿಯಾದಲ್ಲಿ ಪಾರಸರ ಆಡಳಿತೆಯು ಬೇಡವೆಂದೂ ರಿಪಬ್ಲಿಕನ್ ಸರಕಾರ ಆಗಬೇಕೆಂತಲೂ ಚಳವಳಿ ನಡೆಯುತ್ತಾ ಇದೆ.

ಕೊಡಗು ಜಮೀನ್ದಾರರ ಸಂಘ.

ಪ್ರಚಾರಕ ಕಾರ್ಯದರ್ಶಿಯವರಿಂದ.

ಸಂಘದ ಉದ್ದೇಶಗಳನ್ನು ನೆರವೇರಿಸಲಿಕ್ಕಾಗಿ 25 ಸಾವಿರ ಜನರು ಸಂಘಕ್ಕೆ ವಾರ್ಷಿಕಾ ವಿಾಟಿಂಗಿಗೆ ಮೊದಲು ವರ್ಷದ ಚಂದಾ ಮೊಬಲಗು ಒಂದು ರೂಪಾಯಿಯನ್ನು ಅವರವರ ನಾಡು ಕವಿಾಟಿ ಖಜಾನಜಿಯವರಲ್ಲಿ ಕೊಟ್ಟು ಮೆಂಬರಾಗಬೇಕಾಗಿ ವಿನಂತಿ.

ಈ ಕೆಳಗಿನ ಪಟ್ಟಿಯಲ್ಲಿ ಸೂಚಿಸಿದ ಸ್ಥಳಗಳನ್ನು ಸಂಘದ ನಾಡ ಕವಿಾಟಿಗಳನ್ನು ಏರ್ಪಡಿಸಲಿಕ್ಕಾಗಿ ಸಭೆಗಳು ನಡಿಸಲ್ಪಡುವವು. ಕೆಲವು ಕಡೆಗಳಲ್ಲಿ ಗ್ರಾಮದಲ್ಲಿ ಎಲ್ಲರಿಗೂ ನೋಟೀಸು ಇಲ್ಲವೆಂಬ ಭಾವನೆಯಿಂದ ಜಮೀನ್ದಾರರು ಹಿಂದೆ ಸರಿಯುತ್ತಾರೆಂಬ ವರ್ತಮಾನ ಇದೆ. ಇದು ಬಹಳ ವ್ಯಸನಕರ. ಒಂದು ಗ್ರಾಮದಲ್ಲಿ ಪ್ರತಿಯೊಬ್ಬರಿಗೂ ನೋಟೀಸು ಕಳುಹಿಸುವುದು, ಪ್ರತಿಯೊಬ್ಬರ ಹೆಸರು ತಿಳಿಯದಿರುವ ಕಾರಣ ಅಸಾಧ್ಯ. ಪತ್ರದಿಂದ ನೋಟೀಸು ಸಿಕ್ಕಿದವರು ತಿಳುವಳಿಕೆ ಕೊಟ್ಟು ಎಲ್ಲರೂ ನಮ್ಮ ಪತ್ರಿಕೆಯಲ್ಲಿರುವ ಕೋರಿಕೆಯನ್ನು ಮನಸ್ಸಿಗೆ ತೆಗೆದುಕೊಳ್ಳಬೇಕಾಗಿ ಕೋರಿಕೆ.

ನಂಬ್ರ	ನಾಡು	ವಿಾಟಿಂಗಿನ ಸ್ಥಳ	ತಾರೀಖು	ದಿವಸ
1	ಅರಕೇರಿನಾಡು	ಮೊಳ್ಳೆಂಕೋಡುಮಂದು	8—3—1924	ಶನಿವಾರ
2	ಕಂಗಣಾತ ನಾಡು	ಹುಲಿಮಂದು	9—3—1924	ಆದಿತ್ಯವಾರ
3	ಅವ್ವತ್ತಿನಾಡು	ನಾಡುದೇವಸ್ಥಾನ	10—3—1924	ಸೋಮವಾರ

ಕೊಡಗು ಜಮೀನ್ದಾರರ ಸಂಘದ ಕಳೆದ ವಾರದಲ್ಲಿ ಏರ್ಪಾಡಾದ ನಾಡು ಕವಿಾಟಿಗಳು ಮತ್ತು ಮೆಂಬರುಗಳ ವಿವರ —

ಬೇಟೋಳಿನಾಡು ಕವಿಾಟಿ.

ಪ್ರೆಸಿಡೆಂಟರು—ಮೆ|| ಪಟ್ಟಡ ಮಾಚೈಯ ನವರು
ಸೆಕ್ರಟರಿಯವರು—ಮೆ|| [illegible] ಭೀಮಯ್ಯನವರು
ಖಜಾನಜಿಯವರು—ಮೆ|| ಒಲ್ಲಚಂಡ ಬಿದ್ದಯ್ಯನವರು

ಕವಿಾಟಿ ಮೆಂಬರುಗಳು

ಬೇಟೋಳಿಗ್ರಾಮ — ಮೆ|| ಪಟ್ಟಡ ಚಂಗಪ್ಪನವರು
ಮೆ|| ಕಾಳಚೇರಿರ ನಂಜಪ್ಪನವರು
ಆರ್ಜಿಗ್ರಾಮ — ಮೆ|| ಕರ್ತಚ್ಚಿರ ಮಾದಪ್ಪನವರು
ಮೆ|| ಕಬ್ಬಚ್ಚಿರ ಚಂಗಪ್ಪನವರು
ಹೆಗ್ಗಳಗ್ರಾಮ — ಒಕ್ಕಮಂಡ ಮಂದಣ್ಣನವರು
ಪೋರೆರ ಗಣಪತಿಯವರು

ಕಾಂತುಮೂರುನಾಡು ಕವಿಾಟಿ

ಪ್ರೆಸಿಡೆಂಟರು — ಮೆ|| ಮಂಗೇರಿರ ಚಂಗಪ್ಪನವರು
ಸೆಕ್ರೆಟರಿಯವರು — ಮೆ|| ಕೋಟೇರ ಮಾಚೈಯ್ಯನವರು
ಖಜಾನಜಿಯವರು — ಮೆ|| [illegible]ಮಂಡ ಗಣಪತಿಯವರು

ಕವಿಾಟಿ ಮೆಂಬರುಗಳು

ಮತ್ತಾರ್ ಗ್ರಾಮ — ಮೆ|| ಕುಂಡಚಂಡ ಸುಬ್ಬಯ್ಯನವರು
ಮೆ|| ತೊಡಿಕಾನ ಪೂವಯ್ಯನವರು
ಕೋಡಂಬೂರುಗ್ರಾಮ — ಮೆ|| ಚೇನಂಡ ಮಾಚೈಯ್ಯನವರು
ಮೆ|| ಪಟ್ಟಮಾಡ ಕರುಂಬಯ್ಯನವರು
ಬಾಡಗಗ್ರಾಮ — ಮೆ|| ಮಡೆಯಂಡ ಪೊನ್ನಪ್ಪನವರು
ಮೆ|| ಕುಂಜ್ಞಾಟಿರ ಮುತ್ತಣ್ಣನವರು
ಕಿಗ್ಗಾಲು ಗ್ರಾಮ — ಮೆ|| ಪುದಿಯೊಕ್ಕಡ ದೇವಯ್ಯನವರು
ಮೆ|| ಅಮ್ಮಟಿರ ಕುಟ್ಟಪ್ಪನವರು
ಐಕೊಳಗ್ರಾಮ — ಮೆ|| ಮಂದೆಯಂಡ ಗಣಪತಿಯವರು
ಮೆ|| [illegible] ಬೋಪಯ್ಯನವರು
ಕಾಂತೂರ್ ಗ್ರಾಮ — ಮೆ|| ಅವರೆಮಾದಂಡ ಮಂದಪ್ಪನವರು
ಮೆ|| [illegible] ಚಿಣ್ಣಪ್ಪನವರು

ಡೈರೆಕ್ಟರುಗಳ ವಿಾಟಿಂಗು

ಫೆಬ್ರವರಿ ತಾ|| 16 ರಲ್ಲು "ಕೊಡಗು" ಆಫೀಸಿನಲ್ಲು ನಡೆದ "ಕೊಡಗು" ಕಂಪೆನಿಯ ಡೈರೆಕ್ಟರುಗಳ ವಿಾಟಿಂಗಿನ ವಿವರ:—

ಹಾಜರಿದ್ದವರು:

ಮ|| ರಾ|| ಶ್ರೀ 1 ಸಿ ಎಸ್ ಉತ್ತಯ್ಯನವರು
,, 2 ಸಿ ಎಸ್ ವೆಂಕಪ್ಪಯ್ಯನವರು
,, 3 ಟಿ. ಸ್ ಪೂವಯ್ಯನವರು
,, 4 ಎಸ್ ಆರ್ ಸುಬ್ಬಯ್ಯನವರು
,, 5 ಜಮ್ಮಡ ಮಾದಪ್ಪನವರು
,, 6 ಎಂ ಎ ಚಿಣ್ಣಪ್ಪನವರು
,, 7 ಪಿ ಟಿ [illegible]ನವರು
,, 8 ಪುಲಿಯಂಡ ಉತ್ತಯ್ಯನವರು

ಮೆ|| ಸಿ ಎಸ್ ಉತ್ತಯ್ಯನವರು ವಿಾಟಿಂಗಿನ ಅಧ್ಯಕ್ಷರಾಗಿ ಆರಿಸಲ್ಪಟ್ಟರು

1 ಕಂಪೆನಿಯ ಡೈರೆಕ್ಟರುಗಳ ಬೋರ್ಡಿನ ಚೇರ್‌ಮ್ಯಾನ್ ಪದವಿಗೆ ತನ್ನ ರಾಜಿನಾಮೆಯನ್ನು ಒಪ್ಪಿಕೊಳ್ಳಬೇಕೆಂದು ಬರೆದ ಮೆ|| ಕೂಡಂದೇರ ಕುಟ್ಟಯ್ಯನವರ ಕಾಗದವು ಓದಲಾಯಿತು. ಅವರ ರಾಜಿನಾಮೆಯು ಒಪ್ಪಲಾಯಿತೆಂದೂ ಮತ್ತು ಅವರು ಚೇರ್‌ಮ್ಯಾನರಾಗಿ ಮಾಡಿದ ಒಳ್ಳೇ ಕೆಲಸಕ್ಕೆ ವಂದನೆಗಳನ್ನು ಅರ್ಪಿಸುತ್ತೇವೆಂದೂ ಅವರಿಗೆ ತಿಳಿಸುವಂತೆ ತೀರ್ಮಾನವಾಯಿತು.

2 ಗತಿಸಿದ ಮೆ|| ಕೋದಂಡ ಮಾಚೈಯ್ಯನವರ ಬದಲಿಗೆ ಮೆ|| ಕೋದಂಡ ಅಪ್ಪಯ್ಯನವರು ಕಂಪೆನಿಯ ಒಬ್ಬ ಡೈರೆಕ್ಟರಾಗಿ ಚುನಾಯಿಸಲ್ಪಟ್ಟರು

3 ರಾಜಿನಾಮೆ ಕೊಟ್ಟ ಮೆ|| ಕೆ ಕುಟ್ಟಯ್ಯನವರ ಬದಲಿಗೆ ಮೆ|| ಕೆ ಅಪ್ಪಯ್ಯನವರು ಡೈರೆಕ್ಟರುಗಳ ಬೋರ್ಡಿನ ಚೇರ್‌ಮ್ಯಾನರಾಗಿ ಚುನಾಯಿಸಲ್ಪಟ್ಟರು

4 ಏಪ್ರಿಲಿನಲ್ಲಿ ಜಮೀನುದಾರರ ಸಂಘದ ವಾರ್ಷಿಕ ಸಭೆಯು ನಡೆಯುವ ಸ್ಥಳದಲ್ಲಿಯೇ ಆ ಸಭೆಯ ಎರಡನೇ ದಿವಸ ಬೆಳಿಗ್ಗೆ 8 ಗಂಟೆಗೆ "ಕೊಡಗು" ಕಂಪೆನಿಯ ಷೇರುದಾರರ ಜನರಲ್ ವಿಾಟಿಂಗು ನಡೆಯಬೇಕೆಂದು ತೀರ್ಮಾನವಾಯಿತು.

5 1923 ನೇ ಮೇ ತಿಂಗಳ ಅಖೈರುವರೆಗೆ ಕಂಪೆನಿಯ ವಿಷಯ ಡೈರೆಕ್ಟರುಗಳ ರಿಪೋರ್ಟು ಓದಲಾಗಿ ಒಪ್ಪಲಾಯಿತು

6 1922—23 ರ ಲೆಖ್ಖದ ಆಡಿಟರವರ ರಿಪೋರ್ಟು ಓದಲಾಗಿ ದಾಖ್ಲೆ ಮಾಡಲಾಯಿತು.

7 1923 ನೇ ನವಂಬರು ಅಖೈರಿನವರೆಗೆ ಬೇಲೆನ್ಸ್ ಶೀಟು ಮತ್ತು ಲಾಭನಷ್ಟದ ಪಟ್ಟಿಯನ್ನು ಆಡಿಟ್ ಮಾಡಲಿಕ್ಕಾಗಿ ಆಡಿಟರವರಿಗೆ ಕೊಡುವಂತೆ ತೀರ್ಮಾನವಾಯಿತು.

8 1923 ನೇ ನವಂಬರ ಅಖೈರ ವರೆಗೆ ಕಂಪೆನಿಯ ಕೆಲಸದ ವಿಷಯ ಡೈರೆಕ್ಟರುಗಳ ರಿಪೋರ್ಟನ್ನು ತಯಾರಿಸಲಿಕ್ಕೆ ಚೇರ್‌ಮ್ಯಾನ್ ಮೆ|| ಕೆ ಅಪ್ಪಯ್ಯನವರು ಮೆ|| ಸಿ ಎಸ್ ವೆಂಕಪ್ಪಯ್ಯನವರು ಮತ್ತು ಮೆ|| ಎಂ ಎ ಚಿಣ್ಣಪ್ಪನವರು ಇವರು ಮೂವರದ್ದೊಂದು ಸಬ್ ಕವಿಾಟಿಯು ನೇಮಕವಾಯಿತು.

9 ತಾ|| 29 1-24 ರ ವಿಾಟಿಂಗಿನ 2 ನೇ ಠರಾವಿನ ಮೇರೆ ಏರ್ಪಾಡಾಗಿರುವ ಸಬ್ ಕವಿಾಟಿಗೆ ಮೆ|| ಕೆ ಕುಟ್ಟಯ್ಯನವರ ಬದಲು ಮೆ|| ಕೆ ಅಪ್ಪಯ್ಯನವರನ್ನು ಚುನಾಯಿಸಲ್ಪಟ್ಟಿತು

10 ಕಮ್ಮಕ್ಕೆ ಸಲ್ಲಿರುವ ಕಂಪನಿಯ ಪಾಲನ್ನು ಪತ್ರ ಆಡಿಟರವರ 1922 23 ನೇ ವರ್ಷದ ವರದಿ ಮೇರೆ ಕಾಪಿಟಲಿಗೆ ದಾಖ್ಲೆಯಾಗದೆ ಇರುವ 47 ರೂ ಗಳ ಜವಾಬ್ದಾರಿಯನ್ನು "ಕೊಡಗು" ಆಫೀಸಿನಲ್ಲು ಎಡಿಟರವರಿಗೆ [illegible] ಮೆ|| ಕೆ ಕುಟ್ಟಯ್ಯನವರನ್ನು ಕೇಳಿಕೊಳ್ಳುವಂತೆಯೂ ಮೆ|| ಕೆ ಅಪ್ಪಯ್ಯನವರು ನಗದಿ ಹಣದ ಚಾರ್ಜನ್ನು ಎಡಿಟರಿಂದ ತೆಗೆದುಕೊಳ್ಳುವಂತೆ ಅವರನ್ನು ಕೇಳಿಕೊಳ್ಳುವಂತೆಯೂ ತೀರ್ಮಾನವಾಯಿತು.

11 ಪತ್ರ ಏಜಂಟರಾದ ಮೇರೆ ಮೆ|| ಪಾಲಂದಿರ ಅಪ್ಪಯ್ಯನವರನ್ನು ಪತ್ರಿಕೆಯ ಚಂದಾ ಹಾಗು ಮತ್ತು ಕೆಲ ಹಣವನ್ನು ವಸೂಲಿ ಮಾಡಲು ನೇಮಿಸಬೇಕೆಂದು ಬರೆದ ಮೆ|| ಕೆ ಪಿ ಚಿಣ್ಣಪ್ಪನವರ ಪತ್ರವೂ ಮೆ|| ಪಿ ಅಪ್ಪಯ್ಯನವರ ಅಪ್ಲಿಕೇಶನೂ ಓದಲಾದವು. ಮೆ|| ಪಾಲಂದಿರ ಅಪ್ಪಯ್ಯನವರಿಗೆ ಷೇರು ಮತ್ತು ಚಂದಾ ಹಣವನ್ನು ವಸೂಲಿ ಮಾಡಲು ಅಧಿಕಾರ ಕೊಟ್ಟಿದೆ, ಆದರೆ ಮೆ|| ಕೆ ಪಿ ಚಿಣ್ಣಪ್ಪನವರ ಶಿಫಾರಸ್ಸಿನ ಮೇಲೆ ಕಳುಹಿಸಿರುವ ಪತ್ರಿಕೆಗಳ ಚಂದಾವಸೂಲಿಯ ಜವಾಬ್ದಾರಿಯು ಚಿಣ್ಣಪ್ಪನವರ ಮೇಲಿಂದ ತಪ್ಪಿರುವುದಿಲ್ಲ

12 ಶೇಕಡ 5 ರಂತೆ ಕಮಿಷನಿನ ಮೇರೆ ಚಂದಾ ವಸೂಲಿಗೆ ಇಬ್ಬರು ಏಜಂಟರುಗಳನ್ನು ನೇಮಿಸುವಂತೆಯೂ ಏಜಂಟರುಗಳು 100 ರೂ ಜಾಮೀನು ಕೊಡಬೇಕೆಂತಲೂ ಅಪ್ಲಿಕೇಶನುಗಳಿಗೆ ಪತ್ರಿಕೆಯ ಮೂಲಕ ಪ್ರಕಟಿಸಿ ಚೇರ್‌ಮ್ಯಾನರವರು ಏಜೆಂಟರುಗಳನ್ನು ನೇಮಿಸಬಹುದೆಂತಲೂ ತೀರ್ಮಾನವಾಯಿತು

13 ಸಂಬಳ ಹೆಚ್ಚಿಸಲಿಕ್ಕೆ ಮತ್ತು ಬೋನಸ್ಸಿಗೂ ಬರೆದ ಎಡಿಟರವರ ತಾ|| 5-10-23 ರ ಪತ್ರವು ಓದಲಾಯಿತು. ಈ ಪತ್ರದ ವಿಷಯ ಮುಂದಿನ ತಾರೀಖಿನಲ್ಲಿ ಯೋಚಿಸುವಂತೆ ತೀರ್ಮಾನವಾಯಿತು.

ಸಿ ಎಸ್. ಉತ್ತಯ್ಯ,
ಅಧ್ಯಕ್ಷರು.

ಪತ್ರವ್ಯವಹಾರಗಳು.

ಬಾತ್ಮಿದಾರರು ಬರುವ ಅಭಿಪ್ರಾಯಗಳಿಗೆ ನ್ಯಾಯವಾಗಿ ಉತ್ತರವಾದಿಗಳಲ್ಲ. [ಎಡಿಟರ್]

ದೂರದಬೆಟ್ಟ ನುಣ್ಣಗೆ!

ದೇಶಮಹಾಶಯರೆ,

ಬಲಮುರಿಗ್ರಾಮದಲ್ಲಿ ಬೇಕಾದ ಸಂಘಗಳವೆ. ಇದು ಮೂರುಕೇರಿಗಳಿಂದ ಕೂಡಿದ ಗ್ರಾಮವಾಗಿದೆ, ಗ್ರಾಮದಲ್ಲಿ ಅಗಸ್ತ್ಯೇಶ್ವರನ ದೇವಸ್ಥಾನವಿದೆ. ದೇವರ ತಕ್ಕಾಮು ಏಪ್ರಿಲ್ ತಿಂಗಳು ಬಿದ್ದು ಎಂಟು ವರ್ಷಗಳಾದವು. ಒಂದುಕೇರಿಯವರು ಈ ದೇವರಹಬ್ಬಕ್ಕು ಯಾತ್ರೆಹಬ್ಬಕ್ಕು ಸೇರದೆ ನಾಲ್ಕು ವರ್ಷಗಳಿಂದವೂ ಇದರಲ್ಲಿಯೇ ಬಗ್ಗಟ್ಟು! ಇದಲ್ಲವೇ ಗ್ರಾಮದ ಹೆಸರುವಾಸಿ! ಇದಲ್ಲವೇ ಯೂನಿಯನ್‌ಸುಖದ ಕಷ್ಟ! ಸರ್ವಗುಣ ಸಂಪನ್ನ ಒಂದುಗುಣ ಹೀನ. ಎಂಬಂತೆ ಬಗ್ಗಟ್ಟು ಇಲ್ಲದ ಗ್ರಾಮದಲ್ಲಿ ಎಷ್ಟು ಭಾಗ್ಯವಿದ್ದರೇನು? ಹೆಸರುವಾಸಿ ಪಡೆದರೇನು? ಮಹಾದೇವರ ಹಬ್ಬವು ಸಮೀಪಿಸಿದರಿಂದ ಗ್ರಾಮದ ತಕ್ಕ ಮುಖ್ಯಸ್ಥರು ಮುಂದಾಳುಗಳು ತಕರಾರನ್ನು ನ್ಯಾಯವಾಗಿ ತೀರಿಸಿ ಯೂನಿಯನ್ ಸಂಘದ ತತ್ವಕ್ಕನುಸಾರವಾಗಿ ನಡೆಯದೆ ಹೋದರೆ, ಸಂಘದ ಹೆಸರನ್ನು ಬದಲಾಯಿಸುವುದು ಲೇಸಲ್ಲವೇ!

"ಗ್ರಾಮದವ"

ಅಯ್ಯಾ ಕೊಡಗೇ!

ಡಿಸ್ಟ್ರಿಕ್ಟ್ ಬೋರ್ಡ ಶಾಲಾ ಉಪಾಧ್ಯಾಯರುಗಳಿಗೆ ಕಳೆದ ಏಪ್ರಿಲ್ ತಿಂಗಳಿಂದ ಸಂಬಳ ಒತ್ತಿಯಾಗಿದೆ. ಅದು ಹಳತಾ ಚೇರ್ಮನರ ಮಂಜೂರಾತಿಯೂ ಪಡೆದಿದೆ. ಆದರೆ ಎಕೌಂಟೆಂಟ್ ಜನರಲ್‌ರವರ ಒಪ್ಪಿಗೆಗೆ ಹೋಗಿದೆ ಎಂದು ಮೊದಲಿಗೆ ಪ್ರಕಟವಾಗಿತ್ತು. ಅದು ಮೊದಲುಗೊಂಡು ಉಪಾಧ್ಯಾಯರು ತಮ್ಮ ಒತ್ತಿಯನ್ನು ನಿರೀಕ್ಷಿಸುತ್ತಾ ಇದ್ದಾರೆ. ಹಾಗೂ ವರ್ಷದ ಅಂತ್ಯವೂ ಸಮೀಪಿಸುತ್ತಾ ಬಂತು. ವರ್ಷ ಕಳೆದನಂತರ ಅವರ ಹಿಂದಿನ (ಏರಿಯರ್ಸ್) ಒತ್ತಿ ಸಂಬಳವು ಸಿಕ್ಕುವುದೋ ಎಂಬ ಸಂಶಯವಿದೆ.

ಆದುದರಿಂದ ಡಿಸ್ಟ್ರಿಕ್ಟ್ ಬೋರ್ಡ ಅಧಿಕಾರಿಗಳು ಬಡ ಉಪಾಧ್ಯಾಯರ ಮೇಲೆ ಕರುಣೆ ಇಟ್ಟು ಬೇಗನೆ ಅವರ ಹಿಂದಿನ ಬಾಕಿಯು ಅವರಿಗೆ ಸಿಕ್ಕುವಂತೆ ಏರ್ಪಾಡು ಮಾಡಬೇಕಾಗಿ ಪ್ರಾರ್ಥನೆ.

ಹಿತಚಿಂತಕ.

ಅಯ್ಯಾ,

ತಾರೀಖು [illegible] ರ ಕೊಡಗು ಪೇಪರಿನ [illegible] ಗಳ ಸಂಘದ ಲಾಟರಿ ವಿಷಯ ಕೆಲವು ಸಮಾಚಾರವನ್ನು ಓದಿ [illegible]. ಲಾಟರಿ ಟಿಕೇಟು ಪುಸ್ತಕಗಳನ್ನು ಮಾರಾಟದ ಬಗ್ಗೆ ಹೊಂದಿ [illegible] ಗಳು ಟಿಕೇಟುಗಳನ್ನು ಮಾರಾಟ [illegible] ಪುಸ್ತಕಗಳನ್ನು [illegible] ಇದ್ದಿರುವ ಕಾಲದಲ್ಲೂ ಲಾಟರಿ ಎತ್ತಲು [illegible] ಸಂಗ್ರಹಯಲ್ಲಿ ಬಹಳ ವ್ಯಸನಪಡು [illegible] ಈ ವಿಷಯವಲ್ಲಿ [illegible] ಆದಷ್ಟು ತ್ವರಿತವಾದ ಲಾಟರಿ [illegible] ತಾರೀಖು ಹಿಂದಲಾಗಿ ಪ್ರಕಟಿಸಲಾಯಿತು.

ಟಿ೦ ಪೊನ್ನಪ್ಪ,
[illegible]

ಅಯ್ಯಾ,

ಮಡಿಕೇರಿ ಕಾಲೇಜು ಎದುರುಗಡೆ ಇರುವ ಕೆರೆಯನ್ನು [illegible] ಅಲ್ಲಿಯ ಸ್ಕೂಲಿನ [illegible] ನೀರು ಊಟವಸ್ತ್ರಕ್ಕೆ [illegible] ಬಾವಿನಲ್ಲಿ [illegible] ಆದರೆ ನದಿ ಸ್ಕೂಲಿನಲ್ಲಿ ಆಂದಾಜು [illegible] ಹುಡುಗರವರೆಗೆ ಓದುತ್ತಿರುವಾಗ ಅಲ್ಲಿಂದ ಶ್ರೀ ಮಂಗಲಕ್ಕೆ ಎಳು ಮೈಲುದೂರವಿದ್ದು ಅಸ್ಪತ್ರೆಯ ಸಬ್ ಅಸಿಸ್ಟೆಂಟ್ ಸರ್ಜನರವರು ತಿಂಗಳಿಗೊಂದಾವರ್ತಿಯಾದರೂ ನದಿ ಸ್ಕೂಲಿಗೆ ಬಂದು ಮಕ್ಕಳ ಆರೋಗ್ಯಸ್ಥಿತಿಯನ್ನು ನೋಡದೆ ಇರುವುದು ಬಹಳ ವ್ಯಸನಕರವಾಗಿದೆ. ಬೇಸಿಗೆಯಲ್ಲಿ ಕಾಯಿಲೆ ದಿನಗಳಲ್ಲಿ ಎಷ್ಟೋ ಹುಡುಗರು ಸ್ಕೂಲಿಗೆ ಬರದೆ ಅವರ ವಿದ್ಯೆಗೆ ಭಂ[illegible]

ಈ ಅರ್ಜಿಯಾಗಿದೆ. ಆದ್ದರಿಂದ ಸಂಪಾದಕರು ಈ ಅರ್ಜಿಯನ್ನು ಮನಃಪೂರ್ವಕವಾಗಿ ನಂಬುತ್ತೇನೆ

ಸಿ. ಕಾಮಯ್ಯ

ಕುಂದ ಭತ್ತದ ಸಂಘ

ಮಹನೀಯರೇ,

ಆದರೆ ಪಾಶ್ಚಾತ್ಯರಿಗೆ ಈ ವಿಷಯವು ತಿಳಿದಿಲ್ಲವೆ? ಷೇಕ್‌ಹ್ಯಾಂಡ ಕೊಡುವುದರಲ್ಲಿ ಮೇಲ್ಕಂಡ ಅಪಾಯಗಳಿಗೆ ನಿಜವಾಗಿ ಅವಕಾಶವಿದ್ದಲ್ಲಿ, ಈಗಲೂ ಅವರು ಅದೇ ಆಚಾರವನ್ನೇ ಅನುಸರಿಸುತ್ತಿರುವುದೇಕೆ? ಎಂದು ಕೆಲವರು ಪ್ರಶ್ನೆಮಾಡಬಹುದು. ಅವರಿಗೂ ಮೇಲ್ಕಂಡ ದೋಷಗಳುಂಟೆಂಬುದು ತಿಳಿಯದೇ ಇಲ್ಲ! ಹಾಗಿದ್ದರೂ ಅವರು ಪೂರ್ವಕಾಲದಿಂದ ಬಂದ ತಮ್ಮ ಆಚಾರಪದ್ಧತಿಯನ್ನು ಬಿಡಬಾರದೆಂಬುದಕ್ಕಾಗಿ ಅದರಲ್ಲಿರುವ ದೋಷವನ್ನೂ ಲಕ್ಷ್ಯಮಾಡದೆ ತಮ್ಮ ಹಿರಿಯರನ್ನು ಹಿಂಬಾಲಿಸುತ್ತಿರುವರು. ನಮ್ಮ ನಡತೆಯಾದರೋ ಇದಕ್ಕೆ ಕೇವಲವಿರುದ್ಧವಾಗಿದೆ. ಗುಣದೋಷವಿಚಾರಮಾಡದೆ ಇತರರನ್ನು ಅನುಕರಿಸುವುದರಲ್ಲಿಯೇ ನಮ್ಮ ತರುಣರಿಗೆ ಅಭಿರುಚಿ ಹೆಚ್ಚೆಂದು ತೋರುತ್ತಿದೆ. ಹೀಗಿಲ್ಲದೆ, ಆಚಾರಭೇದಗಳಲ್ಲಿ ಗುಣದೋಷತಾರತಮ್ಯವನ್ನು ವಿಮರ್ಶಿಸಿ, ಉತ್ತಮವೆಂದು ತೋರಿದ ಮಾರ್ಗವನ್ನು ಅನುಸರಿಸುವುದು ಎಂದಿಗೂ ಕ್ಷೇಮಕರವು.

[ಆರೋಗ್ಯಚಂದ್ರಿಕೆ.]

ಶಿಶುಗಳ ಪ್ರದರ್ಶನದ ಕಾರಣ.

ಭರತಖಂಡದಲ್ಲಿ ಲೇಡಿ ರೀಡಿಂಗ್‌ರವರಿಂದ ಏರ್ಪಡಿಸಲ್ಪಟ್ಟ ಈ ಪ್ರದರ್ಶನದ ಉದ್ದೇಶವೇನಿರಬಹುದೆಂದು ನಾನು ನಿಮಗೆ ತಿಳಿಯಪಡಿಸಲು ಈ ಪತ್ರಮೂಲಕ ಅನುಕೂಲಗೊಡಲು ಕೋರುವವನಾಗಿರುತ್ತೇನೆ.

ಭರತಖಂಡದಲ್ಲಿ ಶಿಶುಗಳ ಮರಣಸಂಖ್ಯೆಯು ದೇಶೀಯ ಪ್ರೌಢರ ಮರಣಸಂಖ್ಯೆಗಿಂತ ಅತಿ ಹೆಚ್ಚಾಗಿರುವುದಲ್ಲದೆ, ಇಂಗ್ಲೇಡಿನಲ್ಲಿನ ಶಿಶುಮರಣಕಿಂತ ಮೂರರಷ್ಟು ಹೆಚ್ಚಾಗಿರುವುದು ತಿಳಿದಿರಬಹುದು. ಭರತಖಂಡದಲ್ಲಿ ವರುಷಗಳಲ್ಲಿ ಒಂದು ವರುಷಕಿಂತ ಕಡಿಮೆ ವಯಸ್ಸಿನ ೨೦ ಲಕ್ಷ ಮಕ್ಕಳು ಹುಟ್ಟಿ ಸಾಯುವುವು. ಇವಲ್ಲದೆ ಎಷ್ಟೋ ಮಕ್ಕಳು ಹುಟ್ಟಿದೊಡನೆ ಅಥವಾ ತಾಯಿಯ ಗರ್ಭದಲ್ಲಿಯೇ ಸಾಯುವುವು. ಈ ಲೆಖ್ಖವೆಲ್ಲಾ ತೆಗೆದುಕೊಂಡರೆ ಒಟ್ಟು ವರುಷಕ್ಕೆ ೩೦ ಲಕ್ಷಕ್ಕೆ ಕಡಿಮೆ ಇಲ್ಲದೆ ಮಕ್ಕಳು ಸಾಯುವವೆಂದು ನಂಬಬಹುದು.

ಇದರಿಂದ ಕುಟುಂಬಗಳಿಗೆ ಉಂಟಾಗುವ ಹಾನಿಯನ್ನು ವಿವರಿಸಬೇಕಾಗಿಲ್ಲ. ಇಡೀ ಭರತಖಂಡಕ್ಕೆ ಎಷ್ಟು ನಷ್ಟವಾಗುವುದೆಂಬುದನ್ನು ಆಲೋಚಿಸಿ! ಕಸುಬು, ವ್ಯವಸಾಯ, ಕೈಗಾರಿಕೆ ಸರ್ಕಾರದ ವಿಷಯಗಳಲ್ಲಿ ಅಭಿವೃದ್ಧಿಗೆ ಬರಬೇಕಾದರೆ ಹುಟ್ಟಿದ ಮಕ್ಕಳೆಲ್ಲಾ ಬದುಕಿ ದೃಢಕಾಯರಾಗುವುದು ಅತ್ಯಾವಶ್ಯಕವಾಗಿದೆ. ಹೀಗೆ ಅತಿ ಹೆಚ್ಚಾದ ಈ ಮಕ್ಕಳ ಮರಣಕ್ಕೆ ಕಾರಣವೇನಿರಬಹುದು? ಹೀನಸತ್ವವೇ ಅಥವಾ ರೋಗವೇ? ಎರಡು ಕಾರಣಗಳಾಗಿರಬಹುದು. ಮಕ್ಕಳು ಚಿಕ್ಕಂದಿನಲ್ಲಿಯೇ ಭೇದಿ, ಜ್ವರ, ಅಮಶಂಕೆ ಮುಂತಾದ ರೋಗಗಳಿಗೊಳಗಾಗಿ ವಿಶೇಷವಾಗಿ ಅವುಗಳ ಬೆಳವಣಿಗೆಯೇ ಕಡಿಮೆಯಾಗುವುದು. ಪ್ಲೇಗ್, ಸಿಡುಬು ಮುಂತಾದ ಮಾರಿರೋಗಗಳು ತಗಲಿ ಬದುಕಿದರೂ ಜೀವಮಾನವೆಲ್ಲಾ ನಿಶ್ಶಕ್ತಿಯುಳ್ಳವುಗಳಾಗುವುವು. ಆದ್ದರಿಂದ ಭರತಖಂಡದ ಪ್ರತಿಯೊಬ್ಬನೂ ಈ ದೇಶದ ಮಕ್ಕಳು ಆರೋಗ್ಯವಾಗಿಯೂ ದೃಢಕಾಯರಾಗಿಯೂ ಬೆಳೆಯುವಂತೆ ಮಾಡಲು ಪ್ರಯತ್ನಿಸಿದರೆ ಅವನು ಒಳ್ಳೇ ದೇಶಸೇವೆಯನ್ನು ಮಾಡಿದಂತಾಗುವುದು.

ಇಷ್ಟು ಶಿಶುಮರಣಗಳ ಕಾರಣಗಳೇನಿರಬಹುದೆಂದು ಇದುವರೆಗೆ ಚೆನ್ನಾಗಿ ವಿಚಾರಿಸಿರುವಂತೆ ಕಾಣುವುದಿಲ್ಲ. ಈಗಲಾದರೂ ಮಕ್ಕಳ ಸುಖವರ್ಧಕ ಸಂಘದವರು ಪ್ರಯತ್ನಿಸಿ ಇನ್ನು ಮುಂದೆ ಈ ಕಾರಣಗಳನ್ನು ವಿವರವಾಗಿ ತಿಳಿಯಲು ಯತ್ನಿಸುವರೆಂದು ನಾನು ಕೋರುತ್ತೇನೆ. ಮಕ್ಕಳು, ಹೆಚ್ಚಾಗಿ ಹುಟ್ಟಿದ ಹತ್ತು ದಿನಗಳೊಳಗೆ ಅಥವಾ ಒಂದು ತಿಂಗಳೊಳಗೆ ಸಾಯುವುದು ನಮಗೆ ಚೆನ್ನಾಗಿ ತಿಳಿದುಬಂದಿದೆ. ಈ ಮರಣಗಳಿಗೆ ಮೂರ್ಖಸೂಲಗಿತ್ತಿಯರು ಕಾರಣರೇ—ಹೌದಲ್ಲ! ಅನೇಕವೇಳೆ ಇಂಥಾ ಸೂಲಗಿತ್ತಿಯರು ಮರಟುತನದಿಂದ ಮಕ್ಕಳು ಹುಟ್ಟುವಾಗ ತಾಯಿಗೆ ಇಲ್ಲದ ಸಂಕಟವನ್ನುಂಟುಮಾಡಿ ಆಕೆಯು ತನ್ನ ಹುಟ್ಟಿದ ಮಗುವಿಗೆ ಆಹಾರ ಕೊಡಲು ಸಹ ನಿಶ್ಶಕ್ತಳಾಗುವಂತೆ ಮಾಡಿಬಿಡುತ್ತಾರೆ. ಇಂಥ ಸಂದರ್ಭಗಳಲ್ಲಿ ತಾಯಿಯು [illegible] ಮಗುವಿಗೆ ಸ್ವಭಾವಿಕವಾದ ತಾಯಿಯ ಹಾಲಿಲ್ಲದೆ ಕೈಹಾಲುಕೊಟ್ಟು ಸಾಕಬೇಕಾಗುವುದು. ಅಲ್ಲದೆ ಹೀಗೆ ಕೈಹಾಲುಕೊಟ್ಟು ಸಾಕುವ ವಿಧಾನಗಳೂ ತಿಳಿಯದೆ ಮಕ್ಕಳು ನರಳುವುವು.

ಮಗುವಿಗೂ ಬಾಣಂತಿಗೂ ಶೀತವಾಗುವುದೆಂಬ ಭೀತಿಯಿಂದ ಅವರನ್ನು ಗಾಳಿಬೆಳಕಿಲ್ಲದ ಕೋಣೆಯಲ್ಲಿ ಸೇರಿಸುವುದೂ, ಮಗುವಿಗೆ ತಕ್ಕ ಬೆಚ್ಚಗೂ ಹಗುರವಾಗಿಯೂ ಇರುವ ಬಟ್ಟೆಗಳನ್ನು ಹಾಕದಿರುವುದೂ, ಸೊಳ್ಳೆನೊಣಗಳು ಮುತ್ತಿ ಅಂಟುರೋಗಗಳನ್ನು ತಾರದಂತೆ ಮಗುವನ್ನು ಸರಿಯಾಗಿ ಮರೆಮಾಡದಿರುವುದೂ ನಮ್ಮಲ್ಲಿ ವಾಡಿಕೆ. ಹೀಗೆಯೇ ಇನ್ನೂ ಅನೇಕ ಕಾರಣಗಳನ್ನು ಹೇಳಬಹುದು. ಆದರೆ ಒಂದು ವಿಷಯವನ್ನು ಮಾತ್ರ ನೆನಪಿನಲ್ಲಿಡಿರಿ ಅದೇನೆಂದರೆ—ಆರೋಗ್ಯವುಳ್ಳ ತಂದೆತಾಯಿಗಳ ಮಕ್ಕಳು ಆರೋಗ್ಯವುಳ್ಳವುಗಳಾಗಿಯೇ ಇರಬೇಕಾದರೆ ಮಗುವಿನ ತಾಯಿಗೆ ಗರ್ಭಬಂದ ಕಾಲದಿಂದ ಮಗು ಹುಟ್ಟುವವರೆಗೂ ಸಹ ಯೋಗ್ಯರಾದ ವೈದ್ಯರಸಹಾಯವು ದೊರಕುತ್ತಿರಬೇಕು.

ಈ ಸಣ್ಣ ಲೇಖನದಲ್ಲಿ ಶಿಶುಮರಣದ ಎಲ್ಲಾ ಕಾರಣಗಳನ್ನೂ ವಿವರಿಸಲು ಅಸಾಧ್ಯ. ಆದರೆ ಈ ಶಿಶುಸಂರಕ್ಷಣದ ಉದ್ದೇಶವನ್ನೂ ಅದರ ಪ್ರಯೋಜನವನ್ನೂ ನಿಮಗೆ ತಿಳಿಯಪಡಿಸುವುದೇ ನನ್ನ ಸಂಕಲ್ಪ. ಈ ವಿಷಯದಲ್ಲಿ ಎಲ್ಲಾ ಜಾತಿಯ ಮತದ ಹೆಂಗಸರೂ ಗಂಡಸರೂ ಮನಪೂರ್ವಕ ಆಲೋಚಿಸಿ ಈ ಪ್ರಯೋಜನವನ್ನು ವಿಚಾರಣೆ ಮಾಡಲು ಯತ್ನಿಸಬೇಕು. ಪ್ರತಿಯೊಬ್ಬ ಗಂಡಸೂ ಮಕ್ಕಳ ಸುಖದ ವಿಷಯದಲ್ಲಿ ಪರದೇಶಗಳಲ್ಲಿ ಯಾವ್ಯಾವ ಏರ್ಪಾಡುಗಳನ್ನು ಮಾಡಿರುವರು, ಸರ್ಕಾರದವರು ಯಾವ್ಯಾವ ಅನುಕೂಲತೆಗಳನ್ನು ಒದಗಿಸಿರುವರು, ತಾನು ಮಕ್ಕಳ ತಂದೆಯಾಗಿರುವುದರಿಂದ ಯಾವ ಕೆಲಸಗಳನ್ನು ಹೇಗೆ ಮಾಡಬೇಕೆಂಬ ವಿಷಯಗಳನ್ನು ತಿಳಿದುಕೊಳ್ಳಬೇಕು. ಹೆಂಗಸರು ಇದೇ ವಿಷಯದಲ್ಲಿಯೂ ಮಕ್ಕಳನ್ನು ಸಾಕುವ ವಿಧಾನದಲ್ಲಿಯೂ ಯಾ

...ಯಾವ ಸಂಗತಿಗಳನ್ನು ತಿಳಿದಿರಬೇಕೆಂಬುದನ್ನು ಮನಸ್ಸಿಗೆ ತಂದುಕೊಳ್ಳಬೇಕು ತಿಳಿಯದ ಮೂಢಜನಗಳಿಗೆ ಅವರ ಮನವರಿತು ಬೋಧಿಸಬೇಕು ಚಿಕ್ಕ ಹುಡುಗ ಹುಡುಗಿಯರೂ ಸಹ ತಮ್ಮ ಆರೋಗ್ಯವನ್ನು ಕಾಪಾಡಿಟ್ಟುಕೊಳ್ಳಲು ಪ್ರಯತ್ನಿಸಬೇಕೆಂಬ ವಿಷಯಗಳ ತಿಳಿಯಲು ಅವಕಾಶವಿರಬೇಕು ಆರೋಗ್ಯವೇ ಸರ್ವಸ್ವವು "ಶರೀರಮಾದ್ಯಂ ಖಲುಧರ್ಮಸಾಧನಂ" ಅಂದರೆ ಆರೋಗ್ಯವಿದ್ದವನಿಗೆ ಸರ್ವ ಸಂಪತ್ತೂ ದಗುವುದೆಂಬ ಸಂಗತಿ ಮಕ್ಕಳು ತಿಳಿಯಬೇಕಾದ ಮೊದಲನೆಯ ಸಂಗತಿಯಾಗಿರಬೇಕು ಅವರಿಗೆ ಈ ಸಂಗತಿಗಳು ಸರಿಯಾಗಿ ತಿಳಿದಿದ್ದರೆ ನಾವು ಮಾಡಬೇಕಾದ ಕೆಲಸಗಳ ಪೂರ್ಣಫಲವು ನಮಗೆ ಬಂದಂತಾಗುವುದು.

ಆದ್ದುದರಿಂದ ನಮ್ಮ ಮಕ್ಕಳ ಆರೋಗ್ಯದ ವಿಷಯ...ನ ಕಲಿಸಿಕೊಟ್ಟು ಅದರ ಈಗಿನಸ್ಥಿತಿ, ಅದರಲ್ಲಿರುವ ತತ್ವಗಳನ್ನು ಪರಿಪಡಿಸುವುದು, ಬೇರೆ ದೇಶದವರು ವಿಷಯದಲ್ಲಿ ಮಾಡುವ ಏರ್ಪಾಡುಗಳನ್ನು ತಿಳಿಯುವ ...ನಸಭೆವುಗಳಲ್ಲಿ ನಮ್ಮ ದೇಶಕ್ಕೆ ಮತ್ತು ನಮ್ಮ ಸ್ಥಿ... ನ್ಯಾಯವಾಗಿರಬೇಕಾದ ಒಳ್ಳೇ ಸಂಗತಿಗಳನ್ನು ಸಂಗ್ರಹಿಸಿ ಅವುಗಳನ್ನು ಉಪಯೋಗಿಸುವುದು ಈ ಮುಂತಾದ ವಿಷಯಗಳಲ್ಲಿ ಆಲೋಚನಾಪರರಾಗಬೇಕು ಯಾರು ಎಷ್ಟು ಹೇಳಿದರೂ ನಾವು ಸರಿಯಾಗಿ ನಡೆಕೊಂಡರಲ್ಲವೇ ನಮಗೆ ಸುಖಬಂದಿತು ಹೇಳಿದ್ದು ಕೇಳಿದರೇ ಸಾಕೇ—

ತಿಳಿಯದ್ದು ಕೇಳತಿಳಿ ಕಲಿಯದ್ದು ಮಾಡಿತಿಳಿ
ನೋಡದ್ದು ನೋಡಿತಿಳಿ ಮಗುವನ್ನು ಸಾಕಿತಿಳಿ

ಕಮಿಟಿಮೆಂಬರ

ಹಿಂದೂಸ್ಥಾನದಲ್ಲಿಯ ಗ್ರಾಮಾಂತರಗಳ ಜೀವನಾಕ್ರಮ.

(ಬರೆದುಬಂದದ್ದು)

ಭರತಖಂಡದಲ್ಲಿ 100 ಕ್ಕೆ 90 ಜನರು ಗ್ರಾಮನಿವಾಸಿಗಳೆಂಬುದು ಅನೇಕರಿಗೆ ತಿಳಿಯದ ಸಂಗತಿಯಲ್ಲ ಹೀಗಿರುವಾಗ ಈ ಗ್ರಾಮಗಳು ಇಂಗ್ಲಿಷರ ಆಳಿಕೆಗೆ ಮೊದಲು ಯಾವಸ್ಥಿತಿಯಲ್ಲಿದ್ದುವೆಂದೂ, ಆ ಪರಿಯಂತ ಹೇಗಿವೆಯೆಂದೂ, ಅಥವ ಯಾವ ಮುಖ್ಯೋಪಕರಣಗಳು ಗ್ರಾಮಸ್ಥರ ವ... ಗ್ರಾಮದ ಸ್ಥಿತಿಗಳನ್ನು ಅಭಿವೃದ್ಧಿಗೊಳಿಸುತ್ತಿವೆಯೆಂಬುದ ಪ್ರತಿಯೊಬ್ಬ ಗ್ರಾಮಸ್ಥನು ತಿಳಿದುಕೊಳ್ಳಬೇಕಾದ ವಿಷ[illegible]ದೆ ಹೀಗೆ ವಿಮರ್ಶಿಸಬೇಕಾದಲ್ಲಿ ಪೂರ್ವದಲ್ಲಿ [illegible]ಗಳಲ್ಲಿಯ ಜನರು ತಮ್ಮ ಕಾರ್ಯಗಳನ್ನು ಯಾವ [illegible]ಯಿಂದ ನಡಿಸುತ್ತಿದ್ದರೆಂದೂ ಅಂತಃಕಲಹಗಳನ್ನು ಹೇಗೆ [illegible]ರ್ಣಯಿಸುತ್ತಿದ್ದರೆಂಬ ಸಂಗತಿಗಳನ್ನು ಮೊದಲು ಗಮನಿಸಬೇಕು

ಪೂರ್ವಕಾಲದಲ್ಲಿ ಎಂದರೆ ಬ್ರಿಟಿಷರು ಇಂಡಿಯಾದ ರಾಜ್ಯಸ್ಥಾಪನೆಮಾಡಲು ಬರುವ ಮೊದಲು ಗ್ರಾಮನಿವಾಸಿಗಳು ಸ್ವತಂತ್ರರಾಗಿದ್ದು ಪ್ರತಿಯೊಂದು ಗ್ರಾಮವೂ ಸಾಧಾರಣವಾಗಿ ಗ್ರಾಮದಲ್ಲಿಯ ಹಿರಿಯವರಿಂದ ಆಳಲ್ಪಡುತ್ತಿತ್ತು ಸಾಧಾರಣವಾಗಿ ಅಂಥಾ ಹಿರಿಯವರನ್ನು ಜನರೇ ಚುನಾಯಿಸಿ ತಮ್ಮ ಕಾರ್ಯಭಾರವನ್ನು ಅವರಿಗೆ ವಹಿಸಿ ಅವರ ಆಜ್ಞೆಪ್ರಕಾರ ಗ್ರಾಮದಭ್ಯುದಯಕ್ಕೆ ಸಂಬಂಧಪಟ್ಟ ಕಾರ್ಯಗಳೆಲ್ಲವನ್ನೂ ನಡೆಸಿಕೊಂಡು ಹೋಗುತ್ತಿದ್ದರು ಈ ತೆರದಲ್ಲಿ ನಡೆಸಿಕೊಂಡು ಹೋಗುತ್ತಿದ್ದರೆಂಬುದಕ್ಕೆ ದೃಷ್ಟಾಂತವಾಗಿ ಈಗಲೂ ಕೊಡಗುದೇಶದಲ್ಲಿ ಊರುತಕ್ಕ, ನಾಡುತಕ್ಕ, ಎಂಬ ಹೆಸರುಗಳು ಇನ್ನೂ ಉಳಿದಿವೆ ಈ ಪ್ರಕಾರವಾಗಿ ಗ್ರಾಮಸ್ಥರಿಂದಲೇ ಚುನಾಯಿಸಲ್ಪಟ್ಟ ಮುಖ್ಯಸ್ಥರು ದೊಡ್ಡ ಸಭೆಗಳನ್ನು ಸೇರಿ ಅಲ್ಲಿ ಸಾಮಾಜಿಕ, ಸಾಂಪತ್ತಿಕ, ಧಾರ್ಮಿಕ ವಿಷಯಗಳನ್ನು ಚರ್ಚಿಸಿ ಗ್ರಾಮಸ್ಥರಿಗೆ ಹಿತದಾಯಕವಾದ ಠರಾವುಗಳನ್ನು ಮಂಜೂರುಮಾಡಿಯೂ, ನಿಯಮಗಳನ್ನು ಏರ್ಪಡಿಸಿಯೂ, ಅವುಗಳನ್ನು ಅನುಸರಿಸಿ ನಡೆಯುತ್ತಿದ್ದರು

ಆ ಸಮಯದಲ್ಲಿ ಗ್ರಾಮಸ್ಥರೆಲ್ಲರೂ ಉತ್ಸಾಹದಿಂದ ತಮ್ಮ ಹಿತಚಿಂತಕರಾದ ಮುಖ್ಯಸ್ಥರಿಗೆ ಬೆಂಬಲವಾಗಿದ್ದು ಅವರು ಹೇಳಿದಪ್ರಕಾರ ಅತಿವಿನಯದಿಂದಿರುತ್ತಿದ್ದರು ಇದೇ ಅಲ್ಲದೆ ಗ್ರಾಮದಲ್ಲಿ ಎಲ್ಲರಿಗೂ ಉಪಯೋಗಕರವಾದ ಮತ್ತು ಆವಶ್ಯಕರವಾದ ಕೈಗಾರಿಕೆಗಳನ್ನು ಮಾಡುತ್ತಿದ್ದವರಿಗೆ ಪ್ರೋತ್ಸಾಹ ಕೊಡಲು, ಗ್ರಾಮಸ್ಥರು ತಮ್ಮ ಭೂಮಿಯ ಕೊಂಚಭಾಗವನ್ನು ಅವರಿಗೆ ಕೊಟ್ಟು ಅವರನ್ನು ಅಲ್ಲಿಯೇ ನೆಲೆಗೊಳಿಸಿ, ಅವರ ಕೈಗಾರಿಕೆಗಳು ಅಭಿವೃದ್ಧಿಹೊಂದುವಂತೆಯೂ ಚಿರಕಾಲವೂ ಗ್ರಾಮಸ್ಥರು ಅನುಕೂಲದಿಂದ ಇರುವಂತೆಯೂ, ತಮ್ಮ ಸೌಕರ್ಯಗಳನ್ನು ಕಷ್ಟವಿಲ್ಲದೆಯೂ, ಕ್ಲಿಪ್ತಕಾಲದಲ್ಲಿಯೂ ಪಡೆಯುವುದಕ್ಕೋಸ್ಕರ ಕೈಗಾರಿಕೆಯವರಿಗೆ ಬಹಳ ಒತ್ತಾಸೆ ಕೊಡುತ್ತಿದ್ದರು

ಹೀಗೆ ಸಹಾಯವನ್ನು ಹೊಂದಿದ ಕೈಗಾರಿಕೆಯವರು ಗ್ರಾಮಸ್ಥರಿಗೆ ಆವಶ್ಯವಾದ ಮರದ ಸಾಮಾನುಗಳನ್ನೂ, ಕಬ್ಬಿಣ ಸಾಮಾನುಗಳನ್ನೂ, ಆಭರಣಗಳನ್ನೂ ಮಾಡಿಕೊಂಡು ತಮ್ಮ ಕಾಲಕ್ಷೇಪ ಮಾಡುತ್ತಿದ್ದರು ಈ ರೀತಿಯಲ್ಲಿ ರೈತರಿಗೆ ಸಾಮಗ್ರಿಗಳು ಗ್ರಾಮದಲ್ಲಿಯೇ ಒದಗುತ್ತಿದ್ದುದರಿಂದ ಪಟ್ಟಣಕ್ಕೆ ಹೋಗುವ ಆವಶ್ಯವು ಬಹಳವಾಗಿರಲಿಲ್ಲ ಅಲ್ಲದೆ ಪೂರ್ವದಲ್ಲಿ ರೈತರಿಗೆ ವ್ಯವಸಾಯಕ್ಕೆ ಬೇಕಾದ ಸಾಮಗ್ರಿಗಳನ್ನೂ, ಇತರ ಉಪಕರಣಗಳನ್ನೂ ಮಾಡುವವರು ಗ್ರಾಮದಲ್ಲೇ ಇದ್ದರು ಎಂಬುವುದಕ್ಕೆ ಕೊಡಗು ದೇಶದಲ್ಲಿ ಗ್ರಾಮಗಳಲ್ಲಿ ಉಳಿದಿರುವ ಕೊಲ್ಲ ಏರಿ, ಮೊದಲ ದವು ದೃಷ್ಟಾಂತವೇ ಸಾಕು

ಗ್ರಾಮದಲ್ಲಿ ಈ ಪ್ರಕಾರವಾಗಿ ಸಾಮಾನುಗಳು ಒದಗುತ್ತಿದ್ದುದರಿಂದಲೂ ಜನರು ಸಹಕಾರಿಗಳಾಗಿದ್ದುದರಿಂದಲೂ, ಬಡವನು ಕೂಡ ದಾರಿದ್ರ್ಯವನ್ನು ಹೆಚ್ಚುಗಣಿಸದೆ ತನ್ನ ವ್ಯವಸಾಯವನ್ನು ಚೆನ್ನಾಗಿಮಾಡಿ ಗ್ರಾಮದ ಅಭಿವೃದ್ಧಿಗೋಸ್ಕರ ತನ್ನ ಕಾರ್ಯವನ್ನು ಮನೋಲ್ಲಾಸದಿಂದ ಮಾಡುತ್ತಿದ್ದನು ಈ ಪ್ರಕಾರವಾದ ಅನುಕೂಲಗಳ ಸಹಾಯದಿಂದಲೇ ಈ ಚಿಕ್ಕ ಕೊಡಗುದೇಶದಲ್ಲಿಯೂ ಸಹ ಈಗಲೂ ಆಧುನಿಕ ಜನಾಂಗದವರಿಗೆ ಅದ್ಭುತವನ್ನುಂಟುಮಾಡುತ್ತಿರುವ ಅರಮನೆಯೂ ದೇವಸ್ಥಾನಗಳೂ ಪಾಳುಬಿದ್ದ (ಕಲವೃಂಡಿಗಳಲ್ಲಿ) ವಾದರೂ ಕೂಡ ನಿನ್ನೆತಾನೇ ಕಟ್ಟಿದಂತೆ ಭದ್ರವಾಗಿ ನಿಂತಿರುವುವು ಪೂರ್ವಕಾಲದ ಗ್ರಾಮನಿವಾಸಿಗಳು ಈಗಿನವರಿಗಿಂತ ಎಷ್ಟೋ ಸುಖಿಗಳಾಗಿದ್ದರೆಂಬುದಕ್ಕೆ ಮೇಲಿನ ಕೆಲವು ಉದಾಹರಣೆಗಳೇ ಸಾಕು ಅಲ್ಲದೆ ಈ ಸಂಗತಿಗಳು ಅನೇಕರಿಗೆ ತಿಳಿದಿರುವಕಾರಣ ವಿಶದವಾಗಿ ಒರೆಯುವ ಆವಶ್ಯವಿಲ್ಲ

ಸಹಕಾರದಮೇಲೆ ಅಸ್ತಿಭಾರವನ್ನು ಕಟ್ಟಿದ್ದರಿಂದ ಗ್ರಾಮನಿವಾಸಿಗಳು ಈಗ ಬ್ರಿಟಿಷರ ಕೈಯ್ಯಲ್ಲಾಗುವುದಿಲ್ಲವೆಂದೂ ದ್ರವ್ಯವು ಬಹು ವ್ಯಯಮಾಡಬೇಕೆಂದೂ ಹೇಳುವ ಕಾರ್ಯಗಳನ್ನೇ ಸುಲಭವಾಗಿ ಸಾಧಿಸುತ್ತಿದ್ದರು ಇದೆಲ್ಲವೂ ಗ್ರಾಮವು ಐಶ್ವರ್ಯದಿಂದಿದ್ದುದರಿಂದ ಸಾಧ್ಯವಾಯಿತೇ ಹೊರತು ಬೇರೆಯಲ್ಲ ಅಲ್ಲದೇ ಐಶ್ವರ್ಯವು ತುಂಬಿದ್ದುದರಿಂದ ಕೊಳ್ಳೆಹೊಡೆಯಲು ನಾದಿರಶಾಹ ತೈಮೂರ ಲೇನ್ ಇವರು ಜಗಿದಾಗ್ಯೂ ದ್ರವ್ಯವನ್ನು ದೋಚಿಕೊಂಡು ಹೋಗುತ್ತಿದ್ದರೂ ಸಹಕಾರದ ಅಸ್ತಿಭಾರವು ಆ ತೆರದಲ್ಲಿದ್ದುದರಿಂದ ಪರದೇಶಿಯರ ಹಾವಳಿಯು ಬೆಳೆಗೆ ಬೀಳುವ ಹುಳಗಳ (Locusts) ಹಾವಳಿಯಂತೆ ಆಯಾಯ ಸಮಯದಲ್ಲಿ ಒಂದು ನಾಶವಾಡುತ್ತಿತ್ತೇ ಹೊರತು, ನಿರಂತರವೂ ಬಡತನದಲ್ಲಿ ನರಳುವಂತೆ ಸಹಕಾರವನ್ನಾಗಲಿ ಐಶ್ವರ್ಯವನ್ನಾಗಲೀ ಅಸ್ತಿಭಾರಸಮೇತ ನಾಶಮಾಡಲಿಕ್ಕಾಗಲಿಲ್ಲ ಪೂರ್ವಕಾಲದಿಂದಲೇ ಈ ರೀತಿಯಾಗಿ ಪರದೇಶಿಯರು ಲಕ್ಷೋಪಲಕ್ಷ ದ್ರವ್ಯವನ್ನು ಒಯ್ಯುತ್ತಿದ್ದರೂ ಭರತಖಂಡವು ಇಂದೂ ಕೂಡಾ ಧಾರಾಳವಾಗಿ ಪರದೇಶಿಯರಿಗೆ ದ್ರವ್ಯಸಹಾಯ ಮಾಡುವ ಸ್ಥಿತಿಯಲ್ಲಿದೆಯೆಂಬುದು ಯುದ್ಧಕಾಲದಲ್ಲಿ ಇಂಡಿಯಾದೇಶವು ಬ್ರಿಟಿಷರಿಗೆ ಎಷ್ಟು ದ್ರವ್ಯಸಹಾಯ ಮಾಡಿದೆಯೆಂಬುದರಿಂದಲೂ ಜಪಾನಿಯರ ಈಗತಾನೇ ಜ್ವಾಲಾಮುಖಿಯ ದೆಸೆಯಿಂದ ಉಂಟಾದ ಕಷ್ಟದಲ್ಲಿ ದ್ರವ್ಯಸಹಾಯ ಮಾಡಿದುದರಿಂದಲೂ ತಿಳಿಯಬರುತ್ತದೆ ಇದರಿಂದ ಭರತಖಂಡವು ಇನ್ನೂ ಬಹಳ ಐಶ್ವರ್ಯದಿಂದಲೇ ತುಂಬಿ ತುಳುಕುತ್ತಿದೆ ಎಂದು ಭಾವಿಸಬೇಕೆಂದಲ್ಲ ಆದರೆ ಅದು ಯಾವಸ್ಥಿತಿಯಲ್ಲಿದೆಯೆಂಬ ವಿಷಯವನ್ನು ಸದ್ಯಕ್ಕೆ ಒತ್ತಡವೆ ಇಟ್ಟು ಮುಂದರಿಸಬೇಕಾಗಿದೆ

ಇಷ್ಟೂ ಗ್ರಾಮಸ್ಥರು ಭ್ರಾತೃವಾತ್ಸಲ್ಯದಿಂದ ಒಗ್ಗಟ್ಟಿನಿಂದ ಕೂಡಿ, ಸದಾ ಸುಖಿಗಳಾಗಿ ಈಗಿನಂತ (Struggle for existance) ಕಾಲಕ್ಷೇಪದ ಹೊಡೆದಾಟವೇನೆಂಬುದನ್ನು ತಿಳಿಯದವರಾಗಿ ಅಂತಃಕಲಹಗಳನ್ನು ಗ್ರಾಮದ ಮುಖ್ಯಸ್ಥರ ಪಂಚಾಯಿತ ಮೂಲಕ ತೀರಿಸಿಕೊಂಡು (ಕೋರ್ಟಿಗೆ ಹೋಗದೆ) ಮೈತ್ರಿಯಿಂದ ಗ್ರಾಮದ ಅಭಿವೃದ್ಧಿಯೇ ತಮ್ಮ ಅಭಿವೃದ್ಧಿಯೆಂದು ಯೋಚಿಸಿ ಸ್ವಾರ್ಥತ್ಯಾಗಿಗಳಾಗಿ ಕೆಲಸಮಾಡಿ, ಧೃಢಾಂಗಕಾಯದಿಂದ ಕೂಡಿ ಐಶ್ವರ್ಯವಂತರಾಗಿ ಜೀವಿಸುತ್ತಿದ್ದರು

ಆದರೆ ಬ್ರಿಟಿಷರು ಇಂಡಿಯಾವಿಗೆ ಬಂದವೇಳೆ ಈ ಗ್ರಾಮ ನಿವಾಸಿಗಳ ಜೀವನಕ್ರಮವು ಹೇಗೆ ಬದಲಾಯಿತೆಂದು ಸ್ಥಿರವಾಗಿ ಸ್ಥಾಪಿತವಾದ ಸಹಕಾರವು ಹೇಗೆ ಮೂಲೆಗೊತ್ತಿತೆಂದೂ, ಅಲ್ಲದೆ ಗ್ರಾಮನಿವಾಸಿಗಳು ಬಹಳ ಬಡತನದಲ್ಲಿದ್ದಾರೆಂದೂ ಪರೀಕ್ಷಿಸಿದರೆ ಗ್ರಾಮನಿವಾಸಿಗಳು ಪೂರ್ವಿಕರ ಕಟ್ಟುಕಟ್ಟಳೆಗಳೆಲ್ಲವನ್ನೂ ತೊರೆದು ಪಾಶ್ಚಿಮಾತ್ಯರ ನವನಾಗರೀಕತೆಯನ್ನು ಹಿಂಬಾಲಿಸುವವರಾಗಿ ಪರದೇಶಿಯ ಸ್ವಭಾವವನ್ನು ತಿಳಿಯಲಾರದೆ ಸ್ವದೇಶಭಾವಗಳನ್ನು ಮರೆತು ಸ್ವಾರ್ಥಪರರಾಗಿಯೂ ಸರಕಾರದ ಕಟ್ಟಳೆಗಳನ್ನನುಸರಿಸಿ ಕಲಭಾರದ ಕಂದಾಯಗಳನ್ನು ತೆತ್ತು ಬಡವರಾಗಿ ಸಂಕಟಪಡುವುದನ್ನು ಕಾಣುತ್ತದೆ ಬ್ರಿಟಿಷರ ಕಾಲದಲ್ಲಿಯೂ ಕೂಡ ಈ ಹೀನಸ್ಥಿತಿಯು ಕಳೆದೋರಲು ಕಾರಣವೇನು! ಬ್ರಿಟಿಷರ ಆಳಿಕೆಯಲ್ಲಿ ಪ್ರಜೆಗಳ ಸೌಖ್ಯವೇ ರಾಜನ ಸುಖವೆಂಬ ತತ್ವವು ಬಹಿರಂಗವಾಗಿದ್ದರೂ ಕೂಡ, ಪ್ರಜೆಗಳಾಗಿರುವ ಗ್ರಾಮನಿವಾಸಿಗಳು ಯಾತಕ್ಕೆ ಈ ಸ್ಥಿತಿಯಲ್ಲಿದ್ದಾರೆ" ಪ್ರಜೆಗಳ ಸುಖವನ್ನೆ ಬ್ರಿಟಿಷರು ಬಯಸುವುದಾದರೆ ಗ್ರಾಮನಿವಾಸಿಗಳಲ್ಲಿ ಪೂರ್ವದ ಐಶ್ವರ್ಯವೂ ಅನ್ಯೋನ್ಯಭಾವವೂ ಸಹಾನುಭೂತಿಯೂ ಯಾತಕ್ಕಿಲ್ಲವೆಂಬ ವಿಷಯವನ್ನು ಪ್ರತಿಯೊಬ್ಬನೂ ಆಲೋಚಿಸಬೇಕಾಗಿದೆ ಮೇಲಿನ ವಿಷಯಗಳನ್ನು ಆಲೋಚಿಸಿನೋಡಿದರೆ ಗ್ರಾಮಸ್ಥರು ಪೂರ್ವದಂತಲ್ಲದೆ, ವಿಪರೀತಕಂದಾಯವನ್ನು ಸರಕಾರಕ್ಕೆ ತೆರುವುದನ್ನೂ, ಉಳಿದ ಹಣವು ಗ್ರಾಮದ ಬ್ಯಾಂಕವಾಲರ (Capitalists) ಕೈಸೇರುವುದನ್ನೂ ಕಾಣುತ್ತದೆ ಸಾಲದುದಕ್ಕೆ ಗ್ರಾಮಸ್ಥರು, ತಮ್ಮ ಕಲಹಗಳನ್ನು ಹಿಂದಿನಂತೆ ಪಂಚಾಯಿತಿ ಮೂಲಕ ತೀರಿಸಿಕೊಳ್ಳದೆ ಕೋರ್ಟು ಕಚ್ಚೇರಿಗಳಿಗೆ ಹೋಗಿ, ಅಪಾರವಾಗಿ ದ್ರವ್ಯ ವೆಚ್ಚಮಾಡಿ, ಕೊನೆಗೆ ನ್ಯಾಯವಾದ ತೀರ್ಪನ್ನೂ ಕೂಡ ಹೊಂದದೆ ಇರುವುದು ಕಾಣುತ್ತೆ, ಈ ಕಾರಣದಿಂದ ಅಂಥಾ ಕುಟುಂಬಗಳು ಸದಾ ದಾರಿದ್ರ್ಯದಲ್ಲೇ ಮುಳುಗಿದರೆ, ಇತರರಿಗೆ ಆಶ್ಚರ್ಯಕರವಾಗಲಾರದು ಇದನ್ನು ಬಿಟ್ಟು ಧಾರ್ಮಿಕ ಸ್ಥಿತಿಯನ್ನು ತೆಗೆದುಕೊಂಡರೆ, ಪೂರ್ವದಲ್ಲಿ ನಡೆಯುತ್ತಿದ್ದ ಹಬ್ಬಹುಣ್ಣಿಮೆಗಳು ಕ್ರಮಪ್ರಕಾರ ನಡೆಯದೆ, ಕೆಲವು ಸ್ಥಳಗಳಲ್ಲಿ ದೇವಾಲಯಗಳೇ ಕಾಡುಪಾಲಾಗಿವೆ ಪೂರ್ವದಲ್ಲಿಯೋ ಎಂದರೆ ಇಂಥಾ ದೇವಾಲಯಗಳಲ್ಲಿಯೂ, ಊರಿನಲ್ಲಿರುವ ಊರುಮಂದು ನಾಡುಮಂದು ಎಂಬ ಸ್ಥಳಗಳಲ್ಲಿಯೂ, ಗ್ರಾಮಸ್ಥರು ಪದೇಪದೇ ಸಭೆಸೇರಿ ಹಿತವಾದ ವಿಷಯಗಳನ್ನು ಚರ್ಚಿಸಿ ತೀರ್ಮಾನಿಸುತ್ತಿದ್ದರು

ಈ ಕಾಲದಲ್ಲಿ ಇಂಥಾ ಸ್ಥಳಗಳಲ್ಲಿ ಜನರನ್ನು ಕಾಣುವುದು ಕಡಿಮೆಯಾಗಿ ಇದರ ಬದಲಿಗೆ ಹೆಂಡದಂಗಡಿಗಳಲ್ಲಿಯೂ ಸಾರಾಯಿ ಅಂಗಡಿಗಳಲ್ಲಿಯೇ ಜನರ ಕೂಟವು ಹೆಚ್ಚಾಗಿ ಕಾಣುತ್ತದೆ ಇಷ್ಟೇ ಅಲ್ಲ ಈಗ ಗ್ರಾಮನಿವಾಸಿಗಳು ಹತ್ತಿರದ ಪಟ್ಟಣವನ್ನು ಪದೇಪದೇ ದರ್ಶಿಸಿ ಪೂರ್ವಕಾಲದ ಗ್ರಾಮನಿವಾಸಿಗಳು ಯಾವ ಸಾಮಗ್ರಿಗಳನ್ನು ಬೆಳಸಿ ಅಥವ ಗ್ರಾಮದಲ್ಲಿಯೇ ಒದಗಿಸಿಕೊಳ್ಳುತ್ತಿದ್ದರೋ ಅಂಥಾ ಸಾಮಾಗ್ರಿಗಳನ್ನೇ ಈಗಿನ ಗ್ರಾಮದ ಜನಾಂಗವು ಕ್ರಯಕೊಟ್ಟು ಕೊಂಡುಕೊಳ್ಳುತ್ತಾ ಇರುವರಲ್ಲದೆ, ರೈತರು ಪೇಟೆಯಿಂದ ಬದನೆಕಾಯಿ, ಬೆಳ್ಳರಿಕಾಯಿ ಹಸಿಮೆಣಸು, ಇಂಥಾವುಗಳನ್ನು ಕೂಡ ತೆಗೆದುಕೊಂಡು ಬರುವುದನ್ನು ನಾನೇ ಕಣ್ಣಾರೆನೋಡಿದ್ದೇನೆ ಈ ನಾಗರೀಕತೆಯ ಮಹಿಮೆಯು ಎಷ್ಟಿದೆಯೆಂದು ಯೋಚಿಸಿ, ಈ ಮತ್ತು ಈ ತೆರವಾದ ನಾಗರೀಕತೆಯು ಗ್ರಾಮ ನಿವಾಸಿಗಳನ್ನು ಅವರಿಸಿಕೊಂಡಿರುವುದು ಆಶ್ಚರ್ಯವಾಗಿಲ್ಲವಾದರೂ ಬಹಳ ಶೋಚನೀಯಕರ

ಈ ಸ್ಥಿತಿಯನ್ನು ಹೋಗಲಾಡಿಸಲು ಸಾಧ್ಯವಿಲ್ಲವೇ ಸಾಧ್ಯವಾದಲ್ಲಿ ಯಾವ ಮುಖ್ಯೋಪಕರಣಗಳು ಅಗತ್ಯವೆಂಬುದನ್ನು ಪ್ರತಿಯೊಬ್ಬ ಕೊಡಗನೂ ಅಲ್ಲ ಭಾರತೀಯನು ಆಲೋಚಿಸಿ ನಿರ್ಧರಿಸಬೇಕಾಗಿದೆ

ಈ ಲೇಖನವು ಕೊಡಗು ಪತ್ರಿಕೆಗೆ ಸಂದ ಕಾರಣ ಕೊಡಗಿನವರು ನಮ್ಮ ಗ್ರಾಮಗಳನ್ನು ಯಾವ ರೀತಿಯಿಂದ ಅಭಿವೃದ್ಧಿಪಡಿಸಲು ಅನುವಿದೆಯೆಂಬುದನ್ನೂ ಯಾವ ಅನುಕೂಲಗಳು ಅಗತ್ಯವೆಂಬುದನ್ನೂ ಬರೆದು ಬೇಕಾದಲ್ಲಿ ಸಹಕಾರದ ಒತ್ತಾಸೆಯನ್ನು ಕೇಳುವುದನ್ನೂ ಪತ್ರಿಕೆಯಲ್ಲಿ ಗಡಿಗಡಿ ಪ್ರಕಟಿಸಬೇಕಾಗಿ ವಿನಂತಿ

ಪತ್ರವ್ಯವಹಾರಗಳು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. [ಎಡಿಟರ್]

ಹೆಂಡತಿಸತ್ತು ಒಂದುವರೆತಿಂಗಳೊಳಗೆ ಮದುವೆ ಮಾಡಿದ್ದರ ಕುರಿತು ತಪ್ಪೆಂಬದಾಗಿ ಉಭಯಕುಟುಂಬದವರು ಕಾರ್ಯಕರ್ತರುಗಳಿಗೆ ತಪ್ಪುವಿಧಿಸಿದರೆಂಬ ವರ್ತಮಾನ ಪೇಪರಿಗೆ ಕೊಟ್ಟ ಕೇಳಿದವನೆಂಬವರ ಬಾತ್ಮಿ ಸುಳ್ಳೆಂದೂ ಅವರ ಬಾತ್ಮಿಯನ್ನು ತುಚ್ಛೀಕರಿಸುತ್ತೇನೆ ಎಂದಾಗಿಯೂ ಯಾವ ವರ್ತಮಾನಸಿಕ್ಕಿದ್ದರಿಂದ ಈ ವರ್ತಮಾನ ಇಂದು ಹೊರಟದ್ದೆಂಬುದಾಗಿಯೂ ಅವರ ನಿಜ ಹೆಸರನ್ನು ಕೂಡಲೆ ಕೊಡಬೇಕಾಗಿಯೂ, ಈ ಸಂಗತಿಯಲ್ಲಿ ಕೆಲವು ಉದ್ಯೋಗಸ್ಥರು ಸೇರಿರುವರೆಂಬ ಬಂದ ಬಾತ್ಮಿಯನ್ನು [illegible] ದಲ್ಲಿ ಬಿ ಸಿ ಅಯ್ಯಣ್ಣನವರು ಜವಾಬಾಗಿ ಬರೆದ ಸುಳ್ಳುಲೇಖನದ ಕುರಿತು ಆದೇ ಕುಟುಂಬದವರು ಮುಂದೆ ಮೂವತ್ತು ಮಾಡಿದ್ದಲ್ಲದೆ ಈಗ ಮುನ್ನ ಹತ್ತು ರೂಪಾಯಿ ಸೇರಿಸಿ ನಾಲ್ವತ್ತು ರೂಪಾಯಿ ಪ್ರಾಯಶ್ಚಿತ್ತ ವಿಧಿಸಿ ವಸೂಲುಮಾಡಿ ಅದನ್ನು ಖರ್ಚಿಗೂ ಗುರಿಪಡಿಸಿದ್ದು ಯಾರ ಸುಳ್ಳುಬಾತ್ಮಿಯ ಪರಿಣಾಮವೆಂದು ಈಗಲೂ ಅದೇ ಕೇಳಿದವನ ಪ್ರಶ್ನೆಯಾಗಿದೆ? ಹೀಗೆ ಇದ್ದದ್ದನ್ನು ಮರೆಮಾಚಿದ್ದಕ್ಕೆ ಏನಪರಿಣಾಮಸಾಲದೆ?

C K K

ಆಶ್ಚರ್ಯವರ್ತಮಾನ

ವಿದೂಷಕ—ಅಯ್ಯಾ ಕೇಳಿದವರೆ! ನಿಮ್ಮ "ಕೇಳಿದವ" ನೆಂಬ ಬಾತ್ಮಿಗೆ ಬಿ ಸಿ ಅಯ್ಯಣ್ಣನವರಿಂದ ದೊರೆತ ಜವಾಬು ಸಾಕಾಯಿತೆ?

ಕೇಳಿದವ—ಸಾಕಾಯಿತು ಮುಂದೆ ಅವರಿಗೆ ಮೂವತ್ತು ರೂಪಾಯಿ ದಂಡವಿಧಿಸಿರುತ್ತಾರೆಂಬ ವರ್ತಮಾನ ಮಾತ್ರ ಲೇಖಿಸಿದ್ದೆ ಈಗ ಅದಕ್ಕಿಂತಲೂ ಹೆಚ್ಚಿನ ವರ್ತಮಾನ ಲೇಖಿಸುವರೆ ಆಫೀಸಿಗೆ ಹೋಗುತ್ತೇನೆ

ವಿದೂಷಕ—ಸುಳ್ಳುಬಾತ್ಮಿ ಕೊಡುವರೆಯೊ?

ಕೇಳಿದವ—ಯಾವದೈಯ್ಯಾ ಸುಳ್ಳುಬಾತ್ಮಿ

ರಿಂದಲೂ ಮತ್ತು ಪಟ್ಟಣಗಳಲ್ಲಿ ಕೈಗಾರಿಕೆಗಳು ನಡೆದು ಸಂಪಾದನೆಯ ಮೇಲಾಟ ಹೆಚ್ಚಿದ್ದರಿಂದಲೂ ಗ್ರಾಮದೊಳಗೆ ಪೂರ್ಣ ಶಿಖಿದ್ದ ಅನ್ಯೋನ್ಯಸಹಾಯಕ ಜೀವನದ ಕ್ರಮವು ಹೇಗೆ ತಪ್ಪಿಹೋಯಿತೆಂಬುದನ್ನೂ, ಗ್ರಾಮವನ್ನು ಪೂರ್ವಸ್ಥಿತಿಗೆ ತರಬೇಕಾದರೆ ಬೇಕಾದ ಶಕ್ತಿಗಳೂ ಹೇಗೆ ಬಾಯಿಲಿಯಿಂದ ನಶಿಸಿಹೋಗಿವೆ ಎಂಬುದನ್ನೂ ಈ ರೀತಿಯಲ್ಲಿ ಗ್ರಾಮದ ಜೀವನವು ಕೆಡುತ್ತಾ ಬಂದರೆ ಪಟ್ಟಣದ ಜೀವನವು ಹೇಗೆ ತಪ್ಪುತ್ತಾ ಬರುವುದೆಂಬುವುದನ್ನೂ ಮತ್ತು ಅಭಿವೃದ್ಧಿಗೆ ಬೇಕಾದ ಸ್ವಾಭಾವಿಕ ಉತ್ಪತ್ತಿಗಳು ಹೇಗೆ ಕಡಿಮೆಯಾಗುತ್ತಿವೆಯೆಂಬುದನ್ನೂ ಹಿಂದಿನ ಉಪನ್ಯಾಸಗಳಲ್ಲಿ ವಿವರಿಸಿದ್ದೇನೆ.

ಗ್ರಾಮದವರ ತೊಂದರೆಗಳೂ ಕಷ್ಟ, ಮಲೇರಿಯಾ ಮತ್ತು ಅನ್ಯೋನ್ಯ ಅಪನಂಬಿಕೆ ಎಂಬುದು ಮೂರಾಗಿಯೇ ಇತ್ತು; ಇದಕ್ಕೆ ಸಾಲ್ಯವುದೂ ಸೇರಬೇಕಾಗಿದೆ. ಇದು ಯಾವದೆಂದರೆ — ಜನರಿಗೆ ಹೊಸವಿಷಯಗಳಲ್ಲಿ ಇರುವ ಅಪನಂಬಿಕೆ.

ಗ್ರಾಮದ ಅಭಿವೃದ್ಧಿಗೆ ಮುಖ್ಯವೇ ಸಾಧನವೆಂತ ಮೊದಲು ವಿವರಿಸಿದ್ದೇನೆ. ಆ ಮುಖ್ಯರ ಸಹಾಯ ಸಿಕ್ಕಬೇಕಾದರೆ ಜನರ ಒಪ್ಪಿಗೆಬೇಕಾಗಿದೆ. ಮಲೇರಿಯವನ್ನು ಹೇಗೆ ತಡೆಯಬಹುದೆಂಬುದನ್ನು ಹೇಳುತ್ತೇನೆ. ಈಗ ನಿತ್ಯಪ್ರಯೋಜನವಾಗಿ ಹೋಗುವ ಶಕ್ತಿಗಳಿಂದ ಸರ್ಕಾರದ ಸಹಾಯವಿಲ್ಲದೇನೇ ಗ್ರಾಮಸ್ಥರು ಪರಸ್ಪರಸಹಾಯಕರಾಗಿ ವಿಶೇಷ ಖರ್ಚಿಲ್ಲದೆ ಮಲೇರಿಯಾದ ಸಂಗಡ ಹೋರಾಡಬಹುದೆಂಬುದನ್ನು ವರ್ಣಿಸಿದ್ದೇನೆ.

ಗ್ರಾಮಸ್ಥರ ಸ್ವಸಹಾಯ ಮತ್ತು ಇದಕ್ಕೂ ಸರ್ಕಾರಕ್ಕೂ ಇರುವ ಸಂಬಂಧವನ್ನು ಇದರಲ್ಲಿ ವಿವರಿಸುತ್ತೇನೆ. ಗ್ರಾಮದಲ್ಲಿರುವ ಸರ್ಕಾರದ ಸಂಗಡ ನನ್ನ ಸಂಬಂಧದಿಂದುಂಟಾದ ಅನುಭವವನ್ನು ಹೇಳುತ್ತೇನೆ. ಮಾಂಟೇಗೂ ಚೆಮ್ಸ್‌ಫರ್ಡ್—ಸುಧಾರಣೆಯ ಮೊದಲಿನ ಮಸೂದೆಯನ್ನು ತೈಯಾರುಮಾಡುವ ಕೆಲಸವು ನನಗೆ ಸಿಕ್ಕಿತ್ತು. ಆ ರಿಪೋರ್ಟನ್ನು ಬರೆದವರಿಗೆ ಹಿಂದೂಸ್ಥಾನದ ಗ್ರಾಮದ ಅನುಭವವೇ ಇಲ್ಲ. ಗ್ರಾಮದ ಕಷ್ಟಗಳೇನೆಂಬುದು ಅವರಿಗೆ ತಿಳಿದಿರಲಿಲ್ಲ. ಅವರ ವಿವರಣೆಯನ್ನು ಮೇಲಿನ ಕೆಳಕ್ಕೆ ಕಾಣದ ಹಾಗೆ ಬರೆಯುತ್ತಾ ಬರುವಾಗ್ಯೆ ಗ್ರಾಮವಾಸಿಗಳ ಸಂಸ್ಕಾರ ಸ್ಥಿತಿಯಿಂದ (ಬಂದ ಗೊತ್ತಿಲ್ಲದಿರುವಿಕೆಯು) ಗ್ರಾಮವಾಸಿಗಳಿಗೆ ಸುಧಾರಣೆಯ ಪ್ರಯೋಜನವು ಸಿಕ್ಕುವುದಿಲ್ಲವೆಂಬುದು ಗೊತ್ತಾಯಿತು. ರಾಯರುಗಳಿಗೂ ಜಮೀನ್ದಾರರಿಗೂ, ವ್ಯಾಪಾರಸ್ಥರಿಗೂ, ಮಾತ್ರ ಈ ಸುಧಾರಣೆಯಿಂದ ಪ್ರಯೋಜನವಾಗುವುದು. 1917 ನೇ ಇಸವಿಯಲ್ಲಿ ಸಿರಕ್ಷಣೆವನ್ನು ಹೋಗಲಾಡಿಸಲಿಕ್ಕೆ ಹೊರಗಿನಿಂದ ಉಪಾಧ್ಯಾಯರುಗಳನ್ನು ಕರೆಸುವ ತಂಟ ಖರ್ಚಿನ ಒಂದು ದೊಡ್ಡ ಏರ್ಪಾಡನ್ನು ಕೆಲವು ತಿಳಿದವರು ಯೋಚಿಸಿದರು.

ಆದರೆ ನನ್ನ ಎರಡು ವರ್ಷಗಳ ಅನುಭವದಿಂದ ಒಂದು ವಿಲ್ಲದ ರೈತನ ಸಾಧಾರಣ ಬುದ್ಧಿಯಲ್ಲಿ ನನಗೆ ನಂಬಿಕೆಯುಂಟಾಗಿದೆ. ಮೆಟ್ರಿಕ್ಯುಲೇಶನ್ ಪಾಸಾದವನಿಗಿಂತ ಅಥವಾ ಬಿ.ಎ. ಆದವನಿಗಿಂತಲೂ, ಗ್ರಾಮವಾಸಿಯ ಅನುಭವದ ಜ್ಞಾನವೇ ವಿಶೇಷವಾದದ್ದು.

ಗದ್ದೆಯಲ್ಲಿ ಕೆಲಸಮಾಡುವ ರೈತರು ಸಮಾಜಸ್ಥಿತಿಯಲ್ಲಿ ಕಡೆ ದರ್ಜೆಯವರಾದರೂ ಸಮಾಜಕ್ಕೆ ಅತ್ಯಂತ ಪ್ರಯೋಜನಕಾರಿಗಳಾದ ಸಮುದಾಯದವರಾಗಿದ್ದಾರೆ. ನಾವು ಸುರೂಲ್ ಗ್ರಾಮದಲ್ಲಿ ಕೆಲಸ ಪ್ರಾರಂಭಿಸಿದ್ದಾಗ ಹೊಸ ಸುಧಾರಣೆಯು ಆಗತಾನೆ ಸ್ಥಾಪಿತವಾಗಿತ್ತು. ಸಂಗಡಲೇ ಸರ್ಕಾರದವರೊಡನೆ ಯಾವವಿಧವಾದ ಸಂಬಂಧವೂ ಇರಕೂಡದೆಂಬ ಮತವು ಬಲವಾಗಿತ್ತು. ಆದರೆ ನಾವು ಗ್ರಾಮದಲ್ಲಿ ಕೆಲಸ ಪ್ರಾರಂಭವಾದಕೂಡಲೇ ಸರ್ಕಾರದ ಶಕ್ತಿಯ ಆವರಣದೊಳಗೆ ಬರಬೇಕಾಯಿತು. ಪ್ರಾರಂಭದಿಂದಲೇ ಗ್ರಾಮವಾಸಿಗಳ ದೃಷ್ಟಿಯಿಂದ ಎಲ್ಲವನ್ನೂ ನೋಡಬೇಕೆಂತ ನಿಶ್ಚಯಿಸಿದ್ದೆವು. ಮೊದಲನೆಯ ಸಂದರ್ಭ ಯಾವದೆಂದರೆ — ಯಾಕೆಂದರೆ ಗ್ರಾಮದ ಜಕ್ಕಳ ಹದಗೊಳಿಸುವವರ ವಿಷಯದಲ್ಲಿ ಅವರಿಗೆ ಭೂಮಿಯಿಲ್ಲದೆ ಉಪವಾಸದಿಂದ ಸಾಯುತ್ತಿದ್ದರು. ನಮಗೆ ಜಕ್ಕಳ ತಿದ್ದುಪಡಿಸುವ ವಿಷಯವೇನೂ ಗೊತ್ತಿರಲಿಲ್ಲ. ಅವರಿಗೆ ಸಹಾಯದ ಸಾಧನವನ್ನು ಹುಡುಕುವಾಗ್ಯೆ ಸರ್ಕಾರದ ಹದ ಬರಿಸುವ ಕಾರ್ಖಾನೆಯಿಂದ ಅವರಿಗೆ ಸಹಾಯ ದೊರಕಿತು. ಈ ಸಹಾಯವನ್ನು ತೆಗೆದುಕೊಳ್ಳಬೇಕೋ ಬಿಡಬೇಕೋ?

ಡಾಕ್ಟರ್ ಟಾಗೋರರವರು ಈ ಉದಾಹರಣೆಯನ್ನೇ ಮುಂದಿಟ್ಟುಕೊಂಡು ಸಹಕಾರವನ್ನೇ ಬೋಧಿಸಬೇಕೆಂತ ಒತ್ತಿಹೇಳಿದರು. ಒಂದು ಗ್ರಾಮದ ರಸ್ತೆಯನ್ನು ದುರಸ್ತು ಪಡಿಸುವುದರಲ್ಲಿ ಇದೇ ಸಂಶಯವು ಬಂದೊದಗಿ, "ನಮ್ಮ ವಿದ್ಯಾಭ್ಯಾಸದ ಕ್ರಮವನ್ನು ನಮ್ಮ ಸ್ವಾಧೀನದಲ್ಲೇ ಇಟ್ಟುಕೊಂಡು ಗ್ರಾಮಾಭಿವೃದ್ಧಿ ಕೆಲಸಮಾಡುವ ಸರ್ಕಾರದ್ದೇ ಆಗಲಿ ಸ್ವಂತದ್ದೇ ಆಗಲಿ, ಸಂಸ್ಥೆಗಳಿಗೆ ಸಹಾಯಕೊಡುವುದು ನಮ್ಮ ಕರ್ತವ್ಯ" ವೆಂತ ನಾವು ತೀರ್ಮಾನಿಸಿಕೊಂಡೆವು. ಸರ್ಕಾರದ ಸಂಸ್ಥೆಗಳಿಗೆ ಗ್ರಾಮವಾಸಿಗಳ ಅಭಿವೃದ್ಧಿಯೇ ನಮ್ಮ ಉದ್ದೇಶವಾಗಿದ್ದಂತೆ ನಾವು ಒಪ್ಪಿಕೊಳ್ಳಲಿಲ್ಲ. ಆದರೆ ಮನಸ್ಸನ್ನು ಯಾವವಿಧದಲ್ಲೂ ಸ್ಥಗಿತಮಾಡಲಿಲ್ಲ. ಕ್ರಮಕ್ರಮವಾಗಿ ನಮಗೆ ಸರ್ಕಾರದ ಶಕ್ತಿಯೊಡನೆ ಸಮ್ಮಿಳಿತವಾದ ಅನುಭವವನ್ನೂ ಇಲ್ಲಿ ಕೊಡುತ್ತೇನೆ.

ಮೊದಲನೇದೇನೆಂದರೆ—ಸುಧಾರಣೆಯ ಫಲವಾದ ಆರೋಗ್ಯ ಮತ್ತು ವಿದ್ಯಾಇಲಾಖೆ, ಕೈಗಾರಿಕೆ ಮತ್ತು ಕೃಷಿ ಇಲಾಖೆ ಸ್ಥಳೀಯ ಸ್ವರಾಜ್ಯ ಮುಂತಾದ ಸಂಸ್ಥೆಗಳ ಪ್ರಯೋಜನವು ಗ್ರಾಮಕ್ಕೆ ತಲುಪಲೇ ಇಲ್ಲ. ಎಲ್ಲಾ ಸಂಸ್ಥೆಗಳು ಸಹಾನುಭೂತಿಯುಳ್ಳವಾಗಿಯೂ ಸಹಾಯಕೊಡಲು ಶಕ್ತವುಳ್ಳವಾಗಿಯೂ ಇದ್ದವು. ಆದರೆ ಹಣದಲ್ಲಿ ಹೇಗೆ ದಾರಿದ್ರ್ಯವಿತ್ತೋ ಹಾಗೆಯೇ ಸಹಾಯಮಾಡಲು ದಾರಿಗಳನ್ನು ಯೋಚಿಸುವ ಶಕ್ತಿಯಲ್ಲಿಯೂ ಬಡತನವೇ ಇತ್ತು. ಪ್ರತ್ಯೇಕಪ್ರತ್ಯೇಕ ಇಲಾಖೆಗಳನ್ನು ಹೆಚ್ಚಿಸುವ ಎಲ್ಲಾ ಸರಕಾರಗಳ ಗತಿಯೇ ಇದು. ಪಟ್ಟಣಗಳಲ್ಲಿ ಈ ಸ್ವಭಾವವು ವಿಶೇಷವಾಗಿ ಗಮನಕ್ಕೆ ಬರುವದಿಲ್ಲ ಆದರೆ ಗ್ರಾಮಗಳಲ್ಲಿ ಇದರಿಂದ ಸಂಪೂರ್ಣ ನಾಶವೇ ಆಗುತ್ತದೆ. ಗ್ರಾಮವೆಂದರೆ ವಿಧವಿಧದ ಕಾರ್ಯಗಳನ್ನೊಳಕೊಂಡ ಒಂದು ಚಿಕ್ಕ ಸಮುದಾಯವಾಗಿದೆ ಎಂಬುದನ್ನು ಸರಕಾರದ ಇಲಾಖೆಗಳು ತಿಳಿಕೊಂಡು, ತಮ್ಮ ಕಾರ್ಯಗಳನ್ನು ಈ ವಿಧ್ಯಮಾನಕ್ಕೆ ಸರಿಪಡಿಸಿಕೊಳ್ಳದೆ ಹೋದರೆ ಈ ಇಲಾಖೆಗಳಿಂದ ಏನೂ ಪ್ರಯೋಜನವಾಗಲಾರದು.

ಗ್ರಾಮಸ್ಥ ಭೃತ್ಯರ ವಿದ್ಯೆ ಬೇಕಾದ್ದಿಲ್ಲ. ಅವರಿಗೆ ಆರೋಗ್ಯವಿಷಯದಲ್ಲೂ, ಕೃಷಿ ವಿಷಯದಲ್ಲೂ ಕೈಗಾರಿಕೆ ಸಹಕಾರ ವಿಷಯದಲ್ಲೂ, ವಿದ್ಯೆ ಬೇಕಾದಾಗಿದೆ. ರೈತನು ಬಾಯಿಲನ್ನಾದಾಗ ಅವನಿಗೆ ಹೊಸ ತರದ ಧಾನ್ಯದ ಬೀಜವನ್ನಾಗಲೀ, ದನಗಳ ಬಾಯಿಲೆಯನ್ನು ಹೋಗಲಾಡಿಸುವ ಹೊಸ ಔಷಧಿಯನ್ನು ತಂದುಕೊಡುವದರಿಂದ ಆಗಲೀ ಪ್ರಯೋಜನವಾಗಲಾರದು. ಅವನಿಗೆ ಬೇಕಾದದ್ದು ಕೆಲಸ. ಕೃಷಿಯ ಬೆಳವಣಿಗೆಯನ್ನು ದಫ್ತರಿಗಳ ಲೆಖ್ಖದಲ್ಲಿ ಎಣಿಸಿದರು ಪ್ರಯೋಜನವಿಲ್ಲ. ಯಾಕೆಂದರೆ ಕ್ಷಾಮಪೀಡಿತನಾದಾಗ ದೂರವಾದ ಪಟ್ಟಣದಲ್ಲಿ ಇವರು ಇದ್ದರೂ ಕೊಟ್ಟ ತುಂಬುವದಿಲ್ಲ.

ರೈತರ ಪ್ರೀತಿಯನ್ನು ಸಂಪಾದಿಸಲು ಪ್ರಯತ್ನಿಸುವಾಗ ಪ್ರತಿದೈನಂದಿನ ನೋಡ ಪ್ರಯೋಜನ ಹೊಂದುವಂತ ವಿಷಯಗಳನ್ನೇ ಪರೀಕ್ಷಿಸಿ ನೋಡಬೇಕಾದದ್ದೂ ಅಲ್ಲದೆ ತನ್ನ ಪರೀಕ್ಷೆಯ ಫಲಿತಾಂಶವನ್ನು ಬಹಿರಂಗವಾಗಿ ಕೃಷಿಕರಿಗೂ ಜನರಿಗೂ, ಸಂಪೂರ್ಣವಾಗಿ ತಿಳಿಸಬೇಕು. (ಮುಂದರಿವುದು.)

ತಾರೀಖು 22-2-24ರ ಕೊಡಗು ಪತ್ರಿಕೆಯಲ್ಲಿ ಉದಾರಿಗಳಾದ ಕೆಲವು ಮಹಿಳೆಯರು ಶಿಶುಪಾಲನಕ್ಕಾಗಿ ನನಗೆ ಕೊಟ್ಟ ಹಣದಾಸೊಬಗಿನ ಪಟ್ಟಿಯು ಪ್ರಕಟವಾಗಿದೆ. ಆದರೆ ಅದೇ ಪತ್ರಿಕೆಯಲ್ಲಿ ನನಗೆ ಮಕ್ಕಳಿಗೆ ಸಂದಿರುವ ಸಾಮಾನುಗಳ ಪಟ್ಟಿ ಒಂದನ್ನು ಪ್ರಕಟಿಸದ್ದರೆ ಚೆಲೋದಾಗಿತ್ತು. ಅದು ಬಿಟ್ಟುಹೋದದಕ್ಕೆ ವ್ಯಸನಪಡುತ್ತೇನೆ. ಈಗಾದರೂ ಕೂಡ ಕಾಲವಿಳಂಬವಾಗಿಲ್ಲವೆಂದು ನನಸಿ ಸದರಿ ಸಾಮಾನುಗಳ ಪಟ್ಟಿಯನ್ನು ಈ ಕೆಳಗೆ ಕೊಟ್ಟಿರುತ್ತೇನೆ.

ಸಾಮಾನುಗಳ ತಪಶೀಲು

50	ಶಿಶುಗಳ ನೇಪ್‌ಕಿನ್
56	ಹಾಸಿಗೆ ಹಾಸುವ ಬಟ್ಟೆಗಳು
36	ಟವಾಲುಗಳು
32	ಕಂಬಳಿಗಳು
12	ಹಾಸಿಗೆಗಳು
8	ತಲೆ ದಿಂಬುಗಳು
24	ತಲೆದಿಂಬು ಗವಸುಗಳು
1	ದರ್ಜಿ ಕರವಸ್ತ್ರಗಳು
2	ಕಂಪ್ಯೂಜಂಬಾನಗಳು
1	ಪೆಟ್ಟಿಗೆ ಮಾಯುವ ಸಾಬೂನು
1	ಪೆಟ್ಟಿಗೆ ಬಟ್ಟೆ ಒಗೆಯುವ ಸಾಬೂನು
1	ದರ್ಜಿ ದೂಳುವರಿಸುವ ಬಟ್ಟೆಗಳು
20	ಶಿಶುಗಳಿಗೆ ಬುಟ್ಟಿಗಳು

ಮೇಲ್ಕಂಡ ಸಾಮಾನುಗಳ ಕ್ರಯ ಕೂಲಿಗೆ ಚಾರ್ಜು ವಗೈರೆ ಇಂದ 188-1- ಕ್ಕೆ ಏಜಾರಗಿರುತ್ತೆ. ಇಳಿಕೆ ಮೊಬಲಗು ೧೩೪ ಕ್ಕೆ ರೆಡ್‌ಕ್ರಾಸ್ ಸಂಘದ ಜಮೆಗೆ ತಂದಿರುತ್ತೆ.

ಈ ಶಿಶುಪಾಲನಾಲಯದಲ್ಲಿ ಈಗ 7 ಚಿಕ್ಕಮಕ್ಕಳು ಪೋಷಿಸಲ್ಪಡುತ್ತಿದ್ದಾರೆ. ನಮ್ಮ ಮಹಿಳೆಯರೆಲ್ಲರೂ ಇದು ಹೇಗೆ ನಡೆಸಲ್ಪಡುತ್ತದೆಂದು ಒಂದು ನೋಡಬೇಕಾಗಿ ನನ್ನ ವಿನಂತಿ.

ಮಿಸಸ್ ಕೆ ಸಿ ತಿಂಮ್ಮಯ್ಯ.

ಮಡಿಕೇರಿ ಹೈಸ್ಕೂಲಿನ ಹಳೇ ವಿದ್ಯಾರ್ಥಿಗಳ ಮೇಗಜೀನ್.

ಮೂರುತಿಂಗಳಿಗೊಮ್ಮೆ ಪ್ರಕಟಿಸಲ್ಪಡುವ ಈ ತ್ರೈಮಾಸಪತ್ರಿಕೆಯ ಎರಡು ಸಂಚಿಕೆಗಳನ್ನು ಆಸಕ್ತಿಯಿಂದ ಓದಿದೆನು. ಈ ಸಂಚಿಕೆಯಲ್ಲಿ ಪ್ರಕಟಿಸಲ್ಪಡುವ ಲೇಖನಗಳ ಗುಣದೋಷಗಳ ಕುರಿತು ಕೊಡಗುದೇಶಕ್ಕೆ ಒಂದೇ ಒಂದಾಗಿರುವ "ಕೊಡಗು" ಪತ್ರಿಕೆಯ ಸಂಪಾದಕರು ಉಲ್ಲೇಖಿಸುವರೆಂದು ಕೊಡಗು ಪತ್ರಿಕೆಯ ವಾಚಕರ್ಯೆಂದಾವೃತ್ತಿ ಬರುವಾಗಲೆಲ್ಲಾ ಹುಡುಕಿ ಓದಿ ನಿರಾಶನಾದೆನು. ಆದರೆ "ಕೊಡಗು" ಸಂಪಾದಕರು ಯಾವದೊಂದೂ ಬರೆಯದೆ ಇದ್ದುದರಿಂದ, ಈ ತ್ರೈಮಾಸಿಕ ಸಂಚಿಕೆಯಲ್ಲಿ ಕಾಣುವ ಲೇಖನಗಳ ಮೇಲೆ ಕೆಲವು ವಿಚಾರಗಳನ್ನು ಹಳೇ ವಿದ್ಯಾರ್ಥಿಗಳ ಮತ್ತು ದೇಶೀಯರ ಮುಂದಿಡಬೇಕೆಂದಿದ್ದೇನೆ.

ಈ ತ್ರೈಮಾಸಪತ್ರಿಕೆಯ ಸಂಪಾದಕರು ಪತ್ರಿಕೆಯ ಹೊರಡಿಸಲಿಕ್ಕೂ, ಅದರ ಸಂಪಾದಕೀಯ ಲೇಖನ ಬರೆಯಲಿಕ್ಕೂ ಕಲಿತುಕೊಂಡು, ಮತ್ತು ತೆಗೆದ ಕಷ್ಟಕ್ಕೂ ಸ್ಪರ್ಧೆಗೂ ಸೆಂಟ್ರಲ್ ಹೈಸ್ಕೂಲ್ ಹಳೇ ವಿದ್ಯಾರ್ಥಿಗಳು ಬಹಳ ವಂದನೆಯನ್ನರ್ಪಿಸಬೇಕಾಗಿದೆ. ಆದರೆ ಸಂಚಿಕೆಗಳಲ್ಲಿ ಪ್ರಕಟಿಸಲ್ಪಟ್ಟ ಸಂಪಾದಕೀಯ ಲೇಖನಗಳು ಹಳೇ ವಿದ್ಯಾರ್ಥಿಗಳಿಗೆ ಯಾವದೊಂದೂ ಪ್ರಯೋಜನವಿಲ್ಲದವುಗಳಾಗಿ ಕಾಣುತ್ತೆ. ಏಕೆಂದರೆ ಈಗಿನಕಾಲದಲ್ಲಿ ರಾಜನೀತಿಯಿಲ್ಲದ ಯಾವ ಮಾಸಪತ್ರಿಕೆಯನ್ನೇ ಆಗಲೀ, ಪತ್ರಿಕೆಯನ್ನೇ ಆಗಲೀ ಸಾಧಿಸಲಿಕ್ಕಾಗುವದು ಇದರಲ್ಲಿಯಾದರೂ. ಈ ಪತ್ರಿಕೆಯ ಪೋಷಕರು ಪೀಠಿಕೆಯಲ್ಲಿ ಈ ಪತ್ರಿಕೆಯು ಮಡಿಕೇರಿ ಸ್ಕೂಲಿನ ಹಳೇವಿದ್ಯಾರ್ಥಿಗಳ ಪ್ರಯೋಜನಕ್ಕೆ ಉಂಟಾದುದರಿಂದ ಅವರು ರಾಜನೀತಿಯ ವಿಚಾರದ ಚರ್ಚೆಯನ್ನು ವಿಸ್ತರಿಸಿ ಬರೆಯಬೇಕೆಂದು ... ಬಾಡಿಕ ಅವರು ಹಾಗೆ ಭಾವಿಸುವುದಕ್ಕೆ ರೀತಿಯ ಸ್ವತಂತ್ರ್ಯದವರಿಗೆ ಬಹಳ ... ಕೊಡುತ್ತದೆ. ಆದರೆ ಅದನ್ನು ಕೊಡುವ ... ದಬೇಕು ಅವಾಯವು ಭೃತ್ಯದಲ್ಲಿ ... ಸೆಗೆ ತಮವಾಗ ಉಂಟಾಗುತ್ತದೆ. ... ನನ್ನ ಒಳ್ಳೆ ಮಿತ್ರತ್ವಕ್ಕೆ ತರುವ ವಿಧಾನದ್ದು ... ವಿಚಾರವನ್ನು ತಂದರೆ ಅದರಿಂದ ಬಹಳ ಬೆಲೆ ಇದ್ದುದಾಗಿ ರಾಜನೀತಿಯ ಶ್ರೇಷ್ಠತೆಯನ್ನು ಬರೆದಿರುತ್ತಾರೆ. ಆದರೆ ಸಂಪಾದಕರು ಈ ಸಂಚಿಕೆಯಲ್ಲಿ ಎಷ್ಟು ನ್ಯೂನತೆ ಇದ್ದರೂ ಕೇವಲ ಇಲ್ಲದೆ ಇರುವುದರಿಂದ ಎಲ್ಲರೂ ಇದನ್ನು ಆದರಿಸಬೇಕೆಂದು ಬರೆದಿರುತ್ತಾರೆ.

ಪ್ರಪಂಚದ ಸ್ವಾಭಾವಿಕಸ್ಥಿತಿಯು ಕರ್ಮಕ್ಕೆ. ಪ್ರತಿಕರ್ಮವೂ ಒಳ್ಳೆದಕ್ಕೆ ಕೆಟ್ಟದೂ ಇರುವುದೇ ಆಗಿದೆ. ಈ ಪತ್ರಿಕೆಯಲ್ಲಿ ಕೆಟ್ಟದೂ ಒಳ್ಳೇದೂ ಎರಡು ಇಲ್ಲದೆ ಇರುವುದರಿಂದ ಖಂಡಿತವಾಗಿಯೂ ಇದನ್ನು ಜೀವವಿಲ್ಲದ ಮನುಷ್ಯನಿಗೆ ಹೋಲಿಸಬೇಕಾಗಿದೆ. ಕೆಟ್ಟದೂ ಒಳ್ಳೆದೂ ಇವೆಂತರ ಬರೆಯಗ ಸ್ವಾರ್ಥಕ್ಕಿಯೂ ಹೊಗಳಿಕೆಯೂ ವಿಶೇಷವಾಗಿ ದೆಯಿಲ್ಲದೆ ಹಳೇ ವಿದ್ಯಾರ್ಥಿಗಳಾದ ಅಂದರೆ ಈ ಮಾಸಪತ್ರಿಕೆಗೆ ಎಂದಾದಾರರಾಗದೆ ಇರುವವರನ್ನು ಹೀಯಾಳಿಕೆಯಿಂದ ಬರೆದಿರುತ್ತಾರೆ. ಭೂಲೋಕದಲ್ಲಿರುವ ವಸ್ತುಗಳ ಗುಣದೋಷಗಳನ್ನು ಚರ್ಚಿಸುವುದು ವಾಡಿಕೆ. ಅದರಲ್ಲಿ ಈ ಪತ್ರಿಕೆಯ ಗುಣದೋಷಗಳನ್ನು ಕುರಿತು ಚರ್ಚಿಸಿ, ಅನೇಕ ಹಳೇವಿದ್ಯಾರ್ಥಿಗಳಿಗೆ ಇದರಲ್ಲಿ ಆದರಣೆಯು ಕಡಿಮೆ ಇರಬಹುದು. ಇದಕ್ಕಾಗಿ ಸಂಚಿಕೆಯಲ್ಲಿ ಸಂಪಾದಕರದಾವರು ದಿಗ್ರಿಗಳನ್ನು ಪಡೆದು ಒಳ್ಳೆಯ ಸ್ಥಿತಿಯಲ್ಲಿರುವುದನ್ನು ಕಂಡು ಮತ್ಸರವನ್ನು ಸಹಿಸಲಾರದೆ ಇರುವುದರಿಂದ ಈ ಸಂಚಿಕೆಯ ವಿಷಯ ಗುಣದೋಷಗಳನ್ನು ಸಹಪಾಠಿಗಳಾಗಿದ್ದವರು ಹೊಡಕ್ಕಾರಂಬ ಅರ್ಥದಿಂದ ಬರೆದಿರುವುದಕ್ಕೆ ವಿಚಾರಿಸಬೇಕಾಗಿದೆ. ಇವರ ಅಭಿಪ್ರಾಯವು ನಿಜವಾದರೆ, ಭೂಲೋಕದಲ್ಲಿ ದಿಗ್ರಿಗಳನ್ನು ಪಡೆಯುವುದೇ ಮನುಷ್ಯಜನ್ಮದ ಸಫಲತೆಯೆಂಬುದಾಗಿ ಕಾಣುತ್ತದೆ.

ಇನ್ನೊಂದು ವ್ಯಾಸದಲ್ಲಿ ಮೆ|| ಶ್ರೀಪತಿರಾಯರು ಮತ್ತು ಮೆ|| ಕೇಟೋಳಿರ ಚಂಗಪ್ಪನವರ ವಿಷಯ ಬರೆದಿರುವುದನ್ನು ನೋಡಿದರೆ ಕೇವಲ ಹಾಸ್ಯಾಸ್ಪದವೇ ಸರಿ. ಮೆ|| ಶ್ರೀಪತಿರಾಯರು ಒಳ್ಳೆ ವಿದ್ಯಾವಂತರೆಂದೂ, ಮೆ|| ಚಂಗಪ್ಪನವರೂ ಬಹಳ ಗಟ್ಟಿಗರೆಂದೂ ಕೊಡಗಿನ ಪ್ರಥಮ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಎಂದು ಎಲ್ಲರಿಗೂ ತಿಳಿದ ವಿಷಯವೇ. ಆದರೆ, ಮೆ|| ಶ್ರೀಪತಿರಾಯರನ್ನು, ಬಹಳ ಸಾಧ್ಯಯಿಲ್ಲದನೆಂದೂ ಅಂದರೆ ಅನೇಕ ಪುಸ್ತಕ ಮಾಸಪತ್ರಿಕೆಗಳನ್ನು ಹೊಂದಿಸುವವರಿಗೆ ಹೋಲಿಸಿದ್ದೂ, ರೋಮ್‌ದೇಶದಲ್ಲಿ ಮಹಾತ್ಮಗಾಂಧಿಯವರಂತ ಒಬ್ಬ ಮಹಾಪುರುಷನಿಗೆ ಮೆ|| ಚಂಗಪ್ಪನವರನ್ನು ಹೋಲಿಸಿದ್ದೂ, ತನ್ನ ಶಾಲೆಯ ಹೆಡ್ಮಾಸ್ತರನ್ನು, ಇನ್ಸ್‌ಪೆಕ್ಟರರ ವಿಷಯ ಹೊಗಳಿಕೆಯಿಂದ ಅಗಾಗ್ಗೆ ಬರೆದದ್ದೂ ಪೂರಾ ಹಾಸ್ಯಾಸ್ಪದವಾಗಿ, ಓದುವವರಿಗೆ ಈ ಪತ್ರಿಕೆಯು ಹೆಸರನ್ನು ಹಳೇ ಸಂಟ್ರಲ್ ಸ್ಕೂಲ್ ವಿದ್ಯಾರ್ಥಿಗಳ ಮೇಗಜೀನ್ ಎಂಬುದರ ಬದಲಾಗಿ, ಸರಕಾರಿ ಉದ್ಯೋಗಸ್ಥರ ಮೇಗಜೀನ್ ಎಂಬುದಾಗಿ ಬರೆದಿದ್ದರೆ ಹಳೇ ವಿದ್ಯಾರ್ಥಿಗಳಿಗೆ ಈ ಖೇದವು ಹೋಗುತ್ತಿತ್ತು. ಯಾರಾದರೂ ಧನಸಹಾಯ ಮಾಡಿದರೆ ಒಂದೇ ಒಂದು ಕಡೆ ಸಿಲ್ಲಿ ಅದೂ ಅಚ್ಚಿನ ಭಾಗದಲ್ಲಿ ಸ್ವೀಕಾರವೆಂದು ಬರೆಯುವುದು ವಾಡಿಕೆ. ಅವರಿಗೆ ಬದಲಾಗಿ ಸಂಪಾದಕರು ಇಂಥಾವರ ವಿಷಯವಾಗಿ ಎತ್ತಿ ಬರೆಯಲು, ಬಹಳ ತೊಂದರೆ ತೆಗೆದುಕೊಂಡಿರುತ್ತಾರೆ.

ಆಯಾ ಸಂಪಾದಕರು ಈ ಪತ್ರಿಕೆಗೆ ಧಾರಾದಾರರು ಹೇಗೆ ಹಣಗಳನ್ನು ಎಷ್ಟು ಸಿಕ್ಕಿಗೆ ಇದ್ದಲ್ಲಿ, ದಯಮಾಡಿ ಟ್ಟು ಮೇಲೆಕಾಣಿಸಿದ ನ್ಯೂನತೆಯನ್ನು ಬಿಟ್ಟು, ಪೋಷಕರಾಗಿದ್ದ ಮೆ|| ಎಟರರವರು ಉಪೋದ್ಘಾತದಲ್ಲಿ, ಯಾ, ಪ್ರಸ್ತಾವನೆಯಲ್ಲಿ ಬರೆದಿರುವ ಪ್ರಕಾರ ತಿದ್ದಿಕೊಳ್ಳಿ. ಇಲ್ಲವಾದರೆ ಎತ್ತಿ ಅಭಿಪ್ರಾಯನ್ಯೂನತೆಯನ್ನು ಕಾಣುವುದು ಖಂಡಿತ. ಯಾವವರೆಗೆ ಭೂಲೋಕದ ಚರ್ಮಗಳನ್ನು ಕೇಳುವುದಿಲ್ಲ ಗಾದಿಯ ನೀವು ನಿಮ್ಮ ಪತ್ರಿಕೆಯಲ್ಲಿ ಬರೆಯುವುದಿಲ್ಲವೋ ಅವರೆಗೆ ನಿಮ್ಮ ಪತ್ರಿಕೆಯು ಏಳ್ಗೆಯಾಗುವ ಸ್ವೀಕಾರವೆಂಬುದನ್ನು ನೀವೇ ತಿಳಿಯಿರಿ.

ಬ್ರಿಟಿಷ್ ರಾಜ್ಯಭಾರದಿಂದಿರುವ, ನಮ್ಮ ದೇಶಕ್ಕೆ ಸಿಕ್ಕಿದ ನ್ಯಾಯವಿಧಾಯಕಸಭೆಯ ವಿಷಯ ಬರೆದವರು ಸರಿ

...ನ್ನು ನೀವು ಕಾಣಿಸಿದ್ದದ್ದರೆ ನೀವು ಕಲಿತ ವಿದ್ಯೆಯ ...ವವು ತಿಳಿಯುತ್ತಿತ್ತು. ಜೊತೆಗೆ ಈಗಾಗಲೇ ನೀವು ...ತ್ರಿಕೆಯನ್ನು ಅಭಿವೃದ್ಧಿಗೆ ತರುವುದಕ್ಕಾಗಿ ಮೂರು ...ಲ್ಕು ಸಾವಿರ ರೂಪಾಯಿ ಕೂಡಿಸಬೇಕೆಂದಿದ್ದೀರಂತೆ, ...ಜವಾದರೆ ಬಹಳ ಸಂತೋಷ. ಆದರೆ ಹಳೇ ವಿದ್ಯಾರ್ಥಿಗಳ ಮೆಗಜೀನ್ ಎಂದುದರಿಂದ ಹಳೇ ವಿದ್ಯಾರ್ಥಿಗಳು ನಿಮ್ಮ ಬರವಣಿಗೆಯಿಂದ ಯಾವವರೆಗೆ ತೃಪ್ತಿ ಪಡೆಯುವುದಿಲ್ಲವೋ ಅವರೆಗೆ ನಿಮ್ಮ ಪ್ರಯತ್ನವೆಲ್ಲವೂ ವ್ಯರ್ಥವೆಂದು ತಿಳಿಯತಕ್ಕದ್ದು.

ಕೊನೆಯಲ್ಲಿ ಒಂದೇ ಒಂದು ಮಾತು ಹೇಳಬೇಕಾಗಿದೆ. ಯಾವ ಪತ್ರಿಕೆಯದೇ ಆಗಲಿ ಸಂಪಾದಕರ ಜವಾಬುದಾರಿಯು ದೊಡ್ಡದು. ಆದರೆ ಸಂಪಾದಕರು ತನ್ನ ಸ್ವಾರ್ಥ... ...ಭಿಪ್ರಾಯವನ್ನು ಮೂಲೆಗೊತ್ತಿ, ದೇಶದ ...ಳಿದು ಅದರಂತೆ ತನ್ನ ಕರ್ತವ್ಯವನ್ನು ಬಾಚಿ... ...ಯೂ ಎಂದೂ ಪ್ರೋತ್ಸಾಹಿಸಲ್ಪಡುವುದಿಲ್ಲ ...ಮವಟ್ಟ, ಮೇಲ್ಕಂಡ ತಪ್ಪುಗಳನ್ನು ತಿದ್ದಿ ...ಈ ಪತ್ರಿಕೆಯನ್ನು ಚೆನ್ನಾಗಿ ನಡಿಸಬೇಕೆಂದು ...ನ್ನು ಸ, ನೋ.

ತಮ್ಮಯ

(ಹಳೇವಿದ್ಯಾರ್ಥಿ.)

ವರ್ತಮಾನ ಸಂಗ್ರಹ

ಒಳದೇಶ.

ಶಾಂತಿನಾಥ. ಕುಂದೆಳ ಗ್ರಾಮದಲ್ಲಿರುವ ಇಗ್ಗುತಪ್ಪದೇವರ (ಪಾಡಿ ಸುಬ್ರಮಣ್ಯದೇವರ) ...ಗಳೆಲ್ಲ ನಡೆಯುವ ಕಲಾಡಿಬಹಬ್ಬವು ಇದೇ ತಾರೀ... ನೇ ಬುಧವಾರ ದಿನ ನಡೆಯುತ್ತದೆ. ದಕ್ಷಿಣ... ದ ಜಿಲ್ಲೆಯಲ್ಲಿರುವ ಸುಬ್ರಮಣ್ಯಕ್ಕೆ ಬಿಟ್ಟರೆ ಈ ದೇವಸ್ಥಾನದಲ್ಲಿ ಕಲಾಡಿಚ ದಿವಸ ತೆಗೆಯುವ... ...ಲ್ಲದೆ ಹರಿಕೆವಗೈರೆಗಳೇನಾದರೂ ಇದ್ದರೆ ಈ ದೇವಸ್ಥಾನಕ್ಕೆ ಒಪ್ಪಿಸಬಹುದಾಗಿ ಒಂದು ಬಾತ್ಮಿ.

ಮೆ|| ಅಪ್ಪಾರಂಡ ಬೋಪಣ್ಣನವರು ಕಳೆದ ತಾರೀಖು ೭ ನೇ ದಿನ ಅವರ ಸ್ವಂತ ಮನೆಯಾದ ಅರಮೇರಿಯಲ್ಲಿ ಸ್ವರ್ಗಸ್ಥರಾದರು.

ಬಲಮುರಿ ದೇವಸ್ಥಾನದಲ್ಲಿ ಕಳೆದ ತಾರೀಖು ೩-೩-೧೯೨೪ ರಲ್ಲಿ ಗ್ರಾಮಸ್ಥರೆಲ್ಲರೂ ಸೇರಿ ಮೆ|| ಮಹಾತ್ಮ ಗಾಂಧಿಯವರ ಬಂಧವಿಮೋಚನೆಗಾಗಿ ಒಂದು ಮಹಾಭಿಷೇಕ ಪೂಜೆಮಾಡಿ ಪ್ರಸಾದ ವಗೈರೆ ಸ್ವೀಕರಿಸಿದ ನಂತರ ಸದರಿಯವರಿಗೆ ಆಯುರಾರೋಗ್ಯವು ಪ್ರಾಪ್ತಿಯಾಗಲೆಂದು ಎಲ್ಲರೂ ಹಟಸ್ತರಾಗಿ ೩ ಮಿನಿಟುವರೆಗೆ ಕಂತಭಜನೆ ಮಾಡಿದ್ದು ತದನಂತರ ಮೆ|| ಬಿದ್ದಂಡ ಸುಬ್ಬಯ್ಯನವರು ಅವರ ವಿಷಯ ಸಂಕ್ಷೇಪವಾಗಿ ಭಾಷಣಮಾಡಿ ಆದಮೇಲೆ ಮೆ. ಸಿ. ಕೆ. ಸುಬ್ಬಪ್ಪನವರು ಇವರಿಗಾಗಿ ಮಾಡಿದ ಈ ಪೂಜೆಯ ವಿಷಯ ವಿವರಿಸಿದರು.

ತಾರೀಖು ೫-೩-೧೯೨೪ ರಲ್ಲಿ ದಕ್ಷಿಣ ಕೊಡಗು ತಾಲೋಕಿನ ನೇಂದಿಗುತ್ತಿಗೆ ಹರಾಜು ವೀರರಾಜೇಂದ್ರಪೇಟೆ ತಾಲೋಕು ಕಚೇರಿಯಲ್ಲಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರ ಮುಂದೆ ನಡೆದು ತಾರೀಖು ೬ ರಲ್ಲಿ ಮ. ಮ. ಸಾಹೇಬರು ಮತ್ತು ದಕ್ಷಿಣ ಕೊಡಗು ತಾಲೋಕು ಸುಭೇದಾರರು ಸಹ ನಾಲ್ಕು ನಾಡಿಗೆ ದಯಮಾಡಿಸಿದಲ್ಲಿ ಯುವ್ಯತಮಾಡಿ ಗ್ರಾಮಸ್ಥರು ಅವರಿಗೆ ಒಂದು ಔತಣವನ್ನು ಕೊಟ್ಟರು.

ಮಡಿಕೇರಿನಾಡು ಕಳಕೇರಿಸಿರುವ ಗ್ರಾಮದ ...ಯ್ಯಂ ವೆಂಕಪ್ಪಯ್ಯನವರ ಮನೆಗೆ ತಾರೀಖು ೩ ನೇ ದಿನ ಕಾಡು ಬೆಂಕಿಬಿದ್ದು ಅಂದಾಜು ೩೦೦-೪೦೦ ರೂಪಾಯಿ ಸಾಮಾನು ನಷ್ಟವಾಗಿ ಹೋಗಿರುವುದಲ್ಲದೆ ತನ್ನ ಜತ್ತರದಲ್ಲಿ ಹಾಜರ್ ಇದ್ದ ೩೦೦ ರೂಪಾಯಿ ... ರನ್ನು ನೋಟುಗಳೂ, ೨೫ ಬೆಳ್ಳಿಯ ರೂಪಾಯಿಗಳು ಸಹ ಬೆಂದುಹೋಗಿವೆ.

ಸೋಮವಾರಪೇಟೆ ಶಿರಂಗೇರಿ ಗ್ರಾಮದಲ್ಲಿ ...ವರ ಮಳೆಗಾಲದ ಘೋರವಾದ ಮಳೆಯಿಂದ ೧೦೦೦ ಬತ್ತಭೂಮಿ ನಷ್ಟವಾಗಿರುವುದರಿಂದ ರೈತರ ಜೀವನಾರ್ಥವಾಗಿ ಒಂದು ಗ್ರೇಯಿನ್ ಬ್ಯಾಂಕು ಫಂಡನ್ನು ಏರ್ಪಡಿಸಿ ಈ ವರ್ಷವೇ ರಿಜಿಸ್ಟರ್ ಮಾಡಿಸಬೇಕೆಂತ ಏರ್ಪಾಡಿನಲ್ಲಿ ಇರುವುದರಿಂದ ಪ್ರತಿ ಗ್ರಾಮಸ್ಥರೂ ಇದೇ ರೀತಿ ಬತ್ತದ ಫಂಡನ್ನು ಊರ್ಜಿತಪಡಿಸಿ ರೈತರ ಕಷ್ಟವನ್ನು ಕಳವು ಮಟ್ಟಿಗೆ ನಿವಾರಣೆ ಮಾಡಿಕೊಳ್ಳಬಹುದು.

ಗವರ್ನಮೆಂಟು ಪ್ರೆಸ್ ಹಾಲಿಸಲ್ಲಿದ್ದ ಉಬ್ಬ... ...ಪ್ರೆಸ್ಸನ್ನು ಕೊಡಗು ಕಂಪನಿಯವರು ಕ್ರಯಕ್ಕೆ ತೆಗೆದುಕೊಂಡಿದ್ದರಿಂದ ಈಗಿನ ಹೊಸ ಆಫೀಸಿಗೆ ರವಾನಿಸಲ್ಪಟ್ಟಿದೆ.

ಉತ್ತರ ಕೊಡಗು ತಾಲೋಕಿನ ನೇಂದಿಗುತ್ತಿಗೆ ಹರಾಜು ಇದೇ ತಾರೀಖು ೧೫ ನೇ ದಿನ ಮಡಿಕೇರಿಯಲ್ಲಿ ಆಗುತ್ತದೆ.

ಕಳೆದವಾರ ಪ್ರಕಟಿಸಿದಮೇರೆ ಮಹದೇವಪ್ಪೇಟೆಯಲ್ಲಿ ಮೆ|| ನಾಯುಡುರವರ ಕಟ್ಟಡದಲ್ಲಿದ್ದ ಕೊಡಗು ಆಫೀಸು ಈಗ ರೇಸ್ ಕೋರ್ಸಿನ ಬಳಿ ಇರುವ ಮೆ|| ಬ್ಯಾಸ್ಟರವರ ಹೊಸಕಟ್ಟಡಕ್ಕೆ ವರ್ಗಾಯಿಸಲ್ಪಟ್ಟಿದೆ. ಈಗ ಅಲ್ಲಿ ಕೆಲಸಮಾಡುವುದರಿಂದ ಅವಶ್ಯವುಳ್ಳವರು ಅಲ್ಲಿಗೆ ದಯಮಾಡಿಸಬೇಕಾಗಿ ಕೋರಿಕೆ.

ಕೊಡಗು ಬೋರ್ಡ್ ಅಫ್ ಡೈರೆಕ್ಟರುಗಳ ಮೀಟಿಂಗ್ ಇದೇ ತಾರೀಖು ೧೯ ನೇ ದಿನ ಸಾಯಂಕಾಲ ೪-೩೦ ಗಂಟೆಗೆ ಕೊಡಗು ಆಫೀಸಿನಲ್ಲಿ ನಡೆಯಲಿಕ್ಕಿದೆ.

ಜಮಿನ್ದಾರರ ಸಂಘದ ಜನರಲ್ ಮೀಟಿಂಗ್ ಹತ್ತಿರವಾದ್ದರಿಂದ ಆರ್ಗನೈಜಿಂಗ್ ಸೆಕ್ರಟರಿಯವರು ನಾಡು ನಾಡು ಪ್ರಚಾರ ಮಾಡಿದ ಕಮಿಟಿಮೆಂಬರುಗಳು ... ಗುವಮ್ಮ ಬೋಸತ್ತಿನಿಂದ ಈ ವರ್ಷದ ಚಂದಾಹಣ ವಸೂಲ್ಮಾಡಿ ಸದರಿ ಸಂಘದ ಟ್ರೆಝರರ್ (... ಮೆ|| ...) ಮನೆಯಿಂದ ... ಒಪ್ಪಿಸಬೇಕಾಗಿ ಕೋರಿಕೆ.

ಈ ವರ್ಷದ ಸಾರಾಯಿ ಅಂಗಡಿಗಳ ಹರಾಜು ಕಳೆದ ತಾರೀಖು ೩ ರಲ್ಲಿ ಮಡಿಕೇರಿಯಲ್ಲಿ ಆಗಿ ೧೯೨೩-೧೯೨೪ ನೇ ಸಾಲಿಗಿಂತ ೧೯೨೪-೧೯೨೫ ನೇ ವರ್ಷ ೩೦,೭೩೫ ರೂಪಾಯಿ ಕಮ್ಮಿಗೆ ಹರಾಜು ಆಗಿದೆ.

"ಕೊಡಗು" ಪೇಪರಿನ ಪ್ರಿಂಟಿಂಗ್ ಕೆಲಸವು ನಡೆಸಿ ಇಲ್ಲಿ ಏರ್ಪಾಡು ಆಗುವುದರಿಂದ ದೇಶಾಭಿಮಾನಿಗಳೆಲ್ಲರೂ ತಮಗಳ ಬಾಬ್ತು ಪಾವತಿಮಾಡಲು ಬಾಕಿಯಾದ ಷೇರು ಮೊಬಲಗು ಮತ್ತು ಚಂದಾಮೊಬಲಗು ವಗೈರೆ ಪಾವತಿಸಬೇಕಾಗಿ ಕೋರುತ್ತೇವೆ.

ಕೊಡಗು ಸಹಕಾರಿ ಸಂಘದ ಮಾರ್ಚ್ ಆಖೈರುವರೆಗಿನ ಲೆಕ್ಕವನ್ನು ಆಡಿಟ್ ಮಾಡಿಸಲು ಕಳೆದ ತಾರೀಖು ೫ ರಲ್ಲಿ ನಡೆದ ಮೀಟಿಂಗಿನಲ್ಲಿ ಏರ್ಪಾಡು ಮಾಡಿರುವುದರಿಂದ ಸೆಂಟ್ರಲ್ ಬ್ಯಾಂಕಿನಿಂದ ಸಾಲಪಡಕೊಂಡವರೆಲ್ಲರೂ ತಮಗಳ ಬಾಬ್ತು ಅವಧಿತೀರಲಿಕ್ಕಾಗಿರುವ ಮೊಬಲಗನ್ನು ಕೂಡಲೆ ಪಾವತಿಮಾಡಬೇಕಾಗಿದೆ.

ಕಳೆದ ತಾರೀಖು ೨ ರಲ್ಲಿ ಇಗ್ಗುತಪ್ಪ ದೇವರ ಭಕ್ತಜನರಾದ ಬಾಲ್ಯಸಂಘದ ಒಂದು ಮೀಟಿಂಗ್ ನಡೆಯುತ್ತಿರುವಾಗ್ಯೆ ಕುಂದೆಳಗ್ರಾಮದ ಕಂಬೆಯಂಡ ಒಂದು ಭತ್ತ ಕುಟ್ಟುವ ಕೊಟ್ಟಗೆಗೆ ಬೆಂಕಿಬಿದ್ದು ಉರಿಯುತ್ತಿದೆಯಾಗಿ ಅವರ ಮನೆ ಒಬ್ಬ ಹುಡುಗನು ಓಡಿಬಂದು ತಿಳಿಸಿದಾಗ ಸದರಿ ಮೀಟಿಂಗಿನಲ್ಲಿ ಹಾಜರಿದ್ದ ಕಂಬೆಯಂಡ ಮೂರವರು ಓಡಿಹೋಗಿ ನೋಡುವಾಗ್ಯೆ ಮನೆ ಮತ್ತು ಹುಲ್ಲು ಕುಂಚಗಳ ಹತ್ತಿರವಿರುವ ಕೊಟ್ಟಗೆಗೆ ಬೆಂಕಿಬಿದ್ದು ಹತ್ತಿರವಿರುವ ಯಾವದಕ್ಕೂ ನಷ್ಟವಾಗಲಿಲ್ಲವಾಗಿ ಕಂಡುಬಂತು. ಇದ್ದಲು ಸುಟ್ಟದ್ದನ್ನು ಕುಕ್ಕೆಯಲ್ಲಿ ತಂದು ಮಾಡಿಗದಲ್ಲಿಂದ ಬೆಂಕಿಹತ್ತಿದ್ದಾಗಿದೆ.

ಪಾರೆಸ್ಟು ರೇಂಜ್ ಆಫೀಸರಾಗಿದ್ದ ಮೆ|| ಮಾಳೇಟಿರ ದೇವಯ್ಯನವರಿಗೆ ತಾ|| 17-12-1923 ರಿಂದ ರಿಟೈಯರ್ ಆಗಬೇಕಾಗಿ ಹುಕುಂ ಆದದ್ದರಮೇಲೆ ಚೀಫ್ ಕಮಿಷನರವರಿಗೆ ಅಪೀಲು ಮಾಡಿಕೊಂಡದ್ದಕ್ಕೆ ತಾ|| 17-12-1923 ರಿಂದ 1 ತಿಂಗಳು 10 ದಿನದ ಪೂರ್ತಿ ಸಂಬಳದ ರಜವೂ, ತದನಂತರ 10 ತಿಂಗಳು 22 ದಿನ ಅರ್ಧಸಂಬಳದ ಪರ್ಲ್ಯೋರಜವೂ ಮಂಜೂರಾಗಲ್ಪಟ್ಟಿದೆಯಾಗಿ ವರ್ತಮಾನ.

ಹಿಂದೂದೇಶ.

ಸ್ಟೇಟ್ ಸೆಕ್ರೆಟರಿಯವರು ಪಾರ್ಲಿಮೆಂಟ್‌ನಲ್ಲಿ ಮಾಡಿದ ಭಾಷಣವು ಜನರಿಗೋಸ್ಕರ ತೃಪ್ತಿಕರವಾದ ಜವಾಬಲ್ಲವೆಂತಲೂ, ನ್ಯಾಯವಿಧಾಯಕ ಸಭೆಗೆ ಹೋದ ಮೆಂಬರುಗಳು ತಮ್ಮ ಅಭಿಪ್ರಾಯವನ್ನು ತೋರಿಸಲು ಸರಕಾರದ ಖರ್ಚಿಗೆ ಹಣವನ್ನು ಮಂಜೂರ್ ಮಾಡಕೂಡದೆಂತಲೂ ಮದ್ರಾಸಿನ ಒಂದು ಮೀಟಿಂಗ್‌ನಲ್ಲಿ ಠರಾವುಗಳು ಪಾಸಾದವು.

ಕಾಲ್ಯಾಟಿನಲ್ಲಿ ಕಳೆದ ಪ್ರವಾಹದಿಂದ ಜಮೀನು ಹಾಳಾದ್ದರಿಂದ 5000 ಎಕರೆ ಮೇಲೆ ಎರಡನೇ ಪಸಲಿನ ಕಂದಾಯವನ್ನು ಸರಕಾರದವರು ಮಾಫಿಮಾಡಿದ್ದಾರೆ.

ಪೂನಾದಲ್ಲಿ ಸಿ. ಯಫ್ ಅಂಡ್ರೂಜರು ಗ್ರಾಮವಾಸಿಗಳ ಬಡತನವು ಕಡಿಮೆಯಾಗಬೇಕಾದರೆ ಸರ್ವರೂ ಕೈನೂಲು ಬಟ್ಟೆಯನ್ನು ಧರಿಸಲು ಪ್ರಾರಂಭಿಸಬೇಕೆಂತಲೂ ವಿದ್ಯಾವಂತರೂ ಪಟ್ಟಣವಾಸಿಗಳೂ ಖದ್ದರ್ ಧರಿಸಿದರೆ ಗ್ರಾಮವಾಸಿಗಳು ಶೀಘ್ರದಲ್ಲೇ ಹಿಂಬಾಲಿಸುತ್ತಾರೆಂತ ಒಂದು ಭಾಷಣದಲ್ಲಿ ಹೇಳಿದರು.

ವಿ ಜೆ. ಪಟೇಲ್ ಎಂಬವರು ಮಹಾತ್ಮರಿಗೆ ಹತ್ತು ಲಕ್ಷ ರೂಪಾಯಿ ಅವರನ್ನು ಜೈಲಿನಿಂದ ಬಿಡುಗಡೆಮಾಡಿದ ಸಂತೋಷಕ್ಕೆ ಕೊಡಬೇಕೆಂತ ಪ್ರಕಟಿಸಿದರು. ಈ ಹತ್ತು ಲಕ್ಷ ರೂಪಾಯಿಗಳನ್ನು ಭಾಟಿಯಾ ಜಾತಿಯ ವ್ಯಾಪಾರಸ್ಥನೊಬ್ಬನೇ ಕೊಟ್ಟುಬಿಟ್ಟಿರುತ್ತಾನೆಂತ ವರ್ತಮಾನವು ಪ್ರಕಟವಾಗಿದೆ.

ಬೊಂಬಾಯಿ ನ್ಯಾಯವಿಧಾಯಕ ಸಭೆಯಲ್ಲಿ ಬ್ರಿಟಿಷ್ ಚಕ್ರಾಧಿಪತ್ಯದ ವಸ್ತುಪ್ರದರ್ಶನಕ್ಕೆ ಹಿಂದೂಸ್ಥಾನವು ಸೇರಕೂಡದೆಂಬ ಠರಾವು ಮಂಜೂರಾಯಿತು. ಕೈಗಾರಿಕೆ ಇಲಾಖೆಗೆ ಈ ಪ್ರದರ್ಶನದ ಖರ್ಚನ್ನು ಸರಕಾರದವರು ಸೇರಿಸಿದ್ದರು. ಈ ಬಾಬಿನ ಖರ್ಚು 43000 ರೂ ಯನ್ನು ಮಜಾಮಾಡಬೇಕೆಂತ ಠರಾವು ಪಾಸಾದದ್ದಾಗಿದೆ.

ಆಗ್ರಾ ಸೆಷ್ಷನ್ ಜಡ್ಜಿಯ ಕೋರ್ಟಿನಲ್ಲಿ ಒಬ್ಬ ಹಿಂದೀ ಪುರುಷನ ಮೇಲೆ ಇಬ್ಬರು ಯುರೋಪಿಯನ್ ಟಿಕೆಟ್ ಕಲೆಕ್ಟರು ಫಿರ್ಯಾದು ಮಾಡಿದ ಕೇಸಿನಲ್ಲಿ ಖುಲಾಸ ಆಯಿತು. ಸರಕಾರವು ಹೈಕೋರ್ಟಿಗೆ ಅಪೀಲುಮಾಡಿ ಜಡ್ಜ್‌ಮೆಂಟ್ ತರಾವಾಗಿ ಇಬ್ಬರಿಗೂ ಸಜವಾಯಿತು. ಸೆಷ್ಷನ್ ಜಡ್ಜಿಯವರು ಆ ಅಪರಾಧಿಯ ಪಕ್ಷ ವಹಿಸಿಕೊಂಡು ಸಾಕ್ಷಿಗಳನ್ನು ಬದ್ಧಿಯೇ ಪಾರ್ಶ್ವವಾಲು ಮಾಡಿದರೆಂದೂ ಕೇಸನ್ನು ತನಿಖಿ ಮಾಡಿದ ಹಿಂದೀ ಸಬ್ ಇನ್ಸ್‌ಪೆಕ್ಟರನ ಮೇಲೆ ಸೆಷ್ಷನ್ ಜಡ್ಜಿಯು ಅನಾವಶ್ಯ ಆಕ್ಷೇಪಣೆ ಬರೆದನೆಂದೂ, ಇಂಥಾ ಜಡ್ಜಿಯ ಪಕ್ಷಪಾತದ ಜಡ್ಜ್‌ಮೆಂಟಿನಿಂದ ಅಪರಾಧಿಗೆ ಅಪೀಲ್ ಕೋರ್ಟಿನಲ್ಲಿ ಏನೂ ಪ್ರಯೋಜನವಾಗುವದಿಲ್ಲವೆಂತಲೂ ಹೈಕೋರ್ಟ್ ಜಡ್ಜ್‌ಮೆಂಟು ಹೇಳುತ್ತೆ.

ಸ್ಟೇಟ್ ಸೆಕ್ರೆಟರಿಯವರ ಭಾಷಣವು ತೃಪ್ತಿಕರವಾಗದ್ದರಿಂದ ಇಂಡಿಯಾ ಸರಕಾರದ ಬಜೆಟ್ ಖರ್ಚಿನ ಮೊಬಲಗಿಗೆ ವಿರೋಧಿಸಬೇಕೋ ಬೇಡವೋ ಎಂಬ ವಿಷಯದಲ್ಲಿ ಸ್ವರಾಜ್ಯ ಪಾರ್ಟಿ ಮತ್ತು 'ಇಂಡಿಪೆಂಡೆಂಟ್' ಪಾರ್ಟಿಯವರೂ ಸೇರಿ ಚರ್ಚಿಸುತ್ತಾ ಇದ್ದಾರೆ. ... ಸ್ವರಾಜ್ಯಸ್ಥಾಪನೆಗೆ ತಕ್ಕ ಏರ್ಪಾಡು ಮಾಡಬೇಕೆಂದು ... ಸರಕಾರದವರು ಒಪ್ಪದಿದ್ದರೆ ಆ ಎರಡು ಪಾರ್ಟಿಯವರು ಒಂದಾಗಿ ಒಟ್ಟಿಗೆ ವಿರೋಧಿಸಬೇಕೆಂತ ಮೊದಲು ಒಪ್ಪಂದವಾಗಿದ್ದರೂ ಈಗ ಇಂಡಿಪೆಂಡೆಂಟ್ ಪಾರ್ಟಿಯವರಲ್ಲಿ ಕೆಲವರು ಸಂಶಯಪಡುತ್ತಿದ್ದಾರೆ.

ಮಧ್ಯಪ್ರಾಂತ್ಯದ ನ್ಯಾಯವಿಧಾಯಕ ಸಭೆಯಲ್ಲಿ ಸರಕಾರದ ಖರ್ಚಿನ ಮೊಬಲಗಿನ ಪ್ರತಿಯೊಂದು ಬಾಬನ್ನೂ ಮಜಾಮಾಡುತ್ತಲೇ ಇದ್ದಾರೆ.

ಹೊಳೆಗಳಿಂದಲೂ, ಭಾವಿಗಳಿಂದಲೂ ನೀರಾವರಿ ಕಾಂಗಾರಿಯ ಬೆಳವಣಿಗೆಯು ಎಷ್ಟು ಸಾಧ್ಯವಿದೆಯೆಂತಲೂ, ನೀರು ಎತ್ತಿ ಹಾಯ್ಸುವ ಅನುಕೂಲತೆಯನ್ನು ರೈತರಿಗೆ ಒದಗಿಸಿಕೊಡಲು ಏನು ಏರ್ಪಾಡು ಮಾಡಬಹುದೆಂಬದನ್ನು ತನಿಖಿಮಾಡಬೇಕೆಂತಲೂ ಕೌನ್ಸಿಲ್ ಆಫ್ ಸ್ಟೇಟ್ ಸಭೆಯಲ್ಲಿ ಠರಾವು ಪಾಸಾಯಿತು. ಸರಕಾರದವರು ಠರಾವಿಗೆ ವಿರೋಧಿಸಿದರು.

ಕಲ್ಕತ್ತಾಪಟ್ಟಣದಲ್ಲಿ ಡೇ ಎಂಬ ಯೂರೋಪಿಯನನ್ನು ರಿವಾಲ್ವರಿನಿಂದ ಕೊಂದ ಸಹಾ ಎಂಬ ಯುವಕನು ಕೊಂದದ್ದರಿಂದ ಅವನನ್ನು ಫಾಶಿಗೆ ಹಾಕಬೇಕೆಂತ ತೀರ್ಮಾನವಾಗಿ ಅತನನ್ನು ಕಳೆದ ಶನಿವಾರದಿನ ಗಲ್ಲಿಗೆ ಹಾಕಿದರು. ಸಾಯುವಮುಂಚೆ ತನ್ನ ತಾಯಿಗೆ ಬರೆದ ಪತ್ರದಲ್ಲಿ ತನ್ನಂಥ ಮಕ್ಕಳನ್ನೇ ಹಿಂದೂಸ್ಥಾನದ ಎಲ್ಲಾ ತಾಯಿಯಂದಿರು ಹೆರಬೇಕೆಂತಲೂ ತನ್ನ ತಾಯಿಯಂಥ ಹೆಂಗಸಿನಿಂದ ಹಿಂದೂಸ್ಥಾನದ ಪ್ರತಿಮನೆಯು ಪವಿತ್ರವಾಗಬೇಕೆಂತಲೂ ತನ್ನ ಪ್ರಾರ್ಥನೆಯಾಗಿದೆಯೆಂತ ಬರೆದಿದ್ದಾನೆ. ಇವನಿಗೆ ಬುದ್ಧಿ ಸರಿಯಿರಲಿಲ್ಲವೆಂತ ಇವನಕಡೆ ಲಾಯರು ವಾದಿಸಿದರು.

ಮದ್ರಾಸಿನಲ್ಲಿ ಮಾರ್ಚ್ 1ನೇ ತಾರೀಖಿನಿಂದ ದಾವಾ ಸ್ಟಾಂಪುಗಳು 25 ರೂ. ವರೆಗೂ ಅಂಟಿಸುವ ಏರ್ಪಾಡೀ ಮಾಡಲಾಗಿದೆ. ಇವರೆಗೆ 10 ರೂ. ಗಿಂತ ಹೆಚ್ಚಿನ ದಾವಾ ಸ್ಟಾಂಪುಗಳು ಚಾಪಾ ಕಾಗದದಂತೆ ಇತ್ತು. ನಮ್ಮ ದೇಶಕ್ಕೂ ಈ ತರಹದ ಸ್ಟಾಂಪೇ ಇನ್ನುಮುಂದೆ ಬರಬಹುದು.

ಮಹಾತ್ಮ ಗಾಂಧಿಯವರ ಹುಣ್ಣು ಸಂಪೂರ್ಣವಾಗಿ ವಾಸಿಯಾಗಿದೆ. ಆದರೂ ಶಕ್ತಿ ಪೂರಾ ಬರದ್ದರಿಂದ ಕೆಲವು ಸಮಯದವರೆಗೆ ಬೊಂಬಾಯಿ ಸಮೀಪವಿರುವ ಅಂಧೇರಿ ಎಂಬ ಸಮುದ್ರತೀರದ ಸ್ಥಳದಲ್ಲಿ ಇರುವದೆಂತ ನಿಶ್ಚಿಸಿದ್ದಾರೆ.

ಮದ್ರಾಸ್ ಪಟ್ಟಣದಲ್ಲಿ ಕಾರ್ಮಿಕರಾದ ಪರವಾಗಿ ಹೋರಾಡುತ್ತಿದ್ದ ಸಿಂಗಾರವೇಲು ಎಂಬವರನ್ನು ಸರಕಾರದ ಮೇಲೆ ಯುದ್ಧಕ್ಕೆ ಏರ್ಪಾಡುಮಾಡುತ್ತಾನೆಂಬ ಆಕ್ಷೇಪಕ್ಕಾಗಿ ಕಾನ್ಪುರದ ಮೇಜಿಸ್ಟ್ರೇಟರ ವಾರಂಟ್‌ಮೇಲೆ ದಸ್ತಗಿರಿಮಾಡಿದ್ದಾರೆ. ಇವರ ದೇಹಸ್ಥಿತಿಯು ಚೆನ್ನಾಗಿಲ್ಲದ್ದರಿಂದ ಮನೆಯಲ್ಲೇ ಬಿಟ್ಟುಹೋಗಿದ್ದಾರೆ.

ಶಿರೂರಿನಲ್ಲಿ ಒಬ್ಬ ಅಹಮ್ಮದ್ ಶಾಹೆ ಎಂಬುವನು ತನ್ನ ಮೊದಲಿನ ಹೆಂಡತಿಯ ಒಬ್ಬನೇ ಮಗನನ್ನು 2ನೇ ಹೆಂಡತಿಯ ಮತ್ತು [illegible] ಅಳಿನ ಸಹಾಯದಿಂದ ಕುತ್ತಿಗೆ ಹಿಸುಕಿ ಕೊಂದನೆಂಬ ಮೊಕದ್ದಮೆಯು ಅಲ್ಲಿಯ ಸೆಷ್ಷನ್ ಕೋರ್ಟಿನಲ್ಲಿ ವಿಚಾರವಾಗಿ ಮೂವರನ್ನು ಫಾಶಿಶಿಕ್ಷೆಗೆ ಗುರಿಪಡಿಸಿದ್ದಾರೆ.

ತಂಜಾವೂರು ಜಿಲ್ಲೆಯಲ್ಲಿ ರೈತರು ಕೊಡುವದಿಲ್ಲವೆಂಬ ಹಿಡಿದ ಹಟವು ನಡೆಯುತ್ತಲೇ ಇದೆ. ಜವಾಬ ಸೋತು, ಹರಾಜಾದಾಗ ಕೊಂಡುಕೊಳ್ಳಲು ಯಾರೂ ಒಪ್ಪುವದಿಲ್ಲ.

ಟರ್ಕಿಸುಲ್ತಾನರು ಒಟ್ಟು ಪ್ರಪಂಚದ ಮುಸಲ್ಮಾನ್ ಜಾತಿಯ ಮುಖ್ಯಸ್ಥರಾಗಿ ಇದ್ದದ್ದು ಅವರ ಪ್ರಾಪಂಚಿಕ ಬಲವು ಕಡಿಮೆಯಾಗಕೂಡದೆಂಬ ಮುಸಲ್ಮಾನರ ಖಿಲಾಫತ್ ಚಳವಳವು ಎಲ...

ಕರಾಚಿ ಮುನಿಸಿಪಾಲಿಟಿಯವರು ಅಲ್ಲೀ ಸಹೋದರರಿಗೆ ಒಂದು ಬಹುಮಾನಪತ್ರವನ್ನು ಒಪ್ಪಿಸಿದರು. ಅದನ್ನು ಮ.ಶ್ರೀ. ಶೌಕತ್ಅಲ್ಲಿಯವರು ಮಾತ್ರ ತಾವಿದ್ದು ತೆಗೆದುಕೊಂಡರು.

ವಿದೂಷಕ—ಸುಳ್ಳಲ್ಲವೆ. ನೀವೂ ಪಟ್ಟಮಹಮನೆಯು ಕೆಲವು ಉದ್ಯೋಗಸ್ಥರೂ ಸೇರಿ ಅಯ್ಯಣ್ಣನವರಮೇಲಿನ ಅಸೂಯೆಯಿಂದಲೊ, ಯಾ, ಇನ್ಯಾವಕಾರಣದಿಂದಲೊ ವೃಥಾ ದಂಡವಿಧಿಸಿದರೆಂಬ ದೋಷಹೊರಿಸಿದ್ದಲ್ಲವೆ.

ಕೇಳಿದವ—ಆಗಲಿ ಅಯ್ಯಣ್ಣನವರಿಗೆ ಮುಂದೆ ಮೂವತ್ತು ರೂಪಾಯಿ ವಿಧಿಸಿದ್ದಲ್ಲದೆ ವಸೂಲಾಗಲಿಲ್ಲ. ಈಗ ಅವರ ತಾರೀಖು ೨೧-೧೧-೨೩ರ ಬಾತ್ಮಿ ಹೊರಡಿಸಿದಮೇಲೆ ಮುಂದೆ ತಪ್ಪುವಿಧಿಸಿದ್ದಕ್ಕೆ ಪ್ರಸಃ ಹತ್ತು ಸೇರಿಸಿ ನಾಲ್ವತ್ತು ರೂಪಾಯಿ ಖರ್ಚುಮುಕ್ತ ವಿಧಿಸಿದ್ದಲ್ಲದೆ ಆ ಕೂಡಲೇ ಪೂರ್ತಿರೂಪಾಯಿ ವಸೂಲುಮಾಡಿ ಆ ಕ್ಕಿ ಕೆಲವು ರೂಪಾಯಿಗಳನ್ನು ಕೊಡಗರು ನಂಬಿರತಕ್ಕ ಮುಖ್ಯದೇವರ ಭಂಡಾರಕ್ಕೆ ತಪ್ಪುಕಾಣಿಕೆ ವಿದಿಸಿ ಉಳಿದುದನ್ನು ಕುಟುಂಬದ ಹಮೆಗೆ ತೆಗೆದುಕೊಂಡಿರುತ್ತಾರೆ. ಆ ಹಣ ವಿನಿಯೋಗಕ್ಕೂ ಬಳಸಿರಬೇಕೆಂದು ಆಯಿತಂತೆ ಇದೇ ನನ್ನ ಸುಳ್ಳುಬಾತ್ಮಿಯ ಪರಿಣಾಮ. ಸದ್ರತಿಮೇರೆ ಕೆಲಸ ನಡಿಸಿದ್ದಲ್ಲ. ಪಟ್ಟಮಹ ಮನೆಯವರು ಹಣವನ್ನು ಕಟ್ಟುವವರೆಗೆ ಹತ್ತು ರೂಪಾಯಿ ದಂಡ ವಿಧಿಸಿದ್ದಕ್ಕೆ ಕಾರಣವಿರುತ್ತದೆ. ಸರಿಯಾಗಿ ಆಚರಣೆ ಮಾಡದರಿಂದಲೇ ಇಂಥಾ ಕುಟುಂಬಸ್ಥರೂ ತಮ್ಮ ತಮ್ಮ ಮನೆತನದಲ್ಲಿ ನಡೆದ ಅಕೃತ್ಯಗಳನ್ನು ಮರೆಮಾಚದೆ ತಕ್ಕ ಪ್ರಾಯಶ್ಚಿತ್ತ ವಿಧಿಸಿದ್ದಕ್ಕಾಗಿ ನಾನೂ ನೀನೂ ಆಚಾರಾಭಿಮಾನಿಗಳಾಗಿ ಸಮಸ್ತರೂ ನಾಯಕರಾದವರಿಗೆ ವಂದಿಸತಕ್ಕ ಕೆಲಸವಾಗಿದೆ.

ವಿದೂಷಕ—ಸರಿ ಸರಿ ಬಳ್ಳಿ ನಿನ್ನ ಬಾತ್ಮಿ ಇದು ಪ್ರಮಾಣಪೂರ್ವಕವಾದ ಮಾತೆ?

ಕೇಳಿದವ—ಬಿಡೊ! ಪ್ರಮಾಣಪೂರ್ವಕವಲ್ಲದ ಮಾತು ನಾನು ಎಂದಿಗೂ ಎತ್ತುವವನಲ್ಲ. ನಿನ್ನ ಹಾಗೆ ಹುಸಿ ಹೇಳುವನು. ದುರ್ದಾಣಿಸಿ ನಿಜಸ್ವರೂಪ ವಹಿಸಿ ಆ ಕಲ್ಪನೆ ಕಲ್ಪಿಸಿ ಕೇಳಿಸಿದ್ದಾಗಿದೆ. ಆ ಲಿ, ಪಂಚರು ಈಗ ಯಾರಿಗೆ ಯಾವ ವಕೀಲರಾನಸಿಕ್ಕದೆ ಸುಳ್ಳುಬಾತ್ಮಿ ಒರೆ ಪದ್ದೆಂದು ಹೇಳುವರು. 'ಅಡಿಗೆ ಬಿದ್ದರೂ ಮೂಗು ಮೇಲಲ್ಲವೆ' ಎಂದು ಸಮಯ ಕಾಲೂ ತಾನೂ ಆ ದಂಡಕೊಡಲಿಲ್ಲವೆಂದೂ ಈ ಬಾತ್ಮಿಯೂ ಸುಳ್ಳೆಂದೂ ಹೇಳಬಹುದು. 'ಜನರನ್ನು ಮೆಚ್ಚಿಸಲಿಕ್ಕೆ ಜನಾರ್ದನನಿಂದಲೇ ಕೂಡದು' ನಿಜಾಂಶವಿಮರ್ಶಾ ಪೂರ್ವಕ ವಾಚಕರು ಚನ್ನಾಗಿ ಯೋಚನೆಮಾಡಲಿ. ಮಾಡಿದ ತಪ್ಪನ್ನು ಮರೆಮಾಚಿಕೊಂಡು ನನ್ನ ಬಾತ್ಮಿಯನ್ನು "ವೃಥಾ ಚುಚ್ಚಿ ಕೆರಿಸುತ್ತೇನೆಂಬ" ಬಾತ್ಮಿಗೆ ಇವರ ಪ್ರತಿಫಲವಾಗಿ ಮೂಗಿ ಗೆ ದೊರೆತ ಹತ್ತು ರೂಪಾಯಿಗಳ ನಿಜಾಂಶ ಸಾಕ್ಷಿಯಾಗಿದೆ. ಕರ್ಮಕ್ಕೆ ತಕ್ಕ ಫಲ ಎಂಬುದು ಇವರ ಹೃದಯದಲ್ಲಿ ಚನ್ನಾಗಿ ವೇದ್ಯವಿರಲಿ.

ನಿನಗೂ ನನಗೂ ಈ ಮಾತಿನ ಹೆಚ್ಚು ವಿಚಾರದಿಂದ ಪ್ರಯೋಜನವೇನು? ನಿಜಾಂಶ ಹ್ಯಾಗಿದ್ದರೂ ಸುಮ್ಮನೆ ಉದ್ಯೋಗಸ್ಥರನ್ನು ದೂರಬಾರದು. ನಮ್ಮ ಕಾರ್ಯಕ್ಕೆ ತೆರಳುವ ಅಂದಿಗೆ ಅದೇ ಬಾತ್ಮಿ. ಇಂದಿಗೆ ಇದೊಂದು ಆಶ್ಚರ್ಯವರ್ತಮಾನ,

ಇಲ್ಲಿಗೆ ಮಂಗಳ,
ಕಮ್ಮೆಯಿರಲಿ,
ಈ ಸಂವಾದಕೇಳಿದವ

ಸೇರುವಂಥವರೆ?

ಕೊಡಗು ತಾರೀಖು ೨೯ನೇ ಫೆಬ್ರವರಿಯ ಕ್ರಿಸ್ತೀ ಸಂಚಿಕೆಯಲ್ಲಿ "ಬಲಮುರಿಗ್ರಾಮಸ್ಥ" ನೆಂಬ ಹೆಸರಿನ ಸರಕಾರವನ್ನು ಉದ್ದೇಶಿಸಿ ಬರೆದಿದ ಲೇಖನವನ್ನು ಆದ್ಯಂತವಾಗಿ ವಿಚಾರಮಾಡಿ ನೋಡುವಾಗ್ಯೆ ಈ ಲೇಖನವು ಒಂದು ಚಮತ್ಕಾರಯುಕ್ತವಾದದೆಂದು ಕಾಣುತ್ತದೆ. ಬಲಮುರಿ ಮಠವು ಸಂಸಾರಿ ಮಠವಾಗಿ ಅಲ್ಲಿಗೆ ಒಂದ ಇಂಗವು ಮುಂತಾದವರಿಗೆ ಸನಡಿಸತಕ್ಕ ಹಕ್ಕಿನದ್ದಾಗಿ ಇರುತ್ತದೆ. ಪೂರ್ವ ಕಾಲದ ಆಸ್ತಿಯಿಂದ ದೇವಸ್ಥಾನಗಳಿಗೆ ಅಗ್ನೀಯನು ವಿಧದಗಳಿಗಾಗ್ಲಿ, ವಿನಿಯೋಗವು ಮುಂದಿನಿಂದ ನಡೆದು ಬರುತ್ತಿದ್ದಿಲ್ಲ. ಮತ್ತು ಈಗಲೂ ನಡೆಯುವ. ಹೀಗೆ ನಡಿಯುವದಿಲ್ಲವೆಂದೂ ಇದನ್ನು ಚ ಕಾಪಾಡಿಕೊಂಡು ಬರುವದಿಲ್ಲವೆಂದು ಮುಂತಾ ಗ್ರಾಮಸ್ಥರು ಅನೇಕವೇಳೆ ಅರ್ಜಿಬರಕೊಂಡೂ ಸರಕಾರದವರು ಆ ವಿಷಯಕ್ಕೆ ಕೈಹಾಕುವದಿಲ್ಲ. ಇಂದಾರಸ್ ಕೊಟ್ಟು ಅನೇಕ ಇಂದಾರಸುಗಳು ಗ್ರಾಮಸ್ಥರ ಜೇಬಿನಲ್ಲಿ ತುಂಬಿರುತ್ತದೆ. ಈಗ ಸಂನ್ಯಾಸಿಮಠಗಳು ಪರಾಧೀನವಾಗಿ ಹೋಗು ಮಠದ ಸ್ವಂತಹಕ್ಕಾಗಿರುವ ಈ ಸಂಸಾರಿ ಮಠ ಸರಕಾರದವರಿಗೆ ಇರುವ ಹಕ್ಕೇನು? ಅಷ್ಟೇಕೆ! ಬಲಮುರಿ ನದಿಯ ಎಡಪಾರ್ಶ್ವದಲ್ಲಿದ್ದ ಸಂನ್ಯಾಸಿ ... ನ್ನು ಈ ಮುಂಚೆ ಪರಾಧೀನಮಾಡುವಾಗ್ಯೆ, ಸರ ... ತಿಳಿಸ ತಹದಾಹದೆ ಬಲಮುರಿ ಗ್ರಾಮಸ್ಥರು ನಿದ್ದೆಮಾಡುತ್ತಿದ್ದರೆ ಮಠಗಳು ಎಷ್ಟು ವಿಧವಾಗಿರುತ್ತವೆ? ಮಠಕ್ಕೆ ಬಿಟ್ಟ ಮಾನ್ಯದ ವಿನಿಯೋಗವೇನು? ಬಿಟ್ಟಿದ್ದರೆ ಇಂತಾ ಸಂಗ್ರಹಗೇನೆಂಬ ಸನ್ನದು ನಿಮ್ಮ ಬಳಿಯಿದೆಯೆ? ಮತ್ತು ಬಿಡಲು ಕಾರಣವೇನು? ಮಠಗಳಲ್ಲಿ ಸರಕಾರದವರಿಗೆ ಎಷ್ಟರಮಟ್ಟಿಗೆ ಸಂಬಂಧವಿರುತ್ತದೆ? ಇನ್ನೂ ಯಾವ ಯಾವ ಮಠಗಳಲ್ಲಿ ಹ್ಯಾಗೆ, ಹ್ಯಾಗೆ, ಮಠಗಳು ಗ್ರಾಮಸ್ಥರಿಗೆ ಹಕ್ಕು ಈ ಮಠದಲ್ಲಿ ಹೀಗೆಯೆ ನಡಿಯಬೇಕೆಂದೂ ನಡಿಸುವಿದ್ದರೆ ಇಂತಾದ್ದೇ ಪರಿಹಾರವೆಂಬ ನಿರ್ಬಂಧವಿದೆಯೋ? ಇದ್ದರೆ ಯಾವದು? ಮಠದ ಜಾಗೀರು, ಪದಾದಿನ ಮಾತಕೂಡದೆಂಬ ಗ್ರಾಮಸ್ಥರ ಅರ್ಜಿಮೂಲಕ ಸರಕಾರದವರು ಅದಕ್ಕೆ ಕೈಯಿಕ್ಕಿ ಹಾಗೆ ಗ್ರಾಮಸ್ಥರ ಮನೋರಥವನ್ನು ಈಡೇರಿಸಿ ಹಾಗೆ ಜಾಗೀರು ಉಳಿಸಿದ ಮಠಗಳು ಕೊಡಗಿನಲ್ಲಿ ಎಷ್ಟಿದೆ? ಆಯಾ ಗ್ರಾಮಸ್ಥ ಮಹಾಶಯ! ಇದನ್ನೆಲ್ಲಾ ನೀವು ಯೋಚನೆಮಾಡದೆ ಬಲಮುರಿ ಮಠ ಪರಾಧೀನವಾಗುತ್ತದೆಂದೂ ಹಾಗೆ ಪರಾಧೀನವಾಗದಂತೆ ಸರಕಾರದವರು ನಿರ್ಬಂಧಪಡಿಸಬೇಕೆಂದೂ ಆ ವಿಷಯದಲ್ಲಿ ಸರಕಾರದವರು, ಇನ್ನಾದರೂ ಗಮನಕ್ಕೆ ತೆಗೆದುಕೊಳ್ಳಬೇಕೆಂಬ ನಿಮ್ಮ ಲೇಖನಕ್ಕೆ ಏನು ಹೇಳಲಿ! ಈಗೇ ಸಿದ್ಧಪ್ಪನವರಿಗೆ ಪಟ್ಟವಾಗುವ ಸಮಯ ತಕರಾರು ಬಂದಿದ್ದಾಗ ಅವರಿಗೆ ಹೊತ್ತಾಸೆಮಾಡಿದ ಗ್ರಾಮಸ್ಥರಾರು? ಆದೇ ಜೊತೆ ಅಚೆಕರೆದ ... ಮಠವನ್ನು ಪರಾಧೀನಮಾಡುವಾಗ ... ಸಹಾಯ ಮಾಡಿದ ... ನೀವು ... ಗ್ರಾಮಸ್ಥರು? ಈ ಸಿದ್ದಪ್ಪನವರ ಮೂಲಕವಾಗಿ ಯಾಗಲೀ ಯಾ, ಇವರ ಮುಂದಿನವರ ಮೂಲಕವಾಗಿಯಾಗಲೀ ... ನಿಮ್ಮ ಗ್ರಾಮದ ಸಂಬಂಧವಾಗಿ ನಡಿಯುತ್ತಿ ... ಧರ್ಮಕಾರ್ಯ ... ಮಾಡಿದವರು? ... ನೀವು ... ಬಾರದಿದ್ದರೆ ... ಅಭಿಪ್ರಾಯ ಈ ಸಿದ್ದಪ್ಪನವರಿಗೆ ಸಿಕ್ಕಿ ... ವರ ಮಠಾಗುತ್ತಾ ... ಸರಕಾರದವರಿಂದ ಮಾಡಿಸಲು ... ಈತನು ... ಮಠಕ್ಕೆ ... ಬರಕೊಟ್ಟು ನರುವ ಎಷ್ಟು ಯಿತು ... ಪ್ರತಿಕ್ರಿಯಿರಲ್ಲವೆ! ಇಗರೆ ನೀವೆಲ್ಲಿ ಇದ್ದಿರಿ! ... ಹೇಳದೆ ಮಾಡಿದ ... ರಾತಿ ವಿನಯ ಮಾಡಿದ ಈ ಕಾರ್ಯವನ್ನು ರದ್ದುಮಾಡಬೇಕೆಂದು, ಸರಕಾರದವರು ಜೊತೆಸಿದರೂ ರದ್ದುಮಾಡದ್ದರಿಂದ ಹಾಗೆಯೆ ... ಮಠದವರಿಗೆ ... ಅಂಗಿಸಂತೆ ಕಾಪಾಡಿಕೊಡಬೇಕೆಂಬ ಇರಕ್ಕು ಪ್ರಕಾರ ಸರಕಾರದಿಂದ ಗೇಣಿ ಮಂಜೂರಾಯಿತು. ಗೇಣಿಗೆ ಬರಸಿದ ಲಾಗಾಯಿತಿನಿಂದ ಗೇಣಿದಾರರು ಅಲ್ಲಿ ವಾಸಮಾಡದ ಮನೆಗೆ ... ಹಾಕಿಸುವದು ಕಾಪಿತೋಟ ಕೆಲಸ ಮುಂತಾದುದು ... ಮಾಡಿಕೊಂಡು ಅನುಭವಿಸುತ್ತಾ ಇದ್ದರೂ ಆಪ್ತ ಸತ್ಸ್ಮೃತಿಗಳಿಗೆ ಹುಚ್ಚು ಬಾದಕಹಿಗಿದ" ನೆಂಬಂತೆ ಈ ಬಲಮುರಿಗ್ರಾಮಸ್ಥನೆಂಬ ಮಹಾಶಯರು ಈಗ ಸರಕಾರದವರ ಅವಗಾಹನೆಗೆ ತರುವರೆ ಹೊರಟದನ್ನು ವಿಚಾರಮಾಡುವಾಗ ಇದು ಕೇವಲ ಸ್ವಾರ್ಥ ಪರತೆಯ ಮತ್ಸರದ ತಪ್ಪುದಾರಿಯನ್ನು ಯಾರು ತಾನೆ ತಿಳಿಯಲಾರರು? ಜತಕವೆಂದು ಹೆಸರಿಟ್ಟುಕೊಂಡಿರುವ ಮಠದಮನೆಯು ಅಗ್ನಿದೇವಿಯ ಬಾಯಿಗೆ ತುತ್ತಾದಾಗ್ಯೆ ಈ ಗ್ರಾಮಸ್ಥರು ಈ ಮಠಾಧಿಪತಿಯು ಪೂರ್ತಿ ಕರ್ಜಿನಿಂದ ಅತಿಥಿಗಳಿಗೆಂದು ಈಗ ಹೇಳುವ ಕಟ್ಟಡವನ್ನು ಕಟ್ಟಿಸುವದು ಬಿಟ್ಟು ದೇಶವೆಲ್ಲತಿರುಗಿ ಚಂದದಿಂದ ಕಟ್ಟಿಸಿದಲ್ಲಿ ಸ್ವರಿಗೆ ಗ್ರಾಮಸ್ಥರು ಸವರಿ ಮಠದ ಸೊತ್ತಿಗೆ ಅರಿಹದಲಿಲ್ಲವೆಂಬುದು ಪರಿಷ್ಕಾರವಾಗಿ ವೇದ್ಯವಾಗುತ್ತೆ.

ಸುಜ್ಞೆಯು.

ದೂರದ ಬೆಟ್ಟ ನುಣ್ಣಗೆ.

ಅಯ್ಯಾವಾಚಕರೆ,

ನವನಾಗರೀಕತೆಯನ್ನು ಅನುಸರಿಸುವ ಆಡಂಬರದಲ್ಲಿ ಪ್ರತಿ ಒಂದು ದೇಶವು ಮುಂದವರಿಯುತ್ತಲಿದೆ. ತಮ್ಮ ತಮ್ಮ ಸ್ವಾತಂತ್ರ್ಯಕ್ಕಾಗಿಯೂ ಅಧಿಕಾರಕ್ಕಾಗಿಯೂ ಹೋರಾಡುವುದೇ ಈಗಿನ ಜನಾಂಗದ ಮುಖ್ಯೋದ್ದೇಶ. ಆದರೆ ಆಯ್ಯಾ, ಕೊಡಗುದೇಶದ ನಿವಾಸಿಗಳಾದ ನಮ್ಮ ಸ್ಥಿತಿಯಾದರೂ ಹೇಗಿರುವುದು, ಕೆಲವು ವರ್ಷಗಳ ಹಿಂದಿನಿಂದ ಕೊಡಗು ಮದ್ರಾಸಿನ ಸೇರಿಸುವಿಕೆಯ ಹೋರಾಟವಾಗಿ ಯಾವ ಪ್ರಯೋಜನವೂ ಇಲ್ಲದೆ ಅಲ್ಲಲ್ಲಿಯೇ ನಿಂತಿತು. ಅನಂತರ ಕೌನ್ಸಿಲ್ ಬೇಕೆಂಬದಾಗಿ ಹೋರಾಡಲು ಕೌನ್ಸಿಲೂ ದೊರಕಿತು. ಆದರೆ ಕೊಡಗಿನಲ್ಲಿ ಈಗ ತಾನೆ ವಿದ್ಯಾಪ್ರಚಾರವಾಗ ಹತ್ತಿರಲು ಚಿಗುರುವ ಮರವನ್ನು ಕತ್ತರಿಸುವಂತೆ ರಿಟ್ರೆಂಚ್‌ಮೆಂಟ್ ಬಂತು. ಇದರಿಂದ ಆದ ಫಲಗಳು ಸರ್ವರಿಗೂ ತಿಳಿದೇ ಇದೆ. ಅನೇಕರು ಮನೆಸೇರಿದರು, ಬಡ ಬಗ್ಗರ ಬಾಯಿಗೆ ಮಣ್ಣಾಯಿತು. ಅಲ್ಪಸ್ವಲ್ಪ ಉಳಿದ ವಿದ್ಯಾರ್ಥಿಗಳು ಶಾಲಾಸಂಸ್ಥೆಗಳಿಗೆ ಸೇರಿ ತಲೆಯೆತ್ತಲಾರಂಭಿಸಿದರು. ಆದರೆ "ಕೈಯಲ್ಲಿರುವ ಹಕ್ಕಿಯನ್ನು ಬಿಟ್ಟು ಹಾರುವ ಹಕ್ಕಿಯನ್ನು ಹಿಡಿಯು" ಹೋದಂತೆ ನಮ್ಮಲ್ಲಿರುವ ಟ್ರೈನಿಂಗ್ ಶಾಲೆಯನ್ನು ತೆಗೆದು ಬೆಂಗಳೂರು ಎಂಬರೆ ದೊಡ್ಡಪಟ್ಟಣ ಅಲ್ಲಿಗೆ ನಮ್ಮ ವಿದ್ಯಾರ್ಥಿಗಳು ಹೋದರೆ ಅವರು ಬರುವಾಗ ಕೈಲಾಸವನ್ನೇ ತರುವರೆಂಬ ಭಾವನೆಯಿಂದ ಬೇಕಾದಷ್ಟು ಸಲಹೆಗಳನ್ನು ಕೊಡಗು ಫಂಡಿನಿಂದ ಕೊಟ್ಟು ಅಲ್ಲಿಗೆ ಕಳುಹಿಸಿದ್ದಾಯಿತು. ದಯೆಯುಳ್ಳ ಸರಕಾರದವರಿಂದ ಬಲ್ಲ ಕೇಳಸವನ್ನೇ ವಹಿಸಿದಂತಾಯಿತು. ಕೊಡಗು ಟ್ರೈನಿಂಗ್ ವಿದ್ಯಾರ್ಥಿಗಳಿಗೆ ವಾಸಕ್ಕೆ R B \ ಹಾಸ್ಟೆಲ್ ಆಯಿತು. ಊಟಕ್ಕೆ ಸಬ್ ದೊರೆಗಳ ಕೃಪಾಪ್ರಸಾದವಾ ಊಟದ ಮನೆಯೂ ಕೊಡಗು ವಿದ್ಯಾರ್ಥಿಗಳಿಗಾಗಿಯೇ ತೆರೆಯಿತು. ಅಹಾ! ಅಹಾ! ಅವರ ಭಾಗ್ಯವೇ! ಇನ್ನೇನಾಗಬೇಕಾಯಿತು? ಅವರವರ ಯೋಗ್ಯತಾನುಸಾರ ಬಾಡಾಯಿತು, ಸ್ಥಾನಾಯಿತು, ಭದ್ರವಾಯಿತು. ಮಹತಾಡಜೋಡಿ, ಗಡಿಬಿಡಿ, ಹುಂ! ಹುಂ! ಸ್ಟೈಲ್ "ಡಿಸ್‌ಮಿಸ್!" ಇನ್ನೊಂದು ಕಡೆಯಿಂದ ಹಾಸ್ಟೆಲ್ ಪ್ರೊಕ್ಟರ ಆರ್ಡರ್! ಅಡಿಗೆಯವರ ದರ್ಬಾರ್ ನಾವು ಹಾಕಿದ್ದನ್ನೇ ಎಳ! ಯೆಂಬ ಅಪ್ಪಣೆ ಆಜ್ಞೆಯೂ ಆಯಿತು. ಇನ್ನೇನುಬಿಡಿ, ಎಡೆ ಎಡೆ ಸ್ವದೇಶದ ಕುಸುಕುಸಾಯಿತು. ಆದಕ್ಕೆ ದೊರೆಗಳ ಗರುಮುರಾಯಿತು. ಹೆಡ್‌ಮಾಸ್ಟ್ರಗಳ ನವಕುದಾರನೆಯಾಯಿತು. ಇದರಿಂದ ಏನಾಯಿತು? ಪ್ರೊಕ್ಟರ ಜೋಳಿಗೆಯು ತುಪ್ಪದಲ್ಲೇ ಬಿದ್ದಂತಾಯಿತು. ಪಾಪ! ದೊರೆಗಳಾದರೂ ಏನು ಮಾಡಿಯಾರು? "ತಲೆತುಂಬಾ ಹೊರೆಯಾದವರಿಗೆ ಇಳಿಯೇ ಭಾರ" ಯೆಂಬಂತೆ ಎಷ್ಟೆಷ್ಟೋ ಪ್ರೊಕ್ಟರುಗಳನ್ನು ಕಟ್ಟಿಕೊಂಡಿರುವ ದೊರೆಯವರಿಗೆ ಈ ಪ್ರೊಕ್ಟರನ್ನು ಕಟ್ಟಿಕೊಂಡು ಯೋಚನೆ ಮಾಡ್ಯಾರು? ಇವೆಲ್ಲ ಯಾರ ತಪ್ಪಲ್ಲ. ನಮ್ಮ ನಿವಾಸಸ್ಥೆಯು ಇನ್ನೂ ಬಿಡದಿರುವುದೇ ನಮ್ಮ ತಪ್ಪಾಗಿದೆ ಅಂತಹ ನಿವಾಸಸ್ಥೆಯೇ ನಮಗಿರಲೆಂದು ಕೂಡಿರುವ ಬ್ರಾಹ್ಮಣರು ನಮ್ಮ ದೇಶದಲ್ಲಿ ಸ್ಥಾಪಿಸಿದವರೆಗಾದರೂ ಈ ನಿವಾಸಸ್ಥೆಯು ತಪ್ಪಿದರೂ ಆಗಿರುತ್ತೆ. ಕೊಡಗು ದೇಶದ ಇದೀ ಆಡಳಿತವನ್ನು ನಡೆಯಿಸುತ್ತಿರುವ ಸರಕಾರಕ್ಕೆ ಈಗ ಬೆಂಗಳೂರಲ್ಲಿ ಯಾವ ಯಾವ ಗ್ರೇಡು ಹೊಂದಿರುವ ಉಪಾಧ್ಯಾಯರಿರುವರೋ ಅವರನ್ನು ಅದೇ ಸಂಬಳದಲ್ಲಿ ಇಲ್ಲೇ ಇಟ್ಟು ಟ್ರೈನಿಂಗ್ ಶಾಲೆಯನ್ನು ಮಡಿಕೇರಿಯಲ್ಲೇ ನಡೆಸಿಸುವುದು ಒಮ್ಮೆಯೂ ನಷ್ಟವಾಗಿತ್ತೆ? ಮಡಿಕೇರಿಯಲ್ಲಿ ಟ್ರೈನಿಂಗ್ ಶಾಲೆ ಇರುವಾಗ ಎಷ್ಟು ಮಂದಿ ಎಲ್ ಟಿ ಗಳಿದ್ದರು. ಈಗ ಬೆಂಗಳೂರಲ್ಲಿ ಎಷ್ಟು ಜನರಿದ್ದಾರೆ? ಮಡಿಕೇರಿ ಮತ್ತು ವಿರಾಜಪೇಟೆಯಲ್ಲಿ ಚರಿತ್ರೆ ಬೋಧ್ಯಾಯರಾಗಿದ್ದ ಮ್ಯೆಂದಪ್ಪನವರಲ್ಲದೆ ಇನ್ನಾರು ಗ್ರಾಜುಯೇಟುಗಳು ಇಲ್ಲ. ಇನ್ನೊಬ್ಬರು ಇಂಟರ್ ವಿದ್ಯಾವಂತರಿವರ ಇವರಿಗೆ ಮಕ್ಕಳ ಗಲಾಟೆಗಿಂತ ಮುಪ್ಪಿನಗಲಾಟೆಯೆ ಹೆಚ್ಚಾಗಿದೆ. ಇವರೊಬ್ಬರೆ ಸೆಕೆಂಡ್ ಗ್ರೇಡಿನ ತರಬೇತು ಉಪಾಧ್ಯಾಯರುಗಳು ಉಳಿದವರೊಬ್ಬರು ಮೆಟ್ರಿಕ್ಯುಲೇಶನ್ ಪಾಸಾದವರು ಇವರು ಹೈಯ್ಯರ್ ಮತ್ತು ಎಲಿಮೆಂಟರಿ ಗ್ರೇಡಿನ ತರಬೇತು ಉಪಾಧ್ಯಾಯರು ತುಂಬಾ ಕೆಲಸ ಇದರಿಂದ ಏನು ಪ್ರಯೋಜನವಾದೀತು?

ನಮ್ಮ ವಿದ್ಯಾರ್ಥಿಗಳು ಪಟ್ಟಣದಲ್ಲಿದ್ದು ತಿರುಗಿ ತಿಳಿಯುವುದೆಂದರು ಏನು? ಬಳ್ಳಿ ಡ್ರೆಸ್‌ಮಾಡಿ ತಿರುಗುವುದೊಂದೆ. ವೀಣೆಯನ್ನು ಹಿಡಿದು ಬಾರಿಸಲು ತಿಳಿಯದವನು ಅದನ್ನು ನುಡಿಸುವುದಾದರು ಎಂತು? ಅದರಂತೆ ಬೋಧನಾಕ್ರಮ ತಿಳಿಯದ ಈ ವಿದ್ಯಾರ್ಥಿಗಳು ಬೆಂಗಳೂರಿನ ಉಪಾಧ್ಯಾಯರುಗಳಾಗಿ ಬಂದೂ ಹಳ್ಳಿಶಾಲೆಗಳಲ್ಲಿ ಮಾಡುವುದು ಒಣಡಂಭವಲ್ಲದೆ ಮತ್ತೇನು? ಅಯ್ಯಾ! ಹೊಸತಾಗಿ ಚುನಾವಣೆಯಾಗಿರುವ ಅನೇಕ ಕೌನ್ಸಿಲ್ ಮೆಂಬರುಗಳಲ್ಲಿ ಚತುರರೂ, ವಿದ್ಯಾವಂತರೂ, ವಿವೇಕಿಗಳೂ, ದೇಶಾಭಿಮಾನಿಗಳೂ ಹಲವರಿದ್ದಾರೆ. ಅವರಾದರು ಈ ವಿಷಯಗಳನ್ನೆಲ್ಲಾ ಪರ್ಯಾಲೋಚಿಸಿ ತಮ್ಮ ತಮ್ಮ ಠರಾವುಗಳಲ್ಲಿ ಇದೊಂದನ್ನು ಸೇರಿಸಿ ಘನಸರ್ಕಾರದವರಲ್ಲಿ ಚರ್ಚಿಸಿ ಟ್ರೈನಿಂಗ್ ಶಾಲೆ ನಮ್ಮಲ್ಲೇ ಇರುವಂತೆಯಾದರು ಯಾಕೆ ಮಾಡಬಾರದು.

ಮತ್ತು ಇದೂ ಅಲ್ಲದೆ ಈಗಿನ ಸಬ್ ಅಸಿಸ್ಟೆಂಟರಾದ ಮ|| ರಾ|| ಉತ್ತಯ್ಯನವರು ವಿವೇಕಿಗಳು ಜ್ಞಾನಿಗಳಿರುವುದರಿಂದ ಈಗ ಬೆಂಗಳೂರಲ್ಲಿರುವ ವಿದ್ಯಾರ್ಥಿ ಅವಸ್ಥೆಗಳನ್ನು ಚೆನ್ನಾಗಿ ವಿಚಾರಿಸಿ ಅವರಿಗೆ ಈ ರೀತಿ ಯಾದ ಊಟದ ಏರ್ಪಾಡುಗಳನ್ನು ತಿದ್ದಿ. ಬೇರೆ ಕಂಟ್ರಾಕ್ಟುಸಿಸ್ಟಮ್ ಅಥವ ಡಿವೈಡಿಂಗ್ ಸಿಸ್ಟಮ್

ಗಳಲ್ಲದೆ ಗವರ್ನಮೆಂಟಿನಿಂದಲೇ ಹಾಸ್ಟೆಲನ್ನು ನಡಿಸುವಂತೆಯೂ ಮತ್ತು ಇನ್ನು ಮುಂದಕ್ಕಾದರು ಟ್ರೇನಿಂಗ್ ವಿದ್ಯಾರ್ಥಿಗಳಿಗೆ ನಮ್ಮಲ್ಲೇ ಟ್ರೇನಿಂಗ್ ಶಾಲೆ ಆಗುವಂತೆಯೂ ಪ್ರಯತ್ನಿಸುವಂತೆ ದೇವರು ಅವರಿಗೆ ಸದ್ಬುದ್ಧಿಯನ್ನು ಕೊಡಲೆಂದು ಪ್ರಾರ್ಥಿಸುತ್ತೇನೆ

ಇಂತು ನಾನೊಬ್ಬ ಪ್ರತ್ಯಕ್ಷದರ್ಶಿ.

ಅಯ್ಯಾ ಎಡಿಟರೇ, ತಾವಾದರೂ ನಮ್ಮ ಕಡೇ ನಾಡಾದ ಶ್ರೀಮಂಗಲನಾಡಿನ ಬಡರೈತರ ಗೋಳುಹವಾಲನ್ನು ಕೊಟ್ಟ ಉರಿದು ಪೇಪರಿನ ಒಂದು ಕಡೆಯಲ್ಲಿ ಪ್ರಕಟಿಸುವಿರಾಗಿ ಕೋರಿಕೆ.

ನಮ್ಮ ಶ್ರೀಮಂಗಲನಾಡೆಂಬುದು ಈಗ ಒಂದು ನಾಡಾಗಿದೆ. ಮೊದಲು ಅಂಜಿಗೇರಿನಾಡು, ತಾವಳಗೇರಿ ಮೂರ್ನಾಡು ಎಂಬದಾಗಿ ನಾಡುಗಳೆರಡಾಗಿದ್ದು ಎರಡು ನಾಡುಕಚೇರಿಗಳು ಸಹ ಇದ್ದುವು ಈಗ ಒಂದೇ ಕ[illegible]ಯವನ್ನೆರಿಯೂ ಆಯಿತು ಈ ಎರಡು ನಾಡುಗಳಲ್ಲಿ ಅದರಂತೆ೦ ರಲ್ಲಿ ೯೪ ಜನರಿಗೆ ಬರೇ ಮುಕ್ಕಾಲು ಪಾಲು [illegible]ಬೆಳೆ ಭತ್ತ. ಈ ಭತ್ತದಲ್ಲಿ ಒಂದು ಪಾಲು ಕಾಡುಜಾತಿಗಳಿಗೂ, ಒಂದು ಪಾಲು ಸಾಲಗಾರರಿಗೂ, ಕಂದಾಯಕ್ಕೂ, ಬಾಕಿ ಒಂದು ಪಾಲು ಎತ್ತು ವಗೈರೆ ಕೊಂಡುಕೊಳ್ಳಲಿಕ್ಕೂ ಹೊಟ್ಟೆಪಾಡಿಗಾಗಿ ಮೆಣಸು, ಉಪ್ಪು ವಗೈರೆ ತೆಗೆದುಕೊಳ್ಳಲಿಕ್ಕೂ, ಹಬ್ಬ, ಮದುವೆ ವಗೈರೆ ಖರ್ಚಿಗೂ ಆಯಿತು ಬಾಕಿ ಪಾಲು ಬೆಲ್ಲ, ಚೇರಿಗೆ, ಸಂಬಾರ ಮತ್ತು ಇತರ ಸಾಮಾನುಗಳಿಗಂತೂ ಕರ್ಚಾಯಿತು. ಮೈಗೆ ಬಟ್ಟೆ ವಗೈರೆ ಬೇರೆ ಇದೆ ಉಳಿಕೆ ಇರುವುದು ಮಕ್ಕಳಿಗೆ ಗಂಜಿಗಾದರೂ ಇರಲಿ ಬಟ್ಟೆಗೆ ಸಾಲ ತೆಗೆಯಬೇಕು. ಸಾಲ ತೆಗೆದು ಒಳ್ಳೆ ಬಟ್ಟೆ ಮಾಡಲು ಸಾಧ್ಯವಿದೆಯೋ ಇಲ್ಲ. ಅದಕ್ಕಾಗಿ ಕಮ್ಮಿ ಕ್ರಯದ ಕರಿಬಟ್ಟೆ ತೆಗೆದು ಹೆಂಗಸರು ಮಕ್ಕಳು ಉಡುವುದಲ್ಲದೆ ಹೆಂಗಸರು ಹೆತ್ತ ಸಮಯದಲ್ಲಿಯೂ ಸಹ ಉಟ್ಟು ಮಾಯು, ಹಿಡಿದು ಮೂಟೆಗಾರದ್ದಲ್ಲದೆ ಅವರ ಆಯಿಲೆ ವಾಸಿಮಾಡಲಿಕ್ಕೆ ಔಷಧಿಗೆ ದುಡ್ಡು ಬೇಕು [illegible]ನ್ನು ಕಾಣಿಂತು ಹಾಗಿರಲಿ. ಇಲ್ಲಿಯ ನೀರೋ ಕೆಲ ವೃಕ್ಷಗಳಲ್ಲಿ ಅಂದರೆ ತಾವಳಗೇರಿ ಮೂರ್ನಾಡಿನಲ್ಲಿ ಮಲೇರಿಯ ಹೆಚ್ಚು ೩ ದಿನ ತಣ್ಣೀರು ಕುಡಿದರೆ ೯ ತಿಂಗಳು ಬಸುರಾದ ಹಾಗೆ ಆಗುತ್ತೆ ಕಾಫಿಮಾಡಿ ಕುಡಿಯುವ ಎಂದರೆ ಕಾಪಿಯೂ ಇಲ್ಲ ಬೆಲ್ಲ ತೆಗೆದುಕೊಳ್ಳಲು ಚೈತನ್ಯವು ಮೊದಲೆ ಇಲ್ಲ ಇಂಥಾ ಹೊಟ್ಟೆಯನ್ನು ತೆಗೆದುಕೊಂಡು ಜಮಾಬಂದಿಗೆ ಹೋದರೆ ಸಾಹೇಬರವರು ನಮಗಳನ್ನು ನೋಡಿಕೊಂಡು ಹೆಂಗಸರ ಬದಲು ಗಂಡಸರು ಇಲ್ಲಿ ಬಸುರಾಗುವುದೋ ಎಂತ ಕೇಳುವರು, ಅದೂ ಅಲ್ಲದೆ ಕೆಲವು ಗ್ರಾಮಗಳ ವರ್ದಿ ಬುಕ್ಕು ತೆಗೆದುನೋಡಿದರೆ ಮಕ್ಕಳ ಸಂಖ್ಯೆಯೋ ಕಮ್ಮಿ ಇದಕ್ಕೆ ಕಾರಣವೇನು. ಈ ಊರುಗಳಲ್ಲಿ ಗಂಡಸರೇ ಇಲ್ಲವೋ ಎಂತ ಕೇಳುತ್ತಿರುವರು ಗಂಡಸರಂತೂ ಇರುವರು ಆದರೆ ಮಲೇರಿಯನೀರು ಕುಡಿದು ಹೊಟ್ಟೆಬಂದು ಹೆಂಗಸರು ಕರಿಬಟ್ಟೆ ಉಟ್ಟು ಮಾಯುಪೀಡೆಯಿಂದ ನರಳುತ್ತಿರುವಾಗ್ಯೆ ಮನಸ್ಸಿಗೆ ಖುಷಿ ಸಾತಿ ಇಲ್ಲದೆ ಹ್ಯಾಗೆ ತಾನೇ ಮಕ್ಕಳ ಸಂಖ್ಯೆ ವರ್ದಿಬುಕ್ಕಿನಲ್ಲಿ ಜಾಸ್ತಿ ಆಗುವುದು ಇದೂ ಅಲ್ಲದೆ ನೆಲದ ಮೇಲೆ ಶೀತದಲ್ಲೇ ಮಲಗಬೇಕು ಮಂಚವಾದರೂ ಮಾಡಿಸುವ ಎಂದರೆ ಇರುವ ಅಲ್ಪಸ್ವಲ್ಪ ಭತ್ತದಿಂದ ಮಾಡಿಸಿದರೆ ಮಕ್ಕಳ ಗತಿ ಏನಾಗಬೇಕು ? ನೆಲದಮೇಲೆ ಮಲಗುವುದರಿಂದ ಗೆಡ್ಡೆ ವಾಯು ವಗೈರೆ ರೋಗಗಳಿಗೆ ವೃದ್ಧಿಯಾಯಿತು, ಇನ್ನೊಂದು ಕಡೆಯೋ ಅದರ ಗತಿ ಕ್ಯೇಡವೆ. ನಮ್ಮ ಅಂಜಿಗೇರಿನಾಡಿನಲ್ಲಿ ಗ್ರಾಮಕ್ಕೆ ಒಂದೆರಡು ಕೆರೆಮಾತ್ರ ಇದೆ ಆ ಕೆರೆಗಳು ಸಹ ಕುಡಿಯುವ ಸ್ಥಿತಿಯಲ್ಲಿಲ್ಲ. ಹಗಲೆಲ್ಲಾ ಉತ್ತಮ ಜಾತಿಗಳು ನೀರು ತೆಗೆದರೆ ನೀರಿಲ್ಲದ ಸಂಕಟಕ್ಕೆ ಕೀಳುಜಾತಿಯವರು ಸಾಯಂಕಾಲದವೇಳೆಯಲ್ಲಿ ಸದರಿ ಕೆರೆಗಳಿಂದ ನೀರು ತೆಗೆದು ಅಶುದ್ಧಮಾಡಿ ಜಾತಿಬೇದವೇ ಇಲ್ಲದ ಹಾಗಾಯಿತು ಇದರ ಮಧ್ಯ ದನಕರುಗಳು ನೀರಿಲ್ಲದೆ ಎಲ್ಲಿಗೆ ಹೋಗುವುದು ದನಕರಗಳು ಬಂದು ಸದರಿ ನೀರು ಕುಡಿದರೆ ಆ ನೀರು ಹ್ಯಾಗಿರಬೇಕು ತಾವಳಗೇರಿ ಮೂರ್ನಾಡಿನಲ್ಲು ದನಗಳಿಗೆ ಮೇವಿಲ್ಲದೆ ಬಂತಾಸ ಕೊಳಂಗಿವಗೈರೆ ತುಂಬಿ ಹುಲ್ಲೇ ಇರುವುದಿಲ್ಲ ಇದ್ದ ಹುಲ್ಲನ್ನಾದರೂ ತಿಂದು ಬದುಕಿದ ದನಕರಗಳು ರೋಗಕ್ಕು ಮತ್ತು ಹುಲಿಗಳ ಬಾಯಿಗೂ ತುತ್ತಾದವು ಅಂಜಿಗೇರಿ ನಾಡಿನಲ್ಲಿ ಪೂರ್ತಿ ಗುಡ್ಡಬೆಟ್ಟಗಳಿಂದ ಸುತ್ತಿಕೊಂಡು ಹುಲ್ಲೇ ಇಲ್ಲದೆ ಇರುವುದರ ಮಧ್ಯ ಅಲ್ಪಸ್ವಲ್ಪ ಹುಲ್ಲು ಇದ್ದದ್ದನ್ನು ಈ ವರ್ಷದ ಬಂದು ತರದ ಮಳೆ ತಿಂದು ತೀರಾ ಒಣಗಿಸಿ ಬಿಟ್ಟಿತು. ಮರೆನಾಡಿನಲ್ಲಿ ಮೇಲ್ಕಂಡ ಕಾರಣಗಳಲ್ಲದೆ ಕಾಯಿಲೆಯಿಂದಲೂ, ಗುಡ್ಡಬೆಟ್ಟ ಇಳಿದು, ಹತ್ತಿ ಸೋತು ಸತ್ತು ಅಲ್ಪಸ್ವಲ್ಪ ಬಾಕಿಯಾಯಿತು ಅದೂ ಕೂಡ ಕಳೆದ ಜೋರಾದ ಮಳೆಗಾಲದ ಮಳೆಯ ದೆಸೆಯಿಂದ ಹೊಳೆಗಳಲ್ಲಿ ಕೊಚ್ಚಿಕೊಂಡು ಹೋದವು ಹೀಗಿರುವಾಗ ನಮಗಳ ಪಾಡೇನಾಗಬೇಕು ಹೀಗಿರುವಲ್ಲಿ ಸತ್ತು ಕಟ್ಟು ಉಳಿದ ನಾವುಗಳು ಯಾವ ರೀತಿಯ ಬಲಾದರೋ ಜೀವನೋಪಾಯ ನಡಿಸುವ [illegible] ಸೀಳುವುದು, ಇಲ್ಲದ ಸೊಲ್ಲದ [illegible] ದರಖಾಸ್ತು ಮಾಡುವುದು ಮುಂತಾದ ಕೆಲಸಗಳಿಂದ [illegible]ರಿಗೆ ಕಾದಾಟ ಬಂತು ಆ ಕೂಡ್ಲೆ ಫಿರ್ಯಾದು ನಾಡು ಕಚೇರಿಗೆ ಹೋಗುತ್ತೆ. ಮೊದಲಿನವೇಳೆಯಲ್ಲಿ ಯಾದರೋ ಎರಡು ನಾಡುಕಚೇರಿಗಳಿದ್ದಿದ್ದರಿಂದ ಫಿರ್ಯಾದುಗಳು ಬೇಗನೇ ತೀರ್ಮಾನಕ್ಕೆ ಬರುತಿತ್ತು ಈಗಲಾದರೋ ಮೇಲ್ಕಂಡ ಕಾಡುಗಳಿಗೆಲ್ಲಾ ಒಂದೇ ನಾಡುಕಚೇರಿಯಾಗಿರುವುದರಿಂದ ಸದರಿ ನಾಡುಕಚೇರಿಯವರು ಸಹ ಹ್ಯಾಗೆ ತಾನೇ ನಮಗಳ ಫಿರ್ಯಾದುಗಳನ್ನು ತೀರ್ಮಾನಮಾಡ್ಯಾರು ಅಯ್ಯೋ ಪಾಪ ? ಹೀಗೆ ಹೇಳುವಂತಾದ್ದು ಕಾಡುಗಳಿಗೆ ವಷ್ಟೆ ಬಾರದೆ ಫೋಂದಪಕ್ಷ ಲಂಚಕೊಟ್ಟಾದರೂ ಬರಮಾಡಿಕೊಳ್ಳುವ ಎಂದು ಯೋಚಿಸಿ, ತಮಗಳ ಮಕ್ಕಳು ಸತ್ತರೆ ಸಾಯಲೆಂದು ಲಂಚಕೊಡಲಿಕ್ಕಾಯಿತು ಶ್ರೀಮಂಗಲನಾಡು ಕಡೇನಾಡು ಎಂದ ಹಾಗೆಯೇ ಕಡೇನಾಡಿನ ಬಡರೈತರು ಲಂಚದ ಮದುವೆ ಕಾರ್ಯಕ್ಕೆ ಕೂಡ ೧೯೨೩ ನೇ ಇಸವಿಯಲ್ಲಿ ದರ ೫೦ ಇದ್ದದ್ದು ೧೯೨೪ ರಲ್ಲಿ ಲಂಚದ ಹೋರಾಟದ ದರವು ೭೪ ಕ್ಕೆ ಏರಿದೆ ಆದ್ದರಿಂದ ಖಾವಂದರವರು ಈ ಕಡೇನಾಡಿನ ಬಡರೈತರ ಮೇಲೆ ಕರುಣವಿಟ್ಟು ನೀರಿನಲ್ಲು ಮಲೇರಿಯನಿಸುವ ಜಾಗಕ್ಕೆ ತಕ್ಕ ಏರ್ಪಾಡು ಕಂಡು ಹಿಡಿದು ಔಷಧಿವಗೈರೆ ನೀರಿಗೆ ಹಾಕಿ ಕಂಡುಹಿಡಿದು ಗುಣಪಡಿಸುವಂತೆಯೂ, ದನಕರಗಳ ವಿಷಯಕ್ಕೆ ವೆಟರ್ನರಿ ಡಾಕ್ಟರುಗಳು ತುಂಬಾ ನಿಗಯಿಟ್ಟುಕೊಳ್ಳುವಂತೆಯೂ, ಕೆರೆಗಳಿರುವ ಊರೂರಿಗೆ ತಕ್ಕದಾದ ಕೆರೆ ಬಾವಿ ಮಾಡಿಸಿಕೊಡುವಂತೆಯೂ ಮಾಡಿಸಿಕೊಡಬೇಕಲ್ಲದೆ ಖಾವಂದರವರಿಗೆ ಸಮಯವಿರುವ ಹಾಗೆ ಮೋಟಾರುಗಾಡಿಯಿಂದ ದಯಪಾಲಿಸಿ ಸ್ವಲ್ಪ ಗುಡುಗಿ ಹೋದರೆ ಮೋಟಾರುಗಾಡಿಯ ಗುಡುಗು, ಖಾವಂದರವರ ಗುಡುಗು ಎಲ್ಲಾ ಜೊತೆಸೇರುವಾಗ್ಯೆ ಬಡರೈತರು ಸ್ವಲ್ಪಮಟ್ಟಿಗೆ ಎಲ್ಲಾ ಬಾಬಿನಲ್ಲಿಯೂ ಬದುಕುತಿದ್ದೆವು ಎಂಬದಾಗಿ ಶಿರಸಾಷ್ಟಾಂಗದಿಂದ ನನ್ನ ಪ್ರಾರ್ಥನೆ

ಕರಿಬಟ್ಟೆ ಉಡುವ ಬಡರೈತ

ಕೊಂಕಣಾರಂಟೆ.

(ಎರಡೇ ಎತ್ತುಗಳದು)



ಇದು ಬಹಳ ಹಗುರವಾಗಿರುತ್ತದೆ ಒಣದ ಭೂಮಿಗೆ ಉಪಯೋಗ ಬೀಳುತ್ತದೆ ಇದರ ಈಸ (ಉಳ್ಳುಪಾರು) ಮರದ್ದಾಗಿದೆ ಇದರ ಬಿಡಿ ಭಾಗಗಳು ಕೇಳಿದಾಗ್ಗೆ ದೊರೆಯುತ್ತವೆ

ನಮ್ಮಲ್ಲಿ ಭೂಮಿಗೆ ತಕ್ಕ ಸಣ್ಣ ದೊಡ್ಡ ನೇಗಿಲು ಕಬ್ಬಿನಗಾಣ ಮುಂತಾದ ಸಾಮಾನುಗಳು ದೊರೆಯುತ್ತವೆ

'ಕೊ' ಕ್ಯಾಟಲಾಗನ್ನು ತರಿಸಿಕೊಳ್ಳಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್,

[10-3] ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ.

ಪ್ರಕಟನೆ.

ಬೆಪ್ಪುನಾಡು ಕೊಟ್ಟೋಳಿ ಗ್ರಾಮದಲ್ಲಿರುವ ಅತಿ ಉತ್ಕೃಷ್ಟವಾದ ನಾಲ್ಕುನೂರು ಬಟ್ಟಿ ಭೂಮಿ 25 ಎಕ್ರೆ ಬಾಣೆ ಕಿತ್ತಳೆ ಬಾಳೆ ತೆಂಗು ಸಹ ಅಡಿಕೆ ವಗೈರೆ ಇರುವ ತೋಟ ಸಹ ಈ ತಿಂಗಳು 20 ರೊಳಗೆ ನ್ಯಾಯವಾದ ಖರೀದಿಗೆ ಮಾರಲ್ಪಡುತ್ತೆ.

[2—1] ಕೆ. ಎಚ್. ರಾಮಕೃಷ್ಣಯ್ಯ

WANTED.

Two Second-hand Motor Bicycles

M. M SIDLEEK,

22—7 MERCARA.

ಸರ್ಕಾರದ ಭರವಸವುಳ್ಳ ಓರಿಯಂಟಲ್ ಜೀವವಿಮೆಸಂಘ, ಲಿಮಿಟೆಡ್.

ಹೆಡ್ ಆಫೀಸ—ಬೊಂಬಾಯಿ

ಸ್ಥಾಪಿತವಾದದ್ದು 1874

1924 ನೆ ವರ್ಷವು 50 ನೆ ವರ್ಧಂತಿ ವರ್ಷ.

ಬಂಡವಾಳ 6,00,00,000 ; ವಾರ್ಷಿಕ ಉತ್ಪತ್ತಿ 1,00,00,000 ಮೇಲ್ಪಟ್ಟು.

ಕೊಡಗು ಡಿಸ್ಟ್ರಿಕ್ಟಿನ ಮುಖ್ಯಪ್ರದೇಶಗಳಲ್ಲಿ ಧಾರಾಳವಾದ ಕಮಿಷನ್ ವಗೈರೆ ಆದಾಯದ ಮೇಲೆ ಕೆಲಸ ಮಾಡಲು ಏಜಂಟರುಗಳು ಬೇಕಾಗಿರುತ್ತೆ ಹೊಸದಾಗಿ ಪಾಲಸಿದಾರರುಗಳನ್ನು ಜುನಾಯಿಸಿಕೊಡುವ ಸಾಮರ್ಥ್ಯವುಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಬ್ರಾಂಚುಸೆಕ್ರಟರಿ,

ಪೋಸ್ಟುಬಾಕ್ಸು ನಂ 56

[2—2] ಬೆಂಗಳೂರು.

ನೋಟೀಸು.

ಸಂಘದ ವಾರ್ಷಿಕ ಜನರಲ್ ಮೀಟಿಂಗ್ ಕಿಗ್ಗಟ್ಟುನಾಡು ತಾಲೋಕು ಶ್ರೀಮಂಗಲನಾಡು ಕುದಿಕೇರಿಯಲ್ಲಿ ಮ|| ರಾ|| ರಾ|| ಕೋದಂಡ ಉತ್ತಯ್ಯಾಚಾರ್ಯರ ಅಧ್ಯಕ್ಷತೆಯಲ್ಲಿ 1924 ನೇ ಇಸವಿ ಏಪ್ರಿಲ್ ತಾರೀಖು 19 ಮತ್ತು 20 ರಲ್ಲು ಮಧ್ಯಾಹ್ನ 1 ಘಂಟೆಗೆ ನಡೆಯುತ್ತೆ. ಊಟ ಉಪಚಾರಕ್ಕೆ ಕಿಗ್ಗಟ್ಟುನಾಡು ತಾಲೋಕಿನವರು ಏರ್ಪಾಡುಮಾಡುತ್ತಾರೆ ಚರ್ಚಿಸತಕ್ಕ ವಿಷಯಗಳನ್ನು ತಾರೀಖು 31—3—1924 ರವಳಗೆ ಜನರಲ್ ಸೆಕ್ರಟರಿ ಸಿ ಯನ್ ವೆಂಕಪ್ಪಯ್ಯನವರಿಗೆ ತಲಪುವಂತೆ ಕಳುಹಿಸಬೇಕೆಂತಲೂ, ಮೀಟಿಂಗಿಗೆ ಎಲ್ಲಾ ಮೆಂಬರುಗಳು ಹಾಜರಾಗಬೇಕೆಂತಲೂ ಕೋರುತ್ತೇನೆ.

ಚಂದಾ ಮೊಬಲಗನ್ನು ಎರಡು ವರ್ಷಗಳಿಂದ ಪಾವತಿ ಮಾಡದೆ ಇರುವವರು ಸಂಘದ ಕಾರ್ಯಗಳಲ್ಲಿ ಭಾಗಿಗಳಾಗಕೂಡದು ಎಲ್ಲಾ ಮೆಂಬರುಗಳು ತಮ್ಮ ಬಾಕಿ, ಚಂದಾ ಮೊಬಲಗನ್ನು ಕೂಡಲೇ ಪಾವತಿ ಮಾಡಬೇಕಾಗಿ ಕೋರುತ್ತೇನೆ

ಕೊಡಗು ಜಮಾಸ್ದಾರರ ಸಂಘ ಸಿ ಎನ್. ವೆಂಕಪ್ಪಯ್ಯ

ಮಡಿಕೇರಿ ತಾರೀಖು 21-2-24. ಜನರಲ್ ಸೆಕ್ರಟರಿ

[5—2]

ಈಗ ತಾನೇ ಬಂದಿರುವ ಹೊಸಹೊಸ ಟೈಪುಗಳಿಂದ

ಸದಾ ಇಂಕಿನಿಂದ ಮಾಡುವ ಚಾರ್ಜಿಗೇ

ಹೌ ಬಣ್ಣದ ಚಿನ್ನದ ಗಿಲ್ಟ್ ಹಾಕಿ

ಲಗ್ನಪತ್ರಿಕೆಗಳನ್ನು ಮಾಡಿಕೊಡುತ್ತೇವೆ !!

ಇಲ್ಲದೆ ಒಂದು, ಎರಡು, ಮೂರು ಅಥವ [illegible] ಅನೇಕ ಬಣ್ಣಗಳಿಂದ ಸುಂದರವಾಗಿಯೂ ಕಡಿಮೆ ಚಾರ್ಜಿನಿಂದಲೂ ಎಲ್ಲಾ ಕೆಲಸಗಳನ್ನು [illegible] ಶೀಘ್ರದಲ್ಲಿಯೇ ಮಾಡುತ್ತೇವೆ ಎಲ್ಲಾನ್ನು [illegible] ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.—

ಜಿ ಎಚ್ ಹೌಸ್ಪ್ರೆಸ್

ವೀರರಾಜೇಂದ್ರಪೇಟೆ (ಕೊಡಗು

[1—3]

Printed & Published by D.S Krishnasw[illegible] Proprietor, at Sreenivas Electric Press, M[illegible] "for Kodagu" Ltd., Mercara—14 3 192[illegible]

If not delivered please return to "Kodagu Office, Mercara" Reg. No. M. 1550.

ಕೊಡಗು.

ಸತ್ಯೇನ ಧೂಳಿದಯಯಾ ವಿದ್ಯಾಸೀತಿ ಪ್ರಯತ್ನತಃ । ಅಕಮತ್ಸ್ಯೇನದೇಶೇನ ಸುಸ್ಥಿರಾ ರಾಜ್ಯಸಂಪದ ॥

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು. "ಎಡಿಟರ್ ಅಭಿಪ್ರಾಯ ... ಬೇಕಿಲ್ಲ."

[illegible]

ಸಂಪುಟ ೩] ಕೊಡಗು, ಸನ್ ೧೯೨೪ ನೇ ಇಸವಿ ಮಾರ್ಚಿ, ತಾರೀಖು ೨೮ ನೆಯ ಶುಕ್ರವಾರ. [ಸಂಚಿಕೆ ೪೩

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನ್ನಡ ಪ್ರಿಂಟಿಂಗ್ ರೂಲಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ಇದ್ದರೂ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ಬಹಳ ಜಾಗ್ರತೆಯಾಗಿಯೂ ಸುಲಭಕ್ರಯಕ್ಕೂ ಮಾಡಿ ಕೊಡುತ್ತೇವೆ

Srinivas Electric Press,
MYSORE

The Saraswathi Publishing Company
ಶಾರದಾಗ್ರಂಥಮಾಲಾ

ಈ ಗ್ರಂಥಮಾಲೆಯಲ್ಲಿ ಭಾರತಮಹಿಳೆಯರ ಇಹಪರ ಹಿತಯಾಥ್ಯ ದಂಗಳನ್ನು ಬೋಧಿಸತಕ್ಕ ಗ್ರಂಥಗಳು ಆಗಾಗ್ಗೆ ಪ್ರಕಟಿಸಲ್ಪಡುವವು ಇದುವರೆಗೆ ಪ್ರಕಟವಾಗಿರುವ ಗ್ರಂಥಗಳು —

		ರೂ	ಆ	ಪೈ
1	ಪ್ರಿಯಂವದೆ (ವಧುವಿಗೆ ತಿಳಿಯಬೇಕಾಗುವ ಕಷ್ಟ ಸನ್ನಿವೇಶಗಳು)	0	6	0
2	ಸ್ನೇಹಲತೆ (ವಂಗದೇಶದ ಯುವತಿ ಚರಿತ್ರೆ)	0	10	0
3	ಸುಭಾಗ್ಯವತಿ (ಹಿಂದೂಪತಿವ್ರತೆಯರ ಕೆಲವು ಕೊಲೆಗಳು)	0	12	0
4	ಸಮೀಕ್ಷೆ (ಸಾಮಾಜಿಕ ಸುಧಾರಣೆಯ ನಾಟಕ)	0	8	0
5	ಹಿಂಪಾಭಾಗ್ಯೋದಯ (ನಾಟಕ)	0	4	0
6	ಸುವರ್ಣಸಖಾಸ್ಥಾನ (ನಾಟಕ)	0	4	0
7	ಹುಡುಗರು ಮಾಡಿದ ಗಿಯರು (ನಾಟಕ)	0	4	0

ಈ ಎಲ್ಲಾ ಕಾದಂಬರಿಗಳನ್ನು ಒಟ್ಟಾಗಿ ಕೊಂಡುಕೊಳ್ಳುವವರಿಗೆ ಒಟ್ಟು ರೂಪಾಯಿ 2—12—0 ಗೆ ವಿ ಪಿ ಪಾರಸಲು ಕಳುಹಿಸ ಲ್ಪಡುವುದು ಪ್ರಕಟಿಸಲ್ಪಡತಕ್ಕ ಗ್ರಂಥಗಳು—ಲೇಖಕರು ದಿದ್ದಾನ

ಸರಸ್ವತಿ.

ಉತ್ತಮವರ್ಗದ ಶ್ರೇಷ್ಠವಾದ ಕನ್ನಡ ಮಾಸಪತ್ರಿಕೆ

ನಾಲ್ಕನೆಯ ಸಂಪುಟದ ಪ್ರಥಮ ಸಂಚಿಕೆಯು ಈ ತಿಂಗಳ ಮೊದಲನೇ ತಾರೀಖಿನಿಂದ ಪ್ರಾರಂಭವಾಗಿರುವುದು ಇದರಲ್ಲಿ ಬಾಲಕ ಬಾಲಿಕೆಯರಿಗೂ ಸ್ತ್ರೀಯರಿಗೂ ತಿಳಿಯುವಂತಹ ಸುಲಭವಾದ ಶೈಲಿಯಲ್ಲಿ ಸ್ವಾರಸ್ಯವಾದ ನಾಟಕ ಕಾದಂಬರಿಗಳೂ ಮತ್ತು ಅನೇಕ ಉತ್ತಮ ಲೇಖನಗಳೂ ಪ್ರಕಟಿಸಲ್ಪಡುವವು ಹೊಸದಾಗಿ ಚಂದಾದಾರರಾಗತಕ್ಕವರು ಚಂದಾಹಣವನ್ನು ಮುಂಗಡವಾಗಿ ಕಳುಹಿಸಿದರೆ ಶಾರದಾ ಗ್ರಂಥಮಾಲೆಯ ಪ್ರಕಟನೆಯಲ್ಲಿ ಒಂದು ಪುಸ್ತಕವು ಬಹುಮಾನವಾಗಿ ಕೊಡಲ್ಪಡುವದು ಇಷ್ಟಪಟ್ಟವರಿಗೆ ಮಾದರಿ ಸಂಚಿಕೆಯು ಉಚಿತವಾಗಿ ಕಳುಹಿಸಲ್ಪಡುವುದು

ವಾರ್ಷಿಕ ಚಂದಾ ರೂಪಾಯಿ 3—0—0 ಮಾತ್ರ,

SARASWATHI PUBLISHING Co ,
Post Box No 57. Bangalore City

HEALTH IS WEALTH

WANTED all to improve health strength and vitality and thus save our nation from physical degeneracy Send half-anna stamp and get 13 specimen photographs with full particulars from

Director Physical Culture,
P O. Basavanagudi,
BANGALORE CITY

For your requirements of high grade Arms, Ammunition, Wine and Spirits,

APPLY TO.—

Mc. DOWELL & Co., Ltd.,
24—22 MERCARA.

ಮಂಗ್ಳೂರ್ ಇನಾಮ್‌ಕೊಡ್ ಪಂಕಚಾಯಿ ಉಳ್ಳ್ ಸಾಮಾನ್ ಸ್ಪೆನ್ಸರ್ ಕಂಪೆನಿಕ್ಕ್ ಪುದಿಯದಾಯಿತ್ತ್ ಬಂದಿತ್ತ್.

SPENCER & Co Ltd
Mercara and Pollibetta Coorg [24—22]

BUMPER CROPS
Always follow on application of our fertilisers

ದೊಡ್ಡ ಕಾಫಿ ಫಸಲು.

ಸಿಕ್ಕಬೇಕಾದರೆ ನಮ್ಮ ಕಾಫಿ ಫರ್ಟಿಲೈಸರುಗಳನ್ನು ಉಪಯೋಗಿಸಿರಿ

ನಮ್ಮ ಕಾರ್ಖಾನೆಯಲ್ಲಿ ಎಲ್ಲಾ ತರಹದ ಹಗುರಾದ ಹೊಸ (fresh) ಗೊಬ್ಬರ ತಯಾರಾಗುತ್ತದೆ

Siddeck's Manure Works
21—11 MERCARA

ಜೀವವಿಮೆ.

ಸಾವಿರಾರು ಕುಟುಂಬಗಳಲ್ಲಿ ಸಂಪಾದನೆಯ ಯಜಮಾನನು ಮೃತಪಟ್ಟರೆ ಉಂಟಾಗಬಹುದಾದ ತೊಂದರೆಗಳನ್ನು ನಿವಾರಿಸುವುದೇ ಜೀವವಿಮೆ

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬದ ಜೀವನಾಧಾರಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ.

ಅತಿ ಕಡಮೆ ದರದಲ್ಲಿ ಯಾವ ಲೋಪವೂ ಬಾರದಂತೆ ಕ್ಷಿಪ್ರದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ಮೈಸೂರಿನ ಸರಕಾರದ ಭದ್ರತೆಯುಳ್ಳ ಜೀವವಿಮೆ ಕಂಪೆನಿ

ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ಸಾಲವಾಗಿ ಹಣವನ್ನು ಒದಗಿಸಿ ಸ್ಥಿರಾಸ್ತಿಗಳನ್ನೂ ಕೊಂಡುಕೊಳ್ಳಿ ದೇಶದ ಆರ್ಥಿಕ ಸಂಪತ್ತನ್ನು (Economic Condition) ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೇ!

ಲೈಫ್ ಇನ್ಶ್ಯೂರೆನ್ಸ್ ಆಕ್ಟಿನ ಮೇರೆ ಇಂಡಿಯಾ ಗವರ್ನಮೆಂಟ್ ಸೆಕ್ಯೂರಿಟಿಗಾಗಿ ಸಲ್ಲಬೇಕಾದ 12 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿಗೆ ಸಲ್ಲಬೇಕಾದ 1 ಲಕ್ಷ ರೂಪಾಯಿ. ಸೆಕ್ಯೂರಿಟಿಗಾಗಿಯೂ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನ ಮದ್ರಾಸಿನ ಶಾಖೆಯಲ್ಲು 1 ಲಕ್ಷ ಗವರ್ನಮೆಂಟ್ ಆಫ್ ಇಂಡಿಯ ಸೆಕ್ಯೂರಿಟಿಯನ್ನು ಅರ್ಧಲಕ್ಷ ಮೈಸೂರು ಸೆಕ್ಯೂರಿಟಿಯನ್ನು ಡಿಪಾಜಿಟ್ಟಾಗಿ ಇಟ್ಟಿರುತ್ತೆ. ಬಾಕಿ ಒಂದು ಲಕ್ಷ ಇಂಡ್ಯಾ ಗವರ್ನಮೆಂಟ್ ಸೆಕ್ಯೂರಿಟಿಗೆ ಬ್ಯಾಂಕ್ ಮೂಲಕ ಏರ್ಪಾಡು ಮಾಡಿರುತ್ತೆ.

ಬಿ. ಎಸ್. ಅರಾಧ್ಯ,
ಲೈಫ್ ಅಂಡ್ ಪ್ರಾಪರ್ಟಿ ಆಫೀಸ್ ಮಡಿಕೇರಿ.

ಮಲಯಾಳ ವೈದ್ಯಶಾಲಾ

ಗೂಲಬಾರಿನ ನಂಬೀಶನ್ ಮತ್ತು ಕಂಪೆನಿ ಎಂಬ ಆಯುರ್ವೇದ ವೈದ್ಯಶಾಲೆಯಲ್ಲಿ ಒಂದು ಶಾಖೆಯು ವೀರರಾಜೇಂದ್ರಪ್ಯಾಟೆಯಲ್ಲಿ ತೆರೆದಿರುತ್ತೆ, ಇಲ್ಲಿ ಯಾವವಿಧದ ವ್ಯಾಧಿಯಾಗಿದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧಿ ಕೊಟ್ಟು ಗುಣಪಡಿಸಲ್ಪಡುತ್ತೆ ಔಷಧದ ಚಾರ್ಜು ಬಹಳ ಕಡಿಮೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು.

ನಾರಾಯಣನಂಬೀಶನ್,
ಆಯುರ್ವೇದ ವೈದ್ಯರು,
12—10 ವೀರರಾಜೇಂದ್ರಪ್ಯಾಟೆ

ಪ್ರಕಟನೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ

	ರೂ
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	6,820
ಜಮಾ ಬಂದ ಠೇವಣಾತಿ	47,990

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೇನೇ ಜಾಸ್ತಿಯಾಗಿ ಸಾಲ ಕೊಡತಕ್ಕದ್ದು

ಒಂದು ವರುಷ ಪಾಯಿದೆ ಅಥವಾ ಜಾಸ್ತಿನ ಪಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 6-4-0ರ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ, ಕಡಿಮೆ ಪಾಯಿದೆಯ ಠೇವಣಾತಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದೊರೆಯುತ್ತೆ.

ಮಹಾ ಕ್ಯಾಂಡಾಪರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟಾಯಿಸಿ ಮಾಡುತ್ತಾರೆ

ಪ್ರೆಸಿಡೆಂಟರು	ಟ್ರೆಜರ್.
ಕೊಪಂಡೆರ ಕುಟ್ಟಪ್ಪನವರು,	ಯಂ, ಭುಜಂಗರಾಯರು
ರಾವ್ ಬಹದ್ದೂರ್	ಬಿ ಎ. ಬಿ ಎಲ್

ಸೆಕ್ರೆಟರಿ.
ಸಿ ರಘು ವೆಂಕಪ್ಪಯ್ಯನವರು ಬಿ ಎ ಬಿ ಎಲ್.

ತಾರೀಖು 22—2—1924.

"ಕೊಡಗು"

೧೯೨೮ ನೇ ಇಸವಿ ಮಾರ್ಚ ತಾ|| ೨೩ ನೇ ಶುಕ್ರವಾರ.

ಸರ್ಕಾರಿ ಆಡಳಿತದಲ್ಲಿ ಕನ್ನಡಭಾಷೆ.

ರಾಜ್ಯಭಾರದಲ್ಲಿ ದೇಶಭಾಷೆಯಿಂದ ಆಡಳಿತ ನಡಿಸುವಂಥಾದ್ದು ಅಗತ್ಯವೆಂಬುದು ಎಲ್ಲರೂ ಒಪ್ಪತಕ್ಕ ವಿಷಯವಾಗಿದೆ. ನಮ್ಮ ದೇಶವು ಕನ್ನಡನಾಡೇ ಆಗಿದೆ. ಪೂರ್ವದಿಂದಲೂ ಕನ್ನಡವೇ ರಾಜಭಾಷೆಯಾಗಿಯೂ ದೇಶಭಾಷೆಯಾಗಿಯೂ ನಡೆದು ಬಂದಿತ್ತು. ಅದು ರಾಜಪ್ರಜೆಗಳೊಳಗೆ ತುಂಬಾ ಬಳಕೆಯನ್ನುಂಟುಮಾಡಿ ಅನ್ಯೋನ್ಯತೆಯನ್ನು ವೃದ್ಧಿಪಡಿಸಿಕೊಂಡಿತ್ತು. ಇತ್ತೀಚೆಗೆ ಈ ದೇಶವು ಬ್ರಿಟಿಷ್ ರಾಜ್ಯಭಾರಕ್ಕೆ ಒಳಪಟ್ಟ ನಂತರವೂ ಸಹ ಸುಮಾರು 30 ವರ್ಷಗಳ ಹಿಂದಿನವರೆಗೆ ಸರಕಾರದ ಕಾಗದಪತ್ರಗಳೂ ಖಾನೂನು ಖಾಯಿದೆಗಳೂ ಕನ್ನಡ ಭಾಷೆಯಲ್ಲೇ ನಡಿಯುತ್ತಿತ್ತು. ಅನಂತರ ಇಂಗ್ಲೀಷ ಭಾಷೆ ಕಲಿತ ದೇಶೀಯರು ಸರಕಾರ ನೌಕರಿಗೆ ಹೆಚ್ಚಾಗಿ ಸೇರುತ್ತಾ ಬಂದಂತೆ ಕನ್ನಡ ಭಾಷೆಯು ಮೂಲೆಗೆ ಒತ್ತಲ್ಪಡುತ್ತಾ ಬಂತು. ಪೂರ್ವದಲ್ಲಿ ಸಿವಿಲ್ ಮತ್ತು I ಕ್ಲಾಸ್ ಮೇಜಿಸ್ಟ್ರೇಟ್ ಅಧಿಕಾರ ಸಹ ಇದ್ದ ಮೆ|| ಪಪ್ಪಡಿರ ಎಚ್ಚಯ್ಯನವರು ತಮ್ಮ ಜಡ್ಜ್‌ಮೆಂಟ್‌ಗಳನ್ನು ಕನ್ನಡದಲ್ಲೇ ಬರೆಯುತ್ತಿದ್ದರೆಂತ ತಿಳಿಯುತ್ತೇವೆ. ಸುಬೇದಾರರುಗಳು ಸಾಕ್ಷಿ ಸ್ಟೇಟುಮೆಂಟುಗಳನ್ನು ಮಾತ್ರವಲ್ಲ ಜಡ್ಜಿಮೆಂಟ್ ಸಹ ಕನ್ನಡದಲ್ಲೇ ಬರೆಯುತ್ತಿದ್ದರು. ಸರಕಾರದ ಸಮಸ್ತ ಕರಸ್ಪಾಂಡೆನ್ಸ್ ಕನ್ನಡದಲ್ಲೇ ನಡಿಯುತ್ತಿತ್ತು. ಈ ಪದ್ಧತಿಯಿಂದ ಪ್ರಜೆಗಳಿಗೆ ಸರಕಾರಿ ಕೆಲಸಗಳು ಹೇಗೆ ನಡೆಯುತ್ತವೆಂಬುದು ಚೆನ್ನಾಗಿ ತಿಳಿಯುತ್ತಿತ್ತು. ತಮ್ಮ ಕೇಸ್‌ಗಳಿಗೆ ಸಂಬಂಧಪಟ್ಟ ರಿಕಾರ್ಡುಗಳು ಕನ್ನಡದಲ್ಲೇ ಇರುತ್ತಿದ್ದದ್ದರಿಂದ ಲಾಯರುಗಳ ಸಹಾಯವಿಲ್ಲದೇ ಪ್ರಜೆಗಳು ತಿಳಿದುಕೊಳ್ಳಬಹುದಿತ್ತು. ಕನ್ನಡ ಮಾತ್ರ ತಿಳಿದ ಲಾಯರುಗಳೇ ತುಂಬಾ ಇದ್ದರು. ಪ್ರಜೆಗಳು ತಿಳಿದುಕೊಳ್ಳಬೇಕಾದ ರಿಕಾರ್ಡುಗಳೂ ಖಾನೂನುಗಳೂ ಕನ್ನಡದಲ್ಲೇ ಇರುತ್ತಿದ್ದದ್ದರಿಂದಲೂ ಕನ್ನಡ ಓದುಬರಹ ತಿಳಿದಂಥ ಜನರು ಇಲ್ಲದೆ ಇದ್ದ ಊರುಗಳೇ ಇಲ್ಲದಿದ್ದದ್ದರಿಂದ ಗ್ರಾಮದವರಿಗೆ ಆಡಳಿತ ವಿಷಯ ತಿಳಿದುಕೊಳ್ಳಲಿಕ್ಕೆ ಪ್ರಯಾಸವಿರಲಿಲ್ಲ. ಆದು ಈ ಕ್ರಮವು ತಪ್ಪಿ ಪಾರುಪತ್ಯಗಾರರು ರೈತರಿಗೆ ಕೊಡುವ ನೋಟೀಸ್ ಒಂದೊಂದು ರೈತರಿಗೆ ಕೊಡಲ್ಪಡುವ ಲೆಟರ್ ಆಫ್ ಎಕ್ಸೈಜ್ ಖಜಾನೆಗೆ ಹಣ ಕಟ್ಟಿದರೆ ಸಿಕ್ಕುವ ರಶೀತಿಗಳು, ಫಾರೆಸ್ಟಿನಲ್ಲಿ ದನ ಮೇಯಲು ಕೊಡುವ ಪಾಸ್‌ಗಳು, ಸೌದೆ, ಮರ, ಬಿದಿರು ವಗೈರೆಗಳನ್ನು ಪಡಕೊಂಡರೆ ಅವಕ್ಕೆ ಕೊಡುವ ಪಾಸುಗಳು, ದಸ್ತೈವೇಜು ರಿಜಿಸ್ಟರಾದ್ದಕ್ಕೆ ಮಾಡುವ ಎಂಡಾರ್ಸ್‌ಮೆಂಟ್‌ಗಳು ದಸ್ತೈವೇಜು ರಿಜಿಸ್ಟರ್ ಬಗ್ಗೆ ದಾಖಿಲ ಮಾಡಿದ್ದಕ್ಕೆ ಕೊಡುವ ರಶೀತಿಗಳು ವಸೂಲ್ ಬಾಕಿ ರಿಜಿಸ್ಟರ್‌ಗಳು, ನಾಡ ಕಛೇರಿ ರೋಜಿನಾಮೆಗಳು, ಕೋವಿಲೈಸೆನ್ಸ್, ಡಿಸ್ಪ್ಯಾಚ್ ರಿಸೀಟು ರಿಜಿಸ್ಟರುಗಳು ಇತ್ಯಾದಿ ಸಾಧಾರಣ ರಿಕಾರ್ಡುಗಳು, ಪಾರುಪತ್ಯಗಾರ್ ಮೇಜಿಸ್ಟ್ರೇಟರುಗಳ ಜಡ್ಜ್‌ಮೆಂಟ್‌ಮಾತ್ರವಲ್ಲ ಸಾಕ್ಷಿ ಸ್ಟೇಟುಮೆಂಟುಗಳು ಸಹ ಇಂಗ್ಲೀಷಿನಲ್ಲೇ ಆಗುತ್ತಾ ಇದೆ. ಸುಬೇದಾರ್ I ಕ್ಲಾಸ್ ಮೇಜಿಸ್ಟ್ರೇಟ್ ಮತ್ತು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ರಿಕಾರ್ಡುಗಳು ಪೂರಾ ಇಂಗ್ಲೀಷಿನಲ್ಲೇ ಆಗುತ್ತೆಂಬದನ್ನು ಪ್ರತ್ಯೇಕಿಸಿ ಹೇಳಬೇಕಾಗಿಲ್ಲ. ದೇಶದಲ್ಲಿ ಇದ್ದ ಎರಡು ಮುನಸಿಫ್ ಕೋರ್ಟುಗಳು ಮತ್ತು ಸಬ್‌ಜಡ್ಜಿ ಕೋರ್ಟಿನಲ್ಲಾದರೂ ಸಾಕ್ಷಿಯರ ಸ್ಟೇಟುಗಳನ್ನು ಕನ್ನಡದಲ್ಲಿ ಬರೆಯುವ ಪದ್ಧತಿಯು ಮೊನ್ನೆವರೆಗೆ ಇತ್ತು. ಮಡಿಕೇರಿ ಮುನಸೀಫ್ ಕೋರ್ಟು ಮತ್ತು ಸಬ್‌ಜಡ್ಜಿಯವರ ಕೋರ್ಟು ಒಂದಾದಂದಿನಿಂದ ಈ ಒಂದಾದ ಕೋರ್ಟಿನಲ್ಲಿ ಸಾಕ್ಷಿ ಸ್ಟೇಟು ಕನ್ನಡದಲ್ಲಿ ಬರಕೊಳ್ಳುವ ಪದ್ಧತಿಯೇ ನಿಂತು ಹೋಯಿತು. ಇದರಿಂದ ಕಕ್ಷಿಗಾರರಿಗೆ ಕೆಲವು ಮಟ್ಟಿಗಾದರೂ ತೊಂದರೆಯಾಗಿದೆ. ಸಾಕ್ಷಿಯು ಹೇಳಿದ ಹೇಳಿಕೆಯು ಸರಿಯಾಗಿದೆಯೋ ಇಲ್ಲವೋ ಎಂತ ಕನ್ನಡದ ಸ್ಟೇಟನ್ನು ಓದಿ ಹೇಳುವಾಗ ತಿಳಿದುಕೊಂಡು ಸರಿಪಡಿಸಿಕೊಳ್ಳುತ್ತಿದ್ದರು. ಈಗಲಾದರೋ ಇಂಗ್ಲೀಷ್ ಸ್ಟೇಟನ್ನು ಓದಿ ತರ್ಜುಮೆಮಾಡಿ ಹೇಳುವ ಪದ್ಧತಿಯೇ ಇರುವುದಾಗಿದೆಯೆಂತಲೂ ಹಾಗೆ ಓದಿ ಹೇಳಿದರೂ ಹೇಳುವ ಗುಮಾಸ್ತರಿಗೆ ಇಂಗ್ಲೀಷ್‌ನ ಸ್ಟೇಟನ್ನು ಅರ್ಥಮಾಡಿ ಹೇಳುವದೇ ಕಷ್ಟವಾದ್ದರಿಂದ "ಸಾಕ್ಷಿಯರಿಗೆ ಓದಿ ಹೇಳಿ ಸಮ್ಮತಿಸಿದರು" ಎಂಬ ಸರ್ಟಿಫಿಕೇಟ್ ನಿರರ್ಥಕವೆಂತಲೂ ತಿಳಿಯುತ್ತೇವೆ. ಈ ತೊಂದರೆ ಮಾತ್ರವಲ್ಲ ಕಕ್ಷಿಗಾರರಿಗೆ ತಮ್ಮ ಕೇಸಿನಲ್ಲಿ ತಾನು ಏನು ಹೇಳಿದ್ದೇನೆಂಬುದನ್ನೂ, ತನ್ನ ಸಾಕ್ಷಿಯರು ಏನು ಹೇಳಿದ್ದಾರೆಂಬುದನ್ನೂ ತಿಳಿದುಕೊಳ್ಳುವದೇ ಅಸಾಧ್ಯವಾಗಿದೆ. ಲಾಯರುಗಳಲ್ಲಿ ಕೇಳಿದರೆ ಅಲ್ಲ ನಾವು ನೋಡಿ ಕೊಟ್ಟಿದ್ದೇವೆ ನೀವು ತಿಳಿದುಕೊಳ್ಳುವುದೇನು ಎಂತಲೋ ಈ ತಮ್ಮ ಸಮಯವನ್ನು ಈ ಕರ್ಜುವೆ ಕಳಸದೆ. ಕಳೆಯುವದಿಲ್ಲ. ಅಂತೂ ತಮ್ಮ ಕೇಸಿನ ವಿದ್ಯಮಾನ ತಮಗೇನೇ ತಿಳಿದುಕೊಳ್ಳಲಿಕ್ಕೆ ಯೋಗ್ಯತೆಯಿಲ್ಲದೆ ಆಗಿದೆ. ಅದಕ್ಕೂ ಲಾಯರುಗಳಿಗಾಗಲೀ ಅಥವಾ ಗುಮಾಸ್ತರುಗಳಿಗಾಗಲೀ ಅಥವಾ ಬೇರೆಯವರಿಗಾಗಲೀ ಫೀಸ್‌ಕೊಟ್ಟು ತಿಳಿದುಕೊಳ್ಳಬೇಕಾಗಿದೆ.

ಕೃಷಿಕರಿಗೆ ನಿತ್ಯ ಅವಶ್ಯಬೀಳುವ ರೆವೆನ್ಯೂಮ್ಯಾನ್ಯೂವಲ್ ಮತ್ತು ರೂಲ್ಸ್‌ಗಳು ಮತ್ತು ಇತರ ಎಲ್ಲಾ ಸ್ಥಳೀಯ ಖಾನೂನುಗಳು ಮತ್ತು ನಿಬಂಧನೆಗಳು ಕನ್ನಡದಲ್ಲಿ ಇಲ್ಲದ್ದರಿಂದ ರೈತರು ಈ ಸಂಬಂಧದ ಖಾನೂನನ್ನು ತಿಳಿದುಕೊಳ್ಳಲು ಅವಕಾಶವಿಲ್ಲದೆ ಕಷ್ಟವಾಗುವ ಸಂಭವ ಹೆಚ್ಚಾಗಿದೆ. ರೂಲ್ಸ್‌ಗಳು ಪ್ರಕಟವಾಗುವ ಗಜೆಟಿನ ಮೊದಲನೇ ಭಾಗವನ್ನು ಕನ್ನಡದಲ್ಲಿ ಪ್ರಕಟಿಸಬೇಕೆಂತ ಜಮಾನ್‌ದಾರರ ಸಂಘದಿಂದ ಠರಾವುಗಳು ಸಾಲ್‌ಸಾಲು ವರ್ಷದಿಂದಲೂ ಪಾಸಾಗುತ್ತಿದ್ದರೂ ಸರಕಾರದವರು ಗಮನಕೊಡುವದೇ ಇಲ್ಲ. ಸಂಘದಿಂದ ಕನ್ನಡದಲ್ಲಿ ರೆವೆನ್ಯೂಮ್ಯಾನ್ಯುವಲನ್ನು ಪ್ರಕಟಿಸಲು ಬೇಕಾಗುವ ಖರ್ಚನ್ನು ಕೊಟ್ಟರೆ ಮಾಡಬಹುದೆಂತ ಜವಾಬುಕೊಟ್ಟಿದ್ದಾರೆ. ಇದರಲ್ಲಿ ಯಾವ ನ್ಯಾಯವಿದೆ? ಗಜೆಟಿನಲ್ಲಿ ಪ್ರಕಟವಾದ ತಾರೀಕಿಂದಲೇ ಅಂಥಾ ಪ್ರಕಟವಾದ ರೂಲ್‌ಗಳೆಲ್ಲಾ ಪ್ರಜೆಗಳಿಗೆ ತಿಳಿಯಿತೆಂತಲೂ ಅಂದಿನಿಂದ ಅಂಥಾ ರೂಲ್‌ಗಳಿಗೆ ವಿರೋಧವಾಗಿ ನಡೆದವನು ತಪ್ಪಿತಸ್ಥನಾಗುತ್ತಾನೆಂತಲೂ ಖಾನೂನು ಇದೆ. ಹೀಗೆ ಇರುವ ಗಜೆಟ್ಟಿನಲ್ಲಿ ಪ್ರಕಟವಾಗುವ ವಿಷಯಗಳಾದರೂ ಕನ್ನಡದಲ್ಲಿ ಇರಬೇಡವೇ? ಈಗ ಸ್ಥಾಪಿತವಾದ ಕೌನ್ಸಿಲ್ ಮೂಲಕವಾದರೂ ಪ್ರಜೆಗಳಿಗೆ ಅತ್ಯಾವಶ್ಯಕವಾದ ಈ ಅನುಕೂಲಗಳನ್ನು ಒದಗಿಸಿಕೊಟ್ಟಾರು ಯೆಂದು ನಂಬುತ್ತೇವೆ.

ಒಹೋ—ಈ ರೆವೆನ್ಯೂ ಕೌನ್ಸಿಲ್ ಕಾರ್ಯಗಳೇ ಕನ್ನಡದಲ್ಲಿ ನಡಿಯುವುದಿಲ್ಲ. ಇಂಗ್ಲೀಷ್‌ಭಾಷೆ ತಿಳಿಯದವರು ಮಾತ್ರ ಅಧ್ಯಕ್ಷರು ಅನುಮತಿಕೊಟ್ಟರೆ ರೆಸೊಲ್ಯೂಶನ್‌ಗಳ ಮೇಲೆ ಚರ್ಚೆಮಾಡುವಾಗ ಕನ್ನಡದಲ್ಲಿ ಮಾತಾಡುವುದು ಖಾನೂನು ಮಾಡಿ... ಚರ್ಚೆಯಲ್ಲಿ ಕನ್ನಡದಲ್ಲಿ ಮಾತಾಡುವ ಅನುಕೂಲವೇ ಇಲ್ಲ. ಸವಾಲುಗಳನ್ನು ಕನ್ನಡದಲ್ಲಿ ಮಾಡುವ ಅನುಕೂಲವೂ ಇಲ್ಲ. ಹೀಗಿರುವಾಗ ಇಂಗ್ಲೀಷ ಅರಿಯದ ಮೆಂಬರುಗಳು ತಮ್ಮ ಅನಾನುಕೂಲತೆಯನ್ನು [illegible] ಪ್ರಜೆಗಳ ಅನುಕೂಲವನ್ನು [illegible] ಇಂಗ್ಲೀಷ್ ಅರಿಯದವರ ಕೌನ್ಸಿಲ್ ಉಮೇದ್ವಾರಿ ಬೇಕೆಂದರೆ [illegible] ಇಂಗ್ಲೀಷ ಪಲ್ಲವನ್ನು ಕಲಿತು [illegible] ಕೌನ್ಸಿಲ್ ಸಂಬಂಧದ ಎಲ್ಲಾ ರೂಲುಗಳು ಕನ್ನಡದಲ್ಲಿ ಆಗಬೇಕೆಂತ ನಾವು ಈ ಮೊದಲೇ ಈ ಪತ್ರಿಕೆಯಲ್ಲಿ ಬರೆದುಂಟು. ಸರಕಾರದವರು [illegible] ಇಲ್ಲ. ಕೌನ್ಸಿಲ್ ಸಂಬಂಧ ನಡೆಯುವ ಎಲ್ಲಾ ಕಾಗದಪತ್ರಗಳೂ ಇಂಗ್ಲೀಷಿನಲ್ಲಿ ನಡೆಯುವದರಿಂದ ಇಂಗ್ಲೀಷ್ ತಿಳಿಯದ ಮೆಂಬರುಗಳಿಗೆ ಕಷ್ಟವಾಗಿದೆ. ಕೌನ್ಸಿಲ್‌ನಲ್ಲಿ ನಾಲ್ಕೈದು ಮೆಂಬರುಗಳಾದರೂ ಇಂಗ್ಲೀಷ ಭಾಷಣಗಳ ತತ್ವವರಿತು ಉತ್ತರ ಹೇಳಲಾರದವರು ಮತ್ತು ಏನು ಇಂಗ್ಲೀಷು ಅರಿಯದವರೂ ಸಹ ಇದ್ದಾರೆ. ಇವರಿಗೆ ಕೌನ್ಸಿಲ್ ಚರ್ಚೆಗಳಲ್ಲಿ ಭಾಗಿಗಳಾಗಲು ಯೋಗ್ಯತೆ ಇಲ್ಲವೆಂತ ಯಾರೂ ಅನ್ನಲಾರರು. ದೇಶದವರೂ ಇವರಿಗೆ ಕೌನ್ಸಿಲ್ ಕೆಲಸಕ್ಕೆ ಶಕ್ತಿಯಿದೆ ಎಂಬ ನಂಬಿಕೆಯಿಂದಲೇ ಕಳುಹಿಸಿದ್ದಾರೆ. ಕನ್ನಡ ಭಾಷೆ ತಿಳಿಯದೇ ಇರುವ ಮೆಂಬರುಗಳೇ ಇಲ್ಲ. ಯೂರೋಪಿಯನ್ ಪ್ಲಾಂಟರುಗಳ ಪ್ರತಿನಿಧಿಗಳಿಗೂ ಸಹ ಕನ್ನಡ ಭಾಷೆ ಅರಿದಿದ್ದು ತಿಳಿಯುತ್ತೆ. ನಮ್ಮ ದೇಶಕ್ಕೆ ಉಮೇದಿಗಳಿಗೆ ಬರುವ ಐ ಸಿ ಯಸ್ ಆಫೀಸರುಗಳು ಸಹ ಕನ್ನಡಭಾಷೆಯನ್ನು ಪಾಸಾದವರಾಗಿರುತ್ತಾರೆ. ಮತ್ತು ಕೌನ್ಸಿಲ್ ಚರ್ಚೆಯನ್ನು ನೋಡಲಿಕ್ಕೆ ಬರುವ ಪ್ರೇಕ್ಷಕರುಗಳಿಗೂ ತಿಳಿಯುವಂತೆ ಕನ್ನಡದಲ್ಲೇ ಚರ್ಚೆ ನಡಿಸಿದರೆ ತಮ್ಮ ಪ್ರತಿನಿಧಿಗಳು ತಮ್ಮ ಹವಾಲುಗಳನ್ನು ಸರಿಯಾಗಿ ಹೇಳಿಕೊಳ್ಳುತ್ತಾರೋ ಇಲ್ಲವೋ ಎಂಬುದನ್ನು ಓಟರುಗಳು ಖುದ್ದಾಗಿ ತಿಳಿದುಕೊಳ್ಳಲು ತುಂಬಾ ಅವಕಾಶವಾಗುತ್ತೆ. ಇದು ಅತಿ ಅವಶ್ಯವೂ ಹೌದು.

ಈ ಎಲ್ಲಾ ಕಾರಣಗಳಿಂದ ಕೌನ್ಸಿಲರುಗಳೂ ಸರಕಾರವೂ ಕನ್ನಡಕ್ಕೆ ಪ್ರಾಮುಖ್ಯತೆಕೊಟ್ಟು ಕೌನ್ಸಿಲ್ ಕೆಲಸದಲ್ಲಿ ಪ್ರಜೆಗಳಿಗೆ ನಿಜವಾದ ಉತ್ಸಾಹಹುಟ್ಟುವಂತೆ ಮಾಡಿಕೊಡಬೇಕಾಗಿಯೂ ಮತ್ತು ಎಲ್ಲಾ ಖಾನೂನು ಖಾಯಿದೆಗಳು ಕನ್ನಡದಲ್ಲಿ ಮಾಡಿಕೊಟ್ಟು ಸರ್ವರಿಗೂ ತಿಳಿಯುವಂತೆ ಮಾಡಿಕೊಡಬೇಕಾಗಿಯೂ ಕೋರ್ಟುಗಳಲ್ಲಿ ಸ್ಟೇಟುಗಳು ಜಡ್ಜ್‌ಮೆಂಟ್ ಸಹ ಕನ್ನಡದಲ್ಲಿ ಆಗುವಂತೆ ಮಾಡಲು ಸಂಪೂರ್ಣ ಪ್ರಯತ್ನ ನಡೆಸಬೇಕಾಗಿ ನಮ್ಮ ಅಪೇಕ್ಷೆ.

ಮೈಸೂರು ಪ್ರತಿನಿಧಿಸಭೆ ಮತ್ತು ನ್ಯಾಯವಿಧಾಯಕ ಸಭೆ.

—o—

ಈ ತಿಂಗಳು 12 ನೇ ತಾ|| 5 ಘಂಟೆಗೆ ಸರಿಯಾಗಿ ಶ್ರೀಮನ್ಮಹಾರಾಜರವರಿಂದ ಅನುಗ್ರಹಿಸಲ್ಪಟ್ಟ ರಾಜಕೀಯ ಸುಧಾರಣೆಗಳಿಗೆ ಅನುಸಾರವಾಗಿ ಏರ್ಪಡಿಸಲ್ಪಟ್ಟ ಪ್ರಜಾಪ್ರತಿನಿಧಿಸಭೆ ಮತ್ತು ನ್ಯಾಯವಿಧಾಯಕ ಸಭೆಯ ಪ್ರಥಮ ಸಮ್ಮೇಳನವು ನಡೆಯಿತು. ದಿವಾನ್ ಸಾಹೇಬರವರೂ ಕೌನ್ಸಿಲರುಗಳೂ ಇಲಾಖಾ ಹೆಡ್ಡುಗಳೂ, ಸೆಕ್ರೆಟೇರಿಯಟ್ ಅಧಿಕಾರಿಗಳೂ ಮೈಸೂರು ಡೆ|| ಕಮಿಷನರ್ ಮೊದಲಾದ ಡಿಸ್ಟ್ರಿಕ್ಟ್ ಅಧಿಕಾರಿಗಳೂ ಮತ್ತು ಅಧಿಕಾರವರ್ಗದವರೂ ಡೈಸಿನ ಮೇಲೆಯೂ ಅದರ ಸುತ್ತು ಗ್ಯಾಲರಿಗಳಲ್ಲಿಯೂ ಸಭೆಯನ್ನು ಅಲಂಕರಿಸಿದರು. ಡೈಸಿಗೆ ಅಭಿಮುಖವಾಗಿ ಪ್ರತಿನಿಧಿಗಳೂ ಪ್ರೇಕ್ಷಕರೂ ಇವರೇ ಮೊದಲಾದವರು ಕುಳಿತಿದ್ದರು. ಶ್ರೀಮನ್ಮಹಾರಾಜರವರು 5 ಘಂಟೆಗೆ ಸರಿಯಾಗಿ ದಯಮಾಡಿಸಿದರು. ದಿವಾನ್ ಸಾಹೇಬರೇ ಮೊದಲಾದವರು ಅವರನ್ನು ಎದುರುಗೊಂಡು ಅಗ್ರಾಸನವನ್ನು ಅಲಂಕರಿಸುವಂತೆ ಮಾಡಿದರು. ಸರ್ವರೂ ಎದ್ದುನಿಂತುಕೊಂಡು ಅವರಿಗೆ ಸತ್ಕಾರವನ್ನು ಮಾಡಿದರು. ಶ್ರೀಮನ್ಮಹಾರಾಜರವರು ಅಗ್ರಾಸನವನ್ನು ವಹಿಸಿ ಪುನರ್ವ್ಯವಸ್ಥಿತವಾದ ಮೈಸೂರು ವಿಧಿಸ್ಥಾಪಕ ಸಂಸ್ಥೆಗಳ ಸಮಾರಂಭೋತ್ಸವದಲ್ಲಿ ಅಪ್ಪಣೆ ಕೊಡಿಸಿದ್ದೇನೆಂದರೆ—

ಪ್ರಜಾಪ್ರತಿನಿಧಿ ಸಭೆಯ ಮತ್ತು ನ್ಯಾಯವಿಧಾಯಕ ಸಭೆಯ ಸದಸ್ಯರಿರಾ,

ಪುನರ್ವ್ಯವಸ್ಥಿತವಾದ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆ ಇವೆರಡರ ಸಮಾರಂಭೋತ್ಸವವನ್ನು ಈ ದಿವಸ ನೆರವೇರಿಸಲು ನನಗೆ ಅವಕಾಶವಾದ ಸಂತೋಷಪ್ರದವಾಗಿರುತ್ತದೆ. ಮಹನೀಯರೆ! ನೀವು ಮೊದಲಿಗಿಂತಲೂ ಬಹುಮಟ್ಟಿಗೆ ಹೆಚ್ಚಿಸಲ್ಪಟ್ಟ ಚುನಾವಣೆಯ [illegible] ಯಥಾರ್ಥ ಪ್ರಾತಿನಿಧ್ಯ ಉಳ್ಳವರಾಗಿರುತ್ತೀರಿ. ವಿಸ್ತರಗೊಳಿಸಲ್ಪಟ್ಟ ಚುನಾವಣೆಯ ಹಕ್ಕುಗಳ [illegible] ವಾಗಿ ನಿಮಗೆ ಪ್ರಾತಿನಿಧ್ಯವು ದೊರೆತಿರುತ್ತದೆ. ನವಂಬರ್ ಕಡೆ ಅಕ್ಟೋಬರ್ ತಿಂಗಳಿನಲ್ಲಿ ನಮ್ಮ ರಾಜಶಾಸನ ಪತ್ರ (Proclamation) ದಲ್ಲಿ ನಿಮಗೆ ಕೊಡಲ್ಪಟ್ಟ ಅಧಿಕಾರಗಳಿಂದಲೂ, ಹಕ್ಕುಗಳಿಂದಲೂ ನೀವು ಕಾರ್ಯರಂಗ ಮಾಡತಕ್ಕವರಾಗುತ್ತೀರಿ. ಈಗಿನ ಸಭೆಗಳು ಹಿಂದೆ ಇದ್ದುದಕ್ಕಿಂತ ಸಾರತರವಾದ [illegible] ನಿಮ್ಮ ಚುನಾವಣೆಯ ಸ್ಥಾನಗಳಿಗೆ ಪ್ರಾತಿನಿಧ್ಯ [illegible] ವಕ್ಷವರಾಗುತ್ತೀರಿ. ಅಲ್ಲದೆ ಪ್ರಜೆಗಳ ಅಪೇಕ್ಷೆಗಳನುಸಾರವಾಗಿ ಸರ್ಕಾರದ ತೀರ್ಮಾನಗಳು ನಡೆಯುವಂತೆ ಅವುಗಳಿಗೆ [illegible] ನಿಮಗೆ ಮೊದಲಿದ್ದುದಕ್ಕಿಂತ ಹೆಚ್ಚಾದ ಸನ್ನಿವೇಶಗಳುಂಟಾಗುತ್ತವೆ. ಈಗ [illegible] ಸಂದರ್ಭಗಳನ್ನು ಸಾರವಾಗಿ ಅನುರಾಗದಿಂದ [illegible] ಸೇವೆಯನ್ನು ಮಾಡುವುದಕ್ಕೆ [illegible] ಉಪಯೋಗಿಸಿ ಪ್ರಜೆಗಳ ಶ್ರೇಯೋಭಿವೃದ್ಧಿಯನ್ನು [illegible] ನಿಮಗೆ ಪೂರ್ವಭಾವಿಯಾಗಿ ಈ ಸ್ಥಾನದಲ್ಲಿದ್ದವರು ಸ್ವಾರ್ಥತ್ಯಾಗಪೂರ್ವಕವಾಗಿ ಪರಿಪಾಲಿಸಿದ [illegible] ಉತ್ಕೃಷ್ಟವಾದ [illegible]ಗಳನ್ನು ವಹಿಸುವುದಕ್ಕೂ [illegible] ಹಾರೈಸುತ್ತೇನೆ.

ನಾವು ರಾಜ್ಯಾಡಳಿತ ಸೂತ್ರವನ್ನು ಸ್ವೀಕರಿಸಿದ ಮೇಲೆ ಸುಮಾರು ಇಪ್ಪತ್ತೊಂದು ವರ್ಷಗಳ ಹಿಂದೆ ನಾವೇ ಮೊದಲನೆಯ ಸಾರಿ ಪ್ರಜಾಪ್ರತಿನಿಧಿ ಸಭೆಯ ಸಮಾಗಮವನ್ನು ನೆರವೇರಿಸಿದ ಕಾಲದಲ್ಲಿ ನಾವು ಆಡಿದ ಮಾತುಗಳು ಈ ಸಮಯದಲ್ಲಿ ನಮ್ಮ ನೆನಪಿಗೆ ಬರುತ್ತವೆ. ವರ್ಷಂಪ್ರತಿಯಲ್ಲಿಯೂ ಪ್ರಜಾಪ್ರತಿನಿಧಿಸಭೆಯು ಅಧಿವೇಶನವನ್ನು ನಡೆಸುವುದು ನಮ್ಮ ಪ್ರಜೆಗಳ ಶ್ರೇಯಸ್ಸಿಗೂ ಸಂತೃಪ್ತಿಗೂ ಸಾಧಕವಾಗುವುದರಲ್ಲಿ ಎಷ್ಟುಮಟ್ಟಿಗೆ ಅನರ್ಘ್ಯವಾದುದೆಂಬ ವಿಚಾರದಲ್ಲಿ ನಾವು ಆಗ್ಗೆ ಸೂಚಿಸಿದ ಅಪೇಕ್ಷೆಗಳು ಪುಷ್ಟವಾಗಿ ಸಫಲಗೊಂಡಿರುತ್ತವೆ. ೧೯೦೭ ನೇ ಇಸವಿಯಲ್ಲಿ ಏರ್ಪಡಿಸಲ್ಪಟ್ಟ ನ್ಯಾಯವಿಧಾಯಕ ಸಭೆಯೂ ಕೂಡ ನನಗೆ ವಹಿಸಲ್ಪಟ್ಟಿದ್ದ ನಿಯಮನಿರ್ಮಾಣ ರಾಜ್ಯಾದಾಯದ ಆಡಳಿತ ವಿಚಾರ ಸಾಮಾನ್ಯವಾಗಿ ಇತರ ರಾಜ್ಯಾಡಳಿತ ವಿಚಾರಗಳು, ಇವುಗಳ ಮೇಲಣ ಕೆಲವು ಪ್ರಾಮುಖ್ಯವಾದ ಅಧಿಕಾರಗಳನ್ನು ಶ್ರೇಷ್ಠತೆಯಿಂದ ಪ್ರಯೋಗಿಸಿ ನಮ್ಮ ನಿರೀಕ್ಷಣೆಗಳನ್ನು ಸಾರ್ಥಕಗೊಳಿಸಿರುತ್ತದೆ. ಆದಾಗ್ಯೂ ಈ ದಿವಸ ನಾವು ನಡೆಸುತ್ತಿರುವ ಈ ಸಮಾರಂಭೋತ್ಸವದ ದೆಸೆಯಿಂದ ಉಂಟಾಗುವ ಬದಲಾವಣೆಗಳು ಮೂಲತತ್ವರೂಪ ವಾದವುಗಳೆಂಬುದೂ ಪ್ರಜೆಗಳ ಪ್ರತಿನಿಧಿಗಳಿಗೂ ರಾಜ್ಯಾಡಳಿತ ಕ್ರಮಕ್ಕೂ ಮೊದಲಿಗಿಂತಲೂ ಗಾಢವಾದ ಸಂಬಂಧವನ್ನುಂಟು ಮಾಡತಕ್ಕವೆಂಬುದೂ ಈಗ್ಗೆ ಕೆಲವು ವರ್ಷಗಳ ಹಿಂದೆ ಸಾಧ್ಯವೆನಿಸಿದ್ದುದಕ್ಕಿಂತ ಎಷ್ಟೋ ಹೆಚ್ಚು ಧಾರಾಳವಾದ ರೀತಿಯಲ್ಲಿ ಪ್ರಜೆಗಳ ಸ್ವಾಭಾವಿಕವಾದ ಮತ್ತು ನ್ಯಾಯವಾದ ಆಕಾಂಕ್ಷೆಗಳು ಉಕ್ಕಿ ಹರಿಯುವಂತೆ ಅವಕಾಶವನ್ನು ಕಲ್ಪಿಸತಕ್ಕವೆಂಬುದೂ ನಿಮಗೆ ವಿದಿತವಾಗಿಯೇ ಇರುತ್ತದೆ.

ಚುನಾವಣೆಯ ಹಕ್ಕನ್ನು ಇನ್ನೂ ವಿಸ್ತರಿಸಿಕೊಟ್ಟು ಪ್ರಜೆಗಳಿಗೆ ಇನ್ನೂ ಹೆಚ್ಚು ಅಧಿಕಾರಗಳನ್ನು ಕೊಡಬೇಕೆಂಬುದೇ ಮುಂತಾದ ಅನೇಕ ಸಮೂಲವಾದ ಬದಲಾವಣೆಗಳುಂಟಾಗಬೇಕೆಂದು ನಮ್ಮ ಪ್ರಜೆಗಳಲ್ಲಿ ಒಂದು ಗುಂಪಿನವರು ಅಭಿಮತವಾಗಿದ್ದರೆಂಬುದನ್ನು ನಾವು ಬಲ್ಲೆವು. ಅವರ ಗುರಿಯಲ್ಲಿರುವ ಆದರ್ಶ ತತ್ವಗಳ ವಿಚಾರದಲ್ಲಿ ಸಂಪೂರ್ಣವಾಗಿ ಸಹಾನುಭೂತಿಯಿಂದೊಡಗೂಡಿರುತ್ತೇವೆ. ನಮ್ಮ ಈಗಿನ ತೀರ್ಮಾನವು ಬಹುದೀರ್ಘಕಾಲ ಮಂತ್ರಾಲೋಚನೆ ಮಾಡಿ ನಡೆದುದೆಂದು ಹೇಳಬೇಕಾಗಿದೆ. ಯಾವುದೊಂದು ದೇಶವೇ ಆಗಲಿ ತನ್ನ ಸ್ಥಿತಿಗತಿಗಳನ್ನೂ, ಪ್ರಜಾಸ್ವಭಾವವನ್ನೂ ಅನುಸರಿಸಿ ಅವಕ್ಕೆ ತಕ್ಕಂತೆ ರಾಜ್ಯಾಡಳಿತಕ್ರಮವನ್ನು ಪರಿವರ್ತನಗೊಳಿಸಿ ಕೊಳ್ಳಬೇಕು. ಎಲ್ಲಾ ವಿಧವಾದ ರಾಜ್ಯಭಾರಕ್ರಮಗಳ ವ್ಯವಸ್ಥೆಯ ಅಭಿವೃದ್ಧಿಯಲ್ಲಿಯೂ ಸಾಮಾನ್ಯವಾಗಿ ಕಂಡುಬರುವ ಮೂಲತತ್ವಗಳನ್ನು ಪರಿತ್ಯಜಿಸದಂತೆ ನೋಡಿ

ಗ್ಯಂಡು ಚೆನ್ನಾಗಿ ಪರಿಶೀಲಿಸಮಾಡಿರುದರಿಂದಲ್ಲಿ ನಮ್ಮ ಪ್ರತಿನಿಧಿ ಸಭೆಯು ಮಂಜೂರುಮಾಡಿ ಸ್ಪಷ್ಟವಾಗಿ ಸಟ್ಟಿಸ ಪ್ರಜೆಗಳ ಕುಂದು ಕೊರತೆಗಳನ್ನು ತಿಳಿಸತಕ್ಕುದಾಗಿಯೂ, ಪ್ರಜೆಗಳ ಪ್ರಾತಿನಿಧ್ಯದಿಂದೊಡಗೂಡಿ ಮಂತ್ರಾಲೋಚನೆಗೂ, ನಿರ್ಮಿಸಿದ ವಿಷಯದಲ್ಲಿ ತೀರ್ಮಾನ ಹೇಳುವುದಕ್ಕೂ ಬೇಕಾದ ಮುಖ್ಯಸ್ಥಾನವಾಗಿಯೂ ಇರುವ ಸಂಸ್ಥೆಯಾಗಿರ. ಇದರಲ್ಲದೆ ಪ್ರಜೆಗಳಿಗೆ ರಾಜಕೀಯ ವಿಚಾರಗಳಲ್ಲಿನ ತಿಳುವಳಿಕೆಯೂ ಅಭಿರುಚಿಯೂ ಹೆಚ್ಚುವಂತೆಲ್ಲಾ ಅದಕ್ಕನುಗುಣವಾಗಿ ಹೆಚ್ಚು ಹೆಚ್ಚಾಗಿ ವಿಕಾಸಗೊಳ್ಳುವಂತಹ ಸ್ವಭಾವದಲ್ಲಿ ವ್ಯವಸ್ಥೆಗೊಳಿಸಲ್ಪಟ್ಟದರಿಂದೊಡಗೂಡಿ ಬೇಕೆಂದರೆ, ನಮ್ಮ ಪ್ರಾಯೋಗಿಕ ಸಭೆಯು ವಿಶೇಷತಃ ನಿರ್ದಿಷ್ಟ ಮಾತ್ರದ ಕೆಲಸವನ್ನು ನಿರ್ವಹಿಸುವ ನಿಯಮನಿರ್ಮಾಣ ಕಾರ್ಯವನ್ನೂ, ಇಂತಹ ಪ್ರಭೇಗಳು ನಡೆಸತಕ್ಕುದು ರೂಢಿಯಾಗಿರುವ ಇತರ ಕಾರ್ಯಕಲಾಪಗಳನ್ನೂ ನೆರವೇರಿಸಬೇಕೆಂದೂ ನಿರ್ಧರಿಸಲಾಗಿರುವುದು ಅವಶ್ಯಕವಾಯಿತು.

ನಿಮಗೀಗ ಹೊಸದಾಗಿ ದೊರೆತಿರುವ ಅಧಿಕಾರಗಳನ್ನು ವಿದ್ಯಾಭಿವೃದ್ಧಿ ಮಾಡುವುದು ಪ್ರಜಾಸ್ವಾಸ್ಥ್ಯವೃದ್ಧಿಮಾಡುವುದು ಸರ್ಕಾರಿ ಮತ್ತು ಖಾಸಗಿ ಉದ್ಯೋಗಗಳಲ್ಲಿ ಪ್ರಜೆಗಳ ಉದ್ಯೋಗಗಳನ್ನು ಹೆಚ್ಚಿಸುವುದು, ಸ್ಥಳೀಯ ಸಂಸ್ಥೆಗಳಿಗೆ ಸ್ವತಂತ್ರ ಅಧಿಕಾರಗಳನ್ನು ಕೊಡುವುದು, ಮತ್ತು ಸಮಾಜಸೇವೆಯಲ್ಲಿ ಆಸಕ್ತಿಯನ್ನು ಅಭಿವೃದ್ಧಿಗೊಳಿಸುವುದು. ಈ ದೇಶದಲ್ಲಿ ನಡೆಯುತ್ತಿರುವ ಹಿತಸಾಧನೆಯ ಉದ್ಯಮಗಳೆಲ್ಲಾ ಒತ್ತಾಸೆಕೊಟ್ಟು ಪರಿಪುಷ್ಟಿಗೊಳಿಸುವುದರಲ್ಲಿ ವಿನಿಯೋಗಿಸುವಿರೆಂಬ ವಿಚಾರವು ನನಗೆ ಸಂತೋಷವಾಗಿದೆ. ನಮ್ಮ ದೇಶದ ಪ್ರಜೆಗಳು ಸಣ್ಣ ಸಣ್ಣ ಕೋಟೆಗಳಲ್ಲಿ ವಾಸಿಸುವರಾದ ಲಕ್ಷಣಗಳಿದ್ದಾಗ್ಯೂ ಒಂದೊಂದರಿಂದ ಒಡಗೂಡಿ ಐಕ್ಯಮತ್ಯದಿಂದಿರುವ ಸ್ಥಿತಿಯೂ ಮತ್ತು ಕ್ಷಾಮ ಇವುಗಳ ಬಾಧೆಯನ್ನು ಪರಿಹರಿಸಿಕೊಳ್ಳಲು ದಿನವನ್ನೂ ದಿನಸಿಗಳನ್ನೂ ಸಂಗ್ರಹ ಮಾಡಿಟ್ಟುಕೊಂಡೇ ಇರುವಂತೆಯೂ, ಮಿತವ್ಯಯ ಮಾಡುವಂತೆಯೂ ಜನರಿಗೆ ಬೋಧಿಸಮಾಡಬೇಕೆಂದು ನಾನು ಅತ್ಯಂತವಾಗಿ ಒತ್ತಿ ಹೇಳುತ್ತೇನೆ. ದುರದೃಷ್ಟವಶಾತ್ ಮೊದಲೇ ಸಾಕಷ್ಟಿಲ್ಲದ ದವಸವನ್ನೂ, ಧನವನ್ನೂ ಶೇಖರಿಸಿಟ್ಟುಕೊಂಡು ಈಗ ನಮ್ಮ ದೇಶದ ಕೆಲವು ಡಿಸ್ಟ್ರಿಕ್ಟ್‌ಗಳಲ್ಲಿ ಜನರಿಗೆ ಸಂಭವಿಸಿರುವಂತಹ ಘೋರವಾದ ಕಷ್ಟಗಳನ್ನು ಬಹುಮಟ್ಟಿಗೆ ಪರಿಹರಿಸಿಕೊಳ್ಳುವುದು ಸಾಧ್ಯ. ವಿಧಿಬದ್ಧವಾದ ಸಂಸ್ಥೆಗಳು ... ನಿರ್ದಿಷ್ಟವಾದ ಕಮಿಟಿಗಳು ಮೊದಲಾದುವು ಸರ್ಕಾರದ ಮುಖ್ಯ ಇಲಾಖೆಗಳೊಡನೆ ಪ್ರಜೆಗಳ ಸಂಪರ್ಕವನ್ನು ಹೆಚ್ಚು ಪರಿಚಯವನ್ನೂ, ಸಂಬಂಧವನ್ನೂ ಕಲ್ಪಿಸಿಕೊಡಲೆಂದಾಗಿ ನಾವು ಹಾರೈಸುತ್ತೇನೆ. ಈಗ ಪ್ರಯೋಗಿಸಲ್ಪಟ್ಟಿರುವ "ಲೋಕಲ್ ಗವರ್ನ್‌ಮೆಂಟ್", ಎಂದರೆ ಸ್ಥಳೀಯ ಆಡಳಿತ ನಿರ್ವಹಣದ ಏರ್ಪಾಡುಗಳೆಂಬ ಕ್ರಮವು ಜನರಿಗೆ ಒಂದು ಡಿಸ್ಟ್ರಿಕ್ಟ್ ಬೋರ್ಡುಗಳು, ತಾಲ್ಲೂಕು ಬೋರ್ಡುಗಳು, ಮುನಿಸಿಪಾಲಿಟಿಗಳು, ಮತ್ತು ಗ್ರಾಮ ಪಂಚಾಯಿತಿ ಸಭೆಗಳು ಇವುಗಳ ಅಧಿಕಾರಗಳು ಹೆಚ್ಚಿಸಲ್ಪಟ್ಟು ದಕ್ಷರಾದ ಜನರಿಗೆ ಸ್ಥಳೀಯ ಆಡಳಿತವನ್ನು ತಮ್ಮಲ್ಲೇ ವ್ಯವಹರಿಸಿಕೊಳ್ಳುವುದಕ್ಕೂ ಪ್ರಜಾಪ್ರಭುತ್ವದ ಕಾರ್ಯಗಳಲ್ಲಿ ಭಾಗಿಗಳಾಗುವುದಕ್ಕೂ ಅನೇಕ ಅವಕಾಶಗಳುಂಟಾಗುತ್ತವೆ.

ಪ್ರಜಾಪ್ರಭುತ್ವದ ಸಾಧಕವಾದ ವಿಚಾರಗಳನ್ನು ಸರ್ಕಾರದ ರೀತಿಯಲ್ಲಿಯೇ ಆಲೋಚಿಸಿ ನೆರವೇರಿಸುವುದರಲ್ಲಿ ನಿಮ್ಮ ಸಹಾಯವು ದೊರೆಯಬೇಕಾಗಿದೆ. ಒಂದು ವಿಧದ ಅತ್ಯವಸರವಾದುದು ಅದಕ್ಕೆ ಎಂತಹ ಸಹಕಾರವನ್ನು ನೀಡಬೇಕೆಂದಿರುವಿರಿ, ನೀವುಗಳು ಈ ವಿಚಾರದಲ್ಲಿ ಅಂತಹ ಆತ್ಮಸಂಯಮವನ್ನು ಅವಲಂಬಿಸತಕ್ಕುದು ಅವಶ್ಯವಾಗಿರುತ್ತದೆ. ಪರಸ್ಪರವಾಗಿ ವಾದ ಪ್ರತಿವಾದ ಮಾಡುವುದು ಎಲ್ಲಿಗೂ ತಪ್ಪತಕ್ಕುದಲ್ಲವಾದಾಗ್ಯೂ ನೀವು ನಡೆಯಿಸುವ ಚರ್ಚೆಗಳು ಪರಸ್ಪರ ಸಹಿಷ್ಣುತೆಯಿಂದಲೂ ಮರ್ಯಾದೆಯಿಂದಲೂ ಕೂಡಿ ರಾಜ್ಯದ ನಿಧಿಸ್ಥಾಪಕ ಸಂಸ್ಥೆಗಳೆಂಬ ಗೌರವಕ್ಕನುಗುಣವಾದ ದರ್ಜೆಯಿಂದಲೂ, ರೀತಿನೀತಿಗಳಿಂದಲೂ, ಸಾಗುವವೆಂದು ನಂಬಿರುತ್ತೇವೆ. ನಿಮ್ಮ ಅಭಿಪ್ರಾಯಗಳನ್ನು ವ್ಯಕ್ತಗೊಳಿಸುವಾಗ ವಿವೇಕಮಯವಾದ ಸಂಯಮದಿಂದ ಕೂಡಿ ವರ್ತಿಸುವುದು ಅವಶ್ಯಕ. ಅಕ್ಕಪಕ್ಕದ ಸಿಟ್ಟಿನಿಂದ ಬಿಡಿಗಳು, ಹೊರಟರೆ ಉದ್ದಿಷ್ಟ ಕಾರ್ಯಸಾಧನೆಗೇ ಅವುಗಳು ಕುಂದಕವನ್ನು ತರುತ್ತವೆ ಮತ್ತು ಭಾವನಾ ಮಾಡಬೇಕೆಂದಿರುವ ವಿಚಾರಣೆಗಳನ್ನು ಪೂರ್ವಭಾವಿಯಾಗಿ ಸಮಗ್ರವಾಗಿ ಪರಿಶೀಲಿಸಿ ಅನಂತರ ಮಾತನಾಡಬೇಕೆಂದೂ, ನಿಮ್ಮ ವಾದಾನುವಾದಗಳಲ್ಲಿದವಲ್ಲಿಯೂ ಯಾವುದಾದರೂ ಪಂಗಡಗಳ ಅಥವಾ ಜಾತಿಗಳ ಶ್ರೇಯಸ್ಸನ್ನು ಧ್ಯಾನಿಸಿಕೊಂಡು, ಹೆಚ್ಚಾಗಿ ಒಟ್ಟು ರಾಜ್ಯದ ಶ್ರೇಯೋಭಿವೃದ್ಧಿಗೆ ಪ್ರಾಮುಖ್ಯತೆಯನ್ನು ಕೊಡಬೇಕೆಂದೂ, ಒತ್ತಿ ಒತ್ತಿ ಹೇಳುತ್ತೇನೆ. ಮುಖ್ಯವಾಗಿ ಈ ಅಂಶದ ಕಡೆಗೆ ನಾವು ಮುಖ್ಯವಾಗಿ ನಿಮ್ಮ ಗಮನಕ್ಕೆ ತರುವುದೇನೆಂದರೆ, ನೀವುಗಳು ಸರ್ಕಾರದವಲ್ಲಿಯೂ, ಪ್ರಜೆಗಳಲ್ಲಿಯೂ ಮಧ್ಯಸ್ಥರಾಗಿ ಕೆಲಸಮಾಡುತ್ತಾ, ಪ್ರಜೆಗಳ ವಿಚಾರದಲ್ಲಿ ಸರ್ಕಾರದ ವಿಚಾರಗಳ ತಿಳುವಳಿಕೆ ನೀಡುವ ವಿಚಾರದಲ್ಲಿ ಪ್ರಜೆಗಳಿಗೂ, ಸರಿಯಾದ ತಿಳುವಳಿಕೆ ಉಂಟಾಗುವಂತೆ ವಿಷಯವಿವರಣೆ ಮಾಡುತ್ತಾ ಬರತಕ್ಕುದು. ಹೀಗೆ ಮಾಡುತ್ತಾ ಬಂದಲ್ಲಿ ಮಾತ್ರವೇ ನಿಮ್ಮ ಕರ್ತವ್ಯವನ್ನು ನೀವು ನಿರ್ವಹಿಸಿದವರೂ, ಎನಿಸಿರುವ ಜನನಾಯಕರಲ್ಲಿ ಒಬ್ಬ ಕಾಲದಿಂದಲೂ ನೆಂಗಿಟ್ಟಿಬಂದಿರುವ ವಹಿವಾಟು ಹುಟ್ಟಿತಾಗಿ ಅವರ ಶ್ರೇಯೋಭಿವೃದ್ಧಿಯ ವಿಚಾರದಲ್ಲಿ ವಿದ್ಯಾವಂತರೂ ನಮ್ಮ ಶ್ರೀಮಂತರೂ ಆದ ಪಂಗಡಗಳವರು ಸಂಪೂರ್ಣ ಉತ್ತರದಾಯಿತ್ವವನ್ನು ವಹಿಸಿ ಎದೆಕೊಟ್ಟು ನಿಲ್ಲುವಂತಾಗು ವವರೆಗೂ ನಮ್ಮ ಕೊರತೆಯಾಗಿರುತ್ತದೆ.

ನಮ್ಮ ರಾಜ್ಯದ ಪ್ರಜೆಗಳು ತಮ್ಮ ಸಮಸ್ತ ಆಡಳಿತಗಳನ್ನು ಕಾನೂನು ನೆರವೇರಿಸತಕ್ಕ ಸಾಮರ್ಥ್ಯವನ್ನೂ, ರೀತಿನೀತಿಗಳನ್ನೂ, ಅಭಿವೃದ್ಧಿಪಡಿಸಿಕೊಂಡು ಮಹತ್ತಾದ ಗುರಿಗಳನ್ನು ತಪ್ಪದೆ ಧೈರ್ಯದಿಂದ ಪ್ರಾರಂಭಿಸತಕ್ಕದ್ದೂ ಅದರ ನಾಯಕಪಟ್ಟಗಳೂ ಆಗಿ ಬೇಕಾದಷ್ಟು ನಮ್ಮ ಪುರೋಭಿವೃದ್ಧಿಯ ಕಾರ್ಯಕಲಾಪಗಳಲ್ಲಿಯೂ ಮುಂದಾಳುಗಳಾಗಿ ನಿಂತು ಕೈಕೊಳ್ಳಬೇಕಾದುದನ್ನು ನೋಡಬೇಕೆಂಬುದೇ ನಮ್ಮ ಮುಖ್ಯ ಆಕಾಂಕ್ಷೆಯಾಗಿರುತ್ತದೆ. ನಮ್ಮ ಭಾವಿಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಅಡ್ಡಿಗೆ ನಡೆದುಬಂದಿರುವ ಆಗಾಧವಾದ ಮತ್ತು ಮಹತ್ವವಾದ ಒದಗುವಿಕೆಗಳನ್ನು ನನ್ನ ... ಬ್ರಿಟಿಷ್ ಇಂಡಿಯಾದ ಕೇಂದ್ರೀಯ ಸರ್ಕಾರದ ಸಹಾಯದಿಂದ ಇಂಡಿಯಾ ದೇಶದ ಪ್ರಾಂತ್ಯಗಳಿಂದಲೂ ಸಂಸ್ಥಾನಗಳಿಂದಲೂ ಕೂಡಿದ ಒಂದು ಸಾಮ್ರಾಜ್ಯಕ್ಕೆ ಸೇರ್ಪಡೆಯಾಗಲು ಅನುಗುಣವಾಗಿ ಮಾಡುವ ಪ್ರತಿಯೊಂದು ಸಂಸ್ಥಾನದಲ್ಲಿರುವ ನಾವೆಲ್ಲರೂ ಒಂದಾಗಿ ದೊರೆಯ ಮತ್ತೊಂದು ಒಳಾಂಗವೂ ಎಂಬಂತೆ ಇರುವೆವು. ಒಟ್ಟು ದೇಶಕ್ಕೆ ಅಭ್ಯುದಯವನ್ನುಂಟುಮಾಡುವ ರಾಜಕಾರ್ಯಗಳಲ್ಲೆಲ್ಲಾ ನಾವು ಇಂಡಿಯಾ ಸರ್ಕಾರದ ಜೊತೆಯಲ್ಲಿ ಒಟ್ಟು ಭರತಖಂಡದ ಪ್ರಜೆಗಳೊಡನೆಯೂ ಪರಸ್ಪರ ಸಹಾಯ ಮಾಡಿಕೊಂಡು ವರ್ತಿಸುವುದಲ್ಲದೆ ಸ್ಥಳೀಯವಾಗಿ ನಮ್ಮ ದೇಶದಲ್ಲಿ ಇತ್ತೀಚೆಗೆ ಬಂದು ಅಭ್ಯುದಯದಲ್ಲಿ ಇತರ ಪ್ರಾಂತ್ಯಗಳ ಮತ್ತು ಇತರ ಸಂಸ್ಥಾನಗಳ ಜನರಿಗಿಂತ ಹಿಂದೆ ಬೀಳದಂತೆ ನಮ್ಮ ಸ್ಥಿತಿಗತಿಗಳನ್ನು ಸುಧಾರಿಸಿ ಸಾಧ್ಯವೆನಿಸುವಷ್ಟು ಸಂಪೂರ್ಣವಾಗಿ ವಿದ್ಯಾಭಿವೃದ್ಧಿಯನ್ನು, ಅರ್ಥಸಾಧಕ ಸದವಕಾಶಗಳನ್ನು ಒದಗಿಸಿಕೊಳ್ಳಬೇಕು.

ಇತ್ತೀಚಿನಿಂದಲೂ ಮೈಸೂರಿನ ಇತಿಹಾಸವು ಸುಖಕರವಾಗಿಯೂ, ನಾಗರಿಕತೆಯಲ್ಲಿಯೂ ಬಂದಿರುವುದೇ ಅವರ ತ್ವರಿತ ಶುಭಸೂಚಕವೆನಿಸಿರುತ್ತದೆ. ಕಲ್ಪನೆ ಬದಲಾಗದೆ ನಡೆದುದನ್ನಾಗಲೀ ಇಲ್ಲದೇ, ಎಷ್ಟೋ ಸರಿಯಿದೆ ಎಂಬುದನ್ನೆಲ್ಲಾ ನಿಂತುದನ್ನಾಗಲಿ ನಾವು ಕಂಡಿದ್ದೇವೆ. ಪ್ರಜಾಪಕ್ಷದ ಕಷ್ಟ ಪ್ರಜೆಗಳ ಆಕಾಂಕ್ಷೆಗಳಿಗೂ ಅವಶ್ಯಕತೆಗಳಿಗೂ, ತಕ್ಕಂತೆ ನಮ್ಮ ಪ್ರಭುತ್ವಕ್ರಮವನ್ನೂ ಆಡಳಿತ ವಿಧಾನಗಳನ್ನೂ ಸಮರ್ಪಕವಾಗಿ ಹೊಂದಿಸಿಕೊಳ್ಳುತ್ತಾ ಮುನ್ನಡೆಯುತ್ತ ಒಂದೇ ಸಮನಾಗಿ ನಾವು ಮುಂದುವರಿಯುತ್ತೇವೆ. ಪ್ರಸ್ತುತ್ತದಲ್ಲಿರುವ ಅಧಿಕಾರಿಗಳೆಲ್ಲಾ ಪ್ರಜೆಗಳ ಪ್ರತಿನಿಧಿಗಳನ್ನೂ, ಆಯಾ ಶಕ್ತಿಸಾಮರ್ಥ್ಯಗಳನ್ನು ಹೆಚ್ಚಿಸಿ ರಾಜ್ಯಾಡಳಿತ ವಿಧಾನದಲ್ಲಿ ಉಪಯೋಗಿಸಿಕೊಳ್ಳುವುದಕ್ಕೂ ಸಂಬಂಧಪಟ್ಟಿದೆ. ಈ ಭಾವದ ಹೃದಯ ಸಾಧನೆಯೇ ನಿಂತಿರುವ ವೈಶಿಷ್ಟ್ಯವು ಸರ್ಕಾರದವರ ಮೇಲೂ ಗುರುತಾಗಿರುತ್ತದೆ. ಅದ್ದರಿಂದ ಈ ದಿನ ನಾವು ನೆರವೇರಿಸುತ್ತಿರುವ ಸಮಾರಂಭೋತ್ಸವವು ಅಗ್ರಿಮವಾದುದು, ಪ್ರಗತಿಗೆ ಬೇಕಾದ ಭದ್ರವಾದ ತಳಹದಿಯಂತೆ ಕ್ರಮವಾಗಿ ಪ್ರಜಾಪ್ರಭುತ್ವದ ಹಾದಿಯನ್ನು ನಿರ್ಮಿಸುವಂತೆ ನಡೆದುಬರುತ್ತಿರುವ ಅಭಿವೃದ್ಧಿಮಾರ್ಗದ ಒಂದು ಮೆಟ್ಟಿಲಾಗಿರುವುದು. ಒಂದೇ ವಿಧವಾದ ಏಕಾಭಿಪ್ರಾಯದ ಹೊಂದಿಕೆಯಿಂದ ಈ ಕ್ರಮವು ಮುಂದುವರಿಯಲಿ ಎಂಬುದೇ ನಮ್ಮ ಹಾರೈಕೆಯಾಗಿರುತ್ತದೆ.

ನಿಮ್ಮ ಮುಂದೆ ಬರತಕ್ಕವರ ರೀತಿಯು ವಿಚಾರದಲ್ಲಿ ನಿಮ್ಮ ಪ್ರಾತಿನಿಧ್ಯ ಎಷ್ಟೋ ಹೆಚ್ಚಾಗಿ ನಡೆಯುವುದು. ಮತ್ತು ಅನೇಕ ಸಂದರ್ಭಗಳಲ್ಲಿ ಅದರಂತೆಯೇ ಕಾರ್ಯಕ್ರಮವು ನಿರ್ಧಾರ ಪಡಬೇಕಾಗುವುದು. ನಿಮ್ಮ ಠರಾವುಗಳು (Resolutions) ಮಾತ್ರವೇ ಅಲ್ಲದೆ, ಚರ್ಚೆಯಲ್ಲಿ ನೀವು ಒತ್ತಿ ಹೇಳುವ ಅಂಶಗಳಿಗೆ ಕೂಡ ಅತ್ಯಂತ ಪ್ರಾಮುಖ್ಯತೆಯುಂಟಾಗುತ್ತದೆ. ಸರ್ಕಾರದ ಹಿತಸಾಧಕರೆಯೂ ಪ್ರಜೆಗಳ ಹಿತಸಾಧನೆಯೂ ಏಕ್ಯತೆಗೊಂಡು ನಿಂತಿರುವುದೆಂಬ ಸಾಧಕ ತತ್ವವನ್ನು ಮಾತ್ರ ನೀವುಗಳು ಮನಸ್ಸಿನಲ್ಲಿಯೂ ಹೃದಯದಲ್ಲಿಯೂ ಗ್ರಹಿಸಿಟ್ಟುಕೊಳ್ಳಬೇಕು. ಅದೇ ನಮ್ಮ ಕೋರಿಕೆಯಾಗಿರುತ್ತದೆ. ಪ್ರಜೆಗಳ ಸೌಖ್ಯವೇ ಸರ್ಕಾರದವರ ಧ್ಯೇಯವಾಗಿದೆ, ಸಾರ್ಥಕ್ಯವು ಆಗಿರುತ್ತದೆ. ಎಲ್ಲಾ ದೇಶಗಳಲ್ಲಿಯೂ, ಮತ್ತು ಅಭ್ಯುದಯಮಾರ್ಗದಲ್ಲಿ ಚಲಿಸುವುದಕ್ಕಾಗಿ ವಿವಿಧವಾದ ಭಿನ್ನಾಭಿಪ್ರಾಯಗಳು ಸ್ವಾಭಾವಿಕವಾಗಿ ಉಂಟಾಗುತ್ತವೆ. ರಾಜ್ಯಾಡಳಿತಗಳನ್ನು ನಿರ್ವಹಿಸುವ ಅಧಿಕಾರಿಗಳಿಗೂ ನಿಮಗೂ ಪರಸ್ಪರವಾಗಿ ಭಿನ್ನಾಭಿಪ್ರಾಯವುಂಟಾದರೆ, ಅದು ಕಾರ್ಯಕ್ರಮಕ್ಕೆ ಅಡ್ಡಿಯುಂಟುಮಾಡತಕ್ಕದ್ದೇ ಹೊರತು ಕಾರ್ಯದ ಉದ್ದೇಶಕ್ಕೆ ಧಕ್ಕೆಯಲ್ಲ. ಸರ್ಕಾರದವರು ನಿಮ್ಮಲ್ಲಿ ಸುದುದ್ದೇಶವು, ಏಕೋಪ್ರಾಣಪೂರ್ವಕವಾದ ಸಹಾಯವೂ ಇರುವುದೆಂದು ಹೇಗೆ ನಿರೀಕ್ಷಿಸಿ ಪರಿಗಣಿಸುವರೋ ಹಾಗೆಯೇ ನೀವೂ ಅವರಲ್ಲಿ ಅದೇ ಗುಣಗಳನ್ನು ನಿರೀಕ್ಷಿಸಿ ಪರಿಗಣಿಸಬೇಕು.

ಈ ಕಾರಣಗಳಿಂದ ಮೈಸೂರು ಸಂಸ್ಥಾನದ ಚರಿತ್ರೆಯಲ್ಲಿ ಈ ಸುದಿನವು ಹೊಸ ಶಕೆಯೊಂದನ್ನು ಆರಂಭಿಸಿರುತ್ತದೆ. ಪ್ರದೇಶಪ್ರೇಮದೊಡಗೂಡಿ ದೇಶಸೇವೆ ಮಾಡುವುದರಲ್ಲಿ ನಿಮ್ಮ ಪ್ರಜೆಗಳಿರುವ ಆದರ ಮತ್ತು ಸಾವಧಾನ್ಯಗಳ ವಿಚಾರದಲ್ಲಿ ನಮ್ಮ ಭರವಸೆಯು ಅನುಭವವಿರುವುದರಿಂದ ಅದು ಮೂಲವಾಗಿ ನಿಂತಿರುತ್ತದೆ. ನಿಮ್ಮ ಆಕಾಂಕ್ಷೆಗಳ ವಿಚಾರದಲ್ಲಿ ನಮಗೆ ನಿರಂತರವೂ ಗಾಢವಾದ ಸಹಾನುಭೂತಿಯುಂಟೆಂದು ನೀವುಗಳು ದೃಢವಾಗಿ ನಂಬತಕ್ಕುದು. ನೀವು ನಿಮ್ಮ ಕೃತಿಯೊಂದು ಕೆಲಸವನ್ನೂ, ಉದ್ದೇಶಪೂರ್ವಕವಾದ ನಿಯಮವನ್ನು ನಿಯಮಿಸುವುದರಲ್ಲೂ, ಸುದುದ್ದೇಶದಿಂದಲೂ ವಿಷಯ ವಿಮರ್ಶೆ ಮತ್ತು ಅನುಭವಪರಿಶೀಲನೆ ಇವುಗಳಿಂದಲೂ ಕೂಡಿ ಪರಿಗಣಿಸಿ ನಿಮಗೆ ಹೊಸದಾಗಿ ದೊರೆತಿರುವ ಅಧಿಕಾರಗಳನ್ನು ಜನಸಾಮಾನ್ಯದ ಉಪಯೋಗಕ್ಕಾಗಿ ಮಾತ್ರ ಪ್ರಯೋಗಿಸುವ ಪಕ್ಷದಲ್ಲಿ ನೀವುಗಳು ಅಧಿಕಾರದಲ್ಲಿಯೂ, ಪ್ರಾಬಲ್ಯದಲ್ಲಿಯೂ, ಮೇಲಕ್ಕೇರುವುದೆಂದಿಗೂ ತಪ್ಪದು; ಮತ್ತು ನಮ್ಮ ಸಂಸ್ಥಾನದ ಉಚ್ಛ್ರಾಯಸ್ಥಿತಿಯನ್ನೂ ಯಶಸ್ಸನ್ನೂ ಅಭಿವೃದ್ಧಿಪಡಿಸಿ ಪ್ರತಿಷ್ಠಿಸಲು ಸಹಾಯಮಾಡಿ ನಮ್ಮ ದೇಶ ನಿಮ್ಮಲ್ಲಿಯೂ ನಮ್ಮ ಸಂಸ್ಥಾನದ ಶಾಶ್ವತವಾದ ಕೀರ್ತಿ ಬೆಳೆಯಬೇಕಾದ ರಕ್ಷಣಾಗಿ ನಿಲ್ಲತಕ್ಕುದು.

ಮಹನೀಯರೆ! ಈ ಮಾರ್ಗಗಳಲ್ಲಿನ ನಿಮ್ಮ ಸಮಸ್ತ ಪ್ರಯತ್ನಗಳಿಗೂ ಭಗವಂತನ ಪ್ರಸಾದವೂ, ಕಾರ್ಯಸಿದ್ಧಿಯೂ ಲಭಿಸಲೆಂದು ಹಾರೈಸುವೆವು; ಅಲ್ಲದೆ ಶಕ್ತಿಯೂ ವಿವೇಕವೂ ನಿರ್ದೇಶವೂ ಸ್ಪಷ್ಟತೆಯೂ, ನಿರಂತರವೂ ನಿಮ್ಮಲ್ಲಿ ನೆಲೆಸಲೆಂದು ಪ್ರಾರ್ಥಿಸುತ್ತೇವೆ.

ಶ್ರೀಮನ್ಮಹಾರಾಜರವರ ಉಪನ್ಯಾಸವು ಪೂರೈಸಿದ ಮೇಲೆ ನ್ಯಾಯವಿಧಾಯಕ ಸಭೆಯ ಪರವಾಗಿ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟರವರು ಇಂಗ್ಲೀಷಿನಲ್ಲಿಯೂ, ರಾಜಸೇವಾಪ್ರಸಕ್ತ ಶ್ರೀನಿವಾಸರಾಯರವರು ಪ್ರಜಾಪ್ರತಿನಿಧಿ ಸಭೆಯ ಪರವಾಗಿಯೂ ಶ್ರೀಮನ್ಮಹಾರಾಜರವರನ್ನು ಅವರು ದಯಪಾಲಿಸಿದ ಸುಧಾರಣೆಗಳಿಗೋಸ್ಕರವೂ ಸದರಿ ಉಪನ್ಯಾಸದಲ್ಲಿ ಅವರು ಹಾಡಿದ ಅನುಭವವಾದ ಹಿತೋಪದೇಶಕ್ಕೋಸ್ಕರವೂ ರಾಜಭಕ್ತಿ, ವಿಶ್ವಾಸಪೂರಕವಾಗಿ ವಂದಿಸಿದರು. ತರುವಾಯ ಶ್ರೀಮನ್ಮಹಾರಾಜರವರು ಸಭೆಯನ್ನು ಉಪಸಂಹರಿಸಿ ಬಿಜಯಂಗೈದರು.

(ಸಾಧ್ವಿಯಿಂದ)

ಒಡಹೆನದ ಪರೀಕ್ಷೆಯು.

(ಒದಿಬಂದದ್ದು).

ಪ್ರಿಯ ವಾಚಕಮಹಾಶಯರೆ!

ಈ ಪ್ರಾಜಯವನ್ನು ತಮಗಳ ಮುಂದಿಡುವದೆ ಒಡಕ ಅತಿಶಯವುಳ್ಳವನಾಗಿರುತ್ತೇನೆ. ಸಾಧಾರಣ ಒಡಕನ ಪರಿಚಯವನ್ನು ತಿಳಿಯದ ಮಾನವನು ಈ ಪ್ರಪಂಚದಲ್ಲಿ ಇಲ್ಲವೆಂದರೂ ಅತಿಶಯೋಕ್ತಿಯಾಗಲಾರದು. ಒಡಕನವು ಪ್ರಾಣಿಗಳ ಪ್ರಪಂಚದವಾಗಲಿ, ದೇಶ, ಗ್ರಾಮ ಯಾ, ಮನುಷ್ಯರಾಗಲಿ ಇದ್ದೇ ಇಲ್ಲ. ಬಡತನವು ಯಾರಲ್ಲು ಭೇದವನ್ನು ಮಾಡೇ ಇಲ್ಲ. ಅಲ್ಪನಾಗ್ಗಾಗಲಿ ಮಹಾತ್ಮನಿಗಾಗಲಿ ಒಡಕನವು ಏಕರೀತಿಯಿಂದ ನೋಡುತ್ತದೆ. ಲೋಕದಲ್ಲಿ ಪ್ರತಿಯೊಂದು ವಿಷಯಕ್ಕೂ, ಯಾ, ವಸ್ತುಗಳಿಗೆ ಸಾರವೆಂಬುದೊಂದು ಇದ್ದೇ ಇರುತ್ತದೆ. ಇದಕ್ಕೆ ಅಂಥಾ ಪದಕ್ಕು ಇರುವದೇ ಇಲ್ಲ. ಇದು ಅನಿವಾರ್ಯವಾಗಿಯೂ ಸ್ಥಾಯಿಯಿಲ್ಲದ, ರಸವಿಲ್ಲದ, ತಪ್ಪಮಾತ್ರವಿಲ್ಲ ಏಂದು ಸಾವಿನವೇ ಪದವಾಗಿದೆ. ಇದರ ಅನುಭವವು ಸರ್ವರಿಗೂ ವೇದ್ಯವಾಗಿಯೇ ಇದೆ. ಒಡಕನಿಗೆ ಐಶ್ವರ್ಯವೆಂಬುದೊಂದೇ ಶತ್ರು ಇದಕ್ಕೆ ಸಹಕಾರಗಳು ಒಟ್ಟು ಹೆಚ್ಚಾಗಿಯೇ ಇವೆ. ವಿದ್ಯೆಯೂ ಸಹ ಒಡಕನದ ಬಂಧುವೇ ಎಂದರೂ ದೋಷವಿಲ್ಲ. ಐಶ್ವರ್ಯವನ್ನು ಹೊಂದುವದಕ್ಕಾಗಲಿ ರಾಜಮನ್ನಣೆ ಸಡೆಯುವದಕ್ಕಾಗಲಿ ವಿದ್ಯೆ ಸಂಪಾದಿಸುವದಕ್ಕಾಗಲಿ, ಅಥವಾ, ಇವನ್ನಾದರೂ ಹೊಂದುವದಕ್ಕಾದರೂ ಕೂಡ ಮಾನವರಿಗೆ ಹೊಂದುವದೆ ಅತಿ ಪ್ರಯಾಸಕರವಾಗಿದೆ. ಬಡತನವನ್ನು ಹೊಂದುವಕ್ಕಾದರೊ, ಯಾವ ಪ್ರಯಾಸವೂ ಇಲ್ಲ.

ದೇಶೆಯಿದ್ದಂತೆ ಒಡಳ ದೀರ್ಘಕಾಲವೂ ಇಲ್ಲ. ಇದು ಒಡಳ ನಲುಘದಿಂದ ಶೀಘ್ರವಾಗಿ ಒಲಿಯತಕ್ಕ ದೇವತೆಯಾಗಿದೆ. ಒಡಕನಿಗೆ ದ್ವೇಷಿಗಳಾಗಲಿ, ಮಿತ್ರರಿಗಳಾಗಲಿ ಇರುವುದಿಲ್ಲ. ಇದನ್ನು ಪೊರೆದಿದವರಿಗೆ ಯಾವತರದ ಚಿಂತನೆ ಕೂಡಾ ಐಶ್ವರ್ಯವಂತರಂತೆ ಇರುವುದಿಲ್ಲ. ಪ್ರಪಂಚದಲ್ಲಿ ದೇಶವಾಗಲಿ ಮಹಲವಾಗಲಿ, ಕೀರ್ತಿ ಮುಂತಾದ ಉಚ್ಛ್ರಾಯಸ್ಥಿತಿಗಳಾಗಲಿ ಹೆಚ್ಚಾಗಿ ಐಶ್ವರ್ಯವಂತರನ್ನಾಶ್ರಯಿಸಿರುವೆಯೋ ಹೊರತು ಒಡವರನ್ನಾಶ್ರಯಿಸುವುದು ಕಡಿಮೆ. ಈ ಪ್ರಕೃತ ಗೃಹಚಾರಗಳೂ ಕೂಡ ಧನಕ್ಕಿಲ್ಲದೆ ಮನುಷ್ಯನಿಗೆ ಬಿಡುವುದಿಲ್ಲ. ಅದಕ್ಕೇನೇ ಗೃಹಚಾರಸಂಪ್ರಾಪ್ತಿಯಾದವರು ತಮ್ಮಲ್ಲಿರುವ ಧನಗಳನ್ನು ಯಥಾಶಕ್ತಿ ಮಾಡಿ ದಾನಗಳ ಮೂಲಕವಾಗಿಯಾಗಲಿ ಇತರ ಇನ್ನಾವುದರ ಮೂಲಕವಾಗಲಿ ವಿನಿಯೋಗಿಸದೆ ಗೃಹಚಾರ ಪರಿಹಾರವಾಗುತ್ತೆಂಬ ಒಂದೇ ಇದರ ಕಾರಣವು. ಒಟ್ಟಿನಲ್ಲಿ ವ್ಯಾಧಿಗಳ ಮೂಲ ಕವೂ, ಇತರ ವ್ಯರ್ಥಕಾರ್ಯಕ್ಕೆ ತಕ್ಕಫಲ ತೋರದರೀತಿ ಅನೇಕ ನಷ್ಟಕಷ್ಟಗಳುಂಟಾದರೆ ಸಾಮಾನ್ಯವಾಗಿ ನಾವು ಅಕಸ್ಮಿಕ ಈ ಗ್ರಹಚಾರಹಿಡಿದ ವೇಳೆಯೆಂದುಕೊಳ್ಳುತ್ತೇವೆ. ಸಾಮಾನ್ಯವಾಗಿ ಒಟ್ಟಿನಲ್ಲಿಯೇ ಇರುವ ಐಶ್ವರ್ಯಶೀಲರುವವರಿಗೇ ಒಡನಿಗೆ ಗೃಹಚಾರವಾಗಲಿ, ವ್ಯಾಧಿಗಳಾಗಲಿ, ಮಿತ್ರರಿಗಳಾಗಲಿ, ಶತ್ರುಗಳಾಗಲಿ ಇವರೇ ಹೋಲಿಕೆ ಅದು ತೀರಿ ನಿರಾಧಾರವಾದನಂತರ ಯಾರದೂ, ಯಾ, ಯಾವ

ದೂ ಇರುವುದಿಲ್ಲ. ಆದರೆ ಈ ಬಡತನವು ಇಷ್ಟು ಸುಲಭರೂಪದಲ್ಲಿದ್ದರೂ ಪ್ರಪಂಚದ ಪ್ರತಿಪ್ರಾಣಿಗೂ ಇದರಲ್ಲಿರುವ ಭಯವು ಮರಣಭಯಕ್ಕಿಂತ ಹೆಚ್ಚಾಗಿರುವದು. ಇದು ಬಹಳ ಆಶ್ಚರ್ಯಕರ! ಪ್ರತಿಮನುಷ್ಯನು ಇದು ಇಂಬಾರದೆಂಬುದಾಗಿ ತನ್ನ ಜೀವಮಾನದಲ್ಲೆಲ್ಲಾ ಇದನ್ನು ದೂರಪಡಿಸುವ ನಿಮಿತ್ತ ತನ್ನ ಆಯುಸ್ಸನ್ನೆಲ್ಲಾ ಕಳೆದುಕೊಳ್ಳುವನು. ಮನುಷ್ಯರು ಇದನ್ನು ದೂರಪಡಿಸ ನಿಮಿತ್ತ ಶ್ರಮೆ ತೆಗೆದುಕೊಂಡಹಾಗೆಲ್ಲಾ ಇದು ಶ್ರಮವಿಲ್ಲದೆ ಸುಲಭರೂಪದಲ್ಲಿ ನೋಡನೋಡುವಹಾಗೆ ಆಶ್ರಯಿಸಿಕೊಂಡೇ ಬರುತ್ತದೆ. ಪ್ರಪಂಚದಲ್ಲಿ ಇದನ್ನು ದೂರಪಡಿಸಿದವರು ಬಹಳ ವಿರಳರಾಗಿರುತ್ತಾರೆ. ಬಹುಶಃ ಬಡತನವೆಂಬ ಇದೊಂದು ದೇವಕಿ ಇಲ್ಲದಿದ್ದರೆ ಭಗವಂತನ ಸೃಷ್ಟಿಯು ವ್ಯರ್ಥವೆಂದೆನ್ನಬೇಕು. ಅಂದರೆ ಲೋಕವ್ಯವಹಾರಗಳು ಎಂದೂ ನಡೆಯಲಾರವು.

ಈಗಿನ ನವನಾಗರೀಕರಲ್ಲಿ ಕೆಲವರು ನಮಗೆ ಸ್ವರಾಜ್ಯವು ಜಾತಿಭೇದ, ಮತಭೇದ, ಪಂಗಡಗಳು, ಅಸ್ಪೃಶ್ಯತಾವಿಚಾರ ಮುಂತಾದ್ದು ನಮ್ಮಲ್ಲಿರುವುದರಿಂದ ನಮಗೆ ದೊರೆಯಲಿಕ್ಕಿಲ್ಲವೆಂದೂ, ಇದು ಒಂದೇಯಾದರೆ ಕೂಡ್ಲೆ ಸ್ವರಾಜ್ಯ ಪಡೆಯಬಹುದೆಂಬುದಾಗಿ ಅಭಿಪ್ರಾಯಪಡುತ್ತಾರೆ. ಸೂಕ್ಷ್ಮವಾಗಿ ವಿಚಾರಿಸಿದರೆ ಖಂಡಿತವಾಗಿಯೂ ಈ ಅಭಿಪ್ರಾಯಗಳು ತಪ್ಪೆಂದು ಹೇಳಬೇಕಾಗಿದೆ. ಕುತ್ತಿಗೆಯಲ್ಲಿ ಸುತ್ತಿಕೊಂಡ ಹಾವನ್ನು ಮರೆತು ಕಾಲಿಗೆ ಸುತ್ತಬರುವ ಹಾವನ್ನು ತಡೆಗಟ್ಟುವ ಪ್ರಯತ್ನ ಪಡುವಂತೆ ನಮ್ಮ ಹೃದಯದೊಳಗಿರುವ ಮತ್ಸರವೆಂಬ ಶತ್ರುವನ್ನು ನಮ್ಮ ಬಂಧುವನ್ನಾಗಿ ತಿಳಿದು ಅತನ ಸಂಗದೋಷದಿಂದ ಬರುವ ಕಷ್ಟಗಳಿಗೆ ಬೇರೆ ವಿಧಧ ಅರ್ಥಕಲ್ಪಿಸುವ ಮಹಾತ್ಮರಾಗಿರುತ್ತೇವೆ.

ನಮ್ಮ ಬಂಧುವೆಂದೂ, ನಮಗೆ ಹಿತಕಾರಿಯಾಗಿ ನಡೆಯತಕ್ಕವನೆಂದು ನಂಬಿರುವ ನಮ್ಮ ಮತ್ಸರವೆಂಬ ಕಳ್ಳನ ಗುಟ್ಟನ್ನು ಹಿಡಿದು ನಾವು ಯಾವಾಗ ಆತನನ್ನು ನಮ್ಮಲ್ಲಿಂದ ಹೊರಡಿಸಬಲ್ಲೆವೊ ಅಂದು ನಮಗೆ ಸ್ವರಾಜ್ಯವು ನಮ್ಮ ಕರತಲಾಮಲಕದಲ್ಲಿಯೇ ಇದೆ. ಜಾತಿಭೇದ ಮತಭೇದ ನಮ್ಮೊಳಗಿರುವದೇ ನಮ್ಮ ಮುಂದಿನ ಅಭಿವೃದ್ಧಿಗೆ ಕೆಡಕೆನ್ನುವ ಮಹಾತ್ಮರೆ! ತಾವು ಧನಿಕ ದರಿದ್ರರೆಂಬವರೊಳಗೆ ಭೇದವಿಲ್ಲದರೀತಿ ಮಾಡಿ ಅವರೊಳಗೆ ರಾಜಿಮಾಡಿಸುವಿರೇ? ಆದರೆ ನೀವು ನೆನದ ಕಾರ್ಯವು ಬಹಳ ಸುಲಭವಾಗಿ ಕೈಗೂಡಬಹುದು. ನೀವು ಮತಭೇದದಿಂದ ಎಷ್ಟು ಕೆಡಕನ್ನು ಎಣಿಸುವಿರೊ ಅದಕ್ಕಿಂತ ನೂರುಪಾಲು ಹೆಚ್ಚಾಗಿ ಧನಿಕ ದರಿದ್ರರೆಂಬ ಭೇದವಿಕಲ್ಪನೆಯಿಂದ ಕೆಡಕು ಇರುತ್ತದೆ.

ನೀವು ಹೇಳತಕ್ಕ ಭೇದಕ್ಕೂ ನಾವು ಸೂಚಿಸತಕ್ಕ ಭೇದಕ್ಕೂ ತಪ್ಪುವಾಗಿ ಪರಿಣಾಮಿಸತಕ್ಕವನೊಬ್ಬನೆ ಬಂಧುವೆಂದು ನಟಿಸಿಕೊಳ್ಳತಕ್ಕ "ದ್ವೇಷಾ ಈರ್ಷಾನರಾಯ"ವೆಂಬ ಬುದ್ಧಿಯನ್ನು ಸರ್ವರಿಂದಲೂ ಹೋಗಲಾಡಿಸಿಬಿಟ್ಟರೆ ನಿಮ್ಮ ಅಭಿಪ್ರಾಯಕ್ಕಾಗಲಿ ನಮ್ಮದಕ್ಕಾಗಲಿ ಹೆಚ್ಚಿನ ಅಂತರ ಇರುವುದಿಲ್ಲ. ಆದರೆ ನಿಮ್ಮ ದಾರಿ ಬಹಳ ಶ್ರಮದೀರ್ಘ—ಇದಾದರೂ ಅಷ್ಟೊಂದು ಕಷ್ಟವಲ್ಲ. ಇದು ಜಾತಿ ಎರಡನ್ನು ಒಂದುಮಾಡುವಿಕೆ, ಈ ಸುಭದ್ರಾಕ್ಷಿಯನ್ನು ಬಿಟ್ಟು ಹಲವುಜಾತಿಯನ್ನು ಒಂದುಮಾಡುವಿಕೆಗೆ ಪ್ರಯತ್ನಪಡುವುದು ಹೆಚ್ಚಿನ ಪ್ರಯಾಸಕ್ಕೂ ಅನರ್ಥಕ್ಕೂ ಕಾರಣಭೂತರಾಗಬೇಕಾಗುವುದು. ಪ್ರಪಂಚದಲ್ಲಿ ಬಡತನದವರೇ ಹೆಚ್ಚು. ಬಡತನ ಹೊಂದಿದವರು ಇಲ್ಲದಿದ್ದರೆ ಲೋಕದಲ್ಲಿ ಯಾವದೊಂದೂ ನಡೆಯಲಾರದು. ಬಡತನಹೊಂದಿದ ಸದ್ರೀತಿಯುಳ್ಳಿರುವ ಭಿಕ್ಷಾಧಿಪತಿಯಾದವನೂ ಕೂಡಾ ಲಕ್ಷಾಧಿಪತಿಗೆ ಹೆಚ್ಚು. ಯಾ. ಸರಿಸಮಾನನಾಗಿರುತ್ತಾನೆ.

ಆದ್ದರಿಂದ ಯಾವದೈವಶಕ್ತಿಗಿಂತಲೂ ಬಲವತ್ತರವಾದ ಬಡತನ ದೊಡ್ಡತನವೆಂಬವರೊಳಗಿನ ವೈಷಮ್ಯಗಳ ಹೋಗಲಾಡಿಸಿ ಅವರೊಳಗೆ ಪ್ರೀತಿಭಾವನೆ ಹುಟ್ಟುವುದೇ ಸ್ವರಾಜ್ಯ, ಇದೇ ಜಾತಿಭೇದ, ಮತಭೇದ, ಅಸ್ಪೃಶ್ಯತೆ, ಈ ಭೇದ ಇಂದಿಲ್ಲವಾದರೆ ಸರ್ವವೂ ನೆನೆಸಿದಂತೆಯೇ. ಅಂದಿಗೆ ಸ್ವರಾಜ್ಯ! ಇಂದಿಗೆ ಧನ್ಯವಾದ!!

ವರ್ತಮಾನ ಸಂಗ್ರಹ

ಒಳದೇಶ.

ತಾ 22 ರಲ್ಲು ಹೊಸ ಚೀಫ್ ಕಮಿಷನರಾದ ಮೆ|| ವಾಟ್ಸನ್‌ರವರು ಬೆಂಗಳೂರಿಂದ ಮಡಿಕೇರಿಗೆ ಬಂದಿರುವರು.

ತಾ 19 ರಲ್ಲು ಭಾಗಮಂಡಲದನಾಡು ಕಚೇರಿಯಿಂದ ಇಬ್ಬರು ಅಮ್ಮಕೊಡವರು (ಗೌಡುಗಳವರು) ಸುಮಾರು 1500 ರೂ ಯನ್ನು ಮಡಿಕೇರಿ ಖಜಾನೆಗೆ ತಂದವರನ್ನು ಮಡಿಕೇರಿಯಲ್ಲಿ ಒಬ್ಬ ಕಾನಸ್ಟೇಬಲನು ಸುಬೇದಾರರು ಈಗ ನಕೀರ್ಟಿನಲ್ಲಿರುವುದರಿಂದ ಖಜಾನೆಗೆ ಹಣ ಕೊಡಲಿಕ್ಕಾಗುವುದಿಲ್ಲವೆಂದು ಅವರಿಗೆ ಹೇಳಿ ಅವರಿಬ್ಬರನ್ನು ತನ್ನ ಮನೆಯಲ್ಲು ಎರಡು ದಿವಸದವರೆಗೆ ತಂಗಿಸಿಕೊಂಡು ನಂತರ ಅವರು ಖಜಾನೆಗೆ ಹಣ ತಂದು ಕೊಡ ಮಾಡಿದಲ್ಲು ಸುಮಾರು ಏಳುನೂರು ರೂಪಾಯಿ ಕಮ್ಮಿಯಾಗಿರುವುದನ್ನು ಕಂಡು ಆ ಕಾನಸ್ಟೇಬಲನನ್ನು ದಸ್ತಗಿರಿಮಾಡಿದರು. ಇನ್ನೂರು ರೂಪಾಯಿಯೂ ಕಾನಸ್ಟೇಬಲನಲ್ಲಿಯೂ ಬಾಕಿ ಹಣ ಅವನು ಜೇರೆಯವರಿಗೆ ಕೊಟ್ಟದ್ದರಿಂದಲೂ ವಸೂಲಿಮಾಡಲ್ಪಟ್ಟದೆ.

ಚೀಫ್ ಕಮಿಷನರವರ ಅಧ್ಯಕ್ಷತೆಯಲ್ಲಿ ಲೆಜಿಸ್ಲೇಟಿವ್ ಕೌನ್ಸಿಲು ಮೀಟಿಂಗು ತಾ 24 ರಲ್ಲಿ ಮಡಿಕೇರಿಯಲ್ಲಿ ಪ್ರಾರಂಭವಾಗಿದೆ. ಬಜೆಟಿನಮೇಲೆ ಚರ್ಚೆಯು ತಾ 27 ರವರೆಗೆ ನಡೆಯುವುದು.

ಈ ತಾ 17 ಮತ್ತು 18 ರಲ್ಲು ನಾಲ್ಕುನಾಡು ಮತ್ತು ಯಡಿಯತ್ತು ನಾಡುಗಳಲ್ಲಿ ಕೆಲವು ಗ್ರಾಮಗಳಿಗೆ ಎರಡುದಿನವೂ, ಇನ್ನುಕೆಲವು ಸ್ಥಳಗಳಿಗೆ ಒಂದು ದಿನವೂ ಮಳೆ ಬಿದ್ದಿದೆ. ತಾ 21 ರಲ್ಲು ರಾತ್ರಿ ಕಿಗ್ಗಟ್ಟುನಾಡು ತಾಲೋಕಿನಲ್ಲು ಸಾಧಾರಣದ ಒಂದು ಮಳೆಹೊಡೆಯಿತು.

ಕಳೆದವಾರ ರುದ್ರಬೀಡುಗ್ರಾಮದಲ್ಲಿ ಬಲಗೈ ಬೆಳ್ಳೀರನೆಂಬವನು ತನಗಿರುವ ಇಬ್ಬರು ಹೆಂಡತಿಗಳ ಪೈಕಿ ಒಬ್ಬಳನ್ನು ಯಾವ ಕಾರಣದಿಂದಲೋ ರಾತ್ರಿ ಹೊಡೆದುಕೊಂದು ಬೈರಂಗಪಡಿಸದೆ ಶವವನ್ನು ದಫನ್ ಮಾಡಿದ್ದು ಪ್ರಕಾರಾಗಿ ಪೋಲೀಸಿನವರು ಶವವನ್ನು ಕಿತ್ತುತೆಗೆದು ತನಿಕೆಯನ್ನು ನಡೆಸುತ್ತಿರುವ ವರ್ತಮಾನವಿದೆ.

ನಳ್ಳಗಟ್ಟುಗ್ರಾಮದ ಚಮ್ಮಟೀರ ಮನೆಗೆ ತಾ 22 ರಲ್ಲಿ ಹಗಲು ಅಕಸ್ಮಾತವಾಗಿ ಬೆಂಕಿ ಬಿದ್ದು, ಮನೆ, ಕೊಟ್ಟಿಗೆ, ಭತ್ತವು ಇವಲ್ಲದೆ ಸಾಮಾನುಗಳು ಬೆಂದು ಸುಮಾರು 500 ರೂ ಮೌಲ್ಯಟ್ಟು ನಷ್ಟವಾಗಿದೆಯೆಂದು ತಿಳಿಯಬರುತ್ತದೆ.

ತಾ 14 ರಲ್ಲಿ ಮಾಪ್ಪಳಟೀರ ಟ್ರಾಸ್ಪ್ರೆ ನೋಡಲಿಕ್ಕೆ ಹೋದ ಕೌನ್ಸಿಲು ಮೆಂಬರುಗಳ ಹೆಸರುಗಳು ಕಳೆದವಾರ ಪ್ರಕಟವಾದ್ದರಲ್ಲಿ ಮೆ|| ಬಿ ಶ್ರೀಪತಿರಾಯರ ಹೆಸರು ಪ್ರಿಂಟರ್ಸ್ ತಪ್ಪಿನಿಂದ ಬಿಟ್ಟುಹೋದದಕ್ಕೆ ವ್ಯಸನ ಪಡುತ್ತೇವೆ.

ಕಳೆದವಾರ ಪ್ರಕಟಿಸಿದಂತೆ ಮೆ, ಸಿರಿಗೆಜಿಪ್ಪನವರು ಕಂಪನಿಯು ಸುಬೇದಾರ ಹುದ್ದೆಗೆ ರಾಜೀನಾಮೆ ಕೊಟ್ಟಿರುವುದಿಲ್ಲವಾಗಿಯೂ, ಅದರ ಬದಲು ಮೆ [illegible] ನೇಯಿಸಲ್ಪಟ್ಟಿರುವರೆಂದು ಇತ್ತೀಚೆಗೆ ತಿಳಿಯುತ್ತೇವೆ.

ಸ್ಕೂಲ್ ಸೂಪರ ವೈಸರುಗಳಾದ ಮೆ|| ... ಅವರನ್ನು ದಕ್ಷಿಣ ಕೊಡಗಿಗೂ, ಮೆ|| ಮಾದಪ್ಪನವರನ್ನು ಉತ್ತರ ಕೊಡಗಿಗೂ ಏಪ್ರಿಲ್ ಮಾಹೆಯಿಂದ ವರ್ಗಾಯಿಸಿರುವರು. ಮಾರ್ಚ ತಾ 24 ರಲ್ಲು ಸರ್ಕಲ್ ಫೈನಲ್ ಪರೀಕ್ಷೆಯು ಮಡಿಕೇರಿ ಹೈಸ್ಕೂಲಿನಲ್ಲಿ ಪ್ರಾರಂಭವಾಗಿದೆ. ತಾ 31 ರಲ್ಲು ಈ ಶಾಲೆಯ ಬೇರೆ ತರಗತಿಗಳಿಗೆ ಫೈನಲ್ ಪರೀಕ್ಷೆಯು ಸುರುವಾಗುವುದು.

ತಾ 18 ರಲ್ಲು "ಕೊಡಗು" ಕಂಪನಿಯ ಡೈರೆಕ್ಟರುಗಳ ಮೀಟಿಂಗಿಗೆ ಕೋರಂ ಇಲ್ಲದ್ದರಿಂದ ಸದರಿ ಮೀಟಿಂಗು ತಾ 28 ರಲ್ಲು ಸಾಯಂಕಾಲ ಓಂಕಾರೇಶ್ವರ ದೇವಸ್ಥಾನದ ಹಾಲಿನಲ್ಲಿ ನಡೆಯುವುದು.

ದೇಶದಲ್ಲೆಲ್ಲಾ ಕೋವೆಯ ಕಾಯಿಲೆಯು ಬಹಳ ಪ್ರಬಲವಾಗಿದೆ. ಅನೇಕ ಜನರು ಇದಕ್ಕೆ ತುತ್ತಾಗುತ್ತಿದ್ದಾರೆ. ಮಡಿಕೇರಿ ಆಸ್ಪತ್ರೆಯಲ್ಲಿ ದಿನಂಪ್ರತಿ ಒಂದೆರಡು ಸಾವುಗಳು ಆಗುತ್ತಲೇ ಇವೆ.

ಮೆ|| ಐಚೆಟ್ಟಿರ ಬಿದ್ದಮ್ಮನವರು ಮೆ|| ಬಿದ್ದಂಡ ದೇವಪ್ಪನವರು ಮತ್ತು ಕಳ್ಳಿಚಂಡ ಬೆಳ್ಯಪ್ಪನೆಂಬ ವಿದ್ಯಾರ್ಥಿಯು ಕಳೆದವಾರ ಮಡಿಕೇರಿಯಲ್ಲಿ ಮೃತರಾದರು.

ಕೊಡಗು ಸೆಂಟ್ರಲ್ ಬ್ಯಾಂಕಿನ ಸಹಕಾರಿ ಸಂಘದ ಡೈರೆಕ್ಟರುಗಳ ಮೀಟಿಂಗ್ ಇದೇ ತಾರೀಖು 28 ನೇ ದಿನ ಸಾಯಂಕಾಲ 5 ಘಂಟೆಗೆ ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಹಾಲಿನಲ್ಲಿ ನಡೆಯುವುದು.

ಈ ತಾರೀಖು 24 ರಲ್ಲು ಬೆಳಗ್ಗೆ 10 ಘಂಟೆ 50 ನಿಮಿಷಕ್ಕೆ ಮಡಿಕೇರಿ ಕೌನ್ಸಿಲ್ ಚೇಂಬರಿನಲ್ಲು ಹೊಸ ಚೀಫ್ ಕಮಿಷನರಾದ. ಮೆ|| ವಾಟ್‌ಸನ್‌ರವರು ತನ್ನ ಹೊಸಪದವಿಯನ್ನು ರಾಜಭಕ್ತಿಯಿಂದ ನಡಿಸುತ್ತೇನೆಂದು ಪ್ರಮಾಣ ಮಾಡಿದನಂತರ ಮೆ|| ಏಟ್ಸ್‌ರವರು, ಕೌನ್ಸಿಲ್ ಮೆಂಬರಾಗಿ ರಾಜಭಕ್ತಿಯ ಪ್ರಮಾಣವನ್ನು ಮಾಡಿದರು. ಕೂಡಲೇ ಮೊದಲೇ ಮೆಂಬರುಗಳಿಂದ ಕಳುಹಿಸಲ್ಪಟ್ಟದ್ದ ಸುಮಾರು 25 ಪ್ರಶ್ನೆಗಳಿಗೆ ಉತ್ತರವು ಕೊಡಲ್ಪಟ್ಟವು. ಅನಂತರ ಫೈನಾನ್ಸ ಮೆಂಬರಾದ ಕಮಿಷನರವರು ತಮ್ಮ ಭಾಷಣದೊಂದಿಗೆ ಬಜೆಟನ್ನು ಕೌನ್ಸಿಲ ಮುಂದೆ ಚರ್ಚೆಗೆ ಇಟ್ಟರು. ಅವರ ಭಾಷಣವಾದ ನಂತರ ಮೆ|| ಕೋಟೆರ ಚೆನ್ನಪ್ಪನವರು, ಮೆ|| ಪನೆಯಬಂಡ್ರ ಚಿನ್ನಪ್ಪನವರು ಮೆ|| ಸುಬ್ಬಣ್ಣಯ್ಯನವರು ಮೆ|| ಪಾರ್ವಂಗಳ ಕುಶಾಲಪ್ಪನವರು ಮೆ|| ಶ್ರೀಪತಿರಾಯರು ಮೆ|| ಸಿ ಎನ್. ವೆಂಕಪ್ಪಯ್ಯನವರು ಮೆ|| ಕೃಷ್ಣಮನೆ ಗಣಪಯ್ಯನವರು, ಮತ್ತು ಮೆ|| ಪಂದಿಯಂಡ್ರ ಬೆಳ್ಯಪ್ಪನವರು ತಮ್ಮ ಭಾಷಣಗಳನ್ನು ಮಾಡಿದರು. ಫೈನಾನ್ಸ ಮೆಂಬರು ಇವುಗಳಿಗೆಲ್ಲಾ ಉತ್ತರವಾಗಿ ಒಂದು ಚಿಕ್ಕ ಭಾಷಣವನ್ನು ಮಾಡಿದರು. ಪ್ರೆಸಿಡೆಂಟರು, ಬಜೆಟ್ಟಿನ ಜನರಲ್ ಚರ್ಚೆಯುಮುಗಿದದ್ದರಿಂದ ಕೌನ್ಸಿಲ್ ಮೀಟಿಂಗನ್ನು ಮರುದಿನ ಬೆಳಗ್ಗೆ 11 ಘಂಟೆಗೆ ಮುಂದುವರಿಸಿದರು. ಇದರವಿವರವು ತಪಸೀಲಾಗಿ ಬರುವವಾರ ಪ್ರಕಟವಾಗುವುದು.

ಈ ತಾರೀಖು 23 ರಲ್ಲು ಮಡಿಕೇರಿ ಮಾನ್ಸ್ ಕಾಂಪೌಂಡಿನಲ್ಲಿ ಅಕ್ಸೀಲರೀ ಫೋರ್ಸಿನವರಿಗೂ, ಟೆರಿಟೋರಿಯಲ್ ಫೋರ್ಸಿನವರಿಗೂ, ಒಂದು ಕ್ರಿಕೆಟ್‌ಪಂದ್ಯವು ನಡೆದು ಟೆರಿಟೋರಿಯಲ್ ಭಟಾಲಿಯನ್‌ರವರು ಗೆದ್ದರು.

ಈ ತಾರೀಖು 23 ರಲ್ಲು ಕಾಂಚಲಗೇರಿ ಯೂನಿಯನ್ನಿನವರು ತಮ್ಮ ವಾರ್ಷಿಕ ಮಹೋತ್ಸವವನ್ನು ಮೆ|| ಕೋದಂಡ ಉತ್ತಯ್ಯನವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆಸಿದರು.

ಹಿಂದೂದೇಶ.

ಮೊದಲು "ಬೊಂಬಾಯಿ ಕ್ರಾನಿಕಲ್" ಪತ್ರಿಕೆಯ ಸಂಪಾದಕರಾಗಿದ್ದ ಮೆ|| ಹಾರ್ನಿಮೇನ್‌ರವರನ್ನು ಇಂಡಿಯಾದಿಂದ ಹೊರಡಿಸಲು ಸರಕಾರದವರು ಮಾಡಿದ ಹುಕುಮನ್ನು ರದ್ದುಮಾಡಬೇಕೆಂದು ಬೊಂಬಾಯಿ ಕೌನ್ಸಿಲಿನಲ್ಲಿ ಒಂದು ಠರಾವು ೬ ಓಟುಗಳಿಂದ ಸೋಲಿಸಲ್ಪಟ್ಟಿತು.

ಮಹಾತ್ಮಗಾಂಧಿಯವರೊಡನೆ ಹಿಂದೂದೇಶದ ಈಗಿನ ರಾಜಕೀಯ ಸ್ಥಿತಿಯನ್ನು ಚರ್ಚಿಸುವುದಕ್ಕಾಗಿ ಅಲ್ಲಿ ... ೪ ಕಾಂಗ್ರೆಸ್ ಮುಖಂಡರುಗಳೂ, ಅಸೆಂಬ್ಲಿಯ ಸ್ವರಾಜ್ಯ ಪಂಗಡದ ಮೆಂಬರುಗಳು ಈ ತಿಂಗಳ ಆಖೈರಿನಲ್ಲಿ ಬೊಂಬಾಯಿಗೆ ಹೋಗಲಿಕ್ಕಿರುವರು.

ಹಸರತ್ ಮೋಹಾನಿಯವರು ಜೈಲಿನಿಂದ ಬಿಡುಗಡೆ ಮಾಡಬೇಕೆಂಬ ಠರಾವು ಬೊಂಬಾಯಿ ಲೆಜಿಸ್ಲೆಟಿವ್ ಕೌನ್ಸಿಲಿನಲ್ಲಿ ಬಹುಮತದಿಂದ ಮಂಜೂರಾಯಿತು. ಆದರೆ ಬೊಂಬಾಯಿ ಚೀಫ್ ಜಸ್ಟೀಸ್‌ರವರು ಮೋಹಾನಿಯವರ ಕೇಸನ್ನು ಪುನಃ ವಿಚಾರಿಸಿ, ಎರಡುವರ್ಷ ಕಾಲವನ್ನು ಆರು ತಿಂಗಳಿಗೆ ಇಳಿಸಿರುವರು. ಇದು ಬರುವ ಆಕ್ಟೋಬರಿನಲ್ಲಿ ತೀರುವುದು.

ಮೆ|| ಶ್ರೀನಿವಾಸಶಾಸ್ತ್ರಿಯವರು ಕೌನ್ಸಿಲ್ ಅಫ್ ಸ್ಟೇಟಿನಲ್ಲಿ ಭಾಷಣಮಾಡುವಾಗ್ಗೆ ದಕ್ಷಿಣ ಅಫ್ರಿಕದಲ್ಲಿ ಹಿಂದಿಯರಿಗೆ ಅಲ್ಲಿಯ ಬಿಳೀ ಜನರ ಸರಕಾರದವರು ಮಾಡುತ್ತಿರುವ ಹಿಂಸೆಯನ್ನು ನಿವಾರಿಸಲಾಗದೆ ಹೋದರೆ, ವೈಸರಾಯರ ಸರಕಾರದವರು ರಾಜೀನಾಮೆಕೊಡುವುದು ಉತ್ತಮವೆಂದು ಸೂಚಿಸಿರುವರು.

ಕವೀಂದ್ರ ರವೀಂದ್ರನಾಥಠಾಗೂರರವರ ವಿಶ್ವಭಾರತೀಯ ವಿಶ್ವವಿದ್ಯಾಲಯಕ್ಕೆ ಪ್ರತಿವರ್ಷವೂ ಆರುಸಾವಿರರೂಪಾಯಿ ಕೊಡುವಂತೆ ಗಾಯಕವಾಡ ಮಹಾರಾಜರವರು ಮುಂಜೂರ್ಮಾಡಿರುವರು.

ಮೌಲಾನಾ ಶೌಕತಅಲಿಯವರು ಸಾಧಾರಣ ತರದ ಟೈಫಾಯಿಡ್ ಜ್ವರದಿಂದ ಪೀಡಿತರಾಗಿದ್ದವರು, ಈಗ ತಕ್ಕಮಟ್ಟಿಗೆ ಹುಷಾರಾಗುತ್ತಲಿದ್ದಾರೆ.

ಮೈಸೂರು ಯೂನಿವರ್ಸಿಟಿಯ ಬಿ ಎ ಪರೀಕ್ಷೆಯ ಪ್ರಶ್ನೆಪತ್ರಿಕೆಗಳು ಪರೀಕ್ಷೆಗೆ ಮೊದಲೇ ಹೊರಬಿದ್ದುದರಿಂದ ಬೇರೊಂದು ಪರೀಕ್ಷೆಯನ್ನು ಮಾಡಲಿಕ್ಕಾಗಿ ಈ ಪರೀಕ್ಷೆಯನ್ನು ನಿಲ್ಲಿಸಿರುವರು. ಯಸ್ ಯಸ್ ಎಲ್ ಸಿ ಪರೀಕ್ಷೆಯ ಪತ್ರಿಕೆಗಳೂ ಸಹ ಹೊರಬಿದ್ದ ವರ್ತಮಾನವಿರುವುದರಿಂದ ಆ ಪರೀಕ್ಷೆಯನ್ನು ಸಹ ಪುನಃ ಮಾಡುವರೆಂದು ವರ್ತಮಾನ.

ಬಂಗಾಳ ಲೆಜಿಸ್‌ಲೇಟಿವ್ ಕೌನ್ಸಿಲಿನಲ್ಲಿ ನೇಶನಾಲಿಸ್ಟ್ ಪಂಗಡದವರು ಬಜೆಟ್‌ನ್ನು ಮಂಜೂರ್ಮಾಡುವುದಿಲ್ಲವೆಂಬ ಹೆದರಿಕೆಯಿಂದ ಅಲ್ಲಿಯ ಗವರ್ನರು ಹಾಗೆ ಬಜೆಟನ್ನು ಮಂಜೂರ್ಮಾಡದೆ ಹೋದರೆ ದೇಶದ ಅಭಿವೃದ್ಧಿಗೆ ಅವಶ್ಯವಿರುವ ಯಾವದೊಂದು ಕೆಲಸಕ್ಕೂ ಸರಕಾರದವರು ಹಣಕೊಡಲಿಕ್ಕಿಲ್ಲವೆಂತಲೂ, ಮಂತ್ರಿಗಳೆಲ್ಲರೂ ರಾಜೀನಾಮೆಕೊಡಬೇಕಾಗುವುದೆಂತಲೂ, ಸರಕಾರ ಉದ್ಯೋಗಸ್ತರ ಸಂಬಳಕ್ಕೆ ಹಣ ಸಿಕ್ಕಲಾರದೆಂತಲೂ ಇದರಿಂದ ಸರಕಾರದವರು ಯಾವ ವಿಧದಲ್ಲಿಯೂ ಕಷ್ಟಕ್ಕೆ ಒಳಗಾಗಲಿಕ್ಕಿಲ್ಲವೆಂತಲೂ, ಭಯಸೂಚನೆಯಿಂದೊಡಗೂಡಿದ ಭಾಷಣವನ್ನು ಮಾಡಿದರು. ಅದೇ ವಿಷಯ ಚರ್ಚೆನಡೆಯುತ್ತಿರುವಲ್ಲು ಒಬ್ಬ ಸ್ವರಾಜ್ಯ ಪಾರ್ಟಿಯ ಮೆಂಬರನು ಮಾತಾಡುವಾಗ್ಗೆ ಅಧ್ಯಕ್ಷರು ಮಾತಾಡಕೂಡದೆಂದು ಅಡ್ಡಿಮಾಡಿದ್ದಕ್ಕಾಗಿ, ನೇಶನಾಲಿಸ್ಟ್ ಪಂಗಡದವರೆಲ್ಲರೂ, ಹಾಲಿನಿಂದ ಹೊರಟು ಹೋದರು.

ಇಂಡಿಯಾ ಸರಕಾರದ ಫೈನಾನ್ಸು ಬಿಲ್ಲನ್ನು ಅಸೆಂಬ್ಲಿಯಲ್ಲಿ ನೇಶನಾಲಿಸ್ಟ ಪಂಗಡದವರು ವಿರೋಧಿಸಿ ಬಹುಮತದಿಂದ ಮಂಜೂರ್ಮಾಡಲು ಬಿಡಲಿಲ್ಲ. ಆದರೆ ವೈಸರಾಯರು ಅದನ್ನು ಸರ್ಟಿಫೈ ಮಾಡಿದರು. ಈ ಬಿಲ್ಲಿನಮೇಲೆ ಉಪ್ಪಿನ ಸುಂಕವು ೧೯೨೩ ರಲ್ಲಿದಂತೆ ಮಣ ೧ ಕ್ಕೆ ೧-೪-೦ ರೂಪಾಯಿನಂತೆ ಕಾಯಮ್ ಮಾಡಿರುವರು. ಅಲ್ಲದೆ ಪೆಟ್ರೋಲಿನ ಸುಂಕವನ್ನು ಸಹ ಕಡಿಮೆ ಮಾಡಿರುವರು.

ಮಹಾತ್ಮ ಗಾಂಧಿಯವರು ಈಗ ಬೊಂಬಾಯಿಯ ಜುಹೂ ಎಂಬ ಸಮುದ್ರ ತೀರದಲ್ಲಿರುವರು. ಅವರ ಆರೋಗ್ಯಸ್ಥಿತಿಯು ದಿನೇ ದಿನೇ ಅಭಿವೃದ್ಧಿಹೊಂದುತ್ತಲೇ ಇದೆ. ಈಗ ಕೆಲವು ಮಟ್ಟಿಗೆ ನಡೆಯಲಿಕ್ಕೆ ಶಕ್ತನ್ನವುಳ್ಳವರಾಗಿರುತ್ತಾರೆ.

ಮಹಾತ್ಮಗಾಂಧಿಯವರ ಬುದ್ಧಿವಾದದಂತೆ ಲಾಲಾ ಲಜಪತರಾಯಿಯವರು ತಮ್ಮ ಆರೋಗ್ಯವನ್ನು ಅಭಿವೃದ್ಧಿಪಡಿಸಲಿಕ್ಕಾಗಿ ಯೂರೋಪ್ ದೇಶಕ್ಕೆ ಹೋಗಲು ಏಪ್ರಿಲ್ ೧ ರಲ್ಲಿ ಬೊಂಬಾಯಿಯಿಂದ ಹೊರಡುವರು.

ಈ ತಾರೀಖು ೧೮ ರಲ್ಲಿ ಒಮರ್ಖಾದ ಮಾರ್ಕೆಟ್ಟಿಯಲ್ಲಿ ಬೆಂಕಿಬಿದ್ದು ಎಪ್ಪತ್ತೈದು ಮನೆಗಳು ಸುಟ್ಟುಹೋಗಿರುವುದು. ಸುಮಾರು ಲಕ್ಷಗಟ್ಟಲೆ ರೂಪಾಯಿಗಳು ನಷ್ಟವಾಗಿರುವುದು.

ಜೈತೋಕ್ಕೆ ಇನ್ನೊಂದು ಜಟ್ಟಗಳನ್ನು ಕಳುಹಿಸಲು ಪ್ರಯತ್ನಿಸುತ್ತಿರುವರಂತೆ.

ಕೆಲಸವಿಲ್ಲದೆ ಉಪವಾಸವಿರುವಂತ ಬೊಂಬಾಯಿ ಗಿರಣಿಗಳ ಕೆಲಸಗಾರರಿಗೆ ಜ ಕಾಪನ್ನು ಒದಗಿಸಿಕೊಡಲು ಬೊಂಬಾಯಿ ಪ್ರಾಂತೀಯ ಕಾಂಗ್ರೆಸ್ ಕಮಿಟಿಯವರು ಪಣ್ಯಸಾಮಗ್ರಿಗಳನ್ನು ಹಂಚುತ್ತಿರುವರು.

ಮಧ್ಯಪ್ರಾಂತ್ಯ ಸರ್ಕಾರದ ಮಂತ್ರಿಗಳು ತಮ್ಮ ಹುದ್ದೆಗೆ ರಾಜಿನಾಮೆ ಕೊಟ್ಟಿರುವರು. ಅದನ್ನು ಗವರ್ನರರು ಸ್ವೀಕರಿಸಿ ಒಪ್ಪಿಕೊಂಡಿರುವರು.

ಸಿಕ್ಖರ ಎರಡನೇ ಜಾತವು ತಾ 14ರಲ್ಲಿ ಜೈತೋದಲ್ಲಿ ಸೆರೆಹಿಡಿಯಲ್ಪಟ್ಟಿದೆ. ತಾ 14ರಲ್ಲಿ ಪಂಜಾಬಿನ ಗವರ್ನರನು ಗಾಡ್ ನ್ ಪಾರ್ಟಿ ಯಲ್ಲಿ ತನ್ನೊಳಗಿನ ಸಿಖ್ ಮುಖಂಡರುಗಳು ಯಾರೂ ಹೋಗಿರಲಿಲ್ಲ.

ವಿದೇಶ

ಕೆನ್ಯಾದಲ್ಲಿ ಕಪ್ಪುಜನರು ಬಡತನದ ದೆಸೆಯಿಂದ ಮನೆತೆರಿಗೆ ಮತ್ತು ಪೋಲ್‌ಟ್ಯಾಕ್ಸನ್ನು ಕೊಡದೆ ಬಾಕಿ ಮಾಡಿದಕ್ಕೆ ಅಲ್ಲಿಯ ಬಿಳೀ ಸರ್ಕಾರದವರು ಅವರ ಹೆಂಗಸರನ್ನು ಹೊಡೆದುಬಡೆದು ತೊಂದರೆ ಕೊಡುವುದಲ್ಲದೆ, ನಾಯಿಗಳನ್ನು ಬಿಟ್ಟು ಗಂಡಸರನ್ನು ಹೆಂಗಸರನ್ನು ಕಚ್ಚಿಸುತ್ತಾರೆಂತಲೂ, ಅವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡದೆ ಅಡ್ಡಿಮಾಡುತ್ತಿರುವರೆಂತಲೂ, ಅನೇಕ ಗಂಡಸು ಮತ್ತು ಹೆಂಗಸರು ಕುತ್ತಿಗೆಗಳಿಗೆ ಒಂದೇ ಹಗ್ಗವನ್ನು ಹಾಕಿ ಕೋರ್ಟಿಗೆ ಎಳೆದುಕೊಂಡು ಹೋಗುತ್ತಿರುವರೆಂತಲೂ ಮೊಂಬಾಸದ ಒಂದು ಪತ್ರಿಕೆಯಲ್ಲಿ ಸೂಚಿಸಲ್ಪಟ್ಟಿದೆ.

ಐರ್ಲೆಂಡಿನ ಫ್ರೀ ಸ್ಟೇಟ್ ಸರ್ಕಾರದ ಸೈನ್ಯದಲ್ಲಿ ಸ್ವಲ್ಪದಂಗೆ ಉಂಟಾದುದರಿಂದ ಕೆಲವು ವಿಳಿಟರಿ ಆಫೀಸರುಗಳನ್ನು ಸೆರೆಹಿಡಿದಿರುವರು ಮತ್ತು ಕೆಲವರನ್ನು ರಾಜಿನಾಮೆಕೊಡುವಂತೆ ಹೇಳಿರುವರು.

ಪರ್ಷಿಯಾ ದೇಶದ ಮೆಜ್ಲಿಸ್ ಎಂಬ ಪಾರ್ಲಿಮೆಂಟಿನಲ್ಲಿ ಈಗಿನ ಸರ್ಕಾರದ ಬದಲಾವಣೆಯ ಮತ್ತು ಕಾನೂನುಗಳ ತಿದ್ದುಪಡಿಯ ವಿಷಯ ಚರ್ಚೆನಡೆಯುತ್ತಿದೆ. ದೇಶದಲ್ಲಿ ರಿಪಬ್ಲಿಕ್ ಸರ್ಕಾರವಾಗಬೇಕೆಂಬ ಚಳವಳವು ಪ್ರಬಲವಾಗುತ್ತಿದೆ. ಇದಕ್ಕೆ ವಿರೋಧಪಕ್ಷದವರೂ ಗಲಾಟೆ ಎಬ್ಬಿಸುತ್ತಿದ್ದಾರೆ.

ಅಫಘಾನಿಸ್ಥಾನಕ್ಕೆ ಕಳುಹಿಸಲು ಬಂದಿದ್ದ ಕೋವಿಮದ್ದು ಮತ್ತು ಫಿರಂಗಿಗಳನ್ನು ಬೊಂಬಾಯಿಯಲ್ಲಿ ತಡೆದು ಹಾಕಿದ್ದನ್ನು ಬ್ರಿಟಿಷ್ ಸರಕಾರದವರು ಈಗ ಬಿಟ್ಟು ಕೊಟ್ಟಿರುವರು.

ರಷ್ಯಾದೇಶಕ್ಕೂ ಬ್ರಿಟನ್ನಿಗೂ ಇರುವ ರಾಜಕೀಯ ಮತ್ತು ಆರ್ಥಿಕವ್ಯತ್ಯಾಸಗಳನ್ನು ತೀರ್ಮಾನಿಸಿಕೊಳ್ಳಲಿಕ್ಕಾಗಿ, ಎರಡು ದೇಶಗಳ ಪ್ರತಿನಿಧಿಗಳ ಕಾನ್ಫರೆನ್ಸುಗಳು ಬರುವ ಏಪ್ರಿಲ್ ೧ ನೇ ವಾರದಲ್ಲಿ ನಡೆಯಲಿಕ್ಕಿರುವುದು.

ಈಜಿಪ್ಟ್ ದೇಶದ ಯುಲೇಮಾ ಸಂಘದ ಅಧ್ಯಕ್ಷರು, ತುರ್ಕಿಯ ಸರಕಾರವು ಖಲೀಫನನ್ನು ದೇಶದಿಂದ ಹೊರಡಿಸಿದ್ದು ತಪ್ಪೆಂತಲೂ, ಇಸ್ಲಾಮಿಕ್ ಕಾನ್ಫರೆನ್ಸ್ ಕೂಡಬೇಕೆಂಬ, ಇಂಡಿಯಾ ಮಹಮ್ಮದೀಯರ ಅಭಿಪ್ರಾಯವು ಉತ್ತಮವಾದದ್ದೆಂದು ಸೂಚಿಸಿರುವರು.

ಗ್ರೀಸ್ ದೇಶದಲ್ಲಿ ರಿಪಬ್ಲಿಕನ್ ಪಾರ್ಟಿಯು ಮಂತ್ರಿಗಳ ರಾಯಲಿಸ್ಟ ಪಂಗಡದ ಮುಂದಾಳುಗಳೂ ಒಂದು ಸಮಾಧಾನದ ಕರಾರು ನಡೆದಿದೆಯಂತೆ.

ಒಂದು ಅಮೇರಿಕದ ಪತ್ರಿಕೆಯಲ್ಲಿ ಹೀಗೆಂದಿದೆ:- ಕೆಲವು ವಾರಗಳಹಿಂದೆ ಸರ್ವಿಯ ದೇಶದ ಬೆಲ್‌ಗ್ರೇಡ್ ಪಟ್ಟದಲ್ಲಿ ೨೨ ವಯಸ್ಸಿನ 'ಜವ್ರೊಟ' ಎಂಬ ಯುವಕನು ಹೊಟ್ಟೆನೋವಿನಿಂದ ಪೀಡಿತನಾದುದರಿಂದ ಆಸ್ಪತ್ರೆಯಲ್ಲಿ ಡಾಕ್ಟರವರು ಅವನನ್ನು ಆಪರೇಶನ್ ಮಾಡುವಾಗ್ಗೆ ಅವನ ಹೊಟ್ಟೆಯೊಳಗೆ ಎರಡು ಮಕ್ಕಳ ಆಕಾರಗಳು ಕಂಡುಬಂದವು. ಒಂದು ೧೦ ಇಂಚು ಉದ್ದವಾಗಿ, ಒಂದುತಲೆ, ಎರಡು ಹಲ್ಲುಗಳುಳ್ಳಬಾಯಿ, ಕುತ್ತಿಗೆ, ಹೊಟ್ಟೆ ಮತ್ತು ಉದ್ದವಾದ ಉಗುರುಗಳಿದ್ದ ಬೆರಳುಗಳ ಎರಗ್ಗೈ ಉಳ್ಳದ್ದಾಗಿತ್ತು. ಇನ್ನೊಂದು ೫ ಇಂಚು ಉದ್ದವಾಗಿ ವಿಕಾರವಾಗಿದ್ದರೂ ಮೂಳೆಯುಳ್ಳ ಗಟ್ಟಿಯಾದ ಎರಡು ಕಾಲುಗಳಿಂದ ಕೂಡಿತ್ತು. ಆ ಯುವಕನು ಆಪರೇಶನಿನ ನಂತರ ಕ್ಷೇಮದಲ್ಲಿರುವನು. ಇವನು ಹುಟ್ಟುವಾಗ್ಗೆ ಇವನ ತಾಯಿಯು ಹೊಟ್ಟೆಯಲ್ಲಿದ್ದ ಮೂರು ಶಿಶುಗಳಲ್ಲಿ ಎರಡು ಇವನ ಹೊಟ್ಟೆಯೊಳಗೆ ಸೇರಿಕೊಂಡು ಅಲ್ಲಿ ೨೨ ವರ್ಷಗಳವರೆಗೆ ಬೆಳೆಯುತ್ತಿತ್ತೆಂದು ಡಾಕ್ಟರುಗಳ ಅಭಿಪ್ರಾಯವು.

ಪ್ರದರ್ಶನದ ಇನಾಮು ಪಟ್ಟಿ.

ಸನ್ 1924ನೇ ಇಸವಿ ಮಾರ್ಚ್ ತಾರೀಖು 3ನೇ ಗುರುವಾರದ ದಿನ ಮಡಿಕೇರಿಯಲ್ಲಿ ಆದ ಹೂವು, ತರಕಾರಿ, ಕೋಳಿ ಮತ್ತು ನಾಯಿ ಇವುಗಳ ಪ್ರದರ್ಶನದಲ್ಲಿ ಇನಾಮುಗಳನ್ನು ಹೊಂದಿದವರ ಹೆಸರು

ಪರ್ನ್ಸ್ ಚಟ್ಟಿಗಳಲ್ಲಿ—ಶ್ರೀಮತಿ ಕೊಡಂದೆರ ಶೀತಮ್ಮನವರು 1ನೇ ಇನಾಮು

ಬೋವರ ಹೂತೋಟದವರು 2ನೇ ಇನಾಂ

ಫೋಲಿಯೇಜ್ ಗಿಡಗಳು—ಶ್ರೀಮತಿ ಕೊಡಂದೆರ ಶೀತಮ್ಮನವರು 1ನೇ ಇನಾಂ

ಕಾವೆರಿಸರ್ಜ ಹೂವುತೋಟ 2 ನೇ ಇನಾಮು

ಪ್ರೊ|| ಕೊಡಂದೆರ ದೇವಯ್ಯನವರು 3 ನೇ ಇನಾಮು

ಚಟ್ಟಿಗಳಲ್ಲಿ ಗುಲಾಬಿಹೂವು ಗಿಡಗಳು—ಬೋವರ್ ಹೂತೋಟದವರು ಸ್ಪೆಶಿಯಲ್ ಇನಾಮುಗಳು

ಜೆರೆನಿಯಮ್ ಹೂವುಗಿಡಗಳು—ಮಿಸೆಸ್ ಕೆ ಜಿ ಬೆಳ್ಳಪ್ಪನವರು 1 ನೇ ಇನಾಮು

ಶ್ರೀಮತಿ ಡಿ ನಾಕಮ್ಮನವರು 2 ನೇ ಇನಾಮು

ಚಟ್ಟಿಗಳಲ್ಲಿ ಸ್ವೀಟ್ಸ್—ಬೋವರ್ ಹೂವಿನ ತೋಟದವರು 1 ನೇ ಇನಾಮು

ಶ್ರೀಮತಿ ಕೊಡಂದೆರ ಶೀತಮ್ಮನವರು 2 ನೇ ಇನಾಮು

ಚಟ್ಟಿಗಳಲ್ಲಿ ಕಾಯಂ ಇರಕಕ್ಕ ಹೂವಿನಗಿಡಗಳು—ಶ್ರೀಮತಿ ಕೊಡಂದೆರ ಶೀತಮ್ಮನವರು 1ನೇ ಇನಾಮು

ಶ್ರೀಮತಿ ಡಿ ನಾಕಮ್ಮನವರು 2 ನೇ ಇನಾಮು

ಅನ್ಯುಯಲ್

ಪಡುವಾಪದಿ ಬಗುವಂತ ಚಟ್ಟಿಗಳಲ್ಲಿ ಹೂವುಗಿಡಗಳು—

ಕೊಡಂದೆರ ದೇವಯ್ಯನವರು 1 ನೇ ಇನಾಮು

ಬೋವರ್ ಹೂವಿನ ತೋಟದವರು 2 ನೇ ಇನಾಮು

ಕಾವೇರಿನರ್ಸರಿ ಹೂವು ತೋಟದವರು 3ನೇ ಇನಾಮು

(ಕತ್ತರಿಸಿದ ಹೂವಿನ ಚೆಂಡುಗಳು) ಗುಲಾಬಿ—ಕಾವೇರಿನರ್ಸರಿ ಹೂತೋಟದವರು 2ನೇ ಇನಾಮು

ದೇಶೀಯ ಪರಿಮಳದ ಹೂವು—ಯಮ್. ರಾಮಸಿಂಗ್‌ನವರು 1ನೇ ಇನಾಮು

ವಿವಿಧ ಇಂಗ್ಲೀಷು ಹೂವುಗಳು—ಕೊಡಂದೆರ ಶ್ರೀಮತಿ ಶೀತಮ್ಮನವರು 1 ನೇ ಇನಾಮು

ಹೂವುಗಳ ಡೆಕೋರೇಶನ್—ದಿಟೋ

ಪಪ್ಪಾಯಹಣ್ಣು—ಬ್ರಾಂ. ಕೆ. ನಾರಾಯಣರಾಯರು 1ನೇ ಇನಾಮು

ಅನಾನಸು—ತಿ. ಯಸ್. ಬಸಪ್ಪನವರು 1ನೇ ಇನಾಮು

ಉತ್ತಮತರಹದ ಬಾಳೆಗೊನೆ—ಗ. ಮುಕ್ಕಾಟಿ ಕರುಂಬೈಯ್ಯನವರು 1ನೇ ಇನಾಮು

ವಿವಿಧತರಹದ ಬಾಳೆಗೊನೆ—ಗವುಡಗಳ ಟಿ. ಅಯ್ಯಣ್ಣನವರು 1ನೇ ಇನಾಮು

ಸಿ. ಜೆ. ಹನ್ಸ್‌ರು 2 ನೇ ಇನಾಮು

ಚಕ್ಕೋತಹಣ್ಣು—ಮು. ಪೀರಸಾಬರು 1ನೇ ಇನಾಮು

ವಿವಿಧತರಹದ ಹಣ್ಣುಗಳು—ಕೆ. ಯಂ ಐಯಣ್ಣನವರು 1ನೇ ಇನಾಮು

ಅಲ್ಲಾರಂಡ ಯಸ್. ಪಂಗಪ್ಪನವರು 2ನೇ ಇನಾಮು

ಕೆಸವಿನಗೆಂಡೆ—ಪಾಂಡಂಡ ತಿಮ್ಮಯ್ಯನವರು 1ನೇ ಇನಾಂ

ಬೊಟ್ಟಿಗೋಸ್—ಎ. ವಿ. ಸ್ಕೂಲ್ ವಿದ್ಯಾರ್ಥಿಗಳು 1ನೇ ಇನಾಮು

ಸಿ. ಜೆ. ಹನ್ಸ್‌ರು 2ನೇ ಇನಾಮು

ಹೈಸ್ಕೂಲು ಬೋರ್ಡಿಂಗಿನವರು 3 ನೇ ಇನಾಮು

ನೋಲ್ ಕೋಲ್—ಹೈಸ್ಕೂಲು ಬೋರ್ಡಿನವರು 1 ನೇ ಇನಾಮು

ಎ. ನಾರಾಯಣರಾಯರು 2ನೇ ಇನಾಮು

ಕೈಬ್ಲಿರ ಮೇದಪ್ಪನವರು 3ನೇ ಇನಾಮು

ಕಾಲಿಪ್ಲವರ್—ಯಂ. ಸೋಮಯ್ಯನವರು 1ನೇ ಇನಾಂ

ಎ. ನಾರಾಯಣರಾಯರು 2ನೇ ಇನಾಮು

ಟೊಮ್ಯಾಟೊ—ಸಿ. ಜೆ. ಹನ್ಸ್‌ರು 1ನೇ ಇನಾಮು

ದೊಡ್ಡಮೆಣಸಿನಕಾಯಿ—ಮುಕ್ಕಾಟಿರ ಉತ್ತಯ್ಯನವರು 1 ನೇ ಇನಾಮು

ಅಜ್ಜಿಟ್ಟಿರ ಗಣಪತಿಯವರು 2ನೇ ಇನಾಮು

ಯಸ್. ಶೀಕರಾಮಯ್ಯನವರು ಸ್ಪೆಶಿಯಲ್ 1ನೇ ಇನಾಮು

ವಿವಿಧ ಇಂಗ್ಲಿಷ್ ತರಕಾರಿ—ಸಿ. ಜೆ ಹನ್ಸ್‌ರು ೨ ನೇ ಇನಾಮು

ಬನ್ನೆಕಾಯಿ—ಯಸ್ ಶೀಕರಾಮಯ್ಯನವರು 1 ನೇ ಇನಾಮು

ಜಂಗಮಯ್ಯನವರು 2ನೇ ಇನಾಮು

ಬೂದಿಕುಂಬಳಕಾಯಿ—ಕೋಡಿಮಣಿಯಂಡ ಕುಟ್ಟಪ್ಪನವರು 1ನೇ ಇನಾಮು

ಸಿಹಿ. ಕುಂಬಳಕಾಯಿ—ಮುಕ್ಕಾಟಿರ ಉತ್ತಯ್ಯನವರು 1ನೇ ಇನಾಮು

ಯಸ್. ಶೀಕರಾಮಯ್ಯನವರು 1 ನೇ ಸ್ಪೆಶಿಯಲ್ ಇನಾಮು

ಕೋಳಿ (ಇಂಗ್ಲೀಷ್)—ಮಾಳೇಟಿರ ಉತ್ತಯ್ಯನವರು 1ನೇ ಇನಾಮು

ಪಟ್ಟಡ ಉತ್ತಯ್ಯನವರು 2ನೇ ಇನಾಮು

ಮನೆಯಪಂಡ ಬೆಳ್ಳಪ್ಪನವರು 3ನೇ ಇನಾಂ

ಪಿದ್ದಂಡಮುತ್ತಣ್ಣನವರು ಸ್ಪೆಶಿಯಲ್ ಇನಾಂ

ಕೋಳಿ (ದೇಶಿ)—ಮೇಕೇರಿ ರಹಿಂಸಾಬು, 1ನೇ ಇನಾಂ

ಕೊಡಂದೇರ ದೇವಯ್ಯನವರು 2ನೇ ಇನಾಂ

ಕೋಳಿಮೊಟ್ಟೆಗಳು—ಮನೆಯಪಂಡ ಬೆಳ್ಳಪ್ಪನವರು 1 ನೇ ಇನಾಮು

ಹೂವಿನತೋಟ—ಕೊಡಂದೇರ ಶ್ರೀಮತಿ ಶೀತಮ್ಮನವರು 1ನೇ ಇನಾಂ, ಮತ್ತು ಸ್ಪೆಶಲ್ ಇನಾಂ

ಶಿವಾಚಾರದ ಯ. ನ್. ಬಸಪ್ಪನವರು 2 ನೇ ಇನಾಮು

ಮಡಿಕೇರಿ ಪೋಸ್ಟಾಫೀಸಿನವರು 3ನೇ ಇನಾಮು

ನಾಯಿ (ಉತ್ತಮಜಾತಿ)—ಅಪ್ಪಾರಂಡ ಅಪ್ಪಚ್ಚನವರು 1ನೇ ಇನಾಮು

ಶ್ರೀಮತಿ ಡಿ. ನಾಕಮ್ಮನವರು 2 ನೇ ಇನಾಂ

ಕೋದಂಡ ರಾವುಸಾಹೇಬ್ ಐಯಣ್ಣನವರು 3ನೇ ಇನಾಮು

ಕೊಡಂದೇರ ದೇವಯ್ಯನವರು ಸ್ಪೆಶಿಯಲ್ ಇನಾಮು

ಹೆಬ್ಬಾತು ಕೋಳಿಗಳು—ಮಿಸಸ್ ಟಾಸ್ಕರ್‌ಬೀಬಿಯವರು 1ನೇ ಇನಾಮು

ಯಂ. ಜೆ. ಕೋನೊರು 2ನೇ ಇನಾಮು

ನಿರ್ಗವಾಕುಕೋಳಿ—ಕೋದಂಡ ಟಿ. ಸೋಮಯ್ಯನವರು 1ನೇ ಇನಾಮು

ಸಿ ಯು. ಸಂಜಪ್ಪನವರು 2ನೇ ಇನಾಮು

ಮೊಲಗಳು—ಮಿಸಸ್ ಟಾಸ್ಕರ್‌ಬೀಬಿಯವರು 1ನೇ ಇನಾಂ

ಸಿ. ಜೆ ಹನ್ಸ್‌ರು 2ನೇ ಇನಾಮು

ಪಾರಿವಾಳಹಕ್ಕಿ—ಮಾಳೇಟಿ ಉತ್ತಯ್ಯನವರು 1ನೇ ಇನಾಮು

ಯು. ಗೋಪಾಲ್‌ಸಿಂಗ್‌ರು 2ನೇ ಇನಾಮು

ನವಿಲು—ಪೆಕ್ಕಾಳೀರ ಕಂದಸಾಮಿಯವರು ಸ್ಪೆಶಲ್ ಇನಾಂ

ಗಿನಿಫಾಲ್—ಮಿಸೆಸ್ ಟಾಸ್ಕರ್‌ಬೀಬಿಯವರು ಸ್ಪೆಶಲ್ ಇನಾಮು

(Sd) ಕೆ. ಕುಟ್ಟಯ್ಯ,
(ಅಧ್ಯಕ್ಷರು.)

ಅಯ್ಯಾ ಎಡಿಟರವರೆ.

* ಕೆಳಗಿನ ಬಾತ್ಮಿಯನ್ನು ದಯವಿಟ್ಟು ಕೊಡಗು ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಕೇಳಿಕೊಳ್ಳುತ್ತೇನೆ

ತಾ|| 20_3_24 ರಲ್ಲು ಸ್ವಾಗತಮಂಡಳಿಯ ಅಧ್ಯಕ್ಷರು ಮೆ|| ಚೆಪ್ಪುಡೀರ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಕಮಿಟಿ ಮೀಟಿಂಗಿನ ಪ್ರೋಸಿಡಿಂಗ್ಸ್ ಏನಂದರೆ–

1 ತಾ|| 7–3–24 ರಲ್ಲಿ ನಡೆದ ಮೀಟಿಂಗಿನ ಪ್ರೋಸಿಡಿಂಗ್ಸ್‌ಗಳನ್ನು ಓದಲಾಯಿತು ಕೆಲವು ಸಂಗತಿಗಳನ್ನು ಪುನಹ ಚರ್ಚಿಸಿ ಅನುಮೋದಿಸಲಾಯಿತು

2. ತಾ|| 7.3-24 ರಲ್ಲು ಚುನಾಯಿಸಿದ ಮೆಂಬರುಗಳಜೊತೆಗೆ ಈ ಕೆಳಗೆ ತೋರಿಸಿದ ಮೆಂಬರುಗಳನ್ನು ನಾಡು ಊರು ಕಮಿಟಿಗೆ ಚುನಾಯಿಸಿದೆ.

ನೋಕ್ಯಗ್ರಾಮಕ್ಕೆ—ಮೆ|| ಶಿವಾಚಾರದ ಕೊಟ್ರೂರಯ್ಯನವರು

ಮೆ|| ವಕ್ಕಲಿಗರ ಕಾಳೈಯ್ಯನವರು.

ತಿತಿಮತಿ—ಮೆ|| ಜಂಗಾಡಕಾಳಪ್ಪನವರು.

ಗೋಣಿಕೊಪ್ಪಲು—ಮೆ|| ಜಮ್ಮಾಡಮಾದಪ್ಪನವರು.

ಮೆ|| ಮು—ಕರಿಂಸಾಬಿಯವರು

ಹುದಿಕೇರಿ—ಮೆ|| ಮು. ಶೇಕ್‌ಮುಹಮ್ಮದ್‌ಸಾಬಿಯವರು.

ಬಾಳಲೆ—ಮೆ|| ಕುಂಬಾರಕಾಳಪ್ಪನವರು.

ಮೆ|| ಚೇಮಿರಕುಟ್ಟಪ್ಪನವರು.

ಕೊಟ್ಟಗೇರಿ—ಮೆ|| ಮಾಚಂಗಳ ಚಂಗಪ್ಪನವರು.

ಕುಂದ—ಮೆ|| ಕಡೆಮಾಡ ಬೆಳ್ಯಪ್ಪನವರು.

ಸಾರ್ಥೇರಿ—ಮೆ|| ಶಿವಾಚಾರದ ಸಿದ್ದಪ್ಪನವರು.

ಬೇಣವಾಡ—ಮೆ|| ಅಲಿದಲಿಕ್ಕ ಮೊದರು.

ಪೊರಾಡು—ಮೆ|| ಮಲ್ಲೆಂಗಳ ಅಜ್ಜಯ್ಯನವರು.

ಬಾಳೆಲೆ—ಮೆ|| ಮಾಪಿಳ್ಳೆ ಬೀ ರಂಗುಟ್ಟಿಯ್ಯನವರು.

ಕೋತೂರು—ಮೆ|| ವಕ್ಕಲಿಗರ ಲಿಂಗಪ್ಪನವರು.

,, ಮೆ|| ಮುಕ್ಕಟಮನೆ ಸುಬ್ಬಮ್ಮನವರು.

ರುದ್ರಬೀಡು—ಮೆ|| ಶಿವಾಚಾರದ ಈರಪ್ಪನವರು.

, ಮೆ|| ವಕ್ಕಲಿಗರ ಪುಟ್ಟೈಯ್ಯನವರು.

ಕಿರಗೂರು—ಮೆ|| ಪೊಕ್ಕಳಚಂಡಮುದುವಡೆಯವರು.

ಮತ್ತೂರು—ಮೆ|| ಪುತ್ತಾಮನೆ ಮುತ್ತಣ್ಣಮ್ಮನವರು.

ಪೊನ್ನಂಪೇಟೆ—ಮೆ|| ಕಿರಿಯರ ಲಕ್ಕನಾಯಕನವರು.

ಧನುಗಾಲ—ಮೆ|| ಶಿವಾಚಾರದ ಪುಟ್ಟಯ್ಯನವರು.

ಮಾಯಮುಡಿ – ಮೆ|| ಶಿವಾಚಾರದಗಂಗಧರೈಯ್ಯನವರು

ಹಳ್ಳಿಗಟ್ಟು—ಮೆ||ಮಚ್ಚಿಯಂಡ ಗಣಪತ್ತಿಯನವರು.

ಮೆ| ಮೂಕಳೆರಬಪ್ಪಣ್ಣನವರು.

ಹಾತೂರು—ಚೇಂದಂಡಗಣಪತ್ತಿಯವರು.

ಕುರ್ಚಿ—ಮೆ|| ಅಜ್ಜಮಾಡಬೆಳ್ಯಪ್ಪನವರು

ನೆಮ್ಮೆಲೆ—ಮೆ|| ಶಿವಾಚಾರದ ನಂಜಪ್ಪನವರು.

3 ಈ ಕೆಳಗೆ ತೋರಿಸಿದ ಮಹನೀಯರನ್ನು ಸ್ವಾಗತ ಮಂಡಳಿಯ ಸೆಕ್ರಟರಿ ಮತ್ತು ಕಮಿಟಿ ಮೆಂಬರುಗಳಾಗಿ ನೇಮಿಸಲಾಯಿತು.

ಸೆಕ್ರಟರಿ—ಮೆ|| ಚೋನಿರಕರುಂಬೈಯ್ಯನವರು.

ಕಮಿಟಿ ಮೆಂಬರುಗಳು.

ಮೆ|| ಚೆಪ್ಪುಡೀರಚಂಗಪ್ಪನವರು. (ತೆರಾಲು)

ಮೆ|| ಬೇಯಂಡ ಅಂಗೈಯ್ಯನವರು. ಬಲ ಮಂಡೂರು

ಮೆ|| ಯಿಟ್ಟೀರ ಪೊನ್ನಪ್ಪನವರು.

ಮೆ|| ಕೊಡಂದೇರ ಮೇದಪ್ಪನವರು.

ಮೆ| ಅಜ್ಜಮಾಡಕಾರ್‍ಯಪ್ಪನವರು.

ಮೆ|| ಪಾರುವಂಗಡ ಕುಶಾಲಪ್ಪನವರು

ಮೆ|| ಚೆಪ್ಪುಡೀರ ಪೂವಯ್ಯನವರು.

ಮೆ|| ಪುತ್ತಮನೆಗಣಪಮಯ್ಯನವರು.

ಮೆ|| ಮನೆಯಪಂಡ ಬಿಂಣಪ್ಪನವರು

ಮೆ|| ಜಮ್ಮಾಡ ಮಾದಪ್ಪನವರು.

ಮೆ|| ಅಚಿಯಂಡ ಸುಬ್ಬಮ್ಮನವರು.

4 ಸಂನ್ 1920 ನೆ ಯಿಸವಿಯಲ್ಲಿ ಸ್ವಾಗತ ಮಂಡಳಿಯ ಖರ್ಚು ಕಳೆದು ಮೆ|| ಮನೆಯಪಂಡ ನಾಣಪ್ಪನವರ ಹತ್ತರ ಬಾಕಿಯಾದ 400-0-0 ರೂ. ಚಿಲ್ಲರೆ ರೂಪಾಯಿಗಳನ್ನು ಈ ದಿವಸ ನಡೆದ ಸಭೆಯಮುಂದೆ ಹಾಜ್ರುಪಡಿಸುವದಾಗಿ ತಾ|| 7-3-24 ರಲ್ಲು ಸದ್ರಿಯವರು ಆದಿತವದ ಟರಾವು ಮೇರೆ ಒಪ್ಪಿಕೊಂಡು ಹೋಗಿ ಈ ದಿವಸ ಸದ್ರಿ ಮೊಬಲಗನ್ನು ಹಾಜ್ರುಪಡಿಸದೆಯೂ, ಸಭೆಗೆ ತೃಪ್ತಿಕರವಾದ ಜವಾಬು ಕೊಡದೆಯೂ, ಬಹುಮತಕ್ಕೆ ವಿರೋಧವಾಗಿ ಹೊರಟು ಹೋದರು.

C. C. Karumbayya,
Committee Members,
Reception Committee.

ಹಳೆ ವಿದ್ಯಾರ್ಥಿಗಳ ಮೇಗಜಿನ್.

ಇದರ ವಿಷಯವಾಗಿ ಕೊಡಗುಪತ್ರಿಕೆಯಲ್ಲಿ ಕೆಲವು ಬಾತ್ಮಿಗಳು ಪ್ರಕಟವಾಗಿವೆ. ಇವಕ್ಕೆಲ್ಲಾ ಉತ್ತರ ಕೊಡದೆ ನಮ್ಮ ಕೆಲಸವನ್ನು ನಮ್ಮ ಮನಸ್ತೃಪ್ತಿ ಮೇರೆ ನಡೆಸಿಕೊಂಡು ಹೋಗಬೇಕೆಂದಿದ್ದೆವು ಆದರೆ ಕಳೆದ ಸಂಚಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವ ಪತ್ರವನ್ನು ಓದುವಾಗ ಬಹಳ ವಿಷಾದವಾಗುತ್ತದೆ ನಾವು ಮೌನತೆಯನ್ನು ತಾಳಿದರೆ ಅವರು ಜಯಶೀಲರೆಂದು ಭಾವಿಸುತ್ತಾರೆ ... ವೈಗಳೆಂಬುದು ನಮ್ಮ ಮುಖ್ಯೋದ್ದೇಶವಲ್ಲ ಆದರೇನು ಮಾಡುವದು ಕೆಲವು ಸಮಯಗಳಲ್ಲಿ ದುಷ್ಟರಸ್ಪರ್ಶಗಿಸಲು ದುಷ್ಟತನವನ್ನು ಕೈಗೊಳ್ಳಬೇಕಾಗುವದು ಈ ಬಾತ್ಮಿದಾರರು ರಾಜನೀತಿಯನ್ನು ಚರ್ಚಿಸಿದ ಪತ್ರವು ನಿಸ್ಸಾರವಾದುದೆಂದು ಭಾವಿಸುತ್ತಾರೆ ಹೀಗೆ ಬರೆಯಲು ಇವರು ಎಷ್ಟು ಓದಿದ್ದಾರೋ ತಿಳಿಯದು ಸ್ಕೂಲು ಮತ್ತು ಕಾಲೇಜು ಮೇಗಜಿನ್‌ಗಳಲ್ಲಿ ಪೋಲಿಟಿಕ್ಸ್ (Politics) ಎಂದು ಚರ್ಚಿಸುವುದಿಲ್ಲವೆಂಬುದು ಈ ಮಹಾತ್ಮರಿಗೆ ವೇದ್ಯವಾಗಿದೆಯೋ ಇದೇ ಅಲ್ಲದೆ ಇನ್ನೂ ಅನೇಕ ಪತ್ರಿಕೆಗಳು ವಿದ್ಯೆ ಮತ್ತು ಮತಸಮ್ಬಂಧವಾಗಿರುವವು. ರಾಜನೀತಿಯನ್ನೆಂದಿಗೂ ಚರ್ಚಿಸುವುದಿಲ್ಲವೆಂಬುದನ್ನು ಇವರಿಗೆ ತಿಳಿಸಬೇಕಾಗಿ ಬಂದಿತು

ನಮ್ಮ ಪತ್ರಿಕೆಯು ಸ್ವಾರ್ಥತೆಯುಳ್ಳ ಹೋಗಳುವಿಕೆಯಿಂದಲೂ ಕೂಡಿದೆಯಂತೆ ಸಂಪಾದಕರು ಸ್ವಾರ್ಥಪರರೆಂಬುದು ಹ್ಯಾಗೆಂದು ನಮಗೆ ತಿಳಿಯುವುದಿಲ್ಲ ಬಹುಶ ಇದೇ ಲೇಖಕರು ಬರೆದ ಕೆಲವು ನಿಸ್ಸಾರವಾದ ಬರವಣಿಗೆಗಳನ್ನು ಪ್ರಕಟಿಸಲು ತಿರಸ್ಕರಿಸಿರಬಹುದು ನಾವು ಸ್ವಾರ್ಥಪರರೆಂದು ... ಇಲ್ಲ ಅರ್ಥವಿಲ್ಲದ ... ನಾವು ಎಂದಿಗೂ ಸ್ವೀಕರಿಸುವದಿಲ್ಲ ... ಸಂಚಿಕೆ ... ಗಾಗ್ಗೆ ತನ್ನ ... ಗಳ ಇದೆಯಂತೆ ... ಮುಸಂಚಿಕೆಯಲ್ಲಾದ ... ನಿಜವಲ್ಲದ ಅಭಿಪ್ರಾಯಗಳಿದ್ದರೆ ... ನಮ್ಮನ್ನು ಪ್ರಶ್ನಿಸುತಿದ್ದಲ್ಲಿ ನಾವು ಅದಕ್ಕೆ ಜವಾಬ್ದಾರರಾಗಿದ್ದೇವೆ ... ಇನ್ನು ... ಹೀಗೆ ಇಲ್ಲದ ಸಂಗತಿಯನ್ನು ಉಂಟುಮಾಡಿ ಹೆಸರು ಹಾಳುಮಾಡುವುದು ಬಾತ್ಮಿದಾರರು ಪ್ರಕಟಿಸಿದ ಸಂಪಾದಕರಿಗೂ ತಕ್ಕುದಲ್ಲ ... ಧನಸಹಾಯ ಮಾಡಿದಕ್ಕೆ ... ಸೂಚಿಸಿದ್ದು ... ಚಂಗಪ್ಪನವರನ್ನು ... ಆರಿಲಿಯಸ್ ಎಂಬ ಚಕ್ರವರ್ತಿಗೆ ಸರಿಹೋಲಿಸಿದ್ದು ... ಆದರೆ ಅವರ ಜನಪ್ರೀತಿಯನ್ನು (Popularity) ಕುರಿತು ಆಗಿದೆ ಅವರು ಜನಪ್ರೀತಿಗೆಪಾತ್ರರಾಗಿಲ್ಲದಿದ್ದರೆ ಅವರನ್ನು ... ! ನಿಮ್ಮನ್ನು ... ಇದರಲ್ಲಿ ಅಸೂಯೆ ಆಯಿತೇ ? ... ಬರೆದದ್ದು ಹಾಸ್ಯಾಸ್ಪದವೇ ... ಬರೆದದ್ದು ಹಾಸ್ಯಾಸ್ಪದವೇ ? ಆದೇ ... ಧನಸಹಾಯವನ್ನು ಮಾಡಿದವರನ್ನು ಪ್ರತ್ಯೇಕ ಎತ್ತಿ ... ಯಾರದು ಬೇರೆಕಡೆ ಇಲ್ಲಿಯೂ ... ಮಾಡಿರುವದು ನಿಮಗೆ ಇನ್ನೂ ತಿಳಿದಿಲ್ಲವೇ ? ಅಂತೂ ಈ ಕೊಡಗು ದೇಶದಲ್ಲಿ ... ಮೇಳೆಯಲ್ಲಿ ಹಾಗೆ ಮಾಡಿದ್ದು ... ಒಪ್ಪೇ ? ... ನಮ್ಮಲ್ಲಿರುವ (ಅವರ ಮಾತ್ರ ಅಭಿಪ್ರಾಯದ ಪ್ರಕಾರ) ... ಕಂಡು ನಮ್ಮ ... ರಾಗದೆ ಹಿಂಜರಿದಿರುವವರನ್ನು ನಾವು ಅವರಿಗೆ ನಮ್ಮ ಉತ್ತಮ ... ಮತ್ಸರದಿಂದ ... ರಾಗಿಲ್ಲವೆಂದು ಬರೆದಿರುವೆವಂತೆ, ... ಹೀಗೆ ಎಲ್ಲಿ ಬರೆದದ್ದು ಎಂದು ನಮಗೆ ತಿಳಿಯುವುದಿಲ್ಲ ನಾವು ಬರೆದದ್ದನ್ನು ಚೆನ್ನಾಗಿ ಪರಿಶೀಲಿಸಿ ನೋಡಿದರೆ ಈವಿಧವಾದ ತಪ್ಪು ಭಾವನೆಗೆ ಎಂದು ಎಡೆಕೊಡುವುದಿಲ್ಲ. ಕಳ್ಳನಮನಸ್ಸು ಹುಳ್ಳಗೆ ಅಂತೂ ಇಂತು ಈ ಬಾತ್ಮಿದಾರರು ಮತ್ಸರಪಟ್ಟವರೇ !! ನಮ್ಮಭಿಪ್ರಾಯದ ಪ್ರಕಾರ ... ನ್ನು ಪಡೆಯುವುದೇ ಮನುಷ್ಯಜನ್ಮದ ಸಫಲವಂತೆ ನಾವೆಂದಿಗೂ ಇಂತ ಅಭಿಪ್ರಾಯಪಟ್ಟು ಬರೆದಿಲ್ಲ. ಅಂತೂ ಇಂತು ಬಾತ್ಮಿದಾರರು ತಿಗ್ರಿಪಡದವರಲ್ಲ !!!

ಇವರದೊಂದು ಬುದ್ಧಿವಾದ ! ಸಂಪಾದಕರು ಸ್ವಾಭಿಪ್ರಾಯವನ್ನು ಮೂಲೆಗೊತ್ತಿ ದೇಶಾಭಿಪ್ರಾಯದ ಕಡೆಗೆ ಶಕ್ತಿಯನ್ನು ಚಾಚದವಲ್ಲದೆ ಪತ್ರಿಕೆಯನ್ನು ಯಾರೂ ಪ್ರೋತ್ಸಾಹಿಸಲಿಕ್ಕಿಲ್ಲವಂತೆ. ನಿಮ್ಮ ದಿವ್ಯಬುದ್ಧಿವಾದಕ್ಕೆ ಒಂದು ನಮಸ್ಕಾರ! ಪತ್ರಿಕೆಯಸಂಪಾದಕರು ದೇಶವರು ಹೇಳದಂತೆ ಕುಣಿಯುವುದಾದರೆ ನೀವು ನಿಜವಾಗಿಯೂ ಸಂಪಾದಕೀಯ ವ್ಯವಹಾರಗಳನ್ನು ವಿಶೇಷವಾಗಿ ಬಲ್ಲವರು. ಆದರೆ ನಮ್ಮನ್ನು ಯಾರೂ ಪ್ರೋತ್ಸಾಹಿಸದಿದ್ದರು ಸರಿಯೇ ನಾವೆಂದಿಗೂ ಅಂಥ ಹೆಳ್ಳಗರಂತೆ ಸಂಪಾದಕರಾಗುವುದಿಲ್ಲ.

ಬಾತ್ಮಿದಾರರಿಗೊಂದು ಅರಿಕೆ__ಮಹಾಶಯರೇ! ನಿಮ್ಮ ಬಾತ್ಮಿಯನ್ನು ಚೆನ್ನಾಗಿ ಓದಲಿಲ್ಲ ನೀವೆಂದಿಗೂ ನಮ್ಮ ಸದುದ್ದೇಶದ ಮಿತ್ರರೆಂದು ತೋರುವುದಿಲ್ಲ ಇಲ್ಲದಸಂಗತಿಯನ್ನು ಉಂಟುಮಾಡಿ ನಮ್ಮನ್ನು ದೇಶದ ಮುಂದೆ ವಿಕಟರೂಪದಲ್ಲಿ ಒಳ್ಳೆಬಳಸುವ್ರದೇ ನಿಮ್ಮ ... ಲೋಕಜನ ... ದಿಗೆ ತೋರಿಬಂದಂತೆ ನಮಗೆ ಸ್ವಂತವಾಗಿ ಬರೆದು ತಿದ್ದಿಕೊಳ್ಳಲು ಹೇಳಬಾರದೆ ... ತಾಳ್ಮೆಯಿದೆ ನೀವು ಇನ್ನು ಮುಂದಕ್ಕೆ ... ಕೊಡಗು ಪತ್ರಿಕೆಯ ಮೂಲಕ ಎಷ್ಟು ... ಸರಿಯೆ ನಾವೆಂದಿಗೂ ಲಕ್ಷ್ಯಕೊಡುವುದಿಲ್ಲ ನೀವು ನಿಜವಾಗಿಯೂ ನಮ್ಮನ್ನು ಉಪ್ಪರಿಸ್ಥಿತಿಗೆ ತರಲು ಮನಸಿಟ್ಟವರಾದರೆ ನಿಮ್ಮ ಹೆಸರನ್ನು ಬರೆದು ನಮ್ಮ ಜನೆ ಪತ್ರವ್ಯವಹಾರ ಮಾಡುವಿರಿ

ಜಿ. ಎಸ್. ...
ಹಳೇ ವಿದ್ಯಾರ್ಥಿಗಳ ಮ... ಜಿನ್ ಸಂಪಾದಕ

ಎಲ್. ಕೆ. ಎಲ್ಮ್‌ಹಸ್ಟ್‌ರ ಉಪನ್ಯಾಸ,
ಗ್ರಾಮಾಭಿವೃದ್ಧಿ.

(ಮೋಡರ್ನ್ ರಿವ್ಯೂವಿನಿಂದ)

ಮುಂದರಿಸಿದ್ದು.

ಕೆಲವರು ಇದಕ್ಕೂ ಅದಕ್ಕೂ ... ಮಾಡಬೇಕೆಂಬ ಪ್ರಯತ್ನಿಸುತ್ತಿರೂ ಇನ್ನು ಕೆಲವರು ಬೇರೆಯವರನ್ನು ... ಮಾಡಲು ಬಿಡಬೇಕೆಂದು ... ಇದಕ್ಕಾಗಿ ಬಂಗಾಳದ ಗ್ರಾಮಗಳ ಜನಾರೋಗ್ಯ ... ಕೆಯಾಗಿ ನಾಶವಾಗುತ್ತಾ ಇರುತ್ತ ... ಎಂಬುದು ರಾಜಕೀಯ ಸ್ವರ್ಗಪಾಪ್ತನಾಗುವರೆಗ ... ಮವಾಸಿಗಳಿಗೆ ಪ್ರಯೋಜನವಾಗುವ ... ಮಾಡುವ, ಎಂದ ಹೇಳಿದರೆ ... ಮಾಡಿದಂತೆ ಆಗಲಿಲ್ಲ

ಇದು ... ವಹಿಸಿಕೊಟ್ಟ ಇತಿಹಾಸದ ... ವಾಯಿತು ಇನ್ನು ನ್ಯಾಯ ಪೈಸಲ್ ಮಾಡುವ ... ಪೋಲೀಸ್ ಇಲಾಖೆಯ ವಿಷಯವನ್ನು ಸ್ವಲ್ಪ ವಿವರಿಸುತ್ತೇನೆ ಗ್ರಾಮದವರು ನಮ್ಮ ಮೇಲೆ ಇಗಲಿಕ್ಕೆ ಮುಂಚೆ ಆದ ಒಂದುವಾರದ ಅನುಭವವನ್ನು ಹೇಳುತ್ತೇನೆ ಗ್ರಾಮದ ಕುರುಕರ ಗುಂಪು ಒಂದು ಮತ್ತು ಸಂತಾಲ್ ಜಾತಿಯ ಜನರ ಗುಂಪು ಒಂದು, ಒಂದುಮನೆಯಲ್ಲಿ ಸೇರಿ ... ಮುಸಲ್ಮಾನರಿಗಾಗಿ ಸಂತಾಲರು ಮಾಡಿದ ಕೆಲಸಕ್ಕೆ ಸಂಬಳ ಸರಿಯಾಗಿ ಕೊಡಲಿಲ್ಲವೆಂತಲೂ ಆ ಕಾರಣದಿಂದ ಕೆಲಸಕ್ಕೆ ಹೋಗದೆ ನಿಂತುಬಿಟ್ಟಾಗ ಮುಸಲ್ಮಾನರು ಅವರ ದನಗಳನ್ನು ಕದ್ದುಕೊಂಡು ಹೋಗಿಬಿಟ್ಟರಂದೂ ಪೋಲೀಸ್ ... ನಾಗಿ ಎರಡು ಕಡೆಯವರೂ ಲಾಯರುಗಳನ್ನು ಇಟ್ಟುಕೊಂಡು ಎಂಟಾವರ್ತಿ 20 ಮೈಲು ದೂರವಿರುವ ಬಿಚೇರಿಗೆ ... ದ ಪಂಗಡದವರೂ ನಡೆದದ್ದಾಯಿತೆಂತಲೂ ಲಾಯರುಗಳಿಗೆ ಎಂಟಾವರ್ತಿ ಫೀಸ್ ಕೊಟ್ಟಾಯಿತೆಂತಲೂ, ... ಮೂರನೇ ಹಿಯರಿಂಗ್ ಹತ್ತಿರ ಬಂದದೆಯಾಗಿಯೂ ... ಯಿತು ಈಗ ಎರಡು ಕಡೆಯವರಿಗೂ ಸಾಕಾಗಿದೆ ... ಗಾದರೂ ಗ್ರಾಮದಲ್ಲೇ ರಾಜಿಯಲ್ಲಿ ತೀರಿಸಿಕೊಳ್ಳಬೇಕೆಂತ ಆಗಿದೆ. ಮುಸಲ್ಮಾನರು ತಾವು ಮಾಡಿದ್ದು ತಪ್ಪೆಂದು ಒಪ್ಪಿದರು. ಹೇಗಾದರು ಬಿಚೇರಿಯ ಬಾಧೆಯನ್ನು ಲಾಯರುಗಳ ಮತ್ತು ಪೋಲೀಸಿನವರ ಕಾಟವನ್ನು ತಪ್ಪಿಸಿಕೊಳ್ಳಬೇಕೆ ನಾಕೆಂತ ಆಗಿತ್ತು.

ನಾವು ಕೆಲಸ ಮಾಡುತ್ತಿದ್ದ ಗ್ರಾಮದ ಪ್ರೈಕನಿಗೇ ... ಗಲೀ ಕೂಲಿಕಾರನಿಗೇ ಆಗಲೀ, ಚಾರಿಯಾಗಲೀ ... ಲ್ಲಿಯೂ ನ್ಯಾಯಪಿಸ್ಸುವದು ಅಸಾಧ್ಯವಾಗಿತ್ತು ... ಕಾಲದನಂತರ, ಕೈಯಲ್ಲಿದ್ದ ಹಣವೆಲ್ಲಾ ಕಳಕೊಂಡನಂತರ ... ಪಕ್ಕದಂತೆ ಫೈಸಲಾದರೂ ಸಹ ಅದಕ್ಕೆ ನ್ಯಾಯವೆಂತ ... ರಾಗುವದಿಲ್ಲ ಲಾಯರುಗಳು ನಮ್ಮ ಗ್ರಾಮಸ್ಥರ ಸಾಕ್ಷಿ ... ನ್ನೆಲ್ಲಾ ತೀರಿಬಿಡುತ್ತಾರೆ ಅವರು ಜೀವಿಸಬೇಕಷ್ಟೆ ... ಕಾದಕ್ಕು ಮೊಕದ್ದಮೆಗಳು ಇಲ್ಲವಾದರೆ ಮೊಕದ್ದಮೆಗಳನ್ನು ಎಬ್ಬಿಸಲು ಪ್ರಯತ್ನಿಸುವದು ಅವರ ಕರ್ತವ್ಯವಾಗುತ್ತೆ.

ಹಾಗಾದರೆ ಏನು ಮಾಡಬೇಕು ! ಕಾಲಕ್ರಮೇಣ ಗ್ರಾಮದವರಿಗೆ ನಮ್ಮಲ್ಲಿ ನಂಬಿಕೆ ಹುಟ್ಟಿದನಂತರ ಗ್ರಾಮದವರ ವಿಧವಿಧ ವ್ಯಾಜ್ಯಗಳನ್ನು ಫೈಸಲ್ ಮಾಡಿಸಿಕೊಳ್ಳಲು ನಮ್ಮಲ್ಲಿಗೆ ಕರುತ್ತಿದ್ದರು. ಈ ಕೆಲಸದಿಂದ ನಮಗೆ ಪೋಲೀಸಿನವರ ಸಂಪರ್ಕ ಹೆಚ್ಚಾಗಿ ಆಯಿತು. ನಮಗೆ ಜನರು ... ದಂತೆ ಅವರು ಕಷ್ಟವರಾಗಿರಲಿಲ್ಲ ಅವರು ಮಾಡುವ ... ನವು ಒಳ್ಳೇದಾದರೆ ಒಳ್ಳೇದು ಎಂತ ಹೇಳುವವರೂ, ...

ನಾದರೂ ಜುಲುಂ ನಡಿಸಿದರೆ ಅದನ್ನು ಹೀಯಾಳಿಸುವ ರೂ ಇದ್ದಾರೆಂತ ಅವರಿಗೆ ತಿಳಿದಮೇಲೆ ಅವರು ಎಲ್ಲಾ ಮನುಷ್ಯಜಾತಿಯಂತೆಯೇ ನಡೆಯುತ್ತಿದ್ದರು. ಹಾಗೂ ಗ್ರಾಮದಲ್ಲಿ ಅವರ ಕೆಲಸವು ಸುಲಭವಾದದ್ದಲ್ಲ. ಎಲ್ಲರೂ ಅವರನ್ನು ಶಪಿಸುತ್ತಲೇ ಇರುತ್ತಾರೆ. ಆದರೆ ಗ್ರಾಮದಲ್ಲಿ ಕಳುವೇನಾದರೂ ನಡೆದರೆ ಕಳ್ಳನನ್ನೂ ಮಾಲನ್ನೂ ಕಂಡುಹಿಡಿಯುವ ಭಾರವು, ಕೃತ್ಯ ನಡೆದ ಎರಡುನೂರು ವರುಷದ ಮೇಲೆ ಅವರಿಗೆ ವರ್ತಮಾನ ತಿಳಿದರೂ ಅವರ ಮೇಲೆಯೇ ಇದೆ. ಅವರ ಕೆಲಸವನ್ನು ಚನ್ನಾಗಿ ಮಾಡಿದರು ಅವರಿಗೆ ಸಿಕ್ಕುವದು ಎಷ್ಟೆಂದರೆ ಒಂದು ಗ್ರಾಮದಲ್ಲಿ ಏನಾದರೂ ಗದ್ದಲವಿಲ್ಲದೆ ಇಬ್ಬರು ಕಾನ್‌ಸ್ಟೇಬಲ್‌ಗಳೇ ಮಾತ್ರ ಹಿಂದೂಮುಸಲ್ಮಾನರೊಳಗೆ ಆಗುತ್ತಿದ್ದ ದೊಡ್ಡ ಜಗಳವನ್ನು ನಿಲ್ಲಿಸಿದ್ದು ನನಗೆ ಗೊತ್ತಿದೆ. ನಾನು ಗ್ರಾಮದಲ್ಲಿ ಇಲ್ಲದೆ ಇದ್ದಾಗ್ಯೆ ನಮ್ಮ ಕಡೆಯ ರನ್ನು ಪೋಲೀಸಿನವರನ್ನು ಟೀಪಾರ್ಟಿಗಳಿಗೆ ಕರೆಯುವದು, ಮತ್ತು ಅವರು ನಮ್ಮವರನ್ನು ಚಿಕ್ಕಚಿಕ್ಕ ತಕರಾರುಗಳನ್ನು ತೀರಿಸಲಿಕ್ಕೆ ನನ್ನನ್ನು ಕಂಡು ಹಿಡಿಯಲಿಕ್ಕೆ ಸಹಾಯ ಕರೆಯುವದು [illegible]ಯಾಗಿತ್ತು. ಇದು ರಾಮರಾಜ್ಯಸ್ಥಿತಿಯಂತೆ ಕೇಳಿಸುವದು. ಆದರೆ ಇದು ಸತ್ಯವಾಗಿದೆ.

ನಾನು ಇಲ್ಲದೆ ಇದ್ದಾಗ ಯೂನಿಯನ್ ಬೋರ್ಡಿನ ಚುನಾವಣೆಯು ನಡೆಯಿತು. ನನ್ನ ಪಕ್ಷದ ಮೇಲೆ [illegible] ಜೋರಾದಾಗ ಎರಡು ಗ್ರಾಮದವರು ಸ್ವಪ್ರಯತ್ನದಿಂದಲೇ ಮೇಲೋಗರವನ್ನು ದೂರಮಾಡಲು ಸಾಧ್ಯ ಮಾಡಿಕೊಟ್ಟ ಮತ್ತು ವ್ಯಾಜ್ಯಗಳನ್ನು ತೀರಿಸಲು ಅನುಭವ ವಿದ್ದ [illegible] ಚುನಾವಣೆ ನಿಲ್ಲಬೇಕಂತ ಕೇಳಿಕೊಂಡರು. ಅವರು ಸುರವಿನಲ್ಲಿ ಇಲ್ಲ. [illegible] ಚುನಾವಣೆಗೆ ನಿಂತಲ್ಲಿ ಆಕ 50 ಓಟುಗಳೂ ಆತನಿಗೆ ಎದುರಾಗಿದ್ದವನಿಗೆ 7 ಓಟು ಸಿಕ್ಕಿ ಆತನಿಗೆ [illegible]. ಆತನು ಆವನಿಗೆ [illegible] ಆಗಿದ್ದವರಲ್ಲಿಯೂ ಆವನ [illegible] ಸಹಾಯ [illegible] ಪ್ರಮಾಣವಾಡಿಕೊಂಡರು. ಯೂನಿಯನ್ ಬೋರ್ಡಿನ ಆವನು ಮಾಡಲು ಯೋಚಿಸಿರುವ ಕಾರ್ಯಗಳಿಗೆ [illegible], ಜವಿದ್ದಾರರು [illegible] ಮತ್ತು ಸ್ಥಳೀಯ [illegible] ಎಲ್ಲಾ [illegible] ಪಡೆಯಿಂಡಿದ್ದಾನೆ. ಆವ [illegible] ಇದೆ [illegible] ಪೋಲೀಸಿನವರು ಯೂನಿಯನ್ ಬೋರ್ಡ್ ಪಂಚಾಯಿತಿ [illegible] ಇವರ [illegible] ಬೇಕೆಂತ [illegible] ಬರೆದರು. ಆವನು ಈ ಕೆಲಸಕ್ಕೆ ನೇಮಿಸಿದರೆ [illegible] ತಿಂಗಳುಗಳಲ್ಲೇ ಈ ಪ್ರಾಂತ್ಯದಲ್ಲಿ ಯಾವತರದ [illegible] ಇಲ್ಲದೆ ಹೋಗುತ್ತೆ. ಮತ್ತು ಈ [illegible] ಜೀವನೋಪಾಯವನ್ನು ಸಂಪಾದಿಸಲು ಬೇರೆಡೆ ಹೋಗಬೇಕಾಗುತ್ತೆ ವತ್ತು ಜನರು ಸತ್ಯವನ್ನು ಹೇಳಲು [illegible] ವ್ಯಾಜ್ಯ [illegible] ಮತ್ತು ಆವನು ತಯಾರಾದ ಯುವಕರ ಸಹಾಯದಿಂದ ಪೋಲೀಸಿನವರ ಸಂಖ್ಯೆ [illegible] ಕಡಿಮೆ ಮಾಡಬಹುದು.

ಕೆಲವು ತಿಂಗಳುಗಳ ಕೆಲಸದ ಅನುಭವದಿಂದ ನಾವು ಕಂಡದ್ದೇನೆಂದರೆ—ಗ್ರಾಮದವರು [illegible] ತಮಗೆ ಕಷ್ಟಕಾಲದಲ್ಲಿ ಸಹಾಯವನ್ನು ಮಾಡುವರು ಯಾರೆಂಬುದನ್ನು ತಿಳಿದುಕೊಂಡರು. ಅವರು ಓದು [illegible] ಕಲಿತಿರಬೇಕಂತ ಇಲ್ಲ. ಎರಡನೇದೇನೆಂದರೆ—ಮೇಲಧಿಕಾರಿಗಳು ಹೊಸ ಸುಧಾರಣೆಯೇ ವಿನಾ ಜಾತಿಗಳೇ, ಅಲ್ಲದಿರಲೀ, ನ್ಯಾಯವಿಧಾಯಕ ಸಭೆಯಲ್ಲಿ [illegible] ವರಾವು ವಾಸನಾಗಲೀ ಆಗುವಲೀ ಗ್ರಾಮಸ್ಥರು ಒಟ್ಟಿನಿಂದ ಕೆಲಸಮಾಡಿದರೆ ಎಂಥಾ ಸ್ವರ್ಗೀಯ [illegible] ಪ್ರಯೋಜನಕ್ಕೆ ಉಪಯೋಗಿಸಿಕೊಳ್ಳಬಹುದೆಂದು ನಮಗೆ ಚನ್ನಾಗಿ ತಿಳಿಯಿತು.

ನಾವೆಲ್ಲರೂ ನಮ್ಮ ಅಡಿಗಡಿಕೊಳ್ಳಬೇಕಾದರೆ [illegible] ದಲ್ಲಿ ಅಡಿಗೆ ತಯಾರಿಸುವ ನೆಲ್‌ಕುಕ್ಕರ್ ಎಂಬ ವಲೆ [illegible] ಏರ್ಪಾಡಾಗುವವರೆಗೆ ಕಾಯಬೇಕೆ ಆದೀತೇ? [illegible] ಗಳನ್ನೂ, ಒಣಗಿದ ಎಗಣಿಯನ್ನೂ ಉಪಯೋಗಿಸಿಕೊಂಡು ಮಣ್ಣಿನ ಒಲೆಯನ್ನು ಮಾಡಿಕೊಂಡು ನಮ್ಮ ಊಟ ತಯಾರಿಸಿಕೊಳ್ಳುವದಿಲ್ಲವೇ? ಅದ್ದರಿಂದ ನಾನು ಕೇಳಿಕೊಳ್ಳುವದೇನೆಂದರೆ—ಸಮಾಜಸೇವೆಗಾಗಿ ಕೆಲಸಮಾಡುವ ಎಲ್ಲಾ ಸಂಘಗಳು ಒಂದಾಗಿ, ಸರಕಾರದಿಂದ [illegible] ಸಹಾಯ ತೆಗೆದುಕೊಂಡು ಯುವಕರಲ್ಲಿರುವ ಉತ್ಸಾಹ ಮತ್ತು ಮನಃಪೂರ್ತಿ ಸೇವೆಮಾಡುವ ಸ್ವಭಾವವನ್ನು ಉಪಯೋಗಿಸಿಕೊಂಡು ಗ್ರಾಮಗಳ ಅಭಿವೃದ್ಧಿಯನ್ನು ಮಾಡಬೇಕು. ಗ್ರಾಮವಾಸಿಗಳಾದವರು ಗ್ರಾಮದ ಕೆಲಸವನ್ನು ತಮ್ಮ ಕೆಲಸವನ್ನಾಗಿ ಭಾವಿಸಿಕೊಂಡು, ಆ ಕೆಲಸ [illegible] ತಯಾರಾಗಿ, ತಮ್ಮ ಒಗ್ಗಟ್ಟಿನ ಶಕ್ತಿಯನ್ನೆಲ್ಲಾ ಉಪಯೋಗಿಸಿಕೊಂಡು ಗ್ರಾಮಾಭಿವೃದ್ಧಿ ಮಾಡಿಕೊಳ್ಳಬೇಕು.

ಅನೇಕ ಮುಂದಾಳುಗಳು ಈ ವಿಷಯವನ್ನು ಒಗ್ಗಿ [illegible] ಒತ್ತಿ ಹೇಳುತ್ತಿದ್ದಾರೆ. ನಮ್ಮ ಸಂಸ್ಥೆಯನ್ನು [illegible]ಸಿದ ರವೀಂದ್ರನಾಥ ಟಾಗೋರರು ಗ್ರಾಮಪ್ರಯ [illegible] ಸಂಪೂರ್ಣ ಮನಸ್ಸನ್ನು ಕೊಟ್ಟಿದ್ದಾರೆ. ಅವರ [illegible] ಮತ್ತು ನಿರಂತರ ಸಹಾನುಭೂತಿಯಿಲ್ಲದೆ, ಹಿಂದೂ [illegible] ಮಾತ್ರವಲ್ಲ ಒಟ್ಟು ಪ್ರಪಂಚದ ಗ್ರಾಮಗಳ ಜೀರ್ಣ [illegible] ತೋರಿಸುವ ಈ ನಮ್ಮ ದಾರಿಗಳನ್ನು ಕಂಡು [illegible] ಸಾಧ್ಯವಿಲ್ಲ.

ಪತ್ರವ್ಯವಹಾರಗಳು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. [ಎಡಿಟರ್]

ಅಯ್ಯಾ,

ದಯವಿಟ್ಟು ಈ ಕೆಳಗೆ ಬರೆದ ಬಾತ್ಮಿಯನ್ನು ತಮ್ಮ ಪತ್ರಿಕೆಯಲ್ಲಿ ಸ್ವಲ್ಪ ಸ್ಥಳಕೊಟ್ಟು ಈ ದೇಶದ ಎಲ್ಲಾ ಮಹನೀಯರಿಗೂ ತಿಳಿಸುವಿರಾಗಿ ನಂಬುತ್ತೇನೆ.

ನಮ್ಮ ಪೈತಾಳಿ ಗ್ರಾಮದ ಶ್ರೀ ಐಯ್ಯಪ್ಪ ದೇವರ ಗರ್ಭಗೃಹವು ಮತ್ತು ದೇವಸ್ಥಾನವು ಸಹ ಹಾಳುಬಿದ್ದು ಅನೇಕ ವರ್ಷಗಳಾಯಿವು. ಅದ್ದರಿಂದ ಸದರಿ ದೇವಸ್ಥಾನವನ್ನು ರಿಪೇರಿ ಬಗ್ಗೆ ಊರವರೆಲ್ಲರೂ ಆದಷ್ಟು ಮಟ್ಟಿಗೆ ಚಂದಾ ಹಾಕಿಸಲಿಕ್ಕೆಂದು ನಾವುಗಳು ದೇಶದ ಮಹನೀಯರನ್ನು ಈ ಮೂಲಕ ಬೇಡಿಕೊಳ್ಳುವುದೇನೆಂದರೆ—

ದೇಶದ ಮಹಾನುಭಾವರುಗಳಿರಾ,

ನಿಮ್ಮ ಉದಾರಮನಸ್ಸಿನಿಂದ ತಮಗಳ ಕೈಲಾಗುವ ಸಹಾಯಕೊಟ್ಟು ನಮ್ಮ ದೇವಸ್ಥಾನವನ್ನು ಉದ್ಧಾರ [illegible] ಪ್ರಾರ್ಥಿಸುತ್ತೇನೆ.

[illegible] ಮನಸ್ಸಿರುವ ದಾನಿ ಮಹನೀಯರು ನಾವು ಊರವರು ಧರ್ಮದಾಯ ವಸೂಲಿಗಾಗಿ [illegible] ತಮ್ಮ [illegible] ತೋರಿಸಿ [illegible] ಬೇಡುತ್ತೇನೆ.

[illegible]

ಅಯ್ಯಾ,

[illegible] ಯೂನಿಯನ್ [illegible] ತಾರೀಖು [illegible] ನಮ್ಮ [illegible] ದೇವರ ಗುಡಿಯಲ್ಲಿ [illegible] [illegible] ಪ್ರಜಾಸಭೆಯ [illegible] ದೇವರಿಗೆ [illegible] ನಡೆಸಲು [illegible] ಎಲ್ಲ ವರು [illegible] ಬರ [illegible] ಗಡೆ [illegible] ನಮ್ಮ [illegible] ಪ್ರೀತಿಗೆ [illegible] ನಮ್ಮ [illegible] ಸುವ ಸಭೆಯ [illegible] ಪ್ರಸಾದ [illegible] ತೆಗೆದುಕೊಂಡು ಊಟ [illegible] ತೀರಿಸಿಕೊಂಡು [illegible] ಕೇರಿ [illegible] ಅನ್ನಸ್ಥಿತಿಯನ್ನು [illegible] ಅನುಕೂಲ ಎಂದ [illegible] ಪ್ರಧಾನವಾದ [illegible] ನಮ್ಮ ದೇಶದ ಒಳಗೆ ಎಡೆಬಿಡದೆ ಪ್ರಯತ್ನಿಸುತ್ತಿರುವ [illegible] ಘನವನ್ನು ಸ್ಥಾಪಿಸಿ ದೇಶೋನ್ನತಿಗೆ ದಾರಿ [illegible] ದಿನಾಂತರದ ಮಹಾಪುರುಷರಿತೆಗಳನ್ನು ವಿವರಿಸದಲ್ಲದೆ ನಮ್ಮ ತಾಲೂಕಿನಲ್ಲಿ ದೊಡ್ಡ ಉದ್ಯೋಗ [illegible] ಇದ್ದು [illegible] ಪ್ರಸಿದ್ಧ ದೇವಸ್ಥಾನವಿರುವದರಿಂದ [illegible] ವಾರ ಸಂಘದ ಪ್ರೆಸಿಡೆಂಟರಾಗಿಯೂ [illegible] ಅನೇಕ ಬಾಬುಗಳಲ್ಲಿಯೂ [illegible] ಕೊಂಡು [illegible] ಮಾಡಿ ಎಲ್ಲಾ ಭಾಗಗಳಲ್ಲಿಯೂ [illegible] ಯಶೋಮಂತರಾಗಿದ್ದು ಈಗ ವಿಶ್ರಾಂತಿಯನ್ನು ತೆಗೆಯುತ್ತಿರುವ ಮ॥ ರಾ॥ ಅಂ ಬಿ ಕೆ [illegible] ನವರಿಗೆ ಶ್ರೀ ಭಗವಂತನು ಮತಿ, ದೀರ್ಘಾಯುಷ್ಯ, ಶ್ರೀ ಕಾವೇರಿ ಮಾತೆಯು ಆಯುರಾರೋಗ್ಯ ಸಂಪದವನ್ನು ಕೊಟ್ಟು ಕಾಪಾಡಲೆಂದು ಪ್ರಸಾದ ವಗೈರೆಯನ್ನು ಪ್ರಾರ್ಥಿಸಿ ಸಭೆಯು ಮುಕ್ತಾಯವಾಯಿತು.

ತಾರೀಖು [illegible] ನೇ ಸೋಮವಾರ ಶಿವರಾತ್ರಿ ದಿವಸ ನಮ್ಮ ಗ್ರಾಮದ ಕೃಷ್ಣದೇವರಗುಡಿಯಲ್ಲಿ ದೀಪೋತ್ಸವ ನಡಿಸಿ ಅಲ್ಲಿಯ [illegible] ಗ್ರಾಮದವರನ್ನು [illegible] ಪ್ರಾರ್ಥಿಸಿಯನ್ನು ಮಾಡಿ ಉತ್ಸವವು ಅತಿ ವಿಜೃಂಭಣೆಯಿಂದ ಸಂಗೀತವಗೈರೆ ತಮಾಷೆಯಿಂದ ನಡೆಯಿತು.

[illegible] ಸಭಾ ಕ್ಷೇಮಚಿಂತಕ

ಅಯ್ಯಾ,

ತಾರೀಖು [illegible] ರ ಕೊಡಗು ಪತ್ರಿಕೆಯಲ್ಲಿ ಪ್ರಕಟವಾದ ಕೋತೂರು ನಾಲ್ಕೇರಿ ಯೂನಿಯನ್‌ನಲ್ಲಿ ಮಧ್ಯವರ್ತಿಸಿದರೇನ ಅಂದರೆ, ಉಭಯ ಗ್ರಾಮದವರು ಶುಭಾಶುಭಗಳಲ್ಲಿ ಮಧ್ಯಮಾನವನ್ನು ಬಿಡ ಬೇಕೆಂದು ನಿಶ್ಚಯಮಾಡಿದಂತೆ ನಡೆಯಲು ಇಷ್ಟ ಇಲ್ಲವೆಂದು ಮೇಲ್ಕಂಡ ನಾಲ್ಕೇರಿ ಗ್ರಾಮಸ್ಥರು ಇವ್ವಟ್ಟ ರಾವನ್ನು ವಾಪಾಸುತೆಗೆದುಕೊಂಡ ಸಂಗತಿಯನ್ನು ವಾಚಕಮಹಾಶಯರಿಗೆ ತಿಳಿಸಲು ತುಂಬಾ ವ್ಯಸನಪಡುತ್ತೇನೆ. ಇಂತಾ ತೀರ್ಮಾನವನ್ನು ಸಾವಕಾಶದಿಂದ ನೆಲೆಯನ್ನು ತಿಳಿಯಬೇಕಿತ್ತು. ಆತುರದಿಂದ ಪ್ರಕಟಪಡಿಸಿದಕ್ಕೆ ವಾಚಕಮಹಾಶಯರನ್ನು ಕ್ಷಮಾಪಣೆಕೇಳಿಕೊಳ್ಳುತ್ತೇನೆ. ತಾರೀಖು ೨ರ ಕೆಳಗೆ ಅತ್ಯಂತ ಮರದ ಸಸಿಯು ಹುಟ್ಟಿರೆಂದು ಹೇಳಿದರೆ ಅದನ್ನು ಸಾವಕಾಶದಿಂದ ಪರೀಕ್ಷಿಸಬೇಕಿತ್ತು. ಇದು ತುಂಬಾ ಶೋಚನೀಯ. ಯಾವ ಕಾರ್ಯದಲ್ಲು ಆತುರಪಡಬಾರದೆಂಬುದು ಈಗ ನೆನಪಿಗೆ ಬಂತು. ಈವಾಗ ನಾಲ್ಕೇರಿ ಗ್ರಾಮದವರನ್ನು ಪ್ರತ್ಯೇಕಿಸಿ ಕೋತೂರಿನವರು ಮಾತ್ರ ಯೂನಿಯನ್ ಸಂಘ ಮಾಡಿಕೊಂಡು ಮೊದಲಿನ ತೀರ್ಮಾನದಂತೆ ನಡೆಯುತ್ತಾ ಇದ್ದೇವೆ. ಇದೇ ರೀತಿ ನಡದುಬರಬಹುದೆಂದು ನನ್ನ ಅಭಿಪ್ರಾಯವಿದೆ. ಅಲ್ಲದೆ ಯಾವಾಗ ಕೊನೆಕಾಣಬಹುದೊ ಹೇಳಲಾರೆನು. ಕೋತೂರು ಯೂನಿಯನ್‌ನವರೆ ಎಚ್ಚರಿಕೆಯಿಂದ ತಮ್ಮ ಬಹುಮಾನವನ್ನು ಕಾಪಾಡಿಕೊಳ್ಳಬೇಡವಾ, ಸುರಾದೇವಿಯು ಮಹಾತ್ಮೆಯು ಎಷ್ಟರಮಟ್ಟಿಗೆ ನಮ್ಮನ್ನು ಆನಂದಗೊಳಿಸುವಳೆಂಬದನ್ನು ನಾನು ವರ್ಣಿಸಲಾರೆನು. ಸುರಾದೇವಿಯು ಹಾವಳಿಯ ಮಹಾತ್ಮೆಯನ್ನು ನಮ್ಮ ದೇಶದಲ್ಲಿ ಜನರು ಪ್ರತಿನಿತ್ಯವೂ ನೋಡುತ್ತಿರುವದರಿಂದ ಆ ವಿಷಯ ಬೆಳ್ಳು ಒರೆ ಮಾಡುವದು ಅನಾವಶ್ಯಕ.

ಯೂನಿಯನ್‌ಮೆಂಬರು.

ಅಯ್ಯಾ,

ಪಿ ಬಿ ಮುತ್ತಯ್ಯಗೌಡರೆ, ನೀವು ಮಾರ್ಚ್ ೭ರಲ್ಲಿ ಕೊಡಗು ಪತ್ರಿಕೆಯಲ್ಲಿ ಪ್ರಕಟಿಸಿದ ಕುಳಲೇಖನವನ್ನು ನೋಡಿ ಸಂತೋಷಪಟ್ಟೆನು. ನೀವು ಪತ್ರಿಕೆಯಲ್ಲಿ ನಮ್ಮ ಮಾತೃಭೂಮಿಯು ಕೈಗೂರೆಂತಲೂ, ನಮ್ಮ ಕುಲದೇವರು ಸರ್ವಜಗದೀಶನಾದ ವೆಂಕಟರಮಣನೆಂತಲೂ ಸೂಚನೆಮಾಡಿದ ವಿಚಾರವನ್ನು ನಾನು ಹಿಂದೆಯೇ ನಮ್ಮ ಪೂರ್ವಿಕರಿಂದ ತಿಳಿದಿದ್ದೇನು. ಆದರೆ ನಾವುಗಳು ಕೊಡಗು ದೇಶದಲ್ಲಿ ಐಮ್ಮರ ಗೌಡುಗಳೆಂದೂ, ಗೌಡುಗಳೆಂದೂ, ನಾಮಾಂಕಿತವನ್ನು ಧರಿಸಿರುವ ವಿಚಾರವೂ, ಕೈಗೂರಿನಲ್ಲಿರುವ ನಮ್ಮ ಪೂರ್ವಿಕರು ಒಕ್ಕಲಿಗ ಗೌಡುಗಳೆಂದು ನಾಮವನ್ನು ಕೈಕೊಂಡವಿಚಾರವೂ ನನಗೂ ಮತ್ತು ವಾಚಕರಿಗೂ ತಿಳಿಯಲು ಅಸಾಧ್ಯವೇ ಸರಿ. ನೀವು ಈ ವಿಚಾರವನ್ನು ತಕ್ಕಮಟ್ಟಿಗೆ ವಿವರಿಸಿದ್ದ [illegible] ಕೊಡಗಿನ ಗೌಡುಗಳು, ಸರ್ವಜನವಿಮೋಚನೆಗೆ ಕರ್ತರಾದ ಶ್ರೀ ಕಾವೇರಮ್ಮನ ಕೊಲಬಾಟಬಾಗೆಯಲ್ಲಿ ಸಭೆ ಸೇರಿದ ತೀರ್ಮಾನಮಾಡುತ್ತಿದ್ದರು. ಆದ್ದರಿಂದ ತಾವು ದಯವಿಟ್ಟು ಮುಂದಿನವಾರದ ಪತ್ರಿಕೆಯಲ್ಲಿ ಕೈಗೂರಿನ ಗೌಡುಗಳಿಗೂ, ಕೊಡಗಿನ ಗೌಡುಗಳಿಗೂ ಇರುವ ವೆತ್ಯಾಸವನ್ನು ತಿಳಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಒಬ್ಬಗೌಡ

ದೇಶಬಾಂಧವರೇ,

ಉತ್ತರಕೊಡಗಿಗೆ ಪ್ರಖ್ಯಾತಿಪಟ್ಟ ದೇವಸ್ಥಾನವು ಸೋಮವಾರಪೇಟೆನಾಡಿಗೆ ಸೇರಿದ ಪುಷ್ಪಗಿರಿ ಶಿಖರಕ್ಕೆ ಸಮೀಪದ ಒಂದು ಗುಡ್ಡದಮೇಲೆ ಇದೆ. ಅಲ್ಲಿ [illegible] ನೆಲೆಗೊಂಡ ಶಾಂತಮಲ್ಲೇಶ್ವರಸ್ವಾಮಿಯು ವಿವರವನ್ನು ವರ್ಣಿಸಲಸಾಧ್ಯವಾಗಿದೆ. ಆ ಸ್ವಾಮಿಯು ಮಹಿಮೆಯು ಮಹತ್ತಾದುದೆಂದು ಲೋಕಪ್ರಸಿದ್ಧವಾಗಿದೆ. ಈ ಪ್ರಸಿದ್ಧತೆಯಿಂದ ಜನರು ನಾನಾ ಕಡೆಯಿಂದ ಬಂದು ಸ್ವಾಮಿಯ ದರ್ಶನಮಾಡಿಕೊಂಡು ಹೋಗುವರು. ಯಾತ್ರಿಕರಿಗೆ ತಂಗಲು ಅನುಕೂಲವಾಗುವಂತೆಯೂ, ದೇವಾಲಯವಿದ್ದದ್ದರಿಂದಲೂ, ಕೆಲವು ಮಹನೀಯರು ಕೊಂಡರೆ [illegible] ದೇವಾಲಯದ ಕೆಲಸವನ್ನು ಪೂರ್ತಿಗೊಳಿಸಿರುತ್ತಾರೆ. ಇವರುಗಳ ಪ್ರಯತ್ನಕ್ಕೆ ಆ ಶಾಂತಮಲ್ಲಸ್ವಾಮಿಯು ದೀರ್ಘಾಯುರಾರೋಗ್ಯ ಸಂಪದವನ್ನೀಯಲೆಂದು ಪ್ರಾರ್ಥಿಸುತ್ತೇನೆ. ಮತ್ತು ಲಿಂಗಾಯಿತರು ಇಲ್ಲಿಯ ಅರ್ಚಕರಾಗಿರುತ್ತಾರೆ. ಈ ದೇವರಿಗೆ 300 ಬಟ್ಟಿ ಭೂಮಿ ಇದೆ. ಈ ಭೂಮಿಯು ಅರ್ಚಕರ ಸ್ವಾಧೀನಕ್ಕೆ ಕೊಟ್ಟು ಸರ್ವ ಕೆಲಸವೂ ಅವರ ಆಧೀನದಲ್ಲಿ ಹೀಗಿದ್ದರೂ ಕೂಡ ಬರುವ ಯಾತ್ರಿಕರು ಅಕ್ಕಿಯೇ ಮೊದಲಾದ ಸಾಮಾನುಗಳನ್ನು ಅವರಿಗೆ ತಂದುಕೊಡಬೇಕಾಗಿದೆ. ತಂದುಕೊಟ್ಟ ಸಾಮಾನುಗಳಿಂದ ಸರಿಯಾದ ಸೌಕರ್ಯವು ದೊರೆಯದೆ ದಣಿದು ಬರುವ ಯಾತ್ರಿಕರ ಸಂಕಟವನ್ನು ನೋಡಿ ನನಗೆ ಬಹಳ ಬೇಸರವಾಯಿತು. ಇದಲ್ಲದೇ "ದೇವರುಕೊಟ್ಟರು ಪೂಜಾರಿಕೊಡ" ಎಂಬದು ಈ ರೀತಿಯಾದರೆ ಯಾತ್ರಿಕರ ಸಂಖ್ಯೆಯು ಕ್ರಮೇಣ ಕಡಿಮೆಯಾಗಿ ದೇವರಿಗೆ ಕಾಣಿ

ಕೆಲಸ ಕಡಿಮೆಯಾಗುವುದರಲ್ಲಿ ಸಂದೇಹವಿಲ್ಲ. ಆ ದುದರಿಂದ ಅಂಥಾ ಅನರ್ಥಗಳಿಗೆ ಇನ್ನು ಮುಂದೆ ಎಡೆ ಕೊಡದೆ ಪೂರ್ವದಂತೆ ನ್ಯಾಯವಾದ ರೀತಿಯಲ್ಲಿ ಅಲ್ಲಿಯ ಕೆಲಸಗಳನ್ನು ನಡಿಸಿಕೊಂಡು ಬರುವಂತೆ ಸದರಿ ದೇವರ ಠಕ್ಕ ಮುಖ್ಯಸ್ಥರು ಏರ್ಪಾಡುಗೆದುಕೊಳ್ಳುವರೆಂದು ನಂಬುತ್ತೇನೆ. ಯಾತ್ರಿಕ.

ಕೊಡಗಿನ ಗೌಡುಗಳಲ್ಲಿ ವಿನಂತಿ.

ಮಹಾಶಯರೆ,

ನನ್ನದೊಂದು ವಿಜ್ಞಾಪನೆಯನ್ನು ಅರಿಕೆಮಾಡಿಕೊಳ್ಳುವುದಕ್ಕೆ ಅರಿಕೆಮಾಡುವ ವಿಜ್ಞಾಪನೆಯನ್ನು ತಮ್ಮೆಲ್ಲರ ಘನಚಿತ್ತಕ್ಕೆ ತಂದುಕೊಂಡು ಪರ್ಯಾಲೋಚಿಸಬೇಕಾಗಿಯೂ ಮಹಾಜನಗಳಲ್ಲಿ ಪ್ರಾರ್ಥಿಸಿ ಕೇಳಿಕೊಳ್ಳುತ್ತೇನೆ.

ನಮ್ಮ ಸಂಗಡಕ್ಕೆ ಸೇರಿದ ಅನೇಕ ಜನರು ಕೊಡಗಿನ ಅನೇಕ ಭಾಗಗಳಲ್ಲಿ ಜಮೀನ್ದಾರರಾಗಿದ್ದುಕೊಂಡು ಕೃಷಿಯಿಂದ ಜೀವಿಸುವ ವಿಚಾರವು ಎಲ್ಲರಿಗೂ ವೇದ್ಯವಿರಬಹುದು. ನಾವು ಪೂರ್ವದಲ್ಲಿ ಮೈಸೂರು ದೇಶದ ಮಂಜರಬಾದ್ ತಾಲೂಕಿನ ಹೈಗೂರೆಂಬ ಸ್ಥಳದಿಂದ ಈ ದೇಶಕ್ಕೆ ಬಂದವರೆಂದು ನಮ್ಮ ಪೂರ್ವಿಕರು ಹೇಳುತ್ತಿರುವುದಕ್ಕೆ ಸರಿಯಾಗಿ ಮಾರ್ಚಿ ಏಳನೆ ತಾರೀಖಿನ ಪತ್ರಿಕೆಯಲ್ಲಿ ಮ॥ ರಾ॥ ಬಿ ಬಿ. ಮುತ್ತಯ್ಯಗೌಡರು ಎಲ್ಲರಿಗೂ ತಿಳಿಯುವಂತೆ ಪ್ರಕಟಿಸಿದ್ದರು. ನಾವು ನಿಜವಾಗಿಯೂ ಹೈಗೂರಿನಿಂದ ಬಂದ ನಿವಾಸಿಗಳಾದರೆ ನಾವು ಮೈಸೂರು ದೇಶದ ಗೌಡುಗಳ ಸಂಗಡಕ್ಕೆ ಸೇರಿದವರಲ್ಲೆಂದು ಹೇಳಲು ಕಾರಣವೇ ಇರುವುದಿಲ್ಲವು ಆದರೆ ನಾವು ನಮ್ಮ ಬಂಧುಗಳಾದ ಕೊಡಗರ ಜೊತೆಯಲ್ಲಿ ಬಡನಾಡುವುದರಿಂದ ಮೈಸೂರು ದೇಶದ ಕೆಲವು ಪದ್ಧತಿಗಳನ್ನು ಬಿಟ್ಟು ದೇಶಕ್ಕೆ ತಕ್ಕ ಪದ್ಧತಿಯನ್ನು ಅನುಸರಿಸಿರಬಹುದಾಗಿ ನಂಬುತ್ತೇನೆ ಹೀಗೆ ಅನುಸರಿಸಿದ ಪದ್ಧತಿಯೊಂದನ್ನು ಈ ಕೆಳಗೆ ತಿಳಿಸುತ್ತೇನೆ ನಾವು ಹೈಗೂರಿನ ನಿವಾಸಿಗಳಾದರೆ ನಾವು ಅಲ್ಲಿಯವರಂತೆ ನಮ್ಮ ಹೆಸರಿನ ಅಂತ್ಯದಲ್ಲಿ "ಗೌಡ" ಎಂಬ ಮತಸೂಚಕಶಬ್ದವನ್ನು ಇಟ್ಟುಕೊಳ್ಳಬೇಕಾಗಿತ್ತು. ಆದರೆ ಈ ದೇಶಕ್ಕೆ ಬಂದು ಅನೇಕ ವರ್ಷಗಳಿಂದಲೂ ಇಲ್ಲಿಯ ಸಹೋದರರೊಡನೆ ಬೆಳೆಯುತ್ತಿರುವುದರಿಂದ ಇಲ್ಲಿಯ ಜನಗಳಂತೆ ತಮ್ಮ ಹೆಸರಿನ ಅಂತ್ಯದಲ್ಲಿ ಏನೂ ಇಟ್ಟುಕೊಳ್ಳದೆ ಇರಬಹುದಾಗಿ ನಾನು ನಂಬುತ್ತೇನೆ. ಆದರೆ ಗೌಡವರ್ಗದ ಜನರೆಲ್ಲರೂ ತಮ್ಮ ತಮ್ಮ ನಾಮದ ಅಂತ್ಯದಲ್ಲಿ "ಗೌಡ" ಎಂಬ ಮತಸೂಚಕ ಶಬ್ದವನ್ನು ಇಟ್ಟುಕೊಳ್ಳದಿದ್ದರೆ ನಾವು ಕೋಭಿಸಲಾರೆವು ಹೈಗೂರಿನ ಗೌಡುಗಳ ಸಂಗಡಕ್ಕೆ ಸೇರಿದ ಮೈಸೂರು ದೇಶದ ಎಲ್ಲಾ ಗೌಡುಗಳೂ ತಮ್ಮ ತಮ್ಮ ಹೆಸರಿನ ಅಂತ್ಯದಲ್ಲಿ "ಗೌಡ" ಎಂಬ ಶಬ್ದವನ್ನು ಇಟ್ಟುಕೊಂಡಿಲ್ಲವೆ? ನಾವು ಗೌಡವರ್ಗಕ್ಕೆ ಸೇರಿದವರಾದುದರಿಂದಲೂ ಪೂರ್ವಪದ್ಧತಿಯೇ ಉತ್ತಮತರವಾದುದರಿಂದಲೂ ನಮ್ಮ ಪೂರ್ವಿಕರಾದ ಹೈಗೂರಿನ ಗೌಡುಗಳಂತೆ ತಮ್ಮ ತಮ್ಮ ನಾಮದ ಅಂತ್ಯದಲ್ಲಿ "ಗೌಡ" ಎಂಬ ಪದವನ್ನು ಬರೆಯುವಾಗಲೂ, ಹೆಸರು ಹೇಳುವಾಗಲೂ ಮಗುವಿಗೆ ನಾಮಕರಣಮಾಡುವಾಗಲೂ ಸೇರಿಸಿಕೊಳ್ಳಬೇಕಾಗಿ ಪ್ರಾರ್ಥಿಸುತ್ತೇನೆ

"ಗೌಡ" ಎಂಬ ಪದವನ್ನು ಹೆಸರಿನ ಅಂತ್ಯದಲ್ಲಿ ಸೇರಿಸಿದರೆ ಉಂಟಾಗುವ ಅವಮಾನವನ್ನೂ ವಿಶಾಸವೂ ತಿಳಿಯಂತು ಇದೇ ಪತ್ರಿಕೆಯಲ್ಲಿ ತಿಳಿಸಬೇಕಾಗಿ ಗೌಡ ಮಹಾಜನಗಳಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಅವಮಾನವಿಲ್ಲದಿದ್ದರೆ ಪ್ರತಿಯೊಬ್ಬ ಗೌಡನೂ ತನ್ನ ಹೆಸರಿನ ಅಂತ್ಯದಲ್ಲಿ "ಗೌಡ" ಎಂಬ ಮತಸೂಚಕಶಬ್ದವನ್ನು ಸೇರಿಸಿಕೊಳ್ಳಬೇಕಾಗಿ ನನ್ನ ವಿನಂತಿ

ಜೇಯುಂಡಿರ ಮುತ್ತಣ್ಣಗೌಡ.

NOTICE.

The National School Football Tournament, started last year, commences this year's tournament in April '24 All the Schools, Clubs and Public Gentlemen are requested to form teams and take part in the tournament Admission fee is Rs, 3/. and Tournament fee is Rs 5/ For the rules and other particulars please apply to the undersigned. The Captains of the intending teams are requested to send in their names before the 12th April '24

Abdul Majid Khan,
Secretary,
National School, AMMATHI.

WANTED.

Two Second-hand Motor Bicycles.

M M. SIDDEEK,
22—9 MERCARA.

ORIENTAL GOVERNMENT SECURITY LIFE ASSURANCE COMPANY, Ltd.

Head Office—BOMBAY.

ESTABLISHED IN 1874.	JUBILEE YEAR 1924
ASSETS EXCEED	Rs 6,00,00,000
ANNUAL INCOME OVER	Rs 1,00,00,000

R. C. Manjiah, Esq., Agent, Mercara.
K P. Chinnappa, Esq , M L C , Napoklu
B. P Ayapa, Esq., Virarajendrapet
M M. Belliappa, Esq , Mercara.

Wanted on liberal terms Agents capable of introducing new Policyholders Application to be made to —

The Branch Secretary,
Post Box No 56, BANGALORE.

[2—1]

ನೋಟಿಫಿಕೇಶನ್.

3/1 ದ ಬಟಾಲಿಯನ್ (ಕೊಡಗು) ಮದ್ರಾಸು ರೆಜಿಮೆಂಟ್ 1924 ನೇ ಇಸವಿ ಏಪ್ರಿಲ್ ತಾರೀಖು 18 ರಿಂದ ಮೇ ತಾರೀಖು 15 ರವರೆಗೆ (ಎರಡುದಿನವೂ ಸೇರುತ್ತೆ) ವರ್ಷಂಪ್ರತಿಯ ಕವಾಯತು ಹೊಂದಲಿಕ್ಕೆ ಜಮಾಯಿಸಲ್ಪಡುವುದು

1923ರಲ್ಲಿ ಕವಾಯತು ಹೊಂದಿದ ಎಲ್ಲಾ ದರ್ಜೆಯವರೂ ಮೇಲ್ಕಂಡ ಕವಾಯತಿಗೆ ಹಾಜರಾಗಬೇಕು ಅಲ್ಲದೆ 1924ನೇ ಇಸವಿ ಏಪ್ರಿಲ್ ತಾರೀಖು 18 ನೇ ದಿನ ಪ್ರಾತಃಕಾಲ 8 ಗಂಟೆಗೆ ಹೈಸ್ಕೂಲಿನಲ್ಲಿ ರಿಪೋರ್ಟು ಮಾಡಬೇಕು

ಯಾವಮನುಷ್ಯನು ಹಾಜರಾಗಲಿಕ್ಕೆ ತಪ್ಪುವನೋ ಅವನು ಮಿಲಿಟರಿ ಕಾಯಿದೆಮೇರೆ ಅಥವಾ ಕ್ರಿಮಿನಲ್ ಕೋರ್ಟಿನ ಮೂಲಕ ವಿಚಾರಣೆಗೆ ಗುರಿಮಾಡಲ್ಪಡುವನು.

(Sd) **C G M Plumer,**
Major,
Administrative Command,
1/4 3rd B Madras Regiment.

ಇಮಿಟೇಷನ್ ಸಿಲ್ಕಿನ ಅಸಲ್ ರಕಂ

ಕಂಚಿಯ ಸೀರೆಗಳು.

ಈ ಸೀರೆಗಳು 18 ಮೊಳ ಉದ್ದವೂ 3½ ಮೊಳ ಅಗಲವೂ ಇರುವವು ಉಡಲು ಹಗುರವಾಗಿಯೂ ನಯವಾಗಿಯೂ ಹೊಸ ನಮೂನೆಯಾಗಿಯೂ ಇರುವುದು ಕೆಂಪು ಕರಿ ಮತ್ತು ನೀಲದ ಬಣ್ಣಗಳಲ್ಲಿ ಇರುವವು ಗಟ್ಟಿ ಬಣ್ಣ, ಇವನ್ನು ಪ್ರತಿದಿನವೂ ಒಗೆದು ಉಡಲು ಚೆನ್ನಾಗಿರುವುದಲ್ಲದೆ ರೇಷ್ಮೆಯಂತೆ ಕಾಣಿಸುವುವು ಶ್ರೀಮಂತರೂ ಗರೀಬರೂ ಮತ್ತು ಪ್ರತಿಯೊಂದು ಜಾತಿಯವರೂ ಉಡಲು ಲಾಯಖಾದದ್ದು ಒಂದಿಷ್ಟು ತರಿಸಿನೋಡಿರಿ ಕ್ರಯ ನಂ. 1 6–4–0 ನಂ 2 7–8–0

ಟಿ ರಾಮಚಂದ್ರರಾವ್ ಅಂಡ್ ಕೋ,
ಜವಳಿ ವ್ಯಾಪಾರಿಗಳು,
16 ತಿರುಪಳ್ಳಿ ಬೀದಿ, ಮದ್ರಾಸು.

ರೋಲ್ಡ್‌ಗೋಲ್ಡ್ ಭಂಗಾರದ

ಬ್ರೇಸ್ ಲೆಟ್ ವಾಚ್.



ಈ ಹೊಸನಮೂನೆ ಗಡಿಯಾರಗಳು ಬಹು ಬಲಿಷ್ಠವಾದ ಲೀವರ್ ಸಾಮಾನುಗಳಿಂದ ಮಾಡಲ್ಪಟ್ಟಿದೆ. ನೋಡಲಿಕ್ಕೆ ಭಂಗಾರದ ಗಡಿಯಾರದ ಹಾಗೆ ಕಾಣುವುದು. ಚಕ್ಕೈಲು, ಕೈಯಲ್ಲು ಕಟ್ಟಿಕೊಳ್ಳಲು ಬಹು ಅಂದವಾಗಿರುತ್ತೆ ಇಂಗ್ಲೀಷ್ ನಮೂನೆ ಗಡಿಯಾರ, ಗ್ಯಾರಂಟಿ 3 ವರ್ಷಗಳು ಕೊಡಲ್ಪಡುತ್ತವೆ ಬ್ರೇಸ್‌ಲೆಟ್ ಸಹಿತವಾದ ಗಡಿಯಾರ 1ಕ್ಕೆ ಕ್ರಯ ರೂಪಾಯಿ 8–0–0

CITY WATCH Co , ಸಿಟಿ ವಾಚ್ ಕಂಪೆನಿ,
22 Tirupally Street, 22, ತಿರುಪಳ್ಳಿ ಬೀದಿ,
G T. MADRAS. ಮದ್ರಾಸು.

[4—1]

ಆರೋಗ್ಯ ಚಂದ್ರಿಕೆ.

ಇದು ಪ್ರಜಾಕ್ಷೇಮಕ್ಕಾಗಿ ಆರೋಗ್ಯಮಾರ್ಗವನ್ನೂ ಸುಚಿತ್ವವನ್ನೂ ಬೋಧಿಸುವ ಒಂದು ಮಾಸಪತ್ರಿಕೆ ಇದರ ಸಂಪಾದಕರು ಮದ್ರಾಸಿನಲ್ಲಿ ಪ್ರಸಿದ್ಧರಾದ ಡಾಕ್ಟರ್ ಯು ರಾಮರಾವ್, ಎಂ ಎಲ್ ಸಿ ಯವರು ಇದರಲ್ಲಿ ಅನೇಕ ಪ್ರಸಿದ್ಧ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರುಗಳ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವವು

ಟಪಾಲುಹಾಸಲು ಸೇರಿ ಈ ಪತ್ರಿಕೆಯ ವಾರ್ಷಿಕ ಚಂದ 1—8—0 ರೂ ಮಾತ್ರ ಬಿಡಿ ಪತ್ರಿಕೆ ಒಂದಕ್ಕೆ 0—2—0 ಆಣೆ

ಏಜೆಂಟರು :—	ವಿಳಾಸ —
ಮ॥ ರಾ॥ ರಾ॥ ಎಸ್. ಕೆ	ಮೇನೇಜರ್,
ಈ ಸ್ವ ರ ಪ್ಪ,	ಆರೋಗ್ಯಚಂದ್ರಿಕೆ ಆಫೀಸು,
ಭಾಗಮಂಡ್ಲ,	323 ತಂಬುಚೆಟ್ಟಿಬೀದಿ,
ಕೊಡಗು	ಮದ್ರಾಸು

[12—1]

ನೋಟೀಸು.

ಸಂಘದ ವಾರ್ಷಿಕ ಜನರಲ್ ಮೀಟಿಂಗ್ ಕಿಗ್ಗಟ್ಟು ನಾಡು ತಾಲೋಕು ಶ್ರೀಮಂಗಲನಾಡು ಹುದಿಕೇರಿಯಲ್ಲಿ ಮ॥ ರಾ॥ ರಾ॥ ಕೋದಂಡ ಉತ್ತಯ್ಯಲಾಯರ ಅಧ್ಯಕ್ಷತೆಯಲ್ಲಿ 1924 ನೇ ಇಸವಿ ಏಪ್ರಿಲ್ ತಾರೀಖು 19 ಮತ್ತು 20 ರಲ್ಲು ಮಧ್ಯಾಹ್ನ 1 ಘಂಟೆಗೆ ನಡೆಯುತ್ತೆ. ಊಟ ಉಪಚಾರಕ್ಕೆ ಕಿಗ್ಗಟ್ಟುನಾಡು ತಾಲೋಕಿನವರು ಏರ್ಪಾಡುಮಾಡುತ್ತಾರೆ ಚರ್ಚಿಸತಕ್ಕ ವಿಷಯಗಳನ್ನು ತಾರೀಖು 31—3—1924 ರವಳಗೆ ಜನರಲ್ ಸೆಕ್ರೆಟರಿ ಮ॥ ಸಿ. ಎನ್ ವೆಂಕಪ್ಪಯ್ಯನವರಿಗೆ ತಲಪುವಂತೆ ಕಳುಹಿಸಬೇಕೆಂತಲೂ, ಮೀಟಿಂಗಿಗೆ ಎಲ್ಲಾ ಮೆಂಬರುಗಳು ಹಾಜರಾಗಬೇಕೆಂತಲೂ ಕೋರುತ್ತೇನೆ

ಚಂದಾ ಮೊಬಲಗನ್ನು ಎರಡು ವರ್ಷಗಳಿಂದ ಪಾವತಿ ಮಾಡದೆ ಇರುವವರು ಸಂಘದ ಕಾರ್ಯಗಳಲ್ಲಿ ಭಾಗಗಳಾಗಕೂಡದು ಎಲ್ಲಾ ಮೆಂಬರುಗಳು ತಮ್ಮ ಬಾಕಿ ಚಂದಾ ಮೊಬಲಗನ್ನು ಕೂಡಲೇ ಪಾವತಿ ಮಾಡಬೇಕಾಗಿ ಕೋರುತ್ತೇನೆ

ಕೊಡಗು ಜಮೀನ್ದಾರರ ಸಂಘ, ಸಿ ಎನ್ ವೆಂಕಪ್ಪಯ್ಯ
ಮಡಿಕೇರಿ ತಾರೀಖು 21–2–24, ಜನರಲ್ ಸೆಕ್ರೆಟರಿ

[5—4]



[16—5]

Printed & Published by D S Krishnaswamiengar Proprietor, at Sreenivas Electric Press, Mysore ,, for Kodagu ' Ltd Mercara—28 3 1924

If not delivered please return to
"Kodagu Office, Mercara"
Reg. No. M. 1550.

ಕೊಡಗು.

ಸತ್ಯೇನ ಧೂತದಯಯಾ ವಿದ್ಯಾನೀತಿ ಪ್ರಯತ್ನತಃ । ಏಕಮತ್ಯೇನದೇಶಃಸು ಸುಸ್ಥಿರಾ ರಾಜ್ಯಸಂಪದ ॥

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು. " ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ

ಚಂದಾ ವ. ರೂ. ೩-೮-೦

ಸಂಪುಟ ೩] ಕೊಡಗು, ಸನ್ ೧೯೨೪ ನೇ ಇಸವಿ ಮಾರ್ಚಿ, ತಾರೀಖು ೭ ನೆಯ ಶುಕ್ರವಾರ. [ಸಂಚಿಕೆ ೪೭

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನಡಾ ಪ್ರಿಂಟಿಂಗ್ ರೂಲಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ಇದ್ದರೂ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ಅತಿ ಜಾಗ್ರತೆಯಾಗಿಯೂ ಸುಲಭಛಾರ್ಜಿನಲ್ಲಿ ಮಾಡಿ ಕೊಡುತ್ತೇವೆ.

Srinivas Electric Press,
MYSORE.

The Saraswathi Publishing Company
ಶಾರದಾಗ್ರಂಥಮಾಲಾ.

ಈ ಗ್ರಂಥಮಾಲೆಯಲ್ಲಿ ಭಾರತೀಯರಿಗೆ ಅವರ ಧರ್ಮಾಭ್ಯುದಯಗಳನ್ನು ಬೋಧಿಸತಕ್ಕ ಗ್ರಂಥಗಳು ಆಗಾಗ್ಗೆ ಪ್ರಕಟಿಸಲ್ಪಡುವವು. ಇದುವರೆಗೆ ಪ್ರಕಟವಾಗಿರುವ ಗ್ರಂಥಗಳು :—

	ರೂ.	ಅ.	ಪೈ.
ಪ್ರಿಯಂವದೆ (ವರದಕ್ಷಿಣೆಯಿಂದಾಗುವ ಕಷ್ಟ ನಷ್ಟಗಳು)	0	6	0
ಸ್ನೇಹಲತೆ (ಬಂಗಕನ್ಯೆಯ ಚರಿತ್ರೆ) ...	0	10	0
ನಿರ್ಭಾಗ್ಯವನಿತೆ (ಹಿಂದೂವಿಧವೆಯರ ಶೋಚನೀಯಾವಸ್ಥೆ)	0	12	0
ನಿರ್ಮಲೆ (ಸಾಮಾಜಿಕ ಸುಧಾರಣೆಯ ನಾಟಕ) ...	0	8	0
ಹಿಂದೂಭಾಗ್ಯೋದಯ (ನಾಟಕ)	0	4	0
ಕುರ್ಚಸಭಾಭಂಗ (ನಾಟಕ)	0	4	0
ಹುಡುಗರು ಹುಡುಗಿಯರು (ನಾಟಕ)	0	4	0

ಈ ಎಲ್ಲಾ ಕಾದಂಬರಿಗಳನ್ನೂ ಒಟ್ಟಾಗಿ ತರಿಸಿಕೊಳ್ಳುವವರಿಗೆ ಒಟ್ಟು ರೂಪಾಯಿ 2—12—0 ಗೆ ವಿ. ಪಿ. ಹಾಸಲು ಇಲ್ಲದೆ ಕೊಡಲ್ಪಡುವದು. ಪ್ರಿಂಟಸಲ್ಪಡತಕ್ಕ ಗ್ರಂಥಗಳು—ಲಲಿತ.ಲೋಕ ಕಥ್ಥ.

ಸರಸ್ವತಿ.

ಉತ್ತಮವರ್ಗದ ಶ್ರೇಷ್ಠವಾದ ಕನ್ನಡ ಮಾಸಪತ್ರಿಕೆ.

ನಾಲ್ಕನೆಯ ಸಂಪುಟದ ಪ್ರಥಮ ಸಂಚಿಕೆಯು ಈ ತಿಂಗಳ ಮೊದಲನೇ ತಾರೀಖಿನಿಂದ ಪ್ರಾರಂಭವಾಗಿರುವದು. ಇದರಲ್ಲಿ ಬಾಲಕ ಬಾಲಿಕೆಯರಿಗೂ ಸ್ತ್ರೀಯರಿಗೂ ತಿಳಿಯುವಂತಹ ಸುಲಭವಾದ ಕೃತಿಯಲ್ಲಿ ಸ್ವಾರಸ್ಯವಾದ ನಾಟಕ ಕಾದಂಬರಿಗಳೂ ಮತ್ತು ಅನೇಕ ಉತ್ತಮ ಲೇಖನಗಳೂ ಪ್ರಕಟಿಸಲ್ಪಡುವವು. ಹೊಸದಾಗಿ ಚಂದಾದಾರರಾಗತಕ್ಕವರು ಚಂದಾಹಣವನ್ನು ಮುಂಗಡವಾಗಿ ಕಳುಹಿಸಿದರೆ ಮೇಲ್ಕಂಡ ಶಾರದಾ ಗ್ರಂಥಮಾಲೆಯ ಪ್ರಕಟನೆಯಲ್ಲಿ ಒಂದು ಪುಸ್ತಕವು ಬಹುಮಾನವಾಗಿ ಕೊಡಲ್ಪಡುವದು ಇಷ್ಟಪಟ್ಟವರಿಗೆ ಮಾದರಿ ಸಂಚಿಕೆಯು ಉಚಿತವಾಗಿ ಕಳುಹಿಸಲ್ಪಡುವದು.

ವಾರ್ಷಿಕ ಚಂದಾ ರೂಪಾಯಿ 3—0—0 ಮಾತ್ರ.

SARASWATHI PUBLISHING CO.,
Post Box No. 57. Bangalore City

HEALTH IS WEALTH.

WANTED all to improve health strength and vitality and thus save our nation from physical degeneracy. Send half-anna stamp and get 13 specimen photographs with full particulars from

Director Physical Culture,
P O Basavanagudi,
BANGALORE CITY

For your requirements of high grade Arms, Ammunition, Wine and Spirits,

APPLY TO:-

Mc. DOWELL & Co., Ltd.,
24—21 **MERCARA.**

ಮಂಗ್‌ಎಕ್ ಇನಾಮ್‌ಕೊಡ್ ಪಂಚಾಯಿ ಉಳ್ಳ್ ಸಾಮಾನ್ ಸ್ಪೆನ್ಸರ್ ಕಂಪೆನಿಕ್ಕ್ ಪುದಿಸ್ಸದಾಯಿತ್ ಬಂದಿತ್.

SPENCER & Co, Ltd
Mercara and Pollibetta, Coorg
[24—21]

BUMPER CROPS

Always follow on application of our fertilisers

ದೊಡ್ಡ ಕಾಫಿ ಫಸಲು.

ಸಿಕ್ಕಬೇಕಾದರೆ ನಮ್ಮ ಕಾಫಿ ಪರ್ಟಿಲೈಸರುಗಳನ್ನು ಉಪಯೋಗಿಸಿರಿ

ನಮ್ಮ ಕಾರ್ಖಾನೆಯಲ್ಲಿ ಎಲ್ಲಾ ತರಹದ ಗೊಬ್ಬರ ಹೊಸ (fresh) ಗೊಬ್ಬರ ತಯಾರಾಗುತ್ತದೆ

Siddeek's Mannure Works
24- 10 MERCARA

ಜೀವವಿಮೆ.

ಸಾವಿರಾರು ಕುಟುಂಬಗಳಲ್ಲಿ ಸಂಪಾದನೆಯ ಯಜಮಾನನು ಮೃತಪಟ್ಟರೆ ಉಂಟಾಗುವುದಾದ ತೊಂದರೆಗಳನ್ನು ನಿವಾರಿಸುವುದೇ ಜೀವವಿಮೆ

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬದ ಜೀವನಾಧಾರಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ.

ಅತಿ ಕಡಮೆ ದರದಲ್ಲಿ ಯಾವ ಲೋಪವೂ ಬಾರದಂತೆ ಕ್ಲಿಪ್ತದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ಮೈಸೂರಿನ ಸರಕಾರದ ಭದ್ರತೆಯುಳ್ಳ ಜೀವವಿಮೆ ಕಂಪೆನಿ

ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ಸಾಲವಾಗಿ ಹಣವನ್ನು ಒದಗಿಸಿ ಸ್ಥಿರಾಸ್ತಿಗಳನ್ನೂ ಕೊಂಡು ಕಟ್ಟಿ ದೇಶದ ಆರ್ಥಿಕ ಸಂಪತ್ತನ್ನು (Economic Condition) ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೆ!

ಲೈಫ್ ಇನ್ಶೂರೆನ್ಸ್ ಆಕ್ಟಿನ ಮೇರೆ ಇಂಡಿಯಾ ಗವರ್ನಮೆಂಟ್ ಸೆಕ್ಯೂರಿಟಿಗಾಗಿ ಸಲ್ಲಬೇಕಾದ 12 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿಗೆ ಸಲ್ಲಬೇಕಾದ 1 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನ ಮದ್ರಾಸಿನ ಶಾಖೆಯಲ್ಲಿ 1 ಲಕ್ಷ ಗವರ್ನಮೆಂಟ್ ಆಫ್ ಇಂಡಿಯ ಸೆಕ್ಯೂರಿಟಿಯನ್ನು ಅರ್ಧಲಕ್ಷ ಮೈಸೂರು ಸೆಕ್ಯೂರಿಟಿಯನ್ನು ಡಿಪಾಜಿಟಾಗಿ ಇಟ್ಟಿರುತ್ತೆ. ಬಾಕಿ ಒಂದು ಲಕ್ಷ ಇಂಡಿಯಾ ಗವರ್ನಮೆಂಟ್ ಸೆಕ್ಯೂರಿಟಿಗೆ ಬ್ಯಾಂಕ್ ಮೂಲಕ ಏರ್ಪಾಡು ಮಾಡಿರುತ್ತೆ.

ಬಿ. ಎಸ್. ಅರಾಧ್ಯ,
ಲೈಫ್ ಅಂಡ್ ಪ್ರಾವಿಡೆಂಟ್ ಆಫೀಸ್ ಮಡಿಕೇರಿ

ಮಲೆಯಾಳ ವೈದ್ಯಶಾಲೆ

ಮಲಬಾರಿನ ನಂಬೀಶ್ ಮತ್ತು ಕಂಪೆನಿ ಎಂಬ ಆಯುರ್ವೇದ ವೈದ್ಯಶಾಲೆಯಲ್ಲಿ ಒಂದು ಶಾಖೆಯು ವೀರರಾಜೇಂದ್ರಪ್ಯಾಟೆಯಲ್ಲಿ ತೆರೆದಿರುತ್ತೆ. ಇಲ್ಲಿ ಯಾವವಿಧದ ಖಾಯಿಲೆಯಾಗಿದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧ ಕೊಟ್ಟು ಗುಣಪಡಿಸಲ್ಪಡುತ್ತೆ. ಔಷಧದ ಚಾರ್ಜು ಬಹಳ ಕಡಿಮೆ ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು.

ನಾರಾಯಣನಂಬೀಶ್,
ಆಯುರ್ವೇದ ವೈದ್ಯರು,
12—9 ವೀರರಾಜೇಂದ್ರಪ್ಯಾಟೆ.

ಪ್ರಕಟನೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

	ರೂ.
ಷೇರ್ ಬಂಡವಾಳ	50,000
ವಸೂಲಾದ ಷೇರ್ ಮೊಬಲಗು	6.820
ಜಮಾ ಬಂದ ಠೇವಣಾತಿ	47,990

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರುಷ ವಾಯಿದೆ ಅಥವಾ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 6—4—0ರ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದೊರೆಯುತ್ತೆ.

ಪರ್ಕೊಸ್ಕೊಂಡಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರರವರು ಲೆಕ್ಕ ಅಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು. ಟ್ರೆಜರ್.
ಕೊಡಂದೆರ ಕುಟ್ಟಯ್ಯನವರು, ಯಂ. ಭುಜಂಗರಾಯರು
ರಾಯ್ ಬಹದ್ದೂರ್ ಬಿ ಎ. ಬಿ. ಎಲ್

ಸೆಕ್ರೆಟರಿ.
ಸಿ. ಯಸ್. ವೆಂಕಪ್ಪಯ್ಯನವರು ಬಿ. ಎ. ಬಿ. ಎಲ್.
ತಾರೀಖು 22—2—1924.

" ಕೊಡಗು "

೧೯೨೪ ನೇ ಇಸವಿ ಮಾರ್ಚ ತಾ|| ೨೧ ನೇ ಶುಕ್ರವಾರ

ಗ್ರಾಮಾಭಿವೃದ್ಧಿ.

ಈ ಹೆಸರಿನ ಉಪನ್ಯಾಸವನ್ನು ಹಿಂದಿನ ಎರಡು ಸಂಚಿಕೆಗಳಲ್ಲಿ ಪ್ರಕಟಿಸಿದೆವು ಎಲ್ ಕೆ. ಎಲ್ಮ್‌ಹರ್‍ಸ್ಟ್ ಎಂಬವರು ರವೀಂದ್ರನಾಥ ಟಾಗೂರರ ವಿಶ್ವಭಾರತಿ ಎಂಬ ವಿಶ್ವವಿದ್ಯಾಲಯದಲ್ಲಿ ಕೃಷಿವಿಷಯ ಬೋಧಿಸುವವರಾಗಿದ್ದಾರೆ ರವೀಂದ್ರನಾಥರಿಗೆ ಮನಸ್ಸು ನೊಂದಂತೆಯೇ ಗ್ರಾಮಗಳ ಸ್ಥಿತಿಯನ್ನು 50 ವರ್ಷಗಳ ಹಿಂದಿನಿಂದ ಆಚಮೊಯಿಸಿ ನೋಡಿದರೆ ಯಾರಿಗೆ ತಾನೇ ನೋವಾಗದಿದ್ದು ದನಕರುಗಳು ಸಮೃದ್ಧಿ ಇದ್ದವು ಕೊಂಡುಕೊಳ್ಳಬೇಕಾದ ದವಸಗಳು, ಇತರ ಸಾಮಾನುಗಳು ಸಹ ಈಗಿನದಕ್ಕಿಂತ ಹತ್ತು ಪಾಲಾದರೂ ಜಾಸ್ತಿಯಾಗಿತ್ತು ಈಗಿನಂತೆ ವಿಧವಿಧದ ರೋಗಗಳ ಬಾಧೆಯಿರಲಿಲ್ಲ ಮಲೇರಿಯಾ ಜ್ವರವೊಂದು ದೇಶದಲ್ಲಿ ಇರಲೇ ಇಲ್ಲವೆಂತ ತೋರುತ್ತೆ ಜನರಿಗೆ ತೃಪ್ತಿ ಹೆಚ್ಚಾಗಿತ್ತು ಈಗಿನಂತೆ ದಿವಸದಿವಸ ಒದಗುವ ಜನರನ್ನು ವಿಷಮಸ್ಥಿತಿಗೆ ಇಳಿಸುವ ಕ್ಲೇಶಗಳು ಇರಲಿಲ್ಲ ಅನ್ಯೋನ್ಯ ಜಗಳವಿರಲಿಲ್ಲವೆಂತ ಹೇಳಿಕ್ಕಾಗ ವದಿಲ್ಲ ಆದರೆ ಸಿವಿಲ್ ಕೇಸುಗಳನ್ನು ಫೈಸಲ್ ಮಾಡುವ ಆಫೀಸರುಗಳು ನ್ಯಾಯವಿಚಾರದ ಕೆಲಸದಲ್ಲಿ ಗ್ರಾಮದ ಪಂಚಾಯ್ತಿಗಳನ್ನು ಸೇರಿಸಿಕೊಳ್ಳುತ್ತಿದ್ದರು ಪ್ರಜೆಗಳಿಗೆ ತೃಪ್ತಿಯಾಗುವ ನ್ಯಾಯವೂ ಸಿಕ್ಕುತ್ತಿತ್ತು ದೇಶದಲ್ಲಿ ಸತ್ಯತೆ ಹೆಚ್ಚಿತ್ತು ಜನರೊಳಗೆ ಲೇವದೇವಿ ನಡೆಯಬೇಕಾದರೂ ಇತರ ಒಪ್ಪಂದಗಳಾಗಬೇಕಾದರೂ ಲಿಖಾವಟ್ಟುಗಳು ಮಾಡಿಸುವ ಪದ್ಧತಿಯಾಗಲೀ, ರಿಜಿಸ್ಟರ್ ಮಾಡಿಸುವ ಪದ್ಧತಿಯಾಗಲೀ ಇಂತಿಲ್ಲ ಸೂರ್ಯಚಂದ್ರಸಾಕ್ಷಿಯಾಗಿಟ್ಟುಕೊಂಡು ಇತರ ಯಾವ ಸಾಕ್ಷಿಯುರಿಗೂ ತಿಳಿಯದಂತೆ ಒಪ್ಪಂದಗಳಾಗುತ್ತಿದ್ದವು ಜಾತಿಮತ್ಸರಗಳಿರಲಿಲ್ಲ ದೈವಭಕ್ತಿ ಜಾಸ್ತಿಯಾಗಿತ್ತು ಅವಿಭಕ್ತ ಕುಟುಂಬಗಳಲ್ಲದೆ ವಿಂಗಡವಾದ ಕುಟುಂಬಗಳೇ ಇರುತ್ತಿರಲಿಲ್ಲ ದೇಶದಲ್ಲಿ ಅವಶ್ಯವಿರುವ ಸಾಮಾನುಗಳೆಲ್ಲಾ ದೇಶದಲ್ಲೇ ಸಿಕ್ಕುತ್ತಿತ್ತು

ಈಗಿನ ಸ್ಥಿತಿಯನ್ನು ಯೋಚಿಸಿದರೆ ಹಿಂದೆ ಕಳೆದು ಹೋದ ಕಾಲವೇ ಉತ್ತಮವಾಗಿತ್ತೆಂತ ಅನ್ನಿಸುತ್ತೆ ಹೀಗೆ ತೋರುವದು ಮನುಷ್ಯಸ್ವಭಾವವೆಂತ ಕೆಲವರಿಗೆ ತೋರಬಹುದು ಈ ಸ್ವಭಾವವು ನಮ್ಮ ಮನಸ್ಸಿನ ತಗ್ಗುಸ್ಥಿತಿಗೆ ಕಾರಣವಿರಬಹುದು ಆದರೆ ಕೆಲವುಮಟ್ಟಿಗಾದರೂ ಈಗ ಅತೃಪ್ತಿ ಹೆಚ್ಚಾಗಿದೆಯೆಂಬದನ್ನು ಎಲ್ಲರೂ ಒಪ್ಪಬಹುದಾಗಿದೆ. ಆದರೆ ನವನಾಗರೀಕತೆಯೇ ಹೆಚ್ಚಿನ ಕಾರಣವೆನ್ನಬಹುದು ನವನಾಗರೀಕತೆಯಲ್ಲಿ ಹೊಸ ಅನುಕೂಲಗಳು ಅನೇಕ ಆಗಿವೆ ಟಪ್ಪಾಲುಪದ್ಧತಿ, ತಂತಿವರ್ತಮಾನ ರೈಲ್ ಪ್ರಯಾಣ ವಿದ್ಯುಚ್ಛಕ್ತಿ ಮೋಟರ್ ಗಾಡಿಗಳು ರಸ್ತೆಗಳು, ಸೇತುವೆಗಳು ವಿಧವಿಧದ ಬಟ್ಟೆಗಳೂ ಇವೆಲ್ಲಾ ಆ ರು. ವದೇನೋ ನಿಜ ಆದರೆ ಇವುಗಳಲ್ಲಿ ಗ್ರಾಮವಾಸಿಗಳಿಗೆ ಪ್ರಯೋಜನವಾಗುವ ಅಂಶಗಳು ಬಹಳ ಕಡಿಮೆ ಟಪ್ಪಾಲಿನಲ್ಲಿ ಕಾಗದ ಬರೆಯುವ ರೈತರು ಬಹಳ ಕಡಿಮೆ ಇರಬಹುದು ಕೊಟ್ಟ ಸಾಲ ವಸೂಲ್ ಮಾಡುವ ಲಾಯರುಗಳ ನೋಟೀಸ್ ಬರುವದರಿಂದ ಟಪ್ಪಾಲು ಪದ್ಧತಿ ಅನೇಕ ರೈತರಿಗೆ ಗೊತ್ತಾಗುತ್ತಷ್ಟೆ ಗ್ರಾಮವಾಸಿಗಳು ರೈಲ್‌ವೇಯಿಂದ ಪ್ರಯಾಣತೊಂದುವುದು ಬಹಳ ಕಡಿಮೆ ನಮ್ಮ ದೇಶದಲ್ಲಂತೂ ರೈಲನ್ನೂ ನೋಡಲೇ ಇಲ್ಲ ರೈಲ್ ಮೂಲಕ ಆಹಾರ ಸಾಮಾನುಗಳು ದೂರದೇಶಕ್ಕೆ ಹೋಗಿಬಿಡುವುದರಿಂದ ಬಡವನಿಗೆ ದೊರಕುತ್ತಿದ್ದ ಆಹಾರಧಾನ್ಯಗಳು ದೊರಕದೇ ಇರುವದರಿಂದ ರೈಲಿನ ಕಿರುಕುಳಗಳು ಅವನ ಗೋಚರಕ್ಕೆ ಬಂದಿದೆಯಷ್ಟೆ ಮೋಟಾರ್ ಗಾಡಿಗಳು ಬಂದದ್ದರಿಂದ ಅದರ ಧೂಳಿನಿಂದ ಮುಚ್ಚಲ್ಪಡುವದೇ ಹೊರತು ಬಡ ರೈತನಿಗೆ ಪ್ರಯೋಜನವಾಗಿದೆಯೋ ಹೊರತು ಪ್ರಯೋಜನವೇನೂ ಸಾಧಾರಣ ಗರೀಬ ಕೃಷಿಕನಿಗೆ ದೊರೆಯಲಿಲ್ಲ ವಿಧವಿಧ ಬಟ್ಟೆಗಳು ತಯಾರಾಗುವ ಯಂತ್ರಗಳು ಹುಟ್ಟಿ ಯಂತ್ರಗಳ ಮಾಲೀಕರಿಗೆ ಹಣವು ಇನ್ನಷ್ಟು ಹೆಚ್ಚಿತಷ್ಟೆ. ಗರೀಬನ ಬಡತನವೂ ಹೆಚ್ಚಿತ್ತೆ ಅನುಕೂಲವಾಗಿದೆಯಷ್ಟೆ ಸ್ವಾಂಪ್ರುಗಳು ಕೋರ್ಟುಖಚೇರಿಗಳು, ಲಾಯರುಗಳು ವಿಪರೀತವಾದ್ದರಿಂದ ರೈತರಲ್ಲಿ ವ್ಯಾಜ್ಯಪ್ರಿಯತೆಯು ಹೆಚ್ಚಿ ಸಂಪೂರ್ಣವಾಗಿ ಶ್ರಾಮಬಾಧೆಗೀನೇ ಗುರಿಯಾಗುತ್ತಿದ್ದಾರೆ ಒಟ್ಟು ಕುಟುಂಬಗಳು ಒಡೆದು ಒಬ್ಬೊಬ್ಬ ವ್ಯಕ್ತಿಗೆ ಒಂದೊಂದು ಕುಟುಂಬವಾಗಿ ವ್ಯಕ್ತಿಸ್ವಾತಂತ್ರ್ಯವೇನೋ ದೊರಕಿದೆ ಆದರೆ ಸಮುದಾಯಪ್ರಯತ್ನವೇ ಹೊರಟುಹೋಗಿದೆ ಮತದಲ್ಲಿ ಇದ್ದ ಮೂಢಭಕ್ತಿಯು ಹೊರಟುಹೋಗಿಬಿಟ್ಟಿದೆ ಸಕಾರಣ ಭಕ್ತಿ ಹುಟ್ಟಲೇ ಇಲ್ಲ ಯಾಕೆಂದರೆ ಈಗಿನ ನಾಗರೀಕತೆಯ ಸ್ವಭಾವವೇ ಐಹಿಕಭೋಗೇಚ್ಛೆಯನ್ನು ಹೆಚ್ಚಿಸುವದಾಗಿದೆ. ಪಾರಮಾರ್ಥದ ಕಡೆ ಯೋಚಿಸಿದರೆ ಇವರು ಜೀವನದ ಮೇಲಾಟದಲ್ಲಿ ಹಿಂದೆಯೇ ಬೀಳಬೇಕಾಗುತ್ತೆ ಈ ರೀತಿ ನಾಗರೀಕತೆಯ ಹಾವಳಿಗಳೆಲ್ಲಾ ಕೃಷಿಕ ಗ್ರಾಮಸ್ಥರನ್ನು ಬಿಕ್ಕಟ್ಟಿನಲ್ಲಿ ಇರುವಾಗ ಎಲ್ಮ್‌ಹರ್‍ಸ್ಟರು ಹೇಳುವಂತೆ ಹೊಸ ಕೌನ್ಸಿಲ್ ಬಂದದ್ದರಿಂದಾದ ಕೃಷಿಕನ ಕಷ್ಟಗಳೇನೂ ನಿವಾರಣೆಯಾಗುವದಿಲ್ಲ ಗ್ರಾಮವಾಸಿಯ ಕಷ್ಟನಿವಾರಣೆಯಾಗಿ ಪಾರಮಾರ್ಥಿಕ ಯೋಚನೆಯು ಹುಟ್ಟಬೇಕಾದರೆ ಗ್ರಾಮದ ಕೊರತೆಗಳನ್ನು ಗ್ರಾಮದಲ್ಲೇ ಗ್ರಾಮದವರೇ ತಿಳಿದುಕೊಂಡು ಪರಿಹರಿಸಿಕೊಳ್ಳಬೇಕಾಗಿದೆ ನಮ್ಮ ದೇಶಕ್ಕೆ ದೊರೆತಿರುವ ಕೌನ್ಸಿಲಿನಿಂದಾಗಲೀ ಇನ್ನೂ ಹೆಚ್ಚಿನ ಪವರ್ ಇರುವ ಕೌನ್ಸಿಲ್ ದೊರೆತರೂ ಗ್ರಾಮಕಷ್ಟವು ಕೌನ್ಸಿಲಿನಿಂದ ಪರಿಹಾರವಾದೀತೆಂತ ನಮಗೆ ಆಶೆ ಇಲ್ಲ ಗ್ರಾಮದ ಕಷ್ಟನಿವಾರಣೆಯಾಗಬೇಕಾದರೆ ಗ್ರಾಮದವರೇ ಎಚ್ಚರಗೊಳ್ಳಬೇಕಾಗಿದೆ. ಕೌನ್ಸಿಲುಗಳಲ್ಲಿ ಆಗುವ ಕೆಲಸ ಕೌನ್ಸಿಲಿನಿಂದ ಆಗಲೇಬೇಕು ಕೌನ್ಸಿಲ್ ಬೇಡವೇ ಬೇಡವೆಂತ ನಾವು ಹೇಳುವದಿಲ್ಲ ಕೌನ್ಸಿಲಿನಿಂದ ಪ್ರಯೋಜನವಾಗಬೇಕಾದರೂ, ಗ್ರಾಮವಾಸಿಗಳು ತಮ್ಮ ಹೀನಸ್ಥಿತಿಗೆ ಅವರನ್ನು ಎಚ್ಚರಗೊಳಿಸಿ ಅವರ ಸ್ಥಿತಿಯು ಅಭಿವೃದ್ಧಿಗೊಳ್ಳುವಂತೆ ಗ್ರಾಮದವರಿಗೆ ದಾರಿ ಹೇಳಿಕೊಟ್ಟರೆ ಮಾತ್ರ ಕೌನ್ಸಿಲಿನಿಂದ ಪ್ರಯೋಜನ ಸರಕಾರಿ ಉದ್ಯೋಗಸ್ಥರ ಸಂಬಳ ಹೆಚ್ಚಿಸಿದ್ದರಿಂದ, ಅಥವಾ ಲಾಯರುಗಳಿಗೆ ಫೀಸ ಹೆಚ್ಚಿಸಿದ್ದರಿಂದ ಕೆಲವರು ಅನುಕೂಲಸ್ಥರಾಗಬಹುದು ನಿಜವಾದ ಪ್ರಯೋಜನವಾಗಬೇಕಾದರೆ ಗ್ರಾಮದಲ್ಲಿ ಸ್ವರಾಜ್ಯಬುದ್ಧಿಯು ಬೆಳೆಯಬೇಕು ಈ ಕಾರ್ಯಕ್ಕೆ ಕೌನ್ಸಿಲ ಮೂಲಕ ಗ್ರಾಮಪಂಚಾಯತಿಗಳನ್ನು ಏರ್ಪಡಿಸಿ ಗ್ರಾಮದ ಆಡಳಿತವೆಲ್ಲಾ ಗ್ರಾಮದವರಿಂದಲೇ ಆಗುವಂತೆ ಮಾಡಿಕೊಟ್ಟರೆ ಸಾಕಾಗಿದೆ ಆದರೆ ಜನರ ಪ್ರತಿನಿಧಿಗಳೆನ್ನುವವರು ಕೌನ್ಸಿಲ್ ಮೆಂಬರುಗಳಾಗಲೀ ಇಲ್ಲದಿರಲಿ ತಮ್ಮ ದೇಶಸೇವೆಯ ಕೆಲಸವನ್ನು ಗ್ರಾಮದಲ್ಲಿ ಮಾಡಲಿಕ್ಕೆ ತುಂಬಾ ಅವಕಾಶವಿದೆ ಬೇಕಾದವ ಮನಸ್ಸು ಮಾಡಿ ಪ್ರತಿ ಗ್ರಾಮದಲ್ಲಿ ರೈತರೊಳಗೆ ಅನ್ಯೋನ್ಯ ಪ್ರೇಮ ಬೆಳೆದು, ಜಾತಿ, ಕಸಬು ತಾರತಮ್ಯವಿಲ್ಲದೆ ಗ್ರಾಮದ ಕೆಲಸವನ್ನೆಲ್ಲಾ ಒಗ್ಗಟ್ಟಿನಿಂದ ಮಾಡಲು ತೋರಿಸಿಕೊಡಬೇಕಾದದ್ದು ಮುಂದಾಳುಗಳ ಕೆಲಸವಾಗಿದೆ ಆದರೆ ಈ ಕೆಲಸಕ್ಕೆ ಹೊರಡುವವರಿಗೆ ಸ್ವಾರ್ಥತೆಯೇನೂ ಇರಬಾರದು ಗ್ರಾಮದ ರೈತರ ತೃಪ್ತಿಯೇ ತಮ್ಮ ಪ್ರತಿಫಲವೆಂತ ಯೋಚಿಸುವವರಾಗಬೇಕು

ನಾವು ಬರೆಯುವದೆಲ್ಲಾ ಅಸಾಧ್ಯಕೆಲಸ ಏನೋ ವಿಷಯವಿಲ್ಲದ್ದಕ್ಕೆ ಬರೆಯುವದು ಎಂತ ಯೋಚಿಸದೆ ಎಲ್ಮ್‌ಹರ್‍ಸ್ಟರ ಅನುಭವವನ್ನು ನಮ್ಮ ದೇಶದಲ್ಲೂ ಜಾರಿಗೆ ತಂದುಕೊಳ್ಳಬೇಕಾಗಿದೆ ಬಂಗಾಳದ ಗ್ರಾಮಗಳ ಸ್ಥಿತಿಗೂ ನಮ್ಮ ಗ್ರಾಮಗಳ ಸ್ಥಿತಿಗೂ ಸಾಧಾರಣ ಒಂದೇ ಆಗಿದೆ ಮಲೇರಿಯಾ, ಕಾಲರಾ ವ್ಯಾಧಿಗಳ ಕಾಟ ಅನ್ಯೋನ್ಯ ಅಪನಂಬಿಕೆ ಜನರು ಸೋಮಾರಿಗಳಾಗಿ ಇಳಿಯುದಿರ ಎಕೆ ಇವೇ ಮುಂತಾದವು ಗ್ರಾಮದ ಕಷ್ಟಗಳಿಗೆ ಸೇರಿದವೇ ಆಗಿವೆ ನಮ್ಮ ದೇಶದಲ್ಲಿ ಬಂಗಾಳದಂತೆ ದನಗಳ ಹೀನಸ್ಥಿತಿ ಎಂಬವೇ ಇನ್ನೂ ಅನೇಕ ಸೇರಿಕೊಂಡಿವೆ ಸಾಲಗಾರರಾಗಿ ಸಾಹುಕಾರರ ಬಾಧೆಗೆ ಈಡಾಗುತ್ತಿದ್ದ ರೈತರು ಈಗ ಸಹಕಾರಸಂಘಗಳಿಂದ ಬಹುಮಟ್ಟಿಗೆ ಪ್ರಯೋಜನ ಹೊಂದಿದ್ದಾರೆ ಆದರೆ ಸಹಕಾರತತ್ವಗಳು ಇನ್ನೂ ರೈತರಿಗೆ ಸಾಟಿಯಾಗಿಲ್ಲ ಸಹಕಾರತತ್ವಗಳನ್ನು ಬೋಧಿಸುವದು ಸಹಕಾರದ ಇಲಾಖೆಯ ಕೆಲಸವೆಂದು ಬಡವೆ ವಿಶ್ವಭಾರತಿ ಸಾಧಕರು ಹೇಳುವನೀತಿ ಗ್ರಾಮದ ಆಡಳಿತವು ಲಾಭ ಪ್ರಕಾರ ಇವರನ್ನು ವಿಂಗಡಿಸಿಕೊಂಡರೆ ಸಾಧ್ಯವಿಲ್ಲ ಪ್ರೈಮರಿ ಶಾಲೆಗಳು ಪಂಚಾಯಿತರು, ಸಿಕ್ಷಾನಿಷೇಧಕ ಕಮಿಟಿ ಮೆಂಬರುಗಳು ನಮ್ಮ ಸಹಕಾರಿ ಮೆಂಬರುಗಳೂ ಆಗಿ ಜನರ ಸಂಘದ ಕಮಿಟಿ ಮೆಂಬರುಗಳೂ ಸಹಕಾರ ಕಮಿಟಿ ಮೆಂಬರುಗಳೂ ಇನ್ನೂ ಆರೋಗ್ಯ ಕಮಿಟಿಗಳು ಇವೆಯೋ ಯಾರ ಇನು ಮೇಲೆ ವಿಷಾದವಾಗುತ್ತಿವೆಯೋ ಅವೆಲ್ಲಾ ಅನ್ಯೋನ್ಯ ಸಹಾಯಕರಾಗಿ ಕೆಲಸಮಾಡಿದರೆ ಬಹಳ ಪ್ರಯೋಜನಮಾಡಿಕೊಳ್ಳಬಹುದು ಜವಿನಾಸುದಾರರ ಸಂಘದ ಪ್ರಚಾರಕರು ಮೆ ವಿದ್ಯಾಂಗ ಕಾರ್ಯಸ್ಥರ ವರು ಏರ್ಪಾಡುಮಾಡುತ್ತಿರುವ ಕಮಿಟಿಗಳು ಗ್ರಾಮಗಳಲ್ಲಿ ಕೆಲಸಗಳನ್ನೂ ಕೈಕೊಳ್ಳಬಹುದು ಅಂದರೆ ಸಹಕಾರಿಸಂಘಗಳ ಕಮಿಟಿಗಳನ್ನ ಪ್ರೋತ್ಸಾಹಿಸಿ ಅವರೇ ಕಮಿಟಿಗಳಾಗಬೇಕೆಂತಲ್ಲ ಈ ಕಮಿಟಿಯವರು ಸಂಘದ ಚಂದಾ ವಸೂಲ್ ಮಾಡುವದೇ ಮಾತ್ರ ಅಥವಾ ಸಂಘದ ವಾರ್ಷಿಕ ಸಭೆಗೆ ಬರಾವು ಕಳುಹಿಸುವದು ಮಾತ್ರ ತಮ್ಮ ಕರ್ತವ್ಯವೆಂತ ಯೋಚಿಸದೆ ಗ್ರಾಮದಲ್ಲಿ ನಡೆಸುವ ನಡೆಯಬೇಕಾದ ಸಮಸ್ತ ಕಾರ್ಯಗಳನ್ನೂ ತಮ್ಮ ಮೇಲೆ ವಹಿಸಿಕೊಂಡು ಮುಂದುವರಿಸಬೇಕಾಗಿದೆ ಇವರು ಆಗಿಂದಾಗ್ಗೆ ಸಭೆಸೇರುತ್ತಾ ತಮಗೆ ಬೇಕಾದ ಸಹಾಯಗಳನ್ನು ಸರಕಾರದಿಂದ ಪಡೆದುಕೊಳ್ಳಬಹುದು. ಇಂಥಾ ಸಮುದಾಯದ ಕೋರಿಕೆಗಳನ್ನು ನಮ್ಮ ಸರಕಾರದವರು ಗಣ್ಯಕ್ಕೆ ತಾರದೆ ಇರಲು ಸಾಧ್ಯವಿಲ್ಲ ಆದರಲ್ಲೂ ನಮ್ಮ ಈಗಿನ ಕಮಿಷನರು ತುಂಬಾ ದಯಾಳು ಆಗಿರುವಂತೆ ತಿಳಿಯಬರುವದರಿಂದ ಇವರಿಂದ ಸರ್ವಸಹಾಯವೂ ದೊರಕಬಹುದು ಗ್ರಾಮದಲ್ಲಿ ಜಳವಳ-ಜೀವಕಳೆ-ಇಲ್ಲದಿದ್ದರೆ ಕೌನ್ಸಿಲ್ ಮೆಂಬರುಗಳು ಹೆಚ್ಚಿಗೆ ಪ್ರಯೋಜನವನ್ನು ಪಡೆಯಲು ಸಾಧ್ಯವಾಗಲಾರರು.

ನಮ್ಮ ದೈನ್ಯದ ಕೋರಿಕೆಯೇನೆಂದರೆ ವಿದ್ಯಾವಂತ ಯುವಕರೂ, ಧನಿಕ ಗ್ರಾಮಸ್ಥರೂ ಸಹ ತಮ್ಮ ಸ್ವಂತ ಕಾರ್ಯದಲ್ಲೇ ಮಗ್ನರಾಗಿರದೆ ವಾರಕ್ಕೆ ಒಂದು ದಿನವಾದರೂ ಒಟ್ಟು ಗ್ರಾಮದ ವಿಷಯ ಕಲೆತು ಮಾಡಲು ನಿಶ್ಚಯಿಸಿಕೊಳ್ಳಬೇಕು ಸಹಕಾರಿಸಂಘಗಳು 1904 ರಲ್ಲಿ ಪ್ರಾರಂಭವಾದಾಗ ಇವುಗಳ ಆಡಳಿತವನ್ನು ಸಾಹುಕಾರರ ಮೂಲಕ ನಡಿಸುತ್ತಿದ್ದರು. ಈಗ ಸಂಘಗಳ ಸಮಸ್ತ ಕಾರ್ಯವೂ ಗ್ರಾಮದವರಿಂದಲೇ ನಡೆಯುತ್ತಿಲ್ಲವೇ? ಈ ಗ್ರಾಮದವರೇ ಈ ಸಂಘಗಳ ಮೇಲ್ವಿಚಾರಕರ ಸಂಬಳ ಸಹ ಕೊಟ್ಟು ಇಟ್ಟುಕೊಂಡಿರುವದಿಲ್ಲವೇ ಆದ್ದರಿಂದು ಗ್ರಾಮದ ಎಲ್ಲಾ ಆಡಳಿತಗಳನ್ನು ನಡಿಸುವ ಕಮಿಟಿಗಳ ಕರ್ತವ್ಯ ಏರ್ಪಾಡಾಗಲು ಸಾಧ್ಯವಿದೆ ಆದರೆ ಈ ಕೆಲಸಕ್ಕೆ ಗ್ರಾಮಾಭಿವೃದ್ಧಿ ಗಾರರಿಂದಲೂ ಸುದೇದಾರರುಗಳಿಂದಲೂ, ಪೊಲೀಸ ಸಬ್ ಇನ್ಸ್‌ಪೆಕ್ಟರುಗಳಿಂದಲೂ ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರಿಂದಲೂ ಸಹಾಯ ಬೇಕಾಗಿದೆ ನಮ್ಮ ಕಮಿಷನರ್ ಸಾಹೇಬರು ನಿಜವಾಗಿ ಪ್ರಜೆಗಳ ಹಿತಚಿಂತಕರಾದವರೆಂದು ನಮಗೆ ನಂಬಿಕೆ ಇದೆ ಇವರು ಕಲೆ ಎಲ್ಲಾ ಎಗ್ಸಿಕ್ಯೂಟಿವ್ ಆಫೀಸರುಗಳೂ ಗ್ರಾಮಾಭಿವೃದ್ಧಿ ಕಾರ್ಯದಲ್ಲಿ ಗ್ರಾಮವಾಸಿಗಳಿಗೆ ಸಹಾಯಮಾಡಬೇಕೆಂತ ಸರ್ಕ್ಯುಲರ್ ಹೊರಡಿಸಿದರೆ ಇವರ ಹೆಸರು ನಮ್ಮ ದೇಶದಲ್ಲಿ ಚಿರಕಾಲ ಶಾಶ್ವತವಾಗಿರುವುದು ಈಗ ಆಫೀಸರುಗಳವರೇ ಲೆ ರೈತರಿಗೆ ತುಂಬಾ ಅಸಮಾಧಿಕೆ ಇದೆ ಇದು ಯಾವ ಕಾರಣದಿಂದ ಎಂದರೆ—ಆಫೀಸರುಗಳು ಮಾತ್ರ ರೂಲ್ಸ್‌ಗಳಿಗೆ ಸರಿಯಾಗಿ ನಡೆಕೊಂಡು ಯಂತ್ರದಂತೆ ಕೆಲಸ ಮಾಡುತ್ತಾರೆಯೇ ಹೊರತು ಪ್ರಜೆಗಳ ಕ್ಷೇಮವನ್ನು ವಿಚಾರಿಸುವದೂ ಇಲ್ಲ ವಿಚಾರಿಸಲಿಕ್ಕೆ ಸಮಯವೂ ಇಲ್ಲ ಎರಡೂ ಇದ್ದ ವಿಚಾರಿಸಿದರೆ ಮೇಲಧಿಕಾರಿಗಳ ಆಕ್ಷೇಪಕ್ಕೆ ಗುರಿಯಾಗುತ್ತಾರೆ ಗ್ರಾಮವಾಸಿಗಳ ಕ್ಷೇಮವನ್ನು ವಿಚಾರಿಸಿ ಅವರಿಗೆ ಸಹಾಯಕೊಡಬೇಕೆಂತ ಕಮಿಷನರ್ ಸಾಹೇಬರ ಹುಕ್ಕುಂ ಆದರೆ ಗ್ರಾಮದವರು ಆಫೀಸರುಗಳ ಸಂಬಂಧದಲ್ಲಿ ಏನೂ ಸಂಶಯವಿಲ್ಲ ಸ್ವಲ್ಪಕಾಲದಲ್ಲಿ ಗ್ರಾಮಗಳವರು ಸಹಾಯವಿಲ್ಲದೆ ತಮ್ಮ ಕೆಲಸಗಳನ್ನು ನಡೆಸಲು ಕಲಿತುಕೊಳ್ಳುತ್ತಾರೆ ಜಗಲೀ ಸ್ವರಾಜ್ಯ ಸ್ಥಾಪನೆಯಾದೀತೆಂತ ನಾವು ಹೇಳಿಯೇವು

ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಪಂಡಿತ ಮೋತಿಲಾಲ್ ನೆಹರೂ ಎಂ ಏ ಮೆಂಬರ ಭಾಷಣದ ಸಾರಾಂಶ.

ನನ್ನ ಆಕ್ಷೇಪವು ಸರಕಾರದ ಈ ಇಲಾಖೆ ಅಥವಾ ಆ ಇಲಾಖೆಯಮೇಲೆ ಅಲ್ಲ ಆದರೆ ಒಟ್ಟು ಆಡಳಿತದ ಮೇಲೆಯೇ ನನ್ನ ಆಕ್ಷೇಪವಾಗಿದೆ ಪ್ರಜೆಗಳಿಗೆ ಜವಾಬ್ದಾರಿಯಾಗಿರುವ ಸರಕಾರವನ್ನು ಸ್ಥಾಪಿಸುವ ವಿಷಯದ ಠರಾವು ಈ ಸಭೆಯಲ್ಲಿ ಬಹುಮತದಿಂದ ಪಾಸಾದರೂ ಸಹ ಇಂಡಿಯಾ ಸರಕಾರವೂ ಮತ್ತು ಇಂಗ್ಲೀಷ ಸರಕಾರವೂ ಸಹ ಈ ವಿಷಯಕ್ಕೆ ಮನಸ್ಸು ಕೊಡದೆ ಇರುವುದೇ ಅತೃಪ್ತಿಗೆ ಕಾರಣವಾಗಿದೆ ಈಗ ನಾವು ಹಿಡಿದಿರುವ ದಾರಿಯು ಅಸಹಕಾರವು, ಜನಸಾಧಾರಣೆಯನ್ನು ಹಾಳುಮಾಡುವ ದಾರಿಯಲ್ಲವೆಂಬದನ್ನ ಸರಕಾರದ ಪಕ್ಷದವರಲ್ಲಿ ಬಹಳ ಹೆದರಿಕೊಂಡವರಿಗೆ ತಿಳಿಸಬೇಕಾಗಿದೆ ಈ ದಾರಿಯು ಸರಕಾರದ ಗೋಚರಕ್ಕೆ ನಮ್ಮ ಕಷ್ಟಗಳನ್ನು ತಿಳಿಸಲಿಕ್ಕೆ ಇರುವ ಬಹಳ ಸುಲಭವಾದ ದಾರಿಯಾಗಿದೆ. ಬೇರೆ ದಾರಿಗಳಿಂದ ಪ್ರಯೋಜನವಾಗದೆ ಇರುವಾಗ ಈ ದಾರಿಯನ್ನು ಹಿಡಿಯಬೇಕಾಯಿತು ಸರಕಾರದ ಖರ್ಚುಗಳಿಗೆ ಈ ಸಭೆಯ ಒಪ್ಪಿಗೆ ಇದ್ದಿದ್ದರೂ ವೈಸ್‌ರಾಯರು ತಮ್ಮ ಸರ್ಟಿಫೈ ಮಾಡುವ ಶಕ್ತಿಯಿಂದ ಈ ಖರ್ಚುಗಳನ್ನೆಲ್ಲಾ ಮಂಜೂರ ಮಾಡುತ್ತಾರಾದರೂ ನಾವು ತಲೆಹಾಕಿಕೊಳ್ಳುವದರಿಂದ ಪ್ರಯೋಜನವಿಲ್ಲವೆಂಬದೂ ನನಗೆ ಗೊತ್ತಿದೆ ಆದರೆ ಪ್ರಜೆಗಳ ಕಷ್ಟವನ್ನು ಬೇರೆ ದಾರಿ ಇಲ್ಲದೆಹೋಗಿದೆ ಪ್ರಜೆಗಳ ಕಟ್ಟುನಿಟ್ಟಾಗಿ ಮಾಡಿದವಿನಹ ಸರಕಾರದ ಖರ್ಚಿಗೆ ಹಣ ದೊರೆಯುವದಿಲ್ಲವೆಂಬ ತತ್ವವು ಪಾಶ್ಚಾತ್ಯ ದೇಶಗಳಲ್ಲಿ ಒಪ್ಪಿಕೊಂಡಿರುವ ರೀತಿಯಾಗಿದೆ ಎಂಬದಕ್ಕೆ ಆಧಾರಗಳನ್ನು ಕೊಟ್ಟರು. ಆದರ ಇಂಗ್ಲೆಂಡಿನಲ್ಲಿ ಮಾತ್ರ 1784 ನೇ ಇಸ್ವಿಯಿಂದ ಈಚೆಗೆ ಈ ತತ್ವವನ್ನು ಜಾರಿಗೆ ತರಲಿಲ್ಲ ಯಾಕೆಂದರೆ ಅಲ್ಲಿ ಪ್ರಜೆಗಳ ಇಚ್ಛೆಗೆ ವಿರೋಧವಾಗಿ ನಡೆಯಲು ಯಾವ ಸರಕಾರಕ್ಕೂ ಸಾಧ್ಯವೇ ಇಲ್ಲ ಸ್ವತಂತ್ರಜನರಿಗೂ, ಸರ್ವಸ್ವತಂತ್ರರಾಜನ ಪ್ರಜೆಗಳಾದ ನಮಗೂ ವ್ಯತ್ಯಾಸವಿದೆ ಸ್ವತಂತ್ರಪ್ರಜೆಗಳು ಸರಕಾರದ ಖರ್ಚುಗಳಿಗೆ ವಿರೋಧಿಸಿದರೆ ಸರಕಾರವೇ ನಿಂತುಹೋಗುತ್ತೆ ಸರ್ವಸ್ವತಂತ್ರರಾಜನ ಪ್ರಜೆಗಳು ಎಷ್ಟೇ ತಲೆ ಬಡಿದುಕೊಂಡರೂ ಸರಕಾರವು ನಡೆದೇ ನಡೆಯುತ್ತೆ ಸರಕಾರದ ಖರ್ಚಿಗೆ ವಿರೋಧಿಸುವದು ಎಂಬ ಆಯುಧವು ಇಂಗ್ಲೆಂಡಿನಲ್ಲಿ ಮಣ್ಣುಹಿಡಿದು ಮೂಲೆಯಲ್ಲಿ ಬಿದ್ದಿದೆ ನಮ್ಮ ದೇಶದಲ್ಲಿ ಈ ಆಯುಧವನ್ನು ಹೊಸದಾಗಿ ತಯಾರಿಸಬೇಕಾಗಿದೆ ಎಸೆಂಬ್ಲಿಯು ಬಜೆಟ್ಟಿನಮೇಲೆ ತನ್ನ ಸ್ವತಂತ್ರ ಜಡ್ಜ್‌ಮೆಂಟನ್ನು ಕೊಡಲು ಸಾಧ್ಯವಿಲ್ಲ. ಯಾಕೆಂದರೆ ಯಾವ ಖರ್ಚಿಗೇ ಆಗಲೀ ಆಕ್ಷೇಪಿಸಿ ವಜಾಮಾಡಿಸಿದರೂ ಸಹ ಸರ್ಟಿಫಿಕೇಟ್ ಶಕ್ತಿಯಿಂದ ಅದನ್ನು ಮಂಜೂರುಮಾಡಿಕೊಳ್ಳುವ ಹಕ್ಕು ಸರಕಾರದಲ್ಲಿ ಇದೆ ಸಿಪಾಯಿಗಳೆಂದು ಆಡುವ ವಕ್ಕಳಹಾಗೆ, ಕೌನ್ಸಿಲ್ ಮೆಂಬರುಗಳ ಸ್ಥಿತಿಯಾಗಿದೆ ಪಾರ್ಲಿಮೆಂಟಿನ ಸದ್ಗುಣವೆಲ್ಲಾ ಇವೆ. ಆದರೆ ಅದರ ಶಕ್ತಿ ಇಲ್ಲ ಒಲಿವಿಯರ್ ಪ್ರಭುಗಳ ಭಾಷಣದಿಂದ ಬೇಕಾದ

...ತವೆಲ್ಲಾ ಭಂಗವಾಗಿದೆ. ನಾವು ಸಮಾನಹಕ್ಕಿಲ್ಲದ ...ಗಳಲ್ಲಿ ಕೆಲಸಮಾಡಲು ಒಪ್ಪುವದಿಲ್ಲ ರೂಲ್ಸ್‌ಗ ...ಪ್ಪುಟಲ್ಲೇ ಒದಗಾಯಿಸುವ ಸಂಭವವಿದೆಯೆಂಬ ... ಕೇಳಲಿಲ್ಲ ರೂಲ್ಸ್‌ಗಳನ್ನು ಒದಗಾಯಿಸಿ ನಿಮಗೆ ... ಸ್ವಲ್ಪ ಹೆಚ್ಚಿಗೆ ಹಕ್ಕು ಕೊಡಲು ಸಾಧ್ಯವಿದೆಯೋ ...ದಾಗಿ ಯೋಚಿಸುತ್ತೇವೆಂತ ಮಾತ್ರ ಹೇಳಿದರು ಈ ...ಗಳಿಂದ ದೇಶದ ಆಶೆಯೆಲ್ಲಾ ನಿರಾಶೆಯಾಗಿದೆ

ಸ್ವರಾಜ್ಯವಾರ್ತೆಯ ವಿಜ್ಞಾಪನಾಪತ್ರದಲ್ಲಿ ಬರೆದ ಮಾ...ನ್ನು ಓಲಿವಿಯರ್ ಪ್ರಭುಗಳು ಎತ್ತಿ ಮಾತಾಡಿದರು ... ಸ್ವರಾಜ್ಯವಾರ್ತೆಯ ಪತ್ರದಲ್ಲಿ ಇರುವ ಆಕ್ಷೇಪಗಳೇ ...ವರೇಟ್ ವಾರ್ತೆಯವರ ಪತ್ರದಲ್ಲೂ ಇತ್ತು. ಹಿಂದೀ...ಗೆ ನೋವನ್ನುಂಟುಮಾಡಿದ ಕಾರಣಗಳನ್ನೇನೋ ಎತ್ತಿ...ದರು ಆದರೆ ಆ ನೋವನ್ನು ಕೊಡುವ ಘಾಯಗಳ...ನ್ನು ಅವರು ನೋಡಲಿಲ್ಲರು ಒಸರಬ್ ಡ್ಯಯರ್, ...ಕ್ಕಿಸಬಿ: " ತನ್ನಾ, ಉಪ್ಪಿನಸುಂಕ ಮುಂತ ದ ವಿಷ...ಯೇಳಿ ಧೈರ್ಯದಿಂದಲೂ ಹಿಂದೀಯರಿಗೆ ನಂಬಿಗ...ವಂತೆಯೂ ಆಡಿದರು ಮಹಾತ್ಮಾ ಗಾಂಧಿಯವ... ಡಾಕ್ಟರುಗಳ ಅಪೇಕ್ಷೆ ಮೇರೆ ಬಿಟ್ಟದ್ದೆಂತ ಇಂಡಿಯಾ ...ರವು ಹೇಳಿ ಆ ಬಿಡುಗಡೆಯ ಕಾರ್ಯದ ಗೌರವವ ...ಕಮೆಮಾಡಿಕೊಂಡಿದ್ದರು. ಓಲಿವಿಯರ್ ಪ್ರಭುಗಳು ...ಕಾರ್ಯಕ್ಕೆ ಪುನಃ ಗೌರವ ತಂದರು ಅವರ ಭಾಷಣ ... ರೌಲಟ್ ಆಕ್ಟ್, ಅಸಹಕಾರಿಗಳ ಮೇಲೆ ದಬ್ಬಾಳಿಕ...ಕಾದ ಅನೇಕ ಸಂಗತಿಗಳನ್ನು ಸೂಚಿಸಲಿಲ್ಲ 1905ನೇ ...ಯಲ್ಲೇ ಹಿಂದೀಯರು ಅಸಹಕಾರ ಮಾಡಬೇಕಾದೀ... ಗೋಖಲೆಯವರು ಹೇಳಿದ್ದಾರೆ. ಪ್ರಭುಗಳು ದೋಷ...ಲ್ಲಾ ಒಪ್ಪಿದರು ಅವನ್ನು ಹೋಗಲಾಡಿಸಲಿಕ್ಕೆ ಒಪ್ಪ...ಲ್ಲ ರಕ್ತ ಸೋರಿಹೋಗುತ್ತಿರುವವನನ್ನು ಡಾಕ್ಟರು ...ಡಿ ರಕ್ತಸೋರುವದರಿಂದ ಜೀವಕ್ಕೆ ಅಪಾಯವಿದೆ, ...ದೆ ಈಗಲೇ ರಕ್ತವನ್ನು ನಿಲ್ಲಿಸಲು ನನಗೆ ಸಮಯವಿಲ್ಲ ...ತ ಹೇಳುವ ಡಾಕ್ಟರ ನಡತೆಯಂತೆ ಇವರ ಕೆಲಸವಾ... ಬ್ರಿಟಿಷರು ಬಹಳ ಮನೋನಿಶ್ಚಯವಿರುವ ಜನರು ...ತ ಮೊಂಟೆಗ್ಯೂ ಸಾಹೇಬರು ಹೇಳಿದ ಮಾತನ್ನು ಈ ...ಭುಗಳು ಪುನಃ ಹೇಳಲಿಲ್ಲ ಮನೋನಿಶ್ಚಯವು ಬ್ರಿಟಿ...ಸ್ವಂತ ಹಕ್ಕಿನದು ಮಾತ್ರವಲ್ಲ ಈ ಗುಣವು ಬೇರೆ ...ರ ಹಕ್ಕನ್ನು ಅವರಿಗೆ ಕೊಡದೆ ಇರುವವರಿಗಿಂತಲೂ ... ಹಕ್ಕನ್ನು ಪಡಕೊಳ್ಳಲು ಪ್ರಯತ್ನಿಸುವ ಜನರಲ್ಲಿ ಈ ...ಣವು ಹೆಚ್ಚಾಗಿ ಇರುತ್ತೆ. ಓಲೀವಿಯರ್ ಪ್ರಭುಗಳು ...ಡಿಯಾ ಸರಕಾರಕ್ಕೆ ಹೊಸ ಸುಧಾರಣೆಯೆಂಬ ಸಮು...ದ್ರಯಾಣಕ್ಕೆ ಯೋಗ್ಯವಾದ ಹಡಗನ್ನು ಕೊಟ್ಟಿದ್ದೇವೆ ...ತ ಹೇಳಿದರು. ಇದಕ್ಕೆ ನನ್ನ ಜವಾಬೇನೆಂದರೆ ಹಡಗ... ನೋ ಸಮುದ್ರಪ್ರಯಾಣಕ್ಕೆ ಅರ್ಹವಾಗಿಯೇ ಇದೆ. ...ರೆ ಹಿಂದುಸ್ಥಾನದ ಜನರೆಲ್ಲರೂ ಸಮುದ್ರದ ಆಚೆ ದಾಟ... ಬೇಕಾದಷ್ಟು ದೊಡ್ಡದಾಗಿಲ್ಲ ಎಂತ ನನ್ನ ಜವಾ...ಗಿದೆ

...ಕೆದ ತಾರೀಖು ೭ ರಲ್ಲು ಸ್ವಾಗತಮಂಡ...ಳಿಯ ಅಧ್ಯಕ್ಷರನ್ನು ಮತ್ತು ಕಮಿಟಿಯ...ವರನ್ನು ಚುನಾಯಿಸಿದ ಮೀಟಿಂಗಿನ ಪ್ರೊಸೀಡಿಂಗ್ಸ್.

...ಪಾದಕರೇ,

ಈದಿನ ಪೊನ್ನಂಪೇಟೆ ಪೀನ್‌ಕ್ಲಬ್ಬಿನಲ್ಲಿ ಸಾಧಾರಣ ...ಜನರು ಸೇರಿದು ಮ|| ರಾ|| ಮನೆಯಪಂಡ ಮೇದಪ್ಪನ...ರ ಅಧ್ಯಕ್ಷತೆಯಲ್ಲಿ ಮೀಟಿಂಗು ನಡಿಸಲಾಯಿತು ಈ ...ವರ್ಷದ ವಾರ್ಷಿಕ ಜನರಲ್ ಮೀಟಿಂಗಿನ ಸ್ವಾಗತ ಮಂಡಳಿ...ಯ ಅಧ್ಯಕ್ಷರನ್ನಾಗಿ ಮ|| ಚೆಪ್ಪುಡೀರ ಯ ಪೊನ್ನಪ್ಪನವ...ನ್ನೆ ಸರ್ವಸಮ್ಮತದಿಂದ ಚುನಾಯಿಸಲಾಯಿತು. ಮತ್ತು ...ಕೆಳಗೆ ಕಂಡ ಸ್ವಾಗತಕಮಿಟಿಯವನ್ನು ಸಹ ಚುನಾಯಿ...ಲಾಯಿತು

ಬೆಟ್ಟತ್ತುನಾಡು.

...ಹೂರು

ಮನೆಯಪಂಡ ಬಿದ್ದಪ್ಪನವರು

ಬುವಡೀರ ಬೋಪೈಯ್ಯನವರು

...ವದಾ.

ಕೊಡಂದೇರ ಕರುಂಬೈಯ್ಯನವರು

...ವತೊಕ್ಕಲು.

ಕಾಡ್ಯಾಮಂಡ ಮಾಚೈಯ್ಯನವರು

ಗಿರಿಗೌಡರ ನಂಜಪ್ಪನವರು

...ಗುಟಗೇರಿ

ಮನೆಯಪಂಡ ಮುತ್ತಣ್ಣನವರು

...ಗಟ್ಟು.

ಅಜ್ಜಿಯಂಡ್ರ ಸುಬ್ಬಮ್ಮಯ್ಯನವರು

...ವಡೀರ ಮಾದಪ್ಪನವರು

...ಹೂಡು.

ಪೋರೆಯಂಡ್ರ ಸುಬ್ಬೈಯ್ಯನವರು

ಬ್ರಾಹ್ಮಣರ ರಂಗಯ್ಯನವರು

...ಗೇರಿ ಕೊಂಗಣ.

...ಜೇನಮಾಡ ಸೋಮೈಯ್ಯನವರು

ಚೆಂಬ್ಲೇಪಂಡ ಬಿ ಕುಟ್ಟಪ್ಪನವರು

ಕುಟ್ಟಂದಿ

ಕೂರ್ಲೇರ ಚಂಗಪ್ಪನವರು

ಬಾನಂಡ್ರ ನಂಜಮ್ಮನವರು

ಹಾತೂರು

ಕೊಕ್ಕಂಡ ನಂಜಪ್ಪನವರು

ಒಕ್ಕಲಿಗರ ಕಾಳಪ್ಪನವರು

ಕೈಕೇರಿ

ಜಮ್ಮಾಡ ತಿಮ್ಮಯ್ಯನವರು

ಹೆಬ್ಬಾಲೆ ಮತ್ತು ಆತೂರು

ಕಂಜಿತಂಡ ಕುಶಾಲಪ್ಪನವರು

ನೊಕ್ಯ

ಬಲ್ಯಂಡ ಅಪ್ಪಣ್ಣಪ್ಪನವರು

ಮನೆಯಪಂಡ ಗಣಪತಿಯವರು

ಮಾಯಮುಂಡಿ

ಐಚಟ್ಟೀರ ಮುದ್ದಪ್ಪನವರು

ಬಲ್ಯಂಡ ಅಪ್ಪಣ್ಣನವರು

ಬಾಳೆಲೆ

ಚೆರಿಯಪಂಡ ನಂಜಪ್ಪನವರು

ದೇವಣಗೇರಿ

ಚೆಪ್ಪುಡೀರ ಪೊನ್ನಪ್ಪನವರು

ರುದ್ರಬೀಡು

ಚೆಪ್ಪುಡೀರ ಮುತ್ತಣ್ಣನವರು

ಹತ್ತುಗಟ್ಟುನಾಡು.

ದೇವರಪುರ

ಆದೇಂಗಡ ಪೂವೈಯ್ಯನವರು

ಅಡ್ಡೇಂಗಡ ಕಾರ್ಯಪ್ಪನವರು

ಬಾಳಲೆ

ಕಳ್ಳಿಚಂಡ್ರ ದೇವೈಯ್ಯನವರು

ಕೊಟ್ಟಂಗಡ ದೇವೈಯ್ಯನವರು

ನಿಟ್ಟೂರು

ಪೋರಂಗಡ ಅಪ್ಪಚ್ಚನವರು

ಮಲಚೀರ ಬೆಳ್ಳಪ್ಪನವರು

ಕಾನೂರು ನಿಡುಗುಂಬ

ಚೆರಿಯಪಂಡ ಅಪ್ಪಚ್ಚಯ್ಯನವರು

ಚೊಟ್ಟೇಕಮಾಡ ಪೊನ್ನಚ್ಚನವರು

ಕೊಟ್ಟಗೇರಿ

ಮಾಪಂಗಡ ಕರುಂಬೈಯ್ಯನವರು

ಬೆಸಗೂರು

ಪಾರುಪಂಗಡ ಚಂಗಪ್ಪನವರು

ಬಾಚಮಾಡ ದೇವೈಯ್ಯನವರು

ಚೆಕ್ಕೆ ನೊಕ್ಲೂರು

ಜುಳ್ಳಮಾಡ ಕುಶಾಲಪ್ಪನವರು

ಪೋರಂಗಡ ಸೋಮೈಯ್ಯನವರು

ಕಿರುಗೂರು

ಕೊಕ್ಕೇಂಗಡ ಕುಟ್ಟಪ್ಪನವರು

ಚೆಪ್ಪುಡೀರ ಬೆಟ್ಟಪ್ಪನವರು

ಕೋಟೂರು

ಕೊಳ್ಳಿಮಾಡ ಸುಬ್ಬೈಯ್ಯನವರು

ಮತ್ತೂರು

ಆಲೆಮಾಡ ಕಾರ್ಯಪ್ಪನವರು

ಅಟ್ಟಮಾಡ ಐಯ್ಯಪ್ಪನವರು

ನಲ್ಲೂರು

ಪುಚ್ಚಿಮಾಡ ಅಪ್ಪೈಯ್ಯನವರು

ಪೊನ್ನಂಪೇಟೆ

ಪುಚ್ಚಿಮಾಡ ಪೂವೈಯ್ಯನವರು

ಅಂಜಿಗೇರಿನಾಡು.

ಬಲ್ಯಮುಂಡೂರು

ಚೇಯಂಡ ತಿಮ್ಮಯ್ಯನವರು

ಮಾಚಿಮಾಡ ಕಾರ್ಯಪ್ಪನವರು

ಕೊಟ್ಟಂಗಡ ಐಯ್ಯಣ್ಣನವರು

ಕಡಮಕೇರಿ

ಪೆಮ್ಮಂಡ ಮುಂದೈಯ್ಯನವರು

ಚಂಡೀರಮಾಡ ಜೋಳೈಯ್ಯನವರು

ವೆಳ್ಳಾಳರ ಮುತ್ತುಸಾಮಿಪಿಳ್ಳೆಯವರು

ಚಿಕ್ಕಮುಂಡೂರು

ಕಳ್ಳಿಚಂಡ್ರ ಮುದ್ದೈಯ್ಯನವರು

ಅಜ್ಜನಾಯಕಂಡ ಸೋಮೈಯ್ಯನವರು

ನಡಿಕೇರಿ

ಕೊಳೇರ ಚಂಗಪ್ಪನವರು

ಮುಗ್ಗಗೇರಿ

ಆಲೆಮಾಡ ಪೊನ್ನಪ್ಪನವರು

ಕಳ್ಳಿಚಂಡ ಮುದ್ದೈಯ್ಯನವರು

ದೇಗೂರು

ಚೇಂದೀರ ತಿಮ್ಮೈಯ್ಯನವರು

ಚೋಡುಮಾಡ ಬಿದ್ದಪ್ಪನವರು

ಚೇನಿವಾಡ

ಮುತ್ತಿರಂಡ ಚಂಗಪ್ಪನವರು

ಕಾಣಿಮಾಡ ಗಣಪ್ಪತಿಯವರು

ಕುರಿಕೇರಿ

ತೀತೀರ ದೇವೈಯ್ಯನವರು

ಕ್ರಿಯಂಡ ಸುಬ್ಬೈಯ್ಯನವರು

ಬಯನಂಡ್ರ ನಂಜಪ್ಪನವರು

ಹೈಸೊಡ್ಲೂರು

ಬಯವಂಡ ಪೊನ್ನಪ್ಪನವರು

ಚೊಟ್ಟೀರ ಚೆಣ್ಣಪ್ಪನವರು

ಕೋಣಗೇರಿ

ಅಜ್ಜಿಕುಟ್ಟೀರ ಬೆಳ್ಳಪ್ಪನವರು

ಚಕ್ಕೇರ ಅ|| ಪೆಮ್ಮಯ್ಯನವರು

ಮರೆನಾಡು

ಪರಕಟಕೇರಿ

ಕಾಳಿಮಾಡ ಕರುಂಬೈಯ್ಯನವರು

ಕಂಪ್ಪಣಮಾಡ ಸೋಮೈಯ್ಯನವರು

ಬಡವಾಣಿ

ನೆಲ್ಲೀರ ಮಾಚೈಯ್ಯನವರು

ಕತಾರ್ಮಾಡ ಕುಶಾಲಪ್ಪನವರು

ಬಡಗರಕೇರಿ

ಕಾಯಪಂಡ ಮುದ್ದಪ್ಪನವರು

ಮಲ್ಲೇಂಗಡ ಚೊಂದಪ್ಪನವರು

ತೆರಾಲು

ಕೇಕೇರ ಅಂಗೈಯ್ಯನವರು

ಚೆಪ್ಪುಡೀರ ಚಂಗಪ್ಪನವರು

ಪೊರಾಡು

ಕಾಯಪಂಡ ಮಾಚೈಯ್ಯನವರು

ಅಂಣೇರ ಬಿದ್ದೈಯ್ಯನವರು

ಕಾಪ್ಪಗೇರಿ ಮೂರ್ನಾಡು

ಬೇಗೂರು

ಚಾಚರಣಿಯಂಡ ಸುಬ್ಬೈಯ್ಯನವರು

ಇಟ್ಟೀರ ಪಿ ನಂಜಪ್ಪನವರು

ಹರಿಹರ

ಮುಕ್ಕಾಟೀರ ಸುಬ್ಬೈಯ್ಯನವರು

ತೀತೀರ ಬೋಪೈಯ್ಯನವರು

ನಾಲ್ಕೇರಿ

ಚಪ್ಪುಡೀರ ಕಾರ್ಯಪ್ಪನವರು

ಅಲ್ಲಮಾಡ ಮುತ್ತಣ್ಣನವರು

ಕೋಕೇರಿ

ಕೊಡಂದೇರ ಮೇದಪ್ಪನವರು

ಚೆಪ್ಪುಡೀರ ಸುಬ್ಬೈಯ್ಯನವರು

ಬಾಡಗ ಕುಮಟೂರು

ಬೆಳ್ಳೇರ ಬೆಳ್ಯಪ್ಪನವರು

ಕೋಳೇರ ಕರುಂಬೈಯ್ಯನವರು

ಕಳ್ಳಂಗಡ ಚಂಗಪ್ಪನವರು

ಕೈಲಾತುಟ್ಟಿ ಮಂಚಳ್ಳಿ

ತೀತೀರ ಸುಬ್ಬೈಯ್ಯನವರು

ಮಣ್ಯಮಾಡ ಕುಟ್ಟಪ್ಪನವರು

ಮಲ್ಲಂಗಡ ಕುಟ್ಟಪ್ಪನವರು

ಕುರ್ಚಿ

ಅಜ್ಜಮಾಡ ಮಾದಪ್ಪನವರು

ಕೈಯಿಬಲೀರ ತಿಮ್ಮೈಯ್ಯನವರು

ಬೀರುಗ

ಅಜ್ಜಮಾಡ ಕಾರ್ಯಪ್ಪನವರು

ಅಯ್ಯಮಾಡ ಸುಬ್ಬೈಯ್ಯನವರು

E ನೆಮ್ಮಲೆ

ಚಟ್ಟಂಗಡ ಕಾರ್ಯಪ್ಪನವರು

W ನೆಮ್ಮಲೆ

ಕುಂಜಾಂಗಡ ಕಾರ್ಯಪ್ಪನವರು

ತಾವಳಗೇರಿ

ಕಾಡಿಯಂಗಡ ಮೊಣಪ್ಪನವರು

ಕೈಯಿಬಲೀರ ಕಾರ್ಯಪ್ಪನವರು

ಅಂಡಮಾಡ ಕರುಂಬೈಯ್ಯನವರು

ಸೆಟ್ಟಿಗೇರಿ

ಚಟ್ಟಂಡ ಬೆಳ್ಯಪ್ಪನವರು

ಕೋಟ್ರಮಾಡ ಕುಶಾಲಪ್ಪನವರು

ಕಮಿಟಿ ಚುನಾಯಿಸಿದ ನಂತರ ಮ|| ರಾ|| ಮನೆಯಪಂಡ ನಾಚಪ್ಪನವರ ಹತ್ತಿರ ಡಿಪಾಜಿಟ್ಟು ಇರುವ 400-2-0 ಚಿಲ್ಲರೆ ರೂಪಾಯಿಗಳನ್ನು ಈ ವರ್ಷದ ವಾರ್ಷಿಕ ಸಭೆಗೆ ಖರ್ಚುಮಾಡಬಹುದೆಂಬದಾಗಿಯೂ, ಮ|| ರಾ|| ನಾಚಪ್ಪನವರು ಮೇಲ್ಕಂಡ ರೂಪಾಯಿಗಳನ್ನು ಇದೇ ಮಾರ್ಚಿ ತಾರೀಖು 20 ನೇ ಗುರುವಾರ ದಿವಸ ಮಧ್ಯಾಹ್ನ 1 ಗಂಟೆಗೆ ಪೊನ್ನಂಪೇಟೆಯಲ್ಲಿ ಸ್ವಾಗತ ಕಮಿಟಿಯ ಅಧ್ಯಕ್ಷರ ಮುಂದೆ ಹಾಜರ್‌ಪಡಿಸುವದಾಗಿ ತೀರ್ಮಾನವಾಯಿತು ಮ|| ರಾ|| ನಾಚಪ್ಪನವರು ಇದರ ಲೆಕ್ಕವನ್ನು ಸಹ ದಿವಸ ಹಾಜರು ಪಡಿಸಲಿಕ್ಕೆ ಒಪ್ಪಿಕೊಂಡಿರುತ್ತಾರೆ

ಸನ್ 1923 ನೇ ಇಸವಿಯ ವಾರ್ಷಿಕ ಸಭೆಗೆ ವೀರರಾಜೇಂದ್ರಪೇಟೆಗೆ ನಮ್ಮ ತಾಲೋಕಿನಿಂದ ಖರ್ಚಿಗೆ ಕೊಟ್ಟ ರೂಪಾಯಿಗಳನ್ನು ವಾಪಾಸು... ಕಳೆದ ವರುಷದ ಸ್ವಾಗತ ಕಮಿಟಿಯ ಅಧ್ಯಕ್ಷರು ಮ|| ರಾ|| ...

ಕೋರವರಿಗೆ ಈ ವರ್ಷದ ಅಧ್ಯಕ್ಷರು ಮ|| ರಾ|| ಚೆಪ್ಪುಡೀರ ಎ ಪೊನ್ನಪ್ಪನವರು ಒಲೆಕ್ಟ್ ಆಗಿ ತೀರ್ಮಾನವಾಯಿತು.

ತಾರೀಖು 20-3 24 ನೇ ಗುರುವಾರದಿವಸ 1 ಸ್ಟ್ಯಾಗ ಕಮಿಟಿಯವರ ಮೀಟಿಂಗನ್ನು ಪೋಸ್ಟ್‌ಪಾನ್ ಮಾಡಿರುವುದು ಇಟ್ಟಿದೆ ಸದರಿ ಮೀಟಿಂಗಿನಲ್ಲಿ ಬಜೆಟ್ಟ ಲಗನ್ನು ಪಾಸ್ಮಾಗೆ ವಿಲೆಮಾಡಬೇಕೆಂದಾಗಿ ತೀರ್ಮಾನಕ್ಕೆ ಇಟ್ಟಿದೆ

M Medappa,
Chairman

ವರ್ತಮಾನ ಸಂಗ್ರಹ

ಒಳದೇಶ

ಚೀಫ್ ಕಮಿಷನರಾಗಿದ್ದ ಮಿ|| ಜಾರ್ಡೈನರವರು ಕೆಲವು ತಿಂಗಳ ರಜೆಯಲ್ಲಿ ಇಂಗ್ಲೆಂಡಿಗೆ ಕಳೆದ ತಿಂಗಳು ಹೊರಟುಹೋಗಿರುವರು. ಅವರ ಬದಲು ಹಜ ನಿಜಾಂ ಮೈಸೂರಿನ ಪೊಲಿಟಿಕಲ್ ಏಜೆಂಟರಾಗಿದ್ದ ಮಿ|| ವಾಟರ್‌ರವರು ಚೀಫ ಕಮಿಷನರಾಗಿ ನೇಮಿಸಲ್ಪಟ್ಟಿರುವರು. ಇವರು ಈ ತಾ|| 14 ರಲ್ಲು ಬೆಂಗಳೂರಿಗೆ ಬಂದಿರುವರು. ಇವರು ಬರುವರೆಗೆ ಸೆಕ್ರೆಟರಿಯಾಗಿದ್ದ ಮಿ|| ಕೇಲಿ ರವರು ಚೀಫ್ ಕಮಿಷನರವರ ಹುದ್ದೆಯನ್ನು ಒದಗಿಸಿಕೊಡುತ್ತಿದ್ದರು.

ಹೊಸ ಚೀಫ ಕಮಿಷನರವರು ಬರುವುದು ತಡವಾಗಿ ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಬಜೆಟ್ಟು ಮೀಟಿಂಗು ಮಾರ್ಚಿ ತಾರೀಕು 22ರಲ್ಲಿ ಪ್ರಾರಂಭವಾಗುವುದರ ಬದಲು ತಾ|| 24ರಲ್ಲು ಪ್ರಾರಂಭವಾಗುವಂತೆ ತೀರ್ಮಾನಿಸಿರುವರು.

ವೀರಾಜಪೇಟೆ ಮುನಸೀಫರಾಗಿದ್ದ ಮೆ|| ಸಿ ಎನ್ ಮುತ್ತಣ್ಣ ಬಿ.ಎ ಎಲ್.ಟಿ ಯವರಿಗೆ 1923 ನೇ ಮಾರ್ಚ 1 ರಿಂದ ಅರ್ಧ ಸಂಬಳದಲ್ಲಿ ಒಂದು ವರ್ಷ ರಜೆ ಕೊಡಲ್ಪಟ್ಟಿತ್ತು. ಆ ರಜೆಯನ್ನು ಈಗ ಪುನಃ ಒಂದು ವರ್ಷ ಹೆಚ್ಚಿಸಿರುವರು.

ಹಕ್ಕುಗಟ್ಟುನಾಡು ಬಾಳೆಲೆಗ್ರಾಮದ ಪಲ್ಲಂಗ ಲೇಟ ಬಿ ಮುತ್ತಪ್ಪನವರ ಮನೆಗೆ ಕಳೆದವಾರ ಕಾಡುಬೆಂಕಿ ಬಿದ್ದು ಪೂರ್ತಿ ದಹಿಸಲ್ಪಟ್ಟದಲ್ಲದೆ ಸಮೀಪದ ಕಣದಲ್ಲಿದ್ದ ಸುಮಾರು ಹುಲ್ಲುಮುಂತಾದ ಸಗ್ಯರೆ ಪೂರಾ ಸುಡಲ್ಪಟ್ಟಿತು. ಸುಮಾರು 810 ರೂಪಾಯಿ ವರೆಗೆ ನಷ್ಟವಾಗಿರಬಹುದೆಂದು ಅಂದಾಜಂತೆ. ಈ ವರ್ಷ ಕಾಡ್ಗಿಚ್ಚಿನಿಂದ ಅನೇಕ ಕಡೆ ನಷ್ಟವುಂಟಾಗಿದೆಯೆಂದು ವರ್ತಮಾನ.

ಕಳೆದ ತಾರೀಖು 15 ನೇ ದಿನ ಮಧ್ಯಾಹ್ನ 12 ಗಂಟೆ ಸಮಯಕ್ಕೆ ಮಡಿಕೇರಿ ನಾಡು ಕರ್ಣಂಗೇರಿ ಗ್ರಾಮದ ಕನ್ನಂಡ ಅಯ್ಯಣ್ಣನವರ ಮನೆಗೆ ಕಾಡುಬೆಂಕಿಬಿದ್ದು ಉರಿಯುತ್ತಿರುವ ವೇಳೆಯಲ್ಲಿ ಮನೆಯವರು ಬೊಬ್ಬೆ ಇಡುವದನ್ನು ಬೋರ್ಡಿಂಗ್ ಹುಡುಗರು ಕೇಳಿ ಓಡಿಹೋಗಿ ಬೆಂಕಿಯನ್ನು ಕೆಡಿಸಿ ಒಳಗಿರುವ ಸಾಮಾನುಗಳನೆಲ್ಲಾ ತೆಗೆದು ಹೊರಗೆ ಇಟ್ಟಿದ್ದಲ್ಲದೆ ಸದರಿ ಮನೆಯ ಪಕ್ಕದಲ್ಲಿರುವ ಚೇರಂಡ ಮೆ|| ಅಚ್ಚಯ್ಯನವರ ಕಾಫಿ ತೋಟಕ್ಕೆ ಬೆಂಕಿ ಹಿಡಿಯುವುದನ್ನು ಸಹ ಕೆಡಿಸಿದರು.

ಕಳೆದ ತಾರೀಕು 12 ರಿಂದ ಟೆರಿಟೋರಿಯಲ್ ಪಟಾಲಮಿನ 16 ಬ್ಯುಗ್ಲರ್ಸ್‌ಗಳು, 12 ಸಿಗ್ನಲರ್‌ಗಳು ಮತ್ತು ಅವರಿಗೆ ಕಲಿಸತಕ್ಕಂಥ ಕ್ರಮವಾಗಿ ಬ್ಯುಗ್ಲರ್ ಮತ್ತು ಸಿಗ್ನಲಿಂಗ ಹವಾಲ್ದಾರರು ಸಹ ಬಂದು ಬ್ಯಾರೆಕ್ಸನಲ್ಲಿ ಬ್ಯುಗ್ಲಿಂಗ್ ಮತ್ತು ಸಿಗ್ನಲಿಂಗ್ ಕಲಿಸುತ್ತ ಇದ್ದಾರೆ. ಬ್ಯಾರೆಕ್ಸನಲ್ಲಿ ಖಾಯಂ ಇದ್ದಂಥಾ ಟ್ರೇನಿಂಗ್ ಪೊಲೀಸಿನವರು ಕೋಟೆಯ ಹತ್ತಿರ ಒಂದು ತಿಂಗಳ ವರೆಗೆ ಇರುವ ಏರ್ಪಾಡು ಮಾಡಿರುತ್ತಾರೆ.

ಟೆರಿಟೋರಿಯಲ್ ಪಟಾಲಮಿನಲ್ಲಿ ಕಳೆದ ವರ್ಷ ಕ್ವಾರ್ಟರ್ ಮಾಸ್ಟರ್ ಹವಾಲ್ದಾರರಾಗಿದ್ದ ಮಿ|| ಕೋದಂಡ ನಾಣೈಯ್ಯನವರು ಈಗ ಅಸಿಸ್ಟೆಂಟ್ ಕ್ವಾರ್ಟರ್ ಮಾಸ್ಟರಾಗಿಯೂ, ಮಿ|| ಮಾಚಿಮಂಡ ದೇವಯ್ಯನವರು ಮೆ|| ಕಾಂಡ್ಯಂಡ ತಿಮ್ಮಯ್ಯನವರು ಮತ್ತು ಮೆ|| ನಾಳೇರಂಡ ಪೊನ್ನಪ್ಪನವರು ಸಹ ಪ್ಲಟೂನ ಕಮೇಂಡರಾಗಿಯೂ ನೇಮಕಮಾಡಲ್ಪಟ್ಟಿರುತ್ತಾರೆ.

ಮಡಿಕೇರಿ ಕಾಲೇಜ ತೋಟದಲ್ಲು ಕಳೆದ ತಾರೀಕು 13 ನೇ ದಿನ **ಹೂವು** ಕಾಯಿಪಲ್ಯ, ತರಕಾರಿ ಸಾಯಿತೋಟ ಎಗ್ಸೈಟಿಗಳ ಪ್ರದರ್ಶನವು ನಡೆದು ಸಾಯಂಕಾಲ ೫|| ಗಂಟೆಗೆ ಮಿಸೆಸ್ ಟಾಸ್ಕರವರು ಇನಾಮುಗಳನ್ನು **ಹಂಚಿದರು.**

ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗು ಇದೇ ತಾರೀಖು 18 ರಲ್ಲು ನಡೆಯಿತು.

"ಟೆರಿಟೋರಿಯಲ್ ಪಟಾಲಮಿನಲ್ಲಿ ಕಂಪೆನಿ ಸುಬೇದಾರರಾಗಿದ್ದ ಮೆ|| ಮುಕ್ಕಾಟಿರ ಉತ್ತಯ್ಯನವರು ಮತ್ತು ಮೆ|| ಸಿರಿಗೆಡಿರ ಪೊನ್ನಪ್ಪನವರು ತಮ್ಮ ಉದ್ಯೋಗಕ್ಕೆ ರಾಜೀನಾಮೆ ಕೊಟ್ಟದ್ದರಿಂದ ಇವರ ಬದಲಿಗೆ ಕಳೆದ ವರ್ಷ ಪ್ಲಟೂನ ಕಮೇಂಡರಾಗಿದ್ದ ಮೆ|| ನಡಿಕೇರಿಯಂಡ ಕಾರ್ಯಪ್ಪನವರನ್ನು ಮತ್ತು ಮೆ|| ಚೆಪ್ಪುಡೀರ ಕೆ ಪೊನ್ನಯ್ಯನವರನ್ನು ನೇಮಿಸುವರೆಂದು ವರ್ತಮಾನ."

ಕೊಡಗು ಕಂಪೆನಿಯ ಡೈರೆಕ್ಟರುಗಳ ಮೀಟಿಂಗ್ ಇದೇ ತಾರೀಖು 18 ನೇ ದಿನ ಸಾಯಂಕಾಲ ೪|| ಗಂಟೆಗೆ ಕೊಡಗು ಆಫೀಸಿನಲ್ಲು ನಡೆಯಿತು.

ಟೆರಿಟೋರಿಯಲ್ ಪಟಾಲಮಿನ ಹೊಸ ರಿಕ್ರೂಟ್‌ ಮತ್ತು ಆಫೀಸರ್‌ಗಳ ಟ್ರೈನಿಂಗ್ ಇದೇ ತಾರೀಖು 21 ರಿಂದ ಶುರುವಾಗುವುದು.

ಟೆರಿಟೋರಿಯಲ್ ಪಟಾಲಮಿನ ಕಳೆದ ವರ್ಷದ ಶಿಪಾಯಿಗಳು ಮತ್ತು ನಾನ್ ಕಮಿಷನ್ಡ ಆಫೀಸರುಗಳಿಗೂ ಬರುವ ಏಪ್ರಿಲ್ ತಾರೀಖು 18 ರಿಂದ ಮೇ 16 ರ ವರೆಗೆ (28 ದಿನ ಮಾತ್ರ) ಮಡಿಕೇರಿ ಹೈಸ್ಕೂಲಿನಲ್ಲಿ ಟ್ರೈನಿಂಗ್ ಆಗುವುದು.

ಟೆರಿಟೋರಿಯಲ್ ಪಟಾಲಮಿನ ಸುಬೇದಾರ ಮೇಜರ್ ಮೆ|| ಅಬ್ದುಲ್ ಹಕೀಮ್ ಸಾಹೇಬರು ಕಳೆದ ತಾರೀಕು 14 ರಲ್ಲಿ ಮಡಿಕೇರಿಗೆ ಬಂದಿರುವರು.

ಉತ್ತರಕೊಡಗು ತಾಲೋಕಿನ ಸೋಂಧಿ ಅಂಗಡಿ, ಮಾರ್ಕೆಟು ಮತ್ತು ಟೋಲ್‌ಗೇಟ್ ವಗೈರೆಗಳ ಹರಾಜು ತಾ|| 14 ರಲ್ಲು ನಡೆಯಿತು.

ಮಡಿಕೇರಿ ಮಹದೇವಪ್ಯಾಟೆ ಸಹಕಾರಿ ಸಂಘದ ಪ್ರೆಸಿಡೆಂಟರಾದ ಮೆ|| ಪೆಟ್ ಶಿರ ಮಲ್ಲಯ್ಯಾಚಾರರು ರಾಜೀನಾಮೆ ಕೊಟ್ಟದ್ದರಿಂದ ಅವರ ಬದಲಿಗೆ ಮೆ|| ಯಂ ಶಿದ್ಧಲಿಂಗಪ್ಪನವರನ್ನು ನೇಮಕಮಾಡಿರುವರು.

ಸೆಂಟ್ರಲ್ ಹೈಸ್ಕೂಲಿನ ಹಳೇ ವಿದ್ಯಾರ್ಥಿಯರು ಈ ತಿಂಗಳ 29 ನೇ ದಿವಸ ಸ್ಕೂಲ್‌ಡೇ ಯನ್ನು ನಡೆಸುತ್ತಾರಾಗಿ ವದಂತಿ.

ಅಮ್ಮಾನತ್ತೂರ ಸಂಘದ ಆಗ‌ನೈಜರ್ ಮೆ|| ಬಿದ ಒಡ ಕಾರ್ಯಪ್ಪನವರು ಈಗ ಏರ್ಪಾಡು ಮಾಡಿರುವ ನಾಟಕವು ಟಿಗಳಲ್ಲಿ ಚಂದಾ ಹಲವರುಗಳಿಗೆ ರಶೀದಿ ಬುಕ್ಕು ಒಂದು ಆಯಾಯ ನಾಡುಕಮಿಟಿಯ ಟ್ರೆಜರರ ಸ್ವಾಧೀನಕ್ಕೆ ಕೊಡಲ್ಪಟ್ಟಿದೆ. ಆದರೆ ಅವರಿಗೆ ಪ್ರತಿಗ್ರಾಮದಲ್ಲಿಯೂ ಮನೆ ಮನೆ ತಿರುಗಲು ಕಷ್ಟಸಾಧ್ಯವಾಗುವುದರಿಂದ ಆಯಾಯ ಗ್ರಾಮಗಳಲ್ಲಿಯ ಮುಖ್ಯಸ್ಥರು ಗ್ರಾಮ ಕಮಿಟಿ ಮೆಂಬರುಗಳಿಗೆ ಚಂದಾ ವಸೂಲುಮಾಡಿ ಕೊಡಲು ರಶೀದಿ ಪುಸ್ತಕಗಳನ್ನು ಕೊಡಿಸುವ ಸಹಾಯ ಹಿಂದಿನಿಂದ ಅವರಿಂದಲೇ ಟ್ರೆಜರರ್ ಕೊಡುವ ಪಕ್ಷಕ್ಕೆ ರಶೀದಿ ಪುಸ್ತಕವುಳ್ಳವುದಲ್ಲದೆ ವಾರ್ಷಿಕ ಮೀಟಿಂಗ ಕಳೆದನಂತರ ಪ್ರತಿಗ್ರಾಮ ಕಮಿಟಿ ಮೆಂಬರುಗಳಿಗೆಲ್ಲ ಒಂದೊಂದು ರಶೀದಿ ಪುಸ್ತಕ ಕೊಡುವ ಏರ್ಪಾಡು ಮಾಡುವುದರಿಂದ ಈಗ ತತ್ಕಾಲಕ್ಕೆ ಸಂಬಂಧಪಟ್ಟ ನಡೆಸಬೇಕಾಗಿ ಎಲ್ಲವನ್ನೂ ಆರ್ಗನೈಜರು ನೀಡಿಕೊಂಡಿದ್ದಾರೆ.

ಕೊಡಗಿನ ಜೀಫ್ ಫಾರೆಸ್ಟ್ ಆಫೀಸರಾಗಿದ್ದ ಮಿ|| ಎ ಎಫ ಮಿಂಚಿನ್‌ರವರಿಗೆ ಪೂರ್ತಿ ಸಂಬಳದಲ್ಲಿ 1924 ನೇ ಮೇ 25 ರಿಂದ ಆರು ತಿಂಗಳು ರಜೆ ಮಂಜೂರು ಮಾಡಲ್ಪಟ್ಟಿದೆ.

ವೀರರಾಜಪೇಟೆ ಮುನ್ಸಿಪಲ್ ಕಮಿಟಿಯವರು ಮಾರ್ಚಿ ಒಂದರಿಂದ ಮನೆ ತೆರಿಗೆಯನ್ನು ಶೇಕಡ ೬| ರಿಂದ ೭|| ಗೆ ಏರಿಸಿರುವರು.

ಕೌನ್ಸಿಲ್ ಬಜೆಟ್ಟು ಮೀಟಿಂಗಿಗೆ ಮುಂಚಿತವಾಗಿ ಮಾನ್ಯ ಕೊಟದ ಟ್ರಾಮ್ವೆಯನ್ನು ನೋಡಿಕೊಂಡು ಬರಲಿಕ್ಕೆ ಚೀಫ ಫಾರೆಸ್ಟು ಆಫೀಸರವರು ಕೌನ್ಸಿಲಿನ ಉದ್ಯೋಗಸ್ಥರಲ್ಲದ ಮೆಂಬರುಗಳಿಗೆ ಆಮಂತ್ರಣವನ್ನು ಕಳುಹಿಸಿದ್ದರು. ಆ ಮೇರೆ ಮಿ|| ಜೆ ಪಿ ಚಿಣ್ಣಪ್ಪನವರು ಮೆ|| ಚಾಡ್ಡುಳೀರ ಪ್ಪನವರು ಮತ್ತು ಮೆ|| ಪಿ ಐ ಬೆಳ್ಯಪ್ಪನವರು ಚೀ|| ಫಾರೆಸ್ಟು ಆಫೀಸರು ಮತ್ತು ಫಾರೆಸ್ಟು ಇಂಜಿನಿಯರುಗಳೊಂದಿಗೆ ತಾರೀಖು 14 ರಲ್ಲು ಮಾಕ ಕೂಟಕ್ಕೆ ಹೋಗಿ ಟ್ರಾಮ್ವೆಯ ಎಲ್ಲವನ್ನೂ ನೋಡಿ ತಾರೀಕು 16 ರಲ್ಲು ವಾಪಾಸು ಬಂದರು.

ಹಿಂದೂದೇಶ

ಬೊಂಬಾಯಿಯಲ್ಲಿ ಕೆಲವು ಮಹಿಳೆಯರು ಸಭೆ ಸೇರಿ ಕೌನ್ಸಿಲಿಗೆ ಹೆಂಗಸರು ಮೆಂಬರುಗಳು ಆಗುವ ಅಡ್ಡಿಯನ್ನು ತೆಗೆದುಹಾಕಬೇಕೆಂತ ಎಂಬಿಯು ಸರಕಾರಕ್ಕೆ ತಿಳಿಸತಕ್ಕೆಂತ ತೀರ್ಮಾನಿಸಿಕೊಂಡಿದ್ದಾರೆ.

ಮೈಸೂರಿನಲ್ಲಿ ಸ್ಥಾಪನೆಯಾದ ಹೊಸ ನ್ಯಾಯವಿಧಾಯಕ ಸಭೆಯು 12ನೇ ತಾರೀಕು ಬುಧವಾರದಿನ ಎಂ. ಎಂ. ರಾಜರಿಂದ ತೆರೆಯಲ್ಪಟ್ಟಿತು. ಮಹಾರಾಜರು ಸಂಬಂಧ ಸಮಾರಂಭದಿಂದ ಭಾಷಣಮಾಡಿದ್ದು ಇದನ್ನು ಇನ್ನೊಂದುವಾರ ಪ್ರಕಟಿಸುತ್ತೇವೆ.

ರಾವಲ್ಪಿಂಡಿಗೆ 2ನೇ ಕ್ಲಾಸ್ ರೈಲಿನಲ್ಲಿ ಪ್ರಯಾಣಮಾಡುತ್ತಿದ್ದ ಲೇಡಿಯೊಬ್ಬಳನ್ನು ರಾತ್ರಿಗೆ ಹಿಸುಕಿ ಕೊಂದುಬಿಟ್ಟಿದ್ದಾರೆ. ಅದೇ ಟ್ರೈನಿನಲ್ಲಿ ಪ್ರಯಾಣಮಾಡುತ್ತಿದ್ದ ಒಬ್ಬ ಯುರೋಪಿಯನನ್ನು ದಸ್ತಗಿರಿ ಮಾಡಿದ್ದಾರೆ.

ನಭಾಸಂಸ್ಥಾನಕ್ಕೆ ಹೋಗಿದ್ದ ಪ್ರೊಫೆಸರ್ ಗಿಡ್ವಾನಿ ಎಂಬವರನ್ನು ದಸ್ತಗಿರಿ ಮಾಡಿದ್ದರು. ಅವರಿಗೆ 2ವರೆ ವರ್ಷ ಸಜಾಮಾಡಿದ್ದಾರೆಂತ ವರ್ತಮಾನವಿದೆ. ಇವರು ಬಹಳ ದೇಶಭಕ್ತಿ ಇರುವ ಬಹಳ ಬುದ್ಧಿಶಾಲಿ ಇರುವ ಪ್ರಖ್ಯಾತಿ ಮನುಷ್ಯರಾಗಿದ್ದಾರೆ.

ಬೊಂಬಾಯಿ ಪಟ್ಟಣದಲ್ಲಿ ಅತ್ಯಧಿಕ ಸಂಬಳವಿರುವ ಕಾರ್ಖಾನೆ ಕೂಲಿಕಾರರು ಕೆಲಸಕ್ಕೆ ಬರಬಾರದೆಂತ ಕಾರ್ಖಾನೆಯವರು ಆರ್ಡರ್ ಮಾಡಿದ್ದರಿಂದ ಸುಮಾರು 50ಸಾವಿರ ಜನರು ಕೆಲವುದಿನದವರೆಗೆ ಕಾದು ಈಗ ಅವರವರ ಗ್ರಾಮಕ್ಕೆ ಹೋಗುತ್ತಿದ್ದಾರೆ—ಹಸಿವೆಯಿಂದ ಸಾಯುತ್ತ ಇದ್ದಾರೆ.

ಚೆಯಿಟೊದಲ್ಲಿ ಅಕಾಲಿಜಟಾದವರಮೇಲೆ ಮಿಲಿಟರಿಯವರು ಗುಂಡು ಹೊಡೆದ ವಿಷಯದಲ್ಲಿ ತನಿಖೆ ನಡೆಸುವ ನೇಮಕವಾಗಿದ್ದ ಐ ಸಿ ಯಸ್ ಆಫೀಸರೊಬ್ಬರು ರಿಪೋರ್ಟನ್ನು ಪ್ರಕಟಿಸಿದ್ದಾರೆ. ಗುಂಡುಹೊಡೆದದ್ದು ನ್ಯಾಯವಾದದ್ದೆಂತ ತಕ್ಕ ಕಾರಣವಿದ್ದಿತೆಂತಲೂ, ಆಫೀಸರುಗಳು ತಪ್ಪಿತಸ್ಥರಲ್ಲವೆಂತಲೂ ಬರೆದಿದ್ದಾರೆ. ಈ ರಿಪೋರ್ಟಿನಿಂದ ದೇಶದವರಿಗೆ ತೃಪ್ತಿ ಇಲ್ಲವೆಂತ ಹಿಂದೂಪತ್ರಿಕೆ ನವ್ಯ ಬರೆದಿದೆ.

ಬೊಂಬಾಯಿಯ ಒಂದು ಹತ್ತಿಕಾರ್ಖಾನೆಯಲ್ಲಿ ಬೆಂಕಿ ಹತ್ತಿಕೊಂಡು 1,75,000 ಸಾವಿರ ರೂಪಾಯಿ ನಷ್ಟವಾಗಿದೆ.

ಮದ್ರಾಸ್ ಪ್ರೆಸಿಡೆನ್ಸಿಯವರು ಆಂಧ್ರದೇಶ ... [illegible] ... ಆರ್ಡರ್ ಮಾಡಿದ್ದಾರೆ.

[illegible] ... ಸಿಕ್ಕಿಗೆ ಸೇರಿದ ... [illegible] ... ಕಾಲಿನಿಂದ ಮುಂದುವರಿಸುವಂತೆಯೂ ... [illegible] ... ಸಹಕಾರದವರು ... [illegible] ... ಹಿಂದೂಪತ್ರಿಕೆಯಲ್ಲಿ ಬರೆದಿದೆ.

ಕೈರೋಗೆ ಹೋಗಿರುವ ... [illegible] ... ಕಟ್ಟಳೆಯನ್ನು ... [illegible] ... ಮುಂದಿಡಬೇಕೆಂದು ... 13 ... [illegible] ... ಅವರೆ ಅವನ್ನು ಅಧ್ಯಕ್ಷರ ... [illegible] ... ಕಳ್ಳಿಬಿಟ್ಟರು.

ಮಾರ್ಚಿ ತಾ, 10ರಲ್ಲು ಮಹಾತ್ಮಗಾಂಧಿಯವರು ಪೂನಾದ ಅಂದೇರಿ ... ಇರುವ ಜುಹುವಿಗೆ ಹೋಗಿರುವರು. ಅವರ ಸಂಗಡ ಮ|| ಸಿ ಎಫ್ ಆಂಡ್ರೂಸ್, ದೇವಿದಾಸ್ ಗಾಂಧಿ, ಕಸ್ತೂರ್‌ಬಾಯಿ ಗಾಂಧಿ, ... [illegible] ... ರವರು ಸಹ ಹೋಗಿರು ... [illegible] ... ಅಲ್ಲಿ ... ತಿಂಗಳು ಇರುವರ-ಕ ... [illegible] ... ಅವರ ಸಂಗಡ ಕೆಲವು ವಾರಗಳವರೆಗೆ ... [illegible]

ಸೆಂಟ್ರಲ್ ಅಸೆಂಬ್ಲಿಯಲ್ಲಿ ನೇಶನಲಿಸ್ಟ್ ಪಾರ್ಟಿಯವರು ... ಉಪ್ಪು, ಅಫೀಮು, ... [illegible] ... ಟೆಕ್ಸ್, ... ಇಲಾಖೆಗಳ ... [illegible] ... ಹಣವನ್ನು ಕೊಡಬೇಕಾಗುವುದಿಲ್ಲವೆಂದು ತೀರ್ಮಾನಿಸಿರುವರು. ... ದಿನ ಬಜೆಟ್ಟಿನ ಚರ್ಚೆಯಲ್ಲಿ ನೇಶನಲಿಸ್ಟ್ ಸಂಗಡದವರು ವಿರೋಧಭಾವದಿಂದ ಎತಿ ಸಲಿಲ್ಲ.

ಮುಸ್ಲೀಮ್‌ಲೀಗಿನ ಅಧ್ಯಕ್ಷರಾಗಿದ್ದ ಮ್ಯಾ ... ಭಗ್ರ ... ತಾ|| 10ರಲ್ಲು ಮೃತರಾಗಿ ಹೋದರು.

ಜೈಟೊ ದ ... [illegible] ... ಒಂದು ಕಮಿಟಿಯನ್ನು ನೇಮಿಸಬೇಕೆಂದು ಲೆಜಿಸ್ಲೇಟಿವ್ ಎಸೆಂಬ್ಲಿಯ. 42 ಮೆಂಬರುಗಳು ... ಸರಕಾರವನ್ನು ಕೇಳಿರುವರು.

ಸರ್ದಾರ್ ... ಸಿಂಗರವರ ಮುಂದಾಳುತನದಲ್ಲಿ ಒಂದು ಅಕಾಲಿ ಡೆಪ್ಯುಟೇಶನ್ ಪೂನಾಕ್ಕೆ ಹೋಗಿ ಅಲ್ಲಿ ಮಹಾತ್ಮರ ಸಂಗಡ ಸಿಖ್ಖರ ಜಾಥಾದ ವಿಷಯ ವಿವರವಾಗಿ ಚರ್ಚೆ **ಮಾಡಿರುವುದು.**

ಬ್ರಿಟಿಷ ಸಾಮಾನುಗಳನ್ನು ಬಹಿಷ್ಕಾರ ಮಾಡಬೇಕೆಂಬ ಠರಾವು ಮಧ್ಯಪ್ರಾಂತ್ಯದ **ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ದೊಡ್ಡ ಬಹುಮತದಿಂದ ಮಂಜೂರಾಯಿತು.** ನಂತರ ಅಧ್ಯಕ್ಷರು ಕೌನ್ಸಿಲನ್ನು **"ತಾತ್ಕಾಲಿಕ"** ವಾಗಿ ಮುಂದಕ್ಕೆ ಹಾಕಿದರು. ಅಸ್ಸೆಂಬ್ಲಿಯ ಪರಿಣಾಮವೇನಾಗುವುದೋ ತಿಳಿಯದು. **ಆದರೆ ಟ್ರಾನ್ಸ್‌ಫರ್ ಇಲಾಖೆಗಳನ್ನು ರಿಜರ್ವ್ ಇಲಾಖೆಗಳೊಂದಿಗೆ ಸರಕಾರದವರೇ ನಡೆಸುವರೆಂದು ತಿಳಿಯಬರುತ್ತದೆ.**

ವಿದೇಶ

ಮಹಮ್ಮದೀಯ ಮತದ ರೂಲ್ಸುಗಳಿಗೆ ವಿರೋಧವಾಗಿ ನಡೆದಿರುವರೆಂದು ತುರುಕರು ಮಾಡುವವರೆಗೆ ಅಬ್ದುಲ ಮಜೀದ್‌ರವರ ಖಲೀಫತನವು ಖಾಲಿಯಾಗಿರುವುದಿಲ್ಲವೆಂತಲೂ, ಅಷ್ಟರವರೆ ಖಲೀಫತನವನ್ನು ಹ ಸೇಕರವರು ಒಪ್ಪಿಕೊಳ್ಳುವುದು ನ್ಯಾಯವಲ್ಲವೆಂತಲೂ ನಾಮಧಾರಿ ಮೆ|| ಅ ಹಾರ್ ಅಲಿಯವರು ಅಂಗೋರಿನ ಸೂಚಿಸಿರುವರು

ಖಲೀಫರಾಗಿದ್ದ ಅಬ್ದುಲ್ ಮಜೀದ್‌ರವರು ಇನ್ನು ಮುಂದೆ ಎಲ್ಲಿ ವಾಸಿಸಬೇಕೆಂಬುದನ್ನು ಇಸ್ಲಾಮಿಕ ಕಾಂಗ್ರೆಸ್ಸವರು ತೀರ್ಮಾನಿಸಿರುವರೆಂದೂ ಅಷ್ಟರವರೆಗೆ ಅವರು ಸ್ವಿಟ್ಜರ್ಲೇಂಡಿನಲ್ಲಿ ವಾಸವಿರುವರೆಂತಲೂ ಅವರೇ ಹೇಳಿರುವರು

ಖಿಲಾಫತ್ತಿನ ವಿಷಯ ತೀರ್ಮಾನವಾಗುವವರೆಗೆ ಖಲೀಫ ಅಬ್ದುಲ್ ಮಜೀದ್‌ರವರ ಹೆಸರನ್ನೇ ಮುಸಲ್ಮಾನರು ಪ್ರಾರ್ಥನೆಗಳಲ್ಲಿ ಉಪಯೋಗಿಸಬೇಕೆಂದು ಖಿಲಾಫತ್ ಕಮಿಟಿಯ ಅಧ್ಯಕ್ಷರಾದ ಮೌಲಾನ ಶೌಕತ ಅಲಿಯವರು ಪ್ರಕಟಿಸಿರುವರು

ಪ್ರೆಸಿಡೆಂಟ ಇಬರ್ಟರವರು ಜರ್ಮನಿಯ ರೀಚ ಸ್ಟಾಗನ್ನು ಒಡೆದುಹಾಕಿರುವರು

ಅಫ್ಘಾನಿಸ್ಥಾನಕ್ಕೆ ಒಯ್ಯುವ ಆಯುಧಗಳ ಸರಕನ್ನು ಬೊಂಬಾಯಿಯಲ್ಲಿ ಬ್ರಿಟಿಷ್ ಸರ್ಕಾರದವರು ತಡೆದುಹಾಕಿರುವರು ಇದರಲ್ಲಿ ಪರದೇಶದಲ್ಲಿ ತಯಾರಾದ ಅನೇಕ ತೋಪುಗಳೂ ಫಿರಂಗಿಗಳೂ ಇವೆಯಂತೆ

ಲಾರ್ಡ ರೀಡಿಂಗ ರವರನಂತರ ವೆ|| ಎಲ್ಫಿನ್‌ಸ್ಟನ್‌ ಪ್ರಭುಗಳವರನ್ನು ಇಂಡಿಯದ ವೈಸರಾಯರಾಗಿ ನೇಮಿಸಬೇಕೆಂಬ ವಿಚಾರಗಳು ನಡೆಯುತ್ತಿರುವುದು ವದಂತಿ

ದೇಶಬಾಂಧವರೇ,

ಇಷ್ಟರವರೆಗೆ ದೇಶದಲ್ಲಿ 31 ಕಮಿಟಿಗಳು ಏರ್ಪಾಡಾಗಿವೆ ಆದರೆ ಮೊದಲಾಗಿ ಏರ್ಪಾಡುಮಾಡಲ್ಪಟ್ಟ ಹೊಂವ ಲೆಸಾಡು ಗದಿನಾಡು ಸೂರ್ಲಬ್ಬಿನಾಡು ಬೆಂಗುನಾಡು ಭಗವತಿನಾಡು ಕಗ್ಗೋಡುನಾಡು ಕುಯ್ಯಂಗೇರಿನಾಡು ತಾವುನಾಡು ಈ ಕಮಿಟಿಗಳ ಕೆಲಸವು ಬಹಳ ಆಶ್ಚರ್ಯಕರವೆಂದು ಸಂಘದ ಪರವಾಗಿ ಸೂಚಿಸಲು ಸಂತೋಷಪಡುತ್ತೇನೆ ಮತ್ತು ಹಿಂದಿನಿಂದ ಮಾಡಿದ ಕಮಿಟಿಗಳ ಕೆಲಸವೂ ಕೂಡ ಕಷ್ಟಕ್ಕೆ ತೃಪ್ತಿಕರವಲ್ಲವೆಂದೇ ಹೇಳಬೇಕಾಗಿದೆ ಇದೂ ಕೂಡ ಬಹಳ ವ್ಯಸನಕರ ಸಂಘಕ್ಕೆ 25 ಸಾವಿರ ಮೆಂಬರ ಗಳಾಗಬೇಕೆಂದು ಈಗ 2 ತಿಂಗಳಿಗಿಂದ ಸೂಚಿಸುತ್ತಲಿದ್ದೇವೆ ಆದಾಗ್ಯೂ ಕೂಡ ದೇಶದ ಜನರು ನಿದ್ರೆಯಿಂದ ಏಳಲಿಲ್ಲವಲ್ಲ! ದೇಶದ ಯಾವ ಕಡೆಗೆ ಹೋಗಿ ನೋಡಿದರೂ ಬಡತನವು ಪ್ರಬಲಿಸುತ್ತಲಿದೆ ಎಲ್ಲಿ ನೋಡಿದರೂ ಕುಡಿಯುವ ಹಾಲು ಇಲ್ಲ ಕೂಡಿಸಲಿಕ್ಕೆ ಮಜ್ಜಿಗೆ ಇಲ್ಲ 100 ಜನರಲ್ಲಿ 95 ಜನರಿಗೆ ಕಡಿಯಲಿಕ್ಕೆ ಒಳ್ಳೇ ನೀರಿರುವದಿಲ್ಲ ಎಲ್ಲ ನೋಡಿದರೂ ಬಾಯಿಲಿ ಇದ್ದೇ ಇದೆ ಈ ನಮ್ಮ ಹೀನಸ್ಥಿತಿಗೆ ನಮ್ಮ ಪೂರ್ವದ ದೇಶಕ್ಕೆ ತಕ್ಕಂಥಾ ನಡಾವಳಿಗಳನ್ನು ಸ್ವಾರ್ಥತೆಯಿಂದ ಬಿಟ್ಟು ಈ ದಸ್ಥಿತಿಗೆ ಬಂದಿರುತ್ತೇವೆ ಆದಕಾರಣ ನಾವು ನಮಗಳ ನಡಾವಳಿಕೆಯನ್ನು ಬದಲಾಯಿಸದ ವಿನಹ ಯಾವ ಸರಕಾರಕ್ಕಾದರೂ ನಮ್ಮ ಬಡತನವನ್ನು ಅನಾರೋಗ್ಯವನ್ನು ಹೋಗಲಾಡಿಸುವುದು ಖಂಡಿತವಾಗಿಯೂ ಅಸಾಧ್ಯ ಆದ್ದರಿಂದಲೇ ಸಂಘವು ನಮ್ಮ ಕಷ್ಟನಿವಾರಣೆಯನ್ನು ನಮ್ಮ ಪ್ರಯತ್ನದಿಂದಲೇ ಹೋಗಲಾಡಿಸಲಿಕ್ಕಾಗಿ ಸಂಘದ ರೂಲ್ಸಿನಲ್ಲಿ 5 ನಿಯಮಗಳನ್ನಿಟ್ಟುಕೊಂಡಿರುವರು ಈ ನಮ್ಮ ಬಡತನ ಕಷ್ಟಗಳನ್ನು ನಿವಾರಣೆಮಾಡಲಿಕ್ಕಾಗಿ ಈ ವರ್ಷ ದೇಶದ ಜಮೀನ್ದಾರರು ತಕ್ಕ ಪ್ರೋತ್ಸಾಹ ಕೊಟ್ಟಪಕ್ಷಕ್ಕೆ (1) ಅಮ್ಮತ್ತಿ ಕೇಶನಲ್ ಸ್ಕೂಲನ್ನು ಮಹಸಿಕೊಂಡು ಅದರ ಮೂಲಕ ದೇಶದ ಜನರಿಗೆ ನಮ್ಮ ಪ್ರಯೋಜನಕ್ಕೆ ಬೇಕಾದ ಕೈಗಾರಿಕೆಗಳನ್ನು ಕಲಿಸಿ ನಮ್ಮ ಅಭಿವೃದ್ಧಿಗಿರುವ ತಿಳುವಳಿಕೆ ಕೊಡಬೇಕೆಂದಿರುತ್ತಾರೆ (2) ನಮ್ಮ ದೇಶದಲ್ಲಿ ವರ್ಷಕ್ಕೆ ಸಾಯುವ 10 ಸಾವಿರ ದನಗಳ ಚರ್ಮವನ್ನು ಸಂಘದ ಏರ್ಪಾಡಿನ ಮೂಲಕ ಜವಾಬ್ದಾರಿಯಿಂದ ಮಾರಾಟ ಮಾಡುವುದರಿಂದ ಖರ್ಚು ಕಳೆದು ಸಿಕ್ಕುವ ದಾದ 50 ಸಾವಿರ ರೂಪಾಯಿಗಳ ಲಾಭವನ್ನು ದೇಶದ ಪ್ರಯೋಜನಕ್ಕೆ ಅಂದರೆ (1) ಒಂದು ಸಾಲ್ಟರ್‌ಸ್ಟೋರ್ ಮತ್ತು ನಾಡು, ಗ್ರಾಮಗಳಲ್ಲಿ ಸ್ಟೋರಿನ ಉಪಶಾಖೆಗಳನ್ನು ಏರ್ಪಡಿಸಿ ನಾವು ಬೆಳೆಸುವ ಭತ್ತ ವಗೈರೆಯನ್ನು ಲಾಭವನ್ನು ಲಾಭದಿಂದ ಮಾರಲಿಕ್ಕೂ ಮತ್ತು ಬೇಕಾದ ಸಾಮಗ್ರಿಗಳನ್ನು ಕಮ್ಮಿ ಕ್ರಯದಲ್ಲಿ ಕೊಂಡುಕೊಳ್ಳಲಿಕ್ಕೂ ಏರ್ಪಾಡು ಮಾಡಬೇಕೆಂದಿರುತ್ತಾರೆ ಮುಖ್ಯವಾಗಿ ಈ ಮೂರು ಕೆಲಸಗಳನ್ನು ಈ ವರ್ಷವೇ ಸಂಘವು ನಡಸಬೇಕೆಂತ ಇರುವುದಲ್ಲದೆ ಪ್ರೋತ್ಸಾಹ ಸಿಕ್ಕಿದಹಾಗೆಲ್ಲಾ ಇನ್ನೂ ಅನೇಕ ಕೆಲಸಗಳನ್ನು ನಡಸಲು ಸಂಘವು ಉತ್ಸಾಹದಿಂದಿರುತ್ತೆ ಆದ ಕಾರಣ ಪ್ರತಿಕಮಿಟಿಯವರು ಈ ವಿಷಯಗಳನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಅವರವರ ನಾಡಿನಲ್ಲಿ ಮೆಂಬರುಗಳನ್ನು ಏಪ್ರಿಲ್ ತಾರೀಖು 15 ಕ್ಕೆ ಮೊದಲು ಸೇರಿಸಬೇಕಾಗಿ ಬೇಡಿಕೊಳ್ಳುತ್ತೇನೆ

ಬಿ. ಎಂ. ಕಾಳಪ್ಪ,

ಆರ್ಗನೈಜಿಂಗ್ ಸೆಕ್ರೆಟರಿ.

ಕೊಡಗು ಜಮೀನ್ದಾರರ ಸಂಘ.

ಪ್ರಚಾರಕ ಕಾರ್ಯದರ್ಶಿಯವರಿಂದ.

ಸಂಘದ ಉದ್ದೇಶಗಳನ್ನು ನೆರವೇರಿಸಲಿಕ್ಕಾಗಿ 25 ಸಾವಿರ ಜನರು ಸಂಘಕ್ಕೆ ವಾರ್ಷಿಕಾ ವಿತಾಟಿಂಗಿಗೆ ಮೊದಲು ವರ್ಷದ ಚಂದಾ ಮೆಂಬರುಗಳು ಒಂದು ರೂಪಾಯಿಯನ್ನು ಅವರವರ ನಾಡುಕಮಿಟಿ ಖಜಾಂಚಿಯವರಲ್ಲಿ ಕೊಟ್ಟು ಮೆಂಬರಾಗಬೇಕಾಗಿ ವಿನಂತಿ

ಈ ಕೆಳಗಿನ ಪತ್ರಿಯಲ್ಲಿ ಸೂಚಿಸಿದ ಸ್ಥಳಗಳನ್ನು ಸಂಘದ ನಾಡುಕಮಿಟಿಗಳನ್ನು ಏರ್ಪಡಿಸಲಿಕ್ಕಾಗಿ ಸಭೆಗಳು ನಡಸಲ್ಪಟ್ಟವು ಕೆಲವು ಕಡೆಗಳಲ್ಲಿ ಗ್ರಾಮದಲ್ಲಿ ಎಲ್ಲರಿಗೂ ನೋಟೀಸ ಇಲ್ಲವೆಂಬ ಭಾವನೆಯಿಂದ ಜಮೀನ್ದಾರರು ಹಿಂದೆ ನಿಂತಿರ ತ್ತಾರೆಂಬ ವದಂತಿ ಇದೆ ಇದು ಬಹಳ ವ್ಯಸನಕರ ಒಂದು ಗ್ರಾಮದಲ್ಲಿ ಪ್ರತಿಯೊಬ್ಬರಿಗೂ ನೋಟೀಸು ಕೊಡುವುದು ಪತಿಯೊಬ್ಬರ ಹೆಸರು ತಿಳಿಯದಿರುವ ಕಾರಣ ಅಸಾಧ್ಯ ಆದ್ದರಿಂದ ನೋಟೀಸು ಸಿಕ್ಕಿದವರು ತಿಳಿವಳಿಕೆ ಕೊಟ್ಟು ಎಲ್ಲವರೂ ನಮ್ಮ ಪತ್ರಿಕೆಯಲ್ಲಿಂವ ಕೋರಿಕೆಯನ್ನು ಮನಸ್ಸಿಗೆ ತೆಗೆದುಕೊಳ್ಳಬೇಕಾಗಿ ಕೋರಿಕೆ

ಕೊಡಗು ಜಮೀನ್ದಾರರ ಸಂಘದ ಕೇದವರದಲ್ಲಿ ಏರ್ಪಾಡಾದ ನಾಡುಕಮಿಟಿಗಳು ಮತ್ತು ಮೆಂಬರುಗಳ ವಿವರ

ಹರಿಹರನಾಡುಕಮಿಟಿ

ಪ್ರೆಸಿಡೆಂಟರು	ಕೊಡಂದೇರವೇದಪ್ಪನವರು
ಸೆಕ್ರೆಟರಿಯವರು	ಕಾಟ್ಯಮಾದಯ್ಯ ಕೃಷ್ಣನವರು
ಟ್ರೆಜರರವರು	ಬೆಳ್ಳಿಯಪ ದ್ಯಪ್ಪನವರು
ಕಮಿಟಿ ಮೆಂಬರುಗಳು	
ಹುದಿಕೇರಿಗ್ರಾಮ	ಪಟ್ಟಮಾಡರ ಬೆಳ್ಯಪ್ಪನವರು
	ಬಲ್ಯತಂಡ ಮೊಣ್ಣಪ್ಪನವರು
ಬೇಗೂರುಗ್ರಾಮ	ಇಟ್ಟಿರ ಪೊನ್ನಪ್ಪನವರು
"	ಚಕ್ಕೇರ ಸೋಮಯ್ಯನವರು.
ಕೋತೂರುಗ್ರಾಮ	ಚೆಪ್ಪುಡೀರ ಬೋಪಯ್ಯನವರು
	ಮನ್ನಕಮನೆ ಬೆಳ್ಯಪ್ಪನವರು
ಬಾಡಗಗ್ರಾಮ	ಬೆಳ್ಳಿಯಂಡ ಪೂವಯ್ಯನವರು
"	ಕೋಟೇರ ತಿಮ್ಮಯ್ಯನವರು
ನಾಲ್ಕೇರಿಗ್ರಾಮ	ಚೆಪ್ಪುಡೀರ ಅಪ್ಪಣ್ಣನವರು
"	ಅಪ್ಪನ ಕಾವೇರಪ್ಪನವರು
ಕಮುಟೂರುಗ್ರಾಮ	ಮಳ್ಳೆಂಗಡ ವೇದಪ್ಪನವರು
	ಚಳ್ಳಿಂಡ ಅಣ್ಣಯ್ಯನವರು

ಮರನಾಡುಕಮಿಟಿ

ಪ್ರೆಸಿಡೆಂಟರು	ಕೇಕೇರಬೆಳ್ಯಪ್ಪನವರು
ಸೆಕ್ರೆಟರಿಯವರು	ಕಾಡ್ಯಮಾಡ ಐಪ್ಪನವರು
ಖಜಾಂಚಿಯವರು	ಕಾಮಂಡ ಅಚ್ಚಯ್ಯನವರು
ಕಮಿಟಿ ಮೆಂಬರುಗಳು	
ಬಾಡಗರಕೇರಿಗ್ರಾಮ	ಕಾಯಪಂಡ ಸುಬ್ಬಯ್ಯನವರು
"	ಪಟ್ಟಮಾಡ ಸುಬ್ಬಯ್ಯನವರು
ಪೊರಾಡುಗ್ರಾಮ	ಪಲೇರ ಬೆಳ್ಯಪ್ಪನವರು
	ಚಿಣ್ಣಿರ ಚಿಟ್ಟಿಯಪ್ಪನವರು
ಕಿರಾಲುಗ್ರಾಮ	ಚೆಪ್ಪುಡೀರ ಪೂವಪ್ಪನವರು
	ಬೆಳ್ಳಿರ ಪೊನ್ನಪ್ಪನವರು
ಪೆರಾಡಗಿಗ್ರಾಮ	ಸಣ್ಣುವಂಡ ಮುತ್ತಣ್ಣನವರು
"	ಬೊಟ್ಟಂಗಡ ತಿಮ್ಮಯ್ಯನವರು
"	ತಪ್ಪಿಟ್ಟಂಗಡ ಮುತ್ತಣ್ಣನವರು
"	ಕಡೇಮಾಡ ಕಾಳಪ್ಪನವರು
ಪರಕಟಗೇರಿಗ್ರಾಮ	ಅಜ್ಜಮಾಡ ಗಣಪತಿಯವರು

,	ಕುಪ್ಪಣಮಾಡ ಬೆಳ್ಯಪ್ಪನವರು.
,	ಕಾಳಮಾಡ ಬೆಳ್ಯಪ್ಪನವರು.

ಅಮ್ಮತ್ತಿನಾಡುಕಮಿಟಿ

ಪ್ರೆಸಿಡೆಂಟರು	ಚೊಟ್ಟಿರ ಕಾರ್ಯಪ್ಪನವರು
ಸೆಕ್ರೆಟರಿಯವರು	ಐನಾಟ ಕಾರ್ಯಪ್ಪನವರು
ಖಜಾಂಚಿಯವರು	ಪಂ ದಾಮೋದರ ಪಾರ್ಶ್ವಭಕ್ತಿಯವರು.
ಕಮಿಟಿ ಮೆಂಬರುಗಳು	
ಅಮ್ಮತ್ತಿಗ್ರಾಮ	ಬೊಳ್ಳಂಡ ತಿಮ್ಮಯ್ಯನವರು.
,	ಅಜ್ಜಿಮಂಡ ಸಂಜಪ್ಪನವರು
ಕಾರ್ಮಾಡಿಗ್ರಾಮ	ಮುಕ್ಕಾಟಿರ ನಾಣಪ್ಪನವರು
,	ಕಂಜಿಮಂಡ ಗಣಪ್ಪನವರು
"	ನಲ್ಲಮಕ್ಕಡ ದೇವಯ್ಯನವರು
ಬೀರುಗುಂಡಗ್ರಾಮ	ಮಲ್ಲೇಂಗಡ ಗಣಪತಿ ನವರು
	ಮಂಡೆ ಪಂಡ ಪೊನ್ನಯ್ಯನವರು.
ಸಜ್ಜಕೊಕ್ಕಲುಗ್ರಾಮ	ಪಂಡೇಡ ಬೋಪಣ್ಣನವರು
,	ಮುಕ್ಕಾಟಿರ ಸೋಮಯ್ಯನವರು.
ಮೊಸರ ಗ್ರಾಮ	ಮೊಳ್ಳೇರ ಅಪ್ಪಚ್ಚನವರು
	ಪೂದ್ರಿಮಾಡ ದೇವಯ್ಯನವರು
ಹಾತ್ತೂರ ಗ್ರಾಮ	ನೋಡೆ ಮಂಡ ಚಂಗಪ್ಪನವರು.
	ಪಕ್ಕಲಿರ ಕಾಳಪ್ಪನವರು
ಕೈಕೇರಿಗ್ರಾಮ	ಬಲ್ಲಮಾಡ ಮಾದಪ್ಪನವರು
	ಕುಪ್ಪಂಡಮಂಡಪ್ಪನವರು.

ತಾವಳಗೇರಿ ನಾಡುಕಮಿಟಿ

ಪ್ರೆಸಿಡೆಂಟರು	ಕಡಿಯಂಗಡ ಗಣಪತಿಯವರು
ಸೆಕ್ರೆಟರಿಯವರು	ಅಡ್ಡಂಡ ಕಾರ್ಯಪ್ಪನವರು
ಖಜಾಂಚಿಯವರು	ಕೊಟ್ಟಿರ ಅಚ್ಚಪ್ಪನವರು.
ಕಮಿಟಿ ಮೆಂಬರುಗಳು	
ತಾವಳಗೇರಿಗ್ರಾಮ	ಕಡಿಯಂಗಡ ಸಂಜಪ್ಪನವರು.
	ಸೂರೇಂಮುದ್ದಪ್ಪನವರು.
ಶೆಟ್ಟಿಗೇರಿಗ್ರಾಮ	ಚೆಪ್ಪಂಡ ಐಯ್ಯಪ್ಪನವರು
	ಮಾಪಂಗಡ ಸೋಮಣ್ಣನವರು.
ಕಮ್ಮಲೆಗ್ರಾಮ	ಕುಂಞಂಗಡ ಕಾರ್ಯಪ್ಪನವರು.
,	ಮಾನೇರ ಸುಬ್ಬಯ್ಯನವರು
"	ಚೊಟ್ಟೆಯಂಡ ಮಾದಳ ಕಾಳಪ್ಪನವರು.

ಎಲ್. ಕೆ. ಎಲ್ಮ್‌ಹರ್ಸ್ಟ್‌ರ ಉಪನ್ಯಾಸ, ಗ್ರಾಮಾಭಿವೃದ್ಧಿ.

(ಹೋದ ಸಂಚಿಕೆಯಿಂದ).

ಮುಂದುವರಿದದ್ದು

ಆರೋಗ್ಯ ಕೃಷಿ ಮತ್ತು ಸ್ಥಳೀಯ ಸ್ವರಾಜ್ಯದ ಇಲಾಖೆಗಳು ತಮ್ಮ ಕಾರ್ಯಗಳ ಗ್ರಾಮಗಳ ವಿಷಯದಲ್ಲಿ ಸಂಬಂಧವನ್ನಿಟ್ಟು ಹೇಳಬೇಕು ಗ್ರಾಮವಾಸಿಗಳು ಈ ವಿಷಯಗಳಲ್ಲಿ ತಿಳಿಯಬೇಕಾದನ್ನು ತಿಳಿಸಿಕೊಡಬೇಕು. ಅವರಿಗೆ ಈ ಇಲಾಖೆಗಳಿಂದ ಇರುವ ಪ್ರಯೋಜನವನ್ನು ತೋರಿಸಿಕೊಡಬೇಕು ವಿದ್ಯಾ ಇಲಾಖೆಯು ಮತ್ತು ಮೊದಲಾದವುಗಳ ಸಂಗಡ ಸಹಕರಿಸಿ, ಗ್ರಾಮವಾಸಿಗಳಿಗೆ ಆ ಪ್ರಯೋಜನಗಳನ್ನು ತಿಳಿಪಡಿಸುವುದು ಸುಲಭ ಈ ರೀತಿ ಉಪಕರಣದಿಂದ ಇದ್ದರೆ ಪ್ರಜಾಸಮುದಾಯವರ ಸರಕಾರದಮೇಲೆ ತಮ್ಮ ಹಣವನ್ನು ಯಥೇಚ್ಛ ಖರ್ಚುಮಾಡಿದರೂ ತಮಗೇನೂ ಪ್ರತಿಫಲ ಕೊಡುವದಿಲ್ಲ ಎಂಬ ದೂರನ್ನು ಹೇಳಲಿಕ್ಕೆ ಕಾರಣವಿದೆ ಇಲ್ಲಿ ಬಂಗಾಳದಲ್ಲಿ ಮಲೇರಿಯಾವನ್ನು ಹೋಗಲಾಡಿಸಲಿಕ್ಕೆ ಏರ್ಪಾಡಾದ ಸಹಕಾರಿ ಸಂಘವು ಮೇಲೆ ಹೇಳಿದಮೇರೆ ಕೆಲಸಮಾಡಿದ್ದರ ಫಲವಾಗಿದೆ. ಪ್ರಜೆಗಳಿಗೆ ಪರಿಸಿಕೊಟ್ಟ ಇಲಾಖೆಗಳು ತಮ್ಮ ತಿಳುವಳಿಕೆಯನ್ನೂ ಸಹಾಯವನ್ನೂ ಕೊಟ್ಟು, ರೈತರು ಸ್ವತಃ ತಮ್ಮ ಅಭಿವೃದ್ಧಿಗಾಗಿ ಮಾಡುವ ಕೆಲಸಗಳಿಗೆ ಬೆಂಬಲವಾಗಲು ತಯಾರಾದವೆ ಅತಿ ಅವಶ್ಯಕವಾದದ್ದು.—ಗ್ರಾಮದಲ್ಲಿ ಸಮುದಾಯದ ಅಭಿಪ್ರಾಯ, ಅಂದರೆ ಗ್ರಾಮದಲ್ಲಿ ತಮಗೆ ಇರುವ ಕಷ್ಟಗಳನ್ನು ತಿಳಿಸಿಕೊಡುವ ಸ್ವಭಾವವು ಶಕ್ತಿಯು ಆಗ ಸರಕಾರದವರು ಬಹಳ ಅಧಿಕಾರ್ಯ ತೀರಿದು ಕೆಲಸಮಾಡಲು ಅನುಕೂಲವಾಗುತ್ತ, ಗ್ರಾಮಗಳಲ್ಲಿ ಸ್ವಪ್ರಯತ್ನವು ಹೆಚ್ಚಾದರೆ ಆ ಇಲಾಖೆಗಳ ಉಪಯೋಗವನ್ನು ಪಡಕೊಳ್ಳಲು ಸಾಧ್ಯವಿಲ್ಲ ಈ ಇಲಾಖೆಗಳಿಗೂ ಗ್ರಾಮಗಳಿಗೂ ಈಗ ಸಂಬಂಧವೇ ಇಲ್ಲ ಆ ಕಾರಣ ಕೆಲಸಗಳು ಒಂದೇರೀತಿ ಇಲ್ಲ ನಡೆವ ಬೇಕಾದ ನಿಯಮ ವಿರುವುದರಿಂದ ಈ ಇಲಾಖೆಗಳಿಗೂ ಗ್ರಾಮಗಳಿಗೂ ಶಾಶ್ವತವಾಗಿರುವ ಸಂಬಂಧವನ್ನು ಕಾದುಹಿಡಿಯುವದು ಹಸ ಈ ಇಲಾಖೆಗಳಿಗೆ ಕಷ್ಟವಾಗಿದೆ.

ನಮ್ಮ ಶಕ್ತಿಗಳನ್ನು (ಅಂದರೆ ಉಪನ್ಯಾಸಕರ ಮತ್ತು ಅವರ ಸಂಗಡ ಕೆಲಸ ಮಾಡುವವರ) ಹೇಗೆ ಉಪಯೋಗಿಸುತ್ತೇವೆ ನಮ್ಮ ತೀರಿಸಿಕೊಡುತ್ತೇವೆ ಸಹಕಾರಿ ಚಳ್ವಳಿ ಹಿಡಿಸುವ ಕಾರ್ಯಾಚರಣೆಯಲ್ಲಿ ಒಬ್ಬನಿಗೆ ಒಂದುವರ್ಷದ ತರಬೇತು ಕೊಟ್ಟೆವು ಅವನ ಕೆಲಸದಿಂದ ಆ ಪ್ರಾಂತ್ಯದ ಗ್ರಾಮವಾಸಿಗಳಿಗೆ ಪ್ರಯೋಜನವಿದೆ ಸರಕಾರಿ ಕೃಷಿ ಇಲಾಖೆಯವರ ವಿವರವನ್ನು ಕಲಿತ ನರ್ಸರಿ ಒಂದಿದ್ದೇವೆ ಈಗಿನ ರುಥಾಂತಿಸಿದ ಸರಕಾರ ಪದ್ಧತಿಯಲ್ಲಿ ಅವನು ಬಿಡು ಮೇಲಾಧಿಕಾರಿಗಳಿಗೆ ಜವಾಬು ಕೊಡಬೇಕಾಗಿದೆ. ಅಷ್ಟರಿಂದ ಆ ಸ್ಥಿತಿಯಲ್ಲಿ ಅವನಿಂದ ರೈತರಿಗೆ ಪ್ರಯೋಜನ ವಾಗುವ ಸಂಭವವಿಲ್ಲದ್ದರಿಂದ ಅವನನ್ನು ನಾವು ಏವಾಗಿ ತೆಗೆದುಕೊಂಡದ್ದಾಗಿದೆ ಮಲೇರಿಯಾವುದನ್ನು ಹೋಗಲಾಡಿಸಲಿಕ್ಕೆ ಏರ್ಪಾಡಾದ ಸಹಕಾರಿ ಸಂಘಗಳಿಗೂ, ಆರೋಗ್ಯ ಇಲಾಖೆಗೂ ಟ್ರಾಕ್ಟ್‌ಬೋರ್ಡಿನ ಪ್ರೆಸಿಡೆಂಟರಿಗೂ ಮತ್ತು ರೆಡ್‌ಕ್ರಾಸ್ ಸಂಘಕ್ಕೂ ತಮ್ಮೊಳಗೆ ಸಂಬಂಧವನ್ನುಂಟುಮಾಡಿ ಅನ್ಯೋನ್ಯ ಸಹಾಯಕರಾಗಿ ಮಲೇರಿಯ ವ್ಯಾಧಿಯನ್ನು ಮತ್ತು ಇತರ ಅನಾರೋಗ್ಯದ ಕಾರಣಗಳನ್ನು ಹೋಗಲಾಡಿಸಲಿಕ್ಕೆ ಪ್ರಯತ್ನಿಸುತ್ತೇವೆ ಪಶುವೈದ್ಯ ಇಲಾಖೆಯು ತಮ್ಮ ಡಾಕ್ಟರನ್ನು ರೈತರು ಎಮ್ಮೆಯಲ್ಲಿ ದನಗಳ ಜಾಡ್ಯಗಳಿಗೆ ಔಷಧಿ ಮಾಡುವ ಕ್ರಮವನ್ನು ಕಲಿಸಿ ಬೋಧಿಸಲಿಕ್ಕೆ ಬಿಟ್ಟುಕೊಡುವರೆಂತ ಏರ್ಪಾಡು ಮಾಡುವರೆಂತ ಏರ್ಪಡಿಸಿರುತ್ತೇವೆ.

ಬಂಗಾಳದಲ್ಲಿ ಓಡುಹೋಕೋ ಸಾಯಬೇಕೋ ಎಂಬ ಪ್ರಶ್ನೆಯೇ ಬಲವಾಗಿದೆ. ಹೀಗಿರುವಾಗ ಸರಕಾರದ ಇ ಲಾಖೆಗೆ ಪ್ರಯೋಜನವನ್ನು ಪಡೆಯದೆ ಇರಲು ಸಾಧ್ಯವಿಲ್ಲ. ತಿಳಿಯ ಬಲ್ಲ ಮನುಷ್ಯನು ನನ್ನಲ್ಲಿ ಹೇಳಿದ್ದೇನೆಂದರೆ— "ಬಂಗಾಳದಲ್ಲಿ ಇರುವ ಜಮೀನುದಾರಿ ಪದ್ಧತಿಯನ್ನು ಶಾಸನ ಮೂಲಕ ತೋಗಲಾಡಿಸದೆ ಇರುವಷ್ಟು ಪ್ರಜೆಗಳಿಗೆ ಪ್ರಯೋಜನವಾಗುವ ಯಾವ ಕೆಲಸವನ್ನೂ ಮಾಡಲಿಕ್ಕೆ ಸಾಧ್ಯವಿಲ್ಲ" ವೆಂತ ಹೇಳಿದರು. ನಾನು ಏನು ಜವಾಬು ಕೊಟ್ಟೆನೆಂದರೆ ಇದು ಹುಚ್ಚುತನ. ಜಮೀನ್‌ದಾರಿ ಪದ್ಧತಿಯನ್ನು ಶಾಸನದಿಂದ ತೋಗಲಾಡಿಸುವವರೆಗೆ ಬಂಗಾಳವು ಉಳಿಯುವದೇ ಇಲ್ಲ. ಜಮೀನ್‌ದಾರನ ಬದಲಿಗೆ ಬೇರೆಯದನ್ನು ಸ್ಥಾಪಿಸಬೇಕು? ಸುರುವಿನಲ್ಲಿ ಕೆಲಸಮಾಡುವ ಸರಕಾರಿ ಉದ್ಯೋಗಸ್ಥರನ್ನು ಕೇಳಿ. ಹೊಸ ಶಾಸನವೇನೂ ಇಲ್ಲದೆ ಬಂಗಾಲವನ್ನು ಉದ್ಧಾರಮಾಡಲು ಸಾಧ್ಯವಿದೆಯೆಂತ ಹೇಳುತ್ತಾರೆ. ಅದರ ಅವಶ್ಯಕತೆಯೇನೆಂದರೆ—ಯುವಕರು ಎಷ್ಟು ಪ್ರಯತ್ನಪಡಬೇಕು."

[ಸಶೇಷ]

ಸರ್ಕಾರದ ಭರವಸವುಳ್ಳ ಓರಿಯಂಟಲ್ ಜೀವವಿಮಸಂಘ, ಲಿಮಿಟೆಡ್.

ಹೆಡ್ ಆಫೀಸು—ಬೊಂಬಾಯಿ.

ಸ್ಥಾಪಿತವಾದದ್ದು 1874.

1924 ನೆ ವರ್ಷವು 50 ನೆ ವರ್ಧಂತಿ ವರ್ಷ

ಬಂಡವಾಳ 6,00,00,000 ; ವಾರ್ಷಿಕ ಉತ್ಪತ್ತಿ 1,00,00,000 ಮೇಲ್ಪಟ್ಟು.

ಕೊಡಗು ಡಿಸ್ಟ್ರಿಕ್ಟಿನ ಮುಖ್ಯಪ್ರದೇಶಗಳಲ್ಲಿ ಧಾರಾಳವಾದ ಕಮಿಷನ್ ವಗೈರೆ ಆದಾಯದಮೇಲೆ ಕೆಲಸಮಾಡಲು ಏಜಂಟರುಗಳು ಬೇಕಾಗಿರುತ್ತೆ. ಹೊಸದಾಗಿ ಪಾಲಸಿದಾರರುಗಳನ್ನು ಚುನಾಯಿಸಿಕೊಡುವ ಸಾಮರ್ಥ್ಯವುಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಬ್ರಾಂಚುಸೆಕ್ರಟರಿ,
ಪೋಸ್ಟುಬಾಕ್ಸು ನಂ 56.
[2—1] ಬೆಂಗಳೂರು

ಪತ್ರವ್ಯವಹಾರಗಳು.

ವಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. [ಎಡಿಟರ್]

ಮಹನೀಯರೆ,

ನೇಕಸಲ್ ಸಿಸ್ಟರ್ ಫುಟ್‌ಬಾಲ್ ಟೋರ್ನಮೆಂಟ್ ೧೯೨೩ ನೇ ಇಸವಿ ಎಪ್ರಿಲ್ ತಿಂಗಳಲ್ಲಿ ಪ್ರಾರಂಭವಾಗಿ ಬಿಳುಗುಂದದ ಕ್ರೆಸೆಂಟ್ ಟೀಮಿಗೆ ಜಯವಾದದ್ದು ಎಲ್ಲಾ ಮಹಾನೀಯರಿಗೂ ತಿಳಿದ ಸಂಗತಿಯಾಗಿದೆ. ಅದೇ ಟೋರ್ನಮೆಂಟ್ ೧೯೨೪ ನೇ ಇಸವಿ ಏಪ್ರಿಲ್ ತಿಂಗಳಲ್ಲಿ ಅಮ್ಮತ್ತಿಯಲ್ಲಿ ಮುಂದರಿಸುತ್ತೇವೆ. ಆದಕ್ಕಾಗಿ ಎಲ್ಲಾ ಕ್ಲಬುಗಳಿಗೂ ಶಾಲೆಗಳಿಗೂ ಮತ್ತು ಎಲ್ಲಾ ಗ್ರಾಮದ ಮಹನೀಯರಿಗೂ ಹೊಸ ಹೊಸ ಟೀಮನ್ನು ಏರ್ಪಡಿಸಿ ಟೋರ್ನಮೆಂಟಿಗೆ ಕಳುಹಿಸಲಿಕ್ಕೆ ಬಹಳ ವಿನಯದಿಂದ ಕೇಳಿಕೊಳ್ಳುತ್ತೇವೆ. ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಅಬ್ದುಲ್ ಮಜೀದ್‌ಖಾನ್
ನೇಕಸಲ್ ಸ್ಕೂಲ್, ಅಮ್ಮತ್ತಿ.

ಸಂಪಾದಕರೆ ನಾನು ಈ ಕೆಳಗೆ ಬರೆದಿರುವ ಸಂಗತಿಯನ್ನು ಬರುವವಾರದ ಬೇಪರಿನಲ್ಲಿ ಪ್ರಕಟಿಸಿ ಕಳುಹಿಸಿಕೊಡುವಿರಾಗಿ ಕೋರುತ್ತೇನೆ.

ಹಾತೂರು ಗ್ರಾಮದಲ್ಲಿ ರೋಡುಬಾಜು ಮೇಯುತ್ತಿದ್ದ ಒಂದು ಕೋಣದಮೇಲೆ ಕಳೆದ ಜನವರಿ ತಿಂಗಳಲ್ಲಿ ಒಂದು ಆದಿತ್ಯವಾರ ದಿವಸ ಬೆಳಗ್ಗೆ ಪೊನ್ನಂಪೇಟೆ ಸರ್ವಿಸ್ ಬಸ್ಸು ತಗಲಿ ಕೋಣನ ಸೊಂಟಮುರಿದು ಹೋಯಿತು. ಬಸ್ಸು ತಗಲಿದ ಜಾಗದಲ್ಲಿಯೇ ಕೋಣವು ೧೪-೧೫ ದಿವಸಗಳವರೆಗೆ ಹುಲ್ಲು ತಿನ್ನದೆ ನೀರು ಕುಡಿಯದೆ ಸತ್ತು ಹೋಯಿತು. ಬಸ್ಸು ತಗಲಿದ ೩ ನೇ ದಿವಸದಲ್ಲಿ ಪೋಲೀಸು ಆಫೀಸರು ಬಂದು ಮಹಜರುಮಾಡಿಕೊಂಡು ಹೋದರು. ಬಸ್ಸು ಡ್ರೈವರಿಗೆ ವೀರರಾಜೇಂದ್ರಪೇಟೆ ಮುನಿಸೀಫ್ ಕೋರ್ಟಿನಲ್ಲಿ ೧೩ ರೂಪಾಯಿ ಜುಲ್ಮಾನೆ ಆಯಿತೆಂದು ವರ್ತಮಾನವಿದೆ. ಈ ಕೋಣವು ಕೆಂಡಂತ ಮನೆಯವರದೆಂಬದಾಗಿ ಹೇಳುತ್ತಾರೆ. ಕೋಣನ ನಷ್ಟಕ್ಕಾಗಿ ಡ್ರೈವರನಮೇಲೆ ದಾವಹಾಕಿರುವದಾಗಿ ತಿಳಿದುಬರುತ್ತದೆ.

ಪ್ರಜಾಮಿತ್ರ.

ಕೊಡಗರಾದ ನಮ್ಮ ಜಾತಿಗೆ ಬ್ರಾಹ್ಮಣ ಮತ್ತು ಇತರ ಸರಿಸಮಾನ ಅಂದ್ರೆ ಗೌಡ, ಒಕ್ಕಲಿಗ ಅಮ್ಮ ಕೊಡಗ ಇತ್ಯಾದಿ ಜಾತಿಯವರನ್ನು ನಮ್ಮದಕ್ಕೆ ತೆಗೆದುಕೊಂಡು ವಿವಾಹ ಬೆಳಸಬಹುದೊ.

ಹಾಗೆ ವಿವಾಹ ಆದರೆ ಹುಟ್ಟಿದ ಮಕ್ಕಳಿಗೆ ಕುಟುಂಬ ಪಿತ್ರಾರ್ಜಿತ ಆಸ್ತಿಯಮೇಲೆ ಹಕ್ಕು ಇರುತ್ತದೊ.

ಅಲ್ಲದೆ ಕೊಡಗರು ಇತರ ಜಾತಿಗೆ ಸೇರಿದವರನ್ನು ಪುನಃ ಕೊಡಗರ ಜಾತಿಗೆ ಸೇರಿಸಿಕೊಳ್ಳಬಹುದೊ.

ಎಂಬೀ ಪ್ರಶ್ನೆಗಳಿಗೆ ಕೊಡಗು ಪದ್ಧತಿ ಬಲ್ಲವರು ತಪಶೀಲು ಜವಾಬು ಪತ್ರಿಕೆ ಮೂಲಕ ಎಲ್ಲರಿಗೂ ತಿಳಿಯುವಂತೆ ಬರಿಯಬೇಕಾಗಿ ಬೇಡುತ್ತೇವೆ.

C. K. Kuttappa.

ಜನಾರ್ದನನ ಮೆಚ್ಚಿಸಿದರೂ ಜನರ ಮೆಚ್ಚಿಸಲಾರರು

ಕೊಡಗು ಪತ್ರಿಕೆಯ ಹಿಂದಿನ ಸಂಚಿಕೆಯಲ್ಲಿ ಮ|| ಕೆಂಬತ್ತಂಡ್ರ ಮೊಣ್ಣಪ್ಪನವರು ತಮ್ಮ ಮಗನಿಗೆ ಸಿಕ್ಕಿದ ಕೌನ್ಸಿಲ್ ಮೆಂಬರುತನದ ಸಂತೋಷಕ್ಕಾಗಿ ಬಿಟ್ಟಲ್ಲಿ ವಗೈರೆಗೆ ದೊಡ್ಡ ಒಂದು ಔತಣವನ್ನು ಕೊಟ್ಟರು ವಗೈರೆ ಇದ್ದದ್ದನ್ನು ಮೆ|| ಮೊಣ್ಣಪ್ಪನವರ ಸಮಕ್ಷಮ ಮಾತನ್ನಾಡುವಾಗ್ಯೆ ಹಾಜರಿದ್ದವನೆಂಬದಾಗಿ ಕಳುಹಿಸಲ್ಪಟ್ಟ ಈ ವಾತ್ಮಿಯು ಪ್ರೇರಣೆಯುಳ್ಳದೆ ಸರ್ವಥಾ ನಿಜಸಂಗತಿಯಲ್ಲ. ಮಗನಿಗೆ ಸಿಕ್ಕಿದ ಕೌನ್ಸಿಲಿನ ಮೆಂಬರುತನದ ಔತಣವನ್ನು ಮಠ ಅಜಮಾಯಿಸಿ ತಿಳಿದು ತಾರೀಖು ೧೭-೧-೨೪ ರಲ್ಲಿ ಬಹು ವಿಜೃಂಭಣೆಯಿಂದ ಆಗಿದೆ. ಗಡಿಗಡಿಮಾಡಕಕ್ಕೆ ಅರ್ಥವೇನಿದೆ. ಮಹಾತ್ಮಾ ಗಾಂಧಿಯವರ ಬೀರರತ್ನದ ಬಿಡುಗಡೆಯು ಬಾರಿ ಸಂತೋಷಕ್ಕಾಗಿ ಅವರ ಬಿಡುಗಡೆ ವರ್ತಮಾನ ೬-೨-೨೪ ರಲ್ಲಿ ಸಿಕ್ಕಿದ ಕೂಡಲೆ ಮೂರ್ನಾಡು ೩ ನೇ ಕಲ್ಲು ಇತ್ಯಾದಿ ಶಾಲಾ ಹುಡುಗರಿಗೆಲ್ಲಾ ಸಕ್ಕರೆ ಹಂಚಿದ್ದಲ್ಲದೆ ಮಹಾತ್ಮರ ಬಿಡುಗಡೆಯಲ್ಲಿ ಹಿಂದು ಮಹಮ್ಮದಿಯರ ಐಕ್ಯತೆಯನ್ನು ವ್ಯಕ್ತಗೊಳಿಸಿದ ಈ ಔತಣಕ್ಕೆ ಮೇಲ್ಕಂಡಂತೆ ಅಸೂಯಾಭಾವದಿಂದ ವಿಕಲ್ಪಗೊಳಿಸಿದ್ದಾಗಿ ಸಹ ಅವರಿಂದಲೂ ಔತಣಕ್ಕೆ ಸೇರಿದವರಿಂದಲೂ ಹಂಚಿತ ತಿಳಿಯಬಂತು.

ವಾಚಕಮಹಾಶಯರೇ,

ಶಾಲಾಬಾಲರಿಗೆ ಹಂಚಿದ ಸಕ್ಕರೆ ಇತ್ಯಾದಿಗಳ ವಾತ್ಮಿಯಿಲ್ಲ. ಔತಣದ ಪ್ರೇರಣೆ ಬೇರೆ ರೀತಿಯಲ್ಲಿ ವಾತ್ಮಿ ಕಳುಹಿಸಿರುವದು ಮೂರ್ನಾಡಿನ ಸ್ಥಿತಿಸೂಚಿಸುತ್ತಲ್ಲವೋ ಯೋಚಿಸಿರಿ ಮೆ|| ಮೊಣ್ಣಪ್ಪನವರು ಮಾಡಿದ ಒಳ್ಳೇ ಕೆಲಸವನ್ನು ಬದಲಾಯಿಸುವವರು ಬಹಳ ಜನ. ಮೆ|| ಮೊಣ್ಣಪ್ಪನವರೋ ವಿಶೇಷ ವೃಳ್ಳವರು ಪಂಡಿತವಾದಿ ಇಂಥವರು ಜನರಿಗೆ ಅಪ್ರಿಯರಾಗುವಲ್ಲಿ ಸಂಶಯವಿಲ್ಲ. ಇನ್ನಾದರೂ ಇಂಥಾ ತಪ್ಪು ಅಭಿಪ್ರಾಯವನ್ನು ವಾತ್ಮಿಯಾಗಿ ಕಳುಹಿಸಬಾರದಾಗಿ ಕೇಳಿಕೊಳ್ಳುವೆ,

ಬುದ್ಧಿಮಾತ್ಕಾಡಿದವ

INDIAN ARMS ACT RULES OF 1924.

ಅಯ್ಯಾ,

ಒಬ್ಬ ರಾಜರು ಪಟ್ಟದಿಂದ ಹೋಗಿ ಇನ್ನೊಬ್ಬರು ಪಟ್ಟಕ್ಕೆ ಬರುವಾಗ ದೇಶದ ಪ್ರಜೆಗಳಿಗೆ ಅನುಕೂಲವಾದ ರಿಯಾಯಿತಿಗಳು ಮತ್ತು ಕೈದಿಯರಿಗೆ ಮಾಫ್ಕೊಡುವದು, ಸಿವಿಲ್ ಜೈಲಿನಲ್ಲಿರುವವರ ಸಾಲಸೋಲ ಸರಕಾರದವರು ಕೊಡುವದು ಮತ್ತು ರಾಜರು ಹುಟ್ಟಿದ ದಿನದಲ್ಲಿ ಹೊಸಬಹುಮಾನಗಳನ್ನು ಕೊಡುವ ಪದ್ಧತಿಯಿದೆ. ಸಮ್ಮ ದೇಶೀಯರಾದ ರಾ|| ಸ|| ಕೆ ಚಂಗಪ್ಪನವರಿಗೆ ಕೊಡಗು ದಿ|| ಮೆ|| ಸಾಹೇಬರ ಕೆಲಸ ಕಾಯಂ ಆದದ್ದು ನಮಗೆಲ್ಲರಿಗೂ ಬಹಳ ಸಂತೋಷವಿದೆ ದಿ|| ಮೆ|| ಸಾಹೇಬರ ಸ್ವಾತಂತ್ರದಲ್ಲಿ ಕೋವಿಕತ್ತಿಗಳ ರೂಲ್ಸ (arms act) ಇದೆ ಇವರ ಕಾಲದಲ್ಲಿ ನಮಗೆ ಯೇನಾದರೂ ಹೊಸರಿಯಾಯಿತಿ ಸಿಕ್ಕಬಹುದೆಂತ ನೋಡುತಿರುವಾಗ ಇದ್ದದ್ದು ಸಹ ಹೋದಹಾಗೆ ಕಾಣುತ್ತದೆ. ಇದಕ್ಕೆ ಮೊದಲು ಕೊಡಗು ಬಿಟ್ಟು ಹೊರಗೆ ಹೋಗಬೇಕಾದರೆ ಜಮ್ಮದವರಿಗೆ ದಿ|| ಮೆ|| ಸಾಹೇಬರ ಸರ್ಟಿಫಿಕೇಟು ಸಹಿತ ಎಲ್ಲಾ ತರದ ಬಂದೂಕ ವಗೈರೆ ತೆಗೆದುಕೊಂಡು ಹೋಗಬಹುದಿತ್ತು. ಆದರೆ ೧೯೨೪ ನೇ ಜನವರಿಯಿಂದ ಪ್ರತಿ ಪಿಸ್ತೂಲ್ ರಿವಾಲ್ವರ್ ಜೊತೆಗೆ ತೆಗೆದುಕೊಂಡು ಹೋಗಕೂಡದಾಗಿ ರೂಲ್ಸ ಆಗಿರುವದಲ್ಲದೆ ಇನ್ನಾದರೂ ಕೌನ್ಸಿಲ್ ಮೆಂಬರಾಗಲಿ ದಿ|| ಮೆ|| ಸಾಹೇಬರಾಗಲಿ ಇದನ್ನು ತಿದ್ದುಪಡಿಮಾಡಿಸಬೇಕಾಗಿ ಕೋರುತ್ತೇವೆ.

ಅನುಭವಿಸಿದವನು.

ಅಯ್ಯಾ,

ನಿಮ್ಮ ೨೩ ನೇ ತಾರೀಖು ಸಂಚಿಕೆಯಲ್ಲಿ ವಿವರಿಸಿದ ಹಂತೂರು ಗ್ರಾಮದ ಕೊಕಂಡ್ರ ಮನೆತನದ ಧಾನದ ಅಭಿವೃದ್ಧಿ ವಿಷಯ ಕಟ್ಟುಕಟ್ಟಳೆಯಂತೆ ನಡೆಯುತ್ತಿಲ್ಲವೆಂಬದಾಗಿ ಬರೆದ ವಿಷಯ ಓದಲಾಯಿತು. ಆದರೆ ಭಗವಂತನ ದಯದಿಂದ ಚೆನ್ನಾಗಿ ಈವರೆಗೆ ನಡೆಯುತ್ತಾ ಬರುತ್ತಿದೆ. ಆದರೆ ಕಾರಣವಿಲ್ಲದೆ ಈ ಸಂಗಕ್ಕೆ ಅವಮಾನವನ್ನು ಮಾಡಿಸಬೇಕೆಂಬ ಇರಾದೆಯಿಂದ ಬರೆದ ವಾತ್ಮಿದಾರನಂತೆ ಕಂಡುಬರುತ್ತೆ. ಹಾಗಾದರೆ ಈ ವಾತ್ಮಿದಾರನು ಅನಾವಶ್ಯಕತೆಯಿಂದ ಪ್ರಕಟಿಸಿದಕ್ಕಾಗಿ ಆ ಮಹಾನುಭಾವರಾದವರ ಯೋಗ್ಯತೆಯನ್ನು ವರ್ಣಿಸಲಿಕ್ಕೆ ನಮಗೆ ಆಗುವುದಿಲ್ಲ. ಅದಕ್ಕೆ ಆದರ ಗೌರವವನ್ನು ದೇಶವಾಸಿಯರಿಗೆ ವಿವರಿಸಲಿಕ್ಕೋಸ್ಕರ ಬರೆದ ಒಬ್ಬ ಸಂಗದ ಮೆಂಬರು.

I L M

ಅಯ್ಯಾ,

ತಾರೀಕು ೧೯-೩-೨೪ ರಲ್ಲಿ ಮ ತಮ್ಮಂಡ ಐಯ್ಯಣ್ಣನವರ ಮನೆಯ ಸುತ್ತಲು ಇರುವ ಹುಲ್ಲುಗಾವಲಿಗೆ ಯಾರೋ ಬೆಂಕಿ ಕೊಡಲು, ಗಾಳಿಯ ದೆಸೆಯಿಂದ ಜೋರಾಗಿ ಆ ಬೆಂಕಿಯು ಸುಮಾರು ೧೨ ಗಂಟೆಗೆ ಅವರ ಮನೆಗೆ ಹಿಡಿಯಿತು. ಅಷ್ಟರಲ್ಲಿಯೇ ಆ ಮನೆಯವರು ಹೆದರಿ ಬೊಬ್ಬೆಹಾಕಲಿಕ್ಕೆ ಸುರುಮಾಡಿದರು. ಈ ರೋದನವನ್ನು ಕೇಳಿ ಬೋರ್ಡಿಂಗ್ ಹುಡುಗರು ಅವಸರದಿಂದ ಓಡಿಹೋಗಿ, ರಭಸದಿಂದ ಉರಿಯುತ್ತಿದ್ದ ಬೆಂಕಿಯನ್ನು ಕಡಿಸಿದರು. ದೇವರ ದಯದಿಂದ, ಮನೆಯೊಳಗಿದ್ದ ಸಾಮನಕ್ಕೆ ಯಾವ ಅಪಾಯವೂ ಬರಲಿಲ್ಲ. ಇಷ್ಟರಲ್ಲಿ ಗಾಳಿಯು ಜೋರಾಗಲು, ಬೆಂಕಿಯು ಸಮೀಪದಲ್ಲಿರುವ, ಮೆ|| ಚೇರಂಡ ಅಚ್ಚಯ್ಯನವರ ಕಾಫಿ ತೋಟದ ಸುತ್ತಲಿರುವ ಕಾನನ್ನು ಆಕ್ರಮಿಸಿಕೊಳ್ಳಲು, ಹುಡುಗರು ಬಹಳ ಕಷ್ಟದಿಂದ ಭಯಂಕರವಾದ ಆ ಬೆಂಕಿಯ ಬಾಯಿಂದ ಆ ತೋಟವನ್ನು ತಪ್ಪಿಸಿದರು. ದೇವರದಯದಿಂದ ಈ ದಿವಸ ಸ್ಕೂಲಿಗೆ ರಜಾ ರಜಾ ಇಲ್ಲದೆ ಹೋಗಿದ್ದ ಪಕ್ಷದಲ್ಲಿ ಆಗುತ್ತಿದ್ದ ಅನಾಹುತವನ್ನು ನೀವೇ ಯೋಚನೆಮಾಡಿನೋಡಿರಿ. ಮೆ|| ಅಚ್ಚಯ್ಯನವರೂ, ಅಣ್ಣಯ್ಯನವರೂ ಸಹ ಬೋರ್ಡಿಂಗ್ ಹುಡುಗರನ್ನು ಎಷ್ಟು ಕೊಂಡಾಡಿದರೂ ಅದು ಸ್ವಲ್ಪವೇ, ಮನೆಯ ಸುತ್ತಲೂ ಕಾಡುವಗೈರೆ ಇರುವ ಮಹಾನುಭಾವರುಗಳರಾ, ಬೆಂಕಿಯಿಂದ ಉಂಟಾಗುವ ಅನಾಹುತಕ್ಕೆ ಒಳಗಾಗಬೇಡಿರಿ ಎಚ್ಚರಿಕೆ ತೆಗೆದುಕೊಳ್ಳಿರಿ.

ಪಿ. ಟಿ. ಸುಬ್ಬಯ್ಯ

ಹಾಲುಗುಂದ ಭಗವತೀಕ್ಲಬ್

ಈ ತಾರೀಕು ೯ ನೇ ಆದಿತ್ಯವಾರ ಹಾಲುಗುಂದ ಗ್ರಾಮಸ್ಥರು ಅವರ ಊರು ಅಂಬಲದಲ್ಲಿ ಸಭೆ ಸೇರಿ ಸದರಿ ಗ್ರಾಮದಲ್ಲಿ ಒಂದು ಕ್ಲಬ್ಬನ್ನು ಏರ್ಪಡಿಸಬೇಕೆಂದು ಒಪ್ಪಿ ಆದನ್ನು ಗ್ರಾಮದೇವರ ಹೆಸರಿನಿಂದ "ಹಾಲುಗುಂದ ಭಗವತೀಕ್ಲಬ್" ಎಂಬದಾಗಿ ಹೆಸರಿಟ್ಟು ಈ ಕೆಳಗಿನವರನ್ನು ಸಂಘದ ಜವಾಬ್ದಾರಿಕೆಯ ಮೆಂಬರರಾಗಿ ಚುನಾಯಿಸಿದರು.

ಮೇಕೇರಿರ ಪೊನ್ನಯ್ಯನವರು ಪ್ರೆಸಿಡೆಂಟ್,
ಮೇಕೇರಿರ ಕುಶಾಲಪ್ಪನವರು ಸೆಕ್ರಟರಿ,

ಕಮಿಟಿಮೆಂಬರುಗಳು.

ಕೇಲಪಂಡ್ರ ಕಾರ್ಯಪ್ಪನವರು,
ಮಚ್ಚಟ್ಟಿರ ಕುಶಾಲಪ್ಪನವರು,
ಪಂದಿತಂಡ ಸಂಬಂಧನವರು,
ಪೊಟ್ಟಂಡ್ರ ಮುತ್ತಣ್ಣನವರು,
ಅಪ್ಪಾರಂಡ ಕುಶಾಲಪ್ಪನವರು,

ಅಲ್ಲದೆ ಸಂಘಕ್ಕೆ ಉಚಿತವಾಗಿ ಮು|| ಚೋಂಬೇರ ಬಿದ್ದಯ್ಯನವರು ಕೊಡುವ ಒಂದುನೂರು ಪುಸ್ತಕಗಳನ್ನು ಅಂಗೀಕರಿಸಿಕೊಳ್ಳಬಹುದೆಂದೂ ತೀರ್ಮಾನವಾದ ನಂತರ, ಸಂಘಕ್ಕೆ ಉಚಿತವಾಗಿ ಕೊಡಗು ಪತ್ರಿಕೆಯನ್ನು ತರಿಸಿ ಕೊಡುತ್ತೇನೆಂದು ಮೇಕೇರಿರ ಪೊನ್ನಯ್ಯನವರೂ, ಜಯಕರ್ನಾಟಕವನ್ನು ಕೊಡುತ್ತೇನೆಂದು ಮೇಕೇರಿರ ಸಂಬಂಧನವರೂ, ಆರೋಗ್ಯಚಂದ್ರಿಕೆಯನ್ನು ಕೊಡುತ್ತೇನೆಂದು ಮೇಕೇರಿರ ಮುದ್ದಪ್ಪನವರೂ, ಕಂಠೀರವವನ್ನು ಕೊಡುತ್ತೇನೆಂದು ಮೇಕೇರಿರ ಮಾದಪ್ಪನವರೂ, ಎರಡು ಒಳ್ಳೇ ಪುಸ್ತಕಗಳನ್ನು ಕೊಡುತ್ತೇನೆಂದೂ ಪಂದಿತಂಡ್ರ ಅಣ್ಣಯ್ಯನವರೂ ಹೇಳಿದಕ್ಕೆ ಸಭೆಯವರು ಸಂತೋಷಪಟ್ಟು ಅವರನ್ನು ವಂದಿಸಿದರು. ಇದಲ್ಲದೆ ಗ್ರಾಮಾಭಿವೃದ್ಧಿಯ ಶುಭಸೂಚನೆ ಇದನ್ನು ನೋಡಿ ಬೇರೆ ಗ್ರಾಮದವರು ಸುಮ್ಮನಿರುವರೇ ?

M. S M.

ಅಯ್ಯಾ,

ಶಿವರಾತ್ರಿಯಲ್ಲಿ ನಡೆಯತಕ್ಕ ಇರ್ಪು ರಾಮೇಶ್ವರ ಜಾತ್ರೆ ಬಹಳ ವಿಜೃಂಭಣೆಯಿಂದ ನಡೆಯಿತು. ಬೆಂಗಳೂರ್ ಮ್ಯಾನೇಜರು ಶ್ರದ್ಧೆವಹಿಸಿ ಕೆಲಸ ಜರಗಿಸಿದ್ದು ಸಂತೋಷವೇ ಸರಿ. ವರುಷದ ಬಹಳ ಕಡಿಮೆಯೆಂದು ತಿಳಿಯಬಂತು. ವೀರರಾಜೇಂದ್ರಪೇಟೆಯಲ್ಲಿ ಹರಿಕಥೆ ಮಾಡುತ್ತಿದ್ದ ಹರಿದಾಸ ಅಪ್ಪಚ್ಚ ಕವಿಗಳು ಬಂದು ಜಾಗ್ರಣೆ ದಿನ ರಾತ್ರಿ 10 ಗಂಟೆಯಿಂದ 1 ಗಂಟೆ ಪರಿಯಂತರ ದೇವಸ್ಥಾನದ ಅಂಗಳದಲ್ಲಿ ಫಲಾಭಿಲಾಷೆ ಇಲ್ಲದೆ ಕಥೆ ನಡಿಸಿ ಸರ್ವರನ್ನು ಭಕ್ತಿಯಲ್ಲಿ ಮುಳುಗಿಸಿದಕ್ಕೆ ಎಷ್ಟು ಸಂತೋಷಪಟ್ಟರೂ ಸಾಲದು. ಕಥಾ ಅವಸಾನದಲ್ಲಿ ಕೌನ್ಸಿಲ್ ಮೆಂಬರಾದ ಗಣಪತಿ ಮಯ್ಯನವರು ದೀರ್ಘ ಉಪನ್ಯಾಸದಿಂದ ದಾಸರನ್ನು ಶ್ಲಾಘಿಸಿ ವೃದ್ಧರಿಗೆ ಆಯುರಾರೋಗ್ಯವನ್ನು ಬಯಸಿದರು. ಮಾರನೆದಿನ ಮೆಟರಾನ ಇ॥ ರು ಬೋಪಯ್ಯನವರು ಸತ್ಯನಾರಾಯಣಪೂಜೆ ನಡಿಸಿ ಸಮಾರಾಧನೆ ಇಂದ ಸರ್ವರನ್ನು ಸಂತೋಷಪಡಿಸಿದ ಕೂಡಲೇ ಮೇನೇಜರು ಬಿ. ಐಯ್ಯಪ್ಪನವರ ಪ್ರೋತ್ಸಾಹದಿಂದ ಧ್ರುವಚರಿತ್ರೆಯು ಹರಿದಾಸರಿಂದ ನಡೆಯಿಸಲ್ಪಟ್ಟು ದ್ರವ್ಯಸಹಾಯ ಮಾಡಿದಾಯಿತು. ದಾಸರು ಇಲ್ಲಿಂದ ಪೊನ್ನಂಪೇಟೆ ತಿತಿಮತ್ತಿ ಅಮ್ಮತ್ತಿ ಕಡೆ ಹೋಗುವ ಪ್ರಕಾರ ವೃದ್ಧದಾಸರಿಗೆ ದೇಶಸೇವೆ ಮಾಡಲು ಭಗವಂತನು ಆಯುರಾರೋಗ್ಯವನ್ನು ಕಲ್ಪಿಸಲೆಂದು ಪ್ರಾರ್ಥಿಸುವ,

ಪ್ರೇಕ್ಷಕ.

ಅಯ್ಯಾ,

ವಿಜ್ಞಾಪನೆ;—ಮಡಿಕೇರಿ ಹೈಸ್ಕೂಲಿನ ಹಳೆಯ ವಿದ್ಯಾರ್ಥಿಗಳ ತ್ರೈಮಾಸಿಕ ಪತ್ರಿಕೆ ನಂಬರು ೬ನೇ ಸಂಚಿಕೆಯ ೮೫, ೮೬ ಮತ್ತು ೮೭ನೇ ಪುಟಗಳಲ್ಲಿ ಕಂಡ ಪೊನ್ನಂಗಲ ತಮ್ಮೆಯ ಪುರಾಣಕಥೆಯನ್ನು ಬರೆದ ಬಾಬಿನಲ್ಲಿ ತಾವು "ಕೊಡಗು" ಪತ್ರಿಕೆಯ ೩೯ನೇ ಸಂಚಿಕೆಯಲ್ಲಿ ಮಾಡಿದ ಹೊಗಳಿಕೆಯು ಅಲ್ಪವಾಯಿತು. ನಾನು ಸಹ ಅದೇ ಬಾಬಿನಲ್ಲಿ ಇದ್ದೆನು. ಮೇರಿಕರ್ ಸಾಹೇಬರು ಬರೆದ ಗಜೆಟೀಯರ್ ಎಂಬ ಪುಸ್ತಕದ ಸಂಗ್ರಹಕೊಡಗಿನವರೆಲ್ಲಾ ಓದಿಸಿ ಅದನ್ನು ಎರಡನೆ ಛಾಪಿಸಿಕೊಳ್ಳದೆಂದು ಮಾಡಿರುವದಾಗಿ ತಿಳಿಯಿತು. ಅಂತಹುದರಿಂದ ಪುನಹ ನ್ಯಾಯವಲ್ಲದ ಅಂದರೆ ಪೊನ್ನಂಗಾಲ ತಮ್ಮೆಯ ಪೂರ್ವಸ್ಥಿತಿಯನ್ನು ಬರೆಯದೆ ಅರ್ಧ ಅರ್ಧ ಅದೂ ನಿಜವಲ್ಲ. ಪರದಂಡ ಮನೆ ಕಥೆ ಬಳ ಅಲ್ಲ, ಅಂಬಲ ಪೊರೆಬಳಯಿರುವದಾಗಿದೆ. ಅವಳು ಯಾತರಮೇಲೆ ಏರಿಕೊಂಡು ಹೋದದ್ದು ಎರಡು ಕೊಡೆಕೊಟ್ಟವರ್‍ಯಾರು. ಮೋತಂಡ ಮನೆಬಳಿ ಈ ದೇವತೆಯ ಹುಟ್ಟಿಕುಂಜಿಲ ಗ್ರಾಮದ ಪರೇಂಗೇರಿಯಲ್ಲಿ ಕುರಿಮಾಡುವದ್ಯಾಕೆ ಅಗ್ಯೆ ಮೋಚಂಡಮನೆಯವರು ಆರತಿಬೆಳಗುವದ್ಯಾತಕೆ ಕೆಂಚೆಯಾತಕ್ಕಾಗಿ ಕುಂಜಿಲಗ್ರಾಮದಿಂದ ಹೋಗಬೇಕು? ಬಂದಾವತಿ ೬ ಜನ ರೆಂತಲೂ ಇನ್ನೊಂದಾವತಿ ೫ ಜನರೆಂದು ಹೇಳಲು ಕಾರಣವೇನು, ಇವರ ಹೆಸರೇನು, ಇಗ್ಗುತಪ್ಪ, ಪಾಲೂರಪ್ಪನೆಂದು ಎರಡು ಜನರ ಹೆಸರು ಮಾತ್ರ ಹೇಳುತ್ತಾರೆ ಬಾಕಿಯವರ್‍ಯಾರ್‍ಯಾರು ಅವರ ಹೆಸರೇನು, ಅವರೆಲ್ಲಾ ಎಲ್ಲಿ ಎಲ್ಲಿ ಇದ್ದಾರೆ. ಪರದಂಡ ಮನೆಯವರಿಗೆ ಯಾತಕ್ಕೆ ಏನುಕಾಪಕೊಟ್ಟಿತು? ಎಂಬ ವಗೈರೆಯನ್ನು ಬರೆಯದೆ ಮನಸೋಯಿಚ್ಛೆ ಬರೆದಿದೆ. ಈ ದೇವತೆಯ ಪುರಾಣ ಪೂರ ತಿಳಿಯದಿದ್ದಲ್ಲಿ ಈಕೆಳಗಿನ ವಿಳಾಸಕ್ಕೆ ಬರಕೊಂಡರೆ ತಿಳಸುವದರಲ್ಲಿ ಬಡುವೆನು.

ಉದಿಯಂಡ ಮಾಚಯ್ಯ.

ಅಯ್ಯಾ,

ತಾವು ದಯವಿಟ್ಟು ತಮ್ಮ ಅಮೂಲ್ಯವಾದ ವಾರಪತ್ರಿಕೆಯಲ್ಲಿ ನಾನು ಬರೆದಿರುವಂಥ ಈ ಲೇಖನವನ್ನು ಪ್ರಕಟಿಸಬೇಕಾಗಿ ಅತಿವಿನಯದಿಂದ ಬೇಡಿಕೊಳ್ಳುತ್ತೇನೆ.

ಕೊಡಗಿನಲ್ಲಿ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಕೈಗೊಂಡ ಕೆಲಸಗಳಲ್ಲಿ ಉಪಯೋಗವಿಲ್ಲದ ಟ್ರಾಮ್‌ವೇ ಕೆಲಸವು ಒಂದು. ಇಂಥಾ ಪ್ರಯೋಜನವಿಲ್ಲದ ಮತ್ತು ಪ್ರಯೋಜನವಿಲ್ಲದ ಕೆಲಸವು ಬೇರೆ ಯಾವುದೂ ಇರುವುದಿಲ್ಲ. ಈ ವಿಷಯದಲ್ಲಿ ಕೊಡಗಿನ ಸರಕಾರವು ಇಂಥಾ ನಿಷ್ಪ್ರಯೋಜನವಾದ ಕೆಲಸಕ್ಕೆ ಕೈಹಾಕಿದರೋ ತಿಳಿಯುವುದಿಲ್ಲ. ಸರಕಾರವು ಇನ್ನು ಈ ವಿಷಯದಲ್ಲಿ ತನ್ನ ಬುದ್ಧಿಯನ್ನು ಸರಿಪಡಿಸದೆ ಇರುವುದು ಬಹಳ ವ್ಯಸನಕರ. ಇಲ್ಲಿ ಫಿನೇನ್ಸ್ ಮೆಂಬರು ಅರ್ಡರ್ ಎಂದು ಹೇಳಿ ಸೂಚಿಸಿದಾಗ ಅಧ್ಯಕ್ಷರು ನನ್ನ ಈ ವಾಕ ಭಾಷೆಯಲ್ಲಿ (ಕನ್ನಡ ಮೆಂಟರು) ಎಂದು ಹೇಳಿದರು.) ಯಾವ ಪ್ರಯೋಜನ ಇಲ್ಲವೆಂದು ತಿಳಿದರೂ ನಷ್ಟದಲ್ಲಿ ಕೆಲಸವನ್ನು ಮಾಡುತ್ತಲೇ ಇದೆ. ಈವರೆಗೆ ಮಾರ್ಗಕ್ಕೆ ಸರಿಯಾದ ಲಾಭವು ಸಿಕ್ಕಿರುವುದಿಲ್ಲ. ಮರವನ್ನು ಟ್ರಾಂಮಿಗೆ ಸಾಗಿಸುವ ಕ್ರಯವು ಒಂದು ಘನ ಅಡಿಗೆ ೧೪ ಅಣೆ ೧೦ ಅಣೆ ಆದರೂ, ಅದನ್ನು ಸರಕಾರದವರು ೧೦ ಅಣೆ ಮತ್ತು ೪ ಅಣೆ ಯಂತೆ ನಷ್ಟದಲ್ಲಿ ಮಾರುತ್ತಾರೆ. ಈ ರೀತಿ ಕೆಲಸ ಮುಂದುವರಿಸಿದರೆ ಮರದ ಮಾರಿಕೆಯಲ್ಲಿ ಯಾವ ಲಾಭವೂ ಸಿಕ್ಕುವಂತೆ ಇಲ್ಲ. ಯಾವವರೆಗೆ ಈ ಕೆಲಸದಲ್ಲಿ ಕೊಂಚವಾಟ್ಟಗಾದರೂ ಲಾಭವಿರುವುದಿಲ್ಲವೋ ಆದರ ಖರ್ಚನ್ನು ಆದರಿಂದಲೇ ಪಡೆದುಕೊಳ್ಳಲಿಕ್ಕೆ ಆಗುವುದಿಲ್ಲವೋ, ಅವರೆಗೆ ಇಂಥಾ ಕಾರ್ಖಾನೆಗೆ ಹಣ ಖರ್ಚುಮಾಡುವುದರಿಂದ ಪ್ರಯೋಜನವಿರುವುದಿಲ್ಲ. ಇಂಥಾ ಕೆಲಸವನ್ನು ಸರಕಾರದವರು ಕೈಕೊಂಡದ್ದು, ಬಹಳ ದೊಡ್ಡ ತಪ್ಪೆಂದು ಜನರು ಬಹಳವಾಗಿ ಹೇಳುತ್ತಾರೆ. ಹಿಂದೂದೇಶದ ಯಾವಭಾಗದಲ್ಲಿಯೂ, ಫಾರೆಸ್ಟ್ ಟ್ರಾಮ್‌ವೇಯಲ್ಲಿ ನಷ್ಟವಲ್ಲದೆ ಲಾಭಸಿಕ್ಕಿರುವದಿಲ್ಲವೆಂದು ಅನೇಕರು ಹೇಳುತ್ತಾರೆ. ಇಂಥಾ ಕೆಲಸದಿಂದ ಯಾವ ಪ್ರಯೋಜನವಿಲ್ಲವೆಂಬುದು ನಮಗೆ ಮುಂದಟ್ಟಾಗಿದೆ. ಯುದ್ಧದ ದೆಸೆಗಾಗಿ ಮೊದಲುಮಾಡಿದ ನಾಲ್ಕುವರೆಲಕ್ಷ ರೂಪಾಯಿ ಖರ್ಚಿನಲ್ಲಿಯೇ ನಿಲ್ಲಿಸಿ ಕೆಲಸ ಬಾಕಿಮಾಡಿದ್ದರೆ ನ್ಯಾಯವಿತ್ತು. ಪುನಃ ಟ್ರಾಮ್‌ವೇ ಸಾಲನ್ನು ಹೆಚ್ಚಿಸಲಿಕ್ಕೆ ಸುರುಮಾಡಿದ್ದರಿಂದ ಮತ್ತಷ್ಟು ಖರ್ಚು ಹೆಚ್ಚಾಯಿತು. ಯುದ್ಧಕ್ಕಾಗಿ, ವಿಮಾನಕ್ಕೆ ಮರವನ್ನೊದಗಿಸಲು ಸುರುಮಾಡಿದ ಈ ಕೆಲಸವನ್ನು ಯುದ್ಧ ಮುಗಿದರೂ ನಿಲ್ಲಿಸಲಿಲ್ಲ. ಯುದ್ಧ ಮುಗಿದಕೂಡಲೇ ಇಂಡಿಯಾ ಸರಕಾರದವರು ಪುನಃ ಹಣಕೊಡದಿದ್ದರೂ, ನಮ್ಮ ಸರಕಾರವು ತನ್ನ ಇಷ್ಟಾನುಸಾರ ಉಳಿತಾಯದಲ್ಲಿ ಸುಮಾರು ಆರುಲಕ್ಷ ರೂಪಾಯಿ ಖರ್ಚುಮಾಡಿದ ಕೆಲಸಕ್ಕೆ ಸರಕಾರದವರ ನ್ಯಾಯವಾದ ಸಮಜಾಯಿಸಿಕೆಯು ಅತ್ಯವಶ್ಯಕ.

ಡಿ ಪಿ ಡಬ್ಲ್ಯೂ ಇಲಾಖೆ ಕಡೆಗೆ ಗಮನಕೊಟ್ಟು, ಅದರ ಕಾಮಗಾರಿ, ರಿಪೇರಿಕೆಲಸಕ್ಕೆ ಮಾಡುವ ಖರ್ಚು ಎರಡುಲಕ್ಷ ಐವತ್ತೈದುಸಾವಿರ ಚಿಲ್ರೆ ರೂಪಾಯಿಯಲ್ಲಿ, ಸುಮಾರು ಮೂರು ಒಂದನೇ ಅಂಶಕ್ಕಿಂತ ಹೆಚ್ಚಾಗಿ ಸಿಬ್ಬಂದಿಗೆ ಖರ್ಚುಮಾಡುವುದು ಬಹಳ ಹಾಸ್ಯಾಸ್ಪದವಾಗಿದೆ. ಈ ಬಾಬಿನಲ್ಲಿ ಖರ್ಚು ಕಡಿಮೆಮಾಡುವುದು ಬಹಳ ಅವಶ್ಯ. ಯಾಕೆಂದರೆ ಇಷ್ಟು ಸಣ್ಣದೇಶಕ್ಕೆ ಇಷ್ಟು ದೊಡ್ಡಸಿಬ್ಬಂದಿ ಇರುವುದು ಅಕ್ರಮ.

ಪೋಲೀಸು ಇಲಾಖೆಯನ್ನು ತೆಗೆದುಕೊಂಡರೆ, ಅಲ್ಲಿಯೂ ಸಹ ಖರ್ಚು ಬಹಳ ಹೆಚ್ಚೆಂದೇ ಹೇಳಬೇಕಾಗಿದೆ. ಈಗ ಖರ್ಚಾಗುವ ಹಣದ ಹತ್ತರಲ್ಲಿ ಒಂದು ಪಾಲೂ, ೧೯೨೦ ನೇ ಇಸ್ವಿಗೆ ಮೊದಲು ಖರ್ಚಾಗುತ್ತಿರಲಿಲ್ಲ. ರಾಜಭಕ್ತಿಗೆ ಹೆಸರುಗೊಂಡ ಮತ್ತು ಯಾವಾಗಲೂ ಶಾಂತಚಿತ್ತರಾದ ಈ ದೇಶದಲ್ಲಿ ಪೋಲೀಸಿಗೆ ಇಷ್ಟು ಹಣ ಖರ್ಚುಮಾಡುವುದು ಅವಶ್ಯವೆಂದು ತೋರುವುದಿಲ್ಲ. ಪ್ರತಿ ಊರುಗಳಲ್ಲಿ ಪಂಚಾಯಿತಿ ಪದ್ಧತಿಯನ್ನು ಜಾರಿಗೆ ತಂದು, ಪೋಲೀಸು ಖರ್ಚನ್ನು ಕಡಿಮೆ ಮಾಡಬಹುದು. ಮೇಲೆಕಂಡ ಇಲಾಖೆಗಳಲ್ಲಿ ಕೋತಿಯು ಅತ್ಯವಶ್ಯಕ. ಅಲ್ಲಿ ಉಳಿತಾಯವಾಗುವ ಹಣವನ್ನು, ಔಷಧ ಇಲಾಖೆ, ವಿದ್ಯಾ ಇಲಾಖೆ, ವ್ಯವಸಾಯ ಕೈಗಾರಿಕಾ ಇಲಾಖೆ, ಮತ್ತು ಪರಸ್ಪರ ಸಹಾಯದ ಇಲಾಖೆಗಳಿಗೆ ಖರ್ಚುಮಾಡಿ ಜನರ ಅನುಕೂಲವನ್ನು ಹೆಚ್ಚಿಸುವುದು ಒಳ್ಳೇದು.

ಕೊನೆಯಲ್ಲಿ ಮಾನ್ಯರಾದ ಫೈನಾನ್ಶಿಯಲ್ ಮೆಂಬರು ತನ್ನಲ್ಲಿರುವ ಎಲ್ಲಾ ತಿಳುವಳಿಕೆಯಿಂದ ಎಷ್ಟು ಸ್ವಾಸ್ಥ್ಯವಿದ್ದರೂ ವಿವರವಾಗಿ ತಯಾರಿಸಿದ ಆದಾಯವೆಚ್ಚದ ಪಟ್ಟಿಗೆ ಬಹಳ ಸಂತೋಷಪಡಬೇಕಾಗಿದೆ. ಅವರು ಈ ಪಟ್ಟಿಯಲ್ಲಿ ಕೊಂಚಮಟ್ಟಿಗಾದರೂ ಕೈಗಾರಿಕಾಭಿವೃದ್ಧಿಯ ಇಲಾಖೆಗೆ ಹಣವನ್ನಿಟ್ಟದ್ದು ಬಹಳ ಶ್ಲಾಘನೀಯವಾಗಿದೆ.

ಕೊಡಗಿಗೆ ದೊರೆತ ನ್ಯಾಯವಿಧಾಯಕ ಸಭೆಯಲ್ಲಿ ಯಾವ ಅಧಿಕಾರವೂ ಇಲ್ಲದ್ದಕ್ಕಾಗಿ ಬಹಳ ವಿವಾದವಾಗಿದೆ. ಕೊಡಗಿಗೆ ಒಂದು ನ್ಯಾಯವಿಧಾಯಕ ಸಭೆಯು ದೊರೆಯುತ್ತದೆಂದು ಭರವಸೆಯಲ್ಲಿ ಜನರೆಲ್ಲಾ ... ದೊರೆಯಿತೆಂದು ಭಾವಿಸಿದ್ದರು. ಆದರೆ ಆದರ ಅರಿಯು ಈ ಮಹಾ ಸಭೆಯಲ್ಲಿ ನಮ್ಮ ಕೈಯನ್ನು ಎಲ್ಲಾ ವಿಧದಲ್ಲಿಯೂ ಕಟ್ಟಿಬಿಟ್ಟದ್ದರಿಂದ ನಿರಾಶೆಯಾಯಿತು. ಬೇರೆ ದೇಶಕ್ಕೆ ಪ್ರಾಂತ್ಯ ಆದಾಯವೆಚ್ಚದಮೇಲೆ ಓಟಾಗುವಮಾತಾದ ಹಕ್ಕನ್ನು ಕೊಟ್ಟಿದ್ದರೂ, ನಮಗೆ ಕೊಟ್ಟಿರುವುದಿಲ್ಲ. ಆದಾಯವೆಚ್ಚದಮೇಲೆ ಪೂರ್ಣ ಅಧಿಕಾರ ಕೊಟ್ಟಹೊರತು ನಮಗೆ ಎಂದೂ ತೃಪ್ತಿಯಾಗುವುದಿಲ್ಲ. ಸರಕಾರವು ನಮ್ಮನ್ನು ಪ್ರಾಂತ್ಯ ಸಂಬಂಧ ಈ ರೀತಿಯಾಗಿ ಹಕ್ಕನ್ನು ಕೊಡದೆ ಇರುವ ಕಾರಣ ತಿಳಿಯುವುದಿಲ್ಲ. ಈ ಹಕ್ಕು ಸಿಕ್ಕದ್ದಲ್ಲದೆ, ನಮ್ಮನ್ನು ಕಳುಹಿಸದ ಓಟರುಗಳ ಕೋರಿಕೆಯು ನೆರವೇರುವುದಿಲ್ಲ. ಆದ್ದರಿಂದ ಇಂಥಾ ಕೊರತೆಯನ್ನು ಸರಕಾರದವರು ಬೇಗ ನೀಗಿಸುವರಾಗಿ ನಂಬಿಗೆ ಇದೆ.

ಮ್ಮ॥ ಸಿದ್ಧ ಸುಬ್ರಮ್ಮಯ್ಯನವರು

ಅಯ್ಯಾ,

ಆದಾಯವೆಚ್ಚದ ವರದಿಯಮೇಲೆ ನಾನು ಈ ಕೆಳಗಿನ ಅಭಿಪ್ರಾಯವನ್ನು ಹೇಳಲು ಇಷ್ಟಪಡುತ್ತೇನೆ. ಈಗ ಸಿಕ್ಕಿರುವ ಕೌನ್ಸಿಲ್ಲು ಮತ್ತು ದೇಶದ ಬಜೆಟ್ಟನ್ನು ಚರ್ಚಿಸಲು ದೊರೆತ ಸ್ವತಂತ್ರ ಸಹ ರಾಜ್ಯಾಡಳಿತದಲ್ಲಿ ದೇಶೀಯರು ಭಾಗಿಗಳಾಗಬೇಕೆಂದು ಜನರು ಕೆಲವುಕಾಲದಿಂದಲೂ ಚಳವಳಿಮಾಡುತ್ತಿದ್ದರು. ಈ ಕೌನ್ಸಿಲ್ ವಾಗ್ದಾನವಾದನಂತರ ದೇಶವು ಒಂದು (ಸ್ವತಂತ್ರ) ಪ್ರತ್ಯೇಕಪ್ರಾಂತ್ಯವಾಗಿ ಉಳಿಯಲು ಅರಿಸಿಕೊಂಡಿತು. ಕೌನ್ಸಿಲಿನಲ್ಲಿ ತೋರುವ ಜನರ ಅಭಿಪ್ರಾಯದಂತೆ, ಇನ್ನು ಮುಂದೆ, ಎಷ್ಟರಮಟ್ಟಿಗೆ ರಾಜ್ಯಾಡಳಿತವನ್ನು ಮುಂದರಿಸುತ್ತಿಂಬರನ್ನು ಇತ್ಯರ್ಥಿಸುವುದು ಸರಕಾರದವರಲ್ಲಿದೆ. ಜನರ ಅಭಿಪ್ರಾಯದಂತೆಯೇ ನಡೆಯಬೇಕೆಂತ ಸರಕಾರವನ್ನು ಒತ್ತಾಯಪಡಿಸಲು ಈ ಕೌನ್ಸಿಲಿಗೆ ಅಷ್ಟು ಶಕ್ತಿಯಿಲ್ಲ. ಆದರೆ ಪ್ರಕೃತ ನಮಗೆ ಒಳಿಸಿರುವ ದಯಾಳಿಗಳಾದ ಕಮಿಷನರ್ ಸಾಹೇಬರ ಸಹಾಯದಿಂದ ದೇಶದ ರಾಜ್ಯಾಡಳಿತದ ಮುಂದಿನ ತತ್ವವು (ಪಾಲಿಸಿ) ಕೌನ್ಸಿಲಿನ

ಕೊಡಗು ಕೌನ್ಸಿಲು ಮೀಟಿಂಗು.

ಲ್ಲಿನ ತರಾವ್ರುಗಳ ರಿಫಾರ್ಮಿನಮೇಲೆ ಅವಲಂಬಿಸೀತೆಂತ ನಾನು ನಂಬುತ್ತೇನೆ.

ನಮ್ಮ ದೇಶದ ಜನರು, ಅದರಲ್ಲೂ ಮುಖ್ಯವಾಗಿ ನಮ್ಮ ನಂಜರಾಯಪಟ್ಟಣದ ತಾಲೋಕಿನ ಜನರು ಈ ಕೌನ್ಸಿಲಿನ ಗೌರ್ಮೆಂಟಿನಮೇಲೆ ತಮಗಳ ಭವಿಷ್ಯತ್ತನ್ನು ಬಹಳ ನಂಬಿಕೊಂಡಿದ್ದಾರೆ. ಇದರಿಂದ ಅವರ ಅನಳ್ಪ ರಕ್ಷಕೋಚನೀಯವಾದ ಸ್ಥಿತಿಯು ಹೋಗಲಾಡಿಸಲ್ಪಡುವುದೆಂದೂ, ಅವರ ಆರೋಗ್ಯಸ್ಥಿತಿಯು ನಾಜೂಕು ಮಾಡಲ್ಪಡುವುದೆಂದೂ ಅವರಿಗೆ, ಅವರ ದನಕರುಗಳಿಗೆ ಮತ್ತು ಅವರ ವ್ಯವಸಾಯಕ್ಕೆ ಸಹ ನೀರು ಸರಬರಾಯಿ ದೊರೆತೀತೆಂತಲೂ ಅವರಿಗೆ ಇರುವ ರಿಜರ್ವ್ ಫಾರೆಸ್ಟಿನ ತೊಂದರೆನಿವಾರಣೆ ಮಾಡಲ್ಪಡುವುದೆಂದೂ ತಮ್ಮ ಜಮೀನುಗಳಲ್ಲಿ ಬೆಳೆದ ಗಂಧದ ಮರಗಳಿಗೆ ತಕ್ಕಷ್ಟು ಪ್ರತಿಫಲ ದೊರಕಬೇಕೆಂತಲೂ ಅವರ ವ್ಯವಸಾಯಕ್ಕೆ ಬೇಕಾಗುವ ಸಲಕರಣೆಗಳು ಧಾರಾಳವಾಗಿ ಉಪಯೋಗಿಸಲು ಇರುವ ಅಡ್ಡಿಗಳು ಹೋದೀತೆಂತಲೂ ನಿರೀಕ್ಷಿಸಿಕೊಂಡಿದ್ದಾರೆ.

ವಿದ್ಯೆ :—ಪ್ರೈಮರಿ ವಿದ್ಯಾಭ್ಯಾಸದಲ್ಲಿ ನಮ್ಮ ಕೊಡಗುದೇಶವು ಇತರ ಭಾಗದ ಸರಾಸರಿಗಿಂತ ಮುಂದೆ ಇದೆಯಾದರೂ ನಮ್ಮ ನಂಜರಾಯಪಟ್ಟಣದ ತಾಲೋಕು ಕೊಡಗಿನ ಇತರ ಭಾಗಗಳಿಗಿಂತ ಹಿಂದೆ ಬಿದ್ದಿದೆ. ನಮ್ಮ ತಾಲೋಕಿನಲ್ಲಿ ಒಂದಾದರೂ ಲೋವರ್‌ಸೆಕೆಂಡರಿ ಶಾಲೆ ಇಲ್ಲ. ನಮ್ಮ ತಾಲೋಕಿನ ಪ್ರಜೆಗಳು ಕೇವಲ ಬಡವರು. ಬಡತನದ ದೆಸೆಯಿಂದ ಸೆಕೆಂಡರಿ ವಿದ್ಯಾರ್ಜನೆಗಾಗಿ ತಮ್ಮ ಮಕ್ಕಳನ್ನು ಮಡಿಕೇರಿಗೆ ಕಳುಹಿಸಲೂ ಲ್ಲರು ಮತ್ತು ಸ್ಥಳದಲ್ಲಿರುವಂಥ ಪ್ರೈಮರಿಶಾಲೆಗಳಿಗೂ ಕಳುಹಿಸುವುದಿಲ್ಲ. ಯಾಕೆಂದರೆ ಅವರು ತಮ್ಮ ಕೆಲಸಗಳಿಗಾಗಿ ತಮ್ಮ ಮಕ್ಕಳನ್ನು ಮನೆಯಲ್ಲಿಯೇ ಇಟ್ಟುಕೊಂಡು ಬಿಡುವುದು ವಾಡಿಕೆಯಾಗಿದೆ. ಈ ಸ್ಥಿತಿಯನ್ನು ನಮ್ಮ ತಾಲೋಕಿನಲ್ಲಿರುವಂಥ ತಿಳುವಳಿಕೆಯುಳ್ಳವರು ನಮ್ಮ ಈ ತಾಲೋಕಿನಲ್ಲಿ ಪ್ರೈಮರಿ ವಿದ್ಯಾಭ್ಯಾಸವನ್ನು ಮುಫ್ತಾಗಿಯೂ ಕಡ್ಡಾಯವಾಗಿಯೂ ಮಾಡಿಕೊಡಬೇಕೆಂತಲೂ ಅದಷ್ಟು ಬೇಗನೆ ಸೋಮವಾರಪೇಟೆ ಮತ್ತು ಕೊಡಲಿಪೇಟೆಯಲ್ಲಿರುವ ಶಾಲೆಗಳನ್ನು ಲೋವರ್‌ಸೆಕೆಂಡರಿ ದರ್ಜೆಗೆ ರಿಸಬೇಕೆಂದಲೂ ಕೇಳುತ್ತಿದ್ದಾರೆ. ಈ ವರ್ಷದ ಬಜೆಟ್ಟಿನಲ್ಲಿ ನಮ್ಮ ತಾಲೋಕಿನ ಅನಕ್ಷರತ್ವವನ್ನು ಹೋಗಲಾಡಿಸಲು ಬೇರೆ ಹಣವನ್ನು ತೆಗೆದಿಟ್ಟಿಲ್ಲವೆಂತ ನನಗೆ ಕಾಣುತ್ತದೆ. ಆದರೆ ಈ ಬಾಬಿನಲ್ಲಿ ತಕ್ಕ ಪರಿಹಾರವನ್ನು ಅದಷ್ಟು ಜಾಗ್ರತೆ ಕ್ರಮೇಣ ಹೊಂದಲು ನಿರೀಕ್ಷಿಸುತ್ತೇನೆ.

ಆರೋಗ್ಯ :—ನಮ್ಮ ತಾಲೋಕಿನ ಜನಸಂಖ್ಯೆಯು ಕಡಿಮೆಯಾಗ್ತಾ ಇದೆ. ಈ ವಿಷಯವನ್ನು ಸರಕಾರದವರೇ ಒಪ್ಪಿದ್ದಾರೆ. ಜನಗಳು ವಿದ್ಯಾವಂತರಾಗುವವರೆಗೂ ಆರೋಗ್ಯವನ್ನು ಅಭಿವೃದ್ಧಿ ಮಾಡಲು ಸರಕಾರದವರು ಕಾಯಕೂಡದು. ಕೆಲವು ಗ್ರಾಮಗಳಲ್ಲಿ ಕಾಲರಾ ಜ್ವರವು ವ್ಯಾಪಿಸಿ ಹಾಳುಮಾಡಿತು. ಮತ್ತು ಮಲೇರಿಯಾ ಜ್ವರ ಸಾಧಾರಣವಾಗಿ ಎಲ್ಲಾ ಗ್ರಾಮಗಳಲ್ಲಿಯೂ ಜಾಮೂಲಾಮೇರೆ ಇದ್ದೇ ಇದೆ.

ನಮ್ಮ ತಾಲೋಕಿನ ಸ್ಥಿತಿಯು ಮೈಸೂರಿನ ಮಲೆನಾಡು ಪ್ರಾಂತ್ಯವನ್ನು ಬಹುಮಟ್ಟಿಗೆ ಹೋಲುತ್ತದೆ. ಮೈಸೂರು ಸರಕಾರದವರು ಮಲೆನಾಡು ಅಭಿವೃದ್ಧಿಗಾಗಿ ಮಲೆನಾಡು ಇಂಪ್ರೂವ್‌ಮೆಂಟ್ ಸ್ಕೀಮೆಂತ ಜಾರಿಗೆ ತಂದು ತಾನ್ಮೂಲಕ ಅಲ್ಲಲ್ಲಿ ಆಸ್ಪತ್ರೆಗಳನ್ನು (ಅಲೋಪತಿ, ಆಯುರ್ವೇದಿಯ ಪದ್ಧತಿ ಮಾತ್ರ, ಮತ್ತು ಯೂನಾನಿ) ಇಡುವುದಕ್ಕೂ ಅಲ್ಲಲ್ಲಿ ಕುಡಿಯಲು ನೀರಿನ ಭಾವಿಗಳನ್ನು ತೆಗೆಸುವುದಕ್ಕೂ ಗ್ರಾಮಗಳಲ್ಲಿ ಕೊಯಿನಾಪ್ರತಿಯನ್ನು ಮುಫ್ತಾಗಿ ಹಂಚುವುದಕ್ಕೂ ಬಹಳ [illegible] ಖರ್ಚು ಮಾಡುತ್ತಿದ್ದಾರೆ. ನಮ್ಮ ದೇಶದಲ್ಲಿ [illegible]

[illegible]

ಸ್ಥಿತಿಯಲ್ಲಿವೆ. ಸರಕಾರದವರು ಈ ಕೆರೆಗಳ ದುರಸ್ತಿಗಾಗಿ ಹಣ ಖರ್ಚುಮಾಡುತ್ತಿದ್ದಾರೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ಇದರಿಂದ ತಕ್ಕ ಪ್ರತಿಫಲವೇನೂ ದೊರಕ್ಕಿಲ್ಲವೆಂತ ಹೇಳಲು ಬಹಳ ವ್ಯಸನಪಡುತ್ತೇನೆ. ಮಳೆ ಸರಾಸರಿ ಲೆಖ್ಖಕ್ಕೆ ಸ್ವಲ್ಪ ಕಡಿಮೆಯಾದಾಗ ಕಂದಾಯ ರಿಮಿಷನ್‌ಗೆ ಬಹಳ ಅರ್ಜಿಗಳು ಬರುತ್ತಿರುವುದು ಸರಕಾರದವರ ತಿಳುವಳಿಕೆಯಲ್ಲಿದೆಯೆಂತ ನಾನು ನಂಬುತ್ತೇನೆ.

ಇನ್ನು ಹಾರಂಗಿ ಪ್ರಾಜೆಕ್ಟು ನನಗೆ ತಿಳಿದಮಟ್ಟಿಗೆ ಈ ಪ್ರಾಜೆಕ್ಟು ಸುಮಾರು ೩೦ ವರ್ಷಗಳಿಂದಲೂ ಜನರ ಮತ್ತು ಸರಕಾರದವರ ಆಲೋಚನೆಯಲ್ಲಿದೆ. ಯಾವ ಹೋಬಳಿಯಲ್ಲಿ ಈ ಪ್ರಾಜೆಕ್ಟು ಇಟ್ಟಿರುವರೋ ಅಲ್ಲಿ ನಮ್ಮ ಇಡೀದೇಶದ ಇತರಭಾಗಗಳಿಗಿಂತ ಮಳೆ ಬಹಳ ಕಮ್ಮಿ. ಈ ಪ್ರಾಜೆಕ್ಟಿನಿಂದ ಸುಮಾರು ೧೯ ಸಾವಿರ ಎಕರೆಗೆ ಸೌಕರ್ಯವಿದೆ. ಫೈನಾನ್ಸ್‌ಮೆಂಬರು ಈ ಪ್ರಾಜೆಕ್ಟಿನ ವಿಷಯವನ್ನು ತಮ್ಮ ಮೆಮೊರಾಂಡಂನಲ್ಲಿ ಕಾಣಿಸುತ್ತಾರೆ. ಈ ವಿಷಯಕ್ಕೆ ತಕ್ಕ ನಿಗಾ ಕೊಟ್ಟಿದ್ದು ನನಗೆ ಸಂತೋಷವಾಗಿದೆ. ಇದಕ್ಕೆ ಸಂಬಂಧಪಟ್ಟ ಜನಗಳು ಈ ಬಾಬಿಗಾಗಿ ಖರ್ಚಾಗುವ ಹಣದಲ್ಲಿ ಕೆಲವುಭಾಗ ತಾವು ಕೊಡುವುದಾಗಿ ಹೇಳುತ್ತಿರುವುದು ಫೈನಾನ್ಸ್‌ಮೆಂಬರರ ಅವಗಾಹನೆಗೆ ಬಂದಿರಲಿಕ್ಕಿಲ್ಲವೆಂತ ಊಹಿಸುತ್ತೇನೆ. ಇದನ್ನು ಲೆಖ್ಖಕ್ಕೆ ತೆಗೆದುಕೊಂಡರೆ ಬಡ್ಡಿ ಗಿಟ್ಟುವ ವಿಷಯದಿಂದ ಆಕ್ಷೇಪಣೆಯಾಗಲಾರದು. ಇಡೀ ತಾಲೋಕಿನ ಬಹಳ ಭಾಗದ ಜನರಿಗೆಲ್ಲಾ ಆವಶ್ಯಕವಿರುವಂಥ ಈ ವಿಷಯದಲ್ಲಿ ತನಿಖೆ ನಡಿಸಲು ಸರಕಾರದವರು ಸ್ವಲ್ಪವೂ ಸಾವಕಾಶಮಾಡಬಾರದು.

ಫಾರೆಸ್ಟು :—ಫಾರೆಸ್ಟು ರಿಜರ್ವಮಾಡುವುದಕ್ಕೆ ಪ್ರಾರಂಭವಾದಂದಿನಿಂದ ಈ ತಾಲೋಕು ಬಹಳ ಹಿಂದೆ ಬೀಳುತ್ತಿದೆ. ವಾಸಮಾಡುವ ಗ್ರಾಮಗಳ ಸಮೀಪ ರಿಜರ್ವ್ ಫಾರೆಸ್ಟು ಇರುವ ಮೊದಲು ಜನಗಳೂ ದನಕರುಗಳೂ ಬಹಳ ಉತ್ತಮಸ್ಥಿತಿಯಲ್ಲಿದ್ದುವು. ಮತ್ತು ಆಗ ಎಲ್ಲಾ ಜಾಗಗಳೂ ಸ್ವತಂತ್ರ ಉಪಯೋಗಕ್ಕೆ ಒದಗಿ ಅವುಗಳಲ್ಲಿ ತಮ್ಮ ದನಕರುಗಳನ್ನು ಮೇಯಿಸಿಕೊಂಡು ತಮ್ಮ ವ್ಯವಸಾಯದ ಎಲ್ಲಾ ಸಾಮಗ್ರಿಗಳನ್ನು ತೆಗೆದುಕೊಳ್ಳುತ್ತಿದ್ದರು. ಈ ಜಾಗಗಳೆಲ್ಲಾ ರಿಜರ್ವ್ ಮಾಡಲ್ಪಟ್ಟನಂತರ ದನಗಳ ಜರಾಯಿಗೆ ಅಡಚಣೆಯುಂಟಾಯಿತು; ಮತ್ತು ಈ ಕಾಡುಗಳಲ್ಲಿ ಕಾಡುಮೃಗಗಳು ಅಭಿವೃದ್ಧಿಯಾಗಿ ರೈತನು ವರ್ಷವೆಲ್ಲಾ ಕಷ್ಟಪಟ್ಟು ಬೆಳೆಯುವ ಪೈರನ್ನು ತಿಂದು ನಾಶವಾಗುವುದು ಶುರುವಾಯಿತು. ಇವರ ಹಾವಳಿಯನ್ನು ನಿವಾರಣೆಮಾಡಿಕೊಳ್ಳಲು ಇಡೀ ವರ್ಷದಲ್ಲಿ ಸುಮಾರು 6 ತಿಂಗಳವರೆಗೂ ರೈತರು ತಮ್ಮ ಹೊಲ ಗದ್ದೆಗಳನ್ನು ನಿದ್ದೆಗೆಟ್ಟು ಕಾಯಬೇಕಾಯಿತು. ಫಾರೆಸ್ಟು ಪಕ್ಕದಲ್ಲಾಗಲೆಲ್ಲಾ ಮಲೇರಿಯಾ ವ್ಯಾಧಿಯು ಅತ್ಯಧಿಕವಾಯಿತು. ಇದರ ಪರಿಣಾಮವಾಗಿ ಜನಸಂಖ್ಯೆಯು ಬಹುಬೇಗನೆ ಕ್ಷೀಣವಾಗುತ್ತಾ ಬಂತು. ಮಾಲಂಬಿಗೆ ಪೂರ್ವದಿಕ್ಕಿನಲ್ಲಿರುವ ಗ್ರಾಮಗಳನ್ನೆಲ್ಲಾ ಜಂಗಲು ಹಾಳಾಗಿರುವುದೇ ಇದಕ್ಕೆ ನಿದರ್ಶನವಾಗಿದೆ. ಇದರ ನಿವಾರಣೆಗಾಗಿ ಅದಷ್ಟು ಜಾಗ್ರತೆ ರಿಜರ್ವ್ ಫಾರೆಸ್ಟಿನಲ್ಲಿ ಫ್ರೀಯಾಗಿ ಬೇಟೆಯಾಡಲೂ ದನಕರುಗಳ ಮೇಯಿಸಲೂ ಬಿಟ್ಟುಕೊಟ್ಟು ಫಾರೆಸ್ಟಿಗೆ ಮುಟ್ಟಿಕೊಂಡು ಭೂಮಿ ಇರುವ ರೈತರುಗಳಲ್ಲಾ ಗೋವಿಲ್ಲೈಸನ್ಸು ಮಂಜೂರಾತ್ಮಾಡತಕ್ಕದ್ದು. ಹೀಗೆ ಮಾಡದಿದ್ದರೆ ಮಾಲಂಬಿಗೆ ಪಶ್ಚಿಮ ದಿಕ್ಕಿನಲ್ಲಿರುವ ಗ್ರಾಮಗಳ ನಾಶಕ್ಕೆ ಸ್ವಲ್ಪವೂ ತಡವಾಗಲಾರದು. [illegible] ಬಹುಮಟ್ಟಿಗೆ ಸಂಬಂಧವಿಲ್ಲವೆಂತ ಕಾಣಬರುತ್ತದೆ. [illegible] ಇನ್ನೂ ಒಳ್ಳೇ ಅಭಿವೃದ್ಧಿಸ್ಥಿತಿಯಲ್ಲಿಯೂ ಇರುವಂಥ ಪ್ರಜೆಗಳೇ ಸರಕಾರಕ್ಕೆ ದೊಡ್ಡ ಬಂಡವಾಳ ಅವಶ್ಯವಿದ್ದಾಗ ಕೃಷಿಯಿಂದ ರೈತರಿಂದ ಸರಕಾರಕ್ಕೆ ಸಹಾಯ ಸಿಕ್ಕಿಯೇ ಸಿಕ್ಕುತ್ತೆ. ಅಲ್ಲದೆ ಇವುಗಳೆಲ್ಲಾ ರೈತನು ತಾನು ಕೊಡುವ ಕಂದಾಯಕ್ಕೆ ಪ್ರತಿಫಲವಾಗಿ ನಿರೀಕ್ಷಿಸುವಂಥಾವುಗಳು.

ರಿಜರ್ವ್ ಮಾಡಲ್ಪಟ್ಟಿರುವ ರಿಜರ್ವ್ ಫಾರೆಸ್ಟಿನ ಹೆಚ್ಚು ಭಾಗವು ಅನಾವಶ್ಯಕವಾಗಿ ರಿಜರ್ವ್‌ಮಾಡಲ್ಪಟ್ಟಿದೆ. ಇವುಗಳಲ್ಲಿ ಪ್ರಯೋಜನವಿರುವ ಮರಬೆಳೆಯುವುದಿಲ್ಲ. ಗಂಧವು ಸಹ ಪೈಸಾರಿಯಲ್ಲಿಯೂ ರೈತರ ಹಿಡುವಳಿಯಲ್ಲಿಯೇ ಬಹಳ ಚೆನ್ನಾಗಿ ಬೆಳೆಯುತ್ತವೆ. ನಮ್ಮ ತಾಲೋಕಿನಲ್ಲಿರುವ ಸರಕಾರದ ಗಂಧದ ತೋಟವು ಅಷ್ಟುಪ್ರಯೋಜನ ಕೊಟ್ಟಿದೆಂತನಾನು ನಂಬುವುದಿಲ್ಲ. ಆದ್ದರಿಂದ ರಿಜರ್ವ್‌ನಲ್ಲಿ ಉಪಯೋಗವಾದದ್ದು ಎಷ್ಟು ಅನುಪಯೋಗವಾದದ್ದು ಎಷ್ಟು ಎಂಬುದನ್ನು ನಿರ್ಧರಿಸಲು ಒಂದು ಸರಕಾರದ ಮತ್ತು ಪ್ರಜಗಳ ಪ್ರತಿನಿಧಿಗಳನ್ನೊಳಕೊಂಡ ಒಂದು ಕಮಿಟಿಯನ್ನು ನೇಮಿಸ ಬೇಕೆಂದು ಕೇಳುತ್ತೇನೆ. ಹೀಗೆಯೇ ೧೦ ೧೦ ವರ್ಷಕ್ಕೆ ಪುನರಾಲೋಚನೆಯನ್ನು ಮಾಡಬೇಕು. ಹತ್ತು ವರ್ಷಗಳಿಂದ ಈ ಇಲಾಖೆಯ ಖರ್ಚು ನಿಧಿಗಳ ಹೆಚ್ಚಿಸಿರುವುದರಲ್ಲಿ ಯೇ ಬಹಳ ಹಿಡಿದಿರುವುದು. ಮೇಲೆಹೇಳಿದ ಕಮಿಟಿಯವರು ಈ ಇಲಾಖೆಯಲ್ಲಿ ಖರ್ಚು ಕಮ್ಮಿಮಾಡುವ ಸಂಗತಿಯನ್ನು ಆಲೋಚಿಸಬೇಕು.

ಗಂಧ :—ನಾನು ಮೇಲೆಹೇಳಿದಂತೆ ಗಂಧವು ನಮ್ಮ ತಾಲೋಕಿನಲ್ಲಿಯೇ ಹೆಚ್ಚಾಗಿ ದೊರೆಯುವುದು. ಅದರಲ್ಲಿಯೂ "ಪೈಸಾರಿ" ಮತ್ತು ಖಾಸಗಿ ಜಾಗಗಳಲ್ಲಿಯೇ ಗಂಧವನ್ನು ಕಾಪಾಡುವ ಜವಾಬ್ದಾರಿಯನ್ನು ಬಹುಶ್ರಾಂತರಮೇಲೆ ಹೊರಿಸಿದ್ದಾರೆ. ಮತ್ತು ಅನೇಕ ವೇಳೆ ಕಾಡುಬೆಂಕಿಯ ದೆಸೆಯಿಂದ ತಮ್ಮ ಹಿಡುವಳಿಯಲ್ಲಿದ್ದ ಗಂಧಕ್ಕೆ ಅಪಾಯಬಂದಾಗ ರೈತರನ್ನು ಗುರಿಪಡಿಸಿದ್ದಾರೆ. ಆದ್ದರಿಂದ ಗಂಧದಮರದ ಉತ್ಪತ್ತಿಯಲ್ಲಿ ರೈತನೂ ಭಾಗಿಯಾಗಬೇಕಾದ್ದು ಅವಶ್ಯ. ಫೈನಾನ್ಸ್ ಮೆಂಬರವರ ಮೆಮೊರಾಂಡಂ (ಬಜೆಟ್‌) ನಲ್ಲಿ ಉದಹರಿಸಿರುವಂತೆ ದೇಶದ ಉತ್ಪತ್ತಿಯಲ್ಲಿ ದೊಡ್ಡದಾದದ್ದು ಗಂಧ. ಗಂಧದ ರಕ್ಷಣೆಗೆ ವಿಶೇಷ ಖರ್ಚು ಇಲ್ಲ. ಆದರೆ ಇದನ್ನು ಕಿತ್ತು ರೇಟುಮಾಡಬೇಕಾದರೆ ಮಾತ್ರ ಸ್ವಲ್ಪಖರ್ಚು ತಗಲುವುದು. ಆ ಖರ್ಚು ಸಹ ವಿಶೇಷ ದೊಡ್ಡದಲ್ಲ. ಹೀಗಿರುವುದರಿಂದ, ರೈತನಿಗೂ ಕೆಲವುಭಾಗ ಸಿಕ್ಕಬೇಕಾದ ನ್ಯಾಯ. ರೀತಿಯಲ್ಲಿ ದೊರೆಯುತ್ತಿರುವ ಮತ್ತು ಖಾಯಂ ಆಗಿರುವಂಥ ಈ ಗಂಧದ ಉತ್ಪತ್ತಿಯನ್ನು ಮಾವುಕೂಟವೇ ಮೊದಲಾದ ಅನುಮಾನದ ಆದಾಯದಲ್ಲಿ ದಿಂತ ಏರ್ಪಾಡುಗಳನ್ನು ತಂದು ಇಲಾಖೆಯ ಖರ್ಚು ನಡೆಸಲು ಉಪಯೋಗಿಸುತ್ತಿದ್ದಾರೆ.

ಕೆಲವು ವರ್ಷಗಳ ಮುಂಚೆ ಗಂಧ ಕೀಳುವುದು ವರ್ಷಕ್ಕೆ ೩೦೦ ಟನ್ನಿಗೆ ಮಿತಿಯಲ್ಲಿವೆಂತ ತಿಳಿಯುತ್ತೇನೆ. ಈ ಇಲಾಖೆಯ ದುಬಾರಿಖರ್ಚು ತಡೆಯಲು ಈಚೆಗೆ ವರ್ಷಕ್ಕೆ ೩೦೦ ರಿಂದ ೪೦೦ ಟನ್‌ವರೆಗೆ ಕೀಳುತ್ತಿದ್ದಾರೆಂತ ನಂಬುತ್ತೇನೆ. ದೇವರು ದಯಪಾಲಿಸುವ ಈ ಸ್ವಾಭಾವಿಕವಾದ ಉತ್ಪತ್ತಿಯನ್ನು ಬಹಳ ಜಾಗರೂಕತೆಯಿಂದ ಸ್ವಲ್ಪ ಸ್ವಲ್ಪವಾಗಿ ಉಪಯೋಗ ಮಾಡಿಕೊಳ್ಳುತ್ತಾ ನಮ್ಮ ಮುಂದಿನವರೂ ಅನುಭವಿಸುವಂತೆ ಮಾರ್ಗಮಾಡಿ ಕೊಡಬೇಕು. ಹಾಗೆಮಾಡದೆ ಈ ರೀತಿ ವ್ಯವಸ್ಥೆಯಿಲ್ಲದೆ ಖರ್ಚು ಮಾಡಕೂಡದೆಂದು ನಾನು ನಿರೋಧಿಸುತ್ತೇನೆ.

ನಮ್ಮ ದೇಶದ ಉತ್ಪತ್ತಿ ಬಹಳವಿದ್ದ ಕಾಫಿ ಏಲಕ್ಕಿ ಭತ್ತ ಮಾತ್ರ ಬೆಳೆಯುವಂಥ ಹೆಚ್ಚುಸಂಖ್ಯೆಯ ಬೆಳೆ. ಜನರ ಇತರ ಉಪಯೋಗವಾದ [illegible] ದೆಶದಿಂದ ಹೊಂದಿಕೊಳ್ಳಲು ಇನ್ನೂ ಬೆಳೆಯು ಮಾಡಬೇಕು. ಇದಕ್ಕೆ ದೇಶದಲ್ಲಿ ರೋಡುಗಳು ಬಹು ಅನುಕೂಲವಾಗಿ ಒಳ್ಳೆ ಸ್ಥಿತಿಯಲ್ಲಿಡಬೇಕು. ಇಲ್ಲದಿದ್ದರೆ ತಕ್ಕಷ್ಟು ನಿಗಾ ಕೊಟ್ಟಿಲ್ಲವೆಂತ ನಾನು [illegible] ಪಡುತ್ತೇನೆ.

ನಾನು ಈಗಲೇ ಸ್ವಲ್ಪ ಕಷ್ಟಗಳೆಲ್ಲಾ ಪರಿಹಾರವಾಗಬೇಕೆಂತ ಇಲ್ಲ. ಅವುಗಳನ್ನೆಲ್ಲಾ ಈಗ ಹೇಳಿದ್ದಲ್ಲ. ಸರಕಾರದ ಪಾಲಿಸಿಯಮೇಲೆ ಟೀಕೆ ಮಾಡಲು ದೊರೆತಿರುವ ಅವಕಾಶವನ್ನು ಸರಿಯಾಗಿ ಉಪಯೋಗಿಸಿಕೊಳ್ಳದೆ ಹೋದರೆ ನಾನು ನನ್ನ ಕರ್ತವ್ಯವನ್ನು ಸರಿಯಾಗಿ ಮಾಡಿದಂತಾಗುವುದಿಲ್ಲ. ಹಿಂದುಳಿದ ನಮ್ಮ ತಾಲೋಕಿನ ವಿಷಯದಲ್ಲಿ ನಮ್ಮ ಕೌನ್ಸಿಲ್ ಬಹಳ ದಯಾಳುವಾಗಿದ್ದೀತೆಂದೂ ಈ ಕೌನ್ಸಿಲ್ ಜಾರೀಲಿ ಇರುವಷ್ಟು ಸಮಯದಲ್ಲಿ ನಮ್ಮ ತಾಲೋಕಿನ ಕೊರತೆಗಳನ್ನು ಪರಿಹಾರ ಮಾಡೀತೆಂತ ನಾನು ನಂಬಿಕೊಂಡಿದ್ದೇನೆ. ಗಂಧದಲ್ಲಿ ಹೆಚ್ಚು ಉತ್ಪತ್ತಿಯನ್ನು ಕೊಡುವದು ನಮ್ಮ ತಾಲೋಕೇ ಆಗಿದೆ.

ಮಿ॥ ಸಿ. ಎನ್. ವೆಂಕಟಪ್ಪಯ್ಯನವರ ಭಾಷಣ,

ಈ ಕೌನ್ಸಿಲ್ ಸ್ಥಾಪನೆಯಾದದ್ದರಿಂದ ಪ್ರಜೆಗಳ ಪ್ರಯೋಜನವಾಗಬೇಕಾದರೆ ಪ್ರಜೆಗಳ ಮೇಲಿನ [illegible] ದ ಸೋಲವು ಬದಲಾಗಬೇಕು. ಅವರಿಗೆ ಪ್ರಜೆಗಳ ನ್ಯಾಯವು ಸರಕಾರವನ್ನು ಬಾಧಿಸುತ್ತಲೇ [illegible] ಜೆಗಳಿಗೆ ಜವಾಬ್ದಾರಿಯಾದ ಸರಕಾರ ಪದ್ಧತಿಯು [illegible] ಈ ಕೌನ್ಸಿಲಿನಿಂದ ಶಾಶ್ವತವಾದ ದೊಡ್ಡ ತೃಪ್ತಿಯಾಗಬೇಕಾದರೆ ಇನ್ನು ಮುಂದೆ ಸರಕಾರದ ಆಡಳಿತವು ಕೌನ್ಸಿಲಿನ ಅಭಿಪ್ರಾಯಕ್ಕೆ ಸರಿಯಾಗಿ ನಡೆಯಬೇಕು. ಸ್ವಲ್ಪ ಸರಕಾರಕ್ಕೆ ಹಚ್ಚಿನ ಪಕ್ಷಗಳು ಕೊಡಲ್ಪಟ್ಟಿವೆ. ಈ ಕೌನ್ಸಿಲಿನ ತೀರ್ಮಾನಗಳನ್ನು ಚೀಫ್ ಕಮಿಷನರ್ ಸಾಹೇಬರು ಅಂಗೀಕರಿಸಿಕೊಂಡರೆ ಮಾತ್ರ ಈ ಹೊಸಸುಧಾರಣೆಗಳಿಂದ ಪ್ರಜೆಗಳಿಗೆ ಪ್ರಯೋಜನವಾದೀತು. ಅಥವಾ ಏನಾದರೂ ಇಲ್ಲದೆ ಇಟ್ಟರೆ ನಮ್ಮ ಸರಕಾರದ ಆದಾಯ ಹೆಚ್ಚಿಸುವ ಧೈರ್ಯಕೊಡುವಂತಿಲ್ಲ. ಬಜೆಟ್‌ನಲ್ಲಿ ಏನೂ ಸಿಲಕು ಇಲ್ಲದೇನೇ ಕೆಲಸ ನಡೆಸಬೇಕಾಗಿದೆ. ಈಚೆಗೆ ಕೆಲವು ವರ್ಷಗಳಿಂದ ಇಂಡಿಯಾ ಸರಕಾರವು ತೆಗೆದುಕೊಂಡು ಹೋದ ಉಳಿತಾಯದಲ್ಲಿ ಸ್ವಲ್ಪವನ್ನಾದರೂ ನಮಗೆ ಕೊಡಬೇಕಿತ್ತು. 1922-23 ರಲ್ಲಿ ಹೀಗೆ ತೆಗೆದುಕೊಂಡು ಹೋದ ಉಳಿತಾಯವು 3½ ಲಕ್ಷ ರೂಪಾಯಿ. ಇದು ದೊಡ್ಡದಾಗಿ ಇಂಡಿಯಾ ಸರಕಾರಕ್ಕೆ ತೋರದೆ ಇರಬಹುದು. ಆದರೆ ನಮಗೆ ಬಹಳ ದೊಡ್ಡದಾಗಿದೆ. ಪೂರಾ ಭೂಮಿ ಕಂದಾಯದ ಮೊಬಲಗೇ ಹೋದಂತಾಯಿತು. ಒಟ್ಟು ಉತ್ಪತ್ತಿಯ 5 ನೇ ಒಂದು ಭಾಗವೇ ಉಳಿತಾಯವಾದಂತಾಯಿತು. ಫೈನಾನ್ಸ್ ಇಲಾಖೆಯಲ್ಲಿ ಬಂದಂಥ ಹಣವೂ ಇಷ್ಟೇ ಉಳಿದಿದ್ದಾಗಿದೆ. ಇಂಡಿಯಾ ಸರಕಾರದವರು ಈ ದೇಶದ ಪ್ರಜೆಗಳ ಕ್ಷೇಮವನ್ನು ಸ್ವಲ್ಪವೂ ಯೋಚಿಸುತ್ತಿರಲಿಲ್ಲವೆಂಬುದಕ್ಕೆ ಬೇರೆ ರುಜುವಾತು ಬೇಕೆ? ಇಂಥಾ ದೊಡ್ಡ ಉಳಿತಾಯ ಇದ್ದರೂ ಸಹ 1923 ನೇ

ಕೊಡಗು ಕೌನ್ಸಿಲು ಬಜೆಟು.

ಆದಿಯ ಪ್ರಾರಂಭದಲ್ಲಿ ಕೋರ್ಟು ಫೀಸ್ ಮತ್ತು ಛಾಪಾ ಕಾಗದದ ಬಾಬುಗಳನ್ನು ಹೆಚ್ಚಿಸಿ ಬಹಳ ತೊಂದರೆಯನ್ನುಂಟು ಮಾಡಿಸಿದರು. ತುಂಬಾ ನೋವಿರುವ ಸಂಗತಿಯನ್ನು ತಿಳಿಸಲಿಕ್ಕೆ ಇನ್ನೂ ಬಾಕಿ ಇದೆ. ಪ್ರೈಮರಿ ಸ್ಕೂಲ್ ಮಾಸ್ತರುಗಳ ಸಂಬಳವನ್ನು ದಿನ ಕೂಲಿಯವರ ಉತ್ಪತ್ತಿಗೆ ಸರಿಯಾಗುತ್ತಿತ್ತೆ ಆದರೂ ಮಾಡಿಕೊಡದೇ ಕೇವಲ [illegible] ಹೆಚ್ಚಿಸಿಕೊಳ್ಳಬೇಕೆಂತ ಸರಕಾರದ [illegible] ನಮ್ಮ ದೇಶದಿಂದ ಸ್ವಲ್ಪವೂ ಹೋಗದಿಲ್ಲದೆ ೩½ ಲಕ್ಷ ರೂಪಾಯಿಗಳನ್ನು ಇಂಡಿಯಾ ಸರಕಾರದವರು ಕೇಳಿದ [illegible] ಹೋಗುವಾಗ ಈ ಬಾಬು ಸಿಕ್ಕಿದ್ದು! ಸರಕಾರಕ್ಕೆ ಅವಶ್ಯವಿರುವದಕ್ಕಿಂತ ಹೆಚ್ಚಿಗೆ ಹಣವನ್ನು ಕೈಯಿಂದ ತೆಗೆದುಕೊಂಡು ಹೋಗಿದ್ದರಿಂದ [illegible] ಎರಡು ವರ್ಷಗಳ ಸರಾಸರಿ ಉಳಿತಾಯವಾದ 3 ಲಕ್ಷ ರೂಪಾಯನ್ನಾದರೂ ನಮಗೆ ಬಿಡಬೇಕಿತ್ತು. ಈ ಹಣಕ್ಕೋಸ್ಕರ ನಮ್ಮ ಸರಕಾರವು ಇಂಡಿಯಾ ಸರಕಾರದ ಸಂಗಡ ಬಲವಾಗಿ ಹೋರಾಡಬೇಕು. ಈ ನ್ಯಾಯವಾದ ಹೋರಾಟದಲ್ಲಿ ಈ ಕೌನ್ಸಿಲಿನ ಬೆಂಬಲವು ಸಂಪೂರ್ಣವಾಗಿ ದೊರಕುತ್ತೆಂತ ಚೀಫ್ ಕಮಿಷನರ್ ಸಾಹೇಬರಿಗೆ ನಂಬಿಕೆ ಇರಲಿ.

ಇಂಡಿಯಾ ಸರಕಾರದಿಂದ ನಮಗೆ ಎರಡು [illegible] ಆನೆಗಳು ([illegible] ಆನೆಗಳು) ಕೊಡಲ್ಪಟ್ಟಿವೆ ಒಂದು [illegible]. ಈ ಕಾಡುಗಾರರಿಂದ ಪ್ರಯೋಜನ [illegible] ಎಂಬುವನ್ನು ಕಂಡು ಹಿಡಿಯುವವರೆಗೆ [illegible] ಈ ಕೆಲಸವನ್ನು ನಡಿಸುತ್ತಾ ಇರಬೇಕು. ಪ್ರಯೋಜನವಾಗ [illegible] ಇಲ್ಲವೋ ಎಂಬುದನ್ನು [illegible]. ಪ್ರಯೋಜನವಿಲ್ಲವೆಂತ ಕಂಡ ಒಡನೇ ಈ ಕೆಲಸವನ್ನು ನಿಲ್ಲಿಸಿಬಿಡಬೇಕು.

ಇನ್ನೊಂದು ಆನೆಯಾವದೆಂದರೆ — [illegible] ಈ ಕಟ್ಟಡವನ್ನು [illegible] ವ್ಯತ್ಯಾಸವಾಗುತ್ತಾ ಬಂದರೂ ಈಗ ನಮ್ಮ ಸ್ಥಳೀಯ ಸರಕಾರಕ್ಕೆ ಅದನ್ನು [illegible] ಈ ಕಟ್ಟಡವನ್ನು [illegible] ಮಾಡಿದ ಅಧಿಕಾರಿಗಳಿಗೆ ತಕ್ಕ ಶಿಕ್ಷೆ ಮಾಡಬೇಕಿತ್ತು. [illegible] ನಮ್ಮ ಆದಾಯ [illegible] ಈ ಕಟ್ಟಡವನ್ನು ನಮ್ಮ ಪ್ರಯೋಜನಕ್ಕಾಗಿಯೂ [illegible] ಸರಕಾರಿ ಅಧಿಕಾರಿಗಳಿಗೂ [illegible] ಪ್ರತಿನಿಧಿಗಳ ದರ್ಬಾರ ಹಾಲಾಗಿ [illegible]. ಈ [illegible] ಇಲ್ಲವಾದರೆ [illegible] ಅನಾವಶ್ಯವಾಗಿ [illegible] ಗಳನ್ನು [illegible].

ಫಾರೆಸ್ಟ್ ಉತ್ಪತ್ತಿಯು ಬಾಡಿಗಾದದ್ದೆಂಬ [illegible] ಫಾರೆಸ್ಟ್ [illegible] ಗಂಧದ ಉತ್ಪತ್ತಿಯೇ [illegible] ಹೇಳುತ್ತಾರೆ. ಇದಕ್ಕೂ ಸಹ ದೊಡ್ಡ ಯುದ್ಧದ ಕಾಲದಿಂದೀಚೆಗೆ ಕ್ರಯ ಹೆಚ್ಚಿದ್ದರೂ ಆದರಿಂದ ಅದು ಸಹ ನಿಷ್ಪ್ರಯೋಜಕ [illegible] ಗಂಧದ ಕ್ರಯವೇನಾದರೂ ಬಿದ್ದು ಹೋದರೆ ನಮ್ಮ ಬಜೆಟ್ಟಿನಲ್ಲಿ ಉತ್ಪತ್ತಿಗಿಂತ ಖರ್ಚು ವಿಪರೀತವಾಗಿ ಹೆಚ್ಚಾಗಿ ಹೋಗುತ್ತೆ. ಅದ್ದರಿಂದ [illegible] ಶೇಕಡ 50 ರಷ್ಟು ಸಿಬ್ಬಂದಿ [illegible] ಆಗಬೇಕೆಂಬ [illegible] ಸರಕಾರವು [illegible]. ಸಿಬ್ಬಂದಿಗೆ ಕೆಲಸಕೊಡಲಿಕ್ಕಾಗಿಯೇ ನಮ್ಮ ಅರಣ್ಯಗಳನ್ನು [illegible] ಬಾರದು.

ನಮ್ಮ ದೇಶದ [illegible] ಕಡಿಮೆ. ಆದರೂ [illegible] ಕೋರ್ಟು ಫೀಸ್ ೫೦೦೦೦ ರೂಪಾಯಿ ಸರಕಾರಕ್ಕೆ ಸಿಕ್ಕುತ್ತೆ. ಇದರಮೇಲೆ [illegible] ಫೀಸ್ ಮತ್ತು ಸಾಕ್ಷಿ ಭತ್ಯವೆಂಬ [illegible] ಕಕ್ಷಿಗಾರರಿಗೆ ಇಷ್ಟೇ ಇದೆ. ಈ ಕೌನ್ಸಿಲಿನವರು ನ್ಯಾಯವು ಕೈಕರಿಗೆ [illegible] ದೊರೆಯುವಂತೆ ಮಾಡಲಿಕ್ಕಾಗಿ ಗ್ರಾಮಪಂಚಾಯತಿ ಕೋರ್ಟುಗಳನ್ನು ಜೀರ್ಣೋದ್ಧಾರ ಮಾಡಬೇಕಾಗಿದೆ.

ರೈತರಿಂದ ಸರಕಾರವು ವಸೂಲ್ ಮಾಡುವ ಹಣಕ್ಕಾಗಿ [illegible] ಕಲಿಸುವದು ಮುಖ್ಯವಾಗಿ ವಿದ್ಯೆ, [illegible] ಮತ್ತು ಔಷಧಿಗಳು [illegible] ಈ ದೇಶದಲ್ಲಿ [illegible] ಬಹಳ ಕಡಿಮೆ. ಪ್ರೈಮರಿ ವಿದ್ಯೆಯನ್ನು [illegible] ಮುಖ್ಯವಾಗಿಯೂ [illegible]. ರೈತರಿಗೆ ಪ್ರಯೋಜನವಾಗುವ [illegible] ಗಮನ ಕೊಡುವದು ಸಾಲದು. [illegible] ಇನ್ನೂ [illegible] ಗ್ರಾಮಗಳ [illegible] ಕಮಿಷನರ [illegible]

ಬೇಗನೆ ಮಾಡಿಕೊಡಬೇಕು. [illegible] ನಮ್ಮ ಸರಕಾರದ [illegible] ಅವರು [illegible] ಬಡವರಿಗೆ [illegible] ನಮ್ಮ [illegible] ಮಾಡಬೇಕು. [illegible] ಗ್ರಾಮ [illegible] ಈ [illegible] ತರಿಸುವಂತೆ [illegible] ಕೊಡಬೇಕು. ಮಡಿಕೇರಿ [illegible] ಸಿಬ್ಬಂದಿ [illegible] ಗಾಗಿ ನನಗೆ ಕೊಡಲು ಮಾತನಾಡಿದ ಮೊಬಲಗಿನ (ರೂ|| [illegible]) [illegible] ಸಾಧಾರಣವಾಗಿ [illegible] ಆಗಿದೆ.

ದೇಶದಲ್ಲಿ ಬಹಳ ಒಡತನ ಸರಕಾರದ [illegible] ಸಂಕಟ [illegible] ಸ್ಥಾಪಿಸಿದ [illegible] ಕೋರ್ಟ್, ಕಾಗದ [illegible] ಮುಂತಾದ [illegible] ಪೋಲೀಸು [illegible] ಸರಕಾರವು ಈ [illegible] ಜನ [illegible] ಈ [illegible]

[illegible]

[illegible]

ಮಡಿಕೇರಿ

[illegible] ಕಳೆದ ಎರಡು [illegible] ಒಂದು [illegible] ಗೂ ಒಂದು ಸಾಧಾರಣವಾದ [illegible].

ಕಳೆದ ತಾರೀಖು [illegible] ದೇವಸ್ಥಾನದ ಮಹಡಿಯಲ್ಲಿ [illegible] ದ್ಯರಕ್ಷಕರುಗಳ ಮೀಟಿಂಗು ನಡೆಯಿತು.

ಮಡಿಕೇರಿಯ ಮುನ್ಸಿಪಾಲಿಟಿಯು [illegible] ಹೀಗೂ ಕಡಿಮೆಯಾಗಿ [illegible] ಅಡಿಗೆಗೂ ನೀರು ಸಾಕಷ್ಟು ಸಿಕ್ಕದೆ [illegible].

ಶ್ರೀ ಕಾವೇರಿ ಬಸ್ಸು ಸರ್ವೀಸು [illegible] ಒಂದರಿಂದ ವೀರರಾಜಪೇಟೆಯಿಂದ [illegible] ಬದಲು ೨|| ಗಂಟೆಗೆ [illegible] ಗಿದೆ. ಇದರಿಂದ ಬಸ್ಸಿನಲ್ಲಿ [illegible] ಯವರಿಗೆ ಸ್ವಲ್ಪ ಅನುಕೂಲವಾಗುವುದು.

ಮಡಿಕೇರಿನಾಡು [illegible] ಒಂದು [illegible] ವುದು ಮುಸ್ಕುರೀಲೊವೋ, ಅಥವಾ [illegible] ಪಾದ ನಡೆದು ಮುಸ್ಕುರೀಲೊವೋ ಎಂತ [illegible] ಟೀನಲ್ಲಿ [illegible].

ಮಾರ್ಚ ತಾರೀಖು ೨ನೇ ದಲ್ಲು ಮಡಿಕೇರಿಯ [illegible] ಜುಮರ್ ನಾಟಕ ಕಂಪನಿಯವರು '[illegible]' ಎಂಬ ನಾಟಕವನ್ನು ದೇವಸ್ಥಾನದ [illegible] 2 ಅಭಿನಯಿಸಿದರು.

ಕಳೆದ ತಾರೀಖು ೨೮ ದಲ್ಲು ದೇವಸ್ಥಾನದ [illegible] ಕೋ ಆಪರೇಟಿವ್ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ನಡೆದು [illegible] ಸೊಸೈಟಿಗೆ [illegible], [illegible] ಸೊಸೈಟಿಗೆ ೧೦೦೦, [illegible] ಸೊಸೈಟಿಗೆ [illegible], [illegible] ಸೊಸೈಟಿಗೆ ೧೦೦೦; ಮಡಿಕೇರಿ ಸೊಸೈಟಿಗೆ ೧೫೦೦, ದೇಟೋಳಿ ಸೊಸೈಟಿಗೆ [illegible] ಸೊಸೈಟಿಗೆ ೨೦೦೦; [illegible] ಸೊಸೈಟಿಗೆ [illegible] ಸಾಲವು ಮಂಜೂರಾಯಿತು.

೧೯೩೪ ದಲ್ಲು [illegible]

ಫಾರೆಸ್ಟ್ ಮರಗಳಿಗೆ [illegible] ನವರು, ಗವರ್ನರ್ ಜನರಲ್ ಅವರ್ [illegible] ನವರಿಗೆ ಅಪ್ಪೀಲನ್ನು ಚೀಫ್ ಕಮಿಷನರವರ ಮೂಲಕ ಕಳುಹಿದರು. ಅಂಥಾ ಅಪ್ಪೀಲನು ಕಮಿಷನರವರ ಆಫೀಸಿಗೆ [illegible] ದೊಳಗೆ [illegible] ರಿಂದ [illegible] ದೊಳಗೆ [illegible] ಎಸ್. ಸಿ. [illegible] ಇದರ [illegible] ಕಮಿಷನರವರು ನಮ್ಮ ಆಫೀಸಿಗೆ [illegible] ಒಂದು [illegible].

[illegible] ದಲ್ಲು ರೂ|| [illegible] ಬಂದ [illegible] ವಿದ್ಯಾರ್ಥಿ [illegible] ಇವನು [illegible] ನೋಡಿ ಅವನ [illegible] ಮತ್ತು ಅವನಲ್ಲಿದ್ದ [illegible] ಗಳನ್ನು [illegible] ಒಂದು [illegible] ಯುವ [illegible]

[illegible]

ಹುದಿಕೇರಿ

[illegible]

[illegible]

ಬೊಂಬಾಯಿ ಯುನಿವರ್ಸಿಟಿಯಲ್ಲಿ ಮಾರ್ಪಾಡುಗಳನ್ನುಂಟುಮಾಡುವ ಮುಂಚೆ ಅದರ ಈಗಿನ ಸ್ಥಿತಿಯನ್ನು ವಿಚಾರಿಸುವುದಕ್ಕಾಗಿ ಒಂದು ಕಮಿಟಿಯನ್ನು ಸರ್ಕಾರದವರು ಏರ್ಪಡಿಸಿರುವರು.

ಡಾಕ್ಟರ್ ರವೀಂದ್ರನಾಥ್ ಟಾಗೋರ್‌ರವರು ತಮ್ಮ ಪಾರ್ಟಿಯೊಂದಿಗೆ ಬರ್ಮಾದಿಂದ ಸಿಂಗಪೂರ್‌ದ್ವಾರ ಚೈನಾಕ್ಕೆ ಹೊರಟಿರುವರು

ಬೊಂಬಾಯಿ ಮ್ಯುನ್ಸಿಪಾಲಿಟಿಯವರು ಬ್ರಿಟಿಷ್ ಸಾಮಾನುಗಳಿಗೆ ಬಹಿಷ್ಕಾರ ಹಾಕಬೇಕೆಂದು ಮಾಡಿರುವ ತೀರ್ಮಾನದ ಮೇರೆ ಅಲ್ಲಿಯ ಸ್ಟ್ಯಾಂಡಿಂಗ್ ಕಮಿಟಿಯವರು ಮ್ಯುನ್ಸಿಪಾಲಿಟಿಗೆ ಬೇಕಾಗಿರುವ ಮೋಟಾರು ಕಾರುಗಳನ್ನು ಬ್ರಿಟಿಷರಲ್ಲದ ದೇಶಗಳಿಂದ ತರಿಸುವಂತೆ ತೀರ್ಮಾನಿಸಿರುವರು

ಕೇರಳದ ತೀಯರೇ ಮೊದಲಾದ ಹಿಂದುಳಿದ ಪಂಗಡದವರನ್ನು ದೇವಸ್ಥಾನಗಳ ಒಳಗೆ ಹೋಗಲು ಬಿಡದೆ ಅಡ್ಡಿ ಮಾಡುವುದರಿಂದ ಅವರು ಸತ್ಯಾಗ್ರಹದ ಮೆರವಣಿಗೆಯನ್ನು ನಡಿಸಲು ಏರ್ಪಾಡುಮಾಡುತ್ತಿರುವರು ಇದನ್ನು ನಿಲ್ಲಿಸುವುದಕ್ಕೆ ತಿರುವಾಂಕೂರಿನ ರಾಜರು ಹುಕುಂ ಮಾಡುವರೆಂದು ವದಂತಿ ಕೇಳಿ ಹಾಗೆ ಮಾಡುವುದು ಉಚಿತವಲ್ಲವೆಂದು ಕಾಯಿಲಸ್ಥರಾಗಿರುವ ಮೆ|| ಸಿ ವಿಜಯರಾಘವ ಆಚಾರ್ಯರವರು ಮಹಾರಾಜರಿಗೆ ತಂತೀವರ್ತಮಾನ ಕಳುಹಿಸಿರುವರು ಸತ್ಯಾಗ್ರಹವನ್ನು ಯೋಚಿಸುತ್ತಿರುವವರಿಗೆ ಪಂಡಿತ ಮಾಲವೀಯ ಮತ್ತು ಸ್ವಾಮಿ ಶ್ರದ್ಧಾನಂದರವರು ಅವಸರಮಾಡಬೇಡವೆಂದೂ ಶಾಂತತೆಯನ್ನು ತಾಳಬೇಕೆಂದೂ ತಂತೀ ಕೊಟ್ಟಿರುವರು

ಜೈಟೊಗೆ ಏಪ್ರಿಲ್ 18 ರಲ್ಲು ತಲಪಲಿಕ್ಕಿರುವ ೫೦೦ ಜನ ಭಕ್ತ ಸಿಖ್ಖರ ಒಟ್ಟು ಆನಂದಪುರದಿಂದ ತಾರೀಖು 27-3 24 ರಲ್ಲು ಹೊರಟಿತು ಅವರನ್ನು ಕಳುಹಿಸಿಕೊಡಲು ಸಾವಿರಾರು ಜನರು ಅಲ್ಲಿ ಆ ದಿನ ನೆರೆದಿದ್ದರು

ಬಂಗಾಳ ಎಗ್ಸಿಕ್ಯುಟಿವ ಕೌನ್ಸಿಲಿನಿಂದ ರಿಟೈಯರಾಗುವ ಸರ್ ಪಿರೋಜ್ ಖಾನ್ ಮಹತಬ್ (ಬರ್ದ್ವಾನದ ಮಹಾರಾಜರು) ರವರ ಬದಲಿಗೆ ಸರ್ಕಾರದವರು ಬುಪೇಂದ್ರನಾಥ್ ಬಾಸರವರನ್ನು ನೇಮಿಸಿರುವರು ಇವರು ಪ್ರಿವಿ ಕೌನ್ಸಿಲಿನಲ್ಲು ಉದ್ಯೋಗವಹಿಸಿಕೊಳ್ಳುವರಂತೆ

ಲೀ ಕಮಿಷನಿನವರು ತಮ್ಮ ರಿಪೋರ್ಟನ್ನು ತಯಾರಿಸಿ ಎಲ್ಲರು ಒಮ್ಮತದಿಂದ ರುಜುಮಾಡಿರುವರು ಇದು ಮೇ ತಿಂಗಳ ಮಧ್ಯದಲ್ಲಿ ಪ್ರಕಟವಾಗಬಹುದೆಂದು ತೋರುತ್ತದೆ

ಕೌನ್ಸಿಲ ಆಫ್ ಸ್ಟೇಟಿನ ಅಧ್ಯಕ್ಷರಾಗಿ ಸರ ಅಲೆಕ್ಸಾಂಡರ್ ಮಡ್ಡಿಮ್ಯಾನ್‌ರವರ ಬದಲು ಮೆ|| ಡಿ ಬಟ್ಲರ್‌ರವರನ್ನು ನೇಮಿಸಿರುವರು ಮೆ|| ಬಟ್ಲರವರ ಬದಲು ಮೆ|| ಜೆ ಡಬ್ಲ್ಯು ಭೋರ್‌ರವರನ್ನ ಇಂಡಿಯಾ ಸರ್ಕಾರದ ವಿದ್ಯೆ ಆರೋಗ್ಯ ಮತ್ತು ಲೇಂಡ್ ರೆವೆನ್ಯೂ ಇಲಾಖೆಗಳ ಸೆಕ್ರೆಟರಿಯಾಗಿ ನೇಮಿಸಿರುವರು

ವೈಸರಾಯರು ಮಧ್ಯಪ್ರಾಂತ್ಯದಲ್ಲಿ ಒಂದು ಚಿಕ್ಕ ಪ್ರಯಾಣಮಾಡುವುದಕ್ಕಾಗಿ ಡೆಲ್ಲಿಯಿಂದ ತಾರೀಖು 23 3 24 ರಲ್ಲಿ ಹೊರಟಿರುವರು

ಸರ್ಕಾರದವರು ಖಚಿತವಾದ ತತ್ವವನ್ನು ಜನರಿಗೆ ತೋರಿಸದೆಯೂ ದೇಶದ ನ್ಯಾಯವಾದ ಕೋರಿಕೆಗಳಿಗೆ ಒಪ್ಪದೆಯೂ ಹೋದರೆ ಇಂಡಿಪೆಂಡೆಂಟ ಪಾರ್ಟಿಯವರು ಖಂಡಿತವಾಗಿಯೂ ಸ್ವರಾಜ್ಯ ಪಂಗಡದವರ ಜೊತೆ ಸೇರುವರು ಎಂದು ಲೆಜಿಸ್ಲೇಟಿವ್ ಎಸೆಂಬ್ಲಿಯ ಆ ಪಕ್ಷದ ಮುಖಂಡರಾದ ಮೆ|| ಜಿನ್ನಾ ರವರು ಸೂಚಿಸಿರುವರು

ಮೈಸೂರಿನ ಎಗ್ಸಿಕ್ಯುಟಿವ್ ಕೌನ್ಸಿಲಿನ ಲೇಬರ್ ಮತ್ತು ಇಂಡಸ್ಟ್ರೀಸ ಮೆಂಬರಾದ ಮೆ|| ಎ ಸಿ, ಚಟರ್ಜಿಯವರು ರಜೆಯಲ್ಲಿ ಹೋಗುವುದರಿಂದ ಅವರ ಬದಲು ತತ್ಕಾಲಿಕ ಮೆಂಬರಾಗಿ ಸರ್ ಭೂಪೇಂದ್ರನಾಥ್ ಮಿತ್ರರವರನ್ನು ನೇಮಿಸಿರುವರು

ಅಸ್ಸಾಮ್ ಕೌನ್ಸಿಲಿನ ಡೆಪ್ಯುಟಿ ಪ್ರೆಸಿಡೆಂಟರವರ ಸಂಬಳವನ್ನು ವರ್ಷಕ್ಕೆ ಒಂದು ರೂಪಾಯಿ ಮಾಡಬೇಕೆಂಬ ರಾವು ಅಲ್ಲಿ ಪಾಸಾಗಿದೆ ಈಗಿನ ಡಿ ಪ್ರೆಸಿಡೆಂಟರು ಸ್ವರಾಜಿಸ್ಟ ಆದುದರಿಂದ ಸಂಬಳವಿಲ್ಲದೆ ಕೆಲಸಮಾಡಲು ಒಪ್ಪಿಕೊಂಡಿರುವರು

ಏಪ್ರಿಲ್ ಒಂದರಿಂದ ಮಹಾತ್ಮಗಾಂಧಿಯವರು ಯಂಗ್ ಇಂಡಿಯ ಮತ್ತು ನವಜೀವನ ಪತ್ರಿಕೆಗಳ ಸಂಪಾದಕತನವನ್ನು ಪುನಹ ವಹಿಸಿಕೊಳ್ಳುವರೆಂದು ವರ್ತಮಾನವಿದೆ

ವಿದೇಶ

ಈಜಿಪ್ಟದೇಶದ ಮತ್ತು ಮಹಮ್ಮದೀಯ ಮುಖಂಡರುಗಳೇ ಸಕಲರು ಸೇರಿ ಒಂದು ಮೀಟಿಂಗು ಮಾಡಿದಲ್ಲಿ ಖಲೀಫನನ್ನು ಚುನಾಯಿಸುವುದಕ್ಕಾಗಿ ಗೆತಾಯ ನೇ ಮಾರ್ಚ ತಿಂಗಳಲ್ಲು ಅಲಾಜಾರ್ ಯುನಿವರ್ಸಿಟಿಯ ಗ್ರೇಂಡ್ ಶೇಕ್ ಅಲ್‌ರವರ ಅಧ್ಯಕ್ಷತೆಯಲ್ಲು ಕೈರೋದಲ್ಲು ಮಹಮ್ಮದೀಯ ಜನಾಂಗದವರೆಲ್ಲರ ಒಂದು ಸಭೆ ಸೇರಬೇಕೆಂದು ತೀರ್ಮಾನಿಸಿರುವರು. ಅಲ್ಲದೆ ಮತ್ತ ಬೇರೆ ಧರ್ಮದ ಜನಾಂಗದವರ. ಈ ವಿಷಯದಲ್ಲಿ ಕೈಹಾಕದೆ ಇರುವುದು ಶ್ಲಾಘನೀಯ ಸಂಗತಿಯಾದುದರಿಂದ ಅವರಿಗೆ ವಂದನೆಯನ್ನು ಸೂಚಿಸಿದರು

ಫ್ರಾನ್ಸಿನ ಫೇಸಿಸ್ಟ ಪಾರ್ಟಿಯ ಮುಖಂಡನಾದ ಮೆ|| ಬೋನ್ಸರ್‌ವಿಜ ಎಂಬವರನ್ನು ಪ್ಯಾರಿಸ್‌ನಲ್ಲಿ ಬಸ್ಸಿನಿಂದ ಇಳಿಯುತ್ತಿದ್ದಾಗ ಗುಂಡ ಹೊಡೆದು ಕೊಂದು ಬಿಟ್ಟರು

ಫ್ರಾನ್ಸಿನ ಮಂತ್ರಿ ಮಂಡಳಿಯವರು ರಾಜೀನಾಮೆ ಕೊಟ್ಟಿದೆ ಆದುದರಿಂದ ಹೊಸ ಮಂತ್ರಿಮಂಡಳಿಯನ್ನು ಏರ್ಪಡಿಸುವಂತೆ ಎಮ್ ಪೊಯಿಂಕರೆ ಯವರನ್ನು ಕೇಳಿಕೊಂಡಿರುವರು

ಇಂಡಿಯಾದ ಜಮೀಯತ್-ಉಲ್-ಉಲೇಮ ಸಭೆಯವರು ಈಜಿಪ್ಟದೇಶದ ಫವಾದ್ ಅರಸರನ್ನು ಖಲೀಫನಾಗಲು ಕೇಳಿಕೊಂಡಿರುವಂತೆ ಹೀಗೆ ಅವಸರದಲ್ಲಿ ತೀರ್ಮಾನ ಮಾಡುವುದು ಒಳ್ಳೆಯದಲ್ಲವೆಂತಲೂ ತುರ್ಕಿಯವರೊಬ್ಬರೇ ಖಲೀಫರಾಗಿರುವುದು ಉತ್ತಮವೆಂತಲೂ ಇದಕ್ಕೆ ತುರ್ಕಿ ಸರ್ಕಾರವು ಒಪ್ಪದೆಹೋದರೆ ಮಹಮ್ಮದೀಯ ಜನಾಂಗಗಳ ಕಾನ್ಫರೆನ್ಸಿನಲ್ಲಿ ತೀರ್ಮಾನಿಸುವುದು ಉತ್ತಮವೆಂದು ಮೊದಲಾಗಿ ಸೆಂಟ್ರಲ್ ಖಿಲಾಫತ್ ಕಮಿಟಿಯ ಅಧ್ಯಕ್ಷರಾದ ಮೌಲಾನ ಶೌಕತ್ ಅಲಿಯವರು ಮತ್ತು ಜಮಾಯತ್ ಉಲೆಮಾದ ಪ್ರೆಸಿಡೆಂಟರಾದ ಮೌಲಾನ ಕಿಫಾಯತ್-ಉಲ್ಲಾ ರವರು ಈಜಿಪ್ಟದ ಜಾಗ್‌ಲಾಲ್‌ಪಾಷಾ ಮತ್ತು ಶೇಕ್ ಉಲ್ ಅಜಾರ್‌ರವರಿಗೆ ತಂತೀವರ್ತಮಾನ ಕಳುಹಿರುವರು.

ಇಮಿಟೇಷನ್ ಸಿಲ್ಕಿನ ಅವಲ್ ರಕಂ

ಕಂಚಿಯ ಸೀರೆಗಳು.

ಈ ಸೀರೆಗಳು 16 ಮೊಳ ಉದ್ದವೂ 2½ ಮೊಳ ಅಗಲವೂ ಇರುವವು ಉಡಲು ಘನತೆಯಾಗಿಯೂ ನಯವಾಗಿಯೂ, ಹೊಸ ನಮೂನೆಯಾಗಿಯೂ ಇರುವವು ಕೆಂಪು ಕರಿ ಮತ್ತು ನೀಲ್ಮದ ಬಣ್ಣಗಳಲ್ಲಿ ಇರುವವು ಗಟ್ಟಿ ಬಣ್ಣ ಇವನ್ನು ಪ್ರತಿದಿನವು ಒಗೆದು ಉಡಲು ಚೆನ್ನಾಗಿರುವುದಲ್ಲದೆ ರೇಷ್ಮೆಯಂತೆ ಹೊಳೆಯುವವು ಶ್ರೀಮಂತರಿಗೂ ಗರೀಬರಿಗೂ ಮತ್ತು ಪ್ರತಿಯೊಂದು ಜಾತಿಯವರೂ ಉಡಲು ಲಾಯಖಾದವು ಒಂದನ್ನು ಪರೀಕ್ಷಿಸಿರಿ ಕ್ರಯ ನಂ 1, 6 1— ನಂ 2 7—8—0

ಟಿ ರಾಮಚಂದ್ರರಾವ್ ಅಂಡ ಕಂ,

ಜವಳಿ ವ್ಯಾಪಾರಿಗಳು

16 ತಿರುವಳ್ಳಿ ಬೀದಿ ಮದ್ರಾಸು

ರೋಲ್ಡ್ ಗೋಲ್ಡ್ ಬಂಗಾರದ

ಬ್ರೇಸ್ ಲೆಟ್ ವಾಚ್.



ಈ ಹೊಸದಾದ ಬಗೆ ಗಡಿಯಾರಗಳು ಬಹು ಬಲಿಷ್ಠವಾದ ಲೀವರ್ ಸಾಮಾನುಗಳಿಂದ ಮಾಡಲ್ಪಟಿದೆ ರೋಲ್ಡ್ ಗೋಲ್ಡ್ ಬಂಗಾರದ ಗಡಿಯಾರದ ಹಾಗೆ ಕಾಣುವುದು ಚಿಕ್ಕ ಸ್ಟ್ರಾಪ ಕೈಯಲ್ಲಿ ಕಟ್ಟಿಕೊಳ್ಳಲು ಬಹು ಚಂದವಾಗಿರುತ್ತೆ ಇಂಗ್ಲೀಷ ನಮೂನೆ ಗಡಿಯಾರ ಗ್ಯಾರಂಟಿ 3 ವರ್ಷಗಳು ಲೋಡಲ್ಪಡುತ್ತ ಪ್ರೆಸೆಂಟಿ ಗಿಲ್ಟ ಗಡಿಯಾರ 1ಕ್ಕೆ ಕ್ರಯ ರೂಪಾಯಿ 8—0—0

CITY WATCH Co ಸಿಟಿ ವಾಚ್ ಕಂಪನಿ

2 Frupilly Str t 2 ಫ್ರ್ಯು ಪಿಲ್ಲಿ ಬೀದಿ

C I MADRAS ಮದ್ರಾಸು

[4—7]

WANTED.

Two Second-hand Motor Bicycles

M M SUBBIAH

22 10 MERCARA.

ORIENTAL GOVERNMENT SECURITY LIFE ASSURANCE COMPANY, Ltd.

Head Office—BOMBAY

ESTABLISHED IN 1874	JUBILEE YEAR 1924
ASSETS EXCEED	Rs 0,00,00,000.
ANNUAL INCOME OVER	Rs 1,00,00,000

R. C Manjiah, Esq Agent, Mercara
K P Chinnappa Esq, M L C Napoklu
B P Ayappa, Esq Virarajendrapet
M M Bellappa, Esq, Mercara

Wanted at liberal terms Agent capable of introducing new Policyholder Application to be made to —

The Branch Secretary

Post Box No. 56 BANGALORE

[2—2]

ನೋಟೀಸು.

ಸಂಘದ ವಾರ್ಷಿಕ ಜನರಲ್‌ಮೀಟಿಂಗ್ ಕಿಗ್ಗಟ್ಟನಾಡು ತಾಲೋಕು ಶ್ರೀಮಂಗಲನಾಡು ಹುದಿಕೇರಿಯಲ್ಲಿ ಮ|| ರಾ|| ರಾ|| ಕೋದಂಡ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ 1924 ನೇ ಇಸವಿ ಏಪ್ರಿಲ ತಾರೀಖು 19 ನೇ ತಾರೀಖು 20 ರಲ್ಲು ಮಧ್ಯಾಹ್ನ 1 ಘಂಟೆಗೆ ಜರುಗುತ್ತೆ ಊಟ ಉಪಚಾರವು ಕಿಗ್ಗಟ್ಟನಾಡು ತಾಲೋಕಿನವರು ಏರ್ಪಾಡುಮಾಡುತ್ತಾರೆ ಚರ್ಚಿಸತಕ್ಕ ವಿಷಯಗಳನ್ನು ತಾರೀಖು 31—3—1924 ರವರೆಗೆ ಜನರಲ್‌ಸೆಕ್ರಟರಿ ಮೆ|| ಸಿ ಯಮ್ ವೆಂಕಪ್ಪಯ್ಯನವರಿಗೆ ಬರವಣಿಗೆಯಂತೆ ಕಳುಹಿಸಬೇಕೆಂತಲೂ, ಮೀಟಿಂಗಿಗೆ ಎಲ್ಲಾ ಮೆಂಬರುಗಳು ಹಾಜರಾಗಬೇಕೆಂತಲೂ ಕೋರುತ್ತೇನೆ

ಚಂದಾ ಮೊಬಲಗನ್ನು ಎರಡು ವರ್ಷಗಳಿಂದ ಪಾವತಿ ಮಾಡದೆ ಇರುವವರು ಸಂಘದ ಕಾರ್ಯಗಳಲ್ಲಿ ಭಾಗಿಗಳಾಗಕೂಡದು ಎಲ್ಲಾ ಮೆಂಬರುಗಳು ತಮ್ಮ ಬಾಕಿ ಚಂದಾ ಮೊಬಲಗನ್ನು ಕೂಡಲೇ ಪಾವತಿ ಮಾಡಬೇಕಾಗಿ ಕೋರುತ್ತೇನೆ

ಕೊಡಗು ಜಮಾಸ್ದಾರರ ಸಂಘ, ಸಿ ಎಮ್ ವೆಂಕಪ್ಪಯ್ಯ

ಮಡಿಕೇರಿ ತಾರೀಕು 21–2–24 ಜನರಲ್ ಸೆಕ್ರಟರಿ

[5—5]

ಆರೋಗ್ಯ ಚಂದ್ರಿಕೆ.

ಇದು ಪ್ರಜಾಕ್ಷೇಮಕ್ಕಾಗಿ ಆರೋಗ್ಯಮಾರ್ಗವನ್ನೂ ಚಿಕಿತ್ಸೆಯನ್ನೂ ಬೋಧಿಸುವ ಒಂದು ಮಾಸಪತ್ರಿಕೆ ಇದರ ಸಂಪಾದಕರು ಮದ್ರಾಸಿನಲ್ಲಿ ಪ್ರಸಿದ್ಧರಾದ ಡಾಕ್ಟರ್ ಯು ರಾಮರಾವ್, ಎಂ ಎಲ್ ಸಿ ಯವರು ಇದರಲ್ಲಿ ಅನೇಕ ಪ್ರಸಿದ್ಧ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರುಗಳ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು

ಟಪಾಲು ಹಾಸಲು ಸೇರಿ ಈ ಪತ್ರಿಕೆಯ ವಾರ್ಷಿಕ ಚಂದ 1—8—0 ರೂ ಮಾತ್ರ ಬಿಡಿ ಪತಿಗೆ ಒಂದಕ್ಕೆ 0 —2— 0 ಆಣೆ

ಏಜೆಂಟರು —	ವಿಳಾಸ —
ಮ|| ರಾ|| ರಾ|| ಎಸ್ ಕೆ	ಮೇನೇಜರ
ಈಶ್ವರಪ್ಪ	ಆರೋಗ್ಯಚಂದ್ರಿಕಾ ಆಫೀಸ
ಭಾಗಮಂಡಲ	3.. ಕಂಡ ಚೆಟ್ಟಿ ಬೀದಿ
ಕೊಡಗು	ಮದ್ರಾಸು

[12—.]



[16—6]

Printed & Published by D S Krishnaswamiengar Proprietor, at Sreenivas Electric Press, Mysore for Kodagu Ltd, Mercara—4-4-1924

not delivered please return to "Kodagu Office, Mercara"
Reg. No. M. 1550.

ಕೊಡಗು.

ಸತ್ಯಾನ ಧೂತದಮುನಾ . ವ್ಯಾಸಿತಿ ಶ್ರುಶ್ರುತಃ । [illegible]

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು. " ಎಡಿಟರ್ ಪಂದ್ಯಂಡ ಬಿ. ಬೆಳ್ಯಪ್ಪ

ಸಂಪುಟ ೩] ಕೊಡಗು, ಸನ್ ೧೯೨೪ ನೇ ಇಸವಿ ಏಪ್ರಿಲ್, ತಾರೀಖು ೧೧ ನೆಯ ಶುಕ್ರವಾರ. [ಸಂಚಿಕೆ ೪೫

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನಡಾ ಪ್ರಿಂಟಿಂಗ್ ರೂಲಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ಇದ್ದರೂ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ಅಂತೆ ಜಾಗ್ರತೆಯಾಗಿಯೂ ಸುಲಭಬೆಲೆಗೆ ಮಾಡಿ ಕೊಡುತ್ತೇವೆ

Srinivas Electric Press,
MYSORE.

The Saraswathi Publishing Company
ಶಾರದಾಗ್ರಂಥಮಾಲಾ

ಈ ಗ್ರಂಥಮಾಲೆಯಲ್ಲಿ ಭಾರತಮಹಿಳೆಯರ [illegible] ದಮುಗಳನ್ನು ಬೋಧಿಸತಕ್ಕ ಗ್ರಂಥಗಳು ಆಗಾಗ್ಗೆ ಪ್ರಕಟಿಸಲ್ಪಡುವವು ಇದುವರಿವಿಗೆ ಪ್ರಕಟವಾಗಿರುವ ಗ್ರಂಥಗಳು —

		ರೂ	ಆ	ಪೈ
1	ಪ್ರಿಯಂವದೆ (ವರದಕ್ಷಿಣೆಯಿಂದಾಗುವ ಕಷ್ಟ ನಿಷ್ಠುರಗಳು)	0	6	0
2	ಸ್ನೇಹಲತೆ (ವಂಗಕನ್ಯೆಯ ಚರಿತ್ರೆ)	0	10	0
3	[illegible]	0	12	0
5	[illegible]	0	8	0
4	[illegible]	1	4	0
5	[illegible]	0	4	
6	[illegible]			

[illegible]

ಸರಸ್ವತಿ.

ಉತ್ಕೃಷ್ಟವರ್ಗದ ಸ್ತ್ರೀಪ್ರಯೋಜಕ ಕನ್ನಡ ಮಾಸಪತ್ರಿಕೆ

[illegible]

SARASWATHI PUBLISHING C[illegible],
Post Box No. 5[illegible] [illegible] City

HEALTH IS WEALTH

WANTED all to improve health strength and vitality and thus save our nation from physical degeneracy. Send half-anna stamp and get 13 specimen photographs with full particulars from

Director Physical Culture,
P.O. Basavanagudi,
BANGALORE CITY

For your requirements of high grade Arms, Ammunition, Wine and Spirits,

APPLY TO:-
Mc. DOWELL & Co., Ltd.,
14—24 **MERCARA.**

ಮಡಿಕೇರಿ [illegible] ಇನ್ಸ್‌ಪೆಕ್ಟರ್ ಪಂಕ್ತಿಕಾರಿಯು ಉಟ್ಟಾ ಸಾಮಾನ್ ಸ್ಪೆನ್ಸರ್ ಕಂಪೆನಿಕ್ಕ್ ಪುದಿಯದಾಯಿತ್ ಬಂದಿತ್.

SPENCER & Co., Ltd
Mercara and Pollibetta, Coorg

[24—24]

BUMPER CROPS
[illegible] follow on application of our fertilisers

ಪೆಂಗ್ವಿ [illegible]

[illegible] ಕಾಫಿ ಫಟಿಲೈಸರುಗಳನ್ನು [illegible]

ನಮ್ಮ ಕಾರಖಾನೆಯ [illegible] ತಾಜಾ (fresh) [illegible] ತಯಾರಾಗುತ್ತದೆ

Siddeck's Manure Works
1—13 MERCARA

ಮುಹಿಯದ್ದೀನ್ ವೈದ್ಯಶಾಲಾ

ಮುಂಬಾಯಿನ ಸಂಬೀಕರ್ ಮತ್ತು ಕಂಪನಿ [illegible] ಯುವೇದ ವೈದ್ಯಶಾಲೆಯಲ್ಲಿ ಒಂದು ಶಾಖೆ [illegible] ರಾಜೇಂದ್ರಪ್ಯಾಟೆಯಲ್ಲಿ ತೆರೆದಿರುತ್ತೆ ಇಲ್ಲಿ [illegible] [illegible] ಪಂಡಿತರಿಂದ ಪರೀಕ್ಷಿಸಿ ಔಷಧಿ [illegible] ಗುಣಪಡಿಸಲ್ಪಡುತ್ತೆ, ಔಷಧದ [illegible] [illegible] ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು.

ನಾರಾಯಣಸಂಬೀಕರ್,
ಆಯುರ್ವೇದ ವೈ[illegible]

12—12 ವೀರರಾಜೇಂದ್ರಪೇಟೆ

ಬಿ ಮೆ ಪೆ.

ಸಾವಿರಾರು [illegible] ಸಂಪಾದನೆಯು [illegible] [illegible] ಕೊಂಡರೆ [illegible] ವಿದೆ.

ವೃದ್ಧಾಪ್ಯದಲ್ಲಿ ಮತ್ತು ಕುಟುಂಬದ ಜೀವನಾಧಾರಕ್ಕೆ [illegible] ಒದಗಿಸುವದೇ ಜೀವವಿಮೆ.

[illegible] ದರದಲ್ಲಿ ಯಾವ ಲೋಪವೂ ಬಾರದಂತೆ ಕ್ಷಿಪ್ರದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ಮೈಸೂರಿನ ಸರಕಾರದ ಭದ್ರತೆಯುಳ್ಳ ಜೀವವಿಮೆ ಕಂಪೆನಿ

ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ಸಾಲವಾಗಿ ಹಣವನ್ನು ಒದಗಿಸಿ ಸ್ವಂತಾಸ್ತಿಗಳನ್ನೂ ಕೊಂಡುಕೊಟ್ಟು ದೇಶದ ಆರ್ಥಿಕ ಸಂಪತ್ತನ್ನು (Economic Condition) ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೇ!

ಲೈಫ್ ಇನ್ಶ್ಯೂರೆನ್ಸ್ ಆಕ್ಟಿನ ಮೇರೆ ಇಂಡಿಯಾ ಗವರ್ನಮೆಂಟ್ ಸೆಕ್ಯೂರಿಟಿಗಾಗಿ ಸಲ್ಲಬೇಕಾದ 12 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿಗೆ ಸಲ್ಲಬೇಕಾದ 1 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನ ಮದ್ರಾಸಿನ ಶಾಖೆಯಲ್ಲಿ 1 ಲಕ್ಷ ಗವರ್ನಮೆಂಟ್ ಆಫ್ ಇಂಡಿಯ ಸೆಕ್ಯೂರಿಟಿಯನ್ನು ಅರ್ಧಲಕ್ಷ ಮೈಸೂರು ಸೆಕ್ಯೂರಿಟಿಯನ್ನು ಡಿಪಾಜಿಟ್ಟಾಗಿ ಇಟ್ಟಿರುತ್ತೆ. ಬಾಕಿ ಒಂದು ಲಕ್ಷ ಇಂಡ್ಯಾ ಗವರ್ನಮೆಂಟ್ ಸೆಕ್ಯೂರಿಟಿ ಬೆಂಗಳೂರು ಬ್ಯಾಂಕ್ ಮೂಲಕ ವಿನಿಯೋಗ ಮಾಡಿರುತ್ತೆ.

ಬಿ. ಎಸ್. ಅಣ್ಣಪ್ಪ,
ರಿಜ್ಜನಲ್ ಆಂಡ್ ಮ್ಯಾನೇಜರ್ ಆಫೀಸ್ ಮಡಿಕೇರಿ

ಪ್ರಕಟನೆ.

ಕೊಡಗು ಸೆಂಟ್ರಲ್ ಸಹಕಾರಿ [illegible]
ಲಿಮಿಟೆಡ್

ಕೋ ಆಪರೇಟಿವ್ ಸೊಸೈಟೀಸ್ [illegible] ಪ್ರಕಾರ ರಿಜಿಸ್ಟರಾಗಿದೆ

	ರೂ
ಷೇರ್ ಬಂಡವಾಳ	50,000
ವಸೂಲಾದ ಷೇರ್ ಮೊಬಲಗು	6,820
ಜನರು ಬಂದ ಠೇವಣಾತಿ	47,990

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರುಷ ವಾಯಿದೆ ಅಥವಾ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 6-4-0ರ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದೊರೆಯುತ್ತೆ.

ವರ್ತಕರಿಂದ [illegible] ಕೋ ಆಪರೇಟಿವ್ ಬ್ಯಾಂಕ್ [illegible] ರವರು ಲೆಖ್ಖ ಆಡಿಟು ಮಾಡುತ್ತಾರೆ

ಪ್ರೆಸಿಡೆಂಟರು ಟ್ರೆಜರ್,
ಕೊಡಂದೆರ ಕುಟ್ಟಯ್ಯನವರು, ಯಂ, ಭುಜಂಗರಾಯರು
ರಾಯ್ ಬಹದ್ದೂರ್ ಬಿ ಎ ಬಿ ಎಲ್

ಸೆಕ್ರೆಟರಿ
ಸಿ. ಯಂ. ವೆಂಕಟಪ್ಪಯ್ಯನವರು ಬಿ. ಎ. ಬಿ. ಎಲ್.
ತಾರೀಕು 22—2—1924.

"ಕೊಡಗು"

೧೯೨೪ ನೇ ಇಸವಿ ಏಪ್ರಿಲ್ ತಾ|| ೧೧ ನೇ

ಶುಕ್ರವಾರ.

1924-25 ನೇ ವರ್ಷದ ಬಡ್ಜೆಟ್

ಬಡ್ಜೆಟ್ಟಿನಮೇಲೆ ಚರ್ಚೆ ಮಾಡುವ ಹಕ್ಕು ಸಿಕ್ಕಿತು ಚರ್ಚೆಯೂ ಆಯಿತು. ಫೈನಾನ್ಸ್ ಮೆಂಬರು ಫೈನಾನ್ಸ್ ಕಮಿಟಿಯಿಂದ ಅನೇಕ ಹೊಸಖರ್ಚುಗಳಿಗೆ ಹಣ ಇಡಲಾಯಿತು ಎಂತಲೂ ಹೇಳಿದರು. ನಾವು ದೂರದಿಂದ ವಿಮರ್ಶಿಸುವದು ಅವಶ್ಯವಾಗಿದೆ.

ಆದಾಯಗಳೇನೂ ಕಡಿಮೆಯಾಗಲಿಲ್ಲ. ದೊಡ್ಡ ದೊಡ್ಡ ಹುದ್ದೆಗಳೇನೂ ಕಡಿಮೆಯಾಗಲಿಲ್ಲ. ಅಂಥಾ ಹುದ್ದೆಗಳ ಸಂಬಳವೂ ಕಡಿಮೆಯಾಗಲಿಲ್ಲ. ದೊಡ್ಡ ಹುದ್ದೆಗಳ ಸಂಬಳ ಕಡಿಮೆಯಾಗದ್ದರಿಂದ ಕಡಿಮೆದರ್ಜೆಗಳ ಸಂಬಳವೂ ಹೆಚ್ಚಾಗಿಯೇ ಇಡಬೇಕಾಗಿದೆ. ಕಮಿಶನರ್, ಇಂಜನೀಯರ್, ಕನ್ಸರವೇಟರ್ ಮುಂತಾದವರಿಗೆ ತಿಂಗಳಿಗೆ ರೂ 1 ಸಾವಿರಕ್ಕೆ ಕಡಿಮೆಯಿಲ್ಲದೆ ಕೊಡುವಾಗ ದೇಶೀಯರಿಗೆ ಹತ್ತಿರುವ ಸಬ್‌ಜಡ್ಜ್, ಮುನಸೀಫ್, ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್, ಡಿಪ್ಯುಟಿ ಕೈರೆಕ್ಟರ್ ಸುಬೇದಾರ್, ಪೋಲೀಸ್ ಇನ್ಸ್‌ಪೆಕ್ಟರ್ ಮುಂತಾದವರಿಗೆ ಸಹ ಯಾಕೆ ತಕ್ಕಷ್ಟು ಸಂಬಳ ಕೊಡಬಾರದು ಎಂತ ದೇಶೀಯ ಕೌನ್ಸಿಲರುಗಳಿಗೆ ತೋರುತ್ತೆ. 1 ಸಾವಿರ ರೂ ಗೆ ಮೇಲಿರುವ ಸಂಬಳಗಳನ್ನು ಕಡಿಮೆಮಾಡಲು ನಮ್ಮ ಕೌನ್ಸಿಲಿಗೆ ಇಲ್ಲ. ಯಾಕೆ? ಇಂಡಿಯಾದೇಶದ ಯಾವ ಕೌನ್ಸಿಲುಗಳಿಗೂ ಇಲ್ಲ. ಆದ್ದರಿಂದಲೇ ಹೊಸ ಕೌನ್ಸಿಲುಗಳಿಂದ ದೇಶಕ್ಕೆ ಯಾವ ಸ್ವತಂತ್ರವೂ ಸಿಕ್ಕಿದಂತಾಗಲಿಲ್ಲವೆಂತ ಕೆಲವರು ವಾದಿಸುವದಾಗಿದೆ. ನಮ್ಮ ಈ ಪುಟ್ಟದೇಶಕ್ಕೆ ಸರಿಯಾದ ಪುಟ್ಟಸಂಬಳದ ಉದ್ಯೋಗಗಳೇ ಸಾಕಾಗಿದೆ. ಕಮಿಶನರ್ ಅಂದರೆ ಮುಖ್ಯ ಆಫೀಸರಿಗೆ 5 ನೂರು ರೂ ಗಿಂತ ಹೆಚ್ಚಿಗೆ ಸಂಬಳಕೊಡುವದು ಅನಾವಶ್ಯಕ. ಇದೇರೀತಿ ಬಾಕಿ ಎಲ್ಲಾ ಹುದ್ದೇದಾರರ ಸಂಬಳಗಳೂ ಕಡಿಮೆಯಾಗಬೇಕು. ಆಗ ಮಾತ್ರ ದೇಶವು ಪ್ರತ್ಯೇಕವಿರುವದರ ಪ್ರಯೋಜನವು ಪ್ರಜೆಗಳಿಗೆ ದೊರಕೀತಷ್ಟೆ. ಕ್ಷಾಮಕಾಲದ ದಂದಲ್ಲಿ ಜಿನಸುಗಳಿಗೂ ಇತರಸಾಮಾನುಗಳಿಗೂ ಕ್ರಯ ಏರಿದೆಯೆಂಬ ಕಾರಣದಿಂದ ಈಗ ನಾಲ್ಕಾರು ವರ್ಷಗಳಿಂದ ಕಡಿಮೆದರ್ಜೆಯ ಸರಕಾರಿ ಉದ್ಯೋಗಸ್ಥರ ಸಂಬಳವು ಶೇಕಡ 1 ನೂರರಷ್ಟು ಹೆಚ್ಚಿಸಲ್ಪಟ್ಟಿದೆ. ಆದರೆ ಪ್ರಜೆಗಳಿಗೆ ಇದೇ ಧಾರಣೆಗಳ ಕಷ್ಟವು ತಟ್ಟುತ್ತಿರುವಾಗ ಅವರಿಗೆ ಸರಕಾರವು ಏನೂ ಸಹಾಯಮಾಡುವದಿಲ್ಲ. ಅವರಮೇಲೆ ತೆರಿಗೆಯನ್ನು ಮಾತ್ರ ಇನ್ನಷ್ಟು ಮತ್ತಷ್ಟು ಹೆಚ್ಚಿಸುತ್ತಾ ಹೋಗುತ್ತಿದೆಯಷ್ಟೆ. ಸಂಬಳ ಹೆಚ್ಚಿಸುವ ಅಧಿಕಾರಿಗಳು 1 ಸಾವಿರ ರೂ ಗಿಂತ ಹೆಚ್ಚಿಗೆ ಸಂಬಳ ಪಡೆಯುವವರಾದ್ದರಿಂದ, ಕಡಿಮೆ ದರ್ಜೆಯವರ ಅರ್ಜಿಯನ್ನು ಮಂಜೂರ ಮಾಡದೆ ಇರಲು ಸಾಧ್ಯವಾಗುವದಿಲ್ಲ. ಕೂಲಿಕಾರರ ಸಂಬಳವೂ ಹೆಚ್ಚಿರುವದರಿಂದ ಬಹಳ ಕಡಿಮೆದರ್ಜೆಯವರ ಸಂಬಳ ಹೆಚ್ಚಿಸಿದ್ದಕ್ಕೆ ನಮ್ಮ ಆಕ್ಷೇಪಣೆಯಿಲ್ಲ. ಪ್ರಜೆಗಳಿಗೆ ಪ್ರಯೋಜನ ಸಿಕ್ಕಬೇಕಾದರೆ ಕೊಡಗಿನಮೇಲೆ ದರ್ಜೆಯವರ ಸಂಬಳವೆಲ್ಲಾ ಕಡಮೆಯಾಗಲೇಬೇಕು. ಈ ಸಂಬಳವನ್ನೆಲ್ಲ ಕಡಿಮೆಮಾಡುವ ಹಕ್ಕು ಪ್ರಜೆಗಳ ಪ್ರತಿನಿಧಿಗಳಿಗೆ ಸಿಕ್ಕಿದಾಗ ಸ್ವರಾಜ್ಯ ಸಿಕ್ಕಿತೆಂತಲೇ ನಮ್ಮ ಅಭಿಪ್ರಾಯ. ಈ ಸಂಬಳದ ದರಗಳೇ ಇಟ್ಟುಕೊಳ್ಳಬೇಕೆಂತ ಜುಲುಂ ಇರುವಷ್ಟುಕಾಲ ದೇಶದ ಪ್ರತಿನಿಧಿಯು ಮಂತ್ರಿಯಾಗುವದು ಸಾಧ್ಯವಾಗುವದಿಲ್ಲ. ಕಮಿಶನರಿಗೆ ಒಂದುವರೆಸಾವಿರ ಸಂಬಳವಿರುವದಾದರೆ ಆತನಮೇಲೆ ಅಧಿಕಾರ ನಡಿಸುವ ಮಂತ್ರಿಗೆ ಎರಡು ಸಾವಿರಪಡಬೇಕು. ಇಷ್ಟು ಸಂಬಳವನ್ನು ಹೆಚ್ಚಿಸಲಿಕ್ಕೆ ಪ್ರಜೆಗಳು ಒಪ್ಪಲಾರರು. ಸರಕಾರವೂ ಒಪ್ಪಲಾರದು.

ಫಾರೆಸ್ಟು ಇಲಾಖೆಯಲ್ಲಿ ದೊಡ್ಡಸಂಬಳದ ಅಧಿಕಾರಿಗಳ ಗೋಲಾಹಲ. ಈ ನಮ್ಮ ಚಿಕ್ಕದೇಶಕ್ಕೆ ಸುಮಾರು ಸಾವಿರ ರೂ ಮತ್ತು ಹೆಚ್ಚು ಸಂಬಳವಿರುವ ಇಂಪೀರಿಯಲ್ ಆಫೀಸರು ಮೂವರು? ಪ್ರೊವಿನ್ಸಿಯಲ್ ಆಫೀಸರುಗಳು ಸುಮಾರು 5 ನೂರು ರೂ ಸಂಬಳದವರು ಇಬ್ಬರು. ವಿಲಿಟಂ ಕೆಲಸಕ್ಕಾಗಿ ಮಾಕೂಟದ ಕೆಲಸ ಆರಂಭಿಸಿದ್ದಕ್ಕಾಗಿ ಹೆಚ್ಚಿನ ಆಫೀಸರುಗಳನ್ನು ನೇಮಿಸಿಕೊಂಡರು. ಈಗ ಅವರಿಗೆ ಸಂಬಳ ಕೊಡುತ್ತಾ ಇರಬೇಕಲ್ಲಾ ಎಂತ ಅವರಿಗೆ ಕೆಲಸ ಕೊಡುವದಕ್ಕಾಗಿ ಕಾಡುಮರಗಳನ್ನೆಲ್ಲಾ ಕಡಿದು ಉರುಳಿಸುತ್ತಿದ್ದಾರಂತೆ. ಪ್ರೋವಿನ್ಸಿಯಲ್ ಆಫೀಸರುಗಳನ್ನು ಮದ್ರಾಸಿನವರು ವಾಪಸು ತೆಗೆದುಕೊಳ್ಳುವದಿಲ್ಲವಂತೆ. ಹಾಗಾದರೆ ಅವರಿಗೆ ನೋಟೀಸ್ ಕೊಟ್ಟು ಮನೆಗೆ ಕಳುಹಿಸಬೇಕು. ಅವರಿಗೆ ಅನ್ಯಾಯವಾಗುತ್ತಲ್ಲ ಎಂತ ಅವಶ್ಯವಿಲ್ಲದಿರುವ ಇಬ್ಬರನ್ನು ವರ್ಷವೊಂದರ 10610 ರೂ ಖರ್ಚುಮಾಡಿಸಿ ಇಟ್ಟುಕೊಳ್ಳುವದು ಯಾವನ್ಯಾಯ? ಈ ಆಫೀಸರುಗಳು ಇಲಾಖೆಗೆ ಅವಶ್ಯವಿಲ್ಲವೆಂತ ಫಾರೆಸ್ಟುಮೆಂಬರು ಒಪ್ಪುತ್ತಾರೆ. ಈ ಅನಾವಶ್ಯದ ಇಬ್ಬರನ್ನು ವಜಾಮಾಡದೆ ಡಿಸ್ಟ್ರಿಕ್ಟ್ ಬೋರ್ಡಿನವರು ಸಾಕಿದ ಅರ್ಧಾಣೆ ಸೆಸ್ ಆದರೂ ಮಾಫಿ ಕೊಡಬಹುದಿತ್ತು. ಫಾರೆಸ್ಟ್ ಇಂಜನೀಯರೊಬ್ಬರಿಗೆ 10610 ರೂ ಸಂಬಳದಲ್ಲೇ ಖರ್ಚು. ಇದಲ್ಲದೆ ಇವರಿಗೆ ಭತ್ಯವೇ 2500 ರೂ. ಇವರ ಕೆಲಸವೇನು? ಎಕ್ಸ್‌ಪರ್ಟ್ ಕೆಲಸ ಯಾವುದು ಎಂತ ಶಾಸನ ಸಭಾ ಮಾಡಿದರೆ ರೇಂಜರುಗಳು, ಗಾರ್ಡ್‌ಗಳಮೇಲೆ ಮೇಸ್ತ್ರಿಕೆಲಸ ಹೀಗೆಂತ ಫಾರೆಸ್ಟ್ ಆಫೀಸರು ಒಪ್ಪುವದಿಲ್ಲ. ನಮಗೆ ಕಾಣುವದು ಇಷ್ಟೆ. ಇವರು ಟ್ರಾಂವೆಯನ್ನು ಹಾಕಿಸಲಿಕ್ಕಾಗಿ ನೇಮಕರಾದವರಲ್ಲಿ ಆ ಕೆಲಸವನ್ನು ಬಿಟ್ಟಬಳಿಕ್ಕೆ ಇಲಾಖೆಯವರೇ ಮಾಡಿದರು. ಟ್ರಾಂವೆಯಲ್ಲಿ ಓಡುವ ಇಂಜಿನನ್ನು ನಡೆಸಲು ಬೇರೆ ಇದ್ದಾರೆ. ಟ್ರಾಕ್ಟರನ್ನೂ ಲೋರಿಯನ್ನೂ ನಡಿಸುವವರು ಬೇರೆ ಇದ್ದಾರೆ. ಖಂಡಿತವಾಗಿ ಈ ಇಂಜಿನೀಯರಿಗೆ ಕೆಲಸವಿಲ್ಲ. ಇವರನ್ನು ಎಷ್ಟು ಜಾಗ್ರತೆ ಕಳುಹಿಸಿಬಿಟ್ಟರೆ ಅಷ್ಟು ಉತ್ತಮ. ಅಕ್ಷಣವೇ ಡಿಸ್ಟ್ರಿಕ್ಟ್ ಬೋರ್ಡಿನ ಇನ್ನೊಂದು ಅರ್ಧಾಣೆ ಸೆಸ್ ಕಡಿಮೆಮಾಡಬಹುದು. ಇವರನ್ನು ಮಡಿಕೇರಿಯಲ್ಲಿ ಇರಲಿಕ್ಕೆ ಬಿಡುವದು ಬಹಳ ಅನ್ಯಾಯ. ಈ ವಿಷಯ ಕೌನ್ಸಿಲನಲ್ಲಿ ಚರ್ಚೆ ನಡೆದು ಇವರು ಮಾಕೂಟದಲ್ಲಿ ತಿಂಗಳಿಗೆ 20 ದಿವಸವಾದರೂ ಇರುವಂತೆ ಮಾಡುತ್ತೇನೆಂತ ಫಾರೆಸ್ಟ್ ಮೆಂಬರು ಹೇಳಿದರು. ಈಗ 15 ದಿವಸ ಮಡಿಕೇರಿಯಲ್ಲೇ ಇರುವದಂತೆ. ಇದರಿಂದಲೇ ಇವರಿಗೆ ಮಾಕೂಟದಲ್ಲಿ ಕೆಲಸವಿಲ್ಲವೆಂತ ಸಿದ್ಧಾಂತವಾಗುವದಿಲ್ಲವೇ? ಈ ಆಫೀಸರನ್ನು ವಜಾಮಾಡಲು ಕೌನ್ಸಿಲಿಗೆ ಶಕ್ತಿ ಇಲ್ಲವಂತೆ. ದೇಶದವರು ಎಚ್ಚತ್ತು ಎಡೆಬಿಡದೆ ಚಳವಳಿಸಿ ಇವರನ್ನು ನೀಗುವದು ದೇಶದವರ ಕರ್ತವ್ಯವಾಗಿದೆ. ಇಂಥಾ ಅನಾವಶ್ಯ ಖರ್ಚುಗಳು ದೇಶದವರ ತಿಳುವಳಿಕೆಗೆ ಬರುವಂತೆ ಆದದ್ದೇ ಕೌನ್ಸಿಲಿನ ಪ್ರಯೋಜನವಾಗಿದೆ.

ಇಂಜನೀಯರಿಂಗ್ ಇಲಾಖೆಯಮೇಲೆ ಕೌನ್ಸಿಲಿನಲ್ಲಿ ಠರಾವುಗಳೇನೂ ಬರದೆ ಇದ್ದದ್ದು ವ್ಯಸನಕರ. ಇಲಾಖೆಯ ಸಿಬ್ಬಂದಿಗೆ ವಿಪರೀತ ಖರ್ಚಾಗುತ್ತೆ. ನಮಗೆ ಎಗ್ಸಿಕ್ಯೂಟಿವ್ ಇಂಜಿನೀಯರು ಯಾತಕ್ಕೆ? ರಸ್ತೆಗಳ ರಿಪೇರಿಯೇ ಈ ಇಲಾಖೆಯ ಮುಖ್ಯ ಕೆಲಸವಾಗಿದೆ. ಈ ಕೆಲಸವನ್ನು ಮದ್ರಾಸ ಜಿಲ್ಲೆಗಳಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಇಂಜಿನೀಯರೇ ನೋಡಿಕೊಳ್ಳುತ್ತಾರೆ. ಅರಮನೆಯನ್ನು ನಮ್ಮ ಎಗ್ಸಿಕ್ಯೂಟಿವ್ ಇಂಜಿನೀಯರು ಮುರಿದದ್ದನ್ನು ಹೇಗೆ ಸರಿಪಡಿಸಬೇಕೆಂಬದನ್ನು ನೋಡಲಿಕ್ಕೆ ಹೊರದೇಶದಿಂದ ಇಂಜಿನೀಯರನ್ನು ಕರೆಸಿದರು. ದೊಡ್ಡಕೆಲಸವೇನಾದರೂ ಮಾಡಬೇಕಾದಾಗ ಹೊರಗಿನಿಂದ ಕರೆಸಿಕೊಳ್ಳಬಹುದು. ರಸ್ತೆಗಳನ್ನೆಲ್ಲಾ ಮತ್ತು ಅವಕ್ಕೆ ಇರುವ ಖರ್ಚನ್ನೂ ಡಿಸ್ಟ್ರಿಕ್ಟ್ ಬೋರ್ಡಿಗೆ ಶೀಘ್ರದಲ್ಲೇ ವರ್ಗಾಯಿಸಿಕೊಡಬೇಕು. ಈಗಿನ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಜನರ ಪ್ರತಿನಿಧಿಗಳೇ ಸರ್ವಾಧಿಕಾರಿಗಳಾದ ಡಿಸ್ಟ್ರಿಕ್ಟ್ ಬೋರ್ಡಿಗೆ ಇಂಜನೀಯರಿಂಗ್ ಇಲಾಖೆಯನ್ನೇ ವರ್ಗಾಯಿಸಿಕೊಡಬೇಕು.

ಎಗ್ಸಿಕ್ಯೂಟಿವ್ ಇಲಾಖೆಯನ್ನು ನ್ಯಾಯವಿಚಾರದ ಇಲಾಖೆಯಿಂದ ವಿಂಗಡಿಸಬೇಕು. ಸುಬೇದಾರರುಗಳ ಮೇಜಿಸ್ಟ್ರೇಟ್‌ಪವರ್ ತೆಗೆದದ್ದು ಬಹಳ ಒಳ್ಳೆಯದು. ಸುಬೇದಾರರುಗಳು ಏನೂ ಕೆಲಸಮಾಡುತ್ತಿರುವದಿಲ್ಲ. ಅವರು ಅವಶ್ಯವೇ ಇಲ್ಲವೆಂತ ಕೌನ್ಸಿಲಿನಲ್ಲಿ ಮಾತು ನಡೆಯಿತು. ಇನ್ನೊಂದು ವರ್ಷದವರೆಗೆ ಇವರು ಯಾವವಿಧದಲ್ಲಿ ಪ್ರಜೆಗಳ ಹಿತಕರಕಾರ್ಯಗಳನ್ನು ಮಾಡುತ್ತಾರೆ ಎಂಬದನ್ನು ಕೌನ್ಸಿಲರುಗಳು ಸೂಕ್ಷ್ಮದೃಷ್ಟಿಯಿಂದ ನೋಡುತ್ತಿರತ್ತಾರೆ. ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಸಹ ಎಗ್ಸಿಕ್ಯೂಟಿವ ಆಫೀಸರಾಗಿರಕೂಡದು. ಆದರೆ ಈ ವ್ಯತ್ಯಾಸವನ್ನು ಮಾಡಲು ಯಾವಾಗ ಅನುಕೂಲವಾಗುತ್ತೋ ಗೊತ್ತಿಲ್ಲ.

ವಿದ್ಯಾ ಇಲಾಖೆಗೆ ಖರ್ಚು ವಿಶೇಷವಾಗಿ ಹೆಚ್ಚಾಗಬೇಕು. ಆದರೆ ಬೆಂಗಳೂರು ಇನ್ಸ್‌ಪೆಕ್ಟರಿಗೆ 11000 ರೂ ಕೊಡುವದರಿಂದ ಪ್ರಯೋಜನವಿದೆಯೋ ಎಂಬ ಸಂಶಯವಿದೆ. ಈ ವಿಷಯವನ್ನು ದೇಶದವರು ಯೋಚಿಸಿ ತಮ್ಮ ಅಭಿಪ್ರಾಯವನ್ನು ಕೊಡಬೇಕಾಗಿದೆ. ಪ್ರೈಮರಿ ವಿದ್ಯೆ ಜುಲುಂ ಮತ್ತು ಮಾಫಿಮಾಡಿಕೊಡಬೇಕು. ವಿರಾಜಪೇಟೆಯಲ್ಲಿ ಕೈಗಾರಿಕೆ ಸ್ಕೂಲನ್ನು ಏರ್ಪಡಿಸಬೇಕೆಂಬ ಠರಾವು ಪಾಸಾಯಿತು. ಇದನ್ನು ಆದಷ್ಟು ಜಾಗ್ರತೆ ಸ್ಥಾಪಿಸಬೇಕು.

"ಕೃಷಿ ಇಲಾಖೆ" ಯಿಂದ ಪ್ರಜೆಗಳಿಗೆ ಪ್ರಯೋಜನ ಏದೆಯೆಂತ ಪ್ರಜೆಗಳೇ ಹೇಳುವಹಾಗೆ ಮಾಡಿಕೊಡುವದು ಇಲಾಖೆಯ ಕೈಯ್ಯಲ್ಲಿ ಇದೆ. ದೇಶೀಯನಿಗೆ ಒಂದು ಕೆಲಸ ಸಿಕ್ಕಿತು ಎಂಬ ಸಂತೋಷವೇ ಮಾತ್ರ ಆಗುವದಾದರೆ ಇಲಾಖೆಯಿಂದ ಏನೂ ಪ್ರಯೋಜನವಿಲ್ಲ. ಅವರ ಸಂಬಳವನ್ನು ಹೊಸಗೊಬ್ಬರ ತರಿಸಿ ಮಾಫಿಯಾಗಿ ಹಂಚುವದಕ್ಕೆ ಉಪಯೋಗಿಸಿದರೆ ಹೆಚ್ಚು ಪ್ರಯೋಜನವಾದೀತೆಂತ ಹೇಳುವಹಾಗೆ ಆಗಬಾರದು. ಶಾಶ್ವತವಾಗಿ ರೈತರಿಗೆ ಪ್ರಯೋಜನವಾಗುವಂತೆ ಇಲಾಖೆಯವರು ಮಾಡಿಕೊಟ್ಟಾರೆಂತ ನಮಗೆ ಆಶೆ ಇದೆ. ಸಹಕಾರಿ ಇನ್ಸ್‌ಪೆಕ್ಟರನ್ನು ನೇಮಿಸುವದು ಪ್ರಯೋಜನಕರ. ಅನರೇರಿ ಆರ್ಗನೈಜರುಗಳ ಕೆಲಸಕ್ಕೆ ನಿಬಂಧದ ಸಹಕಾರಿಗಳನ್ನು ಕೂಡಲೇ ನೇಮಿಸಿಕೊಳ್ಳಬೇಕು.

ಆರೋಗ್ಯವಿಚಾರದಲ್ಲಿ ಕೌನ್ಸಿಲಿನಿಂದ ಸಾಕಷ್ಟು ಸಹಾಯ ಸಿಕ್ಕಲಿಲ್ಲ. ಪ್ರಯಾಣಮಾಡ ತಿರುಗುವ ಡಾಕ್ಟರುಗಳು, ಹಳ್ಳಿ ತಾಲೋಕುಗಳಿಗೆ ಒಂದೊಂದರಂತೆ ಒಬ್ಬೊಬ್ಬರು ನೇಮಕವಾಗಬೇಕು. ವ ಕಾಯಿಲೆಗಳಿಗೆ [illegible] ಔಷಧಿಯು ಮಾಫಿಯಾಗಿ ಸರ್ವರಿಗೂ ಸಿಕ್ಕುವಂತೆ ಮಾಡಬೇಕು. ಒಟ್ಟಿನಮೇಲೆ ಕೌನ್ಸಿಲಿನ ಕೆಲಸವು ತಕ್ಕಷ್ಟು ತೃಪ್ತಿಕರವಾಗಿಯೇ ಪ್ರಾರಂಭವಾಯಿತೆನ್ನಬಹುದು.

ಕೊಡಗು ನ್ಯಾಯವಿಧಾಯಕ ಸಭೆ.

[ಕಳೆದಸಂಚಿಕೆಯಿಂದ ಮುಂದುವರಿದದ್ದು].

ಮ|| ಪುತ್ತಮನೆಗಣಪಯ್ಯನವರು.

ಘನವುಳ್ಳ ಅಧ್ಯಕ್ಷರೆ,

ಕಿಗ್ಗಟ್ಟುನಾಡಿನ ಪರವಾಗಿ ಒಂದೆರಡು ಮಾತಾಡಲು ಅವಕಾಶಕೇಳುತ್ತೇನೆ.

ಕೊಡಗಿನ ಮುಖ್ಯ ಉತ್ಪತ್ತಿಯಾದ ಭತ್ತ, ಕಿತ್ತಳೆ, ಕಾಫಿ, ಏಲಕ್ಕಿಯಲ್ಲಿ ದಕ್ಷಿಣಕೊಡಗು ಭತ್ತಕ್ಕೂ ಕಿತ್ತಳೆಗೂ ಉಳಿದೆರಡಕ್ಕೆ ಉತ್ತರಕೊಡಗು ಪ್ರಧಾನವಾಗಿದೆ. ಅವರಲ್ಲು ಕಿಗ್ಗಟ್ಟುನಾಡು ತಾಲ್ಲೂಕು ಕೊಡಗಿನ ಕಣಜವೆಂದರೆ ತಪ್ಪಾಗಲಾರದು. ಭತ್ತದ ವ್ಯವಸಾಯಕ್ಕೆ ನೀರಿನ ಆಸರೆಯೂ ದನಗಳ ಅವಶ್ಯಕತೆಯೂ ಮುಖ್ಯವಾದವುಗಳು. ನೀರಿನ ಆಶ್ರಯಕ್ಕೆ ಹೆಚ್ಚಾಗಿ ಮಳೆಯನ್ನು ಆಧರಿಸಿಕೊಂಡಿರಬೇಕಾಗುತ್ತೆ. ಹಿಂದಿನ ಕಾಲದ ಅನೇಕ ಕೆರೆಗಳು ಈಗ ರಿಪೇರಿಯಲ್ಲಿರುವದಿಲ್ಲ. ಗದ್ದೆ ಕೋವುಗಳ ತಲೆಕಟ್ಟಿನ ಕೊಲ್ಲಿಗಳೆಲ್ಲ ಈಗ ಸಾಗುವಳಿಗೆ ಬಂದು ಮತ್ತಷ್ಟು ನೀರಿಗೆ ಅಭಾವಬಂದಿರೆ ವ್ಯವಸಾಯವಾದರೋ ಆಗಿಂದಲ್ಲು ಹೆಚ್ಚಾಯಿತೆ ಹೊರತು ಅಳದಿಲ್ಲ ಆಗಲಿಲ್ಲ. ವ್ಯವಸಾಯಕ್ಕೆ ಹೊಸ ನಮೂನೆ ಆಗಲಿ ಹೊಸ ಸಾಹಿತ್ಯವಾಗಲಿ ಯಾವದು ಒಳಬರಲಿಲ್ಲ. ದನಗಳ ಮರಣವಾದರೋ ಹೇಳಲಸಾಧ್ಯವಾಗಿದೆ. ಇದಕ್ಕೆ ಮುಖ್ಯವಾಗಿ ಆಹಾರದ ಕೊರತೆಯೂ, ಪಶುವೈದ್ಯರ ಸಹಾಯವು ಕಾರಣಗಳಾಗಿವೆ. ಅಲ್ಲಲ್ಲಿ ಇರತಕ್ಕ ಕಿತ್ತಳೆಗೆ ಹೊಸದಾಗಿ ಬೋರರು ಎಂಬ ಹೊಸ ರೋಗವು ಪ್ರಾಪ್ತವಾಗಿ ಅನೇಕ ವಿಸ್ತಾರವಾದ ಕಿತ್ತಳೆ ತೋಟಗಳು ಹಾಳು ಬೀಳಲು ತೊಡಗಿದೆ. ಈ ರೋಗಕ್ಕೆ ತಕ್ಕ ಚಿಕಿತ್ಸೆ ಶೀಘ್ರದಲ್ಲೇ ಕಂಡು ಹಿಡಿಯದಿದ್ದರೆ ಇಲ್ಲಾಗಿ ಮುಂದೆ ಸ್ವಲ್ಪದರಲ್ಲೇ ಕಿತ್ತಳೆ ಹೆಸರೆ ನಿರ್ಮೂಲವಾಗುವ ಭಯವುಂಟು.

ಜನಗಳ ಆರೋಗ್ಯಸ್ಥಿತಿಯನ್ನು ಕುರಿತು ಹೇಳುವದಕ್ಕೆ ಸಂಕೋಚಪಡುತ್ತೇನೆ. ಕುಡಿಯುವ ನೀರಿನ ಕೊರತೆ ಕೆಲವು ಕಡೆಗಳಲ್ಲಿ ದುಸ್ಥಿತಿಯಾಗಿದೆ. ಕೆಲವು ಸ್ಥಳಗಳಲ್ಲಿ ಮನುಷ್ಯರು ದನಗಳು ಒಂದೆ ಕೆರೆ ನೀರನ್ನೆ ಕುಡಿಯುತ್ತಿದ್ದಾರೆ. ಕೆಲವೆಡೆಗಳಲ್ಲಿ ಹೊಳೆಗಳು ಕೋಡಿಗಳು ಆಧಾರವಾಗಿದೆ. ಮತ್ತೆ ಕೆಲವೆಡೆಗಳಲ್ಲಿ ಗದ್ದೆಗಳಲ್ಲಿ ಗುಂಡಿಗಳನ್ನು ತೋಡಿ ಅಲ್ಲಾಗು ನೀರನ್ನೆ ಕುಡಿಯುತ್ತಿದ್ದಾರೆ. ಸೇದುವ ನೀರ ಭಾವಿ ಇರತಕ್ಕ ಜನಗಳು ಬಹಳ ಅಪರೂಪ. ಗ್ರಾಮವಾಸಿಗಳಿಗೆ ವೈದ್ಯರ ಸಹಾಯವು ಸುಲಭವಾಗಿ ದೊರೆಯುವಂತಿಲ್ಲ. ಹೀಗಿರುತ್ತಾ ಜನಗಳ ಆರೋಗ್ಯ ಕೆಟ್ಟು ಅಕಾಲಮರಣಕ್ಕೆ ತುತ್ತಾಗುವದರಲ್ಲಿ ಏನೂ ಆಶ್ಚರ್ಯವಿಲ್ಲ.

ವಿದ್ಯೆಯನ್ನು ಕುರಿತು ಹೇಳುವದಾದರೆ ತಾಲೋಕಿನ ಮಧ್ಯಪ್ರದೇಶದಲ್ಲಿಯ ಉತ್ತಮ ಜನರಲ್ಲಿ ಅನೇಕರು ಮಾತ್ರ ವಿದ್ಯೆಯಲ್ಲಿ ಆಸಕ್ತಿವುಳ್ಳವರಾಗಿದ್ದಾರೆ. ಕಡೆ ಗಡಿಗಳಲ್ಲಿ ಅನೇಕರಿಗೆ ಆಸಕ್ತಿಯು ಇಲ್ಲ. ಇರುವವರಿಗೆ ಸಾಧ್ಯವಾದ ಶಾಲೆಗಳು ಇಲ್ಲ. ವ್ಯವಸಾಯಕ್ಕೆ ಆಧಾರಭೂತರಾದ ಯುರವರ ಕುರುಬರ ಮತ್ತು ಪಂಚಮರ ವಿದ್ಯಾಭಿವೃದ್ಧಿಗೆ ಯಾವ ತರದ ಪ್ರೋತ್ಸಾಹ ಕಾಣುವದಿಲ್ಲ. ಆಯ ಪ್ರಮುಖ ಸ್ಥಳದ ಅನುಕೂಲವನ್ನು ತಿಳಿದು ಮಾಫಿ ಮತ್ತು ಕಡ್ಡಾಯವಾದ ವಿದ್ಯೆಯನ್ನು ಕೊಟ್ಟು ಸ್ಥಳಕ್ಕನುಕೂಲವಾದ ಕೈಗಾರಿಕೆಗಳನ್ನು ಕಲ್ಪಿಸಿದ ಹೊರತು ಪ್ರಯೋಜನವಾಗಲಾರದೆಂದು ಭಾವಿಸಿ ಹೇಳುತ್ತೇನೆ.

ಇದೇಂದು ಬಹಳ ದುಸ್ಥಿತಿಯ ವಿಷಯವು. ಧನಾರ್ಜನೆಯೇ ಮುಖ್ಯವೆಂದು ಭಾವಿಸಿ ಬಂದರಕ್ಕೆ ಪರದೇಶಿಯರ ಕೈಯಲ್ಲಿ ಸಿಕ್ಕಿಬಿದ್ದು, ನಮ್ಮಗ್ರಾಮ ಜನರ ಗೋಳು ತುಂಬಾ ವಿಷಾದಕರವು. ಇದನ್ನು ತಪ್ಪಿಸುವದಕ್ಕೆ ಪರಸ್ಪರ ಸಂಘಗಳು ಇನ್ನು ಹೆಚ್ಚಾಗಿ ಕೆಲಸ ಮಾಡಬೇಕಾಗಿದೆ. ಗ್ರಾಮಪಂಚಾಯಿತಿಯನ್ನು ನಡೆಸಿ ಸಣ್ಣ ವಿವಾದ ನೇವನೆಯಲ್ಲಿ ಅಪಚಾರವನ್ನು ತಪ್ಪಿಸುವದಕ್ಕೆ ತುಂಬಾ ನಿಗ ಕೊಟ್ಟು ಗ್ರಾಮಾಂತರಗಳಿಗೆ ಸರಿಹಾದ ರಸ್ತೆಗಳನ್ನು ಕಲ್ಪಿಸಿದಲ್ಲಿ ಜನರ ಆರ್ಥಿಕಸ್ಥಿತಿಯು ಉತ್ತಮವಾದೀತೆಂದು ನಾನು ನಂಬಿದ್ದೇನೆ.

ಕಡೆ ಮಾತು ಮತ್ತೊಂದು ವಿಷಯವು ನಾನು ಹೇಳುವದೇನಂದರೆ ಸುರಕ್ಷಿತ ಕಾಡುಗಳಿಗೆ ಮುಟ್ಟಿಕೊಂಡಿರುವ ಗ್ರಾಮಸ್ಥರ ದನಕರಗಳಿಗೆ ಆ ಇಲಾಖೆಯಿಂದ ಇರತಕ್ಕ ಅಡಚಣೆಯನ್ನು ಹೋಗಲಾಡಿಸಬೇ

ಕೊಡಗು ಕೌನ್ಸಿಲು ವಿಚಾರಂಗಳು.

[illegible]ಂಬುದೆ ಮುಖ್ಯವಾಗಿದೆ. ದೇಶದ ಹಿತವನ್ನು ಬಯಸಿ ನಾನು ಮೇಲೆ ಹೇಳಿದ ಸೂಚನೆಗಳಿಗೆ ಘನವುಳ್ಳ ಅಧ್ಯಕ್ಷರು ಗಮನಕೊಡಬೇಕಾಗಿ ಪ್ರಾರ್ಥನೆ.

ಮೆ|| ಮನಿಯಪಂಡ ಚೆಣ್ಣಪ್ಪನವರು.

ಅಧ್ಯಕ್ಷರೇ,

ಕೊಡಗು ದೇಶದಲ್ಲಿ ಜನಸಂಖ್ಯೆಯು ಬಹಳ ಕಡಮೆಯಾಗಿರುವದಕ್ಕೆ ಮುಖ್ಯ ಕಾರಣಗಳನ್ನು [illegible] ಸಂಶೋಧನೆಯ ಅನಗಾಹನೆಗೆ ತರಲು [illegible]ನಾಗಿದ್ದೇನೆ. ನನ ದೇಳಿಕೆಯಲ್ಲಿ ಜನರ ಸ್ಥಿತಿ [illegible]ಯನ್ನು ವೃದ್ಧಿಪಡಿಸುವದಕ್ಕೆ ಇರುವ ಸಾಧನೆ [illegible]ಾಗಿವೆ.

ಕಳೆದ ಇಪ್ಪತ್ತು ವರ್ಷಗಳ [illegible] ಯಿಂದ ನಮ್ಮ ಜನಸಂಖ್ಯೆಯು [illegible] ವದು ಗೋಚರವಾಗುವದು [illegible] ತಿಯಿಂದ [illegible]

[illegible]

ದೂರವಿದ್ದು [illegible] ಮೋಟಾರು [illegible] (Travelling dispensaries) [illegible] ಹೀಗೆ ಮಾಡಿದ್ದೇ [illegible] ತೆಂದೂ ನಿಶ್ಚಯವಾಗಿ ಹೇಳುತ್ತೇನೆ. [illegible] ಮರಣದ ಪ್ರಮಾಣವಾದರೆ, ಸ್ವಲ್ಪವು ಜಂಗಲರಿಗೆ ಹರಿಗೆ ಪ್ರತ್ತಿ ತರಬೇತು ಹೊಂದಿದ್ದ ನಾಡುಹಿಟ್ಟರಿಗೆ ಲ್ಲಾ ಅವರನ್ನು ನೇಮಿಸಿದರೆ ಒಳ್ಳೆಯದು ಹೀಗೆ ಮಾಡಿದರೆ ಮರಣವು ಹೆಚ್ಚಾಗಲಾರದು.

ಹಳ್ಳಿ ಎಲ್ಲಿ ಅವಶ್ಯವಿದೆಯೋ ಅಲ್ಲಿ ಬಾವಿಗಳನ್ನು ತೆಗೆದು ಸರಕಾರದವರು ಯತ್ನಿಸಬೇಕು. ಉತ್ತರ ಕೊಡಗಲ್ಲಿ (Reserve forest) ಕಾದಿಟ್ಟ ಕಾಡುಗಳ ಭಾಗವನ್ನು ಪ್ರಜೆಗಳಿಗೆ ಸರ್ಕಾರದವರು ಬಿಟ್ಟುಕೊಡುವದರಿಂದ ಮಹಾ ಉಪಕಾರವಾಗುವದು. ಜನ ವಾಸಿಸುವದಕ್ಕೆ ಅತಿ ಹೆಚ್ಚು ಮಂತೆಯೂ ಆರೋಗ್ಯಕರವಾದುದೂ ಪ್ರದೇಶದ ಸ್ಥಿತಿಯು ಇರಬೇಕಾದ್ದಿಗಳಲ್ಲಿ ಹೆಚ್ಚು ಮಾರ್ಗಗಳನ್ನು ಕೂಡಿಸುವ ಮೂಲಕ ಪ್ರಯಾಣಕ್ಕೆ ತಕ್ಕ ಸೌಕರ್ಯಗಳನ್ನು ಸರ್ಕಾರದವರು ಒದಗಿಸಿಕೊಡಬೇಕು. ನಮ್ಮ ದೇಶವು ವೃದ್ಧಿಯಾಗಲಿಕ್ಕೂ, ನಮ್ಮ ದೇಶದ ಉತ್ಪತ್ತಿಯನ್ನು ಹೊರಗೆ ಕೊಂಡು ಯುದ್ಧ ಹೇರಾಳ ಪಡೆಯಲಿಕ್ಕೂ ಮತ್ತು ಕಾಡು ಪ್ರಾಂತ್ಯಗಳಿಗಾಗದೆ ಬಿದ್ದಿರುವ ಭೂಮಿಯನ್ನು ವ್ಯವಸಾಯಕ್ಕೆ ಹೊರಗಿನ ಜನರು ಬರಲಿಕ್ಕೂ,

ಸಹಾಯವಾಗುವಂತೆ ರೈಲ್ವೆ ರಸ್ತೆಯನ್ನು ಹಾಕುವದು ಕ್ರಮ. ಹೆಚ್ಚು ನಾಲೆಗಳನ್ನು ಸರ್ಕಾರದವರು ರೈಲ್ವೆ ರಸ್ತೆಯನ್ನು ಹಾಕುವದುತ್ತಮ. ಹೆಚ್ಚು ಶಾಲೆಗಳನ್ನು ಸರ್ಕಾರದವರು ತೆರೆಯುವದಾದರೆ ಹೊರಗಿನವರು [illegible] ನಮ್ಮ ದೇಶದಲ್ಲಿ ಬಂದು ವಾಸಿಸಲಿಕ್ಕೆ ಉತ್ತೇಜನ ಕೊಟ್ಟಂತಾಗುವದು.

ಒಟ್ಟಿನಲ್ಲಿ, ನಾನು ಮುಂದಿಟ್ಟಿರುವ ಸಲಹೆಗಳು [illegible]ರವಾಗಿ ಪರಿಣಮಿಸುವಂತೆ ಸರ್ಕಾರದವರು [illegible] ಗೂ ಮತ್ತು ಡಿಸ್ಟ್ರಿಕ್ಟ್ ಬೋರ್ಡು [illegible] ಉದಾರವಾಗಿ ಧನಸಹಾಯ ಮಾಡಬೇಕೆಂದು ನನ್ನ ಪ್ರಾರ್ಥನೆ.

ಫೈನಾನ್ಸ್ (ಫೈನೆನ್ಸ್) ಮೆಂಬರರು ತಮ್ಮ ಬಜೆಟ್ [illegible] ಭಾಷಣದಲ್ಲಿ ದೇಶದ ಮರಣ [illegible] ಹೇಳಿಲ್ಲ! ಮತ್ತು ನಮ್ಮ [illegible] ಸ್ಥಿತಿಯ [illegible]ಗೆ ಬೇಕಾದ ಸಲಹೆಗಳನ್ನು ಹೇಳಿಲ್ಲ.

ಮೆ|| [illegible] ಕುಶಾಲಪ್ಪನವರು.

[illegible] ಬಹಳ ಸಂತೋಷವಾಗಿ [illegible] ಬಜೆಟ್ಟನ್ನು ಮೊಟ್ಟ ಮೊದಲು ಈ ಕೌನ್ಸಿಲಿಗೆ [illegible] ಸರ್ಕಾರವನ್ನು ವಂದಿಸುತ್ತೇನೆ. ಫೈನಾನ್ಸ್ ಮೆಂಬರರು ಬಜೆಟ್ಟನ್ನು [illegible] ಬಹಳ ಸಂತೋಷದಿಂದಲೂ, ವಿಶಾಲಮನಸ್ಸಿನಿಂದಲೂ, [illegible] ತೆಗೆದುಕೊಂಡಿರುವರು. ಈ ದೇಶವು ಸ್ವಸಹಾಯವು ಮಾಡಿಕೊಳ್ಳಲು [illegible] ಇಂಡಿಯಾ ಸರ್ಕಾರದವರು [illegible] ಇರುವದು ಬಹಳ [illegible] ಉಳುವವರಿಯನ್ನು [illegible] ಫಿನೇನ್ಸ್ ಮೆಂಬರವರು ಬಹುಮಾನ [illegible]ಗಳನ್ನು ದೃಷ್ಟಿಯಲ್ಲಿಟ್ಟುಕೊಳ್ಳಲು ಪ್ರಯತ್ನಿಸು[illegible] ಭೂಮಿಯು ಮತ್ತು [illegible] ಉತ್ಪತ್ತಿಗಳು ಹೆಚ್ಚು ಕಡಿಮೆ [illegible] ಬಂದು [illegible] ಉಳುವವರಿಯ ಕಾರಣದ ಮೇಲೆ [illegible] ವಿಚಾರಗಳಲ್ಲಿ ಎಂದು ಸಂತೋಷಿಸುತ್ತೇನೆ.

ದೇಶ ಅಭಿವೃದ್ಧಿಗೆ ಹೆಚ್ಚು ಹಣದ ಅವಶ್ಯಕತೆಯು [illegible] ಸೀಮೆಯ ಕಾಮಗಾರಿ [illegible] ಹಣವು ಕಮ್ಮಿ ಯಾಯಿತೆಂದು ಸೂಚಿಸುತ್ತೇನೆ. [illegible] ಮತ್ತು ಸಂಪಾದನೆ [illegible] ತಾಲೋಕುಗಳಲ್ಲಿ [illegible] ಬಹಳ ಸುಕರವಿದೆ ಮತ್ತು ಇದ[illegible] ಇಟ್ಟಿದ್ದು ಬಹಳ [illegible] ಕರಸೀಬಿನ [illegible]ಗೆ ವಹಿಸ [illegible] ಉಪಯೋಗಿಸುವದರಿಂದ ಬಹಳ [illegible] ಇದರ ವಿಷಯದಲ್ಲಿ [illegible] ಮತ್ತು ಆಲೋಚನೆಯು ಅವಶ್ಯಕವಿಲ್ಲ. [illegible] ವಿದ್ಯೆಇಲಾಖೆಗೆ ಅಭಿವೃ[illegible] ಪತ್ರಗಳನ್ನು [illegible] ಚೆನ್ನಾಗಿದ್ದರೂ ಕೂಡ ಇವು [illegible]ಗಳಿಗೆ [illegible] ಕೆಲಸಗಳನ್ನು ಹೊರ ತೆಗೆದು [illegible] ಯೋಚಿಸುವಾಗ ಬಹಳ ಕಡಿಮೆಯೆಂದು ಹೇಳಬೇಕಾಗಿದೆ. ಪಟ್ಟಣಗಳಿಗೆ ದೂರದಲ್ಲಿರುವ ಗ್ರಾಮಗಳ ಸ್ಥಿತಿಯು ಬಹಳ ಅಸಮಾಧಾನಕರವಾಗಿದೆ. ವೈದ್ಯ ಸಹಾಯದ ಮತ್ತು ಔಷಧಿಗಳ ವಿಷಯದಲ್ಲಿ ಅವುಗಳನ್ನು ಮರೆತುಬಿಟ್ಟಂತೆ ಕಾಣುತ್ತದೆ. "ಕೈ ಮುಂದಿದನನೇ" ಎಂಬ ಸರ್ಕಾರದ ಪದ್ಧತಿಯೂ ಇದಕ್ಕೆ ಕಾರಣವಾಗಿರಬಹುದು. ಮತ್ತು ಇಂಥಾ ಹೀನಸ್ಥಿತಿಯು ದೆಸೆಯಿಂದ ಸಿಕ್ಕಿರುವುದು ಸ್ವಾಭಾವಿಕವಾಗಿದೆ. ದಕ್ಷಿಣ ಕೊಡಗಿನ ಪ್ರಮುಖ ಮತ್ತು ದಕ್ಷಿಣ ಭಾಗದಲ್ಲಿ ಹೊಳೆ ಮತ್ತು ಗುಡ್ಡಗಳಿಂದ ಕೂಡಿರುವ ಗ್ರಾಮಗಳ ಸ್ಥಿತಿಯನ್ನು ಇಂಥಾ ಬುದ್ಧಿ ಇಲ್ಲದ ಕ್ರಮಗಳ ಉದಾಹರಣೆಯಾಗಿ ತೋರಿಸಬಹುದು. ವೈದ್ಯ ಸಹಾಯವೂ, ನೀರುಕಾಮಗಾರಿಕೆಯೂ ಇದ್ದರೆ ಹಾರೇಗಿ ಪ್ರದೇಶವು ಇಂದಿರುವಹಾಗೆ ಎಂದೂ ಇರಲಾರದು.

ಆಡಳಿತೆಯ ವಿಷಯ ನೋಡುವಾಗ್ಗೆ ಉತ್ಪತ್ತಿಯು ಕುಗ್ಗಿರುವದು, ಕೇವಲ ಹೆಚ್ಚಿನ ಖರ್ಚನ್ನು ಯಾಕೆ ಇಟ್ಟುಕೊಳ್ಳಬೇಕೆಂದು ಗೊತ್ತಾಗುವದಿಲ್ಲ. ತಲೆಭಾರದ ಆಡಳಿತ ಕ್ರಮದ ವಿಷಯ ಮಾತೆತ್ತಿದ್ದಾಗ ಮಾತಾಡಬಾರದೆಂಬ, ಅರ್ಥವೂ ಆಗುವುದೆಂದು ನನಗೆ ಗೊತ್ತಾದರೂ, ಈ ವಿಷಯದಲ್ಲಿ ಇಂಡಿಯಾ ಸರ್ಕಾರದವರು ತಮ್ಮ ತೀರ್ಮಾನವನ್ನು ಬೇಗನೆ ಪುನರಾಲೋಚನೆ ಮಾಡಬೇಕೆಂದು ಕೋರುತ್ತೇನೆ. ರಿಟ್ರೆಂಚ್‌ಮೆಂಟ್ ಕಮಿಟಿಯವರಿಂದ ವಿಚಾರಿಸಲ್ಪಟ್ಟ ಉದ್ಯೋಗಸ್ಥರಲ್ಲದ ಮನುಷ್ಯರ ಅಭಿಪ್ರಾಯವು, ಈಗಿನ ಆಡಳಿತ

ಕ್ರಮವು ಬಹಳ ಹೆಚ್ಚು ಖರ್ಚಿನದೆಂದು ವಿಶದವಾಗಿ ಸೂಚಿಸುತ್ತದೆ. ಇದೇ ಅಂತಿಯದಲ್ಲಿ ೧೩ ಫಾರೆಸ್ಟು ಅಂಚೆಯರುಗಳಲ್ಲಿ ಒಬ್ಬನನ್ನು ಕೊಡಗು ದೇಶದಲ್ಲಿ ಇಡುವುದು ಹಾಸ್ಯಾಸ್ಪದವಾದ ಸಂಗತಿಯಾಗಿದೆ. ದೇಶದ ಖರ್ಚಿನ ಹೆಚ್ಚೆಂಬಲ್ಲಿ ಒಂದುಭಾಗವು (ನಾವು ಬರೆದ) ಕೌನ್ಸಿಲು ಮೆಂಬರುಗಳಿಗೆ ಅರ್ಪಿಸಲು ಹಕ್ಕಿಲ್ಲದೆ ಇರುವುದಾಗಿದೆ.

ಪೋಲೀಸು ಇಲಾಖೆಗೆ ಖರ್ಚಾಗುತ್ತಿರುವ 95000 ರೂಪಾಯಿ ಬಹಳ ಹೆಚ್ಚಾಯಿತೆಂದೂ, ಅದನ್ನು ಕಡಿಮೆ ಮಾಡಬಹುದೆಂದೂ ನನ್ನ ಅಭಿಪ್ರಾಯ. ಆಯುಧದಾರಿಗಳಾದ ಜಮೀನುದಾರರೂ, ಅಸ್ಸಿಸ್ಟೆಂಟ್ ಮತ್ತು ಟೆರಿಟೋರಿಯಲ್ ಪಟಾಲಮುಗಳೂ ಇರುವ ದೇಶದಲ್ಲಿ ಹೆಚ್ಚು ಖರ್ಚಿನ ಪೋಲೀಸು ಪಟಾಲಮಿನ ಅವಶ್ಯಕತೆಯು ಇರುವುದಿಲ್ಲ.

ಬಜೆಟ್ಟಿನ ಮೇಲೆ ಒಟ್ಟು ಕೊಡುವಹಕ್ಕು ನಮಗೆ ಇಲ್ಲದೆ ಇರುವದರಿಂದ, ಫಿನೇನ್ಸ್ ಮೆಂಬರವರು ಸೂಚಿಸಿದಂತೆ, ದೇಶದ ಆಡಳಿತೆಯ ಎಲ್ಲಾ ಇಲಾಖೆಗಳಲ್ಲಿ ಮಿತವ್ಯಯದ ತತ್ವವನ್ನು ಆಗುವಷ್ಟು ಪಾಲಿಸಬೇಕೆಂದು, ಉಳಿವರಿಹಣವನ್ನು ದೇಶದಅಭಿವೃದ್ಧಿಯ ಕೆಲಸಗಳಿಗೂ, ಈ ದೇಶವನ್ನು ತನ್ನಮನೆಯಂತೆ ಮಾಡಿಕೊಂಡಿರುವ ಮಲೇರಿಯ ಜ್ವರವನ್ನು ಬೇರುಸಹಿತ ಕಿತ್ತುಹಾಕಲಿಕ್ಕೂ ಉಪಯೋಗಿಸಬೇಕೆಂದು ಮಾತ್ರ ನಾವು ಬಿಕ್ಕಿ ಬೇಳಬಲ್ಲೆವು.

ಮೆ|| ಬಿ. ಶ್ರೀಪತಿರಾಯರು.

ಅಧ್ಯಕ್ಷರೆ,

ಫೈನಾನ್ಸ್ ಮೆಂಬರು ಬಜೆಟ್ಟನ್ನು ತಯಾರಿಸಿದ ರೀತಿ, ಅದನ್ನು ಕೌನ್ಸಿಲು ಮುಂದೆ ಸ್ಪಷ್ಟವಾಗಿ ವಿವರಿಸಿದ್ದಕ್ಕೂ ಸ್ತುತ್ಯಾರ್ಹರಾಗಿದ್ದಾರೆ. ಅವರಿಗೆ ಇಂಡಿಯಾ ಸರ್ಕಾರದವರು ಈದೇಶಕ್ಕೆ ಜವಾಬ್ದಾರಿ ಕೊಡದೆ ತಾವೇ ಇಲ್ಲಿನ ಆದಾಯ ವೆಚ್ಚವನ್ನು ನಡೆಸುತ್ತಿದ್ದರು. ನಮ್ಮ ದೇಶವು ಈಗಿನ ಮೊಬಾರ್ಟಿಗೆ ಒಂದು ದೊಡ್ಡ [illegible]ಗಳ ಹಕ್ಕುಗಳಿಲ್ಲದಿದ್ದರೂ ಸ್ವಂತಂತ್ರ್ಯದ ವಿಧಾಯಕ ಸಭೆಯೊಗನೆ ಕೂಡಿ ಪ್ರತ್ಯೇಕ ಸ್ವಾತಂತ್ರ್ಯವಾಯಿತು. ನಮ್ಮ ದೇಶಕ್ಕೆ ಇಂಡಿಯಾ [illegible] ಆಕ್ಟಿನ 77 ನೇ ಸೆಕ್ಷನ್ ಮೇರೆ ಮಾತ್ರ ಕೌನ್ಸಿಲನ್ನು ಸ್ಥಾಪಿಸಲಿಕ್ಕೆ ಅನುಕೂಲ ಏರ್ಪಟ್ಟಾದ [illegible] ಬಜೆಟ್ಟಿನ ಮೇಲೆ ಓಟುಮಾಡುವ ಪವರ್ ಸಿಕ್ಕಿದ್ದರಿಂದ [illegible]ಯಾಗಲಿಲ್ಲ. ಹೇಗೂ ದೇಶದ [illegible] ವಿರೋಧ [illegible] ಸಂಪೂರ್ಣಗಳಲ್ಲಿ ಸರಕಾರದ[illegible] ಉಪಯೋಗಿಸಿ [illegible] ತಯಾರಾಗಿದೆ. ಬಜೆಟ್ಟಿನ ವಿಷಯ [illegible] ಫೈನಾನ್ಸ್ ಮೆಂಬರು ಪರಿಶೀಲನೆ [illegible] ಅಭಿಪ್ರಾಯವನ್ನು ತೆಗೆದು ಕೊಂಡಿದ್ದರೆ ಆಡಳಿತದ ಘನತೆಯು [illegible] ಕಾದ ವಿಷಯಗಳನ್ನು [illegible] ಯೂ, ಮೊದಲನೇದಾಗಿ [illegible] ಪತ್ರದ ಒಂದುಕಾಲು [illegible] ನೋಡಿದೆ. ಎರಡನೇದಕ್ಕೆ [illegible] ಕೇಳಿಕೆಯಂತೆ ನಾಲ್ಕು ಲಕ್ಷ ರೂಪಾಯಿ ಖರ್ಚಾಗುತ್ತೆ.

ಬಜೆಟ್ಟಿನಲ್ಲಿ ಉಳಿತಾಯ ಇದ್ದರೂ ಫೈದೆಯಾಗುವುದಿಲ್ಲ. [illegible] ಇಲ್ಲದೆ ಆರಂಭಿಸಿ [illegible] ಅಭಿವೃದ್ಧಿ [illegible] ಭಾಗವನ್ನು ಉಳಿಸಬೇಕಾಗಿದೆ. ಇಂಡಿಯಾ ಸರಕಾರವು ನಮಗೆ ಕೆಲವು ವಿಷಯಗಳಲ್ಲಿ ದಯತೋರಿಸಿದರೂ ಏನೂ ಸಿಬಂದಿ ಕೊಡದೆ ಇರುವುದು ಅನ್ಯಾಯವೇ. ಆರಂಭದಲ್ಲಿ ಸಾಲಯತ್ತಿಯೇ ಕೆಲಸ ನಡೆಯಬೇಕಾಗುತ್ತದೆ. ಉಳಿವರಿಯನ್ನು ದೇಶದ ಪ್ರಯೋಜನಕ್ಕಾಗಿ ಖರ್ಚು ಮಾಡಬಾಗುವುದಿಲ್ಲ. ಬಹಳ ಮಿತವ್ಯಯ ಮಾಡಬೇಕಾಗಿದೆ. ಸಿಬ್ಬಂದಿಯ ಕೋರಿಕೆಯ ಪ್ರಯೋಜನವು ಪೂರ್ತಿಯಾಗಿ ದೊರೆತು ದೇಶದ ಉತ್ಪತ್ತಿಯನ್ನೆಲ್ಲಾ ಚೆನ್ನಾಗಿ ಕಾಪಾಡುವವರೆಗೆ, ಪ್ರಯೋಜನಕಾರಿಯಾದ ಕೆಲಸಗಳಿಗೆ ಖರ್ಚು ಮಾಡಲಿಕ್ಕಾಗುವುದಿಲ್ಲ. ಫೈನಾನ್ಸ್‌ಮೆಂಬರು ಮಿತವ್ಯಯ ಮಾಡಲಿಕ್ಕೆ ಮನಸ್ಸು ಮಾಡಿದ್ದಾರೆಂಬುದು ಮುಪ್ಪೋಲಿಯಿಂದ ತಿಳಿಯುತ್ತೆ. ಮಿತವ್ಯಯವು ಅನೇಕ ಕಾರಣಗಳಿಂದ ಅವಶ್ಯವಿದೆ. (1) ಜನರ ಹೊರೆಯನ್ನು ಹಗುರವಾಗಿ ಸೋಡಬೇಕು. (2) ಜನರ ಐಶ್ವರ್ಯವನ್ನು ಹೆಚ್ಚಿಸುವಂಥ ಬಾಬುಗಳಿಗೆ ಖರ್ಚು ಮಾಡಬೇಕು. (3) ಒಂದು ಪ್ರಾಂತ್ಯದ ಆರ್ಥಿಕಸ್ಥಿತಿಯು ಭದ್ರವಾಗಬೇಕಾದರೆ ಅದರ ರಿಜರ್ವ್ ಬೆಳೆಯಬೇಕು. ಈ ಪರತ್ತುಗಳು ನೆರವೇರಿದನಂತರ ಅರಮನೆಯನ್ನು ರಿಪೇರಿ ಮಾಡುವ ಮುಂತಾದ ಕೆಲಸಗಳನ್ನು ಕೈಕೊಳ್ಳಬೇಕು.

ಕೊಡಗು ಕೌನ್ಸಿಲು ವಿಚಾರಗಳು

ರೆವಿನ್ಯೂ ಮತ್ತು ಪೋಲೀಸ್.

ಬಜೆಟನ್ನು ಬಾಬುವಾರಾಗಿ ಗಣನೆಗೆತೆದುಕೊಳ್ಳುವಲ್ಲಿ ಮುಖ್ಯವಾದ್ದನ್ನು ಮಾತ್ರ ಹೇಳುತ್ತೇನೆ. ರೆವಿನ್ಯೂ ಮತ್ತು ಪೋಲೀಸ್ ಇಲಾಖೆಯಲ್ಲಿ ಸಿಬ್ಬಂದಿ ಕೋತೆಯು ಅತಿಯಾಯಿತು. ಭೂಮಿಕಂದಾಯವು ಸ್ಥಿರವಾದದ್ದು. ಈ ಇಲಾಖೆಯಲ್ಲಿ ಅತೃಪ್ತಿಗೆ ಎಡೆಕೊಡಬಾರದು. ಇದಕ್ಕಾಗಿ ಪಾರುಪತ್ತೆಗಾರರ ದರ್ಜೆಯನ್ನು ಸಬ್‌ಇನ್ಸ್‌ಪೆಕ್ಟರ ದರ್ಜೆಗೆ ಏರಿಸಬೇಕು, ಅನಕ್ಷತದ ಬಡವರಾದ ಪಟೇಲರುಗಳ ಕಡೆಗೆ ಗಮನಕೊಡಬೇಕು. ಪೋಲೀಸ್ ಇಲಾಖೆಯಲ್ಲಿ ಒಂದು ಲಕ್ಷಕಿಂತ ಹೆಚ್ಚು ಖರ್ಚಾಗುತ್ತೆ. ಇಲ್ಲಿಯೂ ಸಿಬ್ಬಂದಿ ಕೋತೆಯು ಏರ್ಪಡಬಹುದು. ಎರಡು ಇನ್ಸ್‌ಪೆಕ್ಟರುಗಳನ್ನು ಉಳಿಸಿಕೊಳ್ಳಬೇಕು. ಕೆಳಗಿನ ದರ್ಜೆಗಳಿಗೆ ತೃಪ್ತಿಯಿಲ್ಲದಂತೆ ಮಾಡಿ ಕೊಡಬೇಕು. ಎರಡು ವರ್ಷಗಳಿಂದ ಸಿಬ್ಬಂದಿ ಕೋತೆಯ ಕಾರ್ಯವು ನಡೆದರೂ ಈ ಇಲಾಖೆಯ ಖರ್ಚು ಹೆಚ್ಚಾಗಿಯೇ ಇದೆ. ಆದರೂ ಇಲಾಖೆಯ ಅಧಿಕಾರಿಗಳ ನ್ಯಾಯವಾದ ಕೊರತೆಗಳಿಗೆ ತಿದ್ದಿಗೊಡಬೇಕು. ಇದಕ್ಕಾಗಿ ಕಂದಾಯ ಹೆಚ್ಚಿಸಬಾರದು. ಬೇರೆ ಇಲಾಖೆಗಳ ಖರ್ಚನ್ನು ಬುದ್ಧಿವಂತಿಕೆಯಿಂದ ಮಾಡಿದರೆ ಇದು ಸಾಧ್ಯವಿದೆ.

ಎಕ್ಸೈಜ್.

ಈ ಇಲಾಖೆಯಿಂದ ದೊಡ್ಡ ಉತ್ಪತ್ತಿ ಇದೆ. ಧರ್ಮಭೋದಕರೂ ಅಮ್ಮತವುಯ ಕೆಲಸದವರೂ ಈ ದೊಡ್ಡ ಉತ್ಪತ್ತಿಯನ್ನು ನೋಡಿ ವ್ಯಸನಪಡುತ್ತಾರೆ. ಪ್ರಪಂಚದಲ್ಲಿ ತಿಳುವಳಿಕೆಯುಳ್ಳವರು ಈ ಉತ್ಪತ್ತಿಯನ್ನು ಕಡಿಮೆಮಾಡಬೇಕೆನ್ನುತ್ತಾರೆ. ಈ ಕೌನ್ಸಿಲಿನ ಎಲ್ಲಾ ಮೆಂಬರುಗಳು ಕುಡುಕತನವನ್ನು ಕಡಮೆಮಾಡಬೇಕೆಂಬವರಲ್ಲಿ ಒಪ್ಪುತ್ತಾರೆ. ಆದರೂ [illegible] ಇದ್ದೇ ಇದೆ. ಕುಡುಕತನ ನಿಲ್ಲುವವರೆಗೆ ಈ ಉತ್ಪತ್ತಿಯನ್ನು ಬಿಡಲಾಗುವುದಿಲ್ಲ. ಅಂಗಡಿಗಳನ್ನು ಕಮ್ಮಿಮಾಡಿಯೂ [illegible]ವನ್ನು ಹೆಚ್ಚಿಸಿಯೂ ನಿಷಾ ಸೇವನೆಯನ್ನು ಕಡಿಮೆಮಾಡಬೇಕು. ಅಮೇರಿಕಾದೇಶವು ನಿಷಾಸೇವನೆಯನ್ನು ಸಂಪೂರ್ಣವಾಗಿ ಮನ್ನಮಾಡಿರುವಾಗ ಕುಡಿಯುಬಾರದೆನ್ನುವ ಇಂಡಿಯಾದೇಶವು ಹಾಗೆಯೇ ಮಾಡಬೇಕು.

ಫಾರೆಸ್ಟ್.

ಈ ಇಲಾಖೆಯು ಖರ್ಚನ್ನು ಕಳೆದ ಎರಡು ವರ್ಷಗಳಿಗಿಂತ ಕಡಿಮೆ ಮಾಡಿದ್ದಕ್ಕೆ ಫಾರೆಸ್ಟ್ ಮೆಂಬರಿಗೆ ವಂದಿಸಬೇಕಾಗಿದೆ. ಈ ಇಲಾಖೆಯ ಮೇಲೆ ಜನರ ದೃಷ್ಟಿಯು ಕೌನ್ಸಿಲು ಮೂಲಕ ಬೀಳುವಂತೆ ಮಾಡಬೇಕು. ದೇಶದ ಪ್ರಯೋಜನಕ್ಕಾಗಿ ಕಾಡುಗಳನ್ನು ಉಪಯೋಗಿಸಬೇಕು. ಇವು ಜನ್ಮದಗಳಲ್ಲ. ಈ ಇಲಾಖೆಯಿಂದ ಪ್ರಯೋಜನವಾಗುವಂತೆ ಕೆಲಸ ಮಾಡಬೇಕೋ ಅಥವಾ ದೊಡ್ಡ ಸಂಬಳದ ಎಕ್ಸ್‌ಪರ್ಟುಗಳ ಹೇಳಿಕೆಯಂತೆ ತಕ್ಕಾಲ ಅವಶ್ಯವಿಲ್ಲದ [illegible] ಬಾಳುವ ವಿಷರ್ಯಗಳನ್ನು [illegible] ಖರ್ಚು ಮಾಡಬೇಕೋ ಎಂಬುದನ್ನು ಯೋಚಿಸಬೇಕಾಗಿದೆ. ಇಲಾಖೆಯ ಉತ್ಪತ್ತಿಯು ದೊಡ್ಡದಾದರೂ ಗಂಧದಿಂದಲೇ ಬರಿ ಬಂದು ದೊರೆಯುವುದಾಗಿದೆ. ಇದನ್ನು ನಮ್ಮ ಕೂಟದ [illegible] ಚೆನ್ನಾಗಿ ಸೇರಿಕೊಳ್ಳುತ್ತದೆ. [illegible] ಹಣವನ್ನು ಕಡಿಮೆ ಮಾಡಬೇಕೆಂಬ ನಮ್ಮ ಮನಃಪೂರ್ವಕ ಕೋರಿಕೆಯಾಗಿದೆ. ಇದು ಸಾಧ್ಯವಾಗಬೇಕಾದರೆ ಫಾರೆಸ್ಟ್ ಆಫೀಸರು ಈ ಸಭೆಯ ಒಂದು ಕಮಿಟಿಯನ್ನು ಫಾರೆಸ್ಟ್ ಆಫೀಸರು ಸೇರಿಸಿಕೊಳ್ಳಬೇಕು.

ಜೈಲ್.

ಜೈಲನ್ನು ನೋಡಲಿಕ್ಕೆ ಉದ್ಯೋಗಸ್ಥರಲ್ಲದವರನ್ನು ಮದರಾಸಿನಂತೆಯೇ ನೇಮಿಸಬೇಕು.

ವಿದ್ಯೆ.

ಈ ಇಲಾಖೆಯು ಖರ್ಚು ಮೊದಲಿನಂತೆಯೇ ಇಟ್ಟದ್ದು ಸಂತೋಷವೇ. ಆದಾಗ್ಯೂ ಮೇಲೆ ಹೇಳಿದ ಒಂದು ಲಕ್ಷರೂಪಾಯಿ ಬಿದ್ದಿಂದಾಗುತ್ತೆ. ವಿದ್ಯೆಯ [illegible] ದರ [illegible] ಆದರೆ ಎಲ್ಲಿ ಬರಲಿಲ್ಲ. ಸಮುದಾಯದ ವಿದ್ಯೆಯು ಹೆಚ್ಚಬೇಕೆಂಬುದೇ ಜನರ ಕೂಗಾಗಿದೆ. ಪಾರ್ಲಿಮೆಂಟಿನ ಒಬ್ಬ ಮೆಂಬರು [illegible]ವಂತೆ ನಮಗೆ ಹಿಟ್ ಕೊಟ್ಟ ನಮ್ಮ ಯಜಮಾನರಂತಿರುವ [illegible] ಪ್ರಜೆಗಳಿಗೆ ವಿದ್ಯೆ ಕಲಿಸಲು ನಾವು ಪ್ರಯತ್ನಿಸಬೇಕು. ನಮ್ಮ ಸ್ಟೇಟ್ ಸೆಕ್ರೆಟರಿಯಾಗಿದ್ದ ಮಿ|| [illegible] ಪ್ರತಿನಿಧಿ ಸಭಾ [illegible] ಕಾರಣವರೆ ಓಟುಗಳು ತಾವು ಓಟ್ ಕೊಡುತ್ತೇವೆ, [illegible] ತಿಳಿಯಬೇಕು. ಎಂದು ಹೇಳಿದ್ದಾರೆ. [illegible] ಇನ್ನೂ [illegible] ವಿದ್ಯೆ [illegible] ಸಾಧ್ಯವಿಲ್ಲ. ಆದರಿಂದ ಪ್ರೈಮರಿ ವಿದ್ಯೆಗೆ ಹೆಚ್ಚು ಗಮನ ಕೊಡಬೇಕು. ದೇಶದಲ್ಲೆಲ್ಲಾ ಕಡಿಮೆ ಖರ್ಚಿನಿಂದ ನಡೆಯುವ ಟ್ರೈನ್ಡ್ ಟೀಚರುಗಳುಳ್ಳ ಶಾಲೆಗಳು ತೆರೆಯಬೇಕು. ಅತಿ ಬಡವನಿಗೂ ದೊರಕುವಂತೆ ಪ್ರೈಮರಿ ವಿದ್ಯೆಯನ್ನು ಮಾಫಿಮಾಡಬೇಕು. ಇದಾಗುವವರೆಗೂ, ಓದುಬರಹ ತಿಳಿದವರ ಸಂಖ್ಯೆ ಹೆಚ್ಚಾಗುವವರೆಗೂ ನಮ್ಮ ದೃಷ್ಟಿಯು ವಿದ್ಯಾ ಇಲಾಖೆಯಮೇಲೆ ಇರಬೇಕು.

ಆರೋಗ್ಯ.

ಸಮುದಾಯದ ಆರೋಗ್ಯದ ಕಡೆಗೆ ಕುರಿತದ್ದಲ್ಲಿ ನಮ್ಮ ಗಮನವು ಬೀಳಬೇಕಾಗಿದೆ. ಆರೋಗ್ಯಸ್ಥಳವಾಗಿರಬೇಕಾದ ಈ ಜಿಲ್ಲೆ ಸೀಮೆಯಲ್ಲಿ ಮರಣಸಂಖ್ಯೆಯ ದರವು ಬಹಳ ಹೆಚ್ಚಾಗಿದೆ. ಏನಾದರೂ ಅಂಟುರೋಗವು ತಲೆದೋರಿದರೆ ಬಹಳ ಜನರು ಸಾಯುತ್ತಾರೆ. ೧೯೧೮ ನೇ ಇಸ್ವಿಯ ಇನ್‌ಫ್ಲೂಯೆಂಜಾವೇ ಉದಾಹರಣೆಯಾಗಿದೆ. ಶಿಶುಗಳ ಮರಣ ಸಂಖ್ಯೆಯು ಅತಿಯಾಗಿದೆ. ಮರಣ ಸಂಖ್ಯೆಯು ಕಡಿಮೆಯಾಗಿ ಜನನ ಸಂಖ್ಯೆಯನ್ನು ಹೆಚ್ಚಿಸುವಂತೆ ಮಾಡಬೇಕು. ಶಿಶುಗಳ ರಕ್ಷಣೆಯ ಸಂಸ್ಥೆಗಳು ಪಟ್ಟಣಗಳಲ್ಲಿ ಮಾತ್ರ ಇವೆ. ಸಮುದಾಯದ ಆರೋಗ್ಯ, ಮತ್ತು ಆರ್ಥಿಕ ದುಸ್ಥಿತಿಯ ವಿಷಯ ತನಿಖೆಮಾಡಲಿಕ್ಕೆ ಒಂದು ಕಮಿಟಿ ಮಾಡಿದರೆ ಒಳ್ಳೆಯದು. ತನಿಖೆನಡೆದನಂತರ ಮುಂದಿನಯೋಚನೆ ಮಾಡಬಹುದು. ಶ್ವಾಸಕೋಶದ ಕಾಯಿಲೆಗಳೇ ಹೆಚ್ಚಾಗಿ ಕಾಣ ಬರುತ್ತವೆ. ಇದಕ್ಕೆ ತಕ್ಕ ಉಪಾಯಗಳನ್ನು ಹೂಡಬೇಕು.

ಕೃಷಿ

ಇದು ಮುಖ್ಯ ಕಸುಬು ಆಗಿದೆ. ದೇಶದ [illegible] ಜನರು ಇದರಲ್ಲೇ ಇದ್ದಾರೆ. ಕೃಷಿಕ್ರಮವು ಒಂದು ಶತಮಾನದ ಹಿಂದೆ ಇದ್ದಂತೆಯೇ ಇದೆ. [illegible] ಫಾರ್ಮಿಗೆ ಕೊಟ್ಟ ಹಣವು ಸಾಲದು. ಇಲ್ಲಿ ಕೃಷಿಯ ಅಜಮಾಯಿಷಿಗಳು ಚೆನ್ನಾಗಿ ನಡೆದರೆ ಜನರಿಗೆ ಪ್ರಯೋಜನವಾಗುತ್ತೆ. ತರಹಟ್ಟಿಯನ್ನು ಇಡಬೇಕು. ಸಹಕಾರಮಾಡಿದರೆ ಜನರಲ್ಲಿ ಉತ್ಪತ್ತಿ ಶಕ್ತಿಯು ಕಡಿಮೆಯಾಗುತ್ತೆ. ನೀರಾವರಿ ಇಲಾಖೆಗೆ ತಕ್ಕಷ್ಟು ಗಮನಕೊಡುತ್ತಿರುವುದಿಲ್ಲ. ಸ್ಪೈಸಾನ್ ಮೊದಲಿನ ಬಾಲ್ಯಾಪ್ಯಾದ ಸಂತೋಷವೆನಿಸಿದೆ. ವಿವಿಧವಿಧದ ಸಹಕಾರಿ ಸಂಘಗಳು ಬೆಳೆದು ಜನರ ಆರ್ಥಿಕಸ್ಥಿತಿಯು ಅಭಿವೃದ್ಧಿಗೊಂದಬೇಕಾಗಿದೆ. ಈ ಸಂಸ್ಥೆಗಳಿಂದ ಜನರು [illegible] ಸ್ವಾವಲಂಬನೆ [illegible] ಗುಣಗಳನ್ನು ಕಲಿತುಕೊಳ್ಳುತ್ತಾರೆ. [illegible] ಕೆಲಸದಿಂದ ಪ್ರಯೋಜನವಾಗದಿದ್ದಾದರೂ ಸಾಲದು. ಗ್ರಾಮದ ಆರೋಗ್ಯದ [illegible] ಮತ್ತು [illegible] ಸೂಪರಿಂಟೆಂಡೆಂಟರು [illegible] ಧವಿಧದ [illegible] ಸಂಘಗಳನ್ನು ಜನರ ಪ್ರಯೋಜನಕ್ಕಾಗಿ ಸ್ಥಾಪಿಸಬೇಕು. ಕೃಷಿಗಳಾಖೆಯ [illegible] ಸದಸ್ಯರು ಉದ್ಧರಿಸಿದೆ. ಚೆನ್ನಾಗಿ ಉಪಯೋಗಿಸಿದರೆ ಕೊಡಗನ್ನು ಉದ್ಧರಿಸುತ್ತದೆ.

ಪಿ. ಡಬ್ಲ್ಯು. ಡಿ.

ದೊಡ್ಡ ರಸ್ತೆಗಳು ಚೆನ್ನಾಗಿ ಇಡಲ್ಪಟ್ಟವು. ಆದರೆ ಬಳ ದೇಶದ ಗ್ರಾಮವಾಸಿಗಳಿಗೆ ಪ್ರಯೋಜನವಾಗುವ ರಸ್ತೆಗಳು ಚೆನ್ನಾಗಿಲ್ಲ. ಅದಕ್ಕೆ ಹೆಚ್ಚು ಗಮನ ಕೊಡಬೇಕು. ಇನ್ನು ಮುಂದೆ ಬಜೆಟ್ಟಿನ [illegible] ನಾವರಸ್ಥೆಗೆ ಎಷ್ಟೆಷ್ಟು ಹಣ ಇಟ್ಟಿದೆಯೆಂಬ [illegible] ಪಟ್ಟಿಯನ್ನು ಜೋಡಿಸಬೇಕು.

ಸ್ಥಳೀಯ ಸ್ವರಾಜ್ಯ

ಈ ಸಂಸ್ಥೆಗಳು ಇಂಡಿಯಾದಲ್ಲಿ ರಿಪ್ಪನ್ ಪ್ರಭುಗಳ ಕಾಲದಿಂದ ಸ್ಥಾಪಿತವಾದವು. ಈ ದೇಶದಲ್ಲಿ ನಿಯಮಿತ ಮೆಂಬರುಗಳು ಸರಕಾರಿ ಉದ್ಯೋಗಸ್ಥರೇ ಅಧ್ಯಕ್ಷರೂ ಉಳ್ಳ ಡಿಸ್ಟ್ರಿಕ್ಟ್ ಬೋರ್ಡು ಒಂದು [illegible] ಮೂರರ ಆಕ್ಟಿನಲ್ಲಿ ಸ್ಥಾಪಿತವಾಗಿದೆ. ಬೇರೆ ಎಲ್ಲಾ ವಿಷಯಗಳಲ್ಲೂ ಮುಂದರಿಯುತ್ತಿರುವಾಗ ಈ ಸಂಸ್ಥೆಯು ಹಾಗೆಯೇ ಇದೆ. ಈ ಸಭೆಯು ಡಿಸ್ಟ್ರಿಕ್ಟ್ ಬೋರ್ಡಿಗೂ ಮ್ಯುನಿಸಿಪಾಲಿಟಿಗಳಿಗೂ ಹೆಚ್ಚಿಗೆ ಹಕ್ಕು ಕೊಡುವ ವಿಷಯವನ್ನು ಸೂಚಿಸಬೇಕಾಗಿದೆ.

ಅಧ್ಯಕ್ಷರೇ, ಬಜೆಟ್ಟಿನ ಮೇಲೆ ನನ್ನ ಅಭಿಪ್ರಾಯಗಳನ್ನು ಹೇಳಲು ಹೆಚ್ಚು ಸಮಯ ತೆಗೆದುಕೊಂಡೆ. ನನ್ನ ಬಾಷಣವು ಚೆನ್ನಾಗಿರಲಾರದು. ಆದರೂ ಚುನಾಯಿಸಿದ ಜನರ ಅಭಿಪ್ರಾಯವನ್ನು ಸೂಚಿಸಲಿಕ್ಕೆ ಮನಃಪೂರ್ತಿಯಾಗಿ ಪ್ರಯತ್ನಿಸಿದ್ದೇನೆ.

ಮಿ|| ಪಟ್ಟಮಾಡ ಬೆಳ್ಯಪ್ಪನವರು.

ಅಧ್ಯಕ್ಷರೇ,

ಕೌನ್ಸಿಲಿನ ಮುಂದೆ ಚರ್ಚೆಗೆ ಇಡಲ್ಪಟ್ಟಿರುವ ಬಜೆಟ್ಟಿನ [illegible] ಕೆಲವು ಅಭಿಪ್ರಾಯಗಳನ್ನು ಸೂಚಿಸಲು ಅಪ್ಪಣೆ [illegible] ತಮ್ಮ ದೇಶದ [illegible] ದಾಯ ವೆಚ್ಚವನ್ನು ಚರ್ಚಿಸಲು ಪ್ರಥಮತಃ ದೇಶದ ಪ್ರತಿನಿಧಿಗಳು ಈ ದಿನ ಇಲ್ಲಿ ಸೇರಿರುವದು ಕೊಡಗಿನ ಚರಿತ್ರೆಯಲ್ಲಿ ಒಂದು ಪ್ರಾಮುಖ್ಯವಾದ ಸಂಗತಿಯಾಗಿದೆ. ಇದು, ಜನರು ಎಡೆಬಿಡದೆ ನಡಿಸಿದ ಚಳವಳದ ಫಲಕಾಲದಿಂದ ಅಪೇಕ್ಷಿಸಿದ ಪ್ರತಿಫಲವೆಂಬುದರಲ್ಲಿ ಸಂಶಯವಿಲ್ಲ. ಮತ್ತು ಕೌನ್ಸಿಲು ಈ ದೇಶಕ್ಕೆ ಮೊದಲೇ ಸಿಕ್ಕಬೇಕಾಗಿದ್ದರೂ ಕೂಡ ದೇಶದವರು ಸ್ವರಾಜ್ಯದಲ್ಲಿ ತರಬೇತು ಆಗಬೇಕೆಂಬ ಅಭಿಪ್ರಾಯದಿಂದ ಇದನ್ನು ಅಂಗೀಕರಿಸಿದ್ದಾಗಿದೆ. ಆದರೆ ಹಿಂದೂದೇಶದ ಬೇರೆ ಪ್ರಾಂತ್ಯಗಳು ತಮ್ಮ ಬಜೆಟನ್ನು ತಯಾರಿಸುವುದರಲ್ಲಿ ಹೆಚ್ಚಿನ ಅಧಿಕಾರವುಳ್ಳವರಾಗಿರುವಾಗ ಬಜೆಟಿನ ವಿಷಯ ನಮ್ಮ ಈ ಕೌನ್ಸಿಲಿನ ತೀರ್ಮಾನಗಳು ಚೀಫ್ ಕಮಿಷನರವರಿಗೆ ಶಿಫಾರಸ್ಸಿನಷ್ಟೇ ಬೆಲೆಯುಳ್ಳವುಗಳಾಗಿರುವುದು ವ್ಯಸನಕರ. ಆದರೂ ಕೂಡ ಈ ಕೌನ್ಸಿಲು ಸೂಚಿಸುವ ಅಭಿಪ್ರಾಯಗಳನ್ನೆಲ್ಲಾ ಚೀಫ್‌ಕಮಿಷನರವರು ಜಾರಿಗೆ ತರುವರೆಂದು ಭರವಸೆಯಿಂದ ಅಪೇಕ್ಷಿಸಲಾಗಿದೆ. ಅಲ್ಲದೆ, ತಮ್ಮ ದೇಶದ ಆಡಳಿತದಲ್ಲಿ ಜವಾಬ್ದಾರಿಕೆ ಇರಬೇಕೆಂಬುದೇ ಕಂದಾಯ ಕೊಡುವವರ ನ್ಯಾಯವಾದ ಅಭಿಲಾಷೆಯೆಂಬುದನ್ನು ಸರಕಾರದವರು ಮರೆಯದಿರಲಿ. ಮತ್ತು ಈ ಅಭಿಲಾಷೆಯನ್ನು ಆದಷ್ಟು ಬೇಗನೆ, ಅಂದರೆ ಈ ಕೌನ್ಸಿಲಿನ ಜೀವಕಾಲವು (೩ ವರ್ಷ) ಮುಗಿಯುವುದರೊಳಗೆ ದೊರಕಿಸಿಕೊಡತಕ್ಕದ್ದು.

ಎಲ್ಲಾ ಇಲಾಖೆಗಳ ಕಡೆಯು ಮುಖ್ಯ ಉದ್ಯೋಗಸ್ಥರು ಮಾತ್ರ ಬೇಕೆ ಇರುವ ಸಿಬ್ಬಂದಿಗಳಿಗಿಂತ ಖರ್ಚಿನ ಬಜೆಟಿನ ಭಾಗದ ಹಣವನ್ನು ತಿನ್ನುವ ಸಂಗತಿಯು ಕೊಡಗು ಬಜೆಟನ್ನು ನೋಡಿದ ಕೂಡಲೆ ಪ್ರತಿಯೊಬ್ಬನಿಗೂ ಮೊಟ್ಟಮೊದಲು ಹೊಳೆಯುವುದು ವಿಷಯವಾಗಿದೆ ಮತ್ತು ಇದರ ವಿಷಯ ಒಂದು ಮಾತನ್ನಾದರೂ [illegible]ವ ಅಧಿಕಾರವು ಈ ಕೌನ್ಸಿಲಿಗೆ ಇಲ್ಲದೆ ಇರುವದು ವ್ಯಸನಕರ. ಇದರ ದೆಸೆಯಿಂದ ದೇಶದ ಆಡಳಿತದ ಖರ್ಚು ಬಹಳ ಹೆಚ್ಚಾಗಿದೆ. [illegible] ಜನರ [illegible] ನಿಸ್ಸೀಣ್ಣದ (ಅದರಲ್ಲೂ ಮೂರರಲ್ಲಿ ಒಂದು ಭಾಗ ಕಾಡು). ಈ ಚಿಕ್ಕ ಪ್ರಾಂತವು ತನ್ನ ಉತ್ಪತ್ತಿಯು [illegible] ರೂಪಾಯಿ ಮಾತ್ರವಾದರೂ ಕೂಡ [illegible] ರೂಪಾಯಿಯನ್ನು, ಅಂದರೆ ಉತ್ಪತ್ತಿಯ [illegible] ಆಡಳಿತದ ಕೆಲಸಕ್ಕಾಗಿಯೇ [illegible] ಆದುದರಿಂದ [illegible] ಹೆಚ್ಚು ಖರ್ಚಿನ ಸಿಬ್ಬಂದಿಯನ್ನು [illegible] ಕಡಿಮೆಮಾಡುವುದು ಸರಕಾರದ ಕರ್ತವ್ಯವಾಗಿದೆ.

ದೇಶದ ಅಭಿವೃದ್ಧಿಯನ್ನುಂಟು ಮಾಡುವಂಥ ಇಲಾಖೆಗಳಿಗೆ ಈ ವರೆಗೆ ಬಹಳ ಸ್ವಲ್ಪ ಹಣ ಮಾತ್ರ ಸರಕಾರದವರು [illegible]ದ್ದರೆಂದು ನಾನು ಸೂಚಿಸಬೇಕಾದ ಅವಶ್ಯವಿಲ್ಲ. ವ್ಯವಸಾಯವು ಈ ದೇಶದ ನಿವಾಸಿಗಳ [illegible] ಜನರ [illegible] ಉಪಕಸುಬು [illegible] ಈ ದೇಶದಲ್ಲಿ [illegible] ವರ್ಷ [illegible] ಕೃಷಿಯಲ್ಲಿ ಏನೊಂದೂ ಅಭಿವೃದ್ಧಿ [illegible] ಬಂದುದು ಈ [illegible] ಮತ್ತು (ಹೆಚ್ಚನ್ನು) ಸ್ವಲ್ಪವೂ ಹೆಚ್ಚಿಸುವದರಲ್ಲಿ [illegible] ರೈತರು [illegible] ಹಿರಿಯರು ತಮ್ಮ ಹಿರಿಯರನ್ನೇ ಅನುಸರಿಸಿ ನಡೆಯುತ್ತಿರುವರು. ಆದ್ದರಿಂದಲೂ [illegible] ಕ್ರಮಗಳನ್ನು [illegible] ಮುಂದುವರಿದ [illegible] ದೇಶಗಳನ್ನು ಓದಿಕೊಳ್ಳಬೇಕು. [illegible] ವರ್ಷವರ್ಷವೂ ಬೆಳೆಯಲು [illegible] ಆದರೆ ಈ ಬಜೆಟ್ಟಿನಲ್ಲಿ [illegible] ದೇಶದ [illegible] ನವರಿಗೆ ತರಬೇತು [illegible] (ಎಕ್ಸ್‌ಪೆರಿಮೆಂಟಲ್ ಫಾರಂ) [illegible] ರೂಪಾಯಿಯು ಒಂದು ಬೆಳೆ [illegible] ಇದ್ದದ್ದು ಸ್ವಲ್ಪವೇ [illegible] ಇದು ಗೇರುಗ [illegible] ಬಹಳ ಕಾಲ [illegible] ಬಜೆಟಿನಲ್ಲಿ ಹೆಚ್ಚಿನ [illegible] ಕೊಡಲ್ಪಡುವುದೆಂದು ನಂಬುವೆ.

ದೇಶದ ಉತ್ಪತ್ತಿ ಸ್ಥಿತಿಯು [illegible] ಇಲಾಖೆಯವರು, ಫಾರೆಸ್ಟ್ ಇಲಾಖೆಗೆ ಬರುವ ಮಾಮೂಲು ಪ್ರಾರ್ಥನೆ [illegible] ಉತ್ಪತ್ತಿಯಲ್ಲಿ ಹೆಚ್ಚಿನ [illegible] ಎನ್ನುತ್ತೇನೆ. [illegible] ಬರುವದಿಲ್ಲ. ಮಾತ್ರ [illegible] ಕಾಲದಲ್ಲಿ [illegible] ಆದಾಯದಿಂದ [illegible] ಬರುವದೆಂದು [illegible] ಕಾಪಾಡಬೇಕೆಂದು ಬಂದದ್ದು; ಆದರೆ ಎಕ್ಸ್‌ಪೆರಿಮೆಂಟೇಷನ್ ಭಾಗದಿಂದ ಈ ವರೆಗೆ ಒಂದು ಕಾಸಿನಷ್ಟಾದರೂ ದೊರಕಿರುವುದಿಲ್ಲ. ಬದಲು, ಪತ್ತಿ ಮಾಡಲ್ಪಟ್ಟ ಫಾರೆಸ್ಟುಗಳ ಮರಗಳನ್ನು ಕಡಿದು ಮಾರಾಟಕ್ಕೆ ಸೇರಿಸಿದ್ದಕ್ಕಾಗಿ ಲಕ್ಷಾಂತರ ರೂಪಾಯಿ [illegible] ವ್ಯರ್ಥವಾಯಿತು. [illegible] ಇದರ [illegible] ನಡಿಸಲು ಖರ್ಚಾಗಿರುವುದಕ್ಕೆ ಕಾರಣ [illegible] ಕ್ರಮ

ಕೊಡಗು ಕೌನ್ಸಿಲು ಮೀಟಿಂಗು.

ಕ್ಕೆ ಕೊಂಡು ಹೋಗುತ್ತಿರುವರು. ಅವುಗಳು ಕೆಲಸವೇನೂ ಇಲ್ಲದೆ ಕೆಲವು ತಿಂಗಳುಗಳಿಂದ ಸುಮ್ಮನೆ ಬಿದ್ದಿವೆ. ಇವುಗಳನ್ನು [illegible] ಮುಂಚಿತವಾಗಿ ಮರಗಳನ್ನು ಆನೆಗಳಿಂದ ಎಳೆಯಿಸಿ ಹೊಳೆಯಲ್ಲಿ ತೇಲಿಬಿಟ್ಟು ಬಹಳ ಕಮ್ಮಿ ಖರ್ಚಿನಿಂದ ಬಿಡುತ್ತಿದ್ದರು. ಈ ಯಂತ್ರಗಳಿಂದ ಅಷ್ಟು ಕಮ್ಮಿ ಖರ್ಚಿನಿಂದ ಎಂದೂ ಮರವನ್ನು ಸಾಗಿಸಲು ಆಗಲಿಕ್ಕಿಲ್ಲ. ಯುದ್ಧದ ಸಲುವಾಗಿ ಪ್ರಾರಂಭಿಸಲ್ಪಟ್ಟ ಟ್ರಾಮ್ವೇ ಲೈನು ದೇಶದ ಉತ್ಪತ್ತಿ ಹೆಚ್ಚಿನ ಭಾಗವನ್ನು ತಿಂದುಹಾಕಿಬಿಟ್ಟಿದೆ. ಯುದ್ಧದ ಸಮಯದಲ್ಲಿ ವಿಮಾನಗಳಿಗೆ ಮರ ಕೊಡಬೇಕೆಂಬ ಅಭಿಪ್ರಾಯದಿಂದ ಐದಾರು ವರ್ಷಗಳ ಹಿಂದೆ ಕಡಿದುಹಾಕಿರುವ ಅನೇಕ ಮರಗಳು ಈ ದಿನ ಕಾಡುಗಳ ಮಧ್ಯದಲ್ಲಿ [illegible]ತ್ತಿವೆ. ಬರಪೊಳೆಯು ದೂರವಾಗಿ ಟ್ರಾಮ್ವೇಯು ಒಂದಿರುವುದರಿಂದ ಹೆಚ್ಚಿನ ಮರಗಳನ್ನು ಮಾರ್ಕೆಟ್ಟಿಗೆ ಸಾಗಿಸಲು ಸಹಾಯವಾಗಿರುವುದಿಲ್ಲ. [illegible] ಈ ತರದ ಸಾಗಿಸುವ ಖರ್ಚೇ ಸಾಗಿಸಿದ ಮರದ ಮಾರಾಟದ ಹಣದಿಂದ ಭರ್ತಿಯಾಗುವ ಹಾಗಿಲ್ಲ. ಟ್ರಾಮ್ವೇಯು ಹಾಕಲ್ಪಟ್ಟಿರುವ ಪ್ರದೇಶಗಳಲ್ಲಿ ಮಾರಾಟಕ್ಕೆ ತಯಾರಾದ ಮರಗಳೇ ಬಹಳ ಕಮ್ಮಿ. ಒಂದನೇ ತರಗತಿಯ ಫಾರೆಸ್ಟು ಎನ್ನಿಸಿಕೊಳ್ಳುವಂತ ಕಾಡುಗಳು ಈ ಟ್ರಾಮ್ವೇ ಲೈನಿಗೆ ದೂರದಲ್ಲಿವೆ. ಅದಲ್ಲದೆ ಇಷ್ಟರವರೆಗೆ ಪ್ರೈವೆಟ್ ಕಂಪೆನಿಗೆ ಕೇಳಿದಷ್ಟರಂತೆ ಕನ್ಸೆಷನ್ ಕೊಟ್ಟು ಅವರ ಮೂಲಕ ಮರಗಳನ್ನು ಮಾರಿಸುತ್ತಿದ್ದರಂತೆ. ಮಾರ್ಕೆಟಿನಲ್ಲಿ ಎಲ್ಲಾ ವ್ಯಾಪಾರಿಗಳೂ [illegible]ಟಿಗೆ ಬಿಟ್ಟಿದ್ದರೆ ಫಾರೆಸ್ಟ್ ಉತ್ಪತ್ತಿಯು ಹೆಚ್ಚಾಗುತ್ತಿತ್ತೆಂಬುದರಲ್ಲಿ ಸಂಶಯವಿಲ್ಲ. ಅದರಲ್ಲಿ ಸಿಕ್ಕಬಹುದಾದ ಸ್ವಲ್ಪ ಉತ್ಪತ್ತಿಯನ್ನು ಅಲ್ಲಿಯ ಕೆಲಸವನ್ನು ನಡಿಸಲು ಇಟ್ಟಿರುವ ಹೆಚ್ಚು ಖರ್ಚಿನ ಸಿಬ್ಬಂದಿಯೇ ತಿಂದುಹಾಕಿಬಿಡುತ್ತದೆ. [illegible] ದೊಡ್ಡ ಖಜಾನೆಯನ್ನಿಟ್ಟು ಅದಕ್ಕೆ ಬೇಕಾದ [illegible] ಒಂದು [illegible] ಸಂಗಡ [illegible] ಮಾಡಿಕೊಳ್ಳುವದರಿಂದ ಲಾಭ ಸಿಕ್ಕಬಹುದೆಂದು [illegible] ಹೇಳುತ್ತಾರೆ. [illegible] ದೇಶದ ಹಿತವನ್ನು [illegible] ಟ್ರಾಮ್ವೇ [illegible] ಲಾಭದೊರೆಯುವಂತೆ [illegible]

[illegible] ಹೊಸ ಕೆಲಸಗಳಿಗೆ [illegible] ಖರ್ಚುಮಾಡುವುದು ಒಳ್ಳೆಯದಲ್ಲ. [illegible] ಉತ್ಪತ್ತಿಯು [illegible] ಫಾರೆಸ್ಟು [illegible]. ಆದರೆ [illegible] ಫಾರೆಸ್ಟುಗಳ [illegible] ಮರಗಳ ಮಾರಾಟವಾಗಿದೆ. ಹಣವನ್ನು ಇಷ್ಟರವರೆಗೆ ಏನೊಂದೂ ಲಾಭಕರವಲ್ಲದ ಟ್ರಾಮ್ವೇಗೆ ವೆಚ್ಚ ಮಾಡುತ್ತಿರುವುದು ವ್ಯಸನಕರ.

ಕೆಲವು ವರ್ಷಗಳ ಹಿಂದಿನಿಂದ ಈಗ ದೇಶದ ಆರೋಗ್ಯಸ್ಥಿತಿಯು ಉತ್ತಮವಲ್ಲವೆಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. [illegible] ಔಷಧಿಗಳನ್ನು ದೇಶವನ್ನು [illegible] ಸುಲಭವಾಗಿಯೂ ಕಮ್ಮಿ [illegible] ದೊರೆಯುತ್ತಿದ್ದ ಅವು ಒಳ್ಳೆಯ [illegible] ಮತ್ತು ಯುನಾನಿ ಔಷಧಿಗಳನ್ನು, [illegible] ಅವುಗಳಲ್ಲಿದ್ದ ವಿದ್ಯಾಜ್ಞಾನವನ್ನು [illegible] ವರ್ಷಗಳು [illegible] ಹಾಗೆ ಹೊಸ [illegible]ಗಳು ದೇಶದಲ್ಲಿ [illegible] ಕೆಲವು ಆಸ್ಪತ್ರೆಗಳು ಜನರಿಗೆ ಬೇಕಾದಂತೆ ಸಹಾಯ ಮಾಡಲು ಸಾಕಾಗುವುದಿಲ್ಲ. ಇದರೊಂದಿಗೆ ಆರೋಗ್ಯಸ್ಥಿತಿಯು [illegible] ಗ್ರಾಮದವರಲ್ಲಿ ಇಲ್ಲದೆ ಇರುವುದು ಗ್ರಾಮವಾಸಿಗಳ ಸಂಖ್ಯೆಯನ್ನು ಕಡಿಮೆಮಾಡುತ್ತಿದೆ. ಆದುದರಿಂದಲೇ ಬಹಳ [illegible] ಗ್ರಾಮಗಳು ಈಗ [illegible]ಪ್ರದೇಶವಾಗಿವೆ. ಈ ಭಾಗದಲ್ಲಿ ಆಸ್ಪತ್ರೆಗಳಿಗಾಗಿಯೂ, ಔಷಧಿಯ ಸಸ್ಯಗಳಿಗಾಗಿಯೂ ಹೆಚ್ಚು ಹಣ ಖರ್ಚುಮಾಡಿದ್ದರೆ ದೇಶದ ಆರೋಗ್ಯಸ್ಥಿತಿಯು ಎಂದಿಗೂ [illegible]ವಾಗಲಿಕ್ಕಿಲ್ಲ. ಗ್ರಾಮಸ್ಥರ ಸಹಾಯಕ್ಕಾಗಿ ಸಂಚಾರವಾಗುವ [illegible] [illegible] ನೇಮಕ [illegible] ದೊಡ್ಡ [illegible] ಎಂದಿನಂತೆ [illegible]ಗುತ್ತವೆ.

ವಿದ್ಯಾ ಇಲಾಖೆಯ ಕಡೆಗೆ ತಿರುಗಿ ನೋಡಿದರೆ ನಮ್ಮ ಮಕ್ಕಳ [illegible] ಮತ್ತು [illegible]ಗೆ [illegible] ಹಣ ವೆಚ್ಚಮಾಡಲಿಲ್ಲವಾಗಿ [illegible] ದುತ್ತಿದೆ. ಪ್ರಾಂತ್ಯದಲ್ಲಿ ಎಲಿಮೆಂಟರಿ ವಿದ್ಯೆಯನ್ನು ಮಾತ್ರವಾಗಿಯೂ ಪಡಸ್ಟ್ರಯಮಾಗಿಯೂ ಕಲಿಸುವ ಉದ್ದೇಶದಿಂದ ಪ್ರೈಮರಿ ಶಾಲೆಗಳನ್ನು ಹೆಚ್ಚಿಸಬೇಕು. ಯರವ, ಕುರುಬ ಮತ್ತು ಪಂಚಮರು ಮೊದಲಾದ ಹಿಂದುಳಿದ ಪಂಗಡದವರ ವಿದ್ಯಾಭಿವೃದ್ಧಿಗೆ ಸಾಕಷ್ಟು ಉತ್ತೇಜನ ಕೊಟ್ಟಿರುವುದಿಲ್ಲ. ಈಗಿನವರೆಗೆ ಸರ್ಕಾರದವರು ಕೈಗಾರಿಕೆ ವಿದ್ಯೆಗೆ ಏನೊಂದೂ ಗಮನ ಕೊಟ್ಟಿರುವುದಿಲ್ಲ. ಕೈಗಾರಿಕೆ ಕೆಲಸಗಳಿಗೆ ಬಹಳ ಹೆಚ್ಚು ದುಬಾರಿಯಾದ [illegible] ಹೆಚ್ಚು ಕೂಲಿ ಬಿಡಬೇಕಾಗುವಂತೆ ಕೆಲಸಗಾರರನ್ನು ನಂಬಿಕೊಂಡಿರಬೇಕು. ಆದರೆ ನಮ್ಮ ಯುವಕರು ಲೋವರ್ ಅಥವಾ ಹಯರ್ ಸೆಕಂಡರಿ ವಿದ್ಯೆಯನ್ನು ಓದಿ, ಕೆಲಸವಿಲ್ಲದೆ ದೇಶದಲ್ಲಿ ಅಲೆದಾಡುತ್ತಿರುವವರು ಎಷ್ಟೋ ಜನರಿರುವರು. ಈ ಸ್ಥಿತಿಯನ್ನು ಹೋಗಲಾಡಿಸಲು ಎಲಿಮೆಂಟರಿ ಶಾಲೆಗಳಲ್ಲಿ ಕೈಗಾರಿಕೆಗಳನ್ನು ಕಲಿಸತಕ್ಕದ್ದಲ್ಲದೆ, ಬೇರೆ ಕೈಗಾರಿಕೆ ಶಾಲೆಗಳನ್ನು ಸ್ಥಾಪಿಸತಕ್ಕದ್ದು. ಹೀಗೆ ಉದ್ದೇಶಗಳ ಬದಲಾವಣೆಯಿಂದ [illegible] ಮಕ್ಕಳನ್ನು ಸ್ವಂತ ಜೀವನವನ್ನು ನಡಿಸಲು ಪೂರ್ಣ ಯೋಗ್ಯರನ್ನಾಗಿ ಮಾಡುವುದರಿಂದ, ಪಶ್ಚಿಮದ ಅನೇಕ ದೇಶಗಳಲ್ಲಿ ಮಾಡುತ್ತಿರುವಂತೆ [illegible] ಅನುಸರಿಸುವಂತೆ [illegible] ಮುಖ್ಯ [illegible]ವನ್ನು ತೆಗೆದುಕೊಳ್ಳುವುದು ಸರ್ಕಾರದವರ ಕರ್ತವ್ಯವಾಗಿದೆ.

ಸರ್ಕಾರದವರು ಅಮಲು ಪದಾರ್ಥದ ಉತ್ಪತ್ತಿಯನ್ನು [illegible] ತಮ್ಮ ತತ್ವವನ್ನು ವಿವರವಾಗಿ ತಿಳಿಸಿರುವರು. ಅದು ಬೇರೆ ಅನೇಕ ಪ್ರಾಂತೀಯ ಸರ್ಕಾರಗಳ [illegible] ಕಮ್ಮಿ [illegible] ಸೇವನೆಯಿಂದ ಹೆಚ್ಚು ಉತ್ಪತ್ತಿ" [illegible] ಒಳ್ಳೆ ಗುಣಗಳನ್ನು [illegible] ಏನೊಂದೂ ವ್ಯಯ [illegible] "ಎಕ್ಸೈಸ್ [illegible] ವರ್ಷಗಳಲ್ಲಿ ಹೆಚ್ಚು [illegible] ಅದರಿಂದ ಈಗಿನ [illegible] ಉತ್ಪತ್ತಿಯು ದೊರೆಯುವ ಸಂಭವವಿಲ್ಲ" [illegible]

[illegible]

ನೇರಗಟ್ಟಿ, [illegible] ರಿಪೇರಿ ಮತ್ತು [illegible] [illegible]

[illegible] ಹೇಳುವುದೇನೆಂದರೆ [illegible], [illegible] ಕೆಲವು ಕೆಲಸಗಳನ್ನು [illegible] ಕೌನ್ಸಿಲು [illegible] ಭರ [illegible] ಭದ್ರಪಡಿಸಿ [illegible]

ಫೈನಾನ್ಸ್ ಮೆಂಬರರು (ಕಮಿಷನರು) ಬಡ್ಜೆಟ್ ಚರ್ಚೆಯಮೇಲೆ ಮಾಡಿದ ಅಖೈರ್ ಭಾಷಣ.

ಉದ್ದವಾಗಿ ಜವಾಬುಕೊಡಲು ಇಚ್ಛಿಸುವದಿಲ್ಲ. ಸಾಮದಾರ್ ಮೆಂಬರುಗಳಿಗೆ ತಿಳಿದಂತೆಯೇ ನಾನು ಈ ದೇಶಕ್ಕೆ ಬಂದು 3 ತಿಂಗಳಾಯಿತಷ್ಟೆ. ಆ ಕಾಲವು ಸಹ ಕೌನ್ಸಿಲನ್ನು ಪ್ರಾರಂಭಿಸುವ ಕೆಲಸದಲ್ಲೇ ಕಳೆಯಬೇಕಾಯಿತು. ಆದ್ದರಿಂದ ಎಲ್ಲಾ ಟೀಕೆಗಳಮೇಲೆ ಜವಾಬುಕೊಡಲು ಸಾಧ್ಯವಿಲ್ಲ. ಸಾಧಾರಣವಾಗಿ ಹೇಳುವದಾದರೆ ಬಡ್ಜೆಟ್ಟಿನಲ್ಲಿ ಅಡಗಿರುವ ತತ್ವವು ಕೌನ್ಸಿಲಿಗೆ ಒಪ್ಪಿಗೆಯಾಗಿದೆಯೆಂತ ತಿಳಿದು ಸಂತೋಷವಾಯಿತು. ಸ್ವಕೀಯ ಬೊಕ್ಕಸದ ಹಣವನ್ನು ಪೂರ್ತಿ ಖರ್ಚುಮಾಡಲು ಇತರ ಮೆಂಬರುಗಳಂತೆಯೇ ನಾನು ತಯಾರಿದ್ದೇನೆ. ಆದರೆ ಎರಡು ಕರುಳ್ಳ ವಿಷಯ ಖರ್ಚಿಗೆ ನಾನು ಒಪ್ಪಲಾರೆ. ಒಂದನೇದು ಯಾವದೆಂದರೆ ಯಾವ ಕೆಲಸವನ್ನೇ ಆಗಲೀ ಈ ಸಭೆಯ ಮೂಲಕ ಜನರ ಅಭಿಪ್ರಾಯವು ಜನಪ್ರಿಯವಾಗಿ ತಿಳಿದವಿನಹ ಹೊಸ ಕೆಲಸವನ್ನು ಕೈಕೊಳ್ಳಲಿಕ್ಕಿಲ್ಲ. ಈ ದಿನದ ಭಾಷಣಗಳಲ್ಲಿ ವಿಧವಿಧದ ಸಲಹೆಗಳು ಸ್ಪಷ್ಟ. ಅವೆಲ್ಲಾ ಸರಕಾರಕ್ಕೆ ತಿಳಿಸಲ್ಪಡುತ್ತವೆ. ಎರಡನೇ [illegible]ನೆಂದರೆ—ಯಾವ ಹೊಸ ಕಾರ್ಯವಾದರೂ ಚೆನ್ನಾಗಿ ಪರಿಶೋಧಿಸಲ್ಪಟ್ಟಿರಬೇಕು. ಈ ಸಭೆಯ ಮೆಂಬರುಗಳು, ಸರಕಾರವು ಹಣವನ್ನು ಗಡಿಬಿಡಿಯಲ್ಲಿ ಖರ್ಚುಮಾಡಬೇಕೆಂತ ಕೇಳಲಿಕ್ಕಿಲ್ಲವೆಂತ ನನಗೆ ನಂಬಿಕೆ ಇದೆ. ಯಾವ ಮೆಂಬರಿನ ಮನಸ್ಸಿನಲ್ಲಾದರೂ ಅಂಥಾ ಹೊಸ ಸ್ಕೀಮುಗಳಿದ್ದರೆ ನನಗೆ ತಿಳಿಸಿದರೆ ನಾನು ಜನಪ್ರಿಯವಾಗಿ ಆಲೋಚಿಸಿ ಈ ಕೌನ್ಸಿಲಿನಲ್ಲಿ ಚರ್ಚಿಸಲಿಕ್ಕೆ ತಯಾರಿದ್ದೇನೆಂತ ನಾನು ಭರವಸೆ ಕೊಡುತ್ತೇನೆ. ಸ್ವಕೀಯ ಬೊಕ್ಕಸದಲ್ಲಿ ಉಳಿಯುವ ಹಣವನ್ನು ನಿಧಾನದಿಂದ ಒಳ್ಳೇ ಉದ್ದೇಶಗಳಿಗೇನೇ ಉಪಯೋಗಿಸಬಹುದು. ಈ ವರ್ಷದಲ್ಲಿ ಹೊಸಕಾರ್ಯಗಳಿಗೆ ಸರಕಾರದಿಂದ ಹೆಚ್ಚಿಗೆ ಸಹಾಯ ದೊರೆಯಲು ಸಾಧ್ಯವಿದೆಯೆಂತ ನಾನು ಭರವಸೆ ಹೇಳುವದಿಲ್ಲ. ವಿಧವಿಧದ ಕಾರ್ಯಗಳನ್ನೆಲ್ಲಾ ಆಲೋಚಿಸುತ್ತಾ ಇರೋಣ. ಅಂಥಾ ವಿಶೇಷ ಖರ್ಚುಮಾಡಬೇಕಾಗಿ ಬಂದಲ್ಲಿ ಯೋಚಿಸೋಣ. ಈ ದಿನ ಕೊಟ್ಟಂಥ ಸಲಹೆಗಳನ್ನು ನೆನಪಿನಲ್ಲಿಟ್ಟುಕೊಂಡೇ ಆ ವರ್ಷದ ಕೆಲಸ ನಡಿಸುತ್ತೇನೆ. ಮಿಕ್ಕವುಗಳನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಇಷ್ಟೊಂದು ವರ್ಷದಲ್ಲಿ ಇದಕ್ಕೆ [illegible] ಭಾಷಣಮಾಡಲು ನನಗೆ ಸಾಧ್ಯವಾದೀತು. ನನಗೆ ಸ್ವಲ್ಪವೇ ಕಾಲವಿದ್ದದ್ದರಿಂದ ನನ್ನಲ್ಲಿ ಮೆಂಬರರು [illegible] ಭಾಷಣ [illegible] ನಂಬುತ್ತೇನೆ. [illegible] ಮತ್ತು [illegible] ಮೆಂಬರುಗಳ ಭಾಷಣವನ್ನು ನಾಳೆ ಕೇಳಲಿಕ್ಕೆ ಅವಕಾಶ ದೊರೆಯುತ್ತೆ.

ಎರಡನೇ ದಿನ.

ತಾ|| ೩೦—೩—24ರಲ್ಲಿ ಕೌನ್ಸಿಲು ಮೀಟಿಂಗಿನಲ್ಲಿ ನಡೆದ ಬಡ್ಜೆಟಿಗೆ ಸಂಬಂಧಪಟ್ಟ ಠರಾವುಗಳ ಚರ್ಚೆಯ ವಿವರ.—

ಒಂದನೇ ಠರಾವು

ನಂ| [illegible] ಬೆಳ್ಯಪ್ಪನವರು.

ಅಧ್ಯಕ್ಷರೆ

[illegible] 5 [illegible] ಲೆಂಡ್ [illegible] ಖರ್ಚಿನ ಬಗ್ಗೆ [illegible] ರೂ ೧೫೦೦ [illegible] ಕಡಿಮೆ ಮಾಡಬೇಕೆಂದು [illegible] ಸೂಚಿಸುತ್ತೇನೆ. [illegible] ಫೈನಾನ್ಸ್ [illegible] ಪೂರ್ಣ [illegible] ಸರ್ಕಾರದ [illegible] ಕಾರಣದಿಂದ [illegible] ಆಲೋಚಿಸಬೇಕಾಗಿದೆ. [illegible] ಯಾವ [illegible] ಕಾರಣಗಳಿಂದ ಈಗ ಟ್ರೈನಿಂಗ್ [illegible] ಅಸಿಸ್ಟೆಂಟ್ [illegible] ಯಾವ [illegible] ಕೆಲಸದಿಂದ [illegible] ದಿನವೆಂದು [illegible] ಅವರು [illegible] ಹೋಗುವದಾದ [illegible] ತಿಂಗಳಿಗೆ [illegible] ರೂ ೧೫೦೦ [illegible] ಕಡಿಮೆಮಾಡಬೇಕೆಂದು [illegible] ಸೂಚಿಸುತ್ತೇನೆ. ಈ ಹಣವನ್ನು ಬಡ್ಜೆಟಿನ ಬೇರೆ ಯಾವ ವಿಷಯಕ್ಕಾದರೂ ಉಪಯೋಗಿಸಬಹುದು.

ಡೆಪ್ಯುಟಿ ಕಮಿಷನರರು.

[illegible] ಸಭೆಗೆ ತಿಳಿಸ ಸಂಗತಿಯು [illegible] ಅಥವಾ [illegible]

ಕೊಡಗು ಕೌನ್ಸಿಲು ಮೀಟಿಂಗು.

ಬೇಕಾಯಿತು. ಅವರ ರಿಪೋರ್ಟಿನ ೧೮೩ ನೇ ಪ್ಯಾರಾದಲ್ಲಿ ಹೇಳಿದ ತತ್ವವನ್ನು ಸರಕಾರವು ಹಿಂಬಾಲಿಸಿದ್ದಾಗಿದೆ. ಅದ ರಲ್ಲಿ ಹೇಳಿರುವದೇನೆಂದರೆ— "ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರನ್ನು ಬೇರೆಕಡೆಗೆ ವರ್ಗಾಯಿಸಲಿಕ್ಕೆ ಏರ್ಪಾಡುಮಾಡಬೇಕು. ಅದ ರೆ ವರ್ಗವಾಗುವವರೆಗೆ ಅವರು ರಜದಲ್ಲಿ ಹೋಗಬೇಕು. ಮೇನೇಜರನ್ನಾಗಲೀ ಸಬ್ಬ ಸುಬೇದಾರರನ್ನಾಗಲೀ ಬೇರೆ ಕಡೆಗೆ ತೆಗೆದುಕೊಳ್ಳಲು ಸಾಧ್ಯವಾಗದೆ ಇದ್ದರೆ ಅವರನ್ನು ರಜಾ ತೆಗೆಯುವಂತೆ ಮಾಡಬೇಕು" ಅತ್ಯವಶ್ಯವಿದ್ದವಿನಾ ಆಫೀಸರುಗಳನ್ನು ರಿಟೈರ್‌ಮಾಡಿಸುವದು ಸರಕಾರದ ಕ್ರಮ ವಲ್ಲ. ಅನುಭವವಿರುವ ಆಫೀಸರುಗಳನ್ನು ರಿಟೈರ್‌ಮಾಡಿಸಿ ದರೆ ಸರಕಾರಕ್ಕೆ ನಷ್ಟವೇ. ಪೆನ್ಶನ್ ಪಟ್ಟಿಯಲ್ಲಿ ಏರ್ಪ ಡೆಬ್ಬಾಗುತ್ತೆ. ಅದರಿಂದಲೇ ಮೂರು ಸುಬೇದಾರರುಗಳ ನ್ನು ಇಟ್ಟುಕೊಂಡದ್ದಾಗಿದೆ. ಇನ್ಸ್ಪೆಕ್ಟರ್ ಆಫೀಸರ ವಿಷಯ ಯಾಕೆ ಎತ್ತಿದರೆಂಬುದು ನನಗೆ ಗೊತ್ತಾಗುವದಿಲ್ಲ. ಇದಕ್ಕೆ ಅದು ಸಂಬಂಧವೇ ಇಲ್ಲ. ಅವರ ವಿಷಯ ಸರಕಾರದ ಕನಿಕರ ನಡೆಯುತ್ತಿದೆ. ಅವರ ವಿಷಯದಲ್ಲಿ ಯಾವವಿಧದ ಆರ್ಡರ್ ಮಾಡಬೇಕೆಂಬದನ್ನು ಕಾಲಕ್ಕೆ ಮುಂದಾಗಿ ಸೂ ಚಿಸುವದನ್ನು ನಾನು ಬಲವಾಗಿ ಆಕ್ಷೇಪಿಸುತ್ತೇನೆ. ಮೂ ರು ಆಫೀಸರುಗಳು ಇದ್ದಾರೆ. ಅವರ ಸಂಬಳ ಕೊಡಬೇ ಕು. ಅದ್ದರಿಂದ ಠರಾವಿಗೆ ವಿರೋಧಿಸುತ್ತೇನೆ.

ಮ್ಹ॥ ಪಿ. ಐ. ಬೆಳ್ಯಪ್ಪನವರು

ಅಧ್ಯಕ್ಷರೇ—ಸರಕಾರದ ವಿವರಣೆ ತಿಳಿದದ್ದರಿಂದ ಠ ರಾವನ್ನು ವಾಪಸು ತೆಗೆದುಕೊಳ್ಳಲು ಅಪ್ಪಣೆ ಕೇಳುತ್ತೇನೆ.

ಅನುಮತಿಯಿಂದ ಠರಾವು ವಾಪಸು ತೆಗೆದುಕೊಳ್ಳ ಲಾಯಿತು.

2 ನೇ ಠರಾವು

ಲ್ಯಾಂಡ್ ರೆವೆನ್ಯೂ ಖರ್ಚು ರೂ. ೧೫೦,೦೦೦ ರಲ್ಲಿ ೧೦೦೦ ರೂ. ಕಡಿಮೆಮಾಡಬೇಕು.

ಮ್ಹ॥ ಕೆ. ಪಿ. ಚಿಣ್ಣಪ್ಪನವರು—ಅಧ್ಯಕ್ಷರೇ, ಈ ಠರಾ ವನ್ನು ಸೂಚಿಸಲು ನಾನು ಇಚ್ಛಿಸುವುದಿಲ್ಲ.

3 ನೇ ಠರಾವು

ಮ್ಹ॥ ಪಂದ್ಯಂಡ ಬೆಳ್ಯಪ್ಪನವರು

ಅಧ್ಯಕ್ಷರೆ

"VI ಎಕ್ಸೈಸಿನ ೩,೮೪,೦೦೦ ಉತ್ಪತ್ತಿಯಲ್ಲಿ [illegible] ರೂಪಾಯಿ ಕಡಿಮೆಮಾಡಬೇಕೆಂದು ಈ ಕೌನ್ಸಿಲು [illegible] ಕಮಿಷನರವರಿಗೆ ಸಿಫಾರಸ್ಸು ಮಾಡುತ್ತದೆ" [illegible] ವನ್ನು ನಾನು ಕೌನ್ಸಿಲಿನ ಮುಂದಿಡುತ್ತೇನೆ. [illegible] ದಿನ ನನ್ನ ಬಜೆಟ ಭಾಷಣದ [illegible] ಸರ್ಕಾರದವರು ತಮ್ಮ ಎಕ್ಸೈಸ್ [illegible] ಜನರಿಗೆ ತಿಳಿಸಿರುವುದಿಲ್ಲ. [illegible] ಮಾಡಿದ ಕೆಲಸಗಳನ್ನು [illegible] [illegible] ದೇಶದವರು ತಮ್ಮ ಪ್ರತಿನಿಧಿ [illegible] [illegible] ಅಪೂರ್ವವಾದ [illegible] [illegible] [illegible] ಮಾತ್ರಕ್ಕೆ [illegible] ಇದೆ [illegible] ಈ ಕೌನ್ಸಿಲಿನವರು ದೇಶದ [illegible] ಸಾರಾಯಿ ಮಾ [illegible] ಡಿಸ್ಟ್ರಿಕ್ಟ್‌ಗಳಿಗಿಂತ ಇಲ್ಲಿ ಹೆಚ್ಚು [illegible] ಎಂಬದನ್ನು ಈ ಕೌನ್ಸಿಲಿನಲ್ಲಿ ಯಾ ರೂ ವಿರೋಧಿಸಲಿಕ್ಕಿಲ್ಲವೆಂದು ನಾನು ದೃಢವಾಗಿ ಹೇಳಬ ಲ್ಲೆನು. ಇದಕ್ಕಿರುವುದೆ ಕೃತಜ್ಞತರವಾಗಿಯೂ, ಸಂತೋಷ ಕರವಾಗಿಯೂ ಇರುತ್ತಿದ್ದಂಥ ಮನೆಗಳನ್ನು ಇದು ದುಃಖಮಯವಾಗಿಯೂ ನಿರ್ಭಾಗ್ಯವಾಗಿಯೂ ಮಾಡಿದೆ. ಇದು ದೇಶವನ್ನು ಅಗಾಧವಾದ ಬಡತನಕ್ಕೆ ಗುರಿಮಾಡಿದೆ. ಈ ಬಡತನದಿಂದ ಪಾರಾಗಬೇಕಾದರೆ ಅನೇಕ ವರ್ಷಗಳ ಮಿತಪಾನವು ಅಗತ್ಯ. ೧೬೩೦೦೦ ಜನಸಂಖ್ಯೆಮಾತ್ರ ಉಳ್ಳ ನಮ್ಮ ಈ ಚಿಕ್ಕದೇಶವು ಸರ್ಕಾರಕ್ಕೆ ಸುಮಾರು ಮೂರು ವರೆಲಕ್ಷ ರೂಪಾಯಿ ಎಕ್ಸೈಸ್ ತೆರಿಗೆ ಕೊಡುತ್ತಿರುವ ಸಂ ಗತಿಯು ಯಾರಿಗೆತಾನೇ ಆಶ್ಚರ್ಯವನ್ನೂ ವ್ಯಸನವನ್ನೂ ಉಂಟುಮಾಡದಿರುವುದು? ಈ ಸುಂಕವನ್ನು ದೇಶದ ಜನರಿ ಗೆಲ್ಲಾ ಸಮವಾಗಿ ಹಂಚಿದರೆ ಕುಡುಕತನದ ಕೇಡನ್ನು ಕಾ ಪಾಡಲಿಕ್ಕಾಗಿ ಕೊಟ್ಟಲುಮಗುವೂ ಸಹ ತಲೆ ಒಂದರ ಎರ ಡುರೂಪಾಯಿ ತೆರಿಗೆಕೊಡುತ್ತಿರುವುದು ವಿಸ್ಮಯಕರವಲ್ಲವೇ?

ಯುದ್ಧ ಕಳೆದನಂತರ ಎರಡುಮೂರು ವರ್ಷಗಳಲ್ಲಿ ಮಿ ತಪಾನದ ಚಳವಳಿಯು ಹಿಂದೂದೇಶದ ಬೇರೆಕಡೆಗಳಲ್ಲಿ ಅದ ಷ್ಟು ಇಲ್ಲದಿದ್ದರೂ ಸ್ವಲ್ಪಮಟ್ಟಿಗೆ ಇಲ್ಲಿಯೂ ತನ್ನ ಕೆಲಸ ವನ್ನು ಮಾಡಿತು. ಗ್ರಾಮಗಳಲ್ಲಿ ಅನಾರೋಗ್ಯಕರವಾದ ಮತ್ತು ಸುಲಭದಲ್ಲಿ ಸಿಕ್ಕುವ ಹೆಂಡವನ್ನು ಸೇವಿಸಿ ಹಾಳಾ ಗುತ್ತಿದ್ದಂಥ ಜನರು ತಮ್ಮ ಕುಡುಕತನದ ಅಭ್ಯಾಸಕ್ಕೆ ನಾ

ಚಿಕೆಪಡಲು ಪ್ರಾರಂಭಿಸಿದ್ದರು. ಅಲ್ಲಲ್ಲಿ ಕೆಲವರು ಸೇಂದಿ ತೆಗೆಯುವದನ್ನು ನಿಲ್ಲಿಸಿದ್ದು ಕೆಲವು ಅಂಗಡಿಗಳನ್ನು ಮು ಚ್ಚಲಿಕ್ಕೂ ಪ್ರಯತ್ನಿಸಿದರು. ಆದರೆ ಸರ್ಕಾರದವರು ಅಂ ಥವರ ಪ್ರಯತ್ನವನ್ನು ಸರಿಯಾದ ಸಹಾನುಭೂತಿಯಿಂದ ನೋಡದೆ ಅದನ್ನು ಸರ್ಕಾರದ ಕ್ರಮವೆಂದು ಅದು ರಾಜ ದ್ರೋಹದ ಕೆಲಸವೆಂದು ಪೊಲೀಸ್ [illegible] ಮತ್ತು ಬೇರೆ ಉದ್ಯೋಗಸ್ಥರು [illegible] ಇದ್ದರು. ಹಾಗೆ, [illegible] ರಾಜಭಕ್ತಿಯು [illegible] [illegible] [illegible]

[illegible]

ದೇಶದಲ್ಲಿ ಪೂರ್ತಿ ಮಿತಪಾನಪ್ರಚಾರವನ್ನು ಮಾಡಬೇಕಾ ದರೆ ಕುಡುಕತನವನ್ನು [illegible] ವರ್ಷಗಳ [illegible] ಪೂರ್ತಿ [illegible]

[illegible] 12 [illegible]

[illegible] ನಾನು [illegible]

ಮ್ಹ॥ ಬಿ. ಶೀಪತಿರಾಯರು

ಅಧ್ಯಕ್ಷರೇ, ಈ ಠರಾವನ್ನು [illegible] ಮಾಡುತ್ತೇನೆ. ಈ ವಿಷಯವನ್ನು [illegible] ಕಾನೂನಿನಿಂದ [illegible] ತ್ತಾರೆ. ಇದನ್ನು ಉಪಾಯದಿಂದಲೂ ಚಮತ್ಕಾರದಿಂ ದಲೂ ಸಾಧಿಸಬೇಕು. ನಿನ್ನೆದಿನ ನಾನು ಹೇಗೆ ಕುಡು ಕತನವನ್ನು ನಿಲ್ಲಿಸಲಿಕ್ಕೆ ಸರ್ವಪ್ರಯತ್ನ ಮಾಡಬೇಕು. ಈ ಬಾಬಿನ ಉತ್ಪತ್ತಿಯು ತಲೆಒಂದರ 2 ರೂಪಾಯಿ ಬೀಳುತ್ತೆ. ಈ ಕರಕು ತುಂಬಾ ಇದೆಯೆಂಬದನ್ನು ಸ್ಪಷ್ಟವಾಗಿ ತೋರಿ ಸುತ್ತೆ. ತೆಂಗಿನಮರದಲ್ಲಿ ಪ್ರಯೋಜನವೂ ಕುಡುಕ ರು ಕೆಡುವದರಿಂದ ಆಗುವನಷ್ಟವು ಬಹಳ. ಕುಡು ಕನು ತನ್ನ ಕ್ಷೇಮವನ್ನು ಅರಿಯದೇ ಇರುವುದು ಮಾತ್ರವಲ್ಲ ತನ್ನ ಕುಟುಂಬದ ಜೀವನ ನಡೆಯುವಂತೆಯೂ ದುಡಿಯದೆ ಇರುವದು ಮಾತ್ರವಲ್ಲ, ಮನುಷ್ಯಜಾತಿ ನಿಷ್ಫಲವಾಗಿ ಹೋಗುತ್ತಾನೆ. ಐಶ್ವರ್ಯದಲ್ಲಿದ್ದ ಕೆಲವರು ಸರ್ವ ಸ್ವವನ್ನು ಕಳಕೊಂಡು ಬೀದಿಬೀದಿ ತಿರುಗುವಂತೆ ಆಗಿ ಹೋದ ಉದಾಹರಣೆಗಳು ನನಗೆ ಗೊತ್ತು. ನಮ್ಮ ದೇಶ ದಲ್ಲಿ ಮಾತ್ರವಲ್ಲ, ಇಂಡಿಯಾದಲ್ಲೇ! ಪ್ರಪಂಚದಲ್ಲೇ ಕುಡುಕತನದಿಂದ ಹಾಳಾದ ಉದಾಹರಣೆಗಳು ಯಾವಾಗ ಲೂ ಇದ್ದೇ ಇವೆ. ಈ ಕೆಡುಕನ್ನು ಆದಷ್ಟು ಬೇಗನೆ ಹೋಗಲಾಡಿಸಿ ಜನರನ್ನು ಬೇರೆಯವರೂ ಪ್ರಯೋಜನ ಕಾರಿಯಾದ ಕಸಬುಗಳನ್ನು ಅವಲಂಬಿಸುವಂತೆ ಮಾಡುವದ ಸರಕಾರದ ಮನಃಪೂರ್ತಿ ಇರಾದೆ ಎಂದು ನಾನು ನಂಬು ತ್ತೇನೆ. ಠರಾವನ್ನು ಸೂಚಿಸಿದವರಿಗೆ [illegible] ಮಾತಾಡಿ ದುದರಿಂದ ಇನ್ನು ಹೆಚ್ಚಿಗೆ ಹೇಳಲಿಲ್ಲ.

ಮ್ಹ॥ ಟಿ. ಜಿ. ಟಾಸ್ಕರ್‌ರವರು

ಅಯ್ಯಾ, ಈ ವಿಷಯದಲ್ಲಿ ಚರ್ಚೆಯನ್ನು ಈ ಸಂದರ್ಭ ದಲ್ಲಿ ಎತ್ತಲಿಕ್ಕೆ ನಾಮದಾರ್ ಮೆಂಬರುಗಳಿಗೆ ಹಕ್ಕಿಲ್ಲವೆಂತ ಹೇಳುವದಿಲ್ಲ. ಅವರಿಗೆ ಸಂಪೂರ್ಣಹಕ್ಕಿದೆ. ಆದರೆ ಸಾಧಾ ರಣ ಸಮುದಾಯದ ವಿಷಯವಾಗಿ ಚರ್ಚಿಸುವಾಗ್ಗೆ ತಂದಿ ದ್ದರೆ ಅನುಕೂಲ ಹೆಚ್ಚು. ಆಗ ಇಂಥಾ ಪ್ರಾಮುಖ್ಯವಿಷ ಯದ ಮೇಲೆ ತುಂಬಾ ತಪಶೀಲವಾಗಿ ಚರ್ಚಿಸಬಹುದಿತ್ತು. ಆದರೆ ಹಾಗೆ ಉದ್ದವಾಗಿ ಚರ್ಚಿಸಲು ಈ ಸಂದರ್ಭದಲ್ಲಿ ಅ ವಕಾಶವಿಲ್ಲ. ಕೆಲವು ತಿಂಗಳುಗಳ ಒಳಗೆ ಈ ವಿಷಯವನ್ನು ಚನ್ನಾಗಿ ಆಲೋಚಿಸುತ್ತೇನೆಂತ ನಾಮದಾರ ಮೆಂಬರು ಗಳಿಗೆ ಭರವಸೆ ಕೊಡುತ್ತೇನೆ. ನಿನ್ನೆ ನನ್ನ ಭಾಷಣದಲ್ಲಿ ಹೇಳಿದಂತೆ ನನ್ನ ಕಾರ್ಯಕ್ರಮವನ್ನು ನಿರ್ಣಯಿಸಲಿಕ್ಕೂ ಈವ ರೆಗಿನ ಕಾರ್ಯಕ್ರಮದಮೇಲೆ ಆಕ್ಷೇಪಣೆ ಕೇಳಲಿಕ್ಕೂ ಇನ್ನೂ ನಾನು ತಯಾರಾಗಿಲ್ಲ. ರಾಜ್ಯ ತಂದವರು ಮತ್ತು ಅನು ಮೋದಿಸಿದವರ ಮನಃಪೂರ್ತಿ ಸದುದ್ದೇಶವನ್ನು ನಾನು ಒಪ್ಪುತ್ತೇನೆ. ನಾನು ಈ ವಿಷಯದಲ್ಲಿ ಪ್ರಯತ್ನಿಸಲು ತಯಾ ರಿದ್ದೇನೆಂತ ನಂಬಿಕೆಕೊಡುತ್ತೇನೆ. ಈ ಮೊದಲು ಸರಕಾರ ವು ಏನು ಮಾಡಿದೆಯೆಂಬುದನ್ನು ತಿಳಿಸುತ್ತೇನೆ. 11 ವರ್ಷ ದಲ್ಲಿ ಸೇಂದಿಅಂಗಡಿಗಳ ಸಂಖ್ಯೆಯು [illegible]ರಿಂದ 53ಕ್ಕೆ ಇಳಿಸ ಲಾ[illegible] [illegible]ಯಲ್ಲಿ ನಡೆದದ್ದೆಂಬ ವಿಷಯ ನನಗೆ ಗೊ [illegible] ನನ್ನ ಕಾಲದಲ್ಲಿ ನಡೆದದ್ದೆಂತ ತೋರುವದಿಲ್ಲ. [illegible]ವು ರಾಜದ್ರೋಹವಾಗಿ ಭಾವಿಸಲ್ಪಡು ವದಿಲ್ಲವೆಂತ ನಾನು ಹೇಳುತ್ತೇನೆ. ಅಂಥಾ ಭಯವು ಯಾರ ಲ್ಲಾದರೂ ಇದ್ದರೆ ಸರಕಾರವು ಆ ಕೃತ್ಯಕ್ಕೆ ಸಹಾ ಯವಾಗಿದೆಯೆಂಬದನ್ನು ಅವರಿಗೆ ತಿಳಿಸಿ ಸಂಪೂರ್ಣವಾಗಿ ನಿವಾರಿಸಲು [illegible]. ಯಾ ವ್ಯಾವವಿಧದ ಕೆಲಸದಿಂದ ಕುಡುಕತನ ಕಡಿಮೆಮಾಡಬಹು ದೆಂಬ ವಿಷಯ ಚರ್ಚಿಸಲು ಇನ್ನೊಂದುದಿನ ಅವಕಾಶಕೊ ಡುತ್ತೇನೆ. ಸರಕಾರದ ಕಷ್ಟ ತಿಳಿಯಲು ಈ ಚರ್ಚೆ ಎತ್ತಿ ದೆಂತ ಭಾವಿಸುತ್ತೇನೆ. ಈ ಠರಾವಿನಿಂದ ಒಟ್ಟಿಗೆ ಏನೂ ಕೊಂದರೆಯಿಲ್ಲ. ಅವ್ಯಕ್ತವಾಯಿಗಳಲ್ಲಿ ನಾನು ಸಹ ತುಂಬಾ ಕುತೂಹಲವುಳ್ಳವನಾಗಿದ್ದೇನೆ. ಅದ್ದರಿಂದ ಠರಾ ವನ್ನು ವಾಪಸು ತೆಗೆದುಕೊಂಡಾರೆಂತ ನಂಬಿದ್ದೇನೆ.

ಮ್ಹ॥ ಪಿ. ಐ. ಬೆಳ್ಯಪ್ಪನವರು

ಅಯ್ಯಾ, ಸರಕಾರದ ಸಹಾನುಭೂತಿ ತೋರಿಸಲಿಕ್ಕಾ ದರೂ, ಒಂದು ಅಂಗಡಿಯನ್ನಾದರೂ ಮುಚ್ಚುವಂತೆ ಈ ಠರಾವನ್ನು ಮುಂಬೂರ ಮಾಡುತ್ತೀರೆಂತ ನನ್ನ ಕೋರಿ ಕೆಯಾಗಿದೆ. ಠರಾವನ್ನು ಓಟಿಗೆ ಹಾಕಬೇಕಾಗಿದೆ.

ಮ್ಹ॥ ಟಿ. ಜಿ. ಟಾಸ್ಕರು

24ನೇ ರೂಲಿನ ವಿಷಯ ಸ್ವಲ್ಪ ಹೇಳಬೇಕಾಗಿದೆ. ಈ ಸೂಚನೆಯು [illegible]ವಾಗಿಲ್ಲವೆಂತ ನನಗೆ ತೋರುತ್ತೆ. ನೋ ಟೀಸ್ ಕೊಡಬೇಕಿತ್ತು. ಸ್ವಲ್ಪವಾದರೂ ಪ್ರಯೋಜನವಾ ಗುವ ಕೆಲಸ ಮಾಡಬೇಕೆಂಬ ಠರಾವು ತಂದವರ ಅಭಿ ಪ್ರಾಯ. ನಾನು ಅನುಮೋದಿಸುತ್ತೇನೆ. ಆದರೆ ಯಾವ ದಾದರೂ ಒಂದು ಅಂಗಡಿ ಮುಚ್ಚಬೇಕೆಂಬದಕ್ಕೆ ನಾನು ಒಪ್ಪುವದಿಲ್ಲ. [illegible]ನು ಭರವಸೆ ಕೊಟ್ಟಮೇಲೆ ಈ ವಿಷ ಯದಲ್ಲಿ ಒತ್ತಾಯ ಮಾಡುವದು ಸಕಾರಣವಲ್ಲವೆಂತ ತೋರುತ್ತೆ.

ಓಟಿಗೆ ಹಾಕಲಾಗಿ [illegible]ರಾಯಿತು

[[illegible]ಯಿತ ಇಂಡಿಯ[illegible] ಮೆಂಬರುಗಳಲ್ಲಿ ಮ್ಹ॥ ಅಪ್ಪಾ ರಂಡ [illegible]ನವರು ವಿನಹ (ಮ್ಹ॥ ಪಾಲೇಕಂಡ ಮೇದಪ್ಪನ ವರು [illegible] ಓಟು [illegible]ರಲಿಲ್ಲ) ಬಾಕಿ 11 [illegible] ನೇಮಿತರೆಂಬರು ಮ್ಹ॥ ಕೆ. ಸು[illegible]ಯರೂ ಪರವಾಗಿ [illegible] ಉದ್ಯೋಗಸ್ಥ ಮೆಂಬರುಗಳೂ, [illegible]ಂಟರು ಮೆಂಬರುಗಳೂ ಮತ್ತು ಮ್ಹ॥ ಎ. ಬಿ. ಚಂಗಪ್ಪನವ[illegible] ವಿರೋಧವಾಗಿಯೂ ಓಟು ಕೊಟ್ಟರು. ಪರವಾಗಿ 12 ವಿರೋಧವಾಗಿ 7 :]

4 ನೇ ಠರಾವು

ಮ್ಹ॥ ಪಂದ್ಯಂಡ ಬೆಳ್ಯಪ್ಪನವರು.

ಅಧ್ಯಕ್ಷರೆ

"ಜಮೀನುದಾರರನ್ನು ಅವರುಗಳಿಗೆ ಕೊಡುವ 50 ರೂ ಪಾಯಿ ಒಳಗಿನ ಅಡ್ವಾನ್ಸು ಕರಾರಿಗೆ ಒಂದಾಣೆ ಸ್ಟ್ಯಾಂಪು ಮಾತ್ರ ಉಪಯೋಗಿಸಲು ಬಿಡುವುದಕ್ಕಾಗಿ VII ಸ್ಟ್ಯಾಂ ಪಿನ ಉತ್ಪತ್ತಿಯ 80 000 ರೂಪಾಯಿಯಲ್ಲಿ 1000 ರೂಪಾ ಯಿ ಕಡಿಮೆಮಾಡಬೇಕೆಂದು ಈ ಕೌನ್ಸಿಲು ಚೀಫ ಕಮಿ ಷನರವರಿಗೆ ಸಿಫಾರಸು ಮಾಡುತ್ತದೆ" ಎಂದು ನಾನು ಸೂಚಿ ಸಲಿಚ್ಛಿಸುತ್ತೇನೆ. ಪ್ಲಾಂಟರುಗಳಿಗೂ ಮತ್ತು ರೈತರಿಗೂ ದ್ವೇಷವನ್ನುಂಟುಮಾಡುವಂಥ ಭೇದವನ್ನು ಸರ್ಕಾರದವರು ತೋರಿಸಿರುವುದರ ಕಾರಣವು ನನಗೆ ಗೊತ್ತಾಗುವುದಿಲ್ಲ. ಹ ತ್ತು ಎಕ್ರೆಗಿಂತ ಹೆಚ್ಚು ತೋಟವಿರುವಂಥ ಪ್ಲಾಂಟರುಗಳು ಆಳುಗಳಿಗೆ 50 ರೂಪಾಯಿವರೆಗೆ ಅಡ್ವಾನ್ಸುಕೊಟ್ಟರೆ ಅದಕ್ಕೆ ಒಂದಾಣೆ ಸ್ಟ್ಯಾಂಪು ಹಚ್ಚಿ ನೌಕರಿ ಕರಾರುಮಾಡಿಸಿಕೊಳ್ಳಬ ಹುದು. ಆದರೆ ಜಮೀನುದಾರರು, ಎಷ್ಟೇ ಭೂಮಿ ಇರು ವವರಾಗಲೀ, ಸೌಕರಿಕರಾರುಗಳನ್ನು ತನ್ನೆರಡಾಣೆಯ ಚಾ ಪಾ ಕಾಗದದಮೇಲೆ ಬರೆಯಿಸಬೇಕು. ಪ್ಲಾಂಟರು ಮತ್ತು ರೈತನು ಇವರಿಬ್ಬರೂ ವ್ಯವಸಾಯಗಾರರಾದುದರಿಂದ ಇವ ರಿಬ್ಬರಲ್ಲಿ ಏನೊಂದೂ ಭೇದವೂ ನನಗೆ ಕಾಣುವುದಿಲ್ಲ. ಆ ದರೆ ಕಾಫಿ ವಗೈರೆ ಉತ್ಪತ್ತಿಗಳು ಊಹೆಯ ವ್ಯಾಪಾರವಾ ಗಿಯೂ, ಭತ್ತದ ಬೆಳೆಯು ಸಾಧಾರಣ ಅವಶ್ಯಕರವಾಗಿ ಯೂ [illegible]ವುದರಿಂದ ಪ್ಲಾಂಟರುಗಳಿಗೆ ರೈತರಿಗಿಂತ ಈ

ಕೊಡಗು ಕೌನ್ಸಿಲು ಮೀಟಿಂಗು.

ಹೆಚ್ಚಿನ ರಿಯಾಯಿತಿಯನ್ನು ಕೊಟ್ಟಿರುವರೆಂದು ವಾದಿಸಬಹುದು. ಈ ವಾದವು ನ್ಯಾಯವಾದದ್ದಲ್ಲವೆಂಬುದಕ್ಕೆ ಸಂಶಯವಿಲ್ಲ. ಇದು ನ್ಯಾಯವಾದ ವಾದವೆಂದು ತಿಳಿದುಕೊಂಡರೂ ಕಾಫಿಪ್ಲಾಂಟರುಗಳಿಗೆ ರೈತರಿಗಿಂತ ಕಡಿಮೆದರದ ಕಂದಾಯದ ಅನುಕೂಲವನ್ನು ಕೊಟ್ಟಿರುವರು. ಅಲ್ಲದೆ ಭತ್ತದ ಬೇಸಾಯದ ಉತ್ಪತ್ತಿಯನ್ನು ಖರ್ಚಿನೊಂದಿಗೆ ಹೋಲಿಸಿದರೆ ಕಾಫಿಯ ಉತ್ಪತ್ತಿಯು ಭತ್ತದಕ್ಕಿಂತ ಹೆಚ್ಚು. ಆದುದರಿಂದ ಸರ್ಕಾರದವರು ತೋರಿಸಿರುವ ಭೇದಕ್ಕೆ ಮೇಲಿನ ಕಾರಣವು ನ್ಯಾಯವಾದದ್ದೆಂದು ಹೇಳಲಿಕ್ಕಾಗುವುದಿಲ್ಲ. ಇದಲ್ಲದೆ ಪ್ಲಾಂಟರ್ ಎಂಬ ಹೆಸರಿನ ಅರ್ಥವೇ ಗೊತ್ತಾಗುವುದಿಲ್ಲ. ಮುಖ್ಯಭೂಮಿಯ ವ್ಯವಸಾಯಗಾರರು ಪ್ಲಾಂಟರುಗಳೆನ್ನಿಸಿಕೊಳ್ಳುವ ಪಕ್ಷದಲ್ಲಿ ಕಾಫಿ ಟೀ ಮತ್ತು ರಬ್ಬರ್ ತೋಟಗಳಿರುವವರು ಮಾತ್ರವಲ್ಲ ಯಾಲಕ್ಕಿ ಮೆಣಸು ಮತ್ತು ಕಿತ್ತಳೆತೋಟಗಳುಳ್ಳವರೂ ಸಹ ಪ್ಲಾಂಟರುಗಳೆನಿಸಿಕೊಳ್ಳಬೇಕು. ಆದರೆ ಇಲ್ಲಿ ಹಾಗಿಲ್ಲ. ಪ್ಲಾಂಟರ ಗಳೆಂಬ ಕೂಡ ಈ ಹೆಸರು ವಿಶೇಷ ಅರ್ಥವುಳ್ಳದ್ದಾಗಿ ಕಾಣುತ್ತೆ. ಯಾಕಂದರೆ, ಹತ್ತು ಎಕರೆಗಿಂತ ಹೆಚ್ಚು ತೋಟವಿರುವವರಿಗೆ ಮಾತ್ರ ಬಂದಾಗಲೆ ಸ್ಟಾಂಪಿನ ಹಕ್ಕು ಕೊಟ್ಟಿರುವರು. ಅದಕ್ಕಿಂತ ಕಡಿಮೆ ತೋಟಗಾರರು ರೈತರ ಪಾಡನ್ನೇ ಅನುಭವಿಸುತ್ತಿರುವರು. ಕೂಡಲೆ 10 ಎಕರೆಗಿಂತ ಹೆಚ್ಚಿನ ತೋಟವಿರುವ ಆನರೆಬಲ್ಸರು ಕಡಿಮೆ ಕ್ರಯದ ಸ್ಟಾಂಪನ್ನು ಅದಕ್ಕಿಂತ ಕಡಿಮೆ ತೋಟವಿರುವ ಒಬನು ಹೆಚ್ಚಿನ ಸ್ಟಾಂಪನ್ನು ಉಪಯೋಗಿಸಬೇಕೆಂದು ಹ್ಯಾಗೆ ಮಾಡಿದರೆಂದು ಯೋಚಿಸುವುದೂ ಸಹ ಕಷ್ಟವಾಗಿದೆ. ಎಲ್ಲರಿಗೂ ಏಕರೀತಿ ನ್ಯಾಯಸಿಕ್ಕಬೇಕಾದರೆ, ಈಗಿರುವುದಕ್ಕೆ ವಿರೋಧವಾಗಿರಬೇಕದ್ದು. ಸಾಧಾರಣವಾಗಿ ಕಾಫಿ ತೋಟಗಳು ಆಗಾಗ್ಗೆ ಕ್ರಯ ಬಂದಕ್ಕೆಗೆ ದಾಟುತ್ತಿರುತ್ತವೆ, ಆದರೆ ಬೈಲುಗದ್ದೆಗಳು ಹೆಚ್ಚು ಕಡಿಮೆ ಒಬ್ಬನಲ್ಲಿಯೇ ಇರುತ್ತವೆ. ಆದುದರಿಂದ ದೇಶದ ಕಾಯಂ ನಿವಾಸಿಯಾದ ರೈತರಿಗೆ ರಿಯಾಯಿತಿ ಕೇಳಲು ಪ್ಲಾಂಟರಿಗಿಂತ ಹೆಚ್ಚು ಹಕ್ಕಿದೆ. ಪ್ಲಾಂಟರುಗಳಿಗೆ ಇದರಿಂದ ಏನೊಂದೂ ನಷ್ಟವಾಗ ವುದಿಲ್ಲವಾದುದರಿಂದ, ಅವರ ಪ್ರತಿನಿಧಿಗಳಾಗಿರುವ ನನ್ನ ಸ್ನೇಹಿತ ನಾಮಧಾರಿ ಮೆಂಬರುಗಳು ನಮ್ಮ ಬಡ ಜೋದರರಿಗೆ ಈ ಚಿಕ್ಕ ರಿಯಾಯಿತಿಯನ್ನು ಸಿಡಲು ಎಂದಿಗೂ ಗುಣಾಗುಟ್ಟಲಿಕ್ಕಿಲ್ಲವಾಗಿ ನಂಬುತ್ತೇನೆ. ಬೇರೆ ಯಾವ ಕಾರಣಗಳೂ ಸರ್ಕಾರದವರಿಗೆ ನ್ಯಾಯವೆಂದು ತೋರದೆ ಹೋದರೆ ಈ ಭೇದವನ್ನು ಹೋಗಲಾಡಿಸಿ ದೇಶದಲ್ಲಿ ಸಮಾನತ್ವದ ಚಿನ್ನದಂಥ ತತ್ವವನ್ನು ಸ್ಥಾಪಿಸಬೇಕೆಂದು ರೈತರುಗಳಸವು ತೋರುವುದಲ್ಲದೆ ನ್ಯಾಯವು ಮತ್ತು ಧರ್ಮವು ಕೇಳುತ್ತವೆ.

ಮೆ|| ಸಿ. ಎಮ್ ವೆಂಕಪ್ಪಯ್ಯನವರು ಅನುಮೋದಿಸಿದರು.

ಮೆ|| ಪಿ ಟಿ ಕುಶಾಲಪ್ಪನವರು

ಅಧ್ಯಕ್ಷರೇ, ತೋಟಗಾರರಿಗೆ ಇರುವ ಹಕ್ಕನ್ನು ತೆಗೆದುಹಾಕಲಿಕ್ಕೆ ಈ ಠರಾವನ್ನು ತಂದದ್ದಲ್ಲವೆಂತ ನಾನು ತಿಳಿಸಬೇಕಾಗಿದೆ. ಈ ಹಕ್ಕು ಭೂಮಿ ಹಿಡುವಳಿದಾರರಿಗೂ ಇತರ ರೈತರಿಗೂ ಪ್ರಯೋಜನವಾಗುವಂತೆ ಮಾಡಿಕೊಳ್ಳಬೇಕಂದೇ ಈ ಠರಾವು ತಂದದ್ದಾಗಿದೆ. ತೋಟಗಾರರ ಸಂಖ್ಯೆ ಇತರ ಕೃಷಿಕರದ್ದಕ್ಕಿಂತ ಬಹಳ ಕಡಿಮೆಯಾಗಿದೆ. ಭತ್ತಬೆಳೆಯುವವರು ಸಮಾರು ಶೇಕಡ 70 ರಷ್ಟು ಇದ್ದಾರೆ. ಮತ್ತು ಹೋಲಿಸಿನೋಡಿದ್ದಲ್ಲಿ ತೋಟಗಾರರಿಗಿಂತ ಬಡವರೇ. ದವಸಗಳನ್ನು ಬೆಳೆಸಲಿಕ್ಕೆ ಎಕರೆಗೆ 15 ರೂಪಾಯಿ ಖರ್ಚು ಮಾಡುತ್ತಾರೆ. ಸುಮಾರು 50 ಯಾ 60 ರೂ ಉತ್ಪತ್ತಿಯಾಗುತ್ತೆ. ಖರ್ಚಿನ ನಾಲ್ಕರಷ್ಟು ಉತ್ಪತ್ತಿಯಾಗುತ್ತೆಂತ ಇಟ್ಟುಕೊಳ್ಳಬಹುದು. ಕಾಫೀ ತೋಟಗಾರರಿಗೆ ಎಕರೆಗೆ 50 ಯಾ 60 ರೂ, ರೂ ಖರ್ಚಾದರೂ ಎಕರೆಗೆ 300 ರೂ ವರೆಗೆ ಉತ್ಪತ್ತಿಯಾಗುತ್ತೆ. ಇದ್ದರಿಂದ ಆರ್ಥಿಕದೃಷ್ಟಿಯಿಂದ ಈ ವ್ಯತ್ಯಾಸಮಾಡಬೇಕಾದ್ದಿಲ್ಲವೆಂತ ಗೊತ್ತಾಗುತ್ತೆ. ರೈತರು ಬಂದಾಗಲೆ ಸ್ಟಾಂಪು ಕಚ್ಚೆ ಖರಾರುಮಾಡ ಬಯಸಿದಂತೆ ಮಾಡಿದರೆ ಖರಾರನ್ನು ಅವರ ಮುಂದಿನ ಹಳ್ಳಿಯಲ್ಲೇ ಬರೆಸಬಹುದೋ, ಖಚೇರಿಯಲ್ಲಿ ಬರೆಸಬೇಕೋ ಎಂಬ ಪ್ರಶ್ನೆಯೂ ಹುಟ್ಟುತ್ತೆ. ಈ ನಿರ್ಬಂಧ ಇದ್ದರೂ ಇರಬಹುದು. ಯಾಕೆಂದರೆ ಅವುಗಳಮೇಲೆ ಬಹಳ ನಡೆಸುವಾರರೆಂಬ ಭಯವಿದೆ. ಈ ನಿರ್ಬಂಧದೊಡನೆ ಬಂದಾಗಲೆ ಸ್ಟಾಂಪಿನ ಹಕ್ಕನ್ನು ಎಲ್ಲಾ ರೈತರಿಗೂ ಮಾಡಿಕೊಡಬೇಕಂತ ನನ್ನ ಅಭಿಪ್ರಾಯ. ಇದರಿಂದ ಗರೀಬ ರೈತರಿಗೆ ಪ್ರಯೋಜನವಾಗುವುದಲ್ಲದೆ ಜನಸಮುದಾಯಕ್ಕೆ ಕಾಣುವ ದೊಡ್ಡ ಅನ್ಯಾಯವನ್ನು ಮನ್ನಿಸಿದಂತೆ ಆಗುತ್ತೆ. ತೋಟಗಾರರ ಹಕ್ಕನ್ನು ಕಡಿಮೆಮಾಡುವ ಉದ್ದೇಶವಿಲ್ಲ. ತೋಟಗಾರರಿಗೂ ರೈತರಿಗೂ ಇರುವ ವ್ಯತ್ಯಾಸವು ಹೋಗಲಾಡಿಸಿದಂತಾಗುತ್ತೆ. ಜನರ ಅಭಿಪ್ರಾಯಕ್ಕೆ ಒಪ್ಪಿ ಸರಕಾರವು ಈ ಠರಾವನ್ನು ಅಂಗೀಕರಿಸೀತೆಂತ ನನ್ನ ಆಶೆಯಾಗಿದೆ.

ಮ|| ಟಿ ಜಿ ಟಾಸ್ಕರವರು

ಈ ವಿಷಯವನ್ನು ಬಜೆಟ್ ಠರಾವಾಗಿ ತರದೆ ಸಾಧಾರಣ ಠರಾವಾಗಿ ತಂದಿದ್ದರೆ ಉತ್ತಮವಾಗುತ್ತಿತ್ತು. ಮುಂಚೆ ತಿಳಿಯದೆ ಇದ್ದ ಸಂಗತಿಗಳನ್ನು ನನ್ನನ್ನು ಕೇಳಿ ಅಥವಾ ವಿಚಾರಮಾಡಿ ಮೊದಲು ತಿಳಿದುಕೊಳ್ಳಬೇಕಿತ್ತು. ಈ ವ್ಯತ್ಯಾಸವು ಯಾಕೆ ಇರಬೇಕೆಂತ ಗೊತ್ತಾಗುವದಿಲ್ಲವಾಗಿ ಹೇಳಿದರು. ಕೇಳಿದ್ದರೆ ನನಗೆ ತಿಳಿದದ್ದನ್ನು ಹೇಳುತಿದ್ದೆ. "ಪ್ಲಾಂಟರ್" ಎಂಬ ಶಬ್ದದಮೇಲೆ ಮಾತನಾಡಿದರು. ಈ ಸಂಬಂಧದ ಶಾಸನವನ್ನು ನೋಡಿದ್ದಾರೋ ಇಲ್ಲವೋ ನನಗೆ ತಿಳಿಯುವದಿಲ್ಲ. ಇದರ ಸಂಬಂಧದ ಶಾಸನವನ್ನು ಓದುತ್ತೇನೆ. ಇದರಿಂದ ತೋಟಗಾರರಿಗೂ ಇತರರಿಗೂ ಹಕ್ಕಿಲ್ಲವೆಂತ ಹೇಳಿದ್ದರಿಂದ ಶಾಸನವು ನೋಡದೇ ಕಾಣಿಸುತ್ತದೆ. ಇದರಿಂದ ಮುಂದೆ ಈ ಹಕ್ಕು ಇದೆ ಎಂಬದನ್ನು ಈಗಲೇ ತೋರಿಸುತ್ತೇನೆ. ಯಾರಿಗಾದರೂ ಹೆಚ್ಚಿನ ಹಕ್ಕು ಸಿಕ್ಕುವದಕ್ಕೆ ನಾನು ಅಡ್ಡಿಯಾಗಿದ್ದೇನೆಂತ ಯಾರೂ ತಿಳಿಯಬಾರದು. ಆದರೆ ಇಂಥಾ ಸಂದರ್ಭದಲ್ಲಿ ತನ್ನ ಪಾಯವನ್ನು ಗಟ್ಟಿಮಾಡಿಕೊಂಡು ಮಾತಾಡಬೇಕಿತ್ತು. ಈ ಠರಾವು ಬಂದಾಗ ಇದನ್ನು ಬಜೆಟ್ಟಿಗೆ ಸೇರಿಸಬೇಕೋ ಬೇಡವೋ ಎಂಬದನ್ನು ತಿಳಿಯಲಿಕ್ಕೆ ಪ್ರೆಸಿಡೆಂಟರನ್ನು ಕೇಳಬೇಕೆಂತ ತೋರಿತು. ಶಾಸನ ವಿಷಯದಲ್ಲಿ ಸರ್ಕಾರದ ತತ್ವವು ಸರಿಯಿಲ್ಲ ಎಂಬದನ್ನು ತೋರಿಸಲಿಕ್ಕೆ ಇಂಥಾ ಠರಾವು ತರಬಹುದೇ ಹೊರತು, ಉತ್ಪತ್ತಿಯಿಂದ ಇಂತಿಷ್ಟು ಹಣ ಕಡಿಮೆಮಾಡಬೇಕೆಂತ ತಂದದ್ದರಿಂದ ಪ್ರಯೋಜನವಿಲ್ಲ. ಯಾಕೆಂದರೆ ಇಂಥಾ ಠರಾವು ಸಂಬಂಧವಾದರೂ ಸರಕಾರವು ಶಾಸನವನ್ನು ಕೂಡಲೇ ಬದಲಾಯಿಸಬಹುದಿಲ್ಲ. ಬಜೆಟ್ಟಿನ ಮೇಲಿನ ಸಾಧಾರಣ ಠರಾವು ಯಾವುದಾದರೂ ಒಂದು ಐಟಮನ್ನು ಕಡಿಮೆಮಾಡಬೇಕೆಂತ ಹೇಳಿದರೆ ಆ ಕೆಲಸದಲ್ಲಿ ಸ್ವಲ್ಪ ವ್ಯತ್ಯಾಸಮಾಡಬೇಕಾಗುವುದು. ಠರಾವನ್ನು ತಂದವರು ಯಾರಿಗೆ ಈ ಬದಲಾವಣೆ ಮಾಡಲಿಕ್ಕೆ ಹಕ್ಕಿದೆ ಎಂಬದನ್ನೂ ಹೇಗೆ ಬದಲಾಯಿಸಬೇಕೆಂಬದನ್ನೂ ವಿಚಾರ ಯೋಚಿಸಬೇಕಿತ್ತು. ಈ ಸ್ಟಾಂಪು ಕೊಡಬೇಕಾದದ್ದು ಸ್ಟಾಂಪು ಆಕ್ಟು ಮೇರೆ. ಇದು ಇಂಡಿಯಾ ಸರಕಾರದ ಆಕ್ಟು. 9 ನೇ ಸೆಕ್ಷನ್ ಮೇರೆ ಯಾವುದಾದರೂ ಸ್ಟಾಂಪನ್ನು ಮಾಫಿಮಾಡುವ ಹಕ್ಕನ್ನು ಗವರ್ನರ್ ಜನರಲೇ ಇಟ್ಟುಕೊಂಡಿದ್ದಾರೆ. ಆ ಸೆಕ್ಷನ್ ಮೇರೆ ಈ ರೂಲನ್ನು ಮಾಡಿದ್ದಾಗಿದೆ. "ಒಬ್ಬನ ಅಧೀನ ಹಚ್ಚು ಜಮೀನು ಹಕ್ಕಾಗಿ ಒಂದೇ ಕಡೆಯಾಗಲೀ ಬೇರೆ ಬೇರೆ ಕಡೆಯಾಗಲೀ ಬ್ರಿಟಿಷ್ ಇಂಡಿಯಾದಲ್ಲಾಗಲೀ ಮೈಸೂರಲ್ಲಾಗಲೀ ಹತ್ತು ಎಕರೆಗಿಂತ ಹೆಚ್ಚಿಗೆ ಇರುವ ಟೀ, ಕಾಫಿ, ರಬ್ಬರ್, ಮೆಣಸು ಇಲಾಚಿ ಬೆಳೆಯಲಾಕ್ಕಾಗಿ 50 ರೂಪಾಯಿಗೆ ಮೀರದೆ ಕೊಡುವ ಅಡ್ವಾನಸಿನ ಎಗ್ರಿಮೆಂಟ್ ಬಂದು ಆಣೆ ಸ್ಟಾಂಪಿನಿಂದ ಮಾಡಬಹುದು" ಎಂತ ರೂಲ್ ಇರುವದಾಗಿದೆ. ಈ ರೂಲನ್ನು ಓದಿದರೆ ಮೆಂಬರುಗಳಿಗೆ ತೋರುವ ವ್ಯತ್ಯಾಸವೇನೂ ಇಲ್ಲವಾಗುತ್ತೆ. ಸರಿಯಾದ ರೀತಿ ಯಾವದಿತ್ತೆಂದರೆ, ಸಾಧಾರಣದ ಠರಾವನ್ನು ತಂದು ಈ ಸೆಕ್ಷನನ್ನೇ ಬದಲಾಯಿಸಬೇಕು. ಅಥವಾ ಇದನ್ನು ರದ್ದುಪಡಿಸುವ ಶಾಸನವುಮಾಡಬೇಕು. ನಾನೂ ಒಬ್ಬ ಸರಕಾರಿ ಮೆಂಬರುಗಳು ಯಾವ ಅಭಿಪ್ರಾಯ ಕೊಟ್ಟರೂ ಪದಾದರೂ ಬಜೆಟ್ ರಿಸೊಲ್ಯೂಶನ್ನಾಗಿ ನಾಶ ಮಾಡಿದರೆ ಏನೂ ಪ್ರಯೋಜನವಿಲ್ಲ. [ಪೆಂಡುವಂತುವದು]

ವಿಸಂಜ್ಞೆ.

ಗತ ಮಾರ್ಚಿಮಾಹೆ ಆದಿಯಲ್ಲಿ ಅವಿನಾಶಕಾಯಿಲೆಗಾಗಿದ್ದ ನನ್ನನ್ನು ನೋಡಲು ನನ್ನ ಸ್ನೇಹಿತರು ಮತ್ತು ಹಿತಚಿಂತಕರನೇಕರು ಮಡಿಕೇರಿಯಲ್ಲಿರುವ ನನ್ನ ಮನೆಗೆ ತಮ್ಮ ಯಿಂದ ಬಂದಿದ್ದರು. ನನ್ನ ಇಂಥಾ ಪ್ರೇಮದ ವಿಶ್ವಸಿಕ್ಕೆ ಹಿಗಳಿಗೆಲ್ಲರಿಗೂ (ಪ್ರತ್ಯೇಕ ಪ್ರತ್ಯೇಕ ಕಾಗದಮೂಲಕ ವಂದಿಸಲು ಸಾಧ್ಯವಲ್ಲದ್ದರಿಂದ) ಈ ಪತ್ರಿಕೆಯ ಮೂಲಕ ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಕ ಜಿ ಬೆಳ್ಳ

ವರ್ತಮಾನ ಸಂಗ್ರಹ

ಬೀಳ್ಕೊಡಿಗೆ

ದಕ್ಷಿಣ ಕೊಡಗು ಸುಧೀರಭಾರಂತದ ಮೆ|| ಗೊಣಿಕೊಪ್ಪಲಿಯಿಂದ ಕಾರ್ಯಪ್ಪನವರು ಮತ್ತು ಪೊನ್ನಂಪೇಟೆ ಟಿ ಅಮ್ಮತ್ತಿ ಷರಾಯಸ್ತಗಾರರುಗಳಾದ ಮೆ|| ಕೋಟಿರ ಅಯ್ಯಪ್ಪನವರು ಮತ್ತು ಮೆ|| ನೆಲ್ಲಮಕ್ಕಡ ಅಯ್ಯಪ್ಪನವರು ಟೋರಿಯಲ್ ಟ್ರೈನಿಂಗ್ ಹೋಗಬೇಕಾಗಿ ಬಂದಿರುವುದರಿಂದ ಮಾರ್ಚಿ ತಿಂಗಳು 18ರಿಂದ ಎರಡು ತಿಂಗಳವರೆಗೆ ಬಂಗಾರಿಯಾಗಿ ದಕ್ಷಿಣಕೊಡಗು ಸಭೆಯವರಾಗಿ ಮೆ|| ಕರವಂಡ ಚಂಗಪ್ಪನವರ ಪ್ರಿ ನೊಂದುವಾಗಿದ್ದಾರೆ. ಷರಾಯಸ್ತಗಾರರಾಗಿ ಮೆ|| ಸಾರ್ಥಕರಂಡ ಪೂಣಚ್ಚನವರನ್ನು ಮತ್ತು ಅಮ್ಮತ್ತಿನಾಡು ಪಾರುಪತ್ಯಗಾರರಾಗಿ ಮೆ|| ಚಿಮ್ಮಂಡ ಪೊಂಣಪ್ಪನವರನ್ನೂ ನೇಮಿಸಿರುವರು.

ಈಗದ ತಾರೀಖು 4 ಮತ್ತು 5 ರಲ್ಲು ಮಡಿಕೇರಿ ಹೈಸ್ಕೂಲಿನ ಮತ್ತು ಹಳೇವಿದ್ಯಾರ್ಥಿಗಳ ಸಂಘದ ವಾರ್ಷಿಕೋತ್ಸವವು ಕೊಡಗು ಕಮಿಷನರವರಾದ ಮೆ|| ಟಾಸ್ಕರವರ ಅಧ್ಯಕ್ಷತೆಯಲ್ಲಿ ಹೈಸ್ಕೂಲಿನ ಹಾಲಿನಲ್ಲಿ ನಡೆಯಿತು. ಆಕ್ಸನಲ್ಲಿ ಮಿಸೆಸ್ ಟಾಸ್ಕರ್‌ರವರು ವಿದ್ಯಾರ್ಥಿಗಳಿಗೆ ಬಹುಮಾನಗಳನ್ನೂ ಹಂಚಿದರು.

ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರ ಪೊಲೀಸ್ ಇನ್ಸ್‌ಪೆಕ್ಷನ್ (ಕವಾತು) ತಾರೀಖು 6 ರಿಂದ ನಡೆಯುತ್ತಿರುತ್ತೆ.

ಸೆಂಟ್ರಲ್ ಹೈಸ್ಕೂಲಿನ ಟೆನ್ನಿಸ್ ಗ್ರೌಂಡಿನಲ್ಲಿ ಟೆನ್ನಿಸ್ ಟೂರ್ನಮೆಂಟು ತಾರೀಖು 10ರಿಂದ ನಡೆಯುತ್ತಲಿತ್ತು ಇದೆ.

ತಾ|| 23-3-24 ರಲ್ಲು ಶಾಮರ್ಕಾಡು ಫಾರೆಸ್ಟ್ ರೇಂಜಿಗೆ ಸೇರಿದ ಮಂಚಳ್ಳಿಯಲ್ಲು ಒಂದೇಕಪ್ಪದಲ್ಲು ಎರಡು ಆನೆಗಳು ಬಿದ್ದಿದ್ದವು. ಒಂದು 8 ಅಡಿ ಎತ್ತರವಾಗಿಯೂ, ಬಹು ಲಕ್ಷಣವುಳ್ಳದ್ದಾಗಿಯೂ, ಇನ್ನೊಂದು 5 ಅಡಿ ಎತ್ತರವಾಗಿಯೂ ಇದ್ದವು. ಇವುಗಳನ್ನು ಹೊರಗೆ ತೆಗೆಯುವುದನ್ನು ನೋಡಲು ಅನೇಕಜನರು ನೆರೆದಿದ್ದರು. ತಾರೀಖು 23ರ ವರೆಗೆ ಶಾಮರ್ಕಾಡು ಪಾರೆಸ್ಟಿನಲ್ಲಿ ನಾಲ್ಕು ಕಾಡಾನೆಗಳು ಹಿಡಿಯಲ್ಪಟ್ಟಿರುವವೆಂದು ತಿಳಿಯಬರುತ್ತದೆ.

ಕ್ರಿಕೆಟ್ಟು ಟೋರ್ನಾಮೆಂಟುಗಳು (ಪಂದ್ಯಾಟಗಳು) ತಾರೀಖು 9 ರಿಂದ 18 ರವರೆಗೆ ಜರಗುತ್ತವೆ.

ಸೆಂಟ್ರಲ್ ಹೈಸ್ಕೂಲ್ ಇದೇ ತಾರೀಖು 7 ರಿಂದ ತಾರೀಖು 19ರವರೆಗೆ ಮುಚ್ಚಲ್ಪಟ್ಟಿದೆ.

ತಾರೀಖು 1-4-24 ರಲ್ಲು ಕೊಡಂದೇರ ಮಾದಪ್ಪನವರ ಪತ್ನಿಯವರು ಮಡಿಕೇರಿಯಲ್ಲು ಕಾಲಾಧೀನರಾದರು.

ಮಳೆಯು ದೇಶದ ಎಲ್ಲಾ ಕಡೆಗಳಲ್ಲೂ ಹೊಯಿದಿರುತ್ತಾ ಇದೆ. ಕಾಫಿ ಹೂವುಗಳು ಹೊರಡುತ್ತಿವೆ.

ಸೆಂಟ್ರಲ್ ಹೈಸ್ಕೂಲಿನ ಹಳೇ ವಿದ್ಯಾರ್ಥಿಗಳು [illegible] ಎಂಬ ನಾಟಕವನ್ನು ಇದೇ ತಾರೀಖು 13 ರಲ್ಲು ಹೈಸ್ಕೂಲ್ ಹಾಲಿನಲ್ಲಿ ಆಡುತ್ತಾರೆ.

[illegible]

[illegible]

ಕೊಡಗಿನ ಸಿವಿಲ್ ಕೋರ್ಟುಗಳೆಲ್ಲ ಇದೇ ಏಪ್ರಿಲ ತಾರೀಖು 23ರಿಂದ ಜೂನ್ ತಾರೀಖು 3 ರವರೆಗೆ ಮುಚ್ಚಲ್ಪಡುತ್ತವೆ ಜೂನ್ ತಾರೀಖು 4ರಲ್ಲಿ ತೆರೆಯುತ್ತವೆ.

ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಬಳಿ ಹಾಕಿರುವ ಡೇರೆಯಲ್ಲಿ ಮಡಿಕೇರಿ ಅಮೆಚ್ಯೂರ್ ಕಂಪನಿಯವರು ತಾರೀಖು 5 4 24 ರಲ್ಲು ಸಾಯಂಕಾಲ ಒಂದು ನಾಟಕವನ್ನು ಆಡಿದರು

ತಾರೀಖು 28-3-24 ರಲ್ಲು ಕೊಡಗು ಕಂಪೆನಿ ಡೈರೆಕ್ಟರುಗಳ ಮತ್ತು ಸೆಂಟ್ರಲ್ ಬ್ಯಾಂಕ್ ಡೈರೆಕ್ಟರುಗಳ ಮೀಟಿಂಗುಗಳು ನಡೆದವು ಕೌನ್ಸಿಲ್ ಪ್ರೊಸೀಡಿಂಗ್ಸ್ ಪ್ರಕಟವಾಗುತ್ತಾ ಇರುವುದರಿಂದ ಈ ಮೀಟಿಂಗುಗಳ ಪ್ರೊಸೀಡಿಂಗ್ಸ್‌ಗಳನ್ನು ಪ್ರಕಟಮಾಡಲು ಸ್ಥಳ ದೊರೆಯಲಿಲ್ಲ

ನಮ್ಮ 4ನೇ ಸಂಚಿಕೆಯಲ್ಲಿ (ತಾರೀಖು 28 3-1924 ರಲ್ಲು) ಮಡಿಕೇರಿ ಆಸ್ಪತ್ರೆಯಲ್ಲಿ ದಿವಸಕ್ಕೆ ಒಂದು ಎರಡು ಸಾವು ಆಗುತ್ತದೆಂತ ಬರೆದದ್ದನ್ನು ಕೋವೆಕಾಯಿಲದಿಂದ ಸಾಯುತ್ತಾರೆಂತ ನಾವು ಬರೆದದ್ದಾಗಿ ಸಿವಿಲ್ ಸರ್ಜನರು (ಡಾಕ್ಟರು) ಅರ್ಥಮಾಡಿಕೊಂಡು ನಮಗೆ ಒಂದು ಪತ್ರ ಬರೆದಿರುತ್ತಾರೆ. ಈ ವರ್ಷದ ಸುರುವಿನಿಂದಲೇ ಈವರೆಗೆ ಕೋವೆಕಾಯಿಲದಿಂದ ಸತ್ತದ್ದು 31 ಮಾತ್ರ ಆಗಿದೆ ಎಂತಲೂ ನಾವು ಬರೆದದ್ದು ಉತ್ಪ್ರೇಕ್ಷೆಯಾಯಿತೆಂತಲೂ ನಾವು ಮೊದಲು ಬರೆದದ್ದನ್ನು ವಿರೋಧಿಸಬೇಕೆಂತಲೂ ಆಸ್ಪತ್ರೆಗೆ ಕಳುಹಿಸುವ ಕೋವೆಕಾಯಿಲದವರು ಸಾಯುವ ಸ್ಥಿತಿಯಲ್ಲಿ ಬರುವುದರಿಂದ ಆಸ್ಪತ್ರೆಯವರು ಜವಾಬ್ದಾರರಲ್ಲವೆಂತಲೂ ದಫನಮಾಡುವ ಕರ್ಚುಗಳನ್ನು ತಪ್ಪಿಸಿಕೊಳ್ಳುವುದಕ್ಕಾಗಿಯೇ ಕೆಲವರು ಕಳುಹಿಸುವುದಾಗಿದೆ ಎಂತಲೂ, ಕೋವೆಕಾಯಿಲಸ್ಥರನ್ನು ಗಾಡಿಯಲ್ಲಿ ಹಾಕಿ ಕಳುಹಿಸುವುದು ಬಹಳ ಅಪಾಯಕರವೆಂತಲೂ ಮುಂತಾಗಿ ಬರೆದಿರುತ್ತಾರೆ ನಾವು ಈ ಮೊದಲು ಬರೆದದ್ದು ಆಸ್ಪತ್ರೆಗೆ ಆಕ್ಷೇಪಣೆಗಾಗಿ ಅಲ್ಲ ದೇಶದಲ್ಲಿ ಸಾವು ಹೆಚ್ಚಾಗಿದೆ ಎಂಬದನ್ನು ತೋರಿಸುವುದಕ್ಕೆ ಮಾತ್ರ ಬರೆದದ್ದಾಗಿದೆ

ಹಿಂದೂದೇಶ.

ಮಹಾತ್ಮ ಗಾಂಧಿಯವರು "ಯಂಗ್ ಇಂಡಿಯ ಮತ್ತು "ನವ ಜೀವನ' ಎಂಬ ಪತ್ರಿಕೆಗಳ ಸಂಪಾದಕತ್ವವನ್ನು ಪುನಹ ವಹಿಸಿಕೊಂಡಿದ್ದಾರೆ ಪ್ರಪಂಚದಲಿ ಪಾರಮಾರ್ಥಿಕ ಜ್ಞಾನವು ಬೆಳಸಬೇಕೆಂಬುದೇ ನನ್ನ ಉದ್ದೇಶವೆಂದೂ ಮತವಿಚಾರವು ಸೇರಿದ ರಾಜಕೀಯ ಚಳವಳಿಯು ಆತ್ಮವನ್ನು ನಾಶಮಾಡುವುದರಿಂದ ಸರ್ವನಾಶಕ್ಕೆ ಕಾರಣವಾಗುತ್ತೆಂತಲೂ ತನ್ನ ದಾರಿಯಲ್ಲಿ ಸ್ವತಂತ್ರ್ಯವನ್ನು ಪಡೆದರೆ ಇಂಡಿಯಾದೇಶದ ಸ್ವತಂತ್ರವು ಪ್ರಪಂಚದ ಕ್ಷೇಮಕ್ಕೆ ಹಾನಿಕರವಲ್ಲವೆಂತಲೂ ಯಂಗ ಇಂಡಿಯ ದ ಮೊದಲನೆಯ ಸಂಚಿಕೆಯಲ್ಲಿ ಬರೆದಿರುತ್ತಾರೆ

ಅಸಾಂಬ್ಲಿಸಿನಲ್ಲಿ ಮಂತ್ರಿಗಳ ಸಂಬಳವನ್ನು 1500 ರೂಪಾಯಿಗಳಿಗೆ ಇಳಿಸಿದ್ದರಿಂದ ಮಂತ್ರಿಗಳು ರಾಜಿನಾಮೆ ಕೊಡುತ್ತಾರೆ

ತಿರುವಾಂಕೂರಿಗೆ ಸೇರಿದ ವಯಿಕಂ ಎಂಬ ಊರಲ್ಲಿ ಅಸ್ಪೃಶ್ಯ ವರ್ಗದವರು ಹೋಗಕೂಡದೆಂಬ ಒಂದು ರಸ್ತೆಗಾಗಿ ಜುಲುಮೆಯಿಂದ ಹೋಗುವ ಏರ್ಪಾಡು ಮಾಡಿದ್ದಾರೆ ಹೀಗೆ ಹೋದದ್ದಕ್ಕಾಗಿ ಇಬ್ಬರು ಸ್ವಯಂ ಸೇವಕರಿಗೆ ಆರಾರು ತಿಂಗಳು ಸಜವಾಯಿತು ಕಾಂಗ್ರೆಸು ಕಮಿಟಿಯವರು ಪ್ರತಿನಿಧಿಗಳಿಬ್ಬರು ಮಹಾತ್ಮ ಗಾಂಧಿಯವರಲ್ಲಿಗೆ ಪುಕಾರು ತೆಗೆದುಕೊಂಡು ಹೋದದ್ದರಿಂದ ಪಂಡಿತಮಾಳವೀಯರು ತಕರಾರು ತೀರಿಸುವವರೆಗೆ ಸತ್ಯಾಗ್ರಹವನ್ನು ಬಾಕಿಮಾಡಬೇಕೆಂತ ಅಭಿಪ್ರಾಯ ಕೊಟ್ಟಿದ್ದಾರೆ

ಕಾನ್ಪುರದ ಒಟ್ಟೆಕಾರಖಾನೆ ಒಂದರಲ್ಲಿ ಕೆಲಸಬಿಟ್ಟ ಕೂಲಿಕಾರರು ಜನರಿಗೆ ಕಲ್ಲುಎಸೆಯುವುದು ಮುಂತಾದ ತುಂಡು ಮಾಡಿದ್ದಕ್ಕಾಗಿ ಪೋಲೀಸಿನವರು ಗುಂಡುಹಾರಿಸಬೇಕಾಯಿತು

ಮೈಸೂರು ಪಟ್ಟದಲ್ಲಿ ಗತಿಸಿದ ಶ್ರಿಂಗೇರಿಸ್ವಾಮಿಗಳು ಹುಟ್ಟಿದಸ್ಥಳದಲ್ಲಿ ಅವರ ಪ್ರತಿಮೆಯನ್ನು ಈಗಿನ ಸ್ವಾಮಿಗಳು ತಾರೀಖು 31—3—24 ರಲ್ಲಿ ಪ್ರತಿಷ್ಠೆ ಮಾಡಿದರು

ಬೊಂಬಾಯಿ ಪಟ್ಟದ ಮುನಿಸಿಪಾಲಿಟಿ ಪ್ರೆಸಿಡೆಂಟರಾಗಿ ಮಿ|| ಏ ಜೆ ಪಟೇಲರು ಚುನಾಯಿತರಾಗಿರುವರು.

ವಿದೇಶ

ಪ್ರೆಂಚ್ ಪಾರ್ಲಿಮೆಂಟಿನಲ್ಲಿ ಚರ್ಚೆ ನಡಿಯುವಾಗ ಇಬ್ಬರು ಮೆಂಬರುಗಳು ಜೈದಾಡಿಕೊಂಡರು ಹೊಡೆದಾಡುವುದನ್ನು ಮಾತ್ರ ಪ್ರೆಸಿಡೆಂಟರು ತಡೆದರಂತೆ

ಇಂಗ್ಲೇಂಡಿನ ಸಾಮ್ರಾಜ್ಯ ಪ್ರದರ್ಶನದ ಸಮ್ಮಂಧವಾಗಿ ಕೆಲಸಮಾಡುತ್ತಿದ್ದವರು ತಕರಾರು ಮಾಡಿಕೊಂಡು ಕೆಲಸಬಿಟ್ಟದ್ದರಿಂದ ಮರುದಿನ ಕೆಲಸವೇ ನಿಂತುಹೋಗಿ ನಿರ್ಣಯವಾದ ದಿವಸ ಪ್ರದರ್ಶನವನ್ನು ತೆರೆಯಲು ಸಾಧ್ಯವಾಗುತ್ತೋ ಎಂಬಸಂಶಯವು ಬಂದಿದೆ

ಮೆಕ್ಕಾಕ್ಕೆ ಹೋಗುವ ಯಾತ್ರೀಕರನ್ನು ತೆಗೆದುಕೊಂಡು ಹೋಗುತ್ತಿದ್ದ ಹಡಗದಲ್ಲಿ ಬೆಂಕಿಹತ್ತಿಕೊಂಡು ಹಡಗಕ್ಕೆ ಪೂರ್ತಿ ಅಪಾಯವಾಗಿದೆಯಂತೆ ಆದರೆ ಯಾತ್ರೀಕರನ್ನು ಅಪಾಯವಿಲ್ಲದಂತೆ ಉಳಿಸಿಕೊಂಡಿದ್ದಾರಂತೆ.

ದಕ್ಷಿಣ ಆಫ್ರಿಕಾದ ಪಾರ್ಲಿಮೆಂಟಿನಲ್ಲಿ ಚರ್ಚೆನಡಿಯುವಾಗ ಇಂಡಿಯಾದೇಶದವರಿಗೆ ದಕ್ಷಿಣ ಆಫ್ರಿಕಾದಲ್ಲಿ ಸ್ಥಳವೇ ಕೊಡಬಾರದೆಂತ ವಾದಮಾಡಿದರಂತೆ

ಫ್ರೆಂಚ್ ಪಾರ್ಲಿಮೆಂಟಿನಲ್ಲಿ [illegible] ಭಾಗವನ್ನು ಫ್ರೆಂಚರು ಸ್ವಾಧೀನಪಡಿಸಿ [illegible] ಬದಲಾಗಿದೆ [illegible] ವಿಷಯದಲ್ಲಿ [illegible] ಮಿನಿಸ್ಟರಿಯವರು ಮಾತ್ರ [illegible] ಇದ್ದರೆ ಸಾಕೆಂತಲೂ ತೈಸಲಾಗಿದೆ.

Wait for a week! Wait for a week!!

THOSE WHO REQUIRE

Beautiful and Stylish Photographs

FROM

MUNESAWMY RAJU

ARTIST AND PHOTOGRAPHER

34 DICKINSON ROAD

Who will be at Mercara on or about the 15th April 1924

Don't miss this opportunity

ಒಂದುವಾರ ಕಾಯಿರಿ! ಒಂದುವಾರ ಕಾಯಿರಿ!!

ಬೆಂಗಳೂರಿನ ಆರ್ಟಿಸ್ಟ್ ಮತ್ತು ಫೋಟೋಗ್ರಾಫರಾದ ಮುನಿಸ್ವಾಮಿರಾಜುರವರಿಂದ ಚಲೋದಾದ ಮತ್ತು ಒಳ್ಳೇ ನಮೂನೆಯ ಫೋಟೋಗಳನ್ನು ತೆಗಿಸಬೇಕಾದವರು

ಒಂದುವಾರ ಮಾತ್ರ ಕಾಯಿರಿ.

ಅವರು ಸುಮಾರು ಏಪ್ರಿಲ್ 15 ನೆ ಮಡಿಕೇರಿಗೆ ಬರುವರು ಈ ಸಮಯವನ್ನು ಕಳಕೊಳ್ಳಬೇಡಿರಿ!!

ನೋಟೀಸು.

ಮಡಿಕೇರಿ ಜಾನುವಾರುಗಳ ಆಸ್ಪತ್ರೆ [illegible] ದ ಹೋರಿಯನ್ನು ಮಾರಾಟಕ್ಕೆ ಇಡಲ್ಪಟ್ಟಿದೆ ಈ ಹೋರಿಯು ಈಗ ಏಳುವರ್ಷ ಪ್ರಾಯದ್ದಾಗಿದೆ ಇದು ಉತ್ತಮಜಾತಿಯ ಹೋರಿ ದೊಡ್ಡಜಾತಿಯ ದನಗಳನ್ನು ಇಟ್ಟವರ ಪಂಡಿಗೆ ಪ್ರಯೋಜನವಾಗುವದು ಹೆಚ್ಚಿಗೆ ತಪಸೀಲ್ ಮಡಿಕೇರಿ ವೆಟರ್ನರಿ ಅಸಿಸ್ಟೆಂಟರಿಂದ ತಿಳಿಯಬಹುದು

(Sd.) K N [illegible]

Deputy Director

L R & A

ನೋಟೀಸು.

[illegible]

ವಾದಿ— [illegible]

ಪ್ರತಿವಾದಿ [illegible]

ಈ ವ್ಯಾಜ್ಯದ [illegible] ಪ್ರತಿವಾದಿ [illegible] ರಾಮಯ್ಯನಿಗೆ ತಿಳಿಸುವುದೇನೆಂದರೆ— [illegible] ಹಾಜರಾತಿ ಎಗೆ ತಾ|| 10 1 24ಕ್ಕೆ ಇಟ್ಟಿದೆ [illegible] ಉದಾಹರಣೆ ಸದರಿ ತಾರೀಖಿನಲ್ಲಿ [illegible] ದಾಖಲು ಮಾಡದಿದ್ದರೆ ನಿಮ್ಮ ಗೈರುಹಾಜರಿಯಲ್ಲಿ ಸದರಿ ನಂಬ್ರವು ತೀರ್ಮಾನಿಸಲಾದೀತು.

B S HOLLA,

Vakil for Plaintiff

ಆರೋಗ್ಯ ಚಂದ್ರಿಕೆ.

ಇದು ಪ್ರಜಾಕ್ಷೇಮಕ್ಕಾಗಿ ಆರೋಗ್ಯಮಾರ್ಗವನ್ನೂ ಚಿಕಿತ್ಸೆಯನ್ನೂ ಬೋಧಿಸುವ ಒಂದು ಮಾಸಪತ್ರಿಕೆ ಇದರ ಸಂಪಾದಕರು ಮದ್ರಾಸಿನಲ್ಲಿ ಪ್ರಸಿದ್ಧರಾದ ಡಾಕ್ಟರ್ ಯು. ರಾಮರಾವ್ ಎಂ ಎಲ್ ಸಿ ಯವರು ಇದರಲ್ಲಿ ಅನೇಕ ಪ್ರಸಿದ್ಧ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರುಗಳ ಲೇಖನಗಳು ಆಗಿಂದಾಗ್ಯೆ ಪ್ರಕಟವಾಗುವವು

ಟಪಾಲುಹಾಸಲು ಸೇರಿ ಈ ಪತ್ರಿಕೆಯ ವಾರ್ಷಿಕ ಚಂದ 1—8—0 ರೂ ಮಾತ್ರ ಬಿಡಿ ಪತ್ರಿಕೆ ಒಂದಕ್ಕೆ 0—2—0 ರಣೆ

ಏಜೆಂಟರು —	ವಿಳಾಸ —
ಮ|| ರಾ|| ರಾ|| ಎಸ್ ಕೆ	ಮೇನೇಜರ್
[illegible]	ಆರೋಗ್ಯಚಂದ್ರಿಕೆ ಆಫೀಸು
ಭಾಗಮಂಡ್ಲ,	23 ತಂಬುಚೆಟ್ಟಿಬೀದಿ,
ಕೊಡಗು	ಮದ್ರಾಸು

[12—3]

ಇಮಿಟೇಷನ್ ಸಿಲ್ಕಿನ ಜವಳಿ ರಖಂ

ಕಾಂಚೆಯ ಸೀರೆಗಳು.

ಈ ಸೀರೆಗಳು 18 ಮೊಳ ಉದ್ದವೂ 2½ ಮೊಳ ಅಗಲವೂ ಇರುವವು ಉಡಲು ಧಡೂತಿಯಾಗಿಯೂ [illegible] ಬಣ್ಣಗಳಲ್ಲಿ [illegible] ಇವನ್ನು ಪ್ರತಿದಿನವೂ [illegible] ಶ್ರೀಮಂತರಿಗೂ ಗರೀಬರಿಗೂ ಮತ್ತು ಪ್ರತಿಯೊಂದು ಜಾತಿಯವರೂ ಉಡಲು ಲಾಯಖಾದದ್ದು ಒಂದನ್ನು ಪರೀಕ್ಷಿಸಿರಿ ಕ್ರಯ ರೂ 1, 6—4—0 ನಂ 2 7—8 0

ಟಿ ರಾಮುತಂಪ್ರಾವ್ ಅಂಡ ಕೋ,

ಜವಳಿ ವ್ಯಾಪಾರಿಗಳು

16 ತಿರುಪಳ್ಳಿ ಬೀದಿ ಮದ್ರಾಸು.

ರೋಲ್ಡ್ ಗೋಲ್ಡ್ ಭಂಗಾರದ

ಬ್ರೇಸ್ ಲೆಟ್ ವಾಚ್.

ಈ ಹೊಸವ ಇನೆ ಗಡಿಯಾರಗಳು ಬಹು ಬಲಿಷ್ಟವಾದ ಲೀವರ್ ಸಾಮಾನುಗಳಿಂದ ಮಾಡಲ್ಪಟ್ಟಿದೆ ನೋಡಲಿಕ್ಕೆ ಭಂಗಾರದ ಗಡಿಯಾರದ ಹಾಗೆ ಕಾಣುವುದು ಚಿಕ್ಕ [illegible] ಕೈಯಲ್ಲು ಕಟ್ಟಿಕೊಳ್ಳಲು ಬಹು ಅಂದವಾಗಿರುತ್ತೆ ಇಂಗ್ಲೀಷ ನಮೂನೆ ಗಡಿಯಾರ ಗ್ಯಾರಂಟಿ 3 ವರ್ಷಗಳು ಕೊಡಲ್ಪಡುತ್ತವೆ ಬ್ರೇಸ್‌ಲೆಟ್ ಸರಪಣಿಸಹಿತ ಗಡಿಯಾರ 1ಕ್ಕೆ ಕ್ರಯ ರೂಪಾಯಿ 8—0—0

CITY WATCH Co	ಸಿಟಿ ವಾಚ್ ಕಂಪೆನಿ,
22 Tiruppally Street	22 ತಿರುಪಳ್ಳಿ ಬೀದಿ,
G T MADRAS	ಮದ್ರಾಸು

[4—3]

WANTED.

Two Second-hand Motor Bicycles

M M SIDDLEK

22 11 MERCARA



Printed & Published by D S Krishnaswamienger Proprietor, at Sreenivas Electric Press, Mysore for Kodagu Ltd Mercara—11-4-1924

not delivered please return to "Kodagu Office, Mercara" Regd. No. M. 1550.

ಕೊಡಗು.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವುದು

ಸಂಪುಟ ೩] ಕೊಡಗು, ಸನ್ ೧೯೨೪ನೇ ಇಸವಿ ಏಪ್ರಿಲ್ ... ನೆಯ ಶುಕ್ರವಾರ. [ಸಂಚಿಕೆ ೪೬

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನ್ನಡ ಪ್ರಿಂಟಿಂಗ್ ರೂಲಿಂಗ್ ಮತ್ತು ಬೈಂಡಿಂಗ್ ಕೆಲಸಗಳು ... ಇದ್ದರೂ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ... ಜಾಗ್ರತೆಯಾಗಿಯೂ ಸುಲಭವಾಗಿ ... ಕೊಡುತ್ತೇವೆ

Srinivas Electric Press, MYSORE

The Saraswathi Publishing Company

ಶಾರದಾಗ್ರಂಥಮಾಲಾ

1 ಪ್ರಿಯಂವದೆ (...)	0	6	0
... (...)	0	10	6
...	0	12	0
5 ...	0	8	0
...	0	4	0
5 ...	0	4	0
6 ...			0

ಸರಸ್ವತಿ

SARASWATHI PUBLISHING Co. Post Box No 57 ... City

HEALTH IS WEALTH

WANTED all to improve health strength and vitality and thus save our nation from physical degeneracy. Send half anna stamp and get 13 specimen photographs with full particulars from

Director Physical Culture,
P O Basavanagudi,
BANGALORE CITY

For your requirements of high grade Arms, Ammunition, Wine and Spirits,

APPLY TO,—

Mc. DOWELL & Co., Ltd., MERCARA.

N—1

ಬಿಗ ... ಇನ್ಶೂರೆನ್ಸ್ ... ಕಂಪನಿಗಳ ... ಏಜಂಟರು.

SPENCER & Co, Ltd, Mercara and Pollibetta Coorg.

[24—1]

BUMPER CROPS Always follow on application of our fertilisers

ದೊಡ್ಡ ಬೆಳೆಗಳು ...

Siddeck ... Works MERCARA

21—

ಸುಂಟಿಕೊಪ್ಪ ವೈದ್ಯಶಾಲಾ

...

ನಾರಾಯಣಸಂಬೀರ್ಕರ್,
ಆಯುರ್ವೇದ ವೈದ್ಯರು,
...

52 —1

ಬಿ ... ಪತ್ರ

...

ಬೃಹತ್ಪ್ರಮಾಣದ ... ಜೀವನ ... ದೇಶದ ...

ಜೀವ ... ಬಂದಲ್ಲಿ ... ಸಂಸ್ಥೆಯಾದಿಯು ... ಕಂಪೆನಿ ...

ಜೀವವಿಮೆ ... ಕೊಡಗು ದೇಶದ ಆರ್ಥಿಕ ಸ್ಥಿತಿಯನ್ನು (Economic Condition) ವೃದ್ಧಿಗೊಳಿಸುವ ... ದೊಂದಿ!

ಲೈಫ್ ಇನ್ಶೂರೆನ್ಸ್ ... ಗವರ್ನಮೆಂಟು ಸೆಕ್ಯೂರಿಟಿಗಳಿಗೆ ... 12 ಲಕ್ಷ ... ಮೈಸೂರು ಗವರ್ನಮೆಂಟು ಸೆಕ್ಯೂರಿಟಿಗಳಲ್ಲಿ 1 ಲಕ್ಷ ... ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ... 1 ಲಕ್ಷ ಗವರ್ನಮೆಂಟ್ ಆಫ್ ಇಂಡಿಯ ಸೆಕ್ಯೂರಿಟಿಯನ್ನು ... ಮೈಸೂರು ಸೆಕ್ಯೂರಿಟಿ ... ಬಾಕಿ ... ಇಂಡಿಯಾ ಗವರ್ನಮೆಂಟು ... ಬ್ಯಾಂಕ್ ಮೂಲಕ ...

ಬಿ. ಎಸ್. ... ,
... ಆಫೀಸ್ ...

ನೋಟೀಸ್.

... ಕೋ ಆಪರೇಟಿವ್ ಸೊಸೈಟಿ ... ಪ್ರಕಾರ ರಿಜಿಸ್ಟರಾಗಿದೆ

	ರೂ
ಶೇರ್ ಬಂಡವಾಳ	50 000
...	6 820
...	47,990

ಈ ಬ್ಯಾಂಕಿನಿಂದ ... ಕೊಡಗು ದೇಶದ ... ಸಾಲ ಕೊಡತಕ್ಕದ್ದು.

... 6-4-0 ... 5 ... ಬಡ್ಡಿ ...

... ಕೋ ಆಪರೇಟಿವ್ ಬ್ಯಾಂಕ್ ...

ಪ್ರೆಸಿಡೆಂಟರು ... ಬಿ ಎ ಬಿ ಎಲ್

ಸೆಕ್ರೆಟರಿ
... ಬಿ ಎ ಬಿ ಎಲ್
... 27—2—1924.

"ಕೊಡಗು"

೧೯೨೪ನೇ ಇಸವಿ ಏಪ್ರಿಲ್ ತಾ|| ೧೮ನೇ ಶುಕ್ರವಾರ.

ತಂಜಾವೂರಿನ ಕಂದಾಯ ಸೆಟ್ಲ್‌ಮೆಂಟು.

ಮದ್ರಾಸು ಪ್ರಾಂತ್ಯದಲ್ಲಿ ಮೂವತ್ತು ವರ್ಷಕ್ಕೊಂದು ಸಲ ಭೂಮಿಕಂದಾಯ ಸೆಟ್ಲ್‌ಮೆಂಟು ಮಾಡುವ ಪದ್ಧತಿಯನ್ನು ಆಚರಿಸುತ್ತಿದ್ದಾರೆ. ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿಯೂ ಒಂದೇ ಸಲ ಮಾಡದೆ ಒಂದೊಂದು ವರ್ಷ ಒಂದೊಂದು ಡಿಸ್ಟ್ರಿಕ್ಟುಗಳಲ್ಲಿ ರಿಸೆಟ್ಲ್‌ಮೆಂಟು ಮಾಡುತ್ತಿರುವರು. ಕಳೆದ ವರ್ಷ ತಂಜಾವೂರು ಡಿಸ್ಟ್ರಿಕ್ಟಿನಲ್ಲಿ ಮೊದಲನೇ ತರದ ಭೂಮಿಗಳಿಗೆ ಶೇಕಡ 25ರಷ್ಟು, ಬಾಕಿ ಜಮೀನುಗಳಿಗೆ ಶೇಕಡ 18¾ ರಷ್ಟು ಕಂದಾಯವನ್ನು ಹೆಚ್ಚಿಸಿದರು. ಇದು ಜನರಿಗೆ ಬಹಳ ಅತೃಪ್ತಿಯನ್ನೂ ಅಸಮಾಧಾನವನ್ನೂ ಉಂಟುಮಾಡಿತು. ಭೂಮಿಯ ಸಾರವು ಕಡಿಮೆಯಾಗುತ್ತಾ ಬರುವುದನ್ನೂ ಕೃಷಿಯ ಹೆಚ್ಚಿನ ಖರ್ಚನ್ನೂ ಸರಕಾರದವರು ನ್ಯಾಯವಾಗಿ ಪರಿಶೀಲಿಸಿ ನೋಡಿ ಅವುಗಳನ್ನು ಗಣನೆಗೆ ತೆಗೆದುಕೊಳ್ಳದೆ ಕಂದಾಯವನ್ನು ಹೆಚ್ಚಿಸಿದ್ದು ಅನ್ಯಾಯವೆಂದು ಎಲ್ಲರಿಗೂ ತೋರಿತು. ಈ ಕಷ್ಟವನ್ನು ಸರಕಾರದವರ ಗೋಚರಕ್ಕೆ ತರುವ ಉದ್ದಿಶ್ಯ ಗವರ್ನರವರಿಗೆ ಒಂದು ಡೆಪ್ಯುಟೇಶನ್ ಕಳುಹಿಸುತ್ತೇವೆಂದು ಅಲ್ಲಿಯ ಮಿರಾಸ್‌ದಾರರೆಂಬ ಜಮೀನ್‌ದಾರರು ಕೇಳಿಕೊಂಡದ್ದಕ್ಕೆ ಆಗುವುದಿಲ್ಲವೆಂದು ಮದ್ರಾಸು ಗವರ್ನರವರು ಉತ್ತರವನ್ನಿತ್ತರು. ಈ ಹೆಚ್ಚಿನ ಕಂದಾಯವನ್ನು ಕೊಡಲು ಜಮೀನುದಾರರಿಗೆ ಮುಖ್ಯವಾಗಿ 50 ರೂ ಕೆಳಗೆ ಕಂದಾಯ ಕೊಡುವಂಥ ಬಡರೈತರಿಗೆ ಎಂದಿಗೂ ಸಾಧ್ಯವಿಲ್ಲವೆಂದು ತೋರಿ ಬಂದದ್ದರಿಂದ ಹೆಚ್ಚಿನದರದ ಕಂದಾಯವನ್ನು ಕೊಡುವುದಿಲ್ಲವೆಂಬ ಚಳವಳಿ ಡಿಸ್ಟ್ರಿಕ್ಟಿನಲ್ಲೆಲ್ಲಾ ಹರಡಿತು. ಪಕ್ಷಪಕ್ಷ ವಿಚಾರಣೆಗಳು ನಡೆಯುದ್ದರಿಂದ ಜನವರಿ ತಿಂಗಳ ಕಂತಿನ ಕಂದಾಯವನ್ನು ಹೆಚ್ಚಿನ ಜನರೆಲ್ಲರೂ ಕಟ್ಟಿಬಿಟ್ಟರು. ಆದರೆ ಸಂಕರದ ಕಂತಿನಲ್ಲಿ ಕಂದಾಯ ಕೊಡದೆ ಅನೇಕ ರೈತರು ಬಾಕಿ ಮಾಡಿದರು. ಅವರ ದವಸಧಾನ್ಯಗಳನ್ನೂ ಸಾಮಾನುಗಳನ್ನೂ ಜಪ್ತಿಮಾಡಿಸಿ ಹರಾಜಿಗಿಟ್ಟರು. ಹರಾಜಿನಲ್ಲಿ ಸಾಮಾನುಗಳನ್ನು ತೆಗೆಯುವವರೇ ಇಲ್ಲವಾದರು. ಧಾನ್ಯಗಳನ್ನು ಗ್ರಾಮಗಳಲ್ಲಿ ಹರಾಜು ಮಾಡಿಸಿದರೆ ಅಲ್ಲಿಯವರ ಪ್ರೇರೇಪಣೆಯಿಂದ ಯಾರೂ ತೆಗೆಯುವುದಿಲ್ಲವೆಂದು ಅವುಗಳನ್ನು ಪಟ್ಟಣಗಳಿಗೆ ಸಾಗಿಸುವ ಏರ್ಪಾಡು ಮಾಡಿದರು. ಅನೇಕವೇಳೆಗಳಲ್ಲಿ ಗಾಡಿಯವರು ಸಿಕ್ಕದೆ ಸಾಮಾನುಗಳನ್ನು ಗ್ರಾಮಗಳಲ್ಲಿಯೇ ಬಿಡಬೇಕಾಗಿ ಬಂತು. ಒಬ್ಬ ಕೌನ್ಸಿಲು ಮೆಂಬರವರು ಕಂದಾಯ ಕೊಡದ್ದಕ್ಕೆ ಸುಮಾರು 7 ಸಾವಿರ ಕ್ರಯಬಾಳುವ ಅವರ ವಜ್ರದ ಉಂಗುರ ಮೊದಲಾದ ಒಡವೆಗಳು ಹರಾಜಿಗೆ ತರಲ್ಪಟ್ಟವು. ಅವುಗಳನ್ನು 50 ರೂ ಗೂ ಕೂಡ ತೆಗೆದುಕೊಳ್ಳುವವರಿಲ್ಲದ್ದರಿಂದ ಹರಾಜನ್ನು ಬಾಕಿಮಾಡಿದರು. ಇನ್ನೊಂದು ಕಡೆ ಎರಡು ಸಾವಿರ ರೂ ಕ್ರಯದ ಒಂದು ಉಂಗುರವನ್ನು 1 ರೂ ಗೂ ಸಹ ಯಾರೂ ತೆಗೆದುಕೊಳ್ಳಲಿಲ್ಲ. ಅನೇಕ ಸಲ ಹರಾಜಿನಲ್ಲಿ ಕೂಗುವವರು ಯಾರೂ ಸಿಕ್ಕದ್ದರಿಂದ ಸರ್ಕಾರಿ ಉದ್ಯೋಗಸ್ಥರು, ಪೇದೆಗಳೇ ಮೊದಲಾದವರನ್ನು ರೂಲ್ಸಿಗೆ ವಿರೋಧವಾಗಿ ತೆಗೆಯಬಿಟ್ಟು ಜನರಿಗೆ ಮಾತ್ರ ಸ್ವಲ್ಪ ಕ್ರಯಕೊಟ್ಟು ಅನೇಕ ಸಾಮಾನುಗಳನ್ನು ವಿಕ್ರಯಮಾಡಿದರು. ಅವರೂ ಕೂಡ ಮಿರಾಸ್‌ದಾರರು ಸ್ವಲ್ಪವೂ ಧೈರ್ಯಗುಂದದೆ ಕಂದಾಯವನ್ನು ಕೊಡದೆ ತಮ್ಮ ಸಾಮಾನುಗಳನ್ನು ಹರಾಜಿಗೆಬಿಟ್ಟರು. ಇದನ್ನೆಲ್ಲಾ ನೋಡಿ ಗವರ್ನರವರು ಡೆಪ್ಯುಟೇಶನ್ ಬರಬಹುದೆಂದು ಒಪ್ಪಿದರು.

ಮಿರಾಸ್‌ದಾರರು ತಮ್ಮ ಕಷ್ಟದ ಹವಾಲುಗಳನ್ನೆಲ್ಲ ಸೂಚಿಸಿ ಒಂದು ಡೆಪ್ಯುಟೇಶನ್ನು ಗವರ್ನರಿಗೆ ಕಳುಹಿಸಿದರು. ಅದಕ್ಕೆ ಸರಕಾರದವರು ಪಕ್ಕನೆ ಜವಾಬು ಕೊಡದೆ ತಡಮಾಡಿ ಸುಮಾರು 1 ತಿಂಗಳನಂತರ ಹೆಚ್ಚಿಸಿದ ಕಂದಾಯವನ್ನು ಸ್ವಲ್ಪವೂ ಕಡಿಮೆ ಮಾಡಲಿಕ್ಕಾಗದೆಂತಲೂ ಡೆಪ್ಯುಟೇಶನವರು ಸೂಚಿಸಿದ ತರದಾಗಳು ನ್ಯಾಯವಾದವುಗಳಲ್ಲವೆಂತಲೂ ಉತ್ತರವನ್ನು ಕೊಟ್ಟರು. ಇದು ಜನರ ಅತೃಪ್ತಿಯನ್ನು ಮತ್ತಷ್ಟು ಹೆಚ್ಚಿಸಿತು. ಅಲ್ಲಿಯ ಮುಂದಾಳುಗಳೆಲ್ಲರೂ ಸೇರಿ ಮಾರ್ಚಿ ತಾರೀಕು 30ರಲ್ಲು ಮಾಯಾವರದಲ್ಲು ಮಿರಾಸ್‌ದಾರರ ಒಂದು ಕಾನ್ಫರೆನ್ಸನ್ನು ನಡಿಸಿದರು. ಆ ಸಭೆಯಲ್ಲಿ ಮಾತಾಡಕೂಡದೆಂದು ಕೆಲವು ಮುಂದಾಳುಗಳಿಗೆ ಮೇಜಿಸ್ಟ್ರೇಟರು ಹುಕುಂ ಮಾಡಿದರು. ಈ ಸಭೆಯು ರಾಜಕೀಯ ವಿಷಯ ಚರ್ಚಿಸುವುದಕ್ಕಲ್ಲವೆಂತಲೂ ಬರೇ ಜನರ ಆರ್ಥಿಕ ಕಷ್ಟವನ್ನು ನಿವಾರಿಸಲು ಏರ್ಪಾಡಾದ್ದೆಂತಲೂ, ಆ ಸಭೆಯಲ್ಲಿ ಮಾತಾಡಕೂಡದೆಂದು ಮಾಡಿದ ಹುಕುಂಗಳು ಅನ್ಯಾಯಕರವಾದವುಗಳೆಂದು ಅವುಗಳನ್ನು ಕೆಲವರು ಉಲ್ಲಂಘಿಸಿದರು. ಆ ಕಾನ್ಫರೆನ್ಸಿಗೆ ಮದ್ರಾಸು ನ್ಯಾಯವಿಧಾಯಕಸಭೆಯ ಮೆಂಬರುಗಳನೇಕರು ನೆರೆದಿದ್ದರು. ಕಾನ್ಫರೆನ್ಸನ್ನು ತಡೆಯಲು ರಿಸರ್ವ್ ಪೋಲೀಸಿನವರನ್ನೂ ಸಹ ಅಲ್ಲಿಗೆ ಕಳುಹಿಸಿದ್ದರು. ಇದಕ್ಕೆಲ್ಲಾ ಹೆದರದೆ ಅಲ್ಲಿ ನೆರೆದಿದ್ದ ಸಾವಿರಗಟ್ಲೆ ಮಿರಾಸ್‌ದಾರರು ಸಾಧ್ಯವಿಲ್ಲದ್ದರಿಂದ ರೈತರು ಹೆಚ್ಚಿನ ಕಂದಾಯವನ್ನು ಕೊಡಬಾರದೆಂತಲೂ, ಸರ್ಕಾರದವರು ಇದರಮೇಲೂ ಬಲಾತ್ಕಾರಮಾಡಿದರೆ ಭೂಮಿಯನ್ನೇ ವ್ಯವಸಾಯಮಾಡದೆ ಹಾಳುಬಿಡುವುದು ಉತ್ತಮವೆಂದೂ ತೀರ್ಮಾನಿಸಿ ಪ್ರತಿಜ್ಞೆ ಮಾಡಿಕೊಂಡಿರುವರು. ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರುಗಳೂ, ಎಸೆಂಬ್ಲಿಯ ಮೆಂಬರುಗಳೂ ಸಹ ಈ ತೀರ್ಮಾನಗಳಿಗೆ ಒತ್ತಾಸೆಯಾಗಿ ಮಾತಾಡಿದರು. ಈಗ ತಂಜಾವೂರಿನಲ್ಲಿ ಎಲ್ಲಿ ನೋಡಿದರೂ 'ಕಂದಾಯವಿಲ್ಲ' ವೆಂಬ ಚಳವಳಿಯು ಪ್ರಬಲವಾಗಿ ಹರಡಿಕೊಂಡಿದೆ. ಒಂದನೇ ಕಿಸ್ತಿನ ಕಂದಾಯ ಕೊಟ್ಟವರೂ ಕೂಡ ರಾಜಭಕ್ತಿಯಿಂದ ತುಂಬಿರುವವರೂ ಈ ಏಪ್ರಿಲ್ ಕಂತಿನ ಹಣವನ್ನು ಕೊಡದೆ ಬಾಕಿಮಾಡಿರುವರು. ಜಮೀನುದಾರರು ಊಟಕ್ಕೆ ಇರಿಸಿಕೊಂಡಿರುವ ಭತ್ತವೂ ಬೇರೆಸಾಮಗ್ರಿಗಳೂ ಜಪ್ತಿ ಮಾಡಲ್ಪಟ್ಟು ಹರಾಜು ಮಾಡಲ್ಪಡುತ್ತಿವೆ. ರೈತರು ಬಹು ತಾಳ್ಮೆಯಿಂದ ಅಹಿಂಸೆಯ ತತ್ವವನ್ನು ಕೈಕೊಂಡು, ತಮ್ಮ ಜೀವನಕ್ಕೆ ಅತ್ಯಗತ್ಯವಾದ ಸಾಮಾನುಗಳನ್ನು ಸಹ ಹರಾಜಿಗೆ ಬಿಡುತ್ತಿರುವರು. ಒಂದು ಕಡೆ ಹರಾಜಿನಲ್ಲಿ ನಿನ್ನ ಒಡವೆಗಳನ್ನು ಹರಾಜಿಗೆ ಬಿಡಬೇಡ, ಕಂದಾಯವನ್ನು ಕೊಟ್ಟುಬಿಡು ಎಂದು ಒಬ್ಬ ಸ್ತ್ರೀಗೆ ಸರ್ಕಾರದ ಕಡೆಯವರು ಬೋಧಿಸಿದಲ್ಲು, ಅವಳು, ತನ್ನ ಒಡವೆಗಳನ್ನು ಮಾತ್ರವಲ್ಲ ತನ್ನ ಜೀವವನ್ನೇ ಕಳಕೊಳ್ಳುವೆನು ಆದರೆ ಇಂಥಾ ಅನ್ಯಾಯದ ತೆರಿಗೆಗೆ ತಾನು ಎಂದಿಗೂ ಒಪ್ಪಲಿಕ್ಕಿಲ್ಲವೆಂದು ಹೇಳಿದಳಂತೆ.

ಇಂಥಾ ಅವಸ್ಥೆಯು ಹಚ್ಚು ಕಡಿಮೆ ಎಲ್ಲಾ ಕಡೆಗಳಿಗೂ ಬರುವ ಸಂಭವವಿದೆ. ಆದುದರಿಂದ ಇದು ತಂಜಾವೂರಿನವರಿಗೆ ಮಾತ್ರ ಲಗತ್ತಾದ ವಿಷಯವೆಂದು ಜನರು ಯೋಚಿಸಬಾರದು. ಇದು ತಂಜಾವೂರಿನವರಿಗಾದರೆ ನಾಳೆಯೋ ನಾಡಿದ್ದೋ ಬೇರೆ ಡಿಸ್ಟ್ರಿಕ್ಟುಗಳಿಗೂ ಈ ಕಷ್ಟವು ಬಂದೊದಗಬಹುದು. ಇದು ರಾಜಕೀಯಸಂಬಂಧವಾದ ಆಂದೋಲನ ಕಾರ್ಯಕಲಾಪಗಳಲ್ಲವೆಂದು ಹೇಳಬೇಕಾಗಿಲ್ಲ. ರೈತರ ಬಡತನದಿಂದಲೂ ಹೆಚ್ಚಿನದರದ ಕಂದಾಯವನ್ನು ಕೊಡಲು ಅವರು ಅಶಕ್ತರಾಗಿರುವುದರಿಂದಲೂ, ಈ 'ಕಂದಾಯವಿಲ್ಲ' ವೆಂಬ ಚಳವಳಿಕ್ಕೆ ಅವರು ಪ್ರಾರಂಭಿಸಿರುವರೆಂಬುದರಲ್ಲಿ ಸಂಶಯವೇನೂ ಇಲ್ಲ. ನಮ್ಮ ದೇಶದಲ್ಲೂ ರೈತರ ಅಭಿಪ್ರಾಯಕ್ಕೆ ವಿರೋಧವಾಗಿ ಕಂದಾಯವನ್ನು ಇನ್ನಷ್ಟು ಹೆಚ್ಚಿಸಿದ ಸಂದರ್ಭಗಳಿವೆ. ಇನ್ನು ಬರಬಹುದು. ತಂಜಾವೂರಿನವರಂತೆ ನಾವೂ 'ಕಂದಾಯವಿಲ್ಲ' ವೆಂಬ ಚಳವಳಿಯನ್ನು ನಡಿಸಬೇಕೆಂದಿಲ್ಲ. ಅಂಥಾ ಸಂದರ್ಭಕ್ಕೆ ನಮ್ಮ ಸರಕಾರವು ಇನ್ನು ಮುಂದೆ ಎಂದಿಗೂ ಎಡೆಕೊಡಲಿಕ್ಕಿಲ್ಲವಾಗಿ ನಂಬುತ್ತೇವೆ. ತಂಜಾವೂರಿನ ಮಿರಾಸ್‌ದಾರರ ಕಷ್ಟದ ಹವಾಲುಗಳು ನ್ಯಾಯವಾದವುಗಳೆಂದು ಯಾರುತಾನೇ ಹೇಳದಿರುವರು. ಸರಕಾರದವರು ಅಂಥಾ ಹವಾಲುಗಳಿಗೆ ಕಿವಿಕೊಡದೆ ಪ್ರಜೆಗಳಮೇಲೆ ಬಲಾತ್ಕಾರವನ್ನು ನಡಿಸುತ್ತಾ ಹೋದರೆ ಬಡರೈತರು ತಾನೆ ಏನುಮಾಡಬಲ್ಲರು. ಮದ್ರಾಸು ಸರಕಾರದವರೇ ಅಲ್ಲಿಯ ರೈತರನ್ನು ಈ ಚಳವಳಿಕ್ಕೆ ಕೈಹಾಕುವಂತೆ ಮಾಡಿದರೆಂದು ಕಂಡುಬರುತ್ತದೆ. ಇನ್ನಾದರೂ ಆಳರಸರು ಪ್ರಜೆಗಳ ಕಷ್ಟವನ್ನು ನಿರ್ಮಲಮನಸ್ಸಿನಿಂದ ತಿಳಿದುಕೊಂಡು ಅದನ್ನು ಪರಿಹರಿಸಲು ತಕ್ಕ ಪ್ರಯತ್ನಗಳನ್ನು ಮಾಡುವರಾಗಿ ನಮ್ಮ ಅಪೇಕ್ಷೆ.

ಧರ್ಮದ ಕೆಲಸ.

ಶ್ರೀ ಕಾವೇರಮ್ಮನವರ ಉದ್ಭವಸ್ಥಾನವಾದ ಕೊಡಗು ದೇಶವು ದಾನಧರ್ಮದ ಕೆಲಸಗಳಿಗೆ ಹೆಸರುವಾಸಿಗೊಂಡಿರುವುದೆಂದು ನಾವು ಪ್ರತ್ಯೇಕ ಹೇಳಬೇಕಾಗಿಲ್ಲ. ಇಲ್ಲಿಯ ನಿವಾಸಿಗಳಲ್ಲಿ ವಿಶೇಷ ವಾಡಿಕೆಯಾಗಿ ದಾನಧರ್ಮಗಳನ್ನು ಮಾಡುವ ಕೆಲಸದಲ್ಲಿ ಉತ್ಸಾಹವುಳ್ಳವರಾಗಿರುವುದು ಆಶ್ಚರ್ಯಕರವಾದ ವಿಷಯವಲ್ಲ. ಕೆಲವು ಮಹನೀಯರು ಆಗಾಗ್ಗೆ ತಮ್ಮ ಶಕ್ತ್ಯನುಸಾರ ಧರ್ಮದ ಕೆಲಸಗಳನ್ನು ಕೈಕೊಳ್ಳುತ್ತಿರುವುದು ಎಲ್ಲರಿಗೂ ತಿಳಿಯಬೇಕಾದ ಸಂಗತಿಯಾಗಿದೆ. ಅಂಥವರಲ್ಲಿ ಮೆ|| ಪಾಂಡಂಡ ಅಪ್ಪಚ್ಚನವರು ಒಬ್ಬರಾಗಿರುತ್ತಾರೆ. ಇವರು ತಮ್ಮ ಉದಾರಗುಣದಿಂದ ಜನ್ಮದ ಸ್ಥಳದಲ್ಲಿ ಶಾಲೆಕೊಪ್ಪಲಲ್ಲು ಸುಮಾರು 2000 ರೂ ಖರ್ಚುಮಾಡಿ ಒಂದು ಶಾಲೆಯನ್ನು ಕಟ್ಟಿಸಿದರು. ಒಂದೆರಡು ವರ್ಷಗಳ ಹಿಂದೆ ಮಡಿಕೇರಿ ಆಸ್ಪತ್ರೆಯ ಅಭಿವೃದ್ಧಿಗೋಸ್ಕರ ಒಂದು ಸಾವಿರ ರೂಪಾಯಿಯನ್ನು ವೈದ್ಯಾಲಯ ಸಲಹೆಸುವದಕ್ಕ ಕೊಟ್ಟರು. ಇವರು ಮಾಡಿದ ಬೇರೆ ಚಿಕ್ಕ ಚಿಕ್ಕ ಧರ್ಮದ ಕೆಲಸಗಳನ್ನು ಇಲ್ಲಿ ಸೂಚಿಸಲು ಸ್ಥಳವಿಲ್ಲದಿದ್ದರೂ ಇವರು ಎಲ್ಲರ ಕಣ್ಣಿಗೂ ಕಾಣುವಂತೆ ಮಾಡಿದ ಒಂದು ಉಪಕಾರದ ದೊಡ್ಡ ಕೆಲಸಗಳನ್ನಾದರೂ ಹೇಳದೆ ಇರಲಾರೆವು. ಇವರು ಮೇಲೆ ಹೇಳಿದ ಕೆಲಸಗಳಿಂದ ಕೃತಾರ್ಥರಾಗದೆ ತಮ್ಮ ದೊಡ್ಡ ಮನಸ್ಸನ್ನು ಬಿಚ್ಚಿ ಕಳೆದ ಆಗೋಸ್ಟು ತಿಂಗಳಲ್ಲಿ ನಾಲ್ಕು ಸಾವಿರ ರೂಪಾಯಿಗಳನ್ನು ಮಹೋಪಕಾರದ ಧರ್ಮಕಾರ್ಯಕ್ಕೆ ಉಪಯೋಗಿಸುವಂತೆ ಸರಕಾರದವರಿಗೆ ಕೊಟ್ಟಿರುವರು. ಆದರೆ ಅಂಥಾ ಕೆಲಸ ಯಾವುದು ಎಂಬುದು ನಿಶ್ಚಯವಾಗಿ ಸೂಚಿಸಲಿಲ್ಲ. ಆದರೂ ತನ್ನ ಜನ್ಮದ ಸ್ಥಳದ ಪರಿಸರದಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಿಸಬೇಕೆಂಬ ಕುತೂಹಲವು ಇವರಿಗೆ ಇತ್ತೆಂದು ತಿಳಿಸಲ್ಪಟ್ಟಿದೆ. ಆದರೆ ಸರಕಾರದವರು ಈ ವಿಷಯಕ್ಕೆ ಯಾತಕ್ಕಾಗಿ ಗಮನಕೊಡಲಿಲ್ಲವೋ ತಿಳಿಯದು. ಇದು ಸಾಧ್ಯವಲ್ಲದಿದ್ದರೆ ಮಡಿಕೇರಿ ಆಸ್ಪತ್ರೆಯಲ್ಲು ಯೂರೋಪಿಯನರಿಗೆ ಇರುವಂಥ ಒಂದು ಸ್ಪೆಶ್ಯಲ್ ವಾರ್ಡನ್ನು ಕೊಡವರಿಗೂ ಏರ್ಪಡಿಸಬೇಕೆಂದು ಇವರು ಇಚ್ಛೈಸುತ್ತಾರಾಗಿ ತಿಳಿಯಬರುತ್ತದೆ. ಕೊಡವರಿಗೆ ಮಾತ್ರ ಸ್ಪೆಶ್ಯಲ್ ವಾರ್ಡ್ ಕಟ್ಟಿಸುವ ಬದಲಿಗೆ ಇಂಡಿಯನರಿಗೆ ಸ್ಪೆಶ್ಯಲ್ ವಾರ್ಡ್ ಎಂತ ಮಾಡಿದ್ದರೆ ಹೆಚ್ಚು ತೃಪ್ತಿಕರವಾಗುತ್ತಿತ್ತು. ಈಗ ಇರುವ ಸ್ಪೆಶ್ಯಲ್ ಇಂಡಿಯನ್ ವಾರ್ಡಿಗೆ ಸ್ವಲ್ಪ ಬಾಡಿಗೆ ವಸೂಲ್ ಮಾಡಿದರೂ ಚಿಂತೆ ಇಲ್ಲ. ಅದು ಸಾಕಾಗದಿರುವುದರಿಂದಲೂ ತೃಪ್ತಿಕರವಾಗಿರದಿರುವುದರಿಂದಲೂ ಒಂದು ಅನುಕೂಲವಾದ ಸ್ಪೆಶ್ಯಲ್ ವಾರ್ಡ್ ಸೇರಿಸುವುದು ಅವಶ್ಯವೇ. ಹ್ಯಾಗೂ ಜಾತಿಪ್ರೀತಿಯಿಂದಾದರೂ ಮಾಡಿದ ಧರ್ಮವು ಶ್ಲಾಘನೀಯವೇ. ಚಾರ್ಜಿಲ್ಲದೆ ಅನುಕೂಲವಾದ ಸ್ಪೆಶ್ಯಲ್ ವಾರ್ಡನ್ನು ಕಟ್ಟಿಸಬೇಕೆಂಬ ಮೆ|| ಅಪ್ಪಚ್ಚನವರ ಅಭಿಪ್ರಾಯವನ್ನು ಸರಕಾರದವರು ಶೀಘ್ರದಲ್ಲೇ ಕಾರ್ಯಕ್ಕೆ ತರುವರಾಗಿ ನಂಬುತ್ತೇವೆ. ಈ ಹಣದಲ್ಲಿ ಇದುವರೆಗೆ ಸ್ವಲ್ಪ ಭಾಗವನ್ನು ಮಾತ್ರ ಶಿಶುಸಂರಕ್ಷಣಾಲಯಕ್ಕೆ ಸಾಮಾನುಗಳನ್ನು ತರಿಸಲಿಕ್ಕಾಗಿ ಉಪಯೋಗಿಸಿರುವರೆಂದು ವರ್ತಮಾನ. ಬಾಕಿಹಣವನ್ನು ಕೊಟ್ಟವರ ಮನಸ್ಸಿಗೆ ತೃಪ್ತಿಯಾಗುವಂಥ ಕೆಲಸಕ್ಕೆ ಉಪಯೋಗಿಸಿ ಬೇರೆ ಮಹನೀಯರು ಇಂಥಾ ಧರ್ಮಕಾರ್ಯದಲ್ಲಿ ಕೈಹಾಕುವಂತೆ ಸರಕಾರದವರು ಉತ್ತೇಜನಕೊಡುವರೆಂದು ನಮ್ಮ ಆಶೆ. ಇಂಥಾ ಧರ್ಮಿಷ್ಠರು ದೇಶದ ಆಡಳಿತವನ್ನು ನೋಡುವ ಕೆಲಸವೇ ಹೆಚ್ಚಾಗಿರುವಂಥ ಸರಕಾರದವರಿಗೆ ಇನ್ನು ಹೆಚ್ಚು ತೊಂದರೆಯನ್ನು ಕೊಡದೆ ತಮ್ಮ ಉದಾರತ್ವವನ್ನು ಸ್ವಂತವಾಗಿಯಾಗಲೀ ಬೇರೆ ದೇಶಾಭಿಮಾನಿಗಳಿಂದಾಗಲೀ ಜನಸಮುದಾಯಕ್ಕೆ ಉಪಕಾರವಾಗುವಂತ ಕಾರ್ಯಗಳಿಗೆ ವಿನಿಯೋಗಿಸುವುದು ಉತ್ತಮವಲ್ಲದೆ, ಹಾಗೆ ಮಾಡಿದಲ್ಲಿ ಬಡಜನರಿಗೆ ಅವರಮೇಲಿರುವಂಥ ಅಭಿಮಾನವೂ ಪ್ರೀತಿಯೂ ಹೆಚ್ಚುವುದರಲ್ಲಿ ಸಂದೇಹವಿಲ್ಲ.

ಸ್ವೀಕಾರ.

"ಕೊಡವಡ ಪಟ್ಟೋಲೆಪಳಮೆ" ಎಂಬ ಪುಸ್ತಕದ ಪ್ರತಿಯೊಂದು ನಮ್ಮ ಕೈಸೇರಿದೆ. ಈ ಗ್ರಂಥವನ್ನು ನಾವು ಅನೇಕ ವಂದನೆಗಳಿಂದ ಸ್ವೀಕರಿಸುವುದಲ್ಲದೆ ಇದರಲ್ಲಿ ಅಪೂರ್ವವಾಗಿರುವ ಕೊಡವರ ಅನೇಕ ಪದ್ಧತಿಗಳನ್ನು ಅತಿಶ್ರಮದಿಂದ ಸಂಗ್ರಹಿಸಿ ಒಂದು ಪುಸ್ತಕರೂಪದಲ್ಲಿ ಪ್ರಕಟಿಸಿದಕ್ಕೆ ನಾವು ಮೆ|| ನಡಿಕೇರಿಯಂಡ ಚಿಣ್ಣಪ್ಪನವರನ್ನು ಅಭಿನಂದಿಸುತ್ತೇವೆ. ಈ ಪುಸ್ತಕವು ಆರು ಅಧ್ಯಾಯಗಳಿಂದ ಕೂಡಿದ್ದಾಗಿಯೂ 510 ಪುಟಗಳುಳ್ಳದ್ದಾಗಿಯೂ ಇದೆ. 1 ನೇ ಅಧ್ಯಾಯದಲ್ಲಿ ಕೊಡಗುವಿವರಣೆ ಪುರಾಣ ಇತಿಹಾಸ ಮೊದಲಾದವುಗಳೂ 2ನೇ ಅಧ್ಯಾಯದಲ್ಲಿ ಹುಟ್ಟುವುದು, ಮದುವೆ, ಕೂಡಾವಳಿಮದುವೆ ಕುತ್ತಿಕಾ ನಿಪ್ಪಪ್ ಪಜ್ಜದ ಸಪದ, ಸಾವು ಇವುಗಳ ಪದ್ಧತಿಗಳೂ, 3 ನೇ ಅಧ್ಯಾಯದಲ್ಲಿ ಕೈಲ್ ಪೊಳ್ದ್, ಕಾವೇರಿಸಂಕ್ರಮಣ, ಪುತ್ತರಿ ಮೊದಲಾದ ಹಬ್ಬಗಳ ವಿಷಯವೂ, 4 ನೇ ಮತ್ತು 5 ನೇ ಅಧ್ಯಾಯಗಳಲ್ಲಿ ದೇವರಪಾಟೂ ಕೇಳಿಪೋನಯುಂಡ ಪಾಟುಗಳೂ ಕಡೇ ಅಧ್ಯಾಯದಲ್ಲಿ ಗಾದೆ ಪಳಂಚೊಲ್ಲ್ ಮುಂತಾದ ನಾನಾತರದ ವಿಷಯಗಳೂ ವಿವರವಾಗಿ ಸಂಗ್ರಹಿಸಲ್ಪಟ್ಟಿವೆ. ಪುಸ್ತಕವು ದೊಡ್ಡದಾಗಿರುವುದರಿಂದಲೂ, ಅದರಲ್ಲಿ ತಿಳಕೊಳ್ಳಲು ಕಷ್ಟಕರವಾಗಿರುವ ಕೊಡವರ ಪದ್ಧತಿಗಳು ಅಡಕವಾಗಿರುವುದರಿಂದಲೂ ಇದರಮೇಲೆ ಒಡನೆ ನಮ್ಮ ಅಭಿಪ್ರಾಯವನ್ನು ಸೂಚಿಸಲು ಸಾಧ್ಯವಿಲ್ಲ. ಆದುದರಿಂದ ಈ ವಿಷಯ ವಿವರವಾಗಿ ಹಿಂದಿನಿಂದ ಬರೆಯುವೆವು. ಕೊಡವ ಪದ್ಧತಿಗಳು ಇದುವರೆಗೂ ಯಾರಿಂದಲೂ ಪ್ರಿಂಟಾದ ಪುಸ್ತಕರೂಪದಲ್ಲಿ ಸಂಗ್ರಹಿಸಲ್ಪಡದೆ ಇದ್ದದರಿಂದ ಅವುಗಳನ್ನು ತಿಳಕೊಳ್ಳಲು ಇಚ್ಛೈಸುವ ಅನೇಕರಿಗೆ ಯಾವ ಅನುಕೂಲವೂ ಇರಲಿಲ್ಲ. ಇಂಥಾ ಅನುಕೂಲವನ್ನು ಮೆ|| ಚಿಣ್ಣಪ್ಪನವರು ಈಗ ಕಲ್ಪಿಸಿಕೊಟ್ಟಿರುವದರಿಂದ ಅವರಿಗೆ ವಂದಿಸಬೇಕಾಗಿದೆ. ಆದರೆ ಇದರಲ್ಲಿ ಅಡಕವಾಗಿರುವ ಊಳಿಗಳು ನ್ಯಾಯವಾಗಿಯೂ ಕೊಡವರ ಹಳೇಪದ್ಧತಿಯ ಬೆಳೆಯಬೇಕೆಂಬ ಕಾಲಕ್ಕನುಗುಣವಾಗಿ ಕಲ್ಪಿಸಲ್ಪಟ್ಟವೋ ಎಂಬ ವಿಚಾರಗಳನ್ನು ಪದ್ಧತಿಗಳನ್ನು ಬಲ್ಲಂಥ ಹಿರಿಯ ಮಹನೀಯರು ಈ ಪತ್ರಿಕೆಯ ಮೂಲಕವಾಗಲೀ, ಈ ಗ್ರಂಥಪ್ರಕಾಶಕರಿಗೆ ಓಲೆವಾಗಲೀ ಪ್ರಕಟಿಸಿ ಸಮರ್ಥಿಸುವುದು ಉತ್ತಮವೆಂದು ತೋರುತ್ತದೆ. ಈ ಪುಸ್ತಕವು ಇನ್ನು ಮುಂದಕ್ಕೆ ಒಂದು ದಾಖಲೆಯಾಗಿ ನಿಲ್ಲುವುದರಿಂದ ತಿಳಿದ ಮಹನೀಯರು ಈ ವಿಷಯ ಜವಾಬ್ದಾರಿಯನ್ನು ತೆಗೆದುಕೊಳ್ಳುವರಾಗಿ ನಂಬುತ್ತೇವೆ.

2—8—0 ಕ್ರಯವುಳ್ಳ ಈ ಪುಸ್ತಕವು ನಡಿಕೇರಿಯಂಡ ಚಿಣ್ಣಪ್ಪ, ಪ್ರೆಸಿಡೆಂಟ್, ಇವರಿಂದ ದೊರೆಯುವುದು.

ಕೊಡಗು ನ್ಯಾಯವಿಧಾಯಕ ಸಭೆ.

[ಕಳೆದಸಂಚಿಕೆಯಿಂದ ಮುಂದುವರಿದದ್ದು].

ಮೆ|| ಪಿ ಐ ಬೆಳ್ಯಪ್ಪನವರು

ಫೈನಾನ್ಸ್ ಮೆಂಬರು ಈ ತಕ್ಕಸ್ಸು ರೈತರಿಗೆ ವ್ಯಾಪಕವಾಗುವಂತೆ ಯಾಕೆ ಮಾಡಬಾರದೆಂಬುದನ್ನು ಹೇಳಲಿಲ್ಲ. ಈ ವಿಷಯವು ನೆಲೆ (ಸಾಲದ ಇಲಾಖೆ) ಸರಕಾರದ

ಕೊಡಗು ಕೌನ್ಸಿಲು ಮೀಟಿಂಗು.

ವಿಷಯವಾಗಿದೆ. ಸ್ವಾಂತ ಉತ್ಪತ್ತಿ ವಿಷಯ ಎದ್ದಿಟ್ಟಿನ ಮೇಲೆ ಯಾಕೆ ನಿರ್ವಾಣಿಸಬಾರದೆಂಬದು ನನಗೆ ಗೊತ್ತಾಗುವದಿಲ್ಲ. ಆದ್ದರಿಂದ ಓಟ್ ತೆಗೆಯಬೇಕೆಂತ ಇಚ್ಛಿಸುತ್ತೇನೆ.

ಮ॥ ಟಿ. ಜಿ. ಟಸ್ಕರ್‌ರವರು

ಅಧ್ಯಕ್ಷ, ಡಿಪ್ರೊಲ್ಯಾಕ್ಟರ್‌ರವರ ಮೇರೆ ಪ್ರಾಂತೀಯ ಸರಕಾರಕ್ಕೆ ಟ್ಯಾಕ್ಸು ಹಾಕುವ ಹಕ್ಕು ಇಂಡಿಯಾ ಸರಕಾರದಿಂದ ಲಭಿಸಿಲ್ಲ. ಡಿರುಕ್ಟರ್ 'ತೋಟಗಾರರಿಗೂ ಕೃಷಿಕರಿಗೂ ವ್ಯತ್ಯಾಸ ಸರಲಿನಲ್ಲಿ ಕಾಣುವದಿಲ್ಲ. ಸೆಸ್ಸನ್ನು ಬದಲಾಯಿಸಲಿಕ್ಕೆ ಇಂಡಿಯಾ ಸರಕಾರಕ್ಕೇನೇ ಹಕ್ಕಿರುವದಾಗಿದೆ. ಇಂಡಿಯಾ ಸರಕಾರದವರು ಈ ರೂಲನ್ನು ಮಾಡಿದ್ದಾರೆಂಬುದ ನನಗೆ ಗೊತ್ತಾಗುವದಿಲ್ಲ. ಅದಾಗ್ಯೂ ತುಂಬಾ ಅಲಗಳನ್ನ ಇಟ್ಟುಕೊಳ್ಳುವವರಿಗೆ ಅನ್ಯಾಯ ತೋರಿಸಂತೆ ಕಾಣುತ್ತೆ. ಕೊಡಗಿನ ಸರಕಾರಕ್ಕೆ ಈ ಪವರ್ ಇಲ್ಲದೆ ಇರುವಾಗ ಈ ಠರಾವು ಪಾಸ್ ಮಾಡಿ ಪ್ರಯೋಜನವಿಲ್ಲ. ಯಾವುದಾದರೂ ನ್ಯಾಯವಾದ ರೀತಿಯಿಂದ ಇಂಡಿಯಾ ಸರಕಾರದ ಅಭಿಪ್ರಾಯಕ್ಕೆ ತರಲು ಪಿಟಿಷನ್ ಜೊತೆಯಲ್ಲಿ ಸಹಕರಿಸಲಿಕ್ಕೆ ನಾನು ತಯಾರಿದ್ದೇನೆ. ಜಾರಿಮಾಡಲು ಸಂಭವಿಲ್ಲದ ಠರಾವನ್ನು ಪಾಸುಮಾಡಿದರೆ ಏನೂ ಪ್ರಯೋಜನವಿಲ್ಲ.

ಅಧ್ಯಕ್ಷರು—ಫೈನಾನ್ಸ್ ಮೆಂಬರು ಹೇಳಿದ್ದಕ್ಕೆ ನಾನು ಒಪ್ಪುತ್ತೇನೆ. ಚಿಕ್ಕ ಹಿಡುವಳಿದಾರರಿಗೆ ಪ್ರಯೋಜನವಾಗಲು ಮ॥ ಬೆಳ್ಯಪ್ಪನವರು ಈ ಠರಾವನ್ನು ಪಾಸ್‌ಮಾಡಿದರೆ ಏನೂ ಸಾರ್ಥಕವಾಗುವದಿಲ್ಲ. ಕಾಫಿ ಬೆಳೆಯುವವರಿಗೂ ಚಿಕ್ಕ ಹಿಡುವಳಿದಾರರಿಗೂ ವ್ಯತ್ಯಾಸ ಹಾಕಿದಂತೆ ಕಾಣುವದಿಲ್ಲ. ಭೂಮಾಲೀಕರೂ ಸಹ ತುಂಬಾ ಜನ ಇರುವವರೆಂತ ತೋರಿಸಿದರೆ ಪ್ರಯೋಜನವಾದೀತು. ಆಗ ಬೇರೆ ಫಸಲುಗಳನ್ನು ಬೆಳೆಸುವವರಿಗೂ ರಿಯಾಯ್ತಿಯನ್ನ ಕೊಡಬೇಕೆಂತ ಗವರ್ನಮೆಂಟ್ ಆಫ್ ಇಂಡಿಯಾದವರನ್ನು ಕೇಳಲು ಅವಕಾಶವಿರುತ್ತೆ. ಈಗ ಸಭೆಯ ಮುಂದೆ ಬಂದಿರುವ ಠರಾವನ್ನು ಪಾಸ್‌ಮಾಡಿದರೇನೂ ಪ್ರಯೋಜನವಿಲ್ಲ.

ಠರಾವು ಓಟಿಗೆ ಹಾಕಿ ಮಂಜೂರಾಗಲಿಲ್ಲ. (ಇದಕ್ಕೆ ಪರವಾಗಿ, ೧ ಮ॥ ಪಿ. ಟಿ. ಕುಶಾಲಪ್ಪನವರು, ೨ ಮ॥ ಎನ್. ವೆಂಕಟಯ್ಯನವರು, ೩ ಮ॥ ಎನ್. ಸುಬ್ಬಯ್ಯನವರು, ೪ ಮ॥ ಪಿ. ಗಣಪಯ್ಯನವರು, ೫ ಮ॥ ಎಂ. ಎಂ. ಚಿಣ್ಣಪ್ಪನವರು, ೬ ಮ॥ ಕೆ. ಚಿಣ್ಣಪ್ಪನವರು, ೭ ಮ॥ ಬಿ. ಕಾಳಪ್ಪನವರು, ಮತ್ತು ೮ ಮ॥ ಪಿ. ಬೆಳ್ಯಪ್ಪನವರು ಮಾತ್ರ ಓಟು ಕೊಟ್ಟರು)

೭ ನೇ ಠರಾವು

ಮ॥ ಬಿ. ಶ್ರೀಪತಿರಾಯರು.

"ಫಾರೆಸ್ಟ್ ಇಲಾಖೆಯಲ್ಲಿ ಸರಕಾರದವರೇ ಮರ ಕಡಿದು ಸಾಗಿಸುವ ಮುಂತಾದ ಖರ್ಚಿಗಾಗಿ ಇಟ್ಟಿರುವ ೧,೫೪,೦೦೦ ರೂಪಾಯಿಯಲ್ಲಿ ೧೦,೦೦೦ ರೂ. ಕಡಿಮೆ ಮಾಡಬೇಕು" ಎಂಬ ಠರಾವನ್ನು ಸಭೆಯ ಮುಂದೆ ತರುವಾಗ ಹೇಳಿದ್ದೇನೆಂದರೆ;—ಈ ಬಾಬಿನ ಖರ್ಚು ಕಳೆದ ವರ್ಷಕ್ಕಿಂತ ಕಡಿಮೆಮಾಡಲಾಗಿದೆಯೆಂದು ಒಪ್ಪುತ್ತೇನೆ. ಆದರೂ ಈ ಬಾಬಿನ ಅನೇಕ ಐಟಮ್‌ಗಳನ್ನು ನಾವು ಆಲೋಚಿಸಬೇಕಾಗಿದೆ. ಈ ಕಾಮಗಾರಿಯ ಹಿಂದಿನ ಚರಿತ್ರೆಯನ್ನು ಸ್ವಲ್ಪ ಹೇಳಬೇಕಾಗಿದೆ. ಈ ಬಾಬಿನಲ್ಲಿ ಕೆಲಸ ನಡೆಯುವದು ಮಾವುಕೂಟದಲ್ಲಿ ಆಗಿರುತ್ತೆ. ಪ್ರಕೃತ ಪಶ್ಚಿಮಘಟ್ಟಗಳಲ್ಲಿ ಇರುವದಾಗಿದೆ. ವಿಧವಿಧವಾದ ಮತ್ತು ದೊಡ್ಡ ಮರಗಳುಳ್ಳ ಬೆಟ್ಟಗಳುಳ್ಳ ಜಾಗವಾಗಿದೆ. ಈ ದೊಡ್ಡ ಕಾಮಗಾರಿಯು ಪ್ರಾರಂಭವಾಗುವ ಮುಂಚೆ ಶ್ಯಗದ ತೋಪು, ಬಿದುರಿನ ತೋಪು ಮಾತ್ರ ಇದ್ದ ಚಿಕ್ಕ ಸ್ಟೇಷನ್ನಾಗಿಯಿತ್ತು. ಅಲ್ಲದೆ ಮರವನ್ನು ಚಿಕ್ಕ ವ್ಯಾಪಾರಿಗಳಿಗೆ ಮಾರಾಟಮಾಡುತ್ತಿದ್ದರು. ಮಾವುಕೂಟದಿಂದ ಆಕಾಲದಲ್ಲಿ ಸ್ವಲ್ಪವಾದರೂ ಫಾಯಿದೆಯೇ ಇರುತ್ತಿತ್ತು. ಯುದ್ಧದ ಕಾಲದಲ್ಲಿ ಆಕಾಶವಿಮಾನ ಕಟ್ಟಲು ಯೋಗ್ಯವಾದ ಮರ ಬೇಕಾಗಿ ಬಂತು. ಈ ಭಾಗದಲ್ಲಿದ್ದ ಧೂಪ ಎಂಬ ಮರವು ಆ ಕೆಲಸಕ್ಕೆ ಯೋಗ್ಯವಾದದ್ದೆಂತ ತಿಳಿದುಬಂತು. ಆಗ ಮುಖ್ಯ ಫಾರೆಸ್ಟ್ ಆಫೀಸರಾಗಿದ್ದ ಮ॥ ಟ್ರೈರ್‌ಮ್ಯಾನ್ ಸಾಹೇಬರ ಶಿಫಾರಸಿನ ಮೇರೆ ಇಂಡಿಯಾ ಸರಕಾರವು ತುಂಬಾ ಹಣವನ್ನು ಮಂಜೂರ್‌ಮಾಡಿತು. ಬೆಟ್ಟಗಳಲ್ಲಿ ಇರುವ ಮರಗಳನ್ನು ಸಾಗಿಸಲಿಕ್ಕೆ ಬೆಟ್ಟಗಳಿಗೇನೇ ಟ್ರಾಮುವೇ ಹಾಕಬೇಕೆಂತ ತೋರಿ ನಿಡುಮಾಳದವರೆಗೂ ಟ್ರಾಮು ಹಾಕಲು ಕೆಲಸ ಪ್ರಾರಂಭಿಸಿದರು. ಮರ ಎಷ್ಟೆಷ್ಟು ಎಲ್ಲೆಲ್ಲಿ ಸಿಕ್ಕಬಹುದೆಂಬ ಪ್ಲಾನ್ ಮಾಡಲಿಲ್ಲ. ಎಷ್ಟು ಮರ ಪ್ರಮಾಣವಾಗಿ ಬರುವದೆಂಬ ಅಂದಾಜು ಸಹ ಮಾಡದಿಲ್ಲ. ಟ್ರಾಮು ಕೆಲಸವನ್ನು ಬಹಳ ತ್ವರೆಯಿಂದ ಪ್ರಾರಂಭಿಸಿ ಜಾಗ್ರತೆಮಾಡಬೇಕೆಂಬುದಕ್ಕಾಗಿ ಬೇರೆ ಕಡೆ ಸಾಗಿಸುವ ನಿಡುಮಾಳದವರೆಗೆ ಟ್ರಾಮು ಹಾಕಬೇಕೆಂದು ಬೇಡಿಕೊಂಡು ಎಂಬುದನ್ನು ಯೋಚಿಸಲಿಲ್ಲ. ಟ್ರಾಮು ತಯಾರಾಗುವ ಮುಂಚೆ ಎಲ್ಲಾ ಭಾಗಗಳಲ್ಲಿ ಮರಗಳನ್ನು ಕಡಿದು ಉರುಳಿಸಿದರು. ಈಗಲೂ ಎಲ್ಲೆಲ್ಲಿ ನೋಡಿದರೂ ತುಂಬಾ ತೋಟಗಳು ಕಾಣುತ್ತವೆ. ಅವನ್ನು ಸಾಗಿಸಲು ಏನೂ ಪ್ರಯತ್ನಮಾಡಲಿಲ್ಲ. ಸಾಮ್ರಾಜ್ಯದ ಉಪಯೋಗಕ್ಕೆ ಹಲವರೇ ಇಲ್ಲ. ಕೆಲಸ ಪ್ರಾರಂಭಿಸುವ ಮುಂಚೆ ಸ್ಥಳವನ್ನು ನೋಡದೆಯೂ, ಏನೇನೂ ಕಷ್ಟ ಬರಬಹುದು ಎಂಬುದನ್ನು ಯೋಚಿಸದೆಯೂ ಕೆಲಸವನ್ನು ಕೈಕೊಂಡಿದ್ದಾರೆ. ಅದ್ದರಿಂದ ಆರಂಭದಲ್ಲೇ ಮುಂದಾಲೋಚನೆ ಕಮ್ಮಿಯಾಯಿತು. ಈಗ ಆದುಹೋದದ್ದಕ್ಕೆ ವ್ಯಸನಪಟ್ಟು ಪ್ರಯೋಜನವಿಲ್ಲ. ಇಂಡಿಯಾ ಸರಕಾರದವರು ಎಕ್ಸ್‌ಪರ್ಟುಗಳ ಹೇಳಿಕೆಮೇಲೆ ಮಾಡಿದ್ದು. ಎಕ್ಸ್‌ಪರ್ಟುಗಳು ಒಬ್ಬರಮೇಲೊಬ್ಬರು ಬಂದು ತಮ್ಮ ಅಭಿಪ್ರಾಯವನ್ನು ಹೇಳಿದರು. ಆದರೆ ಅವರ ಅಭಿಪ್ರಾಯವನ್ನು ಜಾರಿಗೆತರಲು ಸಮಯವಿರಲಿಲ್ಲ. ಈಗಲೂ ಎಕ್ಸ್‌ಪರ್ಟುಗಳ ಆಲೋಚನೆಯು ಕಾರ್ಯತಃ ಸಫಲವಾಗಲಿಲ್ಲ.

ಕೆಲವು ವಿಷಯಗಳನ್ನು ತಿಳಿಯಲಿಕ್ಕಾಗಿ ಒಂದು ಸವಾಲ್ ಹಾಕಿದ್ದೆ. ಅದಕ್ಕೆ ಜವಾಬು ಸಿಕ್ಕದ್ದರಿಂದ ನಾನು ಹೇಳಲಿಕ್ಕೆ ಇರುವದನ್ನೆಲ್ಲಾ ಹೇಳಲು ಅವಕಾಶವಿಲ್ಲದಾಗಿದೆ. ಆದರೆ ತಿಳಿದ ಸಂಗತಿಗಳಮೇಲೆ ಮಾತಾಡುತ್ತೇನೆ. ಮಾಡಿದ ಕೆಲಸ ಹಾಳುಮಾಡಬೇಕೆಂತಲ್ಲ, ಆದರಿಂದ ಪ್ರಯೋಜನವಾಗುವಂತೆ ಮಾಡಬೇಕೆಂಬ ಅಭಿಪ್ರಾಯದಿಂದ ನಾನು ಆಕ್ಷೇಪಿಸುವದಾಗಿದೆ. ಈಚೆಗೆ ಅಲ್ಲಿಗೆ ಹೋಗಿ ಮಾಡುವ ಖರ್ಚನ್ನೆಲ್ಲಾ ಮತ್ತು ಯಂತ್ರಗಳ ಮತ್ತು ಇತರ ಸಾಧನಗಳ ಮೂಲಕ ಮರಸಾಗಿಸಲು ಮಾಡುವ ಕೆಲಸಗಳನ್ನು ನೋಡಿಬಂದೆ. ಟ್ರೋಪ್ ಕೆಲಸವೇ ನಿಂಗೆ ಬಿಟ್ಟು ನಾಮದಾರ್ ಮೆಂಬರು ಹೇಳಿದಂತೆ ಬೇರೆ ಆಲೋಚನೆ ಅದರೂ ಆಗುವಷ್ಟು ಪ್ರಯೋಜನಮಾಡಿಕೊಳ್ಳಬೇಕಾಗಿದೆ. ಕೆಲವು ಕಾಲದವರೆಗೆ ಮುಂದೊರೆಯಲೆಂದು ಸ್ಥಳಕ್ಕೆ ಟ್ರಾಮ್ವೇ ಮಾಡಿಸಿದ್ದಾಗಿದೆ. ಟ್ರಾಮ್ವೇಗೆ ಯಾವಾಗಲೂ ಅಪಾಯವಾಗಬಹುದಾದ ಮತ್ತು ಕಷ್ಟಸಾಧ್ಯವಾದ ಸ್ಥಳಕ್ಕೆ ಟ್ರಾಮ್ವೇ ಮಾಡಿರುವದಾಗಿದೆ. ಇದನ್ನು ಮಾಡಲು ತುಂಬಾ ಖರ್ಚಾಗಬಹುದಾದ ಸ್ಥಳಕ್ಕೆ ಮಾಡಿಸಿದ್ದಾಗಿದೆ. ಇನ್ನೊಂದು ಕಡೆಗೆ ಹಾಕಿದ್ದರೆ ನಿಡುಮಾಳದಲ್ಲಿ ಹೆಚ್ಚು ಮರ ಇರುವ ಕಡೆಗೆ ಹೋಗ ಬಹುದಾಗಿತ್ತು. ಹಾಗೂ ಆಗಿಹೋಗಿದೆ. ಅದ್ದರಿಂದ ಮಾಡುವ ಕೆಲಸದಲ್ಲಿ ಪ್ರಯೋಜನವಿಲ್ಲದ ಕೆಲವು ಕೆಲಸಗಳನ್ನು ಮಾಡಬಾರದೆಂಬುದೇ ನನ್ನ ಉದ್ದೇಶವಾಗಿದೆ. ಮರಗಳನ್ನು ಟ್ರಾಮ್ವೇ ಲೈನಿಗೆ ಕೋಣಗಳಿಂದಲೂ ಬೇರೆ ಸಾಧನಗಳಿಂದಲೂ ತಂದು ಟ್ರಾಮ್‌ನಲ್ಲಿ ಕಾನ್ನೊತ್ತಿಗೆ ಸಾಗಿಸಿ ಅಲ್ಲಿ ಅವುಗಳನ್ನು ಜೋಡಿಸಿ ಇಟ್ಟುಕೊಂಡು ಒಬ್ಬಪಟ್ಟಕ್ಕೆ ಹೊಳೆಯಲ್ಲಿ ತೇಲಿಸಿ ತೆಗೆದುಕೊಂಡು ಹೋಗುತ್ತಾರೆ. ಈ ಕೆಲಸಗಳಿಗೆ ತುಂಬಾ ಹಣ ಇಟ್ಟಿದ್ದಾರೆ. ಇಷ್ಟೆಲ್ಲಾ ಬೇಕೋ ಎಂಬ ಸಂಶಯಬರುತ್ತೆ. ಮರಗಳನ್ನು ಟ್ರಾಮ್ವೇಗೆ ತರಲಿಕ್ಕೆ ಆನೆಗಳೂ ಕೋಣಗಳೂ ಇರುವಾಗ ತುಂಬಾ ಖರ್ಚುಮುಟ್ಟಿಸಿ ಒಂದು ಟ್ರ್ಯಾಕ್ಟರನ್ನು ತಂದು ಇಟ್ಟಿದ್ದಾರೆ. ಕಳೆದ ವರ್ಷದ ಬಜೆಟ್ಟಿನಲ್ಲಿ ಟ್ರ್ಯಾಕ್ಟರ್ ಟ್ರಕ್ಸ್ ಮುಂತಾದ್ದನ್ನು ಕೊಳ್ಳಲಿಕ್ಕೆ ೧೫,೦೦೦ ರೂ. ಇಟ್ಟಿದ್ದಾರೆ. ಇದರಲ್ಲಿ ಟ್ರ್ಯಾಕ್ಟರಿಗೆ ಎಷ್ಟು ಖರ್ಚಾಗಿದೆಯೆಂಬುದು ಗೊತ್ತಿಲ್ಲ. ಪಶ್ಚಿಮಘಟ್ಟಗಳಲ್ಲಿ ಎಷ್ಟರಮಟ್ಟಿಗೆ ಪ್ರಯೋಜನವಾದೀತೆಂಬದನ್ನು ಇನ್ನು ನೋಡಬೇಕಷ್ಟೆ. ಒಳ್ಳೇ ಯಂತ್ರವಾಗಿರಬಹುದು. ಆದರೆ ಕೆಲಸನಡಿಸಲಿಕ್ಕೆ ತುಂಬಾ ಖರ್ಚುಮುಟ್ಟುತ್ತೆ. ದಿನಸಕ್ಕೆ ೩೫ ರಿಂದ ೪೦ ಗ್ಯಾಲನ್ ಪೆಟ್ರೋಲ್ ಖರ್ಚಾಗುತ್ತೆ. ಕೆಲಸ ತಿಳಿದವರೇ ಅದನ್ನು ನಡಿಸಲಿಕ್ಕೆ ಬೇಕು. ಇಷ್ಟೆಲ್ಲಾ ಖರ್ಚುಮುಟ್ಟಿಸಿದರೆ ಪ್ರಯೋಜನವಾಗುವದು ಎಷ್ಟು? ಈ ಸವಾಲಿಗೆ ಜವಾಬು ಸಿಕ್ಕಬೇಕಷ್ಟೆ. ನನಗೆ ಈ ಕೆಲಸ ತಿಳಿಯದು. ಆದರೆ ಫಾರೆಸ್ಟ್ ಮೆಂಬರು ಜವಾಬುಕೊಟ್ಟಾರೆಂತ ನಂಬುತ್ತೇನೆ. ಅದರ ಉಪಯೋಗವು ಬಹಳ ಕಡಿಮೆ ಇರಬಹುದೆಂತ ನನಗೆ ತೋರುತ್ತೆ. ಇದರ ಬದಲಿಗೆ ಇಂಡಿಯಾದಲ್ಲಿ ಬಹುಪುರಾತನ ಕಾಲದಿಂದಲೂ ಕೆಲಸಮಾಡುತ್ತಿರುವ ನಾಲ್ಕು ಕಾಲಿನ ಟ್ರ್ಯಾಕ್ಟರು ಆನೆ ಏಕೆ ಅಲ್ಲ? ಅದು ಕರೀದು, ಅದ್ದರ ಸಾಕೆಂತ ನನಗೆ ತೋರುತ್ತೆ. ಇದು ನಾವು ಹೇಳಿದಂತೆ ಕೇಳುತ್ತೆ. ಯಾವಾಗ ಕರೆದರೂ ಕೆಲಸಕ್ಕೆ ತಯಾರಿರುತ್ತೆ. ಇಲಾಖೆಯಲ್ಲಿರುವ ಆನೆಗಳು ಸಾಲದಿದ್ದರೆ ಜಮ್ಮಾಗಳಿಂದ ಬಾಡಿಗೆಗೆ ತೆಗೆದುಕೊಳ್ಳಬಹುದು. ಈಗಲೂ ಬಾಡಿಗೆ ಆನೆಗಳು ಕೆಲಸಮಾಡುತ್ತವೆಯೆಂತ ತೋರುತ್ತೆ. ಯಂತ್ರಗಳಿಗಿಂತ ಆನೆಗಳ ಉಪಯೋಗದಿಂದ ಉತ್ತಮ. ಯೂರೋಪಿನಿಂದ ಬಂದ ಎಕ್ಸ್‌ಪರ್ಟ್ ಕೆಲಸಗಾರರಿಂದ ನಡಿಸಲ್ಪಟ್ಟರೂ, ಅವರಿಗೆ ಅಷ್ಟು ಪ್ರಯೋಜನವಿಲ್ಲ.

ಟ್ರ್ಯಾಕ್ಟರ್ ಮಾಡಿಸಲು ಕೋರಿಯೊಂದು ಇದೆ. ಇದಕ್ಕೆ ೪೦,೦೦೦ ರೂ. ಖರ್ಚಾಗಿದೆ. (ಮ॥ ವಿಂಚೆಸ್ಟರ್ ಸಾಹೇಬರು ಕೋರಿಗೆ ೨೪,೦೦೦ ರೂ. ಮಾತ್ರ ಖರ್ಚಾದದ್ದು ಎಂತ ಹೇಳಿದರು) ಆಗಲೀ, ಅದರೂ ನನ್ನ ವಾದಕ್ಕೆ ವ್ಯತ್ಯಾಸವಾಗಲಿಲ್ಲ. ಅದರ ಪ್ರಯೋಜನವನ್ನು ಕೇಳುವಾಗ ನೀರಿನಿಂದ ಮರ ತೇಲಿಸಲು ಸಾಧ್ಯವಿಲ್ಲದಿರುವಾಗ ಕಾನ್ನೊತ್ತಿನಿಂದಲೂ ಕೆಳಕ್ಕೆ ಸಾಗಿಸಲು ಬೇಕಾಗುತ್ತೆಂತ ತಿಳಿಸಿದರು. ಒಳ್ಳೆಯ ಅಭಿಪ್ರಾಯವೇ. ತೇಲಿಸಲಿಕ್ಕೆ ಸಾಧ್ಯವಾಗದೆ ಹೋದೀತೇ? ಹೊಳೆಯಲ್ಲಿ ತೇಲಿಸಿದರೆ ಒಬ್ಬಪಟ್ಟಕ್ಕೆ ಮುಟ್ಟುತ್ತೆ. ತೊಂದರೆ ಬಂದಾಗ ಬೇಕಾಗಬಹುದು. ಆದರೆ ಅದಕ್ಕಾಗಿ ಇಷ್ಟು ದೊಡ್ಡ ಖರ್ಚು ಮುಟ್ಟಿಸಿ ಇದನ್ನು ಇಟ್ಟುಕೊಳ್ಳಬೇಕೋ? ಅದು ಈ ಮಾವುಕೂಟದಿಂದ ಪ್ರಯೋಜನವಾಗದೆ ಇರುವಾಗ; ತುಂಬಾ ಲಾಭವಾಗುತ್ತಿದ್ದದ್ದರೆ ಇದನ್ನೆಲ್ಲಾ ಹೇಳುತ್ತಿರಲಿಲ್ಲ. ಅಸ್ತಿತಿಗೆ ಇನ್ನೂ ಒಂದಿಲ್ಲ. ಮಾರಾಟದ ಇಲಾಖೆಯು ನಷ್ಟದಲ್ಲೇ ಕೆಲಸಮಾಡುತ್ತಿದೆಯೆಂತ ತೋರುತ್ತೆ. ಮಾರಾಟಕ್ಕೆ ಒಪ್ಪಂದ ಮಾತುಗಳು ನಡಿಯುತ್ತಿವೆಯಷ್ಟೆ. ಲಾಭವಾಗುವ ಭರವಸೆ ಇಲ್ಲದೆ ಇರುವಾಗ, ಕಷ್ಟಕಾಲಕ್ಕೆ ಮಾತ್ರ ಬೇಕಾಗುವ ಈ ಯಂತ್ರಗಳನ್ನೆಲ್ಲಾ ಇಟ್ಟುಕೊಳ್ಳಬೇಕೇ? ನನಗೆ ತಿಳಿದ ಮಟ್ಟಿಗೆ ಟ್ರ್ಯಾಕ್ಟರಿನಿಂದ ಪ್ರಯೋಜನವಿಲ್ಲ. ನಾನು ಪಶ್ಚಿಮಘಟ್ಟವನ್ನು ನೋಡಿದವನೆ. ಇಲಾಖೆಯ ಮಾಲೀಕನಾಗಿದ್ದೇನೆ. ಅಲ್ಲಿನ ಕಷ್ಟಗಳೂ ಅಸಾಧ್ಯ ಬೆಟ್ಟಗಳೂ ನನಗೆ ಗೊತ್ತಿದೆ. ಕೆಲವು ಕಡೆಗಳಲ್ಲಿ ೩೦೦ ರಿಂದ ೩೫೦ ಇಂಚು ಮಳೆ ಬೀಳುತ್ತೆ. ಅಂಥಾ ಸಮಯದಲ್ಲಿ ಟ್ರ್ಯಾಕ್ಟರಾಗಲೀ ಯಾವದೇ ಆಗಲೀ ಕೆಲಸಕ್ಕೆ ಬರಲಿಕ್ಕಿಲ್ಲ. ಇಂಥಾ ಸ್ಥಳಕ್ಕೆ ಆನೆಯೇ ಆಗಬೇಕಷ್ಟೆ. ಈ ಮಿಶನ್‌ಗಳನ್ನು ಪ್ಲೇನ್ ಫಾರೆಸ್ಟಿನಲ್ಲಿ ಉಪಯೋಗಿಸಬಹುದು. ಇದೂ ಆಗದಿದ್ದರೆ ಕ್ರಯ ಬಂದರೆ ಮಾರಿಬಿಡಬಹುದು. ಇದೂ ಆಗದಿದ್ದರೆ ಅವಕ್ಕಾಗಿ ಒಂದು ಕಾಸು ಸಹ ಖರ್ಚುಮಾಡಬಾರದು.

ಇನ್ನೂ ಒಂದು ವಿಷಯ ಹೇಳಬೇಕೆಂದಿದ್ದೇನೆ. ಈ ಕಾಮಗಾರಿಯಿಂದ ಪ್ರಯೋಜನವಾಗುತ್ತೋ ಎಂಬ ವಿಷಯದಲ್ಲಿ ಸಂದೇಹವಿದೆ. ಚೆನ್ನಾಗಿ ಆಲೋಚಿಸುವ ಅವಶ್ಯವಿದೆ. ಆಲೋಚಿಸಿ ಫಲಿತಾಂಶವನ್ನು ಈ ಸಭೆಯ ಮುಂದೆ ಇಟ್ಟಹೊರತು ಯಾವ ಒಪ್ಪಂದವನ್ನೂ ಮಾಡಬಾರದು. ಮುಂದ ಕಾರ್ಯನೆಯನ್ನು ಸ್ಥಾಪಿಸುವ ವಿಷಯದಲ್ಲಿ ಆಲೋಚನೆ ನಡೆಯುತ್ತಾ ಇದೆ ಎಂತ ತಿಳಿಯುತ್ತೇನೆ. ಇದು ದೊಡ್ಡ ಕೆಲಸವಾಗಿದೆ. ಪ್ರಯೋಜನವಾಗುವಂತೆ ಮಾಡಿಕೊಳ್ಳಬೇಕಾಗಿದೆ. ಎಕ್ಸ್‌ಪರ್ಟುಗಳ ಹೇಳಿಕೆಮೇರೆ ಬೇರೆ ಕೆಲಸ ನಡಿಯುವದಾದರೂ ಈ ಒಪ್ಪಂದವು ಆಗುವ ಮುಂಚೆ ಈ ಸಭೆಯ ಅಭಿಪ್ರಾಯ ತೆಗೆದುಕೊಳ್ಳಬೇಕೆಂತ ಫಾರೆಸ್ಟ್ ಆಫೀಸರನ್ನು ನಾನು ಕೇಳಿಕೊಳ್ಳುತ್ತೇನೆ. ಸಭೆಯು ಸಹಾಯ ತೋರಿಸೀತೆಂತ ನನಗೆ ನಂಬಿಕೆ ಇದೆ. ಇಂಡಿಯಾ ಸರಕಾರದಿಂದ ನಮಗೆ ಈ ಮಾವುಕೂಟದ ಕಾಮಗಾರಿಯು ಸಿಕ್ಕಿರುವದಾಗಿದೆ. ಇದರಿಂದ ದೇಶಕ್ಕೆ ಏನಾದರೂ ಪ್ರಯೋಜನವಾಗುವಂತೆ ಮಾಡಿಕೊಳ್ಳಬೇಕು. ಅಯ್ಯೋ, ಕಾಬ್ ಸಾಹೇಬರ ಕಾಲದಲ್ಲಿ ಒಂದು ವಿದ್ಯಾ ಕಾನ್ಫರೆನ್ಸ್ ನಡೆಯಿತು. ಅದರಲ್ಲಿ ವಿದ್ಯಾಭಿವೃದ್ಧಿ ಆರೋಗ್ಯಸಾಧನೆಗೂ ಮಾವುಕೂಟದ ಹಣ ಬಂದನಂತರ ಹಾಕೋಣಬಹುದೆಂತ ಹೇಳಿದರು. ಈ ಇಲಾಖೆಗಳು ಬಾಯಿಬಿಟ್ಟುಕೊಂಡೇ ಇದ್ದಾರೆ. ಹಣ ಬರುವದರಲ್ಲಿಯೇ ಇದೆ. ಅದ್ದರಿಂದ ಫಾರೆಸ್ಟ್ ಆಫೀಸರು ಮಾರಾಟದ ಒಪ್ಪಂದಮಾಡುವ ಮುಂಚೆ ಈ ಸಭೆಯ ಮಂಜೂರಾತಿ ಪಡೆಯುವದು ಅವಶ್ಯ. ಈ ಬಾಬಿನಲ್ಲಿ ಇನ್ನೂ ಖರ್ಚು ಕಡಿಮೆಮಾಡಿ ಅವಶ್ಯವಿದ್ದಾಗ ಹೆಚ್ಚಿಸಿಕೊಳ್ಳಬಹುದು. ಈ ಇಲಾಖೆಯ ಆಡಳಿತದಲ್ಲಿ ಈ ಸಭೆಯಿಂದ ಒಂದು ಕಮಿಟಿಯನ್ನು ನೇಮಿಸಿಕೊಂಡು ಅವರನ್ನು ಸೇರಿಸಿಕೊಂಡೇ ಕೆಲಸನಡಿಸಬೇಕೆಂದ ನನ್ನ ಕೋರಿಕೆ. ಇದು ಖಾನೂನಿಗೆ ವಿರೋಧವಾಗಿರಬಹುದು. ರೂಲ್ಸುಗಳಲ್ಲಿ ಅದಕ್ಕೆ ಅವಕಾಶವಿಲ್ಲ. ಆದರೂ ಸರಕಾರದವರು ಈರೀತಿ ಜನರ ಪ್ರತಿನಿಧಿಗಳನ್ನು ಆಡಳಿತದಲ್ಲಿ ಸೇರಿಸಿಕೊಂಡರೆ ನಮ್ಮ ಜನರಿಗೆ ಮಾವುಕೂಟದಲ್ಲಿರುವ ಅತೃಪ್ತಿಯು ಹೋಗುತ್ತೆ. ಈ ಮಾತುಗಳಿಂದ ಠರಾವನ್ನು ಸಭೆಯ ಒಪ್ಪಿಗೆ ತಂದಿದ್ದೇನೆ.

ಮ॥ ಎ. ಬಿ. ಬೆಂಗಪ್ಪನವರು ಅನುಮೋದಿಸಿದರು.

ಮ॥ ಎ. ಎಫ್. ವಿಂಚೆಸ್ಟರ್ ಸಾಹೇಬರು.

ಅಧ್ಯಕ್ಷರೇ, ನಾಮದಾರ್ ಮೆಂಬರು ಹೇಳಿದ್ದಕ್ಕೆ

ಕೊಡಗು ಕೌನ್ಸಿಲು ಮೀಟಿಂಗು.

ನನ್ನ ಸಹಾನುಭೂತಿ ಇದೆ. ಒಹುದಾಜೆಯಿಂದ ಭಾಷಣವನ್ನು ಕೇಳಿದೆವು. ಅವರಿಗೆ ತಿಳಿಯಬೇಕಾದ ವಿಷಯಗಳು ತಿಳಿಸಲು ಸಾಧ್ಯವಾಗದ್ದಕ್ಕೆ ವಿಷಸನಗೊಳ್ಳುತ್ತೇನೆ. ಕೌನ್ಸಿಲ್ ಸೆಕ್ರೆಟರಿಯವರ ಮೂಲಕ ಅವರಿಗೆ ಬೇಕಾದ ಸಂಗತಿಗಳನ್ನು ತಿಳಿಸಿದ್ದೇನೆ. ಟ್ರ್ಯಾಕ್ಟರಿನ ಪ್ರಯೋಗದ ವಿಷಯ ತುಂಬಾ ಹೇಳಿದರು. ಮೆ|| ಸಿ. ಎಂ. ವೆಂಕಪ್ಪಯ್ಯನವರ ರಾವಿನಲ್ಲೂ ಇದೇ ವಿಷಯವಿದೆ. ಆ ವಿಷಯದಲ್ಲಿ ನಾನು ಹೇಳತಕ್ಕದ್ದನ್ನು ಮುಂದಿನ ದಲ್ಲಿ ಹೇಳುತ್ತೇನೆ. ಮಾರಾಟ ಶಾಖೆಯ ಲೆಕ್ಕಗಳನ್ನು ಪರಿಶೀಲಿಸುವದಕ್ಕಾಗಿ ಈ ರಾವು ಚರ್ಚೆಗೆ ಬಂದದ್ದಾಗಿರಬೇಕು. ನಾನು ಮಾನ್ಯ ಮೆಂಬರುಗಳಿಗೆ ಸಿಗುವಂತೆ ಒಂದು ವಿವರಣೆಯನ್ನು ತಯಾರಿಸಿಕೊಟ್ಟಿದ್ದೇನೆ. ಅದನ್ನು ಬರಹಾಗಿ ಪ್ರಕಟಿಸಿದ್ದಕ್ಕೆ ಕ್ಷಮಿಸಿ. ಹೆಚ್ಚಿಗೆ ಪ್ರತಿಗಳನ್ನು ಛಾಪಿಸಿ ಎಲ್ಲರಿಗೂ ದೊರಕುವಂತೆ ಮಾಡುತ್ತೇನೆ.

"ಫಾರೆಸ್ಟ್ ಇಲಾಖೆಯಲ್ಲಿ ಸರಕಾರದವರೇ ಮರ ಕಡಿದು ಸಾಗಿಸುವ ಮುಂತಾದ ಖರ್ಚಿಗಾಗಿ ಇಟ್ಟಿರುವ ೧,೩೫,೦೦೦ ರೂಪಾಯಿಯಲ್ಲಿ ೧೦,೦೦೦ ರೂ. ಕಡಿಮೆ ಮಾಡಬೇಕು" ಎಂಬ ಠರಾವನ್ನು ಸಭೆಯ ಮುಂದೆ ತರುವಾಗ ಹೇಳಿದ್ದೇನೆಂದರೆ,—ಈ ಬಾಬಿನ ಖರ್ಚು ಕಳೆದ ವರ್ಷಕ್ಕಿಂತ ಕಡಿಮೆಮಾಡಲಾಗಿದೆಯೆಂತ ಒಪ್ಪುತ್ತೇನೆ. ಆದರೂ ಈ ಬಾಬಿನ ಅನೇಕ ಐಟಮ್‌ಗಳನ್ನು ನಾವು ಅಜಮಾಯಿಸಬೇಕಾಗಿದೆ. —ಕಾಮಗಾರಿಯ ಹಿಂದಿನ ಚರಿತ್ರೆಯನ್ನು ಸ್ವಲ್ಪ ಹೇಳಬೇಕಾಗಿದೆ. ಈ ಬಾಬಿನಲ್ಲಿ ಹೆಚ್ಚು ಕೆಲಸ ನಡಿಯುವದು ಮಾಪುಕುಟದಲ್ಲಿ ಆಗಿರುತ್ತೆ. ಮಾಪುಕುಟವು ಪಶ್ಚಿಮಘಟ್ಟಗಳಲ್ಲಿ ಇರುವದಾಗಿದೆ. ಭವಿಧಂಘಟ್ಟ(?) ಮತ್ತು ಮೆದುವಾದ ಮರಗಳುಳ್ಳ ದೊಡ್ಡಕಾಡುಗಳಿರುವ ಜಾಗವಾಗಿದೆ. ಈ ದೊಡ್ಡಕಾಮಗಾರಿಯು ಪ್ರಾರಂಭವಾಗುವ ಮುಂಚೆ ತ್ಯಾಗದತೋಪು ಬಿದುರಿನತೋಪು ಮಾತ್ರ ಇದ್ದ ಚಿಕ್ಕ ಸ್ಟೇಷನ್ನಾಗಿಯಿತ್ತು. ಅಲ್ಲದೆ ಮರವನ್ನು ಚಿಕ್ಕವ್ಯಾಪಾರಿಗಳಿಗೆ ಮಾರಾಟಮಾಡುತ್ತಿದ್ದರು. ಮಾಪುಕುಟದಿಂದ ಆ ಕಾಲದಲ್ಲಿ ಸ್ವಲ್ಪವಾದರೂ ಫಾಯಿದೆಯೇ ಇರುತ್ತಿತ್ತು. ಯುದ್ಧದ ಕಾಲದಲ್ಲಿ ಆಕಾಶವಿಮಾನ ಕಟ್ಟಲು ಯೋಗ್ಯವಾದ ಮರ ಬೇಕಾಗಿ ಬಂತು. ಈ ಭಾಗದಲ್ಲಿದ್ದ ಪೂನ ಎಂಬ ಮರವು ಈ ಕೆಲಸಕ್ಕೆ ಯೋಗ್ಯವಾದದ್ದೆಂತ ತಿಳಿದುಬಂತು. ಆಗ ಮುಖ್ಯ ಫಾರೆಸ್ಟ್ ಆಫೀಸರಾಗಿದ್ದ ಮಿ॥ ಟ್ರೈರ್‌ಮ್ಯಾನ್ ಸಾಹೇಬರ ಶಿಫಾರಿಸಿನಮೇರೆ ಇಂಡಿಯಾ ಸರಕಾರವು ತುಂಬಾ ಹಣವನ್ನು ಮಂಜೂರ್‌ಮಾಡಿತು. ಬೆಟ್ಟಗಳಲ್ಲಿ ಇರುವ ಮರಗಳನ್ನು ಸಾಗಿಸಲಿಕ್ಕೆ ಬೆಟ್ಟಗಳಿಗೇನೇ ಟ್ರಾಮುವೇ ಹಾಕಬೇಕೆಂತ ತೋರಿ ನದಿಯ ಮೂಲದವರೆಗೂ ಟ್ರಾಮು ಹಾಕುವ ಕೆಲಸ ಪ್ರಾರಂಭಿಸಿದರು. ಮರ ಎಷ್ಟೆಷ್ಟು ಎಲ್ಲೆಲ್ಲಿ ಸಿಕ್ಕಬಹುದೆಂಬ ಧ್ಯಾನ್‌ಮಾಡಲಿಲ್ಲ. ಎಷ್ಟು ಮರ ಮಾರಾಟವಾಗಬಹುದೆಂಬ ಅಂದಾಜು ಸಹ ಮಾಡಲಿಲ್ಲ. ಟ್ರಾಮುವೇ ಕೆಲಸವನ್ನು ಬಹಳ ತ್ವರೆಯಿಂದ ಮಾಡಿದರು. ಜಾಗ್ರತೆಮಾಡಬೇಕೆಂಬದಕ್ಕಾಗಿ ಬೋನಸ್ ಸಹ ಕೊಟ್ಟರು. ನದಿಯ ಮೂಲದವರೆಗೆ ಟ್ರಾಮುವೇ ಹಾಕಬೇಕೆಂದು ಬೇಡವೋ ಎಂಬುದನ್ನು ಯೋಚಿಸಲಿಲ್ಲ. ಟ್ರಾಮುವೇ ತಯಾರಾಗುವ ಮುಂಚೆ ಕಡಿದ ಎಷ್ಟೋ ಬೆಲೆಬಾಳುವ ಮರಗಳನ್ನು ಕಡಿದು ಬಿಸಾಕಿದರು. ಈಗಲೂ ಎಲ್ಲೆಲ್ಲಿ ನೋಡಿದರೂ ಬಿದ್ದಿರುವ ತುಂಡುಗಳು ಕಾಣುತ್ತವೆ. ಅವನ್ನು ಸಾಗಿಸಲು ಏನೂ ಪ್ರಯತ್ನಮಾಡಲಿಲ್ಲ. ಸಾಮ್ರಾಜ್ಯದ ಉಪಯೋಗಕ್ಕೆ ತಿಳಿವಳಿಕೆ ಇಲ್ಲ. ಕೆಲಸ ಪ್ರಾರಂಭಿಸುವ ಮುಂಚೆ ಸ್ಥಳವನ್ನು ನೋಡದೆಯೂ, ಏನೇನೂ ಕಷ್ಟವಿರಬಹುದು ಎಂಬುವನ್ನು ಯೋಚಿಸದೆಯೂ ಕೆಲಸವನ್ನು ಕೈಕೊಂಡಿದ್ದಾರೆ. ಆದ್ದರಿಂದ ಆರಂಭದಲ್ಲೇ ದುಂದುಖರ್ಚು ತಕ್ಕಾಗಾಯಿತು. ಬಳಿಕ ಹೋದ್ದಕ್ಕೆ ವ್ಯಸನಪಟ್ಟು ಪ್ರಯೋಜನವಿಲ್ಲ. ಇಂಡಿಯಾ ಸರಕಾರದವರು ಎಕ್ಸ್‌ಪರ್ಟುಗಳ ಹೇಳಿಕೆಮೇಲೆ ಮಾಡಿದ್ದು. ಎಕ್ಸ್‌ಪರ್ಟುಗಳು ಒಬ್ಬರಮೇಲೊಬ್ಬರು ಬಂದು ತಮ್ಮ ಅಭಿಪ್ರಾಯವನ್ನು ಹೇಳಿದರು. ಆದರೆ ಅವರ ಅಭಿಪ್ರಾಯವನ್ನು ಜಾರಿಗೆತರಲು ಸಮಯವಿರಲಿಲ್ಲ. ಈಗಲೂ ಎಕ್ಸ್‌ಪರ್ಟುಗಳ ಆಲೋಚನೆಯು ಕಾರ್ಯತಃ ಸಫಲವಾಗಲಿಲ್ಲ.

ಕೆಲವು ವಿಷಯಗಳನ್ನು ತಿಳಿಯಲಿಕ್ಕಾಗಿ ಒಂದು ಸವಾಲ ಹಾಕಿದ್ದೆ. ಅದಕ್ಕೆ ಜವಾಬು ಸಿಕ್ಕದ್ದರಿಂದ ನಾನು ಹೇಳಲಿಕ್ಕೆ ಇರುವವನ್ನೆಲ್ಲಾ ಹೇಳಲು ಅವಕಾಶವಿಲ್ಲದಾಗಿದೆ. ಆದರೆ ತಿಳಿದ ಸಂಗತಿಗಳಮೇಲೆ ಮಾತಾಡುತ್ತೇನೆ. ಮಾಡಿದ ಕೆಲಸ ಹಾಳುಮಾಡಬೇಕೆಂತಲ್ಲ. ಅದರಿಂದ ಪ್ರಯೋಜನವಾಗುವಂತೆ ಮಾಡಬೇಕೆಂಬ ಅಭಿಪ್ರಾಯದಿಂದ ನಾನು ಆಕ್ಷೇಪಿಸುವದಾಗಿದೆ. ಈಚೆಗೆ ಅಲ್ಲಿಗೆ ಹೋಗಿ ಮಾಡುವ ಖರ್ಚನ್ನೆಲ್ಲಾ ಮತ್ತು ಯಂತ್ರಗಳ ಮತ್ತು ಇತರ ಸಾಧನಗಳ ಮೂಲಕ ಮರಸಾಗಿಸಲು ಮಾಡುವ ಕೆಲಸಗಳನ್ನು ನೋಡಿಬಂದೆ. ಭಲೋಕೆಲಸವೇ. ನಿಂಗೆ ಒಬ್ಬ ನಾಮದಾರ್ ಮೆಂಬರು ಹೇಳಿದಂತೆ ಬಿಳೀ ಆನೆಯೇ. ಆದರೂ ಆಗುವಷ್ಟು ಪ್ರಯೋಜನಮಾಡಿಕೊಳ್ಳಬೇಕಾಗಿದೆ. ಕೆಲವು ಕಾಲದವರೆಗೆ ಮಾರಿದ್ದೊರೆಯ(?) ಲಾರಿದ ಸ್ಥಳಕ್ಕೆ ಟ್ರಾಮ್ವೇ ಮಾಡಿಸಿದ್ದಾಗಿದೆ. ಟ್ರಾಮ್ವೇಗೆ ಯಾವಾಗಲೂ ಅಪಾಯವಾಗಬಹುದಾದ ಮತ್ತು ಕಷ್ಟಸಾಧ್ಯವಾದ ಸ್ಥಳಕ್ಕೆ ಟ್ರಾಮ್ವೇ ಮಾಡಿರುವದಾಗಿದೆ. ಇಷ್ಟನ್ನು ಮಾಡಲು ತುಂಬಾ ಖರ್ಚಾಗಬಹುದಾದ ಸ್ಥಳಕ್ಕೆ ಮಾಡಿಸಿದ್ದಾಗಿದೆ. ಇನ್ನೊಂದು ಕಡೆಗೆ ಹಾಕಿಸಿದ್ದರೆ ಕಡಿಮೆಖರ್ಚಿನಲ್ಲಿ ಹೆಚ್ಚು ಮರ ಇರುವ ಕಡೆಗೆ ಹೋಗುತ್ತಿತ್ತು. ಹ್ಯಾಗೂ ಆಗಿಹೋಗಿದೆ. ಆದ್ದರಿಂದ ಮಾಡುವ ಕೆಲಸದಲ್ಲಿ ಪ್ರಯೋಜನವಿಲ್ಲದ ಕೆಲವು ಕೆಲಸಗಳನ್ನು ಮುನ್ನ ಮಾಡಬೇಕೆಂಬುದೇ ನನ್ನ ಇರಾದೆಯಾಗಿದೆ. ಮರಗಳನ್ನು ಟ್ರಾಮ್ವೇ ಲೈನಿಗೆ ಕೋಣಗಳಿಂದಲೂ ಬೇರೆ ಸಹಾಯದಿಂದಲೂ ತಂದು ಟ್ರಾಮುನಲ್ಲಿ ಕೂನೆಕ್ಷನ್ನಿಗೆ ಸಾಗಿಸಿ ಅಲ್ಲಿ ಅವುಗಳನ್ನು ಜೋಡಿಸಿ ಇಟ್ಟುಕೊಂಡು ಬಲ್ಲಪಟ್ಟಣಕ್ಕೆ ಹೊಳೆಯಲ್ಲಿ ತೇಲಿಸಿ ತೆಗೆದುಕೊಂಡು ಹೋಗುತ್ತಾರೆ. ಈ ಕೆಲಸಗಳಿಗೆ ತುಂಬಾ ಹಣ ಇಟ್ಟಿದ್ದಾರೆ. ಇಷ್ಟೆಲ್ಲಾ ಬೇಕೋ ಎಂಬ ಸಂಶಯಬರುತ್ತೆ. ಮರಗಳನ್ನು ಟ್ರಾಮ್ವೇಗೆ ತರಲಿಕ್ಕೆ ಆನೆಗಳೂ ಕೋಣಗಳೂ ಇರುವಾಗ ಎಂಬಾ ಖರ್ಚುಮುಟ್ಟಿಸಿ ಒಂದು ಟ್ರಾಕ್ಟರನ್ನು ತಂದು ಇಟ್ಟಿದ್ದಾರೆ. ಕಳೆದ ವರ್ಷದ ಬಜೆಟ್ಟಿನಲ್ಲಿ ಟ್ರಾಕ್ಟರ್ ಟ್ರಕ್ಕ್ ಮುಂತಾದ್ದನ್ನು ಕೊಳ್ಳಲಿಕ್ಕೆ ೧೫,೦೦೦ ರೂ. ಇಟ್ಟಿದ್ದಾರೆ. ಇದರಲ್ಲಿ ಟ್ರಾಕ್ಟರಿಗೆ ಎಷ್ಟು ಖರ್ಚಾಗಿದೆಯೆಂಬುದು ಗೊತ್ತಿಲ್ಲ. ಪಶ್ಚಿಮಘಟ್ಟಗಳಲ್ಲಿ ಎಷ್ಟರಮಟ್ಟಿಗೆ ಪ್ರಯೋಜನವಾದೀತೆಂಬದನ್ನು ಇನ್ನು ನೋಡಬೇಕಷ್ಟೆ. ಒಳ್ಳೆ ಯಂತ್ರವಾಗಿರಬಹುದು. ಅದರ ಕೆಲಸಮಾಡಿಸಲಿಕ್ಕೆ ತುಂಬಾ ಖರ್ಚುಮುಟ್ಟುತ್ತೆ. ದಿವಸಕ್ಕೆ ೨೫ ರಿಂದ ೩೦ ಗ್ಯಾಲನ್ ಪೆಟ್ರೋಲ್ ಖರ್ಚಾಗುತ್ತೆ. ಕೆಲಸ ತಿಳಿದವರೇ ಅದನ್ನು ನಡಿಸಲಿಕ್ಕೆ ಬೇಕು. ಇಷ್ಟೆಲ್ಲಾ ಖರ್ಚುಮುಟ್ಟಿಸಿದರೆ ಪ್ರಯೋಜನವಾಗುವದು ಎಷ್ಟು? ಈ ಸವಾಲಿಗೆ ಜವಾಬುಸಿಕ್ಕಬೇಕಷ್ಟೆ. ನನಗೆ ಈ ಕೆಲಸ ತಿಳಿಯದು. ಆದರೆ ಫಾರೆಸ್ಟ್ ಮೆಂಬರು ಜವಾಬುಕೊಟ್ಟರೆಂತ ನಂಬುತ್ತೇನೆ. ಅದರ ಉಪಯೋಗವು ಬಹಳ ಕಡಿಮೆ ಇರಬಹುದೆಂತ ನನಗೆ ತೋರುತ್ತೆ. ಇವರ ಒಡವೆ(?) ಇಂಡಿಯಾದಲ್ಲಿ ಬಹುಪ್ರಾಂತಗಳ ಕಾಡಿನಲ್ಲಿ ಕೆಲಸಮಾಡುತ್ತಿರುವ ನಾಲ್ಕು ಕಾಲಿನ ಟ್ರಾಕ್ಟರು ಆನೆ ಇವೇ ಇದ್ದಲ್ಲಿ ಕರೀದು, ಇದ್ದರೆ ಸಾಕೆಂತ ನನಗೆ ತೋರುತ್ತೆ. ಇದು ನಾವು ಹೇಳಿದಂತೆ ಕೇಳುತ್ತೆ. ಯಾವಾಗ ಬೇಕಾದರೂ ಕೆಲಸಕ್ಕೆ ತಯಾರಿರುತ್ತೆ. ಇಲಾಖೆಯಲ್ಲಿರುವ ಆನೆಗಳು ಸಾಲದಿದ್ದರೆ ಜಮ್ಮಗಳಿಂದ ಬಾಡಿಗೆಗೆ ತೆಗೆದುಕೊಳ್ಳಬಹುದು. ಈಗಲೂ ಬಾಡಿಗೆ ಆನೆಗಳು ಕೆಲಸಮಾಡುತ್ತಿವೆಯೆಂತ ತೋರುತ್ತೆ. ಯಂತ್ರಗಳಿಗಿಂತ ಆನೆಗಳು ಬಹುಕಾಲದಿಂದ ಇತ್ತವು. ಯೂರೋಪಿನಿಂದ ಬಂದ ಎಕ್ಸ್‌ಪರ್ಟು ಕೆಲಸಗಾರರಿಂದ ನಡಿಸಲ್ಪಟ್ಟರೂ, ಖರ್ಚಿಗೆ ತಕ್ಕ ಪ್ರಯೋಜನವಿಲ್ಲ.

ಟ್ರಾಕ್ಟರ್ ಮಶಿನಿಯು ಲೋರಿಯೊಂದು ಇದೆ. ಇದಕ್ಕೆ ೫೦,೦೦೦ ರೂ. ಖರ್ಚಾಗಿದೆ (ಮಿ॥ ವಿ. ನರ್ಸ್ ಸಾಹೇಬರು ಲೋರಿಗೆ ೨೫೦೦೦ ರೂ. ಮಾತ್ರ ಖರ್ಚಾದದ್ದು ಎಂತ ಹೇಳಿದರು) ಆಗಲೀ, ಅದರೂ ನನ್ನ ವಾದಕ್ಕೆ ವ್ಯತ್ಯಾಸವಾಗಲಿಲ್ಲ. ಅದರ ಪ್ರಯೋಜನವನ್ನು ಕೇಳುವಾಗ ನೀರಿನಿಂದ ಮರ ತೇಲಿಸಲು ಸಾಧ್ಯವಿಲ್ಲದಿರುವಾಗ ಇಂಜಿನ್ನಿನಿಂದಲೂ ಕಳಕ್ಕೆ ಸಾಗಿಸಲು ಬೇಕಾಗುತ್ತೆಂತ ತಿಳಿಸಿದರು. ಒಳ್ಳೆಯ ಅಭಿಪ್ರಾಯವೇ. ತೇಲಿಸಲಿಕ್ಕೆ ಸಾಧ್ಯವಾಗದೆ ಹೋದೀತೋ? ಹೊಳೆಯಲ್ಲಿ ತೇಲಿಸಿದರೆ ಒಬ್ಬಟ್ಟಕ್ಕೆ ಮುಟ್ಟುತ್ತೆ. ತೊಂದರೆ ಒಂದಾಗ ಬೇಕಾಗಬಹುದು. ಆದರೆ ಅದಕ್ಕಾಗಿ ಇಷ್ಟು ದೊಡ್ಡ ಖರ್ಚು ಮುಟ್ಟಿಸಿ ಇದನ್ನು ಇಟ್ಟುಕೊಳ್ಳಬೇಕೋ? ಇದು ಈ ಮಾಪುಕುಟದಿಂದ ಪ್ರಯೋಜನವಾಗದೆ ಇರುವಾಗ ತುಂಬಾ ಲಾಭವಾಗುತ್ತಿದ್ದದ್ದರೆ ಇದನ್ನೆಲ್ಲಾ ಹೇಳುತ್ತಿರಲಿಲ್ಲ. ಆಸ್ತಿಗೆ ಇನ್ನೂ ಒಂದಿಲ್ಲ. ಮಾರಾಟದ ಇಲಾಖೆಯು ನಷ್ಟದಲ್ಲೇ ಕೆಲಸಮಾಡುತ್ತಿದೆಯೆಂತ ತೋರುತ್ತೆ. ಮಾರಾಟಕ್ಕೆ ಒಪ್ಪಂದ ಮಾತುಗಳು ನಡೆಯುತ್ತಿವೆಯಷ್ಟೆ. ಲಾಭವಾಗುವ ಭರವಸೆ ಇಲ್ಲದೆ ಇರುವಾಗ, ಅಷ್ಟಕ್ಕೆ ಮಾತ್ರ ಬೇಕಾಗುವ ಈ ಯಂತ್ರಗಳನ್ನೆಲ್ಲಾ ಇಟ್ಟುಕೊಳ್ಳಬೇಕೇ? ನನಗೆ ತಿಳಿದ ಮಟ್ಟಿಗೆ ಟ್ರಾಕ್ಟರಿನಿಂದ ಪ್ರಯೋಜನವಿಲ್ಲ. ನಾನು ಪಶ್ಚಿಮಘಟ್ಟವನ್ನು ನೋಡಿದವನೆ. ಇಲಾಖೆಮಲೆಯ ಮಾಲೀಕನಾಗಿದ್ದೇನೆ. ಅಲ್ಲಿನ ಕಷ್ಟಗಳೂ ಅಸಂಖ್ಯಬೆಟ್ಟಗಳೂ ನನಗೆ ಗೊತ್ತಿದೆ. ಕೆಲವು ಕಡೆಗಳಲ್ಲಿ ೨೫೦ ರಿಂದ ೩೫೦ ಇಂಚು ಮಳೆಬೀಳುತ್ತೆ. ಅಂಥಾ ಸಮಯದಲ್ಲಿ ಟ್ರಾಕ್ಟರಾಗಲೀ ಯಾವದೇ ಆಗಲೀ ಕೆಲಸಕ್ಕೆ ಬರಲಿಕ್ಕಿಲ್ಲ. ಇಂಥಾ ಸ್ಥಳಕ್ಕೆ ಆನೆಯೇ ಆಗಬೇಕಷ್ಟೆ. ಈ ಮಿಶನ್‌ಗಳನ್ನು ಪೂರ್ವ ಫಾರೆಸ್ಟಿನಲ್ಲಿ ಉಪಯೋಗಿಸಬಹುದು. ಇದೂ ಆಗದಿದ್ದರೆ ಕ್ರಯ ಬಂದರೆ ಮಾರಿಬಿಡಬಹುದು. ಇದೂ ಆಗದಿದ್ದರೆ ಬನಕ್ಕಾಗಿ ಬೇರೆ ಕಾಸು ಸಹ ಖರ್ಚುಮಾಡಬಾರದು.

ಇನ್ನೂ ಒಂದು ವಿಷಯ ಹೇಳಬೇಕಾಗಿದ್ದೇನೆ. ಈ ಕಾಮಗಾರಿಯಿಂದ ಪ್ರಯೋಜನವಾಗುತ್ತೋ ಎಂಬ ವಿಷಯದಲ್ಲಿ ಸಂದೇಹವಿದೆ. ಚೆನ್ನಾಗಿ ಅಜಮಾಯಿಸುವ ಆವಶ್ಯವಿದೆ. ಅಜಮಾಯಿಸಿ ಫಲಿತಾಂಶವನ್ನು ಈ ಸಭೆಯ ಮುಂದೆ ಇಟ್ಟಿದಿನಹ ಯಾವ ಒಪ್ಪಂದವನ್ನೂ ಮಾಡಬಾರದು. ಮರದ ಕಾರ್ಖಾನೆಯನ್ನು ಸ್ಥಾಪಿಸುವ ವಿಷಯದಲ್ಲಿ ಆಲೋಚನೆ ನಡೆಯುತ್ತಾ ಇದೆ ಎಂತ ತಿಳಿಯುತ್ತೇನೆ. ಇದು ದೊಡ್ಡ ಕೆಲಸವಾಗಿದೆ. ಪ್ರಯೋಜನವಾಗುವಂತೆ ಮಾಡಿಕೊಳ್ಳಬೇಕಾಗಿದೆ. ಎಕ್ಸ್‌ಪರ್ಟುಗಳ ಹೇಳಿಕೆಮೇರೆ ಬೇರೆ ಕೆಲಸ ನಡಿಯುವದಾದರೂ ಈ ಒಪ್ಪಂದವು ಆಗುವ ಮುಂಚೆ ಈ ಸಭೆಯ ಅಭಿಪ್ರಾಯ ತೆಗೆದುಕೊಳ್ಳಬೇಕೆಂತ ಫಾರೆಸ್ಟ್ ಆಫೀಸರನ್ನು ನಾನು ಕೇಳಿಕೊಳ್ಳುತ್ತೇನೆ. ಸಭೆಯು ನಮ್ಮನ್ನು ಘೋತಿತೋರಿಸೀತೆಂತ(?) ನನಗೆ ನಂಬಿಕೆ ಇದೆ. ಇಂಡಿಯಾ ಸರಕಾರದಿಂದ ನಮಗೆ ಈ ಮಾಪುಕುಟದ ಕಾಮಗಾರಿಯು ಸಿಕ್ಕುವದಾಗಿದೆ. ಇದರಿಂದ ದೇಶಕ್ಕೆ ಏನಾದರೂ ಪ್ರಯೋಜನವಾಗುವಂತೆ ಮಾಡಿಕೊಳ್ಳಬೇಕು. ಆದ್ದರಿಂದ, ಕಂಬ್ ಸಾಹೇಬರ ಕಾಲದಲ್ಲಿ ಒಂದು ವಿದ್ಯಾ ಕಾನ್ಫರೆನ್ಸ್ ನಡೆಯಿತು. ಅದರಲ್ಲಿ ವಿದ್ಯಾಭಿವೃದ್ಧಿ ಆರೋಗ್ಯಸಾಧನೆಗೂ ಮಾಪುಕುಟದ ಹಣ ಒಂದು ದಿನಂತರ ಉಪಯೋಗಿಸಬಹುದೆಂತ ಹೇಳಿದರು. ಈ ಇಲಾಖೆಗಳು ಬಾಯಿಬಿಟ್ಟುಕೊಂಡೇ ಇದ್ದಾರೆ. ಹಣ ಬರುವದರಲ್ಲಿಯೇ ಇವೆ. ಇಂಥ ಫಾರೆಸ್ಟ್ ಆಫೀಸರು ಕಾರವಾರದ(?) ಒಪ್ಪಂದಮಾಡುವ ಮುಂಚೆ ಈ ಸಭೆಯ ಮಂಜೂರಾತಿ ಪಡೆಯುವದು ಅವಶ್ಯ. ಈ ಬಾಬಿನಲ್ಲಿ ಇನ್ನೂ ಖರ್ಚು ಕಡಿಮೆಮಾಡಿ ಅವಶ್ಯವಿದ್ದಾಗ ಹೆಚ್ಚು ಸಿಕ್ಕಬಹುದು. ಈ ಇಲಾಖೆಯು ಲಾಭಕರವಾಗುವದರಲ್ಲಿ ಈ ಸಭೆಯಿಂದ ಒಂದು ಕಮಿಟಿಯನ್ನು ನೇಮಿಸಿಕೊಂಡು ಅವರನ್ನು ಸೇರಿಸಿಕೊಂಡೇ ಕೆಲಸನಡಿಸಬೇಕೆಂತ ನನ್ನ ಕೋರಿಕೆ. ಇದು ಬಿಸಿನೆಸಿಗೆ ಸರಿಯಾಗಿರಬಹುದು. ದಾಖಲೆಗಳಲ್ಲಿ ಇದಕ್ಕೆ ಅವಕಾಶವಿಲ್ಲ. ಆದರೂ ಸರಕಾರದವರು ಈರೀತಿ ಜನರ ಪ್ರತಿನಿಧಿಗಳನ್ನು ಆಡಳಿತದಲ್ಲಿ ಸೇರಿಸಿಕೊಂಡರೆ ನನ್ನ ಇಂಟೆರೆಸ್ಟುಗಳಿಗೆ ಮಾಪುಕುಟದಲ್ಲಿರುವ ಆಕ್ಷೇಪಣೆಯು ಹೋಗುತ್ತೆ. ಈ ಮಾತುಗಳಿಂದ ಠರಾವನ್ನು ಸಭೆಯು ಒಪ್ಪಿಗೆ ತಂದಿದ್ದೇನೆ.

ಮಿ॥ ಎ. ಬಿ. ಚೆಂಗಪ್ಪನವರು ಅನುಮೋದಿಸಿದರು.

ಮಿ. ಎ. ಎಸ್. ಮಿಂಚಿನ್‌ಸಾಹೇಬರು

ಅಧ್ಯಕ್ಷರೇ, ನಾಮದಾರ್ ಮೆಂಬರು ಹೇಳಿದ್ದಕ್ಕೆ

ಕೊಡಗು ಕೌನ್ಸಿಲು ಮೀಟಿಂಗು.

ನನ್ನ ಸಹಾನುಭೂತಿ ಇದೆ. ಬಹುರುಚಿಯಾದ ಭಾಷಣವನ್ನು ಕೇಳಿದೆವು. ಅವರಿಗೆ ತಿಳಿಯಬೇಕಾದ ವಿಷಯಗಳು ತಿಳಿಸಲು ಸಾಧ್ಯವಾಗದ್ದಕ್ಕೆ ವ್ಯಸನಪಡುತ್ತೇನೆ. ಕೌನ್ಸಿಲ್ ಸೆಕ್ರೆಟರಿಯವರ ಮೂಲಕ ಅವರಿಗೆ ಬೇಕಾದ ಸಂಗತಿಗಳನ್ನು ತಿಳಿಸಿದ್ದೇನೆ. ಟ್ರಾಕ್ಟರಿನ ಪ್ರಯೋಜನದ ವಿಷಯ ತುಂಬಾ ಹೇಳಿದರು. ಮೆ|| ಸಿ. ಎನ್. ವೆಂಕಟಯ್ಯನವರ ಠರಾವಿನಲ್ಲೂ ಇದೇ ವಿಷಯವಿದೆ. ಆವಿಷಯದಲ್ಲಿ ನಾನು ಹೇಳತಕ್ಕದ್ದನ್ನು ಹಿಂದಿನಿಂದ ಹೇಳುತ್ತೇನೆ. ಮಾಕೂಟ ಕಾಮಗಾರಿಯ ತತ್ವಗಳನ್ನು ಮಾಡಿಸುವುದಕ್ಕಾಗಿ ಈ ಠರಾವು ಚರ್ಚೆಗೆ ತಂದದ್ದಾಗಿರಬೇಕು. ನಾಮಧಾರಿ ಮೆಂಬರುಗಳಿಗೆ ಸಿಕ್ಕುವಂತೆ ಒಂದು ವಿವರಣೆಯನ್ನು ತಯಾರಿಸಿಕೊಟ್ಟಿದ್ದೇನೆ. ಅದನ್ನು ಬರಟಾಗಿ ಜೋಡಿಸಿದ್ದಕ್ಕೆ ಕ್ಷಮಿಸಿ. ಹೆಚ್ಚಿಗೆ ಪ್ರತಿಗಳನ್ನು ಛಾಪಿಸಿ ಎಲ್ಲರಿಗೂ ದೊರಕುವಂತೆ ಮಾಡುತ್ತೇನೆ.

ಮೊದಲಿನಿಂದ ಎಕ್ಸ್‌ಪರ್ಟ್‌ಗಳ ಆಲೋಚನೆಗೆ ಸರಿಯಾಗಿಯೇ ಕೆಲಸ ಮಾಡಿರುವದೆಂತ ಠರಾವನ್ನು ಸಭೆಯ ಮುಂದೆ ತಂದವರೇ ಹೇಳಿದ್ದಾರೆ. ದುಂದುಖರ್ಚು ಮಾಡುತ್ತಿದ್ದಾರೆಂಬ ತಪ್ಪು ಅಭಿಪ್ರಾಯವನ್ನು ತಿದ್ದಬೇಕಾಗಿದೆ. ಮೆಂಬರುಗಳಿಗೆ ವಿಷಯವೆಲ್ಲಾ ಚೆನ್ನಾಗಿ ತಿಳಿಯಬೇಕಾದರೆ ಸ್ವಲ್ಪ ಸಮಯ ಬೇಕಾದೀತು. ಆದ್ದರಿಂದ ಇಲ್ಲಿ ಉದ್ದವಾಗಿ ವಿವರಿಸುವದಿಲ್ಲ. ಈಗ ಆಗಿರುವದೇನು? ಪ್ರಾರಂಭದ ಖರ್ಚಿಗೆ ೯ ಯಾ ೧೦ ಲಕ್ಷ ರೂಪಾಯಿ ಖರ್ಚಾಗಿರುತ್ತೆ. ಠರಾವು ತಂದ ಮೆಂಬರು ಆಗಿಹೋದ್ದಕ್ಕೆ ವ್ಯಸನಪಡಬೇಕಾಗಿದೆಯೆಂತ ಹೇಳಿದ್ದಾರೆ. ಆದ್ದರಿಂದ ಹಿಂದಿನ ಚರಿತೆಯನ್ನು ಇಲ್ಲಿ ವಿವರಿಸುವದಿಲ್ಲ. ಒಳ್ಳೆಪಟ್ಟಣಕ್ಕೆ ಮರ ಸಾಗಿಸಲಿಕ್ಕೆ ಏರ್ಪಾಡು ಪೂರ್ತಿಯಾಗಿದೆ. ೧೯೩೩ ರಿಂದ ಮರ ಸಾಗಿಸುವ ಖರ್ಚಿನ ದರ ಬಹಳ ಕಡಿಮೆಮಾಡಲ್ಪಟ್ಟಿದೆ. ಆದ್ದರಿಂದ ಪಿರ್ಯಾದಿಗೆ ಕಾರಣವಿಲ್ಲ. ಟೆಂಡರ್ ನೋಟೀಸ್ ಕೊಟ್ಟದ್ದಕ್ಕೆ ಬಂದ ಕಾಗದಗಳು ಸರಕಾರದವರ ಮುಂದೆ ಇದೆ. ಫಾಯಿದೆಯಾಗುವ ಒಪ್ಪಂದವನ್ನು ಈ ಸಭೆಯಮುಂದೆ ತರಲು ಸಾಧ್ಯವಾದೀತೆಂತ ನಂಬಿದ್ದೇನೆ. ಸ್ಥಿರವಿಲ್ಲದೆ ಇರುವ ವಿದ್ಯಮಾನಗಳಿರುವದರಿಂದ ನ್ಯಾಯವಾದ ಅಂದಾಜಿನಮೇಲೆಯೇ ಬಿಟ್ಟುಹಾಕಬೇಕಾಗಿದೆ. ೧೯೩೪ನೇ ಇಸವಿಯನಂತರ ಮರವನ್ನು ಕ್ರಮವಾಗಿ ಕೊಡಲು ಬೇಕಾದ ಏರ್ಪಾಡುಗಳನ್ನು ಭದ್ರಪಡಿಸುತ್ತಿದ್ದೇನೆ. ಮರ ಕ್ರಮವಾಗಿ ಕೊಡಲು ನಾವು ಸಿದ್ಧರಾಗಿರಬೇಕು. ಒಪ್ಪಂದದ ವಾದವಿವಾದಗಳು ಕೆಲವು ಸಮಯ ತೆಗೆದುಕೊಳ್ಳುವದಾದರೆ ಬಜೆಟ್ಟಿನಲ್ಲಿ ಇಟ್ಟಿರುವಷ್ಟು ಹಣ ಖರ್ಚುಮಾಡಬೇಕಾಗಲಾರದು. ಇದು ಖಂಡಿತವಾಗಿದ್ದರೆ ಮೆ|| ಶ್ರೀಪತಿರಾಯರ ಠರಾವನ್ನು ಒಪ್ಪಿಕೊಳ್ಳಲು ನನ್ನಿಂದ ಆಕ್ಷೇಪಣೆ ಇರುತ್ತಿರಲಿಲ್ಲ. ಗರಗಸದ ಕಾರ್ಖಾನೆಯ ಒಪ್ಪಂದವು ಜಾಗ್ರತೆಆಗಬೇಕು. ಯಾಕೆಂತ ನನ್ನನ್ನು ಕೇಳಬಹುದು. ಮರವನ್ನು ಸಾಮಾನುಗಳಾಗಿ ಮಾಡಿ ಮಾರುವ ಏರ್ಪಾಡುಮಾಡಿದ ವಿನಹ ನಮ್ಮ ಹಣದ ಬಡ್ಡಿ ಹುಟ್ಟಲಾರದು. ತಿಳಿದವರು ನಮಗೆ ಆಲೋಚನೆ ಕೊಟ್ಟಿರುವದು ಹೀಗೆಯೇ ಆಗಿದೆ. ಬರೇ ಮೂಲ ಉತ್ಪತ್ತಿಯನ್ನೇ ಮಾಡಿದರೆ ಪ್ರಯೋಜನವಾಗಲಾರದು. ತುಂಬಾಲಾಭವಾಗಬಹುದೆಂತ ನನಗೆ ನಂಬಿಕೆಯಾಗಿದೆ. ಸರಕಾರಕ್ಕೂ ಕಂಪೆನಿಗೂ ಒಂದೇತರದ ಅಭಿರುಚಿ ಹುಟ್ಟುವಂಥ ಪಾಲುವಂತಿಗೆ ಒಪ್ಪಂದ ಮಾಡಿಕೊಳ್ಳಬೇಕೆಂತ ನಮ್ಮ ಆಶೆಯಾಗಿದೆ. ನಮ್ಮ ಮರಕ್ಕೆ ಯಾವಾಗಲು ಅತ್ಯುತ್ತಮ ಬೆಲೆ ಬರುವಂತೆ ಮಾಡಿಕೊಳ್ಳುವದು ಸಾಧ್ಯವಿದೆ. ವ್ಯಾಪಾರಸ್ಥರು ಐದು ವರ್ಷದಿಂದ [illegible] ಇಷ್ಟೆಲ್ಲಾ ದೊಡ್ಡ ಹಣವನ್ನು ಖರ್ಚುಮಾಡಿದ್ದಕ್ಕೆ ತಕ್ಕ ಪ್ರಯೋಜನವಾಗುವದೆಂತ ನಂಬಿಗೆ ಮಾಡಿಕೊಂಡಿದ್ದಾರೆ. ಅವರಿಗೆ ಮರವು ಬೇಕಾದಷ್ಟು ಕ್ರಮವಾಗಿ ಹಣಕ್ಕೆ ನ್ಯಾಯವಾಗಿ ಬಡ್ಡಿ ಸಿಕ್ಕುವ ದರದಲ್ಲಿ ಮರದ ಸರಬರಾಯಿ ಆಗುತ್ತಾ ಇರಬೇಕೆನ್ನುತ್ತಾರೆ. ನನ್ನ ವಿವರಣೆಯಿಂದ ನಿಮಗೆ ತಿಳಿಯುವದು ಏನಂದರೆ— ಮಾಕೂಟದ ಪ್ರಾಂತ್ಯದಲ್ಲಿ ೩ ಲಕ್ಷ ಟನ್ ಮರವಿದೆ. ೧೫ ವರ್ಷದವರೆಗೆ ವರ್ಷಕ್ಕೆ ೧೫ ಸಾವಿರ ಟನ್ ಮರ ಕೊಡುತ್ತಾ ಬರಬಹುದು. ಈ ಲೆಖ್ಖವನ್ನು ಸರಿಯಾಗಿ ಹಾಕುವದಾಗಿದೆ ಇದನ್ನು ನಂಬಬಹುದು. ವರ್ಷಕ್ಕೆ ೩ ಸಾವಿರ ಟನ್ ಮರ ಕೊಡಲು ನಾವು ತಯಾರಿದ್ದರೆ ನಮ್ಮ ಸರಕಾರದ ಹಣಕ್ಕೆ ತಕ್ಕಷ್ಟು ಬಡ್ಡಿ ದೊರತೀತೆಂತ ನಾನು ನಿರೀಕ್ಷಿಸುತ್ತೇನೆ. ಈ ಕೆಲಸವು ನಡೆದರೆ ಬಜೆಟ್ಟಿನಲ್ಲಿ ನಾವು ಇಟ್ಟಿರುವ ಹಣವೆಲ್ಲಾ ಖರ್ಚಿಗೆ ಬೇಕಾದೀತು. ಅಷ್ಟೊಂದು ಅವಶ್ಯವಿಲ್ಲದ ಅನೇಕಬಾಬ್ತುಗಳನ್ನು ವಜಾಮಾಡಿ, ಬಜೆಟ್ ಸಮತೂಕ ಆಗಬೇಕೆಂತ ಪ್ರಯತ್ನಿಸಿರುತ್ತೇನೆ. ಆದ್ದರಿಂದ ಠರಾವನ್ನು ಅಂಗೀಕರಿಸಲು ಆಗುವದಿಲ್ಲ. ಫಾರೆಸ್ಟ್ ಆಡಳಿತ [illegible] ನಡೆಸುವ ತತ್ವ ಯಾವದಿರಬೇಕೆಂಬದನ್ನು ಹೇಳುತ್ತೇನೆ. ಠರಾವು ತಂದವರ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಫಾರೆಸ್ಟಿನ ಆಡಳಿತದ ತತ್ವ ಕೊಡಗಿನ ಜನರು ಒಪ್ಪುವ ತತ್ವವಾಗಿರಬೇಕು. ಅವರ ಅಭಿಪ್ರಾಯವು ತಪ್ಪಾಗಿದ್ದರೆ ಅದು ತಪ್ಪೆಂತ ತೋರಿಸಲು ಪ್ರಯತ್ನಿಸುತ್ತೇನೆ. ನನ್ನ ಆಶೆಯು ಸಾಧ್ಯವಾಗುವದು ಕಷ್ಟವೆಂತ ತೋರಬಹುದು. ಈ ಇಲಾಖೆಯೇ ಜನರ ಪ್ರೀತಿಗೆ ಪಾತ್ರವಾಗಿಲ್ಲ. ಕೆಲವು ವರ್ಷಗಳಿಂದಲೇ ರೈತರ ಪ್ರಯೋಜನಕ್ಕೆ ಬೇಕಾದ ಹಣವನ್ನೆಲ್ಲಾ ಮಾಕೂಟಕ್ಕೆ ಹಾಕುತ್ತಾ ಬಂದದ್ದರಿಂದ ಜನರ ಅತೃಪ್ತಿಯು ಹೆಚ್ಚಲು ಕಾರಣವಾಯಿತು. ಆದರೆ ಸರಿಯಾಗಿ ಈ ವಿಷಯವನ್ನು ತಿಳಿದುಕೊಳ್ಳುವದು ಸ್ವಲ್ಪ ಕಷ್ಟ. ಇನ್ನು ಮುಂದೆ ಫಾರೆಸ್ಟ್ ಉತ್ಪತ್ತಿಯೇ ಸರಕಾರದ ಮುಖ್ಯ ಉತ್ಪತ್ತಿಯಾಗಿರುತ್ತೆ. ಗಂಧದಮೇಲೆ ನೆಚ್ಚಿಕೊಂಡು ಇರಲು ಸಾಧ್ಯವಿಲ್ಲ. ಈಗಿನ ಒಳ್ಳೇ ಕ್ರಯವು ನಿಂತೀತೆಂಬ ಭರವಸೆಇಲ್ಲ. ಆಗ ಬೇರೆ ಯಾವ ಉತ್ಪತ್ತಿಯಿದೆ? ಬಹು ನಾಮಧಾರಿ ಮೆಂಬರು ಪೆನ್ಸಿಲ್ ಕಾರ್ಖಾನೆ, ಬೆಂಕಿಕಡ್ಡಿ ಕಾರ್ಖಾನೆ, ಎಲೆಕ್ಟ್ರಿಕ್ ಯಂತ್ರ ಎಲ್ಲಾ ಆಗಬೇಕೆಂತ ಹೇಳಿದರು. ಇದಕ್ಕೆಲ್ಲಾ ನನ್ನ ಸಹಾನುಭೂತಿಯೂ ಇದೆ. ಪರೀಕ್ಷಿಸಿ ನೋಡಲೂಬಹುದು. ಇದರಿಂದ ಗೊಂಡಾರಣ್ಯಗಳ ಸಹಾಯಬೇಕಾಗಿದೆ. ಅದರ ಉತ್ಪತ್ತಿ ಹೆಚ್ಚುವಂತೆಯೇ ಗಂಧವನ್ನು ಕೀಳುವದು ಕಮ್ಮಿ ಮಾಡಬಹುದು. ಫಾರೆಸ್ಟಿನ ಇತರ ಬಾಬುಗಳ ಉತ್ಪತ್ತಿಯನ್ನು ಬೆಳಸುತ್ತಿರುವಾಗ ಗಂಧವನ್ನು ಹೆಚ್ಚಾಗಿ ಕಿತ್ತದ್ದು ಸಕಾರಣವೆ. ಗಂಧವನ್ನು ಹೆಚ್ಚಾಗಿ ಕಿತ್ತು ಬಂದ ಉತ್ಪತ್ತಿಯಿಂದ ಉತ್ಪತ್ತಿ ಹೆಚ್ಚಿಸಬಹುದಾದರೂ ವಿದ್ಯೆ ಮುಂತಾದ ಬಾಬುಗಳಿಗೆ ಖರ್ಚುಮಾಡಿದರೆ ಒಪ್ಪತಕ್ಕದ್ದಲ್ಲ. ನಾವು ಮುಂದರಿಯಬೇಕಾದರೆ ಹಣಬೇಕು. ಹಣವನ್ನು ಹೆಚ್ಚಾಗಿ ಉತ್ಪತ್ತಿಮಾಡಲು ಪ್ರಯತ್ನಿಸುವ ಕಾರ್ಯಗಳ ಮೇಲೆ ಕತ್ತಿ ಎತ್ತುವದು ನ್ಯಾಯವಲ್ಲ. ಮಾಕೂಟವು ತುಂಬಾ ಹಣವನ್ನು ಖರ್ಚುಮಾಡಿಸುತ್ತದೆ. ದೊಡ್ಡ ಮರವನ್ನು ಹೂವಿನ ಚಟ್ಟಿಯಲ್ಲಿ ಬೆಳಸಲಿಕ್ಕೆ ಸಾಧ್ಯವಿಲ್ಲ. ಫಾರೆಸ್ಟಿನ ಕಾರ್ಯವು ಎಲ್ಲರಿಗೂ ತಿಳಿಯುವದಿಲ್ಲ. ಎಲ್ಲರೂ ಜೀವಮಾನವನ್ನೆಲ್ಲಾ ಫಾರೆಸ್ಟಿನಲ್ಲೇ ಕಳೆದಿರುವದಿಲ್ಲ. ನನ್ನಮಾತು ಕೇಳಿದನಂತರ ಮೆಂಬರುಗಳಿಗೂ ಸಹ ಈ ಮಾಕೂಟದ ಪ್ರಯೋಜನವನ್ನು ತಿಳಿಯದೆ ಅರ್ಧದಲ್ಲೇ ಬಿಡಬಾರದೆಂತ ತೋರಿರಬಹುದು. ಮೆಂಬರುಗಳನ್ನು ಚುನಾಯಿಸಿದವರಿಗೆ ತೃಪ್ತಿಯಾಗಬೇಕು. ಮೆಂಬರುಗಳು ವಿವರಿಸಿದರೆ ದೇಶಕ್ಕೆ ತೃಪ್ತಿಯಾಗಬಹುದು. ಫಾರೆಸ್ಟಿನ ಕಾರ್ಯಗಳನ್ನು ತಿಳಿದುಕೊಳ್ಳಬೇಕಾದರೆ ಸಾಧ್ಯವಾದಷ್ಟು ಅವನ್ನು ನೋಡಿದರೆ ಒಳ್ಳೇದು. ಆಗ ನಮ್ಮ ಜವಾಬು ಸಕಾರಣವೋ ಎಂಬದು ತಿಳಿಯುತ್ತೆ. ಮೆಂಬರುಗಳಿಗೆ ಫಾರೆಸ್ಟ್ ಆಡಳಿತವನ್ನು ತಿಳಕೊಳ್ಳಲು ಕುತೂಹಲವಿದೆಯೆಂತ ನನಗೆ ಗೊತ್ತಿದೆ. ನಾಲ್ಕು ಜನರು ಬಂದು ಮೊನ್ನೆತಾನೆ ನೋಡಿದರು. ಖಾಯಿಲೆ ಮುಂತಾದ ಕಾರಣಗಳಿಲ್ಲದಿದ್ದರೆ ಇತರರೂ ಬರುತ್ತಿದ್ದರು. ೧೮ ತಿಂಗಳೊಳಗೆ ದೊಡ್ಡ ಕೂಟವೊಂದು ಬಂದುನೋಡಿತು. ಆಗ ಕೆಲಸವಿನ್ನೂ ಅಪೂರ್ಣವಾಗಿ ಇತ್ತು. ಕೌನ್ಸಿಲ್ ದೊಡ್ಡದಾಗಿದೆ. ಇಲಾಖೆಗೆ ಸಂಬಂಧಪಡುವ ವಿಷಯಗಳನ್ನು ದೊಡ್ಡ ಗುಂಪಿಗೆ ವಿವರಿಸುವದು ನನಗೆ ಕಷ್ಟವಾಗಿದೆ. ಒಬ್ಬೊಬ್ಬರಿಗೇನೆ ವಿವರಿಸಿದರೆ ಚೆನ್ನಾಗಿ ತಿಳಿಸಿಕೊಟ್ಟೇನೆಂಬ ಭರವಸೆ ನನಗೆ ಇದೆ. ಕೌನ್ಸಿಲ್‌ನವರಿಗೆ ಕಾಗದಪತ್ರಗಳನ್ನೆಲ್ಲಾ ಒದಗಿಸಿ ಕೊಡುವದೇ ಉತ್ತಮಕೆಲಸ. ಕೌನ್ಸಿಲಿನವರು ದೇಶಕ್ಕೆ ಇಂಥಾ ಕವಲುಗಳಿರುವ ವಿಷಯವನ್ನು ತಿಳಿಸಿಕೊಡುವದು ಕಷ್ಟವೆಂತ ನನಗೆ ಗೊತ್ತಿದೆ. ಜನರು ಫಾರೆಸ್ಟ್ ಇಲಾಖೆಯ ತತ್ವಗಳಿಗೆ ಒಪ್ಪುವದು ಬಹಳ ಅಪರೂಪ. ಆದರೂ ಜನರು ಸಂಗತಿಗಳನ್ನು ತಿಳಕೊಳ್ಳುತ್ತಾ ಸಮಾಧಾನದಿಂದ ನೋಡುತ್ತಿದ್ದರೆಂತ ಅದರೇನೇ ನಮಗೆ ಸಹಾಯ ಕೊಟ್ಟಂತಾಯಿತು.

ಠರಾವು ತಂದವರು ಮೋಟಾರ್‌ಲೋರಿ ಸಂಬಂಧವಾಗಿ ಮಾತಾಡಿದರು. ಅದು ನೀರಿನಿಂದ ಹೋಗುವದಾಗಿದೆ. ಅದಕ್ಕೆ ನೀರು, ಒಬ್ಬ ಡ್ರೈವರ್ ಸ್ವಲ್ಪ ಎಣ್ಣೆಯೇ ಬೇಕಾಗಿರುವದಾಗಿದೆ. ಅದು ಸುಲಭಖರ್ಚಿನ ಮರ ಸಾಗಿಸುವ ಸಾಧನವಾಗಿದೆ. ಅದು ಸುಲಭಖರ್ಚಿನಲ್ಲಿ ಆಗುವದಿಲ್ಲವೆಂಬದನ್ನು ನಂಬಲಿಕ್ಕೆ ಸಾಧ್ಯವಿಲ್ಲ. ಲೋರಿಯಿಂದ ಪ್ರೊವರ್ ಫಾರೆಸ್ಟ್‌ಗಳಿಂದ ಮರಸಾಗಿಸಿ ಫಾಯಿದೆಮಾಡಿಕೊಳ್ಳಬಹುದು. ಅದು ಘಂಟೆಗೆ ೧೦ ಮೈಲಿಗಿಂತ ಬಹಳ ಕಡಿಮೆ ಓಡುತ್ತೆ. ಕುಸ್ತಿಗೂ ಇರುಕರಿಗೂ ಓಡಲಿಕ್ಕೂ ಆಗುತ್ತೆ. ಗರಗಸದ ಕಾರ್ಖಾನೆಗೆ ಜಾಗ್ರತೆಯಾಗಿ ಮರತಲಪಿಸಲಿಕ್ಕೆ ಇರುವ ಸಾಧನವಾಗಿದೆ. ತ್ವರೆಯಲ್ಲಿ ಮರ ಸರಬರಾಯಿಮಾಡಲು ಜೂನ್‌ನಿಂದ ಡಿಸೆಂಬರ್‌ವರೆಗೆ ಸಾಧ್ಯವಿದೆಯಷ್ಟೆ. ಬೇರೆ ಸಮಯದಲ್ಲಿ ಲೋರಿಯು ಉಪಯೋಗವಾಗುತ್ತೆ. ಗಾಡಿಯಲ್ಲಿ ಸಾಗಿಸುವದು ಸಾಧ್ಯವಿಲ್ಲ. ಲೋರಿ ಅಮೂಲ್ಯ ಸಹಾಯಮಾಡುತ್ತೆ. ತುರಿತದಲ್ಲಿ ಮರಗಳು ಹೆಸಬೇಕಾದಾಗ ಮಾಡಿಕೊಳ್ಳ ಆಳುಗಳ ಸಂಬಳವನ್ನು ಹೆಚ್ಚಿಸಿಬಿಟ್ಟರೆ ಲೋರಿ ಪ್ರಯೋಜನವು ತಿಳಿಯುತ್ತೆ. ಮಾಕೂಟ ಕೆಲಸ ಪ್ರಾರಂಭಿಸಿದಾಗ ಆಳು ೪ ಸಂಬಳದ ದರವು ಹೆಚ್ಚುತ್ತಾ ಇರುತ್ತಾ ಒಂದು ತಡೆಯಲಾರದೆ ಇರುವವರೇ ಮಾನವನ್ನು ತೋರಿಸುವ ಕೆಲಸಮಾಡಬೇಕಾಯಿತು. ಆ ಸಮಯದಲ್ಲಿ ಮರವನ್ನು ತೇಲಿಸುವ ದರವು ಸಲೆ ಅಡಿ ಒಂದರ ಅರ್ಧಾಣೆಗೆ ಏರಿತ್ತು. ಈಗ ಒಟ್ಟು ಖರ್ಚು ಸರಾಸರಿ ೩ ಆಣೆಯಾಗುತ್ತೆ. ತೇಲಿಸುವ ಆಳುಗಳು ಹೇಳುವಂತೆ ನಾವು ಕೇಳುವ ಹಾಗಾಗಬಾರದು ಎಂಬುದು ಒಂದು ಮುಖ್ಯ ವಿಷಯವಾಗಿದೆ. ಕಂಪೆನಿ ಸುರುವಾದ ನಂತರ ಲೋರಿಯನ್ನು ಕೊಂಡಿದ್ದರೆ ಸಾಲದು. ಮೊದಲನೇ ಎರಡು ವರ್ಷಗಳಲ್ಲಿ ಬೇಕಾಗುವಷ್ಟು ಮರವನ್ನು ಒಂದು ಲೋರಿಯೇ ಇರುತ್ತಾದಲ್ಲಿ ಕೊಡಬಲ್ಲದು.

ನಾಮಧಾರಿ ಮೆಂಬರು ಸೂಚಿಸಿದಮೇರೆ ಇಲಾಖೆಯ ಆಡಳಿತವನ್ನು ನಡಸಲಿಕ್ಕೆ ಕೌನ್ಸಿಲ್ ಮೆಂಬರಗಳ ಕಮಿಟಿಯೊಂದನ್ನು ಸೇರಿಸಿಕೊಳ್ಳುವ ವಿಷಯ ಗವರ್ನಮೆಂಟಿನವರು ಯೋಚಿಸುತ್ತಾರೆ.

ಮೆ|| ಸಿ. ಎನ್. ವೆಂಕಟಯ್ಯನವರು

೬ನೇ ರಿಸೊಲ್ಯೂಶನ್ ಮೊದಲೇ ಬರಬೇಕಿತ್ತು. ಏನೋ ಕಾರಣದಿಂದ ಅದನ್ನು ಹಿಂದಕ್ಕೆ ಹಾಕಿ ಬಿಟ್ಟಿದ್ದಾರೆ. ಈ ರಿಸೊಲ್ಯೂಶನ್ನಿಗೆ ಒತ್ತಾಸೆಕೊಡಲು ನನಗೂ ಇನ್ನೂ ಕೆಲವರಿಗೆ ಕಷ್ಟವಾಗಿದೆ. ಯಾಕೆಂದರೆ ೬ನೇ ರಿಸೊಲ್ಯೂಶನಿನಲ್ಲಿ ಇನ್ನು ಹೆಚ್ಚಿನ ಮೊಬಲಗು ಕಡಿಮೆಮಾಡಬೇಕೆಂತ ಇದೆ. ಆದ್ದರಿಂದ ಈ ಠರಾವನ್ನು ತಂದ ಮೆಂಬರು ಇದನ್ನು ವಾಪಸು ತೆಗೆದುಕೊಳ್ಳಬೇಕೆಂತ ನನ್ನ ಅಪೇಕ್ಷೆ ಇಗಿದೆ.

ಮೆ|| ಬಿ. ಶ್ರೀಪತಿರಾಯರು.

ಫಾರೆಸ್ಟ್ ಮೆಂಬರು ಮಾಕೂಟ ಕಾಮಗಾರಿಯ ತತ್ವಗಳನ್ನೆಲ್ಲಾ ಹೇಳಕೊಟ್ಟಿದ್ದಾರೆ. ಮಾರಾಟಕ್ಕೆ ಏರ್ಪಾಡುಮಾಡಲು ಕಾಗದಪತ್ರಗಳು ನಡೆಯುತ್ತಿದೆಯಷ್ಟೆ. ಎಂತಲೂ ಒಪ್ಪಂದವಾಗಲು ತಡವಾಗುವದಾದರೆ ನನ್ನ ಠರಾವನ್ನು ಒಪ್ಪಿಕೊಳ್ಳುವದಾಗಿಯೂ ಹೇಳಿದರು. ಈ ಒಪ್ಪಿಗೆಯು ನನಗೆ ಸಹಾಯವಾಯಿತು. ಈ ಒಪ್ಪಂದದ ಮಾತುಕಥೆಗಳು ಇನ್ನೂ ಬಹಳ ಸ್ವಲ್ಪದೂರವೇ ಹೋಗಿರುವದಾದರೆ, ಪೂರೈಸಬೇಕಾದರೆ ಇನ್ನೂ ಬಹಳ ದಿನ ಹೋಗುತ್ತೆಂತ ಹೇಳಬಲ್ಲೆ. ಆದ್ದರಿಂದ ನನ್ನ ಠರಾವನ್ನು ಒಪ್ಪಿಕೊಳ್ಳಬಹುದೆಂತ ತೋರುತ್ತೆ. ಲೋರಿ ವಿಷಯ ತಿಳಿಯಬೇಕಾದ್ದನ್ನು ತಿಳಿಸಿದರು. ಲೋರಿಗೆ ಖರ್ಚು ಕಡಿಮೆಯಾಗಿರುವದಾದರೆ ಮತ್ತು ಮಳೆಗಾಲದಲ್ಲೂ ಸರಿಯಾಗಿ ಕೆಲಸಮಾಡೀತೆಂತಾದರೆ ಇದನ್ನು ಇಟ್ಟುಕೊಳ್ಳಲು ನನ್ನ ಅಡ್ಡಿ ಇಲ್ಲ. ಟ್ರಾಕ್ಟರ್ ವಿಷಯ ಮೆಂಬರು ಏನೂ ಹೇಳಲಿಲ್ಲ. ಟ್ರಾಕ್ಟರು ಕಲಿಸುವ ಆಳುಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲು ಇರುವದಾದರೆ ಟ್ರಾಕ್ಟರು ಟ್ರಾಮ್ವೇಯನ್ನು ಬಾಯ್‌ಕಾಟ್ ಮಾಡಲಿಕ್ಕೆ ಇರುವದಲ್ಲವಾಗಿ ನಂಬುತ್ತೇನೆ. ಟ್ರಾಕ್ಟರು ಮತ್ತು ಟ್ರಾಮ್ವೇಯು ಮಾಡಬೇಕಾದ ಕೆಲಸ ಒಂದೇ ಆಗಿದೆಯೆಂತ ನಂಬುತ್ತೇನೆ. ಆನೆಗಳೂ ಕೋಣಗಳೂ ಎತ್ತುಗಳೂ ಇದ್ದರೆ ಸಾಕೆಂತ ನನಗೆ ತೋರುತ್ತೆ. ಆದ್ದರಿಂದ ಟ್ರಾಕ್ಟರನ್ನು ಬೈಬೇಮೆಯಾದ ಪ್ರೊವರ್ ಫಾರೆಸ್ಟ್‌ಗಳಿಗೆ ಕಳುಹಿಸಿದರೆ ಉತ್ತಮವೆಂತ ತೋರುತ್ತೆ. ಟ್ರಾಕ್ಟರಿನಿಂದ ಪ್ರಯೋಜನವಿಲ್ಲವೆಂಬ ನನ್ನ ವಾದವು ಉಳಿದೇ ಇದೆ. ದೊಡ್ಡ ಮರ ದೊಡ್ಡ ಬೆಟ್ಟದಲ್ಲಿ ಬೆಳೆಯಬೇಕಾದದ್ದು ಹೌದಾದರೂ ಮರವು ಆರೋಗ್ಯವಾಗಿ ಬೆಳೆಯುವ ಜನ್ನತೋರಬೇಡವೇ? ಆದ್ದರಿಂದ ಟ್ರಾಕ್ಟರಿನ ಖರ್ಚನ್ನು ವಜಾಮಾಡಿ ಠರಾವಿನ ಉಳುವರಿಯನ್ನು ಮಾಡಬೇಕಾಗಿದೆ.

ಮೆ|| ಎ. ಎಫ್. ಮಿಾಂಚಿನ್‌ರವರು.

ಅಧ್ಯಕ್ಷರೇ, ಮೆ|| ಶ್ರೀಪತಿರಾಯರು ಟ್ರಾಕ್ಟರಿನ ಖರ್ಚನ್ನೇ ಕಡಿಮೆಮಾಡಲು ಠರಾವು ತಂದದ್ದೆಂತ ಹೇಳುತ್ತಾರಾದ್ದರಿಂದ ಟ್ರಾಕ್ಟರಿನ ವಿಷಯ ನಾನು ಇಲ್ಲಿಯೇ ಮಾತಾಡುವುದು ಒಳ್ಳೇದು. ಅವರು ಯಾವದಾದರೂ [illegible] ಬಾಬಿಗೆ ವಿರೋಧಿಸುತ್ತಾರೆಂಬುದು ತಿಳಿಯದ್ದರಿಂದ ನಾನು ಕಷ್ಟದಲ್ಲಿದ್ದೆ. ಮೆ|| ವೆಂಕಟೈಯ್ಯನವರ ೩ನೇ ಠರಾವು ಇದು ಒಂದೇ ಆಯಿತು. ಟ್ರಾಕ್ಟರಿನ ವಿಷಯ ಹೇಳತಕ್ಕದ್ದನ್ನು ಇಲ್ಲಿಯೇ ಹೇಳುತ್ತೇನೆ.

ಅದು ಈಗತಾನೇ ಮಾಕೂಟಕ್ಕೆ ತಲಪಿದೆ. ಅದರ ತರಬೇತು ಹೊಂದಿದ ಡ್ರೈವರುಗಳು ಇನ್ನೂ ತಲಪಿಲ್ಲ. ಆದರಲ್ಲಿ ಇನ್ನೂ ಕೆಲಸವಾಗ ತಕ್ಕದ್ದಿದೆ. ಇನ್ನು ಹತ್ತು ದಿನಗಳಲ್ಲಿ ತಯಾರಾಗಬಹುದು. ಅದರ ಕ್ರಯ ೧೦ ಸಾವಿರಗಳ ಒಳಗೆ ಪ್ರಾಪ್ತಿಯಾಗಿದೆಯಷ್ಟೆ. ಆರಂಭದಲ್ಲಿ ಹೆಚ್ಚು ಕೆಲಸ ಕಾಣಲಾರದು. ಇದೇ ತರಹದ ವ್ಯ

ಕೊಡಗು ಕೌನ್ಸಿಲು ವಿಚಾರಗಳು.

ಸಿನ ಕಾಂಗಾರಿಯಲ್ಲಿ ತಯಾರುಮಾಡುವವನು ನ ಕೆಲಸಕ್ಕೆ ಸಿಕ್ಕಿದ್ದಾನೆ. ನಮ್ಮ ಕಾಡುಗಳು ಮ ಸಿನ ಕಾಂಗಾರಿಯು ಕಾಡಿನ ಕಡೆಯ ಜಿಲ್ಲಾಪ್ರದೇಶ ಗಿದೆ. ಈ ಟ್ರಾಕ್ಟರಿನ ಅರ್ಧಶಕ್ತಿಯುಳ್ಳ ದಿವಸ ಗಳ ಗಾಡಿ ಭರ್ತಿ ಮರಗಳನ್ನು ಸಾಗಿಸುತ್ತವೆ ಲ್ಲಿಯೂ ಬರುವ ಹುಲ್ಲಿಯಿಂದ ಕೆಲಸವು ಬೇಕೆಂದಿ ನೆ ಬೇರೆ ಟ್ರಾಕ್ಟರುಗಳ ಮೂಲದಷ್ಟು ನನ್ನ ಟ್ರಾ ರು ಕೆಲಸಮಾಡಲಾಪುದು ಮಳೆಗಾಲದಲ್ಲಿ ದಿನಕ್ಕೆ ೧೫ ಕ್ಕೆ ಮಾತ್ರ ಉಪಯೋಗಿಸಿತಷ್ಟೆ. ಈ ಲೆಕ್ಕದಲ್ಲಿ 1924 ರ ಅಂದಾಜು ಮಾಡಿರುವುದಿಲ್ಲ. ಟ್ರಾಕ್ಟರಿನ ವಿಷ ಯದಲ್ಲಿ ಬೆಂಜಾರ್ ಬೇಕಾದಷ್ಟು ತರಿಸುತ್ತೇನೆ ಎನ್ನುವಲ್ಲಿ ಮಿಸ್ಟರ್ ನನ್ನ ಸ್ನೇಹಿತರು ಮತ್ತೊಬ್ಬರು ಬಂದಾಗ ಅದು ಹೆಚ್ಚಾಗಿ ಕುಸಿಯುವ ತೆ ಸ್ಥಿತಿಯಲ್ಲಿರ ಲ್ಲಿ. ಆದರೆ ಡಾ ರೆಟ್ಟರ್ ಅಮೆರಿಕಾದ ಜೊತೆ ದ್ದು ಸಮುದ್ರದ ಮಟ್ಟಕ್ಕೆ ಎತ್ತರ ಭೂಮಿಯ ವ್ಯತ್ಯಾಸವನ್ನು ಹೇಳಬೇಕಾಗುತ್ತೆ. ಈ ರಾವಿನ ಹೇಳುವ ಮೊಬಲಗನ್ನು ಟ್ರಾಕ್ಟರಿನ ಖರ್ಚಿನಿಂದ ಲೇ ಕಳೆದರೆ ಅದು ಕಡ್ಡಿನಲ್ಲೇ ಬಿದ್ದುಹೋಗುತ್ತ ದನ್ನು ಇತರ ಮೆಂಬರುಗಳು ಒಟ್ಟಾಗಿ ಆಕ್ಷೇಪಿಸಿ ದಿಲ್ಲದೆ ಟ್ರಾಕ್ಟರಿನ ಕೆಲಸದವರಿಗೆ ಅನುಭವ ಕಡಿಮೆ ಇಲ್ಲವಾದರೆ ಬೇಕಾದಷ್ಟು ಮರವನ್ನು ಸಾಗಿಸಲು ಸಾಧ್ಯವಾಗಲಾರದು. ಠರಾವು ತಂದವರು ಆನೆಗಳಿಂದ ಕೆಲಸ ತೆಗೆದುಕೊಳ್ಳುವುದರಿಂದ ಹೇಳಿದರೆ ಆದರೆ ಆನೆಗಳು ಉಪಯೋಗಿಸುವ ಸ್ವಲ್ಪ ಮ ಶ್ರೀಪತಿರಾಯರಂತೆಯೇ ನಾನು ಆನೆಗಳ ಪಕ್ಷ ದೆಂತ ಎಣಿಸುತ್ತಿದ್ದೆ. ಆದರೆ ಅವು ಹತ್ತಿರದಲ್ಲಿ ಕೆಲಸ ಮಾಡಲಿಕ್ಕೆ ಅಗತ್ಯವೆಯುಷ್ಟೆ ಟ್ರಾಕ್ಟರ್ ಸಹಾಯ ಮಾಡುತ್ತವೆ. ಮುಂದಿನ ಉಪಯೋಗಕ್ಕೆ ಆನೆಗಳು ಬಹಳ ನಿಧಾನ ಮತ್ತು ಹೆಚ್ಚು ಖರ್ಚು. ದೂರದಿಂದ ಉಪಯೋಗಿಸಲಿಕ್ಕೇನು ಟ್ರಾಕ್ಟರು ಬಹಳ ಪ್ರಯೋಜನ ಇಷ್ಟೇ ನಾನು ಹೇಳಬೇಕಾದದ್ದು. ಟ್ರಾಕ್ಟರಿನ ಖರ್ಚಿನಿಂದ ೧೧೦೦೦ ರೂ ವಜಾಮಾಡಲು ನಾವು ತಯಾರಿಲ್ಲ.

ನಾಮದಾರ್ ಪ್ರೆಸಿಡೆಂಟರು

ಒಂದೆರಡು ಮಾತು ಹೇಳಬೇಕೆಂದಿದ್ದೇನೆ. ಮುಖ್ಯ ವಾದ ಕೆಲಸದಿಂದ ಪ್ರಯೋಜನವಾಗಬೇಕಾದರೆ ತುಂಬಾ ಸಾವಕಾಶವಿದೆಯೆಂಬ ಅಭಿಪ್ರಾಯದಿಂದ ಮೆ॥ ಶ್ರೀಪತಿರಾಯರ ಠರಾವು ಬಂದಂತೆ ಕಾಣುತ್ತೆ. ಈ ಪ್ರಯೋಜನ ವಾಗುವಂತ ಒಪ್ಪಂದವನ್ನು ಪೂರ್ಣಸಲಿಕ್ಕೆ ತಡವಾಗಬೇ ಕೆಂತ ಅವರ ಆಪೇಕ್ಷೆಯೆಂತ ನಾನು ಸೂಚಿಸುವುದಿಲ್ಲ. ಈ ಒಪ್ಪಂದವನ್ನು ಅದಷ್ಟು ಜಾಗ್ರತೆ ಮಾಡಿಕೊಂಡು ಸರ ಕಾರಕ್ಕೆ ಲೆಕ್ಕಗೆ ಹಣ ಬರುವಂತೆ ಮಾಡಿಕೊಳ್ಳಬೇಕು. ಈ ಮುಂದಿನ ವರ್ಷದಲ್ಲಿ ಇವೆಲ್ಲ ಪೂರೈಸಬೇಕಾಗಲಾರ ದೆಂಬ ಕಾರಣದಿಂದ ಮೆ॥ ಶ್ರೀಪತಿರಾಯರು ಠರಾವು ತಂ ದಂತೆ ಕಾಣುತ್ತೆ. ಇಲ್ಲವಾದರೆ ಅವರು ಫಾರೆಸ್ಟು ಮೆಂ ಬರು ಒಂದೇ ಅಭಿಪ್ರಾಯದವರಾಗಿದ್ದಾರೆಂತ ತೋರು ತ್ತದೆ. ನಾಮದಾರ ಮೆಂಬರುಗಳಿಗೆ ತೋಚಿದಂತೆ ಓಟು ಮಾಡಬಹುದು.

ಓಟು ಮಾಡಿದಲ್ಲಿ ಠರಾವು ಮಂಜೂರಾಯಿತು.

8 ನೇ ಠರಾವು

ಫಾರೆಸ್ಟು ಖರ್ಚು ೩,೭೧,೦೦೦ ದಿಂದ ಟ್ರಾ ಕ್ಟರಿನ ಖರ್ಚು ೧೫೦೦೦ ರೂಪಾಯಿ ವಜಾಮಾಡಿ ಆದ ರಿಂದ ಮೂವರು ಸ್ಪೇಶಲ ಮ್ಯಾಜಿಸ್ಟ್ರೇಟರನ್ನು ನೇ ಮಿಸಲಿಕ್ಕೆ ೫೪೦೦ ರೂಪಾಯಿ ಇಡಬೇಕು.

ಮೆ॥ ಸಿ. ಯಮ್. ವೆಂಕಟ್ಟಯ್ಯನವರು

ಅಧ್ಯಕ್ಷರೇ, ಮೆ॥ ಶ್ರೀಪತಿರಾಯರ ಠರಾವು ಚ ರ್ಚೆಯಾಗಿ ಪಾಸಾದ್ದರಿಂದ ನನ್ನ ಉದ್ದೇಶವು ನೆರವೇ ರಿತು. ಈ ಹಣವನ್ನು ಉಪಯೋಗಿಸುವ ದಾರಿಯನ್ನು ನಾನು ತೋರಿಸುವುದಾಗಿದೆ. ನನ್ನ ಠರಾವಿನಲ್ಲಿ ಎರಡು ಭಾಗಗಳಾಗಿವೆ. ಎರಡನೇ ಭಾಗದಲ್ಲಿ ಹೇಳುವ ಮೇ ರೆ ಫಾರೆಸ್ಟಿನಲ್ಲಿ ಉಳಿಯುವ ಮೊಬಲಗಿನಿಂದ ೩ ಸ್ಪೇ ಶಿಯಲ ಮ್ಯಾಜಿಸ್ಟ್ರೇಟರನ್ನು ನೇಮಿಸಬೇಕಾಗಿದೆ. ಈಗ ಕೆಲವು ವ್ಯಾಜ್ಯಗಾರರುಗಳಿಗೆ ಮ್ಯಾಜಿಸ್ಟ್ರೇಟರ ಇದೆ ಇಂಡಿಯಾದ ಎಲ್ಲೆಲ್ಲಿಯೂ ನ್ಯಾಯಾಧೀಶರ ಇಲಾಖೆ ಯೂ ಠರಿಸಿಕ್ಕ ಇಲಾಖೆಯೂ ಒಂದಾಗಬೇಕೆಂಬ ಕೂ ಗು ಬಹುಕಾಲದಿಂದಲೇ ಇರುವಾಗ ನಮ್ಮಲ್ಲಿ ಕಾರು ಬಾರ್ತಿಗಾರ ಗೋಮಿನವರಿಗೂ ಸಹ ಮೆಜಿಸ್ಟ್ರೇಟರ ಅ ಧಿಕಾರ ಇದೆ. ಅಷ್ಟುಮಾತ್ರ ಉಳಿಯುವುದರಿಂದ ಪೊನ್ನಂ ಪೇಟೆ, ನಾಪೋಕ್ಲು ಮತ್ತು ಸೋಮವಾರ ಪೇಟೆಯ ಲ್ಲಿ ಸ್ಪೇಶಲ ಮೆಜಿಸ್ಟ್ರೇಟರುಗಳು ನೇಮಕವಾಗ ಬೇಕೆಂಬ ಸಂಗತಿಯಾಗಿದೆ.

ಮೆ॥ ಪಿ. ಬೆಳ್ಳಿಯಪ್ಪನವರು ಅನುಮೋದಿಸಿದರು

ಮೆ॥ ಬಿ ಡಿ ಟಾಸ್ಕರವರು.

ಕೆಲವು ಮಟ್ಟಿಗೆ ಠರಾವು ತಂದವರ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಎಲ್ಲಾ ವ್ಯಾಜ್ಯಪತ್ರಗಾರರು ಕಷ್ಟ ನನಗೆ ಗೊತ್ತಿಲ್ಲ. ಅವರು ರೆವೆನ್ಯೂ ಆಫೀಸರುಗಳಾಗಿ ಜ ಲ್ಲೇ ಕೆಲಸಮಾಡುತ್ತಾರೆ. ಈಗ ಮೂರುತಿಂಗಳಿಗಾ ಅನುಭವದಿಂದ ಈಗಿನ ಏರ್ಪಾಡು ಉತ್ತಮವೆಂತ ನನಗ ತೋರಲಿಲ್ಲ. ಇದ ಒಳ್ಳೇ ಅಭಿಪ್ರಾಯವಾದರೂ ಚೀಫ್ ಕಮಿಶನರಾಗಲೀ ಮೆ॥ ಕ್ರಾಂಪ ಬೆಲರಾಗಲೀ ಇದಕ್ಕೆ ಒಪ್ಪಿಯಾರೆಂತ ನನಗೆ ತೋರುವದಿಲ್ಲ. ಹೊಸ ಏರ್ಪಾ ಡಾಗಿ 12 ತಿಂಗಳಾಯಿತಷ್ಟೆ. ಇಷ್ಟರಲ್ಲೇ ಈ ಠರಾವನ್ನು ಮಂಜೂರುಮಾಡಿಕೊಳ್ಳುವಷ್ಟು ಅನುಭವಕಾಲದು. ಈಗ ತಾನೇ ವ್ಯಾಜ್ಯಪತ್ರಗಾರರುಗಳ ಸಂಘದ್ದನ್ನು ವ್ಯತ್ಯಾಸ ಮಾಡಿ ವಿಚಾರಣೆಗಳನ್ನು ಮಾಡಿದ್ದಾಗಿದೆ. ಈಗ ಪೇ ಟೆಯ ಮುಖ್ಯಸ್ಥಳಗಳಲ್ಲಿ ಮ್ಯಾಜಿಸ್ಟ್ರೇಟರುಗಳನ್ನು ಏರ್ಪಡಿ ಸಿದರೆ ಅದಕ್ಕಿಷ್ಟ ಬೇಕಾದ ಸಹಾಯವಾದೀತೋ ಮತ್ತು ಜನರಿಗೆ ಪ್ರಯೋಜನವಾದೀತೋ ಎಂಬ ಸಂಶಯ ನನಗೆ ಇದೆ. ಹ್ಯಾಗೂ ಈ ಮುಂದಿನ ೬ ತಿಂಗಳುಗಳಲ್ಲಿ ಈ ವಿಷ ಯದ ಅನುಭವನಿಸಿಕ್ಕೊಂಡು ನಾನು ಒಪ್ಪುತ್ತೇನೆ. ಎಲ್ಲಿ ರೇಜಿಸ್ಟ್ರಾರು ಕೇಳಿದರೆ ಪ್ರಯೋಜನವಾ ದೀತು. ಮುಂತಾದ ಪ್ರಶ್ನೆಗಳನ್ನು ಯೋಚಿಸುತ್ತೇನೆ. ಠರಾ ವ ತಂದವರ ಉದ್ದೇಶಕ್ಕೆ ನನ್ನದೂ ಒಪ್ಪಿಗೆ ಇದೆ. ಚೆನ್ನಾಗಿ ಪರಿಶೋಧಿಸಿ ಜನರಿಗೂ ಸರಕಾರಕ್ಕೂ ಪ್ರಯೋಜನವಾಗು ವ ಏರ್ಪಾಡನ್ನು ಶೀಘ್ರದಲ್ಲೇ ಯೋಚಿಸುತ್ತೇನೆಂತ ಭರವಸೆ ಕೊಡುತ್ತೇನೆ. ಆದ್ದರಿಂದ ಠರಾವನ್ನು ಓಟಿಗೆ ಹಾಕಲು ಮತ್ತಾವ್ಯಾಯ ಮಾಡಲಿಕ್ಕಿಲ್ಲವೆಂತ ಸೂಚಿಸುತ್ತೇನೆ.

ಮೆ॥ ಸಿ ಯಮ್ ವೆಂಕಟ್ಟಯ್ಯನವರು

ಠರಾವನ್ನು ವಾಪಸು ತೆಗೆದುಕೊಳ್ಳುತ್ತೇನೆ. ಅನು ಮತಿಯೊಡನೆ ಠರಾವು ವಾಪಸು ಮಾಡಲಾಯಿತು.

9 ನೇ ಠರಾವು

ಪೋಟ್ಯಾರ್ಸಿಯನ್ನು ಮಾರಿ 5 ಸಾವಿರ ರೂಪಾ ಯಿ ಫಾರೆಸ್ಟು ಉತ್ಪತ್ತಿಗೆ ಸೇರಿಸಿ ಅದರ ಪೈಕಿ ಒಂದುಸಾ ವಿರ ರೂಪಾಯಿಗಳನ್ನು ಎರವರಿಗೂ ಕುರುಬರಿಗೂ ಸ್ಕಾಲ ರ್‌ಶಿಪ್ ಕೊಡಲು ಇಡಬೇಕು.

ಮೆ॥ ಸಿ ಯಮ್ ವೆಂಕಟ್ಟಯ್ಯನವರು

ಇದರಲ್ಲೂ ನಾನು ಎರಡನೇಭಾಗದಮೇಲೆ ಒತ್ತಿಹೇ ಳಬೇಕಾಗಿದೆ. ಮೆ॥ ಶ್ರೀಪತಿರಾಯರ ಠರಾವಿನಿಂದ ಮೊದ ಲನೇಭಾಗದಮೇಲೆ ನನಗೆ ಬೇಕಾದ ವಿವರಣೆ ಸಿಕ್ಕಿತು. ಆ ಠರಾವಿನಮೇರೆ ಉಳಿತಾಯವಾದ ಹತ್ತುಸಾವಿರ ರೂ ಪೈಕಿ 5400 ರೂ ಮೆಜಿಸ್ಟ್ರೇಟರುಗಳ ನೇಮಕಕ್ಕೆ ಹೋ ದಮೇಲೆ ಉಳಿದದ್ದರಿಂದ ಒಂದುಸಾವಿರರೂಪಾಯಿ ಠರಾವಿ ನಲ್ಲಿ ಹೇಳುವ ಜಾತಿಯವರಿಗೆ ಸ್ಕಾಲರ್‌ಶಿಪ್ ಕೊಡಲು ಇಡಬೇಕು. ಫೈನಾನ್ಸ್‌ಮೆಂಬರು ಪಂಚಮರಿಗೆ ವಿದ್ಯೆಕ್ಕೆ ಹೆಚ್ಚಿಗೆ ಹಣ ಕೊಡಲು ದಯವಿಟ್ಟು ಒಪ್ಪಿದ್ದಾರೆಂತ ನನಗೆ ಗೊತ್ತಿದೆ.

ಮೆ॥ ಟಾಸ್ಕರರವರು—ಮೆ॥ ಶ್ರೀಪತಿರಾಯರ ಠರಾ ವು ಟ್ರಾಕ್ಟರ್‌ಮೇಲೆ ಇತ್ತು. ಇದು ಲೋಕಲ್ ವಿಷಯ ಆದ್ದ ರಿಂದ ಈ ವಾದವು ಕ್ರಮವಾಗಿಲ್ಲ.

ಅಧ್ಯಕ್ಷರು.—ಹೌದು

ಮೆ॥ ಸಿ ಯಮ್ ವೆಂಕಟ್ಟಯ್ಯನವರು

ಠರಾವಿನ ಎರಡನೇಭಾಗವನ್ನು ಓದಿನೋಡಿದರೆ ನನ್ನ ಉದ್ದೇಶ ಗೊತ್ತಾಗುತ್ತೆ. ಲೋಕಲ್ಯನ್ನು ಮಾರಬಹುದು ಆದರೆ ಅದಕ್ಕೆ ಈಗ ವಿತ್ತ್ಯಾಸಪಡಿಸ ವದಿಲ್ಲ. ಎರಡನೇ ಭಾಗಕ್ಕೆ ಈ ಸಭೆಯ ಮಂಜೂರಾತಿ ಬೇಕಾಗಿದೆ.

ಅಧ್ಯಕ್ಷರು.—ನೀವು ಮೊದಲನೇ ಭಾಗವನ್ನು ವಾಪ ಸು ತೆಗೆದುಕೊಂಡು ಎರಡನೇಭಾಗವನ್ನು ಮುಂದರಿಸಲು ಸಾಧ್ಯವಿದೆಯೆಂತ ನನಗೆ ತೋರುವದಿಲ್ಲ. ಬೇಕಾದರೆ ಠ ರಾವನ್ನು ಎರಡುಭಾಗವಾಗಿ ವಿಂಗಡಿಸಿಕೊಡುತ್ತೇನೆ. ಆಗ ಮೊದಲನೇಭಾಗವನ್ನು ವಾಪಸು ತೆಗೆದುಕೊಂಡು ಎರಡನೇ ಭಾಗದಮೇಲೆ ಚರ್ಚೆ ಮಾಡಬಹುದು.

ಮೆ॥ ಸಿ ಯಮ್ ವೆಂಕಟ್ಟಯ್ಯನವರು

ಅಧ್ಯಕ್ಷರ ತೀರ್ಮಾನಕ್ಕೆ ಒಪ್ಪುತ್ತೇನೆ. ಆಗ ನನ್ನ ಠರಾವು ಹೇಗಾಗುತ್ತೆಂದರೆ—"7 ನೇ ಠರಾವಿನಮೇಲೆ ಉ ಳಿದ ಹತ್ತುಸಾವಿರ ರೂಪಾಯಿಯ ಪೈಕಿ ಒಂದುಸಾವಿರ ರೂಪಾಯಿಯನ್ನು ಕುರುಬ ಎರವರ ಸ್ಕಾಲರ್‌ಶಿಪ್ಪಿಗೆ ಇಡ ಬೇಕು" ಎಂತ ಆಗುತ್ತೆ. ಪಂಚಮರ ವಿದ್ಯೆಕ್ಕೆ ಹೆಚ್ಚಿಗೆ ಇಡಲು ಫೈನಾನ್ಸ್‌ಮೆಂಬರು ಒಪ್ಪಿದ್ದಕ್ಕೆ ಅವರಿಗೆ ಧನ್ಯವಾ ದವಿದೆ. ಆದರೆ ಪಂಚಮ ಎಂಬ ಮಾತಿನಲ್ಲಿ "ಕುರುಬ" "ಎರವ" ಜಾತಿಯ ರು ಸೇರುವುದಿಲ್ಲ. ಸರಕಾರದವರು ಇವರ ಸ್ಥಿತಿಯನ್ನು ನೋಡಿ ಸಹಾಯಮಾಡಬೇಕಾಗಿದೆ. ಅವರಿಗೆ ಏನುಬೇಕು ಏನುಬೇಡ ಎಂಬುದನ್ನು ತಿಳಿಯಲು ಶಕ್ತಿ ಯಿಲ್ಲ. ನನಗೆ ಓಟುಕೊಟ್ಟವರ ಪೈಕಿ ಒಬ್ಬ ಎರವನು ಕಮ್ಮಿ ಜಾತಿಗೆ ವಿದ್ಯೆ ಕೊಡಿಸಬೇಕೆಂತ ಕೇಳಿದನು. ಪಂಚಮರಿಗೆ ಇಟ್ಟ ಹಣವು ಈ ಜಾತಿಯವರಿಗೆ ಉಪಯೋಗವಾಗುವ ಸಂಭವವಿಲ್ಲ. ಯಾಕೆಂದರೆ ಅವರು ಕೇಳುವದಿಲ್ಲ. ಆದ್ದರಿಂದ ಈ ಜಾತಿಯವರಿಗಾಗಿಯೇ 1 ಸಾವಿರ ರೂ ಇಡಬೇಕು.

ಮೆ॥ ಕೆ. ಸುಬ್ಬಯ್ಯನವರು

ಅಧ್ಯಕ್ಷರೇ, ಕಾಡೇ ಕುರುಬರ ವಾಸಸ್ಥಾನವಾಗಿದೆ. ಈ ಜನರ ಸಹಾಯವಿಲ್ಲದೆ ಫಾರೆಸ್ಟಿನವರು ಒಂದುದಿನ ಕಳೆ ಯಲು ಸಾಧ್ಯವಿಲ್ಲ. ಅವರು ಶಿಕಾರಿಗಳ ಸ್ನೇಹಿತರು ಮತ್ತು ದಾರಿ ತೋರಿಸುವವರು ಆಗಿದ್ದಾರೆ. ಫಾರೆಸ್ಟು ಉತ್ಪತ್ತಿ ಯೇ ಕೊಡಗಿನ ದೊಡ್ಡದ ಮೂಲಾಧಾರವೆಂತ ಹೇಳು ತ್ತಾರೆ. ಹಾಗಾದರೆ ಅದರ ಉತ್ಪತ್ತಿಯಿಂದ ಈ ಕಾಡೆ ಜನರ ವಿದ್ಯೆಗೆ ಏನಾದರೂ ಕೊಡಲೇಬೇಕು. ಹಿಂದುಳಿದ ಪಂಗಡದವರಿಗೆ ಪ್ರತ್ಯೇಕ ಶಾಲೆಗಳಿರಬಾರದು. ಯಾಕೆಂದರೆ ಅವರ ಆತ್ಮಗೌರವವು ಬೆಳೆಯುವದೇ ಇಲ್ಲ. ಬೇರೆ ಜನರ ಸಂಗಡ ಮಿಳಿತವಾಗಲು ಅವಕಾಶವೇ ದೊರೆಯುವದಿಲ್ಲ. ಕುರುಡನಿಗೆ ಕುರುಡನೇ ದಾರಿ ತೋರಿಸಿದಂತೆ ಆಗುತ್ತೆ. ಕೊಡಗಿನಲ್ಲಿ ದೇವರ ದಯದಿಂದ ಅಸ್ಪೃಶ್ಯತೆ ಕಾಣಲಿಲ್ಲ.

ಮೆ॥ ಜೆ. ಎ. ಡೇಟ್ಸರವರು

ಠರಾವು ತಂದ ನಾಮದಾರ್ ಮೆಂಬರಿಗೆ ಓಟುಕೊ ಟ್ಟವರಲ್ಲಿ ವಿದ್ಯೆ ಬೇಕೆನ್ನುವ ಕುರುಬರು ಎರವರು ಇದ್ದರೆಂ ತ ತಿಳಿಯಲು ಸಂತೋಷವೇ. ಆದರೆ ಅವರು ವಿದ್ಯೆಗಾಗಿ ಸ್ಕೂಲಿಗೆ ಬರುವದೇ ಇಲ್ಲ. ಬಾಳಲೆಯಲ್ಲಿ ಸ್ವಲ್ಪ ಪಟ್ಟಿಗೆ ಪ್ರಯತ್ನಿಸಿನೋಡಿಯಾಯಿತು. ನಾನು ಆ ಪ್ರಾಂತ ದಲ್ಲಿ ತಿರುಗಾಡುವ ಆ ಜನರನ್ನು ಕಂಡು ಸ್ಕೂಲಿಗೆ ಬರಬೇಕೆಂತ ಹೇಳಿದ್ದಕ್ಕೆ ಅಗ್ರಾಹ್ಯವನ್ನೇ ಒಟ್ಟು ಕಾಡಿಗೆ ಹೋಗಿಬಿಟ್ಟ ರು. ಅವರನ್ನು ಸ್ಕೂಲಿಗೆ ಕರೆಯುವದು ಅಸಾಧ್ಯವೇ. ನಾವು ಕೆಲವು ವರ್ಷದಿಂದಲೇ ಪ್ರಯತ್ನಿಸುತ್ತಿದ್ದೇವೆ. ಹಣವಿದ್ದ ರೂ ಈ ಠರಾವು ಅವಶ್ಯವಿಲ್ಲವೆಂತ ನನಗೆ ತೋರುತ್ತೆ. ಫೈ ನಾನ್ಸ್‌ಕಮಿಟಿಯಿಂದ ಮಂಜೂರಾದ ಪಂಚಮರಿಗೆ ಇಟ್ಟ ಹಣದಿಂದ ಈ ಜಾತಿಯವರಿಗೂ ಸಹಾಯ ಮಾಡಬಹುದು. ಪಂಚಮರಿಗೆ ಮಾತ್ರವೆಂತ ಎಲ್ಲಿಯೂ ಹೇಳಿಲ್ಲ. ಪಂಚಮ ರೆಂದರೆ ಹಿಂದುಳಿದ ಪಂಗಡಗಳೆಲ್ಲಾ ಸೇರಿತು. 1000 ರೂ ಇಡುವದು ಪ್ರಯೋಜನವಿಲ್ಲ. ಯಾಕೆಂದರೆ ಅವರು ಸ್ಕೂ ಲಿಗೆ ಬರುವದೂ ಇಲ್ಲ. ಹಣಖರ್ಚಾಗುವದೂ ಇಲ್ಲ. ಇ ಠವ ಹಣದಿಂದಲೇ ಸ್ಕಾಲರ್‌ಶಿಪ್ ಕೊಡಬಹುದು.

ಮೆ॥ ಪಿ. ಟಿ. ಕುಶಾಲಪ್ಪನವರು

ನಾಗರಹೊಳೆಗಳಲ್ಲಿ ಕೆಲವರು ಕುರುಬರವರ ಓಟು ಪಡೆದು ಬಂದಿದ್ದಾರೆ. ಈ ಸಭೆಯಿಂದ ದೊರೆಯಬಹುದಾ ದ ಪ್ರಯೋಜನಗಳನ್ನು ಹೊಂದಲು ತಯಾರಾದ ಕುರುಬ ರು ಎರವರು ಯಾರೂ ಇಲ್ಲವೆಂತ ವಿದ್ಯಾಮೆಂಬರು ಹೇಳಿ ದ್ದಕ್ಕೆ ವ್ಯಸನಪಡುತ್ತೇನೆ. ಬಾಳಲೆಯಲ್ಲಿ ನಾಮದಾರ್ ಮೆಂಬರಿಗೆ ಕಂಡದ್ದು.

ಮೆ॥ ಜೆ. ಎ. ಯೇಟ್ಸರು

ನನಗೆ ವ್ಯತ್ಯಾಸಗೊತ್ತಿದೆ. ನಿಜವಾಗಿ ಅವರು ಎರವರೇ

ಮೆ॥ ಪಿ ಟಿ ಕುಶಾಲಪ್ಪನವರು.

ಒಡ್ಡಿಟ್ಟನಲ್ಲಿ ಇಟ್ಟಿರುವದು ಪಂಚಮರಿಗೆ ಮಾತ್ರವೆಂತ ನನಗೆ ತೋರುತ್ತೆ. ಆ ಮೊಬಲಗನ್ನು ಇಡುವಾಗ ಎರವ ಕುರುಬರನ್ನು ಯೋಚನೆಗೆ ತೆಗೆದುಕೊಳ್ಳಲಿಲ್ಲವೆಂತ ನನಗೆ ತೋರುತ್ತೆ. ಈ ಹಣವನ್ನು ಅವರಿಗಾಗಿಯೇ ಇಟ್ಟರೆ ಎ ರವ ಕುರುಬರು ಪ್ರಯೋಜನ ಹೊಂದಿಯಾರೆಂತ ನನಗೆ ತೋರುತ್ತೆ. ಆದ್ದರಿಂದ ಠರಾವನ್ನು ಮಂಜೂರ್‌ಮಾಡ ಬೇಕೆಂತ ಕೋರುತ್ತೇನೆ.

ಮೆ॥ ಬಿ ಶ್ರೀಪತಿರಾಯರು

ಈ ವಿಷಯವನ್ನು ಚರ್ಚಿಸಿದರೆ ಒಂದು ತೊಂದರೆ ಬರು ತ್ತೆ. ನನ್ನ ಠರಾವಿನಿಂದ ಉಳಿತಾಯವಾದ ಮೊಬಲಗು 10 ನೇ ಠರಾವಿನ ಖರ್ಚಿಗೆ ಬೇಕಾಗಿದೆ. ಈ ಹಣವನ್ನು ಕೃಷಿ ಇಲಾಖೆಗೆ ಇಡಬೇಕೆಂತ 10 ನೇ ಠರಾವು ತಂದ ದ್ದಾಗಿದೆ. ಈ 1000 ರೂ ಯನ್ನು ಇಲ್ಲಿ ಖರ್ಚುಮಾಡಿ ದರೆ ನನ್ನ ಠರಾವಿಗೆ ಕೆಡಕಾಗುತ್ತೆ. ಆದರೂ ಕುರುಬ ಎ ರವರಿಗೆ ವಿದ್ಯೆ ಕೊಡಬೇಕಾದದ್ದು ಅವಶ್ಯವೇ. ಇದು ಬಹಳ ಮುಖ್ಯವಾದ ವಿಷಯ. ಹಿಂದುಳಿದ ಪಂಗಡದವ ನ್ನು ಮೇಲೆ ತರುವದೇ ಸರಕಾರದ ಕರ್ತವ್ಯವಾದ್ದರಿಂದ ಈ ಠ ರಾವಿಗೆ ನಾನು ಒಪ್ಪುತ್ತೇನೆ.

ಮೆ॥ ಸಿ ಯಮ್ ವೆಂಕಟ್ಟಯ್ಯನವರು

ನನ್ನ ಠರಾವಿನ ಉದ್ದೇಶವನ್ನು ವಿದ್ಯಾ ಇಲಾಖೆ ಮೆಂ ಬರು ಒಪ್ಪುತ್ತಾರೆಂಬುದಕ್ಕೆ ಸಂತೋಷಪಡುತ್ತೇನೆ. ಈ ಹಣವನ್ನು ಈ ಜಾತಿಗಳಿಗಾಗಿಯೇ ಇಡಬೇಕಾಗಿದೆ ಎಂ ಬುದೇ ಠರಾವಿನ ಉದ್ದೇಶವಾಗಿದೆ. ಪಂಚಮರಿಗೆ ಇಟ್ಟ ದ್ದನ್ನು ಇವರಿಗೆ ಉಪಯೋಗಿಸಿದ್ದ ಪಂಚಮರಿಗೆ ಸಹಾಯ ಕಡಿಮೆಮಾಡಬಾರದು. ಈ ಜಾತಿ ವಿದ್ಯಾರ್ಥಿಗಳೇ ಸಿ ಕ್ಕುವದು ಕಷ್ಟವೆಂತ ಮೆ॥ ಯೇಟ್ಸರವರು ಹೇಳಿದರು. ಆ ಕಾರಣದಿಂದಲೇ ಅವರಿಗೆಂತಲೇ ಪ್ರತ್ಯೇಕಹಣ ಇಡಬೇಕೆಂ ತ ನಾನು ವಾದಿಸುವದಾಗಿದೆ. ಈ ಹಣ ವಿದ್ಯೆಗೇ ಬೇಕಾದ ದರೆ ಈ ಜಾತಿಗಳ ಹಿತಚಿಂತಕರು ಹೇಗಾದರೂ ಆ ಜಾತಿ ಯವರಿಗೆ ಪ್ರಯೋಜನ ಮಾಡಿ ಯಾರೆಂತ ನನಗೆ ತೋರು ತ್ತೆ. ವಿದ್ಯಾ ಇಲಾಖೆ ಮೆಂಬರು ಎರವರೆಂದರೆ ಬಹಳ ಹಿಂದುಳಿದ ಎರವರನ್ನು ನೆನಸಿಕೊಂಡಂತೆ ಕಾಣುತ್ತೆ. ಪು ಪ್ಪೆಂಬವರೆಂಬ ಒಂದು ಜಾತಿ ಇದೆ. ಇವರು ಅಷ್ಟು ಹಿಂ ದ ಬಿದ್ದಿಲ್ಲ. ಇವರಲ್ಲಿ ಅನೇಕರು ಭೂಮಾಲೀಕರು. ಈ ಜಾ ತಿಯಲ್ಲಿ ನನಗೆ ಸುಮಾರು 20 ಓಟುಗಳಿದ್ದವು. ಈ ಹ ಣವನ್ನು ಉಪಯೋಗಿಸಿ ಯಾರೆಂತ ನನಗೆ ನಂಬಿಕೆ ಇದೆ. ಠರಾವನ್ನು ಓಟಿಗೆ ಹಾಕಬೇಕೆಂತ ನನ್ನ ಆಸೆಯಾಗಿದೆ.

ಠರಾವು ಓಟಿಗೆ ಹಾಕಿ ಮಂಜೂರಾಯಿತು.

10ನೇ ಠರಾವು.

80 ಸಾವಿರ ರೂ ಸ್ಟಾಂಪು ಉತ್ಪತ್ತಿಗೆ 500 ರೂ ನೇ ರಿಸಬೇಕು.

ಮೆ॥ ಸಿ. ಯಮ್. ವೆಂಕಟ್ಟಯ್ಯನವರು

ಬೆಂಗಳೂರಿನಲ್ಲಿ ಬುಡಕಟ್ಟಿನ ಕಮಿಶನರ ಕೋರ್ಟಿನಲ್ಲಿ ಪಡೆಯಬೇಕಾಗುವ ಸ್ಟಾಂಪಿನ ಉತ್ಪತ್ತಿಯನ್ನು ಸೇರಿಸಲು ಈ

ತರಾವನ್ನು ಹಿಂದದ್ದಾಗಿದೆ. ಬೆಂಗಳೂರಲ್ಲಿ ವಸೂಲಾಗುವ ಕೋರ್ಟುಫೀಸ ನಮ್ಮ ಸರಕಾರದ ಲೆಖ್ಖಕ್ಕೆ ಸೇರುವದೇ ಇಲ್ಲವೆಂತ ತಿಳಿಯುತ್ತೇನೆ. ಈಗ ನಮ್ಮ ಆದಾಯ ವೆಚ್ಚವು ಪ್ರತ್ಯೇಕವಾದ್ದರಿಂದ ಈ ಉತ್ಪತ್ತಿಯನ್ನು ಸೇರಿಸಿಕೊಳ್ಳಲೇಬೇಕು. ಇದಕ್ಕೆ ಹೆಚ್ಚಿಗೆ ವಾದಾ ಬೇಕಾಗಿಲ್ಲ. ಸರಕಾರದವರು ಒಪ್ಪಿಕೊಂಡಾರೆಂತ ನನಗೆ ತೋರುತ್ತೆ.

ಮೆ|| ಕೆ ಪಿ ಚೆಣ್ಣಪ್ಪನವರು ಅನುಮೋದಿಸಿದರು.

(ಮುಂದುವರಿಯುವುದು)

ವರ್ತಮಾನ ಸಂಗ್ರಹ

ಒಳದೇಶ.

ಇಲಾಖೆಯ ಮೂಲಕ ತನಿಖೆಯಾಗುತ್ತಿದ್ದ ಮೆ|| ಹೆಚ್ ಎಂ ಕಾನುಕಂಡರ ಕೇಸಿನಲ್ಲಿ ಅವರಿಗೆ ಅರ್ಧಸಂಬಳದಲ್ಲಿ ಒಂದು ವರ್ಷ ರಜೆ ಕೊಡುವಂತೆಯೂ, ಅವರಿಂದ ಮೇಜಿಸ್ಟ್ರೇಟರ ಅಧಿಕಾರ ತೆಗೆದುಹಾಕುವಂತೆಯೂ ಹುಕುಂ ಆಗಿದೆಯೆಂದು ತಿಳಿಯಬರುತ್ತದೆ.

ತಾ|| 11ರಲ್ಲು ಅಗ್ರಿಕಲ್ಚರಲ್ ಕೋಅಪರೇಟಿವ್ ಸೊಸೈಟಿಯ ಜನರಲ್ ಮೀಟಿಂಗು ಹೈಸ್ಕೂಲು ಹಾಲಿನಲ್ಲಿ ನಡೆಯಿತು. ಮೆ|| ಕೆ ಚಂಗಪ್ಪ ರಾ|| ಬಾ|| ರವರನ್ನು ಪುನಹ ಪ್ರೆಸಿಡೆಂಟರಾಗಿಯೂ, ಮೆ|| ರಂಗಸ್ವಯ್ಯ ಮತ್ತು ಮೆ|| ಕಾಮತ್‌ರವರ ಬದಲು ಮೆ|| ಕೋಳೆರ ಕುಟ್ಟಪ್ಪ ಮತ್ತು ಮೆ|| ಕೇತಿಯಂಡ ಕಾಳಪ್ಪನವರನ್ನು ಬಾಕಿ ನಾಲ್ಕು ಹಳೆಮೆಂಬರುಗಳನ್ನು ಕಮಿಟಿ ಮೆಂಬರುಗಳಾಗಿ ಚುನಾಯಿಸಿದರು. ಸಂತರ ಅವರ ವಾರ್ಷಿಕ ಔತಣವು ನಡೆಯಿತು

ಕಳೆದ ಟೆನ್ನಿಸ್ ಟೂರ್ನಮೆಂಟಿನಲ್ಲಿ ಫೈನಲ್ ಸಿಂಗಲ್ಸ್ ಆಟದಲ್ಲಿ ಯುನೈಟೆಡ್ ಕ್ಲಬ್ಬಿನ ಪರವಾಗಿ ಆಡಿದ ಮೆ|| ಮನಿಯಪಂಡ ಎಂ ತಿಮ್ಮಯ್ಯನವರು ಮೆ|| ಬಸಪ್ಪನವರನ್ನು ಸೋಲಿಸಿಯೂ ಡಬ್ಬಲ್ ಫೈನಲ್ ಆಟದಲ್ಲು ಮೆ|| ಎಂ ಎಂ ತಿಮ್ಮಯ್ಯ ಮತ್ತು ತಮ್ಮ ಮೆ|| ಎಂ. ಎಂ ಕಾರ್ಯಪ್ಪನವರು ಯುನೈಟೆಡ್ ಕ್ಲಬ್ಬಿನವರ ಪರವಾಗಿ ಆಡಿ ಸ್ಕೂಲಿಗಾಗಿ ಆಡಿದ ಮೆ|| ಕೊಂವಂಡ ಐಯ್ಯಣ್ಣ ಮತ್ತು ತಮ್ಮ ಮೆ|| ಸುಬ್ಬಯ್ಯನವರನ್ನು ಸೋಲಿಸಿಯೂ ಎರಡು ಬಟ್ಟಲುಗಳನ್ನು ಯುನೈಟೆಡ್ ಕ್ಲಬ್ಬಿಗೆ ಗೆದ್ದರು

ಕಳೆದ ಆದಿತ್ಯವಾರ ದಿನ ಮಡಿಕೇರಿಯಲ್ಲಿ ಹೈಸ್ಕೂಲಿನ ಹಿಂದುಗಡೆಯಲ್ಲಿ ಹರಿಯುವ ತೋಡಿನಲ್ಲಿ ಡಿ ಪಿ ಡಬ್ಲ್ಯು ಡಿ ಡಿಪಾರ್ಟಮೆಂಟಿನ ಬಿ ಬೋಟಪ್ಪನವರ ಮಗನೊಬ್ಬನು ಗ್ರಾಪುನೋವಿನಿಂದ ಪೀಡಿತನಾಗಿ ನೀರಿಗೆ ಬಿದ್ದು ಮೃತನಾದನು

ಟೆರಿಟೋರಿಯಲ್ ಪಟಾಲಾಮಿನವರು ತಾ|| 13 ರಲ್ಲಿ ಪೋಲೀಸ್ ಟ್ರೈನಿಂಗ್ ಶಾಲೆಯಿಂದ ಹೈಸ್ಕೂಲಿಗೆ ವರ್ಗಾಯಿಸಿರುವರು. ಪೂರ್ತಿ ಪಟಾಲಾಮಿಗೆ ತಾ|| 18 ರಿಂದ ಕವಾತು ಪ್ರಾರಂಭಿಸುವುದು

ಕ್ರಿಕೆಟ್ ಟೂರ್ನಮೆಂಟು ಮ್ಯಾಚ್ ಕಾಂಪೌಂಡಿನಲ್ಲಿ ನಡೆಯುತ್ತಾ ಇದೆ. ತಾ|| 9 ಮತ್ತು 10 ರಲ್ಲಿ ಉತ್ತರಕೊಡಗಿನ ಜಿಮ್ಖಾನದವರು ಮಡಿಕೇರಿ ಹೈಸ್ಕೂಲಿನವರನ್ನು ಸೋಲಿಸಿದರು.

ತಾ|| 17 ರಲ್ಲು ಕೊಡಗಿನ ಪೋಲೀಸ್ ಪಟಾಲಾಮಿನ ವಾರ್ಷಿಕ ಸ್ಪೋರ್ಟ್ಸ್ ಮಡಿಕೇರಿ ರಾಜಸೀಟಿನ ಬಳಿ ಇರುವ ಮೈದಾನಿನಲ್ಲಿ ನಡೆಯಿತು. ವಿಧವಿಧದ ಪಂಥದ ಆಟಗಳು ಓಟಗಳು ನಡೆದವು. ನಂತರ ಒಂದು ಎಟ್‌ಹೋಮ್ ಆಯಿತು

ಕಳೆದವಾರ ಹೈಸ್ಕೂಲಿನ ರಜೆಯ ವಿಷಯ ಪ್ರಕಟಿಸಿದರಲ್ಲಿ ಮೇ ತಾರೀಕು 19 ರವರೆಗೆ ರಜೆ ಎಂದು ಓದತಕ್ಕದ್ದು. ವೀರಾಜಪೇಟೆ ಹೈಸ್ಕೂಲಿಗೂ ಹೀಗೆಯೇ ರಜೆ ಕೊಡಲ್ಪಟ್ಟಿದೆ.

ಹೈಸ್ಕೂಲಿನ ಹಳೇ ವಿದ್ಯಾರ್ಥಿಗಳ ಸಂಘದವರು ರೆಡ್ ಕ್ರಾಸ್ ಸೊಸೈಟಿಯ ಸಹಾಯಾರ್ಥವಾಗಿ 'ವಿಷ್ಣುಲೀಲ' ವೆಂಬ ನಾಟಕವನ್ನು ತಾ|| 13ರಲ್ಲು ಹೈಸ್ಕೂಲಿನ ಹಾಲಿನಲ್ಲಿ ಅಭಿನಯಿಸಿದರು.

ಏಪ್ರಿಲ್ ತಾ|| 19 ಮತ್ತು 20ರಲ್ಲಿ ಕುದಿಕೇರಿಯಲ್ಲಿ ಬಮಿನುದಾರರ ಸಂಘದ ವಾರ್ಷಿಕ ಜನರಲ್ ಮಹಾಸಭೆಯು ಮೆ|| ಸಿ ಯಿಸ್. ಉತ್ತಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು

ತಾ|| 15ರಲ್ಲು ಕೊಡಗು ಕೋಅಪರೇಟಿವ್ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಮಡಿಕೇರಿ ಮುನ್ಸಿಪಲ್ ಆಫೀಸಿನಲ್ಲು ನಡೆಯಿತು

ಕೊಡಗಿನಿಂದ ಡಿಸ್ಟ್ರಿಕ್ಟು ಪ್ರೆಸ್ಸು ಬೆಂಗಳೂರಿಗೆ ವರ್ಗಾಯಿಸಲ್ಪಟ್ಟನಂತರ ಈ ಪ್ರೆಸ್ಸಿನಲ್ಲಿ ಮೊದಲೇ ಪ್ರಿಂಟಾಗಿದ್ದ ಬ್ರೀಚಾಫ್ ಕಂಟ್ರಾಕ್ಟು ಫಾರಮುಗಳನ್ನು ಮೆ|| ಕಾಮತ್‌ರವರಿಂದ ತೆಗೆದುಕೊಂಡ ಕೋಲಗಾರರನ್ನು ಕಮಿಷನರವರು ವಿಚಾರಿಸಿದಮೇಲೆ ಕಾಮತ್‌ರವರು ಈ ಬಗ್ಗೆ ಸುಮಾರು 16 ರೂ ನ್ನು ಸರ್ಕಾರಕ್ಕೆ ಕಟ್ಟಬೇಕಾಗಿ ಬಂತಂತೆ

ಕಳೆದವಾರ ಹೆಚ್ಚು ಕಡಿಮೆ ದೇಶದ ಎಲ್ಲಾ ಕಡೆಗಳಲ್ಲೂ ಮಳೆ ಬಿದ್ದಿದೆಯಾಗಿ ವರ್ತಮಾನ. ಕೆಲವು ಸ್ಥಳಗಳಿಗೆ ಬಹಳ ಜೋರು. ಮಳೆ ಇಲ್ಲದೆ ಇರುವ ಸ್ಥಳಗಳು ಸ್ವಲ್ಪ. ಇದೇ ದೇಶದ ಜನವು ಸ್ವಲ್ಪ ತಂಪಾಗಿದೆ. ಕಸಿತುಲ್ಲು ತೆಗೆಯುವ ರೈತರುಗಳಿಗೆ ಮೆಣಸು ಉಂಟಾಗಿದೆ

ತಾ|| 20ರಲ್ಲು ಬೇಗ್ಗೆ ಕುದಿಕೇರಿಯಲ್ಲು ಅಮ್ಮ ಕಮಯ ಸಂಘದ ವಾರ್ಷಿಕ ಸಭೆಯು ರಾ|| ಬಾ|| ಕೋದಂಡ ಅಪ್ಪಯ್ಯನವರ ಅಧ್ಯಕ್ಷತೆಯಲ್ಲು ನಡೆಯುವುದು.

ಶ್ರೀಕಾವೇರಿ ಬಸ್ ಸರ್ವೀಸಿನ ಬೆಳಗ್ಗೆ ಮಡಿಕೇರಿಯಿಂದ ಹೊರಡುವ ಒಂದು ಬಸ್ಸು ಮಾತ್ರ ಕ್ರಮವಾಗಿ ನಡೆಯುತ್ತಿದೆ. ಮತ್ತೊಂದು ಬಸ್ಸು ಸರಿಯಿಲ್ಲದೆ ನಿಂತು ಹೋಗಿರುವುದರಿಂದ ಪ್ರಯಾಣಿಕರಿಗೆ ಬಹಳ ತೊಂದರೆಯುಂಟಾಗಿದೆ.

ತಾ|| 5ರಲ್ಲು ಪೊನ್ನಂಪೇಟೆ ಮೇತೂರು ಗ್ರಾಮದಲ್ಲಿ ಮೆ|| ಪುಲಿಯಂಡ ಚಿಣ್ಣಪ್ಪನವರು ಬೇಟೆಯಲ್ಲಿ ಒಂದು ಹುಲಿಯನ್ನು ಗುಂಡುಹೊಡೆದರು. ಗಾಯವಾದ ಹುಲಿಯು ಎದುರು ಬಿಲ್ಲು ಹಿಡಿದಿದ್ದ ಮೆ|| ಕುಟ್ಟಂಡ ಬಿದ್ದಯ್ಯನವರ ಮೇಲೆ ಬಿದ್ದು ತಲೆಗೂ ಮೈಗೂ ಗಾಯಮಾಡಿದರೂ ಅವರು ಅದನ್ನು ಮುಂದಕ್ಕೆ ನೂಕಿ ಗುಂಡುಹಾಕಿದರು. ಸಾಯದ್ದನ್ನು ಕಂಡು ಮೆ|| ಪುಲಿಯಂಡ ಸೋಮಯ್ಯನವರು ಗುಂಡುಹಾಕಿ ಅದನ್ನು ಕೊಂದರು. ಮೆ|| ಪಿ ಚಿಣ್ಣಪ್ಪನವರಿಗೆ ಏನೂ ಪೆಟ್ಟಾಗಲಿಲ್ಲ. ಆದರೆ ಮೆ|| ಬಿದ್ದಯ್ಯನವರು ತಾ|| 6ರಲ್ಲು ಆದ ಗಾಯದಿಂದ ವೀರಾಜಪೇಟೆ ಆಸ್ಪತ್ರೆಯಲ್ಲಿ ಮೃತರಾದರು.

ಕೊಡಗಿನ ಕಲೆಕ್ಟರ್ ಮತ್ತು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾದ ಮೆ|| ಟಿ ಆಸ್ಟಿನ ರವರು ಕಳೆದವಾರ ಮಡಿಕೇರಿಗೆ ಬಂದು ತಾ|| 14ರಲ್ಲು ವಾಪಾಸು ಹೋದರೆಂದು ತಿಳಿಯುತ್ತದೆ

ಕೊಡಗಿನ ಕಮಿಷನರವರು ನಾಲ್ಕುನಾಡಿಗೆ ಕ್ಯಾಂಪಿಂಗ್ ಹೋಗಿ ವಾಪಾಸು ಬಂದಿರುವರು

ದೇವಣಗೇರಿ ಗ್ರಾಮದ ಮೆ|| ಮುಕ್ಕಾಟಿರ ಐಯ್ಯಪ್ಪನವರು ಈ ತಾ|| 14ರಲ್ಲು ತಮ್ಮ ಸ್ವಂತಭವನದಲ್ಲು ಶಿವಾಧೀನರಾದರು. ಇವರಿಗೆ ಸುಮಾರು 6 ವರ್ಷ ಪ್ರಾಯವಾಗಿರಬಹುದು. ಕೊಡಗಿನಲ್ಲಿ ಹೆಚ್ಚು ಹಳಬರಾಗಿ ಮೃತಪಟ್ಟವರಲ್ಲಿ ಇವರೊಬ್ಬರು.

ಹಿಂದೂದೇಶ.

ಬೈಟೊದಲ್ಲಿ ಸೆರೆಹಿಡಿಯಲ್ಪಟ್ಟ ಮೊದಲನೇ ಜಟದ 50 ಜನರನ್ನು ಬಿಡುಗಡೆ ಮಾಡಿದರು. ಆದರೆ ಅವರ ಪುನಹ ತಮ್ಮ ಪ್ರತಿಜ್ಞೆಪ್ರಕಾರ ಗುರುದ್ವಾರ ಗಂಗ್ಸಾರವನ್ನು ಸಂದರ್ಶಿಸುವ ಬಗ್ಗೆ ಜೈಟೋಕ್ಕೆ ಹೋದರು. ಪುನಹ ಸೆರೆಹಿಡಿಯಲ್ಪಟ್ಟರು. ನಾಲ್ಕನೇ ಷಾಹಿದಿ ಜಟವು ಜೈಟೋಕ್ಕೆ ಈ ತಾರೀಕು 18 ರಲ್ಲು ತಲಪಲಿಕ್ಕಿದೆ. ಜನರಲ್ಲಿ ಉತ್ಸಾಹವು ಎಂದಿನಂತೆಯೇ ಇದೆ

ಅನೇಕ ವರ್ಷಗಳಿಂದ ಮದ್ರಾಸು ಲಾ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಮೆ|| ಆರ್ಥರ್ ಡೇವಿಸ್‌ರವರು ಫರ್ಲೋ ರಜೆಯಲ್ಲಿ ತಾ|| 10 ರಲ್ಲು ಮದ್ರಾಸಿನಿಂದ ಇಂಗ್ಲೆಂಡಿಗೆ ಹೊರಟು ಹೋದರು

ವೈಸರಾಯರು ಸೆಂಟ್ರಲ್ ಪ್ರಾವಿನ್ಸಿನಲ್ಲಿ ಸುತ್ತಿ ಅಲ್ಲಿಯ ಸ್ಥಿತಿಯನ್ನು ನೋಡಿ ಈಗಿರುವ ಕೌನ್ಸಿಲಿನಲ್ಲಿ ಸ್ವರಾಜ್ಯಪಾರ್ಟಿಯವರಿಗೆ ಬಹುಮತವಿದ್ದು ಸರ್ಕಾರದ ಎಲ್ಲಾ ಕೆಲಸಗಳಿಗೂ ಅಡ್ಡಿಯಾಗುತ್ತಿರುವುದರಿಂದ ಈ ಕೌನ್ಸಿಲನ್ನು ಬರಖಾಸ್ತು ಮಾಡಿ ಪುನಹ ಚುನಾವಣೆ ಮಾಡಬೇಕೆಂದು ಅಭಿಪ್ರಾಯಕೊಟ್ಟಿರುವರಾಗಿಯೂ ಹೊಸಚುನಾವಣೆಯು ಸುಮಾರು ಜೂನ್ ಯಾ ಜುಲೈಯಲ್ಲಿ ನಡೆಯಬಹುದಾಗಿಯೂ ವರ್ತಮಾನ

ತಿರುವಾಂಕೂರಿನ ಕೆಲವು ಪಬ್ಲಿಕ್ ರಸ್ತೆಗಳಲ್ಲಿ ತೀಯರೇ ಮೊದಲಾದ ಹಿಂದುಳಿದ ಪಂಗಡದವರು ತಿರುಗಾಡಕೂಡದೆಂದು ಉತ್ತಮ ಜಾತಿಯ ಹಿಂದುಗಳು ಆಕ್ಷೇಪಿಸುತ್ತಿರುವರು. ಇದನ್ನು ಹೋಗಲಾಡಿಸಬೇಕೆಂದು ಕೆಲವು ನಂಬೂದ್ರಿಗಳು ತೀಯರೊಂದಿಗೆ ವೈಕೊಮ್ ಎಂಬಲ್ಲಿ ಪಬ್ಲಿಕ ರಸ್ತೆಯಲ್ಲಿ ಮೆರವಣಿಗೆ ಹೋಗಲು ಪ್ರಯತ್ನಿಸಿದರು. ಮೆರವಣಿಗೆಯನ್ನು ಬಿಡಕೂಡದೆಂದು ಅಲ್ಲಿಯ ಮಹಾರಾಜರ ಸರ್ಕಾರವು ಹುಕುಂ ಮಾಡಿತು. ಹುಕುಮನ್ನು ಉಲ್ಲಂಘಿಸಿ ಸತ್ಯಾಗ್ರಹವನ್ನು ಆಚರಿಸಲು ಅನೇಕರು ತಯಾರಾದರು. ಅಂಥಾವರನ್ನು ಕೆಲವು ಮುಂದಾಳುಗಳನ್ನು ಸರ್ಕಾರದವರು ಸೆರೆಹಿಡಿದಿರುವರು. ಅನೇಕ ಮುಂದಾಳುಗಳೂ, ಮಹಾತ್ಮಗಾಂಧಿಯವರೂ ಈ ಚಳವಳಿಗೆ ಉತ್ತೇಜನಕೊಡುತ್ತಿರುವರು. ಮೆ|| ಜಾರ್ಜ್ ಜೋಸೆಫ್‌ರವರು ಸತ್ಯಾಗ್ರಹ ಕಮಿಟಿಯನ್ನು ಏರ್ಪಡಿಸಿಕೊಂಡು ವೈಕೊಮ್‌ನಲ್ಲಿ ಈ ಚಳವಳಿಯನ್ನು ನಡೆಸುತ್ತಿರುವರು. ಸ್ವಯಂಸೇವಕರನೇಕರು ಅಲ್ಲಿಗೆ ಹೋಗುತ್ತಿರುವರು. ತಾ|| 11 ರಲ್ಲಿ ಸತ್ಯಾಗ್ರಹಿಗಳನ್ನು ಸೆರೆಹಿಡಿಯುವುದನ್ನು ಬಿಟ್ಟು ಆ ರಸ್ತೆಗಾಗಿ ಅವರನ್ನು ದಾಟದಂತೆ ಪೋಲೀಸಿನವರು ತಡೆಯಲು ಪ್ರಾರಂಭಿಸಿರುವರು. ಪೋಲೀಸಿನವರು ಬಿಡುವವರೆಗೆ ಸ್ವಯಂಸೇವಕರು ಅನ್ನನೀರಿಲ್ಲದೆ ರಸ್ತೆಯಲ್ಲಿಯೇ ಕುಳಿತಿರುವರಂತೆ.

ಕಂಟೋನ್ಮೆಂಟಿನಲ್ಲಿ ಕಂದಾಯ ಕೊಡದೆ ಇರುವ ವಿಲಾಸದಾರರ ಕೋವಿ ಲೈಸೆನ್ಸನ್ನು ವಜಾಮಾಡಲು ಸರ್ಕಾರದವರು ಹುಕುಂ ಹೊರಡಿಸಿದರಂತೆ

ಹಿಂದೂಮುಸಲ್ಮಾನರಿಗೆ ಇರುವ ಮತಸಂಬಂಧ ಜಗಳಗಳನ್ನು ಫೈಸಲು ಮಾಡುವ ವಿಚಾರಕ್ಕಾಗಿ ಎರಡು ಕಡೆಗಳ ಮುಂದಾಳುಗಳ ಸಭೆ ಒಂದು ಬೊಂಬಾಯಿಯಲ್ಲಿ ತಾ|| 23 ರಲ್ಲು ನಡೆಯುವುದು.

ಮದ್ರಾಸು ಪ್ರಾಂತ್ಯದ ಹೊಸ ಗವರ್ನರಾದ ಹಾರ್ಕ್ಸ್ಟನ ವೈಕೌಂಟ್ ಗೋಷೆನ್‌ರವರು ತಾ|| 14 ರಲ್ಲು ಇಂಗ್ಲೆಂಡಿನಿಂದ ಮದ್ರಾಸಿಗೆ ಬಂದು ತಲಪಿರುವರು

ಸ್ವರಾಜ್ಯ ಮುಂದಾಳುಗಳ ಮತ್ತು ಮಹಾತ್ಮ ಗಾಂಧಿಯವರ ಮೀಟಿಂಗು ಬೊಂಬಾಯಿಯಲ್ಲಿ ನಡೆಯುತ್ತಲೇ ಇದೆ. ಕಾಯಿಲೆಯ ದೆಸೆಯಿಂದ ಚಿತ್ತರಂಜನದಾಸರವರಿಗೆ ಬಂಗಾಳದಿಂದ ಬೊಂಬಾಯಿಗೆ ಇನ್ನು ಬರಲಿಕ್ಕೆ ಸಾಧ್ಯವಾಗಿರುವುದಿಲ್ಲವಾದುದರಿಂದ ಕೌನ್ಸಿಲು ಬಹಿಷ್ಕಾರದ ವಿಷಯ ಯಾತೀರ್ಮಾನವೂ ಆಗಿರುವುದಿಲ್ಲ. ಮುಂದಾಳುಗಳ ಸಭೆಯೊಂದು ತಾ|| 25 ರಲ್ಲು ಬೊಂಬಾಯಿಯಲ್ಲಿ ನಡೆಯುವಂತೆ ಏರ್ಪಾಡಾಗಿದೆ. ಅಷ್ಟರೊಳಗೆ ಇಂಗ್ಲೆಂಡಿನ ಈಗಿನ ಸರ್ಕಾರದವರಿಗೆ ಇಂಡಿಯಾದ ಮೇಲಿರುವ ಅಭಿಪ್ರಾಯವು ಪಾರ್ಲಿಮೆಂಟಿನಲ್ಲಿ ತಾ|| 15 ರಲ್ಲು ಹೊರಬೀಳುವುದು.

ಬ್ರಿಟಿಷ್ ಸಾಮ್ರಾಜ್ಯದಲ್ಲಿ ತಯಾರಾಗುವ ಸಾಮಾನುಗಳನ್ನು ಬಹಿಷ್ಕರಿಸಾಕುವ ಚಳವಳವನ್ನು ನಡಿಸಲಿಕ್ಕೆ ಬೊಂಬಾಯಿಯ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು 9000 ರೂ ಮಂಜೂರು ಮಾಡಿರುವರು

ಮೆ|| ವಿ ಜೆ ಪಟೇಲರನ್ನು ಬೊಂಬಾಯಿ ಮುನ್ಸಿಪಾಲಿಟಿಯ ಪ್ರೆಸಿಡೆಂಟರಾಗಿ ಚುನಾಯಿಸಿರುವರು

ತಾ|| ರಲ್ಲು ಕ್ಯಾನ್‌ಪೂರದ ಹತ್ತಿಯ ಗಿರಣಿಯಲ್ಲಿ ಕೂಲಿಗಾರರಿಗೆ ಬೋನಸ್ಸು ಮತ್ತು ಸಂಬಳ ಸಾಲದೆಂದು ಗಲಾಟೆಯುಂಟಾಯಿತು. ಕೆಲಸ ಮಾಡುವುದಿಲ್ಲವೆಂದು ವಿಸ್ತರಿಸಿದಿದ್ದರು. ಬೇರೆಯವರನ್ನೂ ಹೀಗೆ ಮಾಡಲು ಬೋಧಿಸಿದರು. ಗಿರಣಿಯ ಗೇಟಿನ ಹೊರಗೆ ಹೋಗಲೇಳಿದರೂ ಹೋಗಲಿಲ್ಲವಾದುದು ಪೋಲೀಸ್ ಸಹಾಯ ಕೇಳಿದರು. ಪೋಲೀಸು ಸಹಿತ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಮತ್ತು ಪೋಲೀಸು ಸುಪರಿಂಟೆಂಡೆಂಟರ ಸಮೇತದಿಂದ ಕೂಡಲೆ ಅವರಿಗೆ ಕಲ್ಲುಗಳು ಎಸೆಯಲ್ಪಟ್ಟವೆಂದು ಜನರಮೇಲೆ ಅರುಸಲಗುಂಡುಹಾರಲ್ಪಟ್ಟಿತು. ನಾಲ್ಕು ಜನರು ಮೃತಪಟ್ಟವಲ್ಲದೆ ಅನೇಕರು ಗಾಯವಾಗಿ ಆಸ್ಪತ್ರೆಯಲ್ಲಿರುವರು. ಈಗ ಗಲಾಟೆಯೇನು ಇಲ್ಲವಂತೆ

ಖಿಲಾಫತ್ ಪ್ರತಿನಿಧಿಗಳು ಕೆಲವರು ಇಂಡಿಯಾದಿಂದ ತುರ್ಕಿಗೆ ಹೋಗಲು ಪಾಸ್‌ಪೋರ್ಟ್ ಕೊಡಬೇಕೆಂದು ಕೇಳಿದಕ್ಕೆ ಕೊಡಲಿಕ್ಕೆ ಆಗುವುದಿಲ್ಲವೆಂದು ಇಂಡಿಯಾ ಸರ್ಕಾರದವರು ಹೇಳಿರುವರು

ಬಂಗಾಳ ಕಾಂಗ್ರೆಸ್‌ಕಮಿಟಿಯವರು ಕಲ್ಕತ್ತಾ ಕಾರ್ಪೋರೇಶನಿನ ಮೇಯರಾಗಿ ಮೆ|| ಸಿ ಆರ್. ದಾಸ್‌ರವರನ್ನೂ, ಡೆಪ್ಯುಟಿಮೇಯರಾಗಿ ಮೆ|| ಸುರಾ ಮವರನ್ನೂ ನೇಮಿಸಬೇಕೆಂದು ತೀರ್ಮಾನಿಸಿಕೊಂಡಿರುವರು

ಅಸ್ಸಾಮಿನ ಕೌನ್ಸಿಲಿನವರು ತೀರ್ಮಾನಿಸಿದಮೇರೆ ಅಲ್ಲಿಯ ಮಂತ್ರಿಗಳು ತಿಂಗಳಿಗೆ 1000 ರೂ ಸಂಬಳದಲ್ಲಿ ಕೆಲಸಮಾಡಲು ಒಪ್ಪಿಕೊಂಡಿರುವರು

ಬರೋಡಾ ಗಾಯಕ್‌ವಾಡ್ ಮಹಾರಾಜರವರ ಕಾಯಿಲೆಯು ಇನ್ನೂ ವಾಸಿಯಾಗಿರುವುದಿಲ್ಲ. ಅವರನ್ನು ಮಾತೆರನ್ನಿಗೆ ಒಯ್ದಿರುವರು. ತಾ|| 26 ರಲ್ಲು ಅಲ್ಲಿಂದ ಅವರು ಇಂಗ್ಲೆಂಡಿಗೆ ಹೊರಗಲಿಕ್ಕಿರುವರು

ಮೌಲಾನಾ ಮಹಮ್ಮದಲಿಯವರಿಗೆ ಜ್ವರವು ಪುನಹ ಸ್ವಲ್ಪ ವಿಮಿತ್ತಿರುವಂತೆ ಆದರೆ ಬೇಗನೆ ಗುಣವಾಗುತ್ತಿರುವುದು

ಪಂಡಿತ ಮದನಮೋಹನಮಾಳವೀಯರು ಬೊಂಬಾಯಿಯಲ್ಲಿ ಒಂದು ಉಪನ್ಯಾಸದಲ್ಲಿ ಹೇಳಿರುವುದೇನಂದರೆ ಮಾಂಟೆಗ್ಯು ಸುಧಾರಣೆಗಳು ಕಂದಾಯ ಹಾಕುವ ಹಕ್ಕುಗಳನ್ನು ಕೊಟ್ಟಿದೆ. ಕಲೂ ಸರಕಾರದವರ ಮನಸ್ಸಿನ ದುಂದು ಖರ್ಚನ್ನು ತಡೆಯಲಿಕ್ಕೆ ಶಕ್ತಿ ಕೊಟ್ಟಿಲ್ಲವಂತಲೂ ಆದ್ದರಿಂದ ಎಡೆಂಬ್ಲಿಯನ್ನು ಮಾಡುವ ಸರಕಾರದ ಎಲ್ಲಾ ಕೆಲಸಕ್ಕೂ ಅಡ್ಡಿಮಾಡುವುದೇ ಉತ್ತಮದಾರಿ ಎಂತಲೂ ಹೇಳಿದರು.

ಮದ್ರಾಸ್ ಶಾಸನವಿಧಾಯಕ ಸಭೆಯಲ್ಲಿ ಹಳೆ ಕೌನ್ಸಿಲಿನಲ್ಲಿ ಮಂಜೂರಾದ ರಿಲಿಜಿಯಸ್ ಎಂಡೋಮೆಂಟ್ ಬಿಲ್ಲಿಗೆ ದೇಶದವರು ವಿರೋಧಿಸಿದ್ದರಿಂದ ಅದನ್ನು ಪುನರ್ವಿಮರ್ಶೆಗೆ ತಿದ್ದುಪಡಿಮಾಡಿ ಗವರ್ನರವರು ಕಳುಹಿಸಿದ್ದರು. ಅದರವಿಷಯ ಚರ್ಚೆಯನ್ನು ಈಗ ಮಾಡಬಾರದೆಂತ ಮೆಂಬರುಗಳು ವಿರೋಧಿಸಿದರೂ ಬಹುಮತದಿಂದ ಈಗಲೇ ಚರ್ಚೆಮಾಡಬೇಕೆಂತ ಆದ್ದರಿಂದ ವಿರೋಧಪಕ್ಷದವರು ಕೌನ್ಸಿಲಿನಿಂದ ಹೊರಟುಹೋದರು

ವಿದೇಶ

'ಹೌಸ್‌ಆಫ್‌ಕಾಮನ್ಸ್' ಎಂಬ ಇಂಗ್ಲೆಂಡಿನ ಪಾರ್ಲಿಮೆಂಟಿನ ಮೆಂಬರುಗಳ ಪ್ರಯಾಣದ ಬತ್ಯಕ್ಕಾಗಿ 77000 ಪೌನುಗಳನ್ನು ಈ ವರ್ಷದ ಬಡ್ಜೆಟಿನಲ್ಲಿ ಮಂಜೂರು ಮಾಡಿರುವರು.

ಗ್ರೀಸಿನಿಂದ ಗಡೀಪಾರು ಮಾಡಲ್ಪಟ್ಟು ಈಗ ಬುಖಾರೆಸ್ಟಿನಲ್ಲಿರುವ ಗ್ರೀಸಿನ ರಾಜ F ರಾಜರವರ, ಗ್ರೀಸ್ ಜನಾಂಗಕ್ಕೆ ಅಲ್ಲಿಯ ಈಗಿನ ಸರ್ಕಾರವು ನಡೆಸುತ್ತಿರುವ ಅನ್ಯಾಯವನ್ನು ವಿರೋಧಿಸಿಯೂ, ಪ್ರಜೆಗಳಿರುವ ರಾಜಭಕ್ತಿಯನ್ನು ತೋರಿಸಲು ಸ್ವಾತಂತ್ರ್ಯಕೊಡಬೇಕೆಂತಲೂ, ತನಗೆ ಪುನಹ ರಾಜ್ಯವನ್ನು ಬಿಟ್ಟುಕೊಡಬೇಕೆಂದೂ, ಗ್ರೀಸಿನವರಿಗೆ ಕನಿಕರ ಹುಟ್ಟುವಂತೆ ಅಪೀಲು ಮಾಡಿರುವರು.

ರಾಜೀನಾಮೆ ಕೊಟ್ಟು ದೇಶಾಂತರದಿಂದ ಬುಡಮೆಸ್ಟ್‌ಗೆ ಹೋಗಿದ್ದ ಪರ್ಷಿಯಾದ ಮಂತ್ರಿಯಾದ ಸರ್ದಾರ್ ಸೆಫಾ [illegible] ಮೇಲೆ ಅಲ್ಲಿಯ ಮೆಜಲಿಸ್ ಪಾರ್ಲಿಮೆಂಟು ವಿಶ್ವಾಸದ ಠರಾವನ್ನು ಪಾಸುಮಾಡಿ ಅವರು ಪುನಃ ಅಧಿಕಾರ ವಹಿಸುವಂತೆ ಕೇಳಿಕೊಳ್ಳಲಾಗಿದೆ.

ಶ್ರೀಮತಿ ಸರೋಜಿನೀದೇವಿ ನಾಯ್ಡು ದಕ್ಷಿಣ ಆಫ್ರಿಕದಲ್ಲಿ ಸಂಚರಿಸುತ್ತಿರುವರು. ಪ್ರತಿ ಪಟ್ಟಣಗಳಲ್ಲಿ ಅವರಿಗೆ ಹೋಗಳಿಕೆಯಾದ ಸ್ವಾಗತವನ್ನೀಯುತ್ತಿರುವರು. ಸಾವಿರಾರು ಇಂಡಿಯನ್ನರು ಅವರನ್ನು ಎದುರುಗೊಳ್ಳಲು ಬಹು ದೂರದಿಂದ ಅಲ್ಲಲ್ಲಿ ಸೇರುತ್ತಿರುವರು.

ರಷ್ಯಾದೇಶದ ರಿಪಬ್ಲಿಕನ್ನರ ಪಾರ್ಟಿಯ ಕೌನ್ಸಿಲಿನ ಅಧ್ಯಕ್ಷರಾಗಿರುವ ಟ್ರಾಟ್‌ಸ್ಕಿಯವರು ಕಾಯಿಲೆಯಿಂದ ವಿಮುಕ್ತರಾಗಿ ಈಗ ಪುನಃ ತಮ್ಮ ಅಧಿಕಾರ ವಹಿಸಿರುವರು.

ಬವೇರಿಯದ ಸಮ್ಮಂಧವಾಗಿ ಮಿಲಿಟರಿ ಕೋರ್ಟು ವಿಚಾರಣೆ ನಡೆಸುತ್ತಿರುವ ಜನರಲ್ ಲೂಡನ್‌ಡಾರ್ಫ್ ಅವರು ನವೆಂಬರ್ 1ರಲ್ಲಿ ನಡೆಸಿದ [illegible] ಸರ್ಕಾರಕ್ಕೆ ವಿರೋಧವಾದ ಯಾವ ಆಧಾರವೂ ಸಿಕ್ಕದೆ ಇರುವುದರಿಂದ ಪುನಃ ಬಿಡುಗಡೆ ಹೊಂದಿರುವರು.

ಜಮೀನುದಾರರ ಸಂಘದ ವಸೂಲಿ

ಅಸಿಸ್ಟೆಂಟ ಸೆಕ್ರೆಟರಿ ಮೆ|| ಬಿದ್ದಂಡ ಕಾರ್ಯಪ್ಪನವರು, ಈ ವರ್ಷ ಏರ್ಪಾಡುಮಾಡಿದ ನಾಡುಕಮಿಟಿಗಳ ಪೈಕಿ ಈ ಕೆಳಗೆ ಕಂಡ ಕಮಿಟಿಗಳಿಂದ 300—1—0 ರೂಪಾಯಿಗಳು ಚಂದಾ ವಸೂಲಾಗುತ್ತದೆ. ಬೇರೆ ಕಮಿಟಿಗಳಿಂದ ಈ ತಾರೀಖ್ ಹಣ ಕಳುಹಿಸದೆ ಇರುವುದರಿಂದ ಆಗಾಗ ನ್ಯಾಯವಾದ ಪಟ್ಟಿಪ್ರಕಾರ ಹಣ ಕಳುಹಿಸಬೇಕಾಗಿಯೂ ಮತ್ತು ಬಾಕಿ ಕಮಿಟಿಗಳು ಜಾಗ್ರತೆಯಾದ್ದರಿಂದ ವಿಶ್ವ ಚಂದಾ ಮೊದಲಾದವುಗಳು ವಸೂಲಾತಿ ಕಳುಹಿಸಬೇಕಾಗಿಯೂ ಸದರಿ ಸಂಘದ ಜನರಲ ಸೆಕ್ರೆಟರಿಯಾದ ಮೆ|| ಕೆ. ಎಸ್. ವೆಂಕಪ್ಪಯ್ಯನವರು ಕೋರುತ್ತಾರೆ.

ಚಂದಾ ಕಳುಹಿಸಿಕೊಟ್ಟ ನಾಡುಕಮಿಟಿಗಳ ತಪಸೀಲ್

ಮಾದಾಪುರನಾಡುಕಮಿಟಿ ಸೆಕ್ರೆಟರಿ ಮರಗನ ಬೋಪ್ಪಯ್ಯನವರ ಮೂಲಕ ಜಮೆಗೆ ಬಂದ ಹಣ	15—0—0
ಬೆಳ್ಳುನಾಡುಕಮಿಟಿ ಟ್ರೆಜರರ್ ಮ ಪಟ್ಟ ಟ್ಟಿರ ಅಚ್ಚಪ್ಪನವರ ಮೂಲಕ	8—0—0
ಮಂಗೇರಿ ನಾಡುಕಮಿಟಿ ಟ್ರೆಜರರ್ ಕು ಟ್ಟೇಟಿರ ಅಪ್ಪಚ್ಚನವರ ಮೂಲಕ	2—0—0
ಕರಡಿಬೆಟ್ಟನಾಡುಕಮಿಟಿ ಟ್ರೆಜರರ್ ಕರಿಯಂಡ ಸುಬ್ಬಯ್ಯನವರ ಮೂಲಕ	18—0—0
ಬೆಪ್ಪತ್ತುನಾಡುಕಮಿಟಿ ಟ್ರೆಜರರ್ ಮೆ|| ಮ ದಾಪ್ಪೊದ್ ಕಾರ್ಯಪ್ಪನವರ ಮೂಲಕ	92—0—0
ಸ್ವಿರಂನಾಡುಕಮಿಟಿ ಟ್ರೆಜರರ್ ಮೆ|| ಮೇಕೇರಿರ ಪೊನ್ನಪ್ಪನವರ ಮೂಲಕ	19—0—0
ಸೂರ್ಲಬಿನಾಡುಕಮಿಟಿ ಟ್ರೆಜರರ್ ಮಿನ್ನಂಡ ಪೊನ್ನಯ್ಯನವರ ಮೂಲಕ	17—0—0
ಕಾಂತ ಮೂರ್ನಾಡ ಕಮಿಟಿ ಟ್ರೆಜರರ್ ಮೆ|| ಒಡವಂಡ ಗಣಪತಿಯವರ ಮೂಲಕ	15—0—0
ಕಿರುನಾಲ್ಕುನಾಡುಕಮಿಟಿಯ ಟ್ರೆಜರರ್ ಪುಚ್ಚಿಮಂಡ ಪೊನ್ನಯ್ಯನವರ ಮೂಲಕ	9—0—0
ಕಂಗಣತ್ತುನಾಡುಕಮಿಟಿ ಟ್ರೆಜರರ್ ಮೆ|| ಬಿಯ್ಯಂಡ ಸಂಜಪ್ಪನವರ ಮೂಲಕ	7—0—0
ಬೇಟೋಳಿನಾಡುಕಮಿಟಿಯ ಟ್ರೆಜರರ್ ಬಲ್ಲ ಚಂಡ ಬಿದ್ದಪ್ಪನವರ ಮೂಲಕ	13—9—0
ಕಾಮಗೇರಿನಾಡ ಕಮಿಟಿ ಟ್ರೆಜರರ್ ಕೋಟ್ಯಮಾಡ ಕಾರ್ಯಪ್ಪನವರ ಮೂಲಕ	15—0—0
ಕುಕ್ಲನಾಡುಕಮಿಟಿಯ ಟ್ರೆಜರರ್ ಕುಂಬ ಗಳ ಕುಂಞಪ್ಪನವರ ಮೂಲಕ	7—1—0
ಕಿರುಂದಾಡುನಾಡುಕಮಿಟಿಯ ಟ್ರೆಜರರ್ ಕಲಿಯಂಡ ಪೊನ್ನಯ್ಯನವರ ಮೂಲಕ	6—0—0
	310—1—0
ಅಸಿಸ್ಟೆಂಟ್ ಸೆಕ್ರೆಟರಿ ಮೆ|| ಬಿದ್ದಂಡ ಕಾರ್ಯಪ್ಪನವರ ಮೂಲಕ	50—0—0
	360—1—0

ಮೇಲ್ಕಂಡ ಕಮಿಟಿಯವರು ವಿನಾ ಬಾಕಿ ಕಮಿಟಿಯವರು ಅಸಿಸ್ಟೆಂಟ್ ಸೆಕ್ರೆಟರಿ ಬಿದ್ದಂಡ ಕಾರ್ಯಪ್ಪನವರಿಗೆ ಎಷ್ಟು ಹಣ ಕೊಟ್ಟಿದ್ದಾರೆಂಬುದು ಕಳುಹಿಸಿದವರನ್ನೂ ಕೇಳಿಕೊಳ್ಳಬೇಕಾಗಿ ಮತ್ತು ಜನರಲ್ ಸೆಕ್ರೆಟರಿಯವರಿಗೆ ಸಂಘದ ಹಣ ವಸೂಲಾದದ್ದನ್ನು ವರದಿ ಕಳುಹಿಸಬೇಕಾಗಿ ಕೋರಿಕೆ.

ಕೊಡಗು ಜಮೀನ್ದಾರರ ಸಂಘ.

ಪ್ರಚಾರಕ ಕಾರ್ಯದರ್ಶಿಯವರಿಂದ.

ಸಂಘದ ಉದ್ದೇಶವನ್ನು ನೆರವೇರಿಸಲಿಕ್ಕಾಗಿ 25 ಸಾವಿರ ಜನರು ಸುಭಕ್ತ ಮಾರ್ಕ ಮೆಂಬರಗಳಾಗಿ ಮೊದಲು ವರ್ಷದ ಚಂದಾ ಮೊದಲಾಗಿ ಒಂದು ರೂಪಾಯಿಯನ್ನು ಅವರವರ ನಾಡುಕಮಿಟಿ ಖಜಾನಿಯವರಲ್ಲಿ (Treasurer) ಕೊಟ್ಟು ಮೆಂಬರಾಗಬೇಕಾಗಿ ವಿನಂತಿ.

ಕೊಡಗು ಜಮೀನ್ದಾರರ ಸಂಘದಲ್ಲಿ ಈವರೆಗೆ ಏರ್ಪಾಡಾದ ನಾಡುಕಮಿಟಿಗಳ ಮತ್ತು ಮೆಂಬರುಗಳ ತಪಸೀಲ್.

ಕಿರುನಾಲ್ಕುನಾಡುಕಮಿಟಿ.

ಪ್ರೆಸಿಡೆಂಟರು—ಕೋಳಿಮಾಡ ಕರುಂಬಯ್ಯನವರು
ಸೆಕ್ರೆಟರಿಯವರು—ಚೆಪ್ಪುಡೀರ ಪೂವಯ್ಯನವರು
ಟ್ರೆಜರರ್—ಪುಚ್ಚಿಮಾಡ ಪೊನ್ನಯ್ಯನವರು
ಕಮಿಟಿ ಮೆಂಬರುಗಳು
ಪೊನ್ನಂಪೇಟೆ—ಚೆಪ್ಪುಡೀರ ಎ. ಪೊನ್ನಪ್ಪನವರು
ಕಿರುಗೂರುಗ್ರಾಮ—ಚೆಪ್ಪುಡೀರ ಕೆ. ಚಿಟ್ಟಿಯಪ್ಪನವರು
,, ಆಲೆಮಾಡ ಎಂ. ಗಣಪತಿಯವರು
,, ಕೊಕ್ಕೆಂಗಡ ಕೆ. ಕುಟ್ಟಪ್ಪನವರು
ಮತ್ತೂರುಗ್ರಾಮ—ಆಲೆಮಾಡ ಸೋಮಯ್ಯನವರು
,, ಪುಗ್ಗಮಾಡ ಗಣಪಯ್ಯನವರು
,, ಮೇರಂಡ ಮುತ್ತಣ್ಣನವರು
ಕೋಟೂರುಗ್ರಾಮ—ಕೊಳ್ಳಿಮಾಡ ಬಿ. ಸುಬ್ಬಯ್ಯನವರು
,, ಕಾಟಿಮಾಡ ಸುಬ್ಬಯ್ಯನವರು
ನಲ್ಲೂರುಗ್ರಾಮ—ಚೆಟ್ಟಿಮಾಡ ಬಯ್ಯಪ್ಪನವರು
,, ಪುಚ್ಚಿಮಾಡ ಅಪ್ಪಯ್ಯನವರು
ಬೆಕ್ಕೆಸೊಡ್ಲೂರುಗ್ರಾಮ—ಮಂಡಮಾಡ ದೇವಯ್ಯನವರು
,, ಬಲ್ಯಮಾಡ ಸುಬ್ಬಯ್ಯನವರು
,, ಮಾಚ್ಚಂಗಡ ಯಸ್. ನಾಣಪ್ಪನವರು
,, ಅಡಮಣಮಾಡ ನಾಣಪ್ಪನವರು

ಹತ್ತುಗಟ್ಟುನಾಡುಕಮಿಟಿ.

ಪ್ರೆಸಿಡೆಂಟರು—ಮಾಚಂಗಡ ನಾಣಪ್ಪನವರು
ಸೆಕ್ರೆಟರಿಯವರು—ತೀತಮಾಡ ಸಂಪಪ್ಪನವರು
ಟ್ರೆಜರರ್—ಪೋಂಗಡ ಸೋಮಯ್ಯನವರು
ಕಮಿಟಿ ಮೆಂಬರುಗಳು
ಬೆಕ್ಕೆಸೊಡ್ಲೂರುಗ್ರಾಮ—ಮಚ್ಚಮಾಡ ಪೊನ್ನಪ್ಪನವರು
,, ಮಲ್ಲಮಾಡ ಅಪ್ಪಯ್ಯನವರು
ಕೊಟ್ಟಗೇರಿಗ್ರಾಮ—ಮಾಪಂಗಡ ಕರುಂಬಯ್ಯನವರು
,, ಮಾಪಂಗಡ ಸುಬ್ಬಯ್ಯನವರು
ನಿಡುಗುಂಬಗ್ರಾಮ—ಸುಳ್ಳಿಮಾಡ ಸೋಮಯ್ಯನವರು
,, ಕಾಣಬೆರ ಬೆಳ್ಯಪ್ಪನವರು
ಕಾನೂರುಗ್ರಾಮ—ಚೆಪ್ಪುಡೀರ ಕಾರ್ಯಪ್ಪನವರು
,, ಚೆರಿಯಪಂಡ ಅಪ್ಪಯ್ಯನವರು
ನಿಟ್ಟೂರುಗ್ರಾಮ—ತಾಣಚೆರ ಬಿದ್ದಪ್ಪನವರು
,, ಪೋರಂಗಡ ಅಪ್ಪಯ್ಯನವರು

ಅಂಜಿಗೇರಿನಾಡುಕಮಿಟಿ.

ಪ್ರೆಸಿಡೆಂಟರು—ಅಜ್ಜಿಕುಟ್ಟಿರ ಬೆಳ್ಯಪ್ಪನವರು
ಸೆಕ್ರೆಟರಿ—ಕಂತಮಾಡ ತಿಮ್ಮಯ್ಯನವರು
ಟ್ರೆಜರರ್—ಗುಂಡ್ಯರ ಮಾದಪ್ಪನವರು
ಕಮಿಟಿ ಮೆಂಬರುಗಳು
ಹುದಿಕೇರಿ—ತೀತಿರ ದೇವಯ್ಯನವರು
,, ಕಿರಿಯಮಾಡ ಮಾದಪ್ಪನವರು
,, ಮುಕ್ಕಾಟ್ಟಿ ರಾಮನಾಯರು
ಕೋಣಗೇರಿಗ್ರಾಮ—ಅಜ್ಜಿಕುಟ್ಟಿರ ಸುಬ್ಬಯ್ಯನವರು
,, ಚೆಕ್ಕೇರ ಬಿದ್ದಪ್ಪನವರು
ಚಿಕ್ಕಮಂಡೂರುಗ್ರಾಮ—ಕಳ್ಳಿಚಂಡ ಕರುಂಬಯ್ಯನವರು
,, ಅಜ್ಜಿಕುಟ್ಟಿರ ಸೋಮಯ್ಯನವರು
ಕೊಟ್ಟಮುಡಿಗೇರಿಗ್ರಾಮ—ಚಿಂದಮಾಡ ಬೋಪಯ್ಯನವರು
,, ಕರ್ತಮಾಡ ಸೋಮಯ್ಯನವರು
ಒಳ್ಳಮಂಡೂರುಗ್ರಾಮ—ದೇರಂಡ ತಿಮ್ಮಯ್ಯನವರು
,, ಮಾಚಿಮಾಡ ಮುದ್ದಯ್ಯನವರು
,, ಕೊಟ್ಟಂಗಡ ಬಯ್ಯಣ್ಣನವರು
ಬೆಸಗೂರುಗ್ರಾಮ—ಚೇರಂದಿರ ತಿಮ್ಮಯ್ಯನವರು
,, ಚೋನಮಾಡ ಮಾದಯ್ಯನವರು

ಬೇಗಿವಾಡಗ್ರಾಮ—ಕಾಳಮಾಡ ಗಣಪತಿಯವರು
,, ಮುತ್ತಿರಂಡ ಚಂಗಪ್ಪನವರು
ನಡಿಕೇರಿಗ್ರಾಮ—ಕೋಳೆರ ಚಂಗಪ್ಪನವರು
,, ಬಯ್ಯಪ್ಪನವರು
,, ಸೀಕೆರ ಮುದ್ದಯ್ಯನವರು
ಮುಗುಟಗೇರಿಗ್ರಾಮ—ಕಳ್ಳಿಚಂಡ ಮುದ್ದಯ್ಯನವರು
,, ಅರೆಮಾಡ ಪೊನ್ನಪ್ಪನವರು
ಪೈಸೊಡ್ಲೂರುಗ್ರಾಮ—ಮೊಟ್ಟಂಗಡ ಚಂಗಪ್ಪನವರು
,, ಚೋನಿರ ತಿಮ್ಮಯ್ಯನವರು

ಪೊನ್ನಂಪೇಟೆನಾಡುಕಮಿಟಿ.

ಪ್ರೆಸಿಡೆಂಟರು—ಕುಪ್ಪಂಡ ಮಾಚಯ್ಯನವರು
ಸೆಕ್ರೆಟರಿ—ಪುಲಿಯಂಡ ಮುದ್ದಪ್ಪನವರು
ಟ್ರೆಜರರ್—ಪುಲಿಯಂಡ ಉತ್ತಯ್ಯನವರು
ಕಮಿಟಿ ಮೆಂಬರುಗಳು
ಬಾಡಗರಕೇರಿಗ್ರಾಮ—ಕುಟ್ಟಂಡ ಗಣಪತಿಯವರು
ಬೆಸ್ಸಂಗಿಗ್ರಾಮ—ಬಡುವಮಂಡ ಮಂದಣ್ಣನವರು
ಜೆಸ್ಸಿನಕೋಟೆಗ್ರಾಮ—ಪಂಬಮಂಡ ಲಕ್ಕ
,, ಕುಪ್ಪಂಡ ಬೆಳ್ಯಪ್ಪನವರು
ಮೇಕೂರುಹೊಸಕೇರಿಗ್ರಾಮ—ಕಾಕಂಡ ಪೂಣಚ್ಚನವರು

ಕಂಗಣತ್ತುನಾಡುಕಮಿಟಿ.

ಪ್ರೆಸಿಡೆಂಟರು—ಚೆಪ್ಪುಡೀರ ಯಸ್. ಪೊನ್ನಯ್ಯನವರು
ಸೆಕ್ರೆಟರಿ—ಐಚೆಟ್ಟಿರ ಮುದ್ದಪ್ಪನವರು
ಟ್ರೆಜರರ್—ಬಿಯ್ಯಂಡ ಯಂ. ಸಂಜಪ್ಪನವರು
ಕಮಿಟಿ ಮೆಂಬರುಗಳು
ಮಾಯಮುಡಿಗ್ರಾಮ—ಬಲ್ಲಂಡ ಅಪ್ಪಣ್ಣಯ್ಯನವರು
,, ಬಂಗುಮಮುದ್ದು ಮಲ್ಲಿಯ ನವರು
,, ಚೆಪ್ಪುಡೀರ ಎ. ಬೆಳ್ಯಪ್ಪನವರು
ಬಾಳೆಲೆಗ್ರಾಮ—ಕೊಣಿಯಂಡ ಕಾರ್ಯಪ್ಪನವರು
,, ಕಾಳಿಮಾಡ ಸುಬ್ಬಯ್ಯನವರು
,, ಕುಂಞಿರಮೂಲೆ ಪಟ್ಟದೇವಸೆಟ್ಟರು
ನಿಟ್ಟೂರುಗ್ರಾಮ—ಕೆ. ಎ. ಕುಟ್ಟಪ್ಪನವರು
,, ನಾಣಮಂಡ ಸೋಮಯ್ಯನವರು
,, ಕಂಬೆರಂಡ ಕಾರ್ಯಪ್ಪನವರು
ಧನುಗಾಲಗ್ರಾಮ—ಬಾಚಂಡ ಸಂಜಪ್ಪಯ್ಯನವರು
,, ತೀತಮಾಡ ಮುದ್ದಯ್ಯನವರು
,, ಒಕ್ಕಲೀರ ಚಿಣ್ಣಯ್ಯನವರು
ರುದ್ರಗುಪ್ಪೆಗ್ರಾಮ—ಅಲೆಮಾಡ ಗಣಪತಿಯವರು
,, ಚೆಪ್ಪುಡೀರ ಪಿ. ಮಂಜಪ್ಪನವರು
,, ಕಾಣಿಯಂಡ ಮುದ್ದಯ್ಯನವರು
ಒಡ್ಡೆಗೋಗ್ರಾಮ—ಸಣ್ಣುವಂಡ ತಿಮ್ಮಯ್ಯನವರು
,, ಕಂಜಿತಂಡ ಸೋಮಯ್ಯನವರು
,, ಸಣ್ಣುವಂಡ ಗಣಪತಿಯವರು
,, ಒಕ್ಕಲೀರ ಅಪ್ಪಣ್ಣಗೌಡರು
ಕಿರು ಗ್ರಾಮ—ಬಂಗಂಡ ತಿಮ್ಮಪ್ಪನವರು
,, ಕಿರೆಂಗಡ ಅಪ್ಪಣ್ಣಯ್ಯನವರು
,, ಕಿ. ಕುಟ್ಟಪ್ಪಯ್ಯನವರು
ನಲ್ಲೂರುಗ್ರಾಮ—ಮಾಣಿಯಂಡ ತಿಮ್ಮಯ್ಯನವರು
,, ಚೆಪ್ಪುಡೀರ ಮುದ್ದಪ್ಪನವರು

ತಿದ್ದುಪಡಿ: ಮಾರ್ಚಿ 12 ರಲ್ಲಿ ಬೆಪ್ಪತ್ತುನಾಡು ಕಮಿಟಿಯ ಸೆಕ್ರೆಟರಿ ಮೆ|| ಐನಂಡ ಕಾರ್ಯಪ್ಪನವರೆಂಬುದನ್ನು ಮೆ|| ಐನಂಡ ಮಾದಪ್ಪನವರೆಂದು ತಿದ್ದಿ ಓದತಕ್ಕದ್ದು.

ಪತ್ರವ್ಯವಹಾರಗಳು.

ಪತ್ರಕರ್ತರು ವಹಿಸದ ಅಭಿಪ್ರಾಯಗಳಿಗೆ ಪತ್ರಕರ್ತರು ಬಾಧ್ಯರಾಗಿರುವುದಿಲ್ಲ. [ಎಡಿಟರ್]

ಮಹನೀಯರೆ

[illegible] ಸಾಧ್ಯವಾದ ಪಕ್ಷದ ಮೇಲೆ [illegible] ಕೊಡವರ ಅನೇಕ ಮನುಷ್ಯರುಗಳು [illegible] ಸಂಗತಿ ಹೊರಡಿಸಿ [illegible] ಸಮಯ ಮಾಡಿಕೊಂಡು ಹೋಗಿ ನಿಂತಿ ಕೇಳುವರು. [illegible] ತಮ್ಮ ಪತ್ರಿಕೆಯನ್ನು [illegible]

ಕವರ ಪೀಠಕ್ಕೆ ಅಂಕಿತಮಾಡಿಕೊಳ್ಳಲು ಶ್ರೀ ಶ್ರೀಗಳವರು ಈ ಸಂಗತಿಯನ್ನು ಆಯಾ ದಿಕ್ಕಿನ ಪ್ರಮುಖಬ್ರಾಹ್ಮಣರ ವಿಚಾರದಿಂದ ಈಗ ಉತ್ತಮಬ್ರಾಹ್ಮಣರೆಂದೆನಿಸಿಕೊಂಡ ಶಿವಳ್ಳಿ ಮುಂತಾದ ಬ್ರಾಹ್ಮಣವರ್ಗದವರಂತೆ ಇವರು ಕೂಡಾ ಉತ್ತಮಬ್ರಾಹ್ಮಣರೆಂದೂ ಪಟ್ಟವರ್ಗಾಧಿಕಾರಿಗಳೆಂದೂ, ಇವರೊಡನೆ ಇತರಪಂಗಡದ ಬ್ರಾಹ್ಮಣರು ಭೋಜನಪ್ರತಿಭೋಜನಾದಿ ಐಕ್ಯಕರ್ಮಗಳನ್ನಾಚರಿಸುವರೆ ಯಾವತರದ ದೋಷಗಳೂ ಇಲ್ಲವೆಂದೂ ಇವರು ಯಾವವಿಧದಲ್ಲೂ ಪತಿತರಲ್ಲವೆಂಬ ತೀರ್ಮಾನಪತ್ರವನ್ನು ಇದೆ ಕಳದ ಮಕರ ಸಂಕ್ರಮಣ ದಿನದಲ್ಲಿ ಸರ್ವರ ಅವಗಾಹನೆ ಬಗ್ಗೆ ದಯಪಾಲಿಸಿರುತ್ತಾರೆ.

"ತಿಳಿದವ"

ಅಯ್ಯಾ,

ದಕ್ಷಿಣಕೊಡಗು ಫಾರೆಸ್ಟ್ ಆಫೀಸರಾಗಿದ್ದು ಈಗ ರಜದಲ್ಲಿರುವ ಮೆ|| ಕೆ ಜಿ ಬೆಳ್ಯಪ್ಪನವರು ಕಳೆದ ಮಾರ್ಚ ತಾರೀಖು 1 ರಲ್ಲಿ ಸಕತ್ ಖಾಯಿಲಸ್ತರಾದರು. ಕೊಡಗು ಸಿವಿಲ್‌ಸರ್ಜನ್ ಮೆ|| ಪ್ರೇಬರ್‌ಸಾಹೇಬರು ಮಾರನೆದಿನವೇ ಮೆ|| ಬೆಳ್ಯಪ್ಪನವರ ಖಾಯಿಲವನ್ನು ಡಬ್ಬಲ್ ನ್ಯುಮೋನಿಯವೆಂದು ಕಂಡುಹಿಡಿದು ವಡನೆ ತಕ್ಕ ಚಿಕಿತ್ಸೆ ಮಾಡಲಾರಂಭಿಸಿದರು. ಎಷ್ಟು ಮೇನತ್ತಿನಿಂದ ಪ್ರಯತ್ನಪಟ್ಟರೂ ಖಾಯಿಲೆವು ದಿನೆದಿನೆ ವೃದ್ಧಿಯಾಗಿ ನಾಲ್ಕನೆ ದಿನದಿಂದ ಚಿತ್ತಭ್ರಮೆಯುಂಟಾಗಿ ಜ್ವರವು 106 ಡಿಗ್ರಿಗೆ ಏರಿತ್ತು. ಈ ತರದ ವ್ಯಕ್ತ್ಯಾಸವನ್ನು ನೋಡಿ ಡಾಕ್ಟರ್ ಸಾಹೇಬರು ಕೂಡ ನಿರಾಶಿತರಾದರು. ಈ ಖಾಯಿಲವನ್ನು ಸುರುವಿನಿಂದ ನೋಡಿದವರೆಲ್ಲರು ಈ ಖಾಯಿಲದಿಂದ ಉಳಿಯುವದೆ ಅತಿ ಸಂಶಯವೆನ್ನುತ್ತಿದ್ದರು ಆದರೂ ಕೂಡ ಮೆ|| ಪ್ರೇಬರ್‌ಸಾಹೇಬರು ಧೈರ್ಯಗುಂದಗೆ ಹ್ಯಾಗಾದರೂ ಪ್ರಯತ್ನದಿಂದ ಖಾಯಿಲಸ್ತನನ್ನು ಉಳಿಸಬೇಕೆಂದು ನಿಶ್ಚೈಯಿಸಿ ಖಾಯಿಲಸ್ತರ ಶರೀರದಿಂದ ಸುಮಾರು ಇಪ್ಪತ್ತು ಔನ್ಸ್ ರಕ್ತಶಸ್ತ್ರ ಚಿಕಿತ್ಸೆಯಿಂದ ತೆಗೆದು ಮೈಗೆಲ್ಲಾ ತಣ್ಣೀರು ಒದ್ದೆ ಕೊಟ್ಟು ಬಹು ಎಚ್ಚರಿಕೆಯಿಂದ ಔಷದಪ್ರಯೋಗಮಾಡಿ ಆ ದಿನದಂದಲೇ ಖಾಯಿಲದ ಬಲವನ್ನು ತಗ್ಗಿಸಿ ಅಲ್ಲಿಂದ ಇವರೂ ಅಸಿಸ್ಟೆಂಟ್ ಸರ್ಜನರೂ ಏಳೆಂಟುದಿನಗಳವರೆಗೆ ಬಹುಶ್ರದ್ಧೆಯಿಂದ ದಿನಕ್ಕೆ ಎರಡು ಮೂರಾವರ್ತಿ ಖಾಯಿಲಸ್ತರ ಎಚ್ಚರಿಕೆ ತೆಗದುಕೊಂಡು ಇವರ ಖಾಯಿಲ ಗುಣಮಾಡಿದರು. ಈ ತರದ ಚಿಕಿತ್ಸೆಯಿಂದ ನ್ಯುಮೋನಿಯ ಖಾಯಿಲವನ್ನು ಗುಣಮಾಡಿದ್ದು ಕೊಡಗಿಗೆ ಇದೇ ಪ್ರಥಮ ಚಿಕಿತ್ಸೆಯಾಗಿದೆ. ಬದುಕಲಾರರೆನ್ನುವಷ್ಟು ಅಲ್ಪಖಾಯಿಲಸ್ತರಾಗಿದ್ದ ಮೆ|| ಬೆಳ್ಯಪ್ಪನವರನ್ನು ವೈದ್ಯಶಾಸ್ತ್ರನಿಪುಣತೆಯಿಂದಲೂ ನಿರಾಯಾಸಕರ ಮತ್ತು ಸ್ವಪ್ರಯೋಜನ ರಹಿತಪ್ರಯತ್ನದಿಂದಲೂ ಗುಣಪಡಿಸಿದ ಸರ್ಜನರಿಗೆ ಎಷ್ಟು ಕೊಂಡಾಡಿದರೂ ಸಾಲದು ಇವರು ಇನ್ನು ಮುಂದಕ್ಕೂ ಇದೇರೀತಿ ಇವರ ಸಹಾಯವನ್ನು ಅರ್ಪಿಸಿದ ಎಲ್ಲಾ ಖಾಯಿಲಸ್ತರನ್ನು ಹೀಗೆ ಅತಿಶ್ರದ್ಧೆಯಿಂದ ಚಿಕಿತ್ಸೆಮಾಡಿ ಖಾಯಿಲ ಗುಣಮಾಡಿ ತಮ್ಮ ಕೀರ್ತಿಯನ್ನು ವೃದ್ಧಿಪಡಿಸಬೇಕೆಂದು ಪ್ರಾರ್ಥನೆ

"ಖುದ್ದಾ ನೋಡಿದವ"

ಹಳೇವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ

ಈ ಸಂಘವು ದಿವಾನ್ ಪೂರ್ಣೇಯಾಚಂದ್ರನವಾಗೆ ಅಭಿವೃದ್ಧಿಯನ್ನು ಹೊಂದುತ್ತಾ ಇದೆ ಈ ಸಂಘದ ವಿಶೇಷ ಸಭೆ ಕಳೆದ ತಾರೀಖು 4 ನೇ ಶುಕ್ರವಾರ ಮಧ್ಯಾಹ್ನ ಮೂರುವರೆಗಂಟೆ ಒಬ್ಬರ ಅಧ್ಯಕ್ಷತೆಯಿಂದ ನಡೆಯಿತು ಮಡಿಕೇರಿಯಲ್ಲಿರುವ ಉದ್ಯೋಗಸ್ಥರೂ ಹಳೇ ವಿದ್ಯಾರ್ಥಿಯರೂ ಮತ್ತು ಈಗ ಓದುವ ವಿದ್ಯಾರ್ಥಿಯರೂ ಸೇರಿದ್ದರು ಮೊದಲು ಸುಭದಾಟದ ತೀರ್ಪಿನಂತೆ ಹಳೇ ವಿದ್ಯಾರ್ಥಿಗಳ ಪಂದ್ಯದಾಟವು ನಡೆಯಿತು. ಇವರು ಅನೇಕ ಪಂದ್ಯಗಳಲ್ಲಿ ಗೆದ್ದರು

ಇದಾದಮೇಲೆ ಸುಮಾರು ಆರುಗಂಟೆಗೆ ಸಂಘದ ಕಾರ್ಯಕ್ರಮವು ರಾ|| ಬಾ|| ಕೆ ಚೆಂಗಪ್ಪ ಬಿ ಎ. ಯವರ ಅಧ್ಯಕ್ಷತೆಯಲ್ಲಿ ನಡೆಯಿತು ಮ|| ರಾ|| ಪಿ ಮೇದಪ್ಪ ಬಿ ಎ. ಬಿ ಎಲ್ ಎಮ್ ಎಲ್ ಸಿ. ಯವರು ಸಂಘದ ವಿಷಯ ಸ್ವಲ್ಪ ಮಾತನಾಡಿದರು ನಂತರ ಈಗಿನ ಕಾರ್ಯದರ್ಶಿಗಳಾದ ಮ|| ರಾ|| ಬಿ ಎಸ್ ಕುಶಾಲಪ್ಪ ಬಿ ಎ. ಯವರನ್ನು ಪುನಃ ಬರುವವರ್ಷದ ಕಾರ್ಯದರ್ಶಿಯನ್ನಾಗಿ ಚುನಾಯಿಸಿದರು ರಾ|| ಬಾ|| ಕೆ ಚೆಂಗಪ್ಪ ಬಿ ಎ ಯವರನ್ನು ಪ್ರಸಿಡೆಂಟರನ್ನಾಗಿ ಪುನಹ ಚುನಾಯಿಸಿದರು ಮತ್ತು ಮಹದೇವಪೇಟೆ ಕಾನಿಷ್ಟೇಬಲ್ ರಾದ ಮ|| ರಾ|| ಎಮ ಬಿಸಪ್ಪನವರನ್ನ ಕಮಿಟಿ ಮೆಂಬರನ್ನಾಗಿ ಚುನಾಯಿಸಿದರು ಸ್ವಪ್ಪ ನಿಮಿಷಗಳನಂತರ ಮ|| ರಾ|| ಕೀರ್ತಿಯಿಂದ ಕಾಳಪ್ಪನವರು ಸಂಘದ ಕೆಲಸವನ್ನು ನೋಡಿ ತುಂಬಾ ಸಂತೋಷಪಟ್ಟು ತಮ್ಮ ಹೃದಯವನ್ನು ತೆರೆದು ಬಹುಪ್ರೀತಿಯಿಂದ ಭಾಷಣವನ್ನು ಮಾಡಿದರು. ಕಾರ್ಯದರ್ಶಿ ಮತ್ತು ಮೇನೇಜರ ಕೆಲಸಗಳನ್ನು ಇಂದು ಮತ್ತು ಅವರನ್ನು ಪುನಃ ಚುನಾಯಿಸಿದ್ದನ್ನು ನೋಡಿ ಅವರ ಆನಂದವು ಇಮ್ಮಡಿಯಾಯಿತು. ಇಷ್ಟುಹೊತ್ತಿಗ ಫಳಾಹ್ನದಾನ ಪಟ್ಟಿಮಾಡಲವನ್ನೈದಿದನು ಎಂಬು ಗಡುಗು ಪ್ರಕೃತಿಯೂ

ದನೆ ಜಗಳವಾಡುತ್ತಿದ್ದರು ಆದರೆ ಮಳೆರಾಯನ ದರ್ಶನವಾಗಲಿಲ್ಲ. ಮಾಟಂಗು ತೀರಿತು

ಮರುದಿನ, ಅಂದರೆ, ತಾರೀಖು 5 ನೇ ಶನಿವಾರ ಮೂರುವರೆಘಂಟೆಗೆ ಹಳೇವಿದ್ಯಾರ್ಥಿಗಳಿಗೂ ಮತ್ತು ಹೊಸವಿದ್ಯಾರ್ಥಿಯರಿಗೂ ತಿಂಡಿ ವಗೈರೆಯಾಯಿತು. ಹೊಸ ಮತ್ತು ಹಳೇ ವಿದ್ಯಾರ್ಥಿಯರು ಸಂತೋಷದಿಂದ ನಲಿದಾಡಿದರು ಶಾಲೆಮಾಸ್ಟರ್ ಉಪಾಧ್ಯಾಯರ ಪ್ರೇಮವನ್ನು ನನ್ನ ಲೇಖಣಿಯು ವರ್ಣಿಸಲಾರದು

ಸುಮಾರು ಸಾಯಂಕಾಲದವರೆಗೆ ಮೆ|| ಟಾಸ್ಕರ್, ಐ. ಸಿ ಎಸ್., ಓ ಬಿ. ಇ ಯವರು ಪತ್ನಿಸಮೇತ ಬಂದರು ಶಾಲೆಯ ಹಾಲನ್ನು ಬಹಳ ಚೆನ್ನಾಗಿ ಶೃಂಗಾರವಮಾಡಿದ್ದರು. ಟಾಸ್ಕರ್‌ರವರ ಪತ್ನಿಯವರು ವಿದ್ಯಾರ್ಥಿಗಳಿಗೆ ಇನಾಮುಗಳನ್ನು ಕೊಟ್ಟರು ಇದರ ನಂತರ ಹೆಡ್ಮಾಸ್ಟರವರು ಟಾಸ್ಕರ್‌ಸಾಹೇಬರನ್ನು ಪೀಠವನ್ನಲಂಕರಿಸಲು ಹೇಳಿದರು. ಅವರು ಅದನ್ನು ಸ್ವೀಕರಿಸಿದರು ಮ|| ರಾ|| ಪಿ ಮೇದಪ್ಪನವರು ಹೃದಯಂಗಮಯವಾದ ಉಪನ್ಯಾಸವನ್ನು ಮಾಡಿದರು. ಹೆಡ್ಮಾಸ್ಟರವರೂ ಮತ್ತು ಸಂಘದ ಕಾರ್ಯದರ್ಶಿಯರು ತಮ್ಮ ವರ್ಷದ ರಿಪೋರ್ಟನ್ನು ಓದಿದಮೇಲೆ ಟಾಸ್ಕರ್ ಸಾಹೇಬರು ಭಾಷಣ ಮಾಡಿದರು ಸಂಘದ ಕೆಲಸಗಳನ್ನು ನೋಡಿ ಆದಕ್ಕೆ ದೇವರು ದೀರ್ಘಾಯುಷ್ಯವನ್ನು ಕೊಡಲೆಂದು ಪ್ರಾರ್ಥಿಸಿ ಭಾಷಣವನ್ನು ಪೂರೈಸಿದರು ಇದಾದನಂತರ 'ವಿನಾಶಿಯಾಯಕ್ತಿ' ಎಂಬ ಚಿಕ್ಕ ನಾಟಕವನ್ನು ಚಿಕ್ಕ ಬಾಲಕರು ಅಭಿನಯಿಸಿದರು. ಆಮೇಲೆ ನಮ್ಮ ಸಾರ್ವಭೌಮರಿಗೂ ಟಾಸ್ಕರ್‌ಸಾಹೇಬರು ಮತ್ತು ಅವರ ಪತ್ನಿಯವರಿಗೂ ಜಯಘೋಷ ಮಾಡಿದರು

ಒಬ್ಬ ಪ್ರೇಕ್ಷಕ.

ಪಾಕೆಟ್‌ಡೈರಿ ಉಚಿತ.

ಈ ಸಣ್ಣೆಯಲ್ಲಿ ಕಂಡ ಪೆನ್ನವು ಸೀಮೆಯಲ್ಲಿ ತಯಾರಾದದ್ದು. ಇದ್ಕ್ಕೆ ಬಂಗಾರದಂತ ಪಾಯಿಂಟು ಇರುತ್ತದು ಈ ಪೇನಾವಿನಲ್ಲಿ ಬರೆಯುವದರಿಂದ ಅಕ್ಷರಗಳು ಸ್ವಲ್ಪವು ಕಡಿಮೆ ಇಲ್ಲದೆ ಮುದ್ದಾಗಿ ಬರುವುವು. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಹೊಸವರ್ಷದ ಪಾಕೆಟ್ ಡೈರಿ ಒಂದನ್ನು ಇನಾಮಾಗಿ ಕೊಡುವೆವು

ಕ್ರಯ ಡೈರಿ ಸಮೇತ ಪೇನಾ 1 ಕ್ಕೆ 1—12—0

ಜರ್ಮನ್ ಅಲಾರಂ ಟೈಂಪೀಸುಗಳು.



ಈ ಗಡಿಯಾರಗಳು ಜರ್ಮನ್ ದೇಶದಲ್ಲಿ ತಯಾರಾದವು ನೋಡಲು ಚಂದವಾಗಿಯೂ ಬಹುದಿನ ಬಾಳುವುವು. ಗಂಟೆಯನ್ನು ತೋರುವದು. ಗಡಿಯಾರದ ಎತ್ತರವು 7 ಅಂಗುಲಗಳು ಮತ್ತು ಗಂಟೆಯನ್ನು ಸಹ ಬಾರಿಸುವುದು ಬೆಳಗಿನ ಗಂಟೆಯನ್ನು ತಿಳಿಸುವುದು ಆಗಿನಿ. ಸ್ನಾನ, ಮನೆ, ಗಡಿಯಾರ ... ಇದಕ್ಕೆ ... ಗಳು ... ಗ್ಯಾರಂಟಿ ಇದೆ

ಕ್ರಯ 1 ಕ್ಕೆ 5—0—0 ರೂಪಾಯಿ

ಅಲಾರಂ ಇಲ್ಲದ "ಟೈಂಪೀಸ್" ...

ವಿಳಾಸ — ಎನ್ ... ಕೃಷ್ಣ ...

ನಂಬ್ರ 1. ಶಂಕುರಾಯಶೆಟ್ಟಿ,

ಮದರಾಸು.

[4—1]

ಆರೋಗ್ಯ ಚಂದ್ರಿಕೆ.

ಇದು ಪ್ರಜಾಕ್ಷೇಮಕ್ಕಾಗಿ ಆರೋಗ್ಯಮಾರ್ಗವನ್ನೂ ಶುಚಿತ್ವವನ್ನೂ ಬೋಧಿಸುವ ಒಂದು ಮಾಸಪತ್ರಿಕೆ ಇದರ ಸಂಪಾದಕರು ಮದ್ರಾಸಿನಲ್ಲಿ ಪ್ರಸಿದ್ಧರಾದ ಡಾಕ್ಟರ್ ಯು ರಾಮರಾವ್, ಎಂ ಎಲ್ ಸಿ. ಯವರ ಇದರಲ್ಲಿ ಅನೇಕ ಪ್ರಸಿದ್ಧ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರುಗಳ ಲೇಖನಗಳು ಆಗಾಗ್ಗೆ ಪ್ರಕಟವಾಗುವವು

ಟಪಾಲುಹಾಸಲು ಸೇರಿ ಈ ಪತ್ರಿಕೆಯ ವಾರ್ಷಿಕ ಚಂದ 1—8—0 ರೂ ಮಾತ್ರ ಬಿಡಿ ಪತ್ರಿಕೆ ಒಂದಕ್ಕೆ 0—2—0 ಆಣೆ

ಏಜೆಂಟರು —
ಮ|| ರಾ|| ರಾ|| ಎಸ್. ಕೆ
ಈ ಸ್ವರಪ್ಪ,
ಭಾಗಮಂಡಲ,
ಕೊಡಗು.

ವಿಳಾಸ :—
ಮೇನೇಜರ್,
ಆರೋಗ್ಯಚಂದ್ರಿಕೆ ಆಫೀಸು,
3ಂ3, ತಂಬುಚೆಟ್ಟಿಬೀದಿ,
ಮದ್ರಾಸು.

[13—4]

ಇಮಿಟೇಶನ್ ಸಿಲ್ಕಿನ ಅವಲ್ ರಂಗು

ಕಂಚಿಯ ಸೀರೆಗಳು.

ಈ ಸೀರೆಗಳು 18 ಮೊಳ ಉದ್ದವೂ 2½ ಮೊಳ ಅಗಲವೂ ಇರುವವು. ಉಡಲು ಧಡೂತಿಯೂ, ನಯವಾಗಿಯೂ, ಹೊಳ ನಮೂನೆಯಾಗಿಯೂ ಇರುವುದು ... ಮತ್ತು ನೆಕ್ಕದ ಬಣ್ಣಗಳು ... ಉಡಲು ... ತಿಳಿಸುವುದು ... ಮತ್ತು ಪ್ರತಿಯೊಂದು ಜಾತಿಯವರೂ ಉಡಲು ಆಯಾ ಬಣ್ಣ ಒಂದನ್ನು ತರಿಸಿನೋಡಿರಿ. ಕ್ರಯ ನಂ. 1, 6—4—0, ನಂ 2 7—...

ಟಿ ರಾಮಚಂದ್ರರಾವ್ ಅಂಡ್ ಕೋ,

ಜವಳಿ ವ್ಯಾಪಾರಿಗಳು,

16 ತಿರುಪಳ್ಳಿ ಬೀದಿ, ಮದ್ರಾಸ್,

ರೋಲ್ಡ್‌ಗೋಲ್ಡ್ ಭಂಗಾರದ

ಬ್ರೇಸ್‌ಲೆಟ್ ವಾಚ್.

ಈ ಹೊಸನಮೂನೆ ಗಡಿಯಾರಗಳು ಇಷ್ಟವಾದ ಲೀವರ್ ಸಾಮಾನುಗಳಿಂದ ಮಾಡಲ್ಪಟ್ಟಿದೆ. ಸೋವಲಿಕ್ಕೆ ... ಗಡಿಯಾರದ ಹಾಗೆ ಕಾಣುವುದು ... ಕೈಯಲ್ಲಿ ಕಟ್ಟಿಕೊಳ್ಳಬಹುದು ... ವಾಗಿರುತ್ತೆ ಇಂಗ್ಲಿಷ್ ನಮೂನೆ ಗಡಿಯಾರ, ಗ್ಯಾರಂಟಿ 3 ವರ್ಷಗಳವರೆಗೂ ... ಬ್ರೇಸ್‌ಲೆಟ್ ಸಮೇತ ಗಡಿಯಾರ 1ಕ್ಕೆ ಕ್ರಯ ರೂಪಾಯಿ 8—0—0.

CITY WATCH Co.,
22 Trupally Street,
G T MADRAS

ಸಿಟಿ ವಾಚ್ ಕಂಪನಿ,
22 ತಿರುಪಳ್ಳಿ ಬೀದಿ,
ಮದ್ರಾಸ.

[4—1]

WANTED.

Two Second-hand Motor Bicycles

M. M. SIDDEEK,

MERCARA

22 12

(ಪಟ್ಟಣ ... ಪ್ರತಿ)

[16 8]

Printed & Published by D. S Krishnaswamiengar Proprietor Sreenivas Electric Press, Mysore "for Kodagu" Ltd, Mercara—18-4-1924

"Health Office, Mercara" ... Regd. No. M. [illegible]

ಕೊಡಗು.

ಸತ್ಯೇನ ಧಾರ್ಯತೇ ... [illegible]

ಪ್ರತಿ ಶುಕ್ರವಾರ ಮಡಿಕೇರಿಯಲ್ಲಿ ಪ್ರಕಟಿಸಲ್ಪಡುವುದು.

"ಎಡಿಟರ್ ಪಂದ್ಯಂಡ ಬಿ. ಬೆಳ್ಯಪ್ಪ.

ಪುಸ್ತಕ ೩] ಕೊಡಗು, ಸನ್ ೧೯೨೪ರ ನೇ ಇಸವಿ ಏಪ್ರಿಲ್, ತಾರೀಖು ೩ನೆ ಗುರುವಾರ. [ಸಂಚಿಕೆ ೪೭

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನ್ನಡ ಪ್ರಿಂಟಿಂಗ್ ... ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ... ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ... ಮಾಡಿ ... [illegible]

Srinivas Electric Press,
MYSORE.

The Saraswathi Publishing Company
ಸರಸ್ವತಿ ಗ್ರಂಥ ಪ್ರಕಾಶನ ಸಂಘ.

[illegible] ಗ್ರಂಥಗಳು —

	ರೂ	ಆ	ಪೈ
[illegible]	0	6	0
[illegible]	0	10	0
[illegible]	0	12	0
[illegible]	0	8	0
[illegible]	0	4	[illegible]
[illegible]	0	[illegible]	
[illegible]		4	[illegible]

[illegible]

ಸರಸ್ವತಿ.

[illegible]

SARASWATHI PUBLISHING CO., Post Box No. [illegible] City

HEALTH IS WEALTH.

WANTED all to improve health, strength and vitality and thus save our ... from physical degeneracy. Send ... anna stamp and get 13 specimen photographs with full particulars from

Director Physical Culture,
P.O. Basavanagudi,
BANGALORE CITY

For your requirements of high grade Arms, Ammunition, Wine and Spirits,

APPLY TO:—
DOWELL & Co., Ltd.,
MERCARA.

" [illegible] ಸ್ಪೆನ್ಸರ್ ಕಂಪೆನಿಕ್ಕ್ ... [illegible]

SPENCER & Co., Ltd., Mercara and Pollibetta, Coorg. [24—2]

BUMPER CROPS
Always follow an application of our fertilisers
[illegible]
[illegible] (fresh) [illegible]
Siddapur ... Manure Works, MERCARA

ಮಲ್ಯಾಳ ವೈದ್ಯಶಾಲೆ

[illegible] ಎಂಬ ಆ ... ವೈದ್ಯಶಾಲೆಯಲ್ಲಿ ... ರಾಜೇಂದ್ರಪೇಟೆಯಲ್ಲಿ ... ಇಲ್ಲಿ ಯಾವವಿಧದ ... ಪರೀಕ್ಷಿಸಿ ಔಷಧ ... ಔಷಧದ ... ಬೇಕಾದವರು ಈ ಕಾಗದ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು

ನಾರಾಯಣನಂಬೀಶನ್,
ಆಯುರ್ವೇದ ವೈದ್ಯರು,
52—13 ವೀರರಾಜೇಂದ್ರಪೇಟೆ.

ಜೀವವಿಮೆ.

[illegible] ಸಂಪಾದಕರು ... [illegible]

ಸ್ವಾವಲಂಬನ ... ಮತ್ತು ಕುಟುಂಬದ ಜೀವನ ... ಒದಗಿಸುವುದೇ ಜೀವವಿಮೆ.

[illegible] ಸಂಸ್ಥೆಯಾದರೂ [illegible]

[illegible] ಕುಟುಂಬದ ಜೀವನಾಧಾರಕ್ಕೆ ... (Economic Condition) ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೆ!

[illegible] ಬ್ಯಾಂಕಿನ ... ಗವರ್ನಮೆಂಟು ... ಬ್ಯಾಂಕ್ ಮೂಲಕ ... [illegible]

ಬಿ. ಎಸ್. [illegible]

[illegible] ಮಡಿಕೇರಿ

ಪ್ರಕಟನೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್.

[illegible] ರಿಜಿಸ್ಟರಾಗಿದೆ.

	ರೂ.
ಶೇರ್ ಬಂಡವಾಳ	50 000
ವಸೂಲಾದ ಶೇರ್ ಮೊಬಲಗು	6,820
ಜನರ ಠೇವು [illegible]	47,990

[illegible] ಬ್ಯಾಂಕಿನಿಂದ ... ಸಾಲ ಕೊಡಲ್ಪಡುವುದು.

[illegible] 6—4—0 [illegible]

[illegible]

ಪ್ರೆಸಿಡೆಂಟು. [illegible]

[illegible] ಬಿ. ಎ. ಬಿ. ಎಲ್

ಸೆಕ್ರೆಟರಿ

ಸಿ. ಎಮ್. ವೆಂಕಟಪ್ಪಯ್ಯ ... ಬಿ. ಎ. ಬಿ. ಎಲ್.

ತಾರೀಖು 22—2—192[illegible].

"ಕೊಡಗು"

೧೯೨೪ ನೇ ಇಸವಿ ಏಪ್ರಿಲ್ ತಾ|| ೨೫ ನೇ ಶುಕ್ರವಾರ.

ವಯಿಕಮ್ ಸತ್ಯಾಗ್ರಹ.

ತಿರುವಾಂಕೂರು ಸಂಸ್ಥಾನಕ್ಕೆ ಸೇರಿದ ವಯಿಕಮ್ ಎಂಬ ಊರಿನಲ್ಲಿ ಒಂದು ಪಬ್ಲಿಕ್ ರಸ್ತೆಗಾಗಿ ಅಸ್ಪೃಶ್ಯ ವರ್ಗಕ್ಕೆ ಸೇರಿದವರು ಹೋಗಕೂಡದೆಂತ ಜಾತಿ ಹಿಂದೂಗಳ ಆಕ್ಷೇಪಣೆ ಇತ್ತು. ಕೇರಳ ಕಾಂಗ್ರೆಸ್ ಕಮಿಟಿಯವರು ಇಂಥಾ ಅನ್ಯಾಯವನ್ನು ನಿಲ್ಲಿಸುವ ಪ್ರಯತ್ನ ಮಾಡುತ್ತಿದ್ದಾರೆ. ಆ ರಸ್ತೆಗಾಗಿ ಅಸ್ಪೃಶ್ಯ ವರ್ಗದವರು ಪದ್ಧತಿಗೆ ವಿರೋಧವಾಗಿ ಹೋಗಿ ಅದರಿಂದಾಗುವ ಶಿಕ್ಷೆಯನ್ನು ಅನುಭವಿಸಲಿಕ್ಕೆ ತಯಾರಾದ ಸ್ವಯಂಸೇವಕರು ಮುಂದೆ ಬಂದರು. ಸರ್ಕಾರದವರು ಕ್ರಿಮಿನಲ್ ಪ್ರೊಸೀಜರ್ ಕೋಡ್ 144 ನೆಕ್ಷನ್ ಪ್ರಕಾರ ಆ ರಸ್ತೆಗಾಗಿ ಅಸ್ಪೃಶ್ಯತೆಯವರು ಹೋಗಕೂಡದೆಂತ ಹುಕುಂ ಮಾಡಿದರು. ಸ್ವಯಂಸೇವಕರು ಮೂರು ಮೂರು ಜನರಾಗಿ ಆ ರಸ್ತೆಗಾಗಿ ಹೋಗಿ ಸುಮಾರು ಹತ್ತು ಹನ್ನೆರಡು ಜನರಿಗೆ ೬ರಿಂದ ೭ ತಿಂಗಳು ಸಜೆಯು ವಿಧಿಸಲಾಗಿದೆ. ಈ ಚಳವಳಿಯ ಮುಖ್ಯಸ್ಥರಾದ ಮೆ|| ಕೇಶವಮೇನನ್ ಮತ್ತು ಮೆ|| ಮಾಧವನ್ ಎಂಬವರು ಈ ಚಳವಳಿಕ್ಕೆ ಮುಖ್ಯಸ್ಥರೆಂತ ಸರ್ಕಾರದವರು ಇವರನ್ನು ದಸ್ತಗಿರಿ ಮಾಡಿ ಜಾಮೀನು ಕೊಡಬೇಕೆಂದು ಕೇಳಿದಲ್ಲಿ ಜಾಮೀನು ಕೊಡದ್ದರಿಂದ ಅವರಿಗೂ ಆರಾರು ತಿಂಗಳ ಸಜೆವಾಯಿತು. ವಿಚಾರದಲ್ಲಿ ಕೇಶವಮೇನನವರು ಹೇಳಿದ್ದೇನೆಂದರೆ— "ತೀಯರನ್ನೂ, ಪೊಲೆಯರನ್ನೂ ಮತ್ತು 'ತೀಂಡಲ್' (ಮುಟ್ಟಬಾರದ) ಸಂಗಡಕ್ಕೆ ಸೇರಿದ ಇತರ ಜಾತಿಯವರನ್ನೂ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರವರ ಹುಕುಮಿಗೆ ವಿರೋಧವಾಗಿ ದೇವಸ್ಥಾನದ ರಸ್ತೆಗಾಗಿ ಹೋಗುವಂತೆ ಉತ್ತೇಜನ ಕೊಟ್ಟೇ ಕೊಡುತ್ತೇನೆ. ಜಾತಿ ಹಿಂದೂಗಳಿಗೆ ಮಾತ್ರವಲ್ಲ ಕ್ರಿಶ್ಚಿಯನ್ ಮತ್ತು ಮುಸಲ್ಮಾನರ ಜಾತಿಯವರಿಗೆ ಸಹ ಹೋಗಲು ಹಕ್ಕಿರುವ ಈ ರಸ್ತೆಗೆ ಮುಟ್ಟಬಾರದ ಜಾತಿಯವರಿಗೂ ಸಹ ಇದೆ. ಇಂಥಾ ಎಲ್ಲಾ ರಸ್ತೆಗಳಿಗಾಗಿಯೂ ಈ ಸಂಗಡದವರಿಗೆ ಹೋಗಲು ಹಕ್ಕು ಸಿಕ್ಕಬೇಕಾಗಿ ಹೋರಾಡುವದಾಗಿದೆ. ಕೇವಲ ದೇವಸ್ಥಾನಕ್ಕೂ ಸಹ ಅಸ್ಪೃಶ್ಯರನ್ನು ನುಗ್ಗಿಸುವ ಪ್ರಯತ್ನ ಮಾಡುತ್ತಿದ್ದೇವೆಂತ ತಪ್ಪು ತಿಳುವಳಿಕೆಯಲ್ಲಿದ್ದಾರೆ. ಆದರೆ ಈಗ ನಮ್ಮ ಅಭಿಪ್ರಾಯವು ಹಾಗಿಲ್ಲ. ಪಬ್ಲಿಕ್ ರಸ್ತೆಗಳಿಗಾಗಿ ಎಲ್ಲರೂ ಹೋಗುವ ಹಕ್ಕನ್ನು ಪಡೆಯುವುದೇ ನಮ್ಮ ಉದ್ದೇಶವಾಗಿ ಅನೇಕ ವರ್ಷಗಳಿಂದ ಅವರಿಗೆ ಇಲ್ಲದ ಹಕ್ಕನ್ನು ಪಡೆಯಲು ಸತ್ಯಾಗ್ರಹವು ಒಂದೇ ದಾರಿಯೆಂದು ನನ್ನ ನಂಬಿಕೆಯಾಗಿದೆ. [illegible] ಹೀಗೆ ಹೇಳಿದ [illegible] ಜಾತಿ [illegible] ಎಂಬವರು [illegible] — "ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ [illegible] ಉಲ್ಲಂಘನೆ ಮಾಡಿದ [illegible] ನಾನು [illegible] ದೇವಸ್ಥಾನ [illegible] ಈ ರಸ್ತೆಗಾಗಿ [illegible] ನಾನು [illegible] ಉಪಯೋಗಿಸುವ ಹಕ್ಕು ಪ್ರತಿಯೊಬ್ಬ [illegible] ಹಿಂದೂವಾದ ನನಗೆ [illegible] ಜಾತಿಯವರಿಗೆ [illegible] ಉಪಯೋಗಿಸುವ ಹಕ್ಕು ಇಲ್ಲವೆಂಬ [illegible] ಇಂಥಾ ಅನ್ಯಾಯದ [illegible] ಬರಬೇಕಾದರೆ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ [illegible] ನಾನು [illegible] ಸುವುದಕ್ಕೆ ಮಹಾತ್ಮಗಾಂಧಿಯವರ [illegible] ಅನೇಕ [illegible] ಯಾವ ಶಿಕ್ಷೆ [illegible] ವಾಗುತ್ತದೆ.

ಆ ರಸ್ತೆಯು ದೇವಸ್ಥಾನಕ್ಕೆ ಸೇರಿದ [illegible] ದಾದರೂ, ದೇವಸ್ಥಾನಕ್ಕೆ ಸೇರಿದ್ದಲ್ಲ [illegible] ಇಟ್ಟುಕೊಂಡರೆ [illegible] ಅಸ್ಪೃಶ್ಯತೆಯನ್ನು [illegible] ಈ [illegible] ಮನುಷ್ಯಜಾತಿಗೆ [illegible] ನ್ಯಾಯವಲ್ಲ. [illegible] ಈ [illegible] ಕಠಿಣವಾದ [illegible] ಹೋರಾಡುವದಕ್ಕಾಗಿ ನಡೆಸುತ್ತಿರುವುದಾಗಿದೆ.

ಈ ಚಳವಳಿಕ್ಕೆ ಹಿಂದೂಸ್ಥಾನದ ಗೌರವ ಇಟ್ಟುಕೊಳ್ಳಬೇಕೆಂದಿರುವ ಪ್ರತಿಯೊಬ್ಬ ಮನುಷ್ಯನೂ ಸಹಾಯ ಕೊಡಬೇಕಾಗಿದೆ.

ಕಾಗೆಯೂ ಕೋಗಿಲೆಯೂ ಒಂದೇ ರೀತಿಯಲ್ಲಿದ್ದರೂ ಅವುಗಳ ನಿಜಸ್ವಭಾವದಿಂದಲೇ ಪ್ರತ್ಯೇಕ ಪ್ರತ್ಯೇಕ ಮೆರೆಯುತ್ತವೆ. ನಮ್ಮ ನಮ್ಮ ಶಿಷ್ಟಸಂಪ್ರದಾಯಗಳು ನಮ್ಮ ನಮ್ಮ ಆಚರಣೆಯಲ್ಲೇ ಮೆರೆಯಬೇಕಲ್ಲದೆ ಬರೆಯ "ಗೌಡ" ಎಂಬ ಶಬ್ದ ಮಾತ್ರದಿಂದಲ್ಲ ಯಾವ ಜನಾಂಗದ ಗೌರವವು ಉಳಿಯಬೇಕಾದರೂ ಅವರವರ ಆಚರಣೆಯೇ ಮುಖ್ಯ. ಈಗ ಚೇಯಂಡಿರ ಮುತ್ತಣ್ಣಗೌಡರು ಹೇಳುವ ರೀತಿ ನಮ್ಮ ನಮ್ಮ ಹೆಸರುಗಳಿಗೆ "ಗೌಡ" ಎಂಬ ಬರೆ ಅಭಿಮಾನ ಚಿಹ್ನೆಯನ್ನು ಹಚ್ಚಿಕೊಂಡಲ್ಲು ಜನಾಂಗದ ಗೌರವವನ್ನು ಕಾಪಾಡಿಕೊಂಡಂತಾಗಲಿಲ್ಲವೆಂದು ನಾನು ನಿರ್ಧರಿಸುತ್ತೇನೆ ಪುರುಷರು "ಗೌಡ" ಎಂಬ ಅಭಿಮಾನ ಚಿಹ್ನೆಯನ್ನು ಕಟ್ಟಿಕೊಂಡರೆ ಸ್ತ್ರೀಯರು "ಗೌಡತಿ" ಎಂಬ ಪದವನ್ನು ತಪ್ಪದೆ ಹಚ್ಚಿಕೊಳ್ಳಬೇಕು. ಹಿಂದೂ ಸಂಪ್ರದಾಯಗಳು ಹೆಚ್ಚಾಗಿ ಸ್ತ್ರೀಯರಿಂದಲೇ ಶಿಥಿಲವಾಗದೆ ಉಳಿದಿದೆ ಇಂಥಾ ನಾಮ ಪ್ರತಿಷ್ಠೆಯನ್ನು ಅವರೆಂದೂ ಬಯಸರು ಆದುದರಿಂದ ನಾವು ಮೊದಲು ನಾಮಪ್ರತಿಷ್ಠೆಯನ್ನು ಪಡೆಯಲು ಯತ್ನಿಸುವುದಕ್ಕಿಂತ ಕಾರ್ಯಪ್ರತಿಷ್ಠೆಯನ್ನು ಪಡೆಯುವ ಪ್ರಯತ್ನದಲ್ಲಿರಬೇಕು. ಚೇಯಂಡಿರ ಮುತ್ತಣ್ಣ ಗೌಡರುಮುತ್ತಣ್ಣ ಎಂಬ ನಾಮಾಂಕಿತಕ್ಕೆ ಬಿಟ್ಟು ಹೋದ ಅಭಿಮಾನಚಿಹ್ನೆಯನ್ನು ಈಗ ಹಚ್ಚಿಕೊಂಡಂತೆ, ಗೌಡುಗಳ ಚೇಯಂಡಿ, ಎಂಬದಾಗಿ ನೋಡಲು ಇದ್ದಂತೆ ಕಂಡು ಬರುವ ಮನೆಹೆಸರಿಗೆ ಗೌಡುಗಳ' ಎಂಬ ಪೂರ್ವಶಬ್ದವನ್ನು ಮಹಾಕಿ ಅಂತ್ಯದಲ್ಲಿ ರ ಎಂಬ ಅಕ್ಷರವನ್ನು ಯಾಕೆ ಸೇರಿಸಿಕೊಂಡಿದ್ದಾರೋ ತಿಳಿಯದು.

ನಿಜವಾಗಿ ಜನಾಂಗದ ಏಳಿಗೆ ಇತ್ಯಾದಿ ಕಾರ್ಯಕ್ರಮಗಳನ್ನು ಕೈಕೊಳ್ಳುವವರ ಸದುದ್ದೇಶಗಳು ಫಲಿಸಬೇಕಾದರೆ ಮೊದಲು ಅಭಿಮಾನ ಹಚ್ಚಿಕೊಳ್ಳುವುದರ ಬದಲು ಅಭಿಮಾನತೋರಿಸಬೇಕು ಕಾರ್ಯೋನ್ಮುಖರಾಗಬೇಕು. ಆದುದರಿಂದ ಗೌಡಜನಾಂಗದಲ್ಲಿ ಹುಟ್ಟಿನಾದ ನನ್ನ ವಿನಂತಿ ಏನೆಂದರೆ.....ಈ ಅಭಿಮಾನ ಚಿಹ್ನೆಯನ್ನು ಹೆಸರಿನ ಅಂತ್ಯದಲ್ಲಿ ಈಗ ಹಚ್ಚಿಕೊಳ್ಳಲು ಪ್ರಯತ್ನಿಸಿ ನಿಂದಾಸ್ಪದಕ್ಕೆ ಈಡಾಗುವುದಕ್ಕಿಂತಲೂ ಅಭಿಮಾನವನ್ನು ಬಯಸದೆ ಯಥಾರೀತಿ ಸದಾಚಾರಶೀಲರಾಗಿ ಮುಂದುವರಿಯುತ್ತಾ ಹೋಗುತ್ತಿರಬೇಕೆಂಬುದಾಗಿ ಆಗಿರುತ್ತದೆ.

ಮತಾಚಾರ ವಿಷಯದಲ್ಲಿ ಮಾರ್ಗದರ್ಶನ [illegible] ಜನಾಂಗದ ಉನ್ನತಿಯನ್ನು ಹಾರೈಸುವ ಈ [illegible] ಪತ್ರಿಕೆಗೆ ಬರೆಯುವುದರ ಮೂಲಕ ನಮ್ಮ [illegible] ದೇಶಗಳಲ್ಲಿ ವ ಗೌಡಜನಾಂಗದ ಕಾರ್ಯಕ್ರಮಗಳಿಗೆ [illegible] ಕೊಂಡು ಅವರಿಂದ [illegible] ನಿಯಮಗಳನ್ನು [illegible] ಮಾಡಿಸಿಕೊಳ್ಳುವ [illegible] ಮಾಡಿದಲು ಈ ದೇಶಪತ್ರಿಕೆ [illegible] ಪತ್ರಿಕೆಯಲ್ಲಿ [illegible] ಕೋನ್ನತಿಯಮಗಳನ್ನು ತಿಳಿಸಲು [illegible] ಗಳಿಗೆ [illegible]

ಈ ಬೇಡಿದರ ಸಂಶಯಗಳನ್ನು ಪರಿಹರಿಸಿ ಅವರಿಗೆ ಇನ್ನೂ ವಿಷಯ ಸಂಗ್ರಹಿಸಿಕೊಡಲು [illegible] [illegible] ಅನುಗ್ರಹಿಸುವ [illegible] ಪ್ರತ್ಯುತ್ತರ [illegible] ಇದ್ದಾರೆ

ಸಿ. ಕೆ. ಪಿ.

ಆರೋಗ್ಯ ಚಂದ್ರಿಕೆ.

ಜನ ಪ್ರಜಾಕ್ಷೇಮಕ್ಕಾಗಿ ಆರೋಗ್ಯಮಾರ್ಗವನ್ನು [illegible] ತೋರಿಸುವ ಒಂದು ಮಾಸಪತ್ರಿಕೆ ಇದರ [illegible] ಪ್ರಸಿದ್ಧರಾದ [illegible] ಎಲ್. ಎಮ್. ಪಿ. ಯವರು. ಇದರಲ್ಲಿ [illegible] ಮತ್ತು [illegible] ಪ್ರಕಟವಾಗುವವು.

[illegible] ಈ ಪತ್ರಿಕೆಯ ವಾರ್ಷಿಕ [illegible] 1—8—0 [illegible] ಪತ್ರಿಕೆ ಒಂದಕ್ಕೆ 0—2—0 [illegible]

ಏಜೆಂಟರು —	ವಿಳಾಸ:—
[illegible]	ಮೇನೇಜರ್,
[illegible]	ಆರೋಗ್ಯಚಂದ್ರಿಕ ಆಫೀಸು,
ಭಾಗಮಂಡಲ,	330 ತಂಬುಚೆಟ್ಟಿಬೀದಿ,
ಕೊಡಗು	ಮದ್ರಾಸು.

[1—6]

ಪಾಕೆಟ್‌ವಾಚ್ ಉಚಿತ

ಈ ನಕ್ಷೆಯಲ್ಲಿ [illegible] ತಯಾರಾದದ್ದು. ಇದಕ್ಕೆ ಧಂಗಾ [illegible] ಇರುವುದು. ಈ ಪೇಪರನ್ನು [illegible] ಹೆಚ್ಚು ಕಾಪಿ. ಇಲ್ಲದೆ [illegible] ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ [illegible] ವಾಚ್ ಒಂದನ್ನು ಇನಾಮಾಗಿ ಕೊಡುವೆವು

ಕ್ರಯ ಡ್ಯೆರ ಸಮೇತ ಪೇಪರ್ 1 ಕ್ಕೆ 1—12—0

ಜರ್ಮನ್ ಅಲಾರಂ ಟೈಂಪೀಸ್‌ಗಳು



ಈ ಗಡಿಯಾರಗಳು ಜರ್ಮನ್ ದೇಶದಲ್ಲಿ ತಯಾರಾದದ್ದು. ಮೇಲುಗಡೆ ಜೋಡಿಸಿರುವ ಗಂಟೆ ಇರುವುದು ಎಂದಿಗೂ ಕೆಡುವುದಿಲ್ಲ. ಕರಾರು ಗಂಟೆಯನ್ನು ಕೊಡುವುದು. ಗಡಿಯಾರದ ಎತ್ತರವು 7 ಅಂಗುಲವಿರುವುದು ಮತ್ತು ಗಂಟೆಯನ್ನು ಸಹ ಬಾರಿಸುವುದು. ಬಹು ಬೇಗನೆ ಗಂಟೆಯನ್ನು ಕಂಡುಹಿಡಿಯಬಹುದು ಅಂಗಡಿ, ಸ್ಕೂಲು, ಮನೆ, ಗುಡಿಗಳಲ್ಲಿ ಇಡಲು ಬಹು ಚೆನ್ನಾಗಿರುವುದು ಇದಕ್ಕೆ ಮುಂಚಿತವಾಗಿ ಈ ಮಾದರಿ ಗಡಿಯಾರಗಳು ಮಾರಾಟಕ್ಕೆ ಬಂದಿಲ್ಲ. ಇವಕ್ಕೆ ಮೂರು ವರ್ಷಗಳು ಗ್ಯಾರಂಟಿ ಇದೆ.

ಕ್ರಯ 1 ಕ್ಕೆ 5—0—0 ರೂಪಾಯಿ,

ಅಲಾರಂ ಇಲ್ಲದ "ಬೀ" ಟೈಂಪೀಸ್ 3—8—0 ರೂ

ವಿಳಾಸ.—ಎಸ್. ಆರ್. ಕೃಷ್ಣ ಅಂಡ್‌ಕೊ,
ನಂಬರು 1 ರಂಗನಾಯಕರಬೀದಿ,

[4—2] ಮದರಾಸು

WANTED.

Two Second-hand Motor Bicycles.

M. M. SIDDEEK,

22—13 MERCARA.



[16—9]

Printed & Published by D. S. Krishnaswamiengar Proprietor, at Sreenivas Electric Press, Mysore "for Kodagu" Ltd., Mercara—25-4-1924.

not delivered please return to "Kodagu Office, Mercara"
Reg. No. M. 1530.

ಕೊಡಗು.

ಸತ್ಯೇನ ಧಾರ್ಯತೇ ಪೃಥ್ವೀ ಸತ್ಯೇನ ತಪತೇ ರವಿಃ । ಧರ್ಮೇಣ ರಕ್ಷಿತೋ ದೇಶಃ ಸುಸ್ಥಿರಂ ರಾಜ್ಯಸಂಪದಃ ।

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು. "ಎಡಿಟರ್ ಕೊಡಗು" ಜ ಜೆಲ್ಲ್

ಸಂಪುಟ ೩] ಕೊಡಗು, ಸನ್ ೧೯೨೪ ನೇ ಇಸವಿ ಫೆ, ಬ್ರವರಿಯು ೨ ನೆಯ ಶುಕ್ರವಾರ. [ಸಂಚಿಕೆ ೪೮

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನ್ನಡ ಪ್ರಿಂಟಿಂಗ್ ರೂಲಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ಇದ್ದರೂ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ಬಹಳ ಜಾಗ್ರತೆಯಾಗಿಯೂ ಸುಲಭಕ್ರಯಕ್ಕೂ ಮಾಡಿ ಕೊಡುತ್ತೇವೆ

Srinivas Electric Press,
MYSORE

The Saraswathi Publishing Company
ಶಾರದಾಗ್ರಂಥಮಾಲಾ.

ಈ ಗ್ರಂಥಮಾಲೆಯಲ್ಲಿ ಭಾರತದ ಹಿರಿಯ ನಾಟಕ ವಿಷಯಗಳನ್ನು ದೇಶಭಕ್ತಿಗೆ ಗ್ರಂಥಗಳು ಅನೇಕ ಪ್ರಕಟಿಸಲ್ಪಡುವವು ಇದುವರೆಗೆ ಪ್ರಕಟವಾಗಿರುವ ಗ್ರಂಥಗಳು —

		ರೂ	ಆ	ಪೈ
1	ಪ್ರಿಯಂವದ (ವರದಕ್ಷಿಣೆಯಿಂದಾಗುವ ಕಷ್ಟ ನಷ್ಟಗಳು)	0	6	0
	ಶ್ರೀಮತಿ (ವಂಗರಮ್ಯ ಚರಿತ್ರೆ)	0	10	0
	ಸ್ವರ್ಣಲತಾ (ಹಿಂದೂವಿವಾಹವಿಧಿ ಕೆಲ ಮೂಲ ಚರಿತ್ರೆ)	0	12	0
	ಮಧುರೆ (ಸಾಮಾಜಿಕ ಸುಧಾರಣೆಯ ನಾಟಕ)	0	8	0
	ಹಿಂದೂಭಾಗ್ಯೋದಯ (ನಾಟಕ)	0	4	0
5	ಮದನಬಾಧಂಗ (ನಾಟಕ)	0	4	0
6	ಹುಡುಗಿಯ ಹುಡುಗಿಯರು (ನಾಟಕ)	0	4	0

ಈ ಎಲ್ಲಾ ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಳ್ಳುವವರಿಗೆ ರೂಪಾಯಿ 2—1—0 ಗೆ ಕೊಡಲಾಗುವದು ... ಪ್ರತಿಯೊಬ್ಬರಿಗೂ ಗ್ರಂಥಗಳು ...

ಸರಸ್ವತಿ.

ಉತ್ತಮವಾದ ಶ್ರೇಷ್ಠವಾದ ಕನ್ನಡ ಮಾಸಪತ್ರಿಕೆ

ಪ್ರತಿ ತಿಂಗಳು ಪ್ರಕಟವಾಗುವದು ... ಇದರಲ್ಲಿ ಬಾಲಕ ಬಾಲಿಕೆಯರಿಗೂ ಸ್ತ್ರೀಯರಿಗೂ ... ನಾಟಕ ... ಮತ್ತು ... ಉಪಯುಕ್ತವಾದ ಲೇಖನಗಳು ... ಗ್ರಂಥಗಳು ಪ್ರಕಟವಾಗುವವು ... ಮಾದರಿ ಪ್ರತಿ ... ಕಳುಹಿಸಲಾಗುವದು

ವಾರ್ಷಿಕ ಚಂದಾ ರೂಪಾಯಿ 3—0—0 ಮಾತ್ರ

SARASWATHI PUBLISHING CO ,
Post box No 57 Bangalore City

HEALTH IS WEALTH

WANTED all to improve health strength and vitality and thus save our nation from physical degeneracy Send half anna stamp and get 13 specimen photographs with full particulars from

Director Physical Culture,
P O Basavanagudi,
BANGALORE CITY

For your requirements of high grade Arms. Ammunition, Wine and Spirits,

APPLY TO –

Mc. DOWELL & Co., Ltd.,
MERCARA.

24—3

ಇಂಗ್ಲೆಂಡ್ ಇನಾಮಿಕೋಡ್ ಪಂಚಾಯಿತಿ ಉಳ್ಳ ಸಾಮಾನ್ ಸ್ಪೆನ್ಸರ್ ಕಂಪನಿಕ್ಕ್ ಪುದಿಯದಾಯಿತ್ ಬಂದಿತ್.

SPENCER & Co., Ltd.,
Mercara and Pollibetta, Coorg

[24—8]

BUMPER CROPS
Always follow our application of our fertilisers

ದೊಡ್ಡ ಕಾಫಿ ಫಸಲು

ನಿಕ್ಕ ಬೇಕಾದರೆ ನಮ್ಮ ಕಾಫಿ ಫರ್ಟಿಲೈಸರುಗಳನ್ನು ಉಪಯೋಗಿಸಿರಿ

ನಮ್ಮ ಕಾರ್ಖಾನೆಯಲ್ಲಿ ಎಲ್ಲಾ ತರಹದ ಗೊಬ್ಬರ ಹೊಸ (fresh) ಗೊಬ್ಬರ ತಯಾರಾಗುತ್ತದೆ

Siddick's Manure Works
MERCARA

24—16

ಜೀವವಿಮೆ

ನಾವೀಗಲು ತುಂಬಾ ಎಲ್ಲಿ ಸಂಪಾದನೆಯ ಯುಕ್ತ ವಯಸ್ಸಿನ ಮೃತಪಟ್ಟರೆ ... ಅವರ ಕೊಂಡವರಿಗೆ ಕಷ್ಟ ನಿವಾರಣ ಪಡೆಯ ಜೀವವಿಮೆ.

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬದ ಜೀವನಾಧಾರಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ

ಅತಿ ಕಡಿಮೆ ದರದಲ್ಲಿ ಯಾವ ಲೋಪವೂ ಬಾರದಂತೆ ಕ್ಷಿಪ್ರದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ಮೈಸೂರಿನ ಸರಕಾರದ ಭದ್ರತೆಯುಳ್ಳ ಜೀವವಿಮೆ ಕಂಪೆನಿ

ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ಸಾಲವಾಗಿ ಹಣವನ್ನು ಒದಗಿಸಿ ಸ್ವಿರಾಸ್ತಿಗಳನ್ನು ಕೊಂಡ ಕಟ್ಟಿ ದೇಶದ ಆರ್ಥಿಕ ಸಂಪತ್ತನ್ನು (Economic Condition) ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೇ!

ಲೈಫ್ ಇನ್ಶೂರೆನ್ಸ್ ಆಕ್ಟಿನ ಮೇರೆ ಇಂಡಿಯಾ ಗವರ್ನಮೆಂಟ್ ಸೆಕ್ಯೂರಿಟಿಗಾಗಿ ಸಲ್ಲಬೇಕಾದ 12 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿಗೆ ಸಲ್ಲಬೇಕಾದ 1 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನ ಮದ್ರಾಸಿನ ಶಾಖೆಯಲ್ಲು 1 ಲಕ್ಷ ಗವರ್ನಮೆಂಟ್ ಆಫ್ ಇಂಡಿಯಾ ಸೆಕ್ಯೂರಿಟಿಯನ್ನು ಅರ್ಧಲಕ್ಷ ಮೈಸೂರು ಸೆಕ್ಯೂರಿಟಿಯನ್ನು ಡಿಪಾಜಿಟ್ಟಾಗಿ ಇಟ್ಟಿರುತ್ತೆ ಬಾಕಿ ಒಂದು ಲಕ್ಷ ಇಂಡ್ಯಾ ಗವರ್ನಮೆಂಟ್ ಸೆಕ್ಯೂರಿಟಿಗೆ ಬ್ಯಾಂಕ್ ಮೂಲಕ ಏರ್ಪಾಡು ಮಾಡಿರುತ್ತೆ

ಬಿ. ಎಸ್. ಅಂಬಾಡ್ಯೆ,
ರಿಲೈಫ್ ಅಂಡ್ ಮ್ಯಾರೇಜ್ ಆಫೀಸ್ ಮಡಿಕೇರಿ.

ಮಲಯಾಳ ವೈದ್ಯಶಾಲಾ

ಮಲಬಾರಿನ ನಂಬೀಶನ್ ಮತ್ತು ಕಂಪೆನಿ ಎಂಬ ಆಯುರ್ವೇದ ವೈದ್ಯಶಾಲೆಯಲ್ಲಿ ಒಂದು ಶಾಖೆಯು ವೀರರಾಜೇಂದ್ರಪೇಟೆಯಲ್ಲಿ ತೆರೆದಿರುತ್ತೆ ಇಲ್ಲಿ ಯಾವವಿಧವಾದ ರೋಗವಾಗಿದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧಿ ಕೊಟ್ಟು ಗುಣಪಡಿಸಲ್ಪಡುತ್ತೆ ಔಷಧದ ಚಾರ್ಜು ಬಹಳ ಕಡಿಮೆ ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು

ನಾರಾಯಣನಂಬೀಶನ್,
ಆಯುರ್ವೇದ ವೈದ್ಯರು,
52—15 ವೀರರಾಜೇಂದ್ರಪೇಟೆ.

ಪ್ರಕಟನೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್
ಲಿಮಿಟೆಡ್

ಕೋ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ

	ರೂ.
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	6,830
ಜನರು ಇಂದ ಠೇವಣಾತಿ	47,590

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರುಷ ವಾಯಿದೆ ಅಥವಾ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 6—4—0 ರ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದೊರೆಯುತ್ತೆ.

ಮರ್ಕೇರ ಕೊಡಗು ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು — ಟ್ರೆಸರ್.
ಕೊಡಂದೆರ ಕುಟ್ಟಯ್ಯನವರು, ಯಂ ಭುಜಂಗರಾಯರು
ರಾಯ್ ಬಹದ್ದೂರ್ — ಬಿ ಎ ಬಿ ಎಲ್

ಸೆಕ್ರೆಟರಿ
ಸಿ ಯಮ್ ವೆಂಕಪ್ಪಯ್ಯನವರು ಬಿ. ಎ ಬಿ. ಎಲ್.
ತಾರೀಖು 22—2—1924.

"ಕೊಡಗು"

೧೯೨೪ ನೇ ಇಸವಿ ಮೇ ತಾ|| ೨ ನೇ ಶುಕ್ರವಾರ.

ಜಮೀನುದಾರರ ಸಂಘದ ವಾರ್ಷಿಕ ಮಹಾಸಭೆ.

ಕೊಡಗು ಜಮೀನುದಾರರ ಸಂಘದ ವಾರ್ಷಿಕ ಕಾನ್ಫರೆನ್ಸು ಏಪ್ರಿಲ್ ತಾರೀಖು 19 ಮತ್ತು 20 ರಲ್ಲು ಮಡಿಕೇರಿಯಲ್ಲಿ ಬಹು ಸಾಂಭ್ರಮದಿಂದ ನಡೆಯಿತು. ಮೊದಲನೇ ದಿನ ಸುಮಾರು ಸಾವಿರದ ಇನ್ನೂರು ಜನರೂ ಮರುದಿನ ಸುಮಾರು ಒಂಭೈನೂರು ಜನರೂ ನೆರೆದಿದ್ದರು. ವಾಡಿಕೆಯಂತೆ ಸ್ಥಳೀಯ ತಾಲೋಕಿನವರೇ ಹೆಚ್ಚಾಗಿದ್ದರು. ಮಡಿಕೇರಿ ಮತ್ತು ಸಂಟರಾಯಪಟ್ಣಗಳ ಜನರು ಕಡಿಮೆಯಾಗಿದ್ದರೂ, ಎಡೆನಾಲ್ಕುನಾಡು ತಾಲೋಕಿನವರು ತಕ್ಕಮಟ್ಟಿಗೆ ಸೇರಿದ್ದರು. ಈ ಮಹಾಸಭೆಯ ಜನರಲ್ಲಿ ಉತ್ಸಾಹವು ತುಂಬಿ ತುಳುಕುತ್ತಿದ್ದಿತು. ಪ್ರತಿಯೊಬ್ಬನೂ ಮೀಟಿಂಗಿನಲ್ಲಿ ನಡೆಯುವ ಸಂಗತಿಗಳನ್ನು ತಿಳಿದುಕೊಳ್ಳಲು ಶಾಂತಚಿತ್ತದಿಂದ ಕೇಳುತ್ತಿದ್ದದಲ್ಲದೆ ಅನೇಕರು ಚರ್ಚೆಯಲ್ಲಿ ಭಾಗಿಗಳಾಗಲು ಬಹು ಕುತೂಹಲವುಳ್ಳವರಾಗಿದ್ದರು. ಅಮಲು ಪದಾರ್ಥವನ್ನು ಸೇವಿಸಿದವರು ಮೀಟಿಂಗಿನ ಚಪ್ಪರದೊಳಗೆ ಬರಕೂಡದೆಂದು ಕಟ್ಟಳೆಮಾಡಿಕೊಂಡು ಅದರಂತೆಯೇ ನಡಿಸಿದ್ದರಿಂದ ಸುರಾದೇವಿಗೆ ಸಭೆಯಲ್ಲಿ ಎಡೆಸಿಕ್ಕದಂತಾಗಿ ಮೀಟಿಂಗು ಶಾಂತತೆಯಿಂದಲೂ ಮರ್ಯಾದೆಯಿಂದಲೂ ನಡೆಯಿತು. ಕಾನ್ಫರೆನ್ಸಿಗೆ ಮೊದಲು ಆ ಆ ತಾಲೋಕಿನ ಸ್ವಾಗತಮಂಡಳಿಯ ಮೀಟಿಂಗು ನಡೆದುದರಲ್ಲಿ ಅಲ್ಲಿಯವರಲ್ಲಿ ಉಂಟಾದ ಒಡಕನ್ನು ಕೇಳಿದವರಿಗೆ ಮುದುಕೇರಿ ಸಭೆಯು ಎಂದಿಗೂ ಗಲಾಟೆಯಿಲ್ಲದೆ ನಡೆಯಲಿಕ್ಕಿಲ್ಲವೆಂತಲೂ, ಹೆಚ್ಚಿನ ಜನರು ಸೇರಿಯಲಿಕ್ಕಿಲ್ಲವೆಂತಲೂ ತೋರಿದ್ದದ್ದು ಪೂರಾ ಸುಳ್ಳಾಯಿತು. ಯಾರೂ ಯೋಚಿಸದಷ್ಟು ಜನರ ಸಂಖ್ಯೆಯು ಮೂಲೆಯಾದ ತುದಿಯಲ್ಲಿ ನೆರೆದದ್ದು ಎಲ್ಲರಿಗೂ ಸಂತೋಷವನ್ನೂ ಆಶ್ಚರ್ಯವನ್ನೂ ಉಂಟುಮಾಡಿತು. ಸ್ಕೂಲಿನಬಳಿ ಇರುವ ಹಸ್ಸಿನಮರದ ತೋಪುಗಳ ಕೆಳಗೆ ತಯಾರಿಸಿದ್ದ ಚಲೋದಾದ ಚಪ್ಪರವೂ ಅಲ್ಲಿಯವರ ಕಾರ್ಯಾತುರವೂ ಸಭಿಕರನ್ನು ವಿಸ್ಮಯಗೊಳಿಸಿದವು. ಸ್ವಾಗತಮಂಡಳಿಯವರ ಊಟ ಉಪಚಾರಗಳ ಏರ್ಪಾಡಂತೂ ಬಹಳ ತೃಪ್ತಿಕರವಾಗಿತ್ತು. ಪಿತಾದೇವಿಯ ಹೆಸರು ಎತ್ತಲುಹೋಗಿ ಮಾಂಸ ಆಹಾರಕ್ಕೇನೇ ಅಲ್ಲಿ ಎಡೆಕೊಟ್ಟಿರಲಿಲ್ಲ. ಆದುದರಿಂದ ಎಲ್ಲವೂ ಬ್ರಾಹ್ಮಣರು, ಮುಸಲ್ಮಾನರು ವಗೈರೆರಿಗೆ ಸಹ ನ್ಯಾಯವಾದ ಊಟದ ಏರ್ಪಾಡುಗಳು ಮಾಡಲ್ಪಟ್ಟಿದ್ದವು. ಮಾದರಿಯಂತಿದ್ದ ಆ ಊಟದ ಏರ್ಪಾಡುಗಳನ್ನು ಬೇರೆ ತಾಲೋಕಿನವರು ಇಂಥಾ ಸಂದರ್ಭಗಳಲ್ಲಿ ಹಿಂಬಾಲಿಸಬೇಕಲ್ಲದೆ ದೇಶದವರ ಬೇರೆ ದೊಡ್ಡ ಔತಣಗಳಲ್ಲಿಯೂ ಈ ರೀತಿಯನ್ನೇ ಅನುಸರಿಸಿ ನಡೆಯುವುದು ಉತ್ತಮವೆಂದು ನಮಗೆ ತೋರುತ್ತದೆ. ದೇಶದವರೇ ಸೇರಿ ತಮ್ಮ ಮಹಾಸಭೆಯಲ್ಲಿ ನಡಿಸಿದ ಕ್ರಮವನ್ನು ಊರಿನವರಾಗಲೀ, ನಾಡಿನವರಾಗಲೀ ಜಾತಿಗೆ ತೆರಲು ಹಿಂಜರಿಯಬಾರದು. ದೇಶದವರಿಗೆ ಇದಕ್ಕಿಂತ ದೊಡ್ಡ ಉದಾಹರಣೆಯು ಮತ್ಯಾವದು ಬೇಕಾಗಿದೆ? ಸ್ವಾಗತಮಂಡಳಿಯ ತೃಪ್ತಿಕರವಾದ ಏರ್ಪಾಡುಗಳಿಗೆ ಸ್ವಯಂಸೇವಕರು ಮನಸ್ಸಿಟ್ಟು ಮಾಡಿದ ಸೇವೆಯೇ ಮುಖ್ಯ ಕಾರಣ. ಸ್ವಯಂಸೇವಕರು ತಮ್ಮ ಕರ್ತವ್ಯವನ್ನು ಮನಃಪೂರ್ವಕ ಮಾಡಿದಕ್ಕೆ ಅವರಿಗೆ ವಂದಿಸಬೇಕಾಗಿದೆ. ಒಟ್ಟಾರೆ ಆ ತಾಲೋಕಿನವರು ಒಗ್ಗಟ್ಟಾಗಿ ದೇಶದವರಿಗೆ ಯೋಗ್ಯವಾದ ರೀತಿಯಲ್ಲಿ ಸ್ವಾಗತವನ್ನೀಯಿದಕ್ಕೆ ಅವರಿಗೆ ಎಷ್ಟು ವಂದಿಸಿದರೂ ಸಾಲದು.

ಈ ಕಾನ್ಫರೆನ್ಸಿನ ವಿವರವನ್ನು ಒಂದು ಚಿಕ್ಕ ಪುಸ್ತಕರೂಪದಲ್ಲಿ ಪ್ರಕಟಿಸುವ ವಿಚಾರ ಸಂಘದ ಎಗ್ಸಿಕ್ಯುಟಿವ್ ಕಮಿಟಿಯವರು ಬೇಗನೆ ತೀರ್ಮಾನಿಸುವರೆಂದು ತಿಳಿಯಬರುವುದರಿಂದ ಅದನ್ನು ಈ ಪತ್ರಿಕೆಯಲ್ಲಿ ಪ್ರಕಟಿಸಲು ಹೆಚ್ಚಿನ ಸ್ಥಳ ಉಪಯೋಗಿಸಲು ನಾವು ಇಚ್ಛೈಸುವುದಿಲ್ಲ. ಆದುದರಿಂದ ಮೀಟಿಂಗಿನಲ್ಲು ನಡೆದ ಮುಖ್ಯಾಂಶಗಳನ್ನು ಮಾತ್ರ ಕುರಿತು ಇಲ್ಲಿ ಕೆಲವು ಮಾತುಗಳನ್ನು ಬರೆಯುವುದಾಗಿದೆ.

ಸ್ವಾಗತಕಮಿಟಿಯ ಅಧ್ಯಕ್ಷರಾಗಿದ್ದ ಮೆ|| ಚೆಪ್ಪುಡೀರ ಪೊನ್ನಪ್ಪನವರು ತಮ್ಮ ಭಾಷಣದಲ್ಲಿ ಮುಖ್ಯವಾಗಿ ತಮ್ಮ ತಾಲೋಕಿನ ಕಾಲುಹವಾಲುಗಳನ್ನು ವಿವರವಾಗಿ ಸೂಚಿಸಿದರು. ಕಾನ್ಫರೆನ್ಸಿನ ಅಧ್ಯಕ್ಷರಾಗಿದ್ದ ಮೆ|| ಕೋವಾಂಡ ಉತ್ತೈಯ್ಯನವರು ತಮ್ಮ ಭಾಷಣವನ್ನು ಮೊದಲು ಇಂಗ್ಲೀಷಿನಲ್ಲು ಓದಲು ಪ್ರಾರಂಭಿಸಿದಾಗ ಜನರಲ್ಲಿ ಸ್ವಲ್ಪಮಟ್ಟಿಗೆ ಅತೃಪ್ತಿಯು ತೋರಿಬಂತು. ಇಂಥಾ ಸಭೆಯಲ್ಲಿ ಕನ್ನಡದಲ್ಲಿಯೇ ಭಾಷಣಮಾಡಬೇಕಾದ ಜವಾಬ್ದಾರಿಯನ್ನು ಅಧ್ಯಕ್ಷರು ತಿಳಕೊಳ್ಳದೆ ಹೋದದ್ದು ವ್ಯಸನಕರವೆಂದೂ ಇನ್ನು ಮುಂದಾದರೂ ಈ ಪದವಿಯನ್ನು ವಹಿಸಿಕೊಳ್ಳುವವರು ಹೀಗೆ ಮಾಡಬಾರದೆಂತಲೂ ಸಹ ಸಭೆಯವರಿಂದ ಸೂಚಿಸಲ್ಪಟ್ಟಿತು. ಸುಮಾರು ನೆರೆದಿದ್ದ ಮುಕ್ಕಾಲುಪಾಲು ಜನರಿಗೆ ಇಂಗ್ಲೀಷು ತಿಳಿಯದೆ ಇದ್ದಂತೆ ಆ ಸಭೆಗೆ ಇಂಗ್ಲೀಷಿನಲ್ಲಿ ಭಾಷಣಮಾಡುವುದರಲ್ಲಿ ಅರ್ಥವೇನೂ ಇಲ್ಲ. ಸಂಕ್ಷೇಪ ಕನ್ನಡತರ್ಜುಮೆ ಮಾಡಲ್ಪಟ್ಟರೂ ಕೂಡ ಒಂದೆರಡು ಗಂಟೆಗಳ ಇಂಗ್ಲೀಷು ಭಾಷಣದ ಸಮಯದಲ್ಲಿ ಏನೂ ಅರ್ಥವಾಗದ ಜನರಲ್ಲಿ ಅಸಮಾಧಾನ ಉಂಟಾಗದೆ ಎಂದಿಗೂ ಇರಲಿಕ್ಕಿಲ್ಲ. ದೇಶದ ರಾಜಕೀಯ ಚಳವಳಿಯ ಈ ಸಂದುಕಟ್ಟಿನ ವೇಳೆಯಲ್ಲು ದೇಶದ ಅಭಿಪ್ರಾಯಗಳನ್ನು ಸರ್ಕಾರದವರಿಗೆ ಮಂಡಟ್ಯಾಗುವ ಭಾಷೆಯಲ್ಲಿ ತಿಳಿಸಬೇಕೆಂಬ ಕಾರಣದಿಂದ ಅಧ್ಯಕ್ಷರು ತಮ್ಮ ಭಾಷಣವನ್ನು ಇಂಗ್ಲೀಷಿನಲ್ಲಿ ತಯಾರಿಸಿದ್ದಿರಬಹುದು. ಆದರೆ ಭಾಷಣದ ಇಂಗ್ಲೀಷು ಪ್ರತಿಯೊಂದನ್ನು ಸರ್ಕಾರದವರಿಗೆ ಕಳುಹಿಸಿ, ಎಲ್ಲರಿಗೂ ಕನ್ನಡ ತಿಳಿದಂತೆ ಆ ಸಭೆಯಲ್ಲಿ ಕನ್ನಡದಲ್ಲಿ ಭಾಷಣಮಾಡಿದ್ದರೆ ಎಲ್ಲರಿಗೂ ತೃಪ್ತಿಯುಂಟಾಗುತ್ತಿತ್ತು. ಸ್ವದೇಶೀಯ ಪ್ರೀತಿಯ ಈ ಸಮಯದಲ್ಲು ಅಧ್ಯಕ್ಷರು ಮಾತೃಭಾಷೆಗೆ ಪ್ರಾಮುಖ್ಯತೆಯನ್ನು ಕೊಡದೆ ಇದ್ದದಕ್ಕೆ ನಾವು ಒಪ್ಪುವುದಿಲ್ಲ. ಇನ್ನು ಮುಂದಕ್ಕೆ ಹೀಗೆಂದಿಗೂ ಆಗಲಿಕ್ಕಿಲ್ಲವೆಂದು ನಾವು ಹಾರೈಸುತ್ತೇವೆ.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮುಖ್ಯವಾದ ಸಂಗತಿಗಳನ್ನು ಮುಟ್ಟಿದ್ದಲ್ಲದೆ ಕೆಲವು ಹೊಸ ಆಲೋಚನೆಗಳನ್ನು ಸಭೆಯ ಮುಂದಿಟ್ಟರು. 'ಈ ಸಂಘವು ಚೆನ್ನಾಗಿ ಕೆಲಸ ಮಾಡುತ್ತಿರುವುದಿಲ್ಲವೆಂತಲೂ, ಇಷ್ಟರವರೆಗೆ ರಾಜಕೀಯ ಸುಧಾರಣೆಗೆ ಮಾತ್ರ ಗಮನಕೊಟ್ಟು, ಆರ್ಥಿಕ ಸಾಮಾಜಿಕ, ಆತ್ಮೀಕ ವಿಷಯಗಳನ್ನು ಮರೆತುಬಿಟ್ಟಿದೆಯೆಂತಲೂ ಹೀಗಾಗಲು ತಕ್ಕಷ್ಟು ದೇಶಸೇವಕರು ಕೆಲಸಮಾಡಲು ಮುಂದಕ್ಕೆ ಬಾರದೆ ಇದ್ದದ್ದು, ಸಂಘದ ಮೀಟಿಂಗುಗಳನ್ನು ನಡಿಸಲು ತಕ್ಕದಾದ ವ್ಯವಸ್ಥೆ ಒಂದಿಲ್ಲದೆ ಇರುವುದೂ, ಇವೆಲ್ಲಕ್ಕೂ ಮೂಲವಾದ ಒಂದು ಹಣದ ಅವಶ್ಯಕತೆಯೂ, ಸಂಘದ ವಿಷಯದಲ್ಲಿ ಸರ್ಕಾರದವರ ಉದಾಸೀನತೆಯೂ ಕಾರಣಗಳೆಂತಲೂ' ಮುಂತಾಗಿ ಹೇಳಿದ ಅಧ್ಯಕ್ಷರ ಮಾತುಗಳು ನಿಜವೆಂದೇ ಹೇಳಬೇಕಾಗಿದೆ. ಸಂಘದ ಈಗಿನ ಕೆಲಸವು ತೃಪ್ತಿಕರವಲ್ಲವೆಂದೇ ನಮ್ಮ ಅಭಿಪ್ರಾಯ. ಇದರ ಉದ್ಯೋಗಸ್ಥರು ಇಮ್ಮಡಿಯಷ್ಟು ಮುತುವರ್ಜಿಯಿಂದ ಕೆಲಸಮಾಡಿದ ವಿನಹ ಸಂಘವು ದೇಶಕ್ಕೆ ಸಾಕಷ್ಟು ಪ್ರಯೋಜನಕಾರಿಯಾಗಲಿಕ್ಕಿಲ್ಲ. ಮಹಾತ್ಮ ಗಾಂಧಿಯವರ ವಿಷಯ ಎತ್ತಿದಾಗ ಅಧ್ಯಕ್ಷರು ಮಹಾತ್ಮರ ಸಂಕಷ್ಟದ ಕಾಲದಲ್ಲೂ ಅವರು ಅದರಿಂದ ಪಾರಾದಾಗಲೂ, ದೇಶದವರಲ್ಲಿ ಉಂಟಾದ ವ್ಯಥೆ ಮತ್ತು ಸಂತೋಷಗಳನ್ನೂ ಬಹಳ ಚೆನ್ನಾಗಿ ವಿವರಿಸಿದಲ್ಲದೆ ಮಹಾತ್ಮಜಿಯವರನ್ನು ಜೈಲಿನಿಂದ ಬಿಡುಗಡೆ ಮಾಡಿದಕ್ಕೆ ವೈಸರಾಯರಿಗೆ ನಮ್ಮ ಕೃತಜ್ಞತೆಯನ್ನು ಸೂಚಿಸಿಯೂ ಅವರು ಉಪದೇಶಿಸಿದ ಅಹಿಂಸೆ ಅಸ್ಪೃಶ್ಯತೆ ತ್ಯಾಗ ಖಾದಿ, ಸ್ವರಾಜ್ಯ ಮೊದಲಾದ ತತ್ವಗಳನ್ನು ಪೂರಾ ಜಾರಿಗೆ ತಂದು ಹಿಂದೂದೇಶಕ್ಕೆ ಬೇಗನೆ ಸ್ವರಾಜ್ಯ ದೊರೆಯುವಂತೆ ದೇಶದವರನ್ನು ತಕ್ಕಂತೆ ನಡಿಸಲು ಮಹಾತ್ಮರಿಗೆ ಆಯುರಾರೋಗ್ಯವನ್ನು ದೇವರು ದಯಪಾಲಿಸಲೆಂದೂ, ಸೂಚಿಸಿದ ಠರಾವುಗಳು ದೇಶದ ಪ್ರತಿಯೊಬ್ಬ ಮನುಷ್ಯನು ಉಚ್ಚರಿಸಲಾರದಿದ್ದರೂ ಮನಸ್ಸಿನೊಳಗಿನ ಅಭಿಲಾಷೆಯನ್ನು ಹೊರಬೀಳಿಸಿತೆಂಬದರಲ್ಲಿ ಸಂಶಯವಿಲ್ಲ. ರಾಜಕೀಯ ಬದಲಾವಣೆಯ ವಿಷಯದಲ್ಲಿ ಧೀರ್ಘವಾಗಿ ಮಾತಾಡಿ ಹಿಂದೂದೇಶದ ಬೇರೆ ಪ್ರಾಂತ್ಯಗಳ ಮತ್ತು ಈ ದೇಶದ ಸುಧಾರಣೆಗಳಿಗಿರುವ ತಾರತಮ್ಯವನ್ನು ವಿವರಿಸಿ, ನಮಗೆ ದೊರಕಿರುವ ಮಾರ್ಪಾಡು ಅತೃಪ್ತಿಕರವಾದುದೆಂತ ಹೇಳಿದಲ್ಲದೆ ಜಮೀನುದಾರರ ಸಂಘದೊಳಗೆ ಒಂದು ಪ್ರತಿನಿಧಿಸಭೆಯನ್ನು ಸ್ಥಾಪನೆಮಾಡಬೇಕೆಂದು ಅಭಿಪ್ರಾಯ ಕೊಟ್ಟರು. ಈ ಪ್ರತಿನಿಧಿಸಭೆಯು ಹ್ಯಾಗೆ ಜಾರಿಗೆ ತರಲ್ಪಡಲಾಗುವುದೋ ತಿಳಿಯುವುದಿಲ್ಲ. ಈ ಹೊಸ ಏರ್ಪಾಡಿಗೆ ಈಗಲೇ ಕೈಹಾಕುವುದಕ್ಕಿಂತ ಜಮೀನುದಾರರ ಸಂಘದ ಕಾರ್ಯಕ್ರಮವನ್ನು ಸರಿಪಡಿಸಿ ಅದರಿಂದಲೇ ಈ ಪ್ರತಿನಿಧಿಸಭೆಯ ಕೆಲಸವನ್ನೆಲ್ಲಾ ನಡಿಸುವಂತೆ ಮಾಡುವುದು ಉತ್ತಮವೆಂದು ತೋರುತ್ತದೆ. ಜಮ್ಮದ ಹಿಡುವಳಿಯ ಕಂದಾಯವನ್ನು ಬದಲಾಯಿಸುವ ಹಕ್ಕು ಸರ್ಕಾರದವರಿಗೆ ಒಂದಿಷ್ಟೂ ಇಲ್ಲವೆಂಬುದನ್ನು ನ್ಯಾಯವಾದ ಕಾರಣಗಳಿಂದ ವಿಶದಪಡಿಸಿದರು. 'ದೇಶಕ್ಕೆ ರೈಲ್ವೆ ಬಂದರೆ ಕೊಡಗಿನ ಪ್ರತ್ಯೇಕವಾಗಿರೋಣವು ನಿವಾರಣೆಯಾಗಿ, ದೇಶದ ಸಂಪತ್ತು ಮತ್ತು ವ್ಯಾಪಾರವು ಖಂಡಿತವಾಗಿ ಹೆಚ್ಚಾಗುವುದರಿಂದ ಇಂಪೀರಿಯಲ್ ಸರ್ಕಾರವು ಖರ್ಚುಮಾಡುವ ಹಣದ ಬಡ್ಡಿಗೆ ಬೇಕಾದಷ್ಟು ಉತ್ಪತ್ತಿಯು ಬಾರದಿದ್ದರೆ ಸಾಲದೆ ಇರುವ ಬಡ್ಡಿ ಕೊಡಲು ನಮ್ಮ ಸರ್ಕಾರದವರು ಗ್ಯಾರಂಟಿ ಕೊಡಬಹುದು" ಎಂದು ಅಧ್ಯಕ್ಷರು ಅಭಿಪ್ರಾಯಪಟ್ಟದ್ದಕ್ಕೆ ದೇಶದ ಹೆಚ್ಚಿನ ಜನರು ಎಂದಿಗೂ ಅನುಮೋದಿಸಲಾರರು. ರೈಲ್ವೆಯು ಬರುವುದಕ್ಕೆ ಎಲ್ಲರೂ ಸಂತೋಷಪಡುವರಾದರೂ ದೇಶದ ಬಡತನದ ದೆಸೆಯಿಂದ ನಮ್ಮ ಸರ್ಕಾರದವರು ಬಡ್ಡಿಯ ಜವಾಬ್ದಾರಿಕೆಗೆದುಕೊಳ್ಳಬೇಕೆಂಬುದಕ್ಕೆ ಒಪ್ಪುವುದಿಲ್ಲ. ದೇಶದ ಆದಾಯವಿಷ್ಟದಲ್ಲಿ ಸ್ವಲ್ಪಮಾತ್ರವಿರುವ ಉಳುವರಿಯನ್ನು ರೈಲ್ವೆಗಿಂತ ಹೆಚ್ಚು ತುರ್ತು ಮತ್ತು ಅಗತ್ಯವಾದ ಕೆಲಸಗಳಿಗೆ ಉಪಯೋಗಿಸಬೇಕಾಗಿರುವುದರಿಂದ ಬಡ್ಡಿಗೆ ಗ್ಯಾರಂಟಿ ಕೊಡುವುದು ಉಚಿತವಲ್ಲ. ಇಂಡಿಯಾ ಸರ್ಕಾರದವರು ಅನೇಕ ವರ್ಷಗಳಿಂದ ನಮ್ಮ ದೇಶದ ಉತ್ಪತ್ತಿಯ ಉಳುವರಿಯನ್ನು ಹೊಂದಿಕೊಳ್ಳುತ್ತಾ ಬಂದು ಈಗ ನಮ್ಮ ಸರ್ಕಾರದ ಒಂದು ಭಾಗವು ಪ್ರತ್ಯೇಕಿಸಲ್ಪಟ್ಟಾಗ ಏನೊಂದು ಮೊಬಲಗನ್ನು ಕೊಡದೆ ಇರುವುದರಿಂದ ಅವರು ನಮ್ಮ ಪ್ರಾಂತಿಕ ಸರ್ಕಾರದಿಂದ ಏನೊಂದೂ ಬಡ್ಡಿ ಅಪೇಕ್ಷಿಸದೆ ರೈಲ್ವೆಯನ್ನು ನಿರ್ಮಿಸಬೇಕಾದದ್ದು ನ್ಯಾಯವಾಗಿದೆ. ಈ ವಿಷಯವಾಗಿ ಮರುದಿನದ ಮೀಟಿಂಗಿನಲ್ಲು ಬಡ್ಡಿ ಗ್ಯಾರಂಟಿನಾಡಕೂಡದೆಂದು ಠರಾವು ಮಂಜೂರಾದದ್ದೇ ದೇಶದವರ ಅಭಿಪ್ರಾಯವನ್ನು ಸೂಚಿಸಿದ್ದಾಗಿದೆ.

ಅಂತ್ಯದಲ್ಲಿ ನಮ್ಮ ಪತ್ರಿಕೆಯು ಮಾಡುತ್ತಿರುವ ದೇಶಸೇವೆಯ ವಿಷಯ ಒಂದೆರಡು ಮಾತುಗಳನ್ನಾಡಿ, ಅದಕ್ಕೆ ಈಗ ದೇಶದವರು ಕೊಡುತ್ತಿರುವ ಉತ್ತೇಜನವು ಸಾಲದೆಂದೂ, 'ಕೊಡಗಿನಲ್ಲಿ ಎಲ್ಲಾದಕ್ಕಿಂತಲೂ ಮುಖ್ಯವಾದ ಈ ಸಂಸ್ಥೆಯನ್ನು ಎಲ್ಲರೂ ಆದರಿಸಿ ಕೊಂಡಾಡಬೇಕೆಂದು" ಪುನಃ ಒತ್ತಿ ಹೇಳಿದಕ್ಕೆ ನಾವು ಅವರಿಗೆ ವಂದಿಸುತ್ತೇವೆ. ಅವರ ಕೋರಿಕೆಯು ಒಂದೆಕಲ್ಲಿನಮೇಲೆ ಮಳೆಬಿದ್ದಂತೆ ಆಗಲಿಕ್ಕಿಲ್ಲವಾಗಿ ಹಾರೈಸುವ. ಅಧ್ಯಕ್ಷರ ಭಾಷಣವು ಇಂಗ್ಲೀಷಿನಲ್ಲು ಪ್ರಾರಂಭಿಸಲ್ಪಟ್ಟದ್ದರಿಂದ ಶುರುವಿನಲ್ಲು ಜನರು ಅಸಮಧಾನವುಳ್ಳವರಾಗಿದ್ದರೂ ಕೂಡ ಕನ್ನಡ ತರ್ಜುಮೆಯನ್ನು ಓದಿದಾಗ ಎಲ್ಲರೂ ಸಶ್ರದ್ಧೆಯಿಂದ ಆಮೂಲಾಗ್ರವಾಗಿ ಚೆನ್ನಾಗಿ ಕಿವಿಕೊಟ್ಟು ಕೇಳಿದಲ್ಲದೆ ಆಗಾಗ್ಗೆ ಕೈಚಪ್ಪಾಳೆಗಳಿಂದ ತಮ್ಮ ಮೆಚ್ಚಿಕೆಯನ್ನು ಸೂಚಿಸುತ್ತಿದ್ದರು. ಒಟ್ಟಾರೆ ಅಧ್ಯಕ್ಷರ ಭಾಷಣವು ಅಲ್ಲಿ ಸೇರಿದ್ದ ಮಹಾಸಭೆಯವರಿಗೆ ತೃಪ್ತಿಯನ್ನುಂಟುಮಾಡಿತೆಂದೇ ಹಲವರ ಅಭಿಪ್ರಾಯ. ಕಾನ್ಫರೆನ್ಸಿನ ಮರುದಿನದ ಮೀಟಿಂಗಿನಲ್ಲು ಚರ್ಚಿಸಲ್ಪಟ್ಟ ಠರಾವುಗಳ ವಿಷಯವಾಗಿ ನಮ್ಮ ಅಭಿಪ್ರಾಯವನ್ನು ಮುಂದಿನಸಂಚಿಕೆಯಲ್ಲಿ ಪ್ರಕಟಿಸುವೆವು.

ಸ್ವೀಕಾರ.

ಕಾಶೀಪಟ್ಣದಲ್ಲಿರುವ ರಾಮಕೃಷ್ಣಮಿಷನ ಸೇವಾಸಮಿತಿಯ 23 ನೇ ವಾರ್ಷಿಕಾ (1923) ವರದಿಯೂ, ಇಂಡಿಯನ್ ಬಾರ್ ಕಮಿಟಿಯ 1923—24ರ ವರದಿಯೂ, ಮಡಿಕೇರಿ ಬಾಲಸನ್ಮಾರ್ಗಸಮಾಜದ ಯಂ ಎಸ್. ಅನಂತಪದ್ಮನಾಭರವರ "ಪದ್ಯರತ್ನ" ವೆಂಬ ಚಿಕ್ಕ ಪದ್ಯಪುಸ್ತಕವೂ ಮಂಗಳೂರು ಎ ರಾಮಪ್ಪನವರ "ಹಾರ್ಮೋನಿಯಮ್ ಬೋಧನಕ್ರಮ" ಎಂಬ ಕನ್ನಡ ಸಂಗೀತ ಪುಸ್ತಕವೂ, ಸರ್ಕಾರದ ಭರವಸೆಯುಳ್ಳ ಓರಿಯಂಟಲ್ ಜೀವವಿಮೆ ಸಂಘದ 1923ನೇ ವರ್ಷದ ವರದಿಯೂ ನಮ್ಮ ಕೈಸೇರಿವೆ. ಇವುಗಳನ್ನು ವಂದನೆಗಳಿಂದ ಸ್ವೀಕಾರ ಮಾಡುತ್ತೇವೆ. ಇವುಗಳ ವಿಮರ್ಶೆಗಳನ್ನು ನಮಗೆ ಸಮಯವೂ, ಸ್ಥಳವೂ ದೊರೆತಾಗ ಪ್ರಕಟಿಸುತ್ತೇವೆ.

ಕೊಡಗು ನ್ಯಾಯವಿಧಾಯಕ ಸಭೆ.

—o—

(ಕಳೆದ ಸಂಚಿಕೆಯಿಂದ ಮುಂದುವರಿದದ್ದು)

ಅಲ್ಲಿಗೆ ಓದಲಿಕ್ಕೆ ಹೋಗುವ ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆಯಾಗಿರುವುದರಿಂದಲೇ ಅಲ್ಲಿ ಕಲಿಸುವ ವಿದ್ಯೆಗೆ ಜನರ ಒಲ್ಲಾಸ ಇಲ್ಲವೆಂಬುದು ಸ್ಪಷ್ಟವಾಗುತ್ತದೆ. ಹುಡುಗರ ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸದ ಕ್ರಮವು ಹುಡುಗರಿಗೂ ಹುಡುಗಿಯರಿಗೂ ಒಂದೇ ಆಗಿರುವುದರಿಂದ ಅದು ಹುಡುಗಿಯರ ಅವಶ್ಯಕತೆಗಳಿಗೆ ಹಲವು ವಿಧದಲ್ಲಿ ಸೇರದಿದ್ದರೂ ಕೂಡ ಆ ಸ್ಕೂಲಿನಲ್ಲಿ ಓದುವ ಹುಡುಗಿಯರ ಸಂಖ್ಯೆಯನ್ನು ನೋಡಿದರೆ ಹುಡುಗರ ಹೈಸ್ಕೂಲು ಕಾನ್ವೆಂಟು ಕನ್ಯಾಸ್ತ್ರೀಗಳಿಂದ ನಡೆಸಲ್ಪಡುವ ಹೈಸ್ಕೂಲಿಗಿಂತ ಜನಪ್ರಿಯವಾಗಿದೆಯೆಂದು ಕಂಡುಬರುತ್ತದೆ. ಬೇರೆ ಯಾವ ವಿಷಯವಲ್ಲದಿದ್ದರೂ ಕಾನ್ವೆಂಟಿನ ಕನ್ಯಾಸ್ತ್ರೀಯರು ಕ್ರೈಸ್ತಮತವನ್ನು ಪ್ರಬಲಗೊಳಿಸುವುದಕಲ್ಲದೆ ಬೇರೆ ಯಾವದಕ್ಕೂ [illegible]ಯನ್ನು ಕೈಕೊಳ್ಳುತ್ತಿಲ್ಲವೆಂಬ ಸಂಗತಿಯೊ ದೇಶದ ಸಂಪ್ರದಾಯಾನುಸಾರ ನಡೆಯುವ ಜನರ ಮತಸಮ್ಮಂಧ ಗುಣವನ್ನು ನೋಯಿಸುವುದರಿಂದ ಕಾನ್ವೆಂಟ್ ವಿದ್ಯೆಯು ಜನರಿಗೆ ಒಪ್ಪುವಂತಾದಲ್ಲ. ಕ್ರೈಸ್ತಮತವನ್ನು ಎಷ್ಟರಮಟ್ಟಿಗೆ ಹುಡುಗಿಯರಿಗೆ ಕಲಿಸುತ್ತಾರೆಂದೂ ಯಾ ಸೀದಾ ಕಲಿಸುತ್ತಾರೆಂದೂ ಸಹ ನಾನು ಹೇಳಲಾರೆ; ಆದರೆ ಅಲ್ಲಿ ಕನ್ಯಾಸ್ತ್ರೀಯರ ಇರುವಿಕೆಯು ಮತ್ತು ಅವರು ಪ್ರತಿನಿತ್ಯವೂ ಆಚರಿಸುವ ನಿಯಮಗಳು, ಆಸ್ಪ್ರಗಳೇ ಹುಡುಗಿಯರ ಮನಸ್ಸು ಆಗ ತಾನೇ ರೂಪಿಕಳ್ಳುತ್ತಿರುವಾಗ ತಮ್ಮ ಮತದ ವಿಷಯ ಏನೊಂದೂ ಗೊತ್ತಿಲ್ಲದೆ ಇರುವುದರಿಂದ, ತಮ್ಮ ಮತದ ವಿಷಯ ಅವರಲ್ಲಿ ಅಸಡ್ಡೆಯನ್ನು ಹುಟ್ಟಿಸಲು ಸಾಕು.

ಆ ಶಾಲೆಯಲ್ಲಿ ಕಲಿಸುವ ವಿದ್ಯೆಯು ನಮಗೆ ಬೇರೆ ಕಾರಣಗಳಿಂದಲೂ ಒಪ್ಪುವುದಿಲ್ಲ. ಅಲ್ಲಿಯ ವಿದ್ಯಾಭ್ಯಾಸದ ಕ್ರಮವು ಪಾಶ್ಚಿಮಾತ್ಯರ ನಮೂನೆಯದಾಗಿರುವುದರಿಂದ ಅದು ನಮ್ಮ ದೇಶದ ಅವಶ್ಯಕತೆಗೆ ಸರಿಹೊಂದುವುದಿಲ್ಲ. ಯಾವ ತರದ ವಿದ್ಯೆಯೇ ಆಗಲಿ ಅದು

ಕೊಡಗು ಕೌನ್ಸಿಲು ಮೀಟಿಂಗು

ಮಾಂಟೆಸ್ಕ್ಯೂ ಎಂಬವರು ಅಧಿಕಾರಗಳನ್ನು ಪ್ರತ್ಯೇಕಿಸಲಿಕ್ಕೆ ನವಾಡಿದ ತತ್ವಗಳನ್ನು ಚರ್ಚಿಸಬೇಕಾಗಿದೆ. ಇದಕ್ಕೆ ಮುಖ್ಯವಾಗಿ ಕಾನೂನನ್ನು ಯಾರು ಉಂಟುಮಾಡುತ್ತಾರೋ ಅವರು ಅದನ್ನು ಚಲಾವಣೆ ಮಾಡತಕ್ಕದ್ದು. ಲೆಜಿಸ್ಲೆಟಿವ್ ಮತ್ತು ಜ್ಯುಡಿಶಿಯಲ್ ಪ್ರತ್ಯೇಕವಾಗಿ, ಪ್ರತ್ಯೇಕ ಇಲಾಖೆವಾರರಿಂದ ನಡೆಸಲ್ಪಡಬೇಕಲ್ಲದೆ ಒಬ್ಬನು ಇನ್ನೊಬ್ಬನ ಅಧೀನದಲ್ಲಿರಕೂಡದು. ಈ ಉದ್ದೇಶವು ಜನರಿಗೆ ಹೆಚ್ಚಾಗಿ ಪ್ರಯೋಜನವನ್ನುಂಟುಮಾಡುವುದಕ್ಕಲ್ಲದೆ ಸರಕಾರದ ಅನುಕೂಲಕ್ಕಲ್ಲ. ಇನ್ನೊಂದು ಉದ್ದೇಶವು ಜನರ ಸ್ವಾತಂತ್ರ್ಯವನ್ನು ಸುರಕ್ಷಿತವಾಗಿಡಲೂ ಮತ್ತು ಸರಕಾರದಿಂದ ಯಾವ ಅನ್ಯಾಯವೂ ಮತ್ತು ತೊಂದರೆಯೂ ಆಗದಂತೆ ಮೂ ಯಾವಾಗಲೂ ಎಲ್ಲರಿಗೂ ನ್ಯಾಯಸಿಕ್ಕುವಂತೆ ಮಾಡುವುದೇ ಆಗಿರುತ್ತೆ.

ಆದರೆ ನನ್ನ ಠರಾವು ಎಗ್ಸಿಕ್ಯೂಟಿವ್ ಮತ್ತು ಜ್ಯುಡಿಶಿಯಲ್ಲನ್ನು ಪ್ರತ್ಯೇಕಿಸುವುದರ ವಿಷಯವೇ ಆಗಿದೆ. ಸರಕಾರದ ಮೂರು ಇಲಾಖೆಗಳ ಪೈಕಿ, ಜ್ಯುಡಿಶಿಯಲ್ ಜನರ ಪಕ್ಷ ಬಾಧ್ಯತೆಗಳನ್ನು ಸ್ವಾತಂತ್ರ್ಯಗಳನ್ನು ಕಾಪಾಡುವುದಕ್ಕೆ ಇಗಿರುವುದರಿಂದ ಬಹಳ ಪ್ರಾಮುಖ್ಯವೆಂದು ಹೇಳಬೇಕಾಗಿದೆ. ಯಾಕಂದರೆ ಮನುಷ್ಯನಿಗೆ ಸತ್ಯಪ್ರಕಾರ ನ್ಯಾಯವನ್ನು ಕೋರ್ಟ್ ಜಡ್ಜಿಗಳ ಮೂಲಕ ಹೊಂದಿಕೊಳ್ಳುವುದು ಒಂದೇ ಶ್ರೇಷ್ಠವಾಗಿರುವುದಾಗಿದೆ. ದೇವರು ಕೊಟ್ಟ ಸ್ವಾತಂತ್ರ್ಯದ ಹಕ್ಕನ್ನು ಸರಿಯಾಗಿಟ್ಟುಕೊಳ್ಳಲು ಜ್ಯುಡಿಶಿಯಲ್ ಮತ್ತು ಎಗ್ಸಿಕ್ಯುಟಿವ್ ಅಧಿಕಾರವನ್ನು ಪ್ರತ್ಯೇಕಿಸುವುದು ಅತ್ಯವಶ್ಯವಾಗಿದೆ.

ಈ ವಿಷಯದಲ್ಲಿ ಅಂದರೆ ಜ್ಯುಡಿಶಿಯಲನ್ನು ಮತ್ತು ಎಗ್ಸಿಕ್ಯುಟಿವ್‌ನಿಂದ ಸ್ವತಂತ್ರಿಸಲು ಇಂಗ್ಲೆಂಡಿನಲ್ಲಿ ಮಾಡಿದ ಏರ್ಪಾಟನ್ನು ಸೂಚಿಸಬೇಕಾಗಿದೆ. ಎಲ್ಲಾ ಪ್ರಜೆಯ ಸ್ವಾತಂತ್ರ್ಯಗಳನ್ನು ಕಾಪಾಡಲು ಇಂಗ್ಲೆಂಡಿನಲ್ಲಿ ಈ ಎರಡು ಅಧಿಕಾರಗಳನ್ನು ಪ್ರತ್ಯೇಕಿಸಲಿಕ್ಕೆ ಮಾಡಿದ ಏರ್ಪಾಟನ್ನು ಒಳ್ಳೆದು ಪ್ರಪಂಚದ ಯಾವ ಕಡೆಯಲ್ಲಿಯೂ ಇಲ್ಲ.

ಈ ಅಧಿಕಾರ ಚಲಾವಣೆಯ ದುರುಪಯೋಗವು ಕೂಡ ಗಿಲ್ಲಿ ಬಹಳ ಅಪಾಯವಾದೆ. ಪ್ರತಿ ಸಂಕಾರದಲ್ಲಿ ಈ ಅಧಿಕಾರವು ಪ್ರತ್ಯೇಕವಾಗಿದೆ. ಎಲ್ಲವೂ ಒಬ್ಬನಲ್ಲಿ ಅಂತಾರಿದೆ. ಆಗ ನಿಶ್ಚಿತವಾದ ನ್ಯಾಯವಿಧಾನದ ಸಭೆಯಿಂದ ಈ ಅಧಿಕಾರದ ದುರುಪಯೋಗವು ಕಡಿಮೆ ಮಟ್ಟಿಗೆ ನಿಲ್ಲಬಹುದು. ಆದರೆ ಈ ಎರಡು ಅಧಿಕಾರವನ್ನು ಪ್ರತ್ಯೇಕಿಸುವುದು ಅವಶ್ಯವೆಂದು ಎಲ್ಲರಿಗೂ ಕೋಚಿದೆ. ಕೊಡಗಿನ ರಾಜ್ಯಾಡಳಿತವನ್ನು ತೆಗೆದುಕೊಂಡರೆ ಈ ಎರಡು ಅಧಿಕಾರವು ಮೇಲಿನ ಕ್ಲಾಸಿನಿಂದ ಚೀಫ್ ಕಮಿಷನರ್‌ವರೆಗೆ ಒಬ್ಬೊಬ್ಬರಲ್ಲಿಯೇ ಅಡಗಿಸಲ್ಪಟ್ಟಿದೆ. ಇದನ್ನು ಈಗಲೇ ಪೂರ್ತಿ ತೆಗೆದು ಹಾಕಬೇಕೆಂದು ನನ್ನ ಇರಾದೆಯಲ್ಲ. ಆದರೆ ಪ್ರತ್ಯೇಕಿಸಲಿಕ್ಕೆ ಹೊತ್ತು ಬಂದಿರುವುದರಿಂದಲೇ ಸುರುಮಾಡಬೇಕೆಂದು ನನ್ನ ಉದ್ದೇಶ. ಈ ಕಾರಣದಿಂದ ಇಂಥಾ ಠರಾವಿಗೆ ಸುಲಭವಾಗಿಯೂ ಈ ಸಭೆ ಒಪ್ಪತಕ್ಕದೆಂದು ಸಭೆಯನ್ನು ಬೇಡಿಕೊಳ್ಳುತ್ತೇನೆ.

ಈ ಠರಾವನ್ನು ಚರ್ಚಿಸುವಾಗ ರಿಟ್ರೆಂಚ್‌ಮೆಂಟ್ ಕಮಿಟಿಯವರು ಮೆ|| ಕೆಂಡಿಲ್‌ರವರ ರಿಪೋರ್ಟನ್ನು ನನಗೆ ತೆಗೆದುಕೊಳ್ಳಬೇಕಾಗಿದೆ. ಸುಬೇದಾರರುಗಳ ಕ್ರಿಮಿನಲ್ ಪವರನ್ನು ತೆಗೆದುಹಾಕಿದುದರಿಂದಲೂ ಮೂರು ಸಭೆದಾರರಿಗಲ್ಲಿ ಎಂದನ್ನ ಇಟ್ಟದ್ದರಿಂದಲೂ ರೈತರಿಗೆ ಯಾವ ತೊಂದರೆಯೂ, ಅಥವಾ ಸರಕಾರಕ್ಕೆ ರೆವಿನ್ಯೂ ಕಂದಾಯ ವಸೂಲಾತಿಯಲ್ಲಿಯೂ ತೊಂದರೆಯುಂಟಾಗಿಲ್ಲವೆಂದು ಆ ಕಮಿಟಿ ರಿಪೋರ್ಟಿನಲ್ಲಿ ಹೇಳಲಾಗಿದೆ. ಈಗಾಗಲೇ ಗ್ರಿಗ್ ನ್ನು ಪಡೆದ ಪ್ರಯೋಜನಕರ ದೇಶಾಭಿಮಾನದಿಂದ ಲೆ ಸ್ಪೇಶಲ್ ಮೆಜಿಸ್ಟ್ರೇಟ ಕಲಸ ಮುಗಿತವಾಗಿ ಸ್ವೀಕರಿಸಿದ್ದು. ಆದ್ದರಿಂದ ಸುಬೇದಾರರುಗಳ ಕಲಸ ತೆಗೆದುಹಾಕಿ ಒಬ್ಬ ಸ್ಪೆಶಲ್ ಮೆಜಿಸ್ಟ್ರೇಟನ್ನ ವೀರರಾಜಪೇಟೆಗೂ ಇನ್ನೊಬ್ಬನ ಪೊನ್ನಂಪೇಟೆಗೂ ನೇಮಿಸಬಹುದು. ಪ್ರಾಂತ ಪಕ್ಷಗಳ ರಗ ಕ್ರಿಮಿನಲ್ ಅಧಿಕಾರ ಕೊಟ್ಟದ್ದರಿಂದ ನಡೆವ ಬದಲಾಗಿ ಬಹು ಹೆಚ್ಚು ಹಿಂದಕ್ಕೆ ಬಿದ್ದಿರುತ್ತಾರೆ. ಈ ಕಲಸದ ಅವರನ್ನು ಸ್ವಿಕೃತಮಾಡಿದರೆ ಎಂದಿನಂತೆ ರೆವಿನ್ಯೂ ಕಸವನ್ನು ಪ್ರಜೆಗಳ ತೊಂದರೆಯಿಲ್ಲದಂತೆ ನಡೆಸಬಹುದು. ಆರುವ ಹಣದಿಂದ ಪಾರುಪತ್ಯಗಾರರುಗಳ ಜೊತೆಗೆ ಸ ಮಾಡಿರು ಹುದ್ದೆಗಳನ್ನು ಹೆಚ್ಚಿಸಿ, ಪತ್ರವ್ಯವಹಾರಕ್ಕೆ ಸ್ವಲ್ಪ ತೊಂದರೆ ಇಲ್ಲದೆ ಮಾಡಬಹುದಾಗಿದೆ.

ವೀರಾಜಪೇಟೆ ಮುನಸೀಪರು ಕ್ರಿಮಿನಲ್ ಕೆಲಸಗಳನ್ನು ವಹಿಸಿ ಅವರಿಗೆ ಸರ್ಟಿಫಿಕೇಟ್ ಚಾರ್ಜ್ ಕೊಡಬಹುದು. ಹೆಚ್ಚಿನ ಅನುಕೂಲತೆಗಾಗಿ ಒಬ್ಬ 50 ರೂಪಾಯಿ ಸಂಬಳದ ತಿಂಗಳಿಗೆ 75 ರಂತೆ ಯೋಗ್ಯತೆಯುಳ್ಳ ದಾರನನ್ನು ನೇಮಿಸಿದರೆ ಸರಿಯಾಗುತ್ತೆ. ಎಂದು ವೇತನರೀ ಮೆಜಿಸ್ಟ್ರೇಟುಗಳಿಗೆ ಸಬ್ ರೆಜಿಸ್ಟ್ರೇಟ್ ಮತ್ತು ಸಬ್‌ಟ್ರೆಜರೀ ಚಾರ್ಜನ್ನು ಕೊಡಬೇಕು. ಇತರ ಬಾಗಗಳಲ್ಲಿ ಸಬ್‌ರಿಜಿಸ್ಟ್ರೇರ್ ಗಳನ್ನು ಎಂದಿನಂತೆ ಪಾರುಪತ್ಯಗಾರರೇ ನೋಡಬಹುದು. ಮೆಜಿಸ್ಟ್ರೇಟ್ ಕೆಲಸವನ್ನು ವೀರಾಜಪೇಟೆ ಬೆಂಚ್ ಮೆಜಿಸ್ಟ್ರೇಟುಗಳಿಗೆ ಒನ್ನರಿಸ್ ಡಿಸ್ಟ್ರಿಕ್ಟ್ ದೊಡ್ಡದು ಮಾಡಿ ಇವರುಗಳಿಗೆ ಎರಡನೇ ಕ್ಲಾಸು ಅಧಿಕಾರ ಕೊಡಬೇಕು. ಈ ಮಾದರಿಯ ದಕ್ಷಿಣ ಕೊಡಗಿನಲ್ಲಿ ಮೆಜಿಸ್ಟ್ರೇಟುಗಳ ನೆರವು ನಿವಾರಣೆಯಾಗುವುದು. ಈ ಬದಲಾವಣೆಗಳನ್ನು ಜ್ಯುಡಿಶಿಯಲ್ ಮತ್ತು ಎಗ್ಸಿಕ್ಯುಟಿವ್ ಅಧಿಕಾರಗಳನ್ನು ಪ್ರತ್ಯೇಕಿಸಬೇಕೆಂಬ ಭಾವನೆಯಿಂದಲೇ ತರುವುದಾಗಿದೆ. ಹಿಂದೂದೇಶದ ಇತರ ಕಡೆಗಳಲ್ಲಿ ಈ ವಿಷಯ ಎಲ್ಲರೂ ಎರಡು ಪ್ರತ್ಯೇಕಿಸಲಿಕ್ಕೆ ಹೋರಾಡುತ್ತಲೇ ಇದ್ದಾರೆ. ರೆವಿನ್ಯೂ ಅಧೀನರುಗಳು ಮಾಜಿಸ್ಟ್ರೇಟರಾಗಿ ತಿರುಗುವಾಗ ಅನೇಕ ಕೆಲಸಗಳನ್ನು ತೀರ್ಮಾನಮಾಡುವ ಅವಶ್ಯವಿದ್ದು, ಅನೇಕ ಸಾರಿ ಅನೇಕ ಮನೆಗಳಿಗೆ ಹೋಗಿ ಪಂಚಾಯತಿ ಮಾಡಬೇಕಾಗುತ್ತದೆ. ಇಂಥಾ ಬಾಬಿನಲ್ಲಿ ಅನೇಕ ಸಾರಿ ಕಲಹವು ವಿಪರೀತವಾಗಿ ಕೋರ್ಟಿಗೆ ಫಿರ್ಯಾದು ಬಂದೇಬರುತ್ತೆ. ಈ ನ್ಯಾಯಕ್ಕೆ ಪಂಚಾಯಿತದಾರನಂತೆ ಇದ್ದ ರೆವಿನ್ಯೂ ಅಧೀನರೇ, ಜಡ್ಜಿಯಾಗಿ ಕೂತರೆ ನ್ಯಾಯಕೊಡುವುದಾದರೆ ಪಕ್ಷಪಾತ ವಿನಾ ಏನು ಇಲ್ಲ. ಇದು ಎಷ್ಟರಮಟ್ಟಿಗೆ ಆಕ್ಷೇಪಣೆ ಮತ್ತು ಅನಾವಶ್ಯಕತೆ ಎಂಬುದನ್ನು ಹೇಳುವುದರಿಂದ ಪ್ರಯೋಜನವಿಲ್ಲ. ಆದ್ದರಿಂದ ರೆವಿನ್ಯೂ ಅಧೀನರುಗಳಿಗೆ ಯಾವ ಕ್ರಿಮಿನಲ್ ಅಧಿಕಾರವೂ ಇರಕೂಡದು.

ಈ ಬದಲಾವಣೆಯನ್ನು ನಾನು ಮಾತ್ರ ಈಗ ಸೂಚಿಸುವುದಿಲ್ಲ. ಇದು ಪ್ರತಿ ಒಬ್ಬ ಮನುಷ್ಯನ ಆಲೋಚನೆಯಲ್ಲಿ ಇರುವುದರಿಂದ ಎಲ್ಲರೂ ಈ ಎರಡು ಅಧಿಕಾರವು ಒಂದೇ ಪ್ರತ್ಯೇಕ ಆಗಬೇಕೆಂದು ಕೋರುತ್ತಾರೆ. ದೇಶಕ್ಕೆ ಒಂದೇಯಾದ ದೇಶದ ಜನರ ಅಭಿಪ್ರಾಯವನ್ನು ನಿಕರದಿಂದ ಸೂಚಿಸುವ, ಕೂಡಲು ಬಹುಮಾನದಾರರುಗಳು. ಈ ವಿಚಾರದಲ್ಲಿ ಅನೇಕ ವರ್ಷದಿಂದ ಹೊರಾಡುತ್ತಲೇ ಇದೆ.

ಊರುರು ಪಂಚಾಯತಿಗಳು ಇತರದೇಶದಲ್ಲಿರುವಂತೆ ಏರ್ಪಾಡು ಮಾಡಿ ಸಿವಿಲ್ ಮತ್ತು ಕ್ರಿಮಿನಲ್ ಕೇಸುಗಳು ಮತ್ತಷ್ಟು ಕಡಿಮೆಯಾಗುವುದರಲ್ಲಿ ಸಂದೇಹವಿಲ್ಲ. ನಾಪೋಕ್ಲುಗಿಂತ ಜಾಗದಲ್ಲಿ ಪಂಚಾಯಿತಿ ಪದ್ಧತಿಯನ್ನು ಏರ್ಪಡಿಸಿದ ಬಳಿಕ ಬಹಳ ಸಂತೋಷವಾಗುವುದಲ್ಲದೆ ಅಲ್ಲಿ ಮೆಜಿಸ್ಟ್ರೇಟಿನ ಯಾವ ಅವಶ್ಯಕತೆಯೂ ಇರುವುದಿಲ್ಲ.

ಈಗ ಇರುವಂತೆ ಸುಬೇದಾರರುಗಳು ಯಾವಾಗಲೂ ದೊಡ್ಡ ಜವಾಬ್ದಾರಿಯಲ್ಲಿ ಕೆಲಸವಿರುವುದನ್ನು ನೋಡಿದರೆ ಈ ಕೆಲಸದಿಂದ ಸರಕಾರಕ್ಕೆ ಎಷ್ಟರ ಮಟ್ಟಿಗೆ ಅನುಕೂಲವೆಂದು ಗೋಚರಿಸುತ್ತದೆ. ನನ್ನ ಅಭಿಪ್ರಾಯದಲ್ಲಿ ಅವರಿಗೆ ಯಾವ ಲಾಭವೂ ಇರುವುದಿಲ್ಲವೆಂಬ ಭಾವನೆ ನನ್ನ ಗ್ರಾಮದವರಿಗೆ ಪ್ರತ್ಯೇಕವಾಗಿ ಮಾಡಿದರೂ ಇಲ್ಲವೆಂದುದರಿಂದ ತೊಂದರೆ ಆಗುವುದೆಂದು ಅನೇಕರು ಹೇಳುತ್ತಾರೆ. ಇದಕ್ಕೆ ಆವಕಾಶ ಕಾಣುವುದಿಲ್ಲ. ನಾನು ಪಕ್ಷಗಾರರ ಮೇಲ್ವಿಚಾರಣೆಯೂ ಕಮಿಷನರ್ ಮತ್ತು ಅಸಿಸ್ಟೆಂಟ್ ಕಮಿಷನರರಿಂದ ಚೆನ್ನಾಗಿ ನಡೆಯುತ್ತದೆ.

ಈ ಬದಲಾವಣೆಯಿಂದ ಕೆಲವುಮಟ್ಟಿಗೆ ಹಣವು ಸಮಗೆ ಉಳಿತಾಯವಾಗಬಹುದು. ಉಳಿತಾಯವು ಗೌಣವಾಗಿ ಚಾರಿತ್ರ್ಯರೂ, ಹಿಂದೂದೇಶವೇ ಜುಡಿಶಿಯಲ್ ಮತ್ತು ಎಗ್ಸಿಕ್ಯೂಟಿವ್ ಪ್ರತ್ಯೇಕವಾಗಬೇಕೆಂದು ಹೋರಾಡ ಪರಿಂದ ಕೊಡಗು ಮಾತ್ರ ಈ ಬಾಬಿನಲ್ಲಿ ವಿಶೇಷವಲ್ಲ. ಈಗ ಸರ್ಕಾರವು ಬದಲಾವಣೆಯು ಮೊದಲು ಆರಂಭವಾಗಿದೆ. ಬಾಬಿಗೆ ಕರಡಿಲ್ಲದೆ ಮೇಲಿನ ದರ್ಜೆ 1 ಆಗಾವು ಈಗ ಮಿರಿ.

ಮೆ|| ಯಂ ಯಂ ಚೆನ್ನಪ್ಪನವರ ಅನುಮೋದಿಸಿದರು.

ಮೆ|| ಬಿ ಶ್ರೀಪತಿರಾಯರು.

ಈ ಠರಾವಿಗೆ ಈ ಸಭೆಯು ವಿಶೇಷಗಮನ ಕೊಡಬೇಕಾಗಿದೆ. ಸುಬೇದಾರರುಗಳನ್ನು ತೆಗೆಯುವ ಭಾಗವನ್ನೂ ಪಾರುಪತ್ಯಗಾರರು ಮೆಜಿಸ್ಟ್ರೇಟ್‌ಪವರ್ ತೆಗೆಯುವ ವಿಷಯವನ್ನೂ ಬೇರೆಬೇರೆಯಾಗಿ ವಿಂಗಡಿಸಿದರೆ ಉತ್ತಮವಾಗಿತ್ತು. ಇ ಸ ಭಾಗಗಳು ಎಲ್ಲರೂ ಒಪ್ಪುವದಕ್ಕೆ ಏನೂ ಆಕ್ಷೇಪಣೆಯಿಲ್ಲ. ಮೊದಲನೇಭಾಗದಮೇಲೆ ಸ್ವಲ್ಪ ಹೇಳಬೇಕಾಗಿದೆ. ಕೊಡಗಿನಲ್ಲಿ 6 ಸುಬೇದಾರರುಗಳಿದ್ದರು. ಸ್ವಲ್ಪದಿ ಮೊದಲು ಹೆಚ್ಚಿನ ಪತಿಗಳನ್ನು ಮೇಲೆ ಸುಬೇದಾರರುಗಳಂತೆ ಎರಡಕ್ಕೆ ಇಳಿಸಲಾಗಿದೆ. ಸುಬೇದಾರರುಗಳನ್ನು ತೆಗೆಯಲಿಕ್ಕೆ ಬಂದಾದ ಕಾರಣಗಳನ್ನ ರುವನ್ನ ಮಾಡಬೇಕೆಂದು ಹೇಳಿಲ್ಲ. ಸುಬೇದಾರರುಗಳನ್ನು ತೆಗೆಯಲಿಕ್ಕೆ ಕೂಡದು. ಪೋಲೀಸ್ ಮತ್ತು ರೆವಿನ್ಯೂ ಇಲಾಖೆಗಳ ಕೈಕಲ ಸಂಪರ್ಕಕ್ಕೆ ಒರುವ ಪದವಿಗಳಿಗೆ ಅವಶ್ಯಕ. ಎಲ್ಲಾ ವಿಷಯಗಳು ಅವರಿಗೆ ಚಾವುಬರಬಹುದು. ನಾನು ಒಂದು ಉದಾಹರಣೆ ಇರುವವನಾಗಿದ್ದೇನೆ. ನಾಡುಜನರಿಂದ ಕಲಹ ಒತ್ತಿದೆ. ಪಾರುಪತ್ಯಗಾರರಮೇಲೆ ಸುಬೇದಾರರು ಬೇಕು. ಸ್ವಲ್ಪದಿ ಮೊದಲು ಸುಬೇದಾರರುಗಳಿಗೆ ವಿಧವಿಧ ಕೆಲಸ ಕೊಡುವನ್ನು ಈಗ ಅಂಥಾ ಕೆಲಸ ಕಡಿಮೆಯಾದರೂ ಜೋಡಿ ಕಾಲೋನ್ಸುಗಳ ಮೇಲ್ವಿಚಾರಣೆಯಿಂದ ಅವರಿಗೆ ಕೆಲಸವಿದೆ. ಈ ದೇಶದಲ್ಲಿ ರೈಲಿಲ್ಲ. ಒಳ್ಳೇ ರಸ್ತೆಗಳಿಲ್ಲ. ಮೇಲ್ವಿಚಾರಣೆಗೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಲಿಕ್ಕೆ ಅನುಕೂಲವಿಲ್ಲ. ರೆವಿನ್ಯೂ ಕಲಸವನ್ನು ಸರಿಯಾಗಿ ನಡೆಸಲಿಕ್ಕೆ ಸುಬೇದಾರರುಗಳು ಅವಶ್ಯವೆಂದು ನನಗೆ ತೋರುತ್ತದೆ. ಆದ್ದರಿಂದ ಠರಾವನ್ನು ವಿರೋಧಿಸಬೇಕಾದ ಕಾರಣ ಹೇಳಿಕೊಳ್ಳುತ್ತೇನೆ.

ಅಧ್ಯಕ್ಷರು—ನಿಮ್ಮ ಬದಲಾವಣೆಯನ್ನು ಸೂಚಿಸಬಹುದು. ಆದರೆ ಯಾಕಂದರೆ ಮೂರು ದಿವಸ ನೋಟೀಸ್ ಬೇಕೆಂದು ಹೇಳಿದರೆ ಬದಲಾವಣೆಯನ್ನು ತೆಗೆದುಕೊಳ್ಳಲಿಕ್ಕಾಗುವದಿಲ್ಲ.

ಮೆ|| ಶ್ರೀಪತಿರಾಯರು—ನನಗೆ ಆಶ್ಚರ್ಯವುಂಟಾಯಿತು. ನಿನ್ನೆ ತಾನೇ ಕೊಟ್ಟರು. ಮೂರು ದಿವಸಕ್ಕೆ ಮುಂಚೆ ಬದಲಾವಣೆಯ ನೋಟೀಸ್ ಕೊಡಲು ಸಾಧ್ಯವಿರಲಿಲ್ಲ. ಆದ್ದರಿಂದ ನೋಟೀಸಿನ ರೂಲನ್ನು ಬಾಕಿಯುಳ್ಳಿಂದೇಕಾಗಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು—ಬದಲಾವಣೆಯನ್ನು ಸೂಚಿಸಿ ಮೆ|| ಶ್ರೀಪತಿರಾಯರು ಸ್ಪೆಶಲ್ ಮೆಜಿಸ್ಟ್ರೇಟರುಗಳನ್ನು ನೇಮಿಸಿ ಪಾರುಪತ್ಯಗಾರರ ಸ್ವಾಧೀನಿಯಾಗಿ ರೆವಿನ್ಯೂ ಕೆಲಸವನ್ನೇ ಮಾಡುವಂತೆ ಮಾಡತಕ್ಕದ್ದೆಂದು ಎಂಬ ತರಾವು ಇದ್ದರೆ ಸಾಕಾಗಿದೆ.

ಮೆ|| ಟಿ ಜೆ ಟಾಸ್ಕರ್‌ರವರು.

37 ನೇ ರೂಲ ಪ್ರಕಾರ ಒಂದು ಠರಾವು ಚರ್ಚೆಯಾದ ಒಂದು ವರ್ಷದವರೆಗೆ ಅದೇ ಠರಾವನ್ನು ಪುನಃ ಚರ್ಚಿಸಕೂಡದು. ಗುರುರಾಜರಾವರ ಸ್ಪೇಶಲ್ ಮೆಜಿಸ್ಟ್ರೇಟುಗಳನ್ನು ನೇಮಿಸುವ ಠರಾವು ಚರ್ಚೆಯಾಯಿತು. ಬದಲಾಯಿಸಿದ ಠರಾವು ಆ ದಿನದ ಚರ್ಚೆಯ ಠರಾವೇ ಆಗುತ್ತೆ. ಮೂರು ತಿಂಗಳೊಳಗೆ ಈ ವಿಷಯ ಯೋಚಿಸಿ ಈ ಸಭೆಗೆ ತಿಳಿಸುತ್ತೇನೆಂದು ಹೇಳಿದೆ. ಅದು ಒಪ್ಪಿಕೊಳ್ಳಲಾಯಿತು.

ಅಧ್ಯಕ್ಷರು—ಮೆ|| ಶ್ರೀಪತಿರಾಯರ ಬದಲಾವಣೆಯು ಅಂಗೀಕರಿಸಲಿಕ್ಕಾಗುವದಿಲ್ಲವೆಂದು ನನಗೆ ತೋರುತ್ತೆ.

ಮೆ|| ಶ್ರೀಪತಿರಾಯರು ಠರಾವಿನಲ್ಲಿ ಸುಬೇದಾರರನ್ನು ತೆಗೆಯುವ ವಿಷಯವನ್ನು ಇಲ್ಲದಿರುವುದರಿಂದ ಠರಾವನ್ನು ಈ ಸಭೆಯು ವಜಾಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮೆ|| ಟಿ ಜೆ ಟಾಸ್ಕರ್‌ರವರು.

ಜುಡಿಶಿಯಲ್ ಮತ್ತು ಎಗ್ಸಿಕ್ಯೂಟಿವ್ ಇಲಾಖೆಗಳನ್ನು ಬದಲಾಯಿಸುವ ಗುಣಗಳನ್ನು ಕೊಂಡಾಡುವ ಇಚ್ಛೆ ನಾ ಭವನೆಲ್ಲಾ ನಾನು ಹಿಂಜರಿಯುವದಿಲ್ಲ. ನಿಜವಾಗಿ ಸುಬೇದಾರರ ಮೆಜಿಸ್ಟ್ರೇಟ್ ಕೆಲಸ ಪೂರಾ ಕಡಿಮೆಯಾಗಿದೆ. ಅವರಿಗೆ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಕೇಸ್ ಕಳುಹಿಸಿಕೊಟ್ಟರೆ ಮಾತ್ರ ವಿಚಾರ ಮಾಡುತ್ತಾರಷ್ಟೆ. ಸುಬೇದಾರರುಗಳನ್ನು ತೆಗೆಯುವಲಿಕ್ಕೆ ನಾನು ಒಪ್ಪುವದಿಲ್ಲ. ಸ್ವಲ್ಪದಿ ಮೊದಲಿನಿಂದ ದೇಶದ ಆಡಳಿತವೆಲ್ಲಾ ಆ ಅಲ್ಲಾಡಿಸಿದಂತಾಗಿದೆ. ಸುಬೇದಾರರನ್ನು ತೆಗೆದುಬಿಟ್ಟರೆ ರೆವಿನ್ಯೂ ಆಡಳಿತವನ್ನು ಸರಿಯಾಗಿ ನಡೆಸಲು ಸಾಧ್ಯವಾಗಲಾರದು. ಠರಾವು ತಂದವರು, ಕಮಿಷನರ್ ಮತ್ತು ಅಸಿಸ್ಟೆಂಟ್ ಕಮಿಷನರು ಮೇಲ್ವಿಚಾರಣೆ ಮಾಡಿದರೆ ಸಾಕೆಂದು ಹೇಳಿದರು. ಅವರು ಮಾಡುತ್ತಲೇ ಇದ್ದಾರೆ. ಆದರೆ ಕೌನ್ಸಿಲಿನಿಂದ ಅವರಿಗೆ ತುಂಬಾ ಕೆಲಸ ಹೆಚ್ಚಿಯದೆ. ಇಲ್ಲಿ ಸಾರ್ವಜನಿಕ ಠರಾವುಗಳಿಂದ ಸುಬೇದಾರರ ಕೆಲಸ ಸಹ ಹೆಚ್ಚಿಯದೆ. ಪಂಚಾಯತಿ ಕೋರ್ಟು ಮಾಡಬೇಕೆಂಬ ಠರಾವು ಪಾಸಾಗಿದೆ. ಈ ಕೋರ್ಟುಗಳ ಕೆಲಸಕ್ಕೆ ಸುಬೇದಾರರು ಹಾಜರಿದ್ದುಕೊಂಡು ಸಹಾಯ ನೋಡಬೇಕಾಗುತ್ತೆ. ಒಬ್ಬ ಮೆಂಬರು ನನಗೆ ಪತ್ರಾಸೆ ಇದ್ದಾರೆ. ದೇಶದಲ್ಲಿ ತಿರುಗಾಡುವ ಮಾಡುವ ಈ ಅಧೀನರುಗಳನ್ನು ತೆಗೆದರೆ ಬಹಳ ನಷ್ಟವಿದೆ.

ಮೆ|| ಕೆ ಪಿ ಚೆನ್ನಪ್ಪನವರು—ಫೈನಾನ್ಸ್‌ಮೆಂಬರ ವಿವರಣೆಯಿಂದ ನನಗೆ ತೃಪ್ತಿಯಾದ್ದರಿಂದ ಠರಾವನ್ನು ವಾಪಸು ತೆಗೆದುಕೊಳ್ಳುತ್ತೇನೆ.

3 ನೇ ಠರಾವು.

"ವೀರರಾಜಪೇಟೆ ಆಸ್ಪತ್ರೆಯನ್ನು ಇನ್ನು ಮುಂದೆ ಒಬ್ಬ ಅಸಿಸ್ಟೆಂಟ್ ಸರ್ಜನರ ಕೈಕೆಳಗಿಡಬೇಕು."

ಮೆ|| ಅಪ್ಪಾರಂಡ ಬೋಪಣ್ಣನವರು

ದೇಶದ ಹೊರಗಿನಿಂದ ಬರುವ ಅನೇಕ ಬಾವಿ ಬೆಳೆಗೆ ಕೊಡಗು ಗುರಿಯಾಗುತ್ತೆ. ವೀರರಾಜಪೇಟೆ ಮುಖ್ಯವಟ್ಟಣವಾಗಿ ಇದ್ದರೂ ವ್ಯಾಪಾರಕ್ಕೆ ಮಧ್ಯಸ್ಥಳವಾಗಿದೆ. ಮಲಯಾಳದಿಂದ ಬರುವವರ ಮೂಲಕ ಬಾಯಿಬೇನೆ ಅಪ್ಪಳಿಸುತ್ತೆ. ಅಲ್ಲಿನ ಆಸ್ಪತ್ರೆಯು ಬಹಳ ದೊಡ್ಡದಾಗಿದ್ದರೂ ಇರುವ ಸಂಖ್ಯೆಯಾಗಿದೆ. ಸಬ್ ಅಸಿಸ್ಟೆಂಟ್ ಸರ್ಜನರಿಂದ ಎಲ್ಲಾ ರೋಗಿಗಳಿಗೆ ಸಾಧ್ಯವಿಲ್ಲ. ಆದ್ದರಿಂದ ನ್ಯಾಯವಾದ ಚಿಕಿತ್ಸೆಗೆ ಜನರು ಅಲ್ಲಿಗೆ ಬೇಕಾದ ಜನರು ಬೇಕೆಂದು ಸ್ಪಷ್ಟವಾಗಿ ವರ್ಷದಿಂದ ವರ್ಷಕ್ಕೆ ಹಣವನ್ನಿಡುವರೋ ಹೇಳಲ್ಲವಾದರೂ ಈ ಅಧಿಕಾರವು ಈವರೆಗೆ ಪಂಚಾಯತಿ ಆಗಿಲ್ಲ. ಈ ಸಭೆಯು ದೇಶದ ವೈದ್ಯ, ಪಶುವೈದ್ಯ ಮತ್ತು ಕೃಷಿ ಇಲಾಖೆಗಳ ಬೇಡಿಕೆಗಳಿಗೆ ದೊರೆಯುವ ಹಣವನ್ನೆಲ್ಲಾ ಹಂಚಿಮಾಡಬೇಕು. ವೀರರಾಜಪೇಟೆ ಆಸ್ಪತ್ರೆಯಲ್ಲಿ ಇರುವ ಕೆಲಸವನ್ನು ಅಲ್ಲಿ ಇರುವ ಸಿಬ್ಬಂದಿಗೆ ನಿಭಾಯಿಸಲಿಕ್ಕೆ ಸಾಧ್ಯವಾಗುವದಿಲ್ಲ. ಮಡಿಕೇರಿ ಆಸ್ಪತ್ರೆಗಿಂತ ವೀರರಾಜಪೇಟೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುವ ಬಾಯಿಲೆಸ್ಥರ ಸಂಖ್ಯೆ ಹೆಚ್ಚು. ಆಸ್ಪತ್ರೆಯಲ್ಲೇ 60 ಬಾಯಿಲೆಸ್ಥರಿಗೆ ಸ್ಥಳವಿದೆ. ಇಷ್ಟು ಬಾಯಿಲೆಸ್ಥರ ಚಿಕಿತ್ಸೆ ಚೆನ್ನಾಗಿ ನಡೆಯಬೇಕಾದರೆ ಒಬ್ಬನು ಅವರ ಕೆಲಸದಲ್ಲೇ ಇಂಪೀರಿಯಲ್ ಇಂಟಿಕೇಟ್ ಇಡಿಟಿನಿಂದ ಇಲ್ಲಿನ ಸ್ಥಿತಿಯನ್ನು ಹೇಳಿಕೊಳ್ಳದ್ದರಿಂದಲೇ ವೈದ್ಯ ಇಲಾಖೆಯಿಂದ 10,000 ರೂ. ಕಡಿಮೆಮಾಡಿದ್ದಾಗಿದೆಯು. ಕೊಡಗಿನಲ್ಲಿ ತುಂಬಾ ಮಲೇರಿಯಾ ಬಾಯಿಲೆ ಇದೆ. ಇಲ್ಲಿಗೆ ವೈದ್ಯ ಇಲಾಖೆಗೆ ಹಣ ಹೆಚ್ಚಿಗೆ ಕೊಡಬೇಕಾಗಿತ್ತು. ಮಡಿಕೇರಿಯಲ್ಲಿ ಸಿವಿ

ಕೊಡಗು ಕೌನ್ಸಿಲು ಮೀಟಿಂಗು.

ಟ್ ಸರ್ಜನರು ಇರುವದಾದ್ದರಿಂದಲೂ ಒಳ್ಳೇ ರಸ್ತೆಗಳೂ ಸಾಗುವೆಗಳೂ ಇಲ್ಲದ್ದರಿಂದ ದಕ್ಷಿಣ ಕೊಡಗಿಗೆ ವರ್ಷದ ಆರು ತಿಂಗಳು ವೈದ್ಯ ಇಲಾಖೆಯ ಸಹಾಯ ಸಾಕಷ್ಟು ಸಿಕ್ಕುವದೇ ಇಲ್ಲ. ಸಾಧಾರಣದ ಮನುಷ್ಯನಿಗೆ ಆ ಕಾಲದಲ್ಲಿ ಸಿವಿಲ್ ಸರ್ಜನರ ಸಹಾಯ ಪಡೆಯುವ ತುಂಬಾ ಖರ್ಚು ಮಾಡಿದ ವಿನಹ ಸಾಧ್ಯವಿಲ್ಲ. ಬೇಕಾದ ಸೇಕುವೆಯನ್ನು ಕಲ್ಪಿಸಲಿಕ್ಕೆ ಜಾಗ್ರತೆ ಏರ್ಪಾಡುಮಾಡಬೇಕು. ಇದರಿಂದ ಆಫೀಸರುಗಳ ಪ್ರಯಾಣದ ಭತ್ಯದಲ್ಲಿ ತುಂಬಾ ಉಳಿತಾಯವಾದೀತು. ದೇಶದ ಆರೋಗ್ಯಸ್ಥಿತಿಯು ಚೆನ್ನಾಗಿಲ್ಲ. ಅಸಿಸ್ಟೆಂಟ್ ಸರ್ಜನರನ್ನು ನೇಮಿಸಲು ಹೆಚ್ಚು ಹಣ ಬೇಕಾಗಿಲ್ಲ. ಬೇಕಾದ ಹಣ ದೊರೆಯಬಹುದೆಂತ ನಂಬಿದ್ದೇನೆ.

ಮೆ|| ಯಸ್ ಯಮ್ ಪಿಂಟೋರವರು

ಠರಾವನ್ನು ಅನುಮೋದಿಸಲು ತುಂಬಾ ಸಂತೋಷಪಡುತ್ತೇನೆ. ಸಿವಿಲ್‌ಸರ್ಜನರು ಮಡಿಕೇರಿಯಲ್ಲೇ ಇರಲಿಕ್ಕೆ ತಕ್ಕ ಕಾರಣಗಳಿವೆ. ಆದ್ದರಿಂದ ವೀರರಾಜಪೇಟೆಯಲ್ಲಿ ಅಸಿಸ್ಟೆಂಟ್ ಸರ್ಜನರು ಬೇಕಾಗಿದೆ.

ಮೆ|| ಟಿ ಜೆ ಟಾಸ್ಕರ್‌ರವರು

ನಾಮದಾರ ಮೆಂಬರು ದಯವಿಟ್ಟು ಮೂವರು ಡಾಕ್ಟರ್‌ಗಳು ಬೇಕೆನ್ನುತ್ತಾರೊ, ಯಾ ಇಬ್ಬರೇ ಸಾಕೆನ್ನುತ್ತಾರೊ ಎಂಬದನ್ನು ತಿಳಿಸಬೇಕಾಗಿದೆ.

ಮೆ|| ಎ ಬಿ ಚೆಂಗಪ್ಪನವರು

ಸಭೆಯಮುಂದೆ ಇರುವ ಠರಾವೇನೆಂದರೆ ವೀರರಾಜಪೇಟೆ ಆಸ್ಪತ್ರೆಯನ್ನು ಸಿವಿಲ್‌ಅಪೋತಿಕರಿಯ ಬದಲಿಗೆ ಅಸಿಸ್ಟೆಂಟ್ ಸರ್ಜನರ ತಾಬೆಯಲ್ಲಿಡಬೇಕೆಂತ ವಾಕ್ಯ.

ಮೆ|| ಕೆ ಪಿ ಚಿಣ್ಣಪ್ಪನವರು

ನಾನು ಅನುಮೋದಿಸುತ್ತೇನೆ. ಠರಾವು ತಂದವರು ಆಡಿದ ಪ್ರತಿವಾಕ್ಯಕ್ಕೂ ನಾನು ಒಪ್ಪುತ್ತೇನೆ. ಮಡಿಕೇರಿ ಆಸ್ಪತ್ರೆಯಲ್ಲಿ ಕೆಲಸ ಕಡಿಮೆ ಇರುವಾಗ 5 ಡಾಕ್ಟರುಗಳು ಇರಲು ಕಾರಣವೇನೋ ತಿಳಿಯುವದಿಲ್ಲ. ಮಡಿಕೇರಿಯಲ್ಲಿರುವ ಅಸಿಸ್ಟೆಂಟ್ ಸರ್ಜನರನ್ನು ವೀರರಾಜಪೇಟೆಗೆ ಕಳುಹಿ ಅಲ್ಲಿ ಒಬ್ಬ ಸಬ್ ಅಸಿಸ್ಟೆಂಟ್ ಸರ್ಜನರನ್ನು ಹೆಚ್ಚಾಗಿ ನೇಮಿಸಿ ಕೊಡಬೇಕು.

ಮೆ|| ಟಿ ಜೆ ಟಾಸ್ಕರ್‌ರವರು

ಈಗ ಒಬ್ಬ ಸಿವಿಲ್‌ಸರ್ಜನ್ ಮಡಿಕೇರಿಯಲ್ಲಿ ಒಬ್ಬ ಮಿಲಿಟರಿ ಅಸಿಸ್ಟೆಂಟ್ ಸರ್ಜನ್ ಮತ್ತು ವೀರರಾಜಪೇಟೆಯಲ್ಲಿ ಒಬ್ಬ ಎಪೋತಿಕರಿ ಸಹ ಇದ್ದಾರೆ. ಮಡಿಕೇರಿಯಲ್ಲಿರುವ ಮಿಲಿಟರಿ ಅಸಿಸ್ಟೆಂಟ್‌ಸರ್ಜನರು ಬೇಡವೆಂತ ಚೀಫ್ ಕಮಿಶನರ್ ಒದಿದ್ದಕ್ಕೆ ಆಗಬಹುದೆಂತ ಒಪ್ಪಿ ವೀರರಾಜಪೇಟೆಗೆ ಮಾತ್ರ ಒಬ್ಬ ಮಿಲಿಟರಿ ಸಬ್‌ಅಸಿಸ್ಟೆಂಟ್ ಸರ್ಜನರನ್ನು ಇಟ್ಟುಕೊಳ್ಳಬೇಕೆಂತ ಇಂಡಿಯಾ ಸರಕಾರದವರು ಬರೆದಿರುತ್ತಾರೆ. ವೀರರಾಜಪೇಟೆಯಲ್ಲಿರುವ ಎಪೋತಿಕರಿಗೂ ಮತ್ತು ಅಸಿಸ್ಟೆಂಟ್ ಸರ್ಜನರಿಗೂ ಏನು ವ್ಯತ್ಯಾಸವೆಂದನ್ನು ಯಾರಾದರೂ ವಿವರಿಸಿದರೆ ಆಗಬಹುದು. ಸಿವಿಲ್‌ಸರ್ಜನರನ್ನು ವ್ಯತ್ಯಾಸವೇನೆಂತ ಕೇಳಿದ್ದಕ್ಕೆ ಏನೂ ಇಲ್ಲವೆಂತ ತಿಳಿಸಿದ್ದಾರೆ. ಎಪೋತಿಕರಿ ಎಂಬ ಉದ್ಯೋಗವು ಪೂರ್ವಕಾಲದಿಂದ ಬಂದದ್ದಾಗಿದೆ. ಹಾಲಿ ಎಪೋತಿಕರಿಯಾಗಿರುವವರು ಅಸಿಸ್ಟೆಂಟ್‌ಸರ್ಜನರ ಕೆಲಸಕ್ಕೆ ಅರ್ಹರಾಗಿದ್ದಾರೆಂತ ಸಿವಿಲ್ ಸರ್ಜನರು ಭರವಸೆ ಕೊಡುತ್ತಾರೆ. ಆದ್ದರಿಂದ ಈಗ ವೀರರಾಜಪೇಟೆಯಲ್ಲಿ ಅಸಿಸ್ಟೆಂಟ ಸರ್ಜನರ ಕೆಲಸ ಇರುವವರೊಬ್ಬರು ಇನ್ನೊಬ್ಬ ಸಬ್‌ಅಸಿಸ್ಟೆಂಟ್ ಸರ್ಜನರು ಇದ್ದಾರೆ. ಸಿವಿಲ್ ಎಪೋತಿಕರಿ ಎಂಬ ಹುದ್ದೆಯನ್ನು ತೆಗೆದು ಅಸಿಸ್ಟೆಂಟ್ ಸರ್ಜನರನ್ನು ನೇಮಿಸಬಹುದೋ ಎಂಬದೇ ಈಗಿನ ಪ್ರಶ್ನೆಯಾಗಿದೆ. ಸರಕಾರದವರು ಹಾಗೆ ಮಾಡಬೇಕೆಂತಲೇ ಇದ್ದಾರೆ. ಈಗಾಗಲೇ ಆ ವಿಷಯದಲ್ಲಿ ಕಾಗದಪತ್ರ ನಡೆದಿದೆ. ಇಲಾಖೆಯ ಕೆಲವು ರೂಲುಗಳು ಮತ್ತು ಪದ್ಧತಿಗಳೇ ಸಾವಕಾಶಕ್ಕೆ ಕಾರಣವಾಗಿದೆ. ಈಗ ಮಿಲಿಟರಿ ಅಸಿಸ್ಟೆಂಟ ಸರ್ಜನರ ಕೆಲಸವನ್ನು ತೆಗೆಯುವದರಿಂದ ಹಣ ದೊರೆಯುತ್ತೆ. ಆದ್ದರಿಂದ ಈ ವಿಷಯ ಸರಕಾರವು ಈಗ ಪುನಃ ಆಲೋಚಿಸಲಿಕ್ಕೆ ತಯಾರಾಗಿ ವೀರರಾಜಪೇಟೆ ಆಸ್ಪತ್ರೆಯ ದರ್ಜೆ ವಿಷಯ ಸರಕಾರವು ಯಾವಾಗಲೂ ಎಚ್ಚರವಾಗಿದೆ.

ಮೆ|| ಎ ಬಿ ಚೆಂಗಪ್ಪನವರು

ಫೈನಾನ್ಸ್ ಮೆಂಬರ ಮಾತು ಕೇಳಿದೆ. ಆದರೆ ನಮಗೆ ವೀರರಾಜಪೇಟೆಯಲ್ಲಿ ಅಸಿಸ್ಟೆಂಟ್ ಸರ್ಜನರು ಬೇಕೆಂತ ನನ್ನ ವಾದವಾಗಿದೆ. ಅಂದರೆ ಅರ್ಹನಾದ ಡಾಕ್ಟರು ಆಸ್ಪತ್ರೆಯ ಮೇಲಾಫೀಸರಾಗಿ ಇರಬೇಕೆಂತ ಕೇಳುವದಾಗಿದೆ. ಮದ್ರಾಸ ಸರಕಾರವು ಸಬ ಅಸಿಸ್ಟೆಂಟ್ ಸರ್ಜನರು ಅಸಿಸ್ಟೆಂಟ್ ಸರ್ಜನರಾಗಲು ಅರ್ಹರಲ್ಲವೆಂತ ಫೈಸಲ ಮಾಡಿದೆ. ಅರ್ಹನಾದ ಜವಾಬ್ದಾರಿ ವಹಿಸಲು ಯೋಗ್ಯನಾದ ಆಫೀಸರು ವೀರರಾಜಪೇಟೆಗೆ ಬೇಕಾದದ್ದಾಗಿದೆ. ಎಪೋತಿಕರಿ ಮತ್ತು ಅಸಿಸ್ಟೆಂಟ್ ಸರ್ಜನರು ಒಂದೇ ದರ್ಜೆಯವರೆಂಬದನ್ನು ನಾನು ನಂಬುವದಿಲ್ಲ. ಸಬ್‌ಅಸಿಸ್ಟೆಂಟ್ ಸರ್ಜನರಿಗೆ ಯೂನಿವರ್ಸಿಟಿ ತಯಾರಿ ಇರುವದಿಲ್ಲ. ಅರ್ಹನಾದ ಅಸಿಸ್ಟೆಂಟ್ ಸರ್ಜನ್ ಬೇಕೆಂಬುದೇ ನನ್ನ ವಾದವಾಗಿದೆ.

ಮೆ|| ಟಿ ಜೆ ಟಾಸ್ಕರ್‌ರವರು

ಸಿವಿಲ್‌ಸರ್ಜನರು ಈಗಿನ ಎಪೋತಿಕರಿಯು ಅಸಿಸ್ಟೆಂಟ್ ಸರ್ಜನ್‌ರಾಗಲು ಅರ್ಹರಾಗಿದ್ದಾರೆಂತ ನಂಬಿದ್ದಾರೆ. ಸಾಧ್ಯವಿದ್ದರೆ ಅವರನ್ನೇ ಅಸಿಸ್ಟೆಂಟ್ ಸರ್ಜನರಾಗಿ ನೇಮಿಸಬೇಕೆಂತ ಸರಕಾರದ ಅಭಿಪ್ರಾಯವಾಗಿದೆ.

ಓಟಿಗೆ ಹಾಕಿ ಠರಾವು ವಿಫಲವಾಯಿತು.

೯ನೇ ಠರಾವು.

ಸ್ಥಳೀಯ ಸ್ವರಾಜ್ಯದಲ್ಲಿ ಹೆಚ್ಚು ಭಾಗ ಸಿಕ್ಕಬೇಕೆಂಬ ಪ್ರಜೆಗಳ ಕೋರಿಕೆಯನ್ನು ನೆರವೇರಿಸಲಿಕ್ಕಾಗಿ ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಮುನಿಸಿಪಲ್ ರೆಗ್ಯುಲೇಶನ್‌ಗಳನ್ನು [illegible]ರುವಷ್ಟು ತಿದ್ದಲು ಮಸೂದೆ ಕಾನೂನನ್ನು ಆದಷ್ಟು ಜಾಗ್ರತೆ ಈ ಕೌನ್ಸಿಲಿಗೆ ತರಬೇಕು.

(ಮುಂದುವರಿಯುವದು)

ವರ್ತಮಾನ ಸಂಗ್ರಹ

ಒಳದೇಶ

22 ಮತ್ತು 25ನೇ ತಾರೀಖುಗಳಲ್ಲಿ ಮಡಿಕೇರಿಯಲ್ಲಿ ಕುದುರೆ ಶರತ್ತು ನಡೆಯಿತು. 2ನೇ ದಿನದ ಒಂದು ಶರತ್ತಿನಲ್ಲಿ ಮೆ|| ಪಾಂಡಂಡ ನಂಜಪ್ಪನವರ ಕುದುರೆ ಗೆದ್ದಿತು.

ಅಡ್ಯಾರ್ ರಾಷ್ಟ್ರೀಯ ಮಹಾ ವಿದ್ಯಾಲಯದ ಪ್ರಿನ್ಸಿಪಲರಾದ ಡಾಕ್ಟರ್ ಜೇಮ್ಸ್ ಹೆಚ್ ಕಸಿನ್ಸ್ ಎಂಬವರು ಮಡಿಕೇರಿಗೆ ತಾರೀಖು 21ರಲ್ಲಿ ಬಂದು ಅದೇದಿನ ಸಾಯಂಕಾಲ ವಿದ್ಯೆ ವಿಷಯವಾಗಿಯೂ ಮಾರನೇದಿನ ಬೆಳಿಗ್ಗೆ ಹಿಂದೀ ನಾಗರೀಕತೆ ವಿಷಯವಾಗಿಯೂ ಉಪನ್ಯಾಸ ಮಾಡಿದರು. ಜನರು ತುಂಬಾ ನೆರೆದ್ದರು. ಒಳ್ಳೆ ಸ್ವಾರಸ್ಯವಾಗಿ ಇತ್ತು.

ಜಮೀನ್ದಾರರ ಸಂಘದ ಕಮಿಟಿ ಮೆಂಬರಾಗಿದ್ದ ಸಾರ್ವಜನಿಕ ಕಾರ್ಯಗಳಲ್ಲಿ ಶ್ರದ್ಧೆ ತೆಗೆದುಕೊಳ್ಳುತ್ತಿದ್ದ ಮೆ|| ಚೆಂಬಂಗಮಂದಣ್ಣನವರು ವೀರರಾಜಪೇಟೆ ಆಸ್ಪತ್ರೆಯಲ್ಲಿ ಒಂದುವಾರ ಕಾಯಿಲೆಯಲ್ಲಿದ್ದು ತಾ|| 27 I 21ರಲ್ಲಿ ಮೃತರಾದರು.

ಮಡಿಕೇರಿ ಎಮೆಚ್ಯೂರ್ ಥಿಯೇಟ್ರಿಕಲ ಕಂಪೆನಿಯವರು ತಾ|| 26—4—24ರಲ್ಲಿ ಪ್ರಹ್ಲಾದಚರಿತ್ರೆಯನ್ನು ನಾಟಕವಾಡಿದರು.

ಕೊಡಗಿನ ಯೂರೋಪಿಯನ್ ಜನರು ಮಡಿಕೇರಿಯಲ್ಲಿ ಕಳೆದ ಒಂದುವಾರ [illegible] ಅವರನ್ನು [illegible]ದ್ದರು.

ಮಡಿಕೇರಿಯಲ್ಲಿ ಯೂರೋಪಿಯನ್ ಜನರಿಗೂ ಕೆಲವರು ದೇಶೀಯರಿಗೂ ಮೆ|| ಟಾಸ್ಕರ್ ಸಾಹೇಬರು ಒಂದು ಟೀ ಪಾರ್ಟಿಯನ್ನು ಕೊಟ್ಟರು.

ನಮ್ಮ ದೇಶದ [illegible] ಮಂಗಳೂರಲ್ಲಿ [illegible] ಮಡಿಕೇರಿಗೆ ಒಂದು [illegible]

ಸತ್ಯನಾರಾಯಣ [illegible] ಮೆ|| ಗಣಪಯ್ಯ, ಮೆ|| ಪುಚ್ಚಿಮಂಡ ಪೂವಯ್ಯನವರು ಮತ್ತು ಮೆ|| ಬಾಚಮಂಗಡ ನಂಜಪ್ಪನವರಿಗೆ ಇದ್ದ ಹಕ್ಕನ್ನು ಮೆ|| ಪುಡಿಯಂಡ [illegible] ಕೊಟ್ಟಿದ್ದಾರೆ.

ಸೋಮವಾರಪೇಟೆ ನಾಡಿಗೆ [illegible] ಮೆ|| ಫಡ್ನವೀಸರ 136 ಎಕರೆ ಕಾಫಿತೋಟವನ್ನು 1,20,000 ರೂಪಾಯಿಗೆ ಮೆ|| ರಸೂಲ್ ಖಾನ್ ಸಾಹೇಬರು ಕೊಂಡುಕೊಂಡರು.

ಕಳೆದ ತಾರೀಖು 21—4—24ರ ಸಂಜೆಯಲ್ಲಿ ನಮೂದಿಸಿದ ಮೇರೆ ಮೆ|| ಚೇಪಂಡ ಅಚ್ಚಯ್ಯನವರ ಕಾಫಿ ತೋಟಕ್ಕೆ ಬೆಂಕಿಯಿಂದ ಆಗುತ್ತಿದ್ದ ಅನಾಹುತಗಳನ್ನು ತಪ್ಪಿಸಿ ಕಾಫಿ ತೋಟವನ್ನು ಕಾಪಾಡಿದ ಮಡಿಕೇರಿ ಬೋರ್ಡಿಂಗ್ ವಿದ್ಯಾರ್ಥಿಗಳಿಗೆ ತನ್ನ ಅನೇಕ ವಿನಂತಿಗಳನ್ನು ಅರ್ಪಿಸಿರುವುದಲ್ಲದೆ ಇದರಂತೆ ಇತರ ಮಹನೀಯರುಗಳು ಮೇಲ್ಕಂಡ ಸಂದರ್ಭಗಳು ಉಂಟಾಗುವ ಸಮಯದಲ್ಲಿ ಅವರಂತೆ ವರ್ತಿಸಬೇಕಾದದು ಯೋಗ್ಯವಾದುದೆಂತ ಅವರ ಒಂದು ಬಾತ್ಮಿ.

ಟ್ರೆಜರಿ ಆಫೀಸ್ ಹೆಡ್‌ಕ್ಲಾರ್ಕ್ ಮೆ|| ವಾಡೆಯಂಡ ಸೋಮಯ್ಯನವರು ಇದೇ ತಾರೀಖು 28 ರಿಂದ 1 ತಿಂಗಳು ರಜದಲ್ಲಿ ಹೋಗಿರುವರು. ಇವರ ಬದಲಿಗೆ ಮೆ|| ಬಲ್ಲರಂಡ ಮಾಚಯ್ಯನವರನ್ನು ನೇಮಕ ಮಾಡಿರುವರು.

ಶ್ರೀಮಂಗಲನಾಡು ಕುಟ್ಟಿಗ್ರಾಮದ ಪಕ್ಕಲಿಗರ ಸಿಂಗಯ್ಯನೆಂಬವರು ಕಳೆದ ಮಳೆಗಾಲದಲ್ಲಿ ಜೋರಾದ ಮಳೆಹಾವಳಿಯಿಂದ ಬಿತ್ತಿದ್ದ ಬೀಜವೆಲ್ಲ ಕೊಚ್ಚಿಕೊಂಡುಹೋದದ್ದರಿಂದ ತನ್ನ ಬಾಬ್ತು ಸಾಗುವಳಿ ಮಾಡಲು ಅಸಾಧ್ಯವಾದ ಭೂಮಿಯನ್ನು ಪುನಹ ಕಳೆದ ಅಕ್ಟೋಬರ್ ತಿಂಗಳಲ್ಲಿ ಮೂರುಸಾಲು ಉತ್ತು ಹದಮಾಡಿ ಹೆಸರು ಉದ್ದು ವಗೈರೆ ನಾನಾತರಹದ ದಿನಸುಗಳನ್ನು ಬಿತ್ತಿದ್ದರಲ್ಲಿ ನ್ಯಾಯವಾದ ಉತ್ಪತ್ತಿ ಸಿಕ್ಕಿದ್ದರಿಂದ ಇದೇ ಹಾಗೆಮಾಡುವವರೆಲ್ಲರೂ ಈ ಕೆಲಸಕ್ಕೆ ತೊಂದರೆ ತೆಗೆದುಕೊಂಡು ಬೇರೆ ಕಡೆಯಿಂದ ಬರುವ ಮೇಲ್ಕಂಡ ದಿನಸುಗಳಿಗೆ ಒಂದಕ್ಕೆ ನಾಲ್ಕರಷ್ಟು ಕೊಟ್ಟು ಕೊಡಬೇಕಾಗಿ ಅವರ ಬಾತ್ಮಿ.

ದೇಶದ ಎಲ್ಲಾ ಕಡೆಗಳಲ್ಲಿಯೂ, ಜ್ವರ, ಕೆಮ್ಮು, ನೆಗಡಿ ವಗೈರೆ ನಾನಾತರಹದ ಕಾಯಿಲೆಗಳಿಂದ ಶೇಕಡ 75ರಷ್ಟು ಜನರು ನರಳುತ್ತಿರುವರು.

ಕೊಡಗು ಜಮೀನ್ದಾರರ ಸಂಘದ ಆರ್ಗನೈಜಿಂಗ್ ಸೆಕ್ರಟರಿ ಮೆ|| ಬಿದ್ದಂಡ ಕಾರ್ಯಪ್ಪನವರು ಏರ್ಪಾಡು ಮಾಡಿದ ನಾಡುಕಮಿಟಿಗಳ ಪೈಕಿ ಕೆಲವು ಕಮಿಟಿಯವರು ತಮ್ಮ ಬಾಬ್ತು ರಶೀತಿ ಬುಕ್ಕು ರೋಜಿನಾಮೆ ಬುಕ್ಕುಗಳನ್ನು ಶೀಘ್ರ ವಗೈರೆ ನೋಡುವ ಉದ್ದೇಶ ಕಳುಹಿಸಿಕೊಡಬೇಕಾಗಿ ಕೇಳಿಕೊಂಡಾಗ್ಯೂ ಕೂಡ ಕಳುಹಿಸದ್ದರಿಂದ ಇನ್ನಾದರೂ ವಹಿ ಮಡಿಕೇರಿಗೆ ಕಳುಹಿಸಿಕೊಡಬೇಕಾಗಿ ಸದ್ರಿ ಸಂಘದ ಜನರಲ ಸೆಕ್ರಟರಿ ಮೆ|| ಸಿ ಎಂ. ವೆಂಕಪ್ಪಯ್ಯನವರು ಕೋರುತ್ತಾರೆ.

ಹಿಂದೂದೇಶ

ಮದ್ರಾಸಿನ ಹೊಸ ಗವರ್ನರ್ ಗೋಷನ್ ಪ್ರಭುಗಳೂ ಅವರ ಪತ್ನಿಯವರೂ ಮದ್ರಾಸಿನಲ್ಲಿ ಇಳಿದು ಊಟಕಮಂಡಿಗೆ ಹೋದರು.

ಹಿಂದುಸ್ತಾನಕ್ಕೆ ಕೊಟ್ಟ ಸುಧಾರಣೆಯ ಆಡಳಿತಕ್ರಮವು ಹೇಗೆ ನಡೆದಿದೆ ಎಂಬದನ್ನೂ ಇನ್ನು ಮುಂದೆ ಹೆಚ್ಚಿನ ಸ್ವಾತಂತ್ರ್ಯ ಕೊಡಲೇ ಕೂಡದೋ ಎಂಬ ಮುಂತಾದ ವಿಷಯಗಳನ್ನು ತನಿಖೆ ಮಾಡಲಿಕ್ಕೆ ಒಂದು ಕಮಿಟಿಯು ನೇಮಕವಾಗಿದೆ.

ಲೆಜಿಸ್ಲೆಟಿವ್ ಕೌನ್ಸಿಲ ಮೆಂಬರಾಗಿದ್ದ ಮೆ|| ನಿಜಾದ್ ಎಂಬವರು ಕೋರ್ಟಿಗೆ ಅವಮರ್ಯಾದೆಯಾಗುವಂತೆ ನಡಕೊಂಡರೆಂಬ ಕಾರಣಕ್ಕೆ 100 ರೂ ಜುಲ್ಮಾನೆಯಾಗಿತ್ತು. ಅಪ್ಪೀಲಿನಲ್ಲಿ ಖುಲಾಸ ಆಗಿದೆ. ಲಾಯರ್‌ಗಳಿಗೆ ಕೋರ್ಟಿನಲ್ಲಿ ಮಾತಾಡುವಾಗ ಪೂರ್ಣ ಸ್ವತಂತ್ರ ಇರಬೇಕೆಂತ ಹೈಕೋರ್ಟು ಜಡ್ಜಿಮೆಂಟಿನಲ್ಲಿ ಬರೆದಿದೆ.

ಅನ್ನಿಬೆಸೆಂಟ್ ಅಮ್ಮನವರೂ ನಾಮದಾರ್ ಶ್ರೀನಿವಾಸಶಾಸ್ತ್ರಿಗಳು ಜೊತೆಯಲ್ಲೇ ವಿಲಾಯಿತಿಗೆ ಹೊರಟಿದ್ದಾರೆ. ಅನ್ನಿಬೆಸೆಂಟಮ್ಮನವರ ನ್ಯಾಶನಲ ಕನ್‌ವೆನ್ಶನ್ ಎಂಬ ಪಕ್ಷದ ಪರವಾಗಿ ಇಂಗ್ಲೆಂಡಿಗೆ ಹೋಗಿ ಸ್ವರಾಜ್ಯಕ್ಕಾಗಿ ಹೋರಾಡಲು ಕೆಲವರು ಆರಿಸಲ್ಪಟ್ಟಿದ್ದಾರೆ.

ಮೆ|| ಸಿ ಆರ್ ದಾಸರು ಸಂಪಾದಕರಾಗಿ ಸ್ವರಾಜ್ಯ ಪಕ್ಷದವರ ಮತಪ್ರಚಾರಕ "ಫಾರ್‌ವಾರ್ಡ" ಎಂಬ ಪತ್ರಿಕೆಯ ಮಾಲೀಕರು "ಇಂಡಿಯನ್ ಡೈಲಿ ನ್ಯೂಸ್" ಎಂಬ ಇಂಗ್ಲಿಷ್ ಜನರ ಪತ್ರಿಕೆಯನ್ನು ಕೊಂಡುಕೊಂಡಿದ್ದಾರೆ.

ಹೈಕೋರ್ಟ ವಕೀಲ ಮೆ|| ಟಿ ಆರ್ ಕೃಷ್ಣಸ್ವಾಮಿ ಅಯ್ಯರ್ ಎಂಬವರ ವೈಕ್ಕಂ ಸತ್ಯಾಗ್ರಹಿಗಳಿಗೆ ಸಹಾಯ ಕೊಡುತ್ತಾರೆಂಬ ಕಾರಣದಿಂದ 2 ತಿಂಗಳು ಸಾದಾ ಸಜೆಗೆ ಗುರಿಯಾಗಿರುತ್ತಾರೆ. ಸ್ವಯಂಸೇವಕರು ಉಪವಾಸವಿದ್ದು ಪ್ರಾಣಬಿಡಲಿಕ್ಕೂ ತಯಾರಿದ್ದಾರೆಂತಲೂ ಉಪವಾಸವಿರಲು ಕ್ಲೈಯಿಸಿದ್ದಾರೆಂತಲೂ ತಿಳಿದು ಬಂದಿದೆ.

ಮದ್ರಾಸ ಅಧಿಪತ್ಯದ ಪಶ್ಚಿಮ ಜಿಲ್ಲೆಗಳಾದ ದಕ್ಷಿಣ ಕನ್ನಡಾ ಮತ್ತು ಮಲಬಾರ್ ಜಿಲ್ಲೆಗಳ ಪರವಾಗಿ ಲೆಜಿಸ್ಲೇಟಿವ್ ಎಸೆಂಬ್ಲಿಗೆ ಚುನಾಯಿತರಾದ ಸದಾಶಿವಭಟ್ಟರ ಚುನಾವಣೆಯು ಅಕ್ರಮವಾದ್ದರಿಂದ ವಜಾ ಆಗಬೇಕೆಂತ ಅವರ ಎದುರ ಮೆ|| ಸಿಲ್‌ನಾಯರ ಅರ್ಜಿ ಕೊಟ್ಟದ್ದು ವಜಾ ಆಗಿದೆ.

ಅನಂತಪುರ ಜಿಲ್ಲೆಯಲ್ಲಿ ಕಠಿಣ ಕ್ಷಾಮಬಾಧೆಯು ಪ್ರಬಲವಾಗಿದೆ. ಸರಕಾರದವರು ಸಹಾಯದ ಏರ್ಪಾಡುಗಳನ್ನು ಮಾಡಿದ್ದಾರೆ.

ಪಂಜಾಬಿನಲ್ಲಿ ನಡೆಯುವ ಅಕಾಲಿ ಚಳವಳಿಗೆ ಸೇರುವ ಸಿಕ್ಕ ಪೆನ್ಶನ್‌ದಾರರಿಗೆ ಸರಕಾರದವರು ಎಚ್ಚರಿಸಿದ್ದಾರೆ. ಚಳವಳಿಕ್ಕೆ ಸೇರಿದರೆ ಪೆನ್ಶನ್ ವಜಾಮಾಡಲಾಗುವದೆಂತ ಎಚ್ಚರಿಸಿದ್ದಾಗಿದೆ.

ಕರ್ನಾಟಕದಲ್ಲಿ ನಡೆಯುವ ಕಾಂಗ್ರೆಸ್ ಬೆಳಗಾಂವಿನಲ್ಲಿ ನಡೆಯಬೇಕೆಂತ ಈ ಮೊದಲೇ ಫೈಸಲಾಗಿದ್ದರೂ ಮಂಗಳೂರವರು ಪುನಃ ಯೋಚಿಸಬೇಕೆಂತ ಪ್ರಾಂತೀಕ ಕಾಂಗ್ರೆಸ್ ಕಮಿಟಿಯನ್ನು ಕೇಳಿಕೊಂಡಿದ್ದರು. ಪುನಃ ಯೋಚಿಸಿಯೂ ಬೆಳಗಾಂವಿನಲ್ಲಿಯೇ ನಡೆಯತಕ್ಕದೆಂತ ಫೈಸಲ್‌ಮಾಡಿದ್ದಾರೆ.

ತಂಜಾವೂರು ಜಿಲ್ಲೆಗೆ ಸೇರಿದ ಮಾಯಾವರಂನಲ್ಲಿ ಸ್ವಯಂಸೇವಕರು ಸರಕಾರದ 144 ನೇ ಸೆಕ್ಷನ್ ಹುಕುಮಿಗೆ ವಿರೋಧವಾಗಿ ವರ್ತಿಸಲು ನಿರ್ಣಯಿಸಿದ್ದಾರೆ.

ಮದ್ರಾಸ್ ಪಟ್ಟಣದ ತೋಟಿಜನರು ಕೆಲಸಬಿಟ್ಟಿದ್ದರು (ಸಂಪು ನಡೆಸಿದ್ದರು) ಈಗ ಪುನಃ ಕೆಲಸಕ್ಕೆ ಸೇರಿದ್ದಾರೆ.

ಡಾಕ್ಟರ್ ಅನಿಬೆಸೆಂಟ್ ಅಮ್ಮನವರು ಬೇಗನೆ ರಾಷ್ಟ್ರೀಯ ಸಮ್ಮಂಧ ಇಂಗ್ಲೆಂಡಿಗೆ ಹೋಗಲಿಕ್ಕಿರುವುದರಿಂದ ಮದ್ರಾಸು ಲೇಬರ್ ಯೂನಿಯನ್ನಿನವರು ಅವರಿಗೆ ಒಂದು ಬಿನ್ನಹ ಪತ್ರವನ್ನು ಅರ್ಪಿಸಿದರು.

ಕೊಡಗು ಕೌನ್ಸಿಲು ವಿಚಾರಂಗು.

...ವ ವಿದ್ಯಾರ್ಥಿಗಳನ್ನು ಮುಂದಿನ ಜೀವನಸಾಧನೆಗಾಗಿ [illegible] ನಡೆಸಲು ತಯಾರುಮಾಡುವಂತಾದ್ದಾಗಿ ತಕ್ಕದ್ದು. ಈಗಿರುವಂತೆ ಕಾನ್ವೆಂಟ್ ವಿದ್ಯೆಯು ಈ ರವಾಗದೆಯೆಂದು ಹೇಳಲಾಗುವುದಿಲ್ಲ. ಯಾಕೆಂದರೆ, ...ಗಿನಲ್ಲಿ ಯಾವ ತರಹದ ಸ್ತ್ರೀವಿದ್ಯಾಭ್ಯಾಸವನ್ನು ಅನುಸರಿಸಿದರೂ, ಅದು ನಮ್ಮ ಹುಡುಗಿಯರನ್ನು ಒ[illegible] ಪತ್ನಿಯರನ್ನಾಗಿಯೂ, ತಾಯಿಯರನ್ನಾಗಿಯೂ [illegible] ಕೊಡಗಿನ ಒಳ್ಳೇ ನಿವಾಸಿಗಳನ್ನಾಗಿಯೂ ಮಾ[illegible] ತಕ್ಕದ್ದಾಗಿರಬೇಕು. ಈಗಿರುವ ವಿದ್ಯಾಕ್ರಮವು [illegible]ಗಳಲ್ಲಿ ಯಾವದನ್ನೂ ಮಾಡುವಂಥಾದ್ದಲ್ಲ. ಕಾ[illegible]ಟು ಒಳ್ಳೇ ಮನೆ ಯಜಮಾನತಿಯನ್ನು ತಯಾರಿಸುತ್ತದೋ ಎಂದು ಹೇಳುವುದು ಕಷ್ಟವಾಗಿದೆ. ಜನರ ಅಭಿಪ್ರಾಯವು ಈ ವಿಷಯದಲ್ಲಿ ಬೇರ್ಪಟ್ಟಿದೆ. [illegible] ಈಗಿನ ವಿದ್ಯಾಭ್ಯಾಸದ ದೃಷ್ಟಿಯಲ್ಲಿ ಮಾತೃತ್ವ ಮತ್ತು ಶಿಶುಪಾಲನೆಯ ತಿಳುವಳಿಕೆಯೂ ಅವಶ್ಯಕ; ಆದರೆ ಈ ವಿಷಯವೇನೂ ಕಾನ್ವೆಂಟಿನಲ್ಲಿ ಕಲಿಸುವುದಿಲ್ಲ.

ರಾಜತತ್ವದ ಕಡೆಗೆ ತಿರುಗಿದರೆ, ವೃದ್ಧ [illegible] ರಾಜ್ಯದಲ್ಲಿ ಸ್ತ್ರೀಯರ ಸ್ಥಾನದ [illegible] ಕಾನ್ವೆಂಟಿನಲ್ಲಿ ಕಲಿಸುವರೆಂದು ನಿರೀಕ್ಷಿಸಲಾಗದು. ಹಿಂ[illegible] ದೇಶದ ಚರಿತ್ರೆಯನ್ನು ಬಿಟ್ಟು, ಇಂಗ್ಲೆಂಡಿನ ಮ[illegible] ಪರದೇಶಗಳ ಚರಿತ್ರೆಯನ್ನು ಹೆಚ್ಚಾಗಿ ಕಲಿಸುತ್ತಿ[illegible]. ಇದ[illegible] ಕೆಲವು ವೇಳೆಗಳಲ್ಲಿ ಹಿಂದೂಪುರದ ವಿಷ[illegible] ತಿರಸ್ಕಾರ ಭಾವದಿಂದ ಕಾಣುವಂತೆ ಮಾ[illegible]ದೆ, ಆದರೆ ಇಂಥಾ ತಿರಸ್ಕಾರಭಾವವು ಮುಖ್ಯ[illegible]ಗೆ ತಿಳಿ[illegible] [illegible].

ಈ ವಿದ್ಯಾಭ್ಯಾಸವು ಹೆಚ್ಚು ಕಷ್ಟದ್ದಾಗಿದೆ. ಯಾ[illegible]ದರೆ ಬೆಂಗಳೂರಿನ ಹೈಸ್ಕೂಲಿನಲ್ಲಿರುವ ಕನ್ನ[illegible] ಮಾಸಿಗೆ [illegible] ಮಗಳಿಗೆ [illegible] ಕೊಡಬೇಕಾಗುತ್ತೆ. ಈ ಹೈಸ್ಕೂಲಿನ ವಿದ್ಯಾಭ್ಯಾಸದ [illegible]ನಿಂದಲೂ, ಅದು ದೇಶದ ಮಧ್ಯಸ್ಥಳದಲ್ಲಿ ಇಲ್ಲದೆ [illegible]ವುದರಿಂದಲೂ ಬಡವರ ಹುಡುಗಿಯರಿಗೆ ಪ್ರಾಥಮಿಕ ವಿದ್ಯಾಭ್ಯಾಸದ ಯೋಜನೆಗೆ ಅನುಕೂಲವಿಲ್ಲ.

ಮಿ, ಜಿ ಎ ಯೆಟ್ಸ್‌ರವರು

ಹುಡುಗಿಯರ ಹೈಸ್ಕೂಲಿನ ಮೇಲೆ ಆಕ್ಷೇಪಣೆ [illegible] ನಾನು ನೋಡುತ್ತೇನೆ. ರಾಜವನ್ನು [illegible] ಅನುಮೋದಿಸಿದ ಮೆಂಬರುಗಳ ಕೆಲವು ಹೇಳಿಕೆಗ[ಳ]ನ್ನು ನಾನು ಬಲವಾಗಿ ವಿರೋಧಿಸಬೇಕಾಗಿದೆ. ಈ [illegible]ಯನ್ನು ಅವರು ಎಂದಾದರೂ ನೋಡಿದ್ದಾಗ [illegible]ದಿದ್ದಾರೋ ಎಂಬ ಸಂಶಯ ನನಗೆ ಇದೆ. ಅನು[ಮೋ]ದಿಸಿದವರು ಅಲ್ಲಿ ಇಂಡಿಯಾ ದೇಶದ ಚರಿತ್ರೆಗಿಂತ [ಹೆಚ್ಚಾ]ಗಿ ಇಂಗ್ಲೀಷ್ [illegible] ಚರಿತ್ರೆಯ[ನ್ನು] ಕಲಿಸುತ್ತಾರೆಂಬ ಮಾತನ್ನು ನಿಜವೋ ಎಂದರೆ [illegible] ಅಲ್ಲಿ ಕೆಳಗಿನ ಕ್ಲಾಸುಗಳಲ್ಲೇ ಹಿಂದೂ[ಸ್ತಾ]ನದ ಚರಿತ್ರೆಯು ಮಾತ್ರ ಹೇಳುತ್ತಾರೆಂತ ನನಗೆ ಗೊ[ತ್ತು]. ೪, ೫ ನೇ ಫಾರಂನಲ್ಲಿ ಮಾತ್ರ ಈಗ ಇಂಗ್ಲಿ[ಷ್] ಚರಿತ್ರೆ ಹೇಳುತ್ತಾರೆ. ೬ ನೇ ಫಾರಮನ್ನು ತೆರೆದ [illegible] ಆ[illegible] ಅದರಲ್ಲಿ [illegible] ಸಿಯರು ಇಲ್ಲದೆ ಇರುವದರಿಂದ ಸ್ತ್ರೀ ವಿದ್ಯಾಭ್ಯಾ[ಸ]ಕ್ಕೆಂತ ಕೇಳುವವರಿಲ್ಲವೆಂಬುದು ನಿಜವಾಗ[illegible] ಹೇಳಿದರು. ಇದು [illegible] ಕನ್ನಡ [illegible] ೪ ನೇ ಫಾರಮನ್ನು ತೆರೆದು 1 ಯಾ 1[1] ವರ್ಷವಾ[illegible] ೧೯[illegible] ರಲ್ಲಿ ತೆರೆದದ್ದು. ಅದ್ದರಿಂದ [illegible] ತುಂಬಾ ಇಲ್ಲವೆಂಬುದರಲ್ಲಿ ಆಶ್ಚರ್ಯವಿಲ್ಲ. ರಾ[illegible] ತಂದವರು ಪಾಕಶಾಸ್ತ್ರ ಸಂಗೀತ ಮತ್ತು [illegible] [illegible]ನ ಪಾಠಗಳನ್ನು ಹೇಳುವದಿಲ್ಲವೆಂತ ಹೇಳಿದ[ರು].

ಇವನ್ನು ಕೇಳುವಾಗಲೇ ಅವರಿಗೆ ಸ್ಕೂಲಿನ ಸಂಗತಿ [illegible]ಯದಂತೆ ಆಡಿದರು. ಈ ಸಂಸ್ಥೆಯನ್ನು ಒಂದು [illegible]ಟ ನಡಿಸುವುದೆಂತಲೂ ಬರೇ ಸನ್ಯಾಸಿ[illegible] ನಡಿಸು[ವದಿ]ಲ್ಲವೆಂತಲೂ ನೆನಪಿನಲ್ಲಿಟ್ಟುಕೊಳ್ಳಬೇಕು. ೩ ಯಾ [illegible]ವರ್ಷದಿಂದಲೂ ಒಬ್ಬ ಸಂಗೀತ ಮಾಸ್ತರಿದ್ದರು. ಪಾ[ಠ ಹೇ]ಳುತ್ತಿದ್ದವನು ತೃಪ್ತಿಕರವಿಲ್ಲವೆಂಬ ಕಾರಣದಿಂದ [ಅವ]ನನ್ನು ನಜಾ ಮಾಡಿದ್ದರಿಂದ ಈಗ ಮಾಸ್ತರಿಲ್ಲ. ಹಿಂ[ದೂಸ್ಥಾ]ನದ ಸಂಗೀತ ಹೇಳುತ್ತಿದ್ದದ್ದು. ಹೇಳುತ್ತಿದ್ದವ[ರು] [illegible] ಪಾಕಶಾಸ್ತ್ರವನ್ನು ಹೇಳುತ್ತಾರೆ. ಗೃಹ[ಕಾರ್ಯ]ಶಾಸ್ತ್ರವನ್ನು ಸ್ಕೂಲ್ ಫೈನಲ್ ಪರೀಕ್ಷೆ[ಗೆ] ತೆಗೆದುಕೊಂಡಿದ್ದಾರೆ. ಮನೆಯಲ್ಲಿ ಮಾಡುವ [illegible]ಕ್ರಮವನ್ನು ಕಲಿಸುತ್ತಾರೆ. ಇವರಿಬ್ಬರಲ್ಲಿ ಯಾ[illegible] [illegible]ನ ಸಂಗಡ ಶಾಲೆಯನ್ನು ನೋಡಲಿಕ್ಕೆ ಬಂ[illegible] ಹುಡುಗರ ಶಾಲೆಯು ಪಾರಕ್ಕಿಂತಲೂ ಹೆಚ್ಚು ಚೆ[ನ್ನಾಗಿ] ಇಲ್ಲಿ ಪಾಠ ನಡೆಸುತ್ತಾರೆಂತ ಇವರಿಗೆ ಗೊತ್ತಾಗು[illegible] ಸ್ತ್ರೀಯರು ಸ್ವಾಭಾವಿಕವಾಗಿಯೇ ಗಂಡಸರಿ[ಗಿಂತ] ಪಾಠ ಹೇಳುವದರಲ್ಲಿ ಹೆಚ್ಚಿಗೆ ಶಕ್ತಿ ಇರುವವರು [illegible]ಲ್ಲ ಈ ಸ್ಕೂಲಿನಲ್ಲಿರುವ ಸಿಸ್ಟರುಗಳು ಬಹಳ ತರ

ಬೇತು ಹೊಂದಿದ ಉಪಾಧ್ಯಾಯಿನಿಯರಾಗಿದ್ದಾರೆ. ಕ್ಲಾಸಿನಲ್ಲಿ ಸಂಖ್ಯೆ ಕಡಿಮೆಯಾದದ್ದಕ್ಕೆ ಕಾರಣವೇನೆಂದರೆ ಈ ದೇಶದಲ್ಲಿ ಸ್ತ್ರೀವಿದ್ಯಾಭ್ಯಾಸ ಈಗ ತಾನೇ ಪ್ರಾರಂಭದ ಸ್ಥಿತಿಯಲ್ಲಿರುವದೇ ಕಾರಣ. ಹುಡುಗರ ಶಾಲೆ[ಯ]ಲ್ಲಿ ಇರುವ ಹುಡುಗಿಯರ ಸಂಖ್ಯೆಗಿಂತ ಇಲ್ಲಿ ಬಹಳ [illegible] ಇಲ್ಲ. ಇಲ್ಲಿ ಗಣಿತ ಮತ್ತು ಸೈಯ[ನ್ಸ್] ಪಾಠಗಳು ಅನುಕೂಲವಿಲ್ಲದಿರುವದು ಹುಡುಗಿ[ಯರ] ಸಂಖ್ಯೆಯಲ್ಲಿ ಕಡಿಮೆಯಾಗಲು ಕಾರಣವಾಗಿದೆ. ೧೯೨೧ ನೇ ಇಸ್ವಿಯಲ್ಲಿ ನಡೆದ ಒಂದು ಎಜುಕೇಶನ್ [illegible] ವಿದ್ಯಾಭಿವೃದ್ಧಿಯಲ್ಲಿ ಆಸಕ್ತರಾಗಿದ್ದ ಕೆಲವು ಕೊಡಗು ಮಹನೀಯರು ಈ ಸ್ಕೂಲನ್ನು ಹೈ ಸ್ಕೂಲ್ ದರ್ಜೆಗೆ ಏರಿಸಬೇಕೆಂತ ಬಲವಾಗಿ ವಾದಿಸಿದರು. ಸೈಯನ್ಸ್ ಭಾಗವನ್ನು ಮೊದಲಿನಿಂದಲೇ ಇಡ ಬೇಕೆಂದ [illegible] ಇತ್ತು. ಆದರೆ ಇಂಡಿಯಾ ಸರ[ಕಾ]ರದವರು ಅದು ಮಂಜೂರ್ ಮಾಡದ್ದರಿಂದ ಬಾಕಿ ಉಳಿಯಿತು. ಪಟಿಲ್ ಬ್ರೇಫ್ ಕಮಿಷನರ್ ಸಾಹೇಬರು ಪುನಃ ಇಂಡಿಯಾ ಸರಕಾರಕ್ಕೆ ಬರೆದು ೪, ೫, ೬ ಫಾರಂಗಳನ್ನು ಕ್ರಮೇಣ ತೆರೆಯಲು ಮಂಜೂರಾಯಿತು. ೧೯೨೩ ರಲ್ಲಿ ೪ ನೇ ಫಾರಮು ೧೯೨೪ ರಲ್ಲಿ ೫ ನೇ ಫಾರಮು ತೆರೆಯಲಾಯಿತು. ಈ ವರ್ಷ ೬ ನೇ ಫಾರಮು ತೆರೆಯಲಾಗುತ್ತೆ. ಚೀಫ್ ಕಮಿಷನರ ಶಿಫಾರಸ್ಸು ಮೇರೆ ಇಂಡಿಯಾ ಸರಕಾರದವರು ೩೦೦೦ ಬಜೆಟ್ ರೂಪಾಯಿ ಮಂಜೂರ್ ಮಾಡಿದ್ದರಿಂದ ಯಾವ್ಯಾ[illegible] ಗ್ರಾಂಟು ೩೦೦೦ ರೂ ಗೆ ತಲುಪಿದೆ. ಖರ್ಚಿನ ವಿಷ[ಯ]ವಾಗಿ ಏನು ಹೇಳಬೇಕಾಗಿದೆಯೆಂದರೆ ಬೆಂಗಳೂರಲ್ಲಿ ಇದೇ ತರಹ ಸ್ಕೂಲ್ ಒಂದು ಇದೆ. ಅದರಲ್ಲಿ ಪ್ರಾರಂಭದಲ್ಲಿ ಇಷ್ಟು ಹುಡುಗಿಯರು ಇರಲಿಲ್ಲ. ಸ್ತ್ರೀ ವಿದ್ಯಾಭ್ಯಾಸಕ್ಕೆ [illegible] ಒಪ್ಪುವದು ನಿಧಾನವೆಂತ ತಿಳಿದ ಸಂಗತಿಯಾದ್ದರಿಂದ ಹಾಗೆ ಹಿಡಿದು ನಡಿಸಿದ್ದರಿಂದ ಈಗ ಕ್ಲಾಸುಗಳಲ್ಲಿ ಜಾಸ್ತಿ ಹುಡುಗಿಯರಿರುತ್ತಾರೆ. ಆರಾವು ತಂದವರು ಕ್ಲಾಸಿನಲ್ಲಿ ೪೦ ಹುಡುಗಿಯರಿರಬೇಕೆಂತ ಮ[illegible] ದ್ರಾಸ್ ರೂಲನ್ನು ಎತ್ತಿ ಹೇಳಿದರು. ಸಾಧಾರಣವಾಗಿ ೪೦ ಹುಡುಗರು ಒಂದು ಕ್ಲಾಸಿನಲ್ಲಿ ಇರುವದಿಲ್ಲ. ಯುರೋಪಿನಲ್ಲಿ ಕ್ಲಾಸ್ ಒಂದರ ೩೦ ಹುಡುಗರೂ ಇಂಗ್ಲೆಂಡಿನಲ್ಲಿ ೨೫ ಹುಡುಗರೂ ಮಾತ್ರ ಇರಬೇಕೆಂತ [illegible] ಬೀಗೆ ಒಂದು ಕ್ಲಾಸಿನಲ್ಲಿ ಬೋಧಿಸುವದು ಸಾಧ್ಯವಿಲ್ಲ. ಹುಡುಗರ ಸ್ಕೂಲಿಗೆ ಹುಡುಗಿ[ಯರ]ನ್ನು ಕಳುಹಿಸಲು ಇಷ್ಟವಿರುವವರು ಕಳುಹಿಸಲಿ. ಆದರೆ ಕಳುಹಿಸಲು ಇಷ್ಟವಿಲ್ಲದ ತಂದೆತಾಯಿಗಳು ಹು[ಡುಗಿ]ಯರನ್ನು ಕಾನ್ವೆಂಟಿಗೆ ಕಳುಹಿಸಲಿ. ಹುಡುಗರ [ಶಾಲೆ]ಗೆ ಕಳುಹಿಸಲು ಇಷ್ಟವಿಲ್ಲದವರಿಗೆ ವಿದ್ಯೆಗೆ ಅನು[ಕೂಲ] [illegible] ಬೇಡವೇ? ನ್ಯಾಯತಿಳಿದ ತಂದೆ [ತಾಯಿ]ಗಳು ಹುಡುಗಿಯರನ್ನು ಹುಡುಗರ ಸ್ಕೂಲಿಗೆ ಕಳುಹಿಸಲು ಒಪ್ಪಲಾರರು. ಅನೇಕ ತಂದೆಗಳಲ್ಲಿ ನಾನು ಮಾತಾಡಿದಾಗ ಹುಡುಗರ ಸ್ಕೂಲಿಗೆ ಹುಡುಗಿಯರನ್ನು ಕಳುಹಿಸಲು ಒಪ್ಪಲಿಲ್ಲ. ಹುಡುಗರ ಸ್ಕೂಲಿನ ಖರ್ಚು [illegible] ಹೆಚ್ಚು ಖರ್ಚು ಇಲ್ಲಿ ಆಗುತ್ತೆಂತ ಒ[illegible] ಹೇಳಿದರು. ಬೋರ್ಡಿಂಗ್ ಚಾರ್ಜನ್ನು ಅವರು ಗಣನೆಗೆ ತೆಗೆದುಕೊಂಡಂತೆ ಕಾಣುವದಿಲ್ಲ. ಹುಡುಗಿಯರ ವಿದ್ಯಾಭ್ಯಾಸಕ್ಕೆ ಹುಡುಗರ ವಿದ್ಯಾಭ್ಯಾಸದಷ್ಟೇ ಖರ್ಚು ಮಾಡದೆ ಮಾತಾಡಿದ ಮೆಂಬರು ಬಹಳ ಉ[illegible] ತ್ರೀಕ್ಷ್ಣವಾಗಿದ್ದಾರೆ. ಹುಡುಗಿಯರ ಊಟ ಉಪ[ಚಾ]ರ ಫೀಸ್ ಸಹ ಬಹಳ ಸುಲಭ. ಬಡಹುಡುಗಿಯರಿಗೆ ಸ್ಕಾಲರ್ ಶಿಪ್ ಸಹ ಕೊಡಲಾಗುತ್ತೆ. ಮೆಂಬರು ಅಡಿ[illegible] ತಪ್ಪುಭಾವನೆಗಳನ್ನು ತೋರಿಸಲಿಕ್ಕಾಗಿ ಇದನ್ನೆಲ್ಲಾ ಹೇಳುವದಾಗಿದೆ. ಮತಸಂಬಂಧದ ಆಕ್ಷೇಪಣೆಯನ್ನು ನೋಡೋಣ. ಇದರ ವಿಷಯದಲ್ಲಿ ಈ ಮೊದಲೇ ನಾನು ಕೇಳಿದ್ದೇನೆ. ಆದರೆ ಅಣುಮಾಯಿಸಿ ನೋಡಿದ ಒಂದು ವಿಷಯಮಾತ್ರ ಬಹಳ ಪೂರ್ವದಲ್ಲಿ ನಡೆದಂತೆ ಕೇಳಿದೆ. ಇಷ್ಟಕ್ಕೂ ಅದು ಮತದ ಬೋಧನೆಯಿಂದ ಆದದ್ದಲ್ಲವೆಂತ ತೋರುತ್ತೆ. ಇದೇ ಗುಂಪಿಗೆ ಸೇರಿದ ನನ್‌ಗಳ ಸ್ಕೂಲಿಗೆ ಪ್ರೊಟೆಸ್ಟೆಂಟ್ ಹುಡುಗರು ತಾಂಬಾ ಹೋಗುತ್ತಾರೆ. ಪ್ರೊಟೆಸ್ಟೆಂಟರಿಗೂ ಕೆಥೋಲಿಕರಿಗೂ ಇರುವ ದ್ವೇಷವು ಹಿಂದುಗಳಿಗೂ ಕ್ರಿಶ್ಚಿಯಾನರಿಗೂ ಇರುವ ದ್ವೇಷಕ್ಕಿಂತ ಜಾಸ್ತಿ. ಇಲ್ಲಿ ಇರುವ ತಂಡಿಗಳೂ ಕ್ರಿಶ್ಚಿಯನ್ ಬೋಧನೆ ಇರಲಿಲ್ಲವೆಂಬುದನ್ನು ಬ[illegible]ಪ್ಪಿಯರೆಂತ ನಂಬುತ್ತೇನೆ. ಈ ಸ್ಕೂಲಿಗೇನೇ ಹುಡುಗಿಯರನ್ನು ಕಳುಹಿಸುತ್ತೇವೆಂತ ಹೇಳುವ ತಂದೆತಾಯಿಗಳಿರುವಾಗ ಗ್ರಾಂಟನ್ನು ವಜಾಮಾಡುವದು ನ್ಯಾಯವಲ್ಲ. ಈ ಹಣವನ್ನು ಟ್ರೈನಿಂಗ್ ಸ್ಕೂಲನ್ನು ಬೆಂಗಳೂರಿನಿಂದ ವಾಪಸು ಇಲ್ಲಿಗೆ ತರುವದಕ್ಕೆ ಉಪಯೋಗಿಸಬೇಕೆನ್ನುತ್ತಾರೆ. ಬೆಂಗಳೂರು ಸ್ಕೂಲ್ ಬಹಳ ಚೆನ್ನಾಗಿ ನಡೆಯುತ್ತಿದೆ. ಅಲ್ಲಿ ಸೆಕೆಂಡರಿ ಗ್ರೇಡಿಗೆ ತಯಾರುಮಾಡುತ್ತೇವೆ. ಇಲ್ಲಿ ಅಗ್ರೇಡ್‌ಯಿರಲಿಲ್ಲ. ಇಲ್ಲಿ ಟ್ರೈ

ನಿಂಗ್ ಸ್ಕೂಲಿನಲ್ಲೂ ಒಬ್ಬನೇ ಹುಲ್. ಟಿ. ಇದ್ದದ್ದು. ಜೇರೆಯೊಬ್ಬನು ಹೈಸ್ಕೂಲಿಗೂ ಹೋಗಬೇಕಿತ್ತು. ಬೆಂಗಳೂರಲ್ಲಿ ಚೆನ್ನಾಗಿ ತರಬೇತು ಹೊಂದಿರುವರು ಇಬ್ಬರು ಇದ್ದಾರೆ. ಅಲ್ಲಿ ರಿಜಲ್ಟು ಬಹಳ ಚೆನ್ನಾಗಿ ಬರುತ್ತಿದೆ. ಹೆಡ್‌ಮಾಸ್ತರಿಗೂ ಕನ್ನಡ ಗೊತ್ತಿದೆ. ಮತ್ತು ಒಬ್ಬ ಕನ್ನಡ ಪಂಡಿತರೂ ಸಹ ಇದ್ದಾರೆ. ಅಲ್ಲಿನ ಖರ್ಚಿನ ವಿಷಯಕ್ಕೆ ಹುಡುಗರಿಗೆ ೨೧ ರೂ. ವೇತನ ಕೊಡುತ್ತೆ. ೧೫ ರೂ. ಊಟಕ್ಕೆ ಹೋದರೆ ಇತರ ಖರ್ಚುಗಳಿಗೆ ಆರುರೂಪಾಯಿ ಉಳಿಯುತ್ತೆ. ರಿಟ್ರೆಂಚ್‌ಮೆಂಟ್ ಕಮಿಟಿಯ ಶಿಫಾರಸ್ಸುಮೇರೆ ಈಗ ತಾನೇ ವರ್ಗಾಯಿಸಿದ್ದರಿಂದ ಅದನ್ನು ಬದಲಾಯಿಸಲಿಕ್ಕೆ ನಾನು ವಿರೋಧಿಸುತ್ತೇನೆ. ಈ ಬದಲಾವಣೆಯನ್ನು ತಕ್ಷಣ ಮಾಡಲೂ ಸಾಧ್ಯವಿಲ್ಲ.

ಮಿ|| ಪಿ. ಟಿ. ಕುಕಾಲಪ್ಪನವರು.

ವಿದ್ಯಾ ಇಲಾಖೆಯ ಮೆಂಬರು ನಮಗೆ ಅನೇಕ ವಿಷಯಗಳನ್ನು ತಿಳಿಸಿಕೊಟ್ಟದಕ್ಕೆ ಅವರಿಗೆ ನನ್ನ ವಂದನೆಯಿದೆ. ಆದರೆ ನನ್ನ ಠರಾವನ್ನು ಬಿಡುವದಿಲ್ಲ. ಯಾಕೆಂದರೆ ಹುಡುಗಿಯರ ಹೈಸ್ಕೂಲಿಗೆ ಆಗುವ ಖರ್ಚು ವಿಪರೀತವಾಗಿದೆ. ಬಜೆಟ್ಟಿನಲ್ಲಿ ೧೧೦೦ ರೂ. ದರದಲ್ಲಿ [illegible] ಖರ್ಚನ್ನು ಮಂಜೂರು ಮಾಡಲಿಕ್ಕಾಗುವದಿಲ್ಲ. ೬ ನೇ ಫಾರಮನ್ನು ತೆರೆದರೂ ಸಹ ೩ ನೇ ಫಾರಮಿನಲ್ಲಿ ಹನ್ನೆರಡೇ ಹುಡುಗಿಯರಿರುವದರಿಂದ ಮೇಲಿನ ಕ್ಲಾಸುಗಳ ಸಂಖ್ಯೆ ಹೆಚ್ಚಾಗುವ ಸಂಭವವಿಲ್ಲ. ಹುಡುಗರ ಹೈಸ್ಕೂಲಿನಲ್ಲಿರುವ ಹುಡುಗಿಯರೆಲ್ಲಾ ಇಲ್ಲಿಗೇನೇ ಬಂದರೂ ಸಹ ಇಂಗ್ಲೆಂಡಿನ ಒಂದು ಕ್ಲಾಸಿನ ಸಂಖ್ಯೆಯಾದ ೨೫ ಸಹ ಆಗುವದಿಲ್ಲ. ಮೇಲೆ ದರ್ಜೆಯ ಸ್ತ್ರೀ ವಿದ್ಯಾಭ್ಯಾಸಕ್ಕೆ ನಾನು ವಿರೋಧಿಸುವದಿಲ್ಲ. ಸಂಖ್ಯೆ ಹೆಚ್ಚಾಗುತ್ತೆಂಬ ಕಾಲದಲ್ಲೇ ಪೂರ್ತಿ ಹೈಸ್ಕೂಲನ್ನು ಮಂಜೂರು ಮಾಡಬೇಕೆಂತ ನಾನೇ ಹೇಳುತ್ತೇನೆ. ಟ್ರೈನಿಂಗ್ ಸ್ಕೂಲನ್ನು ಇಲ್ಲಿಗೆ ತರುವ ವಿಷಯದಲ್ಲಿ ನಮ್ಮ ದೇಶದ ಪ್ರೈಮರಿ ವಿದ್ಯಾಭ್ಯಾಸವನ್ನು ಅಭಿವೃದ್ಧಿಗೊಳಿಸಬೇಕೆಂಬ ಸಂಗತಿಯನ್ನೂ ಮುಖ್ಯವಾಗಿ ಪ್ರೈಮರಿ ವಿದ್ಯೆ ಕೊಡಬೇಕೆಂತ ಶೀಘ್ರದಲ್ಲೇ ನಿರ್ಣಯವಾದರೆ ತುಂಬಾ ಮಾಸ್ತರುಗಳು ಬೇಕಾಗುತ್ತಾರೆಂಬುದನ್ನೂ ನೆನಪಿನಲ್ಲಿಡಬೇಕು. ಆದ್ದರಿಂದ ನಮಗೇನೇ ಒಂದು ಟ್ರೈನಿಂಗ ಸ್ಕೂಲಿನ ಅವಶ್ಯವಿದೆ. ಉಪಾಧ್ಯಾಯರನ್ನು ತರಬೇತು ಮಾಡುವ ವಿಷಯದಲ್ಲಿ ವಿದ್ಯಾ ಇಲಾಖೆಮೆಂಬರು ನನಗೆ ಉತ್ತರಕೊಡಲಿಲ್ಲ. ಈ ಕಾರಣದ ಮೇಲೆ ಟ್ರೈನಿಂಗ್ ಸ್ಕೂಲನ್ನು ನಮ್ಮ ದೇಶದಲ್ಲೇ ಇಟ್ಟು ಟ್ರೈನಿಂಗಿನ ಖರ್ಚು ಕಡಿಮೆಮಾಡಬೇಕಾದ್ದಲ್ಲದೆ ನಮ್ಮ ಮಠದಲ್ಲೇ ತರಬೇತುಕೊಟ್ಟು ನಮ್ಮ ದೇಶಕ್ಕೆ ಸರಿಯಾದ ತರಬೇತು ಸಹ ಕೊಡಬಹುದು. ಬೆಂಗಳೂರಿನ ಸ್ಥಿತಿಯು ನಮ್ಮ ಸ್ಥಿತಿಗೆ ಸರಿಯಿಲ್ಲ. ಬೆಂಗಳೂರಿನಲ್ಲಿ ತರಬೇತಾಗಿ ಬಂದ ಮಾಸ್ತರುಗಳಿಗೆ ಹೆಚ್ಚಿಗೆ ತಿಳುವಳಿಕೆ ಬರಬಹುದೆಂತ ಅಸ್ಸು[illegible] ಹುದು. ನಾನು ಇದನ್ನು ನಂಬುವದಿಲ್ಲ. ಅಲ್ಲಿ ಅವರ ಸ್ಥಿತಿಯೂ ಅಲ್ಲಿನ ಖರ್ಚು ವೆಚ್ಚವೂ ಸಹ ನೋಡಿದರೆ ಒಳ್ಳೇ ಅವರು ಟ್ರೈನಿಂಗಿಗೆ ಹೋಗುವಸಂಭವವು ಕಡಿಮೆ ಕಾಣುತ್ತೆ. ನನ್ನ ಠರಾವಿಗೆ ಒಪ್ಪಬೇಕೆಂತ ಪುನಃ ಕೇಳಿಕೊಳ್ಳುತ್ತೇನೆ.

ಮಿ|| ಜಿ ಎ. ಯೇಟ್ಸ್‌ರವರು.

ಹೆಂಗಸರನ್ನು ಟ್ರೈನಿಂಗ್ ಮಾಡುವ ವಿಷಯಕ್ಕಾಗಿ ಬೆಂಗಳೂರಿನಲ್ಲಿ ಒಬ್ಬ ಹೆಂಗಸು ಮಿಸ್ಟ್ರೆಸ್ಸನ್ನು ದೊರಕಿಸಲು ಪ್ರಯತ್ನಿಸಿದೆವು. ಹುಡುಗರ ಶಾಲೆಯಲ್ಲೇ ಹುಡುಗಿಯರನ್ನು ಟ್ರೈನ್ ಮಾಡುವದೂ ಉತ್ತಮವೆಂತ ಅಭಿಪ್ರಾಯ ಪಡಲಾಯಿತು. ಹುಡುಗಿಯರು ಯಾರೂ ಟ್ರೈನಿಂಗಿಗೆ ಹೋಗುತ್ತೇವೆಂತ ತಿಳಿಸಲಿಲ್ಲ. ಠರಾವು ತಂದ ಮೆಂಬರು ಬೆಂಗಳೂರು ಟ್ರೈನಿಂಗ್ ಸ್ಕೂಲನ್ನು ನೋಡಲಿಲ್ಲ. ಹಾಗಿದ್ದರೆ ನಾನು ತೋರಿಸಿಕೊಡುತ್ತೇನೆ.

ಠರಾವು ಬಹುಮತದಿಂದ ತಾತ್ಕಾಲಿಕವಾಗಿ ಮಂಜೂರಾಯಿತು. (ಚುನಾಯಿತ ಇಂಡಿಯನ್ ಮೆಂಬರುಗಳ ಪೈಕಿ, ಮಿ|| ಅಪ್ಪಾರಂಡ ಚಂಗಪ್ಪನವರು ಮತ್ತು ಮಿ|| ಪಾಲೇಕಂಡ ಮೇದಪ್ಪನವರು ವಿನಹ ಬಾಕಿ ೧೧ ಮೆಂಬರುಗಳೂ, ನೇಮಿತ ಮೆಂಬರು ಮಿ|| ಕೇದಂಬಾಡಿ ಸುಬ್ರಾಯರೂ ಪರವಾಗಿಯೂ, ಬಾಕಿ ೮ ಮೆಂಬರುಗಳು ವಿರೋಧವಾಗಿಯೂ ಓಟುಮಾಡಿದರು.)

೧೭ ನೇ ಠರಾವು.

ಬೆಂಗಳೂರು ಸರ್ಕಲ್ ಇನ್ಸ್‌ಪೆಕ್ಟರು ಮತ್ತು ಇವರ ಸಿಬ್ಬಂದಿಗೆ ಕೊಡುವ ೧೧೫೦ ರೂ. ಯನ್ನು ನಿಲ್ಲಿಸಿ ಮಡಿಕೇರಿ ಹೈಸ್ಕೂಲ್ ಹೆಡ್ ಮಾಸ್ತರನ್ನೇ ಇನ್ಸ್‌ಪೆಕ್ಟರಾಗಿಮಾಡಿ ಈ ಉಳಿತಾಯದಿಂದ ಹೆಡ್‌ಮಾಸ್ತರಿಗೆ ಬೇಕಾಗುವ ಹೆಚ್ಚಿಗೆ ಸಿಬ್ಬಂದಿಗೆ ಮತ್ತು ಮದ್ರಾಸ್ ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್‌ಪೆಕ್ಟರಿಗೆ ಭತ್ಯೆ

ಕೊಡಗು ಕೌನ್ಸಿಲು ಮೀಟಿಂಗು.

ಕ್ಕಾಗಿ ಸಹ ೩೦೦೦ ರೂ ವಿದ್ಯಾ ಇಲಾಖೆಯಲ್ಲಿ ಸ್ಕಾಲರ್ ಶಿಪ್‌ಗಳ ಸಂಖ್ಯೆ ಮತ್ತು ಬೆಲೆಯನ್ನು ಹೆಚ್ಚಿಸಲಿಕ್ಕಾಗಿ ೫೦೦ ರೂ ಮತ್ತು ನೀರಾವರಿ ಕಾಲುಗಾರಿಗಾಗಿ ಉಳಿದ ೬೦೫೦ ರೂ ಸಹ ಖರ್ಚುಮಾಡಬೇಕು

ಮ॥ ಸಿ ಎಮ್ ವೆಂಕಪ್ಪಯ್ಯನವರು ಹೆಡ ಮಾಸ್ಟರನ್ನೇ ಇನ್ಸ್‌ಪೆಕ್ಟರಾಗಿ ಮಾಡುವ ಅಭಿಪ್ರಾಯವನ್ನು ಮಿ॥ ಕ್ಯಾಂಪ ಬೆಲ್ ಸಾಹೇಬರು ನಂನಲ್ಲಿ ಹೇಳಿದರು ಈತನಿಗೆ ಅವರು ಇದಕ್ಕೆ ಒಪ್ಪಲಿಲ್ಲವೆಂತ ತಿಳಿದರೂ, ಈ ದೇಶದಲ್ಲೇ ಇರುವ ಇನ್ಸ್‌ಪೆಕ್ಟರಿಗೆ ಕಡಿಮೆ ಖರ್ಚು ಸಾಕಾಗುತ್ತಿಲ್ಲ ಬೇಗಳೂರು ಇನ್ಸ್‌ಪೆಕ್ಟರಿಗಿಂತ ಚೆನ್ನಾಗಿ ಅಲ್ಲದಿದ್ದರೂ ಅಷ್ಟೇ ಚೆನ್ನಾಗಿ ಕೆಲಸಮಾಡಿ ರೆಂತ ನನಗೆ ತೋರುತ್ತೆ ಹೆಡ್‌ಮಾಸ್ಟರಿಗೆ ಸಮಯ ದೊರೆಯಲಾರದೆಂತ ಹೇಳಬಹುದು ಆದರೆ ಈಗಿನ ಇನ್ಸ್‌ಪೆಕ್ಟರು ಮಾಡುವಷ್ಟು ಕೆಲಸಮಾಡಲಿಕ್ಕೆ ಹೆಡ್ ಮಾಸ್ಟರಿಗೆ ಸಮಯದೊರೆಯುತ್ತದೆಂತ ನನಗೆ ತೋರುತ್ತೆ ಬಡ ಸ ಬಾಲಕರ ಪೈಕಿ ಹೆಡ್‌ಮಾಸ್ಟರಿಗೆ ಸಿಬ್ಬಂದಿ ಕೊಡುವ ವಿಷಯದಲ್ಲಿ ಠರಾವಿನ ಮೊದಲನೇ ಭಾಗವು ಮಂಜೂರಾದರೆ ಯಾರದ್ದೂ ಆಕ್ಷೇಪಣೆ ಇರಲಾರದು ಸೆಂಟ್ರಲ್ ಕಾಲೇಜ ಮಡಿಕೇರಿಯಲ್ಲಿ ಇಲ್ಲದ್ದರಿಂದ ಸ್ಕಾಲರ್ ಶಿಪ್ ಕೊಡುವದು ಬಹಳ ಅವಶ್ಯ ಎಜುಕೇಶನ್ ಕಾನ್ಫರೆನ್ಸ್ ಒಂದು ೪ ಯಾ ೫ ವರ್ಷದಲ್ಲಿ ನಡೆದಾಗ ಈ ವಿಷಯ ಮಂಜೂರಾಗಿದೆಯಂತೆ ಉಳಿದ ಹಣವನ್ನು ನೀರಾವರಿ ಕಾಲುಗಾರಿಗೆ ಉಪಯೋಗಿಸಲಿಕ್ಕೆ ಯಾರದ್ದೂ ಆಕ್ಷೇಪ ಇರಲಾರದಾಗಿ ನಂಬುತ್ತೇನೆ

ಮೆ॥ ಕೆ ಪಿ ಚೆಣ್ಣಪ್ಪನವರು ಅನುಮೋದಿಸಿದರು

ಮೆ॥ ಜೆ ಎ ಯೇಟ್ಸ್‌ರವರು

ಈ ಠರಾವಿನಲ್ಲಿ ಅನೇಕ ವಿಷಯಗಳು ಸೇರಿಕೊಂಡಿದೆ ಮದ್ರಾಸ ವಿದ್ಯಾ ಇಲಾಖೆ ಡೈರೆಕ್ಟರು ಮೋಲ್ಡಿಂಗ ಆಫೀಸರಾಗಿ ಪುನಃ ಬರಬೇಕೆಂತ ಇದೆ ಕೊಡಗಿನ ಕೆಲಸಮಾಡಲಿಕ್ಕೆ ಅವರಿಗೆ ಸಾಲಿಯಾನಾ ೩೦೦೦ ರೂ ಕೊಡಬೇಕಾಗುತ್ತೆ ಮೊದಲು ಎರಡು ವರ್ಷ ಕ್ಯಾಂಪಾವರ್ತಿ ಕೊಡಗಿಗೆ ಬರುತ್ತಿದ್ದರು ಮದ್ರಾಸ್ ಗವರ್ನಮೆಂಟಿನವರು ಈ ಏರ್ಪಾಡಿಗೆ ಒಪ್ಪಲಿಕ್ಕಿಲ್ಲವೆಂತ ನನಗೆ ತೋರುತ್ತೆ ಅಲ್ಲದೆ ಅವರ ತಾಬೆ ಕೊಡಗಿನ ಶಾಲೆಗಳನ್ನು ಕೊಟ್ಟರೆ ಇಲ್ಲಿನ ಮಾಸ್ಟರು ಕೆಲಸಕ್ಕೆ ಮದ್ರಾಸಿನಿಂದ ಕನ್ನಡ ತಿಳಿಯದ ಜನ ಬರುತ್ತಾರೆ ಈ ಮೊದಲು ಹೀಗೆ ನಡೆದಿದೆ ಹೆಡ ಮಾಸ್ಟರು ಇನ್ಸ್‌ಪೆಕ್ಟರ್ ಕೆಲಸ ಮಾಡಲು ಸಾಧ್ಯವಾಗಲಾರದು ಬಹಳ ಪೂರ್ವದಲ್ಲಿ ಈ ಏರ್ಪಾಡು ಇತ್ತು ಆಗ ಹೈಸ್ಕೂಲ್ ಚಿಕ್ಕದಾಗಿತ್ತು ಮತ್ತು ಪ್ರೈಮರಿ ಸ್ಕೂಲ್‌ಗಳ ಸಂಖ್ಯೆ ಕಡಿಮೆಯಿತ್ತು ಅಲ್ಲದೆ ನಂನ ದಾರ್ ಮೆಂಬರಿಗೆ ತಿಳಿಯದೆ ಇರುವ ತುಂಬಾ ಆಫೀಸ್ ಕೆಲಸ ಸಹ ಇನ್ಸ್‌ಪೆಕ್ಟರಿಗೆ ಇದೆ ಎಲ್ಲಾ ಕಾಗದಗಳನ್ನು ಇನ್ಸ್‌ಪೆಕ್ಟರು ಚೀಫ್ ಕಮಿಷನರಿಗೆ ಕಳುಹಿಸಬೇಕು ತುಂಬಾ ಕೆಲಸವಿರುವದರಿಂದ ಹೆಡ್‌ಮಾಸ್ಟರಿಗೆ ಸಾಧ್ಯವಿಲ್ಲ ಠರಾವಿಗೆ ವಿರೋಧಿಸುತ್ತೇನೆ

ಮೆ॥ ಸಿ ಎಮ್ ವೆಂಕಪ್ಪಯ್ಯನವರು

ಡೈರೆಕ್ಟರು ಸ್ಕೂಲ್‌ಗಳನ್ನು ನೋಡಿದರೆ ಸಾಕಾಗಿದೆ ಇದಕ್ಕೆ ಆಫೀಸ್ ನಾಡೇ ಸರಕಾರದವರಿಂದ ಅವಲಾಯಿಸಲ್ಪಡತಕ್ಕ ವಿಷಯವಾಗಿದೆ

ಠರಾವು ಪಾಸಾಗಲಿಲ್ಲ

೧೫ ನೇ ಠರಾವು

ಪೋಲೀಸ್ ಇನ್ಸ್‌ಪೆಕ್ಟರ ಸಂಬಳಕ್ಕೆ ಇಟ್ಟ ಹಣ ವಜಾಮಾಡಬೇಕು

ಮೆ॥ ಕುಟ್ಟಲಗನವರು ಈ ಠರಾವನ್ನು ಮುಂದರಿಸುವದಿಲ್ಲವೆಂತ ಹೇಳಿದರು

೧೯ ನೇ ಠರಾವು

೪೧ ಬಿ ಸಿವಿಲ್ ವರ್ಕ್ಸ್‌ಗೆ ಇಟ್ಟ ೩೫೦೦೦ ರೂ ದಿಂದ ೧೩೦೩ ರೂ ಕಡಿಮೆಮಾಡಬೇಕು

ಚೀಫ್ ಕಮಿಷನರ ಆಫೀಸಿನಲ್ಲಿ ಇಂಜನೀಯರಿಂಗ್ ಇಲಾಖೆಯ ಸಂಬಂಧ ಕೆಲಸ ನೋಡುವ ಗುಮಾಸ್ತರುಗಳ ಸಂಬಳಕ್ಕಾಗಿ ಕೊಡುವ ಹಣವಾಗಿದೆ. ಫೈನಾನ್ಸ್ ಕಮಿಟಿ ಮುಂದೆಯೂ ಈ ವಿಷಯದಿಂತು ಫೈನಾನ್ಸ್ ಮೆಂಬರು ಸಹ ಈ ವಿಷಯದಲ್ಲಿ ಸಂಶಯವಿದೆಯೆಂತ ಹೇಳಿದರು ಫೈನಾನ್ಸ್ ಮೆಂಬರೇ ಈ ಕೆಲಸವನ್ನು ಮಾಡುವಂತೆ ಮಾಡಿದರೆ ಈ ಬಾಬಿನ ಖರ್ಚು ಅವಶ್ಯವಿಲ್ಲ

ಮೆ॥ ಸಿ ಎಮ್ ವೆಂಕಪ್ಪಯ್ಯನವರು

ನಾನು ಅನುಮೋದಿಸುತ್ತೇನೆ ಈ ಠರಾವಿನಲ್ಲಿ ಕೇಳುವ ವಿಷಯವು ಬಹಳ ನ್ಯಾಯವಾದದ್ದಾಗಿದೆ ಟೆಕ್ನಿಕಲ್ ಕಮಿಷನರ ಕೆಲಸಕ್ಕೆ ನಮ್ಮ ಸಂಬಳದಿಂದ ಕೊಡಬೇಕೆನ್ನುವದರಲ್ಲಿ ಸ್ವಲ್ಪ ವೇನಾದರೂ ನ್ಯಾಯವಿದ್ದರೂ, ಈ ಇಲಾಖೆಯ ಬಾಬಿಗೆ ಕೊಡುವದರಲ್ಲಿ ನ್ಯಾಯವಿಲ್ಲ ಈ ಕೆಲಸವು ಚೀಫ್ ಕಮಿಷನರ ಸಾಧಾರಣ ಕೆಲಸಕ್ಕೆ ಸೇರಿದ್ದಾಗಿದೆ.

ಮೆ॥ ಟಿ ಜಿ ಟಾಕ್ಕರವರು

ನಾಪೋಕ್ಲುದಾರ ಮೆಂಬರ ಏರ್ಪಾಡಿಗೆ ಒಪ್ಪಿಗೆ ಕೊಡಲು ನನಗೆ ಮನಸ್ಸಿದ್ದರು ಸಹ ನನಗಿಂತ ಮೊದಲಿದ್ದ ಕಮಿಷನರ್ ಈ ವಿಷಯ ಎತ್ತಿದ್ದರು ಆದರೆ ಈಗ ಜಾರಿಯಲ್ಲಿರುವ ಕಾನೂನುಮೇರೆ ಇದು ಸಾಧ್ಯವಿಲ್ಲವೆಂತ ತೀರ್ಮಾನವಾಗಿದೆ ಚೀಫ್ ಕಮಿಷನರ ಮಂಜೂರಾತಿ ಅವಶ್ಯವಿದೆ ಆದರೂ ಚಿಕ್ಕ ಚಿಕ್ಕ ಲೆಕ್ಕಗಳನ್ನೆಲ್ಲಾ ಅವರು ನೋಡಲೇ ಬೇಕೆಂತ ಹೇಳಲಾಗದು ಈ ವಿಷಯದಲ್ಲಿ ಕಾಗದಪತ್ರ ನಡೆಯುತ್ತಿದೆಯೆಂತ ಹೇಳಿದರೆ ಸಾಕಾಗಿದೆ ಇನ್ನು ಮುಂದೆ ಹೇಗಾಗುತ್ತೆಂತ ನೋಡಬೇಕು ಆದರೂ ಬಡ್ಜೆಟ್ಟಿನಲ್ಲಿ ಇರುವ ಖರ್ಚು ತತ್ಕಾಲವಿಲ್ಲದೇಬೇಕಾಗಿದೆ

ಠರಾವು ವಾಪಸು ತೆಗೆದುಕೊಳ್ಳಲಾಯಿತು

೨೩ ನೇ ತಾರೀಕು ೧೧ ಘಂಟೆಗೆ ಸಾಧಾರಣ ವಿಷಯಗಳ ಮೇಲಿನ ಠರಾವುಗಳು ಚರ್ಚೆಗೆ ತೆಗೆದುಕೊಳ್ಳಲಾಗುವದೆಂತ ಅಧ್ಯಕ್ಷರು ತಿಳಿಸಿದರು

ಮೂರನೇದಿನ

ತಾ॥ 27—3—24 ರಲ್ಲಿ ನಡೆದ ಜನರಲ್ ಠರಾವುಗಳ ಕೌನ್ಸಿಲ ಚರ್ಚೆಗಳು

1 ನೇ ಠರಾವು

ಪ್ರತಿ 30 ಸಂಘಗಳಿಗೆ ಒಬ್ಬ ಇನ್ಸ್‌ಪೆಕ್ಟರಮೇರೆ ಕೋಆಪರೇಟಿವ್ ಇನ್ಸ್‌ಪೆಕ್ಟರುಗಳನ್ನು ನೇಮಿಸಿಕೊಟ್ಟು ರಿಜಿಸ್ಟ್ರಾರರಿಗೆ ಸಹಕಾರಿ ಕೆಲಸಕ್ಕೆ ಬೆಳ್ಚಿಗೆ ಸಮಯ ಸಿಕ್ಕುವಂತೆ ಮಾಡಿಕೊಡಬೇಕು

ಮೆ॥ ಕೋಟೆರ ಚೆಣ್ಣಪ್ಪನವರು

ಈ ಠರಾವಿನಮೇಲೆ ಮಾತಾಡುವಾಗ ಬ್ರಿಟಿಷ್‌ರಾಜ್ಯ ಆರಂಭದಿಂದಿಂದ ನಮ್ಮ ದೇಶಕ್ಕೆ ಅವರು ಮಾಡಿದ ಒಳ್ಳೇ ಕೆಲಸಗಳಲ್ಲಿ ಕೋಆಪರೇಟಿವ್ ಸಂಘಗಳ ಏರ್ಪಾಡುಮಾಡಿದ್ದೇ ಎಲ್ಲಾದಕ್ಕಿಂತಲೂ ಶ್ರೇಷ್ಠವೆಂದು ಹೇಳಬೇಕಾಗಿದೆ ಇದು ಯಾವಾಗಲೂ ಮನುಷ್ಯನ ನೀತಿಯನ್ನು ಬಲಪಡಿಸತಕ್ಕದ್ದಾಗಿದೆ ಮನುಷ್ಯನ ಗುಣ ನಡತೆಯನ್ನು ತಿದ್ದಿ ಅನುಕೂಲವನ್ನು ಹೆಚ್ಚಿಸುವದರಲ್ಲಿದೆ ಯಾವಾಗಲೂ ಅನುಕೂಲವನ್ನು ಹೆಚ್ಚಿಸುವದಕ್ಕಿಂತ ನೀತಿಯು ಮಾರ್ಗವನ್ನೇ ಹೆಚ್ಚಾಗಿ ಹೇಳುತ್ತದೆ ಪರಸ್ಪರ ಸಹಾಯದಿಂದ ಬಹಳ ಪ್ರಯೋಜನವಿದೆಯೆಂದೂ, ಹಾಸ್ಯಾಸ್ಪದದ ಸಂಗತಿಯಲ್ಲವೆಂದೂ ಅದ್ದರಿಂದ ಎಲ್ಲರೂ ಪರಸ್ಪರ ಸಹಾಯದ ಮೂಲತತ್ವಗಳನ್ನು ತಿಳಿದಿರಬೇಕೆಂಬುದು ಇದರ ಮೊದಲಿನ ತತ್ವ ವೆ. ಸಂಘವು ಚೆನ್ನಾಗಿರಬೇಕೆಂದು ಹಾಗೆ ಬೇಕಾದರೆ ಅದರ ಮೇಲ್ವಿಚಾರಣೆಯು ಕ್ರಮವಾಗಿರಬೇಕು ಮೇಲ್ವಿಚಾರಣೆಯ ಅವಶ್ಯಕತೆಯನ್ನು ಪರ್ಯಾಲೋಚಿಸಿ ಇಂಡಿಯಾದೇಶದ ಇತರ ಭಾಗಗಳಲ್ಲಿ ಈ ಬಾಬಿನಲ್ಲಿ ತಕ್ಕ ಏರ್ಪಾಡು ಮಾಡಿರುತ್ತಾರೆ ಈ ಕಾರಣ ಅಲ್ಲಿನ ಸಂಘಗಳು ಕೊಡಗಿನ ಸಂಘಗಳಿಗಿಂತ ಉಚ್ಛ ಸ್ಥಿತಿಯಲ್ಲಿವೆ

ಇದನ್ನು ಕಣ್ಣಾರೆ ಕಂಡರೂ ಮೇಲ್ವಿಚಾರಣೆಗೆ ತಕ್ಕಷ್ಟು ಏರ್ಪಾಡನ್ನು ನಮ್ಮ ಸರಕಾರದವರು ಮಾಡದೆ ಇರುವದು ವ್ಯಸನಕರ ಸಹಕಾರ ಇನ್ಸ್‌ಪೆಕ್ಟರನ್ನು ನೇಮಕ ಮಾಡಬೇಕೆಂದು ಕೇಳುವದು ಇದೇ ಮೊದಲಲ್ಲ ಕಳೆದ ಆರೇಳು ವರ್ಷಗಳಿಂದ ಕೊಡಗು ಜಮಾಸದಾರ ಸಂಘದ ಮೂಲಕವೂ ಕೊಡಗುಪತ್ರಿಕೆಯ ಸಂಪಾದಕೀಯ ಲೇಖನದಲ್ಲಿಯೂ, ಕಳೆದ ಎರಡು ವರ್ಷದಿಂದ ಚೀಫ್ ಕಮಿಷನರವರ ಅಧ್ಯಕ್ಷತೆಯಲ್ಲಿ ಆದ ಕಾನ್ಫರೆನ್ಸಿನಲ್ಲಿಯೂ ಈ ವಿಚಾರವನ್ನು ಆಗಾಗ್ಗೆ ಎತ್ತಿಕೊಂಡೇ ಇದ್ದೇವೆ ಸರಕಾರಕ್ಕೆ ಕಳುಹಿಸಿರುವ ಠರಾವುಗಳನ್ನು ಅವರು ನೋಡಿದರೆ ವೇದ್ಯವಾಗುತ್ತೆ ಆದರೆ ನಮ್ಮ ಕೋರಿಕೆಗೆ ಯಾವ ಲಕ್ಷ್ಯವೂ ಕೊಡದೆ ಹೋದುದಕ್ಕೆ ವ್ಯಸನಪಡಬೇಕಾಗಿದೆ ಹಿಂದೂದೇಶದ ಇತರ ಪ್ರಾಂತ್ಯಗಳಲ್ಲಿ ಪ್ರತಿ ಮೂವತ್ತು ಸಂಘಕ್ಕೆ ಒಬ್ಬೊಬ್ಬ ಇನ್ಸ್‌ಪೆಕ್ಟರಗಳನ್ನು ನೇಮಕಮಾಡಿರುತ್ತಾರೆ ಸ್ವಂತ ಸೂಪರ್‌ವೈಸರಗಳೂ ಸಾಕಷ್ಟು ಇರುತ್ತಾರೆ ನಮ್ಮಲ್ಲಿ ೧೦೦ ಸಹ ಸಂಘಗಳು ಇದ್ದರೂ ಇನ್ನೂ ಹೆಚ್ಚಿನ ಸಂಘಗಳನ್ನು ಕಟ್ಟಿಕೊಂಡಿರುತ್ತಾರೆ ಇನ್ನೂ ಹೆಚ್ಚಿನ ಸಹಾಯಕ್ಕೆ ಸರಕಾರದವರು ಎದುರುನೋಡುತ್ತಾ ಇದ್ದೇವೆ ಯಾಕಂದರೆ ಸರಕಾರದವ ಈ ಬಾಬಿನಲ್ಲಿ ನಮಗೆ ಯಾವುದೂ ಮಾಡಿದ್ದು ಕಡಿಮೆ ಸಂಘಗಳ ರಿಜಿಸ್ಟ್ರಾರರಿಗೆ ಎಷ್ಟು ಕೆಲಸ ಇದೆಯೆಂದರೆ ಸಂಘಗಳ ಕಾರ್ಯಕ್ರಮಗಳನ್ನು ನೋಡಲಿಕ್ಕೆ ಅವರಿಗೆ ಸಮಯವಿಲ್ಲ ಮೇಲ್ವಿಚಾರಣೆಯು ಕಡಿಮೆಯಾಗಿರುವದರಿಂದ ಅನೇಕ ಸಂಘಗಳ ಸ್ಥಿತಿಯು ಚೆನ್ನಾಗಿಲ್ಲ ಕೆಲವು ಸಂಘಗಳು ಒಡನೇ ಕೊಂದರೆಗೆ ಸಿಕ್ಕುತ್ತದೋ ತಿಳಿಯುವದಿಲ್ಲ ಊರಿನ ರೈತರೂ ಸಹ ಪರಸ್ಪರ ಸಹಾಯದ ಅವಶ್ಯಕತೆಯನ್ನು ತಿಳಿದುಕೊಳ್ಳಲಿಕ್ಕೆ ತೊಡಗಿದ್ದಾರೆ ಇದು ಈಗಾಗಲೇ ಅನೇಕ ಹೊಸ ಸಂಘಗಳು ಹುಟ್ಟುವದರಿಂದ ವ್ಯಕ್ತವಾಗುತ್ತೆ ಆದರೆ ಸರಿಯಾದ ಮಾರ್ಗದಲ್ಲಿ ನಡೆಸಲಿಕ್ಕೆ ತಕ್ಕ ಸಹಾಯವು ಅವಶ್ಯಕ

ಇವುಗಳನ್ನೆಲ್ಲಾ ಚೆನ್ನಾಗಿ ಅರಿತ ಹಿಂದಿನ ಚೀಫ್ ಕಮಿಷನರವರು 1922 ರ ಸಂಘಗಳ ಆಡಳಿತದ ವರದಿಯ ಮೇಲೆ ಸಹಕಾರ ಸಂಘಗಳ ಪ್ರತಿ ಊರು ಬಹಳ ಅವಶ್ಯವಾಗಿವೆ ಮತ್ತು ಜನರು ಇದರ ಪ್ರಯೋಜನವನ್ನು ಸಿಧಾನದಿಂದ ಮಂಡಿತವಾಗಿ ಅರಿಯಲಿಕ್ಕೆ ತೊಡಗಿದ್ದಾರೆಂದು ಹೀಗೆ ಬರೆದಿರುತ್ತಾರೆ ಸರಕಾರದವರು ಸಹ ಗ್ರಾಮಾಭಿವೃದ್ಧಿಯೇ ದೇಶದ ಅಭ್ಯುದಯವೆಂದು ಒಪ್ಪುತ್ತಾರೆ ಇದಕ್ಕನುಸಾರವಾಗಿ ಇಂಡಿಯಾ ಸರಕಾರದವರೂ, ಸ್ಥಳೀಯ ಸರಕಾರದವರೂ ಗ್ರಾಮಾಭಿವೃದ್ಧಿಯನ್ನು ಬಹಳ ಒಳ್ಳೇದನ್ನುಂಟು ಮಾಡತಕ್ಕ ಸಾಧನವು ಯಾವುದೂ ಇಲ್ಲವೆಂದು ಕಂಡುಕೊಂಡಿರುತ್ತಾರೆ

ಈ ವಿಚಾರದಲ್ಲಿ ಕೆಲವು ವರ್ಷಗಳಿಗೆ ಹಿಂದೆ ಮದ್ರಾಸಿನಲ್ಲಿ ಚೀಫ ಕಮಿಶನರ್ ಮೆ॥ ಬೀಟ ಸನ್ ಬೆಲ್ ಎಂಬವರು ಹೇಳಿದ್ದನ್ನು ಗಮನಿಸಬೇಕಾಗಿದೆ ಸರಕಾರದವರು ಹಿಂದೂದೇಶದ ಅಭ್ಯುದಯವನ್ನು ಗ್ರಾಮದಿಂದ ಪೈಸರಿಯವರಿಗೆ ಕಟ್ಟುವ ಬದಲಿಗೆ ಪೈಸರಾಯರಿಂದ ಗ್ರಾಮಕ್ಕೆ ಕಟ್ಟುತ್ತಾ ಹೋಗಿರುತ್ತಾರೆ ಇದಕ್ಕೆ ಬದಲಾಗಿ ಗ್ರಾಮದಿಂದ ವೈಸರಾಯರಿಗೆ ಕಟ್ಟಲು ಸುರುಮಾಡಿದ್ದರೆ ಒಳ್ಳೆದಾಗುತ್ತಿತ್ತು ಆದರೆ ಇಂಡಿಯಾ ಸೆಕ್ರಟರಿ ಆಫ್ ಸ್ಟೇಟರು ಹೊಸ ಇಂಡಿಯಾವನ್ನು ಅಂತಸ್ತಿನಿಂದ ಕೆಳಗೆ ಕಟ್ಟಲು ಪ್ರಾರಂಭಿಸುವದು ಏಕೆಂದರೆ ಒಂದುದಿನ ಮೇಲಿಂದ ಕೆಳಗೆ ಬಿದ್ದು ಇದನ್ನು ನಾಶಮಾಡಬಹುದೆಂಬುದಾಗಿ ಹೇಳಿರುತ್ತಾರೆ ನಮ್ಮ ದೇಶದ ಅಭ್ಯುದಯವು ಗ್ರಾಮಗಳ ಅಭಿವೃದ್ಧಿಯಮೇಲೆ ಇದೆಯೆಂದು ನಾನು ಈ ಸಭೆಗೆ ಹೇಳಬೇಕಾಗಿಲ್ಲ ನಮ್ಮ ದೇಶದ ರೈತನೇ ಕೊಡಗು ಕೊಡಗುದೇಶವೇ ರೈತನ. ಈ ಸಹಕಾರಿಸಂಘದ ಆಸ ಕೂಟತೆಯು ಪ್ರತಿ ರೈತನಿಗೂ ಸ್ವಸಹಾಯವನ್ನು ಸ್ವಾವಲಂಬನವನ್ನು ಕಲಿಸಿ ರೈತರನ್ನು ಅಭಿವೃದ್ಧಿಗೆ ತಯಾರುಮಾಡುತ್ತದೆ ಸರಕಾರದ ನೀತಿಯು ಸಹ ಜನರನ್ನೆಲ್ಲಾ ಪುರಸಿವಾಕ್ಯತ್ತ ಅಂದರೆ ತಿಳುವಳಿಕೆ ತಯಾರಾಗತಕ್ಕದ್ದೇ ಆಗಿದೆ ಸರಕಾರವು ಇಂದಾದಕ್ಕೆ ಬಹಳ ಉತ್ತೇಜನ ಕೊಡುವದರಿಂದ ಸರಕಾರವು ಎಷ್ಟು ಖರ್ಚುಮಾಡಿಯಾದರೂ, ಸಂಘಸಂಸ್ಥಾಪನೆ ಮಾಡಲಿಕ್ಕೆ ರೈತರಿಗೆ ಅವಕಾಶಕೊಟ್ಟು ಒಂದಿಕ್ಕೊಂಡ ಹಣವನ್ನು ಬಡ್ಡಿಯಲ್ಲಿ ಕೊಡುವಹಾಗಲಿಕ್ಕೆ ಗಮನಿಸಿ ಸಹಕಾರದ ಗುಣವನ್ನು ಹೆಚ್ಚಿಸಿಕೊಳ್ಳಲಿಕ್ಕೆ ಅನುಕೂಲ ಕೊಡಬೇಕು ಈ ಮೊದಲು ಮೆ॥ ಬೀಟ್‌ಸನ್ ಬೆಲ್‌ರವರು ಹೇಳಿದಂತೆ ಸರಕಾರವು ಮತ್ತು ರೈತರೂ ನಮ್ಮ ದೇಶದ ಅಭಿವೃದ್ಧಿಯೆಂಬ ಕಟ್ಟಡದ ತಳಹದಿ ಮನ್ನು ಚೀಫ ಕಮಿಶನರಿಂದ ಗ್ರಾಮಕ್ಕೆ ಕಟ್ಟುವದರ ಬದಲಾಗಿ ಗ್ರಾಮದಿಂದ ಚೀಫ್ ಕಮಿಶನರವರಿಗೆ ಕಟ್ಟಲಿಕ್ಕೆ ತಕ್ಕ ಸಾಧನಗಳನ್ನು ಉಂಟುಮಾಡುವ ಸಮಯ ಪ್ರಾಪ್ತವಾಗಿದೆ ನಮ್ಮನ್ನು ಈ ಕೌನ್ಸಿಲಿಗೆ ಕಳುಹಿಸಿದ ಓಟರುಗಳಿಗೆ ಸರಿಯಾದ ಕರ್ತವ್ಯವನ್ನು ನಾವು ಮಾಡಿದ್ದೇವೆಯೆಂದು ತೋರಬೇಕಾದರೆ ಗ್ರಾಮಾಭಿವೃದ್ಧಿಯಲ್ಲಿ ನಾವು ಎಚ್ಚರಗೊಳ್ಳಬೇಕು ರಾಜನೀತಿಯಲ್ಲಿ ಕೃಷಿಕರನ್ನು ಯಾವಾಗಲೂ ಸರಕಾರದಿಂದ ಎಲ್ಲಾ ಗುತ್ತಿಗೆಗಳನ್ನು ಖರ್ಚುಮಾಡುವ ಅಧಿಕಾರವು ಸಿಕ್ಕಬೇಕೆಂದು ಹೋರಾಡುತ್ತಾರೆ ಆದರೆ ಆ ಹಣದ ಬೇಲದ ಅಧಿಕಾರವು ಸಿಕ್ಕಿದರೂ ಪ್ರಯೋಜನವಿಲ್ಲ ಅದು ನಾನು ಹೇಳುವ ಈ ಸೇದಹಾಗೆ ಬಿಡದಾಗಿದೆ ಮತ್ತು ಅಂಥಾ ಸರಕಾರದ ಬೇಲವು (ಕೋಶವು) ರೈತರಿಂದಲೇ ಪೂರ್ತಿಯಾಗಬೇಕು ಆದ್ದರಿಂದ ಚೀಫ ಕಮಿಶನರಿಗೆ ರೈತರು ಸಹಕಾರ ಸಂಘಗಳಲ್ಲಿ ಚೆನ್ನಾಗಿ ತರಬೇತಾದರೆ ಅವರ ಖರ್ಚಿಗೆ ತಕ್ಕ ಹಣವನ್ನು ಒದಗಿಸಿದರೆ, ಅವರ ಅಶ್ರದ್ಧೆಯ ಕೆಲಸಗಳನ್ನು ತೆಗೆದುಹಾಕಿದರೆ ನಮ್ಮ ದೇಶವು ಈಗಿರುವ ದುಸ್ಥಿತಿಯನ್ನು ಬಿಡಬೇಕೆಂಬುದನ್ನು, ಈ ಸಭೆಯು ಚೀಫ್ ಕಮಿಶನರಿಗೆ ಎಚ್ಚರಿಸಬೇಕಾಗಿದೆ

ಮೆ॥ ಬಿ ಶ್ರೀಪತಿರಾಯರು

ಸಹಕಾರಿ ಚಳವಳಿಯು ಪ್ರಜೆಗಳ ಅಭಿವೃದ್ಧಿಗೆ ಒಳ್ಳೆ ಅವಶ್ಯವೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ ಸಂಘಗಳ ಮೇಲ್ವಿಚಾರ ಸಾಕೋ ಎಂಬುದೇ ಈಗ ಯೋಚಿಸಬೇಕಾದ ವಿಷಯ. ಸಂಬಳವಿಲ್ಲದೆ ಕೆಲಸಮಾಡುವವರು ಸಹ ಬಹಳ ಇದ್ದಾರೆ ಆದರೂ ಮೇಲ್ವಿಚಾರ ಸಾಲದ ಸಹಕಾರಿ ಕೆಲಸದ ಪ್ರಯೋಜನವು ಇನ್ನೂ ಮೂಲೆಮೂಲೆಗೆ ಸಹ ತಲಪಿರುವದಿಲ್ಲ ಅದ್ದರಿಂದ ಇನ್ಸ್‌ಪೆಕ್ಟರುಗಳು ಬೇಕೇಬೇಕು

ಮೆ॥ ಟಿ ಜಿ ಟಾಕ್ಕರು — ಗುರುವಾರದದಿನ ನಾನು ಹೇಳಿದಮಾತೇ ಈಗಲೂ ಹೇಳಬೇಕಾಗಿದೆ ಬಡ್ಜೆಟ್ಟಿನಲ್ಲಿ ಒಬ್ಬ ಇನ್ಸ್‌ಪೆಕ್ಟರನ್ನು ನೇಮಿಸಲು ಹಣ ಇಡಲಾಗಿದೆ ಇನ್ನೊಬ್ಬ ಇನ್ಸ್‌ಪೆಕ್ಟರನ್ನು ತಾತ್ಕಾಲಿಕವಾಗಿ ಇಟ್ಟುಕೊಳ್ಳಲು ಯೋಚಿಸುತ್ತೇನೆಂತ ಹೇಳಿದ್ದೇನೆ ಠರಾವು ಧ್ಯೇಯವಾಗಿರಬೇಕಾದದ್ದನ್ನು ಸೂಚಿಸಿದೆಯೋ ಹೊರತು ಈಗಲೇ ಜಾರಿಗೆ ತರಬೇಕಾದದ್ದಾದ್ದನ್ನು ಸೂಚಿಸಿದೆಯೆಂದು ನಾನು ನಂಬುವದಿಲ್ಲ ಈ ಧ್ಯೇಯವನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಲಾಗುತ್ತೆಂತ ನಂಬಿಗೆ ಕೊಡುತ್ತೇನೆ ಈಗ ನೇಮಿಸುವ ಇನ್ಸ್‌ಪೆಕ್ಟರು ಮತ್ತು ಗೌರವಪ್ರಚಾರಕರೂ ಸಹ ಕೆಲಸ ಪ್ರಾರಂಭದಮೇಲೆ ಅವಶ್ಯವಿದ್ದರೆ ಹೆಚ್ಚಿನ ಆಫೀಸರುಗಳನ್ನು ನೇಮಿಸುವ ವಿಷಯ ಯೋಚಿಸಬಹುದು

ಮೆ॥ ಕೆ ಪಿ ಚೆಣ್ಣಪ್ಪನವರು—ಭರವಸೆ ಸಿಕ್ಕಿದ್ದರಿಂದ ಠರಾವನ್ನು ವಾಪಸುತೆಗೆದುಕೊಳ್ಳುತ್ತೇನೆ

2 ನೇ ಠರಾವು

ಸುಬೇದಾರರುಗಳ ಕೆಲಸವೇ ತೆಗೆದುಬಿಟ್ಟು, ಅವರಬದಲಿಗೆ ಕಲ್ಚರು ಸ್ಪೇಶಲ ಮೇಜಿಸ್ಟ್ರೇಟರುಗಳನ್ನು ನೇಮಿಸಬೇಕು

ಮೆ॥ ಕೆ ಪಿ ಚೆಣ್ಣಪ್ಪನವರು

ಈ ಸಭೆಯ ಮುಂದೆ ಇಂಥಾ ಪ್ರಾಮುಖ್ಯವಾದ ಠರಾವನ್ನು ತರುವಾಗ, ಫ್ರಾನ್ಸ್‌ದೇಶದ ತತ್ವಜ್ಞಾನಿಯ

ಮಹಾತ್ಮ ಗಾಂಧಿಯವರು ಸತ್ಯಾಗ್ರಹಿಗಳಿಗೂ ಖಚೇರಿ ಬಹಿಷ್ಕಾರ ಹಾಕುವರೇ ವಳ್ಳೇದೆಂಬ ಬರೆದಿದ್ದಾರೆ. ಜೈಲಿನ ಅನುಭವಗಳನ್ನೂ ಯಂಗ್ ಇಂಡಿಯಾದಲ್ಲಿ ಬರೆಯುತ್ತಿದ್ದಾರೆ

ಕಲ್ಕತ್ತಾ ಮುನಿಸಿಪಾಲಿಟಿಯ ಅಧ್ಯಕ್ಷರು (ಮೆ|| ಆಗಿ ವೆ|| ಸಿ ಆರ್ ದಾಸರು ಚುನಾಯಿತರಾಗಿ ಇವರ ದೇಹಸ್ಥಿತಿಯು ಚೆನ್ನಾಗಿಲ್ಲ

ಗದೀಶಚಂದ್ರಬೋಸರು ಯ ರೋಪ್ ದೇಶಗಳಲ್ಲಿ ಳು ತಿರುಗುತ್ತಾ ಇದ್ದು ಕಲ್ಕತ್ತಕ್ಕೆ ವಾಪಸು ಬಂದಿರೆ

ಮಧ್ಯಪ್ರಾಂತ್ಯದ ಕೌನ್ಸಿಲಿನಲ್ಲಿ ಸ್ವರಾಜ್ಯಪಕ್ಷದವರು ಸ್ಸ ವಿಜಯ್ ಮಾಡಿದ್ದರಿಂದ ಕೌನ್ಸಿಲನ್ನು ಬರಖಾಸ್ತು ಮಾಡಿ) ಹೊಸ ಚುನಾವಣೆ ಮಾಡುವುದುಳ್ಳ ರಂತಲೂ ಈ ಹೊಸ ಚುನಾವಣೆಯಲ್ಲಿ ಸ್ವರಾಜ್ಯಪದಿಗೆ ಜಯವಾಗದಂತೆ ಬ್ರಾಹ್ಮಣೇತರರಿಗೆ ಸರಕಾರದ ಸಹಾಯಕೊಟ್ಟು ಒಗ್ಗಟ್ಟಿಗೆ ಭಂಗತರುವ ಪ್ರಯತ್ನದಲ್ಲಿ ಇಲೂ ಹಿಂದೂಪತ್ರಿಕೆಯ ಸ್ವಂತವಾರ್ತಾದಾರರು ಬರೆದಿ.

ಂಡರ್ ಪಟ್ಟದಿಂದ ಭೂಮಂಡಲದ ಸುತ್ತು ಆಕಾಶದ ಮೂಲಕ ಒರುವ ಉದ್ದೇಶದಿಂದ ಹೊರಟ ಮೆಕ್ಲಾಡವರು ಇಂಡಿಯಾದಿಂದ ಒರ್ಮಾದೇಶಕ್ಕಾಗಿ ದ್ಯ ರ್ ದಕ್ಷಿಯಾಕ್ಕಾಗಿ ಅಮೇರಿಕಾಕ್ಕೆ ಹಾರಿ ವಾಪ ಇಂಗ್ಲೆಂಡಿಗೆ ಬರುತ್ತಾರೆ ಈಗ ಇವರು ಇಂಡಿಯಾದ ಗಿ ಹಾರುತ್ತಿದ್ದಾರೆ

ರ್ಪುರದಲ್ಲಿ ಶೌಕತ್ ಉಸ್ಮಾನಿ, ಮುಜಫರ್ ಅಹ ಶ್ರೀಪತ್ ಅಮೃತದಾಂಗೆ ಶಿಂಗಾರವೇಲು ಮುಂತಾ ಲೆ ರಷ್ಯಿಯಾದೇಶದ ಬಾಲ್ಶೆವಿಕ್ ಜನರ ಸಂಗಡ ಸು ನಡಿಸಿ ಸರಕಾರದಮೇಲೆ ದಂಡೇಳುವ ಏರ್ಪಾ ಡುತ್ತಿದ್ದರೆಂಬ ತಕ್ಸೀರ್ ಆಪಾದಿಸಲ್ಪಟ್ಟು ಸೆಶನ್ಸ್ ನಲ್ಲಿ ವಿಚಾರ ನಡಿಯುತ್ತಿದೆ

ಂದುಸಂಗೀತಶಾಸ್ತ್ರ ಪ್ರಚಾರಕರಾದ ತಕ್ಕಾಲ ದೊಂ ಯಲ್ಲಿ ವಾಯಂವಾಸಿಗಳಾದ ವಿಷ್ಣುದಿಗಂಬರ ಗಾ ರ್ಯ ಎಂಬವರು ಮದ್ರಾಸಿಗೆ ಬಂದಿದ್ದಾರೆ.

ಖಿಲಭಾರತೀಯ ಆಯುರ್ವೇದ ಸಮ್ಮೇಳನವು ಕೊ ದಲ್ಲಿ ನಡೆಯಿತು. ಕವಿರಾಜ ಜೋಗೇಂದ್ರನಾಥ ಎಂಬವರು ಅಧ್ಯಕ್ಷರಾಗಿದ್ದರು. ಇವರು ಆಯು ಶಾಸ್ತ್ರದ ಮಹತ್ವವನ್ನು ಕೊಂಡಾಡಿ ಪಶ್ಚಿಮಾತ್ಯ ಜೊತೆಗೆ ಆಯುರ್ವೇದವನ್ನು ಬೆರೆಯಲಿಕ್ಕೆ ಬಿಡಬಾರ ಬೇರೆ ಶಾಸ್ತ್ರಗಳಿಂದ ಹೊಸವಿಷಯಗಳನ್ನು ಆಯು ತೆಗೆದುಕೊಳ್ಳಬಹುದೆಂತಲೂ ಮುಂತಾಗಿ ಹೇಳಿ ಅವರ ಭಾಷಣವು ದೇಶೀಯರೆಲ್ಲರಿಂದಲೂ ಓದ ಗಿದೆ.

ಜಾಬ್ ದೇಶದಲ್ಲಿ ಪ್ಲೇಗ್ ಜಾಡ್ಯದಿಂದ ಬಹಳ ವಾಗುತ್ತಿದೆ ಎರಡುವಾರಗಳೊಳಗೆ 1700 ಸಾ

ಇಬ್ರಾಹಿಂಜೀ ಮತ್ತು ಲಕ್ಷ್ಮಿ ಎಂಬವರು ಮು ರ ವಿದ್ಯಾಸಹಾಯಕ್ಕಾಗಿ ಬೊಂಬಾಯಿ ಯೂನಿವ 10 ಲಕ್ಷ ರೂಪಾಯಿ ಕೊಟ್ಟಿದ್ದಾರೆ.

ವಿದೇಶ.

ಇಂಗ್ಲೆಂಡಿನ ವೆಂಬ್ಲಿ ಎಂಬಲ್ಲಿ ನಡೆಯುವ ಸಾಮ್ರಾಜ್ಯ ನವು ತಾರೀಖು 23ರಲ್ಲಿ ಚಕ್ರವರ್ತಿಯವರಿಂದ ತೆರೆ ತು ಯುವರಾಜರು ಪ್ರದರ್ಶನಕಮಿಟಿಯ ಪ್ರೆಸಿ ಚಕ್ರವರ್ತಿಯವರನ್ನು ಪ್ರದರ್ಶನವನ್ನು ತೆರೆಯ ಕೊಳ್ಳುವಾಗ ಹೇಳಿದ್ದೇನೆಂದರೆ “ ಜನಾಂಗಗಳ ವದ ಸಮುದಾಯದ ನಕ್ಷೆಯನ್ನು ಈ ಮೂಲಕ ವುದಾಗಿದೆ ನಾಗರಿಕತೆಯು ಪ್ರಪಂಚದಲ್ಲಿ ಶಾಂ ಸ್ಥಾಪಿಸಲು ದೃಢಮನಸ್ಸು ಮಾಡಿದೆಯೆಂಬದ ಸುತ್ತದೆ ” ಚಕ್ರವರ್ತಿಯ ಭಾಷಣದಲ್ಲಿ “ ವಿಧ ಜನಾಂಗಗಳು ಜಾತಿಗಳು ಮನಃಪೂರ್ತಿಯಾಗಿ ಮೂ ದಿಂದಲೂ ಅನ್ಯೋನ್ಯ ಸಹನಾಶಕ್ತಿಯಿಂದ ಸಹ ತಮ್ಮ ರಾಷ್ಟ್ರೀಯ ಕಲಾಕೌಶಲಗಳನ್ನು ಒಂ ತಕ್ಕೆ ಶೇಖರಿಸಿದ್ದನ್ನು ಈ ಪ್ರದರ್ಶನವು ಸೂಚಿಸು ವಂತಾಗಿ ಹೇಳಿದರು. ಇವರು ತೆರೆದರೆಂಬ ವರ್ತ ಪ್ರಪಂಚಕ್ಕೆಲ್ಲಾ 80 ಸೆಕೆಂಡ್‍ಗಳೊಳಗೆ ತಿಳಿಸಲಾ ಇವರ ಭಾಷಣವು ಇಂಗ್ಲೆಂಡಿನಲ್ಲೆಲ್ಲಾ ವಿಕಶಾ ಳುವ ಏರ್ಪಾಡು ಮಾಡಲಾಗಿತ್ತು.

ಸ್ಕಾಟ್ಲ್ಯಾಂಡಿನಲ್ಲಿ ಎರಡು ರೈಲ್‍ವೇಗಾಡಿಗಳು ಢು ಯಾಗಿ ಅನೇಕ ಪ್ರಾಣನಷ್ಟವಾಯಿತು.

ಸಾಮ್ರಾಜ್ಯಪ್ರದರ್ಶನದಲ್ಲಿ ಮಂತ್ರಿಗಳು ಹಾಜರಿರಲಿಲ್ಲ. ಜರಾಗಲು ಚಕ್ರವರ್ತಿಯವರ ಅನುಮತಿ ಪಡೆದಿ

ದಕ್ಷಿಣ ಆಫ್ರಿಕಾದಲ್ಲಿ ಬೋಯರರ ಸೈನ್ಯಾಧಿಪತಿ ಮೇರಿಟ್ಸ್ ಎಂಬವರು 1914 ರಲ್ಲಿ ದಂಗೆಬ್ಬಿಸಿ ಅವರ ಮೇಲೆ ವಿಚಾರನಡೆದು ಈಗ 3 ವರ್ಷ ಸ ಗೆ ಗುರಿಯಾಗಿರುವರು.

ಜರ್ಮನಿಯಲ್ಲಿ ಕೂಲಿಕಾರರ ಸಂಗಡದವರಿಗೂ ಬಂಡ ಯವರಿಗೂ ಇದ್ದ ಒಗ್ಗಟ್ಟು ಸಡಿಲವಾಗುತ್ತಿದೆ.

ಲಾರ್ಡ್ ಕರ್ಜನರ ಅಳಿಯ ಮೆ|| ಮಾಸ್ಲಿ ಎಂಬವರು ಕೂಲಿಕಾರರ ಪಾರ್ಟಿಗೆ ಸೇರಿದ್ದಾರೆ

ಸಾಮ್ರಾಜ್ಯ ಪ್ರದರ್ಶನದಲ್ಲಿ ಪ್ರದರ್ಶನಕ್ಕೆ ಇಟ್ಟಿರುವ ಸಾಮಾನುಗಳ ಕ್ರಯವೇ 1,20,00,000 ಪೌಂಡು ಬೆಲೆ ಬಾಳಬಹುದಂತೆ

ಕೆನ್ಯಾ ಸರಕಾರದವರು ಹಿಂದೀಯರ ಮೇಲೆ ಹೊರಿಸಿರುವ ತಲೆಕರಿಗೆಯು ಅನ್ಯಾಯವಾದ್ದರಿಂದ ಹಿಂದೀ ಮುಖ್ಯಸ್ಥರು ಅದನ್ನು ಕೊಡುವದಿಲ್ಲವೆಂತ ನಿರಾಕರಿಸಿದ್ದಕ್ಕೆ ಕ್ರಿಮಿನಲ್ ಶಿಕ್ಷೆಗೆ ಗುರಿಪಡಿಸಲ್ಪಟ್ಟಿರುತ್ತಾರೆ.

ಸ್ವೆಯಿಜ್ ದೇಶದ ಬೊಕ್ಕಸ ತುಂಬಿದ ಹಡಗವು ಸಮುದ್ರದಲ್ಲಿ ಮುಳುಗಿಹೋದದ್ದನ್ನು ಮೇಲಕ್ಕೆ ಎತ್ತಲಿಕ್ಕೆ ವೈಜ್ಞಾನಿಕ ಕ್ರಮದಿಂದ ಸಹಾಯ ಮಾಡುವವರಿಗೆ ಪಾಲುಕೊಡಬಹುದೆಂತ ಪ್ರಕಟಿಸಿದ್ದಕ್ಕೆ ವಿ.ಸ. ಸೆಬಿಂಗರ್ ಎಂಬ ಈ ಕೆಲಸದ ಮುಖ್ಯಸ್ಥರಿಗೆ 64 ಜನರಿಂದ ಅರ್ಜಿಗಳು ಬಂದಿವೆ

ಮಿಸೆಸ್ ಸರೋಜಿನಿ ನಾಯುಡೂರವರು ದಕ್ಷಿಣ ಆಫ್ರಿಕಾದಿಂದ ಆಶಾಭಂಗರಾಗಿ ಹಿಂತಿರುಗಿದ್ದಾರೆ. ಹಿಂದೀಯರ ಸ್ಥಿತಿಯನ್ನು ಉತ್ತಮಸ್ಥಿತಿಗೆ ತರಬಹುದೆಂಬದೇ ಆಶೆಯಾಗಿದೆ

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. [ಎಡಿಟರ್]

ಬೆಳ್ಯಪ್ಪ ಮೆಮೋರಿಯಲ್ ಫಂಡ್.

ಸ್ವರ್ಗಸ್ಥರಾದ ಮೆ| ಕಂಬೀರಂಡ| ಬೆಳ್ಯಪ್ಪನವರ ಮೆಮೋರಿಯಲ್ ಫಂಡಿಗಾಗಿ ಚಂದಾವಸೂಲು ಮಾಡಿರುವುದು ಎಲ್ಲರಿಗೂ ತಿಳಿದಿರಬಹುದು. ಕಮಿಟಿಮೆಂಬರಾಗಿದ್ದ ಈಗ ಬೆಂಗಳೂರಿನಲ್ಲಿರುವ ಮೆ|| ಪಟ್ಟಡ ಪೂವಯ್ಯನವರು ವಸೂಲುಮಾಡಿದ ಬಾಬ್ತು ೩೭-೪-೦ ನ್ನು ನನಗೆ ಕೊಟ್ಟಿರುತ್ತಾರೆ ಈ ಫಂಡಿಗೆ ಮೆ|| ಕೋಟೆರ ಉತ್ತಯ್ಯನವರು ಕಾರ್ಯದರ್ಶಿಯಾಗಿದ್ದರು ಇವರು ಶಿವಾಧೀನವಾಗುವುದಕ್ಕೆ ಸ್ವಲ್ಪ ಮೊದಲೇ ನಾನು ಬರೆದುಕೊಂಡದರಮೇಲೆ ಅವರ ಹತ್ತರ ಇಪ್ಪತ್ತೈದು ರೂಪಾಯಿ ಇದೆ ಎಂದು ತಿಳಿಸಿದರು. ಈಗ ಅವರ ಇನ್ಶೂರೆನ್ಸ್ ಹಣವು ಇನ್ನೂ ಸಿಕ್ಕದೆ ಇರುವುದರಿಂದ ಆ ಹಣವು ನನಗೆ ದೊರಕಿಲ್ಲ ಹಣವು ತಲಪಿದೊಡನೆಯೇ ಆ ಕಮಿಟಿಯು ಒಂದು ಸಭೆ ಕೂಡಿ ಎಷ್ಟು ಹಣ ವಸೂಲಾಗಿದೆ ಮತ್ತು ಆ ಹಣವನ್ನು ಏನುಮಾಡುವುದು ಎಂಬ ನಿಷ್ಕರ್ಷೆ ಮಾಡಿ ದೇಶದವರಿಗೆ ತಿಳಿಸುತ್ತೇನೆ. ಮೆ| ಪೂವಯ್ಯನವರು ಮತ್ತು ಮೆ| ಉತ್ತಯ್ಯನವರಲ್ಲದೆ ಬೇರೆ ಯಾರಾದರೂ ಹಣ ಜಮಾಯಿಸಿದ್ದ ಪಕ್ಷಕ್ಕೆ ದಯವಿಟ್ಟು ನನಗೆ ತಿಳಿಸಿರಿ.

ಬಿ. ಎಸ್. ಕುಶಾಲಪ್ಪ,
ಕಮಿಟಿಮೆಂಬರು.

ಅಯ್ಯಾ,

ಊರಿಂದ ಊರಿಗೆ ಮರವಾಗಲೀ ಸಾದೆಯಾಗಲೀ ಸಾಗಿಸಬೇಕಾದರೆ ಪಾಸುಬಗ್ಗೆ ಕೊಡಗು ಕಮಿಷನರು ಸಾಹೇಬರಿಗೆನೇ ಅರ್ಜಿಬರೆದು ಪಾಸು ಹೊಂದಿಕೊಳ್ಳಬೇಕೆಂಬ ನಿರ್ಭಂದವು ಇರಿಕ ಕೆಲಸಗಳಲ್ಲಿ ಅನೇಕ ತೊಂದರೆಗಳನ್ನುಂಟು ಮಾಡುತ್ತದೆಂಬದನ್ನು ಪ್ರತ್ಯೇಕವಾಗಿ ಹೇಳಬೇಕಾದ್ದಿಲ್ಲ. ನಮಗೆಗಾಬರದಲ್ಲಿ ಆಕಸ್ಮಿತವಾಗಿ, ಪಟ್ಟಣದಲ್ಲಿರುವ ಒಂದು ಮನೆಯ ಗೋಡೆಯು ಬಿದ್ದಾಗ ಮನೆಯ ಯಜಮಾನನ್ನು ಹೊಸ ನ ಗೋಡೆ ಬೀಳದಂತಾಗಲೀ ಅಥವಾ ಮನೆಯ ಮೇಲ್ಮನೆ ಬೀಳದಂತಾಗಲೀ ಪಡಸೆ ಕಂಬಗಳನ್ನು ಕೊಡಬೇಕಾಗಿ ಒಂದು ಹಳ್ಳಿಗಳಿಂದ ಮರವನ್ನು ಸಾಗಿಸಲು ಕಮಿಷನರು ದೊರೆಗೆ ಪಾಸು ಬಗ್ಗೆ ಅರ್ಜಿಬರೆದು ಕಳ ಇಲಾಖೆದಾರರಿಗೆ ತನಿಖೆಗೆ ಬಂದು ವಿಚಾರವಾಗಿ ಹೋಗಿ ಪಾಸು ಪುನಃ ಬಂದು ತಲಪಬೇಕಾದರೆ ದಿನವೆಷ್ಟು ಆ ಬಹುದು ಅಷ್ಟರವರೆಗೆ ಆ ಮನೆಯು ಅವಸ್ಥೆಯೇನಾಗಬಹುದು ? ಪಟ್ಟಣವಲ್ಲಾಗಲೀ ಹಳ್ಳಿಯಲ್ಲಾಗಲೀ ಒಂದು ಹೊಸ ಮನೆಯನ್ನು ಕಟ್ಟಬೇಕಾಗಿ ಒಂದು ಪೂರೈಸಲು ಐದೊಂದು ತುಂಡು ಮರಗಳು ಅವಶ್ಯವೆಂದು ಕಂಡುಬಂದರೆ ಮೇಲೆ ಹೇಳಿದಂತೆ ಪಾಸುಬಗ್ಗೆ ಅರ್ಜಿಬರೆದುಕೊಂಡು ಕೆಲಸಮಾಡುವ ಬಡಗಿ ಗರಗಸದವರನ್ನೂ ಆಳುಗಳನ್ನೂ ಸಂಬಳ ಅನ್ನಕೊಟ್ಟು ವ್ಯರ್ಥ ಕಡಿಯಬೇಕಾಗುವದರಿಂದಲೂ ಇನ್ನೂ ಅನೇಕ ವಿಧವಾದ ತೊಂದ್ರೆಗಳು ಉಂಟಾಗುವದರಿಂದ ಘನಸರಕಾರದವರು ಪಾಸುಕೊಡುವ ಅಧಿಕಾರವನ್ನು ಸ್ಥಳಿಯ ರೆವಿನ್ಯೂ ಇಲಾಖೆಯವರಿಗೆ ಕೊಟ್ಟರೆ ರೈತರ ಕಷ್ಟವು ನಿವಾರಣೆಯಾಗುವದಲ್ಲದೆ ಅನಾವಶ್ಯವಾದ ತೊಂದರೆಯು ಅಧಿಕಾರಿಗಳಿಗೆ ತಪ್ಪುತ್ತದೆಂಬುವದರಲ್ಲಿ ಯಾವ ಸಂದೇಹವೂ ಇರುವದಿಲ್ಲ.

ಐ. ಪಿ. ಎಂ.

ಅಹಮ್ಮ ಸಂಪಾದಕರೆ,

ತಮ್ಮ ತಾರೀಖು ೨೯-೩-೧೯೨೪ ರ ಕೊಡಗು ಸಂಚಿಕೆಯಲ್ಲಿ ದೇಶದಲ್ಲೆಲ್ಲಾ ಕೋವೆಕಾಯಿಲೆಯು ಬಹಳ ಪ್ರಬಲವಾಗಿರುವುದಾಗಿಯೂ ಮತ್ತು ಅದಕ್ಕೆ ಅನೇಕ ಜನರು ತುತ್ತಾಗುತ್ತಲಿರುವುದಾಗಿಯೂ, ಮಡಿಕೇರಿ ಆಸ್ಪತ್ರೆಯಲ್ಲಿ ದಿನಂ ಪ್ರತಿ ಒಂದೆರಡು ಸಾವುಗಳುಂಟಾಗುತ್ತಲಿವೆಯಾಗಿಯೂ ಪ್ರಕಟವಾದ ಲೇಖನವನ್ನು ಅದಕ್ಕೆ ಕೊಡಗು ಸಿವಿಲ್ ಸರ್ಜನ್ ಸಾಹೇಬರು ಜವಾಬಾಗಿ ಬರೆದು ಕಳುಹಿಸಿದ ಪತ್ರವನ್ನೂ ಸಹ ತಾರೀಖು ೧೧-೪-೨೪ ರ ತಮ್ಮ ಸಂಚಿಕೆಯಲ್ಲಿ ಓದಿನೋಡಿಕೊಂಡೆನು

೧೯೧೮ ನೇ ಇಸವಿಯಲ್ಲಿ ನಮ್ಮ ಇಂಡಿಯಾ ದೇಶದ ಅನೇಕ ಭಾಗಗಳಲ್ಲಿ ಹುಟ್ಟಿದ (Influenza) ಎಂಬ ಮಹಾಮಾರಿಯಾದ ಚಳಿ ಜ್ವರವು ಉಗ್ರರೂಪದಿಂದ ಪ್ರಬಲಿಸಿ ಲಕ್ಷಾಂತರ ಪ್ರಜೆಗಳನ್ನು ತಿಂದು ತೇಗು ಹಾಕಿದ ಆ ಜ್ವರವು ನಮ್ಮ ಈ ಪುಟ್ಟರಾಜ್ಯವಾದ ಕೊಡಗಿನಲ್ಲಿಯೂ ಅನೇಕ ಪ್ರಜೆಗಳನ್ನು ಆಹುತಿ ತಗೆದುಕೊಂಡು ಬಿಟ್ಟಿದ್ದನ್ನು ದೇಶದವರೆಲ್ಲರೂ ಮರೆತಿರಲಾರರೆಂದು ನಂಬುತ್ತೇನೆ ಆ ಕಾಯಿಲೆ ತಗಲಿದವರ ಪೈಕಿ ಸಾಯದುಳಿದ ಜನಗಳಿಗೆ ದೇಹಶಕ್ತಿಯು ಬಹು ಮಟ್ಟಿಗೆ ಕುಂದಿ ಹೋಗಿ ಆಗಿನ ಕೋವೆ ಕಾಯಿಲೆಯು ಈವತ್ತಿನವರೆಗೆ ಶ್ವಾಸಕೋಶವನ್ನು ಕುಂದಿಸಿ ನಿಶಕ್ತರಾಗಿ ಮಾಡಿಬಿಟ್ಟಿರುವ ಕಾರಣದಿಂದ ಮೇಲ್ಕಂಡ ಚಳಿ ಜ್ವರವು ಪುನಃ ಈ ದೇಶದಲ್ಲಿ ಕಳೆದ ಡಿಸೆಂಬರ್ ತಿಂಗಳಿಂದ ಸಾಧಾರಣ ರೂಪದಲ್ಲಿ ಪ್ರಾರಂಭವಾಗಿದೆ.

ನಮ್ಮ ಈ ಸೋಮವಾರಪೇಟೆಯ ಒಳನಾಡುಗಳ ಹಳ್ಳಿಗಳಲ್ಲಿಯೂ, ಕಾಫಿತೋಟಗಳಲ್ಲಿಯೂ ಸಹ ಪ್ರಾರಂಭಿಸಿ ಅದರಿಂದ ಅನೇಕ ಜನರು ನರಳುವುದಾಗಿದೆ. ನಮ್ಮ ಸೋಮವಾರ ಪೇಟೆಯ ಆಸ್ಪತ್ರೆಯಲ್ಲಿ ಕಳೆದ ಫೆಬ್ರವರಿ ಮಾರ್ಚ್ ತಿಂಗಳುಗಳಲ್ಲಿ ಕೋವೆಕಾಯಿಲೆಯಿಂದ ಮೃತಪಟ್ಟ ಜನರು ಐದು. ಈ ಐದರಲ್ಲಿ ನಾಲ್ಕು ಜನರು ಆಸ್ಪತ್ರೆಗೆ ತಂದುಹಾಕಿದ ಕೆಲವು ತಾಸುಗಳಲ್ಲಿಯೇ ಮೃತಪಟ್ಟರು. ಇವರ ಪೈಕಿ ಮೂರು ಜನರು ಸೇಂದಿ ಸಾರಾಯಿಗಳನ್ನು ಕುಡಿದು ದಾರಿಯಲ್ಲಿ ಪ್ರಜ್ಞೆಯಿಲ್ಲದೆ ಬಿದ್ದು ಶೀತಗಾಳಿಗೆ ಮೈಕೊಟ್ಟು ಕೋವೆ ಕಾಯಿಲೆಯನ್ನು ಹೊಂದಿ ಆಸ್ಪತ್ರೆಗೆ ಬಂದವರಾಗಿರುತ್ತಾರೆ. ಈ ಕಾಯಿಲೆಗೆ ಸಿಕ್ಕಿದವರು ಪ್ರಾರಂಭದಲ್ಲಿಯೇ ಆಸ್ಪತ್ರೆಗೆ ಸೇರಿ ತಕ್ಕ ಉಪಚಾರ ಚಿಕಿತ್ಸೆ ವಗೈರೆಗಳನ್ನು ಹೊಂದಿದಲ್ಲಿ ಮರಣಕ್ಕೆ ಗುರಿಯಾಗುವುದು ಬಹಳ ಕಡಿಮೆ. ದೇಶದಲ್ಲಿ ಹೆಚ್ಚಿನ ಜನರು ಕೋವೆ ಕಾಯಿಲೆಗೆ ಸಿಕ್ಕಿ ಅದು ಬಹಳವಾಗಿ ಪ್ರಬಲವಾದಾಗ ಸ್ಥಳಪಲ್ಲಟಮಾಡುವುದು ಯಾ ಮೈಲಿಗೆಬಂಡಿಗಳಲ್ಲಿ ಸಾಗಿಸುವ ಮತ್ತು ಕುಲುಕಾಡಿಸುವ ಗಾಡಿ ವಗೈರೆಗಳಲ್ಲಿ ಆಸ್ಪತ್ರೆಗೆ ಬರುವುದರಿಂದ ಆ ಕಾಯಿಲೆಯು ಅತಿ ಉಲ್ಬಣ ಸ್ಥಿತಿಗೆ ಬಂದು ಮರಣಕ್ಕೆ ಗುರಿಯಾಗುವರು. ಆದುದರಿಂದ ಪ್ರಾರಂಭದಲ್ಲಿರುವ ಈ ಕೋವೆ ಕಾಯಿಲೆಯನ್ನು ಉಗ್ರರೂಪಕ್ಕೆ ಬೆಳೆಯಬಿಡದೆ ತಕ್ಕ ವಿಧಾನದಿಂದ ಔಷಧೋಪಚಾರಗಳನ್ನು ಹೊಂದಿ ಹೆಚ್ಚು ಮರಣಕ್ಕೆ ಅವಕಾಶವಿಲ್ಲದಂತೆ ಮಾಡಿಕೊಳ್ಳಲು ಪ್ರಯತ್ನಿಸಬೇಕಾಗಿ ದೇಶದ ಜನರಲ್ಲಿ ನನ್ನ ಕೋರಿಕೆ ಜನಗಳ ಅಕ್ರಮಗಳಿಂದಲೂ ಅಜಾಗರೂಕತೆಯಿಂದಲೂ ಉಂಟಾಗುತ್ತಲಿರುವ ಕೋವೆಕಾಯಿಲೆಯ ಮರಣಗಳಿಗೆ ಆಸ್ಪತ್ರೆಯವರು ಜವಾಬುದಾರರೆಂದು ಹೇಳುವುದು ನ್ಯಾಯವಾಗಿರುವುದಿಲ್ಲ.

ಸಿ. ಬಿ. ಅಚ್ಚಯ್ಯ.

ಸ್ಟಾಂಪು ಡ್ಯೂಟಿ ಹ್ಯಾಗೆ ?

ಸ್ಟ್ಯಾಂಪು ಡ್ಯೂಟಿ ಎಂಬುದು ಸರ್ವಸಾಧಾರಣ ಇಡೀ ಇಂಡಿಯಾ ದೇಶಕ್ಕೇನೇ ಸಂಬಂಧಿಸುವ ಸಂಗತಿಯಾಗಿದೆ ಈ ಕಾನೂನು ಸರ್ವರಿಗೂ ವ್ಯಾಪಕವಾದ್ದಾಗಿಯೂ ಹಾಗೆ ವ್ಯಾಗಿಸಿಕೊಂಡು ಬಂದದ್ದಾಗಿಯೂ ಇದೆ ಮುಖ್ಯವಾಗಿ ಈ ನಮ್ಮ ಜಿಲ್ಲೆಯಲ್ಲಿ ಪರಾಧೀನಮಾಡತಕ್ಕ ಲಿಖಿತಗಳನ್ನೂ ಹೆಚ್ಚಿನ ಅವಧಿಯಿಂದ ಗೇಣಿಗೆಕೊಡತಕ್ಕವುಗಳು ಸ್ಥಿರ ಸಂಬಂಧಪಟ್ಟವುಗಳು ಆದವುದ ಸ್ಟ್ಯಾಂಪು ಮುಂತಾದವುಗಳನ್ನು ಮಾತ್ರ ಕಾರಣಾಂತರದಿಂದ ಬರೆಯುವದು ರಿಜಿಸ್ಟ್ರು ಮಾಡುವದು ಹೆಚ್ಚಾಗಿ ನಡೆಸಿಕೊಂಡು ಬರುವದೇ ವಿನಹ ಬೇರೆ ಜಿಲ್ಲೆಗಳ ಹಾಗೆ ಸರ್ವವನ್ನೂ ಸ್ಟ್ಯಾಂಪು ಪೇಪರಿನಲ್ಲಿ ಬರೆಯುವದಾಗಲೀ, ಹಾಗೆಯೇ ರಿಜಿಸ್ಟ್ರು ಮಾಡುವುದಾಗಲೀ ಹೀಗೆಯೇ ಮಾಡಬೇಕೆಂಬ ನಿರ್ಬಂಧವಾಗಲಿ ಇಲ್ಲಿ ಹೆಚ್ಚಾಗಿ ನಡೆಸಿಕೊಂಡು ಬಂದಿರುವದು ಕಡಿಮೆ. ಸ್ಟ್ಯಾಂಪು ಕಾಗದವು ಕ್ರಯದ ಹಕ್ಕಿಗೆ ಪೂರ್ಣವಾಗಿ ಒಪ್ಪಿಕೊಳ್ಳದ್ದಾಗಿ

ಯೂ ಅವು ಸಂಬಂಧಗಳಿಗೆ ಅರ್ಥವೂನವಾಗಿಯೂ ಗೇಣಿಮುಂತಾದವುಗಳಿಗೆ ಕ್ರಯಪತ್ರದ ಪರೀನ್ನಾಗ ನು ಸಾರ ಎಣಿಸಲ್ಪಡುತ್ತೆ ಗೇಣಿಯಲ್ಲಿ ವಾಯಿದೆ ಗೇಣಿ ಯೆಂದೂ ಮೂಲಗೇಣಿಯೆಂದೂ ಚಾಲ್ತಿ ಗೇಣಿಯೆಂದಾ ಗಿ ಮೂರುತರವಾಗಿರುತ್ತೆ ಇವುಗಳಲ್ಲಿ ಮೂಲಗೇಣಿಯು ಅಸ್ತಿಯ ಕ್ರಯವನ್ನೊಳಗೊಂಡೂ, ಚಾಲ್ತಿಯು ವರ್ಷದ ಗೇಣಿಯು ಒಳಗೆ ತಕ್ಕದ್ದಾಗೀಯೂ ಅವಧಿಗೇಣಿಯು ವರ್ಷ ಹತ್ತು ಹತ್ತರನ್ನನುಸರಿಸಿಯೂ ಬೆಲೆ ಏರ್ಪಡಿಸಲ್ಪಡುತ್ತೆ ಇಂಥಾ ಸಂದರ್ಭದಲ್ಲಿ ಚಾಪಾಕಾಗದಗಳು ಬರಿಸಿಕೊಂಡ ವಸ್ತು ಯಾ, ಅದರಲ್ಲಿ ನಮೂದಾದ ಮೊತ್ತ ಪರಿಮಾಣಕ್ಕೆ ಕಮ್ಮಿನದಾದರೆ ಇಂಥಾವುಗಳನ್ನು ತಕ್ಕ ಸ್ಟಾಂಪು ಪೇಪರು ಸೇರಿಸದ ವಿನಹ ರಿಜಿಸ್ಟರುಮಾಡುವುದಿಲ್ಲ ಒಂದು ವೇಳೆ ಹಾಗೆ ಜತ್ತಾಯದಿಂದ ಹಾಜರುಪಡಿಸಿದರೆ ಕಮ್ಮಿಯುದ್ದಕ್ಕೆ ತಕ್ಕ ಸ್ಟಾಂಪು ಜುಲ್ಮಾನೆಹೊರಿಸಿ ರಿಜಿಸ್ಟರುಮಾಡುತ್ತಾರೆ ಸ್ಟಾಂಪು ಕಾಗದ ಕಮ್ಮಿಯುಳ್ಳ ಒಂದು ದಸ್ತಾವೇಜನ್ನು ಸಬ್ ರಿಜಿಸ್ಟ್ರಾರವರು ಒಂದು ವೇಳೆ ಆಲೋಚನೆ ಪರಾಮೋಷೆಯಿಂದ ಹಾಜರುಪಡಿಸಿಕೊಂಡು ರಿಜಿಸ್ಟ್ರಿಗೆ ದಾಖಲುಮಾಡಿದನಂತರ ಅಂಥಾ ದಸ್ತಾವೇಜಿಯು ತಕ್ಕ ಬೆಲೆಗೆ ಕಮ್ಮಿಯುಳ್ಳ ಬಾಪಿನಾದದೆಂದು ಕಂಡುಬಂದರೆ, ಹಾಗೆ ಕಮ್ಮಿಯಾದ ಮೊಬಲಗನ್ನು ರಿಜಿಸ್ಟ್ರೇಅಂಗೀಕರಿಸಲ್ಪಟ್ಟವನೇ ತನ್ನ ಕೈಯಿಂದ ಭರ್ತಿಮಾಡಬೇಕಲ್ಲದೆ ದಸ್ತಾವೇಜಿಗಳನ್ನು ವಾಪ್ಸು ಮಾಡುವರೆ, ಯಾ, ರದ್ದು ಮಾಡುವರೆ, ಯಾ, ಹಾಜರುಮಾಡಲ್ಪಟ್ಟವನಿಂದ ಹಾಗೆ ಹೆಚ್ಚಿಗೆ ಮೌಲ್ಯನಮೂಲುಮಾಡುವದೆ ಹಕ್ಕಿರುವುದೆಂಬುದು ಈವರೇಗೂ ನಡೆದುಬಂದದ್ದು ಬಹುವಿರಳ (ಹಕ್ಕಿರುವುದಿಲ್ಲ) ಅಂತೂ ದಸ್ತಾವೇಜನಲ್ಲಿ ನಮೂದಾದ ಮೊಬಲಗಿಗೆ ಸರಿಯಾಗದ ಕಮ್ಮಿ ಸ್ಟಾಂಪು ಪೇಪರಿನಲ್ಲಿ ಬರೆದ ಯಾವ ದಸ್ತಾವೇಜು ಪರಾಮೋಷೆಯಿಂದ ಯಾ ಇನ್ಯಾವ ವಿಧದ ಕಾರಣಗಳಿಂದ ರಿಜಿಸ್ಟ್ರಾರವರು ಅಂಗೀಕರಿಸಿ ರಿಜಿಸ್ಟ್ರುಮಾಡಿ ಬಂದೆರಡು ವರ್ಷ ಕಳೆದ ನಂತರ ಆ ದಸ್ತಾವೇಜು ಯಾವದಾದರೊಂದು ಕಾರಣಾಂತರ ಸಿವಿಲ್ ಕೋರ್ಟಿಗೆ ಹಾಜರುಮಾಡಲ್ಪಟ್ಟು ದಸ್ತಾವೇಜಿನ ಒಪ್ಪಂದಕ್ಕೆ ವಿರೋಧ ಹೇಳುವ ಕಕ್ಷಿಗಾರನು ಈ ದಸ್ತಾವೇಜು ನ್ಯಾಯವಾದ ಸ್ಟಾಂಪು ಕಾಗದದಿಂದ ಬರೆಯಲ್ಪಟ್ಟದ್ದಲ್ಲವೆಂದು ಮುಂತಾಗಿ ವಾದಿಸಿದರೆ, ಆದಸ್ತಾವೇಜು ಊರ್ಜಿತವಾಗಿ ನಿಲ್ಲುವುದೇ ಎಂಬುದೇ ನಮ್ಮ ಈ ಲೇಖನದ ಪ್ರಶ್ನೆಯಾಗಿದೆ ನಿಲ್ಲದಿದ್ದರೆ ಇದಕ್ಕೆ ಯಾರು ಹೊಣೆಯು? ಬರಿಸಿಕೊಂಡವನ ಗತಿಯೇನು? ಒಂದುವೇಳೆ ದಸ್ತಾವೇಜು ಬರೆಯುವ ಸಮಯದಲ್ಲಿ ಸ್ವತ್ತಿನ ಅಂದಾಜು ಕ್ರಯ ಯಾ, ಸ್ಟಾಂಪುಪೇಪರಿಗೆ ತಕ್ಕುದಾದ ಬೆಲೆ ಎಣಿಸುವ ಸಮಯ ಸ್ಟಾಂಪು ಕಾಗದಕ್ಕೆ ಹೆಚ್ಚಿನ ಹಣ ಕೊಡಬೇಕಾದೀತೆಂಬ ದುರಾಶೆಯಿಂದ ಕಮ್ಮಿ ಮೊಬಲಗು ನಿರ್ಣಯ ಮಾಡಿ ಹಾಗೆ ಕಮ್ಮಿ ಮೌಲ್ಯದ ಕಾಗದದಿಂದ ಬರೆಯಲ್ಪಟ್ಟ ಅಂಥಾವುಗಳ ಸಿಂಧು ಯಾ, ಅಸಿಂಧುತ್ವಗಳಲ್ಲಿ ಉಭಯ ಕಕ್ಷಿಗಾರರೇ ಜವಾಬ್ದಾರರಾಗಿರುತ್ತಾರೆ ಅದು ವಿನಹ ಯಾವ ಚಾಪಾಕಾಗದದಲ್ಲಿ ಒಂದು ಮಿತಿಯಟ್ಟ ಬೆಲೆ ಏರ್ಪಡಿಸಿ ಹಾಗೆ ಬರೆದು ಆ ಚಾಪಾಕಾಗದವು ಹಾಗೆ ಏರ್ಪಡಿಸಿದ ಬೆಲೆಯ ಯೋಗ್ಯತೆಗೆ ಕಮ್ಮಿಯುಳ್ಳದ್ದಾಗಿ ಅಂಥಾವುಗಳನ್ನು ರಿಜಿಸ್ಟ್ರಿಗೆ ದಾಖಲುಮಾಡಲ್ಪಟ್ಟು ಅಲ್ಲಿಯೂ ಯಾವ ವಿಲೆವಾರಿ ಇಲ್ಲದೆ ರಿಜಿಸ್ಟ್ರಾರವರಿಂದಲೂ ಅಂಗೀಕರಿಸಿ ರಿಜಿಸ್ಟ್ರುಮಾಡಲ್ಪಟ್ಟರೆ ಅಂಥಾವುಗಳ ಊರ್ಜಿತ, ಯಾ ಅನೂರ್ಜಿತಗಳಲ್ಲಿ ಯಾರು ಜವಾಬ್ದಾರರೆಂದು ತಿಳಿಯುವುದೇ ನಮ್ಮ ಉದ್ದೇಶವು ಇ ಥಾವುಗಳನ್ನು ಸಿವಿಲ್ ಕೋರ್ಟಿನವರು ಊರ್ಜಿತಪಡಿಸದೆ ಒಂದು ವೇಳೆ ಹಾಗೆ ಊರ್ಜಿತಪಡಿಸಬೇಕಾದರೆ ತಕ್ಕ ಜುಲುಮಾನೆತರಬೇಕೆಂದರೆ ದಾಖಲೆಗೂ ತಕ್ಕವರು ಯಾರಾಗಿರಬಹುದು? ಉದಾಹರಣೆಗಾಗಿ ಒಬ್ಬನು ೧ ರೂಪಾಯಿಗೇಣಿನ್ನು ೯೯ ವರ್ಷದ ಅವಧಿಯಿಂದ ಸರಾಸರಿ ಗೇಣಿಮೊನ್ನೂರು ರೂಪಾಯಿ ನಿರ್ಣಯಿಸಿ ದಸ್ತಾವೇಜಿಗೆ ಮನ್ನೂರ ಮಿತಿ ಇಟ್ಟು ಅಷ್ಟೆಯ ಕಾಗದದಲ್ಲಿ ಬರೆದು ರಿಜಿಸ್ಟ್ರಿ ಗಿರುತ್ತದೆ ಒಂದು ವೇಳೆ ಇಂಥಾವು ಸಿವಿಲ್ ಕೋರ್ಟಿಗೆ ಹೋದರೆ ದಸ್ತಾವೇಜಿ ಒಪ್ಪಂದ ವಿರೋಧವುಳ್ಳ ಕಕ್ಷಿಗಾರನು ತಾ ದಸ್ತಾವೇಜು ನ್ಯಾಯವಾದ ಸ್ಟಾಂಪು ಡ್ಯೂಟಿಯುಳ್ಳದಲ್ಲವೆಂದೂ, ಇದು ಊರ್ಜಿತವಾಗ ಕೂಡದೆಂಬದಾಗಿ ವಾದಿಸಿದರೆ ಇಂಥಾ ದಸ್ತಾವೇಜುಗಳಿಗೆ ಜವಾಬ್ದಾರರು ಯಾರಾಗುತ್ತಾರೋ ದೇವರೇ ಬಲ್ಲ! ಸಾಧಾರಣ ನಿರ್ಣಯಪ್ರಕಾರ ಸರಾಸರಿ ಗೇಣಿ ಮುನ್ನೂರುಪ್ಪಳ್ಳದ್ದಾಗಿದ್ದು ೯೯ ವರ್ಷ ವಾಯಿದೆ ಇರುವಕಾರಣ ಕನಿಷ್ಠ ಸಾವಿರ ರೂಪಾಯಿ ಕ್ರಯಪತ್ರದ ಯೋಗ್ಯತೆಯ ಸ್ಟಾಂಪುಕಾಗದದಬೇಕಾಗಿದ್ದು ಬರೇ ಮುನ್ನೂರ ಮಿತಿ ಇಟ್ಟು ಮಾಡಲಟ್ಟ ರಿಜಿಸ್ಟ್ರಿಯ ಕುರಿತು ಆಕ್ಷೇಪಿಸಲ್ಪಟ್ಟು ಈ ಲೇಖನ ಲೇಖಿಸುವರೆ ಕಾರಣವಾಗಿದೆ ಸ್ಟಾಂಪು ಆಕ್ಟು ಹೆಚ್ಚು ಗೊತ್ತಿಲ್ಲದವನಾದರೂ ಶೀಘ್ರ ಪರಿಚಯ ಮಾಡಲ್ಪಟ್ಟು ಒಟ್ಟಿನಿಂದ ಒಂದೊಂದು ವಿಧವಾದ ಹೇಳಿಕೆಯಿಂದ ವಿಶ್ವಯೋಗ್ಯ ಸಾರ್ವದ್ದಿಯುಳ್ಳ ಈ ವೃತ್ತಪತ್ರಿಕೆಯಲ್ಲಿ ಸ್ಟಾಂಪು ಆಕ್ಟು ವಿದಿತವುಳ್ಳವರ ಸನುಷ್ಟಾನದಲ್ಲಿ ನಮ್ಮ ಸಂಶಯವನ್ನು ಪರಿಹರಿಸಿಕೊಳ್ಳುವ ಇಚ್ಛೆಯಿಂದ ಈ ಲೇಖನದ ಭ್ರಾಂತಿ ಕೊಡುವದಾಗಿದೆ

ಊತೂದಲಾಬಿಎನಿ

ಇದೀಗ ಒಳ್ಳೆಸಮಯ !

ಇಂಥಾ ಸುಸಮಯವನ್ನು ಎಂದಿಗೂ ಕಳಕೊಳ್ಳಬೇಡಿರಿ !!

ಬೆಂಗಳೂರಿನ ಆರ್ಟಿಸ್ಟ್ ಮತ್ತು ಫೋಟೋಗ್ರಾಫರಾದ ವಿ. ಕೆ. ಸಾಮಿರಾಜುರವರು ಈವರ್ಷ ಮಡಿಕೇರಿಗೆ ಬಂದಿರುವರು ಬಲುಚಲೋದಾಗಿಯೂ ಸುಲಭವಾಗಿಯೂ ಫೋಟೋ ತೆಗೆಯುತ್ತಾರೆ ಇವರು ಇರುವ ಮೇ ತಾರೀಖು 15 ವರೆಗೆ ಮಡಿಕೇರಿಯಲ್ಲಿರುವರು ಅಷ್ಟರ ಒಳಗೆ ತಮ್ಮ ಅಭಿಲಾಷೆಯನ್ನು ನೆರವೇರಿಸಿಕೊಳ್ಳಿರಿ!!

ವಿಳಾಸ —

ಮುತ್ತುಸಾಮಿರಾಜು,
ಫೋಟೋಗ್ರಾಫರ್,
ಮಹದೇವಪ್ಪೇಟೆ, ಮಡಿಕೇರಿ

NOTICE

MERCARA COSMOPOLITAN CLUB

The General body Meeting of the Club will be held in the Club rooms, Mercara on Sunday the 4th May 1924 at 4 P M

Business

Election of office bearers

Mercara, 18 4 24 — C N MUTTANNAH, Hony Secretary

O. S. Association Magazine Mercara.

No 3 of April 1924 will be out in May 1924

ಹೆಲ್ಲನ್ ಕೆಲ್ಲರ್ ಎಂಬ ಕಣ್ಣು ಕಿವಿಗಳಿಲ್ಲದ ಲೋಕಪ್ರಸಿದ್ಧಿಯಾದ ಅಮೇರಿಕದ ಅದ್ಭುತ ಜೀವಮಾನಚರಿತ್ರೆಯನ್ನಾಗಲೀ ವಾಸವದತ್ತೆ ಎಂಬ ಪುಟ್ಟನಾಟಕವನ್ನಾಗಲೀ ಸಾಹಿತಿಸಿನ ಪೆರ್ಪೀರಿ ಎಂಬ ಶಾಸ್ತ್ರೀಯಲೇಖನ ಲೇಖನವನ್ನು ಓದಲೇನು ವಿರಾ?

ಹಾಗಾದರೆ 'O S Association' ನ ಏಪ್ರಿಲ್ ತಿಂಗಳ ಸಂಚಿಕೆಯನ್ನು ಓದಿರಿ! ಅನಂದಪಡಿರಿ!

ಬಿಡಿಸಂಚಿಕೆಯೊಂದಕ್ಕೆ	0 6 0	ಸಂಸ್ಥೆಯ ಮೆಂಬರಿಗೆ	
ಕೆಲವು ಪ್ರತಿಗಳು ಮಾತ್ರ ಇವೆ		ವಾರ್ಷಿಕ ದರ	1 0 0
ಜಾಗ್ರತೆ ಬರೆಯಿರಿ		ಇತರರಿಗೆ	1 8 0

ಮೇನೇಜರ್,
O S ASSN. MAGAZINE
31 — ಮಡಿಕೇರಿ

'ಆರೋಗ್ಯ ಚಂದ್ರಿಕೆ'.

ಇದು ಪ್ರಜಾಕ್ಷೇಮಕ್ಕಾಗಿ ಆರೋಗ್ಯಮಾರ್ಗವನ್ನೂ ಚಿಕಿತ್ಸೆಯನ್ನೂ ಬೋಧಿಸುವ ಒಂದು ಮಾಸಪತ್ರಿಕೆ ಇದರ ಸಂಪಾದಕರು ಮದ್ರಾಸಿನಲ್ಲಿ ಪ್ರಸಿದ್ಧರಾದ ಡಾಕ್ಟರ್ ಯು. ರಾಮರಾವ್, ಎಂ ಎಲ್ ಸಿ ಯವರು ಇದರಲ್ಲಿ ಅನೇಕ ಪ್ರಸಿದ್ಧ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರುಗಳ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು

ಟಪಾಲುಹಾಸಲು ಸೇರಿ ಈ ಪತ್ರಿಕೆಯ ವಾರ್ಷಿಕ ಚಂದ 1—8—0 ರೂ. ಮಾತ್ರ ಬಿಡಿ ಪತ್ರಿಕೆ ಒಂದಕ್ಕೆ 0—2—0 ಆಣೆ.

ಏಜೆಂಟರು — ಮ|| ರಾ|| ರಾ|| ಎಸ್ ಕೆ. ಕೆ ಸ್ವ ರ ಪ್ಪ, ಭಾಗಮಂಡ್ಲ, ಕೊಡಗು

ವಿಳಾಸ:— ಮೇನೇಜರ್, ಆರೋಗ್ಯಚಂದ್ರಿಕೆ ಆಫೀಸು, 323, ತಂಬುಚೆಟ್ಟಿಬೀದಿ, ಮದ್ರಾಸು

[12—6]

ಪಾಕೆಟ್‌ಡೈರಿ ಉಚಿತ.

ಈ ನಕ್ಷೆಯಲ್ಲಿ ಕಂಡ ಪೆನ್ನು ನಿಮ್ಮ ಕೈಯಲ್ಲಿದ್ದರೆ ಇದನ್ನು ಭಂಗಿಸಾದಂತೆ ಮುಳ್ಳು ಇದೆ. ಈ ಪೆನ್ನಿನಲ್ಲಿ ಬರೆಯುವುದರಿಂದ ಸ್ವರಗಳು ಕಡಿಮೆ ... ಈ ಜಾಹೀರಾತಿಗಾಗಿ ... ಪಾಕೆಟ್ ಡೈರಿ ಒಂದನ್ನು ಉಚಿತವಾಗಿ ಕೊಡುವೆವು

ಕ್ರಯ ಡೈರಿ ಸಮೇತ ಪೇನಾ 1 ಕ್ಕೆ 1—12—

ಜರ್ಮನ್ ಅಲಾರಂ ಟೈಂಪೀಸ್‌ಗಳು

ಈ ಗಡಿಯಾರಗಳು ಜರ್ಮನ್ ದೇಶದಲ್ಲಿ ತಯಾರಾದವು. ಬೆಳಿಗ್ಗೆ ಎಬ್ಬಿಸುವ ಎಂದಿಗೂ ಕಾರು ಗಂಟೆಯನ್ನು ... ಗಡಿಯಾರದ ಎತ್ತರವು ... ಬೇಗನೆ ಗಂಟೆಯನ್ನು ಕಂಡುಹಿಡಿಯಬಹುದು ... ಈ ಮಾದರಿ ಗಡಿಯಾರಗಳು ಬಾರಾತಕ್ಕೆ ಬಂದಿಲ್ಲ ಇವಕ್ಕೆ ಮೂರು ವರ್ಷ ಗ್ಯಾರಂಟಿ ಇದೆ.

ಕ್ರಯ 1 ಕ್ಕೆ 5—0—0 ರೂಪಾಯಿ

ಅಲಾರಂ ಇಲ್ಲದ "ಬೇಬಿ" ಟೈಂಪೀಸ್ 3—...

ವಿಳಾಸ —ಎಸ್ ಆರ್. ಕೃಷ್ಣ ಅಂಡ್ ಕೋ, ನಂಬರ್ 1 ತಂಬುನಾಯಕನ ...

[4—3]

WANTED.

Two Second-hand Motor bicycles

M M SIDDEIK

22—14 — MERCARA.



[16—10]

Printed & Published by D S Krishnaswamy, Proprietor, at Sreenivas Electric Press "for Kodagu" Ltd Mercara—3-5-1924

not delivered please return to "Kodagu Office, Mercara"
Reg. No. M. 1550.

ಕೊಡಗು.

ಸತ್ಯೇನ ಧೂತದಯಯಾ ವಿದ್ಯಾನೀತಿ ಪ್ರಸುಕ್ತಃ । ಐಕಮತ್ಯೇನಸದೇಶಃನಂ ಸುಸ್ಥಿರಾ ರಾಜ್ಯಸಂಪದ ॥

ಪ್ರತಿ ಶುಕ್ರವಾರ ಪತ್ರಿಕಾರೂಪದಿಂದ ಪ್ರಕಟಿಸಲ್ಪಡುವುದು.   "ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ"

ಸಂಪುಟ ೩]   ಕೊಡಗು, [illegible] ಇಸವಿ ಫೆ, ಬ್ರವರಿ [illegible] ನೆಯ ಶುಕ್ರವಾರ.   [ಸಂಚಿಕೆ ೪೯

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನಡಾ ಪ್ರಿಂಟಿಂಗ್ [illegible]ಲಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ [illegible]ದ್ದರೂ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ [illegible]೦ಕ ಜಾಗ್ರತೆಯಾಗಿಯೂ ಸುಲಭಭಾಜೆಗೂ ಮಾಡಿ [illegible]ಡುತ್ತೇವೆ

Srinivas Electric Press,
MYSORE.

The Saraswathi Publishing Company
ಶಾರದಾಗ್ರಂಥಮಾಲಾ.

ಈ ಗ್ರಂಥಮಾಲೆಯಲ್ಲಿ [illegible] ಗ್ರಂಥಗಳು [illegible] ಪ್ರಕಟವಾಗಿರುವ ಗ್ರಂಥಗಳು —

	ರೂ	ಆ	ಪೈ
ಪ್ರಿಯಾವದೆ (ವರದಕ್ಷಿಣೆಯಿಂದ [illegible] ಪತ್ರಗಳು)	1	6	0
[illegible] (ವಂಗಕನ್ಯೆಯ ಚರಿತ್ರೆ)	0	1	0
[illegible] ([illegible])	0	12	
[illegible] ([illegible])	0	6	
[illegible] (ನಾಟಕ)	0	4	0
[illegible] (ನಾಟಕ	0	4	0
[illegible] (ನಾಟಕ)	1	4	0

[illegible] 2—[illegible]—0 [illegible] ಗ್ರಂಥಗಳ [illegible]

ಸರಸ್ವತಿ.

ಉತ್ತಮವರ್ಗದ ಶ್ರೇಷ್ಠವಾದ ಕನ್ನಡ ಮಾಸಪತ್ರಿಕೆ

[illegible] ಗ್ರಂಥಮಾಲೆಯ ಪ್ರಕಟನೆಯಲ್ಲಿ [illegible] ಕೊಡಲ್ಪಡುವುದು [illegible] ಉಚಿತವಾಗಿ ಕಳುಹಿಸಲ್ಪಡುವುದು

ವಾರ್ಷಿಕ ಚಂದಾ ರೂಪಾಯಿ 3—0—0 ಮಾತ್ರ

SARASWATHI PUBLISHING C[illegible]
Post Box No [illegible]7 [illegible] City

HEALTH IS WEALTH

WANTED all to improve [illegible]lth [s]trength and vitality and thus save our [n]ation from physical degeneracy Send [h]alf anna stamp and get 13 specimen [p]hotographs with full particulars from

Director Physical Culture,
P O. Basavanagudi,
BANGALORE CITY

For your requirements of high grade Arms, Ammunition, Wine and Spirits,

[A]PPLY TO—
[M]c. DOWELL & Co., Ltd.,
[illegible]   **MERCARA.**

ಮಂಗಳೂರ್ ಇನಾಮ್ ಕೊಡ್ [illegible] ಉಳ್ಳ ಸಾಮಾನ್ ಸ್ಪೆನ್ಸರ್ ಕಂಪನಿಕ್ಕ್
ಪುದಿ [illegible] ಬಂದಿತ್.

SPENCER & Co Ltd
Mercara and Polibetta Coorg   [24—4]

BUMPER CROPS
Always follow [illegible] [app]lication of our fertilisers
[illegible]
[illegible]
ನಮ್ಮ [illegible]
ಹೊಸ (fresh) [illegible] ಗುತ್ತದೆ
Siddeck [illegible] Works
24—17   MERCARA

ಜೀ[illegible]

[illegible]

ಸ್ವಾಭ್ಯಾಸ್ಯಕಾಲ [illegible] ಜೀವನಾ ಧಾರಕ್ಕೆ [illegible] ಜೀವವಿಮೆ.

[illegible] ಯಾವ ಲೋಪವೂ [illegible] ಹಣವನ್ನು ಒದಗಿಸುವ ಸಂಸ್ಥೆಯಾದರೂ ಮೈಸೂರಿನ ಸರಕಾರದ [illegible] ಜೀವವಿಮೆ ಕಂಪೆನಿ

ಬದುಕಿರುವಾಗಲೇ [illegible] ಜೀವನಾಧಾರಕ್ಕೆ [illegible] ಹಣವನ್ನು ಒದಗಿಸಿ [illegible] ಕೊಂಡ [illegible] ದೇಶದ ಆರ್ಥಿಕ ಸಂಪತ್ತನ್ನು (Economic Condition) ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೆ!

ಲೈಫ್ ಇನ್ಶೂರೆನ್ಸ್ ಆಕ್ಟಿನ ಮೇರೆ ಇಂಡಿಯಾ ಗವರ್ನಮೆಂಟ್ ಸೆಕ್ಯೂರಿಟಿಗಾಗಿ ಸಲ್ಲಬೇಕಾದ 12 ಸಾವಿರ ರೂಪಾಯಿ ಸೆಕ್ಯೂರಿಟಿಗಾಗಿಯೂ ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿಗೆ ಸಲ್ಲಬೇಕಾದ 1 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನ ಮದ್ರಾಸಿನ ಶಾಖೆಯಲ್ಲು 1 ಲಕ್ಷ ಗವರ್ನಮೆಂಟ್ ಆಫ್ ಇಂಡಿಯ ಸೆಕ್ಯೂರಿಟಿಯನ್ನು ಅರ್ಧಲಕ್ಷ ಮೈಸೂರು ಸೆಕ್ಯೂರಿಟಿಯನ್ನು ಡಿಪಾಜಿಟ್ಟಾಗಿ ಇಟ್ಟಿರುತ್ತೆ ಬಾಕಿ ಒಂದು ಲಕ್ಷ ಇಂಡ್ಯಾ ಗವರ್ನಮೆಂಟ್ ಸೆಕ್ಯೂರಿಟಿಗೆ ಬ್ಯಾಂಕ್ ಮೂಲಕ ಏರ್ಪಾಡು ಮಾಡಿರುತ್ತೆ

ಬಿ. ಎಗ್. ಆರಾಧ್ಯ,
ರಿಲೈಫ್ ಅಂಡ್ ಮ್ಯಾರೇಜ್ ಆಫೀಸ್ ಮಡಿಕೇರಿ.

ಮಲೆಯಾಳ ವೈದ್ಯಶಾಲಾ

[illegible] ಮತ್ತು ಕಂಪೆನಿ ಎಂಬ [illegible] ವೈದ್ಯಶಾಲೆಯಲ್ಲಿ ಒಂದು ಶಾಖೆಯು [illegible] ಇಲ್ಲಿ ಯಾವವಿಧದ [illegible] ಪಂಡಿತರಿಂದ ಪರೀಕ್ಷಿಸಿ ಔಷಧಿ [illegible] ಗುಣಪಡಿಸಲ್ಪಡುತ್ತೆ. ಔಷಧದ ಚಾರ್ಜು [illegible] ಬೇಕಾದವರು ಈ ಕಳಗಿನ ವಿಳಾಸಕ್ಕೆ ಬರೆದ ವಿವರವನ್ನು ತಿಳಿದುಕೊಳ್ಳಬಹುದು

ನಾರಾಯಣನಂಬೀಶನ್,
ಆಯುರ್ವೇದ ವೈದ್ಯರು,
52—16   ವೀರರಾಜೇಂದ್ರಪೇಟೆ

ಪ್ರಕಟನೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್
ಲಿಮಿಟೆಡ್.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ

	ರೂ.
ಶೇರ್ ಬಂಡವಾಳ	50 000
ವಸೂಲಾದ ಶೇರ್ ಮೊಬಲಗು	6 828
ಜಮಾ ಬಂದ ಠೇವಣಾತಿ	47 990

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು

ಒಂದು ವರುಷ ವಾಯಿದೆ ಅಥವಾ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 6-4-0ರ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ

ಪ್ರೆಸಿಡೆಂಟರು	ಟ್ರೆಜರ್.
ಕೊಡಂದೇರ ಕುಟ್ಟಯ್ಯನವರು ರಾಯ್ ಬಹದ್ದೂರ್	ಯಂ, ಭುಜಂಗರಾಯರು ಬಿ ಎ, ಬಿ. ಎಲ್

ಸೆಕ್ರೆಟರಿ
ಸಿ ಯನ್. ವೆಂಕಪ್ಪಯ್ಯನವರು ಬಿ. ಎ ಬಿ. ಎಲ್
ತಾರೀಕು 22—2—1924.

"ಕೊಡಗು"

ಬುಧವಾರ ತಾ॥ ೭ನೇ ಮೇ ೧೯೨೪ ನೇ ಇಸವಿ.

ಮಡಿಕೇರಿಯ ಹಳೆರ ಸಂತೆ.

ಇದುವರೆಗೆ ನಡೆದ ಮಡಿಕೇರಿಯ ಸಂತೆಯ ವಾರ್ಷಿಕ ಏಲಂಗೆ ನಮ್ಮಲ್ಲಿದ್ದ ವಿಷಯಗಳ ವಿಷಯವೂ, ಅವುಗಳ ಭಾಷಾಂತರವನ್ನು ಕಳೆದವಾರ ಓದಿದ್ದಾರಷ್ಟೆ. ಆ ದಿನವೇ ವಿಷಯವು ಸಂಘದ ಮುಂದುಗಳು ಚರ್ಚೆಗೆ ಬಂದ ವಿಷಯಗಳ ವಿಷಯ ನಮ್ಮ ಆಲೋಚನೆಯನ್ನು ಇಲ್ಲಿ ಬರೆಯುತ್ತೇವೆ. ಲೆಜಿಸ್ಲೇಟಿವ್ ಕೌನ್ಸಿಲಿನ ಮುಂದೆ ಸುಮಾರು ನೂರನಲ್ವತ್ತು ಠರಾವುಗಳು ಸಂಘದ ಆಫೀಸಿಗೆ ಕಳುಹಿಸಲ್ಪಟ್ಟಿದ್ದವುಗಳು ಬಜೆಟ್ ಕಮಿಟಿಯಲ್ಲಿ ಚರ್ಚಿಸಲ್ಪಟ್ಟು, ಸುಮಾರು ನೂರು ಠರಾವುಗಳನ್ನು ಮಾತ್ರ ಸಭಾಸಭೆಯ ಮುಂದೆ ಚರ್ಚೆಗೆ ಇಟ್ಟರು. ಕೆಲವು ಠರಾವುಗಳು ಸಾಧಾರಣವಾಗಿ ವರ್ಷಂಪ್ರತಿ ಬರುತ್ತಿರುವ ವಿಷಯಗಳಾದುದರಿಂದ ಅವುಗಳ ಮೇಲಿನ ಹೆಚ್ಚಿನ ಚರ್ಚೆ ನಡೆಯಲಿಲ್ಲವಾದರೂ ಕೆಲವು ಮುಖ್ಯ ಠರಾವುಗಳ ಮೇಲೆ ದೀರ್ಘ ಭಾಷಣಗಳಿಂದೊಡಗೂಡಿದ ಬಿಸಿಯಾದ ಚರ್ಚೆಯು ನಡೆಯಿತು. ಅನೇಕರು ಚರ್ಚೆಯಲ್ಲಿ ಭಾಗಿಗಳಾದರು. ಇದರಿಂದ ಆ ದಿನ ಮೀಟಿಂಗು ಬೆಳಗ್ಗೆ ಆರಂಭಿಸಿದ ರಾತ್ರಿ ಸುಮಾರು 9½ ಗಂಟೆಯವರೆಗೆ ನಡೆಯಿತು.

ಈಗ ದೇಶಕ್ಕೆ ಕೊಟ್ಟಿರುವ ಲೆಜಿಸ್ಲೇಟಿವ್ ಕೌನ್ಸಿಲು ತೃಪ್ತಿಕರವಲ್ಲವೆಂದೂ ಹಿಂದುಸ್ಥಾನದ ಬೇರೆ ಪ್ರಾಂತ್ಯಗಳಿಗೆ ಕೊಟ್ಟಿರುವ ಸುಧಾರಣೆಗಳನ್ನು ಕೊಡುವಾಗ್ಗೆ ನಮ್ಮ ಪ್ರಾಂತ್ಯವನ್ನು ಅವುಗಳಿಗಿಂತ ಹಿಂದೆ ಬಿಡಬಾರದೆಂತಲೂ ಠರಾವು ಪ್ರಕಟಿಸಿ ಸರ್ಕಾರವನ್ನು ಕೇಳುವ ಹೊಣೆಯಾದವನ್ನು ದೇಶೀಯರಿಗೆ ತಮ್ಮ ರಾಜ್ಯಾಡಳಿತದ ಅಭಿವೃದ್ಧಿಯಲ್ಲಿ ಇರುವ ಅಭಿಲಾಷೆಯನ್ನು ವಿಶದಪಡಿಸುತ್ತದೆ. ಕೌನ್ಸಿಲಿನಲ್ಲಿ ಕೆಲವರು ಈ ಠರಾವಿನ ವಿಷಯದಲ್ಲಿ ಹೆಚ್ಚು ಆಸಕ್ತಿ ತೋರಿಸಲಿಲ್ಲ. ಕೆಲವರು ಇದು ಈಗಿನ ಕೌನ್ಸಿಲಿನ ಸಭೆಯನ್ನು ಉಪಯೋಗಿಸಲು ಬಿಟ್ಟುಕೊಡುವುದರಿಂದ ಇದು ದೇಶಕ್ಕೆ ತೃಪ್ತಿಕರವಾದ ಸುಧಾರಣೆಯೆಂದು ಹೇಳಲಾರರು. ಇರಾದುದರಿಂದ ಈಗಿನ ಕೌನ್ಸಿಲಿಗೆ ಹೆಚ್ಚಿನ ಅಧಿಕಾರ ಮತ್ತು ದೇಶದ ಜನರ ಶಕ್ತಿ ಮೀರಿ ನಡೆಯಬೇಕು ಇಲ್ಲದಿದ್ದರೆ ಕೌನ್ಸಿಲಿಗೆ ಸೇರುವವರು ಮತ್ತು ಕೆಲವು ಸರ್ಕಾರದವರು ಇದ್ದರೂ ಈಗಿನ ಕೌನ್ಸಿಲು ವಿದ್ಯಾಭ್ಯಾಸದಲ್ಲಿ ಮುಂದುವರಿದ ಈ ದೇಶಕ್ಕೆ ಒದಗಿರುವ ಸ್ಥಾನ. ಈ ವಿಷಯ ಸರ್ಕಾರದವರು ಕೌನ್ಸಿಲಿನಲ್ಲಿ ಇರುವ ಮೆಂಬರುಗಳು, ಪಬ್ಲಿಕ್ ವಿಷಯ ಮೆಂಬರುಗಳಿಗೆ ಇರುವ ಪಾಠದ ಕೆಲಸಗಳು ಹೆಚ್ಚಾಗಿದೆ ಎಂತಲೂ ಒಪ್ಪಿಕೊಳ್ಳಬೇಕಾಗಿ ಬರುತ್ತದೆ. ಸರ್ಕಾರದವರು ಜನಸಮೂಹದ ಅಭಿಪ್ರಾಯವನ್ನು ಗಮನಿಸಿಕೊಡುವವರು ಪ್ರತಿ ಕೇಳಿದ ಹೆಚ್ಚಿನ ಸುಧಾರಣೆಗಳನ್ನು ಕೊಡಲಿಕ್ಕೆ ಹಿಂದುಮುಂದೆ ನೋಡುತ್ತದೆ. ಕೌನ್ಸಿಲಿನಲ್ಲಿ ನಡೆಯುವ ಭಾಷಣಗಳು, ಚರ್ಚೆಗಳು ಮಾತೃಭಾಷೆಯಾದ ಕನ್ನಡದಲ್ಲಿಯೇ ಆಗಬೇಕೆಂಬ ಠರಾವು ಒಂದು ಬಹುಜನ ಬೆಂಬಲಕ್ಕೆ ಪಾತ್ರವಾಯಿತು. ಇದು ಕಷ್ಟಸಾಧ್ಯವಲ್ಲ ಎಂದು ಕೆಲವರು ವಾದಿಸಿದರು. ಕನ್ನಡ ಭಾಷೆ ತಿಳಿಯದವರಿಗೆ ಕನ್ನಡ ಮಾತನಾಡುವವರೊಡನೆ ಸಾಧ್ಯವಿಲ್ಲವೆಂತ ವ್ಯವಹಾರಿಸಿತು. ಇದು ನ್ಯಾಯವಾದ ತೀರ್ಮಾನವೆಂದೇ ನಮ್ಮ ಅಭಿಪ್ರಾಯ. ನಮ್ಮ ಶಾಲೆಗಳಲ್ಲೆಲ್ಲಾ ಇಂಗ್ಲೀಷು ಭಾಷೆಗೆ ಪ್ರಾಮುಖ್ಯತೆಯನ್ನು ಕೊಟ್ಟು ಕೌನ್ಸಿಲಿನಲ್ಲಿ ಮಾತ್ರ ಆ ಭಾಷೆಯನ್ನು ಉಪಯೋಗಿಸಬಾರದೆಂಬುದು ಸರಿಯಲ್ಲ. ಹೊಸದಾಗಿ ಮೀಟಿಂಗಿನ ಪ್ರೊಸೀಡಿಂಗ್ಸ್, ಠರಾವುಗಳನ್ನು, ಅಧ್ಯಕ್ಷರು ಮತ್ತು ಬೇರೆ ಕನ್ನಡ ತಿಳಿಯದ ಮೆಂಬರುಗಳಿಗೆ ಅರ್ಥಮಾಡಿಕೊಳ್ಳಲು ಅಷ್ಟು ಸಾಧ್ಯವಾಗುವುದಿಲ್ಲವೆಂದು ಕನ್ನಡ ಒಂದನ್ನೇ ಉಪಯೋಗಿಸುವುದರಿಂದ ಬೇರೆ ಅನೇಕ ತೊಂದರೆಗಳುಂಟಾಗುವುದಾದರಿಂದ ಕೌನ್ಸಿಲು ಅದನ್ನು ಪಾಸಿಗೆ ಕೊಡುವುದು ಸಾಧ್ಯವಿಲ್ಲ. ಹೀಗೆಂದು ಪಾಸು ಮಾಡುವವರಿಗೆ ಮಾತೃಭಾಷೆಯ ಮೇಲೆ ಪ್ರೀತಿ ಇಲ್ಲವೆಂದಲ್ಲ. ಸ್ವದೇಶಿ ಚಳವಳಿಯು ಉತ್ಕೃಷ್ಟತೆಗೆ ಬಂದಿರುವ ಈ ಕಾಲದಲ್ಲಿ ಸ್ವಭಾಷೆಯ ಮೇಲೆ ಮಮತೆಯಿದ್ದವರು ಬೇರೆ ಕಾಲ ನೋಡಿಗಳಿಸಿಕೊಳ್ಳುವರೇ? ಆದರೆ ಸ್ವಭಾಷೆಯಿಂದ ಪಟ್ಟಿ ಸಕ್ಕನೆ ಕೌನ್ಸಿಲಿನಲ್ಲಿ ಉಪಯೋಗಿಸುವುದು ಈ ಯೋಗ್ಯ ಸಂಘಕ್ಕಾಸ್ಪದವಲ್ಲವೆಂಬುದೇ ಆಶ್ಚರ್ಯ. ಕೌನ್ಸಿಲಿನ ವಿಷಯ ಚರ್ಚೆಗಳನ್ನು ಸ್ವಭಾಷೆಗೆ ಬಿಟ್ಟುಕೊಡುವ ಹಕ್ಕು ಕೊಡಬೇಕೆಂಬ ಠರಾವು ನಿರ್ಣಯವಾದದ್ದು ಎಲ್ಲ ಜನ ಒಪ್ಪತಕ್ಕದ್ದಾಗಿದೆ. ಸ್ತ್ರೀವಿದ್ಯಾಭ್ಯಾಸದಲ್ಲಿ ನಮ್ಮಿಂದ ಏನನ್ನೋ ಮಾಡಬೇಕಿದ್ದುವು ಸ್ವದೇಶಗಳಲ್ಲಿ ಸ್ತ್ರೀಯರಿಗೆ ಹೆಯ್ಯಾಗಿರುವ ಮತ್ತು ಇವುಗಳಿಗೆ ವಿದ್ಯಾಭ್ಯಾಸ ಸಂಸ್ಥೆಯು ಕೊಟ್ಟಿರುವ ನಮ್ಮ ನಾಡಿನಲ್ಲಿ ಆ ಹಕ್ಕನ್ನು ಅವರಿಗೆ ಕೊಡಲು ಇರುವುದು ಯೋಗ್ಯವಲ್ಲ. ಇದನ್ನು ಒದಗಿಸುವ ಸಮಯವಲ್ಲ ಈ ಸಮಯದಲ್ಲಿ ಸರ್ಕಾರದವರು ಜಾತಿಗೆ ತಕ್ಕ

ರಾಗಿ ನೇಮಿಸಿಕೊಳ್ಳಬಾರದಾಗಿತ್ತೆ. ಕೌನ್ಸಿಲಿಗೆ ಕಳುಹಿಸಲ್ಪಡುವ ಹಿಂದು ಳದವರ ಪ್ರತಿನಿಧಿಯು ಆ ಸಂಗಡದವರೊಳೊಬ್ಬನಾಗಬೇಕೆಂ ಬವು ಠರಾವಿನವರಿಗೆ ಯಾರೂ ಆಕ್ಷೇಪಿಸಲಾರರಾಗಿ ನಮ್ಮ ಭಾವನೆ. ಹಿಂದುಳಿದ ಸಂಗಡದವರ ಹಿತ್ತಸುಖಗಳನ್ನು ನೇ ಡಿಕೊಳ್ಳಲು ವಿದ್ಯಾವಂತನಾದ ಅವರಲ್ಲೊಬ್ಬನು ಉತ್ತಮ ಜಾತಿಯವರಿಗಿಂತ ಯೋಗ್ಯನೆಂದು ನಮಗೂ ತೋರುತ್ತದೆ. ಈಗ ಓಟುಕೊಡುವ ಹಕ್ಕು ಬಹಳ ಕಡಿಮೆ ಜನರಿಗೆ ಇರುವುದರಿಂದ ಒಟ್ಟಾರೆ ಕಂದಾಯ ಒಂದು ರೂಪಾಯಿ ಸಗಿನ ಕಂದಾಯ ಎರಡು ರೂಪಾಯಿ ಕೊಡುವವರಿಗೆ ಓಟುಕೊಡುವ ಹಕ್ಕಿರಬೇಕೆಂದು ಮಂಜೂರಾದದ್ದು ನಮ್ಮ ಪೂರ್ಣ ಬೆಂಬಲ ಇದೆ. ಅದನ್ನು ಹೆಚ್ಚಿನ ಜನರಿಗೆ ಓಟುಕೊಡುವ ಹಕ್ಕು ಕೊಡಬೇಕೆಂಬುದೇ ಈಗಿನ ಬಹುಜನ ಜನರ ಅಭಿಲಾಷೆಯಾಗಿದೆ.

ದೇಶದಲ್ಲಿ ಈಗ ಇರುವ ಶಾಲೆಗಳು ಸಾಲದೆಂದೂ, ಇನ್ನೂ ಹಲವು ಶಾಲೆಗಳನ್ನು ಸ್ಥಾಪಿಸಬೇಕೆಂದೂ ಕೆಲವು ಲೋವರ್ ಸೆಕೆಂಡರಿ ಶಾಲೆಗಳನ್ನು ಏರ್ಪಡಿಸಬೇಕೆಂದೂ ಕೆಲವು ಠರಾವುಗಳು ಮಂಜೂರಾದವು. ಇವೆಲ್ಲವೂ ಅಗತ್ಯವಾದ ವಿಷಯವಾಗಿವೆ. ಅದರಲ್ಲೂ ಮಡಿಕೇರಿಯಲ್ಲಿ ಲೋವರ್ ಸೆಕೆಂಡರಿ ಶಾಲೆಯನ್ನು ಸ್ಥಾಪಿಸಬೇಕಾದದ್ದು ತುರ್ತು ಕೆಲಸವಾಗಿದೆ. ಅಲ್ಲೊಂದು ಲೋವರ್ ಸೆಕೆಂಡರಿ ಶಾಲೆ ಇಲ್ಲದೆ ಇರುವುದರಿಂದ ಜನಮಿತವಾದ ಆ ತಾಲೋಕಿನ ಮಕ್ಕಳ ವಿದ್ಯಾಭ್ಯಾಸಕ್ಕೆ ಬಹಳ ತೊಂದರೆಯುಂಟಾಗಿದೆ. ಅಲ್ಲಿ ಈಗಿರುವ ಲೋಕಲ್ ಫಂಡ್ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆಯನ್ನು ಗಣಿಸಿಗೆ ತೆಗೆದುಕೊಂಡರೆ ಲೋವರ್ ಸೆಕೆಂಡರಿ ಶಾಲೆಗೆ ಬೇಕಾದದ್ದಕ್ಕಿಂತ ಹೆಚ್ಚು ಮಕ್ಕಳು ಅಲ್ಲಿ ದೊರೆಯುವರೆಂಬುದಕ್ಕೆ ಸಂಶಯವಿಲ್ಲ. ಈ ಶಾಲೆಯ ವಿಷಯ ಅಲ್ಲಿಯ ಜನರು ಬಹು ಕಾಲದಿಂದಲೂ ಕೇಳಿದರೂ ಸರ್ಕಾರದವರು ಈ ಕೆಲಸವನ್ನು ಒಡನೆ ನಡಿಸಿಕೊಡಬೇಕೆಂದು ನಾವು ಪುನಃ ಒತ್ತಿಹೇಳಬೇಕಾಗಿಲ್ಲ. ಯಾವ ಕಡೆಯ ವಿದ್ಯಾಭ್ಯಾಸಕ್ಕೆ ಕೌನ್ಸಿಲಿನಲ್ಲಿ ಸಾವಿರ ರೂಪಾಯಿ ಮಂಜೂರುಮಾಡಿರುವುದರಿಂದ ಯಾವ ಕಡೆಯ ಬಡವರು ಹೆಚ್ಚಾಗಿರುವ ಕಿಗ್ಗಟ್ಟುನಾಡು ತಾಲೋಕಿನವರು ಆ ಹಣವನ್ನು ಪೂರ್ಣ ಉಪಯೋಗಿಸುವಂತೆ ಯಾವ ಕಡೆಯ ಮಕ್ಕಳನ್ನು ಈಗಿರುವ ಲೋಕಲ್ ಫಂಡ್ ಶಾಲೆಗಳಿಗೆ ಸೇರಿಸಲು ಸಹಾಯವಾಗಬೇಕೆಂದು ಅಪೀಲುಮಾಡಿದ ಠರಾವಿನ ವಿಷಯ ಬಹಳ ಚರ್ಚೆಯು ನಡೆಯಿತು. ಯಾವ ಕಡೆಯ ಮಕ್ಕಳಿಗೆ ಪ್ರತ್ಯೇಕ ಶಾಲೆಗಳನ್ನು ಏರ್ಪಡಿಸಬೇಕೆಂದು ಕೆಲವರು ವಾದಿಸಿದರು. ಹ್ಯಾಗೂ ಅಂತ್ಯದಲ್ಲಿ ಹಿಂದುಳಿದವರನ್ನು ಮುಂದಕ್ಕೆ ತರುವುದು ನಮ್ಮ ಕರ್ತವ್ಯವೆಂದು ಈ ಠರಾವು ಬಹುಮತದಿಂದ ಪಾಸಾಯಿತು. ಈ ಠರಾವು ಮಂಜೂರಾಗದೆ ಹೋಗಿದ್ದರೆ ನಾವು ನಮಗಿಂತ ಕೆಳಗಿರುವವರನ್ನು ಮೇಲಕ್ಕೆತ್ತಲು ಸ್ವಲ್ಪವೂ ಪ್ರಯತ್ನ ಪಡಲಿಲ್ಲವೆಂಬ ಬಿರುದು ನಮಗೆ ಬರುತ್ತಿತ್ತು. ಹಿಂದುಳಿದವರಿಗೆ ನಮ್ಮ ನಾಡಿನ ವಿದ್ಯಾಭ್ಯಾಸ ಸಾಧನ ಹೊಂದುವುದನ್ನು ತೋರಿಸುವುದಿಲ್ಲವೆಂದೂ ವಿಷದವಾಗುತ್ತಿತ್ತು. ಈ ಠರಾವು ಅಂಥಾ ಕೊರತೆಯನ್ನು ಹೋಗಲಾಡಿಸಿತು.

ಗ್ರಾಮನಿವಾಸಿಗಳಾದ ರೈತರಿಗೆ ಮುಖ್ಯವಾಗಿ ಬೇಕಾದ ಇನ್ನೊಂದು ವಿಷಯವು ಗ್ರಾಮಾಂತರಗಳಿಗೆ ಹೋಗುವ ರಸ್ತೆಗಳಾಗಿವೆ. ಇಂಥಾ ರಸ್ತೆಗಳಿಲ್ಲದೆ ಇರುವ ಗ್ರಾಮಗಳಿಗೆ ರಸ್ತೆಯನ್ನು ಮಾಡಿಸಿಕೊಡಬೇಕೆಂದೂ, ಹೊಸರಿಗೆ ಮತ್ತು ರಸ್ತೆಯಂತಿರುವವುಗಳನ್ನು ನ್ಯಾಯವಾದ ರೀತಿ ದುರಸ್ತುಮಾಡಿಸಿ ಕೊಡಬೇಕೆಂದೂ ಹಲವು ಠರಾವುಗಳು ಪಾಸಾದವು. ಅವುಗಳಲ್ಲೆಲ್ಲಾ ಮರೆನಾಡಿನ ರಸ್ತೆಯು ಬಹಳ ಮುಖ್ಯವಾದದ್ದಾಗಿದೆ. ಮರೆನಾಡು ಪ್ರಾಂತ್ಯದವರಿಗೆ ಮಳೆಗಾಲದಲ್ಲಿ ಹೊಳೆಗಳ ದೆಸೆಯಿಂದ ಆಸ್ಪತ್ರೆಗಾಗಲೀ ಮಕ್ಕಳಿಗೆ ಶಾಲೆಗಾಗಲೀ, ವ್ಯಾಪಾರದ ಕಾರ್ಯಗಳಿಗಾಗಲೀ ಪೇಟೆಗಳಿಗೆ ಹೋಗಲು ಅನುಕೂಲವಿಲ್ಲ. ಮತ್ತು ಬೇಸಿಗೆಯಲ್ಲಿ ಕೂಡ ಅವರ ಭೂಮಿಗಳಿಗೆ ಕಷ್ಟವಾದ ಧಾರಣೆಯು ದೊರೆಯುವುದಿಲ್ಲ. ದಕ್ಷಿಣಕೊಡಗಿನ ಒಂದು ಮೂಲೆಯಾದರೂ ತುಂಬಾ ಜನವಾಸವಿರುವ ಮರೆನಾಡಿನ ಹೆಚ್ಚಿನ ಕಷ್ಟಕ್ಕೂ ನಷ್ಟಕ್ಕೂ ಕಾರಣವಾಗಿರುವ ಈ ದೊಡ್ಡ ಕೊರತೆಯೊಂದನ್ನು ಪರಿಹರಿಸುವ ಕೆಲಸಕ್ಕೆ ಅಧಿಕಾರಿಗಳು ಆಗುವಷ್ಟು ಬೇಗನೆ ಕೈಹಚ್ಚಬೇಕಾಗಿ ನಮ್ಮ ಆಶೆ.

ಮಡಿಕೇರಿಯಲ್ಲಿರುವ ಆಸ್ಪತ್ರೆಯು ಬೀಳಲಿಕ್ಕೆ ಆಗಿರುವುದರಿಂದ ಅದನ್ನು ರಿಪೇರಿ ಮಾಡಿಸಬೇಕೆಂದೂ ಅದಕ್ಕೆ ಇಂಥಿಯಾ ಸರ್ಕಾರದವರೇ ಖರ್ಚುಕೊಡಬೇಕೆಂದೂ ತೀರ್ಮಾನವಾಯಿತು. ನಮ್ಮ ಪೂರ್ವಿಕರಾದ ರಾಜರ ಜ್ಞಾಪಕಾರ್ಥವಾಗಿರುವ ವಿಶೇಷ ಕಲಾಕೌಶಲ್ಯಗಳಿಂದ ಕೂಡಿರುವ ಹಳೇ ಅರಮನೆಯನ್ನು ಎಂದಿಗೂ ನಾಶವಾಗಲು ಬಿಡಬಾರದು. ಇಷ್ಟರವರೆಗೆ ಸ್ಥಳೀಯಸರ್ಕಾರದವರು ಅದರವಿಷಯ ಸಿಗಾರಕೊಡದೆ ಇದ್ದದ್ದು ಬಹು ವ್ಯಸನಕರ. ಇನ್ನಾದರೂ ಶೀಘ್ರದಲ್ಲೇ ಅದನ್ನು ಸರಿಪಡಿಸುವುದು ಅವಶ್ಯವಾಗಿದೆ. ಇದಕ್ಕೆ ಹಣವನ್ನು ಇಂಪೀರಿಯಲ್ ಸರ್ಕಾರದವರು ಕೊಡಬೇಕಾದ್ದು ನ್ಯಾಯವಾಗಿದೆ. ಅವರು ನಮ್ಮ ದೇಶದ ಉತ್ಪತ್ತಿಯ ಉತ್ಪನ್ನವನ್ನು ಉಪಯೋಗಿಸಿಕೊಂಡ ನಮಗೆ ಈಗಲ್ಲೇ ಆ ಕೆಲಸವನ್ನು ಮಾಡಿಸಬೇಕಾಗಿತ್ತು. ಹಾಗೆ ಅವರು ಮಾಡದೆ ಇರುವುದರಿಂದಲೂ, ಕ್ಯಾಪ್ಟೆಯ ವಿಷಯ ಬರೆದಾಗ ನಾವು ಸೂಚಿಸಿದಂತೆ, ನಮ್ಮ ಪ್ರಾಂತಿಕ ಭಾಗ ವಾರಿವನ್ನು ಪ್ರತ್ಯೇಕಿಸಿದಾಗ ಅವರು ವಿನಿಯೋಗ ಉಳಿವರಿಯನ್ನು ಕೊಡದೆ ಇರುವುದರಿಂದಲೂ, ಈಗ ಸೆಂಟ್ರಲ್

ಸರ್ಕಾರದವರೇ ಅದಕ್ಕೆ ಖರ್ಚು ಹಾಕಬೇಕಾಗಿದೆ. ಪ್ರಾಚೀನ ಕಟ್ಟಡಗಳನ್ನು ಉಳಿಸಿಕೊಳ್ಳುವ ಕೆಲಸವು ಇಂಡಿಯಾ ಸರಕಾರದ್ದು. ಈ ಕಟ್ಟಡವು ಆ ಗುಂಪಿಗೆ ಸೇರತಕ್ಕದ್ದಾದ ದರಿಂದ ನ್ಯಾಯವಾಗಿಯೂ ಇಂಡಿಯಾ ಸರಕಾರದವರೇ ಇದನ್ನು ಮಾಡಬೇಕಾಗಿದೆ.

ಕೊಡಗಿನಲ್ಲಿ ಮುಸಲ್ಮಾನರು ವಿದ್ಯಾಭ್ಯಾಸದಲ್ಲು ಬಹಳ ಹಿಂದುಳಿದ್ದಿರುವುದರಿಂದ ಸಂಗತಿ ಎಲ್ಲರಿಗೂ ಗೊತ್ತಿದೆ. ಅದುದರಿಂದ ಅವರ ಮಕ್ಕಳ ವಿದ್ಯೆಗ ಉತ್ತೇಜನಕೊಡುವುದಕ್ಕಾಗಿ ಶಾಲೆಗೆ ಹೋಗತಕ್ಕಂಥ ಮೂವತ್ತು ಹುಡುಗರಿರುವ ಕಡೆ ಒಂದು ಶಾಲೆಯನ್ನು ಸ್ಥಾಪಿಸಬೇಕೆಂದು ತೀರ್ಮಾನವಾದದ್ದು ಯಾರಿಗೂ ಆಶ್ಚರ್ಯವನ್ನುಂಟುಮಾಡಲಾರದು. ಮುಸಲ್ಮಾನರಿಗೆ ಒಳ್ಳೆ ಹಿಂದುಸ್ಥಾನಿ ಶಾಲೆಗಳನ್ನು ಏರ್ಪಡಿಸದೆ ಇರುವುದು ಅವರಿಗೆ ಅನುಕೂಲಕ್ಕಾಗಿ ಅವರ ಹುಡುಗರು ಹೆಚ್ಚಿರುವಲ್ಲಿ ಆಂಗ್ಲಭಾಷೆಯನ್ನು ಕಲಿಸುವ ಏರ್ಪಾಡೂ ಮಾಡತಕ್ಕದ್ದು. ಇಲ್ಲವಾದರೆ ಅವರಲ್ಲಿ ಅಸಮಾಧಾನವು ಉಂಟಾಗಬಹುದು.

ಕಳೆದವರ್ಷ ಎಂಥದ ಪ್ರಚಾರಕ ಕಾರ್ಯದರ್ಶಿಯವರಾಗಿದ್ದ ಮ॥ ಬಿದ್ದಂಡಕಾರ್ಯಪ್ಪನವರು ಸಂಘದ ಉದ್ದೇಶಗಳನ್ನು ಪ್ರಚುರಪಡಿಸುವುದರಲ್ಲಿಯೂ, ಸಾಹುಕಮಿಟಿಯನ್ನು ಏರ್ಪಡಿಸುವುದರಲ್ಲಿಯೂ ತುಂಬಾ ಶ್ರದ್ಧೆಯನ್ನು ತೆಗೆದುಕೊಂಡಿರುವರೆಂಬುದರಲ್ಲಿ ಸಂಶಯವಿಲ್ಲ. ಹೆಚ್ಚಿನ ಜನರು ಯೋಚಿಸದಿದ್ದರೆ ಅವರು ಸಂಘಕ್ಕೆ ಹಣ ವಸೂಲಿಯ ವಿಷಯ ಹೆಚ್ಚು ಗಮನಕೊಟ್ಟು ತೆಗೆದುಕೊಳ್ಳಲಿಲ್ಲವಾದುದರಿಂದ ಅವರು ಒಪ್ಪಿಕೊಂಡ ಕೆಲಸವನ್ನು ಸರಿಯಾಗಿ ಮಾಡಲಿಲ್ಲವೆಂದು ಅನೇಕರ ಆಕ್ಷೇಪಣೆಯಾಗಿದೆ. ಆದರೆ ಅವರು ಇಷ್ಟರವರೆಗೆ ಏರ್ಪಡಿಸಿರುವ ಕಮಿಟಿಗಳನ್ನು ಭದ್ರಪಡಿಸಿ ಕಮಿಟಿ ಇಲ್ಲದ ಇರುವ ಕಡೆಗಳಲ್ಲಿ ಅವುಗಳನ್ನು ಸ್ಥಾಪಿಸಿದ್ದೇ ಅದು ಹಿಂದಾದ ವಸೂಲಿಯ ಕೆಲಸವು ಸುಲಭದಲ್ಲೇ ಆಗುವುದು. ಆದರೆ ಆ ಟೆಗಳ ಮೇಲೆ ಉಸ್ತುವಾರಿಯನ್ನು ನೋಡುತ್ತಾ, ಆಗಾಗ್ಗೆ ಮೀಟಿಂಗುಮಾಡಿ ಸಂಘದ ಉದ್ದೇಶಗಳನ್ನು ಗ್ರಾಮದ ಜನರಿಗೆ ಬೋಧಿಸುತ್ತಾ ಬರುವುದು ಅವಶ್ಯಕ. ಸಂಘದ ಕೆಲಸಕ್ಕೆ ಬಂಡವಾಳವು ಅತ್ಯಗತ್ಯವಿದ್ದರೂ ಬರೇ ಹಣ ವಸೂಲಿಮಾಡುವುದರಿಂದ ಸಂಘವನ್ನು ಭದ್ರಪಡಿಸಿದಂತಾಗ. ವುದಿಲ್ಲ. ಸಂಘವು ನಮ್ಮ ದೇಶದ ಏಳಿಗೆಗೆ ಅವಶ್ಯವೆಂದು ಮತ್ತು ಅದರಿಂದ ಬಹುಜನರಿಗೆ ಬಹಳ ಪ್ರಯೋಜನವಿದೆಯೆಂಬ ಭಾವನೆಯನ್ನು ಜನರಲ್ಲಿ ಹುಟ್ಟಿಸಿ ಅವರು ಸಂಘವನ್ನು ತನ್ನ ಆಸ್ತಿಯಂತೆ ಪ್ರೀತಿಸುವಹಾಗೆ ಮಾಡತಕ್ಕದ್ದು. ಇಂಥಾ ಕೆಲಸವನ್ನು ಮ॥ ಕಾರ್ಯಪ್ಪನವರು ಮೆಂಬರುಗಳು ಅಪೇಕ್ಷಿಸಿದಷ್ಟು ಮಾಡದಿದ್ದರೂ ಕೂಡ ಅದನ್ನ ಚೆನ್ನಾಗಿ ಪ್ರಾರಂಭಿಸಿದ್ದಾರೆಂದು ನಮಗೆ ಕಂಡುಬರುತ್ತದೆ. ಅವರು ಸುರುಮಾಡಿರುವ ಕೆಲಸವನ್ನು ಮುಂದರಿಸಿದ್ದಾರೆ. ಸಂಘದ ಕೆಲಸವನ್ನು ಒಂದು ಕ್ರಮಕ್ಕೆ ತರಲು ಅನುಕೂಲವಾಗುವುದು. ಮ॥ ಕಾರ್ಯಪ್ಪನವರು ಹಣದ ವಿಷಯದಲ್ಲಿ ಸ್ವಲ್ಪ ನಡಿಲವಾಗಿದ್ದರೂ ಕೂಡ, ಅಸ್ವಾರ್ಥತೆಯಿಂದ ದೇಶಸೇವೆ ಮಾಡಲು ಮುಂದೆಬರುವ ಜನರು ಬಹಳ ಕಡಿಮೆ ಇರುವ ಈ ಸಮಯದಲ್ಲಿ ಅವರು ಸಂಘಕ್ಕೆ ಮಾಡಿದ್ದು ಕೆಲವು ಹೊಗಳತಕ್ಕದ್ದಾಗಿದೆ.

ಕೊಡಗಿಗೆ ಲೆಜಿಸ್ಲೇಟಿವ್ ಕೌನ್ಸಿಲು ದೊರೆತಿರುವುದರಿಂದ ಈ ಸಂಘದಿಂದ ದೇಶಕ್ಕೆ ಇನ್ನೇನೂ ಪ್ರಯೋಜನವಿಲ್ಲವೆಂತ ಕೆಲವರು ಯೋಚಿಸಬಹುದು. ಈಗಿನ ಕೌನ್ಸಿಲು ದೊರೆಯಲು ಈ ಸಂಘವೇ ಮುಖ್ಯಕಾರಣವೆಂಬುದನ್ನು ಯಾರೂ ಅಲ್ಲಗಳೆಯಲಾರರು. ಈಗ ಸಿಕ್ಕಿರುವ ಕೌನ್ಸಿಲು ತೃಪ್ತಿಕರವಲ್ಲವಾಗಿರುವಲ್ಲು ಇನ್ನು ಹೆಚ್ಚಿನ ಸುಧಾರಣೆಗಳ ಬಗ್ಗೆಯಲ್ಲ ಈ ಸಂಘದ ಮೂಲಕ ಹೋರಾಡಬೇಕಾಗಿದೆಯೆಂಬುದನ್ನು ಯಾರೂ ಮರೆಯಬಾರದು. ಕೌನ್ಸಿಲು ಮೆಂಬರುಗಳಿಗೆ ದೇಶದ ಅಭಿಪ್ರಾಯವನ್ನು ತಿಳಿಸಲು ಸಂಘವು ಅಗತ್ಯವಾಗಿದೆ. ಆದುದರಿಂದ ಸಂಘವನ್ನು ಅದಷ್ಟು ಬಲಪಡಿಸಲು ಪ್ರತಿಯೊಬ್ಬ ಜಮೀನುದಾರನೂ ಬದ್ಧಕಂಕಣನಾಗಬೇಕು. ಈ ವರ್ಷ ಇದಕ್ಕೆ ಸುಮಾರು ಮೂರುಸಾವಿರ ಮೆಂಬರುಗಳಾಗಿರುವರು. ಒಕ್ಕಲದಮೇಲೆ ರೈತರಿರುವ ಈ ದೇಶದಲ್ಲಿ ಒಂದೇ ಆಗಿರುವ ಈ ಸಂಘಕ್ಕೆ ಮೆಂಬರುಗಳ ಈ ಸಂಖ್ಯೆಯು ಬಹಳ ಅಲ್ಪವೆಂದೇ ಹೇಳಬೇಕು. ಸಂಘದ ಉದ್ಯೋಗಸ್ಥರು ತಕ್ಕಷ್ಟು ಮುತುವರ್ಜಿಯಿಂದ ಕೆಲಸಮಾಡದೆ ಇರುವುದು ಈ ಚಿಕ್ಕಸಂಖ್ಯೆಗೆ ಒಂದು ಮುಖ್ಯವಾದ ಕಾರಣವಾಗಿದೆ. ಚಂದಾಕೊಟ್ಟಿರುವ ಮೆಂಬರುಗಳಿಗೂ ಸಹ ವಾರ್ಷಿಕ ಮೀಟಿಂಗಿನ ನೋಟೀಸು ತಲುಪಲಿಲ್ಲವೆಂದು ಅಲ್ಲಲ್ಲಿ ಪುಕಾರುಗಳಿವೆ. ಸಮ್ಮಂದಪಟ್ಟ ಅಧಿಕಾರಿಗಳು ಇಂಥಾದ್ದಕ್ಕೆ ಇನ್ನು ಮುಂದೆ ಎಡೆಕೊಡಲಿಕ್ಕಿಲ್ಲವಾಗಿ ನಂಬುತ್ತೇವೆ. ಒರವರ್ಷ ಸಂಘದ ಮೆಂಬರುಗಳ ಸಂಖ್ಯೆಯು ಇಮ್ಮಡಿಯಾಗುವಂತೆಯೂ ಸಂಘದ ಕೆಲಸವು ದೇಶದವರಿಗೆ ಹೆಚ್ಚಿನ ತೃಪ್ತಿಯನ್ನುಂಟುಮಾಡುವಂತೆಯೂ ಎಲ್ಲರೂ ಪ್ರಯತ್ನಿಸುವರಾ ಹಾರೈಸುತ್ತೇವೆ.

ರಾಯರ್‌ಬಹದ್ದೂರ್ ಮುಕ್ಕಾಟಿರ ಐಯ್ಯಪ್ಪನವರು.

ಇವರು ಮೃತರಾದ್ದರಿಂದ ದೇಶದ ಇನ್ನೊಬ್ಬ ಧರ್ಮಬುದ್ಧಿ ಇದ್ದ ದೊಡ್ಡಮನುಷ್ಯರು ನಷ್ಟವಾದಂತಾಯಿತು

ಕೊಡಗು ಕೌನ್ಸಿಲು ವಿಷಯಗಳು

...ವರು ಭಯದಿಂದಲ್ಲದೆ ಸರ್ವವಿಧದಲ್ಲಿಯೂ ಒಳ್ಳೇ ಕೆಲಸವನ್ನು ಮಾಡಿ ...ವರೆಂಬ ಸರ್ಕಾರದ ಕನಸು ಸರಿಯದು. ಇದರಿಂದ ದೇಶ ... ಪ್ರಯೋಜನವಾಗುವುದಿಲ್ಲ. ಇದರ ... ಕ್ರಮದಿಂದ ಕುಂಟಾ ... ದೇವರುಗಳಿಂದಲ್ಲಿ ಒಂದು ಸ್ಥಾನವನ್ನು ... ಅಸ್ಪೃಶ್ಯರನ್ನು, ವಿರಾಜಪೇಟೆಯಲ್ಲಿ ... ಬಿಟ್ಟಿದರು. ವಿರಾಜಪೇಟೆ ... ಅಲಂಕಾರವಾದದ್ದೇನೋ ಹೌದು. ಆದರೂ ಈ ಧರ್ಮವು ಪ್ರಜೆಗಳಿಗೆ ಮತ್ತಿನ ಪ್ರಯೋಜನವಾಗುವ ರೂಪ ತಾಳಿದ್ದರೆ ನಮಗೆ ಇನ್ನೂ ಸಂತೋಷವಾಗುತ್ತಿತ್ತು. ಹ್ಯಾಗೂ ಈ ಧರ್ಮಕಾರ್ಯವಾಡಿ ಸ್ವಲ್ಪ ಕಾಲದೊಳಗೇನೇ ಇವರಿಗೆ ರಾಯ್ ಬಹದ್ದೂರ್ ಎಂಬ ಪದವಿ ಬಂತು. ಕುಂಟಾ ದೇಶಪಾಂಡೆಯವರು ಧಾರಾಳವುಳ್ಳವರಾಗಿ ಧರ್ಮಕ್ಕೆ ಅನೇಕ ವಿಷಯಗಳಲ್ಲಿ ಸಹಾಯಕರಾಗಿದ್ದರೆಂದು ತಿಳಿಯುತ್ತೇವೆ. ... ಅಧ್ಯಕ್ಷರನ್ನಾಗಿ ... ಇವರಿಗೆ ... ಗೌರವಿಸಿದರು. ಇವರ ವೃದ್ಧಾಪ್ಯದಲ್ಲಿ ... ಇವರು ... 83 ವರ್ಷದವರೆಗೆ ಬದುಕಿದ ... ಕಾಲದಲ್ಲಿ ದಿವಂಗತರಾಗಿದ್ದಾರೆ. ಇವರ ಆತ್ಮಕ್ಕೆ ಶಾಂತಿ ದೊರೆಯಲೆಂದು ...

ಕೊಡಗು ನ್ಯಾಯವಿಧಾಯಕ ಸಭೆ.

—o—

(ಕಳೆದ ಸಂಚಿಕೆಯಿಂದ ಮುಂದುವರಿದದ್ದು)

ಮೆ|| ಸಿ. ಎಮ್. ವೆಂಕಪ್ಪಯ್ಯನವರು.

ಸ್ಥಳೀಯ ಸ್ವರಾಜ್ಯದಲ್ಲಿ ... ಹಕ್ಕು ಕೊಡಬೇಕೆಂತ ... ಇದಕ್ಕೆ ... 1900 ನೇ ಇಸವಿಯಲ್ಲಿ ... ಸೆಕ್ರೆಟರಿಯನ್ನು ... ಚುನಾಯಿಸುವ ಹಕ್ಕು ಮತ್ತು ... ಸಂಖ್ಯೆ ... 1915 ರಲ್ಲೇ ಒಟ್ಟು ಇಂಡಿಯಾದಲ್ಲಿ ... ಚುನಾಯಿತರೆಂಬುದರಿಂದ ನಮ್ಮ ಈ ದೇಶ ... ಇನ್ನೂ ಚುನಾವಣೆಗೆ ಹಕ್ಕು ಸಿಕ್ಕಿರುವುದಿಲ್ಲ ... ಸುಧಾರಣೆಯಲ್ಲಿ ನಮ್ಮನ್ನು ಬಿಟ್ಟಿದ್ದಾರೆ ... ಬಿಟ್ಟುಹೋಗಿದೆ ಎಂಬುದಾಗಿ ಹೇಳಬಹುದು. ... ಸ್ಥಳೀಯ ಸ್ವರಾಜ್ಯದ ವಿಷಯದಲ್ಲಿ ... ಕೊಡಗಿನ ... ಹೆಚ್ಚಿರಬೇಕು. ... ಸಂಖ್ಯೆ ... ಪ್ರಜೆಗಳ ... ಪ್ರಜಾಪ್ರತಿನಿಧಿಗಳಿಗೆ ಕೊಟ್ಟು ... ಪ್ರೆಸಿಡೆಂಟರನ್ನು ಚುನಾಯಿಸುವ ಹಕ್ಕು ಸಹ ... ಇಂಡಿಯಾ ಗವರ್ನಮೆಂಟಿನ ಕರಾರಿನಲ್ಲಿ ... ಮೂಲಕವೇ ಪ್ರಜೆಗಳಿಗೆ ... ದೇಶದ ... ಸರಕಾರದವರು ... ಹೊಂದಿಸಿದ್ದಾರೆ ... ಇರಲಿ ... ಜನರು ... ನಾನು ಹೇಳುವುದಾಗಿದೆ.

ಮನೆಯಪ್ಪಂಡ ಚಿಣ್ಣಪ್ಪನವರು

1917 ನೇ ಇಸವಿಯಲ್ಲಿ ಸ್ಟೇಟ್ ಸೆಕ್ರೆಟರಿಯವರು ಪ್ರಕಟಿಸಿದ ಅವರ ಧ್ಯೇಯದಲ್ಲಿಯೇ ಸ್ಥಳೀಯ ಸ್ವರಾಜ್ಯ ಸಂಸ್ಥೆಗಳನ್ನು ಬೆಳೆಸಬೇಕೆಂತ ಇದೆ. ಸ್ಥಳೀಯ ಸ್ವರಾಜ್ಯ ಸಂಸ್ಥೆ ವಿಷಯವನ್ನು 1915 ನೇ ಇಸವಿಯಲ್ಲಿ ರಾಯಲ್ ಕಮಿಷನ್ ... ನೋಡಿದೆ. ... ದೇಶದ ... ಈ ತತ್ವಗಳಿಗೆ ... ಸರಕಾರಕ್ಕೆ ಸ್ಥಳೀಯ ಸ್ವರಾಜ್ಯ ... ಬೇರೆ ದೇಶಗಳಲ್ಲಿ ಪ್ರಜಾಪ್ರಭುತ್ವ ... ನಮಗೆ ಈ ಹಕ್ಕು ... ಸ್ಥಳೀಯ ಸ್ವರಾಜ್ಯವು ನಮ್ಮ ದೇಶಕ್ಕೆ ... ಪುರಾತನ ಕಾಲದಿಂದಲೇ ಗ್ರಾಮ ... ಇದು ಇಲ್ಲವೆಂತ ಹೇಳುವವರಿದ್ದರೆ ... ನನ್ನ ತೋರಿಸಿದಂತೆ ಆಗುತ್ತೆಯಷ್ಟೆ.

ಮೆ|| ಬಿ. ಜಿ. ಅಪ್ಪಯ್ಯನವರು.

... ಆದು ಇರುವ ರೀತಿಯಲ್ಲಿ ನಾನು ಒಪ್ಪ...

ಮೆ|| ಪಿ. ಶ್ರೀನಿವಾಸರಾಯರು

... ಏನೂ ... ಒಪ್ಪಿದ ಕರಾರು ... ಸ್ಥಳೀಯ ಸ್ವರಾಜ್ಯ ... ಪ್ರಜೆಗಳಿಗೆ ... ಸಿಕ್ಕಬೇಕಾಗಿದೆ. ... ಬೆಂಬಲಿಸುತ್ತೇನೆ.

5 ನೇ ಠರಾವು

... ಈಗ ಇರುವ ಬೆಳಿಗ್ಗೆ 8 ಘಂಟೆಯಿಂದ ರಾತ್ರಿ 8 ಘಂಟೆಯನ್ನು ಬದಲಾಯಿಸಿ ಬೆಳಿಗ್ಗೆ 9 ಘಂಟೆಯಿಂದ ಸಾಯಂಕಾಲ 4 ಘಂಟೆಗೆ ಬದಲಾಯಿಸಿಕೊಡಬೇಕು.

ಮೆ|| ಸಿ. ಗಣಪಯ್ಯನವರು

... ಸೂಚಿಸುತ್ತೇನೆ.

... ಸಭೆಯ ಮುಂದೆ ... ಒಂದೆರಡು ... ಇಚ್ಛಿಸುತ್ತೇನೆ.

... ದೇಶದ ಆರೋಗ್ಯವು ... ವಿಧಿಶವಾದ ... ಪೂರ್ವ ಪಶ್ಚಿಮ ದೇಶಗಳ ... ದೇಶದವರ ... ಆರ್ಥಿಕಸ್ಥಿತಿಯನ್ನು ಗಮನಿಸಿ ... ಪ್ರಜೆಗಳು ಯಾವ ರೀತಿ ಜೀವನ ನಡೆಸುತ್ತಿದ್ದಾರೆಂದು ತಿಳಿಯಬೇಕು. ಜನರ ... ಆರ್ಥಿಕಸ್ಥಿತಿಯು ... ಜನರಿಂದ ... ಇಂಥ ಕೆಲಸ ... ಜನರು ... ಒಂದು ದಿನ ... ತಮ್ಮ ... ಕೆಲಸ ... ಜನರು ... ಅಂಗಡಿ ... ಜನರು ... ಉಂಟು

ಈಗ ಅಂಗಡಿಗಳು ಬೆಳಿಗ್ಗೆಯಿಂದ ಸಾಯಂಕಾಲ 8 ಘಂಟೆವರೆಗೆ ... ಕೆಲಸಗಾರರಿಗೆ ... ಹನ್ನೆರಡು ಘಂಟೆಯಿಂದ ... ನಾಲ್ಕು ಘಂಟೆ ... ಬೇಕೆಂದು ಕೇಳುತ್ತೇನೆ

1. ... ಹೋಗುವ ಮುನ್ನ ... ಬೇಕೆಂದು ...
2. ... ಮನೆಗೆ ... ಇಚ್ಛಿಸಿದಾಗ ...
3. ... ನೊದಲೇ ತಮ್ಮ ಮನೆ ಸೇರುವರು.
4. ... ಅವಕಾಶವಿರಲಾರದು.
5. ರಾತ್ರಿಯವರೆಗೆ ಅಂಗಡಿಯ ... ಮನೆಗೆ ಹೋದ ... ಪೋಲೀಸರ ಚಾರ್ಜಿಗೆ ಗುರಿಯಾಗುವುದು ತಪ್ಪುವುದು.
6. ಜನರು ರಾತ್ರಿವೇಳೆಯಲ್ಲಿ ಪ್ರಯಾಣ ... ಅನೇಕ ... ಪಾರಾಗುವರು.

ಈ ಕಾರಣಗಳಿಂದ ನಾನು ಈ ಠರಾವನ್ನು ... ದೆ ತಂದಿದ್ದೇನೆ.

1. ... ಅಂಗಡಿಗಳಿಗೆ [ಬೆಳಿಗ್ಗೆಯಿಂದ ಸಾಯಂಕಾಲ 8 ಗಂಟೆ ವರೆಗೆ] ಇರುವ ಕಾಲನಿರ್ಣಯವನ್ನು 'ಬೆಳಿಗ್ಗೆ ಒಂಬತ್ತು ಗಂಟೆಯಿಂದ ಸಾಯಂಕಾಲ ನಾಲ್ಕು ಗಂಟೆಯವರೆಗೆ ಬದಲಾಯಿಸುವ ... ಈ ಸಭೆಯು ಚೀಫ್ ಕಮಿಷನರ ... ಸಿಫಾರಸ್ಸು ಮಾಡುತ್ತದೆ

ಮೆ|| ಪಿ. ಡಿ. ಬೆಳ್ಯಪ್ಪನವರು.

ಕೌನ್ಸಿಲಿನ ಮುಂದೆ ಚರ್ಚೆಗೆ ಬಂದಿರುವ ಠರಾವನ್ನು ಅನುಮೋದಿಸುವ ಬಗ್ಗೆ ಈ ಸಂಗತಿಯ ... ಸೂಚಿಸಲಿಕ್ಕಾಗಿ ಕೆಲವು ಮಾತುಗಳನ್ನಾಡಬೇಕಾಗಿದೆ. ಸಾಕಾಯಿ ಮತ್ತು ... ಅಂಗಡಿಗಳ ... ಸಂಭವಿಸುತ್ತಿರುವ ಅನಾಚಾರ ಮತ್ತು ಅನಾನುಕೂಲ...

ಗಳಿಗೆ ಅವರು ... ಈ ವಿಷಯ ಸ್ವಲ್ಪ ... ಪೋಲೀಸಿಯ ... ಗಂಟೆಗಳಿಂದ ಈ ಠರಾವಿನಲ್ಲಿ ಸೂಚಿಸಿದ ಗಂಟೆಗಳಿಗೆ ... ವಿರಾಜಪೇಟೆ ... ದಿನ ... ಮೊದಲಿನ ... ವರ್ಷದ ... ಈ ಠರಾವನ್ನು ... ಇದನ್ನು ... ಈ ಠರಾವು ... ಅನುಮೋದಿಸುತ್ತೇನೆ.

ಮೆ|| ಬಿ. ಜಿ. ಅಪ್ಪಯ್ಯನವರು

... ಈ ಠರಾವನ್ನು ... ಬೆಳಿಗ್ಗೆ ... ಘಂಟೆ ... ನಾನು ... ಸೂಚಿಸುತ್ತೇನೆ

ಮೆ|| ಸಿ. ಗಣಪಯ್ಯನವರು.

ಕಮಿಷನರ ಸಾಹೇಬರ ... ಠರಾವನ್ನು ... ಹಿಂತೆಗೆದುಕೊಳ್ಳುತ್ತೇನೆ

6ನೇ ಠರಾವು.

ಸ್ಥಳೀಯ ಸ್ವರಾಜ್ಯದ ... ಠರಾವನ್ನು ಮುಂದೆ ... ಇಲ್ಲ

7ನೇ ಠರಾವು.

"... ತೋಡಿನ ... ಸುಂಕ ಕೊಡಬೇಕೆಂಬ ... "

ಮೆ|| ... ನವರು.

ಈ ತೋಡು ... ಕಾವೇರಿಯ ... ದಕ್ಷಿಣ ... ತೋಡಿನಲ್ಲಿ ... ಎಂಬಲ್ಲಿ ಒಂದು ಸುಂಕದಕಟ್ಟೆ ಇದೆ. ಇದು ... ವರ್ಷಕ್ಕೆ ... (ಸುಮಾರು 300 ರೂಪಾಯಿಗೆ ...) ಈ ಉತ್ಪತ್ತಿಯ ಪೂರಾ ... ಅರ್ಧಭಾಗವಾಗಿದೆ ಯಾಕೆಂದರೆ ಈ ತೋಡಿನ ... ಸುಂಕದ ಕಟ್ಟೆ ಇದೆ, ಅಲ್ಲಿ ಸುಂಕ ಕೊಟ್ಟು ... ಆದೇ ದಿನ ... ಗಾಡಿಗಳು ... ಸುಂಕ ಕೊಡಬೇಕಾಗಿಲ್ಲ. ... ನಮಗೆ ಉಪಯೋಗವಿರುವ ... ಸಾಮಾನುಗಳೆಲ್ಲ ... ಆದ್ದರಿಂದ ... ಈ ತೋಡಿನ ... ಈ ತೋಡು ... ನೋಡಿ ... ಇದನ್ನು ... ಈ ತೋಡಿನ ... ಸಂಗ್ರಹ ...

ಇದನ್ನು ... ಸರಕಾರದವರು ಇನ್ನೂ ... ಗ್ರಾಂಟು ಕೊಡಬೇಕು. ... 20 ವರ್ಷದ ಹಿಂದೆ ಈ ತೋಡಿಗೆ ... ಸಮಯದಲ್ಲಿ ... ತೋಡಿಯಲ್ಲಿ ...

ಕೊಡಗು ಕೌನ್ಸಿಲ್ ಮೀಟಿಂಗು.

ವಾದ್ದರಿಂದ ಇದರ ಹಣದಿಂದ ಅಲ್ಲಿ ಕೋಡಿಗೆ ಸೇತುವೆ ಕಟ್ಟತಕ್ಕ ವರ್ತಮಾನವಿದೆ ಈಗ ಈ ಸೇತುವೆಗೆ ಗ್ರಾಂಟು ಕೊಟ್ಟು ಜಾರಿ ಮಾಡಬಹುದು

ಮೆ|| ಕೋಟೆಂಜಣ್ಣಪ್ಪನವರು ಅನುಮೋದಿಸಿದರು.

ಮೆ|| ಟಿ. ಜಿ. ಟಾಸ್ಕರ್‌ರವರು.

ಡಿಸ್ಟ್ರಿಕ್ಟುಬೋರ್ಡಿನ ಕೆಲಸವನ್ನು ಈ ಕೌನ್ಸಿಲಿನಲ್ಲಿ ಹೇಗೆ ಚರ್ಚೆಗೆ ತರಬಹುದೆಂಬುದನ್ನು ನೋಡಲಿಕ್ಕಾಗಿಯೇ ಈ ಠರಾವು ತಂದಂತೆ ಕಾಣುತ್ತೆ. ನಾಮುದಾರ ಮೆಂಬರು ಸೂಚಿಸಿದ ಆದಾಯದ ಸಂಗತಿಯೇನೂ ನನಗೆ ಗೊತ್ತಿಲ್ಲ ಡಿಸ್ಟ್ರಿಕ್ಟುಬೋರ್ಡ್ ರಿಕಾರ್ಡು ನೋಡಿದರೆ ಈ ಸೇತುವೆಗಾಗಿ 1908 ರಲ್ಲಿ 10000 ರೂ ಅಂದಾಜುಮಾಡಿದ್ದರು ಅದೇ ಇಸ್ಟಿಮೇಟಿಯಲ್ಲಿ ಈ ಸೇತುವೆ ಬೇಡವೆಂತಲೂ ಸೋಮವಾರಪೇಟೆ ಕುಂದಳ್ಳಿಘಟ್ಟದ ರಸ್ತೆ ಮಾಡಿದರೆ ಈ ರಸ್ತೆಯ ಪ್ರಾಮುಖ್ಯತೆಯು ಕಡಿಮೆಯಾಗುವದಿಲ್ಲವೋ ಎಂಬದನ್ನು ಅಜಮಾಯಿಸಬೇಕೆಂತಲೂ ಡಿಸ್ಟ್ರಿಕ್ಟುಬೋರ್ಡಿನಲ್ಲಿ ತೀರ್ಮಾನವಾಗಿದೆ ಘಟ್ಟದ ರಸ್ತೆಗೆ ಬೇಕಾದ ಸೇತುವೆಗಳು ಆಗುವವರೆಗೆ ಈ ಸೇತುವೆ ಬಾಕಿ ಇಡಬೇಕೆಂತ ಹಿಂದಿನಿಂದ ತೀರ್ಮಾನವಾಯಿತು ಈ ಸ್ಥಳವನ್ನು ನಾನೇ ನೋಡಿದ್ದೇನೆ ಸೇತುವೆಯಾದರೆ ಬಹಳ ಉತ್ತಮವೆಂತ ನನಗೇನೇ ತೋರುತ್ತೆ ನಾಮುದಾರ ಮೆಂಬರು ಸೂಚಿಸಿದ ಅಕ್ಷೇಪಣೆಯನ್ನೇ ನಾನು ತೆಗೆದುಕೊಳ್ಳಬೇಕಾಗಿದೆ—ಡಿಸ್ಟ್ರಿಕ್ಟು ಬೋರ್ಡು ರಸ್ತೆಗಳಲ್ಲಿ ಯಾವದು ಮುಂದೆ ಆಗಬೇಕು ಯಾವದು ಹಿಂದೆ ಆಗಬೇಕೆಂಬದನ್ನು ನಾವು ತೀರ್ಮಾನಿಸಲು ಸಾಧ್ಯವಿಲ್ಲ ಈ ವಿಷಯವನ್ನು ಡಿಸ್ಟ್ರಿಕ್ಟು ಬೋರ್ಡು ಅಜಮಾಯಿಸಿ ಅವಶ್ಯವೆಂತ ಅದಕ್ಕೆ ತೋರಿದರೆ ಹಣಕ್ಕೆ ಅರ್ಜಿ ಬರೆಕೊಳ್ಳಬಹುದು ಆಗಯೋಚಿಸಬಹುದು.

ಮೆ|| ನಿಡ್ಯದ ಸುಬ್ಬಣ್ಣಯ್ಯನವರು

ಡಿಸ್ಟ್ರಿಕ್ಟುಬೋರ್ಡು ಮೂಲಕ ಅಜಮಾಯಿಸಿ ಅನಂತರ ಇಲ್ಲಿ ಚರ್ಚಿಸಬಹುದಾದ್ದರಿಂದ ಠರಾವನ್ನು ವಾಪಸು ತೆಗೆದುಕೊಳ್ಳುತ್ತೇನೆ.

8 ನೇ ಠರಾವು.

"ಹಾರಂಗಿನಾಲೆಯನ್ನು ಆದಷ್ಟು ಬೇಗನೆ ಮಾಡಿಸಿ ಕೊಡಬೇಕೆಂತ ಈ ಕೌನ್ಸಿಲ್ ಹುಜೂರ್ ಚೀಫ್ ಕಮಿಷನರ್ ಸಾಹೇಬರವರಿಗೆ ಶಿಫಾರ್ಸು ಮಾಡುತ್ತದೆ."

ಮೆ|| ನಿಡ್ಯದ ಸುಬ್ಬಣ್ಣಯ್ಯನವರು.

ಇದು ಕಣಿವೆಹೋಬಳಿ ರೈತರು ಬಹಳ ದಿನಗಳಿಂದ ಕೇಳುತ್ತಿರುವ ಸಹಾಯವಾಗಿದೆ ಬಜೆಟ್ ಮೆಮೋರಾಂಡಂನಲ್ಲಿ ಈ ಪ್ರಾಜೆಕ್ಟಿನ ವಿಷಯವನ್ನು ನನ್ನ ಅನರಬಲ್ ಆದಾಯವೆಚ್ಚದ ಮೆಂಬರರು ನಮೂದಿಸಿರುವದಕ್ಕೆ ಕಣಿವೆ ಹೋಬಳಿ ಪರವಾಗಿ ನಾನು ಅವರನ್ನು ವಂದಿಸುತ್ತೇನೆ ಇದರ ಸಮ್ಮಂಧದ ರಿಕಾರ್ಡುಗಳೆಲ್ಲಾ ಈ ಸಭೆಗೆ ಬಂದಿಲ್ಲ. 1919 ರಲ್ಲಿದ್ದ ಯಗ್ಸಿಕ್ಯುಟಿವ್ ಇಂಜನಿಯರಾಗಿದ್ದ ಮು|| ವೈಟ್ ಸಾಹೇಬರವರಲ್ಲಿ ನಾನು ಈ ವಿಷಯವಾಗಿ ಮಾತನಾಡಿದಾಗ ಈ ಪ್ರಾಜೆಕ್ಟ್ ಕಟ್ಟಬಹುದೆಂತ ನನ್ನಲ್ಲಿ ಖಂಡಿತವಾಗಿ ಹೇಳಿದರು. ಆದರೆ ಹಣದ ಕೊರತೆ ಅಡ್ಡಬಂತು. ಆಗ ಇನ್ನೂ ಯುದ್ಧವು ಪೂರೈಸಿರಲಿಲ್ಲ. ಈ ಪ್ರಾಜೆಕ್ಟ್ ಅಜಮಾಯಿಷಿ ಮಾಡಿದಾಗ ಅಂದರೆ ಈಗ್ಗೆ 20 ವರ್ಷಗಳಲ್ಲಿಯೇ ನಾಲಾ ಯೇರ್ಪಾಡು ಮಾಡಿದ್ದರೆ ಇದರ ಖರ್ಚು ಈಗ್ಗಿಂತ ಶೇಕಡ 50 ರಷ್ಟು ಕಮ್ಮಿಯಾಗುತ್ತಿತ್ತು. ಹಾಗೆ ಕಟ್ಟಿದ್ದರೆ ಆ ಕಾಲದಿಂದಲೂ ಇದುವರೆಗೂ ಸರ್ಕಾರಕ್ಕೆ ಖಾಯಂ ಆಗಿ ಲ್ಯಾಂಡ್ ರೆವಿನ್ಯೂ ಉತ್ಪತ್ತಿಯಾಗುತ್ತಿತ್ತು. ಈ ಹೋಬಳಿಯ ಜನಸಂಖ್ಯೆಯು ಕಮ್ಮಿಯಾಗುವದರ ಬದಲು ಬಹಳ ಅಭಿವೃದ್ಧಿಯಾಗುತ್ತಿತ್ತು.

ನಮ್ಮ ಪ್ರಜಾವತ್ಸಲರಾದ ಸರ್ಕಾರದವರು ಈ ಬಾಬಿನಲ್ಲಿ ಹಣದ ರೂಪದಲ್ಲಿ ಪ್ರತಿಫಲ ನಿರೀಕ್ಷಿಸದೆ ಈ ಕಾಂಗಾರಿಗೆ ಹಣ ಖರ್ಚುಮಾಡಬೇಕೆಂತ ನಾನು ಅಭಿಪ್ರಾಯಪಡುತ್ತೇನೆ. ಸರ್ಕಾರಕ್ಕೆ ಇದರಿಂದ ಪ್ರತಿಫಲವೇನೆಂದರೆ ತೃಪ್ತರಾದ ಮತ್ತು ಸಮೃದ್ಧಿಯಾದ ಪ್ರಜೆಗಳೇ ಈ ಕಾಂಗಾರಿಯನ್ನು ಆದಾಯದ್ದೆಂತ ಭಾವಿಸದೆ ಕ್ಷಾಮನಿವಾರಣೋಪಾಯದ ಕಾಂಗಾರಿಯೆಂತ ತಿಳಿದು ಜಾರಿಗೆ ತರಬೇಕು ಈ ಹೋಬಳಿಯಲ್ಲಿ ಮಳೆ ಬಹಳ ಕಮ್ಮಿ ಮಳೆ ಕಮ್ಮಿಯಾದ ವರ್ಷಗಳಲ್ಲಿ ಇಲ್ಲಿ ಕ್ಷಾಮದ ಬಾಧೆ ಉಂಟೇ ಉಂಟು ಕಳೆದ ವರ್ಷ ನಹ ನೋಡಿ. ಜೋಳ್ಪಾಗಿ ಅಕ್ಟೋಬರ್‌ನಲ್ಲಿ ಮಳೆ ನಿಂತುಹೋಗಿ ಈ ಹೋಬಳಿಯವರು ಕ್ಷಾಮಬಾಧೆಗೆ ಗುರಿಯಾಗಿದ್ದಾರೆ ಹೀಗಾದದ್ದು ಇದೊಂದೇ ವರ್ಷವಲ್ಲ ಮಳೆ ಕಮ್ಮಿಯಾದಾಗಲೆಲ್ಲಾ ಇದ್ದೇ ಇದೆ.

ಆದಾಯಾಪೇಕ್ಷೆಯಿಂದ ಈ ಕಾಮಗಾರಿ ನಡಿಸಬೇಕಾದರೂ ಈ ಸ್ಕೀಮು ಆದಾಯ ಬರುವಂತೆಯೇ ಜಾರಿಗೆ ತರಬಹುದು ಇದರಿಂದ 6000 ದಿಂದ 10,000 ಸಾವಿರ ಎಕರೆವರೆಗೆ ಕರಿಯಾಗುತ್ತೆ. ಇದರ ಪೈಕಿ 7—8 ಸಾವಿರ ಎಕ್ರೆ ರೈತರ ಹಿಡುವಳಿಯಲ್ಲಿಯೇ ಇದೆ. ಹೊಸದಾಗಿ ಒಂದೆರಡು ಸಾವಿರ ಎಕ್ರೆ ಸರಕಾರಿ ಜಮೀನು ಸಹ ತರಿಯಾಗುತ್ತೆ. ಈ ಭೂಮಿಗೆ ಸಹ ದರಖಾಸ್ತು ಮಾಡುವವರಿದ್ದಾರೆ. ಇದಕ್ಕೆ ಸಮ್ಮಂಧಪಟ್ಟ ರೈತರು ಎಕರೆ 1 ಕ್ಕೆ 30 ರೂಪಾಯಿವರೆಗೆ ಸರ್ಕಾರಕ್ಕೆ ಕಂಟ್ರಿಬ್ಯೂಷನ್ ಕೊಡಲು ಒಪ್ಪುತ್ತಾರೆ ಸರಕಾರಿ ಜಮೀನು ಮಾರಾಟವಾಗುತ್ತೆ. ಇದರಿಂದ ಸುಮಾರು ಒಂದುಲಕ್ಷ ರೂಪಾಯಿ ಬರಬಹುದು. ಕಂಟ್ರಿಬ್ಯೂಷನ್ ಒಂದು ಲಕ್ಷಕ್ಕಿಂತ ಕಮ್ಮಿ ಇಲ್ಲದೆ ಬರಬಹುದು. ಒಟ್ಟು 2 ಲಕ್ಷ ಸರಕಾರಕ್ಕೆ ಸುಲಭದಲ್ಲಿ ಸಿಕ್ಕುತ್ತೆ. 4 ರೂಪಾಯಿ ನೀರು ತೆರಿಗೆ ಕೊಡಲು ಸಹ ಇವರು ಒಪ್ಪುತ್ತಾರೆ ಆದ್ದರಿಂದ ಸರ್ಕಾರಕ್ಕೆ 5 ಪರ್ಸೆಂಟ್ ಬಡ್ಡಿ ಸಿಕ್ಕುವುದಕ್ಕೆ ಕಷ್ಟ ಕಾಣುವುದಿಲ್ಲ.

ಇದಲ್ಲದೆ ಈ ನಾಲೆಯಿಂದ ನೆರೆಯ ಮೈಸೂರು ಸೀಮೆಯವರಿಗೂ ಪ್ರಯೋಜನವಿದೆಯೆಂದು ತಿಳಿಯುತ್ತೇನೆ. ಮೈಸೂರು ಸರ್ಕಾರದವರು ನೀರಾವರಿ ವಿಷಯದಲ್ಲಿ ತುಂಬಾ ಮುತುವರ್ಜಿಯುಳ್ಳವರಾದ್ದರಿಂದ ಆ ಸರ್ಕಾರದವರು ಸಹ ಇದಕ್ಕೆ ಕನ್ನಷ್ಟು ಖರ್ಚು ಕೊಟ್ಟಾರೆಂತ ನಾನು ನಂಬುತ್ತೇನೆ. ಈ ನಾಲಾ ಸಂಗ್ತಿ ತನಿಖೆ ಮಾಡುವಾಗ ಈ ಪ್ರಶ್ನೆಯನ್ನು ಆಲೋಚಿಸಬೇಕು.

ಹಾರಂಗಿನ ಉತ್ಪತ್ತಿಯಲ್ಲಿ ಗಂಧದಿಂದಲೇ 5, 6 ಲಕ್ಷ ರೂಪಾಯಿ ಬರುತ್ತದೆ. ಇದರ ಹೆಚ್ಚಿನ ಭಾಗ ಸಂಪಾದನೆಯು ಪಟ್ಟಣದ ತಾಲ್ಲೋಕಿನಲ್ಲಿಯೇ ಸಿಕ್ಕುವುದಾಗಿದೆ ದೇಶದ ಸ್ವಭಾವಿಕವಾದ ಈ ಉತ್ಪತ್ತಿಯನ್ನು ಯುದ್ಧಕಾಲದಲ್ಲಿ ಮಾಪುಕೂಟ್ ಸ್ಕೀಮಿಗೆ ಕರ್ಚುಮಾಡಿದ್ದು ನಮಗೆ ಬಹಳ ಸೋಜಿಗವನ್ನುಂಟುಮಾಡುತ್ತೆ ಈ ಮಾಕೂಟ್ ಸ್ಕೀಮಿನಿಂದ ಏನು ಉತ್ಪತ್ತಿ ಬರಬಹುದೆಂಬುದನ್ನು ಲೆಖ್ಖ ಹಾಕದೆ ಗಂಧದ ಉತ್ಪತ್ತಿಯನ್ನು ಈ ಮಾಕೂಟಕ್ಕೆ (ಇಂಪೀರಿಯಲ್ ಸರಕಾರದ ಅನುಕೂಲಕ್ಕಾಗಿ) ವಿನಿಯೋಗಿಸಿಬಿಟ್ಟು ಸರ್ಕಾರದ ರಾಜಭಕ್ತಿಯುತರಾದ 10000 ಜನರ ಬಡತನ ನೀಗಲು ಈ ಪ್ರಾಜೆಕ್ಟು ಜಾರಿ ಮಾಡಲು ನಮ್ಮ ಅಧಿಕಾರಿಗಳು ಹಿಂದು ಮುಂದು ನೋಡುತ್ತಿರುವುದು ನನಗೆ ಆಶ್ಚರ್ಯವಾಗಿದೆ ಅಲ್ಲದೆ ನಾಲೆಯಿಂದ ಸುಮಾರು ಅರ್ಧಭಾಗ ಜನರಿಗೆ ಹೊಸದಾಗಿ ಜೀವನ ಕಲ್ಪಿಸಿಕೊಟ್ಟಂತೆ ಆಗುವುದರಲ್ಲಿ ಸಂಶಯವೇನೂ ಇರುವುದಿಲ್ಲ. ಈ ಪ್ರಾಂತ್ಯದವರು ವಿದ್ಯೆಯಿಲ್ಲದವರಾದ್ದರಿಂದ ತಮ್ಮ ಕಷ್ಟಗಳನ್ನು ಸರಕಾರದವರಲ್ಲಿ ಮತ್ತು ತಮ್ಮ ಇತರ ಸಹೋದರರಲ್ಲಿ ತಿಳಿಸಲು ಅಸಮರ್ಥರಾಗಿದ್ದಾರೆ. ಆದರೆ ಕಳೆದ ವರ್ಷ ಇವರು ಈ ನಾಲಾ ಸಂಗ್ತಿಯಲ್ಲಿ ತಾವೇ ಯಕ್ಸ್‌ಪರ್ಟ್ ಅಭಿಪ್ರಾಯ ತಿಳಿಯಲು ಕೆಲವು ಹಣ ಸಹ ಧಾರಾಳವಾಗಿ ಚಂದಾ ಹಾಕಿಕೊಂಡಿರುವದು ನೋಡಿದರೆ ಅವರು ಈ ಸಂಗ್ತಿಯಲ್ಲಿ ಎಷ್ಟರಮಟ್ಟಿಗೆ ಆತುರರಾಗಿದ್ದಾರೆಂಬುದು ನಿದರ್ಶನವಾಗುತ್ತೆ. ಅವರ ಈ ಬಾಬಿನ ಅಭಿಪ್ರಾಯ ಸರಿಯೇ ಎಂಬುದನ್ನು ಇಲ್ಲಿ ಚರ್ಚಿಸುವುದಿಲ್ಲ ನನ್ನ ಅಭಿಪ್ರಾಯದಲ್ಲಿ ಇಂಥಾ ಬಾಬುಗಳಲ್ಲಿ ನಮ್ಮ ಸರಕಾರದವರ ಸಹಾಯವೂ ಸಹಾನುಭೂತಿಯೂ ಇಲ್ಲದೆ ಈ ಹೋಬಳಿಯವರ ಕಷ್ಟವನ್ನು ಪರಿಹಾರ ಮಾಡಲು ಶಕ್ಯವಿಲ್ಲವೆಂತ ತಿಳಿಯುತ್ತೇನೆ. ಆದ್ದರಿಂದ ಈ ಸಭೆಯು ಈ ನನ್ನ ರಿಜಲ್ಯೂಷನ್ ಪಾಸುಮಾಡಿ ಆದಷ್ಟು ಬೇಗನೆ ಈ ಪ್ರಶ್ನೆಯನ್ನು ಆಮೂಲಾಗ್ರವಾಗಿ ಪರೀಕ್ಷಿಸಿ ಈ ಕಾಂಗಾರಿಯನ್ನು ಜಾಗ್ರತೆ ಜಾರಿಗೆ ತರಬೇಕಾಗಿ ನಾನು ಮತ್ತೊಂದು ಸಲ ಪತ್ತಿ ಹೇಳುತ್ತೇನೆ

ಮೆ|| ಬಿ ಶ್ರೀಪತಿರಾಯರು.

ಬಹಳ ಸಂತೋಷದಿಂದ ಈ ಠರಾವಿಗೆ ಅನುಮೋದಿಸುತ್ತೇನೆ. ಜರೂರಿನಲ್ಲಿ ಆಗಬೇಕಾದ ಕೆಲಸವಾದ್ದರಿಂದ ಪ್ರಜೆಗಳ ಕ್ಷೇಮಕ್ಕೆ ನೀರಾವರಿ ಕಾಂಗಾರಿಯು ಬಹಳ ಮುಖ್ಯವಾದ್ದರಿಂದಲೂ, ಈ ನಾಲೆ ಎಲ್ಲದಕ್ಕಿಂತಲೂ ದೊಡ್ಡದಾದ್ದರಿಂದಲೂ ಒಗ್ಗಟ್ಟಿನಿಂದ ಈ ಠರಾವನ್ನು ಮಂಜೂರ್ ಮಾಡಿಕೊಳ್ಳಬೇಕೆಂತ ಕೇಳಿಕೊಳ್ಳುತ್ತೇವೆ.

ಮೆ|| ಕೋಟೆದ ಚಿಣ್ಣಪ್ಪನವರು

ಇದನ್ನು ನಾನು ಸ್ವೀಕರಿಸುತ್ತೇನೆ ಅರಮನೆ ಚಪೇರಿ, ಕೈರ್ ಮತ್ತು ಈ ನಾಲೆ ಇವೇ ಮೂರು ಮುಖ್ಯ ದೊಡ್ಡ ಖರ್ಚಿನ ಬಾಬುಗಳು ಹಾರಂಗಿ ನಾಲೆಯನ್ನು ಮಾಡಿದರೆ ಒಳ್ಳೇ ಉತ್ಪತ್ತಿಯಾಗುತ್ತೆ ಕಷ್ಟಪಡುವ ಪ್ರಜೆಗಳ ಸಹಾಯಕ್ಕಾಗಿ ಈ ಠರಾವನ್ನು ಮಂಜೂರ್ ಮಾಡಿಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ

(ಮುಂದರಿಯುವುದು)

ವರ್ತಮಾನಸಂಗ್ರಹ

ಒಳದೇಶ

ಕೊಡಗಿನ ಕ್ರಿಕೆಟ್ ಟೂರ್ನಮೆಂಟಿನಲ್ಲಿ ಮಡಿಕೇರಿಯ ಯುನೈಟೆಡ್ ಕ್ಲಬ್ಬಿನ ಟೀಮುಗೆದ್ದಿತು. ಕಳೆದ ತಾ|| 29 ರಲ್ಲು ಬಟ್ಲನ್ನು ಗೆದ್ದ ಟೀಮಿಗೆ ಇನಾಮು ಕೊಡಲಿಕ್ಕೆ ಕಮಿಷನರವರು ಬರುತ್ತೇನೆಂದು ಒಪ್ಪಿಕೊಂಡಿದ್ದರು ಆದರೆ ಅವರಿಗೆ ಸ್ವಲ್ಪ ಕಾಯಿಲೆಯ ದೆಸೆಯಿಂದ ಬರಲು ಅನಾನುಕೂಲವಾದುದರಿಂದ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಮೆ|| ಕೆ ಚಂಗಪ್ಪನವರು ಬಟ್ಲನ್ನು ಮೇನ್ ಗ್ರೌಂಡಿನಲ್ಲಿ ಗೆದ್ದ ಟೀಮಿಗೆ ಕೊಟ್ಟರು. ಈ ವೇಳೆಯಲ್ಲಿ ಮೆ|| ಕೆ. ಚಂಗಪ್ಪನವರೂ, ಗೆದ್ದ ಟೀಮಿನ ಕ್ಯಾಪ್ಟನ್ ಮೆ|| ಪಿ ಸಿ. ಉತ್ತಯ್ಯನವರು ಮತ್ತು ಸ್ಪೋರ್ಟ್ಸ್ ಕಮಿಟಿಯ ಸೆಕ್ರೆಟರಿ ಮೆ|| ಎಂ. ಎಂ. ಬೆಳ್ಳಿಯಪ್ಪನವರು ಆಟಗಳ ವಿಷಯ ಕೆಲವು ಮಾತುಗಳನ್ನಾಡಿದರು.

ಮಡಿಕೇರಿಯ ಮೆ|| ಗಡಂಗ ಸೀತಾರಾಮಯ್ಯನವರ ಮಗ ಮೆ|| ರಾಮಯ್ಯನವರು ಎಲ್.ಎಲ್.ಬಿ. ಪರೀಕ್ಷೆಯಲ್ಲಿ ಪಾಸಾಗಿರುವರು. ಇವರು ಸೆಂಟ್ರಲ್ ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದರು.

ಸಂಪಾಜೆ ಬಳಿಯಲ್ಲಿರುವ ಮೊಣ್ಣಂಗೇರಿ ಗ್ರಾಮದಲ್ಲಿ ಒಂದು ತುಂಟ ಕಾಡಾನೆಯು ಬಹಳ ಹಾವಳಿಯನ್ನುಂಟು ಮಾಡುತ್ತಿರುವುದೆಂದು ವರ್ತಮಾನ.

ದಕ್ಷಿಣ ಕನ್ನಡದ ಸಂಪಾಜೆಯಲ್ಲಿ ಕಳೆದವಾರ ಎರಡು ಜನರಿಗೆ ವಾಂತಿಭೇದಿ ರೋಗವು ತಗಲಿ ನಾಲ್ಕು ಮರಣ ಉಂಟಾದವು. ನಮ್ಮ ಸೇನಿಟರಿ ಇನ್ಸ್ಪೆಕ್ಟರವರು ಎಚ್ಚರಿಕೆಗಾಗಿ ಅದರ ಬಳಿಯಾಗಿರುವ ಕೊಡಗಿನ ಸಂಪಾಜೆಗೆ ಹೋಗಿರುವರು

ಮೆ|| ಪಟ್ಟಮಾಡ ದೇವಯ್ಯನವರು ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಕೆಲಸವನ್ನು ಬೂರ್ ನಿಂದ ಇನ್ನೂ ಆರುತಿಂಗಳವರೆಗೆ ನೋಡಬೇಕೆಂದು ಹುಕುಂ ಆಗಿದೆಯೆಂದು ತಿಳಿಯಬರುತ್ತದೆ

ತಾ|| 4ರಲ್ಲು ಕೊಡಗು ಕೋ ಆಪರೇಟಿವ್ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಮಡಿಕೇರಿಯಲ್ಲಿ ನಡೆಯಿತು

ಡಾಕ್ಟರ್ ಕಸಿನ್ಸ್ ರವರು ಕಳೆದ ತಾ|| 26ರಲ್ಲು ದಕ್ಷಿಣ ಕೊಡಗಿಗೆ ಹೋಗಿ ಆದಿನ ಸಾಯಂಕಾಲ ವೀರಾಜಪೇಟೆಯಲ್ಲಿ ಹಿಂದೂದೇಶದ ಕಲಾಕೌಶಲ್ಯದ (ಆರ್ಟ್) ವಿಷಯ ಭಾಷಣಮಾಡಿದರು ತಾ|| 28ರಲ್ಲು ಪೊನ್ನಂಪೇಟೆ ಗೆ ಹೋಗಿದ್ದರು ತಾ|| 29ರಲ್ಲು ವೀರಾಜಪೇಟೆಯಿಂದ ಬೆಂಗಳೂರಿಗೆ ಹೊರಟುಹೋದರು.

ಜಮೀನುದಾರರ ಸಂಘದ ಎಗ್ಸಿಕ್ಯುಟಿವ್ ಕಮಿಟಿ ಮೀಟಿಂಗು ವೀರಾಜಪೇಟೆಯಲ್ಲಿ ತಾ|| 7ರಲ್ಲು ಬೆಳಿಗ್ಗೆ ನಡೆಯಿತು

ಚೀಫ್ ಫಾರೆಸ್ಟ್ ಆಫೀಸರಾದ ಮೆ|| ಮಿಂಚಿನ್‌ರವರು ಈ ತಿಂಗಳಲ್ಲು ರಜೆಯಲ್ಲಿ ಇಂಗ್ಲೆಂಡಿಗೆ ಹೋಗುವುದರಿಂದ ಅವರ ಬದಲು ಮೆ|| ಡೇರಿಂಗ್‌ಟನ್‌ರವರೂ ಮೆ|| ಡೇರಿಂಗ್‌ಟನ್‌ರವರ ಬದಲಿಗೆ ಮೆ|| ವಾಲ್‌ಫೋರ್ಡ್‌ರವರೂ, ಮೆ|| ವಾಲ್‌ಫೋರ್ಡ್‌ರವರ ಬದಲಿಗೆ ಮೆ|| ಸಿ. ಎಂ. ದೇವಪ್ಪನವರು ಆಕ್ಟಿಂಗ್ ಕೆಲಸ ನೋಡುವಂತೆ ಏರ್ಪಾಡಾಗಿದೆ

ಈ ತಾರೀಖು 7 ರಲ್ಲು ಮಧ್ಯಾಹ್ನದಮೇಲೆ ವೀರಾಜಪೇಟೆಯಲ್ಲು "ಕೊಡಗು" ಕಂಪೆನಿಯ ಶೇರುದಾರರ ಜನರಲ್ ಮೀಟಿಂಗು ನಡೆಯಿತು. ಇದರ ವಿವರವು ಬರುವವಾರ ಪ್ರಕಟಿಸಲ್ಪಡುವುದು.

ಮೆ|| ಗುಂಡುಗುಟ್ಟಿ ಮಂಜಯ್ಯನವರು ತಲಕಾವೇರಿ ಅಗಸ್ತ್ಯೇಶ್ವರ ದೇವಸ್ಥಾನದಲ್ಲು ಶಾಶ್ವತವಾಗಿ ಒಂದು ಸೇರು ಅಕ್ಕಿ ಅನ್ನದ ನೈವೇದ್ಯ ಪ್ರತಿದಿವಸವೂ ನಡಿಸುವುದಕ್ಕಾಗಿ ಒಂದುಸಾವಿರ ರೂಪಾಯಿಗಳನ್ನು ಟೆಂಪಲ್ ಕಮಿಟಿಯವರಿಗೆ ಕೊಟ್ಟಿರುತ್ತಾರೆ ಇದನ್ನು ಕಮಿಟಿಯವರು ವಂದನೆಯಿಂದ ಅಂಗೀಕರಿಸಿರುತ್ತಾರೆ. ಈ ಮಹನೀಯರು ಇದೇ ದೇವಸ್ಥಾನ ರಿಪೇರಿಗಾಗಿ ಕಳೆದವರ್ಷ ಒಂದುಸಾವಿರ ರೂಪಾಯಿ ಕೊಟ್ಟಿದ್ದರು ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ರಿಪೇರಿಗೆ ಒಂದುಸಾವಿರ ರೂಪಾಯಿಕೊಡಲು ವಾಗ್ದಾನ ಮಾಡಿರುವರು. ಇಂಥಾ ಉದಾರಮನಸ್ಸಿನ ಮಹನೀಯರು ನಮ್ಮ ದೇಶದಲ್ಲಿ ಹೆಚ್ಚಲಿ

ಮುನಸಿಪಾಲಿಟಿಗಳಲ್ಲಿ ಹಂದಿಗಳನ್ನು ಸಾಕುವ ಮಾಲಿಕರ ಜಾಗದಿಂದ ಹೊರಗೆ ಹಂದಿಗಳನ್ನು ಬಿಟ್ಟರೆ ಹತ್ತು ರೂಪಾಯಿ ಜುಲುಮಾನೆಗೂ ಒಂದು ಸಲ ಶಿಕ್ಷಿಸಲ್ಪಟ್ಟನಂತರ ಪುನಹ ಬಿಟ್ಟರೆ ಪ್ರತಿದಿನಕ್ಕೂ ಎರಡು ರೂ. ಮೇರೆಯ ಜುಲುಮಾನೆಗೆ ಗುರಿಯಾಗುತ್ತಾರೆಂಬ ನಿಬಂಧನೆಯು ಚೀಫ್ ಕಮಿಷನರವರಿಂದ ಮಂಜೂರಾಗಿದೆ ಅಲ್ಲದೆ ವೀರಾಜಪೇಟೆ ಮುನ್ಸಿಪಾಲಿಟಿಯಲ್ಲಿ ಮಡಿಕೇರಿಯಂತೆಯೇ ರಸ್ತೆ ಮುಂತಾದ ಇತರ ಪಬ್ಲಿಕ್ ಸ್ಥಳಗಳಲ್ಲಿ ಹಂದಿಗಳು ಬಂದರೆ ಮುನ್ಸಿಪಾಲಿಟಿಯವರು ಗುಂಡು ಹೊಡೆಯಬಹುದೆಂಬ ನಿಬಂಧನೆಯು ಮಂಜೂರಾಗಿದೆ.

ಮಡಿಕೇರಿ ಮುನ್ಸಿಪಲ್ ಕೌನ್ಸಿಲಿನ ಮೆಂಬರುಗಳ ನಾಮಕರಣವು ಇದೇ ತಿಂಗಳು 19ರಲ್ಲು ನಡೆಯುವುದು

ಮೇ ತಾ|| 4 ನೇ ದಿನ ನಡೆದ ಸೆಂಟ್ರಲ್ ಬ್ಯಾಂಕ್ ಡೈರೆಕ್ಟರುಗಳ ಮೀಟಿಂಗಿನಲ್ಲಿ ಈ ಕೆಳಗೆ ಕಂಡ ಸೊಸೈಟಿಗೆ ಸಾಲದ ಮೊಬಲಗು ಕೊಡಲಿಕ್ಕೆ ಮಂಜೂರಾಗಿದೆ

(1) ಹಾತೂರು ಕೊಳತ್ತೋಡ ಬೈಗೋಡು ಸೊಸೈಟಿಗೆ 1500 ರೂ. (2) ಅರ್ಜಿಸೊಸೈಟಿಗೆ 500 ರೂ (3) ನೆಲಜಿ ಸೊಸೈಟಿಗೆ 500 ರೂ. ಗರ್ವಾಲೆ ಸೊಸೈಟಿಗೆ 400 ರೂ. ಹೇರುಮಾಡು ಸೊಸೈಟಿಗೆ 1500 ರೂ. ಅಮ್ಮತ್ತಿ ಸೊಸೈಟಿಗೆ 450 ರೂ ಶಾಂತಳ್ಳಿ ಸೊಸೈಟಿಗೆ 1000 ರೂ. ಬೇಂಗೂರು ಸೊಸೈಟಿಗೆ 500 ರೂ. ಮತ್ತು ಕುಕ್ಲೂರು ಸೊಸೈಟಿಗೆ 750 ರೂ. ಅಂತು ಜುಮ್ಲಾ 7100 ರೂಪಾಯಿ ಮಂಜೂರಾಗಿದೆ.

ಕೊಡಗು ಶ್ರೀಕಾವೇರಿ ಬಸ್ ಸರ್ವೀಸಿನವರು ಪುನಹ ಹೊಸದಾಗಿ ಅಚ್ಚುಕಟ್ಟುಗಳಿರುವ ಒಂದು ಹೊಸ ಬಸ್ಸನ್ನೂ ಪ್ರಯಾಣಿಕರ ಅನುಕೂಲತೆಗಳಿಗಾಗಿ ತರಿಸಿರುವದಲ್ಲದೆ, ಒಬ್ಬ ಇಂಜನೀಯರನ್ನು ಸಹ ನೇಮಕಮಾಡಿರುವದಾಗಿ ತಿಳಿಯಬರುತ್ತೆ. ಒಟ್ಟಾರೆ 3 ಬಸ್ಸುಗಳಿರುವುದರಿಂದ ಮಳೆಗಾಲಗಳಲ್ಲಿಯೂ ಸಹ ಜನರ ಪ್ರಯಾಣಗಳಿಗೆ ಅನುಕೂಲ ದೊರೆಯಬಹುದೆಂತ ಕಾಣುತ್ತೆ.

ಶಾಸಮೋಪಾಲಿಟನ್ ಕ್ಲಬ್ಬಿನ ವಾರ್ಷಿಕ ಜನರಲ್ ಮೀಟಿಂಗ್ ಈ ತಾರೀಖು 4 ನೇ ದಿನ ನಡೆದು. ಹೊಸ ಮೆನೇಜಿಂಗ್ ಕಮಿಟಿಯು ಚುನಾವಣೆ ಆಯಿತು. ಮೆ|| ತಮ್ಮಣ್ಣನವರನ್ನು ಅಧ್ಯಕ್ಷರನ್ನಾಗಿ ನೇಮಿಸಲ್ಪಟ್ಟಿರುವ

ಹಿಂದೂದೇಶ.

ಮಧ್ಯಪ್ರಾಂತ್ಯದ ಕೌನ್ಸಿಲನ್ನು ಒಡೆದುಹಾಕುವುದು ಹೇ ಎಂದು ವಿಚಾರಿಸಲು ಚೀಫ್ ಸೆಕ್ರೆಟರಿಯವರು ಆ ಡಿ|| ಕಮಿಷನರುಗಳಿಗೆ ಸರ್ಕ್ಯುಲರು ಕಳುಹಿಸಿದ್ದರೆಂಬ ಮಾಸವು ಸುಳ್ಳೆಂದು ಈಗ ಪ್ರಕಟಿಸಿರುವರು

ಅಗ್ರಪಟ್ಟಣದಲ್ಲಿ ಹೆಸರುವಾಸಿಗೊಂಡಿದ್ದ ರಜಾಕ್ ಖಳ್ಳನು ಕೆಲವುದಿವಸಗಳ ಹಿಂದೆ ಪೋಲೀಸ ಆಫೀಸರುಗಳಿಗೆ ಕತ್ತಿಯಿಂದ ತಿವಿದು ತಪ್ಪಿಸಿಕೊಂಡಿದ್ದ ಅವನನ್ನು ಹಿಡಿದವರಿಗೆ ಸಾವಿರರೂಪಾಯಿ ಬಹುಮಾನ ಕೊಡುವುದೆಂದು ಪ್ರಕಟಿಸಿದ್ದರು. ಅವನನ್ನು ಆ ಪಟ್ಟದ ಕೋಲಸು ಹಿಡಿದಿರುವನು.

“ಬಂಗಾಳಿ” ಪತ್ರಿಕೆಯ ಸಂಪಾದಕರ ಜವಾಬ್ದಾರಿಕೆಯನ್ನು ಬೇಗನೆ ಮೆ|| ಬಿಪಿನ್ ಚಂದ್ರಪಾಲ್‌ರವರು ವಹಿಸಿಕೊ ಳ್ಳುವರೆಂಬ ವರ್ತಮಾನವಿದೆಯೆಂದು “ಲೀಡರ್” ಪತ್ರಿಕೆ ಹೇಳಿತು.

ಮೆ|| ಸಿ ಆರ್. ದಾಸ್‌ರವರು ಬಂಗಾಳಿ ಲೆಜಿಸ್ಲೇಟಿವ್ ಕೌನ್ಸಿಲಿಗೆ ಮೆಂಬರಾಗಿ ಚುನಾಯಿಸಲ್ಪಟ್ಟದ್ದಕ್ಕೆ ರೂಲ್ಸಿಗೆ ವಿರೋಧವೆಂತೆಂದು ಕೇಸು ನಡೆದು ಅವರ ಚುನಾವಣೆಯನ್ನು ರದ್ದುಮಾಡಿರುವರು. ಪುನರ್ಚುನಾವಣೆಯು ಜೂನ್ 5 ರಲ್ಲು ನಡೆಯುವುದು ಮೆ|| ದಾಸ್‌ರವರೂ ಪುನಃ ಚುನಾವಣೆಗೆ ನಿಲ್ಲುತ್ತಾರೆಂತಲೂ, ಅವರು ಗೆಲ್ಲುಸಂಭವವಿರುವುದೆಂತಲೂ ವರ್ತಮಾನ

ಆಲ್ ಇಂಡಿಯಾ ಮುಸ್ಲಿಮ್ ಲೀಗಿನ ಮುಂದರಿಸಿದ ಮೀಟಿಂಗು ಇದೇ ತಾರೀಖು 23, 24 ರಲ್ಲಿ ಲಾಹೋರಿನಲ್ಲಿ ಖಾಯಂ ಅಧ್ಯಕ್ಷರಾದ ಮೆ|| ಜಿನ್ನರವರ ಅಧ್ಯಕ್ಷತೆಯಲ್ಲಿ ನಡೆಯುವುದು. ಶೀಘ್ರದಲ್ಲಿಯೇ ಸ್ವರಾಜ್ಯವ ಪಡೆಯಲು ಒಡನೆ ಕಾರ್ಯತಃ ಮಾಡಬೇಕಾದ ಏರ್ಪಾಡುಗಳನ್ನು ಚರ್ಚಿಸುವರು.

ವಯಕಮಿಗೆ ಪ್ರತಿದಿನವೂ ಸ್ವಯಂಸೇವಕರು ಸತ್ಯಾಗ್ರಹವನ್ನು ಕೈಕೊಳ್ಳಲು ಕೇರಳದ ಎಲ್ಲಾ ಭಾಗಗಳಿಂದಲೂ ಬರುತ್ತಿರುವರು. ಆದರೆ ಅವರೆಲ್ಲರ ಸೇವೆಯು ಅಲ್ಲಿ ಅವಶ್ಯವಿಲ್ಲದೆ ಇರುವುದರಿಂದ ಅನೇಕರು ವ್ಯಸನದಿಂದ ಹಿಂತಿರುಗುತ್ತಿರುವರು

ಕಳೆದ ತಾ|| 27 ರಲ್ಲು ಕುಡಕಾಟ್ಟು ಪ್ರಾಂತಿಕ ಕಾನ್ಫರೆನ್ಸು ಪಾಲ್ಘಾಟಿನಲ್ಲಿ ನಡೆಯಿತು. ಮೆ|| ಗಂಗಾಧರರಾವ್ ದೇಶಪಾಂಡೆಯವರು ಅಧ್ಯಕ್ಷರಾಗಿದ್ದರು. ಸ್ವರಾಜ್ಯ ಪಾರ್ಟಿಯವರ್ಯಾರೂ ಹಾಜರಿರಲಿಲ್ಲ. ದೇಶದ ಸ್ಥಿತಿಯನ್ನೇ ಆಲೋಚಿಸುತ್ತಿರುವ ಮಹಾತ್ಮ ಗಾಂಧಿಯವರು ನಮ್ಮ ನಿಜವಾದ ಹಿಂಬಾಲಕರ ಸಹಾಯಕ್ಕೆ ಬರುವರೆಂದು ಅಧ್ಯಕ್ಷರು ಹಾರೈಸಿದರು.

ಹಾರ್ನಿಮೇನ್ ದಿನವನ್ನು ತಾ|| 27 ರಲ್ಲು ಬೊಂಬಾಯಿಯವರು ಆಚರಿಸಿದರು. ಆ ದಿನ ಒಂದು ದೊಡ್ಡ ಸಭೆಯಲ್ಲಿ ಮೌಲಾನ ಮಹಮ್ಮದ್ ಅಲಿ ಡಾ|| ಕಿಚ್ಲು ಮೊದಲಾದ ಮುಂದಾಳುಗಳು ಭಾಷಣಮಾಡಿ ಹಾರ್ನಿಮೇನರನ್ನು ಏನೊಂದೂ ಶರತ್ತಿಲ್ಲದೆ ಒಡನೆ ಇಂಡಿಯಾಕ್ಕೆ ಬರಲು ಬಿಡಬೇಕೆಂದು ಠರಾವು ಪಾಸುಮಾಡಿದರು.

ವಯಕಮಿನ ಸತ್ಯಾಗ್ರಹದ ವಿಷಯ ಮಹಾತ್ಮಗಾಂಧಿಯವರ ಬುದ್ಧಿವಾದವನ್ನು ಕೇಳಲಿಕ್ಕಾಗಿ ವಯಕಮಿನಿಂದ ಒಂದು ಡೆಪ್ಯುಟೇಷನು ಮಹಾತ್ಮರಲ್ಲಿಗೆ ಹೋಗಿದೆ.

ಬೊಂಬಾಯಿ ಸರ್ಕಾರದವರು ಏರ್ಪಡಿಸಿದ್ದ ಎಕ್ಸೈಸ್ ಕಮಿಟಿಯವರು ತಮ್ಮ ರಿಪೋರ್ಟಿನಲ್ಲಿ ಪೂರ್ತಿ ನಿವಾರಣೆಯೇ ಸರ್ಕಾರದವರ ಲಕ್ಷ್ಯವಾಗಿರಬೇಕು. ಲೋಕಲ್ ಆಪ್ಷನನ್ನು ಇಚ್ಛೈಸುವ ಸ್ಥಳಗಳಲ್ಲಿ ಜಾರಿಗೆ ತರಬೇಕು, ಅಂಗಡಿಗಳಿಗೆ ಕೊಡುವ ನಿಷಾಪದಾರ್ಥಗಳನ್ನು ಕಡಿಮೆಮಾಡುತ್ತಾ ಬರಬೇಕು, ಈಗಿನ ಲೈಸನ್ಸುಗಳ ಅವಧಿ ತೀರಿದ ಮೇಲೆ ಇನ್ನು ಪರದೇಶದ ಮತ್ತು ಈ ದೇಶದ ಸಾರಾಯಿ ಮಾರಾಟಕ್ಕೆ ಲೈಸನ್ಸು ಕೊಡಬಾರದು. ಪುಂಬಾ ವ್ಯಾಪಾರದ ಸ್ಥಳಗಳಿಂದ ಅಂಗಡಿಗಳನ್ನು ತೆಗೆದುಹಾಕುವುದು, ಬೇರೆ ಅಂಗಡಿಗಳ ಮಾರಾಟದ ಸಮಯವನ್ನು ಕಡಿಮೆಮಾಡುವುದು, ಎಂದು ಮೊದಲಾದ ಸಿಫಾರಸ್ಸುಗಳನ್ನು ಬರೆದಿರುವರು

ಪಂಜಾಬಿನ ಮುಖ್ಯಪಟ್ಟವಾದ ಲಾಹೋರಿನಲ್ಲಿ ಪ್ಲೇಗುರೋಗವು ಕಡಿಮೆಯಾಗುತ್ತಿದ್ದರೂ ಕೂಡ ಡಿಸ್ಟ್ರಿಕ್ಟುಗಳಲ್ಲಿ ಪ್ರಬಲವಾಗುತ್ತಲೇ ಇದೆ.

ಜವಾಂಗಗಳ ಲೇಬರ್ ಕಾನ್ಫರೆನ್ಸಿಗೆ ಇಂಡಿಯಾದ ಪ್ರತಿನಿಧಿಯಾಗಿ ಬೊಂಬಾಯಿಯ ಮೆ|| ಜೋಷಿಯವರನ್ನು ನೇಮಿಸುವರೆಂದು ವರ್ತಮಾನ.

ವಿದೇಶ.

ಕಳೆದ ತಾರೀಖು 29 ರಲ್ಲು ಡಾ|| ರವೀಂದ್ರನಾಥ್ ಠಾಗೋರ್‌ರವರಿಗೂ ಮತ್ತು ಅವರ ಪಾರ್ಟಿಯವರಿಗೂ ಚೈನಾದ ಮುಖ್ಯಪಟ್ಟವಾದ ಪೆಕಿಂಗಿನಲ್ಲಿ ಮನಃಪೂರ್ವಕ ಸ್ವಾಗತವನ್ನೀಡಿದರು. ಅವರು ಅಲ್ಲಿಂದ ಜಪಾನಿಗೆ ಮೇ 20 ರಲ್ಲಿ ಹೊರಡಲಿಕ್ಕಿರುವರು.

ವರ್ಜೀನಿಯದ ಪ್ರೀಲಿಂಗ್‌ಪಟ್ಟಣ ಒಂದು ಗನಿಯಲ್ಲಿ ಆಕಸ್ಮಿಕವುಂಟಾಗಿ ಅನೇಕರು ಮುಚ್ಚಿಕೊಳಗೆ ಸಿಕ್ಕಿಹಾಕಲ್ಪಟ್ಟರು. 95 ಶವಗಳು ಹೊರಗೆ ತೆಗೆಯಲ್ಪಟ್ಟವೆ. ಇನ್ನು 66 ಶವಗಳು ತೆಗೆಯಲಿಕ್ಕಿವೆಯಂತೆ!

ಟರ್ಕಸ್ತಾನ್, ಬೊಖಾರ, ಸಮರಕ್ಕಂಡ್, ಖೋರೆಜ್ಮ ಮುಂತಾದ ಪ್ರಾಂತ್ಯಗಳಲ್ಲಿ ದಂಗೆಯು ಪ್ರಬಲವಾಗುತ್ತಿದೆ ದಂಗೆ ಎದ್ದವರು ಜಯಶೀಲರಾಗುವಂತೆ ತೋರುತ್ತದೆ.

ತುರ್ಕಿದೇಶದಲ್ಲಿ ಫ್ರೆಂಚರ ಶಾಲೆಗಳನ್ನು ಮುಚ್ಚಿಸಿದಕ್ಕಾಗಿ ಫ್ರೆಂಚರು ವಿರೋಧಿಸಿ, ಶಾಲೆಗಳನ್ನು ಏನೊಂದೂ ಅಡ್ಡಿಯಿಲ್ಲದೆ ನಡಿಸಲಿಕ್ಕೆ ಬಿಟ್ಟರೆ ಕ್ಲಾಸು ರೂಮುಗಳಲ್ಲಿರುವ ‘ಕ್ರಾಸು’ ಗಳನ್ನು ತೆಗೆಯಲು ಒಪ್ಪಿಕೊಂಡಿರುವರು.

ಸರ್ ಶಂಕರ್‌ನಾಯರವರು ಸರ್ ಮೈಕಲ್ ಒಡ್ವಯರವರ ಮೇಲೆ ಅಪವಾದಗಳನ್ನು “ಗಾಂಧಿ ಮತ್ತು ಎನಾರ್ಕಿ” ಎಂಬ ಪುಸ್ತಕದಲ್ಲಿ ಬರೆದರೆಂದು ಒಡ್ವಯರವರು ನಡಿಸುವ ಮೊಕದ್ದಮೆಯ ವಿಚಾರವು ಕಳೆದ ತಾರೀಖು 30-4-24 ರಲ್ಲು ಲಂಡನಿನಲ್ಲಿ ಪ್ರಾರಂಭವಾಗಿದೆ

ಗ್ರೀಸ್ ದೇಶದ ರಿಪಬ್ಲಿಕ್ ಸರ್ಕಾರವನ್ನು ಇಂಗ್ಲೆಂಡಿನ ಸರ್ಕಾರದವರು ಅಂಗೀಕರಿಸುತ್ತಾರೆಂದು ಮಂತ್ರಿಯವರು ಪ್ರಕಟಿಸಿರುವರು.

ಪುತ್ತರಿಹಾಡಿಗೆ ಉತ್ತರ

೧೯೨೩ನೇ ಅಕ್ಟೋಬರು ತಿಂಗಳ ಹಳೆವಿದ್ಯಾರ್ಥಿಗಳ ಮೆಗಜಿನ್ ಎಂಬ ತ್ರೈಮಾಸಿಕಪತ್ರಿಕೆಯಲ್ಲಿ “ಕವಿಶಿಷ್ಯ” ರೆಂಬವರೊಬ್ಬರು ರಚಿಸಿದ “ಪುತ್ತರಿ ಹಾಡು” ಎಂಬ ಪದ್ಯವು ಬಹಳ ವಿಚಿತ್ರಕರವಾಗಿ ಕಾಣುತ್ತದೆ. ಮಾತ್ರವಲ್ಲ, ಕೊಡಗಿನವರು ಪದ್ಯಗಳ ವ್ಯಂಗ್ಯಾರ್ಥ, ರೂಢಾರ್ಥಗಳನ್ನು ಸಹ ಮಾಡಬಲ್ಲವರಲ್ಲರೆಂಬುದೇ ಕವಿಶಿಷ್ಯರ ಆಶಯವೆಂದು ಹೇಳಬಹುದು. ಇದು ಕೇವಲ ಕೊಡಗರನ್ನು ಎದುರಿಗೆ ಮೆಚ್ಚಿಸತಕ್ಕದ್ದಾಗಿಯೂ, ಅದರ ಭಾವನೆಯು ಆಳದೊಳಗೆ ಹೊರಟುಹೋಗಿದೆಂದು ಯಾರೂ ಅರ್ಥ ತಿಳಿದ ಪ್ರಾಜ್ಞರು ಹೇಳದಿರಲಾರರು. ಬಲ್ಲಿನಾಡು ಕವಿಯು ಇಡೀ ಕೊಡಗು ಜಮ್ಮಿಗಳ ದೇಶವೆಂದೂ, ಮತ್ತು ಕೊಡಗಿನವರ ಸರ್ವಸ್ವತ್ವವನ್ನೂ ಬಳಗೊಂಡು ಕೊಡಗೇ ಬಂದು ಹೆಮ್ಮೆ ಕೊಚ್ಚಿಕೊಳ್ಳುವ ಹಾಗೆ ಲೇಖಿಸಿದ ಲೇಖನವು ಜನ-ನ್ನು ಮೆಚ್ಚಿಸಿ ಅವರನ್ನೇ ಕಳಕ್ಕೆ ಇಳಿಸಿದ ರೀತಿ ಮಾಡಿತೆಂಬುದು ಆ ಕವಿಶಿಷ್ಯರಿಗೇನೆ ಚನ್ನಾಗಿ ಗೊತ್ತು. ಹ್ಯಾಗೂ ಕವಿಶಿಷ್ಯರ ಅಭಿಪ್ರಾಯ ಬೇರಿದ್ದರೂ, ಅರ್ಥಮಾತ್ರ ಕೊಡಗು ಹೆಮ್ಮೆ ಕೊಚ್ಚಿಕೊಂಡ ಹಾಗೆ ಕಾಣುತ್ತದೆ ಇದರ ಮಾನಾಪಮಾನ ಕವಿಶಿಷ್ಯರಿಗೆ ಉಳಿಯುವುದಾದರೂ ರಂಗಸ್ಥಳಕ್ಕೆ ಬಂದದಕ್ಕಾಗಿ ನನ್ನದೊಂದಭಿಪ್ರಾಯವನ್ನು ಯಥಾಮತಿಯಾಗಿ ನನ್ನ ತರ್ಕಮ್ಯಸಾಂಪ್ರದಾಯಾನುಗುಣಗನುಸಾರ ಬಂದರಡು ಪದ್ಯಗಳ ಮೂಲಕ ಹೇಳಬೇಕೆಂದಿರುತ್ತೇನೆ. ಸಜ್ಜನರು ನನ್ನಮೇಲೆ ದುರಾಗ್ರಹಿಗಳಾಗಲಾರರೆಂಬುದೇ ನನ್ನ ಮನೋಭಾವನೆ.

ಜಮ್ಮ ಕೊಡಗಿರು , ನಮ್ಮದೆಂಬುವ
ಹೆಮ್ಮೆ ಬೇಡವು । ಸುಮ್ಮನೆ , ಬಮ್ಮಳೆ ।
ನಿಮ್ಮ ಮಾತಿರು ಹೆಮ್ಮೆ ಕಾಂಬುದು ।
ಹೆಮ್ಮೆಗುಂಬೀ । ಸರ್ವಸಮ್ಮತವು ।೧।

ಬಿದಿಯುಳಕ್ತಿರದೇಶಪಲವುಂಟದರೊಳ್‌ನಿದೆಚಿತ್ರವು,
ಮೊದಲೆನಮ್ಮದುಳಹೆಗಿದೆಮ್ಮನುಬಿಡಲುಸಲ್ಲದುಎಂಬರೆ
ಪುದಿದುಬಯಸಿದದೇಶವ್ಯಾವದುಪರವಿದೇಶಕನಿಮ್ಮೊಳು
ಮುದವತೋರಿಸಹದನವೇನಿದುಸುದಿನಪುತ್ತರಿಹಾಡಿದು

ನೆಮ್ಮದಿಯನಿದುತಾಳಲೆಂಬರೆ
ಘಂಗವಾರಿಂದಾಗಿಬಂದಿಹುದೂ
ನಮ್ಮನಮಗಿರು ನಮ್ಮದೆಂಬರೆ
ಎಮ್ಮದೆಂಬುವರಾರಿದ ॥
ನಿಮ್ಮನಿಮ್ಮೊಳು ತಿಳಿದುನೋಡಿರಿ ।
ಅಮ್ಮ ಹರಸಿದದೇಶವ
ನಮ್ಮನಮ್ಮದು ನಮ್ಮದೈಸಲೆ
ಸುಮ್ಮನೇತಕೆಬಯಲವಿಭ್ರಮವು ।೩।

ಕವಿಯುಶಿಷ್ಯರ ಪದ್ಯದರ್ಥವ ಸವಿದುನೋಡಲು
ಸಾರ್ಥವು ।
ಜವನಿಕೆಯ ಜನಗಳನುಮೆಚ್ಚಿಪ ಬಹುಚಮತ್ಕೃತಿ
ಯರ್ಥವು ॥
ನಿವಹ ಜಮ್ಮಿಯ ಹೊಗಳಿಕೊಡಗನು ಬೆಗಡುಮಾಡುವ
ಪದ್ಯವು ।
ಅವನಿಯೊಳು ಇದನರಿವಮಾನವರಿಲ್ಲವೆಂಬುದೆಭಾವವು
॥೪॥

ಅವಹಾಡಿದು ಬೆಗಡುಮಾಡುವ ಕೊಡಗನು ।
ನೀವುಮಾಡಿದಹಾಡುಪುತ್ತರಿಗರ್ಥವೇನಿದಕೆ ।
ನಾವುಮೆಚ್ಚುವು ನಮ್ಮ ಬೆಡಗಿನಹಾಡಿಗೆ ।
ನೀವುಹೊಗಳುತ ಆಳವಿರೆಮ್ಮಯ ಬೆಡಗನು ॥೫॥

ನಾವುನಮ್ಮೊಳು ನಮ್ಮ ಹೊಗಳುವು ದಾವನ್ಯಾಯವ
ಕಾಂಬಿರಿ ।
ಸಾವಸರಿಸಕೆ ಕೊಡಗಮಾಡುವ ಭಾವವಲ್ಲವೆ ನಿಮ್ಮದು ॥
ನೀವುರಚಿಸಿಹ ನಿಂದ್ಯಸಂಸ್ತುತಿ ನಿಮ್ಮ ಜಾಣ್ಮೆಗೆತಕ್ಕುದು ।
ನಾವು ಸನ್ಮತವೀಯಲಾರೆವು ನಿಮ್ಮ ಹಾವ ವಿಭ್ರಮವೋ
ಜನಕೆ ॥೬॥

ಗುಮ್ಮ ಗುರುಗಿನಕತ್ತೆಗಳಬಾಲರೆಂಬುವಭಾವವು ।
ನಿಮ್ಮ ಪುತ್ತರಿಹಾಡುಕಾಂಬುದು ದೇವಲೋಕದಿ ಕೊಡ
ಗನು ।
ಬಿಮ್ಮನೆಅಹುದೆಂದು ನಂಬುವರೆಮ್ಮ ಕೊಡಗಿನ ಜಹಗರೆ
ಅಮ್ಮನಲ್ಲದು ನಲ್ಲದೂಆದು ನಿಮ್ಮ ಹಾಡಿನಮಹಿಮೆಯು
॥೭॥

ಮಾನಿನೀಯರ ಮಾತಸ್ತ್ರದ ಬಲುಮೆರೆದಿಹುದು ।
ಭಾನನೀಯರ ವಶವಮಾಳ್ಪವಿಧಾನವೆಸದಿಹುದು ।
ಸಾನುರಾಗದಿ ನಂಬಲೊಂಬುದರ್ಥ ಜಾಣ್ಮೆಗಳು ।
ನೀವುಬೇಸರ ಮಾಡಬಾರದು ನಿಮ್ಮ ಸಂಗತಿಸತ್ಯವು
॥೮॥

ಕವಿಗಹಂಕೃತಿಸಲ್ಲದದರಿಂದಿಹಪರಂಗಳು ಇಲ್ಲವು ।
ಭುವನಮಿಚ್ಛದು ಮಾಸ್ಯಬಾರದು ಶ್ಲಾಘನೀಯಳ
ಸರ್ವತ್ರಿ ।
ತಿನವು ಇಲ್ಲವು ನವಿಯು ಕಾಣದು ಅವನಿಯೊಳು
ಸ್ಥಿರವಾಗದು ।
“ರವಿಯುಕಾಣದ ಕವಿಯುಕಂಡನು” ಎಂಬನಾಣ್ಣುಡಿ
ಗೊಪ್ಪದು ॥೯॥

ಕಾರ್ಯವಿಲ್ಲದ ಕಾರಣವು ನಿರ್ವೀರ್ಯವಲ್ಲವೆ
ಲೋಕದಿ ।
ಸರ್ವಸಮ್ಮತವೇ ಕಾವ್ಯಕೆ ನಿರ್ವಿವಾದ ಸಂಗತಿ ।
ಕಾರ್ಯವಪ್ಪುದು ವೀರ್ಯವಪ್ಪುದು ಹಮ್ಮು ವಿರಹಿತ
ರಚನೆಯೊಳ್
ಸರ್ವಕಾಲದಿ ಸಾಧುಸುಜನರೊಳ್ ಪ್ರಸರವಾಗಿಯೆ
ಮೆರವದು ॥೧೦॥

ಸುಳ್ಳುಶಾಸ್ತ್ರಕು ಕಳ್ಳಮಾಲಿಗು ಕಮ್ಮಕ
ಮೊಳ್ಳಕು ಹಗ್ಗಳವು ಅದುಸಲ್ಲದೈಸಲೆ ಹೊ
ಗಳು ಘಂಟರದೇಕೆ ಸಹಜದೊಳು ।
ಹಳ್ಳಿಗಾಡಿನ ಮನುಜರಾವದವಳ್ಳ ।
ತಿಳಿಯಲಸಾಧ್ಯರೆಂಬೀ ಒಳ್ಳಕಲ್ಪನೆ ।
ತಿಳಿದುನೋಡಲು ಕವಿಗೆ ಸಮ್ಮತವೆ ॥೧೧॥

“ಕವಿಯುಶಿಷ್ಯರ ಶಿಷ್ಯ.”

ವಿದ್ಯಾಭ್ಯಾಸ.

ಡಾಕ್ಟರ್ ಜೇಮ್ಸ್ ಹೆಚ್ ಕಸಿನ್ಸ್‌ರವರು ಮೈಸೂರಿನಿಂದ ಮಡಿಕೇರಿಗೆ ಕಳೆದತಾರೀಖು 24 ರಲ್ಲು ಬಂದಿದ್ದರು. ಅದೇದಿನ ಸಾಯಂಕಾಲ ಆರು ಗಂಟೆಗೆ ರಾಜಸೀಟಿನಲ್ಲಿ ಅವರು ಹಿಂದೂದೇಶದ ವಿದ್ಯಾಭ್ಯಾಸಕ್ರಮದ ವಿಷಯ ಭಾಷಣ ಮಾಡಿದರು. ಭಾಷಣವು ಇಂಗ್ಲೀಷು ಭಾಷೆಯಲ್ಲಾದುದರಿಂದ ಆ ಭಾಷೆಯನ್ನು ತಿಳಿದನೂರಾರು ಸೂರು ಜನರು ನೆರೆದಿದ್ದರು. ಮೀಟಿಂಗು ಥಕ್ಷನೆ ಆದುದರಿಂದ ಹೆಚ್ಚಿನ ಜನರಿಗೆ ಸೇರಲು ಅನುಕೂಲವಾಗಲಿಲ್ಲ. ಮೆ|| ಎನ್ ಭುಜಂಗರಾವ್, ಬಿ ಎ, ಬಿ, ಎಲ್, ರವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಭಾಷಣಕ್ಕೆ ಮೊದಲು ಡಾ|| ಕಸಿನ್ಸ್‌ರವರ ಶಿಷ್ಯನಾಗಿದ್ದು ಈಗತಾನೆ ನೇಶನಲ್ ಬಿ. ಎ ಪಾಸಾಗಿ ಬಂದಿರುವ ಮೆ|| ಬಿಟ್ಟಿಯಂಡ ದೇಶಪ್ಪನವರು, ಐರ್ಲೆಂಡಿನಲ್ಲಿಹುಟ್ಟಿ ಬೆಳೆದ ಕಸಿನ್ಸ್‌ರವರು ವಿದ್ಯಾಭ್ಯಾಸದ ವಿಷಯದಲ್ಲಿ ಬಹಳ ಶ್ರದ್ಧೆ ತೆಗೆದುಕೊಂಡು ಕೆಲಸ ಮಾಡುತ್ತಿರುವರೆಂದೂ, ಇವರು ಲೋಕಪ್ರಸಿದ್ಧ ಹೊಂದಿದ ಒಬ್ಬ ಕವಿಯಾಗಿರುವರೆಂದೂ, ಇವರು ಮದನಪಲ್ಲಿ ನೇಶನಲ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದು, ಜಪಾನಿನವರ ಆಮಂತ್ರಣದ ಮೇರೆ ಅಲ್ಲಿಗೆಹೋಗಿ ಯೂನಿವರ್ಸಿಟಿಯಲ್ಲಿ ಭಾಷಣಗಳನ್ನು ಕೊಟ್ಟದ್ದು ಇವರ ನಿಪುಣತೆಯನ್ನು ನೋಡಿ ಪರದೇಶದವರ ಪೈಕಿ ಇವರಿಗೆ ಮೊದಲಾಗಿ ಜಪಾನ್ ಯೂನಿವರ್ಸಿಟಿಯವರು ಡಾಕ್ಟರ್ ಪದವನ್ನು ಕೊಟ್ಟರೆಂತಲೂ, ಇವರು ಅಡ್ಯಾರಿನಲ್ಲಿದ್ದ ನೇಶನಲ್ ಯೂನಿವರ್ಸಿಟಿಯ ಇಂಗ್ಲೀಷು ಪ್ರೊಫೆಸರಾಗಿದ್ದರೆಂತಲೂ, ಈಗ ಅಡ್ಯಾರದಲ್ಲಿರುವ ಬ್ರಹ್ಮವಿದ್ಯಾಶ್ರಮದ ಪ್ರಿನ್ಸಿಪಾಲರಾಗಿರುವರೆಂತಲೂ ಮುಂತಾಗಿ ಹೇಳಿ ಸಭೆಯವರಿಗೆ ಅವರ ಪರಿಚಯವನ್ನುಂಟು ಮಾಡಿದರು. ನಂತರ ಅವರು ಮಾಡಿದ ಭಾಷಣದ ಸಾರಾಂಶವೇನೆಂದರೆ—

ಪ್ರಪಂಚದಲ್ಲಿ ಮುಖ್ಯವಾಗಿ ಇಂಡಿಯಾದಲ್ಲಿ ವಿದ್ಯಾವಿಷಯಕ್ಕೆ ಜನರು ಗಮನವನ್ನು ಈಗಿನ ಕಾಲದಲ್ಲಿ ಹೆಚ್ಚಾಗಿ ಕೊಡಬೇಕಾಗಿದೆ. ಯಾವದೇಶದಲ್ಲು ಸಂಪೂರ್ಣ ತೃಪ್ತಿಕರವಾದ ಬೋಧನಕ್ರಮ ಇದೆ ಎಂತ ಹೇಳಲಿಕ್ಕಾಗುವುದಿಲ್ಲ. ಆದರೆ ಇಂಡಿಯಾದ ಕ್ರಮವು ಅತಿಕೆಟ್ಟದಾಗಿದೆ. ಜನ್ಮ ಜೀವನಕ್ಕೂ ಅವಶ್ಯಕತೆಗೂ ಬೇಕಾದಂತೆ ಬೆಳೆದು ಬಂದದ್ದಾಗಿಲ್ಲ. ಸರ್ಕಾರಿ ಗುಮಾಸ್ತರುಗಳನ್ನು ತಯಾರಿಸಲಿಕ್ಕಾಗಿ ಆರಂಭದಲ್ಲಿ ಏರ್ಪಟ್ಟು, ಈಗ ಸಂಪೂರ್ಣವಾಗಿ ರಾಷ್ಟ್ರೀಯತ್ವವನ್ನು ಹಾಳುಮಾಡುವ ನಾಸ್ತಿಕತ್ವವನ್ನು ಬೋಧಿಸುವ ಕ್ರಮವಾಗಿದೆ. ನಿಜವಾದ ವಿದ್ಯೆಯ ಉದ್ದೇಶ

ವೇನೆಂದರೆ ಮಗುವಿನಲ್ಲಿರುವ ಸಂಪೂರ್ಣ ಶಕ್ತಿಯನ್ನು ಹೊರಪಡಿಸಿ ಅವನ ಅಥವ ಅವಳ ಅವರಣಕ್ಕೆ ಯೋಗ್ಯನನ್ನಾಗಿ ಮಾಡುವುದು. ಇಂಡಿಯಾದ ವಿದ್ಯಾಕ್ರಮವು ಈ ಉದ್ದೇಶಗಳನ್ನು ನೆರವೇರಿಸುವುದಿಲ್ಲ. ಮಗುವಿನ ಶಕ್ತಿಯನ್ನು ಬೆಳೆಯಿಸುವುದರ ಬದಲಾಗಿ ದಬಾಯಿಸುತ್ತದೆ. ಉಪಾಧ್ಯಾಯರುಗಳಿಗೂ, ವಿದ್ಯಾರ್ಥಿಗಳಿಗೂ ಸಮ್ಮಂಧವು ಬೆಳೆಯುವುದಿಲ್ಲ. ಆದ್ದರಿಂದ ತಿಳುವಳಿಕೆಯುಳ್ಳ ಸರ್ವರೂ ಈ ವಿಷಯದಲ್ಲಿ ಒದಗಾವಣೆಯನ್ನು ಮಾಡಲು ಪ್ರಯತ್ನಿಸಬೇಕು. ಮದನಪಲ್ಲೀ ಕಾಲೇಜಿನಲ್ಲಿ ನನಗೆಬಂದ ಅನುಭವದಿಂದ ಇದು ಸಾಧ್ಯವಿದೆ ಎಂತ ಖಂಡಿತವಾಗಿಯೂ ಹೇಳುತ್ತೇನೆ. ಮದ್ರಾಸು ಯೂನಿವರ್ಸಿಟಿಯ ಪಾಠಗಳನ್ನೇ ಹೇಳುವುದಾದರೂ ಪ್ರಿನ್ಸ್‌ಪಲ್‌ರಾದ ತ್ರಿಲೋಕೇಕರ್ ಮತ್ತು ಇವರ ಸಿಬ್ಬಂದಿಯ ಪ್ರೀತಿಯಿಂದಲೂ, ಸಹಾಯದಿಂದಲೂ ವಿದ್ಯೆಯ ನಿಜವಾದ ಉದ್ದೇಶವನ್ನು ಕೆಲವು ಮಟ್ಟಿಗಾದರೂ ಸಾಧಿಸಿದ್ದೇವೆ. ಮಗುವಿನ ಸಮೀಪಸಮ್ಮಂಧವಾದಗ್ರಾಮಕ್ಕೂ ಮಗುವಿಗೂ ಮೊದಲು ಒಳ್ಳೇ ಸಂಮ್ಮಂಧವನ್ನು ಬೆಳೆಸಬೇಕು. ಅನಂತರ ದೊಡ್ಡ ಸಮುದಾಯಕ್ಕೂ ಅನಂತರ ಒಟ್ಟುಹಿಂದೂಸ್ಥಾನಕ್ಕೂ ಆಖೈರಿನಲ್ಲಿ ಮನುಷ್ಯಜಾತಿಗೂ ಸಹ ಸರಿಯಾದ ಸಮ್ಮಂಧವನ್ನು ಕಲುಹಿಸಿಕೊಡಬೇಕು. ಗುರುಶಿಷ್ಯರೊಳಗೆ ಅನ್ಯೋನ್ಯ ಪ್ರೀತಿಯಿಂದ ಅರ್ಧಗಂಟೆಯೊಳಗೆ ಕಲಿಯಬಹುದಾದದ್ದನ್ನು ಈಗಿನ ಶಾಲೆಗಳಲ್ಲಿ ಕೆಲವುಗಂಟೆ ಕಲಿತರೂ ಸಾಧ್ಯವಾಗಲಾರದು. ಮಕ್ಕಳಿಗೆ ದೇಶಭಕ್ತಿಯನ್ನು ಹುಟ್ಟಿಸಬೇಕು. ನಮ್ಮ ಪೂರ್ವಿಕರು ಸಾಧಿಸಿದ ಮಹತ್‌ಕಾರ್ಯಗಳನ್ನು ಬೋಧಿಸಿ ಪ್ರಪಂಚದಲ್ಲಿ ನಮ್ಮ ಮಾತೃಭೂಮಿಗೆ ಗೌರವಸಿಕ್ಕಿದ್ದು ಹೇಗೆಂಬದನ್ನು ತೋರಿಸಿ ಕೊಡಬೇಕು.

ಹಿಂದೂಸ್ಥಾನದ ವಿದ್ಯಾಕ್ರಮದಲ್ಲಿ ಮತಬೋಧನೆ ಇಲ್ಲದೆ ಇರುವುದೇ ದೊಡ್ಡ ಕೊರತೆಯಾಗಿದೆ. ಜಾತಿಭೇದ ಮತ್ತು ಮತಭೇದಗಳಿರುವುದರಿಂದ ಮತಬೋಧನೆಯು ಸಾಧ್ಯವಿಲ್ಲವೆಂತ ಹೇಳುವುದರಲ್ಲಿ ನ್ಯಾಯವಿಲ್ಲ. ಆಚಾರಗಳಲ್ಲಿ ವ್ಯತ್ಯಾಸವಿರಬಹುದು, ಆದರೆಪರಮಾತ್ಮನ ಧ್ಯಾನದಲ್ಲಿ ಎಲ್ಲರೂ ಸೇರಬಹುದು. ದಿವಸದ ಕೆಲಸವನ್ನು ಸೃಷ್ಟಿಕರ್ತನಿಗೆ ಅರ್ಪಿಸಲು ಎಲ್ಲರೂ ಸೇರಬಹುದು. ಸರ್ಕಾರವು ಮತವಿಷಯದಲ್ಲಿ ಪಕ್ಷಪಾತಿಸುವುದಿಲ್ಲವೆನ್ನುತ್ತಾರೆ. ಒಂದು ಬೋರ್ಡಿಂಗಿಗೆ ಬರುವ ಹುಡುಗರಿಗೆ ಆಹಾರದಲ್ಲಿ ವ್ಯತ್ಯಾಸವಿಲ್ಲವೆಂಬ ಕಾರಣದಿಂದ ಆಹಾರವೇ ಕೊಡುವುದಿಲ್ಲವೆಂತ ಹೇಳಿದರೆ ಆದೀತೇ? ಮತಭೇದಗಳಿವೆ ಎಂಬಕಾರಣಗಳಿಂದ ಮತಬೋಧನೆ ಕೊಡದಿದ್ದರೆ ಹಾಗೆ ಆಗಲಿಲ್ಲವೆ? ಇನ್ನು ಮುಂದಿನ ವಿದ್ಯಾಭ್ಯಾಸಕ್ರಮದಲ್ಲಾದರೂ ಆತ್ಮವಿಚಾರ ಬೋಧನೆಯನ್ನು ಸೇರಿಸಬೇಕು.

ಪತ್ರವ್ಯವಹಾರಗಳು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರ್ ಉತ್ತರವಾದಿಗಳಲ್ಲ. [ಎಡಿಟರ್]

ಅಯ್ಯಾ,

ಅಮ್ಮತ್ತಿನಾಡು ಕಂಡಂಗಾಲಗ್ರಾಮದಲ್ಲಿ ಈಗ ಸುಮಾರು ಒಂದು ತಿಂಗಳ ಆಗಾಯಿತಿನಿಂದ ಅಚ್ಚ ಕರೀವರ್ಣದ ಬೀಜ ಒಡೆಯದ ಎಳದು ಇಷ್ಟು ಉದ್ದ ಕೋಡಿನ ಹೋರಿಯೂ ಸುಮಾರು ಒಂದುವಾರದಿಂದ ಕೆಂದವರ್ಣದ ಬಿಳಮುಖದ ನೆಟ್ಟಗೋಡಿನ ಒಂದು ಹಸು, ಕಪ್ಪುವರ್ಣದ ಬಿಳಿಮುಖದ ಸುಮಾರು ಎರಡು ವರ್ಷಪ್ರಾಯದ ಕಡಸು, ಮತ್ತು ಬೀಜ ಒಡದ ಅಚ್ಚಕರೀವರ್ಣದ ಒಂದು ಜೊತೆ ಹೋರಿಗಳು ಅಲ್ಲಲ್ಲಿ ಸುತ್ತಾಡುತ್ತಾ ಇವೆ. ನಿಜವಾದ ಮಾಲೀಕರು ಬಂದು ಹೊಡಕೊಂಡು ಹೋಗಬಹುದಾಗಿ ಈ ಮೂಲಕ ತಿಳಿಸಿದೆ.

ಅಮ್ಮತ್ತಿ, ಐ. ಟಿ. ಮಾದಪ್ಪ.
೨೮–೪–೧೯೨೪.

ಮಡಿಕೇರಿ ಮುನ್ಸಿಪ್ಯಾಲಿಟಿ

ಅಯ್ಯಾ,

ಮಡಿಕೇರಿ ಮುನ್ಸಿಪಲ್ ಕೌನ್ಸಿಲು ಮೆಂಬರುಗಳ ಚುನಾವಣೆಯು ಸಮೀಪವಾಯಿತು. ಚುನಾವಣೆಗೆ ಉಮೇದುವಾರರಾಗಿ ನಿಂತಿರುವವರ ಹೆಸರುಗಳನ್ನು ಮೇ ೧ ರ ಗಜೇಟಿನಲ್ಲಿ ನೋಡಿದೆನು. ಅವರಲ್ಲಿ ಸರ್ಕಾರಿ ಉದ್ಯೋಗಸ್ಥರ ಹೆಸರುಗಳೂ ಕಂಡುಬರುತ್ತವೆ. ಇದು ನನಗೆಸ್ವಲ್ಪ ಆಶ್ಚರ್ಯವನ್ನುಂಟುಮಾಡಿತು. ಸ್ಥಳೀಯ ಸ್ವರಾಜ್ಯ ಎಂದರೆ ಡಿಸ್ಟ್ರಿಕ್ಟುಬೋರ್ಡು, ಮುನ್ಸಿಪಾಲಿಟಿ ಮುಂತಾದವುಗಳನ್ನು ಸರ್ಕಾರದವರ ಅಧೀನತೆಯಿಂದ ತಪ್ಪಿಸಿ ಜನರ ಆಡಳಿತಕ್ಕೆ ಬಿಡಬೇಕೆಂದು ಎಲ್ಲೆಲ್ಲಿ ಹೋರಾಡುತ್ತಿರುವ ವೇಳೆಯಲ್ಲಿ ಇಲ್ಲಿಜನರಿಂದ ಚುನಾಯಿತರಾಗುವವರಪೈಕಿ ಸರ್ಕಾರಿಉದ್ಯೋಗಸ್ಥರು ಸೇರುವುದರ ಅರ್ಥವೇನು? ಮಡಿಕೇರಿ ಮುನ್ಸಿಪಾಲಿಟಿಯಲ್ಲಿ ನಾಲ್ಕುಜನ ಉದ್ಯೋಗಸ್ಥರು ಸರ್ಕಾರದವರ ಮೆಂಬರುಗಳಾಗಿ ನೇಮಿಸಲ್ಪಡುತ್ತಾರೆ. ಹೀಗಿರುವಲ್ಲಿ ಚುನಾವಣೆಯ ಉದ್ಯೋಗಸ್ಥರನ್ನು ಬಿಡುವುದು ಯಾವನ್ಯಾಯ. ಇದು ಸರ್ಕಾರಿ ಮೆಂಬರುಗಳ ಸಂಖ್ಯೆಯನ್ನು ಬಲಪಡಿಸಲಿಕ್ಕಲ್ಲವೇ? ಹಾಗಾದರೆ ಮುನ್ಸಿಪಾಲಿಟಿಯು ಸರ್ಕಾರದ ಅಧೀನತೆಯಲ್ಲಿಯೇ ಇರಬೇಕೆಂದಾಯಿತಲ್ಲವೆ? ಬೇರೆಯಾವ ಮುನ್ಸಿಪಾಲಿಟಿಯಲ್ಲಿ ಉದ್ಯೋಗಸ್ಥರು ಚುನಾವಣೆಗೆ ನಿಲ್ಲುವುದು ನಾನು ಕೇಳಿರುವುದಿಲ್ಲ. [illegible] ಇದು ಹಾಸ್ಯಾಸ್ಪದ ಸಂಗತಿಯಾಗುವುದು. ಇಲ್ಲಿ ಇದಕ್ಕೆ ಈವರೆಗೆ ಯಾರೂ ಆಕ್ಷೇಪಣೆ ಮಾಡದೇ ಇದ್ದದ್ದು ವ್ಯಸನಕರ. ಹಾಗಾದರೆ [illegible] ಲೆಜಿಸ್ಲೇಟಿವ್ ಕೌನ್ಸಿಲು ಚುನಾವಣೆಗೂ ಸರ್ಕಾರಿ ಉದ್ಯೋಗಸ್ಥರು ಉಮೇದ್ವಾರರಾಗಿ ನಿಲ್ಲಬಹುದಲ್ಲವೇ? ಹೀಗೆಂದಾದರೆ ಚುನಾವಣೆಯ ಅರ್ಥವೇನು? ಉದ್ಯೋಗಸ್ಥರು ತಮ್ಮ ಅಧಿಕಾರ ಬಲದಿಂದ ತಮಗೆ ಬೇಕಾದಷ್ಟು ಓಟುಗಳನ್ನು ಸಂಪಾದಿಸಿಕೊಳ್ಳಲು ಸುಲಭವಲ್ಲವೆ? ಅಂದಮೇಲೆ ಚುನಾವಣೆಯಾಕೆ? [illegible] ಅದುದರಿಂದ ಸಮ್ಮಂಧಪಟ್ಟ [illegible] ನ್ಯಾಯವಿಲ್ಲದ ಪದ್ಧತಿ, ಯಾ, [illegible] ಮೇ ೧೯ ರಲ್ಲಿ ನಡೆಯುವ [illegible] ಸುಪರಾಗಿ ನಂಬಿದೆ,

"ಚಟ್ಟಳಿಗ"

ಅಯ್ಯಾ,

ಕೂಪ್ರಕೊಟದಲ್ಲಿ ಸುಮಾರು [illegible] ವರ್ಷಗಳಿಂದ "ಮಾಟೆರೋಗ್" ಎಸಾಗೊಂಡು ಫಾರೆಸ್ಟಿನಲ್ಲಿ ಹಲವು ಹಾವಳಿಯನ್ನುಂಟುಮಾಡುತ್ತಿದ್ದ ಒಂದು ಸಲಗ ಆನೆಯನ್ನು ತಾ॥ ೧೪ [illegible] ಜನೀಯರಾಗ ಮೆ॥ ರಿಚರ್ಡ್‌ಸನ್‌ರವರೂ, ಫಾರೆಸ್ಟು [illegible] ಹೋಗಿ ರಿಚರ್ಡ್‌ಸನ್‌ರವ [illegible] ದೇಗೂಡಿನಿಂದ ಹೊರಟು [illegible] ೬ ಗಂಟೆಯಿಂದ ೧೧ ಗಂಟೆವರೆಗೆ [illegible] ಹುಡುಕುತ್ತಾಹೋದಲ್ಲಿ [illegible] ಗಡರಿಸಲು ಯತ್ನಿಸಿ [illegible] ನ್ನುಹಾರಿಸಿದ [illegible] ದು ೪೦ [illegible] ತೂಕವೂ [illegible] ಆದಿಯೂ, ಎತ್ತರವು ೧೦ ಅಡಿಯ [illegible] ದೇ ಆನೆಯನ್ನು ಕೊಲಬೇಕೆಂದು [illegible] ಮೆ॥ ಕೆ ಜಿ ಬೆಳ್ಳಿಯಪ್ಪನವರು [illegible] ಯತ್ನಿಸಿ ಸಾಧ್ಯವಾಗಲಿಲ್ಲ. [illegible] ವಸ್ತು ಪಾರೆಸ್ಟ್‌ರೇಂಜರ್ [illegible] ಗಳಿಂದ ತಪ್ಪಿಸಿಕೊಂಡು ಹೋಗಿತ್ತು. ಆಟಿವರ್ಷ [illegible] ರ್ ಮೆ॥ ಬಿ ಚಂಗಪ್ಪನವರ [illegible] ಕಟ್ಟಿಸಿಕೊಂಡಿತ್ತು. ಅಲ್ಲದೆ ಇದಕ್ಕೆ [illegible] ಮಲೆಯಲ್ಲಿ ವಾಸಿಸುವವರೂ ಆನೇಕನಾಡಿ [illegible] ದ್ದರು. ಇದರಿಂದ ಬಹಳ ಜನರು ಭಯದಿಂದ ಗಾಯಗಳನ್ನು [illegible] ಈ ಆನೆಯು [illegible] ಮೇಲೆ ಕೂಡ [illegible] ಮಲೆಯ [illegible] ದೇವರಕಾಡು [illegible] ಇದು [illegible] ಜನರ ಭೂಮಿ, ಗದ್ದೆ, ಬಾಳೆತೋಟ ಮಸ್ಕಿರೆ ನಷ್ಟಮಾಡಿದಲ್ಲದೆ ಅಲ್ಲಿಯಾಗ [illegible] ತ್ತಾ ಕಾಡಿನಲ್ಲಿ ತಿರುಗುವ [illegible] ನ್ನುಂಟುಮಾಡುತ್ತಿತ್ತು. ಈ ಆನೆಯು [illegible] ದೇವರಕಾಡಿನ [illegible] ಇದುದೇವರ ಆನೆಯೆಂದೂ, ಆದುದರಿಂದ ಇದು [illegible] ಸಿಕ್ಕುವುದಿಲ್ಲವೆಂದೂ, ನಂಬಿಕೊಂಡಿದ್ದ ಜನರಭಯವು ತಾ॥ ೧೪ ರಲ್ಲಿ ಕೊನೆಗೊಂಡಿತು.

ಈ ಆನೆಯನ್ನು ಗುಂಡುಹೊಡೆದ ಸಾಹೇಬರುಗಳ ಧೈರ್ಯವು ಮೆಚ್ಚತಕ್ಕದ್ದು ಎಂಬುದಕ್ಕೆ ಸಂಶಯವಿಲ್ಲ. ಈ ಆನೆಯನ್ನು ತೋರಿಸಿಕೊಟ್ಟ, ಟ್ರೇಕ್ಟರುಗಳಾಗಿದ್ದ ರೇಂಜರ್ ಮೆ॥ ಬಿ. ಚಂಗಪ್ಪನವರ ಮತ್ತು ಫಾರೆಸ್ಟರ್ ಮೆ॥ ಕೆ ಐಯ್ಯಪ್ಪನವರ ಧೈರ್ಯವು ಸಹ ಹೊಗಳತಕ್ಕದ್ದೆ. ಈ ಆನೆಗೆ ಗುಂಡು ಆಗದೇಕೆಂದರೆ ಈ ಟ್ರೇಕ್ಟರುಗಳು ನಾಲ್ಕುಸಲ ಆನೆಯನ್ನು ಮುಟ್ಟುವಷ್ಟು ಹತ್ತಿರ ಹೋಗಿಬಿಟ್ಟಿದ್ದಲ್ಲದೆ ಗುಂಡುಹೊಡೆದ ಸ್ಥಳದಲ್ಲಿ ಮೆ॥ ಚಂಗಪ್ಪನವರು ಆನೆಗೆ ೪ ಅಡಿ ದೂರದಲ್ಲಿಯೂ, ಮೆ॥ ಐಯ್ಯಪ್ಪನವರು ೧೦ ಅಡಿದೂರದಲ್ಲಿಯೂ ಆ ಆನೆಯಿಂದ ತಪ್ಪಿಸಿಕೊಂಡರು. ಒಂದೇ ಗುಂಡಿನಿಂದ ಆನೆಯು ಕೆಳಕ್ಕೆ ಬೀಳದೆ ಹೋಗಿದ್ದರೆ ರಿಚರ್ಡ್‌ಸನ್‌ರವರೂ, ಐಯ್ಯಪ್ಪನವರೂ ಪ್ರಾಣವನ್ನು ಕಳಕೊಳ್ಳಬೇಕಾಗುತಿತ್ತು. ಅದೇದಿನ ಸತ್ತುಬಿದ್ದಿದ್ದ ಆನೆಯನ್ನು ಆಮಿಷಪನರವರು ಮತ್ತು ಅವರ ಪತ್ನಿಯುವರೂ, ಸಿವಿಲ್‌ಸರ್ಜನರೂ ಮಡಿಕೇರಿಯಿಂದ ಬಂದುನೋಡಿ ಬಹಳ ಆಶ್ಚರ್ಯಗೊಂಡರು.

"ಕುರ್‍ಚ್ಚಹಾಚಿದ್ದನ"

ಅಯ್ಯಾ,

"ಪಟ್ಟೋಲೆ ಪಳಮೆ" ಎಂಬುವ ಪ್ರ[illegible] ಓಟದಲ್ಲಿ ನನಗುಂಟ [illegible] ವಿವಾಹ [illegible] ಎಷ್ಟುಮಂತ್ರ [illegible] ಪಾ ಪತ್ತಿ [illegible] ದು. ಆದರೆ, ಸುಖ, ದುಃಖಗಳೆರಡೂ, ಅವಳ [illegible] ಪೂರ್ವಕೆ ಬಂದರೊಂದಿಗೊಂದು ಹಂಚಾಳಿಸು[illegible] ಬುತ್ತಿ [illegible] ವುದು [illegible] ನನಗೆ ಆನಂದದೊಂದಿಗೆ, [illegible] ಜ್ಞಾನವೂ ಜೊತೆಗ[illegible] ಅದೂರಿಬಿಡುವನ್ನು ಬೇಗಿಸಿಬೇ ಪೀಠಿಕೆಯಲ್ಲಿ [illegible] ಒಳೆಕ್ಕಿಸುವವನೆ ಸಿಸಿವದನೋ[illegible]" ಎಂದು [illegible] ಗ್ರಂಥಕರ್ತ [illegible] ಎಲ್ಲಾ ಒಂದ ಸಂಶಯವನ್ನು ಗ್ರಂಥಕರ್ತ [illegible] ವಿಲ್ಲದೆ [illegible] ನ್ನು ನೀಗಿಸಿಯಾರಾಗಿ ಅಪೇಕ್ಷಿಸುತ್ತೇನೆ.

ಹುತಿ ಹುಟ್ಟುವನ್ನ [illegible] ನಿಶ್ಚಯಿಸ [illegible] ಸುತ್ತಿರುವುದನ್ನು [illegible] ಹೋಗುದಾ [illegible] ಎನ್ನುವುದರ [illegible] ದೃಷ್ಟಿ [illegible] ನಾಡಿನ ಇಗ್ಗುತಪ್ಪ [illegible] ಈ ಪುಸ್ತಕದ ೭೬ ನೇ ಪುಟದಲ್ಲಿ ಹುತ್ತಿಹುಟ್ಟ[illegible] ಕೆಗ್ಗಟ್ಟುನಾಡಿನಲ್ಲಿ ಸಿಕ್ಕ ಸುಮ್ಮದಾಗಿ ಒಲಿದಿರ[illegible] ಇದು ಅಚ್ಚು ತಪ್ಪೋ ಅಥವಾ ಕೃತಪ್ಪೋ [illegible] ವಾದ ಸಂಗತಿಯೋ ತಿಳಿಯಬೇಕಾಗಿದೆ.

೧೩ನೇ ಪುಟದಲ್ಲಿ [illegible] ಸಿಕೊಂಡು ಹೊ [illegible] ವಿಧವೆಯನ್ನು ಪುನಃ ಅದೇ [illegible] ನಕ್ಕೆ ಪುನರ್ವಿವಾಹ ಮಾಡುಮದುವೆಯನ್ನು [illegible] ಆದರೆ, ಅಂಥಾ ವಿಧವೆಯನ್ನು [illegible] ಬಂದು ಸತ್ತುಹೋದವನಿಗೆ ಆದೇ [illegible] ಅಥವ [illegible] ವನು ಪುನರ್ವಿವಾಹ [illegible] ಬಹುದೋ?

೧೯೩ ನೇ ಪುಟದಲ್ಲಿ [illegible] ವಿವಾಹ [illegible] ಯಿದನ್ನೂ ಮುತ್ತೈದೆಯಮೇಲೆ ಮುಹೂರ್ತ[illegible] ದಲ್ಲಿ ಪುನರ್ವಿವಾಹಮಾಡಲು ಕಾರಣವೇನು?

ವಿಧವೆಗೆ ಪುನರ್ವಿವಾಹ ಮಾಡಿದವೇಲೆ ಆಕೆ[illegible] ಮುತ್ತೈದೆಯಂತೆ ಎಲ್ಲಾ [illegible] ನಡಿಸಬ[illegible] ದಾಗಿ ಬರೆದಿರುವುದು [illegible] ಅವಳು ಕೂ[illegible] ಹಕ್ಕುದಾರಳೆನ್ನುವ [illegible] ಮುತ್ತೈದೆಯ [illegible] ಮುಹೂರ್ತ[illegible] ರಲು [illegible] ದು? ಮುಹೂರ್ತಕ್ಕೆ [illegible] ವಿಧವೆಗೆ ಪುನರ್ವಿವಾಹ [illegible] ಮುಹೂರ್ತಕ್ಕೆ [illegible] ಸಿದ [illegible] ಪದ್ಧತಿಮೇರೆ ಮುತ್ತೈದೆ[illegible] ಕೊಡುವುದೂ, [illegible] ಮಹಗಲೂ[illegible] ಬೇಲೇ ನನ್ನಲ್ಲಿ ಬಲವಾದ ಸಂಶಯ[illegible] ರುವುದು.

೩೩೦ನೇ ಪುಟದಲ್ಲಿ ಲೋಕಸ್ತ್ರವು ಎಂದಿರು[illegible] ಆಸ್ತಳವು [illegible] ಪಾತುಕಾಶಾಸ್[illegible] ವಾಗಿ [illegible] ಲತ್ತರಿಕಗೆ ಹತ್ತಿರದಲ್ಲೇ "[illegible]" ಎಂ[illegible] ಕಾಡು ಇರುವುದೂ, ಮಲೆತ್ತಿರ [illegible] ಕಾವ್ಯಕಾವ[illegible] (ಕಾವ್ಯಾರ್‌ಬನ) ಕ್ಕೆ ಹತ್ತಿರ [illegible] ವೆಲ್ಲಾ [illegible] ಆ ಕಾಲದಲ್ಲಿ [illegible] ತನ್ನ ಹೆಂಡತಿ ಮಕ್ಕಳು ಮತ್ತು ಎಲ್ಲಾ ದೇವರುಗಳನ್ನೂ ಮತ್ತು [illegible] ಯಿಗಳನ್ನೂ ಸೇರಿಸಿ ಬೇಟೆಯಾಡುತ್ತಾ ಈ ಪಟ್ಟ[illegible] ಟ್ಟದಲ್ಲಿಯೇ ಅರ್ಜುನನೊಂದಿಗೆ ಜಗಳವಾಡುತ್ತಾ [illegible] ದಾಡುತ್ತಾ ಹೋಗಿ ತುಳುನಾಡಿನ ಅಡೂರಿನಲ್ಲಿ ಪ್ರ[illegible] ಕ್ಷನಾದನೆಂತಲೂ ಅಲ್ಲಿ ಮಹಲಿಂಗಲಿದೆಯಾಗಿಯೂ ಮಲೆಯಲ್ಲಿ ಅರ್ಜುನ ಪ್ರತಿಷ್ಠೆಯಾದ ಕಾಡು ತಿಲಾ[illegible] ಗಗಳೇ ಕಂಗೊಳಸುತ್ತಿರುವುದರಿಂದಲೂ, ಆಗಿನ ಬೇ[illegible] ಯಲ್ಲಿ ಬಿಲ್ಲು ನಿಂತ ದೇವರುಗಳೂ ನಾಯಿಗಳೂ [illegible] ಈಗಿನ ಐಯ್ಯಪ್ಪನೂ, ನಾಯಿಗಳೂ, ನಾಥನೂ, ಬೇ[illegible] (ಪೂದ) ನೊಕುಬರ ಮತ್ತು ಕಬರಿ ಅವತಾರವೆತ್ತಿದ[illegible] ವರ್ತೀವರಮೇಶ್ವರರನ್ನು ಈಗಿನ ಜನರು ಪೂಜ[illegible] ಸಾರ್ಥಕವುಗಳನ್ನುತ್ತಾರಲ್ಲದೆ ಮಲೆತಂಬ್ರಾನು [illegible] ಹಿನಿಯ ಮಗನಲ್ಲವೇದೇ ನಂಬಿಕೆಯಾಗುತ್ತ[illegible] ಲ್ಕಂಡ ನನ್ನ ಸಂಶಯಗಳನ್ನು ಗ್ರಂಥಕರ್ತರು ಬೇ[illegible] ಸದೆ ಈ ಪತ್ರಿಕಾಮುಖಾಂತರ ಉತ್ತರವಿತ್ತು ಉಪ[illegible] ರಿಸುವರಾಗಿ ನಂಬಿದ್ದೇನೆ,

ಅಪೇಕ್ಷಿ

ಕೊಡಗಿನ ಪಂಚಾಯತಿಕೋರ್ಟು.

ಪ್ರಕೃತದಲ್ಲಿ ಪಾಶ್ಚಾತ್ಯರ ಆಗಮನ ಉಂಟಾದಂ ದಿಯಂದ ಆರ್ಯಸಂಸ್ಕೃತಿಯು ಸರ್ವವಿಷಯಗಳಲ್ಲಿಯೂ ಗೊತ್ತಿಲ್ಲದೇ ಹೋಯಿತು ವಿದಿತವಷ್ಟೆ. ಸಾವಿರಾರು ವರ್ಷ ಆಚಾರ ನೀತಿಗಳನ್ನು ನಮಗೆ ಬೋಧಿಸಿದ್ದ ಪ್ರಭುದ್ದರೂ ಈ ತೀರ್ಮಾನ ಬಹುಕಾಲಿಸುವರೆಂ ತೋರಿಸಿಯುವ್ರು ಅಪರೂಪ, ಅಧರ್ಮ್ಮ, ಭ್ರಾಂತವಾದ ಭ್ರಮೆಗಳು ಇವೆಲ್ಲ ಅಂತಹ ಗಳೇ ಪರಂತು ಪಾಶ್ಚಾತ್ಯರ ಪಾದತಳಕ್ಕದ ಗ್ನಾದ ನಮ್ಮ ಆಚಾರಗಳಲ್ಲಿ ಪಂಚಾಯತಿ ಮೂ ಲ ತೀರ್ಮಾನ ಕೊಡುವುದೂ ಒಂದು. ಹಿಂ ನದಲ್ಲಿ ಗುಪ್ತಮೌರ್ಯರ ಕಾಲಗಳಲ್ಲಿಯೂ ಕೂ ಪಂಚಾಯತಿ ಸಭೆಗಳ ಮೂಲಕ ನ್ಯಾಯತೀರ್ಮಾನ ತ್ತಿದ್ದರೆಂದೂ ಆ ಸಭೆಯ ನ್ಯಾಯಲ್ಲಾಗಿದ್ದು ಕಾಂಕ್ಷೆ ಹೋಗುತ್ತಿದ್ದರೆಂದೂ ಇತಿಹಾಸ ತಿ ಸುತ್ತದೆ.

ಕೊಡಗು ದೇಶದಲ್ಲಿಯೂ ಕೂಡ ಲಿಂಗರಾಜರ ಕಾಲದಲ್ಲಿ ಎಲ್ಲದೆ, ನಾಯಕರುಗಳ ಕಾಲದಲ್ಲಿ ಕೂಡ ಪಂಚಾಯತಿಗೆ ಸಭೆಯು ಇತ್ತೆಂದು ತಿಳಿ ವ ಆ ಪದ್ಧತಿಯು ಅವಶಿಷ್ಟಭಾಗವು ಈಗ ವೆಯುಂಟು. ಕೊಡಗಿನವರೆಲ್ಲರಿಗೂ ವಿಧಿತವ ಆದರೆ, ಮೊದಲು ಊರ್ಜಿತಾವಸ್ಥೆಯಲ್ಲಿದ್ದ ಊ ಪಂಚಾಯತಿಗೆ ನಾಡು ಪಂಚಾಯತಿಗೆ, ದೇಶಪಂ ತಿಗೆ ಇವುಗಳ ಸಲುವಾಗಿ ಈಗ ಊರು ಪಂಚಾ ಮಾತ್ರ ನಡೆವಳಿಕೆಯಲ್ಲಿದೆ. ಆದೂ ಒಡೇ ಜಿಕ ಸಂಗತಿಗಳನ್ನು ತೀರ್ಮಾನಿಸುವದಾಗಿದೆ ನ ಶೀಲೆಯನ್ನು ನೋಡಿರಿ! ವಿಜಾಯತಿಯಲ್ಲಿ ಊರು ಪಂಚಾಯತಿಗೆ ಯಾ ಬೀಜವು ಮೊಳೆತು ಮೆಂಟರಿ ಗವರ್ನಮೆಂಟು ಎಂಬ ದೊಡ್ಡ ಮರ ಫಲಕೊಟ್ಟಿತು. ಆದರೆ ಅಲ್ಲಿಗಿಂತ ಮೊದಲೇ ರತಖಂಡದಲ್ಲಿ ಬಿತ್ತಲ್ಪಟ್ಟ ಬೀಜವು ಬೀಜವಾಗಿ ಂತಿರು ಭೂಮಿಯು ಫಲವತ್ತಲ್ಲವೇ?

ದಕ್ಕೆ ಒಂದು ಸಣ್ಣ ಪ್ರಶ್ನೆ. ಯಾವನ್ನು ಸಣ್ಣ ವಿರಾದಿಗಳಿಗೂ ಕೋರ್ಟಿಗೆ ಹೋಗಿ ಹೇರಳ ರ್ಚು ಮಾಡಿ ಅವನಂಬಿಕೆಯಾದ ನ್ಯಾಯವನ್ನು ಯುವುದಕ್ಕಿಂತ ಪೂರ್ವಪದ್ಧತಿಯನ್ನು ಅನುಸರಿಸಿ ನ ದೆನಾವೇ ನಮ್ಮ ಹತ್ತಿರವೇ ಇರುವ ನ್ಯಾಯವನ್ನು ಕೊಳ್ಳಲು ಅಡ್ಡಿಯೇನು? ಹಣಪ್ರಯೋಗದಿಂದ ಗಳ ಬಾಯಿಂದ ಸುಳ್ಳು ಹೇಳಿಸುವುದೆಂತೂ ಅದಕ್ಕೆ ನರೂ ಬೇಡವೇಬೇಡ. ವಕೀಲರು ತಮ್ಮ ಲದಿಂದ ಅನೇಕ ಸಂದರ್ಭಗಳಲ್ಲಿ ಸುಳ್ಳನ್ನು ನಿ ಜುತ್ತಾರೆಂಬುದು ಅತಿಶಯೋಕ್ತಿಯಲ್ಲವೆಂಬುದ ವರು ತಮಗೆಬಂದ ಯಾವತ್ತೂ ಕೇಸುಗಳನ್ನು ಕೊಳ್ಳುವರೆಂಬುದೇ ಸಾಕ್ಷಿ. ಹಠವಾದಿಗಳಿಗೆ ರ್ಗಗಳು ತಮ್ಮ ಜೀವನಾನದ ವಿಚಾರ ಕೊಟ್ಟ ವುದು.

ಎಂದರೆ ಹೆಚ್ಚು ಕಮ್ಮಿ ಸ್ವಮರ್ಯಾದೆ ಇರುವ ಯು ಕೋರ್ಟು ಬೇಡವೆಂದು ನಷ್ಟಹೊಂದುವನು "ಹೈಹುಣ್ಣಿಗೆ ಕನ್ನಡಿ ಯಾಕೆ" ಎಂಬ ನಾಣ್ಣುಡಿ ಸ್ವಲ್ಪ ಕಣ್ಣು ತೆರೆದು ನೋಡಿದರೆ ಎಲ್ಲವೂ ವಿಶ ವ ಈ ವಿಷಯ ಬಗ್ಗೆ ಈ ಲೇಖನವನ್ನು ಉದ್ದ ವುದು ಅನುಚಿತವಲ್ಲವೇ?

ಘಿಯಾದಿ

— — —

ಈ ಕೆಳಗಣ ವಾರ್ತೆಯನ್ನು ಪ್ರಕಟಿಸಿ ಘನಸರ ರ ಕೊಡಗಿನ ಎಲ್ಲಾ ಜಮಾನುದಾರರು ಮತ್ತು ಸ್ಥಾನದಲ್ಲಿ ಕಕ್ಷಿಗಾರರವರ ವಕಾಲತ್ತು ನಡಿಸುವ ರುಗಳ ಅವಗಾಹನೆಗೆ ತರಬೇಕಾಗಿ ಕೋರಿಕೆ.

ಈ ದೇಶದಲ್ಲಿ ಕೊಡವರೇ ಮುಖ್ಯಜನಾಂಗದವರು ವರ್ಷಗಳಿಂದ ಇಲ್ಲೇ ಇದ್ದು ದೇಶದ ಮೂಲನಿ ಗಳೆಂದು ಎನ್ನಿಸಿಕೊಂಡಿರುತ್ತಾರೆ. ಆಕಾರ, ನಡೆ ಳಲ್ಲಿ ಇವರಿಗೂ, ಮಲೆಯಾಳ, ಕನ್ನಡ, ಮೈ ಸೀಮೆಗಳ ಜನರಿಗೂ ಭೇದವಿದೆ. ಇವರ ಭಾಷೆ ತಮಿಳು, ಕನ್ನಡ ಮತ್ತು ಮಲೆಯಾಳ ಭಾಷೆ ಮಿಶ್ರವಾಗಿವೆ. ಇವರು ಬಯಲುಶೀಮೆಯವರಿ ಧೀರ್ಘದೇಹಿಗಳಾಗಿಯೂ, ದೃಢಾಂಗರಾಗಿಯೂ, ರೆ. ಇವರಿಗೆ ಜಮ್ಮಭೂಮಿಗಳುಂಟು. ಹಿಂದೂ ದ ಇತರಸಿಜಿಗಳಲ್ಲಿ ಸಾಹುಕಾರರು ಜನರಿಗೆ ಬಡ್ಡಿ ಕೊಟ್ಟು ಕಡೆಗೆ ಅವರ ಭೂಮಿಗಳನ್ನೆಲ್ಲಾ ಕಿತ್ತು ತ್ತಾರಾದುದರಿಂದ ಇಲ್ಲಿ ಈ ಜಮ್ಮಭೂಮಿಗ ವಿಕ್ರಯ, ಗಿರ್ವಿ ಮೊದಲಾದ ಉಪಾಯಗಳಿಂದ ನ ಮಾಡಕೂಡದೆಂದು ಸರಕಾರದವರ ಇವರ ಗಿ ಕಟ್ಟಲು ಮಾಡಿರುತ್ತಾರೆ. ಕುಟುಂಬದ ಸಮು ದಾಯಸೊತ್ತಾದ ಜಮ್ಮಭೂಮಿಯನ್ನು 1809 ರಲ್ಲಿ ಪಟ್ಟಕ್ಕೆ ಬಂದ 11 ನೇ ಲಿಂಗರಾಜನು ದೇಶದ ಪಕ್ಕ ಮುಖ್ಯಸ್ಥರ ಅನುಮತಿಪಡೆದು ಪರಲಾಯುದ ಜಾವಳಿ ಕಡೆಗಟ್ಟುವುದಕ್ಕಾಗಿ ಕೊಡಗಿನಲ್ಲಿ ದಂಡುಇಡತಕ್ಕ ಖರ್ಚಿಗಾಗಿಯೂ, ನಿಯಮಿತವಾಗಿ ರಾಜ್ಯಭಾರ ನಡಿಸುವ ಸಿಬ್ಬಂದಿ ಖರ್ಚಿಗಾಗಿಯೂ ಜಮೀನುಗಳೆಲ್ಲಾ ಸರಿಯಾಗಿ ಅಳತೆಮಾಡಿಸಿ ಮುಖ್ಯರಿಗೆಕಟ್ಟ ಕಂದಾಯ ನಿರ್ಣಯಿಸಿ, ಮಾಮೂಲವ ಜಮೀನು ಯಾರ್ಯಾರ ಅನುಭವದಲ್ಲಿದ್ದವೋ ಅವರವರ ಜಮೀನುಗಳ ಚೆಕ್ಕುಬಂದಿ ಹಾಕುವುದು ವಿಸ್ತಾರವೆಷ್ಟು, ಕಾಯಂ ಕಂದಾಯವೆಷ್ಟು ಎಂಬುದನ್ನು ಪ್ರಕ್ರಮವಾಗಿ ಒಂದು ಪುಸ್ತಕದಲ್ಲಿ ಭೂಮಾಲಿಕರ ಮನೆತನದ ಹೆಸರಿನ ... ಸಿದನು. ಈ ಠಿಕಾಣೆಗೆ ಶಿಸ್ತೆಂದು ಹೆಸರು. ಇದಕ್ಕೆ ಲಿಂಗರಾಜನ ಸ್ವಂತ ರಾಜಮುದ್ರೆ ಸಹಿ ಇದೆ. ಆದರೆ ಈ ರೀತಿ ನಿಶ್ಚಯಿಸಿದ ಕಂದಾಯವು ರಾಜನ ರಾಜ್ಯನಾಗಿದ್ದು. ರಾಜನಿಂದ ಪ್ರಜೆಗಳು ಪಡದು ರಾಜನ ಸಹಾಯಕ್ಕೆ ಸಾಗುವಳಿ ಮಾಡಿದ ಭೂಮಿಗೆ ಆ ನ್ಯಾಯ ಪ್ರಕಾರ ರಾಜಧರ್ಮ ಶಾಸ್ತ್ರರಿಂದಲೂ ವಿಸ್ತಕಂ ದಾಯ ದರ ೧೦೦ ರಕ್ಕೆ ೧೦ ರ ಕಂದಾಯ ತೆರಬೇಕೆಂದು ಪ್ರಜೆಗಳು ವಿರೋಧಿಸಿದರಿಂದಲೂ, ಜಸ್ತಾ ದರೋಬಸ್ತ್ ಭೂಮಿಗೆ ದರ ೧೦೦ ಕ್ಕೆ ಹತ್ತರ ಕಂದಾಯಕ್ಕೆ ಬದ ಲಾಗಿ ದರ ನೂರಕ್ಕೆ ೫ ರ ಕಂದಾಯ ವಂಶಪರಂಪ ರೆಯಾಗಿ ಕೊಡುವ ಶರ್ತಿನಿಂದ ಪ್ರತಿಮನೆತನಸ್ತನು ರಾಜನ್ಯೆಲ್ ... ಹರಿಸಿಂದ ಸನ್ನದ್ ಸಹದದ್ದಾಗಿದೆ. ಮನೆ ತನು ... ದ ಭೂಮಾಲೀಕರು ಟಿಪ್ಪು ಕೈ ಸರೆಯಲ್ಲಿಯೂ ಇತರ ಬಾಬಿನಲ್ಲಿಯೂ ಸದ ಕಾಳಸ ಪ್ರಬಂಧನಂದು ಪೂರ್ವಿಕರ ಭೂಮಿಯನ್ನು ಇತರ ಊ ರಿನಿಂದ ಕೊಡಗಿಗೆ ಬಂದು ಶಿಸ್ತು ಪಾಳುಭೂಮಿಯನ್ನು ಪಡದು ಸಾಗುವಳಿಮಾಡುವ ಕುಲಗಳವರೂ ಬಂಟರೂ, ಬ್ರಾಹ್ಮಣ, ಮುಸಲ್ಮಾನ್ ಮುಂತಾದ ಹಲವು ಕುಲಗೋತ್ರದವರಿಗೆ ಸಾಗಿನ ಭೂಮಾಲೀಕರೆಂದು ಶಿಸ್ತಿನಲ್ಲಿ ನಿಶ್ಚಯಿಸಿದ ದರ ೧೦೦ ಕ್ಕೆ ೧೦ ರ ಕಾಯಂ ಕಂದಾಯ ತೆರುವದಾಗಿದೆ. ಈ ಸ್ಥೈತಿ ಕೆಲವರಿಗೆ ಆಯಾಯ ಕಾಲದ ಸರಕಾರದವರು ತಮ್ಮ ಇಷ್ಟಾನುಸಾರ ದರ ೧೦ ರ ಕಂದಾಯಕ್ಕೆ ಬದಲಾಗಿ ದರ ೫ ರ ಕಂದಾಯಕ್ಕು ೧೮೩೪ ರಲ್ಲಿ ನಡದ ಕಾಟಕಾಯಿಗೆ ಸಹಾಯ ಮಾಡಿದ್ದಕ್ಕಾಗಿಯೂ ಉಂಬಳಸಹ ಕೊಟ್ಟಿದ್ದಾರೆ. ಕಮ್ಮಿ ಕಂದಾಯಕ್ಕೆ ಸರಕಾರದವರು ಕೊಡುವ ಸರ್ವಹಕ್ಕು ಸಂಬಂಧಕ್ಕೆ ಇಲುವುದೇನೂ ಆಶ್ಚರ್ಯವಲ್ಲ. ಪರವೂರಿನಿಂದಬಂದು ಕೊಡಗಿನಲ್ಲಿ ನೆಲಸಿರುವವನ ಹುಟ್ಟೂರಿನ ಪಕ್ಕನಮೇರೆ ಈ ಊರಿನಲ್ಲಿ ನೆಲಸಿ ಪೂರ್ವಿಕರು ಕುಳಸ್ಥಬಂದು ಪಾಣಿನಲ್ಲು ಇದ್ದ ಶಿಸ್ತಾರ ಭೂಮಿಸಹಿತ ಸಾಗಿನವ ಕರವ ಉಂಬಳಿ ಭೂಮಿಯು ಬಂಟರ ಜಾತಿಯವರ ಪಟ್ಟೆದಾರ ಕಾಲವಾದರೆ ಆತನ ಆಳಯಗಟ್ಟು ತಗ್ಗಿನಿಂದ ಒಂದು ಭೂತ ಖಾತೆಯ ... ಇಟ್ಟುಮೇರೆ ಪಟ್ಟೆದಾರನಾಗುತ್ತಾನೆ. ತದೋ ತಳುನಾಡಿನಿಂದ ಬಂದ ತುಳುವ ಗೌಡರು, ಬ್ರಾಹ್ಮಣರು, ಇತರ ಎಲ್ಲಾ ಕುಲಗೋತ್ರದವರು ಹಕ್ಕುದಾರರಾಗಿ ಇರುತ್ತಾರೆ. ಆದರೆ, ಅವರ ಹುಟ್ಟೂರು ಬ್ರಿಟಿಷ್ ಸರಕಾರದ ಪ್ರಾಂತ್ಯವಾಗಿರಲಿ ಸಾಮಂತರಾಜರ ರಾಜ್ಯವಾಗಿರಲಿ ಸಾಹುಕಾರರ ಸಾಲಕ್ಕೆ ಈಡುಕೊಡುವುದಕ್ಕೂ, ಬೋಗ್ಯಕ್ಕೆಗೂ, ಭೂಮಿ ಮನೆ ಈಡಾಗುವಾಗ್ಯೆ, ಈ ದೇಶದಲ್ಲಿ ಆಗಕೂಡ ದೆಂಬುದನ್ನು ಅದಾರ್ಥದಿಂದ ಮೂಲನಿವಾಸಿಗಳ ಪಕ್ಕನ ಅವರ ಆಸ್ತಿಗೆ ಅನ್ವಯಿಸುತ್ತೆಂಬದ್ದಲ್ಲವೊ? ಈ ಕಾರಣದಿಂದ ಕೊಡಗಿನಲ್ಲಿ ವ್ಯಾಪಾರ ನಡಸಲಿಕ್ಕೂ, ಸ್ಥಿರಾಸ್ತಿ ಸಂಪಾದನೆ ಮಾಡಲಿಕ್ಕೂ ಹಲವು ಬಾಬಿನಲ್ಲಿಯೂ ಸಲ ಭದ್ರತೆಯಲ್ಲಿ ಆವಶ್ಯ ಬಿದ್ದಕಾಲದಲ್ಲಿ ತನ್ನ ಖರ್ಚಿಗೆ ತಕ್ಕಷ್ಟು ಐವಜು ದೊರಕದೆ ಪ್ರಜೆಗಳು ದಿನೇ ದಿನೇ ಕಷ್ಟನಷ್ಟಕ್ಕೆ ಗುರಿಯಾಗಿದ್ದಾರಾದ್ದರಿಂದ ಘನಸರಕಾರದವರು ಕೊಡಗು ಕೌನ್ಸಿಲ್‌ನಲ್ಲು ಚರ್ಚಿಸಿ ಯಾರ್ಯಾರ ಭೂಮಿ ಮನೆ ಸಾಲಕ್ಕೆ ಈಡಾಗಬಹುದು? ಯಾರ್ಯಾರ ಭೂಮಿ ಮನೆ ಯಾವ್ಯಾವ ಕಾರಣದಿಂದ ಈಡಾಗಕೂಡ ದೆಂದು ಇತ್ಯರ್ಥಪಡಿಸಿ, ಸಿ॥ ಪ್ರ। ಕೋಡನ್ನು ತಿದ್ದುಪಡಿಮಾಡಿ ಆ ಸಂಗತಿಯನ್ನು ಗಜೆಟಿನಲ್ಲಿ ಪ್ರಕಟಿಸುವ ಏರ್ಪಾಡಾದರೆ, ಬೊಂಬಾಯಿ, ಮದ್ರಾಸು, ಮಂಗಳೂರು ಕಡೆಗಳಿಂದಾಗಲಿ ಈ ದೇಶದ ಪ್ರಾಂತ್ಯವಂತರೆಲ್ಲಾ ಸೇರಿ ತಮ್ಮ ದ್ರವ್ಯದಿಂದಾಗಲಿ, ಬ್ಯಾಂಕ್ ವ್ಯಾಪಾರ ನಡಿಸಲು ಅಡ್ಡಿಯಾಗುವದಿಲ್ಲ.

"ಜಮೀನುದಾರ."

ಶ್ರೀ ಕಾವೇರಿ ಬಸ್ ಸರ್ವೀಸು.

ಮಹನೀಯರೆ,

ಎಲ್ಲೆಲ್ಲಿಯೂ ಬಸ್ ಸರ್ವೀಸು ಇರುವಂತೆ ನಮ್ಮ ಮಡಿಕೇರಿಯಿಂದ ವೀರರಾಜಪೇಟೆಗೂ ಒಂದು ಸರ್ವೀಸು ಇದೆಯಲ್ಲಾ! ಈ ಬಸ್ಸಿನಲ್ಲಿ ಪ್ರಯಾಣಮಾಡಿದರು ಯಾರೂ ಇದನ್ನು ಮರೆಯಲಿಕ್ಕಿಲ್ಲವಾಗಿ ತೋರುತ್ತದೆ. ಇದರ ಅನುಕೂಲಗಳು ಬದಲು ಇದರ ಅನಾನುಕೂಲಗಳು ಪ್ರಯಾಣಿಕರ ಮನಸ್ಸಿನಿಂದ ಎಂದಿಗೂ ಅಳಿಸಿಹೋಗಲಿಕ್ಕಿಲ್ಲ. ಪ್ರಯಾಣಸ್ಥರ ಅನುಕೂಲವೇ ಬಸ್ಸು ಸರ್ವೀಸಿನ ಉದ್ದೇಶವು. ಆದರೆ ಈ ಸರ್ವೀಸು ಪ್ರಯಾಣಿಕರ ಅನಾನುಕೂಲಕ್ಕೇನೇ ಇಡಲ್ಪಟ್ಟಿದೆ ಎಂದು ಅನೇಕರ ಭಾವನೆ. ಈ ಬಸ್ಸುಗಳ ಕಾರುವಸ್ಥಳದಿ ಅನಾನುಕೂಲವನ್ನು ವಿವರಿಸಿ ಪೂರೈಸಲಾರೆ. ಪ್ರಯಾಣಮಾಡುವವರು ಹೆಂಗಸರು ಗಂಡಸರು ಎಂಬ ಭೇದವಿಲ್ಲದೆ ಪಾಡಿಮಾಡಿ ಮುಟ್ಟಿ ಎದುರುಎದುರಾಗಿ ಕುಳಿತುಕೊಂಡು ದಾರಿ ಉದ್ದಕ್ಕು ಮುಖ ಮುಖವನ್ನೇ ನೋಡುತ್ತಾ ಹೋಗಬೇಕಾದ ಸಂಕಟವನ್ನು ಯಾರು ತಾನೇ ಅನುಭವಿಸಿರುವುದಿಲ್ಲ? ಗರೀಬರಾದರೂ ಮರ್ಯಾದಸ್ಥರಾದ ಸ್ತ್ರೀಯರು ಹ್ಯಾಗೆ ತಾನೇ ಈ ಬಸ್ಸಿನಲ್ಲಿ ಪ್ರಯಾಣಮಾಡುವರು? ನಮ್ಮ ದೇಶದ ಸ್ತ್ರೀಯರಲ್ಲಿ ವಾಡಿಕೆಯಾಗಿರುವ ಮರ್ಯಾದೆಯನಾಚಿಕೆಯೆಂಬ ಗುಣವನ್ನು ಹೋಗಲಾಡಿಸಿ ಪಾಶ್ಚಿಮಾತ್ಯರ ಸಾಮಾಜಿಕ ಸುಧಾರಣೆಯನ್ನು ಉಂಟುಮಾಡಲಿಕ್ಕಾಗಿಯೇ ಈ ಬಸ್ಸು ಸರ್ವೀಸು ಇಲ್ಲಿ ಇಡಲ್ಪಟ್ಟಿದೆಯೆಂದು ಹಲವು ಪ್ರಯಾಣಿಕರು ಅಂದುಕೊಳ್ಳುತ್ತಿರುವುದನ್ನು ನಾನು ಕೇಳಿರುತ್ತೇನೆ. ಇದು ನಿಜವಾದರೆ ಈ ಸರ್ವೀಸು ಬಹಳ ಮಟ್ಟಿಗೆ ಇಂಥಾ ಸುಧಾರಣೆಯನ್ನು ಈಗಾಗಲೇ ಜಾರಿಗೆ ತಂದು ಬಿಟ್ಟದೆಯೆಂದು ಹೇಳಬೇಕಾಗಿದೆ. ಭಲರೆ! ಕಾವೇರಿ ಬಸ್ ಸರ್ವೀಸ್ ಶಾಬ್ಬಾಸ್!!

ಇದಕ್ಕಿಂತ ಬೆಚ್ಚಿನ ಮತ್ತು ಪ್ರಯಾಣಮಾಡುವವರಿಗೆಲ್ಲರಿಗೂ ವ್ಯಾಪಿಸುವಂಥ ಇನ್ನೊಂದು ಅನಾನುಕೂಲವು ಬಸ್ಸಿನ ಟಿಕೇಟಿನದರವಾಗಿದೆ. ಇವಕ್ಕಿಂತ ಮೊದಲು ಈ ಲೈನಿನಲ್ಲಿ ಓಡಾಡುತ್ತಿದ್ದ ಬಸ್ಸುಗಳು ಪರಸ್ಥಳದವರದಾಗಿದ್ದರೂ ಕೂಡ ಅವರು ಮೈಲಿಗೆ ಒಂದಾಣೆಗಿಂತ ಹೆಚ್ಚು ಚಾರ್ಜು ಎಂದೂ ವಸೂಲಿಮಾಡಿರಲಿಲ್ಲ. ನಮ್ಮ ದೇಶದವರೇ ಬಸ್ಸುಸರ್ವೀಸು ಇಡುವುದರಿಂದ ಪ್ರಯಾಣಿಕರಿಗೆ ಅನುಕೂಲವು ಹೆಚ್ಚುವದೆಂದು ಎಲ್ಲರೂ ಯೋಚಿಸಿಕೊಂಡಿದ್ದರು. ಅದರ ಬದಲು ಈ ಕಂಪೆನಿಯವರು ಚಾರ್ಜನ್ನು ಹೆಚ್ಚಿಸಿ ತಮ್ಮ ದೇಶವಾತ್ಸಲ್ಯವನ್ನು ತೋರಿಸಿದರಲ್ಲವೇ? ಪ್ರಯಾಣಿಕರ ಬಡತನದ ಗುಟ್ಟು ಗೊತ್ತಿರುವ ಈ ದೇಶೀಯ ಕಂಪೆನಿಯವರು ಮೈಲಿಗೆ ೦-೧-೩ ಯಂತೆ ಚಾರ್ಜನ್ನು ಏರಿಸಿದರು. ಮಡಿಕೇರಿಯಿಂದ ೨೩ ಮೈಲುದೂರದಲ್ಲಿರುವ ಅಮ್ಮತ್ತಿಗೂ, ೨೮ ಮೈಲುದೂರದಲ್ಲಿರುವ ವೀರರಾಜಪೇಟೆಗೂ ೧ ೧೨-೦ ಚಾರ್ಜನ್ನು ವಸೂಲಿಮಾಡುತ್ತಿರುವ ನ್ಯಾಯವು ಬಹು ವಿಶೇಷವಾದ್ದಲ್ಲವೇ? ಈ ವಿಷಯ ಕೆಲವು ವಾರಗಳ ಹಿಂದೆ ಈ ಪತ್ರಿಕೆಯಲ್ಲಿಯೇ ಒಂದು ವಾರ್ತೆಯು ಪ್ರಕಟವಾಗಿತ್ತು. ಅದಕ್ಕೆ ಕಂಪೆನಿಯ ಪರಿಪಾಲಕರು ಗಮನಕೊಡುವರೆಂದು ಎಲ್ಲರೂ ನಂಬಿದ್ದರು. ಆದರೆ ಅದಕ್ಕೆ ಅವರು ಒಂದಿಷ್ಟು ಗಮನಕೊಟ್ಟಂತೆ ಕಾಣುವುದಿಲ್ಲ. ಯಾವತರಹದಲ್ಲಾದರೂ ಉತ್ಪತ್ತಿಯೇ ಅವರ ಉದ್ದೇಶವಾಗಿ ಕಂಡುಬರುತ್ತದೆ.

ಎಲ್ಲದಕ್ಕಿಂತಲೂ ವಿಶೇಷ ಅನಾನುಕೂಲವು ಇನ್ನೂ ಹೇಳಲಿಕ್ಕಿದೆ. ಕಳೆದ ಕೆಲವುವಾರಗಳಿಂದ ಯಾಕೆ ತಿಂಗಳುಗಳಿಂದ ಬಸ್ಸುಗಳು ನಿಯಮಕಾಲದಲ್ಲಿ ಹೊರಡದೆಯೂ, ಕೆಲವು ದಿನಗಳಲ್ಲಿ ಒಂದು ಸರ್ವೀಸೇ ಇಲ್ಲದೆಯೂ, ಪ್ರಯಾಣಿಕರಿಗೆ ತೊಂದರೆ ಕೊಟ್ಟದ್ದಲ್ಲದೆ ಅರ್ಧದಾರಿಯಲ್ಲಿ ಹೋಗಿ ನಿಂತುಬಿಟ್ಟು ಅವರನ್ನು ಕಾಲಕ್ಕೆ ಸರಿಯಾಗಿ ಅನ್ನ ನೀರಿಲ್ಲದೆ ಕಷ್ಟಕ್ಕೆ ಗುರಿಮಾಡಿರುವುದು ಬಹುವ್ಯಸನಕರದ ಸಂಗತಿಯಾಗಿದೆ. ಆಕಸ್ಮಿತ ಉಂಟಾಗಿ ಪ್ರಯಾಣಕ್ಕೆ ಭಂಗವಾದರೆ ತಾವು ಜವಾಬ್ದಾರರಲ್ಲವೆಂದು ಕಂಪೆನಿಯವರು ಟಿಕೇಟಿನ ಹಿಂಭಾಗದಲ್ಲಿ ವಾಡಿಕೆಯಾಗಿ ಬರೆದಿರುವುದೇನೋ ನಿಜವೆ. ಆದರೆ ಆಕಸ್ಮಿತಗಳು ಅಪರೂಪವಾಗಿ ಸಂಭವಿಸುವುವಲ್ಲದೆ ಹೆಚ್ಚು ಕಮ್ಮಿ ಯಾವಾಗಲೂ ಆಗಲಿಕ್ಕಿಲ್ಲ. ಆದರೆ ಈ ಬಸ್ಸಿನಲ್ಲಿ ಆಗಾಗ್ಗೆ ಆಕಸ್ಮಿತಗಳು ಆಗುತ್ತಲೇ ಇರುತ್ತವೆ. ಟಯರು ಅಥವಾ ಟ್ಯೂಬು ಒಡೆದು ಹೋಗುವುದೇನೋ ಆಕಸ್ಮಿತವಾಗಿರಬಹುದು. ಆದರೆ ಅದಕ್ಕೆ ಪ್ರತ್ಯೇಕ ಹೆಚ್ಚಿನ ಟಯರು ಅಥವಾ ಟ್ಯೂಬುಗಳನ್ನು ತೆಗೆದುಕೊಂಡು ಹೋಗದೆ ಇರುವುದು ಆಕಸ್ಮಿತವೇ? ಪ್ರತಿಯೊಂದು ಮೋಟಾರುಕಾರಿನವರೂ ಸಂಗಡ ಪ್ರತ್ಯೇಕ ಟಯರು ಟ್ಯೂಬುಗಳನ್ನು ತೆಗೆದುಕೊಂಡು ಹೋಗುವಲ್ಲು ಈ ಬಸ್ಸಿನವರು ಮಾತ್ರ ಹೀಗೆ ಮಾಡಲು ಕಾರಣವೇನೆಂದು ಯಾರಾದರೂ ತಿಳಿದಿರುವಿರಾ? ಮೋಟಾರುಕಾರುಗಳಲ್ಲಿ ವಾಡಿಕೆಯಾಗಿ ಅವುಗಳ ಯಜಮಾನರೇ ಪ್ರಯಾಣಮಾಡುವುದರಿಂದ ಅರ್ಧದಾರಿಯಲ್ಲಿ ನಿಂತು ಹೋದರೆ ಅವರಿಗೆ ಅದರ ಕಷ್ಟವು ತಗಲುವುದು. ಆದರೆ ಈ ಬಸ್ಸಿನಲ್ಲಿ ಪ್ರಯಾಣಸ್ಥರು ಮಾತ್ರ ಹೋಗುವುದರಿಂದ ಅವರು ಆಹಾರ ವಿಲ್ಲದೆಯೂ

ನೀರಿಲ್ಲದೆಯೂ ಕಷ್ಟಪಟ್ಟರೆ ಬಸ್ಸು ಮಾಲೀಕರಿಗೆ ಬಂದ ನಷ್ಟವೇನು ? ಅವರಿಗೆ ಟಿಕೇಟುಗಳ ಪೂರ್ತಿ ಚಾರ್ಜು ದೊರಕುತ್ತಿರುತ್ತದೆ. ಪ್ರಯಾಣಿಕರು ಅವರವರ ಸ್ಥಳಕ್ಕೆ ತಲಪಲಿ, ತಲಪದಿರಲಿ ಅದಕ್ಕೆ ಮಾಲೀಕರು ಜವಾಬ್ದಾರರಲ್ಲವೆಂದು ಅವರು ಮೊದಲೇ ಸೂಚಿಸಿರುವುದಿಲ್ಲವೇ? ಅನೇಕ ಸಾರಿ ಬಸ್ಸಿನ ಚಕ್ರಗಳು ಸರಿಯಾಗಿ ಇಲ್ಲದಿದ್ದರೂ, ಅವುಗಳಿಗೆ ತತ್ಕಾಲಿಕ ತೇಪೆಹಚ್ಚಿ ಪ್ರಯಾಣಿಕರಿಂದ ಪೂರ್ತಿ ದೊರದ ಚಾರ್ಜನ್ನು ವಸೂಲಿಮಾಡಿ ಬಸ್ಸನ್ನು ಹೊರಡಿಸುವರು. ಆ ಬಡಡ್ರೈವರು ಮತ್ತು ಕಂಡಕ್ಟರು ಏನು ತಾನೇ ಮಾಡಲಾಪರು ! ಕೆಲವು ಮೈಲುಗಳದೂರ ಹೋದನಂತರ ಬಸ್ಸಿಗೆ ವಿಶ್ರಾಂತಿಯ ಸಮಯವು ಬರುವುದು ತೇಪೆ ಇಟ್ಟ ಟಯರೋ ಟ್ಯುಬೋ ಪುನಹ ಒಡೆಯುವುದು. ಸ್ಪೇರ್ ಸಾಮಾನುಗಳು ಇಲ್ಲದ್ದರಿಂದ ಡ್ರೈವರು ಅದನ್ನು ರಿಪೇರಿ ಮಾಡಲು ಪ್ರಯತ್ನಿಸುವನು. ಕೆಲವು ಗಂಟೆಗಳ ಪ್ರಯತ್ನದ ನಂತರ ಬಸ್ಸನ್ನು ಹೊರಡಿಸುವನು ಸ್ವಲ್ಪದೂರ ಬಡಿದ ನಂತರ ಪುನಹ ಅದೇ ಗತಿಯಾಗುವುದು ಇದೆಲ್ಲಾ ಯಾರೂ ತಿಳಿಯಲಾರದಂತ ಅಶಸ್ತ್ರತಗಳೇ ? ಇನ್ನೊಂದು ತರದ ಅಶಸ್ತ್ರತವನ್ನು ಕೇಳುವಿರಾ ? ಅರ್ಧದಾರಿಯಲ್ಲಿ ಪೆಟ್ರೋಲಿಯಮ್ ತೀರಿಹೋಯಿತು ಬಸ್ಸು ನಡೆಯುವುದಿಲ್ಲವೆಂದು ಡ್ರೈವರು ಹೇಳುವನು ಕಂಡಕ್ಟರನು ಅಲ್ಲಿಗಾಗಿದಾಟುವ ಮೋಟಾರುಕಾರಿನವರನ್ನಾಗಲೀ, ಸಮೀಪದಲ್ಲಿರುವ ಕಾಫಿತೋಟದ ಪ್ಲಾಂಟರುಗಳನ್ನಾಗಲೀ ಸ್ವಲ್ಪ ಪೆಟ್ರೋಲಿಯಮ್ ಕೊಡಿರಿ ಎಂದು ಬೇಡುವನು. ಸಿಕ್ಕಿದರೆ ಪ್ರಯಾಣಿಕರ ಪುಣ್ಯ ಇಲ್ಲವಾದರೆ ಬಸ್ಸಿನ ಪ್ರಯಾಣದ ಅನುಕೂಲವನ್ನು ಅವರು ಅನುಭವಿಸುವರು ಇದಕ್ಕೂ ಕಂಪೆನಿಯವರು ಅಸ್ತಿತವೆಂದೆನ್ನುವರೇ ? ವಿಚಾರಿಸಿದಲ್ಲಿ ಡ್ರೈವರಿಗೆ ತಿಳಿಯದೆ ಯಾ ಮರೆತು ಸಾಕಷ್ಟು ಪೆಟ್ರೋಲಿಯಮ್ ತಾರದೆ ಇರುವುದಲ್ಲ, ಕಂಪೆನಿಯವರ ಸ್ಟೋರಿನಲ್ಲೇ ತೀರಿ ಹೋಗಿದೆಯೆಂದು ತಿಳಿಯಬರುತ್ತದೆ ಹಾಗಾದರೆ ಯಾವ ಧೈರ್ಯದಿಂದ ಬಸ್ಸನ್ನು ಹೊರಡಿಸಿದರು ಎಂದು ಕೇಳದರೆ, ದಾರಿಯಲ್ಲಿ ಇನ್ನೊಂದು ಬಸ್ಸು ಪೆಟ್ರೋಲಿಯಮ್ ತರಬಹುದೆಂಬ ನಂಬಿಕೆಮೇಲೆ, ಎಂದು ಉತ್ತರ ಎರಡು ಬಸ್ಸುಗಳೂ ಹೀಗ ಬಂದರ [illegible] ನಂಬಿ ಹೊರಡುವುದಾಗಿದೆ ಇಂಥಾ ವೇಳೆಗಳಲ್ಲಿ ಪ್ರಯಾಣಿಕರಿಗೆ ಅದೃಷ್ಟವಿದ್ದರೆ ಪೆಟ್ರೋಲಿಯಮ್ ಇಲ್ಲದೇನೇ ಬಸ್ಸುಗಳು ನಡೆಯಬೇಕಲ್ಲವೇ ? ಮಾಲೀಕರಿಗೆ [illegible] ಹೊರಡುವ ಸಮಯದಲ್ಲಿ ಟಿಕೇಟಿನ ಹಣವು ಪೂರ್ತಿ ಕೈಸೇರಿತು

ಹಣ ಸಂಪಾದಿಸುವುದೇ ಒಸ್ಸು ಕಂಪೆನಿ ಮಾಲೀಕರ ಉದ್ದೇಶವೆಂದು ಎಲ್ಲರಿಗೂ ತಿಳಿದ ಸಂಗತಿಯು [illegible] ಆದರೆ [illegible] ಸಂಪಾದನೆಯು ನ್ಯಾಯವಾದದ್ದಾಗಿರಬೇಕಲ್ಲವೇ ? ಅಶಸ್ತ್ರತಗಳು ಆಕಸ್ಮಿಕದಲ್ಲಿ ಆಗುವುದು ಸಹಜ ಆದರೆ ಆಗಾಗ್ಗೆ ಆಗುತ್ತಿರುವುದರ ಅರ್ಥವೇನು ? ಇದಕ್ಕೆ ಜವಾಬ್ದಾರರು ಯಾರು ? ಪ್ರಯಾಣಿಕರು ಕೊಡುವ ಚಾರ್ಜಿಗೆ ಸರಿಯಾದ ಸೌಕರ್ಯಗಳು ದೊರೆಯುತ್ತವೋ ? ಎಂಬೀ ಪ್ರಶ್ನೆಗಳನ್ನು ಕೇಳುವವರು ಯಾರೂ ಇಲ್ಲವೋ ? ಇಂಥಾ ಸರ್ವೀಸುಗಳಿಗೆ ಲೈಸನ್ಸುಕೊಡುವ ಹಕ್ಕನ್ನು ಸರ್ಕಾರದವರು ಇಟ್ಟುಕೊಂಡಿರುವುದರ ಅರ್ಥವೇನು ? ಸಾಧಾರಣ ಜನಸಮುದಾಯಕ್ಕೆ ತೊಂದರೆಯುಂಟಾಗದಂತೆ ನೋಡಿಕೊಳ್ಳತಕ್ಕದ್ದು ಅಧಿಕಾರಿಗಳ ಕರ್ತವ್ಯವಲ್ಲವೇ ? ಪ್ರಯಾಣಿಕರಿಗೆ ಉಂಟಾಗುತ್ತಿರುವ ತೊಂದರೆಗಳಿಗೆ ಸರ್ಕಾರದವರೇ ಕಾರಣವೆಂದು ಹೇಳಬೇಕಾಗಿದೆ ಅಧಿಕಾರಿಗಳು ಈ ಸರ್ವೀಸಿನ ವಿಷಯ ಮೈಪ್ರೋಟಿಗೆ ಬಿಡದೆ ಇರುವುದು ಒಂದು, ಎರಡನೇದು, ಈ ಸರ್ವೀಸಿನಲ್ಲಿ ನಡೆಯುತ್ತಿರುವ ಅಕ್ರಮಗಳ ವಿಷಯ ಅಧಿಕಾರಿಗಳು ತಕ್ಕಷ್ಟು ಗಮನವಿಟ್ಟು ವಿಚಾರಮಾಡದಿರುವುದು ಯಾವ ವ್ಯಾಪಾರದಲ್ಲೇ ಆಗಲಿ ಮೈಪ್ರೋಟಿಗೆ ಅವಕಾಶಕೊಡದೆ ಹೋದರೆ ಕೊಂಡುಕೊಳ್ಳುವವನಿಗೆ ಯಾವಾಗಲೂ ನಷ್ಟವೇ ಒಸ್ಸು ಸರ್ವೀಸಿನಲ್ಲಿ ಮೈಪ್ರೋಟಿಗಾಗಿ ಹೆಚ್ಚು ಲೈಸನ್ಸು ಕೊಟ್ಟರೆ ದಸ್ತೂಯು ಕಡಿಮೆಯಾಗುವದೆಂದು ಕಂಡರೆ ಸರ್ಕಾರದವರು, ಬೇರೆ ಕಡೆಗಳಲ್ಲಿರುವಂಥ ದರವನ್ನು ವಿಚಾರಿಸಿ ಇಲ್ಲಿಯೂ ನ್ಯಾಯವಾದ ದರವನ್ನು ನಿರಕುಮಾಡಬೇಕಲ್ಲದೆ, ಲೈಸನ್ಸು ಪಡೆದಿರುವ ಸರ್ವೀಸು ಸರಿಯಾಗಿ ಪ್ರಯಾಣಿಕರಿಗೆ ಯಾವದೊಂದು ತೊಂದರೆಯನ್ನು ಉಂಟುಮಾಡದಂತೆ ನಡೆಯುವಂತೆ ಎಚ್ಚರಿಕೆ ತೆಗೆದುಕೊಳ್ಳತಕ್ಕದ್ದು ಇದು ಸಾಧ್ಯವಿಲ್ಲದಿದ್ದರೆ ಮೈಪ್ರೋಟಿಗೆ ಬಿಡುವುದು ಉತ್ತಮ ಹ್ಯಾಗೂ, ಅಧಿಕಾರಿಗಳು ಇನ್ನಾದರೂ ಈ ವಿಷಯದಲ್ಲಿ ಸ್ವಲ್ಪ ಗಮನವಿಟ್ಟು ಜನಸಮುದಾಯದ ಹಿತವನ್ನು ಸಾಧಿಸುರಾಗಿ ನಂಬುವ,

೨೯-೪-೨೪ ಪ್ರಯಾಣಸ್ಥ.

ಅತ್ಯದ್ಭುತ [illegible]

ಚಳಿಜ್ವರ ಔಷಧ

ಪ್ರತಿ ಮನೆಯಲ್ಲಿ ಇಂಟಿಕ [illegible]

ಗುಣವಾಗದಿದ್ದರೆ [illegible]

[illegible]

ಒಂದುಸಾರಿ ತರಿಸಿ ಪರೀಕ್ಷಿಸಿರಿ

ಯಾವ ಜ್ವರವು ಆದರೂ ಕಚ್ಚಿದಕೂಡಲೆ ಈ ಔಷಧವನ್ನು ಹಾಕಿದ ತಕ್ಷಣವೇ ಏರಿದ್ದು ಇಳಿದು ಊರಿ ಚಳುಕು ಗುಣವಾಗುವದು. ಅನುಪಾನಪತ್ರಿಕೆಯನ್ನು ಬಾಟ್ಲಿ ಸಂಗಡ ಕಳುಹಿಸುತ್ತೇವೆ ಬಾಟ್ಲಿ 1 ಕ್ಕೆ 0—8—0 ಆಣೆ. ಆರು ಬಾಟ್ಲಿಗಳನ್ನು ತರಿಸಿಕೊಂಡರೆ 1 ಬಾಟ್ಲಿ ಕಮಿಷನ್ ಹನ್ನೆರಡು ಬಾಟ್ಲಿಗಳನ್ನು ತರಿಸಿಕೊಂಡರೆ 3 ಬಾಟ್ಲಿ ಕಮಿಷನ್ ಕೊಡುತ್ತೇವೆ

ನಮ್ಮ ವಿಳಾಸ —

ಹಾಲಪ್ಪದೇವರ ಮಠದ ಸಿದ್ಧಾಂತಿಗಳು.

ಹರಪನಹಳ್ಳಿ, ಜಿಲ್ಲಾ ಬಳ್ಳಾರಿ

[12—1]

ನೋಟೀಸು

ಕೊಡಗು ಗೌಡ [illegible] ಸಂಘದ ಕೊಡ್ಡಿಯು [illegible] 1—[illegible]—1924 ರಲ್ಲಿ [illegible] ಟಿಕೇಟ್ ಪುಸ್ತಕಗಳನ್ನು [illegible] ಮಾರಲೆ [illegible] ಜ್ಞೆ ಉಳಿದ ಟಿಕೇಟುಗಳನ್ನು ಕರ್ಮ [illegible] ಹಣ ಮತ್ತು ಪುಸ್ತಕಗಳನ್ನು ಮೇ ತಾರೀಖು 15 [illegible] ಬೇಕಾಗಿ ಕೋರುತ್ತೇನೆ

ಎಂ ಪೊನ್ನಪ್ಪ

ಮಡಿಕೇರಿ ಗೌಡ [illegible]

28—[illegible]—1924 ಸಂಘದ ಕಾರ್ಯದರ್ಶಿ

O. S. Association Magazine Mercara.

No. 3 of April 1924 will be [illegible] in May 1924

[illegible]

ಹಾಗಾದರೆ "O. S. [illegible]" ಪತ್ರಿಕೆ [illegible] ಒದಿರಿ ! [illegible] ಬಿಡಿಸಂಚಿಕೆಯೊಂದಕ್ಕೆ 0 6 0 ಸಂಸ್ಥೆಯ ಮೊದಲಿನ ಕೆಲವು ಪ್ರತಿಗಳು ಮಾತ್ರ ಇವೆ ವಾರ್ಷಿಕ ದಾ 1 0 0 ಬಾಗೃತೆ 1 ರುಪಾಯಿ [illegible] 1 8 0

ಮ್ಯಾನೇಜರ್,

O. S. ASSN. MAGAZINE,

3 2 ಮಡಿಕೇರಿ

ಆರೋಗ್ಯ ಚಂದ್ರಿಕೆ.

ಇದು ಪ್ರಜಾಕ್ಷೇಮಕ್ಕಾಗಿ ಆರೋಗ್ಯಮಾರ್ಗವನ್ನೂ ಸುಚಿತ್ವವನ್ನೂ ಬೋಧಿಸುವ ಒಂದು ಮಾಸಪತ್ರಿಕೆ ಇದರ ಸಂಪಾದಕರು ಮದ್ರಾಸಿನಲ್ಲಿ ಪ್ರಸಿದ್ಧರಾದ ಡಾಕ್ಟರ್ ಯು ರಾಮರಾವ್, ಎಂ.ಎಲ್.ಸಿ ಯವರು ಇದರಲ್ಲಿ ಅನೇಕ ಪ್ರಸಿದ್ಧ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರುಗಳ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು.

ಟಪಾಲುಹಾಸಲು ಸೇರಿ ಈ ಪತ್ರಿಕೆಯ ವಾರ್ಷಿಕ ಚಂದ 1—8—0 ರೂ ಮಾತ್ರ ಬಿಡಿ ಪತ್ರಿಕೆ ಒಂದಕ್ಕೆ 0—2—0 ಆಣೆ.

ಏಜೆಂಟರು —
ಮ|| ರಾ|| ರಾ|| ಎಸ್. ಕೆ ಈ ಸ್ವರಪ್ಪ,
ಭಾಗಮಂಡಲ,
ಕೊಡಗು

ವಿಳಾಸ —
ಮ್ಯಾನೇಜರ್,
ಆರೋಗ್ಯಚಂದ್ರಿಕೆ ಆಫೀಸು,
323, ತಂಬುಚೆಟ್ಟಿಬೀದಿ,
ಮದ್ರಾಸು.

[12—7]

ಪೋಸ್ಟೇಜ್ [illegible] ಉಚಿತ

ಈ ಸ್ಟವ್ವಿನಲ್ಲಿ [illegible] ರಾಡದ್ದು [illegible] ಈ ಪಣ [illegible] ಕಡಿಮೆ ಇಲ್ಲದೆ [illegible] ಆಗಾಗಿ ತರಿಸಿಕೊ [illegible] ಮಾತ್ರ ಹೊಸದಾಗಿ ಟಾಪ್ವೈರ ಒಂದನ್ನು ಇನಾಮಾಗಿ ಕೊಡುವೆವು

ಕ್ರಯ ಪೈರ ಸಮೇತ ಪೇನಾ 1 ಕ್ಕೆ 1—12—

ಜರ್ಮನ್ ಅಲಾರಂ ಟೈಂಪೀಸ್‌ಗಳು



ಈ ಗಡಿಯಾರಗಳು [illegible] ದೇಶದಲ್ಲಿ ತಯಾರಾದವು [illegible] ಗಡೆ ಬೆಳ್ಳಿಯಂತಿಂಬ [illegible] ವರು ಎಂದಿಗೂ [illegible] ಕರಾರು ಗಂಟೆಯನ್ನು [illegible] ದು ಗಡಿಯಾರದ ಎತ್ತರವು [illegible] ಗುಂಡಿಯಾವುದು ಮತ್ತು [illegible] ನ್ನು ಸಹ ಬಾರಿಸುವುದು

ಬೇಕಾದ ಗಂಟೆಗೆ [illegible] ಎಬ್ಬಿಸುವುದು [illegible] ಸಕ್ಕಲು, ಮನೆ ಗಡಿಯಾರ [illegible] ಬಹು ಚೆನ್ನಾಗಿರುವುದು ಇದಕ್ಕೆ ಮುಂಚಿನಿವಾಗಿ ಈ ಮಾದರಿ ಗಡಿಯಾರಗಳು ಮಾರಾಟಕ್ಕೆ ಬಂದಿಲ್ಲ ಇವಕ್ಕೆ ಮೂರು ವರ್ಷ ಗ್ಯಾರಂಟಿ ಇದೆ

ಕ್ರಯ 1 ಕ್ಕೆ 5—0—0 ರೂಪಾಯಿ

ಅಲಾರಾ ಇಲ್ಲದ [illegible] 3—[illegible]—

ವಿಳಾಸ — ಎಸ್ [illegible] ಕೃಷ್ಣ ಅಂಡ್ ಕೋ

[illegible]

[1—1]

WANTED.

Two Second hand Motor [illegible]

M. [illegible] SIDDI [illegible]

[illegible]



[16—1]

Printed & Published by D. S. Krishnaswa[illegible] Proprietor, at Sreenivas Electric Press, "for Kodagu" Ltd., Mercara—9-5-1924.

"Kodagu Office, Mercara"
Reg. No. M. 1550.

ಕೊಡಗು.

ಸತೀ ನ ಭೂಪತಯಾ ವಿದ್ಯಾನೀತಿ ಪ್ರಯುಕ್ತ್ಯಾ ಜಗಮನ್ವೇನದೇಶನಂ ಸುಸ್ಥಿರಾ ರಾಜ್ಯಸಂಪದ ॥

ಪ್ರತಿ ಶುಕ್ರವಾರ ಪಾತ್ರಿಕಾರಿ ಪ್ರಕಟಿಸಲ್ಪಡುವುದು. " ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ

ಪುಟ ೩] ಕೊಡಗು, ಸ[illegible] [illegible]ರ ಸ[illegible] ಇಸವಿ ಮ, [illegible]ಬ್ರವರಿ ೧೬ ನೆಯ ಶುಕ್ರವಾರ. [ಸಂಚಿಕೆ ೫೦

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನ್ನಡಾ ಪ್ರಿಂಟಿಂಗ್ [illegible]ಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ [illegible]ೂ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ಜಾಗ್ರತೆಯಾಗಿಯೂ ಸುಲಭಕ್ರಾಯಕ್ಕೂ ಮಾಡಿ[illegible]ತ್ತೇವೆ.

[S]rinivas Electric Press,
MYSORE.

[T]he Saraswathi Publishing Company
ಶಾರದಾಗ್ರಂಥಮಾಲಾ

[illegible] ಗ್ರಂಥಮಾಲೆಯಲ್ಲಿ ಭಾರತವಾಸಿಗಳ ಜನರ ಬಿಡಯಾಸ್ತು [illegible] ಬೋಧಕ ಗ್ರಂಥಗಳು ಆಗಾಗ್ಗೆ ಪ್ರಕಟಿಸಲ್ಪಡುವ ವಪ್ಪ [illegible]ರವಿಗೆ ಪ್ರಕಟವಾಗಿರುವ ಗ್ರಂಥಗಳು —

		ರೂ	ಆ	ಪೈ
ಯುಂಪದ (ತವಸ್ಸಿನಿಯಿಂದಾಗುವ [illegible] ಚಮತ್ಕಾರಗಳು)	-	0	6	0
[illegible] (ಮಾಗಳ್ಳಿಯ ಚರಿತ್ರೆ)	-	0		0
[illegible] (ಬಂದೂಬಸ್ತು[illegible] ಶೋಚನೀಯ ದಸ್ಥೆ)	-	0	12	0
[illegible] (ಸಾಮಾಜಿಕ ಸುಧಾರಣೆಯ ನಾಟ	-	0	8	0
ದುಃಖಾಗ್ನ್ಯೋದಯ (ನಾಟಕ)	-	0	4	0
[illegible] (ನಾಟಕ)	-	0	1	0
ತುರಲು ಹಾದ [illegible] (ನಾಟಕ)	-	0	4	0

[illegible] ದಪಾಯಿ 2—12—0 [illegible] [illegible]ವ ಪ್ರಿಂ[illegible]

ಸರಸ್ವತಿ.

ತ್ರೈಮಾಸಿಗದ ಶ್ರೇಷ್ಠವಾದ ಕನ್ನಡ ಮಾಸಪತ್ರಿಕೆ

[illegible]ಯ ಸಂಪುಟದ ಪ್ರಥಮ ಸಂಚಿಕೆಯು ಈ ತಿಂಗಳ ಮೊದ[illegible]ನಿಂದ ಪ್ರಾರಂಭವಾಗಿರುವದು [illegible]ವರಲ್ಲಿ ಬಾಲಕ[illegible]ಗೂ ಸ್ತ್ರೀಯರಿಗೂ ತಿಳಿಯುವಂತಹ ಸುಲಭವಾದ ಶೈಲಿ[illegible]ದ ನಾಟಕ [illegible] ಮತ್ತು ಅನೇಕ [illegible]ಗಳೂ ಪ್ರಕಟಿಸಲ್ಪಡುವವು ತೋಷವಾಗಿ ಚಂದಾ[illegible] ಚಂದಾದಾರನ್ನು [illegible] ಗ್ರಂಥಮಾಲೆಯ ಪ್ರಕಟನೆಯಲ್ಲಿ ಒಂದು ಪುಸ್ತಕವು [illegible] ಕೊಡಲ್ಪಡುವದು [illegible] ಸಂಚಿ[illegible] ಕಳುಹಿಸಲ್ಪಡುವದು.
[illegible] ಚಂದಾ ರೂಪಾಯಿ 3—0— [illegible]

SARASWATHI PUBLISHING C[O]
Post Box No. 57. B[angalor]e City

HEALTH is WE[ALTH]

[W]ANTED all to i[mpro]ve [he]alth and vitality and thus save our [race] from physical degeneracy. Send [a]nna stamp and get 13 specimen [photo]graphs with full particulars from

[Di]rector Physical Culture,
PO Basavanagudi,
BANGALORE CITY

[Fo]r your requirements of high grade Arms, Ammunition, Wine and Spirits,
[APPL]Y TO:—
[MC]DOWELL & Co., Ltd.,
MERCARA.

" ಕಾಗಲಕ್ ಇನಾಮ್‌ಕೊಡ್ ಪಂತಿಕಾಳು ಉಳ್ಳ ಸಾಮಾನ್ ಸ್ಪೆನ್ಸರ್ ಕಂಪೆನಿಕ್ಕ್ ಪುದಿಯದಾಯಿತ್ ಬಂದಿತ್.

SPENCER & Co, Ltd
[Mer]cara and Po[nn]ampet, Coorg [24—5]

BUMPER CROPS
always follow on application of our fertilisers
ದೊಡ್ಡ ಕಾಫಿ ಫಸಲು
ಸಿಕ್ಕಬೇಕಾದರೆ ನಮ್ಮ ಕಾಫಿ ಫರ್ಟಿಲೈಸರುಗಳನ್ನು ಉಪಯೋಗಿಸಿರಿ
ನಮ್ಮ ಕಾರ್ಖಾನೆಯಲ್ಲಿ ಎಲ್ಲಾತರಹದ ಹೇಸಾದ ಹೊಸ (fresh) ಗೊಬ್ಬರ ತಯಾರಾಗುತ್ತದೆ.
Siddeek's Manure Works
24—18 MERCARA.

ಮಲೆಯಾಳ ವೈದ್ಯಶಾಲಾ

ಮಲಬಾರಿನ ನಂಬೀಶನ್ ಮತ್ತು ಕಂಪೆನಿ ಎಂಬ ಆಯುರ್ವೇದ ವೈದ್ಯಶಾಲೆಯಲ್ಲಿ ಒಂದು ಶಾಖೆಯು ವೀರರಾಜೇಂದ್ರಪ್ಯಾಟೆಯಲ್ಲಿ ತೆರೆದಿರುತ್ತೆ. ಇಲ್ಲಿ ಯಾವವಿಧದ ಖಾಯಿಲೆಯಾಗಿದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧಿ ಕೊಟ್ಟು ಗುಣಪಡಿಸಲ್ಪಡುತ್ತೆ. ಔಷಧದ ಚಾರ್ಜು ಬಹಳ ಕಡಿಮೆ ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು

ನಾರಾಯಣನಂಬೀಶನ್,
ಆಯುರ್ವೇದ ವೈದ್ಯರು,
52—17 ವೀರರಾಜೇಂದ್ರಪ್ಯಾಟೆ

ಜೀವವಿಮೆ

ಕಾವಿಲ್ಲದೆ ಕುಟುಂಬಗಳಲ್ಲಿ ಸಂಪಾದನೆಯ ಯಜಮಾನನು ಮೃತಪಟ್ಟರೆ ಉಂಟಾಗಬಹುದಾದ ತೊಂದರೆಗಳನ್ನು ನಿವಾರಿಸುವುದೇ ಜೀವವಿಮೆ

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬದ ಜೀವನಾಧಾರಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ

ಅತಿ ಕಡಿಮೆ ದರದಲ್ಲಿ ಯಾವ ಲೋಪವೂ ಬಾರದಂತೆ ಪ್ರತಿಫಲ ಹಣವನ್ನು ಒದಗಿಸುವ ಸಂಸ್ಥೆಯಾದರೂ ಮೈಸೂರು ಸರಕಾರದ ಭದ್ರತೆಯುಳ್ಳ ಜೀವವಿಮೆ ಇಲಾಖೆ

ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ಸಾಲವಾಗಿ ಹಣವನ್ನು ಒದಗಿಸಿ ಸ್ಥಿರಾಸ್ತಿಗಳನ್ನು ಕೊಂಡು ಕಟ್ಟಿ ದೇಶದ ಆರ್ಥಿಕ ಸಂಪತ್ತನ್ನು (Economic Condition) ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೇ!

ಲೈಫ್ ಇನ್ಸೂರೆನ್ಸ್ ಆಕ್ಟಿನ ಮೇರೆ ಇಂಡಿಯಾ ಗವರ್ನಮೆಂಟ್ ಸೆಕ್ಯೂರಿಟಿಗಳಿಗೆ ಸಲ್ಲಬೇಕಾದ 12 ಲಕ್ಷ ರೂಪಾಯಿ ಸೆಕ್ಯೂರಿಟಿಗಳಿಗಿಯೂ ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿಗೆ ಸಲ್ಲಬೇಕಾದ 1 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನ ಮದ್ರಾಸಿನ ಶಾಖೆಯಲ್ಲಿ 1 ಲಕ್ಷ ಗವರ್ನಮೆಂಟ್ ಆಫ್ ಇಂಡಿಯ ಸೆಕ್ಯೂರಿಟಿಯನ್ನು ಅರ್ಧಲಕ್ಷ ಮೈಸೂರು ಸೆಕ್ಯೂರಿಟಿಯನ್ನು ಡಿಪಾಜಿಟ್ಟಾಗಿ ಇಟ್ಟಿರುತ್ತೆ ಬಾಕಿ ಒಂದು ಲಕ್ಷ ಇಂಡಿಯಾ ಗವರ್ನಮೆಂಟ್ ಸೆಕ್ಯೂರಿಟಿಗೆ ಬ್ಯಾಂಕ್ ಮುಖೇನ ಏರ್ಪಾಡು ಮಾಡಿರುತ್ತೆ.

ಬಿ. ಎಸ್. ಅರಾಧ್ಯ,
ರಿಸ್ಟ್ರಿಕ್ಟ್ ಅಂಡ್ ಪ್ಯಾರೀಟ್ ಆಫೀಸ್ ಮಡಿಕೇರಿ.

ಪ್ರಕಟನೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ

	ರೂ
ಶೇರ್ ಬಂಡವಾಳ	50 000
ವಸೂಲಾದ ಶೇರ್ ಬಂಡವಾಳ	0-828
ಜಮಾ ಬಂದ ಠೇವಣಾತಿ	47,990

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಹೆಚ್ಚಾಗಿ ಸಾಲ ಕೊಡತಕ್ಕದ್ದು

ಒಂದು ವರುಷ ವಾಯಿದೆ ಅಥವಾ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 6-4-0 ರ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ

ಪ್ರೆಸಿಡೆಂಟರು ಟ್ರೆಷರರ್.
ಕೊಡಂದೆರ ಕುಟ್ಟಯ್ಯನವರು, ಯಂ, ಘಟಂಗರಾಯಡು.
ರಾಯ್ ಬಹದ್ದೂರ್ ಬಿ ಎ ಬಿ ಎಲ್

ಸೆಕ್ರೆಟರಿ
ಸಿ ಮಡ್ [illegible] ವೆಂಕಪ್ಪಯ್ಯನವರು ಬಿ. ಎ ಬಿ ಎಲ್.
ತಾರೀಕು 22—2—1924

"ಕೊಡಗು"

೧೯೨೪ ನೇ ಇಸವಿ ಮೇ ತಾ|| ೧೬ ನೇ ಶುಕ್ರವಾರ.

ದಕ್ಷಿಣಕೊಡಗಿನ ರೈಲ್ವೇ.

ಕಿಗ್ಗಟ್ಟುನಾಡು ತಾಲೋಕಿನಲ್ಲಿ ರೈಲ್ವೇಗಾಗಿ ಸರ್ವೆ ಮಾಡುತ್ತಿರುವದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಇದರ ಹರಿಹರದಿಂದ ಪೊನ್ನಂಪೇಟೆಗೆ ಬರುವ ಲೈನನ್ನು ಗದ್ದೆಗಳ ಮೇಲೆಯೇ ಹೆಚ್ಚಾಗಿ ಸರ್ವೆಮಾಡಿದ್ದಾರೆ. ಇದರಿಂದ ಆ ಭಾಗದ ರೈತರಿಗೆ ತುಂಬಾ ಗಾಬರಿಯೂ ವ್ಯಸನವೂ, ಅತೃಪ್ತಿಯೂ ಹೆಚ್ಚುತ್ತಿದೆ. ವೀರರಾಜಪೇಟೆಯಲ್ಲಿ ತಾರೀಖು 7—5—23 ರಲ್ಲಿ ನಡೆದ ಜಮಾನ್‌ದಾರರ ಸಂಘದ ಕಮಿಟಿಯ ಮುಂದೆ ಆ ತಾಲೋಕಿನ ಮುಂದಾಳುಗಳು ಈ ಸಂಗತಿಯನ್ನು ತಂದರು. ಸಂಘದ ಕಮಿಟಿಯಿಂದ ಕಮಿಶನರವರ ಬಳಿಗೆ ಒಂದು ಡೆಪ್ಯುಟೇಶನ್ ಹೋಗಿ ರೈತರ ಕಷ್ಟವನ್ನು ಹೇಳಿಕೊಳ್ಳಬೇಕೆಂತ ತೀರ್ಮಾನವಾಗಿದೆ. ಈ ಕೆಲಸವನ್ನು ಸಂಘದವರು ಶೀಘ್ರದಲ್ಲೇ ನೆರವೇರಿಸಿಯಾರೆಂತ ನಂಬುತ್ತೇವೆ.

ಈಗ ಸರ್ವೆಮಾಡುತ್ತಿರುವ ಲೈನಿನಿಂದ ಆ ಭಾಗದ ರೈತರಿಗೆ ಇರುವ ಕಷ್ಟಗಳನ್ನು ನಮಗೆ ತಿಳಿದಮಟ್ಟಿಗೆ ವಿಮರ್ಶಿಸಿ ನೋಡುವದು ನಮ್ಮ ಕರ್ತವ್ಯವಾಗಿದೆ. ಆ ಭಾಗದ ರೈತರಿಂದ ನಮಗೆ ತಿಳಿದು ಬಂದಿರುವದೇನಂದರೆ— ಹರಿಹರದಿಂದ ಪೊನ್ನಂಪೇಟೆಗೆ ಬರುವ ಲೋಕಲ್ ಫಂಡ ರಸ್ತೆಗಾಗಿಯೇ ರೈಲ್ವೇ ಲೈನನ್ನು ತರಲು ಸಾಧ್ಯವಿದೆ. ಈ ಲೈನ್ ಹೆಚ್ಚಾಗಿ ಬಾಣೆಗಳಮೇಲೆಯೇ ಬರುತ್ತದೆ. ಇದರಿಂದ ರೈತರಿಗೆ ವಿಶೇಷ ತೊಂದರೆಯಾಗುವದಿಲ್ಲ. ಇದಕ್ಕಿಂತ ಸುಮಾರು ಎರಡುಮೈಲು ದೂರ ಕಡಿಮೆಯಾಗಬಹುದೆಂಬ ಕಾರಣದಿಂದ ಲೈನನ್ನು ಹೆಚ್ಚಾಗಿ ಗದ್ದೆಗಳಮೇಲೆಯೇ ತರುತ್ತಿದ್ದಾರೆ. ಇದರಿಂದ ಅನೇಕ ಕಷ್ಟನಷ್ಟಗಳಿವೆ. ಗದ್ದೆಗಳ ಎಷ್ಟುಭಾಗ ಲೈನಿಗೆ ಬೇಕೋ ಅಷ್ಟನ್ನು ಸರಕಾರದವರು ವಹಿಸಿಕೊಂಡು ಹಿಡುವಳಿದಾರನಿಗೆ ಪ್ರತಿಫಲ ಕೊಡುತ್ತಾರೆ ಎಂಬದೇನೋ ಹೌದು. ಆದರೆ ಪುರಾತನಕಾಲದಿಂದಲೂ ಶಾಶ್ವತವಾಗಿ ನಡೆದುಬಂದ ಅನ್ನಕೊಡುವ ಮಣ್ಣಿನ ಬದಲಿಗೆ ಸಿಕ್ಕುವ ಹಣವು ಉಪಯೋಗಕ್ಕೆ ಉಳಿಯುವದು ಸಾಧ್ಯವಿಲ್ಲ. ಹೀಗೆ ಸಿಕ್ಕಿದ ಹಣವನ್ನು ಅಜುಬಾಜುವಿನಲ್ಲಿ ಭೂಮಿ ಕೊಡಲಿಕ್ಕೇನೇ ಉಪಯೋಗಿಸಲು ಮಾರಾಟಕ್ಕೆ ಭೂಮಿಯೇ ಸಿಕ್ಕುವದಿಲ್ಲ! ಜೀವನಾಂಶದ ಪಾಲಿನಲ್ಲಿ 10 ಭಟ್ಟಿ 15 ಭಟ್ಟಿ ಭೂಮಿ ಸಹ ಪಾಲಿಗೆ ಬಂದವರು ಇರುತ್ತಾರೆ. ಇಂಥವರ ಪಾಲಿಗೆ ಬಂದ ಭೂಮಿಯಮೇಲೆ ಲೈನ್ ಹೋಯಿತೆಂದರೆ ಅಂಥಾ ರೈತನಿಗೆ ಭೂಮಿಯೇ ಇಲ್ಲದಂತಾಗುತ್ತೆ. ಅಲ್ಪಸ್ವಲ್ಪ ಹೆಚ್ಚಿನಭೂಮಿ ಇರುವವನ ಭೂಮಿಯಮೇಲೆ ಹೋದರೂ ಸಹ ಭೂಮಿಯು ತುಂಡುತುಂಡಾಗಿ ಭೂಮಿಯ ಪ್ರಯೋಜನವು ಬಹುಮಟ್ಟಿಗೆ ಕಡಿಮೆಯಾಗುತ್ತೆಂಬದರಲ್ಲಿ ಏನೂ ಸಂಶಯವಿಲ್ಲ. ಅಲ್ಲದೆ ಗದ್ದೆಬೈಲಿನಲ್ಲೂ ಎತ್ತರವಾದ ಗದ್ದೆಗಳಮೇಲೆಯೇ ಲೈನನ್ನು ತೆಗೆದುಕೊಂಡು ಹೋಗುತ್ತಾರಂತೆ. ಇದರಿಂದ ರೈತನ ಕಷ್ಟವು ಇನ್ನಷ್ಟು ಹೆಚ್ಚುತ್ತೆ. ತಗ್ಗು ಗದ್ದೆಗಳಮೇಲೆ ಮಳೆಗಾಲದಲ್ಲಿ ಹೊಳೆನೀರು ಹತ್ತಿ ನಿಲ್ಲುತ್ತೆಂಬ ಕಾರಣದಿಂದ ನಾಟಿಗೆ ಬೇಕಾದ ಅಗೆಯನ್ನು ತಯಾರಿಸಲಿಕ್ಕೆ ಎತ್ತರದ ಗದ್ದೆಗಳಲ್ಲಿ ಬೀಜ ಹಾಕುತ್ತಾರೆ. ಅಂಥ ಬೀಜ ಹಾಕಬೇಕಾದ ಯಾಳಲು ಗದ್ದೆಗಳ ಮೇಲೆಯೇ ಲೈನ್ ಹೋದರೆ ರೈತರಿಗೆ ಬೀಜ ಹಾಕಲಿಕ್ಕೆ ಸ್ಥಳವೇ ಇಲ್ಲದಂತಾಗುತ್ತೆ. ಅಲ್ಲದೆ ಈ ಲೈನಿಗಾಗಿ ಅನೇಕ ಮನೆಗಳು ಸಹ ಕೀಳಬೇಕಾಗುತ್ತೆಂತ ಅನ್ನುತ್ತಾರೆ.

ಈ ರೀತಿ ರೈತರಿಗೆ ಅನೇಕ ವಿಧದಿಂದ ತೊಂದರೆ ಕೊಟ್ಟು ಗದ್ದೆಗಳಮೇಲೆ ರೈಲ್ವೇ ಲೈನ್ ತಂದರೆ ರೈಲಿಗಾಗಿ ಖರ್ಚುಮಾಡುವ ಸರಕಾರಕ್ಕಾಗಲೀ ಪ್ರಯೋಜನವೇನೂ ನಮಗೆ ತೋರುವದಿಲ್ಲ. ಈ ಲೈನಿನ ಉದ್ದವು ಎರಡುಮೈಲು ಕಡಿಮೆಯಾಗಬಹುದಾದರೂ ಇದಕ್ಕೆ ಹೆಚ್ಚಿಗೆ ಖರ್ಚಾಗದೇ ಇರುವದೆಂತಲೇ ನಮ್ಮ ಭಾವನೆ. ಗದ್ದೆಗಳನ್ನು ರೈತರ ಹಸ್ತ ತಪ್ಪಿಸಿ ಸರಕಾರಕ್ಕೆ ತೆಗೆದುಕೊಳ್ಳಬೇಕಾದರೆ ಬಾಣೆ ಭಾಗಗಳಿಗೆ ಕೊಡುವದಕ್ಕಿಂತ ಬಹಳ ಹೆಚ್ಚಿನ ಪ್ರತಿಫಲ ಕೊಡಬೇಕಾಗುತ್ತೆಂಬದರಲ್ಲಿ ಸಂಶಯವಿಲ್ಲ. ಹತ್ತಿಪ್ಪತ್ತರಷ್ಟಾದರೂ ಹೆಚ್ಚಿನ ಕ್ರಯ ಕೊಡಬೇಕಾಗುತ್ತೆ. ಬಾಣೆಮೇಲೆ ಹೋದರೆ ದಿಣ್ಣೆಗಳನ್ನು ಕತ್ತರಿಸಿ ತೆಗೆಯಲಿಕ್ಕೆ ಹೆಚ್ಚಿಗೆ ಖರ್ಚಾಗಬಹುದೆಂತ ಹೇಳಬಹುದು. ಆದರೆ ಗದ್ದೆಮೇಲೆ ಗಟ್ಟಿಯಾದ ಲೈನ್ ಹಾಕಬೇಕಾದರೆ ಗದ್ದೆಯ ಮಟ್ಟಕ್ಕಿಂತ ಎರಡಾಳು ಎತ್ತರವಾದರೂ ಕಲ್ಲುಕಟ್ಟಿ ಎತ್ತಿಸಿ ಅದರಮೇಲೆ ಲೈನ್ ಹಾಕಬೇಕಾಗುತ್ತೆ. ಮಳೆಗಾಲದಲ್ಲಿ ಗದ್ದೆಗಳಲ್ಲಿ ಬಹಳ ಕೆಸರು, ಗೊಜ್ಜು ಇರುತ್ತೆಂಬದು ಸರ್ವೆಮಾಡುವವರಿಗೆ ಗೊತ್ತಿರುವಂತೆ ತೋರುವದಿಲ್ಲ. ಅಲ್ಲದೆ ಹೀಗೆ ನೆಲದ ಮಟ್ಟದಿಂದ ಲೈನನ್ನು ಎತ್ತಬೇಕಾದ ಮಣ್ಣು ಹತ್ತಿರದಲ್ಲಿ ಸಿಕ್ಕುವದಿಲ್ಲ. ಹತ್ತಿರದಲ್ಲಿ ತೆಗೆಯಬೇಕಾದರೆ ಬೇರೆ ಗದ್ದೆಗಳನ್ನು ತುಂಬಾ ಕ್ರಯಕೊಟ್ಟು ವಹಿಸಿಕೊಳ್ಳಬೇಕು. ಇಲ್ಲವಾದರೆ ದೂರದ ಸ್ಥಳದಿಂದ ಮಣ್ಣನ್ನು ಸಾಗಿಸಿಕೊಳ್ಳಬೇಕು. ಇದಕ್ಕಾಗುವ ಖರ್ಚು ದಿಣ್ಣೆಗಳನ್ನು ಕತ್ತರಿಸಿ ತೆಗೆಯಲಿಕ್ಕಾಗದೆಂತ ನಮ್ಮ ಅಭಿಪ್ರಾಯ. ಅಲ್ಲದೆ ಗದ್ದೆಗಳಲ್ಲಿ ಮಳೆಗಾಲದಲ್ಲಿ ನೀರು ಧಾರಾಳವಾಗಿ ಹರಿಯುತ್ತಲೇ ಇರಬೇಕಾಗುವದರಿಂದ ಗದ್ದೆ ಲೈನಿನಲ್ಲಿ ಚಿಕ್ಕಚಿಕ್ಕ ಸೇತುವೆಗಳು ತುಂಬಾ ಆಗಬೇಕು. ಬಾಣೆಮೇಲೆ ಹೋದರೆ ಚಿಕ್ಕ ಸೇತುವೆಗಳ ಆವಶ್ಯಕತೆ ಬಹಳ ಕಡಿಮೆಯಾಗಬಹುದು. ಗದ್ದೆಗಳಮೇಲೆ ಹೋದರೆ ಖರ್ಚಿನ ಬಾಬಿನಲ್ಲಿ ವಿಶೇಷ ಪ್ರಯೋಜನವಾಗುವಂತೆ ಇಲ್ಲದೆ ಇರುವಾಗ ಸಂಬಂಧಪಟ್ಟ ಅಧಿಕಾರಿಗಳು ಈ ಲೈನನ್ನು ಕೂಡಲೇ ಬಿಟ್ಟುಬಿಡಬೇಕಾದದ್ದು ಅತಿ ಅವಶ್ಯ.

ರೈಲು ಬಂದರೆ ದೇಶಕ್ಕೆ ಕ್ಷೇಮವಾಗುತ್ತೋ ಇಲ್ಲವೋ ಎಂತ ಜನರ ಮನಸ್ಸಿನಲ್ಲಿ ಇನ್ನೂ ಸಂಶಯವೇ ಇರುವಾಗ ರೈಲ್ವೇ ಪ್ರಾರಂಭವಾಗುವ ಮುಂಚೆಯೇ ರೈತರಿಗೆ ಹಿಂಸೆಯಾಗುವಂತೆ ಮಾಡಿದರೆ ರೈಲ್ ಬರುವದೇ ಬೇಡವೆಂತ ಹೇಳಲು ಪ್ರಾರಂಭವಾದೀತು. ರೈಲ್ವೇ ಬಂದರೆ ದೇಶಕ್ಕೆ ಬಹಳ ಗುಣವಿದೆಯೆಂತ ನಾವೂ ಹೇಳುವದಿಲ್ಲ. ಆದರೆ ಪ್ರತ್ಯೇಕವಾಗಿರುವ ನಮ್ಮ ಈ ದೇಶಕ್ಕೆ ಹೊರಗಿನ ಭಾಗಗಳೊಂದಿಗೆ ಹೆಚ್ಚಿನ ಸಂಪರ್ಕವಾಗುವದು ಅವಶ್ಯ. ಅದರಿಂದ ರೈಲ್ವೇ ಬಂದರೆ ಆಗಬಹುದು. ರೈಲ್ವೇ ಬರುವಾಗ ಕೆಲವು ರೈತರಿಗೆ ಕಷ್ಟವಾಗದೆ ಇರುವದಿಲ್ಲ. ಆದರೆ ಈ ಕಷ್ಟವನ್ನು ಆದಷ್ಟು ಕಡಿಮೆಯಾಗುವಂತೆ ಪ್ರಯತ್ನಿಸಬೇಕಾದದ್ದೇ ಅಧಿಕಾರಿಗಳ ಕೆಲಸವಾಗಿದೆ.

ಸಂಬಂಧಪಟ್ಟ ರೈತರು ರೈಲ್ವೇ ಇಂಜಿನೀಯರಿಗೆ ಅರ್ಜಿ ಬರಕೊಂಡು ಪ್ರಯೋಜನವಾಗಿರುವದಿಲ್ಲವಂತೆ. ಕಮಿಶನರಿಗೂ ಚೀಫ ಕಮಿಶನರಿಗೂ ಅರ್ಜಿ ಬರಕೊಳ್ಳುವ ವಿಚಾರವು ಮಾಡುತ್ತಿದ್ದಾರೆಂತ ತಿಳಿಯುತ್ತೇವೆ. ಅಂಥಾ ಅರ್ಜಿಗಳು ಬರುವವರೆಗೆ ಕಾಯದೆ ರೈತರ ಕಷ್ಟವನ್ನು ಗಮನಕ್ಕೆ ತೆಗೆದುಕೊಳ್ಳುವ ನಮ್ಮ ದಯಾಳು ಕಮಿಶನರ್ ಕೂಡಲೇ ಸ್ಥಳಕ್ಕೆ ಹೋಗಿ ರೈತರ ಮೊರೆಯನ್ನು ಖುದ್ದಾಗಿಯೇ ಕೇಳಿ ಪರಿಹರಿಸಬೇಕಾದದ್ದು ಅವರ ಕರ್ತವ್ಯವಾಗಿದೆ. ಕೊಡಗು ಕೌನ್ಸಿಲ್ ಮೆಂಬರುಗಳು ಸಹ ಈ ವಿಷಯವನ್ನು ತಮ್ಮ ಯೋಜನೆಗೆ ತೆಗೆದುಕೊಂಡು ಕಮಿಶನರವರನ್ನೂ ಚೀಫ್ ಕಮಿಶನರವರನ್ನೂ ಎಚ್ಚರಿಸುವದು ಅವರ ಕರ್ತವ್ಯವಾಗಿದೆ. ರೈತರಿಗಾಗಿ ರೈಲ್ವೇ ಇರಬೇಕೇ ಹೊರತು ರೈಲ್ವೇಗಾಗಿ ರೈತರು ಇದ್ದಾರೆಂತ ವರ್ತಿಸಬಾರದು. ಸರಕಾರಕ್ಕೆ ಗದ್ದೆಗಳನ್ನಾಗಲೀ, ಮನೆಯನ್ನಾಗಲೀ ಬಲದಿಂದ ಕ್ರಯಕ್ಕೆ ತೆಗೆದುಕೊಳ್ಳುವ ಹಕ್ಕಿರುವದೇನೋ ಹೌದು. ಆದರೆ ಅಂಥಾ ಹಕ್ಕನ್ನು ರೈತರಿಗೆ ಆದಷ್ಟು ಕಡಿಮೆ ನೋವಾಗುವಂತೆ ಜಾರಿಮಾಡಬೇಕು. ತಾಲೋಕು ಸುಬೇದಾರರು ಟೆರಿಟೋರಿಯಲ್ ಸೈನ್ಯದ ಕೆಲಸ ತೀರಿ ಶೀಘ್ರದಲ್ಲೇ ತಮ್ಮ ತಾಲೋಕಿಗೆ ಬರುವರಿದ್ದಾರೆ. ಈ ರೈಲ್ವೇ ಸಂಬಂಧವಾಗಿ ರೈತರ ಕೂಗು ನ್ಯಾಯವಾದದ್ದೋ ಎಂಬುದನ್ನು ಖುದ್ದಾಗಿ ಅಜಮಾಯಿಸಿದರೆ ನಿಜಸ್ಥಿತಿ ಇವರಿಗೆ ತಿಳಿಯದೆ ಇರಲಾರದು. ರೈತರ ಆಕ್ಷೇಪಣೆಗೆ ಕಾರಣವಿದೆಯೆಂತಾದರೆ ಮೇಲಾಫೀಸರುಗಳ ಅಭಿಪ್ರಾಯಕ್ಕೆ ವಿರೋಧವಾದರೂ ರೈತರಪಕ್ಷ ಹಿಡಿದು ರೈತರ ದುಃಖವೇ ತನ್ನ ದುಃಖವಾಗಿ ಭಾವಿಸಿಕೊಂಡು ಮೇಲಧಿಕಾರಿಗಳ ಸಂಗಡ ಹೋರಾಡಿ ರೈತರಿಗೆ ಪರಿಹಾರ ದೊರಕಿಸಿದರೆ ಸುಬೇದಾರರು ಸಂಬಂಧಪಟ್ಟ ರೈತರ ಶಾಶ್ವತವಾದ ಕೃತಜ್ಞತೆಯನ್ನು ಸಂಪಾದಿಸಿಕೊಳ್ಳುತ್ತಾರೆ. ರೈತರ ಕೂಗು ಹೆಚ್ಚಾಗಿ ಅರಣ್ಯರೋದನದಂತೆ ನಿಷ್ಪ್ರಯೋಜನವಾಗುವದೇ ಇದುವರೆಗಿನ ಸಾಧಾರಣ ಪದ್ಧತಿಯಾಗಿತ್ತು. ಈಗ ಕೌನ್ಸಿಲ್ ಬಂದದ್ದರಿಂದಲೂ, ದಯಾಳು ಕಮಿಶನರ್ ಬಂದಿರುವದರಿಂದಲೂ ಇನ್ನುಮೇಲೆ ಪ್ರಜಾಮತವೇ ಸರಕಾರದ ಆಡಳಿತದಲ್ಲಿ ಜಾರಿಯಾಗುತ್ತೆಂಬ ಆಶೆ ರೈತರಲ್ಲಿ ತುಂಬಾ ಇದೆ. ಇಂಥಾ ಅಭಿಪ್ರಾಯವನ್ನು ನಿರ್ಮೂಲವಾಗಲು ಎಡೆಕೊಡದೆ ಚೀಫ್‌ಕಮಿಶನರು ಸಹ ಖುದ್ದಾಗಿ ತನಿಖೆಮಾಡಿ ರೈತರ ಬೇಡಿಕೆಯನ್ನೂ ಆಕ್ಷೇಪಣೆಯನ್ನೂ ಕೂಡಲೇ ಹೋಗಲಾಡಿಸಿಯಾರೆಂತ ನಮಗೆ ಆಶೆ ಇದೆ.

ಪ್ರಸವ.

ಪ್ರಸವಕಾಲಗಳಲ್ಲಿ ಉಂಟಾಗುವ ಅಪಾಯಗಳನ್ನೂ ಶಿಶುಪಾಲನೆಯ ಕ್ರಮಗಳನ್ನೂ ಕುರಿತು ಒಂದೆರಡು ಮಾತುಗಳನ್ನು ಬರೆಯುವೆನೆಂದರೆ ಭಾಷೆಯು ಕೊಡಬೇಕಾಗಿದೆ. ಅನುಭವಗಳು ಅಲ್ಪವಾಗಿವೆ. ಇರುವ ಅಲ್ಪಸ್ವಲ್ಪ ಅನುಭವಗಳನ್ನು ಬರೆಯುವ ಮೊದಲು ಈ ತರದ ಅನುಭವಗಳು ದೇಶದ ಹೆಚ್ಚಿನ ಜನರಿಗೆ ಎಷ್ಟರಮಟ್ಟಿಗೆ ಫಲಕಾರಿಯಾಗುವುದೆಂಬ ಸಂಶಯ.

ಹ್ಯಾಗೂ ಈ ಲೇಖನವನ್ನು ಬರೆಯಲು ಅವಕಾಶ ಕೊಟ್ಟ ನನ್ನ ಮೇಲಧಿಕಾರಿಯಾದ ಮೇಜರ್ ಎಫ್. ಸಿ ಫ್ರೇಸರ್ ಐ ಎಂ ಎಸ್. ಸಾಹೇಬರವರಿಗೆ ನನ್ನ ಕೃತಜ್ಞತೆಯನ್ನು ಅರ್ಪಿಸಿ ದೇಶಾಭಿಮಾನಿಗಳು ಅಭ್ಯಸಿಸಲು ಈ ಕೆಳಗಿನ ಅಂಶಗಳನ್ನು ಬಾಳಿಗೆ ತರುವುದಲ್ಲದೆ ಯಾವ ತರದ ಕಷ್ಟವೂ ತೋರದಲಿಕ್ಕಿಲ್ಲವೆಂಬ ಭಾವನೆಯಿಂದ ಒಂದೆರಡು ಸಂಕ್ಷೇಪಗಳನ್ನು ಬರೆಯುವೆನು. ಅನೇಕ ಗ್ರಾಮಗಳಲ್ಲಿ ಬಾಣಂತಿಯರನ್ನು ಕ್ರಮವಾಗಿ ಉಪಚರಿಸದಕಾರಣ ಮರಣಕ್ಕೆ ತುತ್ತಾಗುವುದರಿಂದ ಈ ಕೆಳಗಿನ ಸಂಗತಿಗಳನ್ನು ತಿಳಿಯಬೇಕಾಯಿತು.

1. ಪ್ರಸವಕಾಲವು ಸಮೀಪಿಸಿತೆಂದರೆ, ಚೆನ್ನಾಗಿ ಸುಣ್ಣ ಬಳಿಸಲ್ಪಟ್ಟ ಗಾಳಿ ಬೆಳಕುಳ್ಳದಾಗಿಯೂ, ಚೊಕ್ಕಟವಾಗಿಯೂ ಇರುವ ಮನೆಯಲ್ಲಿ ಒಂದು ಕೋಣೆಯನ್ನು ಆರಿಸುವುದಲ್ಲದೆ, ಅದರಲ್ಲಿ ಅನಾವಶ್ಯಕವಾಗಿರುವ ಸಾಮಾನುಗಳನ್ನು ಬೇರೆ ಕಡೆಗೆ ಸಾಗಿಸಿ ಕೋಣೆಯನ್ನು ಹೆರಿಗೆಗೆ ತಕ್ಕುದಾಗಿ ಮಾಡಬೇಕು.

ಪೂರ್ವಪದ್ಧತಿಮೇರೆ ಗರ್ಭಿಣಿಯನ್ನು ಗಾಳಿ ಬೆಳಕಿಲ್ಲದ ಕತ್ತಲೆ ಕೋಣೆಗೆ ಹೆರಿಗೆಗೋಸ್ಕರ ಒಯ್ಯುವುದನ್ನು ಬಿಡಬೇಕು.

2 (a) ಹೆರಿಗೆ ಕೋಣೆಯಲ್ಲಿ ಸುಮಾರು ಎರಡಡಿ ಎತ್ತರ ಉಳ್ಳ ಒಂದು ಮಂಚವನ್ನಿಟ್ಟು, ಸೊಗಸಾಗಿಯೂ ಶುಚಿಯಾಗಿಯೂ ಇರುವ ಒಂದು ಕಡುವೆ ಹಾಸಿಗೆಯನ್ನು (Coir mattress) ಬಿಡಿಸಿ, ಅದರ ಕೆಳಗಿನ ಅರ್ಧಭಾಗವನ್ನು ನೀರನ್ನು ಹೀರಿಕೊಳ್ಳದ (water proof) ಬಟ್ಟೆಯಿಂದ ಹಾಸಬೇಕು. ಇದರಮೇಲೆ ಮಡಿಯಾದ ಒಂದು ಹಸನನ್ನು ಹೊದಿಕೆಯಿಂದ ಕೂಡಿದ ಒಂದು ತಲೆದಿಂಬು ಮತ್ತು ಒಂದು ದಗ್ಗು ಇಲ್ಲದೆ ಬೆಚ್ಚಗಾದ ಕಂಬಳಿಯನ್ನು ಕೂಡಿಸಬೇಕು.

ಬಾಣಂತಿಗೆ ಹೆಚ್ಚಿನ ಅನುಕೂಲತೆಯು, ನಿರ್ಮಲತೆಯು ಮತ್ತು ತಕ್ಕ ಮಟ್ಟಿಗೆ ಶಾಖವೂ ಅವಶ್ಯಕವಾದುದರಿಂದ ಕೆಳಗೆ ವಿವರಿಸಿದ ಸಾಹಿತ್ಯಗಳು ತಕ್ಕುದಾಗಿದೆ.

ಒಂದೆರಡು ದಿವಸ ಒಂದೇ ಹಾಸಿನಮೇಲೆ ಬಾಣಂತಿಯರನ್ನು ಮಲಗಿಸುವುದರಿಂದ ಹಾಸಿಗೆಗಳಲ್ಲಿರಬಹುದಾದ ಕ್ರಿಮಿ ಕೀಟಗಳು ಬಾಣಂತಿ ಜ್ವರ (Septic Fever) ವನ್ನುಂಟುಮಾಡುವದರಿಂದ ಈ ಪದ್ಧತಿಯನ್ನು ಪೂರ್ತಿಯಾಗಿ ವರ್ಜಿಸಬೇಕಾಗಿದೆ.

(b) ತಾಯಿಯ ಮತ್ತು ಶಿಶುವಿನ ಉಪಯೋಗಕ್ಕೆ ಅವಶ್ಯವಿರುವ ಸಾಮಾನುಗಳನ್ನು ಇಟ್ಟುಕೊಳ್ಳಲು ಒಂದು ಸಣ್ಣ ಮೇಜವನ್ನು ಮಂಚದಬಳಿಯಲ್ಲಿಡಬೇಕು.

(c) ಹೆರಿಗೆಗೆ ಸಹಾಯ ಕೊಡಲು, ಬರುವ ಬಟ್ಟೆಗಳನ್ನು ತೊಳೆಯಲು ಒಂದು ಚಿಕ್ಕಬೋಗುಣಿಯೂ ... ಹಾಕಲು ಒಂದು ದೊಡ್ಡ ಬೋಗಣಿಯೂ, ಕೋಣೆಯಲ್ಲಿ ಬೇಕು.

ಒಂದು ಚೆಂಬು ತಣ್ಣೀರು, ಒಂದು ಚೆಂಬು ಬಿಸಿನೀರು, ಒಂದು ಕೊಡದಷ್ಟು ಚೆನ್ನಾಗಿ ಕಾದು ಆರಿದ ನೀರು, ಎರಡು ಟವಲುಗಳು ಮತ್ತು ಒಂದು ಕಾರಬಾಲಿಕ್ ಸಾಬೂನು ಗಟ್ಟಿಯೂ (Carbolic Soap) ಕೋಣೆಯಲ್ಲಿ ಯಾವಾಗಲೂ ಇರಬೇಕು.

3 ತಾಯಿಯ ಉಪಯೋಗಕ್ಕಿರುವ ಬಟ್ಟೆಗಳು

(1) ಒಂದುವರೆ ಗಜ ಉದ್ದ 1½ ಅಡಿ ಅಗಲದ ... ಟಿಕ್ಕ ಸುತ್ತಲಿರುವ ಎರಡು ನಾಲ್ಕು ಬಟ್ಟೆಗಳಪಟ್ಟಿ bin...

(2) ಸುಮಾರು ಅಂಗುಲ ತೊಳೆಯಲ್ಪಟ್ಟ ಒಂದು ... ಗಜ ವಿಸ್ತೀರ್ಣವುಳ್ಳ ಒಂದುವರೆ ಡಜನ ಒಳಬಟ್ಟೆ (diapers)

(3) ಹೆಚ್ಚಿಗೆ ಕೆಲವು ಪಟ್ಟಿಗಳು (Draw sh...

(4) ಎರಡು ಅಥವ ಮೂರು ಸೇಫ್ಟಿ ಪಿನ್ (Safety pins)

4 ಮಗುವಿಗೆ ಅವಶ್ಯವಿರುವ ಬಟ್ಟೆಗಳು

(1) ಜನನಕಾಲದಲ್ಲಿ ಮಗುವನ್ನು ಹಿಡಿದುಕೊಳ್ಳಲು ಬೇಕಾಗಿರುವ ಒಂದು ಚೂರು ಉಣ್ಣೆಬಟ್ಟೆ ಇಲ್ಲವೆ ಕಂಬಳಿ ಚೂರು.

(2) ಶಿಶುವಿಗೆ ಅವಶ್ಯಕವಾಗಿರುವ ಮೆತ್ತಗಿರುವ ಬಟ್ಟೆ 2 ಡಜನ ನೇಪ್‌ಕಿನ್ಸ್ (Napkins) ಒಂದು ಚಿಕ್ಕ ಹಾಸಿಗೆ ಮತ್ತು ತಲೆದಿಂಬು

5 ಹೊಕ್ಕಳನ್ನು ಕತ್ತರಿಸಲಿಕ್ಕಾಗಿ ಒಂದು ಹರಿತವಾದ ಕತ್ತರಿಯನ್ನು ಕಟ್ಟಲು ಬಲವಾಗಿಯೂ ಸ್ವಚ್ಛವಾಗಿಯೂ ಇರುವ ಎರಡು ತುಂಡು ದಾರಗಳನ್ನು ಒಂದು ... ಯಲ್ಲಿರಿಸಿಕೊಳ್ಳಬೇಕು.

6 ಇತರ ಸಾಹಿತ್ಯಗಳು

ಒಂದು ಅಗ್ಗಿಷ್ಟಿಕೆ, ಒಂದು ದೀಪ, ಒಂದು ... ಮತ್ತು ಒಂದು ಚೌಂಕ

ಈ ಮೇಲಿನ ಸಾಹಿತ್ಯಗಳು ಒಂದು ಹೆರಿಗೆ ... ತಕ್ಕವುಗಳಾಗಿವೆ (Requisites for a mat... room)

N B ಮೇಲೆ ಸಮೂದಿಸಿದ ಬಟ್ಟೆಗಳನ್ನು ಉಪಯೋಗಿಸಬೇಕಲ್ಲದೆ ಹಳೆದಾಗಿಯೂ, ಮೈಲಿಗೆಯಾಗಿ ಇರುವ ಹರಕು ಬಟ್ಟೆಗಳನ್ನು ಬಾಣಂತಿಯರು ಉಪಯೋಗಿಸಿದರೆ, ಸನ್ನಿಜ್ವರಕ್ಕೆ ತುತ್ತಾಗುವರು.

ಈ ತರವಾದ ಅವಶ್ಯವಿರುವ ಸಾಮಾನುಗಳನ್ನು ಹೆರಿಗೆಯ ಎರಡು ದಿವಸಗಳಿಗೆ ಮುಂಚಿತವಾಗಿಯೇ ಇಟ್ಟುಕೊಂಡು ಗರ್ಭಿಣಿಸ್ತ್ರೀಗೆ ಚೆನ್ನಾಗಿ ಮಲವಿಸರ್ಜನೆ ಆಗುವಂತೆ 1 ಔನ್ಸ್ ಹರಳೆಣ್ಣೆಯನ್ನು (Castor oil) ಕೊಟ್ಟು, ಮಾರನೆಯ ದಿವಸ ಸ್ನಾನಮಾಡಿಸಿ ಮಡಿ ಬಟ್ಟೆಯನ್ನು ಉಡಿಸಬೇಕು.

ಸ್ತ್ರೀಗೆ ಪ್ರಸವವೇದನೆಯುಂಟಾದ ಕೂಡಲೆ ಹೆರಿಗೆ ಮಾಡುವ ಕೆಲಸವನ್ನು ಚೆನ್ನಾಗಿ ಅರಿತ ಸೂಲಗಿತ್ತಿಯನ್ನು (Qualified midwife) ಕರೆಯಿಸಿ ... ನ ಕೆಲಸಗಳ ಜವಾಬ್ದಾರಿಕೆಗಳನ್ನೆಲ್ಲಾ ಅವಳಿಗೆ ... ಬೇಕು. ಮನೆಯಲ್ಲಾಗಲಿ ನೆರೆಯಲ್ಲಾಗಲಿ ಅನುಭವವಿಲ್ಲದ ಹೆಂಗಸರನ್ನು ಎಂದೂ ಬಿಡಬಾರದು

ಅನೇಕ ಹೆಂಗಸರುಗಳು ಹರಿಗೆಗಳನ್ನು [illegible] ಸುಲಭವಾಗಿಯೂ, ಜತನದಿಂದ [illegible] ಮಾಡಿಸಿ [illegible]. ಎಷ್ಟು ಜಂಬ ಕೊಚ್ಚಿ ಕೊಂಡರೂ ಅವರಿಗೆ [illegible] ವಿಷಯ [illegible] ನಿಜವಾದ ಅನುಭವವು ಇಲ್ಲದಿರುವುದು. [illegible] ಅನೇಕರಿಗೆ ಶುಚಿತ್ವವು ಗೊತ್ತಿರುವುದಿಲ್ಲ. [illegible] ಮೇಲೆ ನಮೂದಿಸಿದ ಕಾರ್ಯಗಳ ಜವಾಬ್ದಾರಿಕೆಯನ್ನು ವಹಿಸಬಾರದು. ಸೂಲಗಿತ್ತಿಯರು ದೊರೆಯುವ್ವಿದ್ದ ಸ್ಥಳಗಳಲ್ಲಿ ವಾತ್ರ ಅನುಭವವುಳ್ಳ ಇಬ್ಬರು ಹೆಂಗಸರನ್ನು ಕರೆಸು[illegible], ಗರ್ಭಿಣಿ ಸ್ತ್ರೀಯನ್ನು [illegible] ಮೊದಲು, ಕೈಗಳನ್ನು ಕಾರ್ಬಾಲಿಕ್ ಸಾಬೂನಿನಿಂದ ತೊಳೆದುಕೊಳ್ಳಬೇಕು. ಸ್ತ್ರೀಯ ಶರೀರವನ್ನು ತೊಳೆ[illegible] ಮಡಿಯಾದ ಬಟ್ಟೆಯನ್ನು ಉಪಯೋಗಿ[illegible]. ಸ್ವಭಾವಿಕವಾದ ಹೆರಿಗೆ (Natural lab[illegible]) [illegible] ವೈದ್ಯರ [illegible] ಬಿಡಬೇಕು.

ಅವಶ್ಯಕವಲ್ಲದೆ [illegible] (Visitors) ನೆರೆದಂತೆ [illegible].

ಪ್ರಥಮ ಗರ್ಭಿಣಿ [illegible] (1st pregnancy) ಪ್ರಸವವೇದನೆಯನ್ನು [illegible] 12-14 ಗಂಟೆ [illegible], ಇತರರು (Subsequent pregnancies) 6 ಗಂಟೆ [illegible] ಹೋಗಬೇಕು. [illegible] ವಿಳಂಬವಾಗುವುದು (Delay is dangerous) [illegible] ಸಿಸ್ಟೆಂಟ್ ಸರ್ಜನರನ್ನು [illegible] ಚಿಕಿತ್ಸೆಯನ್ನು ಮಾಡಿಸತಕ್ಕದ್ದು.

ಪ್ರಸವಿಸಿದನಂತರ ಉಪಚಾರ

1 ಹೆರಿಗೆಯಿಂದ [illegible] ಸ್ವಸ್ಥವಾಗಿ ಮಲಗಿರಬೇಕು.

[illegible] ಸ್ಥಿತಿ [illegible] ಜೀವಕ್ಕೆ ಅಪಾಯ [illegible] (Shock, Exhaustion and death)

2 ಊಟ ಉಪಚಾರಗಳನ್ನು ತೆಗೆದುಕೊಳ್ಳುವ ಸಮಯದಲ್ಲಿ [illegible] ಮೂತ್ರ [illegible] ಸಮಯಗಳಲ್ಲಿ ಬಾಣಂತಿಯು [illegible] ಐದು ದಿವಸಗಳ [illegible] (Perfect rest for five days)

ಆಹಾರ

3 ನೆ ದಿವಸದ [illegible] ಮೊದಲನೆ ಎರಡು ದಿವಸಗಳಲ್ಲಿ ಹಾಲು, [illegible] ಟೀ, ಕಾಫಿ ಮತ್ತು ರವೆಗಂಜಿ ಮುಂತಾದ [illegible] ಜೀರ್ಣ ಆಹಾರಗಳನ್ನು ಕೊಡಬೇಕು. ಮೂರನೆ ದಿವಸ [illegible] ಸಾಧಾರಣ ಆಹಾರ ಅಂದರೆ ಅನ್ನ, ಕೋಳಿಮೊಟ್ಟೆ, [illegible] ಮುಂತಾದ ಆಹಾರಗಳನ್ನು ಕೊಡಬಹುದು. ಬ್ರಾಂಡಿಯನ್ನು ವೈದ್ಯರು ಹೇಳಿದ ಹೊರತು [illegible] ಅವಶ್ಯಕವಿರುವುದಿಲ್ಲ. ಈಗಿನ ರೀತಿಯಲ್ಲಿ ಕೊಡುವ [illegible] ಅನ್ನ, ಅಕ್ಕಿರೊಟ್ಟಿ, ಮುಂತಾದ [illegible] ಆಹಾರಗಳ [illegible] ಯೋಗ್ಯವಲ್ಲದ್ದರಿಂದ ಅಂಥವುಗಳನ್ನು ಪ್ರೋತ್ಸಾಹಿಸ[illegible]. ಬಾಣಂತಿಯರು ಪ್ರಸವಕಾಲದಲ್ಲಿ [illegible] ವೃದ್ಧಿಪಡಿಸುವ ಆಹಾರಗಳು ಅಗತ್ಯವೆಂಬ ಸಂಗತಿಯ[illegible] ನೋಡಿ ಅಂಥ ಆಹಾರ [illegible] ಕೊಡಬೇಕೆಂದಿರುವವುಗಳು ವಿಷಕರವಾದವುಗಳೆಂಬ [illegible] ವ್ಯಸನಕರವಾಗಿದೆ.

ಪ್ರಸವವಾದ 6 ಗಂಟೆಗಳಲ್ಲಿ [illegible] ಮೂತ್ರವನ್ನೂ, ಮೂರನೆಯ ದಿವಸದೊಳಗೆ ಮಲವಿಸರ್ಜನೆ [illegible] ವಿಷಯಗಳನ್ನು ಪರಿಶೀಲಿಸ[illegible].

ಬಾಣಂತಿಯು ಒಳಬಟ್ಟೆಯನ್ನು (Diapers) [illegible] ಬದಲಾಯಿಸುತ್ತ ಬದಪ್ಪ ಶುಚಿಯಾಗಿರಬೇಕು.

ಬಾಣಂತಿಯರನ್ನು ವಾಡಿಕೆಯಾಗಿ ಎರಡು ತಿಂಗ[illegible] ನಿತ್ಯವೂ ಎರಡಾವೃತ್ತಿ ಸ್ನಾನಮಾಡಿಸುವ ಪ[illegible] ವಂಶಪಾರಂಪರೆಯಾಗಿ (traditoinal) ಬಂ[illegible] ಇಟ್ಟುಕೊಂಡಿರುವುದಲ್ಲದೆ ಹೆಚ್ಚಿನ ಪ್ರಯೋಜನ[illegible]ಉವುದಿಲ್ಲ. ಈ ಪದ್ಧತಿಯೇ ಕೆಲವು ವೇಳೆಗ[illegible] ಗಳಿಗೆ ಗುರಿಯಾಗುವ ಸಂದರ್ಭಗಳೂ ಇವೆ. 5 ದಿವಸಗಳ ಮೇಲೆ ದಿನಕ್ಕೆ ಒಂದಾವೃತ್ತಿ [illegible] ದಿವಸಗಳಿಗೊಂದಾವೃತ್ತಿ ಬಿಸಿನೀರಿನ ಸ್ನಾನ [illegible] ವೇಕಾಗಿರುವುದು. ಪ್ರಸವಿಸಿದ ಮೂರನೆಯ [illegible] ಜ್ವರಬಂದರೆ ಸಾಧಾರಣ ಶರದ ಜ್ವರವೆಂದು [illegible] ಒಟ್ಟು [illegible] ಕರೆಯಿಸಿ, ಚಿಕಿತ್ಸೆ ಮಾಡಿಸಬೇಕು.

[illegible] ನೀರುವ ಯತ್ನಕಾರದು.

ಎರಡುವಾರಗಳವರೆಗೆ ಬಾಣಂತಿಯು ಮಲಗಿಕೊಂಡಿರ[illegible]ಗಿರುವುದು. ಅನಂತರ 4 ವಾರಗಳವರೆಗೆ ಮನೆಯೊಳಗೆ [illegible] ಬಹುದು. 6 ವಾರಗಳ ನಂತರ ಬೇರೆ ಕೆಲಸಗಳಿಗೆ ಹೋಗಬಹುದು.

ಶಿಶುಪಾಲನೆ.

ಮಗುವು ಜನಿಸಿದಕೂಡಲೆ ಹೊಕ್ಕಳನ್ನ ಕತ್ತರಿಸಿ, [illegible] ದಾರದಿಂದ ಕಟ್ಟಿ ಮಗುವನ್ನು ಬೆಚ್ಚಗಾದ ಬಟ್ಟೆಯಲ್ಲಿ ಸುತ್ತಿ, ಸೂಲಗಿತ್ತಿಯು ತಾಯಿಯ ಉಪಚಾರವಲ್ಲಿರುವವರೆಗೆ ಸಹಾಯಕ ಹೆಂಗಸಿನ ಕೈಯಲ್ಲಿರಿಸಬೇಕು.

ಶಿಶುವು ಜನನವಾದ ಕೂಡಲೆ ಅಳದಿದ್ದಲ್ಲು ಅದರ ಎದೆಗೆ ಸ್ವಲ್ಪ ತಣ್ಣೀರನ್ನು ಚಿಮುಕಿಸಿದರೆ ಅದು ಅಳಲಾರಂಭಿಸುವುದು. [illegible] ಅದರ ಬಾಯನ್ನು, ಕಣ್ಣುಗಳನ್ನು ಶುಚಿ[illegible] ಸಾಬೂನು ಹಾಕಿ ಬಿಸಿನೀರಿನಲ್ಲು ತೊಳೆದು ಮೈಯನ್ನು ಶುಚಿಯಾದ ಟವಲಿನಲ್ಲು ಉಜ್ಜಿ ಬೆಚ್ಚಗಿರುವ ಬಟ್ಟೆಯನ್ನ ಹೊದಿಸಬೇಕು. ಅನಂತರ ನೀರಿಗೆ ಸ್ವಲ್ಪ ಸಕ್ಕರೆ [illegible] ಕಲ್ಲಿನ [illegible] ಮಿಶ್ರಮಾಡಿ ಮಗುವಿಗೆ [illegible] ಕೊಡಬೇಕು. ಇದಲ್ಲದೆ ಬೇರೆ ಯಾವುದಾದರೂ ಮೊಲೆಕ್ಕೆ [illegible] ತಾಯಿಯ ಬಳಿಯಲ್ಲಿ ಮಲ[illegible]. ಜನಿಸಿದ ಕೂಡಲೆ ಮಗುವಿಗೆ ಹಿಪ್ಪ ಬೆಲ್ಲ ಮುಂತಾದವುಗಳನ್ನು ಕೊಡಬಾರದು.

ಆಹಾರ.

ಮಗುವು ಜನಿಸಿದ ಎರಡು ದಿವಸಗಳವರೆಗೆ ಹಸುವಿನ ಹಾಲಿಗೆ ಅದರ 3 ರಷ್ಟು ನೀರು ಮಿಶ್ರಮಾಡಿ ಚೆನ್ನಾಗಿ ಕಾಯಿಸಿಕೊಡಬೇಕು. ಎರಡನೆಯ ದಿವಸದಿಂದ ತಾಯಿಯ ಎದೆಹಾಲನ್ನು ಕೊಡಲು [illegible] 6 ತಿಂಗಳವರೆಗೆ [illegible] ತಾಯಿಯ ಹಾಲು ಕಮ್ಮಿಯಾದಲ್ಲಿ [illegible] ಹಸುವಿನಹಾಲನ್ನು ಉಪಯೋಗಿಸಬೇಕು. ಅಂಗಡಿಗಳಲ್ಲಿ ದೊರಕುವ ಯಾವತರದ ಆಹಾರಗಳನ್ನು ಕೊಡಬೇಕಾಗಿರುವುದಿಲ್ಲ. ಹಸುವಿನ ಹಾಲು [illegible] ದ ಪಕ್ಷದಲ್ಲಿ ವೈದ್ಯರನ್ನು (Sub Asst Surgeon) [illegible] ಅಂಗಡಿ ಆಹಾರಗಳನ್ನು ಕೊಡಬಹುದು. ಪಿಷ್ಟ ಪದಾರ್ಥಗಳಿಂದ ಕೂಡಿದ ಆಹಾರಗಳನ್ನು ಜೀರ್ಣಮಾಡುವ ಶಕ್ತಿಯು ಎಳೆಮಗುವಿಗೆ ಇಲ್ಲದಿರುವುದರಿಂದ ಅನ್ನ ಮುಂತಾದವುಗಳನ್ನು ಅರೆದುಕೊಡುವ ಪದ್ಧತಿಯನ್ನು ನಿಲ್ಲಿಸುವದು ಯೋಗ್ಯವಾಗಿದೆ. ಅಂಥ ಆಹಾರಗಳು ಮಗುವಿನ [illegible] ಹೆಚ್ಚಿನ ಸಹಾಯಕರವಾಗುವುದಿಲ್ಲ.

ಮಗುವಿನ ಸ್ನಾನ.

ಮಗುವನ್ನ ನಿತ್ಯವೂ ಶುಚಿಯಾಗಿ ತೊಳೆದು ಮಡಿಯಾದ ಮತ್ತು ಬೆಚ್ಚಗಾದ ಬಟ್ಟೆಯನ್ನು ಹೊದಿಸಬೇಕು. ಬಟ್ಟೆಯನ್ನು ತೊಡಿಸುವುದು ಕಷ್ಟವೆಂದು ಬಟ್ಟೆಯನ್ನು ಮೂರು ತಿಂಗಳವರೆಗೆ ತೊಡಿಸದಿರುವುದು ಬಹಳ ತಪ್ಪು.

ಮಗುವಿನ ಮೈಮೇಲೆ ಸವರುವ ಎಣ್ಣೆಯು ಅದರ ಬೆಳವಣಿಗೆಗೆ ಯಾವ ತರದ ಸಹಾಯವನ್ನು ಕೊಡದಿರುವುದರಿಂದ ಆ ಪದ್ಧತಿಯನ್ನು ನಿಲ್ಲಿಸಬಹುದು. ಅಲ್ಲದೆ ಕೊಡಗಿನ ಹವಗುಣವು ಪ್ರತಿದಿವಸವೂ ಬದಲಾಗುತ್ತಾ ಇರುವುದರಿಂದ ಮಕ್ಕಳನ್ನ ಬಟ್ಟೆಯ ಹೊದಿಕೆ ಇಲ್ಲದೆ ಮಲಗಿಸಿದರೆ, ಚಳಿಜ್ವರ ನೆಗಡಿ ಮುಂತಾದ ಕಾಯಿಲೆಗಳು ಬರುವುದು. ಆದುದರಿಂದ ಯಾವಾಗಲೂ ಚಿಕ್ಕಮಗುವನ್ನು ಬೆಚ್ಚಗಾದ ಹೊದಿಕೆಯಲ್ಲಿ ಹೊಂದಿಸಬೇಕು. ಮಗುವನ್ನು ಬಿಸಿ ನೀರು ಹಾಕುವದರಿಂದ ಮೈಯಮೇಲೆ ಸಣ್ಣ ಕಜ್ಜಿಗಳು ಆಗುತ್ತವೆ. ಮಗುವು ಜನಿಸಿದ 2—3 ದಿವಸಗಳವರೆಗೆ ಜಾಮುಕರದ ಮಲವಿಸರ್ಜನೆಯಾಗುವುದು. ಅನಂತರ ಮಲವಿಸರ್ಜನೆಯು ದಿವಸಕ್ಕೆ ಎರಡು ಮೂರಾವೃತ್ತಿಯಾಗುವುದು. ಮಲವಿಸರ್ಜನೆಯಾಗದಿದ್ದ ಪಕ್ಷದಲ್ಲಿ ಕೆಲವು ತೊಟ್ಟು ಹರಳೆಣ್ಣೆ (Castor oil) ಯನ್ನು ಕೊಟ್ಟರೆ ಮಲವಿಸರ್ಜನೆಯು ಸರಾಗವಾಗಿ ನಡೆಯುವುದು. ಸೂಲಗಿತ್ತಿ ಕೊಡುವ ಬೇರೆ ಮಾತ್ರೆಗಳನ್ನು ಕೊಡಕೂಡದು.

ಮಗುವಿಗೆ ಹೊಟ್ಟೆ ಉಬ್ಬರಿಸಿ [illegible] ಬಾಧಕವಾದರೆ ಆಸ್ಪತ್ರೆಯಿಂದ ಡಿಲ ಅಥವ ಗ್ರಯಪ (Dill water and Gripewate) ವಾಟರನ್ನು ತಂದು ಕೊಡಬೇಕು.

ಮೂತ್ರ.

ಮಗುವು ಜನಿಸಿದ ಎರಡು ಗಂಟೆಗಳೊಳಗೆ ಮೂತ್ರ ವಿಸರ್ಜನೆಮಾಡಬೇಕೆಂಬ ಸಂಗತಿಯನ್ನ ನೆನಪಿನಲ್ಲಿಟ್ಟುಕೊಳ್ಳತಕ್ಕದ್ದು.

ಬೇರೆತರದ ಆಹಾರ.

ಸ್ವಾಭಾವಿಕವಾಗಿ ತಾಯಿಯು ಎದೆಹಾಲಿನ ಬದಲಾಗಿ ಹಸುವಿನ ಹಾಲನ್ನು ಕೊಡುವ ಪದ್ಧತಿಯು ರೂಢಿಯಾಗುತ್ತಾ ಬರುತ್ತದೆ. ಹಾಗೆ ಕೊಡುವ ಸಂದರ್ಭಗಳಲ್ಲಿ ಮಗುವು [illegible] ಕುವಾಗಲೆಲ್ಲಾ ಕೊಡದೆ, ಸಮಯವನ್ನರಿತು ಕೊಡಬೇಕು. ಇಂಥ ಕುಪ್ಪಿಗಳನ್ನು ಪ್ರತಿದಿವಸವೂ ಬಿಸಿನೀರಿನಲ್ಲು ತೊಳೆದು ಶುಚಿಯಾಗಿಟ್ಟುಕೊಳ್ಳಬೇಕು. ಮಗುವಿಗೆ ರೊಟ್ಟಿ ಮುಂತಾದ ಪಿಷ್ಟಪದಾರ್ಥಗಳನ್ನು ಹಲ್ಲುಹುಟ್ಟಿದನಂತರ ಅಂದರೆ 6 ತಿಂಗಳುಗಳನಂತರ ಕೊಡಬೇಕು

ಮಗುವು ದುರದೃಷ್ಟಹೀನವಾಗಿ ತಾಯಿಯನ್ನ ಕಳಕೊಂಡು ಬೇರೆಯ [illegible] ಎದೆಹಾಲಿನಿಂದ (Wet nurse) ಪೋಷಿಸಲ್ಪಡುವುದು ಒಳ್ಳೇದು.

ಸೋಮವಾರಪೇಟೆ, 14-4-24.

ಎಂ. ವಿ. ನಾಯಡು,
ಎಲ್. ಎಂ. ಪಿ
ಸಬ್ ಅಸಿಸ್ಟಂಟ್ ಸರ್ಜನ್.

ಇಂಡಿಯಾದೇಶದಲ್ಲಿ ಮದ್ಯಪಾನ ನಿರೋಧವು ಸಾಧ್ಯವೆ?

ಇತರ ದೇಶಗಳಿಗಿಂತ ಇಂಡಿಯಾದೇಶದಲ್ಲಿ ಮದ್ಯಪಾನದ ಸ್ವಭಾವವನ್ನು ಒಸರಲ್ಲಿ ತಪ್ಪಿಸುವುದು [illegible] ಮದ್ಯಪಾನವಾದವುದು ಕೆಲವರಿಗೆ ಪೂರ್ವಜರಿಂದ ಬಂದ ಪದ್ಧತಿಯೆಂದೂ, ದಾರಿದ್ರ್ಯ, [illegible] ವಿಚಾರದಲ್ಲಿ ಕೈಹಚ್ಚುವುದು ಜನಗಳ ಮನಸ್ಸಿಗೆ ಅಪ್ರಿಯಕರವೆಂದೂ ಕೆಲವು ಕಾಲದ ಹಿಂದೆ, ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ಜನರಿಗೆ ನಂಬಿಕೆಯಿತ್ತು. ದೃಢವಾದ ಆ ತಪ್ಪು ತಿಳುವಳಿಕೆಯು ಕಾಲಕ್ರಮದಿಂದ ತಪ್ಪಿದುದಕ್ಕದೆ, ಈಗ ಆ ದೇಶದಲ್ಲಿ ಆ ಮದ್ಯಪಾನದ ಹೆಸರೇ ಇಲ್ಲದಂತಾಗಿದೆ. ನಮ್ಮ ಇಂಡಿಯಾದೇಶದಲ್ಲಿಯಾದರೋ ಮದ್ಯಪಾನವೆಂಬುದು ಬಹಳ ದುರಾಚಾರವೆಂದು ಹಿಂದೂ ಶಾಸ್ತ್ರವೆಲ್ಲವೂ ಖಂಡಿಸಿರುವುವು. ಸುರಾಪಾನವು ಮಹಾಪಾತಕಗಳಲ್ಲಿ ಒಂದೆಂದು ಗಣಿಸಲ್ಪಟ್ಟಿದೆ. ಈ ವಿಷಯವು ಹಿಂದೂ ಜನರೆಲ್ಲರಿಗೂ ಗೊತ್ತಿದ್ದರೂ, ತಮ್ಮ ಮನೋಧರ್ಮಕ್ಕೆ ವಿರುದ್ಧವಾಗಿಯೇ ಮದ್ಯಪಾನವನ್ನು ಮಾಡುತ್ತಿರುವರು. [illegible] ವಾಗ ಇಂಡಿಯಾದೇಶದಲ್ಲಿ ಜನಗಳಿಗೆ ಸರಿಯಾದ ಹಿತೋಪದೇಶದಿಂದ ಮದ್ಯಪಾನದಲ್ಲಿರುವ ಕೆಡುಕುಗಳನ್ನು ತಿಳಿಸಿ ಅದನ್ನು ಬಿಡಿಸುವುದೇನೂ ಅಷ್ಟು ಅಸಾಧ್ಯವಾದ ಕಾರ್ಯವಲ್ಲ. ಆ ಸಂಯುಕ್ತಸಂಸ್ಥಾನದಲ್ಲಿ ನಡೆಸುವುದಕ್ಕಿಂತ ಸುಲಭ ಪ್ರಯತ್ನದಿಂದಲೇ ಮದ್ಯಪಾನವನ್ನು ನಿರೋಧಿಸಬಹುದು. ಅಲ್ಲದೆ, ಇತರದೇಶಗಳಿಗಿಂತ ನಮ್ಮ ದೇಶದಲ್ಲಿ ಮದ್ಯಪಾಯಿಗಳ ಸಂಖ್ಯೆಯು ಬಹಳಮಟ್ಟಿಗೆ ಕಡಿಮೆ. ಪ್ರತಿವರ್ಷವೂ ವಿಕ್ರಯವಾಗುವ ಸಾರಾಯಿಗಳ ಪ್ರಮಾಣದಿಂದ ಇದನ್ನು ಕಂಡುಕೊಳ್ಳಬಹುದು. 1904 ನೇ ವರ್ಷದಿಂದ 1910 ನೇ ವರ್ಷದವರೆಗೆ ಸಂಯುಕ್ತಸಂಸ್ಥಾನದಲ್ಲಿ ವರ್ಷ ಒಂದಕ್ಕೆ ಸರಾಸರಿ 90 ಲಕ್ಷ ಗ್ಯಾಲನ್‌ಗಳಂತೆ ಸಾರಾಯಿಯು ವಿಕ್ರಯವಾಗಿದೆ. ಅದೇ ಲೆಕ್ಕವನ್ನು ಇಂಡಿಯಾ ದೇಶಕ್ಕೆ ಹೋಲಿಸಿ ನೋಡಿದರೆ ಇಲ್ಲಿ ಬಹಳ ಕಡಿಮೆಯಾಗಿದೆ. ಹಾಗಿದ್ದರೂ ಇಂಡಿಯಾದೇಶದಲ್ಲಿ ದಿನದಿನಕ್ಕೆ ಕುಡಿಯುವ ಅಭ್ಯಾಸವು ಹೆಚ್ಚುತ್ತಲೇಬರುವ ಸೂಚನೆಗಳು ಕಾಣುಬರುತ್ತವೆ 1918-19ನೆ ವರ್ಷಗಳಲ್ಲಿ ಬಂಗಾಳಾ ಅಧಿಪತ್ಯದಮಟ್ಟಿಗೆ ಅದರ ಹಿಂದಿನ ವರ್ಷ ವಿಕ್ರಯವಾದುದಕ್ಕಿಂತ 96 386 ಗ್ಯಾಲನ್ ಸಾರಾಯಿಯು ಹೆಚ್ಚಾಗಿ ಖರ್ಚಾಗಿದೆ. ಪಂಜಾಬಿನಲ್ಲಿ ಕೂಡ ಈಚೆಗೆ ಎರಡು ವರ್ಷಗಳಲ್ಲಿ ಒಂದು ಲಕ್ಷದಷ್ಟು ಸಾರಾಯಿಯು ಹೆಚ್ಚು ಖರ್ಚಾಗಿದೆ.

ಆದರೆ, ಇಂಡಿಯಾದೇಶದಲ್ಲಿ ಒರಟುಕೆಲಸ ಕಷ್ಟವೂ ಹೆಚ್ಚುತ್ತಿರುವುದೆಂದೂ, ಅದರಿಂದ ಕುಡಿತದಲ್ಲಿಯೂ, ಇತರ ವಿಧವಾದ ದುಂದುಗಾರಿಕೆಯಲ್ಲಿಯೂ ಜನರಿಗೆ ಮನಸ್ಸು ಪ್ರವರ್ತಿಸುವುದೆಂದೂ ಕೆಲವರು ಸಮಾಧಾನ ಹೇಳುವರು. ಈ ಉಪನ್ಯಾಸವು ಅಸಂಬದ್ಧವಾದುದು, ಕುಡುಕತನಕ್ಕೂ ದಾರಿದ್ರ್ಯಕ್ಕೂ ಇರುವ ಸಂಬಂಧವು ಕುಡುಕತನಕ್ಕೂ ಐಶ್ವರ್ಯಕ್ಕೂ ಇರುವುದಿಲ್ಲ. ಸಾಧಾರಣವಾಗಿ ಕುಡಿತದ ಅಭ್ಯಾಸವುಳ್ಳವರೆಲ್ಲರೂ ಕೂಲಿ ಕೆಲಸ ಮಾಡಿ ಅನ್ನವನ್ನು ಕಾಲಕ್ಷೇಪಮಾಡತಕ್ಕವರೇ ಹೊರತು, ನ್ಯಾಯಕವಾಗಿ ಭಾಗ್ಯವಂತರಿಗೆ ಈ ಭಾಗದಲ್ಲಿ ಹಣ ವೆಚ್ಚಮಾಡಲು ಇಷ್ಟವಿರುವುದಿಲ್ಲ.

ಮದ್ಯಪಾನವನ್ನು ಈ ದೇಶದಲ್ಲಿ ತಗ್ಗಿಸುವುದಕ್ಕೆ ಸರ್ಕಾರದವರು ಪ್ರಯತ್ನಿಸಬೇಕೆಂದು ಜನಗಳು ಮೊರೆಯಿಟ್ಟಾಗ ಲೆಲ್ಲಾ ಸರ್ಕಾರದವರು ಆ ಮದ್ಯಪಾನ ನಿರೋಧದಿಂದ ಉಂಟಾಗಬಹುದಾದ ಹಾನಿಗಳನ್ನು ತೋರಿಸಿ, ಅದನ್ನೇ ವೃದ್ಧಿಪಡಿಸಿ ಜನಗಳಿಗೆ ಸಮಾಧಾನ ಹೇಳುವರೇ ಹೊರತು ಜನಗಳ ಅಹವಾಲನ್ನು ಮನಸ್ಸಿಗೆ ತಂದುಕೊಳ್ಳುವದೇ ಇಲ್ಲ. ರಾಜ್ಯದ ಒಟ್ಟು ಉತ್ಪತ್ತಿಯಲ್ಲಿ ಕಾಲುಪಾಲಿನಷ್ಟು ಹೆಚ್ಚಾಗಿ ಸರ್ಕಾರಕ್ಕೆ ಅಬ್ಕಾರಿ ಇಲಾಖೆಯಿಂದಲೇ ಉತ್ಪತ್ತಿಯಾಗುತ್ತಿರುವುದು. ಆದರೆ ಜನಗಳಲ್ಲಿ ಇಂತಹ ದುರ್ಮಾರ್ಗಪ್ರವರ್ತನೆಗೆ ಅವಕಾಶಕೊಟ್ಟು ಅದರಿಂದ ಲಾಭಪಡೆಯುವುದಕ್ಕಿಂತ ಇನ್ನೂ ಎಷ್ಟೋ ಬಗೆಯ ಸನ್ಮಾರ್ಗದಿಂದ ಹಣವನ್ನು ಸಂಪಾದಿಸುವುದಕ್ಕೆ ಸರ್ಕಾರಕ್ಕೆ ಉಪಾಯಗಳಿಲ್ಲದೇ ಇಲ್ಲ. ಅಲ್ಲದೆ ಮದ್ಯಪಾನದ ನಿರೋಧದಿಂದ ಸರ್ಕಾರಕ್ಕೆ ಅಷ್ಟೇನೂ ನಷ್ಟಬರುವಂತೆಯೂ ನಮಗೆ ತೋರುವುದಿಲ್ಲ. ಏಕೆಂದರೆ, ಸರ್ಕಾರದವರು ಮದ್ಯಪಾನವನ್ನು ತಗ್ಗಿಸುವುದಾದರೆ, ಆ ಮಾರ್ಗವಾಗಿ ಜನಗಳು ದುರ್ವ್ಯಯಿಸುತ್ತಿದ್ದ ಹಣವನ್ನು ಉತ್ತಮವಾದ ಬೇರೆ ಯಾವುದಾದರೂ ಮಾರ್ಗದಲ್ಲಿ ವಿನಿಯೋಗಿಸುವರು. ಆದರಿಂದ ದೇಶದ ಸಂಪದಭಿವೃದ್ಧಿಗೆ ಸಹಾಯಕವಾಗುವುದು. ಆಗ ಸರ್ಕಾರದವರು ಬೇರೆ ವಿಧವಾದ ತೆರಿಗೆಗಳನ್ನು ಹೆಚ್ಚಿಸಿ, ಜನರಿಂದ ಹಣವನ್ನು ವಸೂಲ್ಮಾಡುವರು.

ಆದರೆ ಮದ್ಯಪಾನವನ್ನು ಸಂಪೂರ್ಣವಾಗಿ ನಿರೋಧಿಸುವ ವಿಷಯದಲ್ಲಿ ಮೊದಮೊದಲು ಕೆಲಕೆಲವು ತೊಂದರೆಗಳುಂಟಾಗಬಹುದು ಅವುಗಳಲ್ಲಿ ಇಂತಹ ದುರಾಚಾರಗಳನ್ನು ತಪ್ಪಿಸುವುದು ಒಂದು ದೊಡ್ಡ ಸತ್ಕಾರ್ಯವಾದುದರಿಂದ, ಆ ಮಹಾಕಾರ್ಯಪ್ರಯತ್ನಗಳಲ್ಲಿ ಬರುವ ತೊಂದರೆಗಳನ್ನು ಸರ್ಕಾರದವರು ಅಷ್ಟಾಗಿ ಲಕ್ಷ್ಯ ಮಾಡಬಾರದು

ಆದರೆ, ಈ ವಿಧವಾದ ಸಂಸ್ಕಾರಪ್ರಯತ್ನವು ಸರ್ಕಾರದವರ ಪ್ರಯತ್ನದಿಂದಲೇ ಸಾಧ್ಯವೆಂದು ನಾವು ಹೇಳಲಾರೆವು ಈ ಭಾಗದಲ್ಲಿ ಸರ್ಕಾರದವರ ಪ್ರಯತ್ನಕ್ಕಿಂತಲೂ ಜನಗಳ ಮನೋದಾರ್ಢ್ಯವೂ ಸ್ಥಿರಪ್ರಯತ್ನವೂ ಅದರಲ್ಲಿ ಲೋಕೋಪಕಾರಬುದ್ಧಿಯೂ ಅತ್ಯವಶ್ಯವು ಮದ್ಯಪಾನದಿಂದುಂಟಾಗುವ ಹಾನಿಗಳನ್ನು ಅಲ್ಲಲ್ಲಿ ಉಪನ್ಯಾಸಗಳ ಮೂಲಕವಾಗಿ ಜನಗಳಿಗೆ ತಿಳಿಸಿ ಸನ್ಮಾರ್ಗಕ್ಕೆ ತರುವುದು ವಿದ್ಯಾವಂತರ ಕರ್ತವ್ಯವಾಗಿದೆ ಈಗ ನಡೆದುಬರುತ್ತಿರುವ ಸಂಘಸಂಸ್ಕಾರಪ್ರಯತ್ನಗಳಲ್ಲಿ ಮದ್ಯಪಾನ ನಿರೋಧವೆಂಬುದು ಒಂದು ಮುಖ್ಯವಾದ ಭಾಗವಾಗಿದೆ ಸ್ವರಾಜ್ಯ ಸಾಧನೆಗಾಗಿ ಹೋರಾಡುತ್ತಿರುವವರೂ ತಮ್ಮ ಪ್ರಯತ್ನದಲ್ಲಿ ಇದೊಂದು ಶಾಖೆಯನ್ನಾಗಿ ಕೈಕೊಂಡಿರುವರು ಇವೆರಡಕ್ಕಿಂತಲೂ ಹೆಚ್ಚಾಗಿ ಆರೋಗ್ಯಾಭಿವೃದ್ಧಿಯ ಪ್ರಯತ್ನದಲ್ಲಿ ಕೈಯಿಕ್ಕಿರುವ ದೇಶಾಭಿಮಾನಿಗಳು ಇದಕ್ಕೆ ಸಹಕರಿಸುವುದರಲ್ಲಿ ಎಲ್ಲರಿಗಿಂತಲೂ ಮುಂದಾಳುಗಳಾಗಿ ನಿಲ್ಲಬೇಕಾದುದು ಅವಶ್ಯಕವು ಹೀಗೆ ಸರ್ವತೋಮುಖವಾದ ಪ್ರಯತ್ನವು ನಡೆದರೆ, ನಮ್ಮ ದೇಶದಲ್ಲಿ ಈ ದುರಾಚಾರವು ಕಾಲಕ್ರಮದಿಂದ ಸಂಪೂರ್ಣವಾಗಿ ನೀಗಿ ಜನಗಳ ಆರೋಗ್ಯಾಭಿವೃದ್ಧಿಗೂ ದೇಶದ ಸಂಪದಭಿವೃದ್ಧಿಗೂ ಕಾರಣವಾಗುವುದರಲ್ಲಿ ಸಂದೇಹವಿಲ್ಲ (ಆರೋಗ್ಯಚಂದ್ರಿಕೆ)

ವರ್ತಮಾನ ಸಂಗ್ರಹ

ಒಳದೇಶ.

ಕೊಡಗು ಜಮೀನ್ದಾರರ ಸಂಘದ ಆರ್ಗನೈಜರ್ ಮ|| ಬಿದ್ದಂಡ ಕಾರ್ಯಪ್ಪನವರು ಏರ್ಪಾಡುಮಾಡಿದ ಜಿಲ್ಲಾ ಸಾಮಾಜಿಕ ಕಮಿಟಿಯ ಪ್ರೆಸಿಡೆಂಟರು ಮ|| ಪಳಂಗಂಡ ಮುತ್ತಣ್ಣನವರು ತನಗೆ ಅಸೌಖ್ಯವಾಗಿರುವುದರಿಂದ ತನ್ನನ್ನು ಪ್ರೆಸಿಡೆಂಟ್ ಪದದಿಂದ ವಜಾಮಾಡಬೇಕಾಗಿ ಕೇಳಿಕೊಂಡಮೇರೆ ಅವರನ್ನು ವಜಾಮಾಡಿ ಅವರ ಜಾಗೆಗೆ ಮ|| ಕೂತಂಡ ಗಣಪತಿಯವರನ್ನು ಸದರಿ ಕಮಿಟಿಯವರು ನೇಮಿಸಿರುತ್ತಾರೆ.

ಕಳೆದ ತಾರೀಖು ೭ ನೇ ದಿನ ಕಂಡ್ರತಂಡ ಕುಶಾಲಪ್ಪನವರು ವೀರರಾಜೇಂದ್ರಪ್ಯಾಟೆಗೆ ಹೋಗುವ ಸಮಯದಲ್ಲಿ ಕಟ್ಟೆರಮನೆಮುಟಳ ೧೬ ನೇ ಮೈಲುಕಲ್ಲಿನ ಸಮೀಪದಲ್ಲಿ ಅಂದಾಜು ೬೪ ರೂಪಾಯಿ ಕ್ರಯದ ಒಂದು ರೇಷ್ಮೆ ದಟ್ಟಿಯು ಬಿದ್ದು ಸಿಕ್ಕಿದ್ದನ್ನು ಆ ದಿನವೇ ಅವರು ವೀರರಾಜೇಂದ್ರಪ್ಯಾಟೆ ಪೊಲೀಸ್ ಸ್ಟೇಷನ್ನಿಗೆ ಹಾಜರುಪಡಿಸಿರುವುದರಿಂದ ಸದರಿ ಮಾಲನ್ನು ಕಳಕೊಂಡ ಮಾಲಿಕರು ಕೂಡಲೇ ಸ್ಟೇಷನ್ನಿಗೆ ಹೋಗಿ ಹೊಂದಿಕೊಳ್ಳಬೇಕಾಗಿ ಕೋರುತ್ತೇವೆ

ನಮ್ಮ ಕೊಡಗು ಪತ್ರಿಕೆಯ ಚಂದಾದಾರರ ಪೈಕಿ ನಂಬರು ೧ ರಿಂದ ನಂಬರು ೫೧೯ ರವರೆಗಿನ ಚಂದಾದಾರರ ವಾಯಿದೆಯು ಇದೇ ತಾರೀಖು ೩೧-೫-೨೪ ಕ್ಕೆ ಗತಿಸಿಹೋಗುವುದರಿಂದ ಪ್ರಸಹ ೧೯೨೪-೨೫ ನೇ ಸಂವತ್ಸರಕ್ಕೆ (೧-೬-೧೯೨೪ ರಿಂದ ೩೧-೫-೨೫ ರವರೆಗೆ) ಚಂದಾದಾರರಾಗಿರಲು ಬಯಿಸ್ ಇರುವವರು ಇದೇ ತಾರೀಖು ೩೧ ರೊಳಗೆ ತಮ್ಮ ಚಂದಾ ಮೊಬಲಗು ೩-೮-೦ ಯನ್ನು ಕೂಡ್ಲೆ ಮನಿಯಾರ್ಡರ್ ಮೂಲಕ ಕಳುಹಿಸಿಕೊಡಬೇಕಾಗಿ ಕೇಳಿಕೊಳ್ಳುವುದಲ್ಲದೆ 1923-24 ನೇ ಸಂವತ್ಸರಕ್ಕೆ ಬಾಕಿಯಿರುವ ಚಂದಾದಾರರು ತಮ್ಮ ಚಂದಾ ಮೊಬಲಗನ್ನು ಒಡನೆಯೇ ಪಾವತಿ ಮಾಡಿ ಕಂಪೆನಿಯ ಕೆಲಸಕ್ಕೆ ಉತ್ತೇಜನಕೊಡುವರಾಗಿ ನಂಬುತ್ತೇವೆ

ಕೊಡಗು ಸರಕಾರದಿಂದ ಸ್ಕಾಲರ್‌ಷಿಪ್ ಪಡೆದು ಸಬ್ ಅಸಿಸ್ಟೆಂಟ್ ಸರ್ಜನ್ ಕೆಲಸಕ್ಕೆ ಓದಲಿಕ್ಕೆ ಹೋಗಿದ್ದ ಮ|| ಅಜ್ಜಮಾಡ ಕಾಳಯ್ಯನವರೂ ಮತ್ತು ಸುಬ್ರಮಣ್ಯಂ ಎಂಬುವರೂ ಸಹ ಪಾಸಾಗಿ ಬಂದಿದ್ದಾರೆ

ಮ|| ರಾಜಶ್ರೀ ಪಂದಿಕಾತ್ತಿರ ಲಿಂಗಪ್ಪನವರು ಕೋ ಆಪರೇಟಿವ್ ಇನ್ಸ್‌ಪೆಕ್ಟರಾಗಿ ನೇಮಿಸಲ್ಪಟ್ಟು ಕೆಲಸಕ್ಕೆ ಸೇರಿರುತ್ತಾರೆ

ಮ|| ರಾಜಶ್ರೀ ರಾವ್ ಸಾಹೇಬ್ ಕೋಡಿ ಮಣಿಯಂಡ ಸುಬ್ಬಯ್ಯನವರು ಪ್ರಸಹ ಮೂರು ವರ್ಷಕ್ಕೆ ಪಬ್ಲಿಕ್ ಪ್ರೋಸಿಕ್ಯೂಟರ್ ಕೆಲಸಕ್ಕೆ ನಿಯಮಿಸಲ್ಪಟ್ಟಿರುತ್ತಾರೆ.

ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರುತನಕ್ಕೆ ಈ ಮೊದಲೇ ಮೆಂಬರಾಗಿದ್ದವರನ್ನೇ ೧೯೨೫ ನೇ ಇಸವಿ ಮಾರ್ಚ್ ಆಖೈರ್‌ವರೆಗೆ ಮೆಂಬರುಗಳಾಗಿ ನೇಮಿಸಲ್ಪಟ್ಟಿದ್ದಾರೆ.

ಕೊಡಗಿನಲ್ಲಿ ಕಮೀಷನರನ್ನು ಅವರ ಗೈರುಹಾಜರಿಯಲ್ಲಿ ಟ್ರೆಜರಿ ಅಸಿಸ್ಟೆಂಟ್ ಕಮೀಷನರನ್ನು ಸ್ಟ್ಯಾಂಪು ಸೂಪರಿಂಟೆಂಡೆಂಟರಾಗಿ ಚೀಫ್ ಕಮೀಷನರ್ ಸಾಹೇಬರು ನೇಮಿಸಿದ್ದಾರೆ

ತಾರೀಖು ೧೯-೬-೨೨ ರ ನಂ ೫೮ ನೇ ನೋಟಿಫಿಕೇಷನ್ ಮೇರೆ ಅಸಿಸ್ಟೆಂಟ್ ಕಮೀಷನರಿಗೆ ಕೊಟ್ಟಿದ್ದ ಪವರನ್ನು ಟ್ರೆಜರಿ ಅಸಿಸ್ಟೆಂಟ್ ಕಮೀಷನರಿಗೆ ಕೊಟ್ಟಿದ್ದಾರೆ

ಪೊನ್ನಂಪೇಟೆ ನಾಡು ಕಿರಗೂರು ಗ್ರಾಮದಲ್ಲಿ ಒಬ್ಬ ಹೊಲೆಯನು ತನ್ನ ಹೆಂಡತಿಯನ್ನು ಹೊಡೆದು ಕೊಂದ ಸೆಷನ್ಸ್ ಕೇಸ್ ವಿಚಾರ ನಡೆದು ತಾ ೯-೫-೨೪ ರಲ್ಲಿ ಕರಿಣ ಸಜಾ ಶಿಕ್ಷೆಗೆ ಗುರಿಯಾಗಿರುತ್ತಾನೆ ವಿವರವನ್ನು ಹಿಂದಿನಿಂದ ಹಾಕುತ್ತೇವೆ

೧-೫-೨೪ ರಲ್ಲಿ ಸಿದ್ದಾಪುರದಪೇಟೆ ಲಬ್ಬೆ ಷಾಪಿನ ಮುಂದುಗಡೆ ರಸ್ತೆಗೆ ಒಂದು ಬಲವಾದ ಮಿಂಚು ದೊಡ್ಡ ಉರಿಯುವ ಕೆಂಡದಂತೆ ರಸ್ತೆಗೆ ಬಿದ್ದು ಮೂರು ತುಂಡಾಗಿ ಒಂದು ತುಂಡು ರಸ್ತೆಗಾಗಿಯೂ, ಇನ್ನೊಂದು ಸಮೀಪದಲ್ಲಿದ್ದ ಒಂದು ಮನೆಯ ಗೋಡೆಗೂ, ಮೂರನೇದು ಸಮೀಪದಲ್ಲಿದ್ದ ಬಾಳೆ ಗಿಡಗಳಿಗೂ ತಗಲಿ ಬಂದು ಗಿಡಕ್ಕೆ ಬೆಂಕಿ ಸಹ ಹತ್ತಿಕೊಂಡಿತು. ಆದರೂ ಮನುಷ್ಯರಿಗಾಗಲೀ ಮೃಗಗಳಿಗಾಗಲೀ ಅಪಾಯವಾಗಲಿಲ್ಲ

ಟೆರಿಟೋರಿಯಲ್ ಸೈನ್ಯದಲ್ಲಿ ತಯಾರಿಗೆ ಬಂದಿರುವ ಜನರನ್ನು ತಾ|| 15-5-24 ರಲ್ಲಿ ಬಿಡುಗಡೆ ಮಾಡಿದ್ದಾರೆ ತಾ|| 13-5-24 ರಲ್ಲಿ ಮಿಲಿಟರಿ ಸ್ಪೋರ್ಟ್ಸ್ ನಡೆಯಿತು ಮಿಲಿಟರಿಯವರು ತಮ್ಮ ತಮ್ಮ ಊರಿಗೆ ಹೊರಟುಹೋದುದರಿಂದ ಮಡಿಕೇರಿ ಪಟ್ಟಣದಲ್ಲಿ ಓಡಾಟ ಕಡಿಮೆಯಾದಂತೆ ಕಾಣುತ್ತಿ

ಧಾರವಾಡದ ರಾಷ್ಟ್ರೀಯ ವಿದ್ಯಾಶಾಲೆಯ ಉಪಾಧ್ಯಾಯರಾಗಿರುವ ಶ್ರೀಧರ ಶಿವರಾಮ ಖಾನೋಳ್ಕರ್ ಎಂಬವರು ತಾ|| ೧೦-೫-೨೪ ರಲ್ಲಿ ಮಡಿಕೇರಿಗೆ ಬಂದು ತಮ್ಮ ಶಾಲೆಗೆ ಕೆಲವುಮಟ್ಟಿಗೆ ದ್ರವ್ಯಸಹಾಯವನ್ನು ತಮ್ಮ ಶಾಲೆಯಿಂದ ಹೊರಡಿಸುವ "ಸ್ವಧರ್ಮ" ಎಂಬ ಮಾಸಪತ್ರಿಕೆಗೆ ಕೆಲವು ಚಂದಾದಾರರನ್ನು ಸೇರಿಸಿಕೊಂಡು ಹೋದರು

ಜಮೀನ್ದಾರರ ಸಂಘದ ಎಗ್ಸಿಕ್ಯೂಟಿವ್ ಕಮಿಟಿಯವರಿಂದ ಅಮ್ಮತ್ತಿ ನ್ಯಾಷನಲ್ ಸ್ಕೂಲನ್ನು ನಡಿಸಲಿಕ್ಕೆ ಒಂದು ಕಮಿಟಿಯು ನೇಮಕವಾಗಿದೆ ಈ ಕಮಿಟಿಯವರ ಮೀಟಿಂಗು ಅಮ್ಮತ್ತಿಯಲ್ಲಿ ತಾ|| ೨೨-೫-೨೪ ರಲ್ಲಿ ನಡೆಯುತ್ತೆ.

ನಾಪೋಕ್ಲುನಾಡು ಸೂರ್ಲಬ್ಬಿ... ಕಿರಾಚಾರದ ಒಬ್ಬಳು ಹುಡುಗಿಯು ಕೊಡಗಿನ ಮದುವೆಯಾಗಿದೆಯೆಂತ ಒಂದು ಬಾತ್ಮಿ.

ತಾ|| ೭-೫-೨೪ ರಲ್ಲಿ ನಡೆದ "ಕೊಡಗು" ಕಂಪೆನಿಯ ಜನರಲ್ ಮೀಟಿಂಗಿನಲ್ಲಿ ಡೈರೆಕ್ಟರುಗಳ ಸಂಖ್ಯೆಯ ೩ ನೇ ಒಂದು ಭಾಗದಷ್ಟು ಕೆಲಸದಿಂದ ಬಿಡುಗಡೆಹೊಂದಿ ಹೊಸ ಚುನಾವಣೆ ನಡೆಯಿತು ೩ ನೇ ಒಂದು ಭಾಗದವರು ಬಿಡುಗಡೆಹೊಂದಲಿಕ್ಕೆ ಚೀಟಿ ತೆಗೆದು ಯಾರ ಹೆಸರು ಬರುತ್ತೋ ಅಂಥವರು ಬಿಡುಗಡೆಹೊಂದಬೇಕೆಂತ ಇರುವ ಕಾನೂನುಮೇರೆ ಚೀಟಿ ತೆಗೆದು ಮ|| ರಾ|| ಬ|| ಕೆ ಕುಟ್ಟಯ್ಯನವರು, ಮ|| ರಾ|| ಬ|| ಕೆ ಅಪ್ಪಯ್ಯನವರು, ಮ|| ಅಪ್ಪಾರಂಡ ಚೆಂಗಪ್ಪನವರು ಮ|| ಮನಿಯಪ್ಪಂಡ ಚಿಣ್ಣಪ್ಪನವರು ಮತ್ತು ಮ|| ಪಿ ಟಿ ಕುಶಾಲಪ್ಪನವರು ಸಹ ಬಿಡುಗಡೆ ಹೊಂದಿದರು ಇವರ ಪೈಕಿ ಮ|| ಅಪ್ಪಾರಂಡ ಚೆಂಗಪ್ಪನವರ ಬದಲಿಗೆ ಮ|| ಕೇಳಪ್ಪಂಡ ಅಚ್ಚಯ್ಯನವರು ಆರಿಸಲ್ಪಟ್ಟಿದ್ದಲ್ಲದೆ ಉಳಿದ ನಾಲ್ಕು ಜನರು ಪುನಹ ಆರಿಸಲ್ಪಟ್ಟರು.

ವೀರರಾಜಪೇಟೆ ಮತ್ತು ಮಡಿಕೇರಿ ಹೈಸ್ಕೂಲುಗಳು ರಜ ತೀರಿ ತಾ|| ೧೯-೫-೨೪ ರಲ್ಲಿ ತೆರೆಯಲ್ಪಡುತ್ತವೆ.

ಚಿತ್ರದುರ್ಗದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಸ್ವಾಮಿಗಳು ತಾ|| ೬-೫-೨೪ ರಿಂದ ದಾವಣಗೆರೆಯಲ್ಲಿ ಇದ್ದಾರೆ ಅವರ ಕಾಗದಪತ್ರಗಳನ್ನು ದಾವಣಗೆರೆ ವಿಳಾಸಕ್ಕೆ ಬರೆಯಬೇಕೆಂತ ಅವರ ಶಿಷ್ಯವರ್ಗದವರಿಗೆ ತಿಳಿಸುತ್ತಾರೆ

ತಾ|| ೧೧-೫-೨೪ ರಲ್ಲಿ ಮಡಿಕೇರಿಯಲ್ಲಿ ಜಿಮ್‌ಖಾನಾ ಕ್ಲಬ್ಬಿನವರಿಗೂ ಯೂನಿಯನ್‌ಬ್ರಿಡ್ಜ್ ಎಂಬ ಟೀಮಿನವರಿಗೂ ಕ್ರಿಕೆಟ್ ಮೇಚ್ ಒಂದು ನಡೆದು ಜಿಮ್‌ಖಾನಾ ಕ್ಲಬ್ಬಿನವರು ಜಯಹೊಂದಿದ್ದಾರೆ

ಕೊಡ್ಲಿಪ್ಯಾಟೆ ಸಮೀಪದಲ್ಲಿರುವ ಕಟ್ಟೆಪುರದಲ್ಲಿ ವಾಂತಿಭೇದಿ ರೋಗವು ಜೋರಾಗಿ ಅಂದಾಜು ನಾಲ್ಕೈದು ಜನರು ಮೃತಪಟ್ಟುಹೋಗಿರುವರೆಂದು ವರದಿ ಇದೆ.

ಕೊಡಗು ಹುಜೂರ್ ಚೀಫ್ ಕಮೀಷನರವರು ಈ ತಾರೀಖು ೧೫ ರಲ್ಲಿ ಮಡಿಕೇರಿಗೆ ಬಂದಿರುವರು.

ಮಡಿಕೇರಿ ಆಸ್ಪತ್ರೆಯಲ್ಲಿ ಸಬ್ ಅಸಿಸ್ಟೆಂಟ್ ಸರ್ಜನಾಗಿದ್ದ ಮ|| ಕೋದಂಡ ... ಪ್ಪನವರನ್ನು ಇದೇ ತಾರೀಖು ೧೧ ರಲ್ಲಿ ... ಕಾಯಿಲೆಯ ದೆಸೆಯಿಂದ ಕಳುಹಿಸಿರುವರು

ಹಿಂದುದೇಶ.

ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತು ಕುಂದಾಪುರದಲ್ಲಿ 8 ನೇ ತಾರೀಖಿನಲ್ಲಿ ಶ್ರೀಯುತ ಗಂಗಾಧರರಾಯರು ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ನಡೆಯಿತು ದಕ್ಷಿಣ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಖಾದಿಯ ಉದ್ಯೋಗಕ್ಕೆ ತಯಾರಾಗಲಿಕ್ಕೆ ಅನುಕೂಲವೆಂತ ಮುಖ್ಯವಾಗಿ ಹೇಳಿದರು

ಸ್ವಾಮಿ ಶ್ರದ್ಧಾನಂದರವರು ಬೆಂಗಳೂರಿಗೆ ಮೈಸೂರಿಗೆ ಹೋಗಿ ಮಂಗಳೂರಿಗೆ ಬಂದಿದ್ದಾರೆ ಬೆಂಗಳೂರಿನ ಉಪನ್ಯಾಸಗಳಲ್ಲಿ ಹೇಳಿದ್ದೇನೆಂದರೆ—ಹಿಂದುಗಳು ಬಹಳ ಕ್ಷೀಣಗತಿಯನ್ನು ಹೊಂದುತ್ತಿದ್ದಾರೆ ಒಂದೊಂದು ಖಾನೆಷುಮಾರಿಯೊಳಗೆ ಶೇಕಡ 5 ರಷ್ಟು ಸಂಖ್ಯೆ ಕಡಿಮೆಯಾಗುತ್ತಾ ಬಂದರೆ 420 ವರ್ಷಗಳಲ್ಲಿ ಹಿಂದೂಗಳೇ ಇಲ್ಲದಂತಾಗುತ್ತೆ ಆದ್ದರಿಂದ ಹಿಂದೂ ಸಮುದ್ಧಾರಕ್ಕೆ ಎಲ್ಲರಿಗೂ ವ... ಕೊಡಬೇಕು ಹಿಂದೂ ಮದುವೆಯಲ್ಲಿ ಬಹಳ ಖರ್ಚಾಗುತ್ತೆ ಮುಸಲ್ಮಾನರಲ್ಲಿ ಖಾಜಿಗೆ 1¼ ರೂ ಕೊಟ್ಟರೆ ತೀರಿತು ಹಿಂದೂಗಳಲ್ಲಿಯೂ ಪುರೋಹಿತಕ್ಕೆ ಕೊಡಬೇಕಾದ ಮೊಬಲಗನ್ನು 11 ರೂ ಗೆ ಮಿತಿಮಾಡಿದರೆ ಉತ್ತಮವೆಂತ ಹೇಳಿದರು ವಿಧವಾವಿವಾಹ ಆಗಲೇಬೇಕು ಡೆಲ್ಲಿಯಲ್ಲಿ ದಿವಸಕ್ಕೆ ಎರಡು ಯಾ ಮೂರು ವಿಧವೆಯರು ಮುಸಲ್ಮಾನರ ಮತ್ತೆಯ ಮರೆ ಹೋಗುತ್ತಾರೆ ಎಂತಲೂ ... ನಮರುಗುವಂತೆ ಹೇಳಿದರು

ಬೊಂಬಾಯಿ ಮುನಿಸಿಪಾಲಿಟಿಯ ಅಧ್ಯಕ್ಷನಿಗೆ ಪ್ರೆಸಿಡೆಂಟ್ ಎಂತ ಇರುವ ಹೆಸರನ್ನು ತೆಗೆದು ಮೇಯರ್ ಎಂಬ ಹೆಸರನ್ನು ಕೊಡಬೇಕೆಂತ ಠರಾವು ವಾದಾ ನಡೆದು ಪಾಸಾಯಿತು

ವೈಕಂ ಸತ್ಯಾಗ್ರಹ ನಡೆಯುತ್ತಲೇ ಇದೆ ನಾಯರ್ ಸಮಾಜದ ಸಭೆಯಿಂದ ಈ ಚಳವಳಿಕ್ಕೆ ಸಹಾನುಭೂತಿ ದೊರೆತಿದೆ

ಲಾಹೋರಿನಲ್ಲಿ ಟಿಕೆಟ್ ಮಾರುವ ಗುಮಾಸ್ತರಿಬ್ಬರು ರೈಲ್ವೇ ಟಿಕೆಟುಗಳನ್ನು ಫೋರ್ಜರಿಮಾಡಿ ಮಾರಿ ತುಂಬಾ ಹಣಸಂಪಾದನೆ ಮಾಡಿದರು ಅವರನ್ನು ಹಿಡಿದು ವಿಚಾರ ನಡಿಸಿ ಆರಾರು ವರ್ಷ ಸಜಾಶಿಕ್ಷೆಗೆ ಗುರಿಮಾಡಲ್ಪಟ್ಟಿದ್ದಾರೆ

ಪೋರ್ಚುಗೀಸ್ ದೇಶದಿಂದ ಜಪಾನಿನವರೆಗೆ ಸುತ್ತಲು ಹೊರಟಿದ್ದ ಆಕಾಶವಿಮಾನವು ಜೋಧಪುರ ಸಂಸ್ಥಾನದಲ್ಲಿ ಮುರಿದುಬಿದ್ದಿದೆ

"ವಂದೇಮಾತರಂ" ಎಂಬ ಲಾಹೋರಿನ ಪತ್ರಿಕೆಯ ಚಾಲಾಕರಮೇಲೆ ಸಿವಿಲ್ ಕೋರ್ಟಿನಲ್ಲಿ 10000 ರೂ. ಡಿಕ್ರಿಯಾಗಿದೆ ಶ್ರೀಯುತ ಲಜಪತರಾಯರು ಇಂಗ್ಲೆಂಡಿನಿಂದ ಈ ಪತ್ರಿಕೆಯ ಕಷ್ಟನಿವಾರಣೆಗೆ ಸಹಾಯಮಾಡಬೇಕೆಂತ ಟೆಲಿಗ್ರಾಮ್ ಕಳುಹಿಸಿರುತ್ತಾರೆ

ಮಹಾತ್ಮಾ ಗಾಂಧಿಯವರು ವೈಕಂ ಸತ್ಯಾಗ್ರಹ ನಡಿಸುವವರಿಗೆ ಎಚ್ಚರಕೊಟ್ಟಿರುತ್ತಾರೆ ಹಿಂದೂಗಳಲ್ಲದವರಿಂದ ಸಹಾಯ ತೆಗೆದುಕೊಳ್ಳಕೂಡದೆಂತಲೂ ಅಸ್ಪೃಶ್ಯ... ದ್ಧಾರಕ್ಕೆ ವಿರೋಧಿಸುವ ಹಿಂದೂಗಳನ್ನು ಬೆದರಿಸಿ ಕಾರ್ಯಕ್ಕೆ ಜಯವನ್ನು ಪಡೆಯಲು ಪ್ರಯತ್ನಿಸಬಾರದೆಂತಲೂ ಬರೆದಿದ್ದಾರೆ

ಹಿಂದುಸ್ಥಾನದ ಸರಕಾರ ಇಲಾಖೆಗಳಿಗೆ ಬೇಕಾ... ಸಾಮಾನುಗಳನ್ನು ದೊರೆಯುವಂಥಾದ್ದನ್ನೆಲ್ಲಾ ಹಿಂದುಸ್ಥಾನದಲ್ಲೇ ಕೊಳ್ಳಬೇಕಂತ ರೂಲ್ ಮಾಡಿರುತ್ತಾರೆ ಇದರಿಂ... ಹಿಂದುಸ್ಥಾನದ ಕೈಗಾರಿಕೆಗಳಿಗೆ ಸಹಾಯ ದೊರೆಯ... ಹುದು

ವೆಂಬ್ಲಿಯಲ್ಲಿ ನಡೆಯುವ ಸಾಮ್ರಾಜ್ಯದ ಪ್ರದರ್ಶನ... ಹಿಂದುಸ್ಥಾನದ ಪೋಸ್ಟಾಫೀಸುಗಳ ಕೆಲಸವನ್ನು ಸಿನಿ... ಮೂಲಕ ಪ್ರದರ್ಶಿಸುತ್ತಾರೆ ಅದೇ ನೋಟವನ್ನು ಸಿ... ದಲ್ಲೂ ತೋರಿಸಲಿಕ್ಕೆ ಏರ್ಪಾಡು ಮಾಡುತ್ತಿದ್ದಾರೆ

ಮದ್ರಾಸಿನಲ್ಲಿ ಗ್ರಾಮಪಂಚಾಯತಿ ಆಕ್ಟ್ ವ... ಗ್ರಾಮಪಂಚಾಯತಿ ಕೋರ್ಟುಗಳ ಆಕ್ಟ್ ಎಂತ ಎ... ಆಕ್ಟುಗಳಿವೆ. ಈಗ ಎರಡು ಪಂಚಾಯತಿಗಳ ಕೆಲಸ... ಒಂದೇ ಕೂಟದವರು ಮಾಡುವಂತೆ ಕಾನೂನು ಮಾ... ಹೊಸ ಕಾನೂನು ಮಾಡುವ ಏರ್ಪಾಡು ನಡೆಯುತ್ತಿ...

ನೀಲಗಿರಿ ಜಿಲ್ಲೆಯಲ್ಲಿ ಬಡಗ ಎಂಬ ಕನ್ನಡಿಗ... ಕುಡುಕತನದಿಂದ ಬಹಳ ಕ್ಷೀಣಗತಿಯನ್ನು ಹೊಂದಿ... ಆ ಜನರಲ್ಲಿ ಕೆಲವು ಯುವಕರು ತಮ್ಮ ಹೀನಸ್ಥಿತಿ... ತಪ್ಪಿಸಲಿಕ್ಕೆ ಬಹಳ ಚಳವಳವೆಬ್ಬಿಸಿದ್ದರಿಂದ ಸರಕಾ... ಈ ಜನರಿಗೆ ಪರದೇಶೀ ನಿಷಾಪದಾರ್ಥಗಳಾಗಲೀ ... ನಿಷಾಪದಾರ್ಥಗಳಾಗಲೀ ಮಾರಬಾರದೆಂತ ... ಮಾಡಿರುತ್ತಾರೆ

ಒಟ್ಟು ಇಂಡಿಯಾದ ಸರಕಾರ ರೈಲ್ವೇಗಳಿಂ... ಆ 28 ಕ್ಕೆ ಆಖೈರ್ ಆದ ವಾರದಲ್ಲಿ ಸುಮಾರು ... ಕೋಟಿ ರೂಪಾಯಿ ಉತ್ಪತ್ತಿಯಾಗಿದೆ ಮಾರ್ಚ್... ರಾದ ಒಂದು ವರ್ಷದಲ್ಲಿ ಈ ರೈಲ್‌ಗಳ ಉತ್ಪತ್ತಿ... ಕೋಟಿ ರೂಪಾಯಿ ಆಗಿದೆ

ಕೊಡಗು ಕೌನ್ಸಿಲು ಮೀಟಿಂಗು.

ಮೈಸೂರು ಸಂಜರಾಜಬಹದ್ದೂರು ಛತ್ರದಲ್ಲಿ ಇದ್ದವರೊಬ್ಬರು ತನ್ನ ಅಣ್ಣನಮಗನು ಮೈದಾನದಲ್ಲಿ ಆಡಬಂದವನನ್ನು ಹೊಡೆಯುವಾಗ ಆ ಹುಡುಗನ ತಾಯಿಯು ತಡೆದಳು. ತಡೆಯುವಾಗ ಅವಳಿಗೆ ಕಬ್ಬಿಣದ ಸಲಾಕೆಯಿಂದ ಹೊಡೆದು ಕೊಂದನು. ಅಷ್ಟರಲ್ಲೂ ತೃಪ್ತಿಯಾಗದೆ ಹುಡುಗನನ್ನು ಸಹ ಅದೇ ಸಲಾಕೆಯಿಂದ ಹೊಡೆದು ಕೊಂದನು. ಇವನನ್ನು ದಸ್ತಗಿರಿ ಮಾಡಿದ್ದಾರೆ.

ಭೋಪಾಲ್ ಸಂಸ್ಥಾನದಲ್ಲಿ ಮುಸಲ್ಮಾನ್ ಜಾತಿಗೆ ಸೇರಿದ ಹಿಂದೂಗಳು ಪುನಃ ಹಿಂದೂಮತಕ್ಕೆ ಸೇರಿಕೊಂಡರೆ ಕ್ರಿಮಿನಲ್ ಶಿಕ್ಷೆಗೆ ಗುರಿಯಾಗುತ್ತಾರೆಂತ ಇರುವ ಕಾನೂನಿಗೆ "ಹಿಂದೂಸಭೆ" ಯವರು ವಿರೋಧಿಸಿರುತ್ತಾರೆ.

ಸಿಂಗಾರವೇಲುಚೆಟ್ಟಿ ಮುಂತಾದವರಮೇಲೆ ಚಕ್ರವರ್ತಿಯವರಮೇಲೆ ಯುದ್ಧದ ಏರ್ಪಾಡುಮಾಡುವ ತಕ್ಕರಾರಿನ ಮೊಕದ್ದಮ್ಮೆ ನಡೆಯುತ್ತಿದ್ದದ್ದು ತೀರಿತು. 16 ನೇ ತಾರೀಕಿನಲ್ಲಿ ಜಡ್ಜ್‌ಮೆಂಟ್ ಆಗುತ್ತೆ.

ಈ ತಿಂಗಳಲ್ಲಿ ನಡೆಯುವ ಲೆಜಿಸ್ಲೇಟಿವ್ ಎಸೆಂಬ್ಲಿ ಮೀಟಿಂಗಿನಲ್ಲಿ ಸ್ವರಾಜ್ಯಪಕ್ಷದವರು ಈ ಕೆಳಗಿನ ಠರಾವುಗಳನ್ನು ತರುತ್ತಾರೆ. ಇಂಡಿಯಾದೇಶದ ಎಲ್ಲಾ ಪ್ರಾಂತ್ಯಗಳಲ್ಲೂ ನಿಷಾ ಪದಾರ್ಥಗಳ ತಯಾರಿಯನ್ನೂ ಮಾರುವದನ್ನೂ ನಿಲ್ಲಿಸಿಬಿಡಬೇಕು (2) ಬಡತನವನ್ನು ಹೋಗಲಾಡಿಸಲಿಕ್ಕಾಗಿ ಎಲ್ಲಾ ಪ್ರಾಂತೀಯ ಸರಕಾರದವರೂ ಕೈನೂಲು ಕೈಮಗ್ಗವನ್ನು ಸ್ಥಾಪಿಸಿಕೊಡಬೇಕು. (3) ಸರಕಾರಿ ಇಲಾಖೆಗಳಲ್ಲಿ ಬಟ್ಟೆ ಅವಶ್ಯ ಬೀಳುವಾಗಲೆಲ್ಲಾ ಕೈನೂಲಿನಿಂದ ತಯಾರಾದ ಖದ್ದರ್‌ಬಟ್ಟೆಯನ್ನೇ ಕೊಂಡುಕೊಳ್ಳಬೇಕು. (4) ಬ್ರಿಟಿಷ್ ಸಾಮ್ರಾಜ್ಯದಲ್ಲಿ ಹಿಂದುಸ್ಥಾನದವರಿಗೆ ಅವಮಾನವಾಗುತ್ತಿರುವದರಿಂದ ಸಾಧ್ಯವಿರುವಲ್ಲೆಲ್ಲಾ ಹಿಂದುಸ್ಥಾನದಲ್ಲಿ ತಯಾರಾಗುವ ವಸ್ತುಗಳನ್ನೇ ಸರಕಾರದವರು ಉಪಯೋಗಿಸಬೇಕೇ ಹೊರತು ಸಾಮ್ರಾಜ್ಯದ ಇತರ ಯಾವ ಭಾಗದ್ದೂ ಉಪಯೋಗಿಸಕೂಡದು.

ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಸೈನ್ಯದ ಸಂಬಂಧ ಮಂಜೂರಾದ ಠರಾವನ್ನು ಜಾರಿಗೆ ತರುವ ವಿಷಯದಲ್ಲಿ ಒಂದು ಕಮಿಟಿಯು ನೇಮಕವಾಗಿದೆ. ಆ ಕಮಿಟಿಯು ಏನೇನು ವಿಷಯಗಳನ್ನು ವಿಚಾರಿಸುತ್ತದೆಂದರೆ—ಟೆರಿಟೋರಿಯಲ್ ಸೈನ್ಯದ ಪ್ರಯೋಜನವನ್ನೂ, ಶಕ್ತಿಯನ್ನೂ ಹೆಚ್ಚಿಸುವ ಬಗೆ ಹೇಗೆ? ಟೆರಿಟೋರಿಯಲ್ ಸೈನ್ಯವನ್ನು ಹೇಗೆ ಬಡಾಯಿಸಬಹುದು? ಆಕ್ಸಿಲಿಯರಿ ಫೋರ್ಸ್ ಮುಂತಾದ ಸೈನ್ಯದಲ್ಲಿ ಜನಾಂಗಭೇದವನ್ನು ತೆಗೆದುಹಾಕುವ ಬಗೆ ಹೇಗೆ?

ಜಪಾನ್ ಜನರನ್ನು ಅಮೇರಿಕಾಕ್ಕೆ ಹೋಗಲಿಕ್ಕೆ ಬಿಡದಿರುವ ಸಂಬಂಧದಲ್ಲಿ ಮೌಲಾನಾ ಮಹಮ್ಮದಲ್ಲಿಯವರ ಅಭಿಪ್ರಾಯವೇನೆಂತ ಜಪಾನಿನ ಪ್ರಸಿದ್ಧ ವರ್ತಮಾನಪತ್ರದ ಸಂಪಾದಕರು ತಂತಿಮೂಲಕ ಕೇಳಿದ್ದಕ್ಕೆ ಅಸ್ಯಬಾಡದ ಜನರೆಲ್ಲರೂ ಒಗ್ಗಟ್ಟಾಗಿ ಒಂದು ಸಮಾಜವನ್ನು ಮಾಡಿಕೊಂಡು ಪಾಶ್ಚಿಮಾತ್ಯರಿಂದ ಆಗುವ ಕೆಡಕುಗಳನ್ನೆಲ್ಲಾ ಹೋಗಲಾಡಿಸಲು ಪ್ರಯತ್ನಿಸಬೇಕೆಂತ ಪತ್ಯುರೆ ಅಭಿಪ್ರಾಯವನ್ನು ಕೊಟ್ಟಿರುತ್ತಾರೆ.

ಸ್ವೀಡನ್ ದೇಶದ ಬೆಂಕಿಕಡ್ಡಿ ತಯಾರುಮಾಡುವ ಕಾರ್ಖಾನೆಯವರು ಬೊಂಬಾಯಿಯಲ್ಲಿಯೂ ಕಲ್ಕತ್ತಾದಲ್ಲಿಯೂ ಬೆಂಕಿಕಡ್ಡಿ ಕಾರ್ಖಾನೆಗಳನ್ನು ಸ್ಥಾಪಿಸುತ್ತಿದ್ದಾರೆ. ಶೀಘ್ರದಲ್ಲೇ ಕೆಲಸ ಪ್ರಾರಂಭವಾಗುತ್ತೆ.

ಬೊಂಬಾಯಿಯಿಂದ ಸಿಮ್ಲಾಕ್ಕೆ ಟಪ್ಪಾಲು ತೆಗೆದುಕೊಂಡು ಹೋಗುತ್ತಿದ್ದ ರೈಲಿನ ಟಪ್ಪಾಲುಗಾಡಿಗೆ ಬೆಂಕಿ ಹತ್ತಿ ಸುಟ್ಟುಹೋಯಿತು. ಇಂಜಿನಿನಿಂದ ಹಾರಿದ ಕಿಡಿಯಿಂದ ಸುಟ್ಟಿರಬೇಕೆಂತಲೂ ಊಹನೆ ಮಾಡಲ್ಪಟ್ಟಿವೆ.

ವಿದೇಶ.

ಚೀನಾ ದೇಶದ ದಕ್ಷಿಣ ಸಮುದ್ರಗಳಲ್ಲಿ ನೌಕಾ ಕಳ್ಳರ ಹಾವಳಿ ಹೆಚ್ಚಿತ್ತು. "ಟೂಯಾಲೀ" ಎಂಬ ಹಡಗನ್ನು ಮುತ್ತಿದ ಕಳ್ಳರಲ್ಲಿ ಕೆಲವರನ್ನು ಗುಂಡು ಹೊಡೆದು ಕೊಂದರು.

ಬರುವ ವಾರದಲ್ಲಿ ಫ್ರೆಂಚರ ಮಂತ್ರಿಯವರೂ, ಬ್ರಿಟಿಷ್ ಮಂತ್ರಿಯವರೂ ಜರ್ಮನಿ ಸ್ಥಿತಿಯ ವಿಷಯದಲ್ಲಿ ಲಂಡನಿನಲ್ಲಿ ಭೇಟಿಯಾಗುತ್ತಾರೆ.

ಮಿ॥ ಚರ್ಚ್‌ಹಿಲ್ ಎಂಬ ಇಂಗ್ಲಿಷ್ ಪ್ರಮುಖರು ಮೊನ್ನೆ ಒಂದು ಸಭೆಯಲ್ಲಿ ಹೇಳಿರುವದೇನೆಂದರೆ—ಕೆಲವು ತಿಂಗಳುಗಳೊಳಗೆ ಪುನಃ ಇಂಗ್ಲಿಷ್ ಪಾರ್ಲಿಮೆಂಟಿಗೆ ಚುನಾವಣೆಯಾಗುವುದು ಖಂಡಿತ. ಅವರೊಳಗೆ ಕನ್ಸರ್ವೇಟಿವ್ ಪಂಗಡದವರು ಬಲವಾದ ಕೆಲಸಮಾಡಿ ಸೋಶಿಯಲಿಸ್ಟ್ ಮತ ಕೂಲಿಕಾರರ ಸರಕಾರವನ್ನು ಹೇಗಾದರೂ ತಪ್ಪಿಸಬೇಕೆಂತ ಹೇಳಿದರು.

ಮಿಸೆಸ್ ಫಿಲಿಪ್ಸ್ ಎಂಬ ಪಾರ್ಲಿಮೆಂಟಿನ ಮಹಿಳಾ ಮೆಂಬರು ತನ್ನ ಸ್ಥಳವನ್ನು ಬಿಟ್ಟುಕೊಟ್ಟು ಆ ಸ್ಥಳಕ್ಕೆ ತನ್ನ ಗಂಡನ ಚುನಾವಣೆಯಾಗಲು ಏರ್ಪಾಡು ನಡೆಯುತ್ತಿದೆಯಂತೆ.

ಅಫ್ಘಾನಿನ ಮಂತ್ರಿಮಂಡಲಿಯಲ್ಲಿ ಬದಲಾವಣೆ ಯಾಗುತ್ತಿದೆಯಾಗಿಯೂ ಆದರೆ ಈ ಬದಲಾವಣೆಯಿಂದ ಅಫ್ಘಾನಿಗೂ ಬ್ರಿಟಿಷರಿಗೂ ಇರುವ ಸ್ನೇಹಕ್ಕೆ ಭಂಗ ಬರುವಂತಿಲ್ಲವೆಂತ ವರ್ತಮಾನ ಬಂದಿದೆ.

ಸರ್ ಸಿ. ಶಂಕರನಾಯರಿಗೂ ಒಡ್ವೈಯವರಿಗೂ ನಡೆಯುತ್ತಿರುವ ಕೇಸಿನಲ್ಲಿ ಸಾಕ್ಷಿ ವಿಚಾರಣೆಗಳು ಆಗುತ್ತಿವೆ.

ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿರುವ ಕೂಲಿಕಾರರ ಪಂಗಡದವರು "ಕಾಮನ್‌ವೆಲ್ತ್ ಗ್ರೂಪ್" ಎಂಬ ಕಮಿಟಿಯನ್ನು ಏರ್ಪಡಿಸಿಕೊಂಡು ಸಾಮ್ರಾಜ್ಯದ ಎಲ್ಲಾ ಭಾಗಗಳ ಸಂಬಂಧಗಳನ್ನು ಚನ್ನಾಗಿ ಪರಿಶೋಧಿಸಲು ನಿಶ್ಚಯಿಸಿಕೊಂಡಿರುತ್ತಾರೆ.

ಐರ್ಲ್ಯಾಂಡಿನಲ್ಲಿ ಅಲ್ಸ್ಟರ್ ಪಂಗಡದವರಿಗೂ ರಿಪಬ್ಲಿಕ್ ಪಂಗಡದವರಿಗೂ ಹದ್ದುಬಸ್ತಿನ ವಿಷಯದಲ್ಲಿ ವಾದವು ನಡೆಯುತ್ತಿದೆ. ಕರಿಣಾತರದ ವಾದವೆಂತ ಬರೆಯುತ್ತಾರೆ.

ಯುದ್ಧದಲ್ಲಿ ಮಿತ್ರಮಂಡಲಿಯವರಿಗೆ ಬ್ರಿಟನ್ನಿನವರು ಒದಗಿಸಿದ ಸಾಲಕ್ಕಾಗಿ ಬ್ರಿಟಿಷ್ ಪ್ರಜೆಗಳು ಕಾಲಿಯಾನ ೧೦ ಕೋಟಿ ಪೌಂಡ್ ಹಣವನ್ನು ಒತ್ತಿಗಾಗಿ ತೆರುತ್ತಾರೆಂತ ಬ್ರಿಟಿಷ್ ಆದಾಯವೆಚ್ಚದ ಮಂತ್ರಿಯವರು ಪಾರ್ಲಿಮೆಂಟಿನಲ್ಲಿ ಹೇಳಿದರು.

ಇಂಗ್ಲೆಂಡಿನಲ್ಲಿ ಸಿಬ್ಬಂದಿ ಕೊರತೆಗಾಗಿ ಅನೇಕ ಸರಕಾರಿ ಉದ್ಯೋಗಸ್ಥರನ್ನು ಡಿಸ್‌ಮಿಸ್ ಮಾಡಬೇಕಾಗಿಬಂದಿತ್ತು. ಅವನ್ನು ತಪ್ಪಿಸಲಿಕ್ಕಾಗಿ ೩೦೦೦೦ ನು ಮಾಸ್ತರು ಕಡಿಮೆ ಸಂಬಳದಲ್ಲಿ ಕೆಲಸಮಾಡಲಿಕ್ಕೆ ಒಪ್ಪಿ ತಮ್ಮ ಸಂಬಳದ ಉಳಿವರಿಯನ್ನು ಕೊಟ್ಟು ಮನೆಗೆ ಹೋಗಬೇಕಾದ ಗುಮಾಸ್ತರುಗಳನ್ನು ಉಳಿಸಿಕೊಂಡರು.

ರಿವ್ಯೂ ಆಫ್ ರಿವ್ಯೂಸ್ ಎಂಬ ಮಾಸಪತ್ರಿಕೆಗೆ ಚಾರ್ಲೆಸ್‌ಮಾರ್ಗನ್ ಎಂಬುವರು ಒಂದು ಪತ್ರ ಬರೆದಿದ್ದಾರೆ. ಅದರಲ್ಲಿ—ಬ್ರಿಟಿಷ್ ಯುವರಾಜರು ಈವರೆಗೂ ಆಟಗಳಲ್ಲೂ ವಿನೋದಗಳಲ್ಲೂ ಕಾಲ ಕಳೆದರು. ಇನ್ನಾದರೂ ಸಾಮ್ರಾಜ್ಯ ರಾಜ್ಯಕಾರ್ಯಗಳನ್ನು ತಿಳಿದುಕೊಳ್ಳುವ ಕೆಲಸ ಪ್ರಾರಂಭಿಸಬೇಕೆಂತ ಯುವರಾಜರನ್ನು ಕೇಳಿಕೊಂಡಿದ್ದಾರೆ.

ಕೊಡಗು ನ್ಯಾಯವಿಧಾಯಕ ಸಭೆ.

—o—

(ಕಳೆದ ಸಂಚಿಕೆಯಿಂದ ಮುಂದುವರಿದದ್ದು)

ಮಿ॥ ಟಿ ಜಿ. ಟಾಸ್ಕರ್‌ರವರು.

ಈ ಠರಾವಿಗೆ ಒತ್ತಾಸೆ ಕೊಡಲು ನನಗೆ ತೃಪ್ತಿಯಿದೆ. ಆದರೆ ಠರಾವಿನಲ್ಲಿ ಹೇಳುವಮೇರೆ ಕೂಡಲೇ ನಾಲೆ ಮಾಡಿಸಿಕೊಡುವಂತೆ ಶಿಫಾರಸ್ಸುಮಾಡುವ ಠರಾವಿಗೆ ನಾನು ಒಪ್ಪುವುದಿಲ್ಲ. ಕೆಲಸವನ್ನು ಕೈಕೊಳ್ಳಬೇಕೆಂತ ಕೇಳುವುದು ಸುಲಭವಾದರೂ ಈ ಸಭೆಯ ಜವಾಬ್ದಾರಿಯನ್ನು ಯೋಚಿಸಿಕೊಳ್ಳಬೇಡವೇ? ಹಾದಂಗಿ ನಾಲೆ ಸಾಧ್ಯವೋ ಅಸಾಧ್ಯವೋ ಎಂಬುದನ್ನು ಈಗಿನ ಸ್ಥಿತಿಗತಿಗನುಗುಣವಾಗಿ ಅಜಮಾಯಿಸಬೇಕೆಂತ ಕೇಳುವರಾದರೆ ನಾನು ಮನಃಪೂರ್ತಿಯಾಗಿ ಒಪ್ಪುತ್ತೇನೆ. ಇಂಥಾ ಕಾಂಗಾರಿಗಳನ್ನೆಲ್ಲಾ ಅಜಮಾಯಿಸಿ ಯಾವುದು ಹೆಚ್ಚು ಪ್ರಯೋಜನವೋ ಹೆಚ್ಚು ತುರ್ತವೋ ಅದನ್ನು ಮೊದಲಾಗಿ ತೆಗೆದುಕೊಳ್ಳುತ್ತಾರೆ. ಈ ನಾಲೆಯಿಂದ ಪ್ರಯೋಜನವಿದೆಯೆಂಬುದನ್ನೂ, ಸಾಧ್ಯವೆಂಬುದನ್ನೂ ಇಂಡಿಯಾ ಸರಕಾರದವರು ಒಪ್ಪುತ್ತಾರೆ. ಆದರೆ ಕೈಕೊಳ್ಳಬೇಕಾದ ಕೆಲಸಗಳ ಪಟ್ಟಿಯಲ್ಲಿ ಇದು ಬಹಳ ಹಿಂದೆ ಬಿದ್ದಿದೆ. ಯುದ್ಧದ ಸಮಯದಲ್ಲಿ ಅದನ್ನು ಇಂಡಿಯಾ ಸರಕಾರದವರು ಕೈಕೊಳ್ಳುವ ಸಂಭವವೇ ಇರಲಿಲ್ಲ. ನಾವು ದಾರವೆಂಬರು ಅಜಮಾಯಿಸಿ ಕೌನ್ಸಿಲಿಗೆ ತಿಳಿಸಬೇಕೆಂತ ಹೇಳಿದರೆ ಸುಲಭವಾಗುತ್ತೆ.

ಮಿ॥ ನಿಡ್ಯಡ ಸುಬ್ಬಣ್ಣಯ್ಯನವರು.

ಕೂಡಲೇ ಅಜಮಾಯಿಸಿ ಪ್ರಾರಂಭಿಸಿ ಆದಷ್ಟು ಜಾಗ್ರತೆ ಕೌನ್ಸಿಲಿನಮುಂದೆ ತನಿಖೆಯ ಫಲಿತಾಂಶವನ್ನು ತಂದರೆ ಸಾಕಾಗಿದೆ.

ಮಿ॥ ಟಿ ಜಿ ಟಾಸ್ಕರ್‌ರವರು.

ಹಾಗಾದರೆ ನನ್ನ ಮನಃಪೂರ್ತಿ ಒತ್ತಾಸೆ ಇದೆ.

ಠರಾವು ಓಟಿಗೆ ಹಾಕಿ ಒಗ್ಗಟ್ಟಿನಿಂದ ಪಾಸಾಯಿತು.

9 ನೇ ಠರಾವು

"ಚಿಕ್ಲಿ ಹೊಳೆ ನಾಲಾ ಸರಿಯಾದ ರಿಪೇರಿಯಲ್ಲಿಟ್ಟು ಅದರಿಂದಾಗಬೇಕಾದಷ್ಟು ಜಮೀನುಗಳಿಗೆ ನೀರು ಸರಬರಾಯಿ ಆಗುವಂತೆ ಮಾಡಬೇಕು."

ಮಿ॥ ಸುಬ್ಬಣ್ಣಯ್ಯನವರು

ಈ ನಾಲೆಯು ಪ್ರೇಜರ್‌ಪೇಟೆಯ ಹತ್ತಿರ ಇದೆ. ಇದರ ಮೇಲೆ ಸರ್ಕಾರದವರು ಹೆಚ್ಚು ಹಣ ಖರ್ಚುಮಾಡಿದ್ದಾರೆ. ಈ ನಾಲೆಗೆ ಇರುವ ಅಣೆಕಟ್ಟು ತಕ್ಕಷ್ಟು ಎತ್ತರದಲ್ಲಿರುವುದಿಲ್ಲ. ನಾಲೆಯು ಸರಿಯಾದ ರಿಪೇರಿಯಲ್ಲಿಲ್ಲ. ನಾಲಾ ಏರಿಯಮೇಲೆ ಕೆಲವುಕಡೆ ನೀರು ಹರಿದುಹೋಗುತ್ತೆ. ನೀರು ಸರಬರಾಯಿ ಅನುಕೂಲವಾಗಿ ದೊರೆತೀತೆಂತ ನಂಬಿ ಇದರ ಕೆಳಗೆ ಜನರು ದೊಡ್ಡ ವಿಸ್ತೀರ್ಣದಲ್ಲಿ ಜಾಗಗಳನ್ನು ಕೊಂಡುಕೊಂಡರು. ಅವರು ಈ ಬಾಬಿನಲ್ಲಿ ಪ್ರತಿವರ್ಷವೂ ನಿರಾಶರಾಗುತ್ತಾ ಇದ್ದಾರೆ. ಸರ್ಕಾರದವರೇನೋ ಪ್ರತಿವರ್ಷವೂ ಖರ್ಚುಮಾಡುತ್ತಾ ಇದ್ದಾರೆ. ಆದರೆ ಕೆಲಸವನ್ನು ಮಾತ್ರ ಸಕಾಲದಲ್ಲಿ ಪ್ರಾರಂಭಿಸುವುದಿಲ್ಲ. ಅಂದರೆ ಮೇ, ಜೂನ್ ತಿಂಗಳಲ್ಲಿ ಸುರು ಮಾಡುತ್ತಾರೆ. ಆದರೆ ಜನವರಿಯಲ್ಲಿ ರಿಪೇರಿ ಕೆಲಸ ಸುರು ಮಾಡಿದರೆ ಚನ್ನಾಗಾದೀತೆಂತ ಅಲ್ಲಿನ ಜನರು ಹೇಳುತ್ತಾರೆ.

ರಸೂಲ್‌ಪುರದ ಭೂಮಿಗಳಿಗೆ ಇದರ ನೀರು ಬಹಳ ಹೋಗಬೇಕಾಗಿದೆ. ಈ ಭೂಮಿಗಳ ತಲೆಯಲ್ಲಿ ಒಂದು ದೊಡ್ಡ ಕೆರೆಯಿದೆಯೆಂತ ನಾನು ತಿಳಿದಿದ್ದೇನೆ. ಈ ಕೆರೆಗೆ ಏರಿ ಇಟ್ಟು ಮಳೆಗಾಲದಲ್ಲಿ ನೀರು ತುಂಬಿಸಿದರೆ ಅದರಿಂದ ರಸೂಲ್‌ಪುರದ ಭೂಮಿಗಳಿಗೆ ನೀರು ಒದಗುತ್ತೆ. ಹೀಗೆ ಮಾಡುವುದರಿಂದ ನಾಲೆಯ ಕೆಳಗಿನ ಭೂಮಿಗಳಿಗೆ ನೀರು ದೊರೆಯಲು ಅವಕಾಶವಾಗುತ್ತೆ.

ಈ ನಾಲೆಯನ್ನು ಸಾಧ್ಯವಿರುವಮಟ್ಟಿಗೆ ರಿಪೇರಿ ಮಾಡಿದರೆ ಅಲ್ಲಿ ವ್ಯವಸಾಯ ಮಾಡಲು ಪ್ರಾರಂಭಿಸಿರುವ ರೈತರಿಗೆಲ್ಲಾ ತುಂಬಾ ಪ್ರಯೋಜನವಾಗಿ ಇನ್ನೂ ಹೆಚ್ಚಾಗಿ ವ್ಯವಸಾಯವಾಗುವುದರಲ್ಲಿ ಅಡ್ಡಿಯಿಲ್ಲವೆಂತ ಅಲ್ಲಿ ಜನರು ಹೇಳುತ್ತಾರೆ. ಈ ಸಣ್ಣ ಖರ್ಚು ಸರ್ಕಾರದವರಿಗೂ ಪ್ರಜೆಗಳಿಗೂ ಫಾಯಿದೆಯಾಗುವುದು.

ಮಿ॥ ಮನಿಯಪಂಡ ಚಿಣ್ಣಪ್ಪನವರು ಅನುಮೋದಿಸಿದರು. ಮಿ॥ ಟಿ ಜಿ. ಟಾಸ್ಕರ್‌ರವರು:—ಈಗಿನ ಎಗ್ಸಿಕ್ಯುಟಿವ್ ಇಂಜಿನೀಯರು ಇನ್ನೂ ಈ ನಾಲೆಯನ್ನು ನೋಡಿರುವುದಿಲ್ಲ. ಅವರ ಅಭಿಪ್ರಾಯವು ನನಗೆ ಇನ್ನೂ ದೊರಕಿರುವುದಿಲ್ಲ. ನೀರು ಸರಿಯಾಗಿ ಬರುವುದಿಲ್ಲವೆಂತ ಫಿರ್ಯಾದು ನನಗೇನೋ ಬಂದಿದೆ. ಈ ಠರಾವಿಗೆ ನಾನು ಒಪ್ಪುತ್ತೇನೆ.

ಠರಾವು ಓಟಿಗೆ ಹಾಕಿ ಮಂಜೂರಾಯಿತು.

10 ನೇ ಠರಾವು.

"ಪೈಸಾರಿಯನ್ನು ಮುಚ್ಚಬಹುದೆಂತ ಇರುವ ರೆವಿನ್ಯೂ ಮ್ಯಾನ್ಯುಯಲ್ 80 ನೇ ರೂಲನ್ನು ತೆಗೆದುಹಾಕಬೇಕು"

ಮಿ॥ ಸುಬ್ಬಣ್ಣಯ್ಯನವರು.

ರಿಜರ್ವ್ ಫಾರೆಸ್ಟು ಜಾರಿಗೆ ಬಂದನಂತರ ದನಗಳ ಮೇವಿನ ಜಾಗಗಳು ಬಹಳ ಕಮ್ಮಿಯಾಯ್ತು. ಏಳು ಸಾವಿರದ ಶೀಮೆ ಮತ್ತು ಕಣಿವೆ ಹೋಬಳಿ ಜನಗಳಿಗೆ ಬಾಣೆಗಳಿಲ್ಲ. ಪೈಸಾರಿಗಳು ಗ್ರಾಮಸ್ಥರ ಹೆಚ್ಚಿನ ಸಹಾಯಕ್ಕಾಗಿ ಇರುತ್ತವೆ. ಊರುಡುವೆಗಳು ಸಾಲದು. ಫಾರೆಸ್ಟು ಇಲಾಖೆಯವರಿಗೆ ರೈತರು ತಮ್ಮ ದನಮೇಯಿಸಲು ದುಡ್ಡು ತೆರುತ್ತಾ ಇದ್ದಾರೆ. ಅದೂ ಕೂಡ ವರ್ಷದಲ್ಲಿ ಕೆಲವು ಭಾಗಕ್ಕೆ ಮಾತ್ರ. ಮತ್ತು ಫಾರೆಸ್ಟಿನಲ್ಲಿ ಬ್ಲಾಕು ವಿಂಗಡಿಸುವ ನಿರ್ಬಂಧವೂ ಇದೆ. ಬಹಳಕಾಲದಿಂದಲೂ ಪೈಸಾರಿಗಳಲ್ಲಿ ಹಕ್ಕಾಗಿ ದನ ಮೇಯಿಸುತ್ತಾ ಬಂದಿದ್ದಾರೆ. ಪೈಸಾರಿಗಳು ರಿಜರ್ವ್ ಮಾಡುವ ರೀತಿಯಲ್ಲಿಲ್ಲ. ಪೈಸಾರಿಯಲ್ಲಿ ಗಂಧವು ಬಹಳ ಚನ್ನಾಗಿ ಬೆಳೆಯುತ್ತದೆ. ಈಗಿನ ಗಂಧದಕೋಟೆಗಳು ಪ್ರಯೋಜನಕಾರಿಯಾಗುವಹಾಗೆ ಕಾಣುವುದಿಲ್ಲ. ಒಂದು ಹಸುವಿಗೆ ವರ್ಷಕ್ಕೆ ಕೊನೆಯಪಕ್ಷ 4 ಎಕರೆ ಮೇವಿನ ಜಾಗ ಬೇಕೆಂತ ಫಾರೆಸ್ಟು ಎಕ್ಸ್‌ಪರ್ಟುಗಳೇ ಅಭಿಪ್ರಾಯಪಟ್ಟಿದ್ದಾರೆ. ಏಳು ಸಾವಿರ ಸೀಮೆ ಮತ್ತು ಕಣಿವೆ ಹೋಬಳಿಯಲ್ಲಿ ಲೆಕ್ಕ ನೋಡಿದರೆ ಸರಾಸರಿ ಒಂದು ದನಕ್ಕೆ ಒಂದು ಎಕರೆ ಸಹ ದೊರಲಾರದು. ದನಗಳ ವಿನಹ ವ್ಯವಸಾಯಕ್ಕೆ ನಡೆಯುವುದಿಲ್ಲ. ಆದ್ದರಿಂದ ಈ ರೂಲಿನಲ್ಲಿ ಕಮೀಷನರ್ ಸಾಹೇಬರಿಗೆ ಇರುವ ಆರ್‌ಬಿಟ್ರರಿ ಅಧಿಕಾರವನ್ನು ತೆಗೆದುಹಾಕಬೇಕೆಂತ ನಾನು ಈ ರಿಜೊಲ್ಯೂಷನ್ ತಂದಿರುತ್ತೇನೆ.

ಮಿ॥ ಕೆ. ಸಿ ಚಿಣ್ಣಪ್ಪನವರು

ಠರಾವಿಗೆ ನಾನು ಅನುಮೋದಿಸುತ್ತೇನೆ. ಇದೇ ತರದ ಠರಾವು ಒಂದನ್ನು ನಾನು ಕಳುಹಿಸಿದ್ದೇನೆ. ಅದನ್ನು ಚರ್ಚೆಗೆ ತರಲಿಲ್ಲವೆಂತ ಶೋಚಿಸುತ್ತೇನೆ. ಈ ಠರಾವಿನಲ್ಲಿ ಹೇಳುವ ಸೆಕ್ಷನ್ ಅಲ್ಲದೆ ಇನ್ನೂ ಅನೇಕ ತಿದ್ದುಪಾಟಿಗೆ ಅರ್ಹವಾದ ಸೆಕ್ಷನ್‌ಗಳಿವೆ. ಈ ಠರಾವಿಗೆ ಸರ್ಕಾರದ ಒಪ್ಪಿಗೆ ಇರಬಹುದೆಂದು ನಂಬುತ್ತೇನೆ.

ಮಿ॥ ಟಿ. ಜಿ. ಟಾಸ್ಕರ್.

ಈ ಸೆಕ್ಷನನ್ನು ತೆಗೆದುಹಾಕಲು ನನ್ನ ಅಡ್ಡಿಯೇನೂ ಇಲ್ಲ. ಅದರಿಂದ ಕೆಡಕೇನೆಂಬುದು ನನಗೆ ಗೊತ್ತಾಗುವುದಿಲ್ಲ. ಈ ಸೆಕ್ಷನ್‌ನಲ್ಲಿ ಇರುವ ಹಕ್ಕನ್ನು ದುರುಪಯೋಗಪಡಿಸಿದ ಉದಾಹರಣೆಯನ್ನು ಯಾರೂ ಕೊಟ್ಟಿರುವುದಿಲ್ಲ. ಈ ಸೆಕ್ಷನನ್ನು ರೈತರಿಗೆ ಕೆಡಕಾಗುವಂತೆ ಎಂದಾದರೂ ಉಪಯೋಗಿಸಿದ್ದು ತೋರಿಸಿಕೊಟ್ಟರೆ ಅನಂತರ ನಾನು ಹೇಳತಕ್ಕದ್ದನ್ನು ಹೇಳುತ್ತೇನೆ.

ಮಿ॥ ನಿಡ್ಯಡ ಸುಬ್ಬಣ್ಣಯ್ಯನವರು ಒಂದು ಸೆಕ್ಷನ್ ಮೇಲೆ ಹುಟ್ಟಿದ ಒಂದು ನೋಟೀಸನ್ನು ಕೌನ್ಸಿಲಿಗೆ ಕೊಟ್ಟರು. ಮಿ॥ ಟಾಸ್ಕರ್ ಸಾಹೇಬರು ಇದೊಂದೇ ನೋಟೀಸೋ ಎಂದು ಕೇಳಿದರು. ಮಿ॥ ಸುಬ್ಬಣ್ಣಯ್ಯನವರು ಇನ್ನೂ ಇದೆ ಎಂದು ಹೇಳಿದರು.

ಮಿ॥ ಎ. ಬಿ. ಚೆಂಗಪ್ಪನವರು.

ಮಲಂಬಿ ಪ್ರಾಂತ್ಯದಲ್ಲಿ ರೈತರಿಗೆ ತೊಂದರೆಯಾಗುವಂತೆ ಪೈಸಾರಿಗಳಿಗೆ ದನ ದಿಡದೆ ಇರುವುದೂ ಉಂಟು.— ನಾನೇ ಈ ಠರಾವಿಗೆ ಸಂಪೂರ್ಣ ಒತ್ತಾಸೆಕೊಡುತ್ತೇನೆ.

ಮಿ॥ ಟಿ. ಜಿ. ಟಾಸ್ಕರ್‌ರವರು.

ಈ ಸೆಕ್ಷನ್ ಉಪಯೋಗಿಸಲ್ಪಟ್ಟಿದ್ದು ನನಗೆ ಗೊತ್ತಿರಲಿಲ್ಲ.—ಮಲಂಬಿ ರಿಜರ್ವ್ ಸಂಬಂಧವಾಗಿ ಉಪಯೋಗಿಸಲ್ಪಟ್ಟಿದೆಂದು ಕಾಣುತ್ತೆ. ನನಗಾಗಲೀ, ಫಾರೆಸ್ಟ್ ಮೆಂಬರಿಗಾಗಲೀ ಈ ಸೆಕ್ಷನ್ ಬೇಕೆಂತ ಇಲ್ಲ.

ಕೊಡಗು ಕೌನ್ಸಿಲು ಮೀಟಿಂಗು

ಗೆ ಹಾಕಿ ಮಂಜೂರಾಯಿತು

11 ನೇ ಠರಾವು

ಬರಹ ತಿಳಿದ ಹಿಂದುಳಿದ ಪಂಗಡದವರಿಗೆ ... ಜವಾನ ಮುಂತಾದ ಸರ್ಕಾರಿ ಕೆಲಸ ... ಉತ್ತೇಜನ ಕೊಡಬೇಕು

ಮೆ|| ಕೆದಂಬಾಡಿ ಸುಬ್ಬಯ್ಯನವರು

...ನ್ನದೊಂದು ಹಿತವಾದ ಠರಾವನ್ನು ತಮ್ಮ ಮುಂದಿ... ತುಂಬಾ ಇಚ್ಛಿಸುತ್ತೇನೆ. ದೇಶಾಭಿವೃದ್ಧಿಗಳಾದ ...ವುಗಳು ಅದನ್ನು ಅಂಗೀಕರಿಸಿಕೊಂಡನಂತರ ಅದರ ಪರಿ...ರ್ಥವಾಗಿ ತಮ್ಮ ಮಂಜೂರಾತಿಯು ಒದಗಿಯೇ ದೊರ...ಕಬಹುದೆಂಬುದಾಗಿ ತುಂಬಾ ನಂಬಿರುತ್ತೇನೆ. ಈಗ ಪರ್ಯಾ...ಲೋಚಿಸಿ ನೋಡಿದರೆ ಹಿಂದುಳಿದ ಪಂಚಮ ಪಂಗಡದವರಿಗೆ ಯಾವ ಸ್ವತಂತ್ರವೂ ಇಲ್ಲವಾದುದರಿಂದ ಅವರು ತಮ್ಮ ಹಿತಾರ್ಥವಾಗಿ ತಮ್ಮ ತಮ್ಮ ... ಸುವುದರಲ್ಲಿಯೂ ಆತ್ಮಗೌರವವನ್ನು ವೃದ್ಧಿಗೊಳಿಸುವುದರ ಲ್ಲಿಯೂ ಮುಖ್ಯೋದ್ದೇಶದಿಂದ ಮಗ್ನರಾಗಿರುತ್ತಾರೆ.

ಹೀಗಿರುವಾಗ ಭರತಖಂಡದಲ್ಲಿ ಘನವೊಂದಿದ ಸರ್ಕಾರವು ಕರ್ತವ್ಯದಲ್ಲಿ ಹೆಚ್ಚು ಅಪೇಕ್ಷೆಯುಳ್ಳವನಿಗೆ ಯಾವುದಾದರೊಂದು ಕೆಲಸವು ಅತಿ ಅಲ್ಪವಾಗಿದ್ದರೂ ... ತಕ್ಕುದಾದ ಒಂದು ಎಡೆಯನ್ನು ಕೊಡಲಿಕ್ಕೆ ಹಿಂಜರಿಯುವುದಿಲ್ಲ. ಆದುದರಿಂದ ಹಿಂದುಳಿದ ಪಂಗಡದವರನ್ನು ಹೆಚ್ಚಾಗಿ ಅಂಥಾ ಕೆಲಸಕ್ಕೇ ನೇಮಿಸಿದರೆ ಅವರಿಗೆ ದಗೊಂಡಿರು...ದ್ದಂಥಾ ಆತ್ಮಗೌರವವು ಲೌಕಿಕ ವ್ಯವಹಾರದಿಂದ ವೃದ್ಧಿಯೂ ಹೆಚ್ಚಾಗುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಅಂಥಾ ಗೌರವವನ್ನು ಉಲ್ಲಂಘಿಸಿದರೆ ಅವರ ಉದ್ಧಾರಕ್ಕಾಗಿ ಬೇರೆ ಯಾವ ಉಪಾಯವನ್ನು ಮಾಡಿದರೂ ... ನಿರರ್ಥಕವೇ ಸರಿ.

ಇನ್ನೂ ಅಲ್ಲದೆ ಪ್ರತಿಯೊಬ್ಬ ಮನುಷ್ಯನಿಗೂ ... ಜನಾಂಗಕ್ಕೂ ಎಲ್ಲಾ ಕಾರ್ಯಗಳಲ್ಲಿಯೂ ಸ್ವತಂತ್ರವಾದ ಭಾಗವು ಇದ್ದೇ ಇರಬೇಕು. ಈ ಹಿಂದುಳಿದ ಪಂಗಡದ ... ಹಣದ ವಿಷಯದಲ್ಲಿ ಬಹು ಬಡವರಾಗಿದ್ದರೂ ಆ ಬಡತನ ಇತರ ಎಲ್ಲಾ ಜನಾಂಗಕ್ಕಿಂತಲೂ ವಿಶೇಷವಾಯವನ್ನು ... ಸುವುದರಲ್ಲಿ ಬಹಳ ಪ್ರಯೋಜನಕಾರಿಗಳಾಗಿದ್ದಾರೆ. ಮತ್ತು ಅವರು ಸಂಖ್ಯೆಯಲ್ಲಿ ಇತರ ಎಲ್ಲಾ ಜನಾಂಗಕ್ಕಿಂತಲೂ ಹೆಚ್ಚಿದ್ದಾರೆಂದು ನಂಬಬೇಕಾಗಿದೆ. ಆದುದರಿಂದ ಅವರಿಗೆ ಸರ್ಕಾರದ ಉದ್ಯೋಗದಲ್ಲಿ ಅವರ ಯೋಗ್ಯತೆಗೆ ತಕ್ಕ ಸುಯೋಗ್ಯವಾದ ಪಕ್ಷಕ್ಕೂ ಸರಿಯಾದಂಥ ಸ್ಥಳವನ್ನು ಕೊಡುವುದು ನ್ಯಾಯವಾಗಿಯೂ ಹಿತವಾಗಿಯೂ ಇರುವುದು. ಹಾಗೆಯೇ ನಾನು ಈ ಠರಾವನ್ನು ... ಡುವುದಕ್ಕೆ ತುಂಬಾ ಆಸೆಯುಳ್ಳವನಾಗಿದ್ದೇನೆ.

ಆದುದರಿಂದ ಈ ಘನವೊಂದಿದ ನ್ಯಾಯವಿಧಾಯಕ ಸಭೆಯವರು ಇದನ್ನು ಅವಲೋಕಿಸಿ ಈ ಹಿಂದುಳಿದ ಪಂಗಡದವರನ್ನು ಅಗತ್ಯವಾಗಿ ಫಾರೆಸ್ಟ್ ಗಾರ್ಡ್‌ಗಳಾಗಿಯೂ ಜವಾನ್ ಮುಂತಾದ ಕೆಲಸಗಳಿಗೆ ನೇಮಿಸಲ್ಪಡಬಹುದೆಂಬುದಾಗಿ ಚೀಫ್ ಕಮಿಷನರ್ ಸಾಹೇಬರವರನ್ನು ಕೇಳಿಕೊಂಡಿದ್ದಾರೆ— ಅಲ್ಲದೆ ಉಪೇದ್ಘಾತವಾಗಿ ನಾನು ಈ ಪಂಗಡದವರಿಗೆ ವಿದ್ಯಾಪೇಕ್ಷೆಯು ತಕ್ಕಮಟ್ಟಿಗೆ ಸುಲಭವಾಗಲೆಂಬುದಾಗಿ ನಾನು ನನ್ನ ಪೂರ್ವಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಮೆ|| ಪಂದಿಯಂಡ ಬೆಳ್ಯಪ್ಪನವರು

ಈಗಿನ ದರ್ಜೆ ಸರ್ಕಾರಿ ಕೆಲಸಗಳನ್ನು ಒದು ಒದು ... ಬಲ್ಲ ಹಿಂದುಳಿದ ಪಂಗಡಗಳಿಗೆ ಸೇರಿದವರಿಗೆ ಕೊಟ್ಟು ಬಾತಿ ... ಅವರ ಸಮ್ಮತಿಯಾಗಲು ಅವರಿಗೆ ಅನುಕೂಲ ಕೊಡಬೇಕೆಂದುದು ಆವಶ್ಯಕ. ಹಿಂದುಳಿದ ಪಂಗಡಗಳಿಗೆ ವಿರೋಧವಿಲ್ಲದವರು ಯಾರೂ ಈ ಸಭೆಯಲ್ಲಿರುವುದಾದ್ದರಿಂದ ಒಗ್ಗಟ್ಟಾಗಿ ಮಂಜೂರಾದೀತೆಂತ ನಂಬುತ್ತೇನೆ.

ಮೆ|| ಟಿ ಜಿ ಟಾಮ್ಸನ್‌ರವರು.

ನಾನು ತಿಳಿದಮಟ್ಟಿಗೆ 11 ಫಾರೆಸ್ಟ್ ಗಾರ್ಡ್‌ಗಳೂ ಒಬ್ಬ ಜವಾನನೂ ಹಿಂದುಳಿದ ಪಂಗಡಗಳಿಗೆ ಸೇರಿದ ಜಾತಿಗಳವರು ಇದ್ದಾರೆ—ಈ ಠರಾವನ್ನು ಒಪ್ಪಿಕೊಳ್ಳಲಿಕ್ಕೆ ಏನೂ ಆಕ್ಷೇಪಣೆಯಿಲ್ಲ.

ಈ ಠರಾವು ಓಟಿಗೆ ಹಾಕಿ ಒಮ್ಮನಸ್ಸಿನಿಂದ ಮಂಜೂರಾಯಿತು.

ಮೆ|| ಪಂದ್ಯಂಡ ಬೆಳ್ಯಪ್ಪನವರು

(12 ನೇ ಠರಾವು)

ಅಧ್ಯಕ್ಷರೆ,

"ಮರಗೆಲಸ, ಕಬ್ಬಿಣದ ಕೆಲಸ ಮತ್ತು ಚಿನ್ನದ ಕೆಲಸಗಳನ್ನು ಕಲಿಯುವುದಕ್ಕಾಗಿ 'ವೀರಾಜಪೇಟೆ'ಯಲ್ಲಿ ಒಂದು ...ಗಾರಿಕೆ ಶಾಲೆಯನ್ನು ಸ್ಥಾಪಿಸಬೇಕೆಂದು ಈ ಕೌನ್ಸಿಲು ... ಕಮಿಷನರವರಿಗೆ ಶಿಫಾರಸ್ಸು ಮಾಡುತ್ತದೆ" ... ಠರಾವನ್ನು ನಾನು ಕೌನ್ಸಿಲಿನ ಮುಂದಿಡುತ್ತೇನೆ. ... ಐಶ್ವರ್ಯವು ಬಹಳಮಟ್ಟಿಗೆ ಅದರ ಕೈಗಾರಿಕೆಯ ಅಭಿವೃದ್ಧಿಯ ಮೇಲಿದೆ. ಅಮೇರಿಕ, ಇಂಗ್ಲೆಂಡು, ಜರ್ಮನಿ ಮೊದಲಾದ ... ಮಹೇಶಗಳ ಈಗಿನ ಉಚ್ಛ್ರಾಯಸ್ಥಿತಿಗೆ ಅವುಗಳ ಕೈಗಾರಿಕೆಗಳ ಅಸಮಾನವೃದ್ಧಿಯೇ ಕಾರಣ. ಅಷ್ಟು ದೂರವೇಕೆ, ಜಪಾನ್ ದೇಶವು ಭೂಲೋಕದ ಪ್ರಾಮುಖ್ಯ ಜನಾಂಗಗಳಲ್ಲಿ ಒಂದಾಗಲು ಅದರ ಕೈಗಾರಿಕೆಯೇ ಕಾರಣವಲ್ಲವೇ? ಅದು ತನ್ನ ದೇಶದಲ್ಲಿರುವ ಕಾರ್ಖಾನೆಗಳಲ್ಲಿ ತಯಾರಾದ ಸಾಮಾನುಗಳನ್ನು ಭೂಲೋಕದ ಮಾರ್ಕೆಟ್ಟುಗಳಲ್ಲಿ ತುಂಬಿಸಿದ್ದರಿಂದಲೇ ಅದರ ಹೆಸರುವಾಸಿಯೂ ಕೀರ್ತಿಯೂ ಎಲ್ಲೆಲ್ಲಿಯೂ ಹರಡಿತು. ಆದರೆ ಇಡೀ ಹಿಂದೂದೇಶವು ಈ ವಿಷಯದಲ್ಲಿ ಹಿಂದೆಬಿದ್ದಿದೆ. ಅದರಲ್ಲೂ ನಮ್ಮ ದೇಶದ ಸ್ಥಿತಿಯನ್ನು ಹೇಳಲಿಕ್ಕೇ ಕೂಡದು. ನಮ್ಮ ದೇಶದಲ್ಲಿ ಬಹಳ ಅನುಕೂಲವಿದ್ದರೂ ಸಹ ಕಾರ್ಖಾನೆಗಳಾಗಲೀ, ಕೈಗಾರಿಕೆಯ ಬೇರೆ ಸಂಸ್ಥೆಗಳಾಗಲೀ ಇಲ್ಲವೇ ಇಲ್ಲವಲ್ಲ. ಒಂದು ಕೈಗಾರಿಕ ಶಾಲೆಯಾದರೂ ಇದೆಯೆಂದು ಹೇಳಿಕೊಳ್ಳುವಷ್ಟು ಪರಿಸ್ಥಿತಿಯು ಸಮಗಿಲ್ಲ. ಕಾಲಚಕ್ರವು ತಿರುಗುತ್ತಾ ಒಂದಕ್ಕಾಗಿ ಜೀವನವು ಕಷ್ಟವಾಗುತ್ತಾ ಒದಗುವುದರಿಂದ ಜನರಿಗೆ ಕೈಗಾರಿಕೆಯು ಅವಶ್ಯಕತೆಯು ಹೆಚ್ಚಾಗಿ ತೋರುತ್ತಾ ಒದಗುತ್ತಿದೆ.

ಈಗ ನಮ್ಮ ಶಾಲೆಗಳಲ್ಲಿ ಕಲಿಸುವ ವಿದ್ಯೆಯು ನಮ್ಮ ... ಸರ್ಕಾರಿ ಉದ್ಯೋಗಕ್ಕೆ ಮಾತ್ರ ಯೋಗ್ಯರನ್ನಾಗಿ ಮಾಡುತ್ತಿದೆ. ಅದು ಹೆಚ್ಚು ಕಮ್ಮಿ ಕ್ಲಾರ್ಕರನ್ನು ತಯಾರಿಸುವ ಒಂದು ಕಾರ್ಖಾನೆಯಂತಿದೆ. ಹೀಗೆ ಅನೇಕ ವರ್ಷಗಳಿಂದ ಬೇಕಾದದ್ದಕ್ಕಿಂತ ಹೆಚ್ಚು ಕ್ಲಾರ್ಕರನ್ನು ... ವುದರಿಂದ ಪಬ್ಲಿಕ್ ಆಫೀಸುಗಳ, ಅವರಿಗೆ ಎಡೆ ... ತಮ್ಮ ಬಾಗಿಲುಗಳನ್ನು ಮುಚ್ಚಬೇಕಾಗಿ ಬಂತು. ... ಯುವಕರಿಗೆ ತಮ್ಮ ಜೀವನೋಪಾಯಕ್ಕೆ ಸರ್ಕಾರಿ ಉದ್ಯೋಗವೊಂದನ್ನೇ ನಂಬಿಕೊಂಡಿರಕೂಡದೆಂದು ಅನುಭವವಾಗಿ ತಮ್ಮ ವಿದ್ಯಾಭ್ಯಾಸಕ್ಕೆ ಬೇಕಾದಷ್ಟು ಹಣ ಖರ್ಚುಮಾಡಿ, ವಿಸ್ತಾರವಾದ ಉದ್ಯೋಗವಿಲ್ಲದೆ ದೇಶದಲ್ಲಿ ... ತಿರುಗುವುದು ಒಂದು ಕಷ್ಟವಾಗಿದೆ. ಆದುದರಿಂದ ಅವರು ಯಾವುದಾದರೂ ಒಂದು ತರಹದ ಕೈಗಾರಿಕೆ ... ಕಲಿಸುತ್ತಿದ್ದರೂ, ಆದರೆ ಅದಕ್ಕೆ ನಮ್ಮ ದೇಶದಲ್ಲಿ ... ಅನುಕೂಲವು ಇಲ್ಲ. ಉದ್ಯೋಗವಿಲ್ಲದ ... ಯುವಕರ ಸಂಖ್ಯೆಯು ದೇಶದಲ್ಲಿ ಹೆಚ್ಚಿದರೆ ... ವುದರಿಂದ ಸರ್ಕಾರದ ಭದ್ರತೆಗೆ ... ಹಾನಿ ... ಗುವುದು.

... ದೇಶದ ಹಣವನ್ನೆಲ್ಲಾ ಮುಂಬಾಯಿ ಮತ್ತು ದಕ್ಷಿಣ ... ಜಿಲ್ಲೆಗಳ ಬಡಗಿ ಕಮ್ಮಾರರೇ ಮೊದಲಾದವರು ಬಂದು ದೋಚಿಕೊಂಡು ಹೋಗುತ್ತಿರುವರು. ಇಲ್ಲಿರುವ ... ಕಮ್ಮಾರರು ಒಳ್ಳೇ ಕೆಲಸದವರಲ್ಲದ್ದರಿಂದ ... ಕೆಲಸಗಳನ್ನು ಮಾಡಲು ಅಶಕ್ತರಾಗಿರುವರು. ಆದುದರಿಂದ ಪಶ್ಚಿಮ ಕರಾವಳಿಯ ಕೆಲಸಗಾರರು ಒಮ್ಮೆ ಕಟ್ಟಿದ ದರವನ್ನು ಕೇಳಿದರೂ ತಮ್ಮ ಕೆಲಸವಾಗಬೇಕೆಂದು ಜನರು ಅದನ್ನು ಕೊಟ್ಟೇತೀರಬೇಕು. ಎಷ್ಟು ಹೆಚ್ಚಿನ ... ಕೊಡುವ ಜನರಿಗೆ ತಮ್ಮ ಕೆಲಸವು ಕಾಲಕ್ಕೆ ಸರಿಯಾಗಿ ... ತನಗೆ ಒಪ್ಪುವಂತೆಯೂ ತೀರಿಸುವುದಿಲ್ಲ. ಹಸ್ತ ಮಣ್ಣಿಯೂ ಕಲ್ಲಿಯೂ ಇರುವಂಥ ನಮ್ಮ ದೇಶದಲ್ಲಿ ಜನರು ... ಕೂಡ ಮಳೆಗಾಲದ ಗಾಳಿ ಮಳೆಯಿಂದ ... ತಪ್ಪಿಸಿಕೊಳ್ಳಲಿಕ್ಕಾಗಿ ಅವರಿಗೆ ನ್ಯಾಯವಾದ ಮನೆಗಳು ಬೇಕಾಗಿದೆ. ತಮ್ಮ ಭೂಮಿಯಲ್ಲಿ ಮರವು ಸುಲಭದಲ್ಲಿ ದೊರೆತರೂ ಸಹ ಮನೆ ಕಟ್ಟುವ ವಿಶೇಷವಾದ ಹೆಚ್ಚಿನ ಖರ್ಚನ್ನು ನಾಶಮಾಡುವವರಿಗೂ ಸಾಲಗಾರರನ್ನಾಗಿ ಮಾಡಿದೆ.

ಕೈಗಾರಿಕೆಯಲ್ಲಿ ಹಿಂದುಳಿದ ದೇಶವಾದ ಇಲ್ಲಿ ವ್ಯವಸಾಯದ ಕೆಲಸಕ್ಕೆ ಅನೇಕ ಕಬ್ಬಿಣದ ಸಾಮಾನುಗಳು ಬೇಕೆಂದು ಹೇಳಬೇಕಾಗಿಲ್ಲ. ಒಳ್ಳೇ ಕಮ್ಮಾರರು ಇಲ್ಲದೆ ಇರುವುದರಿಂದ ರೈತರು ಪರದೇಶದಿಂದ ಕಬ್ಬಿಣದ ಸಾಮಾನುಗಳನ್ನು ತರಿಸಲು ಬಹಳ ಹಣ ವೆಚ್ಚ ಮಾಡಬೇಕಾಗಿದೆ. ಕೊಡಗು ದೇಶವು ಚಿನ್ನಕ್ಕೆ ಹೆಸರುವಾಸಿಗೊಂಡಿದ್ದರೂ ಕೂಡ ಅದನ್ನು ಚಲೋದ ಮನೆ ಮುಟ್ಟುಗಳನ್ನ ಮಾಡಲಿಕ್ಕೆ ತಮ್ಮ ಜಾಣತನವನ್ನು ಉಪಯೋಗಿಸುವಂಥ ಜನರು ಯಾರೂ ಇಲ್ಲಿಲ್ಲ. ಆದರ ಬದಲು ನಾವು ನಮ್ಮ ಮರ ಚಿನ್ನ ಮೊದಲಾದ ಕಸಿ ಸಾಮಾನುಗಳನ್ನು ಅತಿ ಸುಲಭಕ್ಕಿಯದಲ್ಲಿ ಪರದೇಶಕ್ಕಾಗಿ ಮಾರಿ, ಅವುಗಳಿಂದ ಮಾಡಿದ ಪನೆ ಮುಟ್ಟುಗಳನ್ನು ಮೊದಲು ದೊರೆತ ಒಂದಕ್ಕೆ ಮೂರು ಯಾ ನಾಲ್ಕರಷ್ಟು ಬೆಲೆ ಕೊಟ್ಟು ಕೊಂಡುಕೊಳ್ಳುತ್ತಿದ್ದೇವೆ. ನಮ್ಮ ಪ್ರಾಂತ್ಯದ ಇಂಥಾ ಆರ್ಥಿಕ ಸುಲಿಗೆಯ ವಿಷಯದಲ್ಲಿ ನಾವು ಎಷ್ಟರವರೆಗೆ ಕಣ್ಣುಮುಚ್ಚಿಕೊಂಡಿರುವುದು? ಹೆಚ್ಚು ಬೆಲೆಯುಳ್ಳ ಮರಕಾಡುಗಳಿಂದ ತುಂಬಿರುವ ದೇಶದಲ್ಲಿ ಬಡಗಿ ಕೆಲಸವು ವೃದ್ಧಿಯಾಗದೆಹೋದರೆ, ಪ್ರತಿನಿಮಿಷದ ಕೆಲಸಕ್ಕೂ ಕಬ್ಬಿಣದ ಸಾಮಾನುಗಳ ಅವಶ್ಯಕತೆ ಇರುವ ವ್ಯವಸಾಯಗಾರರ ದೇಶದಲ್ಲಿ ಕಮ್ಮಾರರಿಗೆ ಉತ್ತೇಜನ ದೊರೆಯದೆಹೋದರೆ ಮತ್ತು ಚಿನ್ನದ ಕೆಲಸವು ದಿಕ್ಕಿಗೆ ಹೆಸರುಗೊಂಡಿರುವ ಸೀಮೆಯಲ್ಲಿ ಸೋಲುವುದಾದರೆ ಇವುಗಳೆಲ್ಲವೂ ಮತ್ತೆಲ್ಲಿ ಚೆನ್ನಾಗಿ ನಡೆದಾವು? ಆದುದರಿಂದ ಈ ಕಾಲ್ಗಿಲು ಕರಾವಳಿನಲ್ಲಿ ಒಂದು ಕೈಗಾರಿಕೆ ಶಾಲೆಯನ್ನು ಸ್ಥಾಪಿಸಲು ತೀರ್ಮಾನಿಸಿದರೆ ನ್ಯಾಯವೆಂದೆನ್ನಿಸಿಕೊಳ್ಳುವುದಲ್ಲದೆ ಬೇರೊಂದಲ್ಲ.

ಶಾಲೆಯನ್ನು ಎಲ್ಲಿಡಬೇಕೆಂದರೆ, ಮಧ್ಯಪ್ರಾಂತ್ಯದಲ್ಲಿರುವ ವೀರಾಜಪೇಟೆಗಿಂತ ಉತ್ತಮಸ್ಥಳ ಬೇರೆ ಯಾವುದೂ ನನಗೆ ತೋರುವುದಿಲ್ಲ. ಪ್ರಾರಂಭದಲ್ಲಿ ಶಾಲೆಗೆ ಬೇಕಾದಷ್ಟು ಹುಡುಗರು ದಕ್ಷಿಣಕೊಡಗಿನಲ್ಲಿ ಮಾತ್ರ ದೊರೆಯ ಎರೆಂದು ಕಾಣುತ್ತದೆ. ಕ್ರಮೇಣ ಈ ವಿದ್ಯೆಗಳಲ್ಲಿ ತರಬೇತಾಗಲು ಇಚ್ಛೈಸುವವರಿಗೆಲ್ಲಾ ಇದೊಂದು ಶಾಲೆಯಲ್ಲಿ ಸ್ಥಳ ಸಾಲದೆ ಹೋದರೆ ಈ ಕೌನ್ಸಿಲಿನ ಇರಾದೆಯಂತೆ ಸರ್ಕಾರದವರು ಉತ್ತರಕೊಡಗಿನವರಿಗಾಗಿ ಮಡಿಕೇರಿಯಲ್ಲಿ ಇನ್ನೊಂದು ಶಾಲೆಯನ್ನು ತೆರೆಯಬಹುದು.

ಶಾಲೆಯ ಏರ್ಪಾಡಿನ ವಿಷಯ ನಾನು ಮಾತಾಡುವದಾದರೆ ಈ ವಿಷಯ ವಿಶೇಷ ತಿಳುವಳಿಕೆಯಿದ್ದು ಇದರ ಸಲುವಾಗಿ ಉತ್ತಮ ಅಭಿಪ್ರಾಯವನ್ನು ಕೊಡಲು ಶಕ್ತರಾಗಿರುವ ಸಾಮುದಾಯಕ ವಿದ್ಯಾ ಇಲಾಖೆಯ ಮೆಂಬರರಿಗೆ ನಾನು ಅನ್ಯಾಯಮಾಡಿದಂತಾಗುವುದು.

ಶಾಲೆಯ ಏರ್ಪಾಡನ್ನು ಪ್ರಾರಂಭಿಸಲು ಈ ವರ್ಷ ಸುಮಾರು ಹತ್ತು ಸಾವಿರ ರೂಪಾಯಿ ಬೇಕಾಗಬಹುದು. ಕೆಲವು ಯುವಕರನ್ನು ಈ ಕೆಲಸಗಳಲ್ಲಿ ತರಬೇತಿಗೆ ಕಳುಹಿಸಬೇಕಾಗುವುದು. ತರಬೇತಾದನಂತರ ಇವರು ತರ್ಕತಾಗಿ ಅನುಭವವುಳ್ಳ ಬೇರೆಯವರೊಂದಿಗೆ ಶಾಲೆಯನ್ನು ನಡಿಸುವರು. ಇವರ ತರಬೇತು ಮುಗಿಯುವುದರೊಳಗೆ ಇಷ್ಟದ ಕೆಲಸವು ಪೂರೈಸತಕ್ಕದ್ದು. ಅಲ್ಲದೆ ಕೊಡಗಿನಲ್ಲಿ ಈಗ ಕೆಲವು ಬಡಗಿ ಉಪಾಧ್ಯಾಯರುಗಳಿರುವುದರಿಂದ ಈ ಕೆಲಸವನ್ನು ಕಲಿಯಲು ಇಚ್ಛೈಸುವವರಿಗೆ ಎಲಿಮೆಂಟರಿ ಶಾಲೆಗಳಲ್ಲಿ ಬಡಗಿ ಕೆಲಸದ ಪ್ರಾಥಮಿಕ ಶಿಕ್ಷಣವನ್ನು ಕೊಡುವಂತೆ ಏರ್ಪಾಡು ಮಾಡತಕ್ಕದ್ದು.

ಈ ಶಾಲೆಯ ವಿಷಯ ನಾನು ಫಿನೇನ್ಸ್ ಕಮಿಟಿಯಲ್ಲು ಸೂಚಿಸಿದಾಗ ಇದನ್ನು ಕೌನ್ಸಿಲು ಮೀಟಿಂಗಿನಲ್ಲು ಚರ್ಚಿಸಬಹುದೆಂದು ಬಾಕಿ ಮಾಡಿದ್ದಾಯಿತು. ಆದುದರಿಂದ ಸಾಮುದಾಯಕ ಫೈನೇನ್ಸ್ ಮೆಂಬರರ ಸಹ ಈ ವಿಷಯ ಈವರೆಗೆ ಆಲೋಚನೆ ಮಾಡುತ್ತಾ ಇದ್ದಿರಬಹುದಾದಕಾರಣ ಈ ವರ್ಷದ ಒಡ್ಜೆಟ್ಟಿನಲ್ಲಿ ಒಳ್ಳೆ ಉಳಿವು ಇರುವಲ್ಲ, ಅವರು ಇದಕ್ಕಾಗಿ ಸ್ವಲ್ಪ ಹಣ ಖರ್ಚುಮಾಡಲು ವಿರೋಧಿಸಲಿಕ್ಕಿಲ್ಲವಾಗಿ ನಂಬುತ್ತೇನೆ. ಒಡತನದಲ್ಲಿ ಮುಳುಗಿರುವ ನಮ್ಮ ಈ ಪ್ರಾಂತ್ಯದ ಆರ್ಥಿಕಸ್ಥಿತಿಯನ್ನು ವೃದ್ಧಿಗೊಳಿಸುವ ಉದ್ದೇಶದಿಂದ ನನ್ನ ಈ ಠರಾವಿಗೆ ಸಾಮುದಾಯಕ ಮೆಂಬರುಗಳೆಲ್ಲರೂ ಒತ್ತಾಸೆ ಕೊಡಬೇಕಾಗಿ ಪುನಹ ಕೋರುತ್ತೇನೆ.

ಮೆ|| ಪಿ ಟಿ ಕುಶಾಲಪ್ಪನವರು

ನಾನು ಠರಾವಿಗೆ ಅನುಮೋದಿಸುತ್ತೇನೆ. ಸ್ಕೂಲ್‌ಗಳಲ್ಲಿ ವಿದ್ಯೆ ಪಡೆದು ಬರುವ ಯುವಕರಿಗೆ ಕಸಬು ವಿದ್ಯೆ ಕಲಿಸಬೇಕೆಂಬುದೇ ಈ ಠರಾವಿನ ಉದ್ದೇಶವಾಗಿದೆ. ಸ್ಕೂಲಿನಿಂದ ಈಚೆಗೆ ಬರುವಾಗ ಈ ಜೀವನೋಪಾಯದ ದಾರಿಯೇ ತೋರದಂತೆ ಇರುತ್ತಾರೆ. ಗುಮಾಸ್ತಿಕ ಕೆಲಸವನ್ನೆ ಹುಡುಕುತ್ತಾರೆ. ಇದು ಸಿಕ್ಕುವದೂ ಸಾಧ್ಯವಿಲ್ಲ. ಅದರಿಂದ ಜನಾಂಗಕ್ಕೆ ತುಂಬಾ ತೊಂದರೆ ಮತ್ತು ನಷ್ಟವಿದೆ. ವಿದ್ಯಾ ಇಲಾಖೆಯ ಮೆಂಬರು ಠರಾವಿಗೆ ಒಪ್ಪಿಯಾರೆಂತ ನಂಬುತ್ತೇನೆ.

ಮೆ|| ಎ. ಬಿ. ಚೆಂಗಪ್ಪನವರು

ಠರಾವಿಗೆ ಒತ್ತಾಸೆಯಾಗಿ ನಾನು ಕೆಲವು ಮಾತುಗಳನ್ನು ಹೇಳಬೇಕೆಂತ ಇದ್ದೇನೆ. ಇಂಡಿಯಾದಲ್ಲೆಲ್ಲಾ ಕೊಡಗು ಬಹಳ ಬಡಸೀಮೆಯಾಗಿದೆ. ಅಲ್ಲಿ ಉತ್ಪತ್ತಿ ಇಲ್ಲ ವೆಂತಲ್ಲ. ಇಲ್ಲಿ ಆಗುವ ಸಂಪಾದನೆಯೆಲ್ಲಾ ಹೊರದೇಶಕ್ಕೆ ಹೋಗಿಬಿಡುತ್ತದೆ. ಕೊಡಗಿನಿಂದ ಒಡಗಿಗಳೂ ಕಮ್ಮಾರರೂ ಗರಗಸದವರೂ ಸುಮಾರು ವರ್ಷಕ್ಕೆ 4 ಯಾ 5 ಲಕ್ಷ ರೂಪಾಯಿ ದೇಶದಿಂದ ಹೊರಕ್ಕೆ ತೆಗೆದುಕೊಂಡು ಹೋಗುತ್ತಾರೆ. ಕೈಗಾರಿಕೆಗಳನ್ನು ಕಲಿಸಿದರೆ ಈ ಹಣವೆಲ್ಲಾ ದೇಶದಲ್ಲೇ ಉಳಿದು ಹೊರಗಿನಿಂದ ಉತ್ಪತ್ತಿಯಾಗುತ್ತದೆ. ಠರಾವಿಗೆ ನನ್ನ ಸಂಪೂರ್ಣ ಒತ್ತಾಸೆ ಇದೆ.

ಮೆ|| ಬಿ ಶ್ರೀನಿವಾಸರಾಯರು

ದೇಶದ ಉತ್ಪತ್ತಿಯು ಅಭಿವೃದ್ಧಿಯಾಗುವಂತೆ ಕಸಬುಗಳನ್ನು ಕಲಿಸಿಕೊಡಬೇಕು. ಚಿಕ್ಕದಾಗಿಯಾದರೂ ಕೈಗಾರಿಕೆ ಸ್ಕೂಲ್ ಕೂಡಲೇ ಪ್ರಾರಂಭವಾಗಬೇಕು. ಒಂದೆರಡು ವಿಧದ ಕೈಗಾರಿಕೆಯಾದರೂ ತತ್ಕಾಲ ತೆರೆದುಕೊಂಡರೆ ಹಿಂದಿನಿಂದ ವಿಧವಿಧದ ಕೈಗಾರಿಕೆಗಳನ್ನು ಸಹ ಕಲಿಸಬಹುದು.

ಕೈಗಾರಿಕೆ ಸ್ಕೂಲಿಗೆ ನಾನು ವಿರೋಧಿಸುವದಿಲ್ಲ. ಸಾಧ್ಯವಿರುವ ಒಂದು ಏರ್ಪಾಡನ್ನು ಯೋಚಿಸಿದರೆ ಹಣವನ್ನು ದೊರಕಿಸಿಕೊಳ್ಳಬಹುದು.

ಮೆ|| ಜಿ ಎ ಯೇಟ್ಸ್.

ನಾನು ಈ ಮೊದಲೇ ಈ ವಿಷಯ ಯೋಚಿಸಿದ್ದೇನೆ. ನಾನು ಊರಿಗೆ ರಜದಲ್ಲಿ ಹೋಗುವ ಮುಂಚೆ ಸಾಧ್ಯವಿರುವ ಒಂದು ಸ್ಕೀಮ್ ತಯಾರಿಸಿಕೊಟ್ಟು ಹೋಗುತ್ತೇನೆ.

ಮೆ|| ಪಂದಿಯಂಡ ಬೆಳ್ಯಪ್ಪನವರು

ಸ್ಕೀಮ್ ತಯಾರಿಸುತ್ತೇನೆಂತ ಹೇಳಿದ್ದರಿಂದ ಠರಾವಿಗೆ ಒಪ್ಪಿದಂತಾಯಿತೇ ಅಭಿಪ್ರಾಯ ತಿಳಿಯಬೇಕೆಂತ ಇದ್ದೇನೆ.

ಈ ಠರಾವು ಓಟಿಗೆ ಹಾಕಿ ಮಂಜೂರಾಯಿತು.

ಅಧ್ಯಕ್ಷರು.

ಕೊಡಗು ನ್ಯಾಯವಿಧಾಯಕ ಸಭೆಯ ಮೆಂಬರುಗಳೇ! ಈ ಸಾರಿಗೆ ಚರ್ಚೆಗೆ ಇರಲು ಸಾಧ್ಯವಿದ್ದಷ್ಟು ವಿಷಯಗಳು ಚರ್ಚೆಯಾಯಿತು. ದಿನ ಇಕ್ಕಟ್ಟಾಗಿದೆ. ಈ ಸಭೆಯ ಕೆಲಸವನ್ನು ಮುಂದಕ್ಕೆ ಇಟ್ಟಿರುತ್ತೇನೆ. ಚರ್ಚೆಗೆ ಕಳುಹಿಸಿದ ಠರಾವುಗಳು ಇನ್ನೂ ಅನೇಕ ಇರುವುದರಿಂದ ಅವುಗಳು, ಬಾಗಶಃ ಮಳೆಗಾಲಕ್ಕೆ ಮುಂಚೆಯೇ ಇನ್ನೊಂದು ಮೀಟಿಂಗ್ ಕೂಡ

ತ ಇದ್ದೇನೆ. ಆಗ ಉತ್ತರಾವುಗಳನ್ನು ದರ್ಶನ
ು. ನಿಮ್ಮ ದರ್ಶನಯನ್ನು ದಯಪಾಲಿಸಿದ ಕ್ರಮವು ನನಗೆ
ತೃಪ್ತಿಯನ್ನುಂಟುಮಾಡಿದೆ. ಒಳ್ಳೇ ಬುದ್ಧಿಯೂ,
ಧಾನವೂ, ನ್ಯಾಯವಾದ ರಣಗಳಿಗೆ ಒಪ್ಪಿಕೊಳ್ಳುವ
ನವೂ ಇತ್ತು. ಇದರಿಂದ ಇನ್ನು ಮುಂದಕ್ಕೆ ಸಹ
ಯಾಗಿ ಕೆಲಸ ನಡೆದೀತೆಂದು ನನಗೆ ನಂಬಿಕೆಯಿದೆ.
ಗಿನ ಕ್ಷೇಮವನ್ನೇ ನಮ್ಮೆಲ್ಲರ ಮನಸ್ಸಿನಲ್ಲೂ ಇದೆ. ಆದರೆ
ೇಮಕ್ಕೆ ದಾರಿ ಯಾವುದೆಂಬುದರಲ್ಲಿ ಮತಭೇದವಿರ
ದು. ಯಾವ ಸಭೆಯಲ್ಲೇ ಆಗಲಿ ಮತಭೇದವಿದ್ದೇ
ತ್ತೆ. ಪ್ರಜಾಸತ್ತಾತ್ಮಕ ಸರ್ಕಾರವು ತೃಪ್ತಿಕರವಾಗಿ
ಬೇಕಾದರೆ ಮತಭೇದವಿರಲೇಬೇಕು. ರಾಜಿಸ್ವಭಾವವು
ಕವೇಳೆ ಅವಶ್ಯ ಬೀಳುತ್ತೆ. ಭ್ರಾತೃತ್ವ ಸಹಕಾರಶಕ್ತಿ
ಬಹಳ ಅವಶ್ಯವಿದೆ. ಈ ಗುಣಗಳೆಲ್ಲಾ ನಮ್ಮ ಈ ಸಭೆ
ಇತ್ತೆಂತ ಹೇಳಲಿಕ್ಕೆ ಸಂತೋಷಪಡುತ್ತೇನೆ. (ಕೇಳಿ
) ಅಧ್ಯಕ್ಷರಿಗೆ ಕೊಟ್ಟ ಗೌರವಕ್ಕೂ ಮರ್ಯಾದೆಗೂ
ನು ಅಭಿವಂದಿಸುತ್ತೇನೆ. ಆದುದರಿಂದ ನನ್ನ ಕೆಲಸ ಸುಲಭ
ು. ಬೇರೆ ಕೌನ್ಸಿಲುಗಳಲ್ಲಿ ಅಧ್ಯಕ್ಷರ ಅನುಭವಗಳನ್ನು
ಡುವಾಗ ನನ್ನ ಕೆಲಸ ಬಹಳ ಸುಲಭವಾಗಿತ್ತೆಂತಲೇ
ಲು ಸಂತೋಷಿಸುತ್ತೇನೆ (ನಗು) ನಿಮ್ಮ ನಿಮ್ಮ ಮನೆ
ಗೆ ಕ್ಷೇಮವಾಗಿ ಹೋಗಿ ಎಂತ ಬಯಸಿ ಸಭೆಯನ್ನು
ಕ್ತಾಯಮಾಡಿದ್ದೇನೆ.

ವಿನಂತಿ.

ಕಳೆದ ಮಾರ್ಚಿ ತಿಂಗಳಲ್ಲಿ ಕಠಿಣ ಕಾಯಿಲಸ್ಥನಾಗಿ ಕೇರಿ ಆಸ್ಪತ್ರೆಯಲ್ಲಿದ್ದ ನನ್ನನ್ನು ನೋಡಲು ನನ್ನ ನೆಂಟರು ಸ್ನೇಹಿತರು, ಮತ್ತು ಹಿತಚಿಂತಕರನೇಕರು ಆಸ್ಪತ್ರೆ ಬಂದದ್ದಲ್ಲದೆ ನಾನು ನನ್ನ ಕೊಡುಗುಂದ ಮನೆಗೆ ಹೋದ ಮೇಲೆ ಅಲ್ಲಿಗೂ ಸಹ ಬಹಳ ಶ್ರಮೆಯಿಂದ ಬಂದಿದ್ದರು. ಇಂಥಾ ಪ್ರೇಮಮಿತ್ರ ಹಿತೈಷಿಗಳಿಗೆಲ್ಲರಿಗೂ (ಪ್ರತ್ಯೇಕ ಪ್ರತ್ಯೇಕ ಕಾಗದ ಮೂಲಕ ವಂದಿಸಲು ಸಾಧ್ಯವಲ್ಲದ್ದರಿಂದ) ಈ ಪತ್ರಿಕೆಯ ಮೂಲಕ ನನ್ನ ಕೃತಜ್ಞತೆಯನ್ನು ಸೂಚಿಸುತ್ತೇನೆ.

ತಾರೀಖು 11—5—24 ಕೋದಂಡ ಚಂಗಪ್ಪ.
ಕೊಡುಗುಂದ, ಬೆಟ್ಟಗೇರಿ

ಪತ್ರವ್ಯವಹಾರಗಳು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಬಾಧ್ಯಸ್ಥರಾದವರಲ್ಲ. [ಎಡಿಟರ್]

ಸ್ವಾಮಿ,

ಆಸ್ಪತ್ರೆಗಳು ಕೆಟ್ಟ ಕಾಯಿಲವೂ ಮರಣವೂ ಹೆಚ್ಚಿತು ಎನ್ನುತ್ತ ಪಶುವೈದ್ಯಶಾಲೆ ಹೆಚ್ಚು ದನಕರುಗಳೂ ಸಾಯುವುದು ಹೆಚ್ಚಾಯಿತೆಂದು ಅತಿಕೊಳ್ಳುವದು ಹೆಚ್ಚಾಗುತ್ತಲಿದೆ. ಇದಕ್ಕೆ ಕಾರಣವೇನಿರಬಹುದೆಂಬುದು ನಿಶ್ಚಯಿಸುವದೂ ಮಾಡಿಕೆಯಾಗಿದೆ. ಯೋಚಿಸಿದರೆ ನಿಜ ತಿಂದು ಹಿಂಸಿಸಲು ಅಲ್ಪ ಭಾವನೆಗಳೂ ಇವೆ.

ಮೊದಲು ಮೊದಲು ಆಸ್ಪತ್ರೆಗಳು ಪ್ರಚಾರಕ್ಕೆ ಬಂದಾಗ ಹಲಕೆಲವು ಜನರು ಮಾತ್ರ ಆಸ್ಪತ್ರೆಗೆ ಹೋಗಿ ಔಷಧಿ ತೊಂದುತ್ತಿದ್ದುದು. ಡಾಕ್ಟರುಗಳಿಗೆ ಕಾಯಿಲಸ್ಥರನ್ನು ಚೆನ್ನಾಗಿ ಪರೀಕ್ಷಿಸಿ ತಕ್ಕ ಔಷಧಿಗಳನ್ನು ಕೊಡಲು ಅನುಕೂಲವಾಗುತ್ತಿತ್ತು. ಕಾಯಿಲವೂ ಗುಣವೂ ಆಗುತ್ತಿತ್ತು. ಉಳಿಕೆಯವರಿಗೆ ಅವರವರ ಹಿತ್ತಲುಗಳಲ್ಲಿಯೂ ಬೆಟ್ಟಗಳಲ್ಲಿಯೂ ಇದ್ದ ನಾಗದಾಳಿ, ಗಾಳಿಮುದ್ದು, ತೊಳಸಿ, ತುಂಬೆ ಮೊದಲಾದವೇ ಔಷಧಿಗಳಾಗಿತ್ತು.

ಬರಬರುತ್ತಾ ಆಸ್ಪತ್ರೆಗೆ ಹೋಗುವವರ ಸಂಖ್ಯೆ ಹೆಚ್ಚಿದ್ದರಿಂದ ಮೇಲ್ಕಂಡ ಔಷಧಿಗಳೆಲ್ಲಾ ಮಾಯವಾಗಿ ಅವುಗಳ ಬದಲಿಗೆ ಮೂರು ಕಾಸಿಗೆ ಬೆಲೆಯಿಲ್ಲದ ಕರಮೆ ಸೊಪ್ಪು ವಗೈರೆ ತುಂಬಿದವೋ? ಅಲ್ಲ ಕರಮೆ ಸೊಪ್ಪು ವಗೈರೆ ತುಂಬಿದ್ದರಿಂದ ಆಸ್ಪತ್ರೆಗಳಿಗೆ ಹೋಗುವವರ ಸಂಖ್ಯೆ ಹೆಚ್ಚಿತ್ತೋ ತಿಳಿಯಲರಿಯೆ. ಹಾಗೆಂದರೆ ಆಸ್ಪತ್ರೆಗಳಿಗೆ ಹೋಗಬಾರದು ಎಂಬಲ್ಲ ನನ್ನ ಅಭಿಪ್ರಾಯ. ಆದರೆ ನಾನು ನೋಡಿದ ವೀರರಾಜಪೇಟೆ ಆಸ್ಪತ್ರೆಯಿಗೆ ಹೋಗುವ ಕಾಯಿಲಸ್ಥರನ್ನು ನ್ಯಾಯವಾಗಿ ಪರೀಕ್ಷೆ ಮಾಡಿ ಔಷಧಿಗಳನ್ನು ಕೊಡಲು ತಾಗಿರುವ ಎರಡು ಡಾಕ್ಟರುಗಳ ಜೊತೆಗೆ ಇನ್ನಿಬ್ಬರ ಡಾಕ್ಟರುಗಳು ನೇಮಕವಾದರೂ ಆಗಲಾರದೆಂದು ನನ್ನ ಖಂಡಿತ ಅಭಿಪ್ರಾಯವಾಗಿದೆ. ಹೀಗಿರುವಾಗ ಕಾಯಿಲಸ್ಥರ ಹೆಸರು ಗ್ರಾಮ ವಯಸ್ಸು ಔಷಧಿ ಮೊದಲಾದವುಗಳನ್ನೂ ಡಾಕ್ಟರುಗಳೇ ಬರಕೊಳ್ಳಲೂ ಬೇಕು. ಮಧ್ಯೆ ಮಂತ್ರತಂತ್ರಗಳನ್ನು ನಂಬಿದಷ್ಟು ಫಲಕಾರಿ ಎಂದವರ ಜೇಳಿಕೆ. ಇಷ್ಟಾದರೂ ಕಾಯಿಲಸ್ಥರನ್ನು ಇಷ್ಟವಾದವೇಳೆ ಮಾಡುವದೆಂದರೆ ಹೇಗೆ? ಜನರು ಡಿಕೊಳ್ಳದಿರುವದು ಹೇಗೆ? ಇದಕ್ಕಾಗಿ ಸರಕಾರದವರು ಬೆಳಗ್ಗೆ ಹನ್ನೊಂದು ಗಂಟೆಯಿಂದ ಸಾಯಂಕಾಲ ಆಸ್ಪತ್ರೆ ತೆರಿಯುವ ಹೊತ್ತಿನವರೆಗೆ ಪ್ರತ್ಯೇಕ ಒಬ್ಬ ಡಾಕ್ಟರನ್ನು ನೇಮಿಸಿ ಕಾಯಿಲಸ್ಥರ ಹೆಸರು ವಯಸ್ಸು ವಗೈರೆಗಳನ್ನು ಬರೆಕೊಳ್ಳಲು ಒಬ್ಬೊಬ್ಬ ಕ್ಲಾರ್ಕುಗಳನ್ನೂ ದೊಡ್ಡ ಆಸ್ಪತ್ರೆಗಳಾದ ವೀರರಾಜಪೇಟೆ ಮಡಿಕೇರಿ ಆಸ್ಪತ್ರೆಗಳಿಗಾದರೂ ನೇಮಿಸಿದರೆ ಮಲೇರಿಯ ಜ್ವರವೊದಲಾದ ಕಾಯಿಲಗಳ ತವರುಮನೆಯಾದ ಈ ದೇಶನಿವಾಸಿಗಳಿಗೆ ಬಹು ಉಪಕಾರವಾಗುವದು.

ಇನ್ನು ಹೆಸರು ಮಾತ್ರಕ್ಕಿರುವ ನಮ್ಮ ಪಶುವೈದ್ಯಶಾಲೆಗಳೋ? ಅವುಗಳು ಸ್ಥಾಪಿತವಾಗಿ ಅನೇಕ ವರ್ಷಗಳಾದಾಗ್ಯೂ ಇನ್ನೂ ಅವುಗಳು ಪಶುವೈದ್ಯರ ಜೇಬಿನಲ್ಲೇ ಇವೆ. ಒಂದಾವೃತ್ತಿ ಕಾಯಿಲದ ದನಗಳಿಗೆ ಔಷಧಿ ತೆಗೆದುಕೊಂಡು ಇನ್ನೊಂದಾವೃತ್ತಿ ಬಂದರೆ ಆಸ್ಪತ್ರೆಯೇ ಇಲ್ಲ. ಏನಾಯಿತು? ವೈದ್ಯರು ಫಾರೆಸ್ಟಿಗೆ ಹೋಗಿದ್ದಾರೆ, ಇಲ್ಲವೆ ದೊರೆಕೊಟದಿಂದ ಕಾಗದ ಬಂದು ಅಲ್ಲಿಗೆ ಹೋದರು. ಬರುವದೆಂದು? ಗೊತ್ತಿಲ್ಲ. ಹೀಗಾದರೆ ಎತ್ತುಗಳು ಏನಾದವೆಂದು ನಾತಶಮನೂ ಯಾರೇ ಊಹಿಸಿ ಕಾಯಿಲದ ಎತ್ತುಗಳನ್ನು ಆಸ್ಪತ್ರೆಗೆ ತಂದರೆ ಬ ಹೋ ಹೋ ದೂರ ದೂರ ಸರಕಾರಿ ಗೂಳಿಯಿದೆ ಇಲ್ಲಿ ಇಡಲು ವಾರ್ಡುಗಳಿಲ್ಲವೆಂದು ಅಟ್ಟಲಿ ಕಾಯಿತು. ಮಾಡುವದೇನು. ನಾವು ಅವ್ಯವಸ್ಥೆಗೊಳ್ಳಪಟ್ಟ ಅವ್ಯವಸ್ಥೆಸಿತ್ತು ಮರಿಲ್ಲ. ಅಂತು ಆಸ್ಪತ್ರೆಗಳನ್ನು ದೂರುವವರಲ್ಲಿ ಯಾವ ಅನ್ಯಾಯವೂ ಇಲ್ಲ. ಆದ್ದರಿಂದ ಘನ ಸರಕಾರದವರು ದಯವಿಟ್ಟು ಸಿವಿಲ್ ಆಸ್ಪತ್ರೆಗಳಂತೆ ಬೆಳಗ್ಗೆ ಮತ್ತು ಸಾಯಂಕಾಲ ವೈದ್ಯಶಾಲೆಯನ್ನು ತೆರೆಯಂ ಆಗಿ ತೆರದಿರುವಂತೆ ಮಾಡಿ ಬಚ್ಚೊಬ್ಬ ಕಾಂಪೌಂಡರುಗಳನ್ನು ನೇಮಿಸಿ ಕಾರಿನ್ಯವರು ರೈತರ ಪ್ರಯೋಜನಕ್ಕಾಗಿಟ್ಟು ಪಶುವೈದ್ಯರ ಸಾಹಾಯ ನಿರೀಕ್ಷಿಸದಂತೆ ಮಾಡಬೇಕಾಗಿ ಪ್ರಾರ್ಥನೆ.

ರೈತ

ಸದ್ವಿಚಾರವಿಮರ್ಶಕ ಮಹಾಶಯರೆ!'

ಕೊಡಗು ತಾರೀಖು ೧೮-೪-೨೪ ನೇ ಪತ್ರಿಕೆಯಲ್ಲಿ "ತಿಳಿದವ" ನೆಂಬೊಬ್ಬರು ಬರೆದಿಸಿದ ಸಪ್ತಸಿಂಹ ಬ್ರಾಹ್ಮಣರ ವರ್ತನೆದ ಸಂಗತಿವಿಚಾರಿಸುವಾಗ್ಗೆ "ಅಳಿದ ಮಗುವಿಗೆ ಹಾಲಿಲ್ಲ" ವೆಂಬ ನ್ಯಾಯವು ಮಿಶ್ರ ಬ್ರಾಹ್ಮಣರಲ್ಲಿ ಉಳಿದದ್ದಾಗಿ ಕಂಡುಬರುತ್ತದೆ ಮತ್ತು ಇವರಿಗೆ ೯-೧-೨೪ ರಲ್ಲಿ ಶ್ರೀ ಶೃಂಗೇರಿಜಗದ್ಗುರುಗಳವರು ದಯಪಾಲಿಸಿದ ತೀರ್ಮಾನಪತ್ರವನ್ನೂ ಸಹ ನೋಡಿದೆನು. ಆ ವಿಚಾರಗಳನ್ನೆಲ್ಲಾ ವಿಚಾರಿಸಿ ನೋಡುವಾಗ್ಗೆ ಇವರ ವಿದ್ಯಾರ್ಥಿ ಈವರೆಗೆ ಮಿಶ್ರ ಬ್ರಾಹ್ಮಣರು ನಡೆಸುಕೊಂಡು ಬಂದ ಸಂಗತಿಯು ಅತ್ಯಂತ ಅವಿಚಾರಪೂರ್ವಕ "ಗಾಡ" ಯಾವದೋ ಒಂದು ಪಕ್ಷಯುಕ್ತ ಸ್ವಾರ್ಥತತ್ಪರನ್ನಾಗಲಿಸಿ ನಡೆದುಕೊಂಡು ಬಂದಹಾಗೆಯೂ, ಇನ್ನೂ ಮುಂದೆ ಸ ತರ್ಕವಿತರ್ಕಗಳು ಹೊಳೆದು ಬರುವದಕ್ಕಾಗಿ ಈ ಸಂಗತಿಯು ಸದ್ವಿಚಾರ ವಿಮರ್ಶೆ ಬಗ್ಗೆ ಪಂಡಿತಮಂಡಲಿಗಳ ಸಮಕ್ಷಮದಲ್ಲಿ ನನ್ನ ಕೆಲವು ಅಭಿಪ್ರಾಯಗಳನ್ನು ಸೂಚಿಸಬೇಕಾಗಿ ಬಂತು.

ಇವರು ದಶವಿಧಬ್ರಾಹ್ಮಣರೊಳಗೆ ಸೇರದರೆಂದೂ ಇವರಿಗೆ ಕೆಲವು ನಿಂದ್ಯಾರೋಪಣೆಗಳ ದೆಸೆಯಿಂದ ಬ್ರಾಹ್ಮಣವರ್ಗಕ್ಕೆ ಸೇರಿದವರಲ್ಲವೆಂದೂ ಮುಂದಾಗಿ ಕೊಡಗು ದಕ್ಷಿಣಕನ್ನಡಾ ಜಿಲ್ಲೆಗಳ ಕೆಲವು ಮುಂತಾದ ಬ್ರಾಹ್ಮಣರು ಬಹುವಾಗಿ ತಿರಸ್ಕರಿಸುತ್ತಾ ಇದ್ದದ್ದಲ್ಲದೆ ಈ ಜನಾಂಗದ ಪಾತಿತ್ಯಕಾರಣವು ಸಹ ಆಧಾರಪೂರ್ವಕವಾಗಿಯೇ ಇವೆ. ಮುಂದಾದ ಸಂಗತಿಗಳನ್ನು ಈಗಿನ ರೀಗೆ ಇವರನ್ನು ತಿರಸ್ಕರಿಸುತ್ತಕ್ಕವರು ಹೇಳಿಕೊಂಡು ಬರುತ್ತಿದ್ದಾರೆ. ಮತ್ತು ಜಾತಿವಿಚಾರದಲ್ಲಿ ಅಗ್ರಗಣ್ಯವಾದ ವಿದ್ವನ್ಮಂಡಲೀ ಸೇರಿದ ಬ್ರಾಹ್ಮಣಜಾತಿ ಧರ್ಮ ತಿಳಿದ ಮಠಾಧಿಪತಿಗಳೂ ಸಹ ಹೇಳಿಕೊಂಡು ಬರುವರಲ್ಲದೆ ಕಾರ್ಯತಃವೂ ತಿರಸ್ಕಾರ ನಡೆಸಿಕೊಂಡು ಬರುತ್ತಾರೆ. ಸಹಜವಾಗಿ ಇವರು ನಿಂದ್ಯಾಸ್ಪದಕ್ಕೊಳಗಾಗಿದ್ದರೆ ಶ್ರೀ ಶೃಂಗೇರಿಗಳವರು ಇಂಥಾ ಆಜ್ಞಾಪತ್ರವನ್ನು ಕೊಡುತ್ತಿರಲಿಲ್ಲ. ಮತ್ತು ಇವರ ವಿಷಯದಲ್ಲಿ ಉತ್ತರ, ದಕ್ಷಿಣ, ಕನ್ನಡ ಜಿಲ್ಲೆಗಳಲ್ಲಿ ಸಂಸ್ಥಾನದವರು ವಿಚಾರಿಸುವಾಗ್ಗೆ ಅಲ್ಲಿನ ಮಠಾಧಿಪತಿಗಳಾಗಲಿ, ಪ್ರಮುಖ ಇತರ ಬ್ರಾಹ್ಮಣರಾಗಲಿ ಪಾತಿತ್ಯ ಕಾರಣ ಬಗ್ಗೆ ಸಮರ್ಪಕವಾದ ಉತ್ತರವನ್ನಾಗಲಿ ತಕ್ಕದಾದ ಆಧಾರಗಳನ್ನಾಗಲಿ ತೋರಿಸಲು ಅಸಮರ್ಥರಾಗಿ ಬರೇ ಬಾಯಹೇಳಿಕೆಯನ್ನು ಕೊಟ್ಟಿದ್ದು ಬಹಳ ವಿಷಾದಕರವಾದ ಸಂಗತಿಯಾಗಿದೆ. ಹೀಗೆ ಒಂದು ಜನಾಂಗವನ್ನು ಕಾರಣವಿಲ್ಲದ ದೂರವಮಾಡುತ್ತಿರುವದು ಬ್ರಾಹ್ಮಧರ್ಮಕ್ಕೆ ಕೇವಲವಿರುದ್ಧ ಧರ್ಮವಾಗಿದೆ. ಈಗ ಪ್ರತಿಯೊಂದು ಸಂಗತಿಯನ್ನೂ ಸಮಗ್ರವಾಗಿ ಶೋಧಿಸುವ ಸಮಯವಾದ್ದರಿಂದ ಈ ಜನಾಂಗದವರ ಪಾತಿತ್ಯ ಅಕಾರಣಗಳನ್ನು ಪರಿಶೋಧಿಸುವಿಕೆಯು ಬ್ರಾಹ್ಮಣಸಮುದಾಯದ ಕರ್ತವ್ಯವಾಗಿದೆ. ನಾನೇನೂ ಶೃಂಗೇರಿಯವರ ಅಭಿಪ್ರಾಯಕ್ಕೆ ಒಪ್ಪಿಕೊಂಡದಾಗ್ಯೂ ಯಾ ಇವರು ನಿರ್ದೋಷಿಗಳೆಂದೂ ಹೇಳುವ ನಿಮಿತ್ತ ಈ ಲೇಖನಬೇಯಿಸಿದ್ದಲ್ಲಿ ಪರಂತು ಶೃಂಗೇರಿಯವರಿಗೆ ಪ್ರತಿ ಜಾತಿ ಜನರ ವಿಮರ್ಶನೆಗೆ ಹಕ್ಕು ಇದೆಯೊ? ಹಾಗೂ ಪುರಸ್ಕಾರ ಪತ್ರಕೊಡುವ ಸ್ವಾತಂತ್ರ್ಯತೆ ಉಂಟೆ? ಇವರು ಕೊಟ್ಟ ಪತ್ರ ಎಷ್ಟರವರಿಗೆ ಯಾ, ಯಾವ ಬ್ರಾಹ್ಮಣ ಸಮುದಾಯಕ್ಕೆ ವ್ಯಾಪಿಸುತ್ತದೆ? ಇವರು ಅಪಾತಿತ್ಯರಾಗಿದ್ದರೆ ಯಾಕೆ ಇತರ ಮಠಾಧಿಪತಿಗಳು ಪರಿಗ್ರಹಿಸಲಿಲ್ಲ. ಅಥವಾ ಪಾತಿತ್ಯರಾಗಿದ್ದರೆ ಯಾಕೆ ಸಮರ್ಪಕ ಆಧಾರ ಪ್ರಮಾಣಗಳನ್ನು ಕೊಡಲಿಲ್ಲ ಎಂಬೀತ್ಯಾದಿ ಇತ್ಯಾದಿ ಪ್ರಶ್ನೆಗಳು ಹುಟ್ಟದಿರಲಾರವು. ಒಂದು ಸಮಯ ಶೃಂಗೇರಿಯವರು ಕೊಟ್ಟ ಅಭಿಪ್ರಾಯವು ಸಮಗೆ ಸಮ್ಮಂತವಿಲ್ಲವೆಂಬದಾಗಿ ಕೆಲವು ಬ್ರಾಹ್ಮಣಸಮುದಾಯವು ಹೇಳಬಹುದು. ಆದರೆ ಈ ಮಾತು ಕೇವಲ ಮಿಳತತ್ವದಲ್ಲಿ ಸಂಬಂಧಿಸುವದೇ ಹೊರತು ಇವರು ಬ್ರಾಹ್ಮಣರಲ್ಲವೆಂಬವಾಗಿ ಪ್ರಕಾಶಪಡಿಸುವದೆ ಸಾಧ್ಯವಿಲ್ಲ. ಈಗ ಮುಖ್ಯವಾಗಿ ಬ್ರಾಹ್ಮಣ ಮಂಡಲಿಯಲ್ಲಿ ಇವರು ಬ್ರಾಹ್ಮಣ ವರ್ಗಕ್ಕೆ ಸೇರಿದವರು ಹೌದೊ? ಅಲ್ಲವೊ? ಎಂಬುದೇ ಮುಖ್ಯ ಪ್ರಶ್ನೆಯಾಗಿದೆ. ಅಲ್ಲವಾದರೆ ಇದಕ್ಕೆ ಸರಿಯಾದ ಪ್ರಮಾಣಗಳು ಇವೆಯೆ? ಎಂಬುದೇ ಇದರ ಜೊತೆ ಪ್ರಶ್ನೆಯು. ಯಾಕಂದರೆ ಯಾವ ಜನಾಂಗದ ಕುಂದುಕೊರತೆಗಳನ್ನು ಪದರ್ಶಿಸುವದೆಯೂ, ಬರೇ ಬಾಯಹೇಳಿಕೆಯಾಗಲಿ, ಸಂಪ್ರದಾಯ ಆಚರಣೆಯಾಗಲಿ ಕೇವಲ ಸಾಲದಾಗಿದೆ. ಇವುಗಳೆಲ್ಲಾ ಯಾವದಾದರೊಂದು ಕಾರಣಗಳನ್ನುದ್ದೇಶಿಸಿ ಬರುವವದೇ ಹೊರತು ಶಾಸ್ತ್ರಸಮ್ಮತಿಗೆ ಸರಿಯಾಗಿಯೇ ಇದೆ ಎಂದು ಹೇಳುವದೆ ಸಾಧ್ಯವಿಲ್ಲ. ಹಾಗೆ ಶೃಂಗೇರಿಯವರು ಎಲ್ಲಾ ಕಡೆಗಳಲ್ಲೂ ವಿಚಾರಿಸುವಾಗ್ಗೆ ಪ್ರತಿವಾದಿಗಳು ಮಿಳತತ್ವದ ಸಂಗತಿಯಲ್ಲಿ ಮಾತ್ರ ಭೇದ ಹೇಳುವರೇ ಹೊರತು ನಡತೆಗಳ ಮಟ್ಟಿಗೆ ಭೇದವೇ ಇಲ್ಲ. ಮತ್ತೂ ಇವರನ್ನು ವಿಷೇಧಿಸತಕ್ಕವರು ಯಾವ ಸಮರ್ಪಕ ಪ್ರಮಾಣವನ್ನು ಕೊಡಲು ಶಕ್ತರಾಗಲಿಲ್ಲ. ಮಾತ್ರವಲ್ಲ ಇವರ ನಿಷೇಧ ವಿಷಯವಾಗಿ ಬ್ರಾಹ್ಮಣ ಸಮುದಾಯದಲ್ಲಿ ಶ್ರೇಷ್ಠರೆನಿಸಿಕೊಂಡರೆ ಶಿವಳ್ಳಿ ಜನಾಂಗಗಳ ಹಾಗೂ ಉಡುಪಿ ಶ್ರೀಕೃಷ್ಣದೇವರ ಜನರಲು ವಿಷಂಬರಾದ ಸರ್ವವನ್ನೂ ತಿಳಿದಂಥಾ ತಿಳಿಯಪಟಲೂ ಸ್ವಾತಂತ್ರ್ಯತೆಯುಳ್ಳ ವ್ಯಾಸರಾಯರು ಕೇವಲ ಬಾಯಹೇಳಿಕೆಯನ್ನು ಹೇಳಿ ಸರಿಯಾದ ಯಾವ ಆಧಾರಗಳನ್ನೂ ಸಮರ್ಪಕವಾಗಿ ಕೊಡದೆ ಇರುವದು ಬಹಳ ವಿಚಾರನೀಯವಾದ ಸಂಗತಿಯಾಗಿದೆ. ಈ ಸಂಗತಿಗಳನ್ನೆಲ್ಲಾ ವಿಚಾರಿಸುವಾಗ್ಗೆ ಇವರು ಯಾವುದೊ ಒಂದು ದೇಶದಿಂದ ಇಲ್ಲಿಗೆ ಬಂದವರೆಂದೂ, ಆ ಕಾರಣದಿಂದಲೇ ಇವರನ್ನು ಇತರರು ಜೊತೆಸೇರಿಸಿಕೊಳ್ಳದೆ ದೂಷಣೆಯೋದಗಳನ್ನು ಹೊರಿಸಿದ್ದೆಂದೂ ವ್ಯಕ್ತವಾಗುತ್ತದೆ. ಯಾಕಂದರೆ ಚರ್ಚೆಸದ ವಿಷಯ ಯಾವ ಸಂಗತಿಯು ನಿಜಾಂಶವು ಸರಿಯಾಗಿದೊರೆಯಲಾರದು, ಆದ್ದರಿಂದ ಈ ಸಂಗತಿಯು ವಿಜಾಂಶಕ್ಕೋಸ್ಕರ ಈ ಲೇಖನವನ್ನು ಪ್ರಕಾಶಪಡಿಸಲು ಕಾರಣವಾಯಿತು.

ಅಪೇಕ್ಷಿ

ಹುದಿಕೇರಿ ಬೋರ್ಡುಲ್‌ಫಂಡ್ ಶಾಲೆಯ ಗೋಳು!

ಸ್ವಾಮಿ,

ಈ ಶಾಲೆಯನ್ನು ಗವರ್ನಮೆಂಟ್ ಶಾಲೆಯನ್ನಾಗಿ ಮಾಡಿ, ಲೋವರ್‌ಸೆಕಂಡರಿ ವರೆಗೆ ವಿರಿಸಿಕೊಡಬೇಕಾಗಿ ೩, ೪ ವರುಷದಿಂದಲೂ ಶ್ರೀಮಂಗಲನಾಡಿನವರು ಸಹ ಹುದಿಕೇರಿಯಲ್ಲಿ ಮೀಟಿಂಗ್ ಮಾಡಿ ಡಿ. ಬೋರ್ಡ್ ಪ್ರೆಸಿಡೆಂಟಿಗೆ ಮೆಮೋರಿಯಲ್ ಕಳುಹಿಸಿಯೂ ಜಮಾಬಂದಿ ಕಾಲದಲ್ಲಿ ಜಮಾಬಂದಿ ಆಫೀಸರಿಗೆ ಅರ್ಜಿ ಕೊಟ್ಟಿರುವರು. ಪ್ರತಿನಿಧಿಯಾದವರ ಸಂಗದ ಜನರಲ್ ಮೀಟಿಂಗಿನಲ್ಲಿ ಠರಾವು ತಂದರೂ, ನಾಡಿ ಆ ಇನ್ಸ್‌ಪೆಕ್ಟರವರ ಸಂಗಡ ರೂಬುರೂಬು ಮಾತಾಡಿದರೂ ಏನು ಪ್ರಯತ್ನಪಟ್ಟರೂ ನಿಷ್ಪ್ರಯೋಜನವಲ್ಲದೆ ಪ್ರಯೋಜನವಾಗುವಂತೆ ಕಾಣುವದಿಲ್ಲ. ಕೊ. ಕಮಿಷನರಾಗಿದ್ದ ಸಾಟರ್‌ಸಾಹೇಬರವರಿಗೆ ಎಷ್ಟು ಅರ್ಜಿ ಬರಕೊಂಡರೂ ಮೆಮೋರಿಯಲ್ ಕಳುಹಿಸಿಯಾಗಿಯೂ ಮೂಲೆ ಗೊತ್ತಿಬಿಟ್ಟರು. ಶ್ರೀಮಂಗಲನಾಡಿನವರು ಕಂದಾಯ ಕಟ್ಟುವ ರೈತರಲ್ಲವೆಂದೇ ಭಾವಿಸಬೇಕಾಗಿದೆ. ತಿಳಿದಂ ಪೊಯಗರಮೇಲೆ ಓದುತ್ತಿರುವ ಶಾಲೆಗೆ ಒಬ್ಬ ಹೆಡ್ಮಾಸ್ಟರನ್ನು ಲೋವರ್‌ಸೆಕಂಡರಿ ಪಾಸಾದವರನ್ನು ಕಳುಹಿ

ಸಿಕೊಟ್ಟದ್ದು ನಮ್ಮ ಪುಣ್ಯವಾಗಿದೆ. ಮೊದಲಿನ ಹೆಡ್ಮಾಸ್ಟರು ಗತಿಸಿ ಒಂದು ವರುಷಕಾಲ ಕಳೆದನಂತರ ಈಗ ಇರುವ ಹೆಡ್ಮಾಸ್ಟರನ್ನು ಕಳುಹಿಸಿಕೊಟ್ಟದ್ದಾಗಿರುತ್ತೆ. ಹಾಗಾದರೆ ಈ ಶಾಲೆಯ ಸ್ಥಿತಿ ಹ್ಯಾಗಿರಬಹುದು, ಸಾಚಕವಾಹಕರೇ ಊಹಿಸಿರಿ! ಹುದಿಕೇರಿಯು ತಾಲೋಕಿನ ನಾಲ್ಕು ಕಡೆಯಿಂದಲೂ ೧೫ ಮೈಲು ಮಧ್ಯಸ್ಥಳವಾಗಿಯೂ ಮೊದಲು ತಾಲೋಕು ಕಚೇರಿ ಸಹ ಇದ್ದು, ೭೦ ವರುಷಕ್ಕೆ ಮೊದಲೆ ಐಸ್ ಇಂಗ್ಲೀಷ್ ಶಾಲೆಯಾಗಿ ತಾಲೋಕಿನ ನಾಲ್ಕು ಕಡೆಯಿಂದ ಅನೇಕ ಮಹನೀಯರು ಬಂದು ಓದಿ ದೊಡ್ಡ ವಿದ್ಯಾವಂತರಾಗಿದ್ದಾರೆ. ಅಂತ ಈ ಶಾಲೆಯನ್ನು ಲೋಕಲ್‌ಫಂಡ್ ಶಾಲೆಯಾಗಿ ಮಾಡಿದ್ದು ಬಹಳ ವ್ಯಸನಕರವಾದ ಸಂಗತಿಯಾಗಿದೆ. ಈಚೆಗೆ ಈ ತಾಲೋಕಿನಲ್ಲು ಕೆಲವು ಇಂಗ್ಲಿಷ್ ಶಾಲೆ ಮಾಡಿರುತ್ತಾರೆ ಗೌರ್ನಮೆಂಟ್ ಶಾಲೆಯನ್ನಾಗಿಯೂ ಸಹ ಮಾಡಿರುತ್ತಾರೆ. ಅ, ಹಾ! ಸ್ತ್ರೀಮಂಗಲನಾಡಿನವರ ದುರ್ಭಾಗ್ಯವೇ!

ನಾನು ಕಳೆದ ೨೩ ನೇ ಇಸವಿ ಫೆಬ್ರವರಿಯಲ್ಲಿ ಮಡಿಕೇರಿಗೆ ಹೋಗಿದ್ದಲ್ಲಿ ರಾಜಕಾರ್ಯಪ್ರಸಕ್ತ ರಾಯಬಹಾದೂರ್ ಮನೆಯಪಂಡ ಮುತ್ತಣ್ಣನವರು ನನ್ನನ್ನು ನಾಡಿನ ಸಮಾಚಾರ ಕೇಳುತ್ತಿರುವಾಗ ಹುದಿಕೇರಿ ಶಾಲೆಯ ವಿಷಯವಾಗಿ ಕೇಳ ಹೇಳಿದ್ದೇನೆಂದರೆ—

ಬಹಳ ಪೂರ್ವದಿಂದಲೇ ಹುದಿಕೇರಿಯಲ್ಲಿ ಇಂಗ್ಲಿಷ್ ಶಾಲೆ ಇತ್ತೆಂತಲೂ ನಮ್ಮ ತಾಲೋಕಿನ ಎಲ್ಲಾ ಭಾಗದ ಹುಡುಗರು ಸದರಿ ಶಾಲೆಯ ಸುತ್ತಮುತ್ತಲಿರುವ ನೆಂಟರ ಮನೆಯಲ್ಲಿ ಉಳಿದುಕೊಂಡು ವಿದ್ಯೆ ಕಲಿಯುತ್ತಿದ್ದರೆಂದೂ, ತಾನು ಮತ್ತು ತನ್ನ ಅಣ್ಣ ಅ|| ಕಮಿಶನರಾಗಿದ್ದ ಬೆಳ್ಯಪ್ಪನವರು ಸಹ ಅಲ್ಲಿ ಮೊದಲು ಇಂಗ್ಲೀಷ್ ವಿದ್ಯಾಭ್ಯಾಸಮಾಡಿದೆವೆಂತಲೂ ಈವರೇಗು ಆ ಶಾಲೆಯನ್ನು ಲೋವರ್‌ಸೆಕೆಂಡರಿ ಶಾಲೆಯನ್ನಾಗಿ ಮಾಡಿಕೊಡದಿರುವದು ನಮ್ಮ ತಾಲೋಕಿನ ವಿದ್ಯಾಹೀನತೆಗೆ ಮುಖ್ಯಕಾರಣವೆಂತಲೂ, ಕೊಡಗಿನ ಮುಖ್ಯಪಟ್ಟಣವಾದ ಮಡಿಕೇರಿಗೆ ೪೦ ಮೈಲು ದೂರದಲ್ಲಿ ಹುದಿಕೇರಿ ಶಾಲೆ ಇರುವದರಿಂದ ಅಷ್ಟರವರೆಗೆ ಅದನ್ನು ಹೈಸ್ಕೂಲನ್ನಾಗಿ ಮಾಡಬಹುದಿತ್ತೆಂತಲೂ ತಾಲೋಕಿನ ಸೆಂಟರ್‌ಸ್ಥಳವಾದ್ದರಿಂದ ಖಂಡಿತವಾಗಿಯೂ ಲೋವರ್‌ಸೆಕೆಂಡರಿ ಶಾಲೆ ಮಾಡಿಕೊಡಬೇಕೆಂತಲೂ ಈವರೇಗೆ ಇಲ್ಲದಿರುವದು ಬಹಳ ವ್ಯಸನಕರವೆಂತಲೂ ಇದಕ್ಕೆಲ್ಲಾ ದೇಶದ ದೊಡ್ಡ ಅಧಿಕಾರಿಗಳು ನಿಗಾ ಇಡದಿರುವದೇ ಕಾರಣವೆಂತಲೂ ದೇಶವು ಹೀನಸ್ಥಿತಿಯಲ್ಲಿ ಇರುವದು, ಉನ್ನತಸ್ಥಿತಿಗೆ ತರುವದು, ದೊಡ್ಡ ಅಧಿಕಾರಿಗಳ ಕೈಯ್ಯಲ್ಲಿದೆಯೆಂತಲೂ ಸರಕಾರಕ್ಕೆ ತೃಪ್ತಿಯೂ ಪ್ರಜೆಗಳ ಅಭಿವೃದ್ಧಿಯೂ ಆಗಬೇಕಾದರೆ ದೊಡ್ಡ ಅಧಿಕಾರಿ ಉದ್ಯೋಗಸ್ಥರು ದೇಶದ ಎಲ್ಲಾ ಕಡೆ ತಿರುಗಿ ಕಣ್ಣಿಟ್ಟು ನೋಡಿ ಮನಸಿಟ್ಟು ಕೆಲಸಮಾಡಬೇಕೆಂತಲೂ, ಇಲ್ಲದಿದ್ದರೆ ಯಾವ ದೇಶ ಸರಕಾರವೇ ಆಗಲಿ ಪ್ರಜೆಗಳೇ ಆಗಲಿ ಯಾವಕಾಲಕ್ಕೂ ಅಭಿವೃದ್ಧಿಹೊಂದಲಿಕ್ಕಿಲ್ಲವೆಂತಲೂ ಪ್ರತಿಪಾದಿಸಿದರು.

ಆದ್ದರಿಂದಲೂ ನಮ್ಮ ಘನ ಸರಕಾರದವರು ಮತ್ತು ಕೌನ್ಸಿಲ್ ಮೆಂಬರುಗಳು ಸಹ ನಮ್ಮ ಹುದಿಕೇರಿ ಶಾಲೆ ಕಡೆಗೆ ಒಳ್ಳೆ ಮನಸುಮಾಡುವಂತೆ ನಾವು ಎದುರುನೋಡುತ್ತಿದ್ದೇವೆ.

ಲೋವರ್‌ಸೆಕೆಂಡರಿ ಶಾಲೆಯು ಬೇಕಾದರೆ ಹುದಿಕೇರಿಯಲ್ಲಿ ಹೊಸ ಕಟ್ಟಡ ಕಟ್ಟಬೇಕಾದ ಆವಶ್ಯಕ ಇಲ್ಲ. ಈಗ ಇರುವ ಗರ್ಲ್‌ಸ್ಕೂಲನ್ನು ನಾಡುಕಚೇರಿಗೆ ಬಿಡುವದು. ಸದರಿ ಶಾಲೆಯನ್ನು ಮಾಡಿದರೆ ಸಾಕಾಗಿರುತ್ತೆ. ಮತ್ತು ಬೋರ್ಡಿಂಗ್ ಆವಶ್ಯ ಇರುವದಿಲ್ಲ. ಹೆಚ್ಚಿನ ಮನೆಗಳಿರುವ ಹೈಸೋಡ್ಲು, ಕೋಣಗೇರಿ, ಹುದಿಕೇರಿ, ಬೇಗೂರು, ನಡಿಕೇರಿ, ಬೆಳ್ಳೂರು, ಚಿಕ್ಕಮುಂಡೂರು, ಬಲ್ಯಮುಂಡೂರು ಗ್ರಾಮಗಳಿಂದ ಹುಡುಗರು ಉಳಿದುಕೊಂಡು ಶಾಲೆಗೆ ಬರಲು ಅನುಕೂಲವಿದೆ.

ಕೊ. ಕಮಿಶನರಾದ ಮೆ|| ಸೂಟರ್‌ಸಾಹೇಬರು ನಮ್ಮ ಮೊರೆಯನ್ನು ಮೂಲೆಗೆ ಒತ್ತಿಬಿಟ್ಟರು ಈಗ ಕಮಿಶನರಾಗಿ ಬಂದಿರುವ ಮೆ|| ಟಾಸ್ಕರ್ ದೊರೆಗಳಾದರೋ ದೇಶದ ಪ್ರಜೆಗಳ ಹಿತಚಿಂತಕರೆಂತಲೂ ಉದ್ಯೋಗಶೀಲರೆಂತಲೂ ದೇಶವೇ ಹೇಳುತ್ತಿದೆ "ಯಥಾರಾಜ ತಥಾಪ್ರಜಾ" ಎಂಬಂತೆ ಆ ಮಹನೀಯರು ವಿದ್ಯೆಯಲ್ಲಿ ಹಿಂದುಬಿದ್ದಿರುವ ನಮ್ಮನ್ನು ಸ್ವಲ್ಪ ಕಣ್ಣು ತೆರೆದು ನೋಡಿ ೩೦೦ ಹುಡುಗರಮೇಲೆ ಸರಾಸರಿ ಪೂರ್ವದಿಂದಲೂ ಬರುತ್ತಾ ಚೆನ್ನಾಗಿ ನಡಿಯುತ್ತಿರುವ ತಾಲೋಕಿನ ಮಧ್ಯಸ್ಥಳವಾದ ಹುದಿಕೇರಿ ಶಾಲೆಯನ್ನು ಕಾಲವಿಳಂಬವಿಲ್ಲದೆ, ಲೋವರ್‌ಸೆಕೆಂಡರಿ ಶಾಲೆಯನ್ನಾಗಿ ಮಾಡಿಕೊಡಬೇಕಾಗಿ ಭಗವಂತನು ಮನಸುಕೊಡಲೆಂದು ನಾವುಗಳ ಪ್ರಾರ್ಥನೆ.

ಸಿ. ಕೆ.

ನೋಟೀಸು.

ಜಮೀನ್ದಾರರ ಸಂಘದ ಆರ್ಗನೈಸಿಂಗ್ ಕೆಲಸಕ್ಕೆ ಇಬ್ಬರನ್ನು ನೇಮಿಸಬೇಕೆಂತ ತೀರ್ಮಾನವಾಗಿದೆ. ನೇಮಕವಾಗುವವರು ಇಬ್ಬರನ್ನು ಜಾಮೀನು ಕೊಡಬೇಕು. ಇವರು ವಸೂಲ್‌ಮಾಡುವ ಚಂದಾ ಮೊಬಲಗಿನ ಶೇಕಡ 18½ ರಷ್ಟು ಕಮಿಶನ್ ಕೊಡಲಾಗುತ್ತೆ. ಗ್ರಾಮಕಮಿಟಿಯ ಮೂಲಕ ವಸೂಲಾದ ಮೊಬಲಗಿಗೆ ಗ್ರಾಮಕಮಿಟಿಗಳಿಗೆ ಶೇಕಡ 6¼ ರಷ್ಟು ಕಮಿಶನ್ ಕೊಡಲಾಗುತ್ತೆ. ಈ ಕೆಲಸವನ್ನು ವಹಿಸಿಕೊಳ್ಳಲು ಇಷ್ಟವಿರುವವರು ತಾ|| 31—5—24 ರ ವಳಗೆ ಕೆಳಗೆ ಸೈನ್‌ಮಾಡಿದವರಿಗೆ ಬರೆದುಕೊಳ್ಳಬೇಕು.

[2—1] ಸಿ. ಯಸ್. ಮೊಣ್ಣಪ್ಪಯ್ಯ,
ಮಡಿಕೇರಿ, ಜನರಲ್ ಸೆಕ್ರೆಟರಿ,
ತಾ|| 12—5—24. ಜಮೀನ್ದಾರರ ಸಂಘ.

ಅತ್ಯದ್ಭುತಗುಣಕಾರಿಯಾದ ಚೇಳಿನ ಔಷಧ.

ಪ್ರತಿ ಮನೆಯಲ್ಲಿ ಖಂಡಿತ ಇರತಕ್ಕದ್ದು.
ಗುಣವಾಗದಿದ್ದರೆ ಖಂಡಿತ ಹಣ ವಾಪಸು ಕಳುಹಿಸುತ್ತೇವೆ
ಒಂದುಸಾರಿ ತರಿಸಿ ಪರೀಕ್ಷಿಸಿರಿ.

ಯಾವ ಚೇಳು ಆದರೂ ಕಚ್ಚಿದಕೂಡಲೆ ಈ ಔಷಧವನ್ನು ಹಾಕಿದ ತಕ್ಷಣವೇ ವಿಷವು ಇಳಿದು ಉರಿ ಶಮನವಾಗಿ ಗುಣವಾಗುವದು. ಅನುಭವಪತ್ರಿಕೆಯನ್ನು ಬಾಟ್ಲಿ ಸಂಗಡ ಕಳುಹಿಸುತ್ತೇವೆ. ಬಾಟ್ಲಿ 1 ಕ್ಕೆ 0—8—0 ಆಣೆ. ಆರು ಬಾಟ್ಲಿಗಳನ್ನು ತರಿಸಿಕೊಂಡರೆ 1 ಬಾಟ್ಲಿ ಕಮಿಷನ್. ಹನ್ನೆರಡು ಬಾಟ್ಲಿಗಳನ್ನು ತರಿಸಿಕೊಂಡರೆ 3 ಬಾಟ್ಲಿ ಕಮಿಷನ್ ಕೊಡುತ್ತೇವೆ.

ನಮ್ಮ ವಿಳಾಸ:—
ಕಾಲಸ್ವಾಮಿದೇವರ ನಂದದ ಸಿದ್ಧಾಂತಿಗಳು
ಹರಪನಹಳ್ಳಿ, ಜಿಲ್ಲಾ ಬಳ್ಳಾರಿ.
[12—2]

O. S. Association Magazine Mercara.

No. 3 of April 1924 will be out in May 1924.

ಹೆಲ್ಲನ್ ಕೆಲ್ಲರ್ ಎಂಬ ಕಣ್ಣು ಕಿವಿಗಳಿಲ್ಲದ ಲೋಕಪ್ರಸಿದ್ಧಳಾದ ಅಮೇರಿಕನಳ ಅದ್ಭುತ ಜೀವಮಾನಚರಿತ್ರೆಯನ್ನಾಗಲೀ, ವಾಸವದತ್ತಾ ಎಂಬ ನೃತ್ಯನಾಟಕವನ್ನಾಗಲೀ, "ನ್ಯೂಕಾಸಲ್ ವೆರ್‌ಸೇಲ್ಸ್" ಎಂಬ ರಾಷ್ಟ್ರೀಯ ಹೊಸತಿಯ ಲೇಖನವನ್ನು ಓದಲೇಕೆ?

ಹಾಗಾದರೆ "O. S. Association" ನವರ ಏಪ್ರಿಲ್ ತಿಂಗಳ ಸಂಚಿಕೆಯನ್ನು ಓದಿರಿ! ಆನಂದಪಡಿರಿ!

ಬಿಡಿಸಂಚಿಕೆಯೊಂದಕ್ಕೆ 0-6-0	ಸಂಸ್ಥೆಯಮೆಂಬರಿಗೆ
ಕೆಲವು ಪ್ರತಿಗಳು ಮಾತ್ರ ಇವೆ	ವಾರ್ಷಿಕಚಂದಾ 1-0-0
ಜಾಗ್ರತೆ ಬರೆಯಿರಿ.	ಇತರರಿಗೆ 1-8-0

ಮೇನೇಜರ್,
O. S. ASSN. MAGAZINE,
3-3 ಮಡಿಕೇರಿ

ಆರೋಗ್ಯ ಚಂದ್ರಿಕೆ.

ಇದು ಪ್ರಜಾಕ್ಷೇಮಕ್ಕಾಗಿ ಆರೋಗ್ಯಮಾರ್ಗವನ್ನೂ ಚಿಕಿತ್ಸೆಯನ್ನೂ ಬೋಧಿಸುವ ಒಂದು ಮಾಸಪತ್ರಿಕೆ. ಇದರ ಸಂಪಾದಕರು ಮದ್ರಾಸಿನಲ್ಲಿ ಪ್ರಸಿದ್ಧರಾದ ಡಾಕ್ಟರ್ ಯು. ರಾಮರಾವ್, ಎಂ.ಎಲ್.ಸಿ. ಯವರು. ಇದರಲ್ಲಿ ಅನೇಕ ಪ್ರಸಿದ್ಧ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರುಗಳ ಲೇಖನಗಳು ತಿಂಗಳಿಗೊಮ್ಮೆ ಪ್ರಕಟವಾಗುವವು.

ಟಪಾಲುಹಾಸಲು ಸೇರಿ ಈ ಪತ್ರಿಕೆಯ ವಾರ್ಷಿಕ ಚಂದ 1—8—0 ರೂ. ಮಾತ್ರ. ಬಿಡಿ ಪತ್ರಿಕೆ ಒಂದಕ್ಕೆ 0—2—0 ಆಣೆ.

ಏಜೆಂಟರು:—
ಮ|| ರಾ|| ರಾ|| ಎಸ್. ಕೆ. ಈಶ್ವರಪ್ಪ,
ಭಾಗಮಂಡ್ಲ, ಕೊಡಗು.

ವಿಳಾಸ:—
ಮೇನೇಜರ್,
ಆರೋಗ್ಯಚಂದ್ರಿಕೆ ಆಫೀಸು.
323, ತಂಬುಚೆಟ್ಟಿಬೀದಿ,
ಮದ್ರಾಸು.

[12—8]

ಪಾಕೆಟ್‌ಡೈರಿ ಉಚಿತ.

ಈ ನಕ್ಷೆಯಲ್ಲಿ ಕಂಡ ಪೇನವು ಸೀಮೆಯಲ್ಲಿ ತ… ರಾದದ್ದು. ಇದಕ್ಕೆ ಚಿನ್ನದಂತ ಮುಳ್ಳು ಇದೆ. ಈ ಪೇನಾವಿನಲ್ಲಿ ಬರೆಯುವುದರಿಂದ ಅಕ್ಷರಗಳು … ಕಡಿಮೆ ಇಲ್ಲದೆ ಮುದ್ದಾಗಿ ಬರೆಯುವುದು. ಈ ತಿಂ… ಳಾಗಿ ತರಿಸಿಕೊಳ್ಳುವರಿಗೆ ಮಾತ್ರ ಹೊಸವರುಷದ … ಡೈರಿ ಒಂದನ್ನು ಇನಾಮಾಗಿ ಕೊಡುವೆವು.

ಕ್ರಯ ಡೈರಿ ಸಮೇತ ಪೇನಾ 1 ಕ್ಕೆ 1—12—0

ಜರ್ಮನ್ ಅಲಾರಂ ಟೈಂಪೀಸ್‌ಗಳು.

ಈ ಗಡಿಯಾರಗಳು ಜರ್ಮನ್ ದೇಶದಲ್ಲಿ ತಯಾರಾದವು. … ಗಡಿ ಬೆಳ್ಳಿಯಂತಿರುವ ಮುಚ್ಚಳ… ವುದು. ಎಂದಿಗೂ ಕಷ್ಟಾಗ… ಕರಾರು ಗಂಟೆಯನ್ನು ಕೊಡು… ದು. ಗಡಿಯಾರದ ಎತ್ತರವು 7 ಅಂಗುಲವಿರುವುದು. ಮತ್ತು ಗಂಟೆಯನ್ನು ಸಹ ಬಾರಿಸುವುದು. … ಬೇಗನೆ ಗಂಟೆಯನ್ನು ಕಂಡುಹಿಡಿಯಬಹುದು. ಅಂ… ಸ್ಕೂಲು, ಮನೆ, ಗ್ರಾಮಗಳಲ್ಲಿ ಇಡಲು ಬಹು ಚೆನ್ನಾಗಿರುವುದು ಇದಕ್ಕೆ ಮುಂಚಿತವಾಗಿ ಈ ಮಾದರಿ ಗಡಿಯಾರಗಳು ಮಾರಾಟಕ್ಕೆ ಬಂದಿಲ್ಲ. ಇವಕ್ಕೆ ಮೂರು ವರ್ಷ ಗ್ಯಾರಂಟಿ ಇದೆ.

ಕ್ರಯ 1 ಕ್ಕೆ 5—0—0 ರೂಪಾಯಿ.
ಅಲಾರಂ ಇಲ್ಲದ "ಬೀ" ಟೈಂಪೀಸ್ 3—8—0
ವಿಳಾಸ —ಎಸ್. ಆರ್. ಕೃಷ್ಣ ಅಂಡ್ ಕೊ.,
ನಂಬರು 1. ತಂಬುನಾಯಕನಬೀದಿ
[4—4] ಮದರಾಸು

WANTED.

Two Second-hand Motor Bicycles
M. M. SIDDEEK,
22—16 MERCARA.

(ಎರಡೇ ಎತ್ತುಗಳದು)



ಇದು ಬಹಳ ಹಗುರವಿರುತ್ತದೆ. ಬತ್ತದ ಭೂಮಿಗೆ ಉಪಯೋಗ ಬೀಳುತ್ತದೆ. ಇದರ ಈಸ (ಉಮ್ಮ ಪಾರು) ಮರದ್ದಾಗಿದೆ. ಇದರ ಬಿಡಿ ಭಾಗಗಳು ಕೇಳಿದಾಗ್ಗೆ ದೊರೆಯುತ್ತವೆ.

ನಮ್ಮಲ್ಲಿ ಭೂಮಿಗೆ ತಕ್ಕ ಸಣ್ಣ ದೊಡ್ಡ ನೇಗಿಲು ಕಬ್ಬಿನಗಾಣ ಮುಂತಾದ ಸಾಮಾನುಗಳು ದೊರೆಯುತ್ತವೆ.

'ಕೊ' ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್,
[16—12] ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ.

Printed & Published by D. S. Krishnaswamiengar Proprietor, at Sreivas Electric Press, Mysore "for Kodagu" Lt Mercara—16-5-1924.

"Kodagu Office, Mercara
Reg. No. M. 1550.

ಕೊಡಗು.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವುದು.

[illegible] 22 — 2 — 1924 [illegible] [ಸಂಚಿಕೆ ೮]

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನ್ನಡ ಪ್ರಿಂಟಿಂಗ್ ಮತ್ತು ಬೈಂಡಿಂಗ್ [illegible]

Srinivas Electric [illegible]
MYSORE

The Saraswati Publishing Company.
ಶಾರದಾ ಗ್ರಂಥ ಸಭೆ

ಸರಸ್ವತಿ

SARASWATI PUBLISHING CO.,
Post Box No 57, Bangalore City

HEALTH IS WEALTH

WANTED all to [illegible] health strength and vitality and thus save our nation from physical degeneracy. Send half anna stamp [illegible] for specimen photographs with full particulars from
Director Physical Culture,
P O Basavangudi
BANGALORE CITY

For your requirements of high grade Arms, Ammunition, Wine and Spirits,
APPLY TO —
Mc. DOWELL & Co., Ltd.,
MERCARA.
4—6

ಇಂಗ್ಲೆಂಡ್ ಇರಾಪರ್ ಲೋಡ್ ಪಂಕೆಚಾಯಿ ಉಳ್ಳ ಸ್ಪೆನ್ಸರ್ ಕಂಪೆನಿಕ್ಕೆ ಪುದಿಯ ಚಾಯ್ತ ಬ ದಿತ್ತ್.

SPENCER & Co. Ltd
[illegible] Pollibetta, Coorg

[24—6]

BUMPER CROPS
Always follow on application of our fertilisers
ಬೆಂಗ್ಳೂರು ಸಾಪ ಪೌಲ್
Siddeeks Manure Works
MERCARA
24—19

ಪೊಲ್ ದಾರಾಳ ವೈದ್ಯಶಾಲೆ

ನಾರಾಯಣ ವೆಂಬೀರ್ಕರ್,
52—18

ಜಿಜ್ಞಾಸೆ

ಪ್ರಪಂಚದಲ್ಲಿ ಯಾವ ಜೀವನ ದಾರಿಗೆ ಸಾಕಷ್ಟು ಹಣವನ್ನು ಒದಗಿಸುವ [illegible] (Economic Condition) [illegible]

[illegible] 12 [illegible] 1 [illegible] 1 [illegible]

ಬಿ. ಎಸ್. ಆರಾಧ್ಯ,
ರಿಟೈರ್ ಅಂಡ್ ಪ್ಯಾರೇಟ ಆಫೀಸ್ ಮಡಿಕೇರಿ

ಪ್ರಕಟನೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್.

ರಿಜಿಸ್ಟರಾಗಿದೆ	ರೂ.
ಷೇರ್ ಬಂಡವಾಳ	50 00-
ವಸೂಲಾದ ಷೇರ್ ಮೊಬಲಗು	6 830
ಜಮಾ ಬಂದ ಠೇವಣಾತಿ	47 098

ಈ ಬ್ಯಾಂಕಿನಿಂದ [illegible] 5 [illegible]

ಪ್ರೆಸಿಡೆಂಟು ಸೆಕ್ರೆಟರಿ
ಸಿ. ಎಂ. ವೆಂಕಪ್ಪಯ್ಯನವರು ಬಿ. ಎ. ಬಿ. ಎಲ್.
ತಾ. 22—2—1924

"ಕೊಡಗು"

೧೯೨೪ ನೇ ಇಸವಿ ಮೇ ತಾ|| ೨೩ ನೇ ಶುಕ್ರವಾರ.

ಅಮ್ಮತ್ತಿ ನ್ಯಾಶನಲ್ ಸ್ಕೂಲ್.

ಅಮ್ಮತ್ತಿ ನ್ಯಾಶನಲ್ ಸ್ಕೂಲಿನ ಪರವಾಗಿ ಮೆ|| ಅಬ್ದುಲ್ ಗಫೂರ್ ಖಾನ್ ಸಾಹೇಬರು ಬರೆದು ಪ್ರಕಟಿಸಿದ ಪ್ರಿಂಟಾದ ಅಪ್ಪೀಲ್ ಒಂದು ನಮ್ಮ ಕೈಸೇರಿ ಸ್ವಲ್ಪ ದಿನಗಳಲ್ಲೇ ಈ ಸಂಸ್ಥೆಯನ್ನು ಜಮೀನ್ದಾರರ ಸಂಘವು ವಹಿಸಿಕೊಳ್ಳುತ್ತಿರುವುದಾಗಿ ತಿಳಿದು ಸಂತೋಷವಾಯಿತು. ಈ ತೀರ್ಮಾನವಾದ ಕೆಲವು ದಿನಗಳೊಳಗೆ ಈ ಶಾಲೆಯ ಹೆಡ್ಮಾಸ್ಟರ್ ಮೆ|| ಬಲ್ಲಚ್ಚಂಡ ಬೆಳ್ಯಪ್ಪ ಬಿ ಎ ಯವರ ಉಪಾಧ್ಯಾಯರಾದ ಜಗತ್ಪ್ರಖ್ಯಾತರಾದ ಮೆ|| ಕಸಿನ್ಸ್‌ರವರು ಬಂದು ರಾಷ್ಟ್ರೀಯವಿದ್ಯೆಯ ಗುಣಗಳನ್ನೂ ಸರಕಾರಿ ಶಾಲೆಗಳಲ್ಲಿ ಸಿಕ್ಕುವ ವಿದ್ಯೆಯ ಕೊರತೆಗಳನ್ನೂ ವಿವರಿಸಿ ಹೇಳಿದರು. ಇವರ ಭಾಷಣದ ಸಾರವು ನಮ್ಮ ಹಿಂದಿನ ಒಂದು ಸಂಚಿಕೆಯಲ್ಲಿ ಪ್ರಕಟವಾಯಿತು. ಇದು ಬರೇ ಕಿವಿಯಿಂದ ಕೇಳಿ ತೃಪ್ತಿಯಾದಂತಾಯಿತು. ಅನಂತರ ಸ್ವಲ್ಪ ದಿವಸದಲ್ಲೇ ಧಾರವಾಡದ ರಾಷ್ಟ್ರೀಯಶಾಲೆಯ ಉಪಾಧ್ಯಾಯರೊಬ್ಬರು ಒಂದು ರಾಷ್ಟ್ರೀಯ ಶಿಕ್ಷಣದ ಅಂದರೆ ನ್ಯಾಶನಲ್ ಶಾಲೆಗಳಲ್ಲಿ ವಿದ್ಯಾಭ್ಯಾಸಮಾಡುವದರ ಗುಣಗಳನ್ನು ಬೋಧಿಸಿ ಮಡಿಕೇರಿಯ ಹತ್ತೆಂಟು ಜನರಿಂದ ಧನಸಹಾಯ ತೆಗೆದುಕೊಂಡು ಹೋದರು. ಇವರ ಬರುವಿಕೆಯಿಂದ ಕೆಲವರಿಗಾದರೂ ಸರಕಾರಿ ಬಂಧನಗಳ ಅಟಂಕವಿಲ್ಲದ ವಿದ್ಯೆ ಕೊಡುವದರ ವಿಶೇಷ ಪ್ರಯೋಜನಗಳು ಮುಂದಟ್ಟಾಗಿದೆಯೆಂತ ನಂಬುತ್ತೇನೆ. ಧಾರವಾಡದ ಶಾಲೆಯು ಅಸಹಕಾರತತ್ವವನ್ನು ಒಳಕೊಂಡದ್ದಾದರೂ ಅದಕ್ಕೆ ಸಹ ನಮ್ಮ ಈ ಚಿಕ್ಕ ಊರಿನಲ್ಲಿ ಸಹಾಯ ದೊರೆತಿರುವಾಗ ನಮ್ಮ ದೇಶದಲ್ಲೇ ನಡಿಯುತ್ತಿರುವ ಅಮ್ಮತ್ತಿ ಸ್ವತಂತ್ರಶಾಲೆಗೆ ಸಹಾಯ ದೊರೆಯುವದಿಲ್ಲವೆಂದರೆ ನಾಚಿಕೆಗೇಡೇ ಸರಿ. ನಮ್ಮ ದೇಶದಲ್ಲಿ ಅಸಹಕಾರತತ್ವವು ಬೇರೂರಿರುವದಿಲ್ಲ ಅಸಹಕಾರತತ್ವವನ್ನೊಳಕೊಳ್ಳದೇನೇ ದೇವಭಕ್ತಿ ದೇಶಭಕ್ತಿ ಹುಟ್ಟಿಸುವಂಥ ವಿದ್ಯೆ ಕೊಡಲು ಸಾಧ್ಯವಿದೆಯೆಂತ ನಾವು ನಂಬುತ್ತೇವೆ ಧಾರವಾಡದ ಶಾಲೆಯನ್ನೂ ಸಹ ಸರಕಾರಕ್ಕೆ ಎದುರುನಿಂತ ಸಂಸ್ಥೆಯೆಂಬ ದೂರಿಗೆ ಗುರಿಯಾಗದಂತೆ ಮಾಡುವ ಪ್ರಯತ್ನ ನಡೆದಿದೆಯಂತೆ. ಸರಕಾರವನ್ನು ದ್ವೇಷಿಸದೇನೇ ಸ್ವಸಂಸ್ಕೃತಿಯಲ್ಲಿ ಪ್ರೇಮವೂ, ಸ್ವಭಾಷೆಯಲ್ಲಿ ಮಮತೆಯೂ, ಸ್ವದೇಶದಲ್ಲಿ ಭಕ್ತಿಯೂ ಬೆಳೆಯುವಂಥ ವಿದ್ಯೆ ಕೊಡಲು ಸಾಧ್ಯವಿದೆಯೆಂತ ನಾವು ನಂಬುತ್ತೇವೆ. ಮದನಪಳ್ಳಿ ಶಾಲೆಯು ಆರಂಭದಲ್ಲಿ ಸರಕಾರಕ್ಕೆ ವಿರೋಧವಾಗಿ ಪ್ರಾರಂಭವಾದರೂ ಈಗ ಅದೇ ಶಾಲೆಯು ಮದ್ರಾಸಿನಲ್ಲಿ ರಾವ ಅಡಯಾರಿಗೆ ವರ್ಗಾಯಿಸಲ್ಪಟ್ಟು ಮದ್ರಾಸ್ ಯುನಿವರ್ಸಿಟಿಗೆ ಸೇರಿಸಲ್ಪಡುವ ಏರ್ಪಾಡು ನಡೆಯುತ್ತಿದೆಯಂತೆ ಈ ರೀತಿ ಸರ್ಕಾರಕ್ಕೆ ವಿರೋಧವಿಲ್ಲದ ಸಂಸ್ಥೆಯಾದರೂ ಸಹ ಅಲ್ಲಿ ವಿದ್ಯಾಭ್ಯಾಸಮಾಡಿದ ಮಹನೀಯರೊಬ್ಬರು ಅಮ್ಮತ್ತಿಶಾಲೆಯ ಉಪಾಧ್ಯಾಯರಾಗಿ ದೊರೆತಿರುವದರಿಂದಲೇ ಆ ಸಂಸ್ಥೆಯಲ್ಲಿ ದೇಶಭಕ್ತಿಯನ್ನುಂಟುಮಾಡುವ ವಿದ್ಯಾಭ್ಯಾಸ ಕೊಡುತ್ತಿದ್ದಾರೆಂಬದು ನಿದರ್ಶನವಾಯಿತಲ್ಲವೇ? ಆ ಶಾಲೆಯಲ್ಲಿ ವಿದ್ಯಾಭ್ಯಾಸಮಾಡಿದ ಯುವಕರೂ ಇನ್ನೂ ಕೆಲವರು ಇದ್ದಾರೆ ಅವರಲ್ಲಿ ದೇಶಭಕ್ತಿ ಇದೆಯೆಂಬದು ನಮ್ಮ ಗೋಚರಕ್ಕೆ ಬರದೆ ಇದ್ದರೂ ಆ ಶಾಲೆಯ ಮುಖ್ಯೋಪಾಧ್ಯಾಯರ ಮಡಿಕೇರಿ ಉಪನ್ಯಾಸ ಕೇಳಿದ ನಮಗೆ ಆ ಶಾಲೆಯಲ್ಲಿ ಖಂಡಿತವಾಗಿಯೂ ದೇಶಭಕ್ತಿ, ದೈವಭಕ್ತಿ, ಹುಟ್ಟುವಂಥ, ಗುರುಕುಲಗಳಲ್ಲಿ ಪ್ರಾಚೀನಕಾಲದಲ್ಲಿ ದೊರೆಯುತ್ತಿದ್ದಂಥ ವಿದ್ಯಾಭ್ಯಾಸವೇ ಈಗಿನಕಾಲಕ್ಕೆ ಬೇಕಾದ ಬದಲಾವಣೆಗಳೊಡನೆ ದೊರೆಯುತ್ತಿರಬೇಕೆಂತ ತೋರುತ್ತೆ. ಹೇಗೂ ಆಗಲಿ ನಮ್ಮ ಉದ್ದೇಶವೇನೆಂದರೆ ಸರಕಾರಕ್ಕೆ ವಿರೋಧವಿಲ್ಲದೇನೇ ದೇಶಭಕ್ತಿ, ನಿಸ್ವಾರ್ಥತೆ, ಧರ್ಮ, ಸತ್ಯ, ದೇವಭಕ್ತಿ, ದಯಾ ಮುಂತಾದ ಗುಣಗಳನ್ನು ಹೆಚ್ಚಿಸುವ ವಿದ್ಯೆ ಕೊಡಲು ಸಾಧ್ಯವಿದೆಯೆಂಬದನ್ನು ದೃಢಪಡಿಸಬೇಕಾದದ್ದಾಗಿದೆ. ಆದ್ದರಿಂದ ಈ ಅಮ್ಮತ್ತಿ ಶಾಲೆಯಲ್ಲಿ ಈ ತರದ ವಿದ್ಯೆ ದೊರೆಯುವಂತೆ ಮಾಡಿಕೊಳ್ಳಲು ಸಾಧ್ಯವಿದೆ.

ಇವರೆಗೆ ಅಮ್ಮತ್ತಿ ಊರಿನ ಸಮೀಪದ ಪ್ರಾಂತ್ಯಗಳಲ್ಲಿರುವ ಕೆಲವು ಮಹನೀಯರು ತಮ್ಮ ತ್ಯಾಗದಿಂದ ಈ ಸಂಸ್ಥೆಯನ್ನು ತೃಪ್ತಿಕರವಾಗಿ ನಡೆಸಿಕೊಂಡು ಬಂದಿದ್ದಾರೆ. ದೇಶದ ಎಲ್ಲಾ ಭಾಗಗಳ ಜನರು ಸೇರಿದ ಜಮೀನ್ದಾರರ ಸಂಘವು ಈ ಸಂಸ್ಥೆಯ ಆಡಳಿತವನ್ನು ಕೈಕೊಂಡಿರುವದರಿಂದ ಈ ಶಾಲೆಯು ಅಮ್ಮತ್ತಿ ಊರಿನ ಶಾಲೆಯಲ್ಲ ದೇಶದ ಶಾಲೆಯಾಗಿದೆ ಎಂಬದು ಪ್ರತ್ಯಕ್ಷವಾಯಿತು. ಸಂಘದ ಕಮಿಟಿಯು ಪ್ರಕಟವಾಗುವ ಮುಂಚೆ ತನ್ನ ಮುಂದಿನ ಕಾರ್ಯಕ್ರಮವನ್ನು ತೀರ್ಮಾನಿಸಿರುತ್ತೆ. ಸಂಘವು ಇದರ ಆಡಳಿತವನ್ನು ಕೈಕೊಂಡಿದೆಯೆಂದರೆ ಸಂಘದಿಂದ ಈ ಸಂಸ್ಥೆಯು ಮುಂದೆಗೆ ಬೇಕಾದ ಸಹಾಯಗಳು ದೊರೆಯುತ್ತೆಂತ ಯಾರೂ ಊಹಿಸಬಹುದು. ಸಂಘವು ತನ್ನ ಬೊಕ್ಕಸದಿಂದ ಸಹಾಯಮಾಡಿದರೆ ಆಗದೆಂತ ನಮ್ಮ ಅಭಿಪ್ರಾಯವಲ್ಲ ಆದರೆ ಈಗ ಅದು ಸಾಧ್ಯವಿಲ್ಲ "ಕೊಡಗು" ಪತ್ರಿಕೆಗೆ ಕೆಲವು ಮಟ್ಟಿಗಾದರೂ ಹೇಗೆ ಸಂಘವು ಉತ್ತೇಜನಕೊಡುತ್ತಿದೆಯೋ ಹಾಗೆಯೇ ಈ ಶಾಲೆಗೂ ಕೊಡಬೇಕಾಗಿದೆ ಸಂಘದ ಮೂಲಕ ನೇಮಕವಾದ ಉಪಕಮಿಟಿಯವರು ಧನವನ್ನೊದಗಿಸಲು ತಕ್ಕ ಏರ್ಪಾಡು ಮಾಡುತ್ತಾರೆ ಅದರ ಲೆಖ್ಖಗಳೇ ಪ್ರತ್ಯೇಕವಾಗಿ ಇಡಲ್ಪಡುತ್ತೆ. ಸಂಘದ ಕಾರ್ಯನಿರ್ವಾಹಕಕಮಿಟಿಯಿಂದಲೂ ಮೇಲ್ವಿಚಾರಣೆ ನಡೆಸಲ್ಪಡುತ್ತೆ. ಸಂಘದ ವಾರ್ಷಿಕ ಜನರಲ್ ಮೀಟಿಂಗಿನಲ್ಲಿ ಈ ಶಾಲೆಯ ಕೆಲಸದ ವರದಿಯೊಂದು ಓದಲಾಗುತ್ತೆ. ಆ ಮೂಲಕ ದೇಶದ ಸಮಸ್ತರಿಗೂ ತಿಳಿಯುತ್ತೆ.

ಈ ಶಾಲೆಯಲ್ಲಿ ತತ್ಕಾಲದಲ್ಲಿ ಸರಕಾರಿ ಶಾಲೆಗಳ ಪಾಠಕ್ರಮಗಳನ್ನೇ ಸಾಧಾರಣವಾಗಿ ಅನುಸರಿಸುತ್ತಾರಾಗಿ ತಿಳಿಯುತ್ತೇವೆ ಆದರೆ ಅದರ ಸಂಗಡಲೇ ಧರ್ಮಬೋಧನೆಯೂ ಕೊಡುತ್ತಾರಾದ್ದರಿಂದ ಸರಕಾರಿ ಶಾಲೆಯ ವಿದ್ಯೆಯೇ ಬೇಕೆನ್ನುವವರೂ ಈ ಶಾಲೆಗೆ ಸಹಾಯಮಾಡಬಹುದು ರಾಷ್ಟ್ರೀಯವಿದ್ಯೆ ಅಂದರೆ ದೇಶಭಕ್ತಿ ಮುಂತಾದ ಗುಣಗಳು ವಿದ್ಯಾರ್ಥಿಗಳಲ್ಲಿ ಬೆಳೆಯಬೇಕೆನ್ನುವವರೂ ಸಹ ಇದಕ್ಕೆ ಸಹಾಯಮಾಡಬಹುದು.

ಮೆ|| ಅಬ್ದುಲ್ ಗಫೂರ ಖಾನ್ ಸಾಹೇಬರು ಪ್ರಕಟಿಸಿದ ಚಿಕ್ಕ ಪುಸ್ತಕವನ್ನು ದೇಶಹಿತೈಷಿಗಳೆಲ್ಲರೂ ಓದಿಸಲೇಬೇಕಾದದ್ದಾಗಿದೆ ಒಂದಾವರ್ತಿ ಓದಿದರೆ ಸಾಲದು ಆಗಿಂದಾಗ್ಯೆ ಓದುತ್ತಿರಬೇಕೆಂತ ನಮ್ಮ ಅಭಿಪ್ರಾಯ ಈ ಪುಸ್ತಕವನ್ನು ಓದಿದರೆ ಈ ಅಮ್ಮತ್ತಿಶಾಲೆಯ ಪ್ರಯೋಜನಗಳು ಸಂಪೂರ್ಣವಾಗಿ ತಿಳಿಯುವದು ಮಾತ್ರವಲ್ಲ ಮೆ|| ಅಬ್ದುಲ್ ಗಫೂರ ಖಾನ್ ಸಾಹೇಬರ ಮನಸ್ಸಿನಲ್ಲಿ ದೇಶದ ಅಭ್ಯುದಯಕ್ಕಾಗಿ ಎಷ್ಟರಮಟ್ಟಿನ ಕುತೂಹಲವಿದೆಯೆಂತ ತಿಳಿಯುತ್ತೆ ಇಂಥಾ ದೇಶಭಕ್ತರು ಹುಟ್ಟಿದ ದೇಶವು ಧೈರ್ಯಗೆಡಬೇಕಾಗಿಲ್ಲ. ಇವರು ಮುಸಲ್ಮಾನರಾದರೂ ಇವರ ಪುಸ್ತಕದಲ್ಲಿರುವ ಪ್ರಾರ್ಥನೆಗಳಲ್ಲಾದರೂ, ವಿಷಯಗಳಲ್ಲಾದರೂ ಹಿಂದೂ ಮುಸಲ್ಮಾನ ಭೇದವು ಎಳ್ಳಷ್ಟೂ ಇಲ್ಲ ಇವರ ತೋರಿಕೆಯೇರೆ ಎಷ್ಟು ಜನ ದೇಶಸೇವಕರು ಮುಂದ ಬಂದಿದ್ದಾರೆಂಬದನ್ನು ತಿಳಿಯಲು ಕುತೂಹಲಪಡುತ್ತೇವೆ ಅವರು ಹೇಳುವಂತೆ "ದೇಶದಿಂದ ಕಡೆಪಕ್ಷಕ್ಕೆ ಒಂದು ಡಜನ್ ದೇಶಹಿತಚಿಂತಕ ಸತ್ಪುತ್ರಯುವಕರು ತಮ್ಮ ಸತ್ಯವಾದ ನಿಜವಾದ ಮತ್ತು ದೃಢವಾದ ಮನಸ್ಸಿನಿಂದ ಈ ಲೋಕದ ಸುಖಗಳಿಗೆ ಮತ್ತು ಹಣಸಂಪಾದನೆ ವಗೈರೆಗೆ ಆಶೆಪಡದೆ ದೇಶಸೇವೆ ಮಾಡಲಿಕ್ಕೆ ನನ್ನ ಜೊತೆ ಸೇರಿದರೆ ದೇವರ ದಯದಿಂದ ನಾನು ಮುಂದೆ ಇಟ್ಟಂಥ ಲಕ್ಷ್ಯಪ್ರಕಾರ ದೇಶಸೇವೆಮಾಡಲು ನಾನು ತಯ್ಯಾರ್ ಇದ್ದೇನೆ" ಎಂತ ಹೇಳುವವರು ಈ ದೇಶದಲ್ಲಿ ಎಷ್ಟು ಜನ ಸಿಕ್ಕಬಹುದು. ಇಂಥಾ ಜನರು ಇಲ್ಲವೆಂತಾದರೆ ಈ ದೇಶದ ಹೀನಸ್ಥಿತಿಯು ಇನ್ನೂ ಬಹುಕಾಲ ಹಾಗೆಯೇ ಇರಬೇಕಾದೀತೆಂತ ನಮಗೆ ತೋರುತ್ತದೆ. ಸರಕಾರಿ ಶಾಲೆಗಳಲ್ಲಿ ವಿದ್ಯೆ ಪಡೆದ ಯುವಕರಿಗೆ ಹಣಸಂಪಾದನೆಯಮೇಲೆ ಮನಸ್ಸು ಹುಟ್ಟುತ್ತದೆಯೇ ಹೊರತು ದೇಶದ ಕಡೆಗೆ ತಿರುಗಿನೋಡುವ ಯೋಚನೆ ಸಹ ಹುಟ್ಟುವದಿಲ್ಲ. ಪಾಪ! ಯುವಕರು ಮಾಡತಕ್ಕದ್ದೇನು? ವಿದ್ಯೆಯ ಸಂಪಾದನೆಗೆ ಸಾವಿರಾರು ರೂಪಾಯಿ ಕಡ್ಡಾಯವಾಗಿ ಖರ್ಚಾಗಬೇಕೆಂತಲೇ ಇಟ್ಟಿರುವಾಗ ಈ ಹಣವನ್ನು ವಾಪಸು ತಮ್ಮ ಕೈಸೇರುವಂತೆ ಪ್ರಯತ್ನಿಸಬೇಕಾದದ್ದು ತಮ್ಮ ಕರ್ತವ್ಯವಾಗಿದೆಯೆಂತ ಯೋಚಿಸುವದರಲ್ಲಿ ನ್ಯಾಯವಿದೆ. ನಮ್ಮ ದೇಶದಲ್ಲಿ ಇಂಗ್ಲಿಷ್ ವಿದ್ಯೆ ಕಲಿತವರಲ್ಲಿ ಮಾತ್ರವಲ್ಲ ಸಮಸ್ತರಲ್ಲೂ ಸರಕಾರಿ ಉದ್ಯೋಗವಿಲ್ಲದ ಮನುಷ್ಯನ ಬಾಳು ವ್ಯರ್ಥವೆಂತ ಅಭಿಪ್ರಾಯವಿದೆ ಇದಕ್ಕೂ ಕಾರಣವಿದೆ ಸರಕಾರಿ ಉದ್ಯೋಗಮಾಡಿದವರೇ ಕೆಲವುಮಟ್ಟಿಗಾದರೂ ಆಸ್ತಿ ಸಂಪಾದನೆಮಾಡಿದವರು, ಈಗಿನ ನಾಗರೀಕತೆಗೆ ಸರಿಯಾದ ಜೀವನ ನಡಿಸುವವರು ಆದರೆ ದೇಶೋನ್ನತಿಯಾಗಬೇಕಾದರೆ ಹಣಸಂಪಾದನೆಯೇ ಜೀವನದ ಮುಖ್ಯ ಉದ್ದೇಶವೆಂಬ ಭಾವನೆಯು ದೂರವಾಗಿ ಸಮುದಾಯದ ಜನರ ಸ್ಥಿತಿಯು ಉನ್ನತಿಗೆ ಬಂದು ದೇಶದಲ್ಲಿ ಸುಭಿಕ್ಷವಾಗಬೇಕಾದದ್ದೇ ಉದ್ದೇಶವೆಂಬ ಭಾವನೆಯು ನೆಲೆಗೊಳ್ಳಬೇಕು ಸರಕಾರಿ ಉದ್ಯೋಗ ಪಡೆದರೆ ತನ್ನ ಐಶ್ವರ್ಯವನ್ನು ಹೆಚ್ಚಿಸಲು ಪ್ರಯತ್ನಿಸುವ ಆತುರದಲ್ಲಿ ಜನಸಮುದಾಯದ ಕ್ಷೇಮವನ್ನು ಯೋಚಿಸಲು ಸಮಯ ದೊರೆಯುವದಿಲ್ಲ. ಜನಸಮುದಾಯದ ದರಿದ್ರಾವಸ್ಥೆಯು ಹೋಗಿ ಅನುಕೂಲಕ್ಕೆ ಬರಬೇಕಾದರೆ ದೇಶದಲ್ಲೆಲ್ಲಾ ತಿಳುವಳಿಕೆ ಹೆಚ್ಚಿ ತಮಗೆ ಪೂರ್ವದಿಂದಲೂ ನಡೆದುಬಂದ ಉದ್ಯೋಗವನ್ನೇ ಅಭಿವೃದ್ಧಿಗೊಳಿಸುವ ದಾರಿ ತೋರಿಸಿಕೊಡಬೇಕು ಈ ನ್ಯಾಶನಲ್ ಸ್ಕೂಲಿನಲ್ಲಿ ಕಸಬುದಾರಿ ವಿದ್ಯೆಗಳನ್ನೂ ಕಲಿಸುವ ಯೋಚನೆಯಿದೆ ಎಂತ ತಿಳಿಯುತ್ತೇವೆ ಇದೀಗ ಉತ್ತಮದಾರಿ ತಮಗೆ ದೇವರು ಕೊಟ್ಟಿರುವ ಸ್ಥಿತಿಯಲ್ಲಿಯೇ ತೃಪ್ತಿಯುಂಟಾಗಬೇಕಾದರೆ ತುಂಬಾ ವೈರಾಗ್ಯ ಬರಬೇಕು ಇದು ಧರ್ಮಬೋಧನೆಯಿಂದ ಸಾಧ್ಯವಿದೆಯಷ್ಟೆ. ಇದಕ್ಕೆ ಈ ಶಾಲೆಯಲ್ಲಿ ಅನುಕೂಲವಿದೆ ಮೆ|| ಅಬ್ದುಲ್ ಗಫೂರ್ ಖಾನ್ ಸಾಹೇಬರು ಕಣ್ಣೀರು ಸುರಿಸುತ್ತಾ ಬರೆದಿರಬಹುದಾದ ಅವರ ಪುಸ್ತಕ ಆಖೈರ್ ಮಾತುಗಳನ್ನು ಬರೆದು ಈ ಲೇಖನವನ್ನು ಮುಗಿಸುತ್ತೇವೆ. "ನಾನು ನನ್ನ ದೇಶದ ಪರವಾಗಿ, ಸ್ಕೂಲ್ ಕಮಿಟಿಯ ಪರವಾಗಿ, ಮತ್ತು ನನ್ನ ಪರವಾಗಿ ತಮ್ಮ ಸನ್ನಿಧಾನದಲ್ಲಿ ಈ ಅಪ್ಪೀಲನ್ನು, ಈ ಅರಿಕೆಯನ್ನು ಮಾಡಿರುತ್ತೇನೆ. ವಿದ್ಯೆಗೋಸ್ಕರ ದಾನಮಾಡುವ… ತುಂಬಾ ಕೀರ್ತಿ ಇರುವಂಥಾದ್ದಾಗಿದೆ. ಇದಕ್ಕಿ… …ದ್ದ ಧರ್ಮವು ಭೂಲೋಕದಲ್ಲಿ ಯಾವದೂ ಇಲ್ಲ… …ಷ್ಯರನ್ನು ಕೆಟ್ಟ ದಾರಿಯಿಂದ ಮನ್ನ ಹಡಿಸುವಂಥಾದ… …ಯವಾದ ದಾರಿಯನ್ನು ತೋರಿಸುವಂಥಾದ್ದು, ದು… …ಕೃತ್ಯಗಳಿಂದ ಭೀತಿಪಡಿಸುವಂಥಾದ್ದು ಪುಣ್ಯಕ… …ಬೋಧನೆಮಾಡುವಂಥಾದ್ದು, ಇದರಿಂದ ದೇಶದ… …ರ್ಯಗಳು ಎಂದಿಗೂ ಆಗುವದಿಲ್ಲ ಇವು ದೇವ… ಸಂತೋಷದಿಂದ ಮೆಚ್ಚುವಂಥ ಕಾರ್ಯಗಳಾಗಿವೆ, …ರಿಂದ ನಮ್ಮ ದೇಶದಲ್ಲು "ಕೊಡಗು ನ್ಯಾಶನ… …ಲು" ಸ್ಥಿರವಾಗುವಂತೆಯೂ ಅಭಿವೃದ್ಧಿಯಾಗಿ ದೇಶಕ್ಕೆ ತುಂಬಾ ಬೆಳಕು ತೋರಿಸುವಂತೆಯೂ … ಆಗುವಮಟ್ಟಿಗೆ ಅಲ್ಪಸ್ವಲ್ಪ ತಮ್ಮ ಕಷ್ಟದ ಪ್ರಿಯಧ… ತಮ್ಮ ಶ್ರೇಷ್ಠವಾದ ನಾಲಿಗೆಯಿಂದ ತಮ್ಮ ವಾ… ತಮ್ಮ ಕೈಯಿಂದ ತಮ್ಮ ಅಮೋಲ್ಯ ಶಕ್ತಿಯಿಂದ ಈ ವಿದ್ಯಾಲಯಕ್ಕೆ ಕರುಣೆಯುಳ್ಳ ಮಮತೆಯುಳ್ಳ, ಪ್ರೀ… …ಳ್ಳ, ಧಾರಾಳವಾದ ಸಂತೋಷಕರವಾದ ಮನಸ್ಸಿ… ಸಹಾಯ ದಯಪಾಲಿಸಬೇಕೆಂತ ತುಂಬಾ ಮಿತಿವಿ… …ತ್ಯಂತ ವಿನಯದಿಂದ ಅರಿಕೆಮಾಡಿಕೊಳ್ಳುತ್ತೇನೆ"

ಗೋಣಿಕೊಪ್ಪಲಲ್ಲಿ ಒಂದು ಹ್ಯೆಯ್ಯ… ಎಲಿಮೆಂಟರಿ ಶಾಲೆ ಅವಶ್ಯ.

ಅಯ್ಯಾ ಸಂಪಾದಕರೇ,

ಈ ಶಿರೋಲೇಖನದ ಉದ್ದಿಶ್ಯ ಬರೆಯುವದಕ್ಕೆ … ಅಮೂಲ್ಯ ಪತ್ರಿಕೆಯಲ್ಲಿ ಕೊಂಚ ಸ್ಥಳ ದೊರಕಿಸಿಕೊ… …ರೆಂದು ನಂಬಿದ್ದೇನೆ

ಗೋಣಿಕೊಪ್ಪಲು ದಕ್ಷಿಣಕೊಡಗಿನಲ್ಲಿ ಒಂದು ದ… ಸಂತೆ ನಡೆಯುವ ಸ್ಥಳವಾಗಿದೆ ಮೈಸೂರು ಕಡೆಯಿಂದ… ವೀರರಾಜೇಂದ್ರಪೇಟೆ ಕಡೆಯಿಂದಲೂ, ಪೊಳ್ಳಿಬೆಟ್ಟ … …ತ್ತಿ ಮತ್ತು ಪೊನ್ನಂಪೇಟೆ ಕಡೆಯಿಂದಲೂ ರಸ್ತೆಯು… …ಯು ಇತರ ದಿವಸಗಳಲ್ಲಿ ಕೊಂಚ ವ್ಯಾಪಾರ ನಡೆ… ಸ್ಥಳವಾಗಿದೆ, ಈ ಪೇಟೆಯ ಜನಸಂಖ್ಯೆಯು ಅಂದಾ… ಐನೂರು ಯಾ ಆರುನೂರು ಇರಬಹುದಾಗಿ ನಂಬಿದ್ದೇ… ಇಲ್ಲಿ ಒಂದು ರೆವಿನ್ಯೂ ಆಫೀಸು ಇತ್ತು ಅದನ್ನು … ತೆಗೆದುಹಾಕಿದರು. ಒಂದು ಆಸ್ಪತ್ರೆಯಿಂದಲೂ, … ಹೆಂಡದ ಅಂಗಡಿಗಳಿಂದಲೂ, ಎರಡು ಸಾರಾಯಿ ಅಂಗ… …ಳಿಂದಲೂ, ಒಂದು ಗಾಂಜ ಅಫೀಮು ಅಂಗಡಿಯಿಂದಲೂ ಒಂದು ಸಾರಾಯಿ ಡಿಪೋಟು, ಐದಾರು ವರ್ಷಗಳ… ನಿಡುವಾಗಿ ನಡೆಯುತ್ತಿರುವ ಒಂದು ಸಾಮಾಜಿಕ ಯ… …ರ್ಯ ಸಂಘದಿಂದಲೂ, ಒಂದು ಬ್ರಾಂಡಿ ಷಾಪಿನಿಂದಲೂ ನಾಲ್ಕೈದು ಚಿಲ್ರೆ ಸಾಮಾನು ಅಂಗಡಿಗಳಿಂದಲೂ, … ಬರೆ ಇತರ ಕೆಲವು ಸಾಮಾನುಗಳ ಅಂಗಡಿಗಳಿಂದಲೂ … …ರ್ಣಿಗಳ ಕೆಲವು ಅಂಗಡಿಗಳಿಂದಲೂ ಕೂಡಿದ ಒಂದು ಸ… ಸ್ಥಳವಾಗಿದೆ ಒಂದು ಹಳೇ ಪೋಲೀಸ್ ಲೈನು ಇದೆ

ಈ ಸ್ಥಳದ ಸುತ್ತಮುತ್ತಲೂ ಜನಭರಿತವಾದ … ಸುದಾರರಿಂದ ಕೂಡಿದ ಊರುಗಳೂ, ಪ್ಲಾಂಟರುಗಳ … …ಟಗಳೂ ಸಹ ಇವೆ

ಕೆಲವು ವರ್ಷಗಳಿಂದ ನಡೆಯುತ್ತಿರುವ ಒಂದು ವಿ… …ಸರಿ ಶಾಲೆಯು ಇದೆ ಇದನ್ನು ಮೊದಲಾಗಿ ಸ್ಥಾಪ… …ತಂದ ಪೇಟೆಯ ಮತ್ತು ಸುತ್ತಮುತ್ತಲಿನ ಜನರಿಗೂ, … …ನರಿಗಳಿಗೂ ತುಂಬಾ ಧನ್ಯವಾದಗಳು ಇರಲಿ

ಈ ಶಾಲೆಗೆ ಇಂಪೀರಿಯಲ್ ಫಂಡಿನಿಂದ ರೂ … …ರಂತೆಯೂ, ಲೋಕಲ್ ಫಂಡಿನಿಂದ ರೂ 45 ರಂತೆಯೂ ತಿಂಗಳುವಾರು ಕೊಡುತ್ತಾ ಕೆಲ್ಸವು ಮಿಶನರಿಯವರಿಂ… ನಡೆಯುತ್ತಿರುತ್ತದೆ ಈಗ ಶಾಲೆಯಲ್ಲಿ 71 ಹುಡುಗರು 46 ಹುಡುಗಿಯರೂ ಓದುಬರಹ ಕಲಿಯುತ್ತಿರುತ್ತಾ… ಕಳೆದ ಒಂದೆರಡು ವರ್ಷಗಳಿಂದ ಪ್ರೈಮರಿ ಪರೀಕ್ಷೆಯಲ್ಲಿ ಪಾಸಾದವರ ಲೆಕ್ಕವನ್ನು ನೋಡಿದಲ್ಲಿ ಶೇಕಡಾ 90 … ಮೇಲೆ ದಾಟಿದಂತಿರುವದು ಈ ಫಲಿತಾಂಶವು ಮಿಶನ… ಹೆಡ್‌ಮಾಸ್ಟರವರಾದ ಐ ಸಿ ಜೋನ್ಸ್ ಮತ್ತು ಅಸಿಸ್ಟೆಂಟ್ ಉಪಾಧ್ಯಾಯರುಗಳ ಮೇಹನತ್ತಿನಿಂದಾಗಿದೆ

ಇಂಥಾ ಒಂದು ಮಧ್ಯ ಸ್ಥಳವೆಂದರೆ ತಿತಿಮತಿ … …ಯಿಂದಲೂ, ಬಾಳಾಜಿ, ಅತ್ತೂರು ಹೊಸೂರು, ಕುಂದ… ಕೈಕೇರಿ, ಹಾತೂರು, ಕೊಳತೋಡುಬೈಗೋಡು ಶಿವಪದ್ದಿನಿಂದ ಬರುವ ಮಕ್ಕಳಿಗೆ (ವೀರರಾಜೇಂದ್ರಪೇಟೆ ಪೊನ್ನಂಪೇಟೆ ಅಮ್ಮತ್ತಿ, ಸ್ಕೂಲುಗಳು ದೂರವಾಗುತ್ತವೆ) ಈ ಗೋಣಿಕೊಪ್ಪಲು ಸ್ಥಳವು ಹತ್ತಿರವಾಗುವದರಿಂದ ಇಲ್ಲಿ ಒಂದು ಹ್ಯೆಯ್ಯರ್ ಎಲಿಮೆಂಟರಿ ಶಾಲೆಯು ಅವಶ್ಯವಿದೆ

ಈ ವರ್ಷದ ಜಮೀನ್ದಾರಸಂಘದ ವಾರ್ಷಿಕಮಹಾಸಭೆಯಲ್ಲು ಕಿಗ್ಗಟ್ಟುನಾಡು ತಾಲೂಕಿಗೆ ಎರಡು ಎಲಿಮೆಂಟರಿ ಶಾಲೆಯು ಬೇಕೆಂದು ಚರ್ಚೆಯು ಬಂದಾಗ್ಯೆ ಕೆಲವರು ಪೊನ್ನಂಪೇಟೆ ಮತ್ತು ಹುದಿಕೇರಿ ಆಗಬೇಕೆಂದು ಸೂಚಿಸಿದರು ಆದರೆ ನಾನು ಗೋಣಿಕೊಪ್ಪಲು ಮತ್ತು ಹುದಿಕೇರಿಯಲ್ಲಿ ಆಗಬೇಕೆಂದು ಆಲೋಚನೆ ಕೊಟ್ಟರೂ ಗೋಣಿಕೊಪ್ಪಲ ಬದಲಿಗೆ ಪೊನ್ನಂಪೇಟೆಗೆ ಆಗಬೇಕೆಂದು ಒಟ್ಟಿನಂತೆ ಪಾಸಾಯಿತು. ಗೋಣಿಕೊಪ್ಪಲಲ್ಲೇ ಆಗಬೇಕೆಂದು ಹೇಳಲಿಕ್ಕೆ ನನ್ನ ಕೆಲವು ಕಾರಣಗಳನ್ನು ಇಲ್ಲಿ ವಿವರಿಸುತ್ತೇನೆ

ದರೆ ಪೊನ್ನಂಪೇಟೆಯಲ್ಲಿ ಆಗುವದಕ್ಕೆ ನಾನು ವಿರೋಧಿಸಿಲ್ಲ. ಆದರೆ ಗೋಣಿಕೊಪ್ಪಲಲ್ಲಿ ಅತ್ಯಾವಶ್ಯಕವೆಂಬುದಕ್ಕೆ ನಾನು ಉಪಾದಿಸುತ್ತೇನೆ 1 ಗೋಣಿಕೊಪ್ಪಲು, ಹುದಿಕೇರಿಗೂ, ವೀರರಾಜೇಂದ್ರಪೇಟೆಗೂ ಅಮ್ಮತ್ತಿಗೂ ಒಂಧು ಹತ್ತು ಎಂಟುಮೈಲುಗಳಮೇರೆ ದೂರದಲ್ಲಿರುಳ್ಳ ಒಂದು ಮಧ್ಯಸ್ಥಳವಾಗಿದೆ 2 ಮೊದಲೇ ಸೂಚಿಸಿದಮೇರೆ ತಕ್ಕನುಕ್ತಲಿನ ಗ್ರಾಮದ ಮಕ್ಕಳಿಗೆ ಪೊನ್ನಂಪೇಟೆ, ವೀರರಾಜೇಂದ್ರಪೇಟೆ, ಅಮ್ಮತ್ತಿ ಸ್ಕೂಲ್‌ಗಳು ದೂರವಾಗುತ್ತವೆ. 3 ಗೋಣಿಕೊಪ್ಪಲಲ್ಲಿ ಒಂದು ಆಸ್ಪತ್ರೆಯು ಇದೆ. 4. ಬೋರ್ಡಿಂಗ್ ಸ್ಥಾಪನೆಗೆ ಅನುಕೂಲವಾಗಿ ಹತ್ತಿರದಲ್ಲೇ ಹೊಳೆಯೂ, ನೀರಿನ ಬಾವಿಯೂ ಇದ್ದು ಬೋರ್ಡಿಂಗಿನ ಕಾರಭಾರಕ್ಕೆ ಅನುಕೂಲವಾದ ಸ್ಥಳವಾಗಿದೆ 5 ಊರಿಗೆ ಶೋಭಿಸುವ ಒಳ್ಳೆಯ ಸ್ಥಿತಿಯಲ್ಲಿರುವ ಮಿಡ್ಲ್‌ಸ್ಕೂಲಿನ ಒಳಯಲ್ಲೇ ಇರುವ ಹಳೇ ಪಿಚೇರಿಯು ಸಾಕಾಗುತ್ತ ಅದನ್ನು ಸರಕಾರದವರು ಸ್ಕೂಲಿಗಾಗಿ ಬಿಡುವುದು 6 ಸರಕಾರದಿಂದ ಪೈಸಾ ಖರ್ಚಾಗದಲ್ಲ. ಸ್ಕೂಲ್ ಒಳಯೇ ಇರುವ ಮಂಜೂರ್ ಆಗಿರುವ ಒಂದು ಕಟದ ಸ್ಥಳವೂ ಸಹ ಇದೆ. (ಸ್ವಲ್ಪ ಹಣ ಖರ್ಚುಮಾಡಿದ್ದೇ ಆದರೆ ಒಳ್ಳೆ ಸ್ಥಳವಾಗುತ್ತೆ) 7 ಸುತ್ತುವತ್ತಲಿನ ಮಿರ್ಚಾದಾರರ ತೋಟಗಾರರ ಮಕ್ಕಳಿಗೆ ಅನುಕೂಲವಾದ ಸ್ಥಳವಾಗಿದೆ ಇಂಥಾ ಸ್ಥಳದಲ್ಲಿ ಹೈಯ್ಯರ್ ಎಲಿಮೆಂಟರಿಶಾಲೆಯು ಸ್ಥಾಪನೆಯಾದದ್ದೇ ಆದರೆ ಒಂದೇ ವರ್ಷದಲ್ಲಿ ಇನ್ನೂರು ವಿದ್ಯಾರ್ಥಿಗಳಮೇಲೆ ಸ್ಕೂಲಿಗೆ ಮಕ್ಕಳು ಹಾಜರು ಆಗುವರೆಂದು ನಾನು ಖಂಡಿತ ಭರವಸೆ ಕೊಡುತ್ತೇನೆ

ಈ ವಿಷಯದಲ್ಲು ಘನಸರಕಾರದವರು ನಮ್ಮ ಮಿಸ್ಸ್ ಕೌನ್ಸಿಲ್ ಮೆಂಬರುಗಳೂ ಚೆನ್ನಾಗಿ ಆಲೋಚಿಸಿ ಮಧ್ಯಸ್ಥಳವಾದ ಗೋಣಿಕೊಪ್ಪಲಲ್ಲಿ ಒಂದು ಹೈಯ್ಯರ್ ಎಲಿಮೆಂಟರಿ ಶಾಲೆಯ ಸ್ಥಾಪನೆಗೆ ಗಮನಿಸುವರೆಂದು ನಾನು ನಂಬಿದ್ದೇನೆ ಈಗಿನ ಶಾಲೆಯನ್ನು ಸರಕಾರದ ಶಾಲೆಯನ್ನಾಗಿಯೇ ಮಾಡಬಹುದಿತ್ತು ಈಗಿರುವ ಬಾಬಾಯ 80 ವತ್ತು ಸ್ಕೂಲ್ ಫೀಜು ಸೇರಿಸಿದ್ದಲ್ಲಿ ಯಾವ ತೊಂದರೆಯೂ ಇಲ್ಲದೆ ನಡೆಸಬಹುದಿತ್ತು ಆದರೆ ಸರಕಾರದವರ ಇದನ್ನು ಗಣನೆಗೆ ತಂದೆಯೂ, ಜನರು ... ಬಂದರಿಂದಲೂ ಮಿಕ್ಕನರಿಯ ದರಿಂದಲೇ ನಡೆಯುತ್ತಿ ... ವಿವರಣೆ ...

... ಹೈಯರ್ ಎಲಿಮೆಂಟ್ರಿ ... ಸ್ಟೂ ಕೊಂಚ ಹಣವನ್ನೂ ಈಗಲ್ಲ ಸರಕಾರದವರು ಕೊಡುವಂತೆ ಆಲೋಚಿಸಿಪಟ್ಟರೆ ಮಿಕ್ಕಿದರಿಯುವಲ್ಲಿ ಆ ಕೆಲಸವನ್ನೂ ಸಹ ಕೈಕೊಳ್ಳುವಹಾಗೆ ರಿವರೆಂಡ್ ಎಸ್ ಡಬ್ಲ್ಯು ಸ್ಪಿಸ್ಸ್ ರ್ ಬಿ ಎ, ಇನ್‌ಸ್ಪೆಕ್ಟರವರು ವಾಗ್ದಾನಮಾಡಿರುತ್ತಾರೆ ಆದ್ದರಿಂದ ಒಡನೆ ಈ ವರ್ಷವೇ ಫಾರಂ 1 ನ್ನು ತೆರೆಯುವ ಉದ್ದಿಕ್ಕೆ ಕೇಳಿದ ಸಹಾಯವನ್ನು ಸರಕಾರದವರು ಆಲೋಚನೆಗೆ ತಿಗೆದುಕೊಳ್ಳಬೇಕಾಗಿದೆ

ಇನ್ನೊಂದು ಸಂಗತಿಯನ್ನು ನಾನು ಹೆಚ್ಚಿನಮಟ್ಟಿಗೆ ಒತ್ತಿ ಹೇಳಬೇಕಾಗಿದೆ ಇಂಥಾ ಸಣ್ಣ ಸ್ಥಳದಲ್ಲಿ ಎರಡು ಹೆಂಡದ ಅಂಗಡಿಗಳೂ ಎರಡು ಸಾರಾಯಿ ಅಂಗಡಿಗಳೂ ಒಂದು ಗಾಂಜ ಅಫೀಮು ಅಂಗಡಿಯೂ, ಇರುವಲ್ಲಿ ಸರಕಾರಕ್ಕೆ ಈ ಭಾಗದ ಮೂಡಾತ್ಕರಿಂದ ಎಷ್ಟರಮಟ್ಟಿಗೆ ಅಂದರೆ ಹತ್ತುಸಾವಿರಕ್ಕೆ ಕಮ್ಮಿಯಿಲ್ಲದೆ ಪ್ರತಿವರ್ಷವೂ ಸಿಕ್ಕುವ ಹಣದಿಂದ ಕೊಂಚವಾದರೂ ಸುತ್ತಮುತ್ತಲ ಮತ್ತು ಪೇಟೆಯ ಜನರ ಮಕ್ಕಳ ಒಳ್ಳೆಯ ಅಭಿವೃದ್ಧಿಗಾಗಿ ಒಂದು ಹೈಯ್ಯರ್ ಎಲಿಮೆಂಟರಿ ಶಾಲೆಯನ್ನು ತೆರೆಯದಿದ್ದರೆ ಇನ್ನಷ್ಟು ಈ ಭಾಗದ ಜನರು ಮೂಢರಾಗಿ ಹಾಳಾಗುವಲ್ಲು ಸಂಶಯವಿಲ್ಲ ಸರ್ಕಾರೂ ತಮ್ಮ ಪುರೋಭಿವೃದ್ಧಿಗೆ ಪ್ರಯತ್ನಿಸುವಲ್ಲು ನಾವು ಹಾಳಾಗುತ್ತಿರುವುದೆಂದರೆ ಎಷ್ಟು ವಿಷಾದಕರ

ಆದ್ದರಿಂದ ಸರಕಾರದವರೇ ಒಂದು ಹೈಯ್ಯರ್ ಎಲಿಮೆಂಟರಿ ಶಾಲೆಯನ್ನು ಸ್ಥಾಪಿಸುವದಾಗಲಿ, ಯಾ ಮೇಲೆ ಕೇಳಿದಮೇರೆ ಸಹಾಯವಾಗಲಿ ಕೊಡಬೇಕಾಗಿ ಒತ್ತಿ ಹೇಳುವವನಾಗಿದ್ದೇನೆ.

ಪೇಟೆಯ ಮುನಿಸಿಪಲ್ ಮೆಂಬರುಗಳಲ್ಲೂ, ನೆರೆಹೊರೆಯ ಪ್ರಿಯಮಿತ್ರರಲ್ಲೂ ನನ್ನ ವಂದನೆಗಳು. ನಾವೆಲ್ಲಾರೂ ಒಮ್ಮನಸ್ಸಿನಿಂದ ಸರಕಾರವನ್ನೂ ಬರುವ ಕೌನ್ಸಿಲ್ ಮೀಟಿಂಗಿನಲ್ಲಿ ಇದರ ವಿಷಯ ಒಂದು ಠರಾವು ತರುವಂತೆ ಕೌನ್ಸಿಲು ಮೆಂಬರುಗಳನ್ನೂ ಕೇಳಿಕೊಳ್ಳೋಣವಾಗಿ ನನ್ನದೊಂದು ಅತಿ ವಿನಯದ ಕೋರಿಕೆಯಾಗಿದೆ. ಇದಕ್ಕೆ ಯಾರೂ ಆಕ್ಷೇಪಿಸಲಾರರೆಂದು ... ನಾನು ಪೂರಾ ನಂಬಿದ್ದೇನೆ.

ಜ ಮಾದಪ್ಪ,

ವರ್ತಮಾನಸಂಗ್ರಹ

ಒಳದೇಶ.

ಕಳೆದವಾರದ ನೇಪರಿನ ವರ್ತಮಾನಸಂಗ್ರಹದಲ್ಲು ಬೆಳ್ಳನಾಡು ಕಮಿಟಿಯ ಪ್ರೆಸಿಡೆಂಟರು ಪಳಂಗಂಡ ಮುತ್ತಣ್ಣನವರು ಎಂಬುದನ್ನು ಬೆಳ್ಳನಾಡು ಕಮಿಟಿಯ ಟ್ರೆಜರರ್ (ಕೋಶಾಧಿಕಾರಿ) ಪಳಂಗಂಡ ಮುತ್ತಣ್ಣನವರು ಎಂದು ಓದಿಕೊಳ್ಳಬೇಕು.

ಇದೇ ತಾರೀಕು 16 ನೇ ದಿನ ಸಾಯಂಕಾಲದಲ್ಲಿ ಕಳ್ಳರು ಮಡಿಕೇರಿಯಲ್ಲಿರುವ ಸ್ಪೆಷಲ್ ಆಫೀಸಿನ ಬೀಗ ಮಗ್ಗಲೆ ತೆಗೆಯಲು ಪ್ರಯತ್ನಿಸಿ ಆಗದೆ ಮೇಲ್ಗಡೆ ಆಫೀಸಿಗೆ ಹೋಗಿ ... ಬೀಗ ಮಗ್ಗಲೆ ಮುರಿದು ಬಾಗಿಲು ತೆರೆದು ಕಪಾಟಿನ ಪೆಟ್ಟಿಗೆಯನ್ನು ಮುರಿಯಲು ಪ್ರಯತ್ನಿಸಿ ಅದು ಕೈಲಾಗದೆ ಇದ್ದದ್ದರಿಂದ ಕೆಲವು ಟಿಕೆಟ್ ಟಿನ್ನು ಮಗ್ಗಲೆ ಚಿಲ್ಲರೆ ಸಾಮಾನುಗಳನ್ನು ಕದ್ದುಕೊಂಡು ಹೋಗಿರುವರು ಪೋಲೀಸ್ ಸ್ಟೇಷನಿನ ಸಮೀಪದಲ್ಲಿ ಕಳವು ನಡೆಸಲು ಪ್ರಯತ್ನಿಸಿದ ಕಳ್ಳರ ಧೈರ್ಯವನ್ನೇ ಸರಿ ಬೀಗ ಮುರಿಯುವ ಶಬ್ದಕ್ಕೆ ಎಚ್ಚರವಾಗದ ಪೋಲೀಸಿನವರ ನಿದ್ರೆಯು ಗಾಢನಿದ್ರೆಯೇ ಸರಿ

ರಾ|| ಸಾ|| ಕೇಟೋಳಿರ ಐಯಪ್ಪನವರು ಅವರ ತಮ್ಮ ಲೇಟ್ ಉತ್ತಯ್ಯರವರ ಹೆಸರಿನಲ್ಲಿ ಕೊಡಗು ಬ್ರಿಮಾನ್ಯರ ಸಂಘಕ್ಕೆ ... ಮನೆಗಳು ಅವರ ... ಗಿ ಒಂದು ಚಿತ್ರವನ್ನು ಕೊಡುತ್ತೇನೆಂತ ಇದೇ ತಾರೀಖು 7 ರಲ್ಲಿ ನಡೆದ ಆ ಮೀಟಿಂಗಿನಲ್ಲಿ ಹೇಳಿದುದಕ್ಕೆ ಸಂಘದವರು ಕೃತಜ್ಞರಾಗಿರುತ್ತಾರೆಂತ ಸಂಘದ ಜನರಲ್ ಸೆಕ್ರೆಟರಿ ಮ|| ಸಿ ಎಂ ವೆಂಕಪ್ಪಯ್ಯನವರು ತಿಳಿಸುತ್ತಾರೆ.

ಕುಕ್ಲೂರು ಗ್ರಾಮದ ಕೊಂಡತ ... ಶ್ರೀ ಮೂಲಭದ್ರ ಕಾಳಿದೇವರ ಹಬ್ಬವು ಇದೇ ತಾರೀಖು 23 ರಿಂದ 26ರ ವರೆಗೆ ನಡೆಯುತ್ತೆ.

ಕೊಡಗು ಬ್ರಿಮಾನ್ಯರ ಸಂಘದ ಆರ್ಗನೈಜರ್ ಕೆಲಸಕ್ಕೆ ಉತ್ತರಕೊಡಗಿಗೆ ಒಬ್ಬ ದಕ್ಷಿಣಕೊಡಗಿಗೆ ಒಬ್ಬ ... ಬೇಕಾಗಿರುವುದರಿಂದ ಸದರಿ ಕೆಲಸಕ್ಕೆ ಅಪೇಕ್ಷೆ ಇದ್ದು ಈ ಪೇಪರಿನ ಇಸೂ ಒಂದರಲ್ಲಿ ಪ್ರಕಟಿಸಿದ ಷರತ್ತುಗಳಿಗೆ ಒಪ್ಪಿದವರು ತಾರೀಖು 31-5-1924ರ ವರೆಗೆ ಸಂಘದ ಪ್ರೆಸಿಡೆಂಟರು ಮೆ|| ರಾಯ್ ಬಹದ್ದೂರ್ ಕೊಂಡಬಂಡ ... ಅಯ್ಯನವರಿಗೆ ಅರ್ಜಿ ಬರೆದುಕೊಳ್ಳಬೇಕಾಗಿದೆ

ಮಡಿಕೇರಿ ಆಸ್ಪತ್ರೆಯಲ್ಲು ಸಬ್ ಅಸಿಸ್ಟೆಂಟ್ ಸರ್ಜನರಾಗಿರುವ ಮೆ|| ಮಾಳೇಟಿರ ಉತ್ತಪ್ಪನವರನ್ನು ಸುಂಟಿಕೊಪ್ಪಲಿಗೂ ಅಲ್ಲಿಂದ ಮೆ|| ಕಡೇಮಾಡ ಕರುಂಬಯ್ಯನವರನ್ನು ಮಡಿಕೇರಿಗೂ,

... ಯಲ್ಲಿರುವ ಮೆ|| ಕೊಂಗಂಡ ... ಪ್ಪನವರನ್ನು ... ಸುಂಟಿಕೊಪ್ಪಲಿಗೂ ಅಲ್ಲಿಂದ ಮೆ|| ಕೋದಂಡ ... ರನ್ನು ಸೋಮವಾರಪೇಟೆಗೂ,

... ಶನಿವಾರಸಂತೆಯಲ್ಲಿದ್ದ ಮೆ|| ಚೇರಂಡ ಸೋಮಯ್ಯನವರನ್ನು ಮಡಿಕೇರಿಗೂ ನಾಪೋಕ್ಲಿನಲ್ಲಿದ್ದ ಮೆ|| ... ನಾಣು ... ರನ್ನು ಶಿದ್ದಾಪುರಕ್ಕು,

ಪೊನ್ನಂಪೇಟೆಯಲ್ಲಿದ್ದ ಮೆ|| ಪಟ್ಟಡ ಕಾರ್ಯಪ್ಪನವರನ್ನು ತಿತಿಮತಿಗೂ ಈಗ ತಾತ್ಕಾಲಿಕವಾಗಿ ಭಾಗಮಂಡಲದಲ್ಲಿರುವ ಮೆ|| ಕೋದಂಡ ಕಾರ್ಯಪ್ಪನವರನ್ನು ಪ್ರೈಮರ್ ಮೆಡಿಕಲ್ ಅಸಿಸ್ಟೆಂಟ್ ಸರ್ಜನ್ ರಾಗಿ ವರ್ಗಾಯಿಸಿರುತ್ತಾರೆ.

ಮಹಾತ್ಮ ಗಾಂಧಿಯವರನ್ನು ಜೈಲಿನಿಂದ ಬಿಡುಗಡೆ ಮಾಡಿದ್ದಕ್ಕಾಗಿ ಕೊಡಗು ಬ್ರಿಮಾನ್ಯರ ಸಂಘದವರು ಹುದಿಕೇರಿಯಲ್ಲಿ ತಾರೀಖು 20—4—24ರಲ್ಲು ನಡೆದ ಜನರಲ್ ಮೀಟಿಂಗಿನಲ್ಲಿ ಮಾಡಿದ ಠರಾವಿನ ನಕಲನ್ನು ಮಹಾತ್ಮ ಗಾಂಧಿಯವರಿಗೂ ಮತ್ತು ವೈಸರಾಯರವರಿಗೂ ಆ ಸಂಘದ ಜನರಲ್ ಸೆಕ್ರೆಟರಿಯವರಿಂದ ಕಳುಹಿಸಲ್ಪಟ್ಟಿದೆ

ಮಡಿಕೇರಿ ಮಹದೇವಪೇಟೆ ಗಣಪತಿಬೀದಿಯಲ್ಲಿರುವ ಹಳೇ ಗರ್ಲ್ಸ್ ಸ್ಕೂಲ ಕಟ್ಟಡದಲ್ಲಿ ಫ್ರೀ ಪಬ್ಲಿಕ್ ರೀಡಿಂಗ್ ರೂಮ್ (ಮಾಫಿ ಸಾರ್ವಜನಿಕ ವಾಚನಾಲಯ) ತಾರೀಖು 17—5—24ನೇ ಶನಿವಾರ ದಿನ 5 ಘಂಟೆಗೆ ಮೆ|| ಯಂ. ಭುಜಂಗರಾವ್, ಬಿ.ಎ. ಬಿ.ಎಲ್., ಯವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು

ಕಡಕಲ್ ಗ್ರಾಮದ ಪಟೇಲ ಕಾಳಪ್ಪನವರು ಒಂದು ದೊಡ್ಡಸೋಗ ಮರವನ್ನು ಕಡಿಸುತ್ತಿದ್ದಾಗ ಅದು ದೀರ್ಘವಾಗಿ ಸುಮಾರು ½ ನಿಮಿಷದ ವರೆಯಂತರ ಉಸ್ಸೆಂದು ನಿಟ್ಟುಸುರುಬಿಟ್ಟಂತೆ ಶಬ್ದಮಾಡಿದ್ದನ್ನು ಅಲ್ಲಿ ಇದ್ದವರು ಕೇಳಿ ವಿಸ್ಮಿತರಾಗಿ ಅಜಮಾಯಿಸುವಲ್ಲಿ ಆ ಮರದಲ್ಲಿ ಗಾಳಿ ತುಂಬಿರುವ ಪೊಟ್ಟರೆ ಯಾವದೊಂದೂ ಕಂಡು ಬರಲಿಲ್ಲವೆಂತ ತಿಳಿಸಿದ್ದಾರೆ.

ಕೊಡಗು ಫಾರೆಸ್ಟ್ ಇಲಾಖೆಯವರು ಮದ್ರಾಸ್ ಹ್ಯಾರಿ ಕಂಪೆನಿಯ ಸಂಗಡ ಏರ್ಪಡುವ ಮರಮಾರಾಟದ ಸಂಬಂಧದ ಒಪ್ಪಂದದ ಕರಡುಗಳನ್ನು ಅಜಮಾಯಿಸಲಿಕ್ಕೆ ಕಮಿಷನರೇ ಅಧ್ಯಕ್ಷರಾಗಿ ಇರುವ ಚೀಫ್ ಫಾರೆಸ್ಟ್ ಆಫೀಸರ್ ಮೆ|| ಬಿ. ಶ್ರೀಪತಿರಾಯರು ಮತ್ತು ಮೆ|| ಸಿ. ಎಮ್ ವೆಂಕಪ್ಪಯ್ಯನವರೂ ಸಹ ಇರುವ ಒಂದು ಕಮಿಟಿಯು ಚೀಫ್ ಕಮಿಷನರಿಂದ ನೇಮಕವಾಗಿದೆ ಈ ಕಮಿಟಿಯ ಕೆಲಸವು 22 ನೇ ತಾರೀಕಿನಲ್ಲಿ ನಡೆಯಿತು.

ಕೋ ಆಪರೇಟಿವ್ ಟೀಚರ್ಸ್ಸ್ ಸ್ಟೋರ್ಸಿನ ಜನರಲ್ ಮೀಟಿಂಗ್ ತಾ|| 17-5-24 ರಲ್ಲಿ ವೀರರಾಜಪೇಟೆಯಲ್ಲಿ ನಡೆದು ಇವರ ಹೆಡ್ ಆಫೀಸ್ ಮಡಿಕೇರಿಯಿಂದ ವೀರರಾಜಪೇಟೆಗೆ ವರ್ಗಾಯಿಸಬೇಕೆಂತ ನಿಶ್ಚಯಿಸಿತು.

ಮಡಿಕೇರಿ ಹೈಸ್ಕೂಲ್ ತಾ|| 19-5-24 ರಲ್ಲಿ ತೆರೆಯಿತು. ಆದರೆ ಮಿಡಲ್ ಫೋರ್ಟ್ ಶಾಲೆಗಳು ಇನ್ನೂ ತೆರೆಯಲಿಲ್ಲ. ಕ್ಲಾಸುಗಳನ್ನು ನಡೆಸಲಿಕ್ಕೆ ಕಡಿಮೆ ನಾಲ್ಕು ದಿನಗಳಾದರೂ ಬೇಕಾಗುತ್ತೆಂತ ತಾ|| 19 ರಲ್ಲಿ ನಾವು ತಿಳಿದೆವು.

ಮಡಿಕೇರಿ ಮುನಿಸಿಪಾಲಿಟಿಯ ಜನರಲ ಇಲೆಕ್ಷನ್ ತಾರೀಖು 19-5-24 ರಲ್ಲಿ ನಡೆಯಿತು. ಕೋರಂ ಪ್ರತಿನಿಧಿಗಳು ಇಬ್ಬರು. ಬೇರೆ ಬ್ಲಾಕ್ಕಿನ ನಾಲ್ಕು ಉಮೇದ್ವಾರರೂ, ಕೊಡಗೇತರ ಬ್ಲಾಕಿನ 6 ಸ್ಥಾನಕ್ಕೆ 8 ಜನ ಉಮೇದ್ವಾರರೂ ಇದ್ದಾರೆ ಈ ವರ್ತಮಾನ ಪತ್ರಿಕೆಗೆ ಕೊಡುವ ಮುಂಚೆ ಫಲಿತಾಂಶ ತಿಳಿದಿಲ್ಲ. ಮುನಿಸಿಪಲ್ ಮೆಂಬರುಗಳು ಇಬ್ಬರು ಬೇಕಾದದ್ದಕ್ಕೆ ಇಬ್ಬರೇ ಉಮೇದ್ವಾರರೂ ಕ್ರಿಶ್ಚಿಯನ್ ಒಬ್ಬ ಬೇಕಾದದ್ದಕ್ಕೆ ಒಬ್ಬನೇ ಉಮೇದ್ವಾರನೂ ನಿಂತಿದ್ದರು. ಆದ್ದರಿಂದ ಈ ವಂಗಡದವರು ಓಟ್ ಕೊಡುವ ಆವಶ್ಯಕವಿರಲಿಲ್ಲ

ಬೆಂಗಳೂರಿನಲ್ಲಿ ವರ್ಷ ವರ್ಷ ನಡೆಯುವ ಮಿಲಿಟರಿ ಆಟಗಳ ಪಂದ್ಯಾಟಕ್ಕೆ ಈ ವರ್ಷ ಕೊಡಗಿನ ಟೆರಿಟೋರಿಯಲ್ ಫೋರ್ಸಿನ ಜವಾನರನ್ನು ಆರಿಸಿ, ಮಿಲಿಟರಿ ಖರ್ಚಿನಿಂದ ಕರೆದುಕೊಂಡು ಹೋಗುತ್ತಾರೆ.

ಮದನಪಳ್ಳಿ ಕಾಲೇಜಿನ ಪ್ರಿನ್ಸಿಪಾಲ್ ಶ್ರೀಯುತ ತ್ರಿಲೋಕೆಕರ್ ಎಂಬವರು ಮಡಿಕೇರಿಗೆ 17 ರಲ್ಲಿ ಬಂದು ಅವರ ಶಿಷ್ಯ ಒಲ್ಲಿಕ್ಕಂಡ ಬೆಳ್ಯಪ್ಪನವರ ಮದುವೆಗೆ ಹೋಗಿ, ಮಡಿಕೇರಿಯಿಂದ ತಮ್ಮ ಶಾಲೆಗೆ ಧನಸಹಾಯ ತೆಗೆದುಕೊಂಡು ಹೋದರು

ಹಿಂದೂದೇಶ.

ಸಂಯುಕ್ತಪ್ರಾಂತ್ಯದಲ್ಲಿ ನಾಲ್ಕುಜನ ಅಸಹಕಾರಿಗಳಮೇಲೆ ಒಬ್ಬ ಪ್ಯಾಸಿಂದ ಹೊಡೆದು ಜುಲುಂಮಾಡಿ ತಿಲಕ ಸ್ವರಾಜ್ಯ ಫಂಡಿಗೆ ಬಂದ ರೂಪಾಯಿಯನ್ನು ಕಿತ್ತುಕೊಂಡರೆಂಬ ಮೊಕದ್ದಮ್ಮೆಯು ಸೆಷನ್ಸ್ ಕಮಿಟಿ ರಾಗಿ ಆ ಕೋರ್ಟಿನಲ್ಲಿ ಖುಲಾಸಾಯಿತು. ಪಿಯಾರ್ಯದಿ ಕೊಟ್ಟವರಮೇಲೂ ಸಾಕ್ಷಿಯರಮೇಲೂ ಸುಳ್ಳುಮೊಕದ್ದಮ್ಮೆ ತಂದ ಆಕ್ಷೇಪಿ ಕುರಿತು ಮೊಕದ್ದಮ್ಮೆ ನಡೆಸಬೇಕೆಂತಲೂ ಪೋಲೀಸ್ ಸಬ್ ಇನ್ಸ್ಪೆಕ್ಟರು ಈ ಕೆಲಸವನ್ನು ಪೂರ್ತಿಯಾಗಿ ವಿಚಾರಮಾಡದ್ದರಿಂದಲೂ, ಕಮಿಟ್ ಮಾಡಿದ ಕೋರ್ಟು ತಕ್ಕ ಕಾರಣವಿಲ್ಲದೆ ಕಮಿಟ್‌ಮಾಡಿ ಸರಕಾರಕ್ಕೆ ಬಾಯುಂಫೀಜ್ ಸಾಕ್ಷಿಭತ್ಯ ಮುಂತಾದ ಖರ್ಚನ್ನು ಅನಾವಶ್ಯಮಾಡಿಸಿದ್ದಕ್ಕೆ ಯಾರು ಗುರಿಯಾಗಬೇಕೆಂತಲೂ ಕೇಳಿ ಬಲವಾದ ಜಡ್ಜ್‌ಮೆಂಟ್ ಬರೆದಿದೆ

ಹಿಂದೂಸ್ಥಾನಕ್ಕೆ ಈಗ ಕೊಟ್ಟಿರುವ ರಾಜಕೀಯ ಸುಧಾರಣೆ ಎಷ್ಟರಮಟ್ಟಿಗೆ ತೃಪ್ತಿಯಾಗಿದೆ ಇನ್ನೂ ಹೆಚ್ಚಿಗೆ ಸುಧಾರಣೆಯನ್ನು ಕೂಡಲೇ ಕೊಡಬಹುದೋ, ಹೇಗೆ ಕೊಡಬೇಕು ಇತ್ಯಾದಿ ವಿಷಯಗಳ ಕುರಿತು ಅಭಿಪ್ರಾಯ ಕೊಡಲು ನೇಮಕವಾದ ಕಮಿಟಿಯವರು ತಮ್ಮ ಅಭಿಪ್ರಾಯವನ್ನು ಶೀಘ್ರದಲ್ಲೇ ಕೊಡುತ್ತಾರೆಂತ ದೇಶಿ ಪತ್ರಿಕೆಯೊಂದು ಬರೆದಿದೆ.

ಮಹಾತ್ಮ ಗಾಂಧಿಯವರ ಅಪೇಕ್ಷೆಮೇರೆ ದೇಶಬಂಧು ದಾಸರು ದೇಹಸ್ಥಿತಿಸರಿಯಾಗಿ ಇಲ್ಲದಿದ್ದರೂ ಬೊಂಬಾಯಿಗೆ ಬಂದಿದ್ದಾರೆ

ಸಿವಿಲ್ ಸರ್ವಿಸಿನವರ ಸಂಬಳ ಹೆಚ್ಚಿಸಲು ನೇಮಕವಾದ ಲೀ ಕಮಿಶನ್ನಿನವರು ರಿಪೋರ್ಟು ಇದೇ ತಿಂಗಳು 26 ನೇ ತಾರೀಕಿಗೆ ಪ್ರಕಟವಾಗುತ್ತೆ.

ಕೊಚ್ಚಿ ಆಳ್ವೆಯಲ್ಲಿ ಒಂದು ಸ್ಟೀಮ್ ಲಾಂಚ್ ಬಿರುಗಾಳಿಗೆ ಸಿಕ್ಕಿ ಮುಳುಗಿಹೋಯಿತು ಸಮೀಪದಲ್ಲಿದ್ದ ದೋಣಿಯ ಸಹಾಯದಿಂದ 32 ಜನರು ಉಳಕೊಂಡರು 3 ಜನರು ಮೃತರಾದರು.

ದಿಲ್ಲಿ ಕಾಂಗ್ರೆಸ್ಸಿನಲ್ಲಿ ಮಂಜೂರಾದ ಎಲ್ಲಾ ಬ್ರಿಟಿಷ್ ಸಾಮಾನುಗಳಿಗೆ ಬಹಿಷ್ಕಾರ ಹಾಕಬೇಕೆಂಬ ಠರಾವಿಗೆ ವಿರೋಧಿಸಿ ಮಹಾತ್ಮ ಗಾಂಧಿಯವರು "ಯಂಗ್ ಇಂಡಿಯಾ" ದಲ್ಲಿ ಈ ವಾರ ಬರೆದಿದ್ದಾರೆ. ದ್ವೇಷದ ಭಾವದಿಂದ ಮಾಡುವ ಈ ಕೆಲಸವು, ಅಸಹಕಾರ ತತ್ವಕ್ಕೆ ವಿರೋಧವೆಂದೂ, ಮತ್ತು ಒಟ್ಟಿನಲ್ಲಿ ಬೇರೆ ಸಾಮಾನುಗಳ ಬಹಿಷ್ಕಾರ ಮಾಡುವದು ಸಾಧ್ಯವಲ್ಲವೆಂದೂ ಪ್ರಯೋಜನಕಾರಿಯಲ್ಲವೆಂದೂ ಬರೆದಿದ್ದಾರೆ.

ವಯಿಕ್ಕದಲ್ಲಿ ಸತ್ಯಾಗ್ರಹನಡೆಯುತ್ತಲೇ ಇದೆ

ಪೂನಾದಿಂದ ಹೊರಟಿದ ಟ್ರ್ಯಾಮ್ ರೇಲುಪೋಯಿದು ಕಳವಾಗಿದೆಯೆಂತಲೂ ಅದರಲ್ಲಿ 20000 ರೂ. ನ ಇನ್ಶೂರ್ ಸಾಮಾನುಗಳಿತ್ತೆಂತಲೂ ತಿಳಿದು ಬಂದಿದೆ

ಒಂದು ರೂಪಾಯಿ ನೋಟಿನಲ್ಲಿ ಇರುವ ಸಕ್ಕತ್ತಿನ ಗುರುತಿನ ದುಕ್ಕ ಇದ್ದ ಚೌಕವು ಹೊಸದಾಗಿ ಹೊರಟ ನೋಟುಗಳಲ್ಲಿ ಇಲ್ಲ—ಇದರಿಂದ ಜನರಿಗೆ ಬಂದಿತ್ತೆಂತಲೂ ಸಂಶಯವಿಡಬೇಕಾದಿಲ್ಲವೆಂತಲೂ ಮದ್ರಾಸ್ ಸರಕಾರದವರು ತಿಳಿಸಿದ್ದಾರೆ.

ದೇಶಬಂಧು ಸಿ. ಆರ್. ದಾಸರ ಚುನಾವಣೆಯ ಠರಾವುದಮೇಲೆ ಪುನಃ ನಡೆದ ಚುನಾವಣೆಯಲ್ಲಿ ಇವರಿಗೇನೇ ಚುನಾವಣೆಯಾಗಿದೆ.

ಅಹಮದಾಬಾದ್ ಮುನಿಸಿಪಾಲಿಟಿಯವರು ಮಹಾತ್ಮ ಗಾಂಧಿಯವರಿಗೆ ಒಂದು ಅಭಿನಂದನಾ ಪತ್ರವನ್ನು ಒಪ್ಪಿಸಬೇಕೆಂತ ಠರಾವು ಚರ್ಚೆಗೆ ಇಡಲ್ಪಟ್ಟಿದೆ

ಸಂಯುಕ್ತಪ್ರಾಂತ್ಯದಲ್ಲಿ ಕಾಂಗ್ರೆಸ್ ಮತವನ್ನು ಅವಲಂಬಿಸಿದವರು ಮುನಿಸಿಪಾಲಿಟಿ ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಮೆಂಬರುಗಳಾದ್ದರಿಂದ ಈ ಸಭೆಗಳಲ್ಲಿ ತೊಂದರೆ ದೇವತೆ ಕೋರಿಬಂದಿದೆಯೆಂದು ಸರ್ಕಾರದ ರಿಪೋರ್ಟ್ ಬರೆದಿದೆ.

ತಾ|| 11ರಲ್ಲಿ ಫ್ರಾನ್ಸ್ ದೇಶದ ಪಾರ್ಲಿಮೆಂಟಿಗೆ ಇಂಡಿಯಾದೇಶದ ಫ್ರೆಂಚ್ ರಾಜ್ಯಗಳಿಂದ ಚುನಾವಣೆ ನಡೆಯಿತು. ಒಬ್ಬ ದೇಶೀಯನು, ಉಮೇದುವಾರನಾಗಿದ್ದನು. ಆದರೆ ಫ್ರೆಂಚ್ ಜನಾಂಗಕ್ಕೆ ಸೇರಿದ ಲಂಗ್ಲೋವಾ ಎಂಬವರಿಗೆ ಚುನಾವಣೆಯಾಯಿತು

ತಿರುಚಿನಾಪಳ್ಳಿಯಲ್ಲಿ ಇಂಗ್ಲೀಷ್ ಕ್ಲಬ್ಬಿನ ಮಾರ್ಕರ್ ಕೆಲಸ ಮಾಡುವ ಅಪ್ಪಾಸ್ವಾಮಿ ಎಂಬವನುಮೇಲೆ ಪಡೆದ ಡಿಕ್ರಿಗಾಗಿ ಅವನನ್ನು ದಸ್ತಗಿರಿಮಾಡಲು ಅಮೀನನು ಕ್ಲಬ್ಬಿಗೆ ಹೋಗಿ ಸಹಾಯ ಕೇಳಿದಾಗ ಕ್ಲಬ್ಬಿನ ಸೆಕ್ರೆಟರಿಯಾದ ಒಬ್ಬ ಐ ಸಿ ಯಸ್ ಆಫೀಸರು ತಿರಸ್ಕಾರ ಮಾಡಿದ್ದರಿಂದ ಅವರಮೇಲೆ ಏಕೆ ಪ್ರೋಸಿಕ್ಯೂಷನ್ ನಡೆಸಬಾರದೆಂತ ಸಬ್ ಜಡ್ಜಿಯವರು ನೋಟೀಸ್ ಕೊಟ್ಟರು. ಐ. ಸಿ ಯಸ್. ಆಫೀಸರು ಕ್ಷಮಾಪಣೆ ಕೇಳಿದ್ದರಿಂದ ಪ್ರೋಸಿಕ್ಯೂಷನ್ ನಡಿಸಲು ಹುಕುಂ ಆಗಲಿಲ್ಲ.

ಕರ್ನಾಟಕದಲ್ಲಿ ನಡೆಯುವ ಕಾಂಗ್ರೆಸಿನ ಸ್ವಾಗತ ಸಮಿತಿಯಲ್ಲಿ ಮೀಟಿಂಗ್ ನಡೆದು 1,25,000 ರೂಪಾಯಿ ಕಾಂಗ್ರೆಸ್ ಖರ್ಚಿನ ಬಗ್ಗೆ ಜಮಾಯಿಸಬೇಕೆಂತ ತೀರ್ಮಾನವಾಯಿತು. ವಿಧವಿಧದ ವಿಚಾರಗಳಿಗೆ ಉಪಸಮಿತಿಗಳು ನೇಮಕವಾದವು. ಮುಂದಿನ ಮೀಟಿಂಗ್ ಜೂನ್ 20 ರಲ್ಲಿ ನಡೆಯುತ್ತೆ. ಅಂಬಕ್ಕ ದಾತಾರ್ ಎಂಬ ಮಹಿಳೆಯು ಸ್ತ್ರೀ ಸ್ವಯಂಸೇವಕರನ್ನು ಜಮಾಯಿಸಲು ಹೊರಟಿರುವಳು.

ಮಂಗಳೂರಿನ ಗೌಡಸಾರಸ್ವತ ಜಾತಿಗೆ ಸೇರಿದ ಮೆ|| ಯಂ ಯನ್ ಪ್ರಭು ಎಂಬವರಿಗೆ ಅವರ ಸ್ವಾಮಿಗಳು ಬಹಿಷ್ಕಾರ ಹಾಕಿದ್ದಕ್ಕೆ ಅವರು ಮಾನನಷ್ಟಕ್ಕೆ ಮಾಡಿದ ಸಿವಿಲ್ ದಾವಾದಲ್ಲಿ ಡಿಕ್ರಿಯಾಗಿದೆ

ಸ್ವಾಮಿ ಶ್ರದ್ಧಾನಂದರು ಕಲ್ಲಿಕೋಟೆಯಿಂದ ತಿಳಿಸಿರುವದೇನೆಂದರೆ ಪಶ್ಚಿಮಸಮುದ್ರ ತೀರದಲ್ಲಿ ಕಳೆದ ಹತ್ತು ವರ್ಷಗಳಲ್ಲಿ 1600ು ಹಿಂದೂ ಅಸ್ಪೃಶ್ಯರನ್ನು ಇಟೇಲಿದೇಶದ ಮಿಶನರಿಗಳು ಕ್ರಿಶ್ಚಿಯನ್ ಜಾತಿಗೆ ಸೇರಿಸಿದ್ದಾರೆ ಆದರೆ ಇವರಿಗೆ ಕ್ರಿಶ್ಚಿಯನ್ ಧರ್ಮ ಏನೆಂತ ಇನ್ನೂ ತಿಳಿದಿಲ್ಲ. ಇವರು ಹಿಂದೂ ಮತಕ್ಕೆ ಪುನಃ ಬರಲು ತಯಾರಿದ್ದಾರೆ ಹಣ ಸಹಾಯ ಒದಗಿದರೆ ಎಲ್ಲರನ್ನೂ ಪುನಃ ಹಿಂದೂಧರ್ಮಕ್ಕೆ ಸೇರಿಸಿಕೊಳ್ಳಬಹುದು ಎಂತ ತಿಳಿಸಿದ್ದಾರೆ

ಇಂಡಿಯಾದೇಶಕ್ಕೆ ಹೊರಗಿನಿಂದ ಬರುವ ಹತ್ತಿಯ ಸಾಮಾನುಗಳಿಗೆ ಸುಂಕ ಹಾಕಬೇಕೆಂಬ ಮಸಲತ್ತಿನಮೇಲೆ ಬರೆಯುವಲ್ಲಿ ಮಹಾತ್ಮಾ ಗಾಂಧಿಯವರು ಹಾಗೆಯೇ ಬಟ್ಟೆಯನ್ನು ಪರದೇಶದಿಂದ ಬಂದಂತೆ ಮಾಡಿ ಸರಕಾರದ ನೌಕರರಿಗೆ ಬೇಕಾದ ಬಟ್ಟೆಯೆಲ್ಲಾ ಖದ್ದರೇ ಆಗಬೇಕೆಂತ ನಿರ್ಣಯಿಸಿ ನಿಷಾಪದಾರ್ಥದ ವ್ಯಾಪಾರ ನಿಲ್ಲಿಸಿ ಇದರಿಂದ ಆಗುವ ಸರಕಾರದ ನಷ್ಟವನ್ನು ತಪ್ಪಿಸಲಿಕ್ಕೆ ಮಿಲಿಟರಿ ಖರ್ಚು ಕಡಿಮೆಮಾಡಿದರೆ ನಮ್ಮ ಅಸಹಕಾರದ ಬಲವೇ ಮುಂದು ಹೋಗುತ್ತೆ. ಶೀಘ್ರದಲ್ಲೇ ಸ್ವರಾಜ್ಯ ಬರುತ್ತೆ ಎಂತ ಬರೆದಿದ್ದಾರೆ.

ಮದ್ರಾಸ್ ಮುನಸಿಪಾಲಿಟಿಯ ಹೆಲ್ತ್ ಆಫೀಸರಾದ ಡಾಕ್ಟರ್ ರಾಘವೇಂದ್ರರಾಯರು „ ಶಿಶುಮರಣದ ಕಾರಣಗಳು ಮತ್ತು ಅದನ್ನು ತಪ್ಪಿಸುವ ಉಪಾಯಗಳು" ಎಂಬ ಹೆಸರಿನ ಚಿಪಬಂಧ (ಎಸ್ಸೆ) ಬರೆದದ್ದು ಅತ್ಯುತ್ತಮ ತರದ್ದೆಂತ ಲೇಡಿ ರೀಡಿಂಗ್ ಅಧ್ಯಕ್ಷರಾಗಿರುವ ಒಂದು ಕಮಿಟಿಯವರಿಂದ ಇವರಿಗೆ ಒಂದು ಚಿನ್ನದ ಪದಕ ಕೊಡಲ್ಪಟ್ಟಿದೆ

ಪಂಡಿತ ಮೋತೀಲಾಲ್ ನೆಹರೂ ಯವರ ಪತ್ನಿ ಶ್ರೀಮತಿ ಸ್ವರೂಪಿಣಿ ನೆಹರೂ ರಾಮೇಶ್ವರ ಯಾತ್ರೆಗೆ ಬಂದಿದ್ದಾರೆ

ಕುಂಭಕೋಣಮಿನ ಒಬ್ಬ ನಾರಾಯಣ ಕಂಟ್ರಾಕ್ಟರು ತನ್ನ ಅಂಗಡಿಗೆ ಕುಡಿಯಲಿಕ್ಕೆ ಬರುವ ಜನರು ಕಡಿಮೆಯಾದದ್ದರಿಂದಲೋ ಏನೋ, ಊರಿನಲ್ಲಿನ ಜನರು ಕುಡಿಯಲಿಕ್ಕೆ ಹೋಗುವವರಿಗೆ ಪಾಪೀಸಾಗಿ ಮೋಟಾರ್ ಕೊಟ್ಟು ಕರೆಸಿಕೊಳ್ಳುತ್ತಾನಂತೆ!

ಇಂಡಿಯಾದೇಶದ ಸುಧಾರಣೆ ವಿಷಯದಲ್ಲಿ ನೇಮಕವಾದ ಕಮಿಟಿಯು ಹೆಚ್ಚಿಗೆ ಹಕ್ಕುಗಳನ್ನು ಹೇಗೆ ಪ್ರಜೆಗಳಿಗೆ ಕೊಡಬಹುದೆಂಬುದನ್ನು ನೋಡಲಿಕ್ಕಾಗಿ ನೇಮಕವಾದದ್ದಲ್ಲ ಈಗಿನ ಸುಧಾರಣೆ ಮೇರೆ ಸರಕಾರದ ಆಡಳಿತ ನಡೆಸುವಾಗ ತೊಡಕುಗಳು ಬಂದರೆ ಹೇಗೆ ಸರಿಪಡಿಸಿಕೊಳ್ಳಬೇಕು ಎಂಬುದನ್ನು ಮಾತ್ರ ತೀರ್ಮಾನಿಸುವುದಕ್ಕೆ ಮಾತ್ರ ನೇಮಕವಾದದ್ದಾಗಿದೆ.

ಡಿಲ್ಲಿಪಟ್ಟಣದ ಒಂದು ಪತ್ರಿಕೆಯಲ್ಲಿ ಒಬ್ಬ ಮುಸಲ್ಮಾನರವನು ಇಂಡಿಯಾದ, ಆಸ್ಯಖಂಡದ ಮತ್ತು ಒಟ್ಟು ಪ್ರಪಂಚದ ಕ್ಷೇಮಕ್ಕಾಗಿ ಮುಸಲ್ಮಾನ್ ಜಾತಿಗೆ ಸೇರಬೇಕೆಂತಲೂ ಸೇರಿದರೆ ಅವರು ಬಲಿಷ್ಠರಾಗಬಹುದೆಂತಲೂ ಬರೆದಿದೆ

ತಿನ್ನವೆಲ್ಲಿಯ ಪಂಚಮರು ತಮ್ಮ ಹೊಲಗೇರಿಯ ಸಮೀಪ ಸೇಂದಿ ಅಂಗಡಿ ಇಡಬಾರದೆಂತ ಮುನಸಿಪಾಲಿಟಿಗೆ ಅರ್ಜಿಬರಕೊಂಡಿದ್ದಾರೆ

ಮಲಬಾರಿನ ದಂಗೆಯ ಕಷ್ಟದಿಂದ ಪೀಡಿತರಾದ ಮಾಪಿಳ್ಳೆಯರಿಗೆ ಸಹಾಯಮಾಡಬೇಕೆಂತ ಮಹಾತ್ಮ ಗಾಂಧಿಯವರು ಬರಕೊಂಡದ್ದಕ್ಕೆ ಒಬ್ಬ ಖೋಜಾ ಜಾತಿಯ ವ್ಯಾಪಾರಿಯು 500 ರೂಪಾಯಿಗಳನ್ನು ಕೊಟ್ಟಿದ್ದಾರೆ, ಈ ಬಗ್ಗೆ ಕೊಡುವ ಹಣಗಳನ್ನು ಇಂಡಿಯನ್ ಬ್ಯಾಂಕ್ ಮದ್ರಾಸು ಇದಕ್ಕೆ ಕಳುಹಿಸಬೇಕೆಂತ ಯಾಕುಬ್ ಹುಸೇನ್ ಸೇಟ್ ತಿಳಿಸಿದ್ದಾರೆ.

ವಿದೇಶ.

ಇಂಗ್ಲಿಷ್ ಪಾರ್ಲಿಮೆಂಟಿನಲ್ಲಿ ಸ್ಕಾಟ್ಲ್ಯಾಂಡಿಗೆ ಪ್ರತ್ಯೇಕ ಪಾರ್ಲಿಮೆಂಟನ್ನು ಸ್ಥಾಪಿಸುವ ವಿಷಯ ಚರ್ಚೆ ನಡೆಯಿತು

ಹಿಂದುಸ್ಥಾನದ ಸುಧಾರಣೆಯ ವಿಷಯದಲ್ಲಿ ಸ್ಟೇಟ್ ಸೆಕ್ರೆಟರಿಯವರು ಹಿಂದುಸ್ಥಾನದಿಂದ ಇಂಗ್ಲೆಂಡಿಗೆ ಹೋಗಿರುವ ಕೆಲವು ಮಹನೀಯರಿಗೆ ಭೇಟಿ ಕೊಟ್ಟರು

ಜಪಾನ್ ಪಾರ್ಲಿಮೆಂಟಿಗೆ ನಡೆದ ಚುನಾವಣೆಯಲ್ಲಿ ಪಾರ್ಟಿಗಳೊಳಗೆ ಹೊಡೆದಾಟವಾಗಿ 400 ಜನ ಚುನಾವಣೆಗೆ ಸಹಾಯಕರಾದ ಜನರು ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

ಇಂಗ್ಲೆಂಡಿಗೆ ರೋಮೇನಿಯ ರಾಜರು ಬಂದಿದ್ದಾರೆ. ಇಂಗ್ಲಿಷ್ ಜನರು ರಾಜರೂ ಇವರನ್ನು ತುಂಬಾ ಗೌರವಿಸುತ್ತಿದ್ದಾರೆ

ಜಪಾನಿನ ಭೂಕಂಪದ ಅನಾಹುತಗಳ ಸಂಬಂಧವಾಗಿ ಹಿಂದುಸ್ಥಾನದ ಜನರು ತೋರಿಸಿದ ಸಹಾನುಭೂತಿಗೂ ಕೊಟ್ಟ ಸಹಾಯಕ್ಕೂ ಜಪಾನ್ ಸರಕಾರದವರು ವೈಸ್ ರಾಯರಿಗೆ ಅಭಿವಂದನೆಯನ್ನು ಕಳುಹಿಸಿದ್ದಾರೆ.

ಗ್ಲಾಸ್ ಗೋ ಪಟ್ಟಣದಲ್ಲಿರುವ ಹಿಂದುಸ್ಥಾನದ ಜನರು ಜಲಿಯನ್ ವಾಲಾಬಾಗಿನಲ್ಲಿ ಅನಾಹುತದ ಕೊಲೆ ನಡೆದ ದಿವಸದಲ್ಲಿ ಸಭೆಸೇರಿ ಬ್ರಿಟಿಷ್ ಸರಕಾರದವರು ಈ ವಿಷಯದಲ್ಲಿ ತಾಳಿರುವ ಭಾವವನ್ನು ನಿಷೇಧಿಸಿದರು

ವೆಂಬ್ಲಿಯಲ್ಲಿ ನಡೆದ ಸಾಮ್ರಾಜ್ಯ ಪ್ರದರ್ಶನಕ್ಕೆ 1 10,000,00 ಪೌಂಡ್ ಖರ್ಚಾಗಿದೆಯಂತೆ ಇಷ್ಟು ಖರ್ಚಿಗೆ ತಕ್ಕಷ್ಟು ಪ್ರಯೋಜನವಾಗಿರುವದಿಲ್ಲವೆಂತ ಕೆಲವು ಇಂಗ್ಲೆಂಡಿನ ಪತ್ರಗಳು ಬರೆಯುತ್ತಿವೆ.

ಸರ್ ಶಂಕರನಾಯರಮೇಲೆ ಓಡ್ವೈಯರು ನಡಿಸಿದ ಮೊಕದ್ದಮೆಯಲ್ಲಿ ಸರಕಾರಿ ಆಫೀಸರುಗಳಾಗಿದ್ದವರ ಸಾಕ್ಷಿ ವಿಚಾರ ನಡಿಯುತ್ತಲೇ ಇದೆ

ಇಂಗ್ಲಿಷ್ ಪಾರ್ಲಿಮೆಂಟಿಗೆ ಚುನಾವಣೆಯಾಗಿದ್ದ ಒಬ್ಬ ಮೆಂಬರನ ಖರ್ಚು ನಿಯಮಿತ ಖರ್ಚನ್ನು ಮೀರಿದ್ದರಿಂದ ಅವನ ಚುನಾವಣೆಯನ್ನು ರದ್ದು ಪಡಿಸಿದ್ದಾರೆ

ರೋಮ್ ಪಟ್ಟಣದಲ್ಲಿ ಅಖಿಲಪ್ರಪಂಚದ ಕೃಷಿ ಸಂಬಂಧದ ಮಹಾಸಭೆಯಲ್ಲಿ ಇಂಡಿಯಾದೇಶದ ಪ್ರತಿನಿಧಿ ಇರಲಿಲ್ಲ ಈ ವಿಷಯಕ್ಕೆ ಸಭೆಯವರು ವಿಷಾದಿಸಿದರು

ಇಂಗ್ಲಿಷ್ ಪಾರ್ಲಿಮೆಂಟ್ ಮೆಂಬರ್ ಗ್ರೇ ಎಂಬವರ ಇಲೆಕ್ಷನ್ ಏಜೆಂಟರೊಬ್ಬರು ಮೋಸ ಸುಳ್ಳು ಸಾಕ್ಷಿ ತಕ್ರೀರ್ ಗಳನ್ನು ನಡಿಸಿರುವರೆಂತಲೂ ಗ್ರೇಯವರ ನಡತೆಯಲ್ಲಿಯೂ ಅಸಹ್ಯಕಾರ್ಯಗಳು ಇದ್ದದಾದರೂ ಅವರು ಅಪ್ರಮಾಣೀಕರೆಂತ ಹೇಳಲಿಕ್ಕಾಗುವದಿಲ್ಲವೆಂತ ಜಡ್ಜಿಯವರು ತೀರ್ಮಾನಿಸಿದ್ದಾರೆ

ಚೀನಾದೇಶದಲ್ಲಿ ಪ್ರಜಾಸತ್ತಾತ್ಮಕ ರಾಜ್ಯಭಾರಕ್ರಮವನ್ನು ಏರ್ಪಡಿಸಿದ ಸನ್ ಯಾತ್ ಸೆನ್ ಎಂಬವರು ಮೃತರಾದರು.

ಪತ್ರವ್ಯವಹಾರಗಳು.

—o—

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. [ಎಡಿಟರ್]

ಬಡರೈತರ ಕೂಗು.

ಎಡಿಟರೇ, ತಾವಾದರೂ ನಮ್ಮ ಈ ಬಾತ್ಮಿಯನ್ನು ಶೀಘ್ರ ಪೇಪರಿನಲ್ಲಿ ಪ್ರಚುರಪಡಿಸಿ ನಮ್ಮ ಕಣಿವೆ ಹೋಬಳಿಯನ್ನು ಉದ್ಧಾರಮಾಡುವರಾಗಿ ಈ ಮೂಲಕ ತಮ್ಮನ್ನು ಹರಸುತ್ತೇವೆ

ಕೃಷಿ ವ್ಯವಸಾಯದ ರೈತರು ಈ ತಹಲ್ ವರಿಗೆ ಮಳೆಯ ಮುಖವನ್ನು ನೋಡದ ಕಣಿವೆ ಹೋಬಳಿಯ ಬಡಜನರ ಪಾಡು ಮುಂದೆ ಯಾವರೀತಿಯಾದೀತೆಂದು ತಿಳಿಯೋಣ. ದೇಶಮಹನೀಯರೇ ಮೇಘದ ಮಳೆಯನ್ನು ನಂಬಿ ವರ್ಷಾವರ್ಷ ಹಿಂದಕ್ಕಾಗುತ್ತಿರುವ ಕಣಿವೆ ಹೋಬಳಿಯ ಪಾಡಿಗೆ ಯಾರಾದರೂ ಮಹನೀಯರು ಈ ಹೋಬಳಿಯ ಅಧೋಗತಿಯನ್ನು ನಿವಾರಿಸುವಬಗ್ಗೆ ತಡೆಯಾಗಿರುವ ಹಾರಂಗಿ ನಾಲೆಯನ್ನು ಪ್ರೋತ್ಸಾಹಿಸಿ ದೇಶೋನ್ನತಸ್ಥಿತಿಯು ಏಕವಾಗುವಂತೆ ಮಾಡಿ ಕಣಿವೆ ಹೋಬಳಿಯನ್ನು ದೇಶದ ಬೇರೆ ಪ್ರಾಂತಗಳಿಗೆ ಸರಿಯಿಟ್ಟಾರೆಂದು ದೇಶದ ಮುಂಬಾಳುಗಳಲ್ಲಿ ವಿನಯಂತಿ.

ಹಾರೈಸುವವ,

ಮಹನೀಯರೇ,

1924 ಇಸ್ವಿ ಜನವರಿ 11, ಜನವರಿ 18 ಮತ್ತು ಫೆಬ್ರವರಿ 15 ರ ಕೊಡಗು ಪತ್ರಿಕೆಯಲ್ಲಿ ಪ್ರಕಟಿಸಿದ್ದಂತೆ ಕಡಂಗ ಮೂರೂರು ಗ್ರಾಮದ ಭಗವತಿ ದೇವರ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡುವರೆ ಆ ಗ್ರಾಮದ ಮುಂದಾಳುಗಳು ಪ್ರಯತ್ನಿಸುತ್ತಿದ್ದ ಏರ್ಪಾಡುಗಳು ಬರೀ ಮೀಟಿಂಗ್ ಮೂಲಕವೋ, ಯಾ ಕಾರ್ಯಥಾ ಫಲಕಾರಿಯೋ ಎಂಬದಾಗಿ ನೆರೆಯವನಾದ ನನ್ನಲ್ಲಿ ಕುತೂಹಲವು ಹೆಚ್ಚುತ್ತಿದೆ. ಕೊಡಗಿನಲ್ಲಿ ಉತ್ತಮಕಾರ್ಯಕ್ಕೆ ಕೈಹಚ್ಚುವುದು ಕ್ಷಣಮಾತ್ರದಲ್ಲೇ ಆದರೂ ಪ್ರಯತ್ನಿಸಿದ್ದನ್ನು ಒಡನೆ ಪೂರೈಸುವುದು ಅತಿ ವಿರಳ ಮಳೆಗಾಲವೇನೋ ಸಮೀಪಿಸುತ್ತ ಬಂದಿದೆ ಕಾರ್ಯವೇನೂ ಕೈಗೂಡಲಿಲ್ಲ.

ಆದರೆ ಈ ಗ್ರಾಮದ ಮುಂದಾಳುಗಳು ನಿರೀಕ್ಷಿಸಿದ್ದನ್ನು ಲೋಪವಿಲ್ಲದೆ ತೀರಿಸಬಹುದಿತ್ತು ಮುಖ್ಯಸ್ಥರ ಬಾಹ್ಯಾಡಂಬರಕ್ಕಾಗಿ ಓಡಾಡುತ್ತಿರುವುದೇ ಈಗಿನ ಕಾಲಧರ್ಮವಲ್ಲವೇ ? ಹಾಗೂ, ಅಂಥಾ ಅಪಹಾಸ್ಯಕ್ಕೆ ಗುರಿಯಾಗುವಷ್ಟು ನಿಪುಣತೆಯಿಲ್ಲದ ಮುಂದಾಳುಗಳು ಕಡಂಗ ಮೂರೂರು ಗ್ರಾಮದಲ್ಲಿ ಇರಲಾರರಾಗಿ ನಂಬುತ್ತೇನೆ ಈ ಬಾಬಿನಲ್ಲಿ ಮೆ|| ಬಲ್ಲಟಿಕಾಳಂಗ್ರ ಮುಂದಣ್ಣನವರು ದೇವಸ್ಥಾನದ ಸುತ್ತುಮುಕ್ತಲಿನ ಲಂಟಾನ ತೆಗಿಸಿದ್ದೂ ಮತ್ತು ಮುಂದಾಳುಗಳ ವಿರಾಮಕಾಲದಲ್ಲಿ ಮಾಡಿದ ಮೀಟಿಂಗುಗಳೇ ಪ್ರಯೋಜನವಲ್ಲವೇ ?

ಕುತೂಹಲಿ.

ಅಯ್ಯಾ ಎಡಿಟರವರೇ,

ಸರಕಾರದವರು ಪ್ರಜೆಗಳಮೇಲೆ ದಯೆಯುಳ್ಳವರು ಆದರೆ ಈ ಮೊದಲು ದಕ್ಷಿಣ ಕೊಡಗು ತಾಲ್ಲೋಕು ಸುಬೇದಾರರಾಗಿದ್ದು ಈಗ ಪೋಲೀಸ ಡಿವಿಜನ್ ಇನ್ಸ್ಪೆಕ್ಟರಾಗಿರುವ ಮೆ|| ಮುಂಡೇಕಂಡ ಮುಂದಣ್ಣನವರು ಬಡರೈತರ ಹವಾಲ್ ಕೇಳಿ ಮತ್ತು ಖುದ್ದು ನೋಡಿ ರೈತರು ಬೆಳ್ಳುಮಾಡು ಹೊಳೆಗೆ ಸೇತುವೆ ಮಾಡಿಸಿಕೊಡಬೇಕೆಂತ ಹೇಳಿಕೊಂಡದ್ದರಮೇಲೆ ಸರಕಾರದವರ ಮೂಲಕ ಸೇತುವೆ ಕಟ್ಟುವುದಕ್ಕೆ ಅನೇಕ ತೊಂದರೆ ತೆಗೆದುಕೊಂಡು ಸೇತುವೆ ಕಟ್ಟಿಸಿದರು ಸದರಿ ಸೇತುವೆ ಕಟ್ಟುವ ಖರ್ಚಿಗೆ ಬಡರೈತರು ತಮ್ಮ ಶಕ್ತ್ಯಾನುಸಾರ ತೆಂಗೆ ಕೊಟ್ಟರು. ಆದರೆ ಸೇತುವೆ ಕಟ್ಟಿದ್ದು ಕಂಬಗಳು ಹತ್ತರವಾದ್ದರಿಂದಲೂ ಮತ್ತು ಎತ್ತರ ಸಾಲದ್ದರಿಂದಲೂ ನೀರಿನ ಪ್ರವಾಹದಿಂದ ಸೇತುವೆಗೆ ಹಾಕಿದ ಮರಗಳು ಕೊಚ್ಚಿಹೋದವು ನಂತರ ಹತ್ತಿರವಿರುವ ಕಂಬಮುರಿದು ದೂರಕ್ಕೆ ಕಂಬ ಇಟ್ಟು ಕಟ್ಟಿದೆ ಆದು ಎತ್ತರ ಸಾಲದು ಇನ್ನೂ 3-4 ಅಡಿ ಎತ್ತರ ಬೇಕಾಗಿದೆ ಆದರೆ ಮಾಡಿಸಿದ ಕಂಬಕ್ಕಾದರೂ ಮರ ಇಡದೆ ಕಳೆದ ವರ್ಷದ ಮಳೆಗಾಲದಲ್ಲು ಒಂದು ಕುಂಬುದೋಣಿಯಿಂದ ಪ್ರಯಾಣಸ್ಥರು ದುಡ್ಡುಕೊಟ್ಟು ದಾಟಿದರು ಸೇತುವೆ ಕಟ್ಟುವುದಕ್ಕೆ ತೆಂಗೆ ಕೊಟ್ಟಿದ್ದಲ್ಲದೆ ಅದರಮೇಲೆ ಕುಂಬುದೋಣಿ ದಾಟಲಿಕ್ಕೂ ದುಡ್ಡುಕೊಟ್ಟದ್ದಾಯಿತು ಎಂತ ಅನೇಕ ಜನರು ಪುಕಾರು ಹೇಳುತ್ತಾ ಇದ್ದಾರೆ ಇದು ಪೂರಾ ವ್ಯಸನಕರವೆ. ಆದರೆ ರೈತರ ಪ್ರತಿನಿಧಿಗಳಾದ ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳಾದರೂ ಇದರ ಬಾಬಿನಲ್ಲಿ ಗಮನಕ್ಕೆ ತೆಗೆದುಕೊಳ್ಳದೆ ಮರೆತುಬಿಟ್ಟಿದ್ದು ರೈತರಿಗೆ ಪೂರಾ ನೋವು ಇದೆ

ಈಗ ತಾಲ್ಲೋಕು ಮುನ್ಸೀಫ್ ಕೋರ್ಟು ವಗೈರೆ ವೀರರಾಜೇಂದ್ರಪ್ಯಾಟೆಯಲ್ಲಿ ಆಗಿರುವುದರಿಂದ ನಾಲ್ಕುನಾಡು, ಕಡಿಯತ್ತುನಾಡು ಮತ್ತು ಬೇರೆ ಗ್ರಾಮಸ್ಥರು ಬೆಳ್ಳುಮಾಡು ಹೊಳೆ ದಾಟಿ ಕೋರ್ಟು ಮೊಕದ್ದಮೆಗೆ ಬರಬೇಕು. ಸೇತುವೆ ದುರಸ್ತು ಆಗದ್ದರಿಂದ ಕಳೆದ ಮಳೆಗಾಲದಲ್ಲಿ ದೋಣಿ ದಾಟಿ ಕೋರ್ಟು ಟೈಮಿಗೆ ಸರಿಯಾಗಿ ಬರುವರೆ ದೋಣಿಯವನನ್ನು ಸಮಯಕ್ಕೆ ಸಿಕ್ಕದೆ ಸಮಯತಪ್ಪಿ ಹಾಜರಾದರೂ ಮೊಕದ್ದಮೆ ವಗೈರೆ ಕರೆಯುವಾಗ ಇಲ್ಲವೆಂತ ಮೊಕದ್ದಮೆ ಡಿಸ್‌ಮಿಸ್ ಆದದನ್ನು ಪುನಹ ರಿವ್ಯೂ ಮಾಡಬೇಕಾಯಿತು. ಇದೊಂದು ರೈತರಿಗೆ ದುಡ್ಡು ಖರ್ಚಿನ ದಾರಿಯಾಯಿತು ಇನ್ನಾದರೂ ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳೂ ಕೌನ್ಸಿಲು ಮೆಂಬರುಗಳೂ ಸರ್ಕಾರದವರನ್ನು ಕೇಳಿ ರೈತರ ಕಷ್ಟ ಪರಿಹರಿಸುವಂತೆ ಬೆಳ್ಳುಮಾಡು ಹೊಳೆಗೆ ಕಟ್ಟಿಸಿದ ಸೇತುವೆಯನ್ನು ಇನ್ನು 3-4 ಅಡಿ ಎತ್ತರ ಮಾಡಿ ಸೇತುವೆ ಕಟ್ಟಿಸಿಕೊಟ್ಟರೆ ಬಡರೈತರಿಗೆ ಬಹಳ ಅನುಕೂಲ ಆಗುವುದು.

„ ರೈತರ ಹವಾಲ್ ಕೇಳಿದವ "

ಅಯ್ಯಾ ಎಡಿಟರವರೇ, ನಮ್ಮ ನಾಡಿನ ಮಧ್ಯೆ ಮಾಯಮುಡಿ ಎಂಬ ಗ್ರಾಮದಲ್ಲು ಒಂದು ಶಾಲೆಯನ್ನು ಸ್ಥಾಪಿಸಿ ಅದರಲ್ಲಿ ಕಳೆದವರ್ಷದವರೆಗೆ ವೆ. ಮಿಶನಿನವರು ಶಾಲೆ ಇಟ್ಟು ತೆಗೆದುಬಿಟ್ಟಕಾರಣ ಸದರಿ ಶಾಲೆಗೆ ಬರುತ್ತಿದ್ದ 60, 65 ಜನ ವಿದ್ಯಾರ್ಥಿಗಳ ವಿದ್ಯೆಯು ಹಾಳಾಗುತ್ತೆಯಾಗಿ ಮಾಯಮುಡಿ, ಧನುಗಾಲ, ಬಾಳಜಿ, ರುದ್ರಬೀಡು ಗ್ರಾಮಗಳಿಂದ ಬರುತ್ತಿದ್ದ ವಿದ್ಯಾರ್ಥಿಗಳಿಗೆ 2, 3 ತಿಂಗಳವರೆಗೆ ಶಾಲೆ ಇಲ್ಲದೆ ಮಕ್ಕಳನ್ನು ಬೇರೆ ಶಾಲೆಗೆ ಕಳುಹಿಸಲು ಮಧ್ಯೆ ಹೊಳೆಯಾದ್ದರಿಂದಲೂ, ದೂರವಾದದರಿಂದಲೂ ಬೇರೆ ಶಾಲೆಗೆ ಕಳುಹಿಸದೆ ಮಕ್ಕಳ ವಿದ್ಯೆಯು ಹಾಳಾಗುತ್ತೆಯಾಗಿ ಭಾವಿಸಿ ಸದರಿ 4 ಗ್ರಾಮದವರೂ ಕೂಡಿ ಸದರಿ ಶಾಲೆ ಕಟ್ಟಡದಾರ ಮೆ|| ಬಲ್ಯಂಡ್ರ ಸುಬ್ಬಮ್ಮಯ್ಯನವರಿಂದ ಶಾಲೆ ಇಡಲು ಕೇಳಿಕೊಂಡು ಆರಾಗಾಯ್ತಿನಿಂದ ಈವರೆಗೂ ಮಾಷ್ಟರಾಗಿರುವ ಮೆ|| ಪಿ. ಎನ್. ಪಯ್ಯಮ್ಮನವರನ್ನು ನೇಮಕಮಾಡಿ ನಮ್ಮ 4 ಗ್ರಾಮದವರೂ ಕೂಡಿ ಚಂದಾ ಹಾಕಿ ಸವರಿಯವರಿಗೆ ಪಗಾವರ್ಮ ಕೊಡುತ್ತಾ ಬಂದು ಈಗಲೂ ಅದರಂತೆಯೇ ಶಾಲೆ ನಡೆಯುತ್ತಾ ಇದೆ.

ಆದರೆ ಈಗ್ಗೆ ಸುಮಾರು 3, 4 ತಿಂಗಳ ಮೊದಲು ನಾವುಗಳು ನಮ್ಮ ಘನ ಸರಕಾರಕ್ಕೆ ಬಳಪಟ್ಟ, ಕೊಡಗು ದೇಶದ

...ರ್ ಸಾಹೇಬರವರಿಗೂ, ನಮ್ಮ ದೇಶದ ಸ್ಕೂಲ್ ಇನ್ಸ್‌ಪೆಕ್ಟರವರಿಗೂ, ನಮ್ಮ ತಾಲ್ಲೋಕಿನ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರಿಗೂ ಅರ್ಜಿ ಬರಕೊಂಡದಕ್ಕೆ ನಮ್ಮ ರಾ|| ಗಾ|| ರವರು ಸದರಿ ಶಾಲೆಯನ್ನು ಖುದ್ದು ನೋಡಿಯೂ, ಕಟ್ಟಡದಾರರನ್ನೂ ಇನ್ನೂ ಕೆಲವು ಗ್ರಾಮದ ಜನರ ಸಹ ಕರಸಿ ವಿಚಾರಿಸಿದರು ಆಗ್ಗೆ 30 35 ಹುಡುಗರನ್ನು ಸಾಹೇಬರಿಗೆ ರಿಪೋರ್ಟು ಕಳುಹಿಸುತ್ತೇನೆಂದು ... ಅದಕ್ಕೆ ಸದರಿ ಶಾಲೆಯನ್ನು ಎಪ್ರಿಲ್ ಮಾಹೆ ...ಕಾರ್ಯರದವರು ನಡಿಸುವದಾಗಿಯೂ ಹೊಸ ಮಾಸ್ತರ ಕಳುಹಿಸುವದಾಗಿಯೂ ವದಂತಿಯಾಯಿತು.

...ರೆ ಈ ತಾರೀಕು 6 ರವರೆಗೆ ಯಾವ ಮಾಸ್ತರಾಗಲಿ ... ಆಗಲಿ ಬಂದಿರುವದಿಲ್ಲ ಆದ್ದರಿಂದ ನಮ್ಮ ...ರದವರು ಬಡರೈತರು ಚಂದಾ ಹಾಕಿ ಮಾಸ್ತರನ್ನಿಟ್ಟುಕೊಂಡು ಕಷ್ಟಪಡುವದನ್ನು ನೋಡಿ ಇನ್ನಾದರೂ ...ಟ್ರೈನಿಂಗ್ ಆದವರನ್ನು ಹೆ|| ಮಾಸ್ತರರಾಗಿಯೂ ...ಯಿಂದ ಇವರೆಗೆ ಕಷ್ಟಪಟ್ಟು ಶ್ರದ್ಧೆ ತೆಗೆದುಕೊಂಡು ... ಆಗ್ಯೆ 40, 45 ವಿದ್ಯಾರ್ಥಿಗಳನ್ನು ಜಮಾಯಿಸುತ್ತಿರುವ ಸದರಿ ಐಯ್ಯಮ್ಮನವರನ್ನು ಸದರಿ ಅ|| ಅ|| ಮಾಸ್ತರನ್ನಾಗಿ ನೇಮಿಸಿ ಮಾಸ್ತರನ್ನೂ ...ಶಾಲಕ್ಕೆ ಸ್ವಲ್ಪ ಸಾಮಾನುಗಳನ್ನೂ ಸಹ ಕಳುಹಿಸಿ ಬಡರೈತರ ಮಕ್ಕಳ ವಿದ್ಯೆ ಹಾಳಾಗದಂತೆ ಒಡನೆ ...ಯಪಾಲಿಸಬೇಕಾಗಿ ಪ್ರಾರ್ಥನೆ

ಮಕ್ಕಳ ತಂದೆ

...ಪಾಡಿಗೆ ಉತ್ತರ ಎಂಬ ಲೇಖನದ ಕವಿತೆಯ ...ಪದ್ಯದಲ್ಲಿ ' ಸಾರ್ಥವು " ಎಂಬದಕ್ಕೆ ಒದಲಾಗಿ ...ವು ' ಎಂದೂ, ಎಂಟನೇಪದ್ಯದಲ್ಲಿ " ಮಾತಸ್ತ್ರ" ... ಮಾರಶಸ್ತ್ರ " ವೆಂದೂ ಒಂಬತ್ತನೇ ಪದ್ಯದಲ್ಲಿ ..." ಎಂಬಲ್ಲಿ ' ಹಂಶ್ಸತಿ " ಎಂದೂ, ಅದೇ ಪದ್ಯ ...ವನ್ನು " ಎಂಬಲ್ಲಿ ' ಶಿವವು " ಎಂದೂ, ಮತ್ತು ...ಪದ್ಯದಲ್ಲಿ ' ನಾಣ್ಣುಡಿಗೊಪ್ಪುದು " ಎಂಬಲ್ಲಿ ...ಗೊಪ್ಪದು " ಎಂದೂ, ಹತ್ತನೇ ಪದ್ಯದಲ್ಲಿ ...ರದಸಂಗತಿ " ಎಂಬಲ್ಲಿ ' ನಿರ್ವಿವಾದದ ಸಂಗತಿ " ... ತಿದ್ದಿಕೊಳ್ಳತಕ್ಕದ್ದು

' ಕವಿಶಿಷ್ಯರ ಶಿಷ್ಯ '

...ಸಂಪಾದಕರೆ

...ಕೆಪ್ಪಲು ಹೊಳೆಗೆ ನಮ್ಮ ಘನಸರಕಾರದವರು ...ಕಾಲುವೆಗಳನ್ನು ಕುರಿತು ಹತ್ತು ಹನ್ನೆರಡು ವರ್ಷಗಳ ...ಹಿಂದಲೇ ಕಟ್ಟೆ ಕಟ್ಟಿಸಿ ವರ್ಷವರ್ಷವೂ ನೀರು ಸರಬರಾಯಿ ಮಾಡುತ್ತಾ ಬರುತ್ತಿದ್ದದ್ದು ಸರಿಯಷ್ಟೆ ? ಆದರೆ ... ಮಳೆಯಲ್ಲು ಕಟ್ಟೆಯ ಮೇಲ್ಭಾಗದ ಚಪ್ಪಟೆ ...ದ್ದು ಬಿದ್ದುಹೋಗಿದ್ದುದನ್ನು ಕಂಟ್ರಾಕ್ಟು ಮೂಲಕ ... ಡಬ್ಲ್ಯು ಇಲಾಖೆಯವರು ಕೊಟ್ಟು ಗಾರೆಹಾಕಿ ...ದಪ್ಪ ಹಾಕಿಸಿರುವದೇನೋ ನಿಜ ಆದರೆ ಅದು ...ದ ಮಳೆಗಾಲದಂತೆಯೇ ಈ ವರ್ಷವೂ ಅದಲ್ಲಿ ... ಎದ್ದು ಬೀಳಲಿಕ್ಕೆ ಸಂಶಯವಿಲ್ಲ ಅಲ್ಲದೆ ಮಾ...ವ ಮೋರಿಗಳಿಗೆ ತರಿ ಗಾರೆ ಹಾಕಿಸುವಂತೆ ಕಲ್ಲು ...ಗೆ ಹಾಕಿದರೆ ನಿಲ್ಲಲಿಕ್ಕಿಲ್ಲವೆಂಬದು ಯಾರು ಕಲ್ಲು... ದರು ತರಿ ಗಾರೆ ಹಾಕಿ ಒಂದು ಅಥವಾ ...ಕೊಂಡಾವರ್ತಿ ಹೀಗೆ ಖರ್ಚುಮಾಡಿಸುವುದರ ...ಇಂಟು ಗಾರೆ ಹಾಕಿಸಿದಲ್ಲಿ ಹೆಚ್ಚಿನ ಖರ್ಚು ... ಸಹ 30 ಅಥವ 40 ವರ್ಷಗಳಿಗೆ ಏನೊಂದೂ ...ರಲಿಕ್ಕಿಲ್ಲವಾಗಿ ಹೇಳಬಹುದು

...ಮೇಲ್ಕಂಡ ಸಂಗತಿಯಲ್ಲದೆ ಸದರಿ ಕಟ್ಟೆಯಿಂದ ... ನಾಲೆಯ ಒಳಭಾಗದಲ್ಲಿ ಪ್ರತಿವರ್ಷವೂ ನೀ...ರಿಯಾಗಿ ಮಣ್ಣು ತೆಗೆಯದೆ ಇದ್ದದ್ದು ಮೇ... ಸರಿಯದೆ ಇದ್ದದಕ್ಕೆ ಈ ವರ್ಷ ಇದೇ ತಾ... 3 ರಿಂದ ಸದರಿ ನಾಲೆಯ ಒಳಭಾಗದಲ್ಲಿ ...ವಾಗ್ಯೆ ಫರ್ಲಾಂಗ್ ಕಲ್ಲು ಇಟ್ಟದ್ದಕ್ಕೆ ಸರಿ... ಸರಕಾರದವರು ಆರ್ಡರ್ ಮಾಡಿರಬಹುದು ...ನಾಲೆಯ ಒಳಭಾಗದ ಆಚೆ ಈಚೆ ದಂಡೆಯ ...ರು ಒಂದು, ಒಂದೂವರೆ ಗೇಣು ಬಿಟ್ಟು ... ಎರಡೂವರೆ ಅಡಿ ಅಗಲವೂ ಅರ್ಧ ಅಡಿಗಿಂತ ...ಗಿ ಮಾತ್ರ ತೆಗೆಸುತ್ತಾರೆ.

...ಮಟ್ಟಕಲ್ಲಿಗೆ ಸರಿಯಾಗಿ ಮಟ್ಟಕಲ್ಲು ಇರುವು... ಮಾತ್ರ ಸುಮಾರು ಐವತ್ತೈದು ಮಾರು ದೂರ ...ವಾಗಿಯೂ, ಅದಕ್ಕಿಂತ ಮುಂದಕ್ಕೆ ಉಬ್ಬಾ...ವುದರಿಂದ ನೀರು ಹರಿಯುವಾಗ್ಯೆ ತಗ್ಗಾದ ...ಮಣ್ಣು ಭರ್ತಿಯಾಗುತ್ತೆಯಲ್ಲದೆ ನಾಲೆಯ ...ದ ಒತ್ತಿನಲ್ಲಿ ಈಗ್ಗೆ ಬಿಟ್ಟಿರುವ ಮಣ್ಣು ಪುನಃ ...ಗಳು ಕಮ್ಮಿಯಾಗಿ ತೆಗೆದ ಸ್ಥಳಕ್ಕೆ ಮಣ್ಣು ...ವಾಗುವುದರಿಂದ ನೀರು ಹರಿಯಲು ಪುನಃ ... ಆಗುತ್ತೆ.

... ನಮ್ಮ ಘನಸರಕಾರದವರು ಮೇಲ್ಕಂಡ ಸಂ...ಮಾಯಿಸಿ ಪಕ್ಕಾಂಬರಿಕೆಯಿಂದ ನಾಲೆಯ ಒಳಭಾಗದ ಕೆಲಸ ಮತ್ತು ಕಟ್ಟೆಯ ಕೆಲಸವನ್ನು ಸಹ ಬಂದೋಬಸ್ತು ಆಗುವಂತೆಯೂ ನೀರು ಸರಿಯಾಗಿ ಹರಿದು ನಾಲೆ ಕೆಳಗಿನ ಬಡರೈತರಿಗೆ ಆರಂಭಕ್ಕೆ ನೀರಿಗೆ ತೊಂದರೆಯಾಗದಂತೆ ಮಾಡಿಸಿಕೊಡುವುದಾಗಿ ನಂಬಿರುವ,

ನಾಲೆಕೆಳಗಿನ ಬಡರೈತ

ಕೊಡಗಿನ ಮಠಗಳು

1. ಕೊಡಗಿನಲ್ಲಿರುವ ಮಠಗಳನ್ನು ಯಾರು, ಯಾವಾಗ, ಯಾತಕ್ಕಾಗಿ ಸ್ಥಾಪಿಸಿದರು ?

2. ಚಿತ್ರದುರ್ಗದವರಿಗೆ ಕೊಡಗಿನ ಮಠಗಳಲ್ಲಿ ಹಕ್ಕುಂಟೆ ? ಯಾ ಇಲ್ಲವೇ ? ಇವರಲ್ಲದೆ ಬೇರೆ ಯಾರಾದರೂ ಹಕ್ಕುದಾರರುಂಟೇ ?

3. ಕೊಡಗಿನ ಮಠಗಳ ಉತ್ಪತ್ತಿಯು ಈಗ ಯಾತಕ್ಕಾಗಿ ವಿನಿಯೋಗಿಸಲ್ಪಡುತ್ತೆ ?

4 ಚಿತ್ರದುರ್ಗದವರು ಇಲ್ಲಿಯ ಉತ್ಪತ್ತಿಯನ್ನು ಯಾವ ಕಾರ್ಯಕ್ಕಾಗಿ ವಿನಿಯೋಗಿಸುತ್ತಿದ್ದಾರೆ ?

5. ಜಲತರುನಿಧಿನಿಕ್ಷೇಪಾದಿಗಳು ಜಹಗೀರುಗಳಿಗೆ ಒಳಪಟ್ಟಿವೆಯೋ ಇಲ್ಲವೋ ?

6 ಜಹಗೀರು ಕೊಡುವದಕ್ಕೆ ಮೊದಲು ಆ ಸೊತ್ತುಗಳು ಯಾರ ಹಕ್ಕಾಗಿತ್ತು ?

7 ಪ್ರತಿ ಮಠಗಳಲ್ಲಿಯೂ ಮೂರ್ತಿಗಳು ಇರಬೇಕೆ ? ಯಾ ಬೇಡವೋ ?

8 ಅಬ್ಬಿ ಮಠದಲ್ಲಿ ಹಾಲಿ ಇರುವ ಸ್ವಾಮಿಗಳು ಯಾರು ? ಆ ಮಠದ ವಿಚಾರವೇನು ?

ಮೇಲ್ಕಂಡ ಎಂಟು ಪ್ರಶ್ನೆಗಳಿಗೆ ಉತ್ತರವಾದಿಗಳು ಕೊಡಗು ಪತ್ರಿಕೆ ಮುಖಾಂತ್ರ ಜವಾಬು ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ

ಉತ್ತರಕೊಡಗುನಿವಾಸಿ

ಕೊಡವಡ ಪಟ್ಟೋಲೆ ಪಳಮೆ.

ಅಯ್ಯಾ

ಪಟ್ಟೋಲೆ ಪಳಮೆಯು ' ಅಪೇಕ್ಷೆ ' ಗೊಬ್ಬರಿಗಾದರೂ ಆನಂದವನ್ನುಂಟುಮಾಡಿತೆಂಬುದನ್ನು ತಮ್ಮ ಪತ್ರಿಕೆಯಮೂಲಕ ತಿಳಿದು ನನ್ನ ಶ್ರಮವು ಸಾರ್ಥಕವಾಯಿತೆಂದು ಭಾವಿಸುತ್ತೇನೆ ಈ ಪುಸ್ತಕವು ನಿರೀಕ್ಷಿಸಿದಷ್ಟು ಮಹನೀಯರಕೈಗೆ ಇನ್ನೂ ಸೇರಲಿಲ್ಲವೆಂಬುದು ವ್ಯಸನಕರವಾಗಿದೆ ಮುಖ್ಯವಾಗಿ ನಮ್ಮ ಜನಾಂಗದವರ ಉಪಯೋಗಕ್ಕಾಗಿ ಸಂಗ್ರಹಿಸಲ್ಪಟ್ಟಿರವುದರಿಂದ ನನ್ನ ಪ್ರಿಯ ಸಹೋದರರು " ಅಪೇಕ್ಷೆ " ಯ ಅಪೇಕ್ಷೆಯನ್ನು ತಮ್ಮ ಪತ್ರಿಕೆಯ ಮೂಲಕ ನೆರವೇರಿಸಿದ್ದಲ್ಲಿ ನಾನು ಎಷ್ಟು ಧನ್ಯನಾಗುತ್ತಿದ್ದೆನು ! ಇನ್ನಾದರೂ ಈ ಪುಸ್ತಕವನ್ನು ಬೇಗನೆ ಒದಗಿಸಿಕೊಂಡು " ಅಪೇಕ್ಷೆ " ಯ ಅತಿ ಸುಲಭವಾಗಿರುವ ಪ್ರಶ್ನೆಗಳಿಗೆ ಸದುತ್ತರವನ್ನೀವರೋ ಎಂದು ಕೆಲವು ಕಾಲ ಕಾಯುತ್ತೇನೆ

ನಡಿಕೇರಿಯಂಡ ಚಿಣ್ಣಪ್ಪ

---

(1) ಸಿ ಎಂ ಬಿದ್ದೈಯ್ಯನವರು ಕಳುಹಿಸಿದ ತಿದ್ದುಪಾಟುಗಳು ಮುಖ್ಯವಾದುವು ಅಲ್ಲವಾದ್ದರಿಂದ ಅವರ ಪತ್ರವನ್ನು ಪ್ರಕಟಿಸಲಿಲ್ಲ (2) S P A. ಎಂಬವರ ಲೇಖನದ ಸಂಗತಿಯು ಜಮ್ಮಾದಾರರ ಸಂಘಕ್ಕೆ ಮೊದಲು ತಿಳಿಸಿದರೆ ಉತ್ತಮ. (3) ಜಮ್ಮಾದಾರರ ಸಂಘದ ಒಬ್ಬ ಮೆಂಬರ ವಾರ್ತೆಯು ವ್ಯಕ್ತಿಕುರಿತಾದ್ದರಿಂದ ಹೆಸರು ನಮೂದಿಸಿ ಪ್ರಕಟಿಸಿದರೆ ಉತ್ತಮ (4) ಮತ್ತು (5) ಪಿ ಬಿ. ಮುತ್ತೈಯ್ಯಗೌಡ ಮತ್ತು ಮುತ್ತಣ್ಣಗೌಡ ಎಂಬವರು ಬರೆದ ' ಗೌಡ " ಶಬ್ದದ ವಿಷಯ ವಾರ್ತೆಗಳು ಪ್ರಕಟಿಸುವುದಿಲ್ಲ. ಆ ವಾದವು ಸಾಕಾಗಿದೆ (6) ಸಿ.ಸಿ ತಿಮ್ಮಯ್ಯನವರ ವಾರ್ತೆಯು ಉದ್ಧಕ್ಕೆ ತಕ್ಕಷ್ಟು ವಿಷಯವಿಲ್ಲ

" ಸಂಪಾದಕ " ಕೊಡಗು

ಓ ಜಮ್ಮಾದಾರರ ಸಂಘವೇ !

ಹೋದ ವರುಷ ನಡೆದ ವಾರ್ಷಿಕ ಮೀಟಿಂಗಿನಲ್ಲಿ ವೀರಾಜಪೇಟೆಯಲ್ಲಿ ಸಭಾಧ್ಯಕ್ಷರ ಭಾಷಣದಲ್ಲಿ ಕಣಿವೆ ಹೋಬಳಿಯ ಜನರು ನವಪಶುಗಳೆಂದು ದೊಡ್ಡದಾಗಿ ನಮ್ಮಗಳಿಗೆ ಕೊಟ್ಟ ಬಿರುದನ್ನು ತಪ್ಪಿಸಿಕೊಳ್ಳಬೇಕೆಂದು ಈ ವರುಷ ಬಂದುದಕ್ಕೆ ಮುದಿಕೇರಿಯಲ್ಲಿ ನಡೆದ ವಾರ್ಷಿಕ ಮೀಟಿಂಗಿನಲ್ಲಿ ಪ್ರಥಮ ಸಭಾಧ್ಯಕ್ಷರ ಭಾಷಣದಲ್ಲಿ ಕಣಿವೆ ಹೋಬಳಿಯನ್ನೇ ಮರೆತಿದ್ದದ್ದರಿಂದ ನಾನು ಯಾವ ವಿಷಯವನ್ನೂ ಮುಂದುವರಿಸಲು ಅಸ್ವಾತುರನಾದ ಕಣಿವೆ ಹೋಬಳಿಯವರ ಪರ ನನಗೆ ಯಾವ ವಿಷಯವೂ ತೋಚದೆ ಬಂದಿದ್ದೇನೆ ಮಹನೀಯರೇ ಇನ್ನಾದರೂ ಅನ್ನಬಟ್ಟೆಯಿಲ್ಲದೆ ಅಲೆಯುತ್ತಿರುವ ನಮ್ಮನ್ನು ನೆನಪಿನಲ್ಲಿಟ್ಟುಕೊಳ್ಳಬಾರದೆ.

ಪೊನ್ನಪ್ಪ, ಕೊಪ್ಪಾಲೆ.

ಗೇಣಿಮನೆಗಳಿಗೂ ಕಾಪಿ ಸಾಗುವಳಿ ಮನೆಯ ಬಾಚವಣೆ (Exchange) ವಿಷಯ

ಬಾಗಮಂಡಲ ನಾಡಿನಲ್ಲು ಕೆಲವು ಮನೆ ಹಿಡುವಳಿದಾರರು ತಮಗೆ ಬಾಬ್ತು ಬಂಜರ್ ಬಿದ್ದ ಮತ್ತು ಮರಗಳನ್ನು ಪೂರಾ ನಾಶಪಡಿಸಿದ ಕಾಪಿ ಸಾಗುವಳಿ ಮನೆಗಳಿಗೆ ಅನೇಕ ಹುಟ್ಟುವಳಿ ಇರುವ ಮತ್ತು ಹೆಚ್ಚಿನದಲ್ಲಿ ಇರುವ ಜಾತಿ (Caste) ಮರಗಳು ಇರುವ ಗೇಣಿಮನೆಗಳನ್ನು ಬಾಚವಣೆ (Exchange) ಮಾಡಿಕೊಡಬೇಕಾಗಿ ಅರ್ಜಿ ಬರಕೊಂಡದಾಗಿ ತಿಳಿಯುತ್ತೇನೆ ಆದರೆ ಘನಸರಕಾರದವರು ಈ ಬಾಚವಣೆ ಮಂಜೂರ್ ಮಾಡುವದಕ್ಕೆ ಮೊದಲು (1) ಬಾಚವಣೆ ಮಾಡುವ ಕಾಪಿ ಸಾಗುವಳಿ ಮನೆಗಳಲ್ಲು ಇರುವ ಜಾತಿ ಮರಗಳನ್ನು ಅಂದಾಜುಮಾಡಬೇಕು (2) ಬಾಚವಣೆ ಕೊಡುವ ಗೇಣಿಮನೆಗಳಲ್ಲು ಇರುವ ಜಾತಿಮರಗಳನ್ನು ಅಂದಾಜು ಮಾಡಬೇಕು (3) ಬಾಚವಣೆಮಾಡುವ ಕಾಪಿ ಸಾಗುವಳಿ ಮಾಡುವ ಕಾಪಿ ಸಾಗುವಳಿ ಮನೆಗಳಲ್ಲು ಇನ್ನು ಹೊಸತೋಟ ಕಡಿಯುಲಿಕ್ಕೆ ಜಾಗ ಎಷ್ಟು ಇದೆ ಎಂದು ಅಂದಾಜು ಮಾಡಬೇಕು (4) ಬಾಚವಣೆ ಕೊಡುವ ಗೇಣಿ ಮನೆಗಳಲ್ಲು ಇನ್ನು ಹೊಸ ತೋಟ ಕಡಿಯಲಿಕ್ಕೆ ಎಷ್ಟು ಜಾಗ ಇದೆಯೆಂದು ಅಂದಾಜು ಮಾಡಬೇಕು. (5) ಕಾಪಿ ಸಾಗುವಳಿ ಮನೆಗಳು ತಿಯಡಾಲ್ಸೈಟ್ ಸರ್ವೆಮಾಡಿ ಸರಿಯಾದ ಮೋಜಣಿವಾಗಿದೆ. (6) ಗೇಣಿಮನೆಗಳು ಟ್ರಾಯಂಗ್ಯುಲೇಷನ್ ಸರ್ವೆಮಾಡಿದ ಅಂದಾಜುಮೋಜಣಿ ಆದರೆ ಇದನ್ನು ರಿಸರ್ವೆ ಮಾಡಬಹುದು ಇದು ಅಷ್ಟು ಬಾಜಿಸುವದಿಲ್ಲ (7) ಗೇಣಿಮನೆಗಳಲ್ಲು 15 ಸೆಂಟ್ ಲೋಕಾಲು ಎಕರೆಗಿಂತ ಹೆಚ್ಚಿನತೋಟಗಳು ಕಡಿಯಕೂಡದೆಂದು ರೂಲ್ ಇರುವದರಿಂದ ಮನೆಗಳು ಬಂಜರ್ ಆಗದೆ ತುಂಬಾ ಜಾತಿಮರಗಳು ಇವೆ (8) ಕಾಪಿ ಸಾಗುವಳಿ ಮನೆಗಳಲ್ಲು 2 ಯೇಕರು 3 ಯೇಕರು 4 ಯೇಕರುವರೆಗೆ ತೋಟ್ಟುಕಡದು ಜಾತಿಮರಗಳನ್ನೆಲ್ಲಾ ನಾಶಪಡಿಸಿ ಪೂರ ಬಂಜರಾಗಿದೆ (9) ಅಲ್ಲದೆ ಪ್ರೊಟೆಕ್ಟೆಡ್ ಫಾರೆಸ್ಟಿನಿಂದ ಕಾಪಿ ಸಾಗುವಳಿಮನೆಗಳಿಗೆ ಪ್ರೊಟೆಕ್ಟೆಡ್ ಫಾರೆಸ್ಟಿನಲ್ಲು ಇರುವ ಗೇಣಿಮನೆಗಳನ್ನು ಬಾಚವಣೆಕೊಡುವದರಿಂದ ಸರಕಾರದವರಿಗೆ ಬಂದ ಪಾಯಿದೆ ಯೇನಿದೆ. (10) ಪ್ರೊಟೆಕ್ಟೆಡ್ ಫಾರೆಸ್ಟಿನಲ್ಲು ಇರುವ ಗೇಣಿಮನೆಗಳಿಗಾಗಿ ಬಿಮ್ಮ ಮನೆಗಳಿಗಾಗಿ ರೆವಿನ್ಯೂ ಪೈಸಾರು ಇಂದ ಬಾಚವಣೆ ಕೊಟ್ಟರೆ ಪ್ರೊಟೆಕ್ಟೆಡ್ ಫಾರೆಸ್ಟ್ ಹೆಚ್ಚಿದಂತೆ ಆಗುವದು ಫಾರೆಸ್ಟ್ ಇಲಾಖೆಯವರಿಗೆ ಹೆಚ್ಚಿನ ಪಾಯಿದೆ ಆಗುವದು ಇದು ಅಲ್ಲದೆ ಪ್ರೊಟೆಕ್ಟೆಡ್ ಫಾರೆಸ್ಟಿನಿಂದ ಸರಕಾರಕ್ಕೆ ಬರಬಹುದಾದ ಹೆಚ್ಚಿನ ಕಂದಾಯ ಬರಬಹುದಾದ ಗೇಣಿ ಮನೆಗಳನ್ನು ಬಂಜರುಸ್ಥಿತಿಯಲ್ಲು ಇರುವ ಕಾಪಿ ಸಾಗುವಳಿ ಮನೆಗಳಿಗೆ ಬಾಚವಣೆಕೊಟ್ಟು ಕೊಡಗಿನ ನಿವಾಸಿಗಳಿಗೂ ಫಾರೆಸ್ಟ್ ಇಲಾಖೆಯವರಿಗೂ ಅನೇಕ ನಷ್ಟಸಂಭವಿಸುವದು ಈ ಬಾಚವಣೆ ಕೇಳುವವರು ಕೊಡಗಿನ ಹುಟ್ಟುಗಾರರಲ್ಲ. ಕನ್ನಡಜಿಲ್ಲೆಯಿಂದ ಬಂದ ವ್ಯಾಪಾರವಗೈರೆ ಮಾಡಿಕೊಂಡು ಕೊಡಗಿನ ಹುಟ್ಟುದಾರ ರೈತರಿಂದ ಭೂಮಿ ಕಾಪಿ ಸಾಗುವಳಿಮನೆ ಖರೀದಿಕೊಂಡವರು ಕಾಪಿ ಸಾಗುವಳಿ ಮನೆಗಳಲ್ಲು ಇಲಾಖೆಗೆ ದಾರಣಿ ಕಮ್ಮಿಯಿರುವಾಗ ಹೆಚ್ಚು ಇಲಾಖೆ ಸಿಕ್ಕುವ ಒಗ್ಯೆ ದೊಡ್ಡ ದೊಡ್ಡ ತೋಟ ಕಡದು ಈಗ ಪೂರ ಆಗಿದೆ ಈ ಮನೆಗಳನ್ನು ಬಾಚವಣೆಮಾಡಿದನಂತರ ಗೇಣಿಗೆ ಕೊಟ್ಟ 3 ಆಸು ಕಂದಾಯಕ್ಕೆ ಯಾರು ಬಿಚ್ಚವಾಡ ಲಾರದು, ಆದಕಾರಣ ಈ ರೀತಿ ಕೊಡಗಿಗೆ ನಷ್ಟವಾಗುವ ಬಾಚವಣೆ ಖಂಡಿತವಾಗಿಯು ಮಾಡಬಾರದಾಗಿ ಘನಸರಕಾರವನ್ನು ಬೇಡುವ ಒಬ್ಬ ಗೇಣಿಬರೈತ

ಪಟ್ಟಮಾಡ ಕುಂಞಪ್ಪ

ಅಯ್ಯಾ ಎಡಿಟರವರೇ, ದಯವಿಟ್ಟು ಈ ವಾರ್ತೆಯನ್ನು ಕೊಡಗು ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ವಿನಂತಿ.

ತಾ|| 15 3-24 ರಲ್ಲು ಮುದಿಕೇರಿ ಶಾಲೆಯಲ್ಲು 2 ಗಂಟೆಗೆ ಕಾನೂರ್ ಹೆಡ್ಮಾಸ್ಟರ್ ಮೆ|| ಜೇಯಂಡ ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ಮುದಿಕೇರಿ ಯೂನಿಯನ್ ಮೀಟಿಂಗ್ ನಡೆಯಿತು, ಸುಮಾರು 40 ಮೆಂಬರುಗಳು ಹಾಜರಿದ್ದರು ಸದರಿ ಯೂನಿಯನ್ನಿಗೆ ಪೈಸೋಡಲ್ಲಿ ಗ್ರಾಮದ ಜಾ|| ಮೆ|| ವೆಂಕಟಮೂರ್ತಿಯವರು ಒಂದು ಟೀಪಾರ್ಟಿ ಕೊಟ್ಟರು. ಅಧ್ಯಕ್ಷರು ಮತ್ತು ಅನೇಕ ಮೆಂಬರುಗಳು ಟೀಪಾರ್ಟಿ ಕೊಟ್ಟ ಮೆ|| ವೆಂಕಟಮೂರ್ತಿಯವರಿಗೆ ವಂದನೆಯನ್ನರ್ಪಿಸಿ, ಅನೇಕ ವಿಷಯಗಳನ್ನು ಚರ್ಚಿಸಿದರು. ಅಲ್ಲದೆ ಅಧ್ಯಕ್ಷರು ಮೆಂಬರುಗಳಿಗೆ ಹಿತಕರವಾದಂಥ ಬುದ್ಧಿವಾದದ ಮಾತುಗಳನ್ನು ಹೇಳಿದರು ಅನಂತರ ಮಿ|| ಚೋನೀರಕರುಂಬೈಯನವರು ನಮ್ಮ ಯೂನಿಯನ್ ಜನ್ಮನೆತ್ತಿ ಒಂದು ವರುಷದವೇಳಾಯಿತು. ಮೆಂಬರುಗಳು ನಿಜಾ ನಿಷೇದಿಗಳಾಗಿಯೂ ಬೀಡಿ ಸಿಗರೇಟ್ ನಶ್ಯ ವಗೈರೆ ಬಿಟ್ಟು ಬಹಳ ಒಗ್ಗಟ್ಟಿನಿಂದ ಸದರಿ ಯೂನಿಯನ್ನನ್ನು ಅಭಿವೃದ್ಧಿಗೆ ತರಲು ಕೆಲಸಮಾಡಬೇಕೆಂಬದಾಗಿ ಸದ್ಭಾಷಣ ಮಾಡಿದರು ನಾನು ಸಹ ಮೆಂಬರುಗಳ ವಿನಯಭಾವವನ್ನು ಕಂಡು ಸಂತೋಷಪಟ್ಟು ವಾರಕ್ಕೊಂದಾವರ್ತಿ ನಡೆಸುವದರಿಂದ ಮೆಂಬರುಗಳ ಒಪ್ಪಿಗೆಯಿಂದ ಚಂದಾ ಕೊಟ್ಟು ಹೊಸ ಮೆಂಬರಾದೆನು ಅಧ್ಯಕ್ಷರಿಗೆ ವಂದನೆಯಿಂದ ಮಂಗಳಘೋಷದೊಡನೆ ಮೀಟಿಂಗ್ ಬರಕಾಸ್ತಾಯಿತು. ಸಿ. ಬಿ

ಅಯ್ಯಾ—ಈಗ ಸುಮಾರು 1 ತಿಂಗಳ ಹಿಂದೆ ರಾತ್ರಿ 8½ ಯಾ 9 ಗಂಟೆ ಸಮಯದಲ್ಲಿ ಅಮ್ಮತ್ತಿ ವೀರರಾಜಪೇಟೆಯ ರಸ್ತೆಯ ಅಮ್ಮತ್ತಿಯಿಂದ ಸುಮಾರು 1½ ಮೈಲು ದೂರದಲ್ಲಿ ರಸ್ತೆಯ ಮಧ್ಯದಲ್ಲಿ ಒಬ್ಬನು ಕೂತುಕೊಂಡು ಬೊಳ್ಳೆ, ಬೊಳ್ಳೆ, ಎಂದು ಕೂಗುತ್ತಿದ್ದನು. ಇವನನ್ನು ವಿಚಾರಿಸಿದ್ದಲ್ಲಿ ತಾನು ಮಾಪಿಳ್ಳೆಯವನೆಂದೂ ತನ್ನನ್ನು ಎರಡು ದಿನಕ್ಕೆ ಮುಂದಾಗಿ ವೀರರಾಜಪೇಟೆ ಆಸ್ಪತ್ರೆಯಿಂದ ಬಿಟ್ಟರಾಗಿಯೂ ತಾನು ಪೊಳ್ಳೆ ಬೆಟ್ಟದಲ್ಲಿರುವ ಮಾಪಿಳ್ಳೆ ಬೀರಾಮೇಸ್ತ್ರಿ ಎಂಬವನ ಹತ್ತಿರ ಕೆಲಸಮಾಡುತ್ತಿದ್ದೆನೆಂತಲೂ ತನಗೆ ಅಲ್ಲಿಗೇನೇ ಹೋಗಬೇಕೆಂದೂ ತನಗೆ ನಡಿಯಲು ಶಕ್ತಿಯಿಲ್ಲದೆ ಪೇಚಾಡುತ್ತಿದ್ದದ್ದನ್ನು ಒಬ್ಬ ಗಾಡಿಯವನು ಕಂಡು ತನ್ನನ್ನು ಅವನ ಗಾಡಿಯಲ್ಲಿ ಕೂರಿಸಿಕೊಂಡು ಬಂದು ಇಲ್ಲಿ ಬಿಟ್ಟು ಅಡ್ಡದಾರಿಗಾಗಿ ಅವನು ಹೋದನೆಂದೂ ತನಗೆ ಬಹಳ ಬಾಯಾರಿಕೆಯಾಗಿಯೂ ಅಲ್ಲಿಗೆ ಸ್ವಲ್ಪ ದೂರದಲ್ಲಿ ಯಾರೋ ಮಾಯಲು ನೀರು ಹೊಗೆಯುತ್ತಿರುವ ಶಬ್ದವನ್ನು ಕೇಳಿ ತನಗೆ ಅಲ್ಲಿಗೆ ಹೋಗಲು ಶಕ್ತಿಯಿಲ್ಲದೆ ಹಾಗೆ ಕೂಗುತ್ತಿದ್ದೆನೆಂತಲೂ ತಿಳಿಯಲಾಯಿತು.

ಅಯ್ಯಾ ವಾಚಕಮಹಾಶಯರೇ, ನಿರ್ಜನಪ್ರದೇಶ, ಸುರಿಯುತ್ತಿರುವ ಮಂಜು, ಹೊದಿಯುವುದಕ್ಕೆ ಒಟ್ಟೆಯಿಲ್ಲ, ಬಾಯಾರಿಕೆಯನ್ನು ಕಳದುಕೊಳ್ಳಲು ನೀರುಕೊಡುವವರಿಲ್ಲ ಊಟಉಪಚಾರವಿಲ್ಲ ಕಾಯಿಲೆಕ್ಕೆ ತಕ್ಕ ಔಷಧಿ, ಉಪಚಾರವಿಲ್ಲದೆ, ಕಂಗಲಾದ ದನದಂತೆ, ಬೇಟೆಯವನಿಂದ ಗಾಯಹೊಂದಿದ ಮೃಗದಂತೆ ಮೃತ್ಯುದೇವತೆಯ ಆಗಮನವನ್ನು ಬಯಸುತ್ತಾ ಎಕ್ಕಿ, ಎಕ್ಕಿ ಮರುದಿನ ಮೃತ್ಯುವಶನಾದನಂತೆ. ಅಂದು ಆ ರೀತಿಯಲ್ಲಿ ನರಳಿದವನು ಆ ಮಾಪಿಳ್ಳೆಯವನಲ್ಲ ನಾವೇ, ಅಥವಾ ನಮ್ಮ ರಕ್ತಸಂಬಂಧಿಗಳಲ್ಲೊಬ್ಬರೆಂದು ಕೆಲವು ಹೊತ್ತಿನವರೆಗೆ ಯೋಚಿಸಿ ನೋಡುವ. ನಮ್ಮ ಹೃದಯವು ಹೇಗಾದೀತೆಂಬುದನ್ನು ಊಹಿಸಲಾದೀತೆ? ಇತ್ತೀಚೆಗೆ 15 ದಿನಗಳ ಹಿಂದೆ ಅಮ್ಮತ್ತಿ ಕೊಂಡಂಗೇರಿ ರಸ್ತೆಯಲ್ಲಿ ಮೇಲ್ಕಂಡ ಆಸ್ಪತ್ರೆಯಿಂದ ಕಳುಹಿಸಲ್ಪಟ್ಟ ಒಬ್ಬ ಮಣಿಯಾಣಿಯೂ ಈ ರೀತಿ ಮೃತನಾದನಂತೆ.

ಅಯ್ಯಾ ನಾನು ವೈದ್ಯ ಇಲಾಖೆಯವರನ್ನಾಗಲೀ ಸರಕಾರದವರನ್ನಾಗಲೀ ದೂರುವದಿಲ್ಲ. ಮಲೇರಿಯಾ ಮೊದಲಾದ ಕಾಯಿಲೆಗಳ ಮಾತೃಸ್ಥಾನವಾದ ನಮ್ಮಾದೇಶದಲ್ಲಿ ಈಗ ಇರುವದರ ಎರಡರಷ್ಟು ಆಸ್ಪತ್ರೆಗಳನ್ನೂ ವೈದ್ಯರನ್ನೂ ಇಟ್ಟರೂ ನಮ್ಮ ಸ್ಥಿತಿಯು ಎಂದೂ ಒದಗಾಗುವದಿಲ್ಲವೆಂದು ನನ್ನ ಭಾವನೆಯಾಗಿದೆ.

ಆದರೆ ಗರೀಬ ಕೂಲಿ ವಾಡಿನ ಕಾಯಿಲಸ್ಥರನ್ನು ಆಸ್ಪತ್ರೆಯಿಂದ ಚನ್ನಾಗಿ ಕಾಯಿಲ ವಾಸಿಯಾಗುವದಕ್ಕೆ ಮೊದಲೇ ಅವನಿಗಿಂತ ಹೆಚ್ಚಿನ ಕಾಯಿಲಸ್ಥರಿಗೆ ಆಸ್ಪತ್ರೆಯ ಉಪಚಾರಕ್ಕೆ ಅನುಕೂಲಕೊಡುವದಕ್ಕೋ ಅಥವಾ ಇನ್ನಾವದಾದರೊಂದು ಸಂಗತಿಯಿಂದಲೋ ಹಾಗೆ ಬಿಡುವಾಗ ಆ ಮನುಷ್ಯನು ಆಸ್ಪತ್ರೆಗೆ ಬರುವದಕ್ಕೆ ಮೊದಲು ಯಾರಹತ್ತಿರ ಕೆಲಸಮಾಡುತ್ತಿದ್ದನೋ ಅವರಿಗಾಗಲೀ ಇಲ್ಲವೇ ಅವರ ನೆಂಟರಿಷ್ಟರಿಗಾಗಲೀ ಖುದ್ದು ನೋಟೀಸು ಚಾರಿಯಿಂದ ಅವರನ್ನು ಕರಿಸಿ ಕಾಯಿಲಸ್ಥನನ್ನು ಅವರ ವಶಕ್ಕೆ ಒಪ್ಪಿಸಿ ಒಂದೆರಡುದಿವಸಕ್ಕಿರುವ ಔಷಧಿಯನ್ನು ಕೊಟ್ಟು ಅವನನ್ನು ಚನ್ನಾಗಿ ಆರೈಕೆಮಾಡಿಕೊಳ್ಳುವಂತೆಯೂ ಕಠಿಣವಾದ ಅಪ್ಪಣೆಕೊಡುವಂತೆ ಮಾಡಿದರೆ ಅನೇಕ ಗರೀಬಜನರ ಪ್ರಾಣಹಾನಿಯಾಗುವದನ್ನು ತಪ್ಪಿಸಿದಂತಾಗುವದರಿಂದ ಮೇಲು ಅಧಿಕಾರಿಗಳು ಈ ವಿಷಯಕ್ಕೆ ಒಡನೆ ನಿಗಕೊಡಬೇಕಾಗಿ ಕೋರುವ.

ಐ. ಪಿ. ಮಾದಪ್ಪ.

ಅಯ್ಯಾ,

ಮಡಿಕೇರಿ ಹುಡುಗಿಯರ ಶಾಲೆಯಲ್ಲಿ ಸುಮಾರು ೯೦ ಮಕ್ಕಳವರೆಗೆ ಓದುತ್ತಿದ್ದಾರೆ. ಶಾಲೆಯ ಹೆಡ್ ಮಿಸ್ಟ್ರೆಸ್ ಆದರೋ ಒಬ್ಬ ಕನ್ನಡ ಕಲಿತವರು. ಆದ್ದರಿಂದ ಸ್ವಾಭಾವಿಕವಾಗಿ ಪಾಠ ಹೇಳಲು ಶಕ್ತಿಯಿಲ್ಲದ್ದರಿಂದ ಇನ್ನೂ ಅನೇಕ ಹುಡುಗಿಯರು ಶಾಲೆಗೆ ಬರುವದಿಲ್ಲ. ಈಗಿನ ನವನಾಗರಿಕತೆಯ ಕಾಲದಲ್ಲಿ ಇಂಗ್ಲಿಷ್ ಶಾಲೆಯ ಹೆಡ್ ಮಿಸೆಸ್ಸನ್ನು ಇಟ್ಟುಕೊಂಡು ಯಾವ ವಿದ್ಯಾಭಿವೃದ್ಧಿಯು ಹೊಂದುವಂತಿಲ್ಲ. ಆದ್ದರಿಂದ ಶಾಲಾ ಮೇಲಾಧಿಕಾರಿಗಳು ಒಬ್ಬ ಲೋವರ್‌ಸೆಕೆಂಡ್ರಿ ಪಾಸಾಗಿ ಟ್ರೈನಿಂಗ್ ಆದ ಹೆಡ್ ಮಿಸೆಸ್ಸನ್ನು ಒಡನೆ ಕಳುಹಿಸಿಕೊಡುವರಾಗಿ ನಮ್ಮ ಪ್ರಾರ್ಥನೆ.

ಹುಡುಗಿಯ ತಂದೆ.

ಅಯ್ಯಾ ಕೊಡಗೇ!

ಬೈಸಿಕಲ್ ಸವಾರರಕಡೆಗೆ ನೀನು ಸ್ವಲ್ಪವೂ ಗಮನಕೊಡಲಿಲ್ಲವೆ? ವೀರರಾಜೇಂದ್ರಪೇಟೆಯಲ್ಲಿ ಕಚೇರಿ ಮೂಲೆ ಇಳಿದು ಸ್ಕೂಲ್ ಕಡೆಗೆ ಬರುವಾಗ ಸಿಕ್ಕುವ ಮೋರಿ ತಿರುವಿನಲ್ಲಿ ಎಷ್ಟು ಜನರು ಮೋರಿಗೆ ತಲೆಚಚ್ಚಿ ಬೈಸಿಕಲ್ ಸಮೇತ ಕೆಳಗಿನ ಗದ್ದೆಗೆ ಹಾರಿದರೆಂಬುದು ಗೊತ್ತಾಗಲಿಲ್ಲವೇ? ಇದರ ಲೆಕ್ಕವನ್ನು ವಾರಕ್ಕೊಂದು ಎಂಬಂತೆ ಎಣಿಸಿಕೊ. ಕಳೆದವಾರದಲ್ಲಿ ಮೈಸೂರಿನ ಒಬ್ಬ ಸವಾರನು ತಲೆಚಚ್ಚಿ, ಮುಖಕ್ಕೆ ಗಾಯಪಡಿಸಿಕೊಂಡು ಮೂರ್ಛೆತಪ್ಪಿ ಬಿದ್ದದ್ದನ್ನು ಕೆಲವು ಪುಣ್ಯಾ[illegible] ಕಂಡು ಆಸ್ಪತ್ರೆಗೆ ಸಾಗಿಸಿದರು. ಇಲ್ಲಿ ಹಲವರು ಬೀಳಲು ಕಾರಣವೇನು? ತೀಗ್ರ ಡೆ ಹೊಂದಿದ ಸವಾರರಲ್ಲವೇ? ನಿಜವಾಗಿಯೂ ಹೌದು. ಹಾಗಾದರೆ ತಪ್ಪು ಮೋರಿ ತಿರುವಿನಲ್ಲಿಯೇ ಇದೆ ಎಂದು ತಿಳಿಯಬೇಕಾಗಿದೆ. ಈ ಮೋರಿ ತಿರುವು ಇಕ್ಕಟ್ಟಾಗಿ ಸಮಕೋನದಂತಿರುವುದರಿಂದ ಇಲ್ಲಿ ಘಕ್ಕನೆ ತಿರುಗಿಸುವುದಕ್ಕಾಗುವುದಿಲ್ಲ. ಈ ವಿಚಾರವನ್ನು ನೀನು ತಿಳಿದು ರಸ್ತೆಯ ಈ ಭಾಗವನ್ನು ಸ್ವಲ್ಪ ಅಗಲಮಾಡಿ ಸರಿಪಡಿಸುವಂತೆ ಟಿ. ಪಿ. ಡಬ್ಲ್ಯು, ಯವರಿಗೆ ತಿಳಿಸುವುದಕ್ಕಾಗುವುದಿಲ್ಲವೇನು.

ಬಿದ್ದವರ ಸ್ನೇಹಿತ

ಅಯ್ಯಾ

ತಾರೀಖು ೨-೫-೧೯೨೪ ರ ಕೊಡಗು ಪತ್ರಿಕೆಯಲ್ಲಿ ಸಿ ಬಿ. ಅಚ್ಚಯ್ಯನವರ ಲೇಖನವನ್ನು ನಾವೆಲ್ಲರು ಓದಿ ತಿಳದುಕೊಳ್ಳಲು ಸಹಜವೇ. ಆದರೆ ಆಸ್ಪತ್ರೆಯವರಿಂದ ನಮ್ಮಂಥವರಿಗೆ (ಹಳ್ಳಿಯ ಬಡಜನರಿಗೆ) ಕಷ್ಟವುಂಟಾಗುವುದು. ಅದು ಹೇಗೆಂದರೆ—ಅಚ್ಚಯ್ಯನವರು ಹೇಳುವಮೇರೆ, ಹಳ್ಳಿಯವರು ಕಾಯಿಲೆ ಜಾಸ್ತಿಯಾಗುವಾಗಲೇ ಬಾರದೆ ಜೋರಾದನಂತರ ಆಸ್ಪತ್ರೆಗೆ ಬಂದು ಗುಣವಾಗದೆ ಮೃತಪಡುತ್ತಾರೆಂದು ಹೇಳುತ್ತಾರೆ. ಇಂಥ ಮರಣಕ್ಕೆ ಆಸ್ಪತ್ರೆಯವರೇ [illegible] ಕಾರಣವೆಂದು ನಾನು ಹೇಳುತ್ತೇನೆ. ನಮ್ಮ [illegible] ಸ್ವಲ್ಪ ಜ್ವರ ಬಂದರೆ ಆಸ್ಪತ್ರೆಯಲ್ಲಿ [illegible] ಮಾಡಿಸಿಕೊಂಡು ಬರುತ್ತೇನೆಂದು ಅರೆಕಾಲು ಮೈಲು ನಡೆದುಕೊಂಡು ಹೋಗಿ ಜ್ವರ ಗುಣವಾಗುವವರೆಗೆ ಆಸ್ಪತ್ರೆಯಲ್ಲಿಯೇ ಇರುತ್ತೇನೆಂದು ಅವರ ಸಂಗಡ ಹೇಳಿದರೆ, ಅವರು ಆ ಮಾತನ್ನು ಮನಸ್ಸಿಗೆ ತಂದುಕೊಳ್ಳದೆ 'ನಿನಗೆ ಜಾಸ್ತಿಯಾದ ಕಾಯಿಲೆ ಇರುವುದಿಲ್ಲ. ಅದಲ್ಲದೆ ವಾರ್ಡಿನಲ್ಲಿ ಸ್ಥಳವೂ ಇರುವುದಿಲ್ಲ" ಎಂದು ಸ್ವಲ್ಪ ಔಷಧಿಯನ್ನು ಕೊಟ್ಟು ಮನೆಗೆ ಕಳುಹಿಸುತ್ತಾರೆ. ಅವನು ಅದೇಮೇರೆ ಅರೆಕಾಲು ಮೈಲು ಪುನಃ ನಡೆದುಕೊಂಡು ಹೋಗುತ್ತಾನೆ. ಮಾರನೆ ದಿನ [illegible] ಜಾಸ್ತಿಯಾಗಿ [illegible] ಆಸ್ಪತ್ರೆಗೆ [illegible] ವಿನದಿನ [illegible] ತ್ತೇನೆಂದು ನೆನಸಿ ತಾನೇ ನಡೆದುಕೊಂಡು ಹೋಗಿ, ಯಾರೊಬ್ಬರ ಸಹಾಯದಿಂದಾಗಲಿ ಆಸ್ಪತ್ರೆಗೆ ತಲುಪಿ ಅಲ್ಲಿಯೇ ಮೃತಪಡುತ್ತಾನೆ. ಆಗ ಆಸ್ಪತ್ರೆಯವರು ಕಾಯಿಲೆಯನ್ನು ಕಂಡು ಕಾಯಿಲೆಯು ಜೋರಾದನಂತರ ಇಲ್ಲಿಗೆ ಕೊಂಡುಬಂದಿದ್ದೀರೋ, ಜೋರಾದಮೇಲೆ ಏನು ಪ್ರಯೋಜನವೆಂದು ನಮ್ಮನ್ನು ಕೇಳುತ್ತಾರೆ. ಗರೀಬರಾದ ನಾವು ಕಾಯಿಲೆಯು ಸುರುವಾಗುವಾಗ ಹೋದರೆ ಆಸ್ಪತ್ರೆಯವರು ಹೀಗನ್ನುವರು. ಅಲ್ಲಿಯೇ ಮೃತನಾಗುವುದಾದರೆ ಅಲ್ಲಿಯೇ ಮೃತನಾಗಲಿ ಒದುಕುವನಾದರೆ ಅಲ್ಲಿಯೇ ಒದುಕಲಿ ಎಂದು ಯೋಚಿಸಿ ಆಸ್ಪತ್ರೆಗೆ ಹೋದರೆ ಆದಕ್ಕೂ ಹೀಗನ್ನುವರು. ನಾವು ಏನು ತಾನೇ ಮಾಡುವುದು ಮಹನೀಯರೇ ಈ ಕಾರಣಗಳಿಗೆ ಯಾರು ಜವಾಬ್ದಾರರು

13 5 24

S N Medapa.

ಜಮಾನ್ದಾರರ ಸಂಘದ ಮುಂದಾಳುಗಳಲ್ಲಿ ಮತ್ತು ಕೌನ್ಸಿಲ್‌ಮೆಂಬರುಗಳಲ್ಲಿ ಒಂದು ವಿನಂತಿ.

ಮಹನೀಯರೇ,

೧ ಈ ನಮ್ಮ ಕೊಡಗು ಸಂಸ್ಥಾನದಲ್ಲಿ ಜಮ್ಮದ ಬಾಣೆಗಳಲ್ಲಿ ಮಂಜೂರಾತಿಯಿಲ್ಲದೆ ವಾಸದ ಮನೆ ಕಟ್ಟುವಂತೆಯೂ,

೨ ರೈತರಿಗೆ ಕಟ್ಟಡಕ್ಕೆ ಬೇಕಾಗುವ ಮರ ಮಗ್ಗೆರೆಗಳನ್ನು ತಮ್ಮ ಜಾಗಗಳಿಂದ ಉಪಯೋಗಿಸುವಂತೆಯೂ,

೩. ಒಂದೂರಿನಲ್ಲಿ ಇರುವ ತನ್ನ ಸ್ವಂತ ಭೂಮಿಗೆ ಸೇರಿದ ಜಮ್ಮ ಯಾ ಬಾಣೆಗಳಿಂದ ತನ್ನ ಇನ್ನೊಂದು ಊರಿನ ಆಸ್ತಿಯಲ್ಲಿ ಕಟ್ಟಡಕ್ಕೆ ಮರ ಸಾಗಿಸಲು ರಹದಾರಿ ಇಲ್ಲದಂತೆಯೂ,

೪. ಜಮ್ಮದಭೂಮಿಯ ವತ್ತಿನ ಅಂದರೆ ರೂಢಿ ಇರುವ ಗದ್ದೆಯ ಮತ್ತು ಪಾಳುಜಾಗವನ್ನು ಭೂಮಿ ಮಾಡಿಸಿದರೆ ಅವುಗಳನ್ನು ಜಮ್ಮದಂತೆಯೂ,

೫. ಭೂಮಿಯ ವತ್ತಿನ ಹೊಳೆಬರಿಯಜಾಗವು ರೈತರ ಹಕ್ಕಾಗಿರುವಂತೆಯೂ,

೬. ಭೂಮಿಗಳಿಗೆ ಸೇರಿದ ಬಾಣೆಯಲ್ಲಿ ಮತ್ತು ಹಿತ್ತಿಲಿನಲ್ಲಿ ಸಹ ಕಾಫಿ ನೆಟ್ಟರೆ ಸೆಸ್ಸ್ ಇಲ್ಲದಂತೆಯೂ,

೭. ಬಾಣೆ ಜಾಗದಲ್ಲಿ ಮಂಜೂರಾತಿಯಿಲ್ಲದೆ ಕುಮರಿ ಕಡಿದುದಾಗಿ, ಜೋಳ ಮಗ್ಗೆರೆಯನ್ನು ಯಾವ ತೆರಿಗೆಯೂ ಇಲ್ಲದೆ ಬೆಳೆಸುವಂತೆಯೂ,

೮. ಕೂಡಂದರೆ ಪೈಸಾರಿ ಜಾಗದಲ್ಲಿ ಕುಯಿಪ ಲಿಕ್ಕೆ ಬಂದಿರುವ ಮರಗಳೂ ಹಿಂದಳಿಂದ ವೃದ್ಧಿಗೆ ಬರುವಂತ ಜಾತಿ ಮರಗಿಡಗಳೂ ಏನಹ ವಿಕ್ಕ[illegible] ಜೆತ್ತವಾಟೆ ಸೊಪ್ಪು ಸೌದೆಯನ್ನೂ ಸಹ [illegible]ಸುವಂತೆಯೂ,

9. ಹೈರೋಡಿನಿಂದ ಕವಲೊಡೆದು ಗ್ರಾ[illegible] ಹೋಗುವ ಮೊದಲು ಸರ್ಕಾರಿ ಖರ್ಚಿನಿಂದ ಮಾಡುತ್ತಿದ್ದ ಬಳರಸ್ತೆ ಬಳದಾರಿಗಳನ್ನು ಮ[illegible] ಮೇರೆ ಮಾಡಿಸುವಂತೆಯೂ ಸರಕಾರದವರೊ[illegible]ಸಿ ಮಂಜೂರು ಮಾಡಿಸಬೇಕು.

ಈ ಮೇಲ್ಕಂಡ ಅಂಶಗಳನ್ನು ತಾಯಿ[illegible]ಳನ್ನು ಪೋಷಿಸುವಂತೆ ಜಮಾನ್ದಾರರ ಸ[illegible] ಮಾತೆಯು ಮತ್ತು ಸರಕಾರಕ್ಕೆ ಸಹೋದರ[illegible]ದಿಂದ ವರ್ತಿಸುವ ಕೌನ್ಸಿಲ್ ಮೆಂಬರುಗ[illegible] ಪೂರಿತರಾಗಿ ಬಡರೈತರ ಕಷ್ಟವನ್ನು ಪರಿಹ[illegible]ವನ್ನು ಉದ್ಧಾರಮಾಡಬೇಕಾಗಿ ವಿನಂತಿ.

ಅಪಾಕ [illegible]

ಮಡಿಕೇರಿಯ ಸಮ್ಮೇಳನ

ದೇಶಬಾಂಧವನೇ,

ಈ ವರ್ಷದ ಜಮೀನುದಾರರ ಸಂಘದ ಸಮ್ಮೇಳನವು ಮಡಿಕೇರಿಯಲ್ಲಿ ನೆರೆದು ಅನೇ[illegible]ಗಳು ಪಾಸಾದವು. ಇವುಗಳಲ್ಲಿ ಕೆಲ[illegible] ತಂದವುಗಳು ಹೇಳುವ ಮಾನತನನ[illegible]ಕವನ್ನು ಬೆಂಕಿಯಲ್ಲಿ ಸುಟ್ಟು ನಿರ್ಧರಿಸಲ್ಲಿ ಮಾಡಬೇಕೆಂಬ ಠರಾವು ಒಂದು ಕೆ[illegible] ಏಕೋಭಾವದಿಂದ ಮಂಜೂರುಮಾಡಲ್ಪಟ್ಟ ವಿಚಿತ್ರವಾದೆನು. ಯಾಕೆಂದರೆ ಇಂಥಾ ಪ್ರ[illegible]ತಂದದರಿಂದಲೇ ಜನರಲ್ಲಿ ಭಿನ್ನಾಭಿಪ್ರಾ[illegible]ಯಾಗಿರುವದಲ್ಲದೆ ಆ ಮನಸ್ಥಾನಸ್ಥರಲ್ಲಿ ಮೆಂಬರುತನಕ್ಕೆ ಲಾಯಕ್ಕಿದ್ದವರು ಮೆಂ[illegible] ನಿಂತರೂ ಕೂಡ ಪುಸ್ತಕಕ್ಕೆ ದಾಖಲಾಗದ [illegible] ಸ್ಥಾನಸ್ಥರ ನಂಬಿಕೆಯು ಹೆಚ್ಚಿದದರಿ[illegible] ಇಲ್ಲದ ಸಲ್ಲದ ಆರೋಪಣೆಗಳ[illegible] ಜಮ್ಮ ಕಾರ್ಯದಲ್ಲಿ ಜಯಶೀಲರಾದರೆ[illegible] ಕ್ತಿಯಾಗಲಾರದು.

ಇಲ್ಲಿ ಉದಹರಿಸುವಸಂಗತಿಯನ್ನು [illegible]ಚಿಸಿಕೊಂಡರೆ ಪುಸ್ತಕಕ್ಕೆ ದಾಖಲಾಗದೆ ಇ[illegible] ನಸ್ಥರ ಮುಂದಾಳುಗಳನಿಸಿಕೊಳ್ಳುತ್ತಿ[illegible]ಯಿಂದ ಒಬ್ಬರಮೇಲೆ ಒಬ್ಬರನ್ನು [illegible] ಮುಂದರಿಯಬೇಕೆಂಬ ಇರಾದೆಪಟ್ಟ[illegible] ನ್ಯಾಯವನ್ನು ಸ್ಥಾಪಿಸಲಿಕ್ಕಾಗಲಿ ಜನರಲ್ಲಿ ನ್ನು ಬೆಳಸಬೇಕೆಂತಲಾಗಲಿ ಮನವುಳ್ಳವರ[illegible] ಕೆಳಗಿನ ಉದಹರಣೆಯಿಂದ ಖಂಡಿತವಾಗ[illegible] ದಕ್ಕೂ ಇವಾವುವುಸಾಬೀತೂ ಎಷ್ಟು ಸಮ್ಮ[illegible] ಅಷ್ಟೇ ಸಮರ್ಥ ಜಮೀನುದಾರರ ಸಂಘದ[illegible]ಗಳಿಗೂ ಕೌನ್ಸಿಲ್ ಮೆಂಬರುಗಳಿಗೂ ಇದೆ. ಈ ತಾಲೂಕಿನವರ ಜನನಾಯಿಸಲ್ಪಟ್ಟ ಮೆಂಬರನು ತಿಳದುಕೊಳ್ಳದೆ ತನ್ನಷ್ಟಕ್ಕೆ [illegible] ಸಿಕೊಳ್ಳಬೇಕೆಂಬ ಇರಾದೆಯಿಂದ ಕೇವ[illegible]ಳಿಗೆ M. L. C. ಎಂಬ [illegible] ಬರಾಯಿಸಿ ಹಚ್ಚಿಸಿ ಸಭಾಮಂಟಪದಲ್ಲಿ ಇಟ್ಟು ಸುರಕ್ಷಿತಟ್ಟದಲ್ಲದೆ ತಾನು ಹೋಗಿ [illegible] ಮಾಡಿಕೊಂಡು ಕೂತುಕೊಂಡಲ್ಲದೆ ಇತರ ಮೆಂಬರುಗ[illegible]ರುವವಂತೆ ಮಾಡಿದರು. [illegible] ಕಾರ್ಯಕ್ಕಾಯುವಾದನಂತರ ಮೈಸೂರಿನ [illegible] ತರಿಸಿದ್ದ ಮತ್ತು ಪಾನ ಸುಪಾರಿಗಳನ್ನು ಸಂಘದ ಮುಂದಿಡಲು ಜಮೀನುದಾರರ ಸ[illegible] ಕೌನ್ಸಿಲು ಮೆಂಬರುಗಳಿಗೆ ಒಡ[illegible] ಹೇಳಿ ಹಾಜರಿದ್ದ ಮೆಂಬರುಗಳಿಗೆ [illegible] ಹಾಕಿ ಪಾನ ಸುಪಾರಿಗಳನ್ನು ಒಪ್ಪಿಸಿದನು. ಸರ್ವರಿಗೂ ಪಾನ ಸುಪಾರಿಗಳನ್ನು ಹಂ[illegible] ಯಾರ ಅಭಿಪ್ರಾಯವೆಂತಲೂ ಮತ್ತು [illegible] ಸಹ ಯಾವ ರೀತಿಯಿಂದ ಮಾಡಲ್ಪಟ್ಟಿ[illegible] ನನಗೆ ತಿಳಿಯದು. ನ್ಯಾಯವಿದೆಯೋ ಸಾಕಾದದೋ ಎಂಬುದನ್ನು ತಿಳದು ಮುಂ[illegible] ಇರಾದೆಯಿಂದ ಈ ಬಾರಿ ಬರೆದದಾಗಿರುವ[illegible] ದರೂ ಮುಕ್ತಾಯವಾದ ಜವಾಬುಕೊಟ್ಟು[illegible]ತ್ತೇನೆ.

ಅಯ್ಯಾ ಎಡಿಟರವರೇ ಈ ಕೆಳಗಿನ [illegible] ದೇಶೋಪಕಾರಕ್ಕಾಗಿ ಪೇಪರಿನ ಒಂದು [illegible] ವಿರಾಗಿ ವಿನಂತಿ.

ನಮ್ಮ ಕೊಡಗಿಗೆ ಸರ್ಕಾರಿ [illegible] ನಾಲ್ಕು ಜನರನ್ನು ನೇಮಿಸಲಿಕ್ಕಾಗಿ ಜಮೀ[illegible]ದಲ್ಲಿ ಚರ್ಚಿಸಿ ಅಲ್ಲಿಯೂ ತೀರ್ಮಾ[illegible]

...ನವುದಾರ ಕೌನ್ಸಿಲು ಮೆಂಬರುಗಳು ಸಹ ಈ ...ಯ ಈಗ ತುಂಬಾ ಚರ್ಚೆ ನಡಿಸಿದಲ್ಲಿ ನಮ್ಮ ಘನ ...ಸವರು ಗರೀಬ ರೈತರ ಜೀವೋಪಕಾರಕ್ಕೆ ...ಸಿಕೊಡುವಂತೆ ವ್ಯಾಗ್ದಾನಕೊಟ್ಟಿರುವದಾಗಿ ತಿಳಿ ...ರುತ್ತೆ. ಈ ವಿಷಯು ವ್ಯಾಗ್ದಾನಕೊಟ್ಟಲ್ಲಿ ಈಗ ...ಕೊಡಗಿನಲ್ಲಿ ಕೆಲಸಮಾಡುತ್ತಿ ಇರುವ ವ್ಯಾಕ್ಸಿ ...ರ್‌ಗಳಗೆ ಈ ವಿಷಯು ಸ್ವಲ್ಪ ಟ್ರೆಯಿನಿಂಗ ಕೊಟ್ಟು ...ನ್ನೇ ಈ ಕೆಲಸಕ್ಕೆ ನೇಮಕ ಮಾಡಿದಲ್ಲಿ ಅವರಿಗೆ ...ವ ಸಂಬಳದ ಜೊತೆಗೆ ಸ್ವಲ್ಪ ಹೆಚ್ಚಿಗೆ ಸಂಬಳ ...ದಲ್ಲಿ ಗವರ್ನಮೆಂಟಿಗೆ ಹಂಗಳಗೆ ಅನೇಕ ರೂಪಾ ...ಳು ಉಳಿಕೆಯಾಗುವರೀತಿ ಕಂಡುಬರುತ್ತೆ. ಗರೀಬ ...ಗೆ ೪ ಡಾಕ್ಟರುಗಳವೈಕಿ ೧ ಡಾಕ್ಟರುಗಳು ಸಿಕ್ಕಿದ ...ಆಗುತ್ತೆ. ಅನೇಕ ವ್ಯಾಕ್ಸಿನೇಟರುಗಳಿಗೆ ಈಗಲೇ ...ಕೆಮ್ಮು, ಚಳೆನೋವು, ಗಂಡೆ, ಗಾಯು, ಅಜ್ಜಿ ...ರೆಗಳಗೆ ಔಷಧ ಕೊಡುವದಕ್ಕೆ ಅಭ್ಯಾಸಮಾಡಿ ...ರುತ್ತಾರೆ, ಇವರಿಗೆ ಇನ್ನೂ ಕೆಲವು ದಿವಸಗಳು ...ನಿಂಗ' ಆಸ್ಪತ್ರೆಗಳಲ್ಲಿ ಕೊಟ್ಟರೆ ನಮ್ಮ ಸ್ವಜಾ ...ದ ಇವರು ಈಗಲೇ ಇಷ್ಟು ಮೇನತ್ತು ತೆಗೆಯು ...ಇನ್ನೂ ಟ್ರೆಯಿನಿಂಗ' ಕೊಟ್ಟಲ್ಲಿ ಅನೇಕ ಜೀವ ...ಮಾಡುವರಾಗ ನಂಬಿ ಮೇಲ್ಪಂಡಪ್ರಕಾರ ಮಾಡಿ ...ವದಾಗಿ ಘನ ಸರಕಾರವನ್ನು ಬೇಡಿಕೊಳ್ಳುವು ...ದೆ. ವ್ಯಾಕ್ಸಿನೇಟರುಗಳವರು ಹ್ಯಾಗೂ ಗ್ರಾಮದ ...ಲೆ ಯಾವಾಗಲೂ ತಿರುಗುತ್ತಿರುವವರಾಗಿರುತ್ತಾರೆ ...ಂದ ಈ ಕೆಲಸವನ್ನು ಅವರಿಗೆ ನೇಮಿಸಿಕೊಟ್ಟರೆ ...ಡಾಕ್ಟರಿನ ಕೆಲಸವನ್ನು ಇಬ್ಬರು ವ್ಯಾಕ್ಸಿನೇಟರು ...ಈ ಕೆಲಸಗಳನ್ನು ಪೂರೈಸುವವರಾಗಿ ಕಂಡು ...ಗರೀಬ ರೈತರಿಗೆ ಸುಲಭರೀತಿಯಲ್ಲಿ ಫಕ್ಕನೆ ...ಅಮಾಯು ಕಾಲಕ್ಕೆ ಆವರಿಂದ ಹೊಂದಿಕೊಳ್ಳ ...ಸುಲಭರೀತಿಯಲ್ಲಿ ಕಂಡುಬರುತ್ತದೆ.

...೪.   ನಾಡಿನ ರೈತ.

ಬಲಮುರಿಮಠವು, ಸುಬ್ಬಯ್ಯನು.

...ಪ್ರಿಯರೆ !

...ತಾರೀಖು ೧೪-೩-೨೪ ರ ಪತ್ರಿಕೆಯಲ್ಲಿ "ಮಠ ...ವಿಷಯವಾಗಿ "ಸುಬ್ಬಯ್ಯ" ನೆಂಬವರೊಬ್ಬರು ...ಗು ೩೯ ನೆ ಸಂಚಿಕೆಯ ಜಾಗೀರು ಲೇಖನಕರ್ತ ...ಕುರಿತು ಆ ಲೇಖನವು ಚಮತ್ಕಾರಯುಕ್ತವಾ ...ಮುಂತಾಗಿ ಅಗ್ರಹಪಟ್ಟು ತುದಿಮೊದಲಿಲ್ಲದ ...ವನ್ನು ವಿಚಾರಿಸುವಾಗ್ಯೆ ಇವರು ಬರೆಯುಲು ಸು ...ವಾಗ ಬಹಳ ವಿಸ್ತಾರವಾದ ಆಲೋಚನೆ ಮಾ ...ಡು ಬರಬರುತ್ತಾ ಮನಸ್ಸಿನಲ್ಲಿ ಕಳವಳ ತೋ ...ಡು ಯಾವದೋ ಒಂದು ತೀರ್ಮಾನವಿಲ್ಲದ ಲೇ ...ನ್ನು ಲೇಖಿಸಿದ್ದು ನೋಡುವರೆ ಬಹಳ ಆಶ್ಚರ್ಯ ...ಗಿ ಕಾಣುತ್ತದೆ. ಇವರು ಕೆಲವು ಪ್ರಶ್ನೆಗಳನ್ನು ...ತು ಅಭಿಪ್ರಾಯುಕೊಡದೆಯೂ, ಯಾ, ತನಗೆ ...ಭಿಪ್ರಾಯವೆಂದೂ ಸಹ ಕಾಣಿಸದೆ ಪ್ರಶ್ನೆ ಕೇಳ ...ಇವರಿಗೆ ಜಾಗೀರು ಸಮಂದವಾದ ವಿಷಯದ ...ಯೇ ಗೊತ್ತಿಲ್ಲವೆನ್ನಬೇಕಾಗಿದೆ. ಇಂಥಾ ಗೂ ...ವಿಷಯಕ್ಕೆ ಪ್ರಶ್ನಿಸಿ ಲೇಖಿಸುವದಕ್ಕೆ ಆದೊಂದು ...ವೆ ರೀರಣ ಲೇಖನಮಾಡಿದ್ದು ಸುಬ್ಬಯ್ಯನವರಿಗೆ ...ಹಾಸ್ಯಾಸ್ಪದನಲ್ಲವೆ ? ಗೊತ್ತಿಲ್ಲದ ಸಂಗತಿಯು ...ಬೇಕಾದರೆ ಸುಬ್ಬಯ್ಯನವರು ಗ್ರಾಮಸ್ಥರನ್ನು ...ಮಾಡಿ ದೇಶಬಾಂಧವರನ್ನು ಕೇಳಬೇಕೆ ? ೩೯ ...ಚಿಕೆಯಲ್ಲಿ ಗ್ರಾಮಸ್ಥನು ಜಾಗೀರು ವಿಷಯು ...ವಾರ್ಪರವಿಚಾರಯುಕ್ತವಾದ ಲೇಖನ ಲೇಖಿ ...ಗ್ಯೆ ಇವರಿಗೆ ತಿಳಿಯದ ಸಂಗತಿಯನ್ನು ಆ ಗ್ರಾ ...ಸ್ಥರೇ ಸ್ವಂತವಾಗಿ ತಿಳಿದಿದ್ದರೆ ಹೇಳುತ್ತಿರಲಿಲ್ಲವೆ. ...ಮೊ ಕಂಡಿಬಟ್ಟನೆಂದರೆ ಮುಂಡಾಸುಮೂವ ...ರ" ವೆಂದಂತೆ ಯಾವದೋ ಒಂದು ಲೇಖನಕ್ಕೆ ...ಒಂದು ಉತ್ತರ ಬರೆದ ಸುಬ್ಬಯ್ಯನವರೇ ...ಚಿಕೆಯಲ್ಲಿ ನೀವು ಹೇಳುವ ಮಠವು ಸನ್ಯಾ ...ಸ್ಲಿ, ರಾಜರಕಾಲದಲ್ಲಿ ಒಬ್ಬ ಗೊಸಾಯಿಗೆ ...ಟ್ಟ ಜಾಗೀರು ಭೂಮಿಯಾಗಿದೆ. ಬಲಮುರಿ ...ಪೂರ್ವದಲ್ಲಿ ಒಬ್ಬ ಕೊಡಗರ ಸ್ವಾಧೀನದಲ್ಲಿ ...ದಾಯವು ಈ ಗ್ರಾಮದ ದೇವರಿಗೆ ಉತ್ಸಾರ ...ಗಿ ಸಲ್ಲುತ್ತಿತ್ತು. ನಂತರ ರಾಜರ ಕಾಲದಲ್ಲಿ ...ಮಿಯು ಜಂಗಮಮಠವಾಗಿ ನೀವು ಹೇಳು ...ಲ್ಲಿಗೆ ಬಂದ ಜಂಗಮ ಮುಂತಾದವರಿಗೆ ಸತ್ಕಾರ ...ಹಕ್ಕಿನದಾಗಿ ಅಲ್ಲಿ ಒಬ್ಬ ಮುಖಂಡನನ್ನು ...ದ್ದು ಈ ಮಠವು ಮತ್ತು ಇಲ್ಲಿಯ ವಿನಿ ...ಗೂ ಕೂಡ ಚಿರಕಾಲದವರೇಗೆ ಇರಬೇಕೆಂಬ ...ಮಧ್ಯದಲ್ಲಿ ಲಿಂಗಾಕಾರವಾಗಿಯೂ ಶಾಶ್ವತದ ...ಸೂರ್ಯರಿರುವ ಚಿತ್ರವುಳ್ಳ ಕಲ್ಲುಸ್ಥಾಪನೆ ...ಸನ್ನದಿಗಿಂತ ಶ್ರೇಷ್ಠತಮವಾದ ಸನ್ನದಾಗಿದೆ.

ಇಂಥಾ ಕಲ್ಲುಗಳು ಈ ಜಾಗೀರು ಭೂಮಿಯು ಚತುರ್ದಿಕ್ಕಿನಲ್ಲೂ ಇದೆ. ಆದ್ದರಿಂದಲೇ ಈ ಜಾಗೀರು ಭೂಮಿಯು ಮಠಕ್ಕಾಗಿ ಬಿಟ್ಟಿರುವದೇ ವಿನಹ ಈ ಸಂಮಂದವಾಗಿ ಉಳ್ಳ ಯಾವ ತರದ ಹಕ್ಕೂ ಇದರ ಮಠಾಧಿಕಾರಿಗೆ ಎಳ್ಳಷ್ಟು ಇರುವುದಿಲ್ಲ. ಈ ಮೊದಲು ಇದೇ ಭೂಮಿಯನ್ನು ಇದಕ್ಕೆ ಮೊದಲು ಒಂದೆರಡು ಸಲ ಮಠಾಧಿಕಾರಿಯು ತನ್ನ ಅಧಿಕಾರ ದುರ್ವಿನಿಯೋಗದಿಂದ ಪರಾಧೀನನಮಾಡಿದಾಗ ಆ ಸಮಯ ಗ್ರಾಮಸ್ಥರ ತಕರಾರುಮೇರೆ ಸರಕಾರದ ಮೂಲಕ ಎಂದಿನಂತೆ ಮಠದ ಹಕ್ಕಾಗಿ ಪರಾಧೀನ ರದ್ದಾಗಿರುತ್ತದೆ.

ಅಯ್ಯಾ ಸುಬ್ಬಯ್ಯನವರೆ !

ಮಹಡಿಮನೆಯು ಅಗ್ನಿಪಾಲಾಗಿ ಎರಡನೆ ಕಟ್ಟಡ ಕಟ್ಟಿಸುವರೆ ಪೂರ್ತಿ ಖರ್ಚು ಮಠಾಧಿಪತಿಯೇ ಕೊಡಬೇಕೆಂದೂ, ಹಾಗೆ ಕೊಡದೆ ಚಂದಾಹಣದಿಂದ ಕಟ್ಟಿಸಿದ ಮಾತ್ರಕ್ಕೆ ಮಠ ಜಾಗೀರು ಭೂಮಿಯ ಸಂಮಂದವಾಗಿ ಗ್ರಾಮಸ್ಥರಿಗೆ ಹಕ್ಕಿಲ್ಲವೆಂಬ ಈ ಅಪ್ರಲೇಖನದ ಮೊದಲಿಗೆ ಯಾವ ಉತ್ತರ ಹೇಳಬೇಕಾಗಿರುತ್ತದೆ. ಸಿದ್ಧಪ್ಪನವರ ಹೆಸರಿಗೆ ಪಟ್ಟಿಮಾಡಬಹುದಾಗಿ ಒತ್ತಾಸೆಮಾಡಿದ ಮಹನೀಯರು ಆಸೀಕರಿಸಬಹುದು. ಆದರೆ ಸಿದ್ಧಪ್ಪನವರ ಹೆಸರಿಗೆ ಪಟ್ಟೆ ಬಂದ ನಂತರ ಪರಾಧೀನಮಾಡುವದಕ್ಕೆ ಒತ್ತಾಸೆಮಾಡುವವರು ಈಗ ನೀವು, ಯಾ, ನಿಮ್ಮ ಸಂಮಂದದವರಾಗಿ ಕಾಣುವದಲ್ಲದೆ ಮಿಕ್ಕ ಮಹಾಶಯರಾರೂ ಕಾಣುವುದಿಲ್ಲ. ಒಂದುವೇಳೆ ಸಮ್ಮಂದವೇನೆಂದು ನೀವು ಕೇಳಬಹುದು. ಕಪಿಯಾಪನರ ಮುಂಜೂರಾತಿ ವಿನಹ ಜಾಗೀರು ಪರಾಧೀನ ಮಾಡಿದರೂ ೧೯ ವರ್ಷಕ್ಕೆ ಗೇಣಿ ಮುಂಜೂರಾತಿಯೂ ಆಯಿತು. ಭೂಮಿಯು ಗೇಣಿದಾರರ ಸ್ವಾಧೀನವಿದೆಯೆಂದೂ, ಕಾಪಿಕುಯ್ಯದು, ತೋಟಕೆಲಸ, ಮನೆಗೆ ಹುಲ್ಲುಹಾಕುವ ಮುಂತಾದ ತಮ್ಮ ಸ್ವಾಧೀನ ಇವೆಯೆಂಬ ವಿದ್ಯಾಚಮತ್ಕಾರಲೇಖನವು ಸಮ್ಮಂದವಿಲ್ಲದಿದ್ದರೆ ನಿಮ್ಮಿಂದ ಹೊರಡುತ್ತಿತ್ತೆ ? ವೃಥಾಗ್ರಾಮಸ್ಥನನ್ನು ಕೇವಲ ಸ್ವಾರ್ಥಪರನೆಂದು ಹೇಳುವ ಸುಬ್ಬಯ್ಯನವರೆ, ನಿಜವಾಗಿ ಪಕ್ಷವಾದಿಗಳಾಗಿ ಸ್ವಾರ್ಥಪರರಾದವರು ಈಗ ಯಾರಾಗಿರುತ್ತೀರಿ ಮಹಾಶಯರೆ ! ಆಗಾಯ್ತಿನಿಂದಲೇ ಈವರೇಗೂ ಮಠಾಧಿಕಾರಿಯು ಮಠದಲ್ಲೇ ವಾಸ ಇದ್ದು ಇಲ್ಲಿಯ ಆಸ್ತಿ ಮತ್ತು ಮನೆ ತೋಟ ಸಂಮಂದ ಯಾವತ್ತೂ ಕಾರುಭಾರ ನಡೆಸುತ್ತಾ ಇಲ್ಲಿ ನಡೆಯತಕ್ಕ ವಿನಿಯೋಗಗಳನ್ನು ನಡೆಸುತ್ತಾ ಬಂದುಕೊಂಡಿರುತ್ತಾ "ನೋಡುವ ಕಣ್ಣಿಗೆ ಮಣ್ಣು ಹಾಕುವ" ದೆಂಬ ಒರೀ ಹಸಿಹಸಿ ಸುಳ್ಳು ಲೇಖನ ಲೇಖಿಸಿದ ಇಲ್ಲಿನ ಅನುಭವ ಗೊತ್ತಿಲ್ಲದ ಮಹಾನುಭಾವರೇ ವೃಥಾ ವಿನೀನೋ ವೃತ್ತಪತ್ರಿಕೆಯಲ್ಲಿ ಲೇಖಿಸುವದ ಬಿಟ್ಟು ಒಂದಾವರ್ತಿ ಇಲ್ಲಿಗೆ ದಯಮಾಡಿಸಿ ಗ್ರಾಮಸ್ಥರನ್ನು ವಿಚಾರಿಸಿದಲ್ಲಿ ನಿಮಗೆ ಜಾಗೀರು ವಿಷಯದ ಯಾವತ್ತು ಅನುಭವಗಳನ್ನು ಇಲ್ಲಿನ ಶಿಲಾಶಾಸನ ಸನ್ನದುಗಳನ್ನು ತೋರಿಸಿಕೊಡುತ್ತಿದ್ದರು ಮಾತ್ರವಲ್ಲ. ಯಾರು ಈಗ ಇಲ್ಲಿರುವದೆಂದೂ, ಛತ್ರಕ್ಕೆ ಯಾವ ಸಹಾಯ ಮಾಡಿದ್ದರೆಂದೂ, ಇಲ್ಲಿ ಯಾವಯಾವ ವಿನಿಯೋಗ ನಡೆಯುತ್ತೆಂಬ ಸರ್ವವು ವ್ಯಕ್ತವಾಗುತ್ತದೆ. ಆದ್ದರಿಂದ ಎಷ್ಟುಮಾತ್ರಕ್ಕೂ ಈ ಭೂಮಿಯನ್ನು ಪರಾಧೀನ ಮಾಡುವ ಹಕ್ಕಿಲ್ಲವಿರುವುದರಿಂದ ಹಾಗೆ ಪರಾಧೀನ ಮಾಡಿದರೆ ಕೂಡ್ಲೆ ಸರಕಾರವು ನಿಗ ತೆಗೆದುಕೊಂಡು ನ್ಯಾಯ ಪಾಲಿಸದೆ ಇರಲಾರದೆಂದು ನಂಬುವ,

ಬಿ ಅಚ್ಚಯ್ಯ.

ECONOMY.
ಮಿತವ್ಯಯ.

ದೇಶಹಿತೈಷಿಗಳೇ !

ಕಲಿಪ್ರಭಾವವು ಮುಂದರಿಯುತ್ತಿದೆ. ದೇಶಕ್ಷೋಭೆಯು ಅದನ್ನನುಸರಿಸುತ್ತಿದೆ. ಪರಸ್ಪರ ದ್ವೇಷಮತ್ಸರ್ಯಾದಿ ಗುಣಗಳು ಹೆಚ್ಚುತ್ತಿವೆ. ಕಲಿಯ ಪ್ರಭಾವವು ಪ್ರಬಲವಾಗುತ್ತಿದ್ದಷ್ಟೇ ಜೋರಾಗಿ ಅದನ್ನು ಪ್ರತಿಬಟಿಸಲು ಸಲಕರಣೆಗಳೂ ನಡಿಯುತ್ತಿವೆ. ಇವೇ ಇಲ್ಲಲ್ಲಿ ಏರ್ಪಡಾಗುತ್ತಿರುವ ವಿವಿಧ ಸಂಘಗಳೆಂದು ಧಾರಾಳವಾಗಿ ಹೇಳಬಹುದು. ಈ ಸಂಘಗಳಿಂದಲೇ ಕಲಿಪ್ರಭಾವವನ್ನು ತಡೆಯಲು ಸಾಧ್ಯ. ಯಾಕೆಂದರೆ ಸಂಘಗಳಲ್ಲಿ ಕೂಡಿ ಪರಸ್ಪರ ದ್ವೇಷ ಮತ್ಸರಾದಿ ದುರ್ಗುಣವನ್ನು ಕಳೆದು ದೇಶೋನ್ನತಿಗಾಗಿ ಐಕಮತ್ಯವನ್ನನುಸರಿಸಿ ಕಾಲೋಚಿತವಾದ ಕೆಲಸಗಳನ್ನು ಮಾಡಲು ಸುಲಭ. ದೇಶಹಿತೈಷಿಗಳನೇಕರು ಈ ವಿಷಯದಲ್ಲಿ ಕಣ್ಣು ತೆರೆದಿರುವುದು ದೇಶೀಯರ ಭಾಗ್ಯೋದಯವೇ ಸರಿ.

ಆದರೆ ಜನಶ್ರೇಣಿಯ ವೃದ್ಧಿಗಾಗಿ ಏರ್ಪಡಿಸುತ್ತಿರುವ ಇಷ್ಟು ಪ್ರಾಮುಖ್ಯವಾದ ಸಂಘಗಳನ್ನು ನಡಿಸಿಕೊಂಡು ಬರಬೇಕಾದರೆ ದ್ರವ್ಯವೇ ಮೂಲಾಧಾರವೆಂಬ ತತ್ವವನ್ನು ದೇಶಹಿತಕ್ಕಾಗಿ ಹೋರಾಡುತ್ತಿರುವ ಮಹನೀಯರು ನಂಬದಿರುವುದು ಶೋಚನೀಯವಾದ ಸಂಗತಿಯಾಗಿದೆ ಮತ್ತು ಮುಂದೆಯೂ ಈ ತತ್ವವನ್ನು ಮರೆತ ಯಾವ ಕಾರ್ಯ ನಿರ್ವಾಹಕನ ಸದುದ್ದೇಶವೂ ಸಂಪೂರ್ಣ ಫಲಿಸಲಾರದೆಂದು ನಿರ್ಧರಿಸಬಹುದು. ಆದುದರಿಂದ ದೇಶಹಿತಕ್ಕಾಗಿ ಸಂಘಗಳ ಅವಶ್ಯಕತೆಯನ್ನು ಕೋರುವ ಎಲ್ಲಾ ಮಹನೀಯರೂ ಸಂಘದ ಸ್ಥಾಪನೆಯು ದ್ರವ್ಯದ ಅಸ್ತಿವಾರದ ಮೇಲೆ ಕಟ್ಟಲ್ಪಡುವುದೆಂಬುದನ್ನು ಮೊದಲು ಜ್ಞಾಪಕದಲ್ಲಿಡಬೇಕಾಗಿದೆ. ಇದಕ್ಕಾಗಿ ಆ ದ್ರವ್ಯವು ದೇಶೀಯರಲ್ಲಿ ಉಳಿಯುವಂತೆ ಒಂದು ಉಪಾಯವನ್ನು ಪ್ರಾರಂಭದಲ್ಲಿ ಕಂಡುಹಿಡಿದು ಅನಂತರ ಸಂಘಸ್ಥಾಪನೆಯ ಏರ್ಪಾಡನ್ನು ಎಲ್ಲೆಲ್ಲಿಯೂ ಮಾಡುತ್ತಾ ಬಂದಲ್ಲಿ ಅದು ತುಂಬಾ ಫಲಕಾರಿಯಾದೀತು.

ಹೀಗೆಂದಮೇಲೆ ಮುಖ್ಯವಾಗಿ ರೈತಾವಳಜನಾಂಗವಾದ ನಮ್ಮಲ್ಲಿ ಹಣ ಉಳಿಸುವ ಮೊದಲಿನ ಉಪಾಯ ಯಾವುದು ಎಂಬುದನ್ನು ಆಲೋಚಿಸಬೇಕಾಗಿದೆ. ಭೂಮಿಯು ಮಣ್ಣು ಪೂರ್ವದ ಸತ್ವವನ್ನು ಕಳೆದುಕೊಂಡಿದೆ, ಉತ್ಪತ್ತಿ ಕಡಿಮೆಯಾಗಿದೆ. ನಮ್ಮನಮ್ಮ ಆಸ್ತಿಗಳು ಮೊದಲು ಇದ್ದ ಸ್ಥಿತಿಯಲ್ಲೂ ಕೊಂಚ ಹೀನ ಸ್ಥಿತಿಯಲ್ಲೂ ಇವೆ. ಸಂಸಾರ ಸಂಖೆಯೂ ಹೆಚ್ಚುತ್ತಿವೆ. ದೇಶವೆಲ್ಲಾ ಲಂತಾನಮಯವಾಗುತ್ತಿದೆ. ದನಕರುಗಳ ಕ್ಷೀಣಗತಿಯನ್ನು ನೆನಸಿದರೆ ಮನಸ್ಸು ಕರಗುತ್ತದೆ. ಜೀವನದ ಖರ್ಚು ವಿಪರೀತವಾಗಿ ಹೆಚ್ಚಿ ಹೋಗಿದೆ. ಹಣಉಳಿಸುವುದೆಂತು ? ಏರ್ಪಡಾಗುತ್ತಿರುವ ವಿವಿಧ ಸಭೆಗಳಿಗೆ ಕಾಲಿಡುವುದೆಂತು ? "ಸಭಾದರಿದ್ರಸ್ಯವಿಷಂ," ಎನ್ನುವರು. ಇದಕ್ಕೆ ಸದ್ಯದ ಸುದಾರಣೆಯು ಮಿತಾಚಾರವ್ರತವನ್ನಾಚರಿಸುವುದೊಂದೇ ಆಗಿರುತ್ತದೆ. ಎಲ್ಲರೂ ಎಲ್ಲಾ ಕಾಲಗಳಲ್ಲೂ ಮಿತಾಚಾರಿಗಳಾಗಿ ನಡೆದುಕೊಳ್ಳುವುದು ಆವಶ್ಯವಾಗಿದ್ದರೂ ಹೆಚ್ಚು ಖರ್ಚು ಮಾಡಬೇಕಾಗಿರುವ ಸಂಧರ್ಬಗಳೆಂದ ಸುಭಾಶುಭಕಾಲಗಳಲ್ಲಿಯಾದರೂ (ಲಗ್ನ ಮತ್ತು ತಿಥಿಕರ್ಮ) ಮಿತಾಚಾರಿಗಳಾಗಿ ನಡೆದುಕೊಂಡಲ್ಲಿ ಖಂಡಿತವಾಗಿಯೂ ದ್ರವ್ಯ ಉಳಿಕೆಯಾಗುತ್ತೆ. ಸಂಘೋದ್ಧಾರವೂ ದೇಶೋದ್ಧಾರವೂ ಕ್ರಮಕ್ರಮವಾಗಿ ಆಗುತ್ತದೆ.

ಬಡರೈತಾವಳ ಜನಾಂಗವಾದ ನಮ್ಮಲ್ಲಿ ವರ್ಷಂಪ್ರತಿ ಎಷ್ಟೋ ಮದುವೆಗಳೂ ತದೋಸಂಬಂ ತಿಥಿ ಕರ್ಮಾದಿಗಳೂ ನಡಿಸಲ್ಪಡಬೇಕಷ್ಟೆ. ಈ ಪ್ರತಿ ಒಂದು ಸಂಧರ್ಬಗಳಲ್ಲೂ ಮಾಂಸ ಸೇವನೆ ಮದ್ಯಪಾನ ಇತ್ಯಾದಿ ದುಂದುಗಾರಿಕೆ ಖರ್ಚನ್ನು ಬೋತೆಮಾಡಿ ಮಿತಾಚಾರಿಗಳಾಗಿ ನಡೆದುಕೊಂಡಲ್ಲಿ ಬಹಳ ದ್ರವ್ಯ ಉಳಿಕೆಯಾಗುತ್ತದೆ. ಈ ಎರಡು ಪ್ರಾಮುಖ್ಯವಾದ ಕಾಲಗಳಲ್ಲೇ ನಾವು ಹೆಚ್ಚಿನ ಹಣ ವ್ಯಯಮಾಡುವುದಾದುದರಿಂದ ಈ ಸಂದರ್ಭಗಳೇ ಹೆಚ್ಚಾಗಿ ನಮ್ಮನ್ನು ಸಾಲಜಾಗಗಳಲ್ಲಿ ಬೀಳುವಂತೆ ಮಾಡುವುದು. ಮಿತಾವ್ಯಯವು ವ್ರತವನ್ನು ಆಚರಿಸಿದಲ್ಲಿ ಸಾಲಗಾರರಾಗಿ ಹೋಗುವ ಸಂಭವವಿಲ್ಲ ಎಂದು ಸಾಲಗಾರನಲ್ಲವೋ ಅವನು ಈ ಲೋಕದಲ್ಲಿ ಸ್ವರ್ಗಸುಖವನ್ನನುಭವಿಸತಕ್ಕವನು. ಸಾಲವು ಲೋಕದಲ್ಲಿ ಮನುಷ್ಯನಿಗೆ ಒಂದು ತರದ ದೊಡ್ಡನರಕವೇಸರಿ. ಧನವಂತರು ಮಿತಾವ್ಯಯವ್ರತವನ್ನು ಕೈಕೊಂಡಲ್ಲಿ ಇದ್ದ ಧನವು ಉಳಿಯುತ್ತದೆ. ಆದರಿಂದ ಈ ಕನಿಷ್ಟಕಾಲದಲ್ಲಿ ಬಡಜನಶ್ರೇಣಿಯ ಏಳಿಗೆಗಾಗಿ ಸದುಪಯೋಗವಾಗಬಹುದು. ಬಡವರು ಮಿತಾವ್ಯಯವನ್ನು ಕೈಕೊಂಡಲ್ಲಿ ಸಾಲಗಾರರಾಗಿ ದುಃಖಕ್ಕೀಡಾಗುವ ಸಂಭವ ತಪ್ಪುತ್ತದೆ. ಹಾಗೂ ಮಿತಾವ್ಯಯವ್ರತವನ್ನು ನಿಜವಾಗಿಯೂ ತನ್ನ ಮತ್ತು ತನ್ನೊಲಳ ದೇಶೋನ್ನತಿಯನ್ನು ಬಯಸುವ ಪ್ರತಿಯೊಬ್ಬ ಧನಿಕನೂ ಬಡವನೂ ಏಕೀಭವಿಸಿ ಆಚರಿಸುವುದು ತಕ್ಕುದ್ದೇ ಸರಿ. ಹೀಗೆ ಮಾಡಿದಲ್ಲಿ ರೈತಾವಳ ಜನಾಂಗವಾದ ನಮ್ಮಲ್ಲಿ ಅಲ್ಪಸ್ವಲ್ಪ ದ್ರವ್ಯ ಉಳಿಯುವುದು. ಅನೇಕ ಸಂಘಗಳಲ್ಲೂ ನಿರ್ಭಯರಾಗಿ ಬಿಡಾಡಬಹುದು. ಸಂಘೋದ್ಧಾರಕ ಕಾರ್ಯಗಳೇ ಕಲಿಪ್ರಭಾವವನ್ನು ತಡೆಯಬೇಕಲ್ಲದೆ ಮತ್ತಾರಿಂದಲೂ ಸಾಧ್ಯವಿಲ್ಲ. ಆದುದರಿಂದ ಇಂಥಾ ಸಂಘೋದ್ಧಾರಕ್ಕೆ ದ್ರವ್ಯವೇ ಮೂಲವೆಂದೂ, ದ್ರವ್ಯ ಉಳಿಕೆಯಾಗಬೇಕಾದರೆ ಮಿತವ್ಯಯವನ್ನು ಮೊದಲು ಆಚರಿಸತಕ್ಕ ಸಲಕರಣೆಗಳನ್ನು ದೇಶಹಿತಾಭಿಲಾಷಿಯಾದ ಪ್ರತಿಯೊಬ್ಬನೂ ಮಾಡುವುದು ಪ್ರಥಮ ಕರ್ತವ್ಯವೆಂದು ಪ್ರೇರಕನೊಬ್ಬನ ವಿನಂತಿ.

ಇದಕ್ಕಾಗಿ ದೇಶದ ಉನ್ನತಿಯನ್ನು ಬಯಸಿ ಏರ್ಪಾಡುಮಾಡುತ್ತಲಿರುವ ವಿವಿಧ ಸಂಘಗಳ ಪ್ರತಿಯೊಬ್ಬ ಕಾರ್ಯನಿರ್ವಾಹಕನೂ ತಾನೂ ಪ್ರತಿ ಗ್ರಾಮದಲ್ಲೂ ಮೇಲೆ ಹೇಳಿದರೀತಿ ಶುಭಾಶುಭಕಾಲಗಳಲ್ಲಾದರೂ ವಿಚಾರಪರರಾಗಿ ಮಿತಾವ್ಯಯವ್ರತವನ್ನಾಚರಿಸುವಂತೆ ಸುಧಾರಣೆಯನ್ನು ತಪ್ಪಿಸಿದಲ್ಲಿ ಪ್ರತಿಯೊಂದು ಸಂಘೋದ್ಧಾರವೂ ಜೊತೆ ಜೊತೆಗೇ ಯಂತೆ

ಶೋಧಿಸಲ್ಪಟ್ಟು ಸಾಲುಸಾಲಾಗಿ ಬರುವ ಬಂಡಿಗಳಂತೆ ಸಂಘೋದ್ಧಾರವೂ, ದೇಶೋದ್ಧಾರವೂ [illegible]ವಾಗಿ ಅತ್ಯಲ್ಪಕಾಲದಲ್ಲೇ ಆಗುವುದು. ಕಲಿಯ ಪ್ರಭಾವವು ಶಾಂತಿಸ್ವರೂಪವನ್ನೈದುವುದು.

ಪ್ರೇಲಕ.

"Justice must rule supreme"

"ನ್ಯಾಯವು ಎಲ್ಲವನ್ನು ಆಳಬೇಕು"

ಕೊಡಗು ಜಮೀನುದಾರರ ಸಂಘದವರಿಗೂ ಮತ್ತು ಕೌನ್ಸಿಲು ಮೆಂಬರುಗಳಿಗೂ ನನ್ನದೊಂದು ವಿನಯಂತಿ.

ಅಯ್ಯಾ, ದೇಶಭಾಂದವರೇ ಕಳೆದ ತಾರೀಖು 21—3—24 ರ ಸಂಚಿಕೆಯಲ್ಲಿ ನಿತ್ಯಚಿಂತಕನು ಬರೆದ ಬಾತ್ಮಿಯನ್ನು ನೋಡಿದೆನು. ಅದರಲ್ಲಿ ನಮೂದಿಸಿರುವಂತೆ ಫಾರೆಸ್ಟು ಯಿಲಾಖೆಯು ಗಾಡಿ ಎತ್ತು, ಕೋಣ ಮತ್ತು ಆನೆಗಳ ಬಾಲಿಯಾನ ಖರ್ಚಿಗೆ ಬೇಕಾದ ಹುಲ್ಲು ಮತ್ತು ರಾಗಿ ಕಂಟ್ರಾಕ್ಟನ್ನು 14—2—0ಕ್ಕೆ ಮಂಜೂರು ಮಾಡಿರುವುದಾಗಿ ತಿಳಿದುಬಂದಿದೆ. ದೇಶಚಿಂತಕರೇ ಈಗ ವಿಚಾರಿಸಿ ನೋಡುವಲ್ಲಿ ನಮ್ಮವರಿಟ್ಟ ಹದಿನಾಲ್ಕುವರೆಯ ಮಾದಿಗೆ ಬಿಲ್ಲವಂದರ 15—12—0 ರಂತೆ ಕಂಟ್ರಾಕ್ಟು ಕೊಟ್ಟಿರುತ್ತಾರೆ. ಇದರ ಪ್ರಕಾರ ಲೆಕ್ಕ ಹಾಕಿ ನೋಡುವಾಗ್ಯೆ ನಿಮ್ಮ ಕೊಡಗು ಸರ್ಕಾರಕ್ಕೆ ಸುಮಾರು 600 ರೂಪಾಯಿಗಳ ಹೆಚ್ಚಿನ ನಷ್ಟವು ತಲೆದೋರಿದೆ. ಇದೊಂದೇ ಬಾಬಿನಲ್ಲಿ ಇಷ್ಟು ನಷ್ಟವು ತಂದೋರಿಸಿರುವಾಗ್ಯೆ ಬೇರೆಬಾಬುಗಳಲ್ಲಿ ಎಷ್ಟು ನಷ್ಟಗಳಾಗುತ್ತಿರಬಹುದೆಂಬುದನ್ನು ವಾಚಕ ಮಹಾಶಯರೇ ಊಹಿಸಿರಿ. 14 ರೂ ಯಲ್ಲಿ ಕೇಳಿದ ಟೆಂಡರನಿಗೆ ಕೊಡದೆ 15—12 ರಲ್ಲಿ ಕೇಳಿದವನಿಗೆ ಈಗಿನ ಡಿವಿಜನಲ್ ಫಾರೆಸ್ಟ್ ಆಫೀಸರು ಕೊಟ್ಟಿರುವುದು ಯಾಕೆ ಮತ್ತು ಯಾವ ಕಾರಣಗಳಿಗಾಗಿಂಬುದನ್ನು ನಾವೆಲ್ಲರೂ ಟೆಂಡರು ಹಾಕಿದವರು ತಿಳಿಯಲು ತುಂಬಾ ಕಾತರಹೊಂದಿದವರಾಗಿದ್ದೇವೆ. ಅಲ್ಲದೆ ಈ ಆಫೀಸರು ಯಾತಕ್ಕಾಗಿ ಕೊಟ್ಟಿರಬಹುದೆಂಬುದಕ್ಕೆ ಅನೇಕ ಕಾರಣಗಳ ಪೈಕಿ ಒಂದನ್ನು ಹೇಳಲು ಸ್ವಲ್ಪವೂ ಅನುಮಾನಿಸಲಿಕ್ಕಿಲ್ಲ. ಅದು ಯಾಕೆಂದರೆ ರೈತರ ಮತ್ತು ಕಾಫೀದಾರರ ಹಾಜರು ಪುಸ್ತಕಗಳನ್ನು ಹೇಳಿಕೊಳ್ಳುವ ರಿಪ್ರೋಟರ್ ಎಗೈರ ಅರ್ಜಿಗಳನ್ನು ನೋಡದೆ ಆಫೀಸು ಮ್ಯಾನೇಜರೋ ಯಾ ಸೆಕ್ರೆಟರಿ ನೋಡಬರೆದು ತಂದದ್ದಕ್ಕೆ [illegible] ರುಜು ಹಾಕುವುದೇ ಕಾರಣವಾಗಿರಬಹುದಲ್ಲದೆ ಬೇರೆ ಉದಾಸೀನ ಮನಸ್ಸಿನಿಂದ ಕೆಲಸಮಾಡುವ ದೊಡ್ಡ ಉದ್ಯೋಗಸ್ಥರಿಂದ ರೈತರಿಗೂ ನಮ್ಮಂಥ ಬಡವ್ಯಾಪಾರಿಗಳಾದ ವ್ಯಾಪಾರಸ್ಥರಿಗೂ ಮತ್ತು ಬೆಳೆಗಾರರುಗಳಿಗೂ ಎಷ್ಟು ಕಷ್ಟನಷ್ಟಗಳು ಅನುಭವಿಸುತ್ತಲಿವೆಯೆಂದು ಈ ಮೇಲಿನ ಸಂಗತಿಯಿಂದಲೇ ವೇದ್ಯವಾಗುತ್ತದೆ. ಹೀಗಿರಲು ಕಾರಣವೇನೆಂದರೆ ಫಾರೆಸ್ಟು ಇಲಾಖೆಯಲ್ಲಿ ಬೇರೆ ಇಲಾಖೆಗಳಿಗಿಂತಲೂ ಸಂಬಳವು ಜಾಸ್ತಿಯಿರುವ ಕಾರಣದ ಉದ್ಯೋಗಸ್ಥರೇ ಕಾರಣ. ಅದು ಹ್ಯಾಗೆಂದರೆ ತಿಂಗಳಿಗೆ [illegible] ವೃತ್ತಿ ಫಕ್ತದ ಕೆಲಸಗಳಿಗಾಗಿ ಕಾಫೀದಾರರ ಬಾಗಿಲಿಯನ್ನು ನೋಡಲು [illegible] ಕೊಡಲು [illegible] ಬೇಟೆಗಳಲ್ಲಿಯೋ [illegible] ಇಲ್ಲ ಪಾತ್ರೆ [illegible] ನಮ್ಮಂಥ ಗರೀಬರಿಗೆ ಅನ್ಯಾಯವಾಗುತ್ತಿರಲಿಲ್ಲ. ನಮ್ಮ ಗತಿಯೇ ಹೀಗಿರುವಾಗ ಬಡಕಾಫೀದಾರರ ಗತಿಯೇನು? ದೊರೆಗಳ ಜೊತೆಯಲ್ಲಿ ಇದ್ದುಕೊಂಡು ಸರಬರಾಜುಗಳನ್ನು ಮಾಡಿಕೊಂಡು ತಮ್ಮ ಚಾಕರಿಯನ್ನು ಮಾಡಲು ಸಮಯವಿದೆಯೋ ಇಲ್ಲವೋ ತಿಳಿಯದು. ಸ್ನೇಹಚಿಂತಕರಾದ ಕೊಡಗಿನ ಕೌನ್ಸಿಲು ಮೆಂಬರುಗಳು ಮತ್ತು ಕೊಡಗಿನ ಕಾನ್ಫರೆನ್ಸಿಗೆ ಸಮನಾದ ಜಮೀನುದಾರ ಸಂಘದವರೂ ಸಹ ಈ ದೊಡ್ಡಇಲಾಖೆಯ ಆಫೀಸರನ್ನು [illegible] ಬೇಗನೆ ಪ್ರಾರಂಭಿಸಿರಿ. ಇದರಿಂದ ದೇಶಕ್ಕೆ [illegible] ವೂ [illegible] ವೂ ಮತ್ತು [illegible] ಹೆಚ್ಚಿನ [illegible] ಗಳಲ್ಲಿಯೂ [illegible] ದೊಡ್ಡ [illegible] ದಾರರು [illegible] ಇಲ್ಲ, [illegible] 5—0 ಫಾರೆಸ್ಟು ಇಲಾಖೆಯ [illegible] ಇದ್ದರೆ [illegible] ದಗಿಗೆ ಬಟ್ಟನ್ನು [illegible] ಅರ್ಥವೇನು? ಇವನ್ನೆಲ್ಲ [illegible] ನಿಮ್ಮ ಕೌನ್ಸಿಲಿನಿಂದ ಅಸಾಧ್ಯವೋ.

ಅಲ್ಲದೆ ಮೂರ್ನಾಲ್ಕು ಕಾವೇರಿ ಸಮೀಪದಲ್ಲಿ ಸಹಕಾರಿ 300 ಎಕ್ರೆ ವಿಸ್ತೀರ್ಣದ ಜಿಲ್ಲೆಯ ಗಣಿಯಿಂದ ರೆವಿನ್ಯೂ ಈಗ್ಗೆ ಆರು ತಿಂಗಳಿಗೆ ಹಿಂದೆ ಬಟ್ಟ ಅಂತಾಗೆ ಕಮ್ಮಿ ದರದಲ್ಲಿ ಕಂಟ್ರಾಕ್ಟು ವಹಿಸಿಕೊಟ್ಟಿರುತ್ತಾರೆ. ಈ ಇಂಗ್ಲೀಷ್ ಕಂಟ್ರಾಕ್ಟುದಾರನು ತನ್ನ [illegible] ಜೊತೆ [illegible] ನಾತರಿ [illegible] ಕೊಟ್ಟ [illegible] ದವರು ಆತನ ಮುಂದು [illegible] ಗೆ [illegible] ಖರ್ಚುಗಳ್ಳ ಹಣವನ್ನು ಆದ್ಯಸ್ತ [illegible] ಮೆಂಟು ಮಾಡಿಕೊಟ್ಟಿದ್ದಾರೆ. [illegible] ಕ್ಟು ಕೊಡುವ [illegible] ಬೇಕು ಆಫೀಸು [illegible] ಗಳಲ್ಲಿ ಈ ಕಂಟ್ರಾಕ್ಟನ್ನಾಗಲೀ ಅದರ ಷರತ್ತುಗಳನ್ನಾಗಲೀ ಪ್ರಕಟಿಸಿದ್ದರೋ? ಲಕ್ಷಾಂತರ ರೂಪಾಯಿ ಬಂದವಾಳವಿರುವ ನಮ್ಮ ದೇಶದ ಕೌಬೀನೀ ವ್ಯಾಪಾರಸ್ಥರು ಕೋಣನ ಗಾಡಿಗಳ ಬದಲು ತಮ್ಮ ಆಸ್ತಿಯನ್ನು ಜಾಮೀನನ್ನು [illegible] ಕೊಟ್ಟು [illegible] ತೆಗೆದುಕೊಳ್ಳುತ್ತಿರಲಿಲ್ಲವೇ? [illegible] ಗೆ [illegible] ಸಹಾಯವು [illegible] ಆದೂ ಹಾಗಿರಲಿ. ಈ ಇಂಗ್ಲೀಷು ಕಂಟ್ರಾಕ್ಟುದಾರನು ಒಂದು ಈಗಾಗಲೇ 5-6 ತಿಂಗಳುಗಳಾದುವು. ಮರವನ್ನೇನಾದರೂ ಚಿಕ್ಕ ಮಾಡಿ ಸರಕಾರಕ್ಕೆ ಆದಾಯವನ್ನೇನಾದರೂ ಮಾಡಿರುವನೋ ಅಥವ ಕಾತಸ ಮರಕ್ಕೆ ಬೇಗ ರೈಲ್ವೆ ಕಂಪೆನಿಗಳಿಂದಾಗಲೀ ಅಥವ ಬೇರೆ ದೊಡ್ಡ ಡಿಪಾರ್ಟ್‌ಮೆಂಟಿನಿಂದಾಗಲೀ [illegible] ಮರಕ್ಕೆ ಕಂಟ್ರಾಕ್ಟು ತಂದುಕೊಟ್ಟಿದ್ದಾನೋ? ಹ್ಯಾಗೆ? ಸುಮ್ಮನೆ ಸರ್ಕಾರದಿಂದ ಆದ್ಯವನ್ನು ಕೊಂಡುಕೊಂಡು ತಿರುಗುವುದರ ಫಲವು ಹೇಗೆ? ನಿಮ್ಮ ಕೌನ್ಸಿಲು ಮೆಂಬರುಗಳು [illegible] ತೆರೆದಿದ್ದರೆ ಹೆಚ್ಚಿನ ನಷ್ಟವನ್ನು ಮುಂದಕ್ಕೆ ಅನುಭವಿಸಲಾರೆವು. ಆದ್ದರಿಂದ ಜಾಗನೆ ಕೌನ್ಸಿಲು ಮೆಂಬರುಗಳೂ ಮತ್ತು ಜಮೀನು ಸಂಘದವರೂ ಸೇರಿ ಒಂದು ಕಮಿಟಿಯನ್ನು ಏರ್ಪಡಿಸಿ ಈ ಇಲಾಖೆಯ [illegible] ನ್ನು ವಿಚಾರಿಸಿ ಈ ಕಂಟ್ರಾಕ್ಟಿನ ಮಟ್ಟವನ್ನು ತಿಳಿದು ಮುಂದೆ ಏನು ಮಾಡಬೇಕೆಂಬುದನ್ನು ನಿರ್ಣಯಿಸಿರಿ. ಈ ಫಾರೆಸ್ಟು ಇಲಾಖೆಯಲ್ಲಿ [illegible] ಯಾರಿಗೂ ಹೇಳತಕ್ಕದ್ದೆಂಬುದಾಗಿ ಕಾಫೀದಾರರುಗಳಿಗೆಲ್ಲ ಕೊಡಗು ಚೀಫ್ ಫಾರೆಸ್ಟು ಆಫೀಸರು [illegible] ಮಾಡಿಕೊಂಡಿದ್ದ ಈ ಸಮಾಗೆ ಯಾವುದನ್ನು ಕಾಫೀದಾರರುಗಳು [illegible] ದೇಶಬಾಂಧವರೇ [illegible] ಈ ದೇಶದಲ್ಲಿ [illegible] ಮುಂದಾಳುಗಳೇ [illegible] ನ್ಯಾಯವನ್ನು ತಂದು ಅನ್ಯಾಯವನ್ನು [illegible] ನಮ್ಮ [illegible] ಪ್ರಥಮ [illegible] ಗಳು [illegible] ಮೊದಲು ಇಂಗ್ಲೆಂಡಿನಲ್ಲಿ ಇಮ್ಮಡಿ [illegible] (Justice must rule Supreme) ನ್ಯಾಯವು ಎಲ್ಲವನ್ನು ಆಳಬೇಕೆಂದು [illegible] ಅದರಂತೆಯೇ ಈಗಿನ [illegible] ಕಂಟ್ರಾಕ್ಟು [illegible] ಇಂಗ್ಲೀಷಿನ ಕಂಟ್ರಾಕ್ಟಿನ ವಿಷಯ ನೀವು ಸ್ವಲ್ಪ ವಿಚಾರಿಸಿ [illegible] ಪರಿಹಾರವಾಗುವುದಾದರೆ ಉಚಿತವಾ [illegible] ಬೇಕೆಂದು ಕೇಳಿಕೊಳ್ಳುತ್ತೇನೆ.

ಪಟ್ಟಣವಾಸಿ.

ಅತ್ಯದ್ಭುತಗುಣಕಾರಿಯಾದ ಚೇಳಿನ ಔಷಧ.

ಪ್ರತಿ ಮನೆಯಲ್ಲಿ ಖಂಡಿತ ಇರತಕ್ಕದ್ದು

ಗುಣವಾಗದಿದ್ದರೆ ಖಂಡಿತ ಹಣ ವಾಪಸು ಕಳು

ಹಿಸುತ್ತೇವೆ

ಒಂದುಸಾರಿ ತರಿಸಿ ಪರೀಕ್ಷಿಸಿರಿ

ಯಾವ ಚೇಳು ಕಡಿದರೂ ಕಚ್ಚಿದ ಜಾಗದಲ್ಲಿ ಈ ಔಷಧವನ್ನು ಹಾಕಿದ ಕ್ಷಣವೇ ವಿಷವು ಇಳಿದು ಉರಿ ಜೋಲು ಗುಣವಾಗುವದು. ಅನುಪಾನಪತ್ರಿಕೆಯನ್ನು ಬಾಟ್ಲಿ ಸಂಗಡ ಕಳುಹಿಸುತ್ತೇವೆ. ಬಾಟ್ಲಿ 1 ಕ್ಕೆ 0—8—0 ಆಣೆ. ಆರು ಬಾಟ್ಲಿಗಳನ್ನು ತರಿಸಿಕೊಂಡರೆ 1 ಬಾಟ್ಲಿ ಕಮಿಷನ್, ಹನ್ನೆರಡು ಬಾಟ್ಲಿಗಳನ್ನು ತರಿಸಿಕೊಂಡರೆ 3 ಬಾಟ್ಲಿ ಕಮಿಷನ್ ಕೊಡುತ್ತೇನೆ.

ನಮ್ಮ ವಿಳಾಸ:—

ಹಾಲಪ್ಪದೇವರ ಮಠದ ಸಿದ್ಧಾಂತಿಗಳು,

ಹರಪನಹಳ್ಳಿ, ಜಿಲ್ಲಾ ಬಳ್ಳಾರಿ.

[12—3]

ನೋಟೀಸು

[illegible] ವಿರಾಜಪೇಟೆ [illegible] ಇಬ್ಬರನ್ನು ನೇಮಿಸಬೇಕೆಂತ ತೀರ್ಮಾನವಾಗಿದೆ. [illegible] ಬೇಕಾಗುವವರು [illegible] ಕೊಡಬೇಕು [illegible] ದಸ್ತು [illegible] 6½ ರಷ್ಟು ಕಮಿಷನ್ ಕೊಡಲಾಗುತ್ತೆ. ಈ ಕೆಲಸವನ್ನು ವಹಿಸಿಕೊಳ್ಳಲು ಇಷ್ಟವಿರುವವರು ತಾ|| 31—5—24 ರ ಒಳಗೆ ಕೆಳಗೆ ಸೈನ್ ಮಾಡಿದವರಿಗೆ ಬರೆದುಕೊಳ್ಳಬೇಕು.

[2—2] ಸಿ ಯು ವೆಂಕಪ್ಪಯ್ಯ,

ಮಡಿಕೇರಿ, ಜನರಲ್ ಸೆಕ್ರೆಟರಿ,

ತಾ|| 12—5—24. ಜಮೀನುದಾರರ ಸಂಘ

ಆರೋಗ್ಯ ಚಂದ್ರಿಕೆ

ಇದು ಪ್ರಜಾಕ್ಷೇಮಕ್ಕಾಗಿ ಆರೋಗ್ಯಮಾರ್ಗ ಕುಚಿತ್ಸವನ್ನೂ ಬೋಧಿಸುವ ಒಂದು ಮಾಸಪತ್ರಿಕೆ. ಸಂಪಾದಕರು ಮದ್ರಾಸಿನಲ್ಲಿ ಪ್ರಸಿದ್ಧರಾದ ಡಾ|| ಯು. ರಾಮರಾವ್, ಎಂ.ಎಲ್.ಸಿ. ಯವರು. ಅನೇಕ ಪ್ರಸಿದ್ಧ ಡಾಕ್ಟರುಗಳ ಮತ್ತು ಆಯುರ್ವೇದಿಕರುಗಳ ಲೇಖನಗಳು ಇದರಿಂದಾಗ್ಯೆ ಪ್ರಕಟವಾಗುವವು. ಟಪಾಲುಹಾಸಲು ಸೇರಿ ಈ ಪತ್ರಿಕೆಯ ವಾರ್ಷಿಕ ಚಂದ 1—8—0 ರೂ ಮಾತ್ರ. ಬಿಡಿ ಪತ್ರಿಕೆ ಒಂದಕ್ಕೆ 0—2—0 ಆಣೆ.

ಏಜೆಂಟರು:— ಮ|| ರಾ|| ರಾ|| ಎಸ್. ಕೆ. ತಿಮ್ಮಪ್ಪ, ಭಾಗಮಂಡಲ, ಕೊಡಗು

ವಿಳಾಸ:— ಮೇನೇಜರ್, ಆರೋಗ್ಯಚಂದ್ರಿಕೆ ಆಫೀಸು, 323, ತಂಬುಚೆಟ್ಟಿ ಬೀದಿ, ಮದ್ರಾಸ್.

[12—9]

WANTED.

Two Second-hand Motor Bicycles.

M. M. SIDDEEK

22—17 MERCARA.



[16—13]

Printer & Published by D S Krishna, Proprietor, at Sreenivas Electric Press "for Kodagu" Ltd, Mercara—23-5-1924

Head Post Office, Mercara
Regd. No. M. 1550.

ಕೊಡಗು.

ಸರ್ವೇಸ ಘೂರದಾಯುಷಾ ದ್ಯಸಿತಿ ಪ್ರಯಾತ್ನತಃ । [illegible]

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವುದು " ಎಡಿಟರ್ ಸಂದ್ಯಂಟ ಐ ಬೆಳ್ಯಪ್ಪ.

[illegible] ಕೊಡಗು, [illegible] ನೇ ಇಸವಿ ಮೇ, ಫೆಬ್ರವರಿ ೩೦ ನೇ ತಾರೀಖು ಶುಕ್ರವಾರ. [ಸಂಚಿಕೆ [illegible]

ಪ್ರಿಂಟಿಂಗ್

ನಮ್ಮ ಇಂಗ್ಲೀಷ್ ಮತ್ತು ಕನಡಾ ಪ್ರಿಂಟಿಂಗ್ ಮತ್ತು ಬೈಂಡಿಂಗ್ [illegible]
[illegible]

Srinivas Electric Press,
MYSORE

Saraswathi Publishing Company
ಶಾರದಾಗ್ರಂಥಮಾಲಾ

[illegible] ಪ್ರಕಟವಾಗಿರುವ ಗ್ರಂಥಗಳು —

	ರೂ	ಆ	ಪೈ
[illegible]	0	6	0
[illegible]	0	10	0
[illegible]	0	12	0
[illegible]	0	8	0
[illegible]	0	4	0
[illegible]	0	4	0
[illegible]			0

[illegible]

ಸರಸ್ವತಿ.

[illegible] ಕನ್ನಡ ಮಾಸಪತ್ರಿಕೆ
[illegible]

SARASWATHI PUBLISHING Co.,
Post Box No. 57 [illegible] City

HEALTH IS WEALTH

WANTED all to improve health and vitality and thus save our[illegible] from physical degeneracy. Send [illegible] stamp and get 1s specimen [illegible] with full particulars from

Editor Physical Culture,
P O Basavangudi,
BANGALORE CITY

For your requirements of high grade Arms, Ammunition, Wine and Spirits,
[illegible] TO —
[illegible]DOWELL & Co., Ltd.,
MERCARA.

[illegible] ಇನಾಮ್ ಕೊಡ್ [illegible] ಉಳ್ಳ್ಯ ಸಾಮ್ಯಾನ್ ಸ್ಪೆನ್ಸರ್ ಕಂಪೆನಿಕ್ಕ್
ಪುದಿಯದಾಯಿತ್ ಬಂದಿತ್.

SPENCER & Co., Ltd., }
Mercara and Pollibetta Coorg } [24—7]

BUMPER CROPS
Always follow on application of our fertilisers

ಬೋರ್ಡ್ [illegible]
[illegible]
[illegible]
[illegible] (fresh) [illegible]

Siddeek's Manure Works
MERCARA
21 — 9

ಜೀವವಿಮೆ.

[illegible] ಸಂಪಾದನೆಯು ಯಜಮಾನನ ಮೃತಪಟ್ಟರೆ ಉಂಟಾಗಬಹುದಾದ ತೊಂದರೆಗಳ [illegible] ಜೀವವಿಮೆ

ವೃದ್ಧಾಪ್ಯ[illegible] ಮತ್ತು ಕುಟುಂಬದ ಜೀವನಾ[illegible] ಒದಗಿಸುವುದೇ ಜೀವವಿಮೆ

ಅತಿ ಕಡಿಮೆ ದರದಲ್ಲಿ ಯಾವ ಲೋಪವೂ ಬಾರದಂತೆ [illegible] ಹಣವನ್ನು ಒದಗಿಸುವ ಸುಸ್ಥಿಯಾದರೂ [illegible] ಜೀವವಿಮೆ ಕಂಪೆನಿ

ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ [illegible] ಹಣವನ್ನು ಒದಗಿಸಿ [illegible] ದೇಶದ ಆರ್ಥಿಕ ಸಂಪತ್ತನ್ನು (Economic Condition) [illegible] ಸುಸ್ಥಿಯಾದರೂ [illegible]

[illegible] ಇಂಡಿಯಾ ಗವರ್ನಮೆಂಟ್ [illegible] ಬ್ಯಾಂಕ್ [illegible] ಮಾಡಿರುತ್ತೆ.

ಬಿ. ಎಸ್. ಆಚಾರ್ಯ,
ರಿಪ್ರೆಸೆಂಟೇಟೀವ್ [illegible] ಆಫೀಸ್ ಮಡಿಕೇರಿ.

ಮಲೆಯಾಳ ವೈದ್ಯಶಾಲೆ

[illegible] ಆಯುರ್ವೇದ ವೈದ್ಯಶಾಲೆಯಲ್ಲಿ ಒಂದು [illegible] ರಾಜೇಂದ್ರಪ್ಯಾಟೆಯಲ್ಲಿ ತೆರೆದಿರುತ್ತೆ. ಇಲ್ಲಿ [illegible] ಪಂಡಿತರಿಂದ ಪರೀಕ್ಷಿಸಿ ಔಷಧಿ ಕೊಟ್ಟು ಗುಣಪಡಿಸಲ್ಪಡುತ್ತೆ. [illegible] ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು

ನಾರಾಯಣನಂಬೀಶನ್,
ಆಯುರ್ವೇದ ವೈದ್ಯರು,
52—19 ಮಹಾರಾಜೇಂದ್ರಪ್ಯಾಟೆ

ಪ್ರಕಟನೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್.

ಕೋ ಆಪರೇಟಿವ್ ಸೊಸೈಟೀಸ್ [illegible] ರಿಜಿಸ್ಟರಾಗಿದೆ

	ರೂ.
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	6,828
ಜಮಾ ಬಂದ ಠೇವಣಾತಿ	47,996

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ [illegible]

[illegible]

ಪ್ರೆಸಿಡೆಂಟು [illegible]
[illegible]
ಸೆಕ್ರೆಟರಿ
[illegible] ವೆಂಕಟಪ್ಪಯ್ಯನವರು ಬಿ. ಎ ಬಿ ಎಲ್.
ತಾರೀಖು 22—[illegible]—1924.

"ಕೊಡಗು"

೧೯೨೪ ನೇ ಇಸವಿ ಮೇ ತಾ|| ೩೦ ನೇ ಶುಕ್ರವಾರ

ಕನ್ನಡ ಭಾಷೆ.

ನಮ್ಮ ಈ ಕೊಡಗುದೇಶವು ಕರ್ನಾಟಕದೇಶಕ್ಕೆ ಸೇರಿದ್ದಾಗಿ ಕನ್ನಡಭಾಷೆಯನ್ನಾಡುವ ಪ್ರಾಂತ್ಯವಾಗಿದೆ. ದೇಶದಲ್ಲಿ ಅನೇಕರಿಗೆ ಕನ್ನಡವು ಮಾತೃಭಾಷೆಯಲ್ಲವಾದರೂ ಅವರೂ ಸಹ ತಮ್ಮ ಬಂಪಣಿಗೆಯನ್ನೂ ದಿನನಿತ್ಯದ ವ್ಯವಹಾರಗಳನ್ನೂ ಕನ್ನಡಭಾಷೆಯಲ್ಲೇ ಮಾಡುತ್ತಿದ್ದಾರೆ. ಆದ್ದರಿಂದ ಕನ್ನಡನಾಡೆಂದರೆ ಯಾವುದು, ಅದರ ಪೂರ್ವಚರಿತ್ರೆ ಏನು, ಕನ್ನಡಭಾಷೆಯು ರಾಜ್ಯದ ಆಡಳಿತ ನಡಿಸಲು ಅರ್ಹವಾದ ಭಾಷೆಯಾಗಲು ಯೋಗ್ಯವಿದೆಯೋ ಎಂಬ ಇತ್ಯಾದಿ ವಿಷಯಗಳನ್ನು ಸ್ವಲ್ಪ ವಿಚಾರಿಸೋಣ. ಒಟ್ಟು ಹಿಂದುಸ್ಥಾನವನ್ನೇ ಹಿಂದುಸ್ಥಾನದ ಯಾವಭಾಗದವರಾದರೂ ಪ್ರೀತಿಸಬೇಕಾದದ್ದು ಯುಕ್ತವೇ. ಆದರೆ ಹಿಂದುಸ್ಥಾನದ ಇತಿಹಾಸದಲ್ಲಿ ಬೇರೆಬೇರೆ ಪ್ರಾಂತಗಳಲ್ಲಿ ಬೇರೆಬೇರೆ ರಾಜ್ಯಾಡಳಿತಗಳು ನಡೆದಿರುವದರಿಂದ ಆಯಾ ಪ್ರಾಂತ್ಯದವರು ತಮ್ಮ ತಮ್ಮ ಪೂರ್ವಚರಿತ್ರೆಯನ್ನು ನೆನಸಿಕೊಂಡು ತಮ್ಮ ಮುಂದಿನ ಏಳಿಗೆಗಾಗಿ ಪ್ರಯತ್ನಿಸಿದರೆ ಒಟ್ಟು ಹಿಂದುಸ್ಥಾನವೇ ತನ್ನ ಸ್ವತಃ ಸಿದ್ಧಹಕ್ಕಾದ ಸ್ವತಂತ್ರವನ್ನು ಪಡೆಯಲು ಅನುಕೂಲವಾಗುತ್ತೆ.

ನಮ್ಮ ರಾಜ್ಯಾಡಳಿತದಲ್ಲಿ ಕಾಲಕ್ರಮದಿಂದ ಭಾಷೆಯನ್ನನುಸರಿಸಿ ಒಟ್ಟು ಹಿಂದುಸ್ಥಾನವು ವಿಂಗಡಬೇಕಾಗುತ್ತೆಂಬದು ಕಾಂಗ್ರೆಸ್ಸಿನಲ್ಲಿ ಕೆಲವು ವರ್ಷಗಳ ಹಿಂದೆಯೇ ಸ್ಥಿರಪಡಿಸಲಾಗಿದೆ. ಎಲ್ಲರೂ ಒಪ್ಪಬೇಕಾದ ವಿಷಯವೇ ಆಗಿದೆ. ದೇಶೀಯಭಾಷೆ ಬಿಟ್ಟು ಅನ್ಯಭಾಷೆಯಲ್ಲಿ ರಾಜ್ಯಾಡಳಿತವು ಬಹುಕಾಲ ನಡೆದರೆ ಜನರಲ್ಲಿರುವ ಪುರುಷತ್ವವೇ ಹೋಗಿಬಿಟ್ಟೀತೆಂತ ನಮ್ಮ ಅಭಿಪ್ರಾಯ. ತನ್ನ ತಾಯಿಯ ಮೊಲೆಹಾಲನ್ನು ಬಿಟ್ಟು ಹುಟ್ಟಿದಾಗಲಿಂದಲೇ ಟಿನ್ನಿನ ಹಾಲು ಕುಡಿಯಬೇಕೆಂತಾದರೆ ಅಂಥಾ ಮಕ್ಕಳ ಬೆಳವಣಿಗೆಯು ಹೇಗೆ ತೃಪ್ತಿಕರವಾದೀತು? ಅಲ್ಲದೆ ಟಿನ್ನಿನ ಹಾಲು ಐಶ್ವರ್ಯವಂತರಿಗೆ ದೊರೆತೀತೇ ಹೊರತು ಸಾಧಾರಣ ಜನರಿಗೆ ದೊರೆಯದು. ನಮ್ಮ ಈ ಕೊಡಗುದೇಶಕ್ಕೆ ಈಗ ದೊರೆತಿರುವ ಕೌಂಸಿಲ್ ಹಕ್ಕುಗಳಿರುವ ನ್ಯಾಯವಿಧಾಯಕ ಸಭೆಯ ಚರ್ಚೆಗಳು ಎಂದೆಂದಿಗೂ ಪೂರ್ತಿ ಹಕ್ಕು ಸಿಕ್ಕಿದಾಗಲೂ ಪರಭಾಷೆಯಲ್ಲಾಗಬೇಕೆಂತ ಆದರೆ ಜನಸಮುದಾಯದವರಿಗೆ ಆಡಳಿತದಲ್ಲಿ ಭಾಗ ತೆಗೆದುಕೊಳ್ಳಲು ಸಾಧ್ಯವೇ ಆಗುವದಿಲ್ಲವಲ್ಲ! ತಾಯಿಯ ಮೊಲೆಹಾಲು ಉಣ್ಣಬಾರದೆಂಬ ಕಟ್ಟಿರುವ ದೇಶದಲ್ಲಿ ಟಿನ್ನಿನಹಾಲು ತೆಗೆದುಕೊಳ್ಳಲು ಶಕ್ತಿ ಇಲ್ಲದ ಜನರ ಮಕ್ಕಳ ಪಾಡೇ ನಮ್ಮ ಜನರದಾಗುತ್ತೆ. ಹಸುವಿನ ಹಾಲು ಸಹ ಉಪಯೋಗಿಸುವಂತೆ ಇಲ್ಲ. ಯಾಕೆಂದರೆ ಒಟ್ಟು ಇಂಡಿಯಾದಲ್ಲೆಲ್ಲಾ ಸುಲಭದಿಂದ ತಿಳಿಯುವಂತೆ ಮಾಡಿಕೊಳ್ಳಬಹುದಾದ ರಾಷ್ಟ್ರೀಯಭಾಷೆಯಾಗಲು ಸುಲಭಸಾಧ್ಯವಾದ ಹಿಂದೀಭಾಷೆಯಲ್ಲಾದರೂ ಕೌನ್ಸಿಲಿನ ಚರ್ಚೆಗಳು ನಡಿಯುವಂತಿಲ್ಲ. ಮಾತೃಭಾಷೆಯಲ್ಲೇ ಅಥವಾ ಜನಸಮುದಾಯಕ್ಕೆ ತಿಳಿಯುವ ಭಾಷೆಯಲ್ಲಿ ದೇಶದ ಆಡಳಿತವು ನಡೆಯಬೇಕಾದದ್ದು ಅತ್ಯವಶ್ಯ.

ಅಲ್ಲದೆ ನಮ್ಮ ಈ ದೇಶದ ಆಡಳಿತವನ್ನು ನಡಿಸಲು ಯೋಗ್ಯವಾದ ಭಾಷೆಯೇ ನಮಗೆ ಇಲ್ಲವೆಂಬ ಬನಹ ಮನಸಿನಲ್ಲಿ ಯಾವಾಗಲೂ ನೆಲೆಗೊಂಡರೆ ಜನರಲ್ಲಿ ಸ್ವಶಕ್ತಿಯೂ ಸ್ಥೈರ್ಯವೂ ಬೆಳೆಯುವದು ಹೇಗೆ? ಭಾಷೆಯನ್ನು ನಾವು ಎರವಾಗಿ ತೆಗೆದುಕೊಂಡೆವೆಂದರೆ ಭಾಷೆಯ ಸಂಗಡಲೇ ಆ ಭಾಷೆಯನ್ನಾಡುವ ಜನ ನಾಗರೀಕತೆಯೂ ಅವಲಂಬಿಸುತ್ತದೆ. ಇಂಗ್ಲಿಷ ಭಾಷೆಯನ್ನಾಡುವ ಜನರ ನಾಗರೀಕತೆಯು ಅತ್ಯುತ್ತಮವಾದದ್ದೇ ಇರಬಹುದು. ಆದರೆ ನಮ್ಮ ಈ ದೇಶದ ಜನರು ಎಂದಾದರೂ ವಾನರತ್ವದಿಂದ ತಪ್ಪಿಸಿಕೊಳ್ಳಬೇಕೆಂತ ಅಭಿಪ್ರಾಯವಿದೆಯಾದರೇ ಪರರ ನಾಗರೀಕತೆಯನ್ನು ಅನುಸರಿಸಬಾರದು. ಪರರ ನಾಗರೀಕತೆಯಲ್ಲಿರುವ ಉತ್ತಮಗುಣಗಳನ್ನು ನಮ್ಮ ನಾಗರೀಕತೆಗೆ ಬೆರಸಿಕೊಂಡು ನಮ್ಮ ನಾಗರೀಕತೆಯನ್ನೇ ವೃದ್ಧಿಪಡಿಸುವದರಲ್ಲಿ ಏನೂ ಆಕ್ಷೇಪಣೆ ಇಲ್ಲ. ಇಂಗ್ಲಿಷ್ ಕಲಿತವನೇ ಈ ಪ್ರಪಂಚದಲ್ಲಿ ಯೋಗ್ಯನೆನಿಸಿಕೊಳ್ಳಲು ಸಾಧ್ಯವೆಂತ ಈಗ ಜನರಲ್ಲಿ ನಿಶ್ಚಯವಾಗಿಹೋಗಿದೆ. ಹೀಗೆ ಇದ್ದರೆ ಜನರಲ್ಲಿ ಸ್ವದೇಶಪ್ರೀತಿಯೂ ಸ್ವಾವಲಂಬನವೂ ನಾಶವಾಗುವದೇ ಸರಿ.

ಈ ಕೂಡಲೇ ಕೌನ್ಸಿಲ್ ಚರ್ಚೆಗಳೆಲ್ಲಾ ಕನ್ನಡದಲ್ಲಿ ನಡೆಯಲು ಪ್ರಾರಂಭವಾಗಬೇಕೆಂತ ನಾವು ವಾದಿಸುವದಿಲ್ಲ. ಪ್ರಪಂಚದಲ್ಲಿ ದೊರೆಯುವ ಯಾವ ತಿಳುವಳಿಕೆಗಳವೆಯೋ ಅವನ್ನೆಲ್ಲಾ ದೇಶೀಯಭಾಷೆಯ ಮೂಲಕ ಜನಸಾಮಾನ್ಯಕ್ಕೆ ದೊರಕುವಂತೆ ಮಾಡಲು ಪ್ರಯತ್ನಮಾಡಿ ಅನಂತರ ರಾಜ್ಯಾಡಳಿತ ಚರ್ಚೆಗಳು ದೇಶೀಯಭಾಷೆಯಲ್ಲಿ ನಡೆಯುವದೇ ಕ್ರಮ. ಹೈಸ್ಕೂಲ್‌ವರೆಗಿನ ವಿದ್ಯಾಭ್ಯಾಸವಾದರೂ ಕನ್ನಡದಲ್ಲೇ ಆಗಬೇಕು. ಇಂಗ್ಲಿಷನ್ನು ಎರಡನೇ ಭಾಷೆಯಾಗಿ ಕಲಿತುಕೊಳ್ಳಲು ಅಡ್ಡಿ ಇಲ್ಲ. ಈಗ ದೇಶೀಯಭಾಷೆಯನ್ನು ಸೆಕೆಂಡ್ ಲ್ಯಾಂಗ್ವೇಜ್ ಅಂದರೆ ಎರಡನೇ ಭಾಷೆಯೆಂತ ವಿದ್ಯಾ ಇಲಾಖೆಗಳಲ್ಲಿ ಹೇಳುತ್ತಾರೆ. ಆ ಮಾತು ತಪ್ಪು. ಇಂಗ್ಲೀಷೇ ಎರಡನೇ ಭಾಷೆಯೆನಿಸಿಕೊಳ್ಳಬೇಕು. ಇದು ಎಂದು ಆಗುತ್ತದೆಂತ ನಮಗೆ ಸಂಶಯ ತೋರಬಹುದು. ಆದರೆ ಜನಸಮುದಾಯದಲ್ಲಿ ತಮ್ಮ ಮಾತೃಭಾಷೆಯನ್ನು ಅಥವ ಮಾತೃಭಾಷೆಯಂತೆಯೇ ಸರ್ವರಿಗೂ ತಿಳಿಯುವ ಭಾಷೆಯಲ್ಲೇ ತಮಗೆ ಬೇಕಾದ ತಿಳುವಳಿಕೆಯನ್ನು ಕೊಡಬೇಕೆಂತ ದೇಶದ ಜನರು ಒಮ್ಮನಸ್ಸಿನಿಂದ ಕೇಳತೊಡಗಿದರೆಂದರೆ ಕನ್ನಡಭಾಷೆ ಪ್ರಾಶಸ್ತ್ಯಕ್ಕೆ ಬರುವದರಲ್ಲಿ ಏನು ಸಂಶಯವಿಲ್ಲ.

ಹೀಗೆ ಪ್ರಾಮುಖ್ಯತೆಗೆ ತರಬೇಕೆಂತ ಹೇಳುವ ಭಾಷೆಯು ಎಂದಾದರೂ ದೊಡ್ಡ ಸಂಸ್ಥಾನದ ಭಾಷೆಯಾಗಿತ್ತೇ ಎಂತ ಕೇಳಿದರೆ ಧಾರವಾಡದ ಶ್ರೀಯುತ ಆಲೂರು ವೆಂಕಟರಾಯರ "ಕರ್ನಾಟಕಗತವೈಭವ" ವೆಂಬ ಪುಸ್ತಕವನ್ನು ನೋಡಿದರೆ ಉತ್ತರ ದೊರೆಯುತ್ತೆ. ದೇಶಭಕ್ತಿ ಇದೆಯೆನ್ನುವವರೂ ಮತ್ತು ದೇಶಭಕ್ತಿ ಬೆಳೆಸಬೇಕೆನ್ನುವವರೂ ಸಹ ಆ ಪುಸ್ತಕವನ್ನು ಓದಲೇಬೇಕು. ಕರ್ನಾಟಕರಾಜ್ಯವು ಕ್ರಿಸ್ತಶಕದ ಪ್ರಾರಂಭದಿಂದಲೂ ಸುಮಾರು 1500 ವರ್ಷದವರೆಗ ದೊಡ್ಡ ಸಾಮ್ರಾಜ್ಯವಾಗಿತ್ತು. ಆ ಕಾಲದ ಪೆಚ್ಚಿನಭಾಗದಲ್ಲಿ ಕರ್ನಾಟಕರಾಜ್ಯವು ಈ ನಮ್ಮ ದೇಶದ ಕಾವೇರಿನದಿಯಿಂದ ಗೋದಾವರಿವರೆಗೂ ವಿಸ್ತರಿಸಿತ್ತು. ನಮ್ಮ ಈ ದೇಶವು ಕರ್ನಾಟಕವನ್ನಾಳಿದ ಕದಂಬ, ಹೊಯ್ಸಳ ಮತ್ತು ವಿಜಯನಗರದ ಸಂಸ್ಥಾನಗಳಲ್ಲಿ ಅಡಕವಾಗಿತ್ತೆಂತ ತಿಳಿದಿದೆ. ವಿಜಯನಗರದ ಸಂಸ್ಥಾನಕ್ಕೆ ಇರಾನಿದೇಶದ ರಾಯಭಾರಿಗಳು ಬರುತ್ತಿದ್ದರು. ವಿಜಯನಗರದ ಪಟ್ಟಣವು ಈಗಿನ ಲಂಡನ್ ಪಟ್ಟಣಕ್ಕಿಂತ ದೊಡ್ಡದಾಗಿತ್ತೆಂತ ಚರಿತ್ರೆಯ ರುಜುವಾತುಗಳಿವೆ. ಇಂಥಾ ಮಹತ್ವದಿಂದ ರಾಜ್ಯವಾಳಿದ ದೊಡ್ಡ ಸಂಸ್ಥಾನದ ಭಾಷೆಯಾಗಿದ್ದ ನಮ್ಮ ಕನ್ನಡಭಾಷೆಯು ಈಗಿನ ಆಡಳಿತದ ಉಪಯೋಗಕ್ಕೆ ಯೋಗ್ಯವಿಲ್ಲವೇ? ನಮ್ಮ ಈ ಕನ್ನಡ ಭಾಷೆಯನ್ನಾಡುವ ಜನರಲ್ಲಿ ಪೊನ್ನ, ರನ್ನ, ಆದಿಪಂಪ, ಕುಮಾರವ್ಯಾಸ, ಲಕ್ಷ್ಮೀಶ ಮುಂತಾದ ಕವಿಗಳು ಹುಟ್ಟಿ ಉತ್ಕೃಷ್ಟತರದ ಗ್ರಂಥಗಳನ್ನು ಬರೆಯಲಿಲ್ಲವೇನು? ಮತಸ್ಥಾಪಕರಾದ ಶಂಕರಾಚಾರ್ಯರೂ, ರಾಮಾನುಜಾಚಾರ್ಯರೂ, ಮಾಧವಾಚಾರ್ಯರೂ ಬಸವೇಶ್ವರರೂ ಈ ಕನ್ನಡ ಭಾಷೆಯನ್ನಾಡುವ ಜನರ ಮಧ್ಯದಲ್ಲಿ ವಾಸವಿದ್ದು ತಮ್ಮ ಮತಗಳನ್ನು ಸ್ಥಾಪಿಸಲಿಲ್ಲವೇನು? ಪುರಂದರದಾಸ ಕನಕದಾಸರಂಥ ವಿಶೇಷ ಭಾಗವತ್ಸ್ಯರು ಕನ್ನಡ ನುಡಿಯಿಂದ ಹಾಡಿ ಜನರಲ್ಲಿ ಭಕ್ತಿಹುಟ್ಟಿಸಲಿಲ್ಲವೇನು? ಕನ್ನಡ ಭಾಷೆಯನ್ನಾಡುತ್ತಿದ್ದ ಶಿಲ್ಪಿಗರು ಶ್ರವಣಬೆಳಗೊಳದ ಗೋಮಟೇಶ್ವರಮೂರ್ತಿಯನ್ನೂ ಬೇಲೂರಿನ ಬೆಟ್ಟದಲ್ಲಿ ಕೊರೆದ ಕೈಲಾಸ ದೇವಸ್ಥಾನವನ್ನೂ ಹಳೇಬೀಡಿನ ದೇವಸ್ಥಾನವನ್ನು ಇನ್ನೂ ವಿಸ್ಮಯವನ್ನುಂಟುಮಾಡುವ ಅನೇಕ ಕಟ್ಟಡಗಳನ್ನು ಕಟ್ಟಲಿಲ್ಲವೇನು? 1634 ನೇ ಇಸ್ವಿಯವರೆಗೂ ಕನ್ನಡಮಾತನಾಡುವ ರಾಜರೇ ಈ ದೇಶವನ್ನು ಆಳಲಿಲ್ಲವೇ. ಮೈಸೂರು ಸಿಂಹಾಸನದಲ್ಲಿ ಈಗಲೂ ಕನ್ನಡ ಮಾತನಾಡುವವರೇ ರಾಜರಲ್ಲವೇ? ಆದ್ದರಿಂದ ಕನ್ನಡಭಾಷೆಯು ಸಂಪೂರ್ಣ ಕಲೆಯುಳ್ಳದ್ದು, ಜೀವವುಳ್ಳದ್ದು ಎಂಬದರಲ್ಲಿ ಏನು ಸಂದೇಹವಿಲ್ಲ. ಈರೀತಿ ಭಾಷೆಯ ಚರಿತ್ರೆಯನ್ನು ನೋಡುತ್ತಾ ಹೋದರೆ ಆ ಭಾಷೆಯನ್ನಾಡುವ ಜನರ ಚರಿತ್ರೆಯನ್ನೇ ನೋಡಿದಂತಾಗುತ್ತೆ. ನಮ್ಮ ದೇಶದ ಜನರ ಪೂರ್ವೀಕರು ಬರೇ ಕಾಡುಜನರಾಗಿರಲಿಲ್ಲ. ಅವರಲ್ಲಿಯೂ ನಾಗರೀಕತೆ ಇತ್ತು ಎಂಬದನ್ನು ತಿಳಿದ ಹೊರತು ಸ್ವಶಕ್ತಿಯಲ್ಲಿ ನಂಬಿಕೆ ಹುಟ್ಟುವದಿಲ್ಲ. ಬಂಗಾಳದವರೂ, ಮಹಾರಾಷ್ಟ್ರದವರೂ ಸಹ ಈಚೀಚೆಗೆ ಹೇಗೆ ಬಹಳ ಮುಂದೆ ಬಂದದ್ದೆಂದರೆ ಮೊದಲು ಮೊದಲು ತಮ್ಮ ಭಾಷೆಯ ಬೆಳವಣಿಗೆಯ ಕಡೆಗೆ ಮನಸು ಕೊಟ್ಟರು. ಇಟಲಿಯಲ್ಲಿ ಸ್ವತಂತ್ರ ಪ್ರೀತಿ ಬೆಳೆಯುವ ಮೊದಲು ಸ್ವಭಾಷೆಯಮೇಲಿನ ಪ್ರೇಮವು ತುಂಬಾ ಬೆಳೆಯಿತು. ಐರ್‌ಲ್ಯಾಂಡಿನಲ್ಲೂ ಸ್ವತಂತ್ರ ಪ್ರೀತಿಯ ಸಂಗಡಲೇ ಸ್ವಭಾಷೆ ಪ್ರೇಮವೂ ಬೆಳೆದಿದೆ. ಅಲ್ಲಿನ ದೇಶಭಕ್ತರ ಗುಂಪುಗಳಲ್ಲಿ ಇಂಗ್ಲಿಷ್ ಭಾಷೆಯನ್ನು ಆಡಲೇಬಾರದೆಂಬ ಕಟ್ಟುಗಳು ಇವೆಯಂತೆ. ಇದರಿಂದ ಏನು ತೋರುತ್ತೆಂದರೆ ಸ್ವದೇಶಭಕ್ತಿ ಬೆಳೆಯಬೇಕಾದರೆ ಸ್ವಭಾಷೆಯೊಂದ ಇರಲೇಬೇಕು. ಮೇಲೆ ಮಹಾರಾಷ್ಟ್ರರೂ ಬಂಗಾಳಿಗಳೂ ಮುಂದುವರಿದಿದ್ದಾರೆ ಎಂತ ನಾವು ಸೂಚಿಸಿದ್ದರಿಂದ ನಮ್ಮ ಕನ್ನಡ ಮಾತಾಡುವವರಲ್ಲಿ ಈಗಿನ ಕಾಲದಲ್ಲಿ ದೇಶಭಕ್ತಿ ಇಲ್ಲವೆಂತ ಅಧೈರ್ಯಪಡಬೇಕಾದದ್ದಿಲ್ಲ. ಮಹಾತ್ಮಾ ಗಾಂಧಿಯವರು ಕರ್ನಾಟಕದ ಜನರ ದೇಶಭಕ್ತಿಗೆ ಮೆಚ್ಚಿದ್ದಾರೆ. ಅಸಹಕಾರ ತತ್ವವನ್ನು ನಾವು ಒಪ್ಪುವದಿಲ್ಲವಾದರೂ ಸ್ವಾರ್ಥತೆಯಿಲ್ಲದ ದೇಶಭಕ್ತಿಯನ್ನು ನಾವು ದೇಶದ ಮುಂದೆ ಇಡಲು ಅಂಜುವದಿಲ್ಲ. ಚಕ್ರವರ್ತಿಯ ಯಮ್. ಎ ಯಲ್ ಯಲ್. ಬಿ ಪಾಸಾದ ಧಾರವಾಡ, ಬೆಳಗಾಂ, ಬಿಜಾಪುರದ ಕನ್ನಡಯುವಕರು ಅನೇಕರು ತಮ್ಮ ದೇಶಭಕ್ತಿಗಾಗಿ ಜೈಲಿಗೆ ಹೋಗಿದ್ದಾರೆ. ವಿಜಯನಗರದಂಥಾ ಪ್ರಖ್ಯಾತ ಸಂಸ್ಥಾನಕ್ಕೆ ಸೇರಿದ್ದ ಕನ್ನಡ ಮಾತಾಡುತ್ತಿದ್ದ ಪೂರ್ವೀಕರ ವಂಶಸ್ಥರಾದ ಈಗಿನವರು ಸಂಭಾಷೆಯಿಲ್ಲದಿದ್ದರೆ ನಮ್ಮ ಆಡಳಿತದ ವಿಷಯ ಮಾತಾಡಲೇ ಆಗುವದಿಲ್ಲವೆಂತಾಗಲೀ, ಪರರ ಮೇಲ್ವಿಚಾರವಿಲ್ಲದಿದ್ದರೆ ನಮ್ಮ ಆಡಳಿತ ನಡಿಸುವದೇ ಸಾಧ್ಯವಿಲ್ಲವೆಂತಾಗಲೀ ಅಭಿಪ್ರಾಯವನ್ನಿಟ್ಟುಕೊಂಡಿರುವದು ನಾಚಿಕೆಯುಳ್ಳದ್ದೇ? ನಮ್ಮ ಈ ಚಿಕ್ಕ ದೇಶವನ್ನಾಳುತ್ತಿದ್ದ ಪ್ರಸಿದ್ಧರಾಜರ ... ಕೈಯ್ಯಲ್ಲಿ ಇದ್ದದ್ದು ಕನ್ನಡವೇ ... ವಣ್ಣದುರಿಗೆ ನಿತ್ಯಕೃತ್ಯಯೇ ಹೊರತು ... ಸಮುದಾಯಕ್ಕೆ ಪ್ರಯೋಜನವಾದ ... ಗೂ ದೊರೆಯಲಿಲ್ಲವಲ್ಲ! ನಮ್ಮ ಈ ... ಅದರ ತ್ರಿವಿಧ ... ಓದುತ್ತಿರುವ ... ಪ್ರೀತಿಯೇ ಓದುತ್ತಿದ್ದ ಜನರಲ್ಲಿ ರಾಜರಲ್ಲಿ ಮಟ್ಟಿಗೆ ಆನಾರ್ಯವಿದ್ಯಾರ್ಥಿ ಮುಂತಾದ ಉನ್ನ ... ಗಳಿದ್ದವು ಎಂಬದನ್ನು ನೆನಸಿಕೊಳ್ಳಬೇಕಾದ್ದು ... ವೇ. ಬ್ರಿಟಿಷ್ ಸಾಮ್ರಾಜ್ಯದೊಳಗೇ ಸ್ವರಾಜ್ಯ ... ತ್ರೇವೆಂತ ಚಕ್ರವರ್ತಿಯವರ ಅನುಜ್ಞೆಯಾಗಿದೆ ... ವು ಸ್ವರಾಜ್ಯಕ್ಕೆ ಅರ್ಹರೆಂದು ತೋರಿಸಿಕೊಳ್ಳುವ ... ಸ್ವಲ್ಪವಾಗಿ ಹಕ್ಕುಗಳನ್ನು ಕೊಡುತ್ತಾ ಬರುತ್ತೆ ... ಪಾರ್ಲಿಮೆಂಟಿನ ಪ್ರಕಟಣೆಯಾಗಿದೆ. ಕನ್ನಡ ... ಡುತ್ತಿದ್ದ ಸನ್ಯಾಸಿಯಾಗಿದ್ದ ವಿದ್ಯಾರಣ್ಯಸ್ವಾಮಿ ... ರ್ನಾಟಕದ ಸ್ವತಂತ್ರವನ್ನು ಉಳಿಸಲಿಕ್ಕಾಗಿ ಪ್ರಯ ... "ಕರ್ನಾಟಕ ಸಂಸ್ಥಾಪನಾಚಾರ್ಯ" ಎಂತ ... ಪಡೆದವರ ಕರ್ನಾಟಕ ರಾಜ್ಯಕ್ಕೆ ಸೇರಿದ ನಾವು ... ಹೊಂದಲು ಬೇಕಾದ ಸಮಯ ಬಂದಿದೆಯೆಂಬದನ್ನು ... ಮಾಡಬೇಕು. ಹೀಗೆ ಸಿದ್ಧತೆ ನಡೆದರೆ ಕನ್ನಡ ... ಪ್ರಾಮುಖ್ಯತೆ ಸಿಕ್ಕುವಂತೆ ಸರ್ವರೂ ಭಾಷಾಸೇವೆ ... ಬೇಕೆಂತ ನಮ್ಮ ಅಭಿಪ್ರಾಯ.

ವಿಮರ್ಶೆ.

"ಕನ್ನಡನುಡಿ" ಎಂಬ ಸಚಿತ್ರ ವಾರ ... ಹೊಂದು ಬೆಂಗಳೂರು ... ಸ್ಥಿ ಪಬ್ಲಿಷಿಂಗ್ ಕಂಪೆನಿ ಲಿಮಿಟೆಡ್ ಎಂಬ ವಿಳಾಸದಿಂದ ... ಸ್ಥರದೆ. ಈ ಸಲದ ಯುಗಾದಿಯಲ್ಲಿ ಇದು ... ದ್ಧವಾಗಿದೆ. ಇದಕ್ಕೆ ಶ್ರೀಯುತ ಬಿ ಸುಬ್ರ ... ಎಂ ಎವರು ಸಂಪಾದಕರಾಗಿದ್ದಾರೆಂತ ತಿಳಿಯುತ್ತೆ ... ರಲ್ಲಿ "ಜಯಕರ್ನಾಟಕ" ಕ್ಕೆ ಹೊ ... ಸಂಪೂರ್ಣವಾದದ್ದಾದರೂ ಪತ್ರಿಕೆಗಳು ಎಷ್ಟು ... ರೂ ಸಚ್ಚಿನಿಸುವಲ್ಲ. ಈ ಪತ್ರಿಕೆಯಲ್ಲಿ " ... ಸ" ಅಮೆರಿಕಾ ಗುಹಾಂತರದೇವಾಲಯ, ಗ್ರಾ ... ಪ್ರಸಾದ್ದಾರ ಹಿಂದೂದೇಶದ ಚರಿತ್ರೆ, ಎಂಬ ... ರದ ಲೇಖನಗಳು ಇವೆ. ಇತರ ಪತ್ರಿಕೆಗಳಿಂ ... ಅನೇಕ ವಿಷಯಗಳೂ ಇವೆ. ಕನ್ನಡ ಭಾಷಾ ... ಗಳಲ್ಲಿಯ ಮತ್ತು ದೇಶಾಭಿಮಾನಿಗಳ ಕೈಯ್ಯಲ್ಲಿ ... ಬೇಕಾದ ಪತ್ರಿಕೆಯಾಗಿದೆ. ಲೇಖನಗಳನ್ನು ... ಪತ್ರಿಕೆಗೆ ಎಷ್ಟು ಬೇಕೆಂತ ಕುತೂಹಲವನ್ನುಂಟು ... ತ್ತೆ. ಸ್ಥಳದೊರೆತಂತೆ ಸಾಧ್ಯವಾದರೆ ಪ್ರಕಟಿಸ ... ಇದ್ದೇವೆ. ಈ ಹೊಸಪತ್ರಿಕೆಗೆ ಆಶ್ರಯದೊ ... ಕ್ಯತವಾಗಿ ನಡೆಯಲಿ.

ಸಂಪಾದಕ "ಕೊ ...

"ಕೋಕೋಜೆಮ್"

ಪ್ರಶ್ನಭಾಗದೊಳು– ಉದ್ಯೋಗ, ವ್ಯವಹಾರ, ರಾಜಪ್ರಶ್ನೆ, ರೋಗ, ಮರಣಪ್ರಶ್ನೆ, ವಿವಾಹಪ್ರಶ್ನೆ, ಸ್ತ್ರೀಪುತ್ರಪ್ರಶ್ನೆ, ವಿದ್ಯಾ, ಧನ, ಭೂಮಿ, ಜಲಪ್ರಶ್ನೆ, ಲಾಭಾಲಾಭಪ್ರಶ್ನೆ, ನಷ್ಟಪ್ರಶ್ನೆ, ಚೋರಪ್ರಶ್ನೆ, ಪಂಥಪ್ರಶ್ನೆ, ಮುಷ್ಟಿಪ್ರಶ್ನೆ, ದೂತಲಕ್ಷಣದಿಂದ ಹೇಳುವ ಪ್ರಶ್ನೆ, ಅಂಗಚೇಷ್ಟೆಪ್ರಶ್ನೆ, ಪ್ರಯಾಣಪ್ರಶ್ನೆ, ಲಕ್ಷ್ಮೀಟಪ್ರಶ್ನೆ, ನವರತ್ನಪ್ರಶ್ನೆ, ಜನನಪ್ರಶ್ನೆ, ಚೋರಪ್ರಶ್ನೆ, ಚೋರನಜಾತಿ, ವಯಸ್ಸು, ಹೋದ ವಸ್ತುವೆಯಂಥಾದ್ದು, ಯಾವ ದಿಕ್ಕಿನಲ್ಲಿ ಯಾವ ಜಾಗದಲ್ಲಿ ಇರುವದು ಎಷ್ಟು ದಿವಸಗಳಲ್ಲಿ ದೊರೆಯುತ್ತೆ ಅಥವಾ ಇಲ್ಲವೆ. ಕೈಯಲ್ಲಿ ಹಿಡಿದಿರುವದನ್ನು ಹೇಳುವಪ್ರಶ್ನೆ ಇಂಥಾದ್ದೆ ಭೋಜನಮಾಡಿದ್ದನ್ನು ಹೇಳುವ ಪ್ರಶ್ನೆ ನಾಳೆಯಾಳದೇಶದ ಕವಡಿ ಪ್ರಶ್ನೆ. ಮನೋಗತ ಪ್ರಶ್ನೆ ಅದು ಎಷ್ಟು ದಿವಸಗಳಲ್ಲಿ ಆಗುತ್ತೆ ಅದನ್ನು ಹೇಳುವಪ್ರಶ್ನೆ. ಸ್ವಪ್ನಪ್ರಶ್ನೆ, ಪ್ರಯಾಣದಲ್ಲಿ ನೋಡುವ ಶುಭಾಶುಭ ಶಕುನಗಳ ವಿವರವು. ಪ್ರಯಾಣ ಹೊರಡುವ ವೇಳೆಯಿಂದ ತನಗೆ ಮುಂದೆ ಇಂಥಾ ಶಕುನಗಳೇ ಆಗುತ್ತವೆಂಬುದನ್ನು ತಿಳಿಯುವ ಕ್ರಮ. ಪ್ರಯಾಣಕ್ಕೆ ಮುಖ್ಯವಾಗಿ ನೋಡತಕ್ಕ ಆನಂದಾದಿ ಯೋಗವುಳ್ಳ ರಾಜಮುಹೂರ್ತ ಚಕ್ರವು. ಪ್ರಯಾಣ, ಉದ್ಯೋಗ, ವ್ಯವಹಾರ ಮುಂತಾದ ಎಲ್ಲಾ ನೂತನ ಕಾರ್ಯಗಳಿಗೂ ನೋಡತಕ್ಕ ಅಮೃತಚಕ್ರಗಳುಳ್ಳ ತಿವಳಿಚಕ್ರಗಳು ಪ್ರಯಾಣಕ್ಕೆ ನೋಡುವ ತಿಥಿವಾರ ನಕ್ಷತ್ರ, ಯೋಗದಿಕ್ಕುಗಳಫಲ, ಅಂಕಪ್ರಶ್ನೆ, ತಂಡುಲಪ್ರಶ್ನೆ, ಶಿವಚಿಂತಾಮಣಿಪ್ರಶ್ನೆ, ಹಲ್ಲಿಶಕುನಶಾಸ್ತ್ರವು, ಸಂಖ್ಯಾಪ್ರಶ್ನೆ, ಗಂಡ ಹೆಂಡಿರಲ್ಲಿ ಯಾರು ಮುಂಚಿತವಾಗಿ ಮರಣ ಹೊಂದುವದನ್ನು ತಿಳಿಯುವ ಕ್ರಮ. ಕುಸ್ತಿ, ಜೂಜು, ನಾಟಕ, ಚೆಂಡಾಟ ಮುಂತಾದ ಆಟಗಳಲ್ಲಿ ಸೋಲು ಗೆಲುವು ಆಗುವದನ್ನು ತಿಳಿಯುವ ಪ್ರಶ್ನೆ ಹಾಲಿ ನಿನಗೆ ಎಷ್ಟುಮಂದಿ ಹೆಣ್ಣು ಮಕ್ಕಳು ಎಷ್ಟುಮಂದಿ ಗಂಡುಮಕ್ಕಳು ಇರುತ್ತಾರೆಂದು ಹೇಳುವಪ್ರಶ್ನೆ. ನೂತನಗೃಹನಿರ್ಮಾಣಪ್ರಶ್ನೆ, ಗೃಹವಾಸಪ್ರಶ್ನೆ ಒಳ ಸಂಖ್ಯಾಪ್ರಶ್ನೆ. ಈ ದಿವಸ ಮಳೆ ಬರುತ್ತೋ ಇಲ್ಲವೋ ಎಂಬುವದನ್ನು ಹೇಳುವ ಪ್ರಶ್ನೆ. ವೈದ್ಯನಿಂದ ರೋಗ ಗುಣವಾಗುತ್ತದೊ ಇಲ್ಲವೊ ಅದನ್ನು ಹೇಳುವ ಪ್ರಶ್ನೆ. ಇಂಥಾ ನಕ್ಷತ್ರ ಇಂಥಾ ವಾರ ಇಂಥಾ ತಿಥಿ ದಿವಸ ಜ್ವರ ಬಂದರೆ ಎಷ್ಟು ದಿವಸಗಳಲ್ಲಿ ನಿಲ್ಲುತ್ತವೆಂಬುದನ್ನು ಹೇಳುವಪ್ರಶ್ನೆ ಪುತ್ರಾರಿಷ್ಟಪ್ರಶ್ನೆ, ಸಂಭೋಗಪ್ರಶ್ನೆ, ಸ್ಥಲಾನ ಭೂಮಿಯಲ್ಲಿ ನಿಧಿ ನಿಕ್ಷೇಪ ಇರುತ್ತದೋ ಇಲ್ಲವೋ ಇದನ್ನು ಹೇಳುವ ಪ್ರಶ್ನೆ. ಇಷ್ಟೇವರುಷ ಆಯುಷವೆಂದು ಹೇಳುವಪ್ರಶ್ನೆ. ಲಗ್ನಾದಿ ೧೨ ಭಾವಗಳಿಂದ ಹೇಳುವಪ್ರಶ್ನೆ. ಕಾರ್ಯಸಿದ್ಧಿ ನಿರ್ಣಯ ಪ್ರಶ್ನೆ. ಕಾಲವಿಳಂಬ ಕಾರ್ಯಸಿದ್ಧಿ ಪ್ರಶ್ನೆ ೩ ದಿನದಿಂದ ೧೫ ದಿನಗಳವರೆಗೆ ಆಗುವ ಕಾರ್ಯಸಿದ್ಧಿ ಪ್ರಶ್ನೆ. ಧಾತು ಮೂಲ ಜೀವಚಿಂತಾಪ್ರಶ್ನೆ ಮೇಷಾದಿ ೧೨ ರಾಶಿಗಳಲ್ಲಿ ಪ್ರಶ್ನೆಮಾಡಿದಫಲ ಇನ್ನೂ ಅನೇಕ ವಿಧವಾದ ಅನುಭವಕ್ಕೆ ಬರುವ ನವೀನ ಪ್ರಶ್ನೆಗಳನ್ನು ತಾವೇ ಸ್ವತಃ ನೋಡಿಕೊಳ್ಳುವಂತೆ ವಿಶದವಾಗಿ ಬರೆದಿರುತ್ತೆ. ಮತ್ತು ಸ್ತ್ರೀಪುರುಷರ ಹಸ್ತ ಸಾಮುದ್ರಿಕ ಅಂಗಸಾಮುದ್ರಿಕ ಮುಂತಾದ ಸಾಮುದ್ರಿಕ ಶಾಸ್ತ್ರವನ್ನು ಪುರಾತನ ಗ್ರಂಥಾಧಾರದಿಂದ ಶೋಧಿಸಿಹಾಕಿರುತ್ತೆ. ಈ ಸಾಮುದ್ರಿಕ ಶಾಸ್ತ್ರದಲ್ಲಿ ಹಸ್ತದಲ್ಲಿರುವ ರೇಖೆಗಳಿಂದ ಇಷ್ಟೇ ವರುಷ ಆಯುಷ್ಯ, ಮಧ್ಯದಲ್ಲಿ ಬರುವ ಕಂಟಕಗಳವಿಷಯ, ಇಷ್ಟೇ ಜನ ಹೆಂಡತಿಯರು, ಇಷ್ಟೇ ಜನ ಮಕ್ಕಳು, ಇಷ್ಟೇ ಜನ ಅಣ್ಣತಮ್ಮಂದಿರು, ಯೋಗಫಲಗಳು ಮುಂದೆ ಉಂಟಾಗುವ ಅನೇಕ ಫಲಗಳನ್ನು ಚಿಕ್ಕವರು ತಮ್ಮ ಹಸ್ತದ ರೇಖೆಗಳನ್ನು ನೋಡಿ ಹೇಳಲಿಕ್ಕೆ ಬರುವಂತೆ ವಿಶದವಾಗಿ ಬರೆದಿರುತ್ತೆ ಸ್ತ್ರೀಯರ ಅಂಗಸಾಮುದ್ರಿಕೆಯನ್ನು ಬಹುಚೆನ್ನಾಗಿ ಬರೆದು ಇರುತ್ತೆ. ಪ್ರಥಮ ಕನ್ಯೆಯನ್ನು ನೋಡತಕ್ಕವರಿಗೆ ಇದು ತುಂಬಾ ಅನುಕೂಲವು ಮತ್ತು ಜಲಶಿಲ್ಪಶಾಸ್ತ್ರವನ್ನು ಬಹಳ ವಿರಳವಾಗಿ ಅಂದರೆ ಇಂಥಾಭೂಮಿಯಲ್ಲಿ ಇಷ್ಟು ಪುರುಷಪ್ರಮಾಣದೊಳು ಇಂಥಾ ದಿಕ್ಕಿನಿಂದಲೇ ಇಂಥಾ ಜಲವೇ ಬೀಳುತ್ತದೆಂಬುವ ವಿಷಯವನ್ನು ಬರದು ಇರುತ್ತೆ. ಭಾವಿ ತೆಗೆಸುವ ಸಮಯದಲ್ಲಿ ಕೆಳಗೆ ಕಲ್ಲುಬಿದ್ದರೆ ಅದನ್ನು ಸುಲಭವಾಗಿ ಒಡೆಯುವ ಕ್ರಮವನ್ನು ಚನ್ನಾಗಿ ಬರದು ಇರುತ್ತೆ.

ವೈದ್ಯಭಾಗದೊಳು—ಸಮಸ್ತವಿಧವಾದ ಗಿಡಮೂಲಿಕೆಗಳನ್ನು ತರುವ ಕ್ರಮಗಳು. ಎಲ್ಲಾ ವಿಧವಾದ ಜ್ವರ ಹುಟ್ಟುವದಕ್ಕೆ ಕಾರಣಗಳು. ಸಮಸ್ತ ರೋಗಗಳಿಗೆ ಔಷಧ ಮಾಡುವ ಕ್ರಮಗಳು ತಮ್ಮ ಮನೆ ಹಿತ್ತಲಲ್ಲಿಯೂ ಹೊಲಗಳಲ್ಲಿಯೂ ಸುಲಭವಾಗಿ ದೊರೆಯುವ ಗಿಡಮೂಲಿಕೆಗಳನ್ನು ತಂದು ಮನೆಯಲ್ಲಿ ಚಿಕ್ಕ ಬಾಲಕರಿಗೂ ಸ್ತ್ರೀಪುರುಷರಿಗೂ ಉಂಟಾಗುವ ರೋಗಗಳು ಅಂದರೆ—ನೇತ್ರರೋಗ, ನೆಗಡಿ, ಕೆಮ್ಮು, ತಲೆಶೂಲೆ, ಛಳಿಜ್ವರ, ವ್ರಣ, ಅಜೀರ್ಣ, ದೋಷಜ್ವರ, ಇದ್ದಲಿ, ಹೊಟ್ಟೆಶೂಲೆಗಳು, ಎಲ್ಲಾ ವಿಧವಾದ ವಾಯುಶೂಲೆಗಳು, ಕೈಕಾಲು ಟೊಂಕ ಬೆನ್ನುಶೂಲೆ, ವಾತಪಿತ್ತ, ಶ್ಲೇಷ್ಮ, ಜ್ವರಗಳು ಇನ್ನೂ ಅನೇಕ ವಿಧವಾದ ಕುಟುಂಬದಲ್ಲಿ ಉಂಟಾಗುವ ರೋಗಗಳಿಗೆಲ್ಲ ವೈದ್ಯರನ್ನು ಕಾಯದಂತೆ ತಾವೇ ಸ್ವತಃ ಖರ್ಚು ಇಲ್ಲದೆ ಔಷಧವನ್ನು ಮಾಡುವ ಕ್ರಮಗಳನ್ನು ಪಥ್ಯ ವಗೈರೆ ಅನುಪಾನಾದಿಗಳ ಕ್ರಮಗಳನ್ನು ವಿಶದವಾಗಿ ಬರೆದಿರುತ್ತೆ ಕಾಲಾಬು ಮಾರಿಕಾರೋಗಕ್ಕೆ ಸುಲಭವಾಗಿ ಔಷಧ ಮಾಡುವ ಕ್ರಮ ವಿಷಮಜ್ವರ, ಅಜೀರ್ಣ, ವಾಯು, ಕಫರೋಗ, ಆಮಶೌಚ, ಶೀತೋಷ್ಣಭೇದಿ, ಮಲಮೂತ್ರಕಟ್ಟು ಇವೇ ಮುಂತಾದ ರೋಗಗಳಿಗೆ ಔಷಧವನ್ನು ಮಾಡುವ ಕ್ರಮ. ಮಕ್ಕಳಿಗಾಗುವ ಬಾಲಬಟ್ಟೆ, ಹಂದಿಮುಳ್ಳು, ಕಾಮಾಲೆ, ಮೂವಳಿಬಾವು, ಕಟಿರೋಗ, ಸಂದುರೋಗ, ಗಂಟ್ಲು ಚುಟುಗಿ, ಅರವಿ, ದೃಷ್ಟಿದೋಷ, ಮೊಲೆತಿನ್ನದೆ ಇರುವುದು, ಮೆಟ್ಟಿಬೀಳುವುದು ಇವೇ ಮೊದಲಾದ ಚಿಕ್ಕ ಮಕ್ಕಳ ಯಾವತ್ತು ರೋಗಗಳಿಗೆ ಔಷಧಮಾಡುವ ಕ್ರಮ ಹಾವು ಚೇಳಿನ ಔಷಧಕ್ರಮ ಊಟದಲ್ಲಿ ಮದ್ದು ಇಟ್ಟರೆ ಪರಿಹಾರವಾಗುವುದಕ್ಕೂ ಉಸುರುಕಟ್ಟು, ಸ್ತ್ರೀಯರ ಹೊಲೆಕಟ್ಟು, ಗಂಡಮಾಲೆ, ಜಲ್ಲಿಹುಣ್ಣು, ಅರಸುಹುಣ್ಣು, ಕಾಲುಸಂಕವಾಲೆ. ಪಶುಗಳಿಗೆ ಆಗುವ ಹಿರೇರೋಗ, ಗುಂಡಿಗೆಶಲಿ ಕುಂದುರೋಗ ಕರ್ನಮೂಲ, ಹಲಿಗೆಬ್ಬಾಸೆ, ಮುಳುಗಬ್ಬಾಸೆ, ಕಾಲುಜ್ವರ ಬಾಯಿಬ್ಬಾಸೆ ಪಶುಗಳಿಗೆ ಹುಳ ಮುಟ್ಟಿದ್ದಕ್ಕೂ ಇವೇ ಮೊದಲಾದ ಪಶುಗಳ ಸಮಸ್ತ ರೋಗಗಳಿಗೂ ಖಾತ್ರಿಯಾದ ಔಷಧಗಳನ್ನು ಮಾಡುವ ಕ್ರಮಗಳು. ಗುಲ್ಮರೋಗ, ಮೇಹಸಂಬಂಧವಾದ ಸಮಸ್ತ ರೋಗಗಳಿಗೂ ಔಷಧವಮಾಡುವ ಕ್ರಮ ಮೇಹ, ವ್ರಣಚಿಕಿತ್ಸೆ, ಮೇಹಕಾರಕ, ಶಲ್ಯಗಚಿಕಿತ್ಸೆ ಕ್ರಮ. ಧಾತುವೃದ್ಧಿಗೆ ಚಿಕಿತ್ಸೆಗಳು ಕೂಷ್ಮಾಂಡಲೇಹವನ್ನು ಮಾಡುವಕ್ರಮ. ಮದನಕಾಮೇಶ್ವರಿ ಚೂರ್ಣ, ಮದನಾನಂದ, ಚೂರ್ಣ, ಕಾಮವರ್ಧನಚೂರ್ಣ ಇತ್ಯಾದಿ ಚೂರ್ಣಗಳನ್ನು ಮಾಡುವಕ್ರಮಗಳು. ಧಾತುಸ್ತಂಭನ ಗುಳಿಗೆಗಳನ್ನು ಮಾಡುವಕ್ರಮ ಸುಗಂಧತೈಲವನ್ನು ಮಾಡುವಕ್ರಮ. ಬಾದಾಮಿಹಲ್ವ, ಸುಂಠಿರಸಾಯನ, ಮಹಾದ್ರಾಕ್ಷಾದಿರಸಾಯನ, ಸುಂಠಿಮೊರಬ್ಬಾ ಹಸೆಕುಂಠಿ ಮೊರಬ್ಬಾ, ನುಗ್ಗೆಹುವ್ವಿನ ರಸಾಯನ ಇತ್ಯಾದಿ ರಸಾಯನಗಳನ್ನು ಮಾಡುವ ಕ್ರಮಗಳು. ಮುತ್ತು ವಜ್ರ ಮೊದಲಾದ ನವರತ್ನಗಳನ್ನು ಪರೀಕ್ಷೆಮಾಡುವ ಕ್ರಮ ವಜ್ರೋತ್ಪತ್ತಿಕ್ರಮ, ವಜ್ರದಗುಣ, ವಜ್ರ ಪರೀಕ್ಷೆ ಮಾಡುವಕ್ರಮ ಮುತ್ತುಗಳ ಉತ್ಪತ್ತಿಕ್ರಮ ದಾಳಿಂಬೆಹಣ್ಣಿನ ಪರಬತ್ತು, ನಿಂಬೆಹಣ್ಣಿನ ಪರಬತ್ತು, ಗುಲಾಬಿ ಹುವ್ವಿನ ಪರಬತ್ತು, ಮೇಹರಮನ ಪರಬತ್ತು ಇತ್ಯಾದಿ ಪರಬತ್ತುಗಳನ್ನು ಮಾಡುವ ಕ್ರಮಗಳನ್ನು ವಿಶದವಾಗಿ ಬರೆದಿರುತ್ತೇವೆ ಇನ್ನೂ ಅನೇಕವಿಧವಾದ ಅಪೂರ್ವ ವಿಷಯಗಳನ್ನು ಇತರರ ಸಹಾಯವಿಲ್ಲದೆ ತಾವೇ ಸ್ವತಃ ಮೇಲ್ಕಂಡ ಯಾವತ್ತು ವಿಷಯಗಳನ್ನು ಬಹು ಸುಲಭವಾಗಿ ಮಾಡಿಕೊಳ್ಳುವ ವಿಧಾನವನ್ನು ವಿಸ್ತಾರವಾಗಿ ಬರೆದಿರುತ್ತೆ. ಪ್ರತಿ ಒಂದು ವಿಷಯಕ್ಕೂ ಪ್ರಮಾಣ ಶ್ಲೋಕಗಳನ್ನು ಬರೆದಿರುತ್ತೆ. ಈ ಗ್ರಂಥದಲ್ಲಿರುವ ಒಂದೊಂದು ವಿಷಯಕ್ಕೆ ಎಷ್ಟು ಖರ್ಚು ಮಾಡಿದರೂ ಸಿಕ್ಕಲಾರವು. ಇದು ಒಂದು ಗ್ರಂಥವು ಹತ್ತಿರವಿದ್ದರೆ ಒಬ್ಬ ಸಿದ್ಧಾಂತಿ, ಒಬ್ಬ ವೈದ್ಯನು. ಒಬ್ಬ ಮಾಂತ್ರಿಕನು ಇದ್ದಂತೆ ಆಗುತ್ತೆ. ಈ ಗ್ರಂಥವು ಪ್ರತಿಯೊಂದು ಕುಟುಂಬದಲ್ಲಿ ಅವಶ್ಯಕವಾಗಿರಲೆಂದು ಕ್ರಯವನ್ನು ಬಹಳ ಕಡಿಮೆ ಯಾಗಿಟ್ಟಿರುತ್ತೇವೆ. ಈ ಗ್ರಂಥವನ್ನು ನೋಡಿದಮೇಲೆ ನಾವು ಪಟ್ಟಿರುವ ಶ್ರಮವು ತಮಗೆ ಗೋಚರವಾಗದೆ ಇರಲಾರದು ಈ ಗ್ರಂಥವನ್ನು ಯಾವಾಗ್ಯೂ ಹತ್ತಿರವೇ ಇಟ್ಟುಕೊಳ್ಳದೆ ಇರಲಾರರು. ಹಾಗಿಲ್ಲದಿದ್ದರೆ ಹಾನಿ ಮಾಡಬಹುದು. ತೃತೀಯ ಮುದ್ರಣದ ಗ್ರಂಥಗಳೆಲ್ಲವೂ ಪೂರೈಸುವಂತೆ ಆರ್ಡರುಗಳು ಬರುತ್ತಲಿವೆ. ಆಲಸ್ಯಮಾಡಿದರೆ ಪಂಡಿತ ದೊರೆಯಲಾರವು ಆದಕಾರಣ ಗ್ರಂಥಾಪೇಕ್ಷೆವುಳ್ಳವರು ಬೇಗನೆ ತರಿಸಿಕೊಳ್ಳಿರಿ

ಕ್ರಯ ಪ್ರತಿ ಒಂದಕ್ಕೆ ರೂ. 2—0—0.

ಈ ಗ್ರಂಥದ ದೆಸೆಯಿಂದ ಬಹು ಜನರು ಅಪೇಕ್ಷೆಪಟ್ಟು ಶಿಫಾರಸ್ಸು ಪತ್ರಗಳನ್ನು ಬರೆಯುತ್ತಲಿರುವರು. **ಮೈಸೂರು ಗೌರ್ನಮೆಂಟಿನವರು ಈ ಗ್ರಂಥವನ್ನು ಲಂಡನ್ ನಗರದಲ್ಲಿರುವ ಇಂಡಿಯಾ ಆಫೀಸು**

ಲೈಬ್ರರಿಗೆ ಕಳುಹಿಸುವ ದೆಸೆಯಿಂದ ಈ ಕೆಳಗೆ ಬರೆದಿರುವ ಪ್ರಕಾರ ಇಂಗ್ಲಿಷಿನಲ್ಲಿ ಬರೆದಿರುತ್ತಾರೆ.

From

C.H. Yates Esq., Registrar of Authorized Publications in Mysore, Bangalore

No. 42, Dated 24-12-1915.

Sir, Please supply to this office by V. P. post the marginally noted book (ಪುಸ್ತಕ, ಆರೂಢ ಪ್ರಶ್ನಚಂದ್ರಿಕೆ) *for forwardal to the India Offic· Library, London.*

ಸೈಟು ಇರುತ್ತೆ

ಈ ಗ್ರಂಥದ ೩ ನೇ ಮುದ್ರಣದಲ್ಲಿ ಹೊಸದಾಗಿ ಹಾಕಿರುವ ವಿಷಯಗಳು.

ಈ ಗ್ರಂಥದಲ್ಲಿ ಹೇಳಿರುವ ಯಾವತ್ತು ಔಷಧ ಪದಾರ್ಥಗಳ ಪ್ರತಿ ಒಂದು ಗಿಡಮೂಲಿಕೆಗು ಕನ್ನಡ ಸಂಸ್ಕೃತ ತೆನುಗು ಹಿಂದೂಸ್ತಾನಿ ೪ ಭಾಷೆಯಲ್ಲು ಭಾಷಾಂತರಿಸಿ ಪ್ರತಿ ಒಂದು ಭಾಷೆಗು ಪ್ರಚಾರದಲ್ಲಿರುವ ಪ್ರಸಿದ್ಧ ಶಬ್ದಗಳನ್ನು ಬರೆದು ಎಲ್ಲಾ ದೇಶದವರಿಗು ತಿಳಿಯುವಂತೆ ಬಹು ವಿಶದವಾಗಿ ಬರೆದಿರುತ್ತದೆ ಅಂದರೆ ನಾವು ಈ ಮುಂಚೆ ಮದ್ರಾಸ್ ಬೊಂಬಾಯಿ ಎನ್ನಿಸುವ ನೈಜಾಂ ಇಲಾಖ ಆಯಾಯ ಪ್ರದೇಶಗಳಿಗೆ ಹೋಗಿ ಅಲ್ಲಿಯ ವೈದ್ಯಪಂಡಿತರಿಂದಲು ಔಷಧ ಪದಾರ್ಥಗಳನ್ನು ಮಾರುವ ಅನುಭವೀಕರಿಂದಲು ಒಳ್ಳೇ ಪಕೀರರಿಂದಲು ಆಯಾ ಪ್ರದೇಶದಲ್ಲಿ ಕರೆಯುವ ಗಿಡಮೂಲಿಕೆಗಳ ಹೆಸರುಗಳನ್ನು ಕೇಳಿ ಸದರಿ ನಾಲ್ಕು ಭಾಷೆಗಳಲ್ಲಿ ಸೇರಿಸಿ ಬರೆದಿರುತ್ತೇವೆ

ಮತ್ತು ಯಾವರೋಗಕ್ಕಾದರು ಔಷಧಗಳನ್ನು ತಯಾರಿಸುವಾಗ ಆ ಔಷಧ ಯೋಗದಲ್ಲಿ ಹೇಳಿದ ಗಿಡಮೂಲಿಕೆಗಳಲ್ಲಿ ಯಾವುದಾದರು ಪದಾರ್ಥ ದೊರೆಯದಿದ್ದರೆ ಆ ಗಿಡಮೂಲಿಕೆಯ ಸಮಾನ ಗುಣ ಕೊಡುವ ಇನ್ನೊಂದು ವನಸ್ಪತಿಯನ್ನು ಪ್ರತಿಯಾಗಿ ಸೇರಿಸುವ ಮೂಲಿಕೆಗಳನ್ನು ಆಯುರ್ವೇದ ಶಾಸ್ತ್ರ ಸಮ್ಮತವಾಗಿ ಅರಿಯದವರಿಗೂ ಕೂಡ ತಿಳಿಯುವಂತೆ ಬರೆದಿರುತ್ತದೆ

ಔಷಧ ತೂಕಗಳು ಅಂದರೆ ಇಂಗ್ಲಿಷು ತೆನುಗು ಯುನಾನಿ ಸಂಸ್ಕೃತ ಭಾಷೆಗಳಲ್ಲಿ ಹೇಳಿದ ಗ್ರೈನು-ಸ್ಕ್ರೂಪಿಲು-ಡ್ರಾಮ್-ಔನ್ಸು-ಪೌಂಟು-ಕ್ವಾರ್ಟು ಅಡ್ಡಿಗ-ಚಿನ್ನ-ತಲ-ವೀಸೆ-ಗಿದ್ದ-ಸೇರು-ತವ್ವ-ಮಾಡಾಂಗುಪದಂ-ಮಿಷ್ಕಾಲು-ಗುಂಜಿ-ಮೇಷ-ಧಾನ್ಯಕ-ಶಾಣ-ಧರಣ-ಟಂಕ-ಕೋಲ-ಪಲ-ಪರಿಕ್ಷಣ-ಕರ್ಷ-ಶುಕ್ತಿ-ಪ್ರಸೃತ-ಕುಡುವ-ಶರಾವ-ಪ್ರಸ್ಥ-ಆಡಕ-ದ್ರೋಣ-ದ್ರೋಣಿ-ಸೂರ್ಪ-ಗೋಣಿ-ಖಾರಿ-ಅಕ್ಷ-ಬಿಲ್ವ ಇವುಗಳ ತೂಕ ಅಳತೆಗಳನ್ನು ಅಂದರೆ ಎಷ್ಟು ಗುಲಗಂಜಿತೂಕ ಆದರೆ ಈ ಹೆಸರುಗಳು ಆಗುತ್ತವೆ ಅನ್ನುವ ವಿಚಾರವನ್ನು ಕನ್ನಡದಲ್ಲಿ ಅರಿಯದವರಿಗೂ ಕೂಡ ತಿಳಿಯುವಂತೆ ಬರೆದಿರುತ್ತದೆ

ಎಳೇ ಕೂಸುಗಳಿಗೆ ಕಾಹಿಲೆ ಆದ ಸಮಯದಲ್ಲಿ ಕೊಡಲು ಗುಣವಾಗಲಿಲ್ಲವೆಂದು ಮನಬಂದಂತೆ ಕಂಡ ಕಂಡ ಔಷಧಗಳನ್ನು ಅಳತೆ ಪ್ರಮಾಣವಿಲ್ಲದೆ ಉಪಯೋಗಿಸುವುದರಿಂದ ಅಪಾಯವೆ ಅಧಿಕವಾಗುವುದು ಆದಕಾರಣ ಶಿಶುಗಳಿಗೆ ಆಯಾಯ ತಿಂಗಳ ವರ್ಷಗಳ ಮಕ್ಕಳಿಗೆ ಗಿಡಮೂಲಿಕೆ ಸಂಬಂಧ ಔಷಧಗಳು ಇತರ ಔಷಧಗಳು ಯಾವ ಪ್ರಕಾರ ಎಷ್ಟು ಉಪಯೋಗಿಸಬೇಕು ಅನುಪಾನ ಪಥ್ಯಾಪಥ್ಯಗಳ ವಿಚಾರವನ್ನು ಬಹು ವಿಶದವಾಗಿ ಬರೆದಿರುತ್ತದೆ

ಗ್ರಂಥ ದೊರೆಯುವ ವಿಳಾಸ — **ಮೇನೇಜರ್,**

ಭಿಷಗ್ಮಣಿ ಔಷಧಾಲಯ,

ಹರಪನಹಳ್ಳಿ, (ಜಿಲ್ಲಾ ಬಳ್ಳಾರಿ).

ಹರ ಓಂ

ಶ್ರೀ ಗುರು ಕೊಟ್ಟೂರೇಶಾ ರಕ್ಷಿಸು.

ಈ ಗ್ರಂಥದ ವಿಚಾರದಲ್ಲಿ ಕೆಲವು ಮಹಾಜನರು ಬರೆದ ಸದಭಿಪ್ರಾಯಗಳು.

ಬ್ರ॥ ಸ್ವರೂಪಿಗಳಾದ ವೇ॥ ಹೆಚ್ಚಿನ ಹರಪನಹಳ್ಳಿ ಮಠದ ಸಿದ್ಧಾಂತಿ ವಿರುಪಾಕ್ಷಶಾಸ್ತ್ರಿಗಳಿಗೆ ಬರೆಯುವದೇನಂದರೆ — ತಾವು ಕಳುಹಿಸಿದ ಪುಸ್ತಕ ಆರೂಢ ಪ್ರಶ್ನಚಂದ್ರಿಕೆಯನ್ನು ಸಂಪೂರ್ಣವಾಗಿ ಓದಿನೋಡಿದೆನು ಪರಶಿವನ ಸ್ವರ್ಗದಿಂದ ಭೂಲೋಕಕ್ಕೆ ಕಳುಹಿಸಿದಂತಾಗಿರುವುದು. ಕಾರಣವೇನೆಂದರೆ ಸರ್ವರಿಗು ಕಾಲೋಚಿತ ಒದಗುವ ಗ್ರಹಪೀಡ, ರೋಗಬಾಧೆ ಮುಂತಾದ ಸಮಯೋಚಿತ ಸಂಕಟಗಳು ನಿವಾರಣೆ ಆಗುವದಕ್ಕೆ ಉಪಾಯಗಳು ಇರುವದಲ್ಲದೆ ಅಲ್ಪವಿದ್ಯಾವಂತರಿಗೂ ಬಡಯಾಚಕರಿಗೂ ಕುರುಡನಿಗೆ ಕೈ ಹಿಡಿದು ಹಾದಿ ತೋರಿಸಿದಂತೆಯೂ, ಕಿವುಡನಿಗೆ ನಾದ ತುಂಬಿದಂತೆಯೂ, ಮೂಕನಿಗೆ ಸಕ್ಕರೆ ಮೆದಿಸಿ ರುಚಿಕೊಡುವಂತೆ ತುಂಬಾ ಸಹಾಯವಾಗಿರುವದಲ್ಲದೆ ಪರಮಾತ್ಮನೇ ಈ ಗ್ರಂಥರೂಪವಾಗಿ ಭೂಲೋಕಕ್ಕೆ ಬಂದಹಾಗೆ ಆಗಿರುವದು ಈ ಗ್ರಂಥವು ಮನುಷ್ಯನಜೀವನಾಧಾರಕ್ಕೆ ಮೂಲಾಧಾರವಾಗಿರುವದರಲ್ಲಿ ಯಾವಸಂಶಯವೂ ಇರುವದಿಲ್ಲ ಈಶ್ವರನು ತಮ್ಮಲ್ಲಿ ನೆಲೆಗೊಂಡಿರುವನು ಜನಗಳ ಹಿತಕ್ಕಾಗಿ ಇಂಥಾ ಅಪೂರ್ವ ಗ್ರಂಥವನ್ನು ಸೃಷ್ಟಿಸಿದ್ದಕ್ಕಾಗಿ ತುಂಬಾ ಸಂತೋಷಪಡುವೆನು ದೇವರು ತಮಗೆ ಕಲ್ಯಾಣವನ್ನಾದರಲಿ ಇತಿ

ತಮ್ಮ ಶ್ರೀ ವೇದಮೂರ್ತಿಗಳು

ಮೋಗಿನಮಠದ ಕೊಟ್ರಯ್ಯನವರು,

ಮುದ್ದೇಬೀಹಾಳು, ವಿಜಾಪುರ-

ಮ॥ ರಾ॥ ವಿರುಪಾಕ್ಷಶಾಸ್ತ್ರಿಗಳವರಿಗೆ ಬರೆಯುವದೇನಂದರೆ, ಪುಸ್ತಕ ಆರೂಢ ಪ್ರಶ್ನಚಂದ್ರಿಕೆ ತಾವು ಕಳುಹಿಸಿದ್ದು ಸರಿಯಷ್ಟೆ—ಉತ್ತರದೇಶದ ನಮ್ಮ ಮಿತ್ರರು ಈ ಗ್ರಂಥವನ್ನು ನೋಡಬೇಕು ಎಂಬುದಾಗಿ ತೆಗೆದುಕೊಂಡು ಹೋಗಿರುತ್ತಾರೆ ಇದರಲ್ಲಿ ಬಹು ಉಪಯುಕ್ತವಾದ ವಿಷಯಗಳಿರುತ್ತವೆ ಆದ್ದರಿಂದ ಇನ್ನೊಂದು ಪ್ರತಿಯನ್ನು ಜರೂರು ಕಳಿಸಿಕೊಡಿ.

ಮ॥ ರಾ॥ ಮಹಾವಿದ್ವಾನ್

ಹೊಸದುರ್ಗದ ಶ್ರೀನಿವಾಸರಾಘವಾಚಾರ್ಯರು,

ಚಾಮರಾಜಮೊಹಲ್ಲಾ, ಸೋನಾರ್ ಬೀದಿ, ಮೈಸೂರು.

ವೇದಮೂರ್ತಿಯವರ ಸನ್ನಿಧಿಗೆ ಬರೆಯುವದೇನಂದರೆ, ತಾವು ಕಳುಹಿಸಿದ ಆರೂಢಚಂದ್ರಿಕೆಯಲ್ಲಿ ಮಕ್ಕಳ ಕಾಯಿಲೆಗೆ ಔಷಧ ವಿಚಾರಗಳು ಸಮಸ್ತ ಔಷಧಿಗಳು ಮುಂತಾದ ಅನೇಕ ಉಪಯುಕ್ತ ವಿಷಯಗಳಿರುತ್ತವೆ ಆದರಿಂದ ನಮಗೆ ಬಹಳ ಅನುಕೂಲವಾಗಿರುತ್ತದೆ ಆದ್ದರಿಂದ ಇನ್ನೊಂದು ಪ್ರತಿ ನಮ್ಮ ವರಿಗೆ ಬೇಕು ದಯವಿಟ್ಟು ಆರ್ಡರು ಕಳುಹಿಸಬೇಕೆಂದು ಬೇಡುತ್ತೇನೆ ಮಹಾಸ್ವಾಮಿ

ಮ॥ ರಾ॥ ನೆನಿವಾಳದ ಸಣ್ಣರುದ್ರಪ್ಪನವರು,

ನಾಯಕನಹಟ್ಟಿ, ಚಿತ್ರದುರ್ಗ.

ಸಿದ್ಧಾಂತಿ ವಿರುಪಾಕ್ಷಶಾಸ್ತ್ರಿಗಳು ಪಂಚಕ್ಷೇತ್ರ ಜ್ಯೋತಿಷ ಭಿಷಗ್ಮಣಿ ಔಷಧಾಲಯ, ಹರಪನಹಳ್ಳಿ, ಇವರಿಗೆ ಆಯಾ ತಮ್ಮಿಂದ ರಚಿಸಲ್ಪಟ್ಟ ಪುಸ್ತಕ ಆರೂಢ ಪ್ರಶ್ನಚಂದ್ರಿಕೆಯನ್ನು ಸಂಪೂರ್ಣ ಓದಿನೋಡಿದೆನು ಅದರಲ್ಲಿ ಪ್ರತಿ ಒಬ್ಬರಿಗೂ ಬಹು ಉಪಯೋಗಕರವಾದ ವಿಷಯಗಳಿರುವದಲ್ಲದೆ ಇದು ಕುಟುಂಬ ಸಂಜೀವಿನಿ ಎಂಬುವುದಕ್ಕೆ ಯಾವ ಸಂಶಯವು ಇರುವುದಿಲ್ಲ ನನಗೆ ಅತಿ ಅಗತ್ಯವಿರುವದರಿಂದ ಹಳೆ ಪುಸ್ತಕವನ್ನಾದರೂ ಸರಿಯಾದ ರವಾನಿಸಬೇಕು ಪ್ರೀತಿ ತುಂಬಾ ಇರಲಿ

ತಮ್ಮ ವಿಧೇಯ,

ಮ॥ ರಾ॥ ಸರಿಕರ ರಾಮಚಂದ್ರಯ್ಯನವರು,

ಕುಂದಾಪುರ, ಮಂಗಳೂರು ದ—ಕನ್ನಡಾ.

ವೇ॥ ಭಿಷಗ್ಮಣಿ ಔಷಧಾಲಯ, ಇವರಿಗೆ ಅಯ್ಯ, ನಾನು ನನ್ನ ಸ್ನೇಹಿತರಲ್ಲಿ ಇದ್ದ ಒಂದು ಆರೂಢಪ್ರಶ್ನಚಂದ್ರಿಕೆಯನ್ನು ನೋಡಿ ಸಂತೋಷಪಟ್ಟೆನು ಅದರಲ್ಲಿ ಪ್ರಶ್ನವಿಚಾರಗಳು, ಯಂತ್ರಮಂತ್ರಗಳು, ಸುಲಭವಾಗಿ ತಯಾರಿಸಿ ಉಪಯೋಗಿಸುವ ಒಳ್ಳೇ ಔಷಧ ವಿಚಾರಗಳು ಇರುತ್ತವೆ ಆದಕಾರಣ ನನಗೊಂದು ಪ್ರತಿ ದಯವಿಟ್ಟು ಕಳ್ಸಿಕೊಡಿ

ಮ॥ ರಾ॥ ಪಕ್ಷಲ್ಲೈನಿನಲ್ಲಿರುವ

ಶಿ. ಗಂಗಪ್ಪಶೆಟ್ಟಿಯವರು, ಮೈಸೂರು.

ಶ್ರೀ ಮ॥ ಮ॥ ವಿರುಪಾಕ್ಷಶಾಸ್ತ್ರಿಗಳು ಭಿಷಗ್ಮಣಿ ಔಷಧಾಲಯ, ಹರಪನಹಳ್ಳಿ, ಇವರಿಗೆ, ದಯಾನಿಧಿಗಳೆ ತಮ್ಮ ಆರೂಢ ಪ್ರಶ್ನಚಂದ್ರಿಕೆಯನ್ನು ನೋಡಿ ಮನಸ್ಸಿಗೆ ಬಹಳ ಆನಂದವಾಯ್ತು ಇದರಲ್ಲಿ ಪ್ರತಿಯೊಬ್ಬರಿಗೂ ಬೇಕಾದ ಅನುಕೂಲ ವಿಷಯಗಳು ಇರುತ್ತವೆ ಕಾರಣ ಹೊಸಪ್ರತಿ ಇನ್ನೊಂದು ದಯವಿಟ್ಟು ಕಳ್ಸಿಕೊಡಿ

ಮ॥ ರಾ॥ ಈ. ಹನುಮಂತಪ್ಪನವರು,

ಹುಲಗೂರು, ಬಂಕಾಪುರ, ಧಾರವಾಡ.

ವೇ॥ ಬ್ರ॥ ಶ್ರೀ॥ ಸಿದ್ಧಾಂತಿ ವಿರುಪಾಕ್ಷಶಾಸ್ತ್ರಿಗಳು ಭಿಷಗ್ಮಣಿ ಔಷಧಾಲಯ ಹರಪನಹಳ್ಳಿ, ಇವರಿಗೆ ಸ್ವಾಮಿ ಒಳಗಡೆ ತಮ್ಮಲ್ಲಿಂದ ಒಂದು ಪ್ರತಿ ತರಿಸಿದ್ದೆನು ಈಗ ಅದು ಎಲ್ಲಿಯೋ ಹೋಗಿಯುರುತ್ತದೆ ದೊರೆಯುಲಿಲ್ಲ ಅದರಲ್ಲಿ ಪ್ರಶ್ನಗಳು ವೈದ್ಯದ ವಿಚಾರದಲ್ಲಿ ರೋಗಗಳಿಗೆ ಔಷಧ ಉಪಚಾರ

ಗಳು ಬಹಳ ಉತ್ತಮ ಇದ್ದವು. ಆ ಪುಸ್ತಕ ನನಗೆ ಬಹಳ ಆಗತ್ಯವಿರುವದರಿಂದ [illegible] ದಯವಿಟ್ಟು ಒಂದು ಪ್ರತಿ ಆರೋಗ್ಯ ಚಂದ್ರಿಕೆಯನ್ನು [illegible] ಕಳಿಸಿರಿ. ತಪ್ಪು [illegible]

ಮ|| ಬಸವನಗೌಡರು, ಲಿಂಗನಗೌಡರು, ಪಾಟೀಲು ಇವರು

ಹೂಲಿಹಳ್ಳಿ, ಹಾನೇರಿ, ಧಾರವಾಡ.

[illegible] ಇವರಿಗೆ [illegible] ಆರೋಗ್ಯ ಚಂದ್ರಿಕೆಯನ್ನು [illegible] ಬಹಳ ಆನಂದಕರವಾಯಿತು [illegible] ಜನಗಳಿಗೆ ಉಪಯೋಗಕರವಾದ [illegible] ಬಹಳ ಆನಂದವಾಯಿತು. ಇತಿ ತಮ್ಮ

ಮ|| ರಾ|| ಪಂಡಿತರು ಖಲಂದರುಸಾಹೇಬರು ಬೂದಿಹಾಳು,

ಚಿಕ್ಕನಾಯಕನಹಳ್ಳಿ, ತುಂಕೂರು.

[illegible]

ಮ|| ರಾ|| ಚಂದ್ರಗೌಡ್ರು ರಾಮನಗೌಡ್ರು

ಕೆನ್ನೂರಿಕರ ಪಾಟೀಲ್, ಗದಗು, ಧಾರವಾಡ

[illegible] ಇತಿ ತಮ್ಮ

ಮ|| ರಾ|| ರಾ|| ಸ್ವಾ|| ಮಾ|| ಕೆ. ರುದ್ರಯ್ಯನವರು,

ಕಂಬಗೆರೆ, ನೆಲಮಂಗಲ, ಬೆಂಗಳೂರು.

[illegible] ಇತಿ ತಮ್ಮ

ಎಂ. ರಂಗಪ್ಪ,

ಪಡಿಗೇನಹಳ್ಳಿ, ದೇವನಹಳ್ಳಿ, ಬೆಂಗಳೂರು.

[illegible]

ವಿಷಯಗಳಿಗೂ ಅನೇಕ ಉಪಯೋಗಕರವಾದ ವಿಷಯಗಳು ಇರುವುದರಿಂದ [illegible] ಬಹಳ ಸಂತೋಷಪಟ್ಟೆವು. ಇತಿ ತಮ್ಮ.

ಮ|| ರಾ|| ಜಿ. ವೆಂಕಟಸ್ವಾಮಿನಾಯುಡರವರು,

ವೆಂಕಟರಾಜಹೌಸ್, ಅನೇಗೊಂದಿ ಸ್ಟೇಟು.

[illegible]

[illegible] ಆರೋಗ್ಯ ಚಂದ್ರಿಕೆಯನ್ನು [illegible]

ಮ|| ರಾ|| ಇಂದ್ರಪ್ಪನವರು. ಕೇಶವ ಉಪಾಧ್ಯಾಯ

[illegible] ಇವರು [illegible], ಬೆಳಗಾಂವ.

[illegible] ಮೋಸೇಜರ್ ಭಿಷಗ್ಗಣಿ ಔಷಧಾಲಯ [illegible] ಇತಿ ತಮ್ಮ.

ಮ|| ರಾ|| ರಾ|| ಶಂಕರರಾವ ನಾಡಿಗೇರ,

ಸಿರಾಳಕೊಪ್ಪ, ಶಿವಮೊಗ್ಗ

[illegible] ಇತಿ ತಮ್ಮ

ಮ|| ರಾ|| ರಾ|| ರಾಮಾನುಜಚಟ್ಟಿಯವರು,

ಇನಾಂದಾರರು, ಸುರಪುರ, ಗುಲ್ಬರ್ಗ.

[illegible] ಇತಿ ತಮ್ಮ

ಮ|| ರಾ|| ರಾ|| ರಂಗನಾಥಶೇಷೋ ಕುಲಕರ್ಣಿಯವರು,

ಚಿಕ್ಕಬೇವನೂರು, [illegible] ಬಿಜಾಪುರ

[illegible] ಇತಿ ತಮ್ಮ

ಮ|| ರಾ|| ಹೆಚ್. ಕೃಷ್ಣಾಚಾರ್,

[illegible] ಹೌಸ್ ಡೋರ್ ನಂಬರ್ [illegible]

ಶಿವಮೊಗ್ಗ [illegible]

[illegible]

ವಿಳಾಸ—ಮೋಸೇಜರ್, ಭಿಷಗ್ಗಣಿ ಔಷಧಾಲಯ,

ಹರಪನಹಳ್ಳಿ (ಜಿಲ್ಲಾ ಬಳ್ಳಾರಿ)

If not delivered please return to "Kodagu Office, Mercara"
Reg. No. M. 1550.

ಕೊಡಗು.

ವಾರ್ಷಿಕ ಚಂದಾ ರೂ. ೩-೮-೦

ಸತ್ಯೇನ ಧಾರ್ಮಿಕ ... ನೀತಿ ಪ್ರಯುಕ್ತತಃ । ... ಸುಸ್ಥಿರಾ ರಾಜ್ಯಸಂಪದ ॥

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವುದು

" ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೪] ಕೊಡಗು, ಸನ್ ೧೯೨೪ ನೇ ಇಸವಿ ಮಾರ್ಚ್, ತಾರೀಖು ೭ ನೆಯ ಶುಕ್ರವಾರ. [ಸಂಚಿಕೆ ೧

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನ್ನಡ ಪ್ರಿಂಟಿಂಗ್ ರೂಲಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೆ ಇದ್ದರೂ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ಬಹಳ ಜಾಗ್ರತೆಯಾಗಿಯೂ ಸುಲಭದಾರಿಯಲ್ಲಿಯೂ ಮಾಡಿ ಕೊಡುತ್ತೇವೆ.

Srinivas Electric Press,
MYSORE.

The Saraswathi Publishing Company
ಶಾರದಾಗ್ರಂಥಮಾಲಾ.

ಈ ಗ್ರಂಥಮಾಲೆಯಲ್ಲಿ ಭಾರತಮಹಿಳೆಯರ ಅನೇಕ ವಿಷಯಗಳ ವಿಷಯಗಳನ್ನು ಬೋಧಿಸತಕ್ಕ ಗ್ರಂಥಗಳು ಅನೇಕ ಪ್ರಕಟಿಸಲ್ಪಡುವುವು ಇದುವರೆಗೆ ಪ್ರಕಟವಾಗಿರುವ ಗ್ರಂಥಗಳು :—

		ರೂ	ಆ	ಪೈ
1	ಪ್ರಿಯಂವದೆ (ವರದಕ್ಷಿಣೆಯಿಂದಾಗುವ ಕಷ್ಟ ನಷ್ಟಗಳು)	0	6	0
2	ಸ್ನೇಹಲತೆ (ವಂಗಕನ್ಯೆಯ ಚರಿತ್ರೆ)	0	10	0
3	ನಿಭಾಗ್ಯವನಿತೆ (ಹಿಂದೂವಿತಂತುವಿನ ಶೋಚನೀಯಾವಸ್ಥೆ) . .	0	12	0
4	ನಿರ್ಮಲೆ (ಸಾಮಾಜಿಕ ಸುಧಾರಣೆಯ ನಾಟಕ) ...	0	6	0
4	ಹಿಂದೂಭಾಗ್ಯೋದಯ (ನಾಟಕ) .	0	4	0
5	ಪೂರ್ವನಿಷ್ಠಾಭಂಗ (ನಾಟಕ) . .	0	4	0
6	ಹುಡುಗರ ಹುಡುಗಿಯರು (ನಾಟಕ)		4	0

ಈ ಎಲ್ಲಾ ಕಾದಂಬರಿಗಳನ್ನೂ ಒಟ್ಟಾಗಿ ... ಒಟ್ಟು ರೂಪಾಯಿ 2—12—0 ಗೆ ವಿ. ಪಿ. ... ಕಳುಹಿಸಲ್ಪಡುವುದು. ಪ್ರಿಂಟಿನಲ್ಲಿರತಕ್ಕ ಗ್ರಂಥಗಳು—ಲಲಿತ ಶೋಣಿ ಪಬ್ಲಿಕ

ಸರಸ್ವತಿ.

ಉತ್ತಮವರ್ಗದ ಶ್ರೇಷ್ಠವಾದ ಕನ್ನಡ ಮಾಸಪತ್ರಿಕೆ

ನಾಲ್ಕನೆಯ ಸಂಪುಟದ ಪ್ರಥಮ ಸಂಚಿಕೆಯು ಈ ತಿಂಗಳ ಮೊದಲನೇ ತಾರೀಖಿನಿಂದ ಪ್ರಾರಂಭವಾಗಿರುವುದು. ಇದರಲ್ಲಿ ಬಾಲಕ ಬಾಲಕಿಯರಿಗೂ ಸ್ತ್ರೀಯರಿಗೂ ತಿಳಿಯುವಂತಹ ಸುಲಭವಾದ ಶೈಲಿಯಲ್ಲಿ ಸ್ವಾರಸ್ಯವಾದ ನಾಟಕ ಕಾದಂಬರಿಗಳೂ ಮತ್ತು ಅನೇಕ ಉತ್ತಮ ಲೇಖನಗಳೂ ಪ್ರಕಟಿಸಲ್ಪಡುವವು. ಹೊಸದಾಗಿ ಚಂದಾದಾರರಾಗತಕ್ಕವರು ಚಂದಾಹಣವನ್ನು ಮುಂಗಡವಾಗಿ ಕಳುಹಿಸತಕ್ಕದ್ದು. ಶಾರದಾ ಗ್ರಂಥಮಾಲೆಯ ಪ್ರಕಟನೆಯಲ್ಲಿ ಒಂದು ಪುಸ್ತಕವು ಬಹುಮಾನವಾಗಿ ಕೊಡಲ್ಪಡುವುದು. ಇಷ್ಟಪಟ್ಟವರಿಗೆ ಮಾದರಿ ಸಂಚಿಕೆಯು ಉಚಿತವಾಗಿ ಕಳುಹಿಸಲ್ಪಡುವುದು.

ವಾರ್ಷಿಕ ಚಂದಾ ರೂಪಾಯಿ 3—0—0 ಮಾತ್ರ.

SARASWATHI PUBLISHING Co.,
Post Box No. 5[illegible] Bangalore City

HEALTH IS WEALTH

WANTED all to improve health strength and vitality and thus save our nation from physical degeneracy. Send half-anna stamp and get 13 specimen photographs with full particulars from

Director Physical Culture,
P.O. Basavanagudi,
BANGALORE CITY

For your requirements of high grade Arms, Ammunition, Wine and Spirits,

APPLY TO:—

Mc. DOWELL & Co., Ltd.,
24—8 **MERCARA.**

ಮುಂಗ್ಲರ್ ಇನಾಮು ಕೊಡ್ ಸಂತೆಚಾಯಿ ಉಳ್ಳ ಸಾಮಾನ್ ಸ್ಪೆನ್ಸರ್ ಕಂಪನಿಕ್ಕ್ ಪುದಿಯಮಾಂಯುತ್ ಬಂದಿತ್.

SPENCER & Co., Ltd.,
Mercara and Pollibetta, Coorg } [24—8]

BUMPER CROPS

Always follow application of our fertilisers

ಪಷ್ಟ ... ಕಾಫಿ ...

... ಬೇಕಾದರೆ ... ಪಳ್ಳೆ ಕರುಗಳನ್ನು ...

ನಮ್ಮ ಕಾರ್ಖಾನೆಯ ... ಹೊಸ (fresh) ...

Siddeek ... Works
21—21 MERCARA

ಜೀವವಿಮೆ

ಸಾಸಿರಾರು ಕುಟುಂಬಗಳಲ್ಲಿ ಸಂಪಾದನೆಯ ಯಜಮಾನನು ಮೃತಪಟ್ಟರೆ ಉಂಟಾಗುವ ಬಾಧೆ ಹೊಂದದಂತೆ ... ಜೀವವಿಮೆ.

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬದ ಜೀವನಾಧಾರಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ.

ಅತಿ ಕ್ಷಮತೆ, ದರದಲ್ಲಿ ಯಾವ ಲೋಪವೂ ಇಲ್ಲದಂತೆ ಕ್ಷಿಪ್ರದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ಮೈಸೂರು ಸರಕಾರದ ಭದ್ರತೆಯುಳ್ಳ ಜೀವವಿಮೆ ಕಂಪೆನಿ.

ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ಸಾಲವಾಗಿ ಹಣವನ್ನು ಒದಗಿಸಿ ... ಗಳನ್ನೂ ಕೊಂಡು ಕಟ್ಟಿ ದೇಶದ ಆರ್ಥಿಕ ಸ್ಥಿತಿಯನ್ನು (Economic Condition) ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೆ!

ಲೈಫ್ ಇನ್ಸೂರೆನ್ಸ್ ಆಕ್ಟಿನ ಮೇರೆ ಇಂಡಿಯಾ ಗವರ್ನಮೆಂಟ್ ಸೆಕ್ಯೂರಿಟಿಗಾಗಿ ಸಲ್ಲಬೇಕಾದ 12 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿಗೆ ಸಲ್ಲಬೇಕಾದ 1 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಇಂಪೀರಿಯಲ್ ಬ್ಯಾಂಕ ಆಫ್ ಇಂಡಿಯಾ ಬ್ಯಾಂಕಿನ ಮದ್ರಾಸಿನ ಶಾಖೆಯಲ್ಲು 1 ಲಕ್ಷ ಗವರ್ನಮೆಂಟ್ ಆಫ್ ಇಂಡಿಯ ಸೆಕ್ಯೂರಿಟಿಯನ್ನು ಅರ್ಧಲಕ್ಷ ಮೈಸೂರು ಸೆಕ್ಯೂರಿಟಿಯನ್ನು ಡಿಪಾಜಿಟ್ಟಾಗಿ ಇಟ್ಟಿರುತ್ತೆ. ಬಾಕಿ ಒಂದು ಲಕ್ಷ ಇಂಡ್ಯಾ ಗವರ್ನಮೆಂಟ್ ಸೆಕ್ಯೂರಿಟಿಗೆ ಬ್ಯಾಂಕ್ ಮೂಲಕ ಏರ್ಪಾಡು ಮಾಡಿರುತ್ತೆ.

ಬಿ. ಎಂ. ಅರಾಧ್ಯ,
ರಿಲೈಫ್ ಅಂಡ್ ಮ್ಯಾರೇಜ್ ಅಫೀಸ್ ಮಡಿಕೇರಿ.

ಮಲಿಯಾಳ್ ವೈದ್ಯಶಾಲಾ

ಮಲಬಾರಿನ ನಂಬೀಶನ್ ಮತ್ತು ಕಂಪೆನಿ ಎಂಬ ಆಯುರ್ವೇದ ವೈದ್ಯಶಾಲೆಯಲ್ಲಿ ಒಂದು ಶಾಖೆಯು ವೀರರಾಜೇಂದ್ರಪೇಟೆಯಲ್ಲಿ ತೆರೆದಿರುತ್ತೆ. ಇಲ್ಲಿ ಯಾವವಿಧದ ವ್ಯಾಧಿಯುಳ್ಳವರಾಗಿದ್ದರೂ ಪಂಡಿತರಿಂದ ಪರೀಕ್ಷಿಸಿ ಔಷಧಿ ಕೊಟ್ಟು ಗುಣಪಡಿಸಲ್ಪಡುತ್ತೆ. ಔಷಧದ ಚಾರ್ಜು ಬಹಳ ಕಡಿಮೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು.

ನಾರಾಯಣನಂಬೀಶನ್,
ಆಯುರ್ವೇದ ವೈದ್ಯರು,
52—20 ವೀರರಾಜೇಂದ್ರಪೇಟೆ

ಪ್ರಕಟನೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್.

ಕೋ ಅಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ

	ರೂ.
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	6,820
ಜಮಾ ಬಂದ ಠೇವಣಾತಿ	47,990

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರುಷ ವಾಯಿದೆ ಅಥವಾ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 6—4—0 ರ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಅಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು.	ಟ್ರೆಜರ್.
ಕೊಡಂದೆರ ಕುಟ್ಟಯ್ಯನವರ ರಾಯ್ ಬಹದ್ದೂರ್	ಎಂ. ಭುಜಂಗರಾಯರು, ಬಿ. ಎ. ಬಿ. ಎಲ್

ಸೆಕ್ರೆಟರಿ.
ಸಿ. ಯನ್. ವೆಂಕಪ್ಪಯ್ಯನವರು ಬಿ. ಎ. ಬಿ. ಎಲ್.

ತಾರೀಖು 22—2—1924.

"ಕೊಡಗು"

೧೯೨೪ನೇ ಇಸವಿ ಜೂನ್ ತಾ|| ೬ನೇ ಶುಕ್ರವಾರ.

ಸ್ವೀಕಾರ.

ಈ ಸಂಚಿಕೆಯೊಡನೆ ನಮ್ಮ ನಾಲ್ಕನೇ ವರ್ಷವು ಪ್ರಾರಂಭವಾಗುತ್ತೆ. ಆದ್ದರಿಂದ ಇದರಲ್ಲಿ ನಾವು ಏನೇನುಮಾಡಿದ್ದೇವೆ ಏನೇನು ಮಾಡಲಿಲ್ಲ ಇನ್ನು ಮುಂದೆ ಏನೇನುಮಾಡಲು ಯೋಚಿಸಿದ್ದೇವೆ ಎಂಬ ಇತ್ಯಾದಿ ವಿಷಯಗಳನ್ನು ಬರಕೊಳ್ಳುವದು ಪೂರ್ವಪದ್ಧತಿಯಾಗುತ್ತಾ ಬಂದಿದೆ.

ಕಳೆದವರ್ಷ ಆಡಳಿತದ ಸುಧಾರಣೆಯಲ್ಲಿ ನಿರಾಶರಾಗಿ ಬರಕೊಂಡಿದ್ದೆವು. ಈ ವರ್ಷ ಕೌನ್ಸಿಲ್ ದೊರೆತಿದೆಯೆಂಬ ಸಂತೋಷವನ್ನು ಹೇಳಿಕೊಳ್ಳಬಹುದಾಗಿದೆ ಈ ಕೌನ್ಸಿಲ್ ದೊರೆಯಲು ನಮ್ಮ ಸೇವೆಯಿಂದ ಬಹುಮಟ್ಟಿಗೆ ಪ್ರಯೋಜನವಾಗಿದೆಯೆಂತ ಧೈರ್ಯದಿಂದ ಹೇಳುತ್ತೇವೆ ನಮ್ಮ ಜನ್ಮವಾಗುವ ಮುಂಚೆಯೇ ಈ ಸುಧಾರಣೆ ಪಡೆಯಲು ದೇಶದಲ್ಲಿ ಚಳವಳವೆದ್ದಿದ್ದದ್ದು ನಿಜ ಆದರೆ ಈ ಚಳವಳಕ್ಕೆ ಎಷ್ಟರ ಮಟ್ಟಿಗೆ ಬೆಂಬಲವಿದೆಯೆಂಬದು ಅಧಿಕಾರಿಗಳಿಗೆ ತಿಳಿದದ್ದು ಈ ನಮ್ಮ ಪತ್ರದ ಒದವಣಿಗೆಯಿಂದ ಎಂತ ಹೇಳಬಹುದು ಮಾತ್ರವಲ್ಲ ಸಂಘದ ನಿರಂತರ ಚಳವಳವು ಕೌನ್ಸಿಲನ್ನು ಪಡೆಯಲು ಕಾರಣವೇ ಆದರೂ ಸಂಘದ ಚಳವಳವು ಸರ್ವರಿಗೂ ತಿಳಿಯಲಿಕ್ಕೂ ಸಂಘಕ್ಕೆ ಜೀವುಕಳೆ ತುಂಬುವಂತೆ ಮಾಡಲಿಕ್ಕೂ ನಾವು ಬಹಳಮಟ್ಟಿಗೆ ಸಹಕರಿಸಿದ್ದೇವೆ

ಸಂಘಕ್ಕೆ ಮೊದಲಿನವರ್ಷದಲ್ಲಿ ಆಗಿದ್ದ ಅಗೌರವವು ಈ ವರ್ಷದಲ್ಲಿ ಮರೆಸಿಹೋಗಿ ಸಂಘದ ಪ್ರತಿನಿಧಿಗಳು ವೈಸ್‌ರಾಯ್‌ಪ್ರಭುಗಳ ಭೇಟಿಗೆ ಹೋದರು ಈ ಸಾಧನೆಯು ನಮ್ಮಿಂದ ಆಯಿತೆಂತ ನಾವು ಹೇಳುವದಿಲ್ಲ. ಆದರೆ ಸಂಘಕ್ಕೆ ಆದ ಮರ್ಯಾದೆಯು ನಮಗೆ ಆಯಿತೆಂತಲೇ ನಮ್ಮ ಅಭಿಪ್ರಾಯ ಯಾಕೆಂದರೆ ಸಂಘದ ಉದ್ದೇಶವೂ ನಮ್ಮ ಉದ್ದೇಶವೂ ಒಂದೇ ಆಗಿದೆ ಅದು ದೇಶದ ಸಂಸ್ಥೆಯಾಗಿದೆ ಇದೂ ದೇಶದ ಸಂಸ್ಥೆಯಾಗಿದೆ ಮತ್ತು ಸಂಘದ ಉದ್ದೇಶಗಳಿಗೆ ಸಹಕಾರಿಯಾಗಿರುವದು ನಮ್ಮ ಕಾರ್ಯಕ್ರಮದಲ್ಲಿ ಒಂದಾಗಿದೆಯೆಂತ ನಮ್ಮ ಜನ್ಮಪತ್ರಿದಾಗಲೇ ಹೇಳಿಕೊಂಡಿದ್ದೇವೆ. ಈ ಕೆಲಸವನ್ನು ಸಂಪೂರ್ಣಮನಸ್ಸಿನಿಂದ ಮಾಡುತ್ತಲೇ ಬಂದಿದ್ದೇವೆ ಆದ್ದರಿಂದ ಸಂಘದ ಹೆಮ್ಮೆಯಲ್ಲಿ ನಾವು ಭಾಗಿಗಳಾಗಲು ಅರ್ಹರಾಗಿದ್ದೇವೆ

ಒಗ್ಗಟ್ಟಿಗಾಗಿ ಪ್ರಯತ್ನಮಾಡಿ ಪ್ರಯೋಜನವಾಗಿದೆಯೆಂತಲೂ ಆದರೂ ಇನ್ನೂ ಕೆಲಸ ಬಾಕಿಯಿದೆಯೆಂತಲೂ ಕಳೆದವರ್ಷ ಬರಕೊಂಡಿದ್ದೆವು ಈಗ ಆಗಿಹೋದ ವರ್ಷದಲ್ಲಿ ಒಗ್ಗಟ್ಟಿನ ನಮ್ಮ ಧ್ಯೇಯವನ್ನು ನಾವು ಒಂದುನಿಮಿಷವಾದರೂ ಮರೆತಿರಲಿಲ್ಲ ಪ್ರಕಟಣೆಗಳನ್ನು ಹಾಕುವದರಲ್ಲಾಗಲೀ ಬಾತ್ಮಿಗಳಿಗೆ ಎಡೆಕೊಡುವದರಲ್ಲಾಗಲೀ ಸಂಪಾದಕೀಯ ಲೇಖನಗಳಲ್ಲಾಗಲೀ ಒಡಕಿಗೆ ಎಡೆಕೊಡಲಿಲ್ಲವೆಂತ ಮನಸ್ಸಾಕ್ಷಿಗೆ ವಿರೋಧವಿಲ್ಲದೆ ಹೇಳಬಹುದು ಈ ನಮ್ಮ ಕೆಲಸದಿಂದಲೋ ಅಥವಾ ದೈವಕೃಪೆಯಿಂದಲೋ ಪಂಗಡಗಳ ಹೋರಾಟವೇನೂ ಈ ವರ್ಷವಿರಲಿಲ್ಲ ಪಂಗಡವಾಗಬಹುದಾಗಿದ್ದಂಥ ಕೌನ್ಸಿಲ್ ಚುನಾವಣೆಯೇ ಈ ವರ್ಷದಲ್ಲಿ ನಡೆಯಿತು ಆ ಚಳವಳದಲ್ಲೂ ಸಹ ಪಂಗಡಗಳಾಗಿ ಹೋರಾಟವಿರಲಿಲ್ಲವೆಂಬದರಿಂದ ತುಂಬಾ ಸಂತೋಷಪಡಬಹುದು. ಹಿಂದೂ ಮುಸಲ್ಮಾನ ಭೇದವು ಬಲವಾಗಿಹೋಗುತ್ತೋ ಎಂಬ ಭಯವಿತ್ತು ಆದರೆ ಅದೂ ಸಹ ಬೇರೂರಲಿಲ್ಲ. ಇನ್ನು ಮುಂದೆ ದೇಶಸೇವಕರು ತಮ್ಮ ಕೆಲಸಗಳನ್ನು ಎಲ್ಲಾ ಜಾತಿಯ ಜನರಿಗೂ ಪ್ರಯೋಜನವಾಗುವಂತೆಯೇ ಮಾಡಬೇಕಾದದ್ದು ಆವಶ್ಯವಿದೆ. ಸಂಘದಲ್ಲಿ ಮುಸಲ್ಮಾನರಿಗೆ ಮಾತ್ರ ಲಗಾವಾಗುವ ಠರಾವುಗಳು ಪಾಸಾಗಿವೆ ಕೌನ್ಸಿಲಿನಲ್ಲೂ ಹಿಂದುಳಿದ ಪಂಗಡಗಳಾದ ಪಂಚಮ ಎರವ ಕುರುಬರ ಸಹಾಯಕ್ಕಾಗಿ ಠರಾವುಗಳು ಪಾಸಾಗಿವೆ ಇದರಿಂದ ಕೌನ್ಸಿಲಿಗೆ ದೇಶದ ಪ್ರತಿನಿಧಿಗಳಾಗಿಹೋದ ಸೇವಕರೂ, ಮತ್ತು ಸಂಘವೂ ಸಹ ಕೋಮುವಾರು ಭೇದಮಾಡದೆ ಇರುವದು ಬಹಳ ಸಂತೋಷಕಾರ್ಯವೇ ಸರಿ ಇದರಂತೆ ಸಮುದಾಯದ ಎಲ್ಲಾ ಕಾರ್ಯಗಳಲ್ಲೂ ಸರ್ವರೂ ಸಹೋದರಭಾವದಿಂದ ವರ್ತಿಸುವಂತೆ ಮಾಡಲು ಇನ್ನು ಮುಂದೆ ಸಹ ಪ್ರಯತ್ನಿಸುತ್ತಿರುತ್ತೇವೆ.

ಮಧ್ಯಪಾನಸೇವನೆಯ ವಿರೋಧವಾಗಿ ನಾವು ಎಂದಿನಂತೆಯೇ ಕೆಲಸಮಾಡುತ್ತಲೇ ಇದ್ದೇವೆ ಆದರೆ ನಾವು ಹೆಚ್ಚಿನ ಸಂತೋಷಪಡಬಹುದಾದಂಥ ಫಲವೇನೂ ದೊರೆತಿಲ್ಲ ಅಲ್ಲಲ್ಲಿ ಧರ್ಮ ಮುಂತಾದ ವಿಶೇಷ ಕಾರ್ಯಗಳಲ್ಲಿ ಮಧ್ಯಪಾನವಿಲ್ಲದೆ ಇರುವುದರಿಂದ ಮಧ್ಯಪಾನನಿಷೇಧ ಬುದ್ಧಿಯು ಜನರಲ್ಲಿ ಸ್ವಭಾವವಾಗಿ ಹುಟ್ಟುತ್ತಿದೆಯೆಂತ ಹೇಳಬಹುದು ಆದರೆ ಮಧ್ಯಪಾನಸೇವನೆಯು ಸಂಪೂರ್ಣವಾಗಿ ನಿಲ್ಲಬೇಕಾದರೆ ಅದಕ್ಕಾಗಿ ಹಗಲಿರುಳು ಕೆಲಸಮಾಡುವ ಜನರು ಕೆಲವರಾದರೂ ಬೇಕಾಗಿದೆ. ವಿಶೇಷಪ್ರಯೋಜನವಾಗದಿದ್ದರೂ ಕೋರಿಕೆಯನ್ನಾದರೂ ಕೊಡುತ್ತಿದ್ದ ಅವ್ಯಕಮಾಯಸಂಘದ ವಾರ್ಷಿಕಸಭೆ ಸಹ ಈ ವರ್ಷ ಆಗಲಿಲ್ಲ ಇದು ವ್ಯಸನಕರವೆ ಸರಿ ಇದಕ್ಕೆ ಕಾರಣವೇನೋ ನಮಗೆ ತಿಳಿಯದು ಹೀಗೆ ಆಗದಂತೆ ಇನ್ನು ಮುಂದಿನ ವರ್ಷಗಳಲ್ಲಾದರೂ ನೋಡಿಕೊಂಡಾರೆಂತ ಆಶಿಸುತ್ತೇವೆ

ಸಹಕಾರಿ ಬೆಳವಣಿಗೆಗೆ ನಮ್ಮ ಭಾಗದ ಸಹಾಯಕೊಡುತ್ತಲೇ ಇದ್ದೇವೆ ಸಹಕಾರಿ ಸಂಘಗಳಿಂದ ಸಮುದಾಯದ ಕಾರ್ಯಗಳನ್ನು ಮಿಟಿಂಗುಗಳ ಮೂಲಕ ಹೇಗೆ ನಡೆಸಬೇಕೆಂಬದು ಗ್ರಾಮವಾಸಿಗಳಿಗೆ ತಿಳುವಳಿಕೆಯಾಗುತ್ತೆ ರಾಜಕೀಯ ಆಡಳಿತವನ್ನು ಪ್ರಜೆಗಳ ಪ್ರತಿನಿಧಿಗಳ ಮೂಲಕ ನಡಿಸಬೇಕಾದರೆ ಸಮುದಾಯದ ಕೆಲಸವನ್ನು ಒಟ್ಟುಗೂಡಿ ನಡೆಸಲು ಪ್ರಜೆಗಳು ಕಲಿತುಕೊಳ್ಳಲೇ ಬೇಕು ಸಂಘಗಳು ಈಗ ಲೇವಾದೇವಿಯೊಂದೇ ಉದ್ದೇಶವುಳ್ಳವುಗಳಾಗಿವೆಯಾದರೂ ಸಹಕಾರಿತತ್ವಗಳನ್ನು ಮೆಂಬರುಗಳಿಗೆ ಬೋಧಿಸುತ್ತಾ ಬಂದಂತೆ ಸಮಾಜದ ಸೇವೆಯು ಸಂಘಗಳ ಮೂಲಕ ಚನ್ನಾಗಿಯೇ ನಡಿಯುತ್ತೆ. ಅಂತು ಈಗಾಗಲೇ ಸಂಘಗಳ ಮೆಂಬರುಗಳು ನಿಜವಾದ ಕೆಲಸಗಾರರು ಯಾರು ಎಂಬದನ್ನು ತಿಳಿದುಕೊಂಡು ದಯೆದಾಕ್ಷಿಣ್ಯವಿಲ್ಲದೆ ತಮ್ಮ ಆಫೀಸರುಗಳ ಚುನಾವಣೆಗಳನ್ನು ಮಾಡಿಕೊಳ್ಳಲು ಕಲಿತಿದ್ದಾರೆ ದೇಶದಲ್ಲಿ ಒಬ್ಬೇ ಲೇವಾದೇವಿ ಸಂಘಗಳು ಮಾತ್ರವಲ್ಲದೆ ಕೃಷಿಸಂಘಗಳೂ ವ್ಯಾಪಾರಸಂಘಗಳೂ, ಸಾಮಾನ್ಯವಸ್ತುಸೇಯುವ ಸಂಘಗಳೂ ಕಟ್ಟಡಗಳ ಸಂಘಗಳೂ ಏರ್ಪಡಬೇಕಾಗಿದೆ ಈ ಬಗೆಯ ಬೆಳವಣಿಗೆಗೆ ಸಹಾಯಕರಾಗಲು ನಾವು ತಯಾರಿದ್ದೇವೆ ಆದರೆ ಕೆಲಸಗಾರರೇ ಇದರಲ್ಲೂ ಬೇಕಾಗಿರುವದು

ಸ್ವದೇಶೀಬಟ್ಟೆಯ ಪ್ರಚಾರದ ಕಡೆಗೆ ನಮ್ಮ ದೃಷ್ಟಿಯನ್ನು ಯಾವಾಗಲೂ ಇಟ್ಟೇ ಇದ್ದೆವು ಆದರೆ ಮಹಾತ್ಮಾ ಗಾಂಧಿಯವರು ಸೆರೆಮನೆಯಲ್ಲಿದ್ದದ್ದರಿಂದ ಒಟ್ಟು ಹಿಂದುಸ್ಥಾನದಲ್ಲೇ ಈ ಚಳವಳವು ಕಳವಳ ಬಟ್ಟೆಗೆ ಕಣ್ಣಾಗಾಗಿತ್ತು. ದೇಶದ ಅಭ್ಯುದಯಕ್ಕೆ ಅತ್ಯಂತ ಅವಶ್ಯವಿರುವ ಈ ಕೆಲಸವನ್ನು ಮುಂದೆ ಸಾಗಿಸಲು ಜನರು ಮುಂದುವರಿಯುವದಿಲ್ಲವೆಂಬದನ್ನು ನೋಡಲು ನಮಗೆ ತುಂಬಾ ವ್ಯಸನವಾಗುತ್ತದೆ ಈಗ ಮಹಾತ್ಮರು ಖಾದಿಪ್ರಚಾರದ ವಿಷಯಕ್ಕಾಗಿ ಆಗಿಂದಾಗ್ಗೆ ಲೇಖನಗಳನ್ನು ಬರೆಯುತ್ತಿರುವದರಿಂದ ಒಟ್ಟು ಇಂಡಿಯಾದಲ್ಲಿ ಖಾದಿಪ್ರಚಾರವು ಶೀಘ್ರದಲ್ಲೇ ಬಹಳವಾಗಿ ಬೆಳೆದೀತೆಂತ ತೋರುತ್ತೆ ನಮ್ಮ ದೇಶದಲ್ಲಿ ನಿಜವಾದ ಖಾದಿಯು ದೊರೆಯುವ ಅಂಗಡಿಗಳೇ ಇಲ್ಲವೆಂಬದು ಬಹಳ ನಾಚಿಕೆಗೇಡೇ ಸರಿ ದೇಶಸೇವಕರು ಈ ನಾಚಿಕೆಯನ್ನು ಮನಸ್ಸಿಗೆ ಹಚ್ಚಿಕೊಂಡು ಬಡವರಿಗೆ ಅನ್ನ ದೊರಕಿಸಲಿಕ್ಕೆ ಸಹಾಯಕರಾಗಿ ಸ್ವರಾಜ್ಯವು ಶೀಘ್ರದಲ್ಲೇ ಒದಗುವಂತೆ ಮಾಡಬೇಕು ಸ್ವರಾಜ್ಯವು ಒದಗಲೀ ಬಿಡಲೀ ಪ್ರಜೆಗಳ ಬಡತನವು ಹೋಗಬೇಕಾದರೆ ಬಡಜೀವನದ ಅಭ್ಯಾಸವು ಅವರಿಗೆ ಆಗಲೇಬೇಕು ವಿಧವಿಧದ ಬಟ್ಟೆ ಹಾಕಬೇಕೆಂಬ ಹುಚ್ಚು ಪ್ಯಾಷನ್ ಬಟ್ಟೆಯಮೂಲಕ ಜನರಲ್ಲಿ ಹರಡಿಹೋಗಿದೆ ತಾವುತಾವು ಮಾಡಿಕೊಂಡ ಬಟ್ಟೆಯನ್ನೇ ತಾವುತಾವು ಧರಿಸಿಕೊಳ್ಳಬೇಕೆಂಬ ಅಭಿಪ್ರಾಯವು ಜನರಲ್ಲಿ ಹುಟ್ಟಿದರೆ ಹೊಸಹೊಸ ಬಣ್ಣಗಳು ಮತ್ತು ಹೊಸಹೊಸ ಫ್ಯಾಷನ್‌ಗಳಮೇಲೆ ಇರುವ ಹುಚ್ಚು ಹೊರಟುಹೋಗುತ್ತೆ ಆಗ ಬಡವರ ಬಡತನವನ್ನು ಇನ್ನೂ ಹೆಚ್ಚಿಸುವ ಬಟ್ಟೆಯ ಅಂಗಡಿ ಸಾಲಕ್ಕೆ ಎಡೆ ಇರುವದಿಲ್ಲ ತಮಗೇನೇ ಮಾಡಿಕೊಳ್ಳಲು ಸಾಧ್ಯವಿಲ್ಲದಿದ್ದರೂ ಬೇರೆ ಬಡವರು ಮಾಡುವ ಬಟ್ಟೆಯನ್ನು ನಾವು ಕೊಂಡುಕೊಳ್ಳುವದರಿಂದ ಬಡವರಿಗೆ ಅನ್ನ ಕೊಟ್ಟಂತಾಯಿತು ಆದ್ದರಿಂದ ಮುಂದಿನ ವರ್ಷದಲ್ಲಿ ಖಾದೀಪ್ರಚಾರದ ಕಡೆಗೆ ನಮ್ಮ ಗಮನವು ಹೆಚ್ಚಾಗಿಯೇ ಇರುತ್ತೆ.

ಮೇಲೆ ಬರೆದಂತೆ ಕೌನ್ಸಿಲ್ ದೊರೆಯಿತೆಂಬ ಸಂತೋಷದಿಂದ ತೃಪ್ತರಾಗಿ ನಾವು ಕೂರುವವರಾಗಿಲ್ಲ ಈ ಕೌನ್ಸಿಲಿನಲ್ಲಿ ಪ್ರಜೆಗಳ ಪ್ರತಿನಿಧಿಗಳಿಗೆ ಸಿಕ್ಕಿರುವ ಹಕ್ಕು ಬಹಳ ಅಲ್ಪವೆಂತ ನಾವು ಆಗಾಗ್ಗೆ ಬರೆಯುತ್ತಲೇ ಇದ್ದೇವೆ ಈ ಹಕ್ಕುಗಳನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಲೇ ಇರುತ್ತೇವೆ. ಜಮೀನ್ದಾರರ ಸಂಘದಲ್ಲಿ ಈಗಾಗಲೇ ದೊಡ್ಡ ಪ್ರಾಂತ್ಯಗಳ ಕೌನ್ಸಿಲುಗಳಿಗೆ ಇರುವ ಹಕ್ಕು ನಮ್ಮ ಕೌನ್ಸಿಲಿಗೂ ಸಿಕ್ಕಬೇಕೆಂತಲೂ, ಅನಂತರ ದೊಡ್ಡ ಪ್ರಾಂತ್ಯಗಳ ಸಂಗಡಲೇ ಮುಂದರಿಸುತ್ತಾ ಹೋಗಬೇಕೆಂಬೂ ಠರಾವು ಪಾಸಾಗಿದೆ ದೊಡ್ಡ ಪ್ರಾಂತಗಳಿಗೆ ಸಿಕ್ಕಿದ ಕೌನ್ಸಿಲ್ ಪದ್ಧತಿಗಳು ಅಲ್ಲಿನವರಿಗೆ ಏನೇನೂ ತೃಪ್ತಿಯನ್ನು ಕೊಟ್ಟಿರುವದಿಲ್ಲವೆಂಬದು ನಮಗೆ ಗೊತ್ತಿದೆ. ಆದರೆ ಅವರ ಜೊತೆಯನ್ನು ನಮ್ಮ ದೇಶವು ಹಿಡಿದುಕೊಳ್ಳದೆ ಹೋದರೆ ಅವರು ಮುಂದರಿಸಿಹೋಗುವಾಗ ನಮ್ಮ ದೇಶವು ಹಿಂದೆಯೇ ಬಿದ್ದಿರಬೇಕಾಗುತ್ತೆ ನಮ್ಮ ದೇಶದ ಕೌನ್ಸಿಲಿನಲ್ಲಿ ಆಗ ಒಂದು ಮಿಟಿಂಗಿನ ಕೆಲಸವನ್ನು ಸರಕಾರದವರು ಎಷ್ಟರಮಟ್ಟಿಗೆ ಅಂಗೀಕರಿಸುತ್ತಾರೆಂಬದು ತಿಳಿಯದೆ ಆ ಕೆಲಸದಮೇಲೆ ಏನೂ ಹೇಳುವಂತಿಲ್ಲ ಸಿಕ್ಕಿರುವ ಹಕ್ಕನ್ನು ಚನ್ನಾಗಿ ಉಪಯೋಗಿಸಿಕೊಂಡು ಹೆಚ್ಚಿನ ಹಕ್ಕನ್ನು ಪಡೆಯಲು ಮಾಡಬೇಕಾದ ಪ್ರಯತ್ನದಲ್ಲಿ ನಾವೂ ಭಾಗ ತೆಗೆದುಕೊಳ್ಳುತ್ತೇವೆ

ಈ ರೀತಿ ನಮ್ಮ ಹೊರೆಯು ಹೆಚ್ಚುತ್ತಾ ಹೋಗುತ್ತಿರುವಾಗ ನಮ್ಮ ಆರ್ಥಿಕಸ್ಥಿತಿಯು ಇನ್ನೂ ತೃಪ್ತಿಕರವಾಗಿಲ್ಲ ನಮ್ಮ ಸಿಬ್ಬಂದಿಯನ್ನು ಕಡಿಮೆಮಾಡಿಕೊಂಡದ್ದರಿಂದ ಆದಾಯವನ್ನು ಖರ್ಚುಮೀರುವದಿಲ್ಲ ಆದರೂ ಸಲೀಸಾಗಿ ಇನ್ನೂ ಕೆಲವುಮಟ್ಟಿಗೆ ಉಳಿದೇ ಇದೆ ನಮ್ಮ ಆಯುಷ್ಯವು ಚಿರಕಾಲವಿರಬೇಕಾದರೆ ಆರ್ಥಿಕಪಾಯವು ಭದ್ರವಾಗಿರಬೇಕು ಮೊದಲನೇವರ್ಷ ಶೇರ್ ಹಣ ಖರ್ಚಾಗಿಹೋದದ್ದು ಭರ್ತಿಯಾಗಬೇಕು ಶೇರದಾರರಿಗೆ ಲಾಭ ಹಂಚಬೇಕು ಈ ಸ್ಥಿತಿ ಬರಬೇಕಾದರೆ ನಮ್ಮ ಚಂದಾದಾರರ ಸಂಖ್ಯೆಯು ಈಗ ಇರುವದರ ಮೂರರಷ್ಟಾದರೂ ಆಗಬೇಕು ಜನರಲ್ಲಿ ವೃತ್ತಾಂತಪತ್ರಿಕೆಯನ್ನು ಓದುವ ಸ್ವಭಾವವು ಇನ್ನೂ ಬೆಳೆದೇ ಇಲ್ಲ ಇಂಗ್ಲೆಂಡಿನಲ್ಲಿ ಒಂದೊಂದು ಚಿಕ್ಕ ಊರಿನಲ್ಲಿಯೂ ಹತ್ತೆಂಟು ಪತ್ರಿಕೆಗಳು ಇದ್ದರೂ ಪತ್ರಿಕಾಚಾಲಕರಿಗೆ ಲಾಭವೇ ಆಗುತ್ತಿದೆಯೆಂತೆ ಇದು ಯಾವದರಿಂದ ಎಂದರೆ ಅಲ್ಲಿ ವೃತ್ತಾಂತಪತ್ರಿಕೆಗಳನ್ನು ಓದದ ಮನುಷ್ಯನಿಲ್ಲವಂತೆ ನಮ್ಮ ಈ ದೇಶದ ವಿಷಯಗಳನ್ನೇ ಮುಖ್ಯವಾಗಿ ಕೊಡುವ ಪರದೇಶಗಳಲ್ಲಿ ನಡೆಯುವ ಕಾರ್ಯಗಳ ಸಾರವನ್ನೂ ತಿಳಿಸಿಕೊಡುವ ಈ ನಮ್ಮ ಪತ್ರಿಕೆಯನ್ನು ಕೊಡಗಿನೊಳಗಿನ ಪ್ರತಿಮನೆಗೂ ತರಿಸಿಕೊಳ್ಳಬೇಕಾದದ್ದು ಅವಶ್ಯ. ಹಾಗೆ ತರಿಸಿಕೊಂಡರೆ ನಮ್ಮ ಆರ್ಥಿಕಸ್ಥಿತಿಯು ಬಹಳ ಅಭಿವೃದ್ಧಿಯಾಗುವದರಲ್ಲಿ ಏನೂ ಸಂಶಯವಿಲ್ಲ ನಮಗೆ ಈ ವರ್ಷ ಸಹಾಯಮಾಡಿದ ಚಂದಾದಾರರೆಲ್ಲರೂ ಕೂಡಲೇ ಮುಂದಿನವರ್ಷದ ಚಂದಾವನ್ನು ಕಳುಹಿಸಿಕೊಟ್ಟು ಪೋಷಿಸಬೇಕೆಂತಲೂ ತಮ್ಮತಮ್ಮ ನೆರೆಯವರಿಗೂ ಬೋಧಿಸಿ ಚಂದಾದಾರರ ಸಂಖ್ಯೆಯು ಹೆಚ್ಚಿಸಬೇಕೆಂತಲೂ ಕೋರುತ್ತೇವೆ

ನಮ್ಮ ಈ ಪತ್ರಿಕೆಯನ್ನು ಈ ಸಂಚಿಕೆಯ ಮೊದಲಿನಿಂದ ನಮ್ಮ ಮಡಿಕೇರಿ ಆಫೀಸಿನಲ್ಲೇ ಅಚ್ಚುಹಾಕಿಸುತ್ತೇವೆಂತ ಭರವಸೆಯಿತ್ತು ಆದರೆ ಇದಕ್ಕೆ ಬೇಕಾದ ಸಾಮಾನುಗಳು ಬೊಂಬಾಯಿಯಿಂದಲೂ ಮದ್ರಾಸಿನಿಂದಲೂ, ಮೈಸೂರಿನಿಂದಲೂ ಬರುವದು ಸ್ವಲ್ಪ ನಾವಕಾಶವಾದದ್ದರಿಂದ ಮಡಿಕೇರಿ ಆಫೀಸಿನಲ್ಲಿ ಪ್ರಿಂಟಾಗಲು ಇನ್ನೂ ಕೆಲವು ದಿನಗಳು ಬೇಕಾಗಿದೆ

ವಿಮರ್ಶೆ.

"ಜಯಕರ್ನಾಟಕ" ದ ವೈಶಾಖ ಶುದ್ಧ ಪೌರ್ಣಿಮಾ ಸಂಚಿಕೆಯು ನಮ್ಮ ಕೈಸೇರಿದೆ. ಇದರಲ್ಲಿ ಎಂದಿನಂತೆಯೇ ಉಚ್ಚತರದ ಲೇಖನಗಳು ಬಂದಿವೆ ಇದರಲ್ಲಿ ಇರುವ ಮುಖ್ಯ ಲೇಖನಗಳು ಯಾವವೆಂದರೆ— ವಿಕಾಸವಾದದ ಸಿಂಹಾವಲೋಕನ' ಕರ್ನಾಟಕದ ಏಕೀಕರಣ" "ಮುಸಲ್ಮಾನರ ಕಾಲದಲ್ಲಿದ್ದ ಹಿಂದುಸ್ಥಾನದಸ್ಥಿತಿ", "ವಿಜ್ಞಾನಶಾಸ್ತ್ರದ ದುರುಪಯೋಗ" "ಮಾತೆಯ ಪ್ರಾರ್ಥನೆಯೆಂಬ ಟಾಗೂರರ ಲೇಖನದ ತರ್ಜುಮೆ" "ಪಾಂಡವರ ದಿಗ್ವಿಜಯ" "ಪ್ರಾಚೀನನಾಗರೀಕತೆ" "ಶ್ರೀ ಶಂಕರಾಚಾರ್ಯರ ಅವತಾರದ ಕಾಲ" ಇತ್ಯಾದಿ ಲೇಖನಗಳಿವೆ. ಈ ಪಟ್ಟಿಯನ್ನು ಓದಿದರೆ ವಿಜ್ಞಾನಶಾಸ್ತ್ರ, ಐತಿಹಾಸಿಕವಿಷಯ ಮುಂತಾದ ಆಲೋಚನೆಗೆ ಯೋಗ್ಯವಾದ ಸಂಗತಿಗಳಿವೆ ಎಂಬದು ಗೊತ್ತಾಗದೆ ಇರದು.

ಫಾರೆಸ್ಟು ಟ್ರಾಮ್ವೇ.

(ಮೆ|| ಎ ಬಿ ಚೆಂಗಪ್ಪನವರು)

35 (a) ಇಂಚಾ ಕೇಪ ಕಮಿಟಿಯು ಮುಂದೆ ಟ್ರಾಂವೈಗಾಗಿ ಕೊಡಗು ಏಳುಲಕ್ಷ ರೂಪಾಯಿಗಳನ್ನು ಖರ್ಚುಮಾಡಿದೆಂದೂ, ಕೆಲಸವು ಪೂರೈಸಿರುವುದೆಂದೂ ಫಾರೆಸ್ಟು ಡಿಪಾರ್ಟ್ಮೆಂಟಿಗೆ ಇದರಿಂದ ಲಾಭ ದೊರಕುತ್ತದೆಂದೂ ಹೇಳಿದ್ದುಂಟೋ? ಹಾಗಿದ್ದರೆ ಈಗ ಬರುತ್ತಿರುವ ಲಾಭವೆಷ್ಟು? ಖರ್ಚುಮಾಡಿರುವ ಬಂಡವಾಳದಮೇಲೆ ಯಾವತರದ ಬಡ್ಡಿ ಕೊಡುತ್ತಿದ್ದೀರಿ?

(b) ಬಡ್ಡಿದರ ಶೇಕಡ ೮ರಷ್ಟಾದರೂ ಇಲ್ಲದಿದ್ದರೆ, ಇನೂ ಇನ್ನೂ ಹೆಚ್ಚು ಪ್ರಯತ್ನಮಾಡಬೇಕೆಂದು ಸರ್ಕಾರದವರು ಯೋಚಿಸುತಿದ್ದಾರೋ?

(a) ಒಂಡವಾಳರೂಪದಲ್ಲಿ ಸರ್ಕಾರವು ಟ್ರಾಂವೈಗಾಗಿ ಸುಮಾರು 7 60 000 ರೂಪಾಯಿ ಖರ್ಚುಮಾಡಿದೆ. ಆಗಬೇಕಾದ ಕೆಲಸವು 1923 ರ ಮುಂಭಾಗದಲ್ಲಿಯೇ ಪೂರೈಸಿತು ಹೆಚ್ಚಿನವಿಷಯದಲ್ಲಿ ಒಂದು "ನೋಟ್" ಅಂದರೆ ಪತ್ರ ಕೊಡಲಾಗುವುದು ಪಿಸ್ಟಕೋಸ್ಟ (ಮಲಬಾರು) ನಲ್ಲಿರುವ ಕೈಗಾರಿಕೆಯ ಕಾರ್ಖಾನೆಯ ಸಹಾಯದಿಂದ ಮರವನ್ನು ಸಾಮಾನುಗಳ ರೂಪದಲ್ಲಿ ಮಾರಿದರೆ ಮಾತ್ರ ಲಾಭ ದೊರಕಬಹುದೆಂದು ತೋರುತ್ತದೆ ಈ ತೆರನ ಕಂಟ್ರಾಕ್ಟು ವಿಚಾರದಲ್ಲಿದೆ ಈಗ ಹೆಚ್ಚಿನದರದ ಬಡ್ಡಿಯು ದೊರಕುತ್ತಿಲ್ಲ

(b) ಟ್ರಾಂವೈ ಖರ್ಚಿಗಾಗಿ 1924-25 ರ ಒಡ್ಜೆಟ್ಟಿನಲ್ಲಿ 25 550 ರೂಪಾಯಿ ಇಟ್ಟಿದೆ ದೊಡ್ಡ ಖರ್ಚು ಇಟ್ಟಿಲ್ಲ

ಆನೆಗಳನ್ನು ಹಿಡಿಯುವುದು.

(ಮೆ|| ಎ ಬಿ ಚೆಂಗಪ್ಪನವರು).

36 (a) ದೇಶದ ಆದಾಯವನ್ನು ಹೆಚ್ಚಿಸುವ ಸಂದರ್ಭ, ಆನೆಗಳನ್ನು ಹಿಡಿಯುವ ವಿಚಾರದಲ್ಲಿ ಫಾರೆಸ್ಟು ಡಿಪಾರ್ಟುಮೆಂಟಿನವರು ಯಾವ ಏರ್ಪಾಡಿನಲ್ಲಿದ್ದಾರೆ?

(b) ವರುಷಕ್ಕೆ ಸರಾಸರಿ 12 ಆನೆಗಳನ್ನು ಹಿಡಿಯಬಹುದೋ ? ಮತ್ತು ಅವುಗಳನ್ನು ಹಿಡಿಯಲಿಕ್ಕೂ, ಮಾರಾಟಕ್ಕೆ ತಯಾರಾಗುವ ದಿನದವರೆವಿಗೂ ಎಷ್ಟು ಖರ್ಚು ತಗಲೀತು ?

(a & b) ದಕ್ಷಿಣಕೊಡಗಿನ ಫಾರೆಸ್ಟು ಡಿವಿಜನಲ್ ಆಫೀಸರು ತಯಾರಿಸಿದ ಪತ್ರವನ್ನು ಸಭೆಯಮುಂದೆ ಇಟ್ಟಿದೆ

ಫಾರೆಸ್ಟು ಟ್ರಾಮ್ವೆ.

(ಶ್ರೀ ಕೆ. ಪಿ ಚೆಣ್ಣಪ್ಪನವರು).

(a) ಮಾಕೂಟ ಟ್ರಾಮ್ವೆಗಾಗಿ ತಗಲಿದ ಒಟ್ಟು ಖರ್ಚು ಎಷ್ಟು ?

(b) ಟ್ರಾಮ್ವೆಯನ್ನು ಇಟ್ಟುಕೊಳ್ಳಲು ವರ್ಷಾವಧಿ ಖರ್ಚು ಎಷ್ಟು ?

(c) ಟ್ರಾಮ್ವೆಯ ಮಂಜೂರಾತಿಯಾದ ಎಸ್ಟಿಮೇಟಿನಮೇಲೆ ತಯಾರಿಸಲ್ಪಟ್ಟಿದ್ದೋ ? ಹಾಗಾದರೆ, ಅಂಥಾ ಎಸ್ಟಿಮೇಟನ್ನು ಸಭೆಯಮುಂದೆ ಇರಿಸಬಹುದೋ ?

(d) ತಹಲುವರೆಗೆ ಕೊಂಡುಕೊಂಡ ಕಬ್ಬಿಣಸಾಮಾನುಗಳ ಬೆಲೆ ಎಷ್ಟು ? ಇವೆಲ್ಲವು ದುರಸ್ತಿನಲ್ಲಿವೆಯೋ ? ಇಲ್ಲದಿದ್ದರೆ ಇವುಗಳ ಅವಶ್ಯಬೀಳುವ ಮೊದಲೆ ಕೊಂಡದ್ದು ಏಕೆ ?

(e) ಕಮಿಷನ್ ಏನಾದರೂ ಸಿಕ್ಕಿತೋ ? ಈ ಹಣವನ್ನು ವಿಲೆವಾರಿಮಾಡಿದ್ದು ಹೇಗೆ ?

(f) ಈಈಮುತಿಯಲ್ಲಿ ಒಂದು ಟ್ರಾಕ್ಟರು ಸುಮ್ಮನೆ ಬಿದ್ದಿದೆಯೋ ? ಹೀಗಿರಲಿಕ್ಕೆ ಕಾರಣವೇನು ?

(g) ಫಾರೆಸ್ಟು ಎಂಜಿನಿಯರು ಮಾಡುವ ವಿಶೇಷ ಕೆಲಸವೇನು ? ಇವರು ನೇಮಕವಾಗುವ ಮೊದಲು ಫಾರೆಸ್ಟು ಡಿಪಾರ್ಟುಮೆಂಟಿನ ಇತರ ಆಫೀಸರರು ಮಾಡುತ್ತಿರಲಿಲ್ಲವೋ ?

(h) ಒರಪೊಳೆ ತೀರದಲ್ಲಿ 1920-21, 21-22, 22-23 ಮತ್ತು 23-24 ಕ್ಕಾಗಿ ಎಷ್ಟು ಮರ ಸಿಕ್ಕಿತು ?

(i) ಈ ಆಫೀಸರು ಮಡಿಕೇರಿಯಲ್ಲಿರುವದು ಏಕೆ ? ವರುಷಕ್ಕೆ ಎಷ್ಟುದಿನ ಮಡಿಕೇರಿಯಲ್ಲಿರುತ್ತಾರೆ ?

(j) ಇಡಿ ಹಿಂದೂದೇಶದಲ್ಲಿ ಎಷ್ಟು ಮಂದಿ ಫಾರೆಸ್ಟು ಇಂಜಿನಿಯರರು ಇದ್ದಾರೆ ?

37. (a, b, c ಮತ್ತು h) ಟ್ರಾಮ್ವೆಗೆ ಸಂಬಂಧಪಟ್ಟ ಒಂದು ಪತ್ರವು ಮೆಂಬರರಿಗೆ ಕೊಡಲಾಗುವುದು

(d) ಕಬ್ಬಿಣ ಸಾಮಾನುಗಳ ಕುರಿತವಿವರವು ಚೀಫ್ ಫಾರೆಸ್ಟು ಆಫೀಸರ ಪತ್ರದಲ್ಲಿ ದೊರಕುವುದು. ಎಲ್ಲ ಯಂತ್ರಗಳು ನಡೆಯುತ್ತಿವೆ

(e) ಸ್ಟೋರ್ಸ್ ಡಿಪಾರ್ಟುಮೆಂಟಿನವರು ಕೊಂಡುಕೊಂಡ ಸಾಮಾನುಗಳ ವಿಷಯದಲ್ಲಿ ಎಷ್ಟು "ಕನ್ಸೆಷನ್" ಸಿಕ್ಕಿತು ಎಂಬುದು ನಮಗೆ ತಿಳಿಯದು.

ಹಿಂದೂದೇಶದ ಯಾ ಅಮೇರಿಕಾದೇಶದ ಬಾಕರ್ ನಿಂದ ಕೊಂಡ ಸಾಮಾನುಗಳಿಗಾಗಿ ಡಿಸ್ಕೌಂಟ್ ಸಿಕ್ಕಿಲ್ಲ

(f) ಟ್ರಾಕ್ಟರಿನ ಬಿಡಿಭಾಗ ಈ ತಿಂಗಳವರೆಗೆ ಸಾಮಾನು ಪೂರ್ತಿಯಾಗಿ ಬಾರದ್ದರಿಂದ ಕೆಲಸ ನಡೆದಿಲ್ಲ ಸಾಮಾನುಗಳು ಒಂದು ಫಾರೆಸ್ಟು ಇಂಜಿನಿಯರು ಸಮಮೊದಲು ಸ್ಥಿದನಂತರ ಅದರ ಕ್ರಯ ಕೊಡಲಾಯಿತು. ಮಾಕೂಟದಲ್ಲಿ ಮೇಷೀನನ್ನು ಸರಿಮಾಡುತ್ತಿದ್ದಾರೆ

(g) ಅಮೇರಿಕಾದೇಶದಲ್ಲಿರುವ "ಲಾಗಿಂಗ್ ಇಂಜಿನೀರಿಂಗ್" ವಿದ್ಯೆಯನ್ನು ಇವರು ಕಲಿತಿದ್ದಾರೆ. ಈ ವಿದ್ಯೆಯಿಂದ ಕಡಿಮೆ ಖರ್ಚಿನಿಂದ ಕಠಿಣಪ್ರದೇಶಗಳಲ್ಲಿ ಮರಗಳ ಮತ್ತು ಇತರ ಉತ್ಪನ್ನಗಳ ಸಹಾಯದಿಂದ ಮರ ತಯಾರಿಸಬಹುದು ಇದಲ್ಲದೆ ಟ್ರಾಮ್ವೆ ಖಾತೆಯ ಲೈಬಾರವನ್ನು ನೋಡಿಕೊಳ್ಳುತ್ತಾನೆ ಇಂಜಿನಿಯರು ಬರುವುದಕ್ಕೆ ಮೊದಲು ಫಾರೆಸ್ಟು ಡಿಪಾರ್ಟುಮೆಂಟಿನ ಈ ಕಠಿಣ ಕೆಲಸಕ್ಕೆ ಕೈಹಾಕುತ್ತಿರಲಿಲ್ಲ

(h) (c) ಈ ಇಂಜಿನಿಯರು ಒಬ್ಬ ಸಮಿತಿಯ ಅನುಮತಿಯಿಂದ ಮಡಿಕೇರಿಯಲ್ಲಿರುವರು.

ಮಾರ್ಚ 1923 ರಿಂದ ಫೆಬ್ರುವರಿ 1924 ರವರೆಗೆ ಇವರು 65 ದಿನಗಳ ಸ್ಥಿತಿ 195 ದಿನಗಳು ಹೊರಗಿದ್ದರು.

(j) ಈ ವಿಷಯ ತಿಳಿಯದು. ಆದರೆ ಮದ್ರಾಸಿನಲ್ಲಿ ಮೊದಲನೆಯ ಫಾರೆಸ್ಟು ಎಂಜಿನಿಯರು ಇ... ಆದಿನ ಸರ್ಕಾರದವರ 1912 ರಲ್ಲಿ

ಕೆ ಪಿ ಸ್ಟ್ರೊ.

(ಶ್ರೀ ಕೆ. ಪಿ ಚೆಣ್ಣಪ್ಪನವರು)

18 ಎಷ್ಟು ಸಂದರ್ಭಗಳಲ್ಲಿ ಜಮ್ಮದ ಭೂಮಿಯನ್ನು ಭೂಮಿಯನ್ನಾಗಿ ಮಾಡುತ್ತಾರೆ ಯಾವಕಾರಣವನ್ನು ಒಪ್ಪದವರು ಮಾಡಬೇಕು ? ಹೀಗೆ ಕೆಲಸವಾದ ಅಧಾರವೆಲ್ಲಿ ?

ಪ್ರತ್ಯೇಕವಾಗಿ ವಿಷಯಸಂಗ್ರಹ ಮಾಡುತ್ತಿರುವುದರಿಂದ ಕೊಡಲಾಗುವುದು.

9 ಈಚೆಗೆ ವ್ಯವಸಾಯಕ್ಕಾಗಿ ಒರಿಸ ಜಮ್ಮದ ಎಷ್ಟು ಹತ್ತುವರುಷದ ಅವಧಿಯಲ್ಲಿ ಸಾಗಿನ ಭೂಮಿಕ್ಕೆ ?

ದಕ್ಕೆ ಉತ್ತರ ತಕ್ಷಣ ದೊರೆಯಲಾರದು ಆದರೆ ತಾಲೂಕುಗಳಲ್ಲಿ ವಿಷಯಗಳು ಸಂಗ್ರಹಿಸಲ್ಪಡುತ್ತಿವೆ

ಮಕ್ಕಳನ್ನು ಹೆತ್ತ ತಾಯಿಂದಿರಿಗೆ ಗೊತ್ತಿರಬೇಕಾದ ಅಂಶಗಳು.

[ಕಳೆದ ಸಂಚಿಕೆಯಿಂದ ಮುಂದುವರಿದದ್ದು].

ಮಕ್ಕಳಿಗೆ ಕಾಲನಿಯಮದಿಂದ ಆಹಾರವನ್ನು ಕೊಡುವುದು.

ಕೆಲವು ಹೆಂಗಸರು ಮಕ್ಕಳು ಅತ್ತಾಗಲೆಲ್ಲಾ ಹಸಿವಿಗಾಗಿಯೇ ಅಳುವುದೆಂದು ತಿಳಿದು ಮಗುವು ಅಳುವುದಕ್ಕೆ ಸಂಬಂಧಿಸಿದ ಕೂಡಲೆ ಹಾಲು ಕುಡಿಸುವುದುಂಟು. ಇದು ತಪ್ಪು ! ಮಗುವು ಅಳುವಾಗ, ಅದಕ್ಕೆ ಕಾರಣವೇನೆಂಬುದನ್ನು ಮೊದಲು ಚೆನ್ನಾಗಿ ಪರೀಕ್ಷಿಸಿ ಯಾವ ಕಾರಣವೂ ತಿಳಿಯದಿದ್ದರೆ ಆಗ ಹಸಿವಿನಿಂದಲೇ ಅಳುವುದೆಂದು ನಿಶ್ಚಯಿಸಬಹುದು ಇದಲ್ಲದೆ, ಮಕ್ಕಳಿಗೆ ಕ್ಲುಪ್ತಕಾಲಕ್ಕೆ ಸರಿಯಾಗಿ ಆಹಾರವನ್ನು ಕೊಡುವ ಅಭ್ಯಾಸವನ್ನೇ ಮಾಡುವುದು ಬಹಳ ಉತ್ತಮವು. ಹೀಗೆ ಕಾಲನಿಯಮದಿಂದ ಆಹಾರ ಕೊಡುತ್ತ ಬರುವಾಗ ಕ್ಲುಪ್ತಕಾಲಕ್ಕೆ ಮೊದಲೇ ಮಗುವು ಹಸಿವಿನಿಂದ ಅಳುತ್ತಿದ್ದರೆ, ಆಗ ತಾಯಿಯ ಎದೆ ಹಾಲಿನಲ್ಲಿ ಶಕ್ತಿಯು ಸಾಕಾಗಲಿಲ್ಲವೆಂದು ಊಹಿಸಬಹುದು ಒಂದು ವೇಳೆ ತಾಯಿಯ ಎದೆಯಲ್ಲಿ ಹಾಲು ಸಮೃದ್ಧಿಯಾಗಿದ್ದರೂ, ಆ ಹಾಲು ನಿಸ್ಸಾರವಾಗಿ ಒರೇ ನೀರಿನಂತಿರಬಹುದು ಈ ಸ್ಥಿತಿಯಲ್ಲಿ ತಾಯಿಯು, ಒಳ್ಳೇ ಪುಷ್ಟಿಕರವಾದ ಆಹಾರಗಳನ್ನು ಚೆನ್ನಾಗಿ ತಿನ್ನುವುದಕ್ಕೆ ತನ್ನ ಎದೆ ಹಾಲಿನಲ್ಲಿ ಸಾರವು ಹೆಚ್ಚುವಂತೆ ಮಾಡಿಕೊಳ್ಳಬೇಕು ಮಗುವನ್ನು ಆಗಾಗ ತೂಕಮಾಡಿ ನೋಡುವುದರಿಂದ, ಅದು ಕುಡಿಯುವ ಹಾಲಿನಲ್ಲಿ ಶಕ್ತಿಯು ಪುಷ್ಟಿಕರವಾದ ಪದಾರ್ಥವು ಸೇರಿದೆಯೋ ಇಲ್ಲವೋ ಎಂಬುದನ್ನು ತಿಳಿಯಬಹುದು ಮಗುವಿನ ಭಾರವು ಕ್ರಮವಾಗಿ ಹೆಚ್ಚದೆ, ಒಂದೇ ರೀತಿಯಲ್ಲಿದ್ದರೆ, ಆ ಮಗುವಿನ ದೇಹದಲ್ಲಿ ಬೇರೆ ವ್ಯಾಧಿಗಳೊಂದೂ ಕಾಣದಿದ್ದರೂ ಒಳ್ಳೇ ಡಾಕ್ಟರ ಬಳಿಗೆ ತಂದು ತೋರಿಸಬೇಕು

ಮಗುವಿಗೆ 9 ತಿಂಗಳು ತುಂಬುವವರೆಗೆ ತಾಯಿಯ ಹಾಲೇ ಉತ್ತಮವೆಂದು ಹಿಂದೆ ತಿಳಿಸಿದೆಯಷ್ಟೆ ? ಅನೇಕ ಮಕ್ಕಳಿಗೆ ಈ ಭಾಗ್ಯವಿಯುವುದಿಲ್ಲ ಹಡೆದ ಹೆಂಗಸಿನಲ್ಲಿ ಬಹಳ ಮಂದಿ ಅನಾರೋಗ್ಯದಿಂದಲೋ ಇರುವರು. ಆಗ ಮಕ್ಕಳಿಗೆ ಯಾವ ವಿಧದಲ್ಲಿ ಆಹಾರವನ್ನು ಕೊಡಬೇಕು ? ಇದಕ್ಕೆ ಕೆಳಗೆ ಕಾಣಿಸಿದ ಎರಡು ಮಾರ್ಗಗಳುಂಟು ದಾದಿಯನ್ನಿಟ್ಟು ಅವಳ ಎದೆಹಾಲನ್ನು ಕುಡಿಸುವದೊಂದು ಆಧವಾ ಬಟ್ಟಿ ಮೊದ ಆಹಾರವನ್ನು ಊಡುವುದು ಮತ್ತೊಂದು.

ದಾದಿಯರು

ಈಗ ನಾಗರಿಕರ ನಮ್ಮಲ್ಲಿಯೂ, ಒಡ್ಡಿಯ ಮೂಲಕವಾಗಿ ಮಕ್ಕಳಿಗೆ ಹಸುವಿನ ಹಾಲು ಅಥವಾ ಆಹಾರವನ್ನು ಕೊಡುವ ಮಾರ್ಗವು ವಿಲಾಯಿತಿಯ ದೇಶಗಳಲ್ಲಿ ಹಿರಿಯರ ಕಾಲದಲ್ಲಿದ್ದಂತೆ ಈಗ ... ಹೊಸತೇನಲ್ಲ ... ಹೇಗೆ ... ಒಳ್ಳೇ ಹಾಲು ... ಪುಷ್ಟಿಕರವಾದ ... ಮಕ್ಕಳಿಗೆ ... ಬೇಕಾಗುವುದು.

ಬಟ್ಟಿಯ ಆಹಾರಗಳು

ಬಟ್ಟಿಯಿಂದ ಮಕ್ಕಳಿಗೆ ಆಹಾರ ಕೊಡತಕ್ಕವರು ಆಯಾ ಮಕ್ಕಳ ದೇಹಕ್ಕೆ ಅನುಗುಣವಾದ ಆಹಾರವೇನೆಂಬುದನ್ನು ಮೊದಲು ತಿಳಿದುಕೊಳ್ಳಬೇಕು ... ಮಕ್ಕಳಿಗೆ ವಿಧ ... ಪುಷ್ಟಿಕರವಾದ ಆಹಾರ ... ಆದದ್ದರಿಂದ ಅದರಲ್ಲಿ ನಾವು ಹೆಚ್ಚು ...

ಹಸುವಿನ ಹಾಲು

ಸಾಧಾರಣವಾಗಿ ಹಸುವಿನ ಹಾಲೇ ಮಕ್ಕಳಿಗೆ ಕೊಡುವುದು ಅನುಕೂಲವಾಗಿದೆ ಹಸುವು ಆರೋಗ್ಯಸ್ಥಿತಿಯಲ್ಲಿದ್ದು ... ಆ ಹಸುವಿನ ಹಾಲು ಮಕ್ಕಳಿಗೆ ಹಿತಕರವು ಆದರೆ ಬಹಳ ಹಸುವು ಸರಿಯಾದ ಆರೋಗ್ಯಸ್ಥಿತಿಯಲ್ಲಿ ಇಲ್ಲದಿರೆ, ರೋಗಿಯಂತಾಗ ಹಸುಗಳ ಗುಣಗಳನ್ನು ತಯಾರಾದ ಹಾಲನ್ನು ಕಂಡ ಕೊಡಬೇಕು

ಹಸುವಿನ ಹಾಲನ್ನು ತಪ್ಪು ಮಾಡದಂತೆ

ಹಾಲನ್ನು ಚೆನ್ನಾಗಿ ಕಾಯಿಸಿ, ಶುದ್ಧವಾಗಿಯೇ ಮಕ್ಕಳಿಗೆ ಕುಡಿಸಬೇಕು. ಕಾಯಿಸದೆ ಬೆಚ್ಚಗಿನ ಹಾಲು ... ಪಾತ್ರೆಯಲ್ಲಿ ಹಾಕಿಡಬೇಕು ... ಬಟ್ಟಿ ... ನೀರು ಚೆನ್ನಾಗಿ ಕಾದ ನಂತರ ಶುದ್ಧವಾದ ಸಾಧನಗಳಿಂದ ಒತ್ತುವ ಪ್ರತಿದಿನವೂ ಬಿಸಿನೀರಿನಲ್ಲಿ ಹಾಕಿ 10 ನಿಮಿಷಗಳವರೆಗೆ ಕುದಿಸಿ ಶುದ್ಧಮಾಡಬೇಕು ಪ್ರತಿಯೊಂದು ಸಲವೂ ಮಕ್ಕಳಿಗೆ ಆಹಾರವನ್ನು ಕೊಟ್ಟನಂತರ ಆ ಪಾತ್ರೆಗಳನ್ನೆಲ್ಲಾ ಬಿಸಿನೀರಿನಿಂದ ತೊಳೆದು ಉಪ್ಪನ್ನು ಹಾಕಿದ ನೀರಿನಿಂದ ಚೆನ್ನಾಗಿ ತೊಳೆಯಬೇಕು ಹೀಗೆ ತೊಳೆದ ಮೇಲೆ ಕಾಯಿಸಿ ತಣ್ಣಗಾದ ನೀರಿನಲ್ಲಿ ಆ ಪಾತ್ರೆಗಳನ್ನೆಲ್ಲಾ ಮುಳುಗಿಸಿ ಇಡಬೇಕು. ಮಕ್ಕಳಿಗೆ ಹಾಲು ಕುಡಿಸುವದಕ್ಕಾಗಿ, ಕುಡಿಸತಕ್ಕ ಎರಡು ಬುಡ್ಡಿಗಳನ್ನೂ, ಹೆಚ್ಚಾಗಿ ರಬ್ಬರು ಚೀಪುಗಳನ್ನೂ ಇಟ್ಟುಕೊಂಡಿರಬೇಕು ಬುಡ್ಡಿಗಳಿಗೆ ಉದ್ದವಾದ ಕೊಳವೆಗಳಿರಬಾರದು ಬುಡ್ಡಿಗೆ ಎರಡು ಪಾರ್ಶ್ವಗಳಲ್ಲಿಯೂ ರಂಧ್ರಗಳಿದ್ದರೆ, ಆ ರಂಧ್ರಗಳಿಗೆ ಮುಚ್ಚುವ ಬಿರಡೆಗಳನ್ನೂ ಪ್ರತಿದಿನವೂ ಬಿಸಿನೀರಿನಲ್ಲಿ ಹಾಕಿ ಕುದಿಸಬೇಕು.

ತಾಯಿಯು ಈ ಕೆಲಸವನ್ನೆಲ್ಲಾ ತಾನೇ ಮಾಡಬೇಕೇ ಹೊರತು, ಆಳುಗಳ ವಶಕ್ಕೆ ಬಿಡಬಾರದು ಒಂದುವೇಳೆ ಆಳುಗಳಿಂದ ಮಾಡಿಸಬೇಕಾದರೂ, ಅವರು ಸರಿಯಾಗಿ ನಡೆಸುತ್ತಾರೆಯೋ ಎಂಬುದನ್ನು ತನ್ನ ಕಣ್ಣಾರೆ ಇದಿರಾಗಿ ನಿಂತು ನೋಡಿಕೊಳ್ಳಬೇಕು.

ಮಗುವಿನ ಬೆಳವಣಿಗೆ

ಮಕ್ಕಳು ಬೆಳೆಯಬೇಕಾದ ಹೇಗಿರಬೇಕೆಂಬುದು, ಹೆತ್ತ ತಾಯಿಗೆ ಅಕ್ಷರಶಃ ಗೊತ್ತಿರಬೇಕಾದ ವಿಷಯವು. ಸಾಧಾರಣವಾಗಿ ಐದು ತಿಂಗಳ ಶಿಶು, ಹುಟ್ಟಿದ ಕಾಲದಲ್ಲಿದ್ದ ದಕ್ಕಿಂತ ಎರಡಷ್ಟು ತೂಕವಿರಬೇಕು 12 ತಿಂಗಳು ತುಂಬಿದ ಕೂಸಿಗೆ ಹುಟ್ಟಿದ ಕಾಲದಲ್ಲಿದ್ದದಕ್ಕಿಂತ ಮೂರರಷ್ಟು ತೂಕವಿರಬೇಕು

ಮಗುವು ಬೆಳೆಯದಿರುವುದಕ್ಕೆ ಕಾರಣಗಳು

ಮಕ್ಕಳಿಗೆ ತಾಯಿಯ ಹಾಲೇ ಬಹಳ ಉತ್ತಮವಾದ ಆಹಾರವೆಂದು ಎಲ್ಲಾ ಹೆಂಗಸರೂ ತಿಳಿಯಬೇಕು. ಆದರೆ ಅನಾರೋಗ್ಯದಲ್ಲಿರುವ ತಾಯಿಯ ಹಾಲನ್ನು ಕುಡಿದ ಮಕ್ಕಳಿಗಿಂತಲೂ, ಹಸುವಿನ ಹಾಲನ್ನು ಕುಡಿದ ಮಕ್ಕಳು ಚೆನ್ನಾಗಿ ಬೆಳೆಯುವುವು ಅನೇಕ ಹೆಂಗಸರು ತಮ್ಮ ಮಕ್ಕಳು ಪುಷ್ಟಿಯಾಗಿ ಬೆಳೆಯುವುದಕ್ಕೆ ಕಾರಣವೇನೆಂದು ತಿಳಿಯದೆ ಕಳವಳಿಸುವುದುಂಟು. 100 ಕ್ಕೆ 99 ಮಕ್ಕಳು ತಕ್ಕ ಆಹಾರವಿಲ್ಲದುದರಿಂದಲೇ ದೇಹಬೆಳೆಯದೆ ಕೃಶವಾಗಿರುವುವು. ಮಕ್ಕಳು ಬೆಳೆಯದಿರುವುದಕ್ಕೆ ಕೆಲವುವೇಳೆ ಕೆಳಗೆ ಕಂಡ ಬೇರೆ ಕಾರಣಗಳೂ ಇರಬಹುದು. (1) ಶುದ್ಧವಾದ ಗಾಳಿಯಿಲ್ಲದಿರುವುದು, (2) ಕೊಳಕುತನ, (3) ಕಾಲನಿಯಮವಿಲ್ಲದೆ ಮಕ್ಕಳಿಗೆ ಕೋರಿದಾಗ ಆಹಾರವನ್ನು ಕೊಡುವುದು (4) ಮಗುವಿನ ಮೈಗೆ ಸರಿಬೀಳದ ಆಹಾರಗಳನ್ನು ತಿನ್ನಿಸುವುದು, (5) ಜೀರ್ಣಕೋಶವು ಕೆಟ್ಟುಹೋಗಿರುವುದು ಈ ಕಾರಣಗಳಿಂದ ಮಕ್ಕಳು ಚೆನ್ನಾಗಿ ಬೆಳೆಯಲಾರವು

ಮಕ್ಕಳಿಗೆ ಆಹಾರವನ್ನು ಕೊಡತಕ್ಕ ಪಾತ್ರೆಗಳು, ಬಟ್ಟಲು, ರಬ್ಬರು ಚೀಪು ಮುಂತಾದವುಗಳನ್ನು ಶುದ್ಧವಾಗಿಡದಿದ್ದರೆ, ಅದರಿಂದ ಮಕ್ಕಳ ಆರೋಗ್ಯಕ್ಕೆ ಹಾನಿಯುಂಟು

ಕಾಲನಿಯಮವಿಲ್ಲದೆ ಆಹಾರವನ್ನು ಕೊಡುವುದು.

ಅನೇಕ ಹೆಂಗಸರು, ಮಕ್ಕಳಿಗೆ ಆಹಾರವನ್ನು ಕೊಡುವುದರಲ್ಲಿ ಕಾಲನಿಯಮವಿಲ್ಲದೆ, ತಮಗೆ ಅವಕಾಶವು ದೊರಕಿದಾಗ, ಅಥವಾ ಮಗುವು ಅಳುವುದಕ್ಕೆ ಆರಂಭಿಸಿದಾಗ ಆಹಾರವನ್ನು ಕೊಡುವುದುಂಟು. ಹೀಗೆ ಮಾಡುವುದರಿಂದ ಆ ಮಕ್ಕಳಿಗೆ ಅಪಾಯವುಂಟು.

ಮಕ್ಕಳ ಮೈಗೆ ಸರಿಬೀಳದ ಆಹಾರಗಳು.

ಅನೇಕ ಹೆಂಗಸರು ತಮ್ಮ ಮಕ್ಕಳಿಗೆ ಹಿಟ್ಟಿನಪದಾರ್ಥವು ಹೆಚ್ಚಾಗಿ ಕಲೆತಿರುವ ಆಹಾರಗಳನ್ನು ಕೊಡುವುದುಂಟು ಇವು ಚಿಕ್ಕ ಮಕ್ಕಳಿಗೆ ಜೀರ್ಣವಾಗಲಾರವು ಗಂಜಿ, ಅನ್ನ, ಹಿಟ್ಟು, ರೊಟ್ಟಿ ಬಿಸ್ಕತ್ತು, ಇವುಗಳಲ್ಲಿ ಹಿಟ್ಟಿನಪದಾರ್ಥವು ಹೆಚ್ಚಾಗಿರುವುದು. ಮಗುವಿಗೆ 6 ತಿಂಗಳು ತುಂಬಿದ ಮೇಲೆ ಹಿಟ್ಟಿನ ಪದಾರ್ಥವು ಸೇರಿದ ಆಹಾರಗಳನ್ನು ಕೊಟ್ಟರೂ ಬಾಧಕವಿರದು ಆದರೆ ಅವು ಆಯಾ ಮಕ್ಕಳ ಮೈಗೆ ಅನುಕೂಲಿಸುವಂತೆ ಪ್ರತ್ಯೇಕವಾಗಿ ತಯಾರಿಸಿದ್ದಾಗಿರಬೇಕು

ಕೆಲವು ವೇಳೆಗಳಲ್ಲಿ ನಮಗೆ ಒಳ್ಳೇ ಹಸುವಿನ ಹಾಲಾಗಲಿ ಮೇಕೆಯಹಾಲಾಗಲಿ ಸಿಕ್ಕದೆ ಹೋಗಬಹುದು. ಆಗ ನಾವು ಒಣಗಿಸಿಟ್ಟ ಕೆಲವು ತರದ ಹಾಲನ್ನು ಮಕ್ಕಳಿಗೆ ಉಪಯೋಗಿಸಬಹುದು ಗ್ಲಾಕ್ಸೋ, ಹಾರ್ಲಿಕ್ಸ್, ಅಲೆನ್ಬರಿ, ಎಂಬ ಹೆಸರುಗಳಿಂದ ಕರೆಯಲ್ಪಡುವ ಹಾಲು ಈ ವಿಧವಾದುವು. ಈ ಕೃತ್ರಿಮವಾದ ಹಾಲನ್ನು ಮಕ್ಕಳಿಗೆ ಬಿಡುವಾಗ ದಾದಿಯ ಎಡವ ಅಥವಾ ಮೂರಾವರ್ತಿ ಸಿಂದಿಬೇರಸವನ್ನಾಗಲಿ, ಕಿತ್ತಲೆಯನ್ನಿನ ರಸವನ್ನಾಗಲಿ ಕೊಡುತ್ತ ಬರಬೇಕು.

ಈ ದೇಶದಲ್ಲಿ ಅನೇಕ ಹೆಂಗಸರು ಮಕ್ಕಳಿಗೆ ಗಟ್ಟಿ ಮಾಡಿದ ಹಾಲನ್ನೇ ಕೊಡುವರು. ಅದರಲ್ಲಿ ದೋಷವಿಲ್ಲದುಂಟು ಇಂತಹ ಹಾಲಿನಲ್ಲಿ ಸಕ್ಕರೆಯು ಬಹಳ ಹೆಚ್ಚಾಗಿ ಸೇರಿರುವುದು ಇದರಿಂದ ಮಕ್ಕಳ ಜೀರ್ಣಕೋಶವು ಕೆಟ್ಟುಹೋಗುವುದು ಇದಲ್ಲದೆ ಹೆಂಗಸರು ಮತ್ತೊಂದು ದೊಡ್ಡ ತಪ್ಪನ್ನು ಮಾಡುವರು ಕೆನೆಯನ್ನು ತೆಗೆದು ಗಟ್ಟಿ ಮಾಡಿದ ಹಾಲನ್ನು ಕಲವರು ಉಪಯೋಗಿಸುವರು ಇಂತಹ ಹಾಲಿನಲ್ಲಿ ಪುಷ್ಟಿಕರವಾದ (ಮೇದೋವೃದ್ಧಿಕರವಾದ) ಪದಾರ್ಥವು ಸಾಕಾದಷ್ಟು ಸೇರಿರುವುದಿಲ್ಲ ಮಕ್ಕಳ ಆರೋಗ್ಯಕ್ಕೆ ಈ ಪದಾರ್ಥವು ಬಹಳ ಅವಶ್ಯವಾಗಿದೆ. ಅದರಿಂದ ಗಟ್ಟಿಮಾಡಿದ ಹಾಲನ್ನು ಉಪಯೋಗಿಸುವ ಕೆನೆಯನ್ನು ತೆಗೆಯದೆ ಗಟ್ಟಿಮಾಡಿದ ಹಾಲನ್ನೇ ನೋಡಿ ಕೊಳ್ಳಬೇಕು ಅನೆನಿಗೆಹುದ ಹಾಲಿನಲ್ಲಿ ಮಾತ್ರವೆ ಪುಷ್ಟಿಕರವಾದ ಪದಾರ್ಥವು ತಕ್ಕಷ್ಟು ಸೇರಿರುವುದು

ಮಕ್ಕಳಿಗೆ ಅಜೀರ್ಣಭೇದಿ, ಮತ್ತು ವಾಂತಿ ಇವುಗಳಿದ್ದಾಗ ವಿಸರ್ಜಿಸಬೇಕು

ಮಕ್ಕಳು ಪುಷ್ಟಿಯಾಗಿ ಬೆಳೆಯುವುದಕ್ಕೆ ಬೇರೊಂದು ಕಾರಣವುಂಟು. ಕೆಲವು ಮಕ್ಕಳಿಗೆ ಜೀರ್ಣಶಕ್ತಿಯು ಬಹಳ ಕಡಿಮೆಯಾಗಿ, ಅದರಿಂದ ಆಗಾಗ ವಾಂತಿಯೂ, ಭೇದಿಯೂ ಆಗುತ್ತಲೇ ಇರುವುದುಂಟು ಇಂತಹ ಸ್ಥಿತಿಯಲ್ಲಿ ಮಕ್ಕಳನ್ನು ಒಳ್ಳೆ ಡಾಕ್ಟರಿಗೆ ತೋರಿಸಬೇಕು. ಆ ಮಗುವಿಗೆ ಅನುಕೂಲಿಸುವ ಆಹಾರವೇನೆಂಬುದನ್ನು ಆ ಡಾಕ್ಟರಲ್ಲಿ ತಿಳಿದು, ಅದೇ ಆಹಾರವನ್ನು ಕೊಡಬಹುದೇ, ಕೊಡದೇ

ಎಂದು ಕೇಳಿ ತಿಳಿಯಬೇಕು. ದಾದಿಯರಾಗಲಿ, ನೆರೆಹೊರೆಯ ಸ್ನೇಹಿತರಾಗಲಿ ಹೇಳಿದ ಮಾತನ್ನೇ ನಂಬಿ ನಡೆಯಬಾರದು. ಡಾಕ್ಟರು ಹೇಳಿದ ರೀತಿಯಲ್ಲಿಯೇ ನಡೆಯಬೇಕು. ಸವಿಾಪದಲ್ಲಿ ಯಾರಾದರೂ ಲೇಡಿ ಡಾಕ್ಟರುಗಳಿದ್ದರೆ, ಅವರಲ್ಲಿಗೆ ಹೋಗಿ ಕೇಳುವುದುತ್ತಮ.

ಕೆಲವು ಮಕ್ಕಳು ಚಕ್ರಗಾಲಿನಿಂದ ನಡೆಯುವುದೇಕೆ ?

ಎಂದು ಮಗುವು ತುಂಬುವುದಕ್ಕೆ ಮೊದಲು ಕೆಲವು ಮಕ್ಕಳು ಚಕ್ರಗಾಲಿನಿಂದ ನಡೆಯುವುದನ್ನು ನೀವು ನೋಡಿರಬಹುದು. ಇದು ಆ ಮಕ್ಕಳನ್ನು ಹೆತ್ತ ತಾಯಿಯರ ಅಥವಾ ಅವುಗಳನ್ನು ಪೋಷಿಸಿದ ದಾದಿಯರ ತಪ್ಪಿನಿಂದ ಹೊಸತು ಬೇರೆಯಲ್ಲ. ಆಹಾರದೋಷದಿಂದಲೇ ಮಕ್ಕಳಿಗೆ ಈ ವಿಕಾರವುಂಟಾಗುವುದು. ದುರಾಹಾರಗಳಿಂದ ಅವುಗಳ ಮೈಯ್ಯಲ್ಲಿ “ಗ್ರಹಣಿ” (Rickets) ಎಂಬ ರೋಗವುಂಟಾಗಿ, ಅದರಿಂದ ಮೂಳೆಗಳೆಲ್ಲವೂ ಬಹಳ ಮೃದುವಾಗುವುವು. ಆಗ ಕಾಲಿನ ಮೂಳೆಗಳು ಶರೀರದ ಭಾರವನ್ನು ತಡೆಯಲಾರದೆ ಹೊರಗಡೆಗೆ ಬಗ್ಗಿ ಹೋಗುವುವು. ಈ ಕಾರಣದಿಂದಲೇ ಕೆಲವು ಮಕ್ಕಳು ಚಕ್ರಗಾಲಿನಿಂದ ನಡೆಯುವುವು.

ಸಣ್ಣ ಕೂಸುಗಳಿಗೆ ಯಾವ ರೀತಿಯ ಅಂಗಸಾಧನೆಯನ್ನು ಮಾಡಿಸಬೇಕು ?

ಹೆತ್ತತಾಯಿಯರು ಇದೊಂದು ವಿಷಯವನ್ನು ಕೇಳಿ ತಿಳಿಯಬೇಕಾದುದು ಅವಶ್ಯವು. ಸಣ್ಣ ಕೂಸುಗಳೂ ಕೂಡ ಅದಕ್ಕೆ ತಕ್ಕಷ್ಟು ಅಂಗಸಾಧನೆಯನ್ನು ಮಾಡಿಸುವುದು ಬಹಳ ಅವಶ್ಯವು. ಆದರೆ ಮಗುವಿಗೆ 15 ಅಥವಾ 16 ತಿಂಗಳು ತುಂಬುವುದಕ್ಕೆ ಮೊದಲು ನಡೆಯುವುದಕ್ಕೆ ಬಿಡಬಾರದು.

ಮಕ್ಕಳು ದಿನಕ್ಕೆ ಎಷ್ಟುಹೊತ್ತು ನಿದ್ರೆಮಾಡಬೇಕು ?

ಮಗುವು ಹುಟ್ಟಿದ 15 ದಿನಗಳವರೆಗೆ ಆಹಾರಕಾಲಗಳಲ್ಲಿ ಹೊರತು ಉಳಿದ ಕಾಲದಲ್ಲಿ ಹೆಚ್ಚಾಗಿ ನಿದ್ರೆಮಾಡುತ್ತಲೇ ಇರಬೇಕು. ಎಂದರೆ 24 ಘಂಟೆಗಳಲ್ಲಿ 19 ಘಂಟೆಗಳ ಕಾಲವನ್ನು ನಿದ್ರೆಯಲ್ಲಿಯೇ ಕಳೆಯಬೇಕು. ಒಂದು ತಿಂಗಳು ತುಂಬಿದಮೇಲೆ ಮಕ್ಕಳನ್ನು ತಾಯಿಯರು ಪ್ರತಿದಿನವೂ ಸಾಯಂಕಾಲದ ಹೊತ್ತಿನಲ್ಲಿ ಒಂದು ಘಂಟೆಯ ಕಾಲದವರೆಗೆ ಎಚ್ಚರದಲ್ಲಿಯೇ ಇರಿಸಬೇಕು. ಹೀಗೆ ಮಾಡುವುದರಿಂದ ಮಕ್ಕಳಿಗೆ ರಾತ್ರಿಯಲ್ಲಿ ಚೆನ್ನಾಗಿ ನಿದ್ರೆ ಹತ್ತುವುದು. ಇನ್ನೂ ಕೆಲವು ತಿಂಗಳು ಬೆಳೆದ ಕೂಸುಗಳು ತೊಟ್ಟಿಲಲ್ಲಿ ಮಲಗಿದ್ದು ಹಗಲು ಹೊತ್ತಿನಲ್ಲಿ ಆಗಾಗ ಎಚ್ಚರಗೊಂಡು ಆಡುತ್ತಿರಬೇಕು. ಒಂದು ವರ್ಷ ತುಂಬಿದ ಮಗುವು, ರಾತ್ರಿ 9-30 ಯಿಂದ ಬೆಳಿಗ್ಗೆ 6 ಘಂಟೆಯವರೆಗೆ ಸುಖವಾಗಿ ನಿದ್ರಿಸಬೇಕು. ಇಂತಹ ಮಕ್ಕಳು ಹಗಲುಹೊತ್ತಿನಲ್ಲಿಯಾದರೂ 11 ರಿಂದ 3 ಘಂಟೆಯವರೆಗೂ, ಸಾಯಂಕಾಲ 6-30 ಘಂಟೆಯಿಂದ 9 ಘಂಟೆವರೆಗೂ ಎರಡಾವರ್ತಿ ನಿದ್ರೆಮಾಡಬೇಕು. ಅದಕ್ಕೂ ಹೆಚ್ಚು ತಿಂಗಳು ಬೆಳೆದ ಕೂಸು ರಾತ್ರಿಯಲ್ಲಿ 12 ಘಂಟೆಗಳ ಕಾಲದವರೆಗೆ ಚೆನ್ನಾಗಿ ನಿದ್ರೆಮಾಡಬೇಕು. ಮಕ್ಕಳನ್ನು ಪೋಷಿಸುವುದರಲ್ಲಿ ಮೇಲ್ಕಂಡ ನಿಯಮಗಳನ್ನೆಲ್ಲಾ ಅನುಸರಿಸಬೇಕಾದುದು ಬಹಳ ಅವಶ್ಯವು.

ವರ್ತಮಾನಸಂಗ್ರಹ

ಒಳದೇಶ.

ಮೇ ಆಖೈರಿಗೆ ಚಂದಾ ತೀರುವ ಚಂದಾದಾರರೆಲ್ಲರೂ ಈ ಸಂಚಿಕೆಯೊಡನೆ ಮುಂದಿನವರ್ಷದ ಚಂದಾ ಮೊಬಲಗನ್ನು ಕಳುಹಿಸಬೇಕೆಂತ ಹಿಂದಿನ ಎರಡು ಸಂಚಿಕೆಗಳೊಡನೆ “ನೋಟೀಸ್” ಕೊಡಲಾಯಿತು. ಇನ್ನು ಎರಡುವಾರದೊಳಗೆ ಚಂದಾಮೊಬಲಗು ನಮಗೆ ತಲುಪಬೇಕೆಂದು ಭಿರವನೆಯಿಂದ ಇವರುಗಳಿಗೆಲ್ಲಾ ಎಂಡ್‌ವಾರದ ಪತ್ರಿಕೆಯನ್ನು ವಿಾ.ಪೀ. ಕಳುಹಿಸಲಾಗುತ್ತೆ. ಅನುಕೂಲ ಚಂದಾ ಆಫೀಸಿಗೆ ಕಲಿಸದಿದ್ದರೆ ಪತ್ರಿಕೆಯನ್ನು ನಿಲ್ಲಿಸಲಾಗುತ್ತೆ. ಅದ್ದರಿಂದ ಚಂದಾ ತೀರಿದ ಚಂದಾದಾರರೆಲ್ಲರೂ ಚಂದಾಮೊಬಲಗನ್ನು ಕೂಡಲೇ ಕಳುಹಿಸಿಕೊಡಬೇಕೆಂತ ಕೇಳಿಕೊಳ್ಳಲಾಗಿದೆ. ನಮ್ಮ ಏಜಂಟರಿಗೆ ಚಂದಾ ವಾಪ್ತಿಮಾಡಿದರೆ ನಮ್ಮ ಆಫೀಸಿಗೆ ಕೂಡಲೇ ಅವರು ತಿಳಿಸುವಂತೆ ಅವರನ್ನು ಚಂದಾದಾರರು ಕೇಳಿಕೊಳ್ಳಬೇಕು.

ಕೊಡಗು ಸೆಂಟ್ರಲ್‌ಬ್ಯಾಂಕಿನ ಡೈರೆಕ್ಟರುಗಳ ವಿಾಟಿಂಗ್ ಸಹ ತಾ|| 8-6-24 ರಲ್ಲಿ ಮುನಸಿಪಲ್ ಆಫೀಸಿನಲ್ಲಿ ನಡೆಯಿತು.

ಮಡಿಕೇರಿ ವ್ಯಾಪಾರಿಗಳಾದ ವೈಶ್ಯರ ಲಿಂಗಣ್ಣಶೆಟ್ಟರು ಮಂಗಳೂರು ಸಾಹುಕಾರ್ ನೆಲ್ಲಿಕಾಯಿ ವೆಂಕಟರಾಯರಿಂದ ನಾಲ್ಕುಸಾವಿರ ರೂಪಾಯಿಗಳನ್ನು ಪಡಕೊಂಡು ಒಂದು ಹೋಟೆಲಿನಲ್ಲಿ ಮಲಗಿದ್ದಾಗ ರಾತ್ರಿಸಮಯದಲ್ಲಿ ತಲೆಯಡಿಯಲ್ಲಿದ್ದ ರೂಪಾಯಿ ಗಂಟನ್ನು ಯಾರೋ ಎತ್ತಿಕೊಂಡು ಹೋಗಿದ್ದಾರೆಂತ ವರ್ತಮಾನ ಬಂದಿದೆ.

ಮಡಿಕೇರಿಯಲ್ಲಿ ಸಾರ್ವಜನಿಕವಾಫಿ ವಾಚನಾಲಯವನ್ನು ಈವರೆಗೆ ಸರಾಸರಿ 13 ಜನ ವಾಚಕರು ಪ್ರತಿನಿತ್ಯವೂ ಉಪಯೋಗಿಸಿದ್ದಾರೆ.

ಲೀಕಮಿಟಿ ರಿಪೋರ್ಟಿನ ಸಾರಾಂಶವನ್ನು ಇನ್ನೊಂದು ಕಡೆ ಪ್ರಕಟಿಸಿದ್ದೇವೆ. ಈ ಕಮಿಟಿಯ ಮುಂದೆ ಜನಗಳ ಅಭಿಪ್ರಾಯವಾಗುತ್ತಿದ್ದಾಗ ನಾವು ಅಗ್ರಲೇಖನಗಳನ್ನು ಬರೆದಿದ್ದೆವು. ಈ ರಿಪೋರ್ಟಿನಮೇಲೂ ಇನ್ನೊಂದುವಾರ ಬರೆಯಬೇಕೆಂತ ಇದ್ದೇವೆ.

ಮಡಿಕೇರಿಯಲ್ಲಿ 2 ನೇ ತಾರೀಖಿನಿಂದ ಮಳೆಗಾಲವು ಪ್ರಾರಂಭವಾದಂತೆ ಕಾಣುತ್ತೆ.

ಜೈಲಿನಿಂದ ಬಿಡುಗಡೆಮಾಡಿದ್ದಕ್ಕೆ ಸಂತೋಷ ಸಂತೋಷ ವಿದಿಯೆಂತಲೂ ಈ ಕಾರ್ಯಕ್ಕೆ ವೈಸ್‌ರಾಯರಿಗೆ ಅಭಿನಂದಿಸಬೇಕೆಂತಲೂ ಮಾಡಿದ ಠರಾವನ್ನು ವೈಸ್‌ರಾಯರಿಗೆ ಕಳುಹಿಸಿದ್ದು ಅವರಿಗೆ ಕಲಿಸಿದೆಯೆಂತ ಅವರ ಪ್ರೈವೆಟ್ ಸೆಕ್ರಿಟೆರಿಯವರಿಂದ ಸಂಘದ ಸೆಕ್ರಿಟರಿಯವರಿಗೆ ಕಾಗದಬಂದಿದೆ.

ಸೆಂಟ್ರಲ್‌ಬ್ಯಾಂಕಿನ ಜನರಲ್ ವಿಾಟಿಂಗ್ ತಾರೀಕು 28-5-24 ರಲ್ಲಿ ಇದ್ದದ್ದು ಕ್ಕೋರಂ ಸಾಲದೆ ನಡೆಯಲಿಲ್ಲ. 8-6-24 ನೇ ಆದಿತ್ಯವಾರ ಬೆಳಿಗ್ಗೆ 9 ಘಂಟೆ ಮುನಸಿಪಲ್ ಆಫೀಸಿನಲ್ಲಿ ನಡೆಯುವಂತೆ ಅಡ್ಜರ್ನ್ ಆಗಿದೆ.

ಕೊಡಗಿನ ಕಿತ್ತಳೆ ಮರಗಳಿಗೆ ತಗಲುವ ಹುಳುಗಳ ಕಾಟವನ್ನು ತಪ್ಪಿಸಲು ಕಂಡುಹಿಡಿಯಲಿಕ್ಕೆ ಒಬ್ಬ ಆಫೀಸರನ್ನು ಕಳುಹಿಸಬೇಕೆಂತ ಮೈಸೂರು ಕೃಷಿ ಇಲಾಖೆಯ ಮುಖ್ಯ ಆಫೀಸರಾದ ಡಾಕ್ಟರ್ ಕೋಲ್‌ಮ್ಯಾನರಿಗೆ ನಮ್ಮ ಸರಕಾರದವರು ಬರಕೊಂಡಮೇಲೆ ಅಲ್ಲಿಂದ ಒಬ್ಬ ಆಫೀಸರು ಒಂದು ಎರಡು ವಾರದಲ್ಲಿ ಆಜನಾಯಿಸಿ ಮಾಡುತ್ತಿದ್ದಾರೆ.

ಮಡಿಕೇರಿ ಕಾನ್ವೆಂಟ್ ಸ್ಕೂಲಿಗೆ ಕಲ್ಲನ್ನು ಕಟ್ಟಲಿಕ್ಕೆ ಸ್ಥಳವನ್ನು ಕೊಂಡುಕೊಟ್ಟ ಗತಿಸಿದ ಮೆ|| ಕಂಡೀರಂಡ ನಂಜಪ್ಪನವರ ಹೆಸರನ್ನು ಕಟ್ಟಡದಲ್ಲಿ ಸ್ಥಾಪಿಸುವ ಸಮಾರಂಭವು ತಾ|| 1-6-24 ರಲ್ಲಿ ನಡೆಯಿತು. ಅವರ ಪುತ್ರ ಜ್ಯಾಯಿಂಟ್ ಗಣಪತಿಯವರು ಮೆ|| ನಂಜಪ್ಪನವರ ಒಂದು ಭಾವಚಿತ್ರವನ್ನು ಸಹ ಸ್ಕೂಲಿಗೆ ಕೊಟ್ಟಿದ್ದಾರೆ. ಇದನ್ನು ತಿಳಿಯಬಹುದು. ಹಾಜರಿದ್ದವರಿಗೆ ತಿಂದಿ ತೀರ್ಥವು ಏರ್ಪಡಿಸಲ್ಪಟ್ಟಿತು.

ಕಾನ್ವೆಂಟ್ ಪ್ರೋವಿನ್ಸ್ ಸ್ಕೂಲಿನ ಮೆಂಬರುಗಳಾಯಿಕೆ ಕೌನ್ಸಿಲಿಗೆ ಚುನಾಯಿತರಾದ ಮೆ|| ನೆಲ್ಲಿರ ಸುಬ್ಬಯ್ಯನವರು, ಮೆ|| ಪನೆಯಂಡ ಚಿಣ್ಣಪ್ಪನವರು, ಮೆ|| ಬಿ ಶ್ರೀಪತಿರಾಯರು, ಮೆ|| ಯಸ್. ಯಮ್ ಪಿಟೋರವರು, ಮೆ|| ಸಿ. ಯಮ್ ವೆಂಕಪ್ಪಯ್ಯನವರು ಇವರುಗಳಿಗೆ ಕ್ಲಬ್ಬಿನವರು ಒಂದು ಫಲಹಾರದ ಪಾರ್ಟಿಯನ್ನು ತಾರೀಕು 9-6-24 ಕ್ಕೆ ಏರ್ಪಡಿಸಿದ್ದಾರೆ.

ಮೆ|| ಗಂಡುಗುಟ್ಟಿ ಮಾಣ್ಣೆಪ್ಪನವರ ಎರಡನೇ ಮಗ ರಾಮಚಂದ್ರನೆಂಬವನು IV ಫಾರಮಿನಲ್ಲಿ ಕಳೆದ ವರ್ಷ ವಿದ್ಯಾರ್ಥಿಯಾಗಿದ್ದವನಿಗೆ ಪ್ರಮೋಶನ್ ಆಗಲಿಲ್ಲವೆಂಬ ಬೇಸರದಿಂದ ಅಫೀಮು ತಿಂದು ಮೃತಪಟ್ಟನು.

ಜವಾಹರಲಾಲರ ನೆಹರು ಹುದಿಕೇರಿಯಲ್ಲಿ ನಡೆದ ಮಹಾಸಭೆಯಲ್ಲಿ ಮಹಾತ್ಮಾ ಗಾಂಧಿಯವರನ್ನು ಕೊಡಗು ಕೌನ್ಸಿಲಿನ ಪ್ರೆಸಿಡೆಂಟ್ ಆಯಿಟಿಯವರ ಶಿಫಾರಸ್ಸು ಮೇರೆ ವೀರರಾಜಪೇಟೆ ಸ್ಕೂಲಿನಲ್ಲಿ ಮಾಸ್ತರುಗಳಾದ ಮೆ||ಕೋಟೆರ ಮುತ್ತಣ್ಣ ಬಿ. ಮತ್ತು ಪಟ್ಟಡ ಯಮ್ ಉತ್ತಪ್ಪ ಬಿ.ಎ. ಯವರನ್ನು ಸೈದಾಪೇಟೆಗೆ ಯಲ್.ಟಿ. ಪರೀಕ್ಷೆಗೆ ಪರಬೇಕು. ಹೊಂದಲು ಕಳುಹಿಸುವಂತೆ ಕಾಲಾ ಇನ್ಸ್‌ಪೆಕ್ಟರು ಬರೆದಿದ್ದಾರೆಂತ ತಿಳಿಯುತ್ತೇವೆ.

ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರ ಪಟ್ಟಿ ಕಳೆದವಾರ ಕೊಡುವಾಗ್ಗೆ ಬಿಟ್ಟಂಗಾಲ ಗ್ರಾಮದ ಬೀಳುಗುಡ್ಡ ಬೋಕಟರವೂ ಶೆಟ್ಟಿ ಎಂಬವರ ಹೆಸರು ಬಿಟ್ಟುಹೋಗಿದೆ.

ನಾಗರಹೊಳೆ ಫಾರೆಸ್ಟಿನಲ್ಲಿ ಕಾಂಗ್ರಾಟು ನಡಿಸುವ ಮೆ|| ಟ್ಯಾಂ ಎಂಬವರ ಕೆಲಸದ ವಿಷಯದಲ್ಲಿ ಜನರ ಆಪೇಕ್ಷಿಸುತ್ತಿರುವದರಿಂದ ಅಲ್ಲಿ ನಡೆಯುವ ಕೆಲಸ ನೋಡಲು ನಮಗೆ ಅನುಕೂಲ ಕೊಡಬೇಕೆಂತ ಮೆ|| ಪಿ.ಟಿ. ಕೃಷ್ಣಾಜಪ್ಪನವರೂ ಮೆ|| ಹೋಟೆಲ್ ಚಿಣ್ಣಪ್ಪನವರೂ ಚೀಫ್ ಫಾರೆಸ್ಟ್ ಆಫೀಸರಿಗೆ ಬರಕೊಂಡಿದ್ದಾರೆಂತ ತಿಳಿಯುತ್ತೇವೆ.

ಯಡವನಾಡು ನಾಡು ದೇವಣಗೇರಿ ಗ್ರಾಮದ “ಅನಿಮುಕ್ಕಿ” ಎಲ್ಲಿವರ್ ಮೆ|| ವಾಲೇಕಂಡ ಗಣಪತ್ತಿಯವರ ದನಗಳ ಜೊತೆಗೆ ಕಟ್ಟುವರ್ಗದ, ಒಂದು ಆಡು ನೆಟ್ಟಗೋಡಿನ ನೆತ್ತಿಯಲ್ಲಿ ಮತ್ತು ಹೈಗಳ ಕಂಕಳಲ್ಲಿ ಜಾ ಬೊಟ್ಟಗಳಿರುವ ಜಿಂದಾಜು 4 ಅಡಿ ಎತ್ತರವಿರುವ ಒಂದು ಕರಿ ಎಮ್ಮೆ ಒಂದು ನೇರಿಕೊಂಡಿರುವುದರಿಂದ ಸದರಿ ಎಕ್ಕನ್ನು ಕಳ್ಳನಿಂದ ವಾಲಿಕರು ಕೂಡ್ಲಿ ತನ್ನ ಮನೆಗೆ ಬಂದು ಹೊಡಕೊಂಡುಹೋಗಬಹುದಾಗಿ ಸದರಿ ಗಣಪತ್ತಿಯವರು ತಿಳಿಸಿರುತ್ತಾರೆ.

ಮೆ|| ಕೊಂಗಂಡ ಕುಟ್ಟಪ್ಪನವರು ಬಸ್ಸ ರಾಬರ್ಟ್ ಸೀನಿಟರಿ ಪರೀಕ್ಷೆಯಲ್ಲಿ ಪಾಸಾಗಿರುತ್ತಾರೆಂತ ತಿಳಿದು ಸಂತೋಷಪಡುತ್ತೇವೆ.

ಹಿಂದೂದೇಶ.

ಕಲ್ಕತ್ತಾ ಹೈಕೋರ್ಟು ಜಡ್ಜಿಯಾಗಿದ್ದ ರಿಟೈರ್ ಆದ ಸರ್ ಅಶುತೋಷ್‌ಮುಖರ್ಜಿ ಎಂಬವರು ಪಾಟ್ನಾದಲ್ಲಿ ಮೃತರಾದರು. ಇವರು ಕಲ್ಕತ್ತಾ ಯೂನಿವರ್ಸಿಟಿಯನ್ನು ಸರಕಾರದ ಅಧಿಕಾರದಿಂದ ತಪ್ಪಿಸಲಿಕ್ಕೆ ಬಹಳವಾಗಿ ಪ್ರಯತ್ನಿಸಿದರು. ಬಹಳ ಪ್ರಖ್ಯಾತಿಯಾದ ಹೈಕೋರ್ಟು ಜಡ್ಜಿಯರಾಗಿದ್ದರು.

ತಿರುವಾಂಕೂರಿನ ವೈಕ್ಕಮ್ಮಿನಲ್ಲಿ ಸತ್ಯಾಗ್ರಹ ನಡೆಯುತ್ತಲೇ ಇದೆ. ಅಲ್ಲಿಂದ ಪ್ರತಿನಿಧಿಗಳು ಮಹಾತ್ಮರ ಭೇಟಿಗೆ ಹೋಗಿದ್ದರು. ಹೊರಗಿನ ಸಹಾಯ ತೆಗೆದುಕೊಳ್ಳದೇನೇ ಉಪವಾಸವಿದ್ದೇನೇ ಸತ್ಯಾಗ್ರಹವನ್ನು ಮುಂದರಿಸುತ್ತಾ ಹೋಗುವುದು ಉತ್ತಮವೆಂತ ಹೇಳಿದರು.

ಬಿಹಾರ ಪ್ರಾಂತ್ಯದಲ್ಲಿ ವಾಂತಿಭೇದಿ ಬಾಯಿಲೆಯು ಬಹಳ ಪ್ರಬಲವಾಗಿಯೇ ಇದೆ. ಒಂದು ವಾರದಲ್ಲಿ 25,000 ಜನರು ಸತ್ತರು.

ಲಾಹೋರಿನಲ್ಲಿ ಮುಸ್ಲಿಂಲೀಗಿನ ಅಧಿವೇಶನವು ಮೆ|| ಜಿನ್ನಾರವರ ಅಧ್ಯಕ್ಷತೆಯಲ್ಲಿ ನಡೆಯಿತು. ಹಿಂದೂ ಮುಸಲ್ಮಾನ್ ಒಗ್ಗಟ್ಟಿಗೂ ಹಿಂದೂಸ್ಥಾನಕ್ಕೆ ಸ್ವರಾಜ್ಯಪಡೆಯುವೂ ಸಹ ಎಲ್ಲಾ ಮುಸಲ್ಮಾನರೂ ಪ್ರಯತ್ನಿಸಬೇಕೆಂತ ಅಧ್ಯಕ್ಷರ ಭಾಷಣದಲ್ಲಿ ಹೇಳಿದ್ದಾರೆ.

ಮಹಾತ್ಮಾ ಗಾಂಧಿಯವರು ಜುಹೂವಿನಿಂದ ಸಬರ್ ಮತಿ ಆಶ್ರಮಕ್ಕೆ ಹೋಗಿದ್ದಾರೆ. ಇವರು ಸ್ವರಾಜ್ಯಪಕ್ಷದವರನ್ನು ಕಾಂಗ್ರೆಸ್ಸಿನ ಉದ್ಯೋಗಗಳಲ್ಲಿ ಇಟ್ಟುಕೊಳ್ಳಕೂಡದೆಂತಲೂ, ಕಾಂಗ್ರೆಸ್ಸಿನ ತತ್ವವನ್ನು ನಂಬುವವರೇ ಕಾಂಗ್ರೆಸ್ಸಿನ ಅಧಿಕಾರದಲ್ಲಿರಬೇಕೆಂತಲೂ ಬರೆದಿದ್ದಾರೆ.

ಮೆ|| ಯಹ್ಯಾ ಯಂ ಸಮರ್ತ್ ಎಂಬ ಲೆಜಿಸ್ಲೇಟಿವ್ ಅಸೆಂಬ್ಲಿಯ ಮೆಂಬರಾಗಿದ್ದವರನ್ನು ಲಂಡನ್ನಿನಲ್ಲಿರುವ ‘ಇಂಡಿಯಾ ಕೌನ್ಸಿಲಿಗೆ ಮೆಂಬರಾಗಿ ನೇಮಿಸಲ್ಪಟ್ಟಿದ್ದಾರೆ. ಇವರು ಲೀ ಕಮಿಷನಿನ ಒಬ್ಬ ಮೆಂಬರಾಗಿದ್ದರು.

ಇಂಡಿಯಾ ದೇಶದಲ್ಲಿ ಪಬ್ಲಿಕ್ ಸರ್ವೀಸ್ ಕಮಿಷನ್ ಯಾರು ಯಾವ ಯಾವ ವರ್ಗದ ಜನರಮೇಲೆ ಎಷ್ಟೆಷ್ಟು ಬೀಳುತ್ತಿದೆ ಎಂಬದನ್ನೂ ಮಧ್ಯವರ್ತಿ ಮತ್ತು ಪ್ರಾಂತೀಯ ಕಂದಾಯಗಳು ನ್ಯಾಯವಾಗಿ ಹಾಕಲ್ಪಟ್ಟಿದೆಯೋ ಎಂಬದನ್ನೂ, ಬೇರೆ ವಿಧದ ಕಂದಾಯಬೇಕಾದರೂ ಹಾಕಲು ಸಾಧ್ಯವಿದೆಯೋ ಎಂಬದನ್ನೂ, ಕಂದಾಯಗಳನ್ನು ವಸೂಲ್ ಮಾಡಲಿಕ್ಕೆ ಬೇಕಾದ ಸಿಬ್ಬಂದಿ ವಿಷಯವನ್ನೂ ಯಾವದಾದರೂ ಗುಂಪಿನ ಜನರಮೇಲೆ ಕಂದಾಯವು ಹೆಚ್ಚಿದ್ದರೆ ಕಡಿಮೆಮಾಡುವದೂ, ಮತ್ತು ಕಡಿಮೆ ಇದ್ದವರಮೇಲೆ ಹೆಚ್ಚಿಸುವದೂ ಮುಂತಾದ ವಿಷಯಗಳನ್ನು ಯೋಚಿಸಿ ಅಭಿಪ್ರಾಯ ಕೊಡಲು ಮೆ|| ಟಾಡ್ಹಂಟರ್ (ಅಧ್ಯಕ್ಷರು) ಸರ್ ಪರ್ಸಿ ಥಾಂಪ್ಸನ್, ಬರ್ದ್ವಾನ್ ಮಹಾರಾಜರು ಸಂತ ಪ್ರೊಫೆಸರ್ ಪರಾಂಜಪೆಯವರು ಸಹ ಒಂದು ಕಮಿಟಿಯಾಗಿ ನೇಮಿಸಲ್ಪಟ್ಟಿದ್ದಾರೆ. ಭೂಮಿ ಕಂದಾಯವನ್ನು ವ್ಯತ್ಯಾಸ ಮಾಡುವ ಹಕ್ಕೇನೂ ಇವರಿಗೆ ಇಲ್ಲ.

ಕನ್ನಂಬಾಡಿಕಟ್ಟೆ ವಿಷಯ ಮೈಸೂರು ಸರಕಾರಕ್ಕೂ ಮದ್ರಾಸ್‌ಸರಕಾರಕ್ಕೂ ಒಪ್ಪಂದದ ಶರತ್ತುಗಳು ಮೈಸೂರು ಗೆಜೆಟ್ಟಿನಲ್ಲಿ ಪ್ರಕಟವಾಗಿದೆ.

ಆರೇಬಿಯಾದ ಶಿಹಾಬ್ ಮತ್ತು ನಕಾಬಾ ಎಂಬ ಪ್ರಾಂತ್ಯಗಳು ಸುಲ್ತಾನರಾದ ಷರೀಫ್ ಹುಸೇನ್ ಅವರಿಗೆ ಸೇರಿ ಟ್ರಾನ್ಸ್ ಜೋರ್ಡಾನಿಯಾಗೆ ಒಂದಿದ್ದಾರೆ.

ಲೀ ಕಮಿಷನ್ ರಿಪೋರ್ಟಿನಮೇಲೆ ಎಲ್ಲಾ ದೇಶೀಯ ಪತ್ರಗಳು ಆಕ್ಷೇಪಿಸಿವೆ. ಯೂರೋಪಿಯನರ ಪತ್ರಿಕೆಗಳು ತೃಪ್ತಿ ಸೂಚಿಸಿವೆ.

ಬಂಗಾಳದ ಗವರ್ನರಾಗಿದ್ದ ಲಾರ್ಡ್ ರೊನಾಲ್ಡ್ಶೇ ಎಂಬವರು ಹೊಸದಾಗಿ ಒಂದು ಪುಸ್ತಕವನ್ನು ಇಂಗ್ಲೆಂಡಿನಲ್ಲಿ ಪ್ರಕಟಿಸಿದ್ದಾರೆ. ಅದರಲ್ಲಿ ಹಿಂದುಸ್ಥಾನದ ಬಾಬತ್ತು ಯಲ್ಲಿ ಬರಬೇಕಾಗಿರುವ ಹಣದ ಪಟ್ಟಿಯನ್ನು ಕೊಟ್ಟು ಇದಕ್ಕೆ ಆಕ್ಷೇಪಿಸಿದ್ದಾರೆ. 1916 ಇಸ್ವಿಯಿಂದ 1922 ನೇ ಇಸ್ವಿವರೆಗೆ ಒಂದೂಮುಕ್ಕಾಲು ಕೋಟಿ ಪೌಂಡು ಬರಬೇಕಾಗಿದೆ. ಗ್ರಾಮದ ಒಗ್ಗಟ್ಟಿನಕಡೆಗೆ ಸರಕಾರವು ಗಮನಕೊಡದೆ ಇರುವ ಬದಲು ಗ್ರಾಮ ಪಂಚಾಯಿತಿಗಳ ಹಾಳುಮಾಡುತ್ತಿರುವ ಸರಕಾರ ತತ್ವವನ್ನೂ ಆಕ್ಷೇಪಿಸಿದ್ದಾರೆ.

ಕಲ್ಕತ್ತಾದಲ್ಲಿ ಒಬ್ಬ ಸಬ್ ಇನ್ಸ್‌ಪೆಕ್ಟರಿಗೆ ಯಾರೋ ರಿವಾಲ್ವರಿನಿಂದ ಗುಂಡುಹೊಡೆದಿದ್ದಾರೆ. ಇವನು ದೇಶಭಕ್ತರ ಕೇಸ್‌ಗಳ ಸಂಬಂಧವಾಗಿ ಕೆಲವರನ್ನು ದಸ್ತಗಿರಿ ಮಾಡಿದ್ದನು. ಅವನಿಗೆ ವಿಚಾರದಲ್ಲಿ ಗುಣವಾಗಿ ಆಗಿಹೋಗಿತ್ತು.

ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ಕಳೆದವಾರ ನಾವು ಸಿಡ ಸ್ವಾರಂಭ ಆಕ್ಟಿನ ತಿದ್ದುಪಡಿ ಆಕ್ಟು ಮಂಜೂರಾಯಿತು. ಸ್ವಿಂಟರಿನಿಂದ ಈವರೆಗೆ ಫ್ರೋಟೆಕ್ಷನಿಗೆ ಜಟ್ಟಿಗೆ ಹಾಕಬೇಕಾಗಿದ್ದ ಸ್ವಾಂತ್ಯ ಇಲ್ಲದಿದ್ದರೂ ಸಹ ಸಿವಿಲ್ ಕೋಟೆ ಹಿಡಿಯಬಹುದೆಂತ ಬಾಸೂರಿನಿಂದ ಮಂಜೂರಾಗಿರುತ್ತೆ.

ಧುಲ್ಯದಲ್ಲಿ ಒಬ್ಬ ಅಂಗಡಿ ಶೆಟ್ಟರ ಶ್ರೀಗಾಲ ಫೀಸಿಗೆಂತ ಹಣ ಕೇಳಿಕೊಂಡು ಬಾಬುರಿಗೆ ಹಣ ಕೇಳಿ ಹೋದದ್ದಕ್ಕೆ ವಿಶ್ವಾಸಘಾತಕದ ನೆಪದಿಂದ ಮತ್ತೆ ಅವನಿಗೆ 9 ತಿಂಗಳು ಕಠಿಣಶಿಕ್ಷೆಯಾಗಿದೆ.

ಮಹಾತ್ಮಾ ಗಾಂಧಿಯವರು “ನವಜೀವನ ಪತ್ರಿಕೆಯಲ್ಲಿ ಬ್ರಹ್ಮಚರ್ಯದಮೇಲೆ ಒಂದು ಲೇಖನ ಬರೆದಿದ್ದಾರೆ. ಬ್ರಹ್ಮಚರ್ಯವೆಂದರೆ ಬ್ರಹ್ಮನನ್ನು ಕಾಣುವ ಮಾರ್ಗ ಎಂಬ ಅರ್ಥಮಾಡಿ ಇದನ್ನು ಸಾಧಿಸಲು ಇಂದ್ರಿಯಗಳ ಸ್ವಾಧೀನ ಬೇಕೆಂತಲೂ, ಇದಕ್ಕೆ ದೇಹವನ್ನೂ ಮನಸ್ಸನ್ನೂ ಕೆಲಸಗಳನ್ನೂ ತಿದ್ದಬೇಕೆಂತಲೂ ರಾಮಧ್ಯಾನವು ಇಂದ್ರಿಯನಿಗ್ರಹಕ್ಕೆ ಅನುಕೂಲವಾಗುತ್ತೆಂತಲೂ, ಧ್ಯಾನಮಾಡುವಾಗ ರಾಮನಲ್ಲಿ ಮನಸ್ಸನ್ನಿಟ್ಟು ಕೆಟ್ಟ ಚಿಂತೆಗಳನ್ನೆಲ್ಲಾ ಬಿಟ್ಟುಬಿಡಬೇಕೆಂತಲೂ ಬರೆದಿದ್ದಾರೆ.

ತಿನ್ನವಲ್ಲಿ ಮುನಸಿಪಾಲಿಟಿಗಳಿಗೆ ಸೇರಿದ ಅಂಗಡಿ ಇರಕೂಡದೆಂತ ಮುನಸಿಪಲ್ ಕಮಿಟಿಯಲ್ಲಿ ತೀರ್ಮಾನವಾಗಿದೆ.

ಸೈದಾಪೇಟೆಯಲ್ಲಿ 12 ವರ್ಷದ ಹುಡುಗಿಯು ಮೈಮೇಲಿನ ಬಳೆಯನ್ನು ಬಿಚ್ಚಿಸಲು ಕೀಪದಲ್ಲಿ ಕಾಯಿಸುವಾಗ ಬಟ್ಟೆಗೆ ಬೆಂಕಿ ಹಿಡಿದು ಸತ್ತುಹೋದಳು.

ಮಲಯಾಳಿ ಭಾಷೆಯನ್ನು ಶಾರ್ಟ್‌ಹ್ಯಾಂಡಿನಲ್ಲಿ ಬರೆಕೊಳ್ಳುವ ಕ್ರಮವನ್ನು ಮೆ|| ಲೂ ಯಸ್ ಪಂಡಲೈ ಎಂಬವರು ಕಂಡುಹಿಡಿದಿದ್ದಾರೆ. ಈ ಶಾರ್ಟ್‌ಹ್ಯಾಂಡನ್ನು ತಿರುವಾಂಕೂರು ಸರಕಾರದವರು ಅನುಸರಿಸಿರುತ್ತಾರೆ.

ಜೇಗ್ ಪಟ್ಟಣದಲ್ಲಿ ನಡೆಯುವ ಜನಾಂಗಗಳ ಸಭೆಯಲ್ಲಿ ಬಿಕನೀರ್ ಮಹಾರಾಜರು ಇಂಡಿಯಾ ಪ್ರತಿನಿಧಿಯಾಗಿರುತ್ತಾರೆ.

ರಾಜಕೀಯ ಸುಧಾರಣೆ ವಿಷಯ ವಿಚಾರಕ್ಕೆ ನಿರ್ಧಾರವಾದ ಕಮಿಟಿಯ ಮೆಂಬರುಗಳ ಹೆಸರು ಶೀಘ್ರದಲ್ಲೇ ಪ್ರಕಟಿಸಲ್ಪಡುತ್ತೆ. ಹನ್ನೆರಡು ಮೆಂಬರುಗಳಿರಬಹುದು.

ಮಧುರೆಯಲ್ಲಿ 'ರೈಲ್‌ವೇ ಇಂಜನ್' ಕೆಲಸಮಾಡುವ ಫೈರ್‌ಮೆನ್ ಎಂಬ ಕೆಲಸಗಾರರು ಪ್ರತಿಯೊಂದು ಇಂಜನಿಗೆ ಇಬ್ಬರು ಇರುತ್ತಿದ್ದರು. ಒಬ್ಬನೇ ಕೆಲಸಮಾಡಬೇಕೆಂತ ರೈಲ್ವೇ ಕಂಪೆನಿಯ ಆರ್ಡರ್ ಹುಟ್ಟಿತು. ಈ ಹುಕ್ಮಿಗೆ ವಿರೋಧವಾಗಿ ಒಬ್ಬ ಫೈರ್‌ಮೆನ್ ತಾನೊಬ್ಬನೇ ಕೆಲಸಮಾಡಲಿಕ್ಕೆ ಆಗುವದಿಲ್ಲವೆಂತ ಹೇಳಿದ್ದಕ್ಕೆ ಅವನಿಗೆ ಆರು ತಿಂಗಳವರೆಗೆ ಪ್ರತಿತಿಂಗಳಲ್ಲೂ 12 ರೂ. ಜುಲ್ಮಾನೆ ವಿಧಿಸಿದರು. ಇದಕ್ಕಾಗಿ ಎಲ್ಲಾ ಫೈರ್‌ಮ್ಯಾನ್‌ಗಳೂ ಒಂದಾಗಿ ಮಧುರೆಯಲ್ಲಿ ತಾ|| 30-5-24 ರಲ್ಲಿ ಕೆಲಸಬಿಟ್ಟಿದ್ದಾರೆ. ತಿರುಚನಾಪಳ್ಳಿಗೂ ಈ ಕಂಪು ಹಬ್ಬಿದೆ.

ಮದ್ರಾಸ್ ಹೈಕೋರ್ಟಿಗೆ ಮೆ|| ಎ. ವಿ. ಶ್ರೀನಿವಾಸೈಯ್ಯಂಗಾರ್, ಮೆ|| ಜಾಕ್ಸನ್ ಐ. ಸಿ. ಯಸ್ ಮತ್ತು ರೆಯಿಲಿ ಎಂಬವರು ಜಡ್ಜಿಯಾಗಿ ನೇಮಿಸಲ್ಪಟ್ಟಿದ್ದಾರೆ.

ಮದ್ರಾಸ್ ಗವರ್ನರ್ ಲಾರ್ಡ್ ಗೋಶನ್ ಮತ್ತು ಪತ್ನಿಯರು ಮೈಸೂರು ಮಹಾರಾಜರವರ ವರ್ಧಂತಿ ಉತ್ಸವಕ್ಕೆ ಬರಲು ಒಪ್ಪಿಕೊಂಡಿದ್ದಾರೆ.

ಅಹಮದಾಬಾದ್ ಮುನಿಸಿಪಾಲಿಟಿಯವರು ರಾಷ್ಟ್ರೀಯ ಶಿಕ್ಷಣಕ್ಕೆ ಒಂದುವರೆಲಕ್ಷ ರೂಪಾಯಿ ಮಂಜೂರ್ಮಾಡಿರುವರು.

ಜ್ಯೇಷ್ಠ ಬಹುಳ ದ್ವಾದಶಿ (29-6-24) ರಲ್ಲಿ ಶ್ರೀಮತ್ ವಿದ್ಯಾರಣ್ಯರ ಪುಣ್ಯತಿಥಿಯಾಗುತ್ತೆ. ಆದಿನ ಕರ್ನಾಟಕದ ಎಲ್ಲಾ ಕಡೆಗಳಲ್ಲೂ ಅವರ ಸ್ಮಾರಕಸಭೆಗಳೂ ಕೂಟಗಳೂ ಕೂಡಬೇಕೆಂತ ನಮ್ಮ ಬಂಧು "ಕರ್ಮವೀರ" ಪತ್ರಿಕೆಯು ಬರೆದಿದೆ.

ಮದ್ರಾಸ್ ಗವರ್ನರಾಗಿದ್ದ ಲಾರ್ಡ್ ವಿಲ್ಲಿಂಗ್ಡನ್ ಪ್ರಭುಗಳಿಗೆ ವೈಕೌಂಟ್ ಎಂಬ ದೊಡ್ಡ ಪದವಿಯು ಕೊಡಲ್ಪಟ್ಟಿರುತ್ತೆ.

ಬರ್ಮಾದಲ್ಲಿ ಸರಕಾರಿ ಹುಕ್ಕುಂ ಇಲ್ಲದೆ ಒಂದು ಲಾಟರಿಯನ್ನು ನಡಿಸಿದ್ದಕ್ಕಾಗಿ ಒಬ್ಬ ಪಾದ್ರಿಯಮೇಲೆ ನಡಿಸಿದ ಕೇಸಿನಲ್ಲಿ ಅವನಿಗೆ 400 ರೂ. ಜುಲ್ಮಾನೆ ಮಾಡಿರುತ್ತಾರೆ.

ಇಂಡಿಯಾದ ವಾಯವ್ಯ ಪ್ರಾಂತ್ಯದಲ್ಲಿ ಮಹಸೂದ್ ಜನರಿಗೂ ಇಂಡಿಯಾ ಸೈನ್ಯಕ್ಕೂ ಚಿಕ್ಕದಾಗಿ ಹೋರಾಟವಾಗುತ್ತಲೇ ಇದೆ.

ಪಂಜಾಬ್ ಗವರ್ನರ್ ಸರ್ ಮೇಲ್ಕಂ ಹೈಲಿಯವರು ಇಂಗ್ಲೆಂಡಿನಿಂದ ಇಂಡಿಯಾಕ್ಕೆ ತಲಪಿದ್ದಾರೆ.

ಧಾರವಾಡದ ಶ್ರೀಯುತ ಆಲೂರು ವೆಂಕಟರಾಯರೇ ಮೊದಲಾದವರು ಬೆಂಗಳೂರಿಗೆ ಬಂದು ಕರ್ನಾಟಕ ರಾಜ್ಯದ ಏಕೀಕರಣದ ವಿಷಯವಾಗಿ ಉಪನ್ಯಾಸ ಮಾಡಿ ಬೆಳ್ಗಾಂ ಕಾಂಗ್ರೆಸ್ಸಿಗೆ ಧಾರಾಳವಾಗಿ ಧನಸಹಾಯ ಮಾಡಬೇಕೆಂತ ಕೇಳಿಕೊಂಡರು.

ವಿದೇಶ.

ಇಟೆಲಿರಾಜ್ಯದ ರಾಜನೂ ರಾಣಿಯವರು ಇಂಗ್ಲೆಂಡಿಗೆ ಬಂದಿದ್ದಾರೆ. ಅಲ್ಲಿ ತುಂಬಾ ಗೌರವಿಸುತ್ತಿದ್ದಾರೆ.

ಇಂಗ್ಲೆಂಡಿನಲ್ಲಿ ಗ್ರಿಂಡೆಲ್‌ಮೇಥ್ಯೂಸ್ ಎಂಬವನು ಆಕಾಶದಲ್ಲಿ ಹಾರುವ ವಿಮಾನಗಳ ಯಂತ್ರಗಳ ಕೆಲಸವನ್ನು ಭೂಮಿಯಿಂದಲೇ ನಿಲ್ಲಿಸುವ ಉಪಾಯ ಕಂಡುಹಿಡಿದಿದ್ದೇನೆಂದು ಹೇಳಿಕೊಳ್ಳುತ್ತಿದ್ದಾನೆ. ಇದನ್ನು ಪ್ರತ್ಯಕ್ಷ ಮಾಡಿ ತೋರಿಸಿದರೆ ಕೂಡಲೇ ಬಹುಮಾನವಾಗಿ ಪೌಂಡ್ ಇನಾಮು ಕೊಡಬಹುದಲ್ಲದೆ ಹಿಂದಿನಿಂದ ಅವನ ಈ ಗುಟ್ಟನ್ನು ವಹಿಸಿಕೊಟ್ಟರೆ ಏನುಕೊಡಬಹುದೆಂಬದನ್ನು ನಿಶ್ಚೈಸಬಹುದೆಂತ ಅವನಿಗೆ ಆಕಾಶವಿಮಾನಗಳ ಮಂತ್ರಿಯು ತಿಳಿಸಿದ್ದಕ್ಕೆ ಅವನಿಂದ ಏನೂ ಜವಾಬು ಸಿಕ್ಕಲಿಲ್ಲವಂತೆ.

ಓಡ್ವೈಯರ್ ನಾಯರರೊಳಗೆ ನಡಿಯುತ್ತಿರುವ ಮೊಕದ್ದಮ್ಮೆಯಲ್ಲಿ ಸಾಕ್ಷಿ ವಿಚಾರವಾಗುತ್ತಲೇ ಇದೆ. ಸರ್ ಶಂಕರನಾಯರ ವಿಚಾರವಾಯಿತು.

ಇಂಡಿಯಾ ಸ್ಟೇಟ್‌ಸೆಕ್ರೆಟರಿಯವರು ಮೆ|| ಸತ್ಯಮೂರ್ತಿಯವರಿಗೆ ಬರೆದ ಕಾಗದವನ್ನು ಪ್ರಕಟಪಡಿಸಲಿಕ್ಕಾಗಿ ಬರೆದದ್ದಲ್ಲವೆಂತ ಸೆಕ್ರೆಟರಿಯವರು ಹೇಳಿದರೂ ಸಹ ಅವರನ್ನು ಈ ವಿಷಯವಾಗಿ ಪಾರ್ಲಿಮೆಂಟಿನಲ್ಲಿ ಬಹಳ ಸವಾಲ್ ಕೇಳುತ್ತಲಿದ್ದಾರೆ.

ಶ್ರೀಮತಿ ಸರೋಜಿನಿನಾಯುಡುರವರು ಆಫ್ರಿಕಾದಿಂದ ಇಂಡಿಯಾಕ್ಕೆ ಹೊರಟಿರುತ್ತಾರೆ.

ವಸಾಹತುಗಳ ಮಂತ್ರಿಯಾದ ಮೆ|| ಥೋಮಸ್ ಎಂಬವರಿಗೆ ಖಾಯಿಲೆಯಾಗಿದ್ದು ಈಗ ಸ್ವಲ್ಪ ವಾಸಿ ಇದೆ.

ಕೂಲಿಕಾರರ ಸಂಗಡದ ಮಂತ್ರಿಮಂಡಲಿಯವರು ರಶ್ಯಾ ಬೋಲ್ಶವಿಕ್ ಸರಕಾರದ ಸಂಗಡ ವ್ಯವಹಾರ ನಡಿಸಬೇಕೆಂತ ಹೌಸ್ ಆಫ್ ಲಾರ್ಡ್ಸಿನಲ್ಲಿ ವಾದಾ ಒಂದು ಶೀಘ್ರದಲ್ಲೇ ಅವರ ಸಂಗಡ ಮಾಡಿಕೊಳ್ಳಬೇಕಾದ ಸನ್ನಂದವನ್ನು ಮಾಡಿಕೊಳ್ಳಬೇಕೆಂತ ತೀರ್ಮಾನವಾಯಿತು.

ಚೀನಾದೇಶದಲ್ಲಿ ಯೂಕೀನ್‌ಪ್ರಾಂತ್ಯದ ಗವರ್ನರರಮೇಲೆ ಯಾರೋ ಬಾಂಬ್‌ಗಳನ್ನು ಬಿಸಾಡಿದರು. ಗವರ್ನರಿಗೆ ಅಪಾಯವಾಗಲಿಲ್ಲ. ಮೋಟಾರ್ ಡ್ರೈವರೂ ಇನ್ನು ಮೂವರೂ ಸತ್ತರು.

ಮೇ 24 ನೇ ತಾರೀಕಿನದಿನ ಸಾಮ್ರಾಜ್ಯದಿನವಾದ್ದರಿಂದ ಆ ದಿನ ಸಾಮ್ರಾಜ್ಯದ ನಗರಗಳಲ್ಲಿ ಬಹಳ ಕವಾತಿಗಳು ನಡೆದವು.

ದಕ್ಷಿಣ ಆಫ್ರಿಕಾದಲ್ಲಿ ಎಂಪಯರ್ ರಿವ್ಯೂ ನಡಿಯುತ್ತಿದ್ದಾಗ ಆಕಾಶವಿಮಾನದಿಂದ ಒಂದು ಬಾಂಬ್ ಬಿದ್ದು ನೋಡುತ್ತಿದ್ದವರಲ್ಲಿ ನಾಲ್ಕು ಜನರನ್ನು ಕೊಂದು ಮೂವತ್ತೆರಡು ಜನರಿಗೆ ಘಾಯಪಡಿಸಿದೆ.

ಫ್ರಾನ್ಸಿನಲ್ಲಿ ನಡೆದ ಹೊಸಚುನಾವಣೆಯಿಂದ ಅಲ್ಲಿನ ಮುಂದಿನ ಮಂತ್ರಿಮಂಡಲಿಯವರು ಯಾರಾಗುತ್ತಾರೆಂಬದು ಇನ್ನೂ ಸಂಶಯದಲ್ಲೇ ಇದೆ.

ಜರ್ಮನಿ ಪಾರ್ಲಿಮೆಂಟಿನಲ್ಲಿ ವಾದಾ ನಡಿಯುತ್ತಾ ಇರುವಾಗ ತುಂಬಾ ಗಲಭೆಯಾಯಿತು. ಅಲ್ಲಿಯ ಪ್ರೆಸಿಡೆಂಟ್ ಯಾರಾಗುತ್ತಾರೆಂಬದು ಸಹ ಸಂಶಯದಲ್ಲೇ ಇದೆ.

ಇಂಗ್ಲಂಡಿನಿಂದ ಇಂಡಿಯಾಕ್ಕೆ ಐದೇ ದಿವಸದಲ್ಲಿ ಹಾರುವ ದೊಡ್ಡ ಆಕಾರದ ಹಡಗನ್ನು ಒಂದು ಕಂಪೆನಿಯು ಮೂಲಕ ಸರಕಾರವು ಕಟ್ಟಿಸುವ ಒಪ್ಪಂದಮಾಡಿಕೊಂಡಿದ್ದಾರೆ. ಇದರ ಕ್ರಯ ಮೂರುಲಕ್ಷ ಪೌಂಡಾಗುತ್ತೆ. ಇದಕ್ಕಾಗಿ ಪಾರ್ಲಿಮೆಂಟಿನಿಂದ ಹಣ ಮಂಜೂರಾಯಿತು. ಆದರೆ ಇದು ತಯಾರಾಗಲಿಕ್ಕೆ ಇನ್ನೂ ಮೂರು ವರ್ಷ ಬೇಕಂತೆ.

ಇಂಗ್ಲಿಷ್ ಪಾರ್ಲಿಮೆಂಟಿನಲ್ಲಿ ಈಗಿನ ಮಂತ್ರಿಮಂಡಲಿಯವರು ಕಸಬಿಲ್ಲದ ಜನರ ಕಷ್ಟಪರಿಹಾರ ಮಾಡದ್ದರಿಂದ ಅವರಲ್ಲಿ ನಂಬಿಕೆ ಕಟ್ಟಿದೆ ಎಂಬ ವಾದವು ನಡೆಯುತ್ತಿದೆ. ಇದರಲ್ಲಿ ಮಂಡಲಿಯವರಿಗೆ ಬಹುಮತ ಸಿಕ್ಕದೆ ಹೋದರೆ ಹೊಸಚುನಾವಣೆಯಾಗಬಹುದೆಂತ ತೋರುತ್ತೆ.

ಚೈನಾದಲ್ಲಿ ಪ್ರಯಾಣಮಾಡುತಿದ್ದ ನಾಲ್ಕುಜನ ಅಮೇರಿಕಾ ಮಿಶನರಿಗಳನ್ನು ದರೋಡೆಖೋರರು ಸ್ವಾಧೀನಪಡಿಸಿಕೊಂಡಿದ್ದಾರೆ. ಅಮೇರಿಕಾ ಮತ್ತು ಇಂಗ್ಲೆಂಡಿನ ರಾಯಭಾರಿಗಳು ಇವರನ್ನು ಕೂಡಲೇ ಬಿಟ್ಟುಕೊಡಬೇಕೆಂತ ಚೀನಾ ಸರಕಾರವನ್ನು ಕೇಳಿಕೊಂಡಿದ್ದಾರೆ.

ಪರದೇಶಿ ಬಟ್ಟೆ ಬಹಿಷ್ಕಾರ.

(ಮಹಾತ್ಮಾ ಗಾಂಧಿಯವರ ಲೇಖನದ ತರ್ಜುಮೆ.)

ಬ್ರಿಟಿಷ್ ಸಾಮ್ರಾಜ್ಯದ ಎಲ್ಲಾ ಸಾಮಾನುಗಳನ್ನು ಬಹಿಷ್ಕರಿಸಲು ಪ್ರಯತ್ನಿಸಿದರೆ ಪ್ರಯೋಜನವಾಗುವ ಮತ್ತು ಅವಶ್ಯವಿರುವ ಒಂದೇ ಬಹಿಷ್ಕಾರದ ಕಡೆಗೆ ಕೊಡಬೇಕಾದ ಗಮನವು ಕಡಿಮೆಯಾಗುತ್ತೆ. ಅಹಿಂಸಾ ತತ್ವವನ್ನು ನಾವು ಬಿಟ್ಟುಬಿಡುವದಾದರೆ ಅಹಿಂಸೆಯು ಫಲಕಾರಿಯಾಗಲಿಲ್ಲವೆಂತ ನಂಬಿದವರು ಹಿಂಸಾತತ್ವವನ್ನು ಅವಲಂಬಿಸಬೇಕು. ಈಗಿನ ಅವಸ್ಥೆಯಲ್ಲಿ ಸಾಮ್ರಾಜ್ಯದ ಸಾಮಾನುಗಳನ್ನು ಬಹಿಷ್ಕರಿಸಲು ಸಾಧ್ಯವಿಲ್ಲವೆಂತ ನನ್ನ ವಾದವಾಗಿದೆ. ಅಹಿಂಸೆಗೆ ವಿರೋಧವಾಗಿ ನನಗೆ ತೋರುವದಾವದೆಂದರೆ, ಅದು ಯಾವುದೆಂದರೆ ದಂಡನೀಯ ಉದ್ದೇಶದಿಂದಾಗಿ ಹುಟ್ಟಿದ್ದು. ಅದಕ್ಕೆ ತಯಾರಾಗಲು ನಾವು ಇಚ್ಛಿಸುವುದಾದರೆ ರಾಷ್ಟ್ರೀಯಕಾರ್ಯಕ್ರಮದಲ್ಲಿ ಸಾಮ್ರಾಜ್ಯ ಸಾಮಾನುಗಳನ್ನು ಬಹಿಷ್ಕರಿಸುವುದು ಅವಶ್ಯವಾದ ಕರ್ತವ್ಯವಾಗುತ್ತೆ. ಸಾಮ್ರಾಜ್ಯ ಸಾಮಾನುಗಳನ್ನು ಬಹಿಷ್ಕರಿಸುವ ಕಾರ್ಯವನ್ನು ಇಟ್ಟುಕೊಂಡು ಅದಕ್ಕಾಗಿ ಬಹಳಾಗಿ ಕೆಲಸಮಾಡಿದರೆ ನಮ್ಮ ಅಶಕ್ತತೆಯು ನಮಗೆ ಗೊತ್ತಾಗುತ್ತಾ ಬಂದಂತೆ ನಮ್ಮ ರಕ್ತವು ಬಿಸಿಯಾಗುತ್ತಾ ಬರುತ್ತೆ. ಅದಕ್ಕಾಗಿ ಕೇವಲ ಬಹಿಷ್ಕರಿಸಿದರೆ ಎಲ್ಲಿಯೂ ನಡೆ ಇಲ್ಲದ ಹಿಂಸೆ ಸ್ವಭಾವವಾಗಿ ಬೆಳೆಯುತ್ತೆ. ಹಿಂಸೆ ಕಾರ್ಯಗಳನ್ನು ನಡೆದರೂ ದೋಷವಿಲ್ಲ. ಆಯುಧಸಾಧನಗಳಾಗಿ ಫಿರಂಗಿಗಳ ವೃದ್ಧಿ ಅಭ್ಯಾಸವಾದಂತಾಗುತ್ತೆ. ಆದರೆ ಪ್ರತಿ ಸೋಲುವಿಕೆಯಿಂದ ಬಹು ಜನರ ಧೈರ್ಯ ಕೆಡುತ್ತೆ. ಆದರೆ ಕೆಲವರ ಮನಸ್ಸು ದೃಢವಾಗುತ್ತೆ. ಹಾಗೆ ದೃಢಮನಸ್ಸರಂಗಿಂದ ಬಹಳ ಸ್ಥಿರವಾದ ಸೈನ್ಯ ತಯಾರಾಗಬಹುದು. ರಾಷ್ಟ್ರೀಯ ಕೆಲಸಗಾರರು ಇಂಡಿಯಾದ ಹೊಸ ಚರಿತ್ರೆ ಬರೆಯಲಿಕ್ಕೆ ಸಾಧ್ಯವಿಲ್ಲವೆಂತ ಯೋಚಿಸುವುದಾದರೆ ಯುರೋಪ್‌ದೇಶವು ವರ್ತಿಸಿದಂತೆಯೇ ವರ್ತಿಸಬೇಕೆಂತ ನಿಷ್ಕರ್ಷಿಸಿದರೆ ಸಾಮ್ರಾಜ್ಯ ಸಾಮಾನುಗಳನ್ನು ಬಹಿಷ್ಕರಿಸುವುದು ಅವಶ್ಯವೇ. ಅದು ಎಂದೂ ಸಾಧ್ಯವಾಗದಾದರೂ ಅದನ್ನು ಧ್ಯೇಯವಾಗಿಟ್ಟುಕೊಳ್ಳಲೇಬೇಕು. ಯಾತಕ್ಕೆಂದರೆ ಅದರಿಂದ ಅವಶ್ಯವಿರುವ ಹಟ ಹುಟ್ಟುತ್ತೆ. ಪುರಾತನ ಕಾಲದಿಂದ ನಡೆದುಬಂದ ದಾರಿಯನ್ನೇ ಇಂಡಿಯಾವು ಹಿಡಿಯಲಿಕ್ಕೆ ನಕ್ಕಿದೆ. ಆದಾಗ್ಯೂ ಹಿಡಿಯಲು ನಿಶ್ಚಯಿಸಿದರೆ ಭೂಮಿಯ ಮೇಲೆ ಯಾವ ಶಕ್ತಿಯೂ ಅದನ್ನು ತಡೆಯಲು ಸಾಧ್ಯವಿಲ್ಲ.

ಇಂಡಿಯಕ್ಕೆ ಬಿಡ್ಡದದಾರಿಯು ಬೇರಿಲ್ಲವೆಂತ ನಂಬಿಕೆಯಿಂದ ಹೇಳುತ್ತೇನೆ. ಆ ದಾರಿ ಏನನ್ನ ಹಿಡಿದರೆ (1) ಕಲಾಂತರದವರೆವಿಗೂ ಪರಕೀಯರ ಆಳಿಕೆಗೆ ಒಳಗಾಗಿರಲಿಕ್ಕೂ (2) ಅಥವಾ ಹಿಂದು ಅಥವಾ ಮುಸಲ್ಮಾನರ ಶಾಶ್ವತವಾದ ಆಳಿಕೆಗೂ ತಯಾರಾಗಿರಬೇಕು.

ಪೂರ್ತಿಯಾಗಿ ಇಂಡಿಯಾವು ಪಠಾಣರುಗಳ ಅಧೀನತೆಯಲ್ಲಿ ಬಿಟ್ಟುಕೊಳ್ಳಲಿಕ್ಕೆ ಸಾಧ್ಯವಿಲ್ಲದಿದ್ದರೆ ಇಂಗ್ಲೀಷರ ಆಳಿಕೆಯಲ್ಲೇ ಇರಬಹುದೆಂತ ಹೇಳುವ ಹಿಂದುಗಳು ಆಫ್ಘನ್ ಆಳಿಕೆಯಲ್ಲಿ ಇಂಡಿಯಾವನ್ನು ಬಿಟ್ಟು ಮುಸ ಸಾಧ್ಯವಿಲ್ಲವೆಂತ ಆದರೆ ಇಂಗ್ಲೀಷರ ರಾಜ್ಯದಲ್ಲೇ ಇರಲಿಕ್ಕೆ ಹುದೆಂತ ಹೇಳುವ ಮುಸಲ್ಮಾನರು ಇದ್ದಾರೆಯೆಂತ ನನಗೆ ಗೊತ್ತಿದೆ. ಇವರಿಗೆ ನಾನು ಹೇಳಬೇಕಾದ ಆರ್ಗ್ಯುಮೆಂಟು ಏನೂ ಇಲ್ಲ. ಅವರು ಮೊಳಲನ್ನು ಉಳುತ್ತಲೇ ಇರಬೇಕು. (ನೀರಿನಲ್ಲೇ ಹೋಮಮಾಡುತ್ತಲಿರಬೇಕು) ಪಾರತಂತ್ರ್ಯದಿಂದ ಅಸ್ವಸ್ಥ್ಯವಾದ ಹಿಂದುಸ್ಥಾನವನ್ನು ಪಾರತಂತ್ರ್ಯದಿಂದ ಬಿಡುಗಡೆ ಮಾಡಬೇಕೆನ್ನುವ ಜನರು ತುಂಬಾ ಇದ್ದಾರೆ. ಹಿಂದೂಗಳೂ, ಮುಸಲ್ಮಾನರೂ ಮತ್ತು ಇತರ ಎಲ್ಲಾ ಜಾತಿಯವರಿಗೂ ಸಮಾನ ಹಕ್ಕಿರುವ ಸ್ವರಾಜ್ಯ ಪಡೆಯಲು ಯೋಚಿಸಲು ಶಕ್ತಿ ಇರುವ ಸರ್ವ ಜನರೂ ಅಹಿಂಸಾ ತತ್ವವನ್ನು ಸಂಪೂರ್ಣವಾಗಿ ಅವಲಂಬಿಸಿದರೆ ಅಲ್ಪಕಾಲದಲ್ಲೇ ಸಾಧ್ಯವಿದೆ ಎಂತಲೂ ಬೇರೆ ಯಾವವಿಧದಿಂದಲೂ ಅಂಥಾ ಸ್ವರಾಜ್ಯವನ್ನು ಪಡೆಯಲು ಸಾಧ್ಯವಿಲ್ಲವೆಂತಲೂ ನಾನು ಅವರನ್ನು ಒಪ್ಪಿಸುತ್ತೇನೆ.

ತತ್ಕಾಲ ಹೇಗೂ ಕಾಂಗ್ರೆಸಿನ ತತ್ವವು ಅಹಿಂಸಾಧರ್ಮವನ್ನು ಅವಲಂಬಿಸಿರುವದರಿಂದ ಹಿಂಸೆಗೆ ಎಡೆ ಕೊಡುವ ಕೆಲಸವನ್ನು ಕಾಂಗ್ರೆಸ್ಸಿನವರು ಕೈಕೊಳ್ಳಬಾರದು. ಸಾಧ್ಯವಿಲ್ಲದ ಬಹಿಷ್ಕಾರವು ಹಿಂಸೆಗೆ ತಯಾರು ಮಾಡುತ್ತಾದ್ದರಿಂದ ಸಾಮ್ರಾಜ್ಯದ ಸರ್ವವನ್ನು ಬಹಿಷ್ಕಾರದ ಠರಾವು ಕಾಂಗ್ರೆಸ್ ಮತಕ್ಕೆ ವಿರೋಧವೆಂತ ನನ್ನ ಅಭಿಪ್ರಾಯ.

ಆದ್ದರಿಂದ ಪರದೇಶೀ ಬಟ್ಟೆ ಬಹಿಷ್ಕಾರದ ಕಡೆ ಮಾಹಕದ ಮನಸ್ಸನ್ನು ತಿರುಗಿಸುವ ಮೋಡರೇಟ್‌ಗಳೂ ರಾಷ್ಟ್ರೀಯ ಪಕ್ಷದವರೂ ಕಾಂಗ್ರೆಸ್ಸಿನವರೂ ಎಲ್ಲರೂ ಸ್ವಂತವಾಗಿ ಪರದೇಶೀ ಬಟ್ಟೆ ಮತ್ತು ಕಾರ್ಖಾನೆ ಬಟ್ಟೆಬದಲಿಗೆ ಕೈನೂಲಿನ ಖದ್ದರ್ ಬಟ್ಟೆಯನ್ನೇ ಹಾಕಿದರೆ ಪ್ರತಿದಿವಸವೂ ಸ್ವಲ್ಪ ಕಾಲವಲ್ಲಿ ಸ್ವತಃ ನೂತರೆ, ತನ್ನ ಮನೆಯ ಪತಿಯೊಬ್ಬನನ್ನೂ ಹಾಗೆಯೇ ಮಾಡುವಂತೆ ಮಾಡಿದರೆ, ತನ್ನ ಶಕ್ತಿಗೆ ಸಾಧ್ಯವಿದ್ದಷ್ಟು ಪ್ರಯತ್ನಿಸಿ ತನ್ನ ನೆರೆಯವರೂ ಸಹ ಚರ್ಕಾ ತಿರುಗಿಸುತ್ತಾ ಕೈನೂಲಿನ ಬಟ್ಟೆಯನ್ನೇ ಹಾಕುವಂತೆ ಮಾಡಿದರೆ ಒಂದೇವರ್ಷದಲ್ಲಿ ಪರದೇಶೀಬಟ್ಟೆಗೆ ಸಂಪೂರ್ಣವಾಗಿ ಬಹಿಷ್ಕಾರವನ್ನು ಜಯಪ್ರದವಾಗಿ ಮಾಡಬಹುದು. ಯಾವಕಾರಣದಿಂದಲೂ ಪರದೇಶೀಯಾಗಲೀ ನಮ್ಮ ಕಾರ್ಖಾನೆಗಳಲ್ಲಿ ತಯಾರಾದ್ದಾಗಲೀ ಬಟ್ಟೆಯನ್ನು ಉಪಯೋಗಿಸಬಾರದು. ಈ ಎರಡು ತಿರಸ್ಕಾರಕ್ಕೆ ವ್ಯತ್ಯಾಸ ಮಾಡುತ್ತೇನೆ. ಪರದೇಶೀ ಬಟ್ಟೆ ಬಹಿಷ್ಕಾರವು ಎಂದೆಂದಿಗೂ ಅವಶ್ಯವಿದೆ. ಕಾರ್ಖಾನೆ ಬಟ್ಟೆಗೆ ಶಾಶ್ವತ ಬಹಿಷ್ಕಾರದ ಅವಶ್ಯವಿಲ್ಲ. ದೇಶಕ್ಕೆ ಬೇಕಾದಷ್ಟು ಬಟ್ಟೆಯನ್ನು ಸ್ವದೇಶೀ ಕಾರ್ಖಾನೆಗಳು ಈಗ ತಯಾರಿಸಲು ಸಾಧ್ಯವಿಲ್ಲ. ಚರ್ಕಾ ಮತ್ತು ಕೈಮಗ್ಗದಿಂದ ಅವಶ್ಯವಿರುವಷ್ಟು ಬಟ್ಟೆಯನ್ನು ಮಾಡಿಕೊಳ್ಳಲು ಸಾಧ್ಯವಿದೆ. ಕರ್ಮದಿಂದ ಉತ್ಪತ್ತಿಯಾಗುವ ಖದ್ದರ್ ಬಟ್ಟೆಯು ಜನರ ಪ್ರೀತಿಗೆ ಇನ್ನೂ ಪಾತ್ರವಾಗಿರುವದಿಲ್ಲ. ಆಲೋಚನೆ ಮಾಡುವ ಜನರು ಪ್ರಾರಂಭಿಸಿದರೆ ಖದ್ದರನ್ನು ಸರ್ವರೂ ಧರಿಸಿಕೊಳ್ಳುವಂತೆ ಮಾಡಬಹುದು. ಆದ್ದರಿಂದ ಆಲೋಚನಾಶಕ್ತಿ ಇರುವ ಜನರು ಖದ್ದರನ್ನೇ ಉಪಯೋಗಿಸಬೇಕು. ನಮ್ಮ ಕಾರ್ಖಾನೆಗಳಿಗೆ ನಮ್ಮ ಉತ್ತೇಜನ ಬೇಕಾಗಿಲ್ಲ. ಅವು ಧರ್ಮದ ಸಂಸ್ಥೆಗಳಲ್ಲ. ಅವು ಸ್ಪಷ್ಟವಾಗಿ ಸ್ವಾರ್ಥತೆ ಉದ್ದೇಶವು. ಅವಕ್ಕೆ ತಮ್ಮ ಜೀವನವೇ ಇದೆ. ಅವು ಕಾಲಸ್ಥಿತಿಗೆ ಸರಿಯಾಗಿ ನಡಿಯುವದಾದರೆ ತಮ್ಮ ಬಟ್ಟೆ ಕ್ರಯವನ್ನು ಇಳಿಸಿ ಮತ್ತು ಖದ್ದರ್ ಪ್ರಚಾರಕ್ಕೆ ಬಾರದ ಊರುಗಳಲ್ಲಿ ತಮ್ಮ ಬಟ್ಟೆಯನ್ನು ಹಬ್ಬಿಸಿ ಪರದೇಶೀ ಬಟ್ಟೆ ಬಹಿಷ್ಕಾರಕ್ಕೆ ಸಹಾಯ ಮಾಡಬಹುದು. ಖದ್ದರಿಗೆ ಎದುರು ನಿಲ್ಲದೆ ಸಹಾಯಕವಾಗಬಹುದು. ಪ್ರತಿ ರಾಷ್ಟ್ರೀಯ ಕೆಲಸಗಾರರೂ ಕಾರ್ಖಾನೆ ಬಟ್ಟೆಯನ್ನು ಮೈಲಿಗೆ ಮುಂದು ಬಿಟ್ಟುವಿನಹ ಪರದೇಶೀ ಬಟ್ಟೆ ಬಹಿಷ್ಕಾರವು ಶಕ್ತಿಯಿಲ್ಲ ಸಾಧವಿಲ್ಲ ವಿಷಯವು ಬಹಳ ಸುಲಭವಾಗಿದೆ. ಖದ್ದರಿಗೆ ವಾದವೇನೂ ಬೇಕಾಗಿಲ್ಲ. ಖದ್ದರ್ ಜಿಟ್ಟಾಗಬೇಕಾದರೆ ತಿಳುವಳಿಕೆ ಇರುವವರು ಖದ್ದರನ್ನೇ ತೊಡಬೇಕು.

ಸಾಮ್ರಾಜ್ಯದ ಎಲ್ಲಾ ಸಾಮಗ್ರಿಗಳಿಗೆ ಬಹಿಷ್ಕಾರ ಹಾಕುವದರ ಬದಲಿಗೆ ಪರದೇಶೀ ಬಟ್ಟೆಗಳಿಗೆ ಬಹಿಷ್ಕಾರ ಹಾಕಲಿಕ್ಕೆ ಖದ್ದರಿನಿಂದ ಹೇಗೆ ಸಾಧ್ಯವಿದೆಯೆಂಬದನ್ನು ಈವರೆಗೆ ಬರೆದದ್ದಾಯಿತು. ಖದ್ದರಿನ ಈ ಶಕ್ತಿಗೆ ಬಡವರಿಗೆ ಅನ್ನ ಕೊಡುವ ಶಕ್ತಿಯನ್ನು ಸಹ ಸೇರಿಸಿದರೆ ಖದ್ದರಿಗೆ ವಿರೋಧವಾದಕ್ಕೇ ದಾರಿ ಇಲ್ಲ.

ಚರಕಾವಾತಾವರಣವನ್ನು ಏಕೆ ಹುಟ್ಟಿಸಬೇಕೆಂಬುದು ದೇಶದ ಅಭಿವೃದ್ಧಿಗೆ ಚರಕದ ಅವಶ್ಯಕತೆಯನ್ನು ತಿಳಿಕೊಳ್ಳಲು ಶಕ್ತಿ ಇರುವ ಪ್ರತಿ ಒಬ್ಬನ ಗಂಡಸು ಹೆಂಗಸು ಮತ್ತು ಮಗು ಸಹ ಅವನನ ಸ್ವಲ್ಪಭಾಗವಾದರೂ ನೂಲು ಮಾಡುವದಕ್ಕೆ ಏಕೆ ಉಪಯೋಗಿಸಬೇಕೆಂಬುದು ಸಹ ಈಗ ಸುಲಭವಾಗಿ ತಿಳಿಯಬಹುದು. ಇಂಡಿಯಾದ ರೈತರೇ ಪ್ರಪಂಚದಲ್ಲಿ ಅತ್ಯಂತ ಕೆಲಸಗಾರರೂ ಬಹುಶಃ ಅತ್ಯಂತ ಸೋಮಾರಿಗಳೂ ಆಗಿದ್ದಾರೆ. ಕೆಲಸವಿಲ್ಲದ ಗುಣವೂ ಸೋಮಾರಿ ಸ್ವಭಾವವೂ ಅವರ ಮೇಲೆ ಬಲಾತ್ಕಾರದಿಂದ ಹೊರಿಸಿದ್ದಾಗಿದೆ. ಭೂಮಿಯಿಂದ ಫಸಲು ಬರಬೇಕಾದರೆ ಕೆಲಸ ಮಾಡಬೇಕು. ನೂಲು ಮಾಡುವ ಕಸಬನ್ನು ಈಸ್ಟ್ ಇಂಡಿಯಾ ಕಂಪೆನಿಯವರು ನಾಶಮಾಡಿದ್ದರಿಂದ ಕೆಲ

ಸವಿಲ್ಲದೆ ಇರುವಾಗ ನಾಶಪಡಬಹುದಾಗಿದ್ದ ನೂಲುವ ಕೆಲ ಸವಿಲ್ಲದೆ ನೋವ ಗಳಾಗಿದ್ದಾರೆ ನಾವು ಮೇಲ್ಪಂಕ್ತಿ ಹಾಕಿದರೆ ವ... ರೈತರು ಚರ್ಖವನ್ನು ಪುನಃ ತೆಗೆದು ಕೊಳ್ಳುತ್ತಾರೆ—ಪಿನೇ ಬೋಧನೆಯಿಂದ ಅವರಿಗೆ ಮಂದ ಟ್ಯಾಗಿದಿಲ್ಲ. ಸಾವಿರಾರು ಜನರು ಪ್ರೀತಿಗಾಗಿ ನೂಲು ವವರೆ ಖದ್ದರಿಗೆ ಈಗ ಇರುವ ಕ್ರಯವೇ ಇಟ್ಟುಕೊಂಡರೆ ಮಜೂರಿಗೆ ನೂಲುವರಿಗೆ ಹೆಚ್ಚಿಗೆ ಪಗಾರ ಕೊಡಬಹುದು ಸತ್ಯಾಗ್ರಹ ಆಶ್ರಮದಲ್ಲಿ ತಯಾರಾಗುವ ಖದ್ದರನ್ನು ನಾನು ಹೇಗೆ ಜಾರಿಯಾಗಿ ಮಾರಲು ಸಾಧ್ಯವಾಯಿತೆಂದರೆ ನಾನು 1919 ರಲ್ಲಿ ಪಂಜಾಬಿನಲ್ಲಿ ತಿರುಗಿದಾಗ ಅಲ್ಲಿನ ಸಹೋದರಿಯರು ಪ್ರೀತಿಯಿಂದ ನೂಲನ್ನು ನನಗೆ ಕೊಟ್ಟಿದ್ದರಿಂದ ಖದ್ದರಿನ ಕ್ರಯ ಏಳಬದೆ ಇದ್ದಿದ್ದರೆ ತಮ್ಮ ಕಸಬಿನಮೇಲೆ ನೂಲುವವರಿಗೆ ನನಗೆ ಮನಸ್ಸಾಗಿದ್ದರೆ ಹೆಚ್ಚಿಗೆ ಪಗಾರ ಕೊಡಬಹುದಿತ್ತು. ಖದ್ದರ್ ಚಳವಳದ ಆರಂಭದಲ್ಲಿ ಕನ್ನಾಗಿಲ್ಲದ ನೂಲಿಗೆ ಸಹ ಪೌಂಡಿಗೆ ನಾಲ್ಕು ಆಣೆ ಕ್ರಯ ಕೊಟ್ಟು ನಾನು ಕೊಂಡುಕೊಳ್ಳುತ್ತಿದ್ದನಾದ್ದರಿಂದ ಮಜೂರಿ ಹೆಚ್ಚಿಸಲಿಕ್ಕೆ ಆಗಲಿಲ್ಲ

ಕೆನ್ಯಾ ಪ್ರಶ್ನೆಯಿಂದ ಮನಸ್ಸು ನೊಂದ ಲಿಬರಲ್ ಪಾರ್ಟಿಯವರೂ ಕಾಂಗ್ರೆಸ್ಸಿನವರೂ ಸಾಧ್ಯವಿಲ್ಲದ ಸಾಮ್ರಾಜ್ಯದ ಸಾಮಾನುಗಳ ಬಹಿಷ್ಕಾರವನ್ನು ಮುಂದರಿಸುತ್ತಿರುವರಿಗೆ ಸಮಾಧಾನವಾಗಿ ಕೆಲಸಮಾಡಿ ಖದ್ದರ್ ಚಳವಳಕ್ಕೆ ಒಗ್ಗಟ್ಟಿನ ಮನಸ್ಸುಕೊಟ್ಟು ಎಲ್ಲಾ ಪರದೇಶೀ ಬಟ್ಟೆ ಬಹಿಷ್ಕಾರವನ್ನು ಜಯಪ್ರದವಾಗಿ ಯಾಕೆ ಮಾಡಬಾರದು ? ಪರದೇಶೀ ಬಟ್ಟೆಯ ಬಹಿಷ್ಕಾರದಿಂದ ಕೆನ್ಯಾದ ಹಿಂದೀಯರಿಗೆ ಪರಿಹಾರ ದೊರೆಯುವದು ಮಾತ್ರವಲ್ಲದೆ ಸ್ವರಾಜ್ಯ ಸಹ ಸಿಕ್ಕುತ್ತೆಂತ ನಾನು ರುಜುವಾತುಮಾಡಬೇಕೇ ?

ಪತ್ರವ್ಯವಹಾರಗಳು.

—o—

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. [ಎಡಿಟರ್]

"ಕೆ. ಯಂ ಮಾಚಯ್ಯ" ಎಂಬವರು ಬರೆದ ಬರೆದ ಪತ್ರವು ಪ್ರಕಟಣೆಯಾದ್ದರಿಂದ ಚಾರ್ಜಿಲ್ಲದೆ ಪ್ರಕಟಿಸಲಾಗುವದಿಲ್ಲ

"ಸಂಪಾದಕ ಕೊಡಗು"

ಬ್ಯಾರಕ್ಸೋ ಸ್ಕೂಲೋ ?

ಅಯ್ಯಾ ಸಂಪಾದಕರೆ, ನಿಮ್ಮ ಪತ್ರಿಕೆಯಲ್ಲಿ ಮಡಿಕೇರಿ ಹೈಸ್ಕೂಲ್ ತೆರೆದರೂ ಮಿಲಿಟರಿಯವರು ಸ್ಕೂಲಿನ ಸ್ವಾಧೀನ ಬಿಟ್ಟಿಲ್ಲವೆಂತ ಬರೆದಿದ್ದೀರಿ ಸ್ಕೂಲ್ ಕಟ್ಟಡ ಬಿಟ್ಟಿದ್ದರೆಂತಲೂ ಕಾಂಪೌಂಡು ಬಿಟ್ಟಿರಲಿಲ್ಲವೆಂತಲೂ ನಾನು ತಿಳಿದೆ ಆದರೆ ಸ್ಕೂಲಿನ ಕೊಠಡಿಗಳೆಲ್ಲಾ ಕಟ್ಟಿಹೋಗಿ ಬೆಂಚುಗಳು ಸರಿಯಾಗಿ ಇಟ್ಟುಬೇಕಾದರೆ ನಾಲ್ಕು ದಿನಗಳು ಬೇಕಾಯಿತು ಈ ರೀತಿ ಸ್ಕೂಲನ್ನು ಬ್ಯಾರಕ್ಕಾಗಿ ಉಪಯೋಗಿಸುವದು ಒಳ್ಳೇದಲ್ಲವೆಂದು ನನ್ನ ಅಭಿಪ್ರಾಯ ಅದು ಹೇಗೂ ಇರಲಿ, ಸ್ಕೂಲಿನ ಬೆಂಚ್ ಡೆಸ್ಕ್‌ಗಳನ್ನು ರೆಜಿಮೆಂಟಿನವರು ಸ್ಕೂಲಿನಲ್ಲಿ ಇದ್ದಷ್ಟು ದಿವಸ, ಅಂದರೆ ಸುಮಾರು ಒಂದು ತಿಂಗಳು ದಿವಸ ಬಿಸಿಲಿನಲ್ಲಿ ಎಸೆದಿದ್ದರೆಂತ ತಿಳಿದೆ ಇದರಿಂದ ಸ್ಥಳೀಯ ಸರ್ಕಾರಕ್ಕೆ ತುಂಬಾ ನಷ್ಟವಲ್ಲವೇ ? ಈ ಮರದ ಸಾಮಾನುಗಳು ಒಡೆದು ಮುರಿದು ಹಾಳಾಗುವದಿಲ್ಲವೆ ? ಇವನ್ನು ರಿಪೇರಿ ಮಾಡಲು ಮಿಲಿಟರಿ ಇಲಾಖೆಯವರು ಖರ್ಚಿಗೆ ಕೊಡುತ್ತಾರೆಯೆ ? ಕೊಡುತ್ತಾರಾದರೆ ಇದರ ಅಂದಾಜು ಮಾಡಲಾಗಿದೆಯೊ ? ಕಿಡಿಕೆ ಕನ್ನಡಿಗಳು ಒಡೆದದ್ದನ್ನು ರಿಪೇರಿಮಾಡುವರ್‍ಯಾರು ಎಂತ ಸಹ ನಿಮ್ಮ ವಾಚಕರ್‍ಯಾರಾದರೂ ತಿಳಿಸಿಕೊಡಬೇಕೆಂತ ಕೋರುವ

"ಕುಂದಾಯಪೇಟೆಯವನ"

ಅಯ್ಯಾ ಸಂಪಾದಕರೆ,

ನಾನು ಈ ಕೆಳಗೆ ನಮೂದಿಸಿರುವುದನ್ನು ದಯವಿಟ್ಟು ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಕೇಳಿಕೊಳ್ಳುತ್ತೇನೆ

ಸಾಧಾರಣ ನಾಲ್ಕೈದು ವರ್ಷಗಳಿಂದೀಚೆಗೆ ನಮ್ಮ ಕಟ್ಟಳೆ ಗ್ರಾಮದಲ್ಲಿ ಏನೂ ಪಂಗಡವಿದ್ದದ್ದರಿಂದ ಯಾವ್ದೂ ... ಅಲ್ಲದೆ ನಮ್ಮ ಗ್ರಾಮದ ಸುಬ್ರಹ್ಮಣ್ಯ ದೇವರ ಷಷ್ಠಿ ಹಬ್ಬದ ಉತ್ಸವವನ್ನು ... ಒಂದೊಂದು ಪಂಗಡದವರು ಅವರವರ ಶಕ್ತ್ಯಾನುಸಾರ ನಡಿಸುತ್ತಾ ಬಂದರು. ಆದರೆ ಈ ವರ್ಷದ ಉತ್ಸವವನ್ನು ಮೇಲಿನ ಪ್ರೇಮತೆಯ ಶಕ್ತಿಯಿಂದಲೂ ಕಾವೇರಿಪ್ಪನವರ ಕಟಾಕ್ಷದಿಂದಲೂ ನಾವೆಲ್ಲರೂ ಒಟ್ಟಾಗಿ ಸೇರಿ ಯಾಕೆ ಎರಡು ಗ್ರಾಮಸ್ಥರೊಡಗೂಡಿ ಒಂದು ಸಂಪ್ರದಾಯದಿಂದ ನಡಿಸಿದರು. ಇದೇ ರೀತಿ ಇನ್ನು ಮುಂದೆಯೂ ನಡೆಯಬೇಕೆಂದು ನಾವೆಲ್ಲರೂ ಹಾರೈಸುತ್ತೇವೆ ಈ ಕಾರ್ಯಕ್ಕೆ ದೊಡ್ಡಮನೆ ... ಮುತ್ತಣ್ಣನವರು ದೃಢಮನಸ್ಸಿನಿಂದ ಕಾರ್ಯವನ್ನು ನೆರವೇರಿಸಿದರು.

ಗ್ರಾಮಸ್ಥ

ಅಯ್ಯಾ,

ತಮ್ಮ ೨೩ ನೇ ತಾರೀಕಿನ ಪತ್ರಿಕೆಯಲ್ಲಿದ್ದ ಮ|| ಕೆ. ಚಂಗಪ್ಪನವರ ಬಾತ್ಮಿಯನ್ನು ಓದಿದೆನು MLC ಎಂಬುದಾಗಿ ಯಾರೋ ಒಬ್ಬ MLC ಯು ತನ್ನನ್ನು ತಾನು ಗೌರವಿಸಲಿಕ್ಕೆ ಕಾರ್ಡಿಗೆ M.L.C. ಎಂಬುದಾಗಿ ಚೀಟಿಹತ್ತಿಸಿದರೆಂಬುದಾಗಿ ಇವರ ಬಾತ್ಮಿಯಿಂದ ತಿಳಿಯುತ್ತೆ ಇವರ ಹೃದಯದಲ್ಲಿ ಉಕ್ಕುತ್ತಿರುವ ವಿಷವನ್ನು ಕಾರಲಿಕ್ಕೆ ಈ ತರದ ಬಾತ್ಮಿಯನ್ನು ಬರೆದದೆಂದೇ ತಿಳಿಯಬೇಕಾಗಿದೆ ಏಕೆಂದರೆ, ಜಮೀನುದಾರ ಸಂಘದ ಅಧ್ಯಕ್ಷ ರಾಯಬಹದ್ದೂರು ಅಪ್ಪಯ್ಯನವರ ಕೋರಿಕೆ ಮೇರೆ MLC ಗೆ ಕಾರ್ಡುಗಳನ್ನು ರಿಸರ್ವ್ ಮಾಡಿದ್ದಾಗಿದೆಯಲ್ಲದೆ, ಯಾವ ಮೆಂಬರನೂ ತನ್ನನ್ನು ತಾನು ಗೌರವಿಸಿಕೊಳ್ಳಲಿಕ್ಕೆ ... ಜಮೀನುದಾರ ಸಂಘಕ್ಕೂ M.L.C. ಗೂ ಸಂಬಂಧವೇನು ಎಂಬುದಾಗಿ ಬರೆದಿರುತ್ತಾನೆ ಇದರಿಂದ ಮ|| ಚಂಗಪ್ಪನವರ ತಿಳುವಳಿಕೆಯು ಚೆನ್ನಾಗಿ ತಿಳಿಯುತ್ತೆ ಜಮೀನುದಾರ ಸಂಘದ ಚಳವಳದ ... ಈ ಕೌನ್ಸಿಲು ಸಿಕ್ಕಿದರಿಂದಲೂ, ಸಂಘದಲ್ಲಿ ಮುತುವರ್ಜಿಯಿಂದ ಕೆಲಸಮಾಡುವವೆಂಬರುಗಳಿಗೇನೇ ಹೆಚ್ಚಾಗಿ MLC ಪದವಿಯು ದೊರೆತದ್ದರಿಂದಲೂ, ಸಂಘವು ದೇಶದ ನ್ಯಾಯವಾದ ಪ್ರತಿನಿಧಿಗಳನ್ನು ಗೌರವಿಸಿ ಅವುಗಳ ದನ್ಯ ಕೀರ್ತಿಯನ್ನು ಹೆಚ್ಚಿಸುವಷ್ಟು ಅನುಕೂಲವು ಬೇರೆ ಯಾವುದರಲ್ಲಿದೆಂಬುದು ಚಂಗಪ್ಪನವರಿಗೆ ತಿಳಿಯದಕ್ಕೆ ವ್ಯಸನಪಡುತ್ತೇನೆ ರಾವ್ ಬಹದ್ದೂರ್ ನೈಟ್ ಪದವಿಗಳಿಗಿಂತಲೂ ತಾನು ಒಬ್ಬ ದೊಡ್ಡಮನುಷ್ಯನ ಸನ್ನ ... ಸೇರಿದವರೆಂದು, ದೊಡ್ಡವರಿಗೆ ತಮ್ಮ ಪದವಿಗಿಂತ ಎಷ್ಟುಮಟ್ಟು ಈ MLC ಪದವಿಯು ದೊಡ್ಡದೆಂದು ಈ ಚಂಗಪ್ಪನವರಿಗೆ ತಿಳಿಯದೇ ? ಬ್ರಿಟಿಷ್ ಜನಾಂಗಕ್ಕೆ ಪಾರ್ಲಿಮೆಂಟ್ ಮೆಂಬರಾದರೆ ಅದರಷ್ಟು ದೊಡ್ಡ ಕೀರ್ತಿಯು ಬೇರೆ ಯಾವುದರಲ್ಲಿಯೂ ಇಲ್ಲ ಹೀಗೆಯೇ ನಮ್ಮ ಜನಾಂಗಕ್ಕೆ ಕೌನ್ಸಿಲ್ ಪದವಿಗಿಂತ ಶ್ರೇಷ್ಠಪದವಿಯು ಬೇರಿಲ್ಲ MLC ಪದವಿಯೇನು, ಅವರ ಗೌರವವೇನು, ಅವರ್‍ಯಾರು ಎಂಬುದನ್ನು ಸಹ ತಿಳಿಯಲು ಶಕ್ತಿಯಿಲ್ಲದ ಚಂಗಪ್ಪನವರು ಇನ್ನಾದರೂ ದಯವಿಟ್ಟು ಈ ಸಂಗತಿಗಳನ್ನು ಒಳ್ಳೆವರಿಂದ ತಿಳಿದು ಇಂಥಾ ಹಾಸ್ಯಾಸ್ಪದವಾದ ಲೇಖನಗಳನ್ನು ಬರೆಯದಿರುವುದು ಮೇಲು ಅಲ್ಲದೆ ಜಮೀನುದಾರ ಸಂಘ ಎಗ್ಸಿಕ್ಯೂಟಿವ್ ಕಮಿಟಿಯವರು ... ಜೋಯಪ್ಪನವರು ... ಆಟಿಯಪ್ಪನವರು ಸೂಚನೆಮೇರೆ MLC ಗಳಿಗೆ ಸತ್ಕರಿಸಬೇಕೆಂದು ಮಾಡಿದ ಏರ್ಪಾಡಿನ ಅನೇಕ ವರ್ತಮಾನಪತ್ರಿಕೆಗಳಲ್ಲಿ ಪ್ರಕಟವಾದಾಗ ತಿಳಿಯದಂತೆ ಆಚರಿಸಿ ತನ್ನ ವಿಷಯೂ ಕೋಪವನ್ನು ... ನವಾಗಿ ಚುನಾವಣೆ ... ಕಳುಹಿಸಿದ MLC ಯವರಮೇಲೆ ಕಾಳುವುದು ಎಂದಿಗೂ ಚಂಗಪ್ಪನವರ ... ಇವರು ಇನ್ನಾದರೂ ದಯವಿ... ಮಿಟಿಯು ... ಇದ ... ವಿವರವನ್ನೂ ಚೆನ್ನಾಗಿ ತಿಳಿದು ... ಬಾತ್ಮಿ ... ಬುದ್ಧಿಕಲಿತುಕೊಂಡು ... ತೆಗೆದ ... ಚಂಗಪ್ಪನವರ ದೊಡ್ಡಸ್ತಿಕೆಯು ತಿಳಿಯುವುದರಿಂದ ನಾನು ಬರೆದು ಸರಿಯೆಂದು ಹೇಳಿ ... ವಾಗಿದ್ದ ... ಬರೆದ ... ಹೇಳದೆ ಇರಲಾರೆ

ಪುಟ್ಟೀರಿ

ತಾ|| ೨೭ ನೇ ೫ ೨೪

ಬಿ ಎಸ್ ಪ್ರಿಯಪ್ಪ

ಸಹಕಾರ ಸಂಘಗಳ ಮೇಲ್ವಿಚಾರಣೆ

ಸಂಸ್ಥಾನ ಸಹಾಯದ ಸಂಘಗಳ ಮೇಲ್ವಿಚಾರಣೆಗೆ ರಿಜಿಸ್ಟ್ರಾರುಗಳನ್ನೂ, ಬರೀ ಆರ್ಗನೈಜರುಗಳನ್ನೂ ಸರಕಾರದವರು ... ನೇ ಇಸವಿಯಿಂದ ಈಗಾಗಲೇ ಒಬ್ಬ ಅಸಿಸ್ಟೆಂಟ್ ರಿಜಿಸ್ಟ್ರಾರನ್ನು ನೇಮಿಸಿ ಟ್ರೇನಿಂಗಿನಲ್ಲಿ ಇರಿಸಿ ... ಇವರಿಗೆ ಆರ್ಗನೈಜರುಗಳನ್ನು ಕಳೆದವರ್ಷವೇ ನೇಮಕಮಾಡಿದರೂ ಅವರು ಇದುವರೆಗೆ ಎಷ್ಟು ಸಂಘಗಳನ್ನು ಹುಡುಕಿ ನೋಡಿದರು ಎಂಬುವನ್ನು ರಿಜಿಸ್ಟ್ರಾರವರಾಗಲಿ ಅಥವಾ ತಿಳಿದವರಾಗಲಿ ಈ ಪತ್ರಿಕೆ ... ತಿಳಿಸಬೇಕೆಂದು ಅಪೇಕ್ಷಿಸುತ್ತೇವೆ ... ರಿಜಿಸ್ಟ್ರಾರು ... ವ್ಯಾಪಕಕೆಲಸವಾದರು ಸುಲಭವಾಗಿದ್ದಾರೆಂದು ಜನರಿಗೆ ತಿಳಿದಿಲ್ಲ ಸಹಕಾರಸಂಘಗಳಿಗೆ ಸೂಪರ್ವೈಸರರನ್ನು ನೇಮಕ ಮಾಡುವಾಗ ಅನೇಕರು ರಿಜಿಸ್ಟ್ರಾರವರ ಕೆಲಸ ... ಸೂಪರ್ವೈಸರನ್ನು ನೇಮಕಮಾಡುವುದು ಎಂಬುದಾಗಿ ಹೇಳುತ್ತಿದ್ದರು ಇದು ಸತ್ಯಕ್ಕೆ ಬಂದಹಾಗ ಕಾಣುತ್ತೆ ಏಕೆಂದರೆ ರಿಜಿಸ್ಟ್ರಾರವರ ಪ್ರಯಾಣವು ಸಂಘಗಳ ಕಡೆ ಬಹಳ ಕಡಿಮೆ ಯಾಗಿದೆ ಕಳೆದ ಮೂರು ವರ್ಷದಿಂದ ಇವರು ನೋಡದ ಸಂಘಗಳನೇಕ ಇವೆ, ಕೋಪರೇಟಿವ್ ಆನರರೀ ಆರ್ಗನೈಜರಿಂದ ಯಾವ ಹೆಚ್ಚಿನ ಕೆಲಸವನ್ನೂ ತೆಗೆದುಕೊಳ್ಳುವಂತೆ ಕಾಣುವುದಿಲ್ಲ. ಸಂಘಗಳ ಸ್ಥಿತಿಯೂ ಸೆಂಟ್ರಲ್ ಬ್ಯಾಂಕ್ ಆದಂದಿನಿಂದ ತಕ್ಕಮಟ್ಟಿಗೆ ಏಸೂಲಾತಿಯು ತೃಪ್ತಿಯಾಗಿ ನಡೆಯುತ್ತಾ ಇದೆ ಆದರೆ ಕೆಳಗಿನ ಸಂಘಗಳಿಗೆ ಪರಸ್ಪರ ಸಹಾಯದ ತತ್ವವೂ ಉದ್ದೇಶವೂ ತಿಳಿದಿರುವುದಿಲ್ಲ, ಬರೀ ಲೇವಾದೇವಿಯ ಸಂಘವೆಂದೇ ತಿಳಿದಿದ್ದಾರೆ ಇಂಥಾ ಕುಂದು ಕೊರತೆಯನ್ನು ಹೋಗಲಾಡಿಸಲು ಸರಕಾರದವರು ಒಂದೇ ಕಡಿಮೆಪಕ್ಷ ನಾಲ್ಕು ಜನ ಇನ್ಸ್‌ಪೆಕ್ಟರುಗಳನ್ನು ನಾಲ್ಕು ಜನ ಆರ್ಗನೈಜರುಗಳನ್ನೂ ನೇಮಕಮಾಡಿ ರಿಜಿಸ್ಟ್ರಾರವರು ಕಡಿಮೆಪಕ್ಷ ತಿಂಗಳಿಗೆ ೨೦ ಸಂಘಗಳನ್ನು ನೋಡುವಂತೆಯೂ, ಸಾಧ್ಯವಾದಷ್ಟಿಗೆ ಹಳೆಯ ಸಂಘಗಳನ್ನು ಕೂಡಿಸಿ ಅವುಗಳ ... ಸಹಕಾರತತ್ವವನ್ನು ಬೋಧಿಸಲು ... ಸಂಘಗಳನ್ನು ಒಳ್ಳೆ ಸ್ಥಿತಿಗೆ ... ಕೋರುತ್ತೇನೆ

ರೈತರಿಗೆ ಸಹಕಾರ ದ ... ಉಪಯೋಗ ಪ್ರಯೋಜನವಿರುವ ಇಲಾಖೆ ... ಸಹಕಾರ ಸಂಘ ... ಆಗಿದೆ, ಈ ಬಾಬ್ತಿನಲ್ಲಿ ಸಹಕಾರ ದ ... ಹೇಳಬೇಕಾಗಿದೆ ಇನ್ನಾ ... ಸಂಘಗಳ ಇನ್ಸ್‌ಪೆಕ್ಟರುಗಳನ್ನು ಈ ರೀತಿಯಲ್ಲಿ ಮುಂದರಿಸಲಿಕ್ಕೆ ... ಕೆಲಸ ಮಾಡಲು ನಮ್ಮ ಕಮಿಶನರವರು ಅನುಕೂಲ ಕೊಡುವರೆಂಬ ನಂಬಿಕೆ ಇದೆ "ಸಹಕಾರಿ"

ಟೆರಿಟೋರಿಯಲ್ ಪಟಾಲಂ

ಟೆರಿಟೋರಿಯಲ್ ಸೈನ್ಯಕ್ಕೂ ಮತ್ತು ಆಕ್ಸಿಲರೀ ಸೈನ್ಯಕ್ಕೂ ಭೇದವಿರತಕ್ಕದೆಂದೂ ಆಂಗ್ಲೋ ಇಂಡಿಯನ್ನರಿಗೆ ... ಯೂರೋಪಿಯನ್ನರಂತೆ ... ಸಿಕ್ಕಬೇಕೆಂಬುದಾಗಿ ಶ್ರೀಮಾನ್ ಪಂಡಿತ ಮದನಮೋಹನ ಮಾಳವೀಯರು ಅಸೆಂಬ್ಲಿಯಲ್ಲಿ ... ಅನ್ಯಾಯವಾದದ್ದೆಂದು ... ಪ್ರಸ್ತಾಪಿಸಿದ ... ಸೂಚನೆಯನ್ನು ... ಸರಕಾರದವರು ಒಂದು ಕಮಿಟಿಯನ್ನು ನಿರ್ಮಿಸಿರುತ್ತಾರೆ ... ವರು ಮದ್ರಾಸಿಗೂ ಬಂದಿರುವರೆಂದೂ ನಮ್ಮಲ್ಲಿಂದಲೂ ದೇಶದ ಪ್ರತಿನಿಧಿಗಳ ಅಭಿಪ್ರಾಯವನ್ನು ತೆಗೆಯುವರೆಂದೂ ವರ್ತಮಾನವಿದೆ ಹಾಗಾದರೆ ಅಂಥಾ ಸಾಕ್ಷಿ ... ಜನರಾಗಿ ನೇಮಕ ಮಾಡಬೇಕೋ ... ಈ ... ಟೆರಿಟೋರಿಯಲ್ ಸೈನ್ಯ ... ಮಾಡಿದ ... ತಮ್ಮ ... ತಿಳಿಯುವುದಿಲ್ಲ ... ಗಳಲ್ಲಿ ಪ್ರಜೆಗಳ ಪ್ರತಿನಿಧಿಗಳನ್ನು ... ಇರಬೇಕೆಂದೂ ... ಪ್ರಶ್ನೆ ... ಮಾಡುವುದು ಸಂಶಯಕ್ಕೆ ಕಾರಣವಾಗಿದೆ ಟೆರಿಟೋರಿಯಲ್ ಸೈನ್ಯದ ಕಮಿಟಿಯವರಲ್ಲಿರುವ ... ಪತ್ರಿಕೆಯಲ್ಲಿ ಅನೇಕವರ್ತ... ಕಳೆದ ಏಪ್ರಿಲ್ ... ಯಲ್ಲಿ ಆದ ... ಗಳಲ್ಲಿ ಯಾವ್ಯಾವ ... ಊಟ ಉಪಚಾರ, ... ವಗೈರೆ ವಿಷಯ ಯಾವ್ಯಾವ ... ? ... ಅನೇಕರ ... ಕಾರಣವೇನಿರಬಹುದೆಂಬುದನ್ನು ... ? ಹಾಗಲೂ ಅಂಥವರನ್ನೇ ಪ್ರಸ್ತಾಪವನ್ನು ... ಈಗಾಗಲೇ ಈ ... ನಲ್ಲಿ ಎದ್ದಿರುವ ... ಹೇತುವು ಎಂದು ಅನೇಕರ ಅಭಿಪ್ರಾಯ ... ಕರಿನಿಂದ ಹೋಗಿ ... ಪ್ರತಿನಿಧಿಗಳನ್ನು ಚುನಾಯಿಸಿ ... ಟೆರಿಟೋರಿಯಲ್ ಸೈನ್ಯಕ್ಕೇ ಇರತಕ್ಕದ್ದು ಅಥವಾ ಕೌನ್ಸಿಲ್ ಮೆಂಬರುಗಳೇ ಅದಕ್ಕೆ ಚುನಾವಣೆ ... ವುದು ಒಳ್ಳೇದು

... ಕೆಲಸಗಳಲ್ಲಿ ಅಸಿಸ್ಟೆಂಟ್ ಕಮಿಶನರು ಅಭಿಪ್ರಾಯಕೊಡುತ್ತಿದ್ದರು. ಇನ್ನು ಮುಂದೆ ದೇಶದ ಅಭಿಪ್ರಾಯವನ್ನು ... ಕೌನ್ಸಿಲ್ ಮೆಂಬರುಗಳು ... ಸರಕಾರ ... ಅವರ ಅಭಿಪ್ರಾಯದಂತೆ ನಡೆಯುವುದೇ ಮೇಲು ಮತ್ತು ಹೀಗೆ ಮಾಡಿದರೆ ರೈತರಿಗೂ ಸರ್ಕಾರದಮೇಲೆ ಮತ್ತಷ್ಟು ನಂಬಿಕೆಯುಂಟಾಗುತ್ತೆ.

"ಕೊಡಗು" ಸಂಪಾದಕರೇ, ತಾವು ಟೆರಿಟೋರಿಯಲ್ ಸೈನ್ಯದ ವಿಷಯ ಅಗ್ರಲೇಖನ ಬರೆದಮೇಲೆ ದೇಶದವರನೇಕರು ಈ ಸೈನ್ಯಕ್ಕೆ ಸೇರಿದ್ದಾರೆ ... ಇನ್ನು ತಾವು ತಮ್ಮ ಪತ್ರಿಕೆಯ ಅಗ್ರಲೇಖನದಲ್ಲಿ ಈ ವಿಷಯ ... ಈ ಸೈನ್ಯಕ್ಕೆ ಕಳೆದ ತರಬೇತಿನಲ್ಲಿ ಉಂಟಾದ ತೊಂದರೆಗಳನ್ನು ಹೋಗಲಾಡಿಸಲು ಮುಂದಕ್ಕೆ ಬರುವಿರೆಂದು ಆಶಿಸುವೆ, ಟೆರಿಟೋರಿಯಲ್

ರಾಮಚಂದ್ರಾಪುರಮಠವೂ, ಅದರ ಶಿಷ್ಯವರ್ಗವೂ

ರಾಮಚಂದ್ರಾಪುರದ ಮಠವು ಶ್ರೀ ಜಗದ್ಗುರು ಶಂಕರಾಚಾರ್ಯರ ಮಠದ ಶಾಖೆ. ಈ ಶಾಖಾಮಠವು ನಗರ ಪ್ರಾಂತದಲ್ಲಿದೆ. ಕೊಡಗಿನಲ್ಲಿರುವ ಹವೀಕ ಬ್ರಾಹ್ಮಣರೆಲ್ಲರೂ ಈ ಮಠಕ್ಕೆ ಸೇರಿದವರು. ಈಗ್ಗೆ ಎರಡು ಶತಮಾನಗಳಿಗೆ ಹಿಂದೆ ಕೆಲ ಹವೀಕರು ಆಗಿನ ಕೊಡಗು ರಾಜನ ನಿಮಂತ್ರಣದ ಮೇಲೆ ಕೊಡಗು ದೇಶಕ್ಕೆ ಕಾಲಿಟ್ಟರು. ಇತ್ತೀಚೆಗೆ ಒರ್ವ ಹವ್ಯಕನು ತನ್ನ ಬುದ್ಧಿವಂತಿಕೆ ಹಾಗು ವಿದ್ಯೆ ಇವೆರಡರ ಸಹಾಯದಿಂದ ಕೊಡಗು ಅರಸನ ವಿಶ್ವಾಸವನ್ನು ಬೆಳಸಿ ಅವನ ಕಾರಣೀಕನಾದನು. ಈತನ ವಂಶೀಯರೊಬ್ಬರು ನಿನ್ನಿನವರೆಗೆ ಕಾರಣೀಕ ಹುದ್ದೆಯಲ್ಲಿದ್ದು, ಈಗಲೂ ಪಿಂಚಿನು ಪಡೆದುಕೊಂಡು ವಯೋವೃದ್ಧರಾಗಿಯೂ ಐಶ್ವರ್ಯವಂತರಾಗಿಯೂ ಬದುಕುತ್ತಿದ್ದಾರೆ.

ಇತ್ತೀಚೆಗೆ ಮೈಸೂರು ಸೀಮೆಯಿಂದ ಅನೇಕಾನೇಕ ಜಾತಿ ಕುಲದವರು ಕೊಡಗಿಗೆ ಬಂದು ನೆಲಸಿದರು. ಹೀಗೆ ಬಂದವರಲ್ಲಿ ದೇವಾಂಗದವರು ತಮಗೆ ... ಐಕ್ಯಮತ್ಯಕ್ಕೂ ಹಾಗೂ ಧಾರ್ಮಿಕಸ್ಥಿತಿಯ ... ಆಗಿನ ಕಾರಣೀಕರ ಪ್ರೇಮಕ್ಕೆ ಪಾತ್ರರಾಗಿ, ರಾಮಚಂದ್ರಾಪುರ ಮಠಕ್ಕೆ ಶಿಷ್ಯರಾಗಿ ಸೇರಿಕೊಂಡರು. ಆ ದೇವಾಂಗ ಜನರಿಗೆ ಪಂಚಕ್ಷೇತ್ರದಲ್ಲಿ ಮಠವಿದೆ. ಆದರೆ ಬಹಳ ಕಾಲದಿಂದಲೂ ಅದು ಶೂನ್ಯವಾಗಿ ಹೋಗಿದೆ. ೧೯೦೦ ರಲ್ಲಿ ಒಬ್ಬ ಮರಿಯನ್ನು ಹಂಪೆಯ ... ಗದ್ದಿಯಮೇಲೆ ಹೆಚ್ಚು ವೈಭವಾದಿಗಳಿಂದ ಕೂಡಿಸಿಯೂ, ಒಂಬತ್ತು ವರ್ಷಗಳಮೇಲೆ ಆ ಸ್ವಾಮಿಗಳವರು ಆಗಿಹೋದರು. ಅಂದಿನಿಂದ ಪ್ರಸಕ್ತ ಸಿಂಹಾಸನವು ನಾಯಕನಿಲ್ಲದ್ದಾಗಿದೆ.

ಕೊಡಗಿಗೆ ಬಹಳ ಕಾಲದ ಹಿಂದಕ್ಕೆ ಬಂದ ದೇವಾಂಗದವರು ತಮ್ಮ ಮಠವಿದ್ದಾಗ್ಯೂ ರಾಮಚಂದ್ರಾಪುರ ಮಠಕ್ಕೆ ಸೇರಿ ಹೋದದ್ದು ತಪ್ಪೆಂದು ಕೆಲರು ಶಂಕಿಸಬಹುದು. ಆದರೆ ಹಂಪೆ ಮಠವು ಶೂನ್ಯಸಿಂಹಾಸನವಿರುವುದರಿಂದ, ಈ ಜನರು ರಾಮಚಂದ್ರಾಪುರ ಮಠಕ್ಕೆ ಸೇರಿಕೊಂಡರೆಂದು ಹೇಳಿದರೆ ತಪ್ಪೇ ಮುಗಿತು. ಇಲ್ಲವೆ, ಆಗಿಗೆ ಇವರಿಗೆ ಹಂಪೆ ಮಠದ ವಿಚಾರ ತಿಳಿದಿರಲಿಲ್ಲವೋ ಏನೋ ! ಇಷ್ಟು ಹೇಳುವುದೇಕೆ, ನಮ್ಮನ್ನಾಳುವ ಅರಸಿನ ಕಾರಣೀಕರ ಮಾತಿನ ... ರಾಮಚಂದ್ರಾಪುರ ಮಠಕ್ಕೆ ಸೇರಿದರೆ, ... ಆ ಮಠದ ... ಗಳಿಂದ ಪಾರುಗಾಣಲಿಕ್ಕೆ ... ಎಂದು, ... ರಾಮಚಂದ್ರಾಪುರದ ಮಠಕ್ಕೆ ಸೇರಿ ಹೋಗಿರಲೂ ಬಹುದು. ಹೀಗೆ ಸೇರಿದ್ದು ತಪ್ಪೆಂದು ತಿಳಿವಿಗಳು ... ಒಪ್ಪಲಿಕ್ಕಿಲ್ಲ. ... ನೀತಿ ಮತ್ತು ಧರ್ಮ ಬೋಧನೆಯನ್ನು ಮಾಡುವವರೇಗೂ ನಮಗೆ ... ಮಠವಾದರೇನು ? ... ವರ್ಷಗಳಷ್ಟಕ್ಕೆ ... ನಮ್ಮ ದೇವಾಂಗರಿಗೆ ಕಲಹವು ಹುಟ್ಟಿತು. ಅದಿಯಲ್ಲಿ ಈ ಕಲಹಕ್ಕೆ ... ಐಶ್ವರ್ಯವಂತರೊಳಗೆ ಹೊಕ್ಕು ... ನು ನೀ ಬೋಧವನ್ನು ... ಗಾಗಿ ... ಅಂತೂ ಏನೋ ಒಂದು ಕಾರಣದಿಂದ ಮೂಡಿದ ನಂತರ ಈ ಜಗಳವು ಜಾತಿ ಜಗಳವಾಗಿ ಪರಿಣಮಿಸಿತು.

ಈ ಜಗಳವು ರಾಮಚಂದ್ರಾಪುರದ ಮಠದ ... ಯಜಮಾನರ ಮುಂದೆ ಬಂದು ಇಲ್ಲಿಯೂ ... ನವಾಗಲಿಲ್ಲ. ಆ ಮೇಲೆ ಆ ಕಡೆ ಒಂದು ... ಈಕಡೆ ಒಂದು ಗುಂಪು ದೇವಸ್ಥಾನದ ಸ್ವಾಮ್ಯ ... ರಾಮಚಂದ್ರಾಪುರದ ಮಠದ ... ಕೋರ್ಟಿನವರ ತೀರ್ಪು ... ಅನುಕೂಲವಾಯಿತು. ಸಹಸ್ರಾರು ... ಖರ್ಚಾದುವು. ನಾಶವನರೇನು ಕಾರಣರೇ ? ... ದವರು ಮಂದಿಗಳೇ ! ಇಷ್ಟೆಲ್ಲಾ ಹಣವನ್ನು ... ವಿದ್ಯೆಗೆ ವ್ಯಯಮಾಡಿದ್ದರೆ ತಮ್ಮ ಜನರು ... ಆಗುತ್ತಿದ್ದರು ಅಲ್ಲವೆ.

... ಗೂ ಹೀಗೂ ಈ ಜಗಳವು ಮೂವತ್ತು ವರ್ಷ ನಡೆಯಿತು. ಅನಂತರ ಎರಡು ವರ್ಷಗಳ ... ಹಿಂದೆ ಎರಡೂ ಕಡೆಯವರೂ ಹೊಂದಿಕೊಂಡರು. ಸ್ವಾಮಿ ಈಗ ... ತ್ಯಾಜ್ಯ ಮಾಡಬೇಕೆಂಬ ಮಾತು ಕೇಳುತ್ತಿದೆ. ... ನಡೆದ ಒಂದು ಲಗ್ನದಲ್ಲಿ ಈ ವಿಷಯದಲ್ಲಿ ನಡೆದು ನಾಲ್ಕಾರು ಮಂದಿಯು ಹೇಳದೆ ... ಹೋದರು.

..., ಮಠಾಧಿಪತಿಗಳು ತಮ್ಮ ಅಧಿಕಾರವನ್ನು ... ದಿಂದ ನಡೆಸುತ್ತಿದ್ದಂತೆ ಈಗಲೂ ನಡೆಸುತ್ತಿರುವರು. ಒಂದುವೇಳೆ ನಮ್ಮ ಜನರೆ ... ದಿಂದ ಮಠ ಬೇಡೆಂದು ಹೇಳಿದರೆಂತಾದರೆ ... ದ್ವಂಥವು ಇರುವುದೋ ? ... ನೀವು ಬೇಕಾದಹಾಗೆ ನಡೆದುಕೊಳ್ಳಿ ; ... ಒಮ್ಮತದಿಂದಿರುವುದೇ ... ನಮ್ಮ

ಅಪೋಸ್ಟ್‌" ಎನ್ನುವರು.

ಹೀಗೂ ಮಠದ ಕಡೆಯಿಂದ ದಬ್ಬಾಳಿಕೆಯಾದರೆಂದು ಭಾವಿಸೋಣ. ಈ ರೀತಿ ಕಲಹವು ಮುಂದಕ್ಕೂ ಇರಬಾರದೆಂದು ನಂಬುವುದೇ ? ನಂಬಲಿಕ್ಕೆ ಸಾಧ್ಯವಿಲ್ಲ. ... ಯಾವಾಗ ಜನರು ವಿದ್ಯಾವಂತರಾಗಿ ನೀತಿಯುಳ್ಳವರಾಗುವದಿಲ್ಲವೋ ಅದುವರೆಗೆ ಜಗಳ ಜವರದ ಮಾತು ... ನಿಂತೀತು.

ಎಂತೂ ಸುಗತಿಯಿಂದ ಜನರು ಜೀವಿಸಬೇಕಾದರೆ ಏನುಮಾಡಬೇಕು ? ನನಗೆ ಒಂದು ರೀತಿಯಲ್ಲಿ ಯೋಚನೆಯು ಹರಿಯುತ್ತಿದೆ. ಕೂಡಲೆ ನಮ್ಮ ಜನರು ಒಂದು ಮಹಾಸಭೆಯನ್ನು ಕರೆದು ಮುಂದೆ ಹೇಗೆ ನಡೆದುಕೊಳ್ಳಬೇಕೆಂದು ತೀರ್ಮಾನಿಸುವುದು ಯೋಗ್ಯ. ಆ ಸಭೆಯಲ್ಲಿ ಮಂದಿಗಳಿಗಾಗಿ ಕೊಂಚಕಟ್ಟ ಕಾರ್ಯನಡೆಸುವ ಯೋಗ್ಯ ಪುರುಷರನ್ನು ಕಾರ್ಯನಿರ್ವಾಹಕಸದಸ್ಯರನ್ನಾಗಿ ನೇಮಿಸುವುದು ಉಚಿತ. ಈ ಸಭೆಯು ಚೆನ್ನಾಗಿ ಕೆಲಸ ನಡೆಸುತ್ತದೆಂದು ನನಗೆ ಭರವಸೆಯಿಲ್ಲ. ಆದಾಗ್ಯೂ, ಮಂದಿಗಳ ಅಭಿಪ್ರಾಯವು ಹೀಗಿದೆಂದು ತಿಳಿಯಬಹುದು. ಸುಧಾರಿಸಿದ ಈ ಕಾಲದಲ್ಲಿ ಕಲಹ ಸರಿಯಲ್ಲ. ಎಲ್ಲರೂ ಸುಖವಾಗಿ ಬದುಕಲು ಯತ್ನಿಸಬೇಕು.

ನಮ್ಮ ದೇವಾಲಯವು ದೀರ್ಘಕಾಲದಿಂದ ಜೀರ್ಣಾವಸ್ಥೆಯಲ್ಲಿದೆ. ಎಲ್ಲರೂ ಒಟ್ಟುಗೂಡಿ ಅದನ್ನು ಸರಿಮಾಡಿರಿ. ದೇವಾಲಯದ ಸಂಬಂಧ ಇಟ್ಟುಕೊಂಡಿರುವ ಮಾನಕ್ಕೂ ಹಣವನ್ನು ಸನ್ಮಾರ್ಗದಲ್ಲಿ ನಡೆಯುವ ಭಗವಂತನೊಬ್ಬನಿದ್ದಾನೆ ದು ನಂಬುವ ಮತ್ತು ಜನಸೇವೆ ಮಾಡಬೇಕೆಂದು ಇಚ್ಛೆ ಇರುವ ಪ್ರತಿಯೋರ್ವನು ಉಪದ್ಯಾಕ್ತ ಮಹಾಸಭೆಯಕ್ಕೆ ಒಪ್ಪಿಸಲಿ. ಹಣದ ಅಬಾವವು ತೋರಿಬಂದರೆ, ವಂತಿಗೆಯ ಮೂಲಕ ಧನ ಶೇಖರಿಸಿ, ದೇವಾಲಯ ಕಾರ್ಯವನ್ನು ಜಾಗ್ರತೆ ಸಂವರಿಸಿರಿ. ಹೀಗೆ ಮಾಡಿದರೆ ಭಗವಂತನು ಅವನ ಕರುಣಾಕಟಾಕ್ಷವನ್ನು ನಿಮ್ಮಮೇಲೆ ಬೀರುವನು.

ಅನುಭವಿ

ಪಾರೀ ಕಂಪನಿ ಕಂಟ್ರಾಕ್ಟು ಕಮಿಟೀ ಮತ್ತು ಮಾವು ಕೂಟ್ ಟ್ರಾಮ್‌ವೇ

ಕಳೆದವಾರದ ಪತ್ರಿಕೆಯಲ್ಲಿ ಮಾವುಕೂಟ್ ಟ್ರಾಂವೇ ಮೂಲಕ ಎಳೆದ ಮರಗಳನ್ನು ಪ್ಯಾರೀ ಕಂಪೆನಿಗೆ ಕಂಟ್ರಾಕ್ಟು ಮಾಡುವುದನ್ನು ಸರಕಾರದವರು ವಿಮರ್ಶೆ ಮಾಡುವವರೆಂತಲೂ ಈ ಬಗ್ಗೆ ಚರ್ಚಿಸಲು, ಕೌನ್ಸಿಲು ಮೆಂಬರುಗಳ ಪೈಕಿ ... ಪ್ರತಿನಿಧಿಯರನ್ನು ... ವೆಂಕಪ್ಪಯ್ಯನವರನ್ನು ಕೂಡಿ ಒಂದು ಕಮಿಟಿ ನೇಮಿಸುವರೆಂತಲೂ ಓದಿದೆನು. ಇದನ್ನು ... ದಾಕ್ಷಿಣ್ಯವೇ, ಕೌನ್ಸಿಲು ಮೆಂಬರುಗಳೇ ಕರಿದ್ದರ ... ಮೈತ್ರಿಯಲ್ಲಿ ಮಾತ್ರ ಇಬ್ಬರನ್ನು ಏತಕ್ಕಾಗಿ ನೇಮಿಸಿದರೆಂಬುದು ಸಂಶಯಕ್ಕೆ ಕಾರಣವಾಗಿದೆ. ಇದು ಸರಕಾರದ (Divide and Rule) ವಿಂಗಡಿಸಿ ಆಳಿಕ್ಕೆರುವ ನೀತಿಯೋ ಎಂಬ ಸಂಶಯಕ್ಕೆ ಆಸ್ಪದವನ್ನುಂಟುಮಾಡಿದೆ. ಏತಕ್ಕೆಂದರೆ, ನಮ್ಮ ಸರಕಾರವು ಯಾವಾಗಲೂ ಜಮ್ಮದವರನ್ನೂ, ಅವರ ಪ್ರತಿನಿಧಿಗಳನ್ನೂ ತನ್ನ ಸ್ವಂತ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಂತೆಯೂ ನಾಗರಿಕರನ್ನು ... ಮಕ್ಕಳಂತೆಯೂ ಕಾಣುತ್ತದೋ ಎಂಬಂತೆ, ಜಮ್ಮ ಜಮ್ಮದವರು ಎಂದು ಹೇಳುತ್ತಾ, ಜಮ್ಮದವರ ಖಾಯಂ ದಾಸತ್ವವನ್ನೂ, ಹಕ್ಕು ದಾರಿಕೆಯನ್ನೂ ಜಮ್ಮಾಗವರು ಆಗಾಗ್ಗೆ ಮಿಲಿಟರೀ ಪಗೈರೆಗೆ ಮಾಡುತ್ತಿರುವ ಸಹಾಯಗಳನ್ನೂ ಕೊಂಡಾಡುತ್ತಾ ಪ್ರತ್ಯಕ್ಷ ನೋಡುವವರಿಗೆ ಸರಕಾರದವರು ಪಕ್ಷಪಾತ ಮಾಡುವವರೋ ಎಂಬಂತೆ ಗೋಚರಿಸಲು ಮಾಡಿತ್ತು. ಆದರೆ ಈಗ ಏತಕ್ಕಾಗಿ ಈ ರೀತಿ ಮಾಡಿದರೆಂಬುದಾಗಿ ಅನೇಕರು ಪ್ರಶ್ನೆ ಮಾಡುತ್ತಾ ಇದ್ದಾರೆ. ನಾನಾದರೋ ಜಮ್ಮ, ನಾನು ಎಂಬದಾಗಿ ಭೇದ ಹುಟ್ಟಿಸಲಿಕ್ಕಾಗಿ ಈ ಪಕ್ಷಪಾತ ಬೆಳೆಸುವುದಲ್ಲ. ಸರಕಾರದವರು ಜಮ್ಮದವರ ಹಿತವನ್ನು ಬಯಸುವರೆಂಬ ಭಾವನೆಯಿಂದ ನಾನು ಜಮ್ಮ ಎಂಬುದಾಗಿ ಕೊಡುಮಾಡ್ ಕೌನ್ಸಿಲ್ ಚುನಾವಣೆಯು ಬೇಡವೆಂದು ರೈತರು ಎಷ್ಟು ಕೂಗಿಕೊಂಡಾಗ್ಯೂ ಸರಕಾರದವರು ಆ ಭೇದವಿದ್ದೀ ಇರಬೇಕೆಂಬುದಾಗಿ ತೀರ್ಮಾನ ಮಾಡಿ ಈಗ ಜಮ್ಮ ನಾನು ಪ್ರತಿನಿಧಿಗಳಲ್ಲಿ ಮತ್ತಷ್ಟು ಭೇದಭಾವವನ್ನು ಹುಟ್ಟಿಸಲಿಕ್ಕೋ ಎಂಬುದಾಗಿ ನಾಗರಿಕ ಎರಡು ಪ್ರತಿನಿಧಿಗಳನ್ನೂ ವಿರ್ಜಿಸಿದ್ದೆಂಬುದು ಭಾವಿಸಬೇಕಾಗಿದೆ. ಜಮ್ಮದ ಪ್ರತಿನಿಧಿಗಳ ಬದಲಾಗಿ ಕೊಡಗು ಉದ್ಯೋಗಸ್ಥ (ಸರಕಾರಿ) ಪ್ರತಿನಿಧಿಗಳು ತಾನು ರೈತರ ಪ್ರತಿನಿಧಿ ಎಂಬುದಾಗಿ ಹೇಳಿ ಕರಿರೀತಿ ಮಾಡಲು ವಿರೋಧ ಮಾಡಿದರೋ ತಿಳಿಯುವುದಿಲ್ಲ. ನಾಗರಿಕ ಎರಡು ಪ್ರತಿನಿಧಿಗಳು ಈ ತರದ ಕಮಿಟಿ ಪದವಿಯನ್ನು ತ್ಯಾಗ ಒಪ್ಪಿಕೊಂಡರೆಂಬುದು ಜನ ಸಂಶಯಕ್ಕೆ ಆಸ್ಪದವಾಗುತ್ತದೆ. ಇನ್ನಾದರೂ ಆ ಧಾ ಕಮಿಟಿಗೆ, ಅಂದರೆ ವಿಂಗಡಿಸಿ ಆಳಲು ಬೀಜ ಬಿತ್ತುವ ... ದಕ್ಕೆ ಯಾರು ಆಸ್ಪದಕೊಡದಿರುವುದು ಕಾರಣವಾದರೂ ಸಹ ಖಂಡಿತವಾಗಿಯೂ ಇಂಥ ಜಮ್ಮದ ಪ್ರತಿನಿಧಿಗಳಿಂದ ಎರಡು ಜನರನ್ನೂ, ನಾಗರಿಕರಿಂದ ಒಬ್ಬನನ್ನೂ ಹೀಗೆ ಮೂರು ಜನರನ್ನೂ ಕೌನ್ಸಿಲು ಮೆಂಬರುಗಳೇ ಚುನಾವಣೆ ಮಾಡಿಕೊಳ್ಳಬೇಕಾಗಿ ಕೋರುತ್ತೇವೆ. ಸಹೋದರರಾದ ನಿಯಮಿತ ನಾಗರಿಕ ಮೆಂಬರುಗಳು ಸಹ ಈ ಕಮಿಟಿತ್ವವನ್ನು ತ್ಯಜಿಸುವುದು ಒಳ್ಳೆಯದಾಗಿ ಕಾಣುತ್ತದೆ.

ಈಗ ಪ್ಯಾರೀ ಕಂಪೆನಿಯು ಮರ ಮಾರಾಟದ ವಿಷಯ ಕೆಲವು ಸಂಗತಿಯನ್ನು ಹೇಳಬೇಕಾಗಿದೆ. ಈ ಮಾವುಕೂಟ್ ಟ್ರಾಂವೇಯು ಯುದ್ಧದ ನಿಮಿತ್ತದಿಂದ ಆಗಿದ್ದಾಗಿದೆ. ಈಗ ಯುದ್ಧ ನಿಂತರೂ ಅನೇಕ ಲಕ್ಷ ರೂಪಾಯಿಗಳನ್ನು ನ್ಯಾಯವಾದ ಮೇಲ್ವಿಚಾರಣೆ ಇಲ್ಲದೆ ಒಬ್ಬ ಫಾರೆಸ್ಟ್ ಇಂಜಿನೀಯರ ಹೇಳಿಕೆಯಿಂದ ಖರ್ಚು ಮಾಡುತ್ತಲೇ ಇದ್ದಾರೆ. ಫಾರೆಸ್ಟ್ ಟ್ರಾಂವೆಯು ಇಂಡಿಯಾ ದೇಶದ ಯಾವ ಕಡೆಯಲ್ಲಿಯೂ ಲಾಭದಿಂದ ಕೆಲಸ ಮಾಡಿಲ್ಲ. ಇದರಿಂದ ಎಲ್ಲಾ ಕಡೆಯಲ್ಲಿಯೂ ನಷ್ಟ ವಿಪರೀತವುಂಟಾಗಿದೆ. ಪ್ರಾರಂಭ ಕೆಲಸದಲ್ಲಿ ನ್ಯಾಯವಾದ ಮೇಲ್ವಿಚಾರಣೆಯಿಲ್ಲದೆ ಕಂಟ್ರಾಕ್ಟರುಗಳು ಲಕ್ಷಗಟ್ಟಲೆ ರೂಪಾಯಿ ಸಂಪಾದನೆ ಮಾಡಿದ್ದಾರೆ. ಈ ಕಂಟ್ರಾಕ್ಟು ಇಬ್ಬರು ಯೂರೋಪಿಯನ್ ಪ್ಲಾಂಟರುಗಳಿಗೆ ಕೊಡಲ್ಪಟ್ಟಿತ್ತು. ಒಟ್ಟು ಖರ್ಚು ಮಾಡಿದ ಹಣದ ಶೇಕಡ 25°/. ದಷ್ಟು ಲಾಭ ಇವರಿಗೆ ಕೊಟ್ಟಿದೆ. ಕಡಿಮೆ ಪಕ್ಷ ಎರಡು ಲಕ್ಷಕ್ಕಿಂತ ಹೆಚ್ಚಾಗಿ ಈ ಕಂಟ್ರಾಕ್ಟರು ಲಾಭ ಸಂಪಾದನೆ ಮಾಡಿದ್ದಾರೆ. ಕಂಟ್ರಾಕ್ಟು ಇಂಡಿಯನ್ ಜನರಿಗೆ ಕೊಡಲಿಲ್ಲ. ಈಗಲೂ ಸಹ ಅಲ್ಲಿಯ ಅನಾವಶ್ಯಕ ಖರ್ಚನ್ನು ಕೌನ್ಸಿಲು ಮೆಂಬರುಗಳು ... ಮಾಟಿಂಗಿನಲ್ಲಿ ಬಹಳವಾಗಿ ಹೇಳಿದರು. ಇದೀ ... ಕ್ಕೇನೇ ಹನ್ನೆರಡು ಹದಿಮೂರು ಫಾರೆಸ್ಟು ಇಂಜಿನೀಯರು ನಮ್ಮ ಕೊಡಗಿಗೂ ಒಬ್ಬ ಫಾರೆಸ್ಟು ಇಂಜಿನೀಯರು. ಇವರಿಗೆ ಸಂಬಳ ಭತ್ಯ ವಿಪರೀತವಾಗುತ್ತ, ಮಡಿಕೇರಿ ಅವರ ಖಾಯಂ ವಾಸ. ಮಡಿಕೇರಿಯಿಂದ ಯಾವಾಗಲೂ ಹೋಗಿ ಬರುವುದಕ್ಕೆ ಕೊಡಗಿನ ಯಾವ ಉದ್ಯೋಗಸ್ಥನಿಗೂ ಸಿಕ್ಕದಷ್ಟು ಭತ್ಯವು ಇವರಿಗೆ ಸಿಕ್ಕುತ್ತದೆ. ಅಲ್ಲಿ ಇವರು ಮಾಡುವ ಕೆಲಸವು ಬಹಳ ಕಡಿಮೆ. ಡಿಪಾರ್ಟ್‌ಮೆಂಟಿನ ಜನಗಳು ಮಾವುಕೂಟು ಬಹಳ ಅಸೌಖ್ಯದ ಜಾಗವೆಂದೂ ಉದ್ಯೋಗಸ್ಥರನ್ನು ಆಗಾಗ್ಗೆ ವರ್ಗಾವರ್ಗಿ ಮಾಡಬೇಕೆಂದೂ ಹೇಳುತ್ತಾರೆ. ಆದರೆ ಈ ಟ್ರಾಂವೇ ಕೆಲಸಕ್ಕೆ ನಿಯಮಿಸಿದ ಬೆಂಚರುಗಳು ಮತ್ತು ಫಾರೆಸ್ಟರುಗಳಿಗೆ ಐದು ವರ್ಷ ಒಂದೇ ಜಾಗದಲ್ಲಿದ್ದರೂ ವರ್ಗಾವರ್ಗಿ ಇಲ್ಲ. ಇವರನ್ನು ವರ್ಗ ಮಾಡಿದರೆ ... ಫಾರೆಸ್ಟು ಇಂಜಿನೀಯರ ರಥ ನಡೆಯುವುದು ... ಫಾರೆಸ್ಟು ಇಂಜಿನೀಯರಿಗಾ ... ಮೋಟಾರುಲಾರಿ, ಮತ್ತು ... ಮಾಡಿ ಸರಿಯಾಗಿ ಕೆಲಸಮಾಡಿಸಲಿಕ್ಕೆ ಬಹಳ ... ದುಂದುಗಾರಿಕೆಯ ಖರ್ಚನ್ನು ಕೇಳುವವರು ಅಲ್ಲಿಗೆ ಟ್ರಾಂವೇ ಲೈನಿನ ಹತ್ತಿರವಿರುವ ಮಂವು ಕಡಿದು ... ಬಿಟ್ಟಿದೆ. ಇನ್ನು ಮರ ಬೇಕಾದರೆ ಟ್ರಾಂವೇ ಲೈನನ್ನೇ ... ಬೇರೆ ಜಾಗಕ್ಕಾಗಿ ಹಾಕಬೇಕು. ಇದಕ್ಕೆ ಪುನಃ ಎಷ್ಟು ಲಕ್ಷ ರೂಪಾಯಿ ಖರ್ಚಾಗಬಹುದು, ಮಾವುಕೂಟಿನಿಂದ ಒಕ್ಕಲಟಾಮಿಗೆ ಮರವನ್ನು ಸಾಗಿಸುವ ಖರ್ಚು ಒಂದು ಘನಅಡಿಗೆ ೦ ೧೪-೦ ಆಗುತ್ತದೆ. ಪ್ಯಾರೀ ಕಂಪೆನಿಗೆ ಮಾರುವುದು ಒಂದು ೦-೮ ೦ ... ೦ ಗೆ ಆಗಿದೆ. ದಯವಿಟ್ಟು ವಾಚಕರು ಸರಕಾರದ ಈ ನೀತಿಯನ್ನು ಸ್ವಲ್ಪಮಟ್ಟಿಗೆ ಯೋಚಿಸಿ.

ಮರ ... ಯಂತ್ರವನ್ನಿಟ್ಟು, ಪ್ಯಾರೀ ಕಂಪೆನಿಯವರು ಕೊಡಗಿನ ಸರಕಾರಕ್ಕೆ ... ತ್ತಾರಂತೆ. ಇದು ಒಂದು ಸುಳ್ಳು. ಪ್ಯಾರೀಯಂತ ಅನೇಕ ಕಂಪೆನಿಗಳು ರಸಲ್‌ಕೊಂಡಾ, ಬಲವಕೋಟೆ, ಮೊದಲಾದ ಅನೇಕ ಸ್ಥಳಗಳಲ್ಲಿ ಇಂಥಾ ಮರಕುಯ್ಯುವ ಯಂತ್ರವನ್ನಿಟ್ಟು ಮತ್ತು ಸರಕಾರದವರು ಲಕ್ಷಾಂತರ ರೂಪಾಯಿಗಳನ್ನು ಇಂಥಾ ಕಂಪೆನಿಗಳಿಗೆ ಕೊಟ್ಟರು ... ನಮ್ಮ ಸರಕಾರದ ದೃಷ್ಟಿಗೆ ಗೋಚರವಾಗಿದೆ. ಇದನ್ನು ... ಕಂಡರೂ, ... ಅನೇಕ ಲಕ್ಷ ರೂಪಾಯಿಗಳನ್ನು ಪ್ಯಾರೀ ಕಂಪೆನಿಗೆ ತಿನ್ನಿಸುವುದು ಯಾವ ಧರ್ಮ ... ಮತ್ತು ... ಡಿಪಾರ್ಟ್‌ಮೆಂಟಿನವರು ಹೇಳುವ ಖಾಲೀ ಸಬೂಬುಗಳಿಗೆ ... ! ಕಮಿಷನರವರು ಎಲ್ಲವನ್ನೂ ... ದುಂದುಗಾರಿಕೆಯನ್ನು ಖಂಡಿತವಾಗಿಯೂ ... ರೆಂದು ನಂಬುತ್ತೇವೆ. ಇದೇ ಮಾವುಕೂಟು ... ಗಳಲ್ಲಿ ಟ್ರಾಂವೇ ಲೈನು ಹಾಕುವ ... ವರ್ಷ

...ಸಾವಿರ ರೂಪಾಯಿ ಹುಟ್ಟಿ... ಈಗ ಈ ವಿಚಿತ್ರ ಟ್ರಾಂವೇ ... ಹತ್ತು ಹನ್ನೆರಡು ಲಕ್ಷ ರೂಪಾಯಿ ... ದ ಜೊತೆಗೆ ಪ್ರತಿವರ್ಷವೂ ಒಂದು ಲಕ್ಷದವರೆಗೆ ನಷ್ಟ ಗಂಧ ಮರ್ಗಳಿಂದ ಸಿಕ್ಕುವ ಒಳ್ಳೆ ಉತ್ಪತ್ತಿಯು ಈ ದುಂದುಗಾರಿಕೆಯಲ್ಲಿ ಖರ್ಚಾಗುತ್ತಾ ಇದೆ ಈ ಟ್ರಾಂವೇ ಲೈನು ಮತ್ತು ಫ್ಯಾರಿ ಕಂಪೆನಿಯು ಕಂಟ್ರಾಕ್ಟು ಮುಂದರಿಸಿದರೆ ... ಫಾರೆಸ್ಟಿನ ಎಲ್ಲಾ ಉತ್ಪತ್ತಿಯೂ, ಇಂಜಿನೀಯರ ಎಕ್ಸ್‌ಪರ್ಟ್ ಖರ್ಚಿಗೂ ಫ್ಯಾರಿ ಕಂಪೆನಿಗೂ ಖರ್ಚಾಗಿ ಕೊಡಗು ದೇಶಕ್ಕೆ ಫಾರೆಸ್ಟು ಡಿಪಾರ್ಟ್‌ಮೆಂಟಿನಿಂದಲೇ ಪ್ರಯೋಜನವಿಲ್ಲದಂತೆ ಖಂಡಿತವಾಗಿಯೂ ಆಗುತ್ತೆ ಆದ್ದರಿಂದ ಇಂಥಾ ದುಂದುಗಾರಿಕೆಯನ್ನು ಅಂದರೆ ಈ ಟ್ರಾಂವೇ ಲೈನನ್ನೇ ಪೂರ್ತಿಯಾಗಿ ಮುಚ್ಚಿ ಈ ಮೊದಲು ಇದ್ದಂತೆ ಕಾಡಿನಲ್ಲಿರುವ ಮರಗಳನ್ನು ಕಂಟ್ರಾಕ್ಟರುಗಳಿಗೆ ಕೊಟ್ಟಲ್ಲದೆ ನಮ್ಮ ದೇಶಕ್ಕೆ ಸುಖವು ಖಂಡಿತವಾಗಿಯೂ ಇರುವುದಿಲ್ಲ

ಫ್ಯಾರೀ ಕಂಪೆನಿ ಲಾಭವನ್ನುಂಟುಮಾಡುವುದರ ಜೊತೆಗೆ ಈಗೀಗಲೇ ಟ್ರ್ಯೂ ಎಂಬವರ ಮೇಲೆ ಕೆಲವು ದಕ್ಷಿಣಕೊಡಗಿನಲ್ಲಿ ...ಗಿದೆಯೆಂದು ಕಳೆದ ವಾರದ ಪತ್ರಿಕೆಯಲ್ಲಿ ನೋಡಿದೆನು ಅನೇಕ ರೋಂಗುಗಳು ಕೇಸವಿಲ್ಲದೆ ಇರುವಾಗ ಒಬ್ಬ ಎಲ್ಲಿಯೋ ಇದ್ದ ಆಂಗ್ಲೆಯನನ್ನು ಅನೇಕ ಸಾವಿರ ರೂಪಾಯಿ ಅಡ್ವಾನ್ಸ ಕೊಟ್ಟು ಸರಕಾರದವರು ಏತಕ್ಕಾಗಿ ನೇಮಿಸಿದರು ದೇಶದವರು ಎಚ್ಚತ್ತು ಈ ದುಂದುಗಾರಿಕೆಯನ್ನು ಕಡಿಮೆಮಾಡಲು ಕೌನ್ಸಿಲು ಮೆಂಬರುಗಳ ಮೂಲಕ ಸರಕಾರದ ಅವಗಾಹನೆಗೆ ಅಂದರೆ ಚೀಫ್ ಕಮಿಶನರ್ ಮತ್ತು ಇಂಡಿಯಾ ಸರಕಾರದ ಮುಂದಿಡದೆ ಹೋದರೆ ದೇಶದ ಹಣವೆಲ್ಲವೂ ಒಬ್ಬ ಫಾರೆಸ್ಟು ಇಂಜಿನೀಯರ ಖರ್ಚಿಗೂ ಫ್ಯಾರೀ ಕಂಪೆನಿಗೂ ಟ್ರ್ಯೂ ಮಹಾರಾಯರ ಕೆಲಸಕ್ಕೂ ದೊಡ್ಡ ದೊಡ್ಡ ಉದ್ಯೋಗಸ್ಥರ ಭತ್ಯಕ್ಕೂ ಸರಿಯಾಗುವುದರಲ್ಲಿ ಸಂದೇಹವಿಲ್ಲ

ಕೊನೆಯಲ್ಲಿ ಒಂದೇ ಒಂದು ಮಾತು ಹೇಳಬೇಕಾಗಿದೆ ಕೌನ್ಸಿಲು ಮೆಂಬರುಗಳು ಫ್ಯಾರೀ ಕಂಪೆನಿಗೆ ಕಂಟ್ರಾಕ್ಟು ಕೊಡಲಿಕ್ಕೆ ಬಿಡದಂತೆಯೂ, ಒಪ್ಪಿಕೆಯಲ್ಲಿ ಕೂಡಿಸಿಟ್ಟ ಮತ್ತು ಕೊನ್ನಕ್ಕನಲ್ಲಿರುವ ... ಗಳನ್ನು ಪ್ರಕಟಣೆ ಮೂಲಕ ... ಹರಾಜಿನಿಂದ ಹೆಚ್ಚಿನ ದರಕ್ಕೆ ಮಾರಲಿಕ್ಕೆ ಕೋರುವುದು ಒಳ್ಳೆಯದು ದಯವಿಟ್ಟು ... ನಾಮಿಲ್ಲನ್ನು ಅಲ್ಲಿ ಫ್ಯಾರೀ ಕಂಪೆನಿಯವರು ಮಾಡಿದ ಕೆಲಸವನ್ನು ಚೆನ್ನಾಗಿ ಕೌನ್ಸಿಲು ಮೆಂಬರುಗಳು ಪರಿಶೀಲಿಸಿ ನೋಡಲಿ

(ರೈತ)

ಮಾರಾಟಕ್ಕಿದೆ.

I ಕಡಂಗ... ಗ್ರಾಮದ ಸರ್ವೆನಂಬರು 6.. ರ 2 77 ಎಕರೆಯಾದ ಭೂಮಿ ಒಂದು

II ಡಿಟ್ಟೋ ಸರ್ವೆನಂಬರು 69 ರ 0 39 ಎಕರೆಯಾದ ಭೂಮಿ ಒಂದು

III ಡಿಟ್ಟೋ ಸರ್ವೆನಂಬರು ..ರ 7 48 ಎಕರೆಯಾದ ಬಾಣೆ

IV ಡಿಟ್ಟೋ ಸರ್ವೆನಂಬರು ..ರ 0 11 ಎಕರೆಯಾದ ಕೆರೆ ಮತ್ತು ಜಾಗ ಸಹ ಇದರಲ್ಲಿ ದಾಮುಕಾಯಿಪ್ರಕಾರ

V ಅರಮೇರಿ ಗ್ರಾಮದಲ್ಲಿ ಸ ಸಂ 337 ರ 0 34 ಎಕರೆಯಾದ ಸರಾದೀನದ ಜಾಗ ಇದರಲ್ಲಿ ಇರುವ ಮೂರು ಅಂಕಣದ ಹುಲ್ಲು ಚಾವಣಿಮನೆ ಎರಡು ಕೊಟ್ಟಿಗೆಕಣ ಮತ್ತು ಕಿತ್ತಲೆ ತೋಟ ಸಹ ಇರುವ ಆಸ್ತಿ ಒಂದು

ಇಂತಿಷ್ಟು ಆಸ್ತಿಗಳ ಎರಡುಸಾವಿರ ರೂಪಾಯಿಗಳಿಗೆ ಮಾರಾಟಮಾಡಲ್ಪಡುತ್ತವೆ ಖಾಯಿಷ್ ಇರುವವರು ಆ ವರ ಇರಾದೆ ಬರಿಹ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಬೇಕಾಗಿದೆ

ವಿಳಾಸ—ಕೆ ಕೆ ಮುತ್ತಣ್ಣ K K Muttanna.
ಕಾಟ್ಟಬಾಣೆತೋಟ ಸಿದ್ದಾಪುರ ಪೋಸ್ಟು

ತಾ|| 27—5—24 [3—1]

ನೋಟೀಸ್.

ಭಾಗಮಂಡಲನಾಡು ಚೇಂಗೂರು ಗ್ರಾಮದ ಬ್ರಾಹ್ಮಣ ಶಿವಣ್ಣಯ್ಯನವರ ಹೆಂಡತಿ ಕಾವೇರಿಯಮ್ಮನು ಈ ಮೂಲಕ ಸಮಸ್ತ ಜನರಿಗೂ ಪ್ರಸಿದ್ಧಪಡಿಸುವದೇನಂದರೆ,

ನನ್ನ ತಾಯಿ ಭಾಗೀರಥಿ ಅಮ್ಮನವರು ಚಿಟ್ಟೆಕೇರಿಗ್ರಾಮದ ... ನಾಗಿನ ಸರ್ವೆನಂಬರು 6ರ 5-9 ಯೇಕ್ರೆಯ ... ಜಮೀನು ಮತ್ತು ಇದಕ್ಕೆ ಸೇರಿದ ಹಿತ್ಲು ಬಾಣೆಜಾಗವನ್ನು

ಸಹ ಸ್ವಯಾರ್ಜಿತವಾಗಿ ಪಡೆದು ಜಮಾಬಂದಿ ದಾರರಾಗಿದ್ದವರು ನನ್ನ ಮೈನರ್‌ಕಾಲದಲ್ಲೇ ಮೃತರಾಗಿ ಹೋದರು ಮೃತರ ಹೆಸರಿನ ಜಮಾಬಂದಿಯನ್ನು ಈಚೆಗೆ ನನ್ನ ತಂದೆ ರಾಮಚಂದ್ರಯ್ಯನವರು ಯಾರ ಹೆಸರಿಗೆ ವರ್ಗಾಯಿಸಿ ಕೊಡಬೇಕೆಂಬುದು ಗೊತ್ತಿಲ್ಲ ಇಂಥಾ ಸೊತ್ತುಗಳನ್ನು ನನಗೂ ನನ್ನ ಮೈನರ್ ಮಕ್ಕಳಿಗೂ ವಿರೋಧವಾಗಿ ಬ್ಯಾರೆ ಜನರಿಗೆ ಕ್ರಯಮಾಡುವ ಏರ್ಪಾಡುಮಾಡಿರುವದಾಗಿ ಇದು ... ವಾಯಿಷಕ್ಯಗಾರರ ... 350 ... ಸಾಕ್ಷಿಗೆ ನಾನು ಕಾನೂನಿಹಕ್ಕುದಾರಳಾದ್ದರಿಂದ ನನ್ನ ಮತ್ತು ನನ್ನ ಮೈನರು ಮಕ್ಕಳ ಒಪ್ಪಿಗೆ ಶಿವಾಯಿ ಯಾರೂ ನಡಕೊಳ್ಳ ಕೂಡದಾಗಿ ಈ ಮೂಲಕ ತಿಳಿಸೋಣವಾಗಿದೆ

ತಾ|| 24—5—24 ಬಿ ಕಾವೇರಮ್ಮ
2—2

Two Days Grand Auction Sale.

To be held at the HUNSUR WORKS, HUNSUR commencing at 1 P M on Thursday June 19th and Friday the 20th June 1924 Many bargains including one 1912 Model 15 9 H P Arrol Johnston Motor Car converted into 10 seater Motor Bus complete with its 5 seater Body in perfect running order

One 1916 Model 2 seater FORD Car very smart and in perfect running order

One 4½ H P Priestman Oil Engine One Birch Oil Press,

One Sawing, planing and grooving Machine,

Steam Pump with Horizontal Boiler

Old Rover Car car direlect, but Engine in excellent working order

Two Hand Pumps

and a vast amount of General Stores scrap iron, t... Is ... second hand Corrugated Iron S...

The successful bidder must immediately place ... bid and make payment ... delivery ... the close of the Auction ... which the deposit money will be forfeited

The undersigned reserves the right to withdraw any of the lots if the bidding does not reach a satisfactory level

The goods may be seen the previous day by appointment

HUNSUR MANAGER
20th May 1924 The Hunsur Works
4—2 Hunsur

ಅತ್ಯದ್ಭುತಗುಣಕಾರಿಯಾದ
ಪೇಟೆಂಟ್ ಔಷಧ

ಪ್ರತಿ ಮನೆಯಲ್ಲೂ ಖಂಡಿತ ಇರತಕ್ಕದ್ದು
ಗುಣವಾಗದಿದ್ದರೆ ಖಂಡಿತ ಹಣ ಮರಳು ಕಳುಹಿಸುತ್ತೇವೆ

ಒಂದು ಸಾರಿ ತರಿಸಿ ಪರೀಕ್ಷಿಸಿರಿ

ಯಾವ ಚೇಳು ಆದರೂ ಕಚ್ಚಿದಕೂಡಲೆ ಈ ಔಷಧವನ್ನು ಹಾಕಿದ ತಕ್ಷಣವೇ ವಿಷವು ಇಳಿದು ಉರಿ ಹಳುಕು ಗುಣವಾಗುವದು ಅನುಭವಪತ್ರಿಕೆಯನ್ನು ಬಾಟ್ಲಿ ಸಂಗಡ ಕಳುಹಿಸುತ್ತೇವೆ. ಬಾಟ್ಲಿ 1 ಕ್ಕೆ 0—8—0 ಆಣೆ ಆರು ಬಾಟ್ಲಿಗಳನ್ನು ತರಿಸಿಕೊಂಡರೆ 1 ಬಾಟ್ಲಿ ಕಮಿಷನ್ ಹನ್ನೆರಡು ಬಾಟ್ಲಿಗಳನ್ನು ತರಿಸಿಕೊಂಡರೆ 3 ಬಾಟ್ಲಿ ಕಮಿಷನ್ ಕೊಡುತ್ತೇವೆ

ನಮ್ಮ ವಿಳಾಸ —
ಕಾಲಪ್ಪದೇವರ ಮಠದ ಸಿದ್ಧಾಂತಿಗಳು,
ಹರಿಹರ, ...

[12—...]

ದೇಶಸ್ಥ ಸಹೋದರರೇ

ಅಮ್ಮತ್ತಿ ರಾಷ್ಟ್ರೀಯ ಶಾಲೆಯು ... ಸಂಘಕ್ಕೆ ವಹಿಸಲ್ಪಟ್ಟ ಸ್ಕೂಲ್‌ಕಮಿಟಿ ... ಒಡು ... ಮವಾಗಿ ಉತ್ತಮವಾದ ರೀತಿಯಲ್ಲಿ ನಡಿಸಲ್ಪಡುತ್ತೆ

ಪಾಠಕ್ರಮವು ಸರಕಾರಿ ಶಾಲೆಗಳ ... ಸಲ್ಪಟ್ಟಿರ ಮಯಮಿಟ್ಟ I II III ನೇ ... ಕ್ಕಳನ್ನು ... ಸಿರುತ್ತೆ ತಮ್ಮ ದೇಶದ ರಾಷ್ಟ್ರೀಯ ಶಾಲೆಯನ್ನು ... ದಯವಿಟ್ಟು ಸ್ಥಿರಪಡಿಸಿರಿ ... ಮವಾದ ಸಮಯವನ್ನು ಎಂದೂ ಕಳೆಯಬ್ಯಾಡಿರಿ

ಅಮ್ಮತ್ತಿ ಕೇಳಚಂಡ್ರ ... ಸ್ಕೂಲ್ ಕಮಿಟಿ ಪ್ರಸಿಡೆಂಟ್

ತಾ|| 24—5—24
2—2

ಆರೋಗ್ಯ ಚಂದ್ರ.

ಇದು ಪ್ರಜಾಕ್ಷೇಮಕ್ಕಾಗಿ ಆರೋಗ್ಯಸಂಬಂಧವಾದ ವಿಷಯವನ್ನು ಬೋಧಿಸುವ ಒಂದು ಮಾಸಪತ್ರಿಕೆ ... ಪ್ರಸಿದ್ಧರಾದ ... ಅನೇಕ ... ಶಾಸ್ತ್ರಗಳ ... ರುಗಳ ... ಗಳು ಆಗಾಗ್ಗೆ ಪ್ರಕಟವಾಗುವವು

ಟಪಾಲುಹಾಸಲು ಸೇರಿ ಈ ಪತ್ರಿಕೆಯ ವಾರ್ಷಿಕ ಚಂದ 1—8—0 ಸ್ಯಾಂಪಲ್ ಪತ್ರಿಕೆ ಒಂದಕ್ಕೆ 0—2—0 ಆಣೆ

ಏಜೆಂಟರು —
ಮ|| ರಾ|| ಶ್ರೀ|| ಎಸ್ ಕೆ ... ಭಾಗಮಂಡಲ (ಕೊಡಗು)

ವಿಳಾಸ —
ಮೇನೇಜರ್
ಆರೋಗ್ಯಚಂದ್ರ ಆಫೀಸ್,
3ನೇ ... ಮದ್ರಾಸ್

[12—11]

WANTED.

Two Second hand ... M... SIDDI... K...

2—19



Printed & Published by D. S. K... Proprietor, at Sreenivas Electric ...

If not delivered please return to
"Kodagu Office, Mercara"
Reg. No. M. 1550.

ಕೊಡಗು.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

ಸಂಪುಟ ೬] ಕೊಡಗು, ಸನ್ ೧೯೨೪ ನೇ ಇಸವಿ ಮಾರ್ಚ್, ಫೆಬ್ರವರಿ ೨೯ ನೆಯ ಶುಕ್ರವಾರ. [ಸಂಚಿಕೆ

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನ್ನಡಾ ಪ್ರಿಂಟಿಂಗ್ ... ಲಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ... ರೂ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ... ಜಾಗ್ರತೆಯಾಗಿಯೂ ಸುಲಭವಾಗಿಯೂ ... ತ್ತೇವೆ

Srinivas Electric Press,
MYSORE

The Saraswathi Publishing Compan
ಶಾರದಾಗ್ರಂಥಮಾಲಾ.

ಈ ಗ್ರಂಥಮಾಲೆಯಲ್ಲಿ ... ಪ್ರಕಟವಾಗಿರುವ ...

...ಯಂವದ (...)	0	...
...	0	10
...	0	1?
...	...	8
...	...	4
...	...	4
...	...	4

ಸರಸ್ವತಿ.

...

SARASWATHI PUBLISHING C ...
Post Box No 57 ... City

HEALTH IS WEALTH

WANTED all to improve health ...th and vitality and thus save our ... from physical degeneracy. Send ...nna stamp and get 13 specimen ...graphs with full particulars from

Director Physical Culture,
P. O. Basavanagudi,
BANGALORE CITY

For your requirements of high grade Arms, Ammunition, Wine and Spirits,
...Y TO—
DOWELL & Co., Ltd.,
MERCARA.

ಇತ್ತೀಚಿನ ... ಸ್ವಿಟ್ಜರ್‌ಲ್ಯಾಂಡಿನಲ್ಲೇ ... ಒಪ್ಪಂತ್ವೇ ಕೊಡೆ ... ಬಂದಿತು.

SPENCER & Co., Ltd.,
Mercara and Pollibetta, Coorg

[24—9]

When you think of going to Bomby
THINK OF
THE WELCOME HOTEL.
Girgaum Back Road, BOMBAY.
Most airy accommodation—Most Central situation—Excellent Meals
Every Convenience

ದಿ ವೆಲ್‌ಕಮ್ ಹೋಟೆಲ್.
ಗಿರ್ಗಾಂ ಬ್ಯಾಕ್‌ರೋಡ್, ಬೊಂಬಾಯಿ.

... ಇಲ್ಲಿಂದ ೧೫ ನಿಮಿಷಗಳಲ್ಲಿ ...

ಪಿ. ಶ್ರೀನಿವಾಸರಾವ್,
ಮೇನೇಜರ್.

[24—1]

BUMPER CROPS
Always follow on application of our fertilisers
...
ನಮ್ಮ ... ಹೊಸ (fresh) ...

Siddeek's Manure Works,
MERCARA
27—22

ಮಲಯಾಳ ವೈದ್ಯಶಾಲಾ

... ಆಯುರ್ವೇದ ವೈದ್ಯಶಾಲೆಯಲ್ಲಿ ...

ನಾರಾಯಣವಾರಿಯರ್,
ಆಯುರ್ವೇದ ವೈದ್ಯರು,
ವಿರಾಜಪೇಟೆ

52—21

ಪ್ರಕಟನೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್
ಲಿಮಿಟೆಡ್.

	ರೂ.
ಷೇರ್ ಬಂಡವಾಳ	50,028
ವಸೂಲಾದ ಷೇರ್ ಮೊಬಲಗು	6,828
ಜನರು ಒಂದ ಡೇಪಾಜಿಟ್	47,998

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ... ಕೊಡಲ್ಪಡುವು.

... ಶೇಕಡ ... 6-4-0 ರ ಬಡ್ಡಿ ... ಶೇಕಡ ... 5 ರ ಬಡ್ಡಿ ದೊರೆಯುತ್ತೆ.

... ಜಿಲ್ಲಾ ... ಸಹಾಯ ಮಾಡುತ್ತಾರೆ.

ಪ್ರೆಸಿಡೆಂಟರು ಕೊಡಂದೆರ ... ರಾಯ್ ಬಹದ್ದೂರ್ ... ಭುಜಂಗರಾಯರು, ಬಿ. ಎ. ಬಿ. ಎಲ್.
ಸೆಕ್ರೆಟರಿ. ಸಿ. ಎಸ್. ವೆಂಕಪ್ಪಯ್ಯನವರು ಬಿ. ಎ. ಬಿ. ಎಲ್.
ತಾರೀಕು 22—2—1924.

"ಕೊಡಗು"

೧೯೨೪ ನೇ ಇಸವಿ ಜೂನ್ ತಾ|| ೧೩ ನೇ ಶುಕ್ರವಾರ

ಲೀ ಕಮಿಶನ್.

ಇಂಡಿಯಾದ ದೇಶೀಯರನ್ನು ದೇಶದ ಸರಕಾರದ ದೊಡ್ಡ ಉದ್ಯೋಗಗಳಿಗೆ ಹೆಚ್ಚು ಹೆಚ್ಚಾಗಿ ನೇಮಿಸಿಕೊಳ್ಳಬೇಕೆಂತ 1917 ನೇ ಇಸ್ವಿಯಲ್ಲಿ ಚಕ್ರವರ್ತಿಯವರು ಪ್ರಕಟಿಸಿದ ಚಕ್ರವರ್ತಿಯವರ ಆಜ್ಞೆಯನ್ನು ಜಾರಿಗೆ ತರಲಿಕ್ಕೂ ಆಡಳಿತದ ಸುಧಾರಣೆ ಮಾಡಿದ್ದರಿಂದ ಯೂರೋಪಿಯನ್ ಸರಕಾರಿ ನೌಕರಿಯವರಿಗೆ ಧೈರ್ಯಕೊಡಲಿಕ್ಕೂ ಉದ್ಯೋಗಗಳನ್ನು ಪ್ರಾಂತೀಯ ಸರಕಾರದವರೇ ನೇಮಿಸಿಕೊಳ್ಳುವದು ಎಷ್ಟರ ಮಟ್ಟಿಗೆ ಸಾಧ್ಯವೆಂಬದನ್ನೂ ಆಲೋಚಿಸಲಿಕ್ಕೆ ನೇಮಕವಾದ ಈ ಕಮಿಶನ್ನಿನ ಅಧ್ಯಕ್ಷರು ಲೀ ಪ್ರಭುಗಳಾದ್ದರಿಂದ ಇದಕ್ಕೆ ಲೀ ಕಮಿಶನ್ನೆಂಬ ಹೆಸರಾಗಿದೆ. ಹಿಂದುಸ್ಥಾನದ ಸ್ಟೇಟ್ ಸೆಕ್ರೆಟರಿಯಾಗಿದ್ದ ಮೆ|| ಮೋಂಟೇಗೂ ಮತ್ತು ವೈಸರಾಯ ಚೆಲ್ಮ್ಸ್‌ಫರ್ಡ್ ಪ್ರಭುಗಳು ಸಹ ಆಡಳಿತದ ಮಾರ್ಪಾಟು ಹೇಗೆ ಮಾಡಬಹುದೆಂತ ಆಲೋಚಿಸಲಿಕ್ಕೆ ಹೊರಡುವ ಮುಂಚೆಯೇ ಯೂರೋಪಿಯನ್ ಉದ್ಯೋಗಸ್ಥರ ಸಂಬಳ ಹೆಚ್ಚಿಸುವ ಮತ್ತು ದೇಶೀಯರನ್ನು ದೊಡ್ಡ ಉದ್ಯೋಗಗಳಿಗೆ ನೇಮಿಸಿಕೊಳ್ಳುವ ವಿಷಯ ಸಲಹೆ ಮಾಡಲಿಕ್ಕೆ 1912 ನೇ ಇಸ್ವಿಯಲ್ಲಿ ಒಂದು ಕಮಿಶನ್ ಚಕ್ರವರ್ತಿಯವರಿಂದ ನೇಮಕವಾಯಿತು. ಅವರ ರಿಪೋರ್ಟು 1917 ನೇ ಇಸ್ವಿಯಲ್ಲಿ ಪ್ರಕಟವಾಗಿ ಅವರ ಶಿಫಾರಸ್ಸಿನಂತೆ ಸಿವಿಲ್ ಸರ್ವಿಸಿನವರ ಸಂಬಳವನ್ನು 1920 ರಲ್ಲಿ ಹೆಚ್ಚಿಸಿದರು. ಆದರೂ ಆ ಕಮಿಶನ್ನಿನವರು ಶಿಫಾರಸ್ಸು ಮಾಡಿದ ಸಮಯದಲ್ಲಿ ಸಾಮಾನುಗಳಿಗೆ ಇದ್ದ ಬೆಲೆಯು ಬಹಳ ಹೆಚ್ಚು ಹೋದದ್ದರಿಂದ ಪುನಃ ಸಂಬಳ ಹೆಚ್ಚಿಸಬೇಕಾಗಿ ಸಿವಿಲ್ ಸರ್ವಿಸ್ ಉದ್ಯೋಗದವರು ಕೂಗಲು ಪ್ರಾರಂಭಿಸಿದರು. ಅಲ್ಲದೆ ಪ್ರಜಾಪ್ರತಿನಿಧಿಗಳಿಗೆ ಆಡಳಿತದಲ್ಲಿ ಪಾತ್ರ ಸಿಕ್ಕಿದ್ದರಿಂದ ಅವರ ತಾಬೆಯಲ್ಲಿ ಕೆಲಸಮಾಡಬೇಕೆಂದರೆ ಮನಸ್ಸು ಅಂಜಿದರೂ ಸಂಬಳವಾದರೂ ಹೆಚ್ಚಾಗಬೇಕೆಂತ ಹೇಳತೊಡಗಿದರು. ದೇಶೀಯರಿಗೆ ಸ್ವರಾಜದ ಹಕ್ಕುಗಳು ಸಿಕ್ಕುತ್ತಾ ಬಂದಂತೆ ತಮ್ಮನ್ನು ಎಲ್ಲಿ ಯಾವಾಗ ಮನೆಗೆ ಕಳುಹಿ ಬಿಡುತ್ತಾರೋ ಎಂಬ ಭಯ ಹೆಚ್ಚುತ್ತಾ ಬಂದದ್ದರಿಂದ ತಮ್ಮನ್ನು ಇಂತಿಷ್ಟುಕಾಲ ಕೆಲಸದಲ್ಲಿ ಇಟ್ಟುಕೊಂಡೇಕೊಳ್ಳಬೇಕೆಂಬ ಬರವಸೆ ದೇಶೀಯರ ಕೈಕೆಳಗೆ ತಮಗೆ ಕೆಲಸಮಾಡಲು ತೃಪ್ತಿಯಿಲ್ಲವೆಂತ ತೋರಿದಾಗ ಪೆನ್ಶನ್ ತೆಗೆದುಕೊಂಡು ಊರಿಗೆ ಹೊರಟುಹೋಗುವ ಹಕ್ಕು ದೊರೆಯಬೇಕೆಂತಲೂ ವದರಿಕೊಳ್ಳುತ್ತಿದರು. ಸ್ವರಾಜ್ಯದ ಹಕ್ಕುಗಳು ಎಳ್ಳಿನ ಎಳಭಾಗ ಮಾತ್ರ ಸಿಕ್ಕಿರುವ ಸುಧಾರಣೆ ಮಂಜೂರಾದಂದಿನಿಂದಲೂ ಇಂಗ್ಲೆಂಡಿನ ಉತ್ತಮದರ್ಜೆ ಜನರ ಮಕ್ಕಳು ದೇಶೀಯರ ಕೈಕೆಳಗೆ ಕೆಲಸಮಾಡಲು ಬರಲಿಕ್ಕಿಲ್ಲ. ಆದ್ದರಿಂದ ಸಾಮ್ರಾಜ್ಯಕ್ಕೇ ವಿನಾಶಕಾಲ ಬರಬಹುದೆಂತ ಇಂಗ್ಲಿಷ್ ಜನರ ವೃತ್ತಾಂತಪತ್ರಗಳು ಬರೆಯಲು ತೊಡಗಿದವು. ದೇಶೀಯರನ್ನು ಎಷ್ಟುಮಟ್ಟಿಗೆ ದೊಡ್ಡ ಉದ್ಯೋಗಕ್ಕೆ ತೆಗೆದುಕೊಳ್ಳಬಹುದೆಂತ ವಿಚಾರಿಸುವ ಕೆಲಸವೂ ಈ ಕಮಿಶನ್ನಿಗೆ ಕೊಡಲ್ಪಟ್ಟಿದ್ದರೂ ಯೂರೋಪಿಯನ್ ಉದ್ಯೋಗಸ್ಥರ ಸಂಬಳ ಹೆಚ್ಚಿಸಬೇಕಾದದ್ದೇ ಈ ಕಮಿಶನಿನ ಕೆಲಸವಾಗಿತ್ತು. ಕಮಿಶನಿನ ೯ ಜನರ ಪೈಕಿ ನಾಲ್ಕು ಜನರು ದೇಶೀಯರು. ಇವರಲ್ಲಿ ಇಬ್ಬರು ಮಾತ್ರ ಉದ್ಯೋಗಸ್ಥರಲ್ಲದವರು. ಈ ಉದ್ಯೋಗಸ್ಥರಲ್ಲದವರಿಗೂ ಈಗ ಉದ್ಯೋಗ ಸಿಕ್ಕಿತು. ಇವರಿಗೆ ಉದ್ಯೋಗ ಸಿಕ್ಕಬೇಕೆಂತ ಗೊತ್ತಿದ್ದದ್ದರಿಂದಲೇ ಇಂಡಿಯಾ ದೇಶದ ಬಡ ಪ್ರಜೆಗಳಮೇಲೆ ಇನ್ನೂ ಒಂದೂಕಾಲುಕೋಟಿ ರೂಪಾಯಿ ಹೆಚ್ಚಿಗೆ ಹೊರೆಬೀಳುವ ಶಿಫಾರಸ್ಸುಗಳಿಗೆ ಸೈನ್ ಹಾಕಿರಬೇಕೆಂತ ದೇಶೀಯ ಪತ್ರಗಳು ಬರೆಯುತ್ತಿವೆ. 1914 ನೇ ಇಸ್ವಿಯಲ್ಲಿ ನಡೆದ ಕಾಂಗ್ರೆಸಿಗೆ ಅಧ್ಯಕ್ಷರಾಗಿ ತುಂಬಾ ದೇಶಭಕ್ತಿಯ ಪ್ರವಾಹವು ಉಕ್ಕಿಬರುವ ಮಾತುಗಳನ್ನಾಡಿದ ಮೆ|| ಭೂಪೇಂದ್ರನಾಥ ಬಸು ಎಂಬವರು ಸಹ ಈ ಶಿಫಾರಸ್ಸಿಗೆ ಸೈನ್ ಹಾಕಿದರೆಂದರೆ ದೇಶೀಯ ಹಕ್ಕುಗಳನ್ನು ಕಾಪಾಡುವ ಪ್ರಜಾಪ್ರತಿನಿಧಿಗಳು ಯಾರು? ಈ ತರದ ಕೆಲಸಗಳನ್ನು ಮಾಡುವದರಿಂದಲೇ ಸರಕಾರದ ಸಂಸ್ಥೆಗಳಲ್ಲಿ ಕೆಲಸಮಾಡುವ ಗೋಜಿಗೇ ಹೋಗಬಾರದೆಂತ ಮಹಾತ್ಮಾ ಗಾಂಧಿಯವರು ಹೇಳುವದಾಗಿರಬೇಕು. ಅಧ್ಯಕ್ಷರಾದ ದೊಡ್ಡ ಪ್ರಭುಗಳ ಸಂಗಡ ಮಿತ್ರರಾಗಿ ರೈಲಿನ ಸ್ಪೆಶಿಯಲ್ ಸಲೂನ್‌ಗಳಲ್ಲಿ ಪ್ರಯಾಣಮಾಡುತ್ತಾ ದೊಡ್ಡ ಸಾಮ್ರಾಜ್ಯದ ಕ್ಷೇಮವನ್ನು ಯೋಚಿಸುತ್ತಿರುವಾಗ ಎರಡು ಹೊತ್ತು ಹೊಟ್ಟೆತುಂಬಾ ತಿನ್ನಲಿಕ್ಕೆ ಇಲ್ಲದೆ ನರಳಾಡುತ್ತಿರುವ ಬಡ ಪ್ರಜೆಗಳ ಸ್ಥಿತಿ ಮರತೇಹೋಗುತ್ತಿಂತ ಕಾಣುತ್ತೆ. ಈ ಫಲಿತಾಂಶವನ್ನು ಮುಂದಾಲೋಚಿಸಿಯೇ ತಿಳಿದುಕೊಂಡೇ ಸ್ವರಾಜ್ಯಪಂಗಡ ಮುಖ್ಯಸ್ಥರಾಗಿ ಲಿಜಿಸ್ಲೆಟಿವ್ ಎಸೆಂಬ್ಲಿಯಲ್ಲಿ ಇರುವ ಪಂಡಿತ ಮೋತಿಲಾಲ್ ನೆಹರೂರವರು ರಾಜಕೀಯ ಸುಧಾರಣೆಯ ವಿಷಯ ತನಿಖಿ ಮಾಡಲು ನೇಮಕವಾಗುವ ಕಮಿಟಿಯಲ್ಲಿ ತಾನು ಕೆಲಸ ಮಾಡುವದಿಲ್ಲವೆಂತ ಹೇಳಿದ್ದಾಗಿರಬೇಕು. ಸಿವಿಲ್ ಸರ್ವಿಸ ಕೆಲಸಮಾಡುವ ಮನುಷ್ಯರು ಅತಿ ಬುದ್ಧಿವಂತರಾದರೇನೇ ಆ ಕೆಲಸಕ್ಕೆ ಚುನಾಯಿಸಲ್ಪಡುತ್ತಾರೆಂಬದು ಎಲ್ಲರಿಗೂ ತಿಳಿದಿದೆ. ಅವರ ಜಾಣತನದಿಂದ ಮಾತು ಕೇಳುವಾಗ ಅವರ ಮಾತಿನಲ್ಲಿ ಸತ್ಯಯುಂಟೆಯೆಂತ ಕಾಣುತ್ತೆ. ಆದರೆ ನಾವು ನೋಡುತ್ತಿರುವಾಗ ದೇಶಿಯ ಪ್ರಜೆಗಳ ತಾಸ್ತ ಹಿಡಿತ ಕ್ಕೆ ದೇಹವು ಕಣ್ಣಾಮುಚ್ಚಿ ಬಿಟ್ಟುಕೊಂಡೇ ಬಿರುವ ಶಕ್ತಿ ಇರುವ ಸತ್ಯವನ್ನು ಲಕ್ಷಕ್ಕೆ ತರುವದೂ ಸಿಕ್ಕುವದು ಕಷ್ಟವಾಗಿದೆ. ಈಗ ದೇಶದ ಪರಿಸ್ಥಿತಿಯಿಂದಲೂ ಬಹುಕಾಲ ಸ್ವಾತಂತ್ರ್ಯ ತಪ್ಪಿರುವದರಿಂದಲೂ ದೇಶೀಯರಲ್ಲಿ ಅಧಿಕಾರಿಗಳಮುಂದೆ ತಮ್ಮ ಮನಸ್ಸಿಗೆ ತೋರಿದ ಸ್ವಂತ ಅಭಿಪ್ರಾಯವನ್ನು ಹೇಳುವದೇ ಅಸಾಧ್ಯವಾಗಿದೆ. ಆದರೂ ಈಗ ನಾಲ್ಕು ವರ್ಷದಿಂದ ಮಹಾತ್ಮರ ಬೋಧನೆಯಿಂದ ಲೀ ಕಮಿಶನ್ ಮುಂದೆ ಸ್ವತಂತ್ರವಾದ ತಮ್ಮ ಅಭಿಪ್ರಾಯವನ್ನು ಕೆಲವು ದೇಶೀಯ ಜನರು ಹೇಳಿದರು. ಆದರೆ ಅಂಥಾ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡಂತೆ ಕಾಣುವದಿಲ್ಲ.

ಸಿವಿಲ್ ಸರ್ವಿಸಿನವರಿಗೆ ಓವರ್ಸೀ ಸಂಬಳ ಅಂದರೆ ಸಮುದ್ರ ದಾಟಿ ಬಂದದ್ದಕ್ಕೆ ಕೊಡುವ ಸಂಬಳವನ್ನೂ ಹೆಚ್ಚಿಸಿದರು. ಪೋಲೀಸ್ ಇಲಾಖೆಯವರ ನಿಜಸಂಬಳವನ್ನೂ ಹೆಚ್ಚಿಸಿದರು. ಇಂಗ್ಲೆಂಡಿಗೆ ಆಫೀಸರು ನಾಲ್ಕಾವರ್ತಿಯೂ ಹೆಂಡತಿಮಕ್ಕಳು ಒಂದಾವರ್ತಿಯೂ ಹೋಗಿಬರುವ ಖರ್ಚು ಕೊಡಿಸಿದರು. ಕೆಲವರಿಗೆ ಪೆನ್ಶನ್ ಹೆಚ್ಚಿಸಿದರು. ಯೂರೋಪಿಯನ್ ಡಾಕ್ಟರರಿಗೆ ಹೋಗಿಬರುವ ಪ್ರಯಾಣದ ಖರ್ಚು ಕೊಡಿಸಿದರು ಮತ್ತು ಪ್ರತಿ ರೂಪಾಯಿಗೆ ಒಂದು ಪೌಂಡ್ ಲೆಖ್ಖದಲ್ಲಿ ಇಂಗ್ಲೆಂಡಿಗೆ ಹಣ ಕಳುಹಿಸುವ ಹಕ್ಕು ಕೊಟ್ಟರು. ದೇಶೀಯರಿಗೆ ಪೌಂಡ್ ಬೇಕಾದರೆ 16 ಯಾ 17 ರೂ ಕೊಡಬೇಕು. ಯೂರೋಪಿಯನ್ ಆಫೀಸರು ಪೌಂಡಿನ ಬೆಲೆಗೆ ಹತ್ತು ರೂಪಾಯಿ ಕೊಟ್ಟರೆ ಅವನಿಗೆ ಇಂಗ್ಲೆಂಡಿನಲ್ಲಿ ಒಂದು ಪೌಂಡ್ ಸಿಕ್ಕುತ್ತೆ. ಎಕ್ಸ್‌ಚೇಂಜ್ ಸಾಲದ್ದಕ್ಕೆ ಎಂಬಳವನ್ನು ಹೆಚ್ಚಿಸುತ್ತಿರುವಾಗ ವಿಲಾಯಿತಿಗೆ ಹಣ ಕಳುಹಿಸುವ ಸಂಭವ ಎಲ್ಲಿಯೋ ನಮಗೆ ತಿಳಿಯುವದಿಲ್ಲ! ಹೇಗೂ ಆಗಲಿ ದೇಶೀಯರಮೇಲೆ ಒಂದುಕಾಲುಕೋಟಿ ರೂಪಾಯಿ ಬಿತ್ತು.

ಒಟ್ಟು ಇಂಡಿಯಾಕ್ಕೆ ಹೇಗಾದರೆ ನಮ್ಮ ಈ ಚಿಕ್ಕ ಪ್ರಾಂತ್ಯಕ್ಕೆ ಆಗುವ ನಷ್ಟವೇನೆಂಬದನ್ನು ಕೊಂಚ ವಿಚಾರಿಸೋಣ. ಯಾವ ಉದ್ಯೋಗಗಳಿಗೆ ಅನುಕೂಲಮಾಡಿಕೊಟ್ಟರೋ ಅವರಾ ಉದ್ಯೋಗಗಳ . ಒಟ್ಟು ಇಂಡಿಯಾದಲ್ಲಿ ಸುಮಾರು ४ 00 ಇವೆ. ಇದಕ್ಕಾಗಿ ಹೆಚ್ಚಾಗುವ ಖರ್ಚು 1250000 ರೂ. ಆದ್ದರಿಂದ ಒಬ್ಬ ಆಫೀಸರಿಗೆ ಸರಾಸರಿ 3125 ರೂ ವರ್ಷ ಒಂದರ ಹೆಚ್ಚಿಗೆ ಖರ್ಚಿದ್ದಂತಾಯಿತು. ನಮ್ಮ ಈ ಚಿಕ್ಕ ದೇಶದಲ್ಲಿ 9 ಆಫೀಸರುಗಳಿಗೆ ಸ್ಥಳವಿದೆ. ಅದರಲ್ಲಿ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಸ್ಥಳವೊಂದ ದೇಶೀಯರಿಗೆ ಕೊಟ್ಟಿದ್ದಾರೆ. ಯೂರೋಪಿಯನ್ ಆಫೀಸರಿಗೆ ಒಡ್ಡಿಟ್ಟಸ್ಥಳದಲ್ಲಿ ಸಂಬಳ ಇಟ್ಟಿಲ್ಲ. ಸ್ಕೂಲ ಮತ್ತು ಪೋಲೀಸಿನಲ್ಲಿ ಒಟ್ಟೇ ಇದ್ದಾರೆ. ಆದ್ದರಿಂದ ಈ ಎರಡು ಇಲಾಖೆಗಳಿಗೆ ಯಾವಾಗಲಾದರೂ ಯೂರೋಪಿಯನ್ ಆಫೀಸರು ಬರಲೇಬಹುದು. ಆದ್ದರಿಂದ ಎಂಟು ಆಫೀಸರುಗಳು ಇದ್ದಾರೆಂತ ಲೆಖ್ಖಹಾಕಬಹುದು. ಆದ ಸರಾಸರಿ ವರ್ಷ ಒಂದರ ಸಾಧಾರಣ 25000 ರೂ. ಹೆಚ್ಚಿಗೆ ಖರ್ಚು ಬೀಳುತ್ತೆ. ವಾಚಕರೇ ಲೀ ಕಮಿಶನಿನಿಂದ ನಮ್ಮ ದೇಶಕ್ಕೇನುತೊಂದರೆಯೆಂಬ ಸಂಶಯವು ಇನ್ನಾದರೂ ನಿಮ್ಮ ಮನಸ್ಸಿನಿಂದ ದೂರಮಾಡಿ. ಇಷ್ಟೂ ಅಲ್ಲ. ನಮ್ಮ ದೇಶಕ್ಕೆ ಇನ್ನೂ ತೊಂದರೆ ಇದೆ. ದೊಡ್ಡ ಪ್ರಾಂತ್ಯದಲ್ಲಿ ಮಂತ್ರಿಗಳ ಅಧೀನ ಇರುವ ಇಲಾಖೆಗಳಿಗೆ ಉದ್ಯೋಗಸ್ಥರನ್ನು ಸ್ಥಳೀಯ ಸರಕಾರವೇ ನೇಮಿಸಬಹುದೆಂತ ರಿಪೋರ್ಟಿನಲ್ಲಿ ಇದೆ. ಮಂತ್ರಿಪದವಿಯು ನಮ್ಮ ಸರಕಾರದ ಆಡಳಿತದಲ್ಲಿ ಇಲ್ಲದ್ದರಿಂದ ಸ್ಥಳೀಯ ಸರಕಾರದವರು ನೇಮಿಸುವ ಉದ್ಯೋಗಗಳು ಯಾವದೂ ಇಲ್ಲಿ ಇಲ್ಲ.

ಮೇಲೆ ಬರೆದರೀತಿ ನೋಡಿದರೆ ಈ ಖರ್ಚೆಲ್ಲಾ ಪ್ರಜೆಗಳಮೇಲೆ ಈಗಾಗಲೇ ಬಿದ್ದುಹೋಗಿದೆಯೆಂಬಂತೆ ಬರೆದಿದ್ದೇವೆ. ರಿಪೋರ್ಟಿನಲ್ಲೇ ಶಿಫಾರಸ್ಸುಗಳನ್ನೆಲ್ಲಾ 1924 ನೇ ಏಪ್ರಿಲ್ 1 ನೇ ತಾರೀಕಿನಿಂದಲೇ ಜಾರಿಗೆ ತರಬೇಕೆಂತ ಬರೆದಿದೆ. ಎಸೆಂಬ್ಲಿಯಲ್ಲಿ ಚರ್ಚೆ ನಡೆಯಬಹುದಂತೆ. ಆದರೆ ಸೆಕ್ರೆಟರಿ ಆಫ್ ಸ್ಟೇಟ್ ಈ ಸಂಬಂಧವಾಗಿ ಯಾವ ಆರ್ಡರಾದರೂ ಮಾಡಬಹುದಂತೆ. ಅವರು ಶಿಫಾರಸ್ಸುಗಳನ್ನೆಲ್ಲಾ ಜಾರಿಗೆ ತರುವದರಲ್ಲಿ ಏನೂ ಸಂಶಯವಿಲ್ಲ. ಆದ್ದರಿಂದ ಪ್ರಜೆಗಳ ಹೊರೆ ಬಿದ್ದೇಬಿಟ್ಟಿತೆಂತ ಬರೆದರೆ ತಪ್ಪಾಗುವದಿಲ್ಲ. ಬೇರೆ ಸ್ಥಳೀಯ ಸರಕಾರಗಳೆಲ್ಲಾ ಈ ಬಾಬಿನ ಖರ್ಚಿಗೆ ಹಣ ಇಟ್ಟೇ ಇದ್ದಾರಂತೆ. ನಮ್ಮ ಕೌನ್ಸಿಲರುಗಳೂ ಎಚ್ಚತ್ತುಕೊಂಡು ಈ ಹೆಚ್ಚಿನ ಖರ್ಚು ಎಷ್ಟಾಗುತ್ತೆಂತಲೂ ಅದಕ್ಕೆ ಹಣವನ್ನು ಎಲ್ಲಿಂದ ದೊರಕಿಸಿಕೊಳ್ಳುತ್ತಾರೆಂತಲೂ ಕೇಳಬಹುದು.

ನೋವಿಗೆ ಹೆಚ್ಚಿನ ಕಾರಣವು ಬೇರೆ ಒಂದು ಇದೆ. ಸಿವಿಲ್ ಸರ್ವಿಸಿನಲ್ಲಿ ದೇಶೀಯರ ದಾಮಾಶಾಯಿ ಅರ್ಧವಾಗಬೇಕಾದರೆ 15 ವರ್ಷವೂ ಪೋಲೀಸ್ ಇಲಾಖೆಯಲ್ಲಿ ದೇಶೀಯರು ಅರ್ಧವಾಗಬೇಕಾದರೆ 25 ವರ್ಷವೂ ಅವಧಿ ಇಟ್ಟಿದ್ದಾರೆ. ಆದ್ದರಿಂದ 25 ವರ್ಷಗಳವರೆಗೂ ಸ್ವರಾಜ್ಯ ಇಂಡಿಯಾ ದೇಶಕ್ಕೆ ದೊರಕುವಂತೆ ಕಮಿಶನ್ನಿನವರು ಯೋಚಿಸಿರುವಂತೆ ಕಾಣುವದಿಲ್ಲ. ದೇಶೀಯ ಆಫೀಸರೂ ಯೂರೋಪಿಯನ್ ಆಫೀಸರೂ ಒಂದೇ ದರ್ಜೆಯವರಾದರೂ ವ್ಯತ್ಯಾಸಗಳನ್ನು ಇಟ್ಟೇ ಇದ್ದಾರೆ. ಈ ತಮ್ಮಯ ಮಾಡಬೇಕೆಂತ ದೇಶೀಯರು ಕೂಗುತ್ತಾರಲ್ಲವೇ. ಆದ್ದರಿಂದ ಯೂರೋಪಿಯನರಿಗೆ ಕೊಡುವ ಅನುಕೂಲಗಳು ದೇಶೀಯರಿಗೆ ಕೊಡುವದ ಬೇಡವೆಂತ ರಿಪೋರ್ಟಿನ ಅರ್ಥವಾಗುತ್ತೆ!

ದೇಶಿಯರಂತೆ ಅವರು ನಮಗೆ ಯೂರೋಪಿಯನ್ ಆಫೀಸರು ಇರಲೇಬೇಕೆನ್ನುತ್ತಾರೆ. ಈ ಯೂರೋಪಿಯನ್ ಆಫೀಸರನ್ನು ಇಟ್ಟುಕೊಳ್ಳಬೇಕಾದರೆ ಆಗುವ ಖರ್ಚನ್ನು ದೇಶವೂ ನೋಡಿ ಹೇಗೆ ತಡೆದಾರೂ ಚಿಂತೆಯಿಲ್ಲ. ದೇಶೀಯರೇ ನಾವಂತ ನಂಬು ದೃಢಮನಸ್ಸಿನಿಂದ ಹೇಳುತ್ತೇವೆ. 100 ಭಟ್ಟಿ ಭೂಮಿಯ ಮಾಲೀಕನು 100 ರೂಪಾಯಿ ಸಂಬಳದ ಕೈಟನ್ನು ಇಟ್ಟುಕೊಂಡರೆ ಆ ಮಾಲೀಕನಿಗೆ ಸುಖವೆಂತು ಇದ್ದೀತು. ದೇಶೀಯ ಅಧಿಕಾರಿಗಳು ಮೇಲಧಿಕಾರಿಗಳ ಹುಚ್ಚಿಗೆ ಪಡೆಯಲಿಕ್ಕಾಗಿ ಪ್ರಜೆಗಳ ಕ್ಷೇಮಕ್ಕೆ ವಿರೋಧ ಮಾಡುವಷ್ಟುಮಟ್ಟಿಗೆ ನಿಶ್ಚಯಮಾಡಿದರೆ ಯೂರೋಪಿಯನ್ ಆಫೀಸರು ಬೇಕೆಂತ ಪ್ರಜೆಗಳು ಹೇಳಲು ಕಾರಣವಿಲ್ಲ.

ಇನ್ನಾಗೂ ಸರ್ವಪ್ರಯತ್ನದಿಂದ ನಮ್ಮ ಮನೆಯ ಖರ್ಚನ್ನು ನಾವೇ ನಿರ್ಣಯಿಸುವ ಹಕ್ಕನ್ನು ಶೀಘ್ರದಲ್ಲಿ ಪಡೆಯಬೇಕು.

ಲೀ ಕಮಿಶನ್ ರಿಪೋರ್ಟು.

ಚಕ್ರವರ್ತಿಯವರಿಂದ ನೇಮಿಸಲ್ಪಟ್ಟ ಈ ಕಮಿಶನ್ನಿನವರು ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದ್ದಾರೆ.—ಸಿವಿಲ್ ಸರ್ವಿಸ್ ಉದ್ಯೋಗಸ್ಥರ ಸಂಬಳ ವಗೈರೆ ಪ್ರತಿಫಲಗಳ ವಿಷಯ. ಪ್ರಾಂತೀಯ ದರ್ಜೆಯ ಸಿವಿಲ್‌ಸರ್ವಿಸ್‌ನವರನ್ನು ನೇಮಿಸಬಹುದೋ ಎಂಬ ವಿಷಯ, ಯೂರೋಪಿಯನ್ ಮತ್ತು ಇಂಡಿಯನ್ ಜನರನ್ನು ಎಷ್ಟೆಷ್ಟು ನೇಮಿಸಬೇಕೆಂಬ ವಿಷಯ ಇವುಗಳ ಯೋಚಿಸಿ ಅಭಿಪ್ರಾಯ ಕೊಡಲು ನೇಮಕವಾದ ಕಮಿಟಿಯಾಗಿದೆ. ಇವರು 411 ಜನರ ಅಭಿಪ್ರಾಯವನ್ನು ತೆಗೆದುಕೊಂಡು ತಮ್ಮ ರಿಪೋರ್ಟು ಬರೆದಿದ್ದಾರೆ. ಒಗ್ಗಟ್ಟಿನಿಂದ ಅಭಿಪ್ರಾಯಕೊಟ್ಟಿದ್ದಾರೆ. ಮೊದಲನೇ ವರ್ಷದಲ್ಲಿ 96 ಯಾ 98 ಲಕ್ಷ ರೂಪಾಯಿಯೂ ಆಖೈರಿಗೆ ಒಂದುಕಾಲುಕೋಟಿ ರೂಪಾಯಿನ ಹೆಚ್ಚಿನ ಖರ್ಚು ಪಟ್ಟಿವ ಅಭಿಪ್ರಾಯವಾಗಿದೆ. 1924 ನೇ ಇಸ್ವಿ ಏಪ್ರಿಲ್ ೧ರಿಂದಲೇ ಇವರ ಅಭಿಪ್ರಾಯವು ಮಂಜೂರಾದರೆ ಜಾರಿಗೆ ಬರುತ್ತೆ. ಇವರ ಸೂಚಿಸಿರುವ ಖರ್ಚಿನಪೈಕಿ 22 ಲಕ್ಷವು ಇಂಡಿಯಾ ಸರಕಾರಕ್ಕೆ ಬೀಳುತ್ತೆ. ಬಾಕಿದೆಲ್ಲ ಪ್ರಾಂತೀಯ ಸರಕಾರದಮೇಲೆ ಬೀಳುತ್ತೆ.

ಇನ್ನು ಮುಂದೆ ಮಂತ್ರಿಗಳಿಗೆ ವಹಿಸಿಕೊಟ್ಟ ವಿದ್ಯಾ, ಕೃಷಿ, ವೈದ್ಯದ ಮುಂತಾದ ಕೆಲವು ಇಲಾಖೆಗಳಿಗೆ ಆಫೀಸರುಗಳನ್ನು ಸ್ಥಳೀಯ ಸರಕಾರವೇ ಮಾಡಬೇಕು. ಆದ್ದರಿಂದ ಅಂಥಾ ಆಫೀಸರುಗಳ ಕೆಲಸವು ಖಾಯಂ ಆಗಿ ಇಟ್ಟುಕೊಳ್ಳಲಾಗುತ್ತೆಂಬದಕ್ಕೆ ಖಚಾರು ಕೊಡುವ ಆಕ್ಟ್‌ಗಳನ್ನು ಸ್ಥಳೀಯ ಸರಕಾರಗಳು ಪಾಸ್‌ಮಾಡಿಕೊಳ್ಳಬೇಕು. ಅಲ್ಲದೆ ಈಗಾಗಲೇ ಈ ಇಲಾಖೆಗಳಲ್ಲಿ ಇರುವ ಆಫೀಸರುಗಳ ಹಕ್ಕು ಬಾಧ್ಯತೆಗಳಿಗೆ ಏನೂ ತೊಂದರೆ ಬರಕೂಡದು.

ರೈಲ್ವೆ ಇಲಾಖೆಯ ಐ ಯಸ್ ಯಸ್ ಎಂಬ ದರ್ಜೆಯನ್ನು ತೆಗೆದು ಆರ್ ಎ ಎಸ್ ಸಿ ಎಂತ ಮಾಡಬೇಕು. ಹೊಸದಾಗಿ ಏರ್ಪಾಡಾಗಬೇಕಾದ ಪಬ್ಲಿಕ್ ಸರ್ವಿಸ್ ಕಮಿಶನ್ನಿನವರು ನಡೆಸುವ ಪ್ರವೇಶಪರೀಕ್ಷೆಯಮೂಲಕ ಸ್ಥಳೀಯ ಸರಕಾರದವರು ಇವರ ನೇಮಕಮಾಡಬೇಕು. ಬಳಿಕ ಮುಂತಾದ ಹಕ್ಕುಗಳನ್ನು ಸ್ಥಳೀಯ ಸರಕಾರ ನಿಶ್ಚಯಿಸಬೇಕು. ನೂರಕ್ಕೆ 50 ಕ್ಕೆ ಕಡಿಮೆಯಿಲ್ಲದೆ ಯೂರೋಪಿಯನರಿರಬೇಕು.

ಒಟ್ಟು ಇಂಡಿಯಕ್ಕಾಗಿ ಒಂದು ಪಬ್ಲಿಕ್ ಸರ್ವಿಸ್ ಕಮಿಶನ್ ಇರಬೇಕು. ಇದಕ್ಕೆ 5 ಜನ ಮೆಂಬರರಿರಬೇಕು. ಇಬ್ಬರಾದರೂ ನ್ಯಾಯವಿಚಾರದ ಅನುಭವ ಅಥವಾ ಅಧಿಕಾರಿಗಳಾದರೂ ಆಗಿರಬೇಕು. ಇವರ ಸಂಬಳ ಹೈಕೋರ್ಟ್ ಜಡ್ಜಿಯವರ ಸಂಬಳಕ್ಕೆ ಕಡಿಮೆ ಇರಬಾರದು. ಇವರು ರಾಜಕೀಯ ಚಳವಳದ ಗುಂಪುಗಳಿಗೆ ಸೇರಿದವರಾಗಿರಬಾರದು. ಇಂಡಿಯಾದ ದೊಡ್ಡ ಹುದ್ದೆಗಳನ್ನು ಪಡೆಯಬೇಕಾದ ಯೋಗ್ಯತೆಯನ್ನು ಇವರು ನಿರ್ಣಯಿಸಬೇಕು. ಮಧ್ಯವರ್ತಿ ಇಲಾಖೆಗಳಿಗೂ ಅಖಿಲ ಭಾರತೀಯ ಉದ್ಯೋಗಗಳಿಗೂ ಕೇಳಿಕೊಂಡರೆ ಸ್ಥಳೀಯ ಸರಕಾರಗಳಿಗೂ ಸಹ ಉದ್ಯೋಗಸ್ಥರನ್ನು ಚುನಾಯಿಸುವದು ಇವರ ಕೆಲಸವಾಗಿದೆ. ದೊಡ್ಡ ಉದ್ಯೋಗಸ್ಥರ ನಡತೆ ಮತ್ತು ಹಕ್ಕುಗಳ ವಿಷಯದಲ್ಲಿ ಮೇಲ್ವಿಚಾರಕರಾಗಿರಬೇಕು. ಇಂಥಾ ಆಫೀಸರುಗಳು ಇಂಡಿಯಾ ಸರಕಾರಕ್ಕೆ ಬರಕೊಳ್ಳುವ ಅಪ್ಪೀಲುಗಳನ್ನು ಅಭಿಪ್ರಾಯದಂತೆ ಫೈಸಲ್ಮಾಡಬೇಕು. ಈ ಲೀ ಕಮಿಶನ್ ರಿಪೋರ್ಟಿನ ಮುಖ್ಯ ಶಿಫಾರಸ್ಸೇ ಈ ಕಮಿಶನ್ನಿನ ನೇಮಕವಾದ್ದರಿಂದ ಇದನ್ನು ಶೀಘ್ರದಲ್ಲೇ ನೇಮಿಸಬೇಕು.

ಸಿವಿಲ್ ಸರ್ವಿಸ್ ಉದ್ಯೋಗಸ್ಥರೊಳಗೆ ಯೂರೋಪಿಯನ್ ಮತ್ತು ಇಂಡಿಯನ್‌ಗೆ ಅನ್ಯೋನ್ಯ ಸಂಬಂಧ ಬೆಳೆಯಲಿಕ್ಕಾಗಿ ಆದಷ್ಟು ಜಾಗ್ರತೆ ಇಂಡಿಯನರ ಸಂಖ್ಯೆಯನ್ನು ನೂರಕ್ಕೆ 50 ಕ್ಕೆ ಹೆಚ್ಚಿಸಬೇಕು. ಇನ್ನು ಮುಂದೆ ನೇಮಕವಾಗುವ ಪ್ರತಿ 100 ಉದ್ಯೋಗಸ್ಥರಲ್ಲಿ 40 ಯೂರೋಪಿನವರೂ 40 ನ್ನು ಇಂಡಿಯಾದವರೂ ನೇ[illegible]

ದ 20 ನ್ನು ಪ್ರೊವಿನ್ಶಿಯಲ್ ದರ್ಜೆಯಿಂದ ತೆಗೆದುಕೊಂ 15 ವರ್ಷಗಳಲ್ಲಿ ಸರಿ ಅರ್ಧ ಇಂಡಿಯನ್ [illegible] ಕೆಲವು ಮೆಂಬರುಗಳ ಅಭಿಪ್ರಾಯವಾಗಿದೆ.

ಪೋಲೀಸ್ ಇಲಾಖೆಯಲ್ಲಿ [illegible] 50 ಯೂರೋಪಿ ಉಳಿದ 50 ರಲ್ಲಿ 30 [illegible] ಇಂಡಿಯ ದಲೂ 20 ಕೆಳಗಿನ ದರ್ಜೆಯವರಿಗೆ ಪ್ರಮೋಶನ್ ಕೊಡು ಂದಲೂ ನೇಮಿಸಿಕೊಳ್ಳಬೇಕು. [illegible] ಇಲಾಖೆಸ ಅರ್ಧ ಯೂರೋಪಿಯನ್ ಅರ್ಧ ಇಂಡಿಯನ್ [illegible] ಗಳಲ್ಲಿ ಆಗುತ್ತೆ.

ಫಾರೆಸ್ಟ್ ಇಲಾಖೆಯ [illegible] 75 [illegible] 25 ಯೂರೋಪಿಯನರೂ [illegible] 40 ಯೂರೋ ರೂ 60 ಇಂಡಿಯನ್ನರೂ ಆಗಬೇಕು. ಇನ್‌ಲಾಗ್ರೇಶನ್ ಎಂಬ ಹೆಸರಿನ 7 ವರ್ಷಗಳಕೆಳಗೆ ಆದ ಕಮಿಶನ್ [illegible]

ಈಗ ಕಮಿಶನ್ನಿನವರು [illegible] ಇರಬೇಕೆಂದನ್ನು [illegible] ವರದಿ [illegible] ಯೂರೋಪಿಯನ್ನರು [illegible]

ಮಧ್ಯವರ್ತಿ ಇಲಾಖೆಗಳ [illegible] ಇಂಡಿಯನ್ನರನ್ನು [illegible] ಇದೆಯಲ್ಲಿ ಕೇವಲ 25 ಇಂಡಿಯನ್ [illegible] ಕೆಲಸದ ಕಾಗನಂತೆಯೇ [illegible] ವರ್ಷದ [illegible] 25 [illegible] 75 [illegible] 75 ರಷ್ಟು ಇಂಡಿಯಾದಲ್ಲೇ [illegible] ಸಾಧ್ಯವಾಗುವಂತೆ [illegible] ಇನ್ನೂ ಹೆಚ್ಚಿಸಬೇಕು. [illegible] ಮಧ್ಯವರ್ತಿ [illegible] ಇಂಡಿಯಾ ಸಂಕಾರಕ್ಕೆ ಇಷ್ಟು ಕೋರಿದಂತೆ ದಬಹುದು.

ಸಂಬಳ ಮತ್ತು ಭತ್ಯ.

[illegible] ರಿಪೋರ್ಟಿನಲ್ಲಿ [illegible] ಉದ್ಯೋಗಗಳ ಸಂಬಳವು [illegible] 20 ವರ್ಷ [illegible] ಇದ್ದಷ್ಟು [illegible] ಇಲ್ಲ ವ್ಯಾಪಾರದ [illegible] ಉದ್ಯೋಗಸ್ಥರ ಸಂಬಳ [illegible] ಇಲಾಖೆ [illegible] ಉದ್ಯೋಗವಿದ್ದ [illegible] ಪೋಲೀಸ್ [illegible] ಸಂಬಳವನ್ನು [illegible] ಪೋಲೀಸ್ ಇಲಾಖೆ ಕೆಳಗಿನ ದರ್ಜೆಯವರ ಸಂಬಳವನ್ನು [illegible] 25 ರೂ [illegible] 50 ರೂ 13 ವರ್ಷದನಂತರ 75 ರೂ 13 [illegible] 100 ರೂ 18 19, 20 ನೇ ವರ್ಷ [illegible] 75 [illegible] 75 ರೂ. ಮೇರೆ ಹೆಚ್ಚಿಸಬೇಕು. [illegible] ಭತ್ಯವು 200 ರಿಂದ 250 [illegible] 12 ವರ್ಷಗಳನಂತರ 370 [illegible] ವಿದ್ಯಾ ಇಲಾಖೆಯಲ್ಲಿ [illegible] 100 ರೂ 4 ನೇ ವರ್ಷ [illegible] 150 ರೂ ಮತ್ತು ಆರು ವರ್ಷ [illegible] 15 ನೇ 300 ರೂ ಯೂ ಆಗಬೇಕು.

[illegible] ಇಂಗ್ಲೆಂಡಿನಲ್ಲಿ [illegible] 2 [illegible] ತೆಗೆದುಕೊಳ್ಳಬಹುದು [illegible] ಹಕ್ಕಿರುವ [illegible] ತೆಗೆದುಕೊಳ್ಳಬೇಕಾದರೆ ಅವರಿಗೆ ಯೂರೋಪಿನಲ್ಲಿ ಕಿಮುಕ್ತಿಯಿರಬೇಕು.

ಅನ್ಯಜಂಡದವನಲ್ಲದ ಪ್ರತಿಯೊಬ್ಬ ಆಫೀಸರನೂ ತನ್ನ ಕೆಲಸಕಾಲದಲ್ಲಿ 4 ವರ್ಷ ಇಂಗ್ಲೆಂಡಿಗೆ ಹೋಗಿಬರುವ [illegible] ಇಂಡಿಯಾ ಸರಕಾರವು ಕೊಡಬೇಕು. ಇವರ ತಿಯರಿಗೂ ಇದೇ ದರದಲ್ಲಿ ಕೊಡಬೇಕು. ಇವರ ಕೆಗೆ ಒಂದಾವರ್ತಿ ಹೋಗುವ ಖರ್ಚುಮಾತ್ರ ಕೊಡ. ಇಂಡಿಯನ್ ಆಫೀಸರುಗಳಿಗೆ ಸಮುದ್ರದ [illegible] ಕ್ಕಾಗಿ ಸಂಬಳದ ಹಕ್ಕಿರುವದಾದರೆ ಆಫೀಸರಿಗೆಮಾತ್ರ ರೋಪಿಯನರ ಹಕ್ಕೇ ಇರುತ್ತೆ. ಆದರೆ ಅವನ ಕುಟುಂಬ [illegible] ಯೂರೋಪಿಯನ್ನನಿಗೆ ತಿಂಗಳಿಗೆ 50 ಇಂಡಿಯನ್ನನಿಗೆ ತಿಂಗಳಿಗೆ 25 ರೂ ದೊರಕುತ್ತೆ. ಈ ದರದಲ್ಲಿ ತಿಂಗಳಲ್ಲೂ [illegible] ಆದಾಯವುಸುತ್ತಾ, ಇಷ್ಟು [illegible] ಸರಕಾರದಕ್ಕೇನೇ ವಹಿಸಿಕೊಳ್ಳಬೇಕು. [illegible] ಆಫೀಸರನ ಹೆಂಡತಿ ಮಕ್ಕಳನ್ನು ಸರಕಾರ [illegible] ಇಂಗ್ಲೆಂಡಿಗೆ ಕಳಿಸಬೇಕು.

[illegible] ಸಿ. ಯುಸ್, ಉದ್ಯೋಗಸ್ಥರಿಗೆ ಸಾಧಾರಣವಾಗಿ [illegible] ಸುವದಿಲ್ಲ. ಆದರೆ ಕೌನ್ಸಿಲ್ ಮೆಂಬರುಗಳಾ [illegible] ಸಿ ಯುಸ್, ಆಫೀಸರಿಗೆ ವರ್ಷಕ್ಕೆ 50 ಪೌಂಡೂ ಗವರ್ನರಾಗುವವರಿಗೆ ವರ್ಷಕ್ಕೆ 100 ಪೌಂಡೂ ಹೆಚ್ಚಿಗೆ ಪ್ರತ್ಯೇಕಿಸಬೇಕು. (ಇವನ್ನು [illegible] ದರ್ಜೆಯವರಿಗೆ ಪೆನ್ಶನ್ [illegible])

[illegible] ಕೋರ್ಟುಗಳಲ್ಲಿ [illegible] ಉದ್ಯೋಗಗಳಿಗೆ ಸೇರುವವರಿಗೆ ಮಾಡಿಕೊಡಬೇಕು.

[illegible] ಯೂರೋಪಿಯನ್ [illegible] ಗಳನ್ನು ಕೂಡಿಸಿ ಒಂದು [illegible] ಯೂರೋಪಿಯನನ್ನು ನೇಮಿಸಬೇಕು. ಬೇರೆ ಜಿಲ್ಲೆಗೆ ದಾಳ್ಯಟು ಹೋದರೂ ಅಥವಾ [illegible] ಹೋದ ಅಂಥಾ ಪ್ರಯಾಣದ [illegible] ಕೊಡಬೇಕು. [illegible] ಮಕ್ಕಳಿಗೆ [illegible] ಸಹಾಯ ಕೊಡಬೇಕಾಗಿಲ್ಲ.

ವಿಮರ್ಶೆ.

[illegible]

[illegible] — ಎ ರಾಮಪ್ಪ [illegible] 12 ಆಣೆ, [illegible]

[illegible], [illegible]ಶ್ವರ, [illegible]

ದಕ್ಷಿಣಕನ್ನಡ ಜಿಲ್ಲೆ

[illegible] ತಮ್ಮ ಮುನ್ನುಡಿಯಲ್ಲಿ ಸಂಗೀತ [illegible] ಇದು [illegible] ಸಂತೋಷವಾಗಿಸಿ [illegible] ಲೀನಗೊಳಿಸುವುದು [illegible] ಕೇಳಿದ ಮಾತ್ರದಿಂದಲೇ [illegible] ರೋಗಗಳು [illegible] ಸಂಗೀತದ [illegible] ಅನೇಕರಿಗೆ [illegible] ಸಂಗೀತ ಪ್ರಸ್ತಕದ ಪ್ರಯೋ [illegible]

ಪ್ರಸ್ತುತ ಪು [illegible] ಸಂಗೀತ [illegible] ಕಾರಣ [illegible] ಮಾಡಿ [illegible] ಉಪಯೋಗಿಸುವುದು [illegible]

[illegible] ಸ್ವಶಿಕ್ಷಗಳೇ [illegible] ಸಂಗೀತ ಬೋಧಕರು ತಮ್ಮ [illegible] ಇಟ್ಟುಕೊಳ್ಳಬೇಕಾದ ಪುಸ್ತಕ ಬೆಲೆ ಹ ದವಾದ್ದರ [illegible] ಉಪಯೋಗಿಸುವ ಕಾಗದವು [illegible]

"ವಾ"

ಶ್ರೀಮತ್ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ ಶ್ರೀ ವಿದ್ಯಾರಣ್ಯರು.

—o—

(ಬರೆದು ಬಂದದ್ದು)

ಕರ್ನಾಟಕವು ಛಿನ್ನಭಿನ್ನವಾಗಿ ಪರರಾಸ್ತ್ಯದ ಕೈಯಲ್ಲಿ ಸಿಕ್ಕಿ ನರಳುತ್ತಿರುವ ಸಮಯದಲ್ಲಿ, ಪ್ರಜೆಯನ್ನು ಉದ್ಧಾರ ಮಾಡಲು ಉದಯಿಸಿದ ಶ್ರೀ ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ ಶ್ರೀ ವಿದ್ಯಾರಣ್ಯ ಮಹಾಮುನಿಗಳು ತುಂಗಭದ್ರಾ ತೀರದ ಪಂಪಾ ಕ್ಷೇತ್ರದಲ್ಲಿ ಸುಮಾರು ಕ್ರಿ ಶ. ೧೨೬೮ ರಲ್ಲಿ ಜನಿಸಿದರು. ಮಾತಾಪಿತೃಗಳು ಬಹಳ ಬಡವರಾಗಿದ್ದರು. ಬಾಲ್ಯದ ನಾಮಕರಣವು ಮಾಧವನೆಂದು ತೀವ್ರ ಬುದ್ಧಿಯಾದ ಮಾಧವನು ತಂದೆ ಹೇಳಿಕೊಟ್ಟ ವಿದ್ಯೆಯೆಲ್ಲವನ್ನು ಬಹು ವೇಗದಿಂದ ಹೀರಿ, ಕಂಚೀಮಠದ ಸ್ವಾಮಿಗಳಿಂದ ಎಲ್ಲಾ ವಿದ್ಯಾಭ್ಯಾಸವನ್ನು ಪಡೆದನು.

ಗುರುವಿನ ಹಾಗೆಯೇ ಮಾಧವನೂ ಕೆಲವು ಮಂದಿ ಶಿಷ್ಯರನ್ನು ಒಟ್ಟುಗೂಡಿಸಿ, ಅವರನ್ನು ವಿದ್ವಾಂಸರನ್ನಾಗಿ ಮಾಡುತ್ತಾ, ಅನೇಕ ಗ್ರಂಥಗಳನ್ನು ಬರೆಯುತ್ತಲೂ, ರಚಿಸುತ್ತಲೂ ಇದ್ದನು. ಆಗಿನ ಕಾಲದ ಕರ್ನಾಟಕದ ಪರಿಸ್ಥಿತಿಯು ಬಹಳ ವ್ಯಸನಕರವಾಗಿತ್ತು. ಮುಸಲ್ಮಾನರು ಹಿಂದುಗಳನ್ನು ಎಲ್ಲೆಲ್ಲಿಯೂ ಹಿಂಸಿಸುತ್ತಿದ್ದರು; ಹೆಂಗಸರೂ ಮಕ್ಕಳೂ [illegible] ಬಹಳ ಕಷ್ಟವಾಗಿದ್ದಿತು. ಹಿಂದುಗಳ ಧರ್ಮವು ಮಾಯವಾಗಿ ಹೋಗಿತ್ತು. ಸಾರಾಂಶ, ಹಿಂದು [illegible] ಈ ದೇಶವು ನರಕವಾಗಿತ್ತು. ಇಂಥಾ ಪರಿಸ್ಥಿತಿಯನ್ನು ಮಾಧವನು ನೋಡಿ ದೇಶೋದ್ಧಾರಕ್ಕಾಗಿ ತಕ್ಕಷ್ಟು ಹಣವನ್ನು ದೊರಕಿಸಬೇಕೆಂದು ತನ್ನ ೬೦-೬೫ ನೇ ವಯಸ್ಸಿನಲ್ಲಿ ಕುಲದೇವತೆ ಭುವನೇಶ್ವರಿಯನ್ನು ಕುರಿತು ಅತ್ಯುಗ್ರವಾದ ತಪಸ್ಸನ್ನು ಮಾಡಿದನು. ದೇವಿಯು ಆಗ ಪ್ರತ್ಯಕ್ಷಳಾಗಿ ಈ ಇಷ್ಟವು ಮುಂದಿನ ಜನ್ಮದಲ್ಲಿ ಸಿದ್ಧಿಯಾಗುವುದೆಂದು ಹೇಳಲು, ಮಾಧವನು ಸನ್ಯಾಸತ್ವವನ್ನು ಸ್ವೀಕರಿಸಿ ಶಾಸ್ತ್ರಪ್ರಕಾರ ಮತ್ತೊಂದು ಜನ್ಮವನ್ನು ಹೊಂದಿದ ಮೇಲೆ, ಕೇಳಿದ ಕಡೆ ಸುವರ್ಣ ವೃಷ್ಟಿಯು [illegible] ದೊರಕೊಂಡನು. ಅಪ್ರಕಾರ ದೇವಿಯು ಒಪ್ಪಿದಳು, ಮಾಧವನು ದ್ವಿತೀಯಜನ್ಮವನ್ನು ಹೊಂದಲು ಶೃಂಗೇರಿ ಶ್ರೀ ವಿದ್ಯಾತೀರ್ಥರಿಗೆ ಹೋಗಿ, ಅವರನುಗ್ರಹವನ್ನು ಪಡೆದು, ಶ್ರೀ [illegible] ಗಳ ಪಟ್ಟದ ಶಿಷ್ಯರಾಗಿ ಶ್ರೀ ವಿದ್ಯಾರಣ್ಯರೆಂಬ ಹೆಸರನ್ನು ಪಡೆದನು.

ಅನಂತರ ಶ್ರೀ ವಿದ್ಯಾರಣ್ಯರು ತಮ್ಮ ಜನ್ಮಸ್ಥಾನಕ್ಕೆ ಬಂದು, ಸ್ವರಾಜ್ಯವನ್ನು ಸ್ಥಾಪಿಸಬೇಕೆಂದು ನಿಶ್ಚಯಿಸಿ ಅಲ್ಲಿಯೇ ತಪಸ್ಸನ್ನಾಚರಿಸಿದರು. ಆ ಕಾಲದಲ್ಲಿ ಹುಕ್ಕ ಬುಕ್ಕ ಎಂಬಿಬ್ಬರು ಮುನಿಗಳಿಗೆ ಹಣ್ಣು ಹಂಪಲುಗಳನ್ನು ತಂದು ಕೊಡುತ್ತಿದ್ದರು. ಮತ್ತು ಅವರು ತಮ್ಮನ್ನು ಮುಸಲ್ಮಾನರ [illegible] ಬಿಡಿಸಬೇಕೆಂದು ಕೇಳಿಕೊಂಡರು. ಆಗ ಅವರು ಸ್ವರಾಜ್ಯ ಸ್ಥಾಪನೆಗೆ ಇದೇ ತಕ್ಕ ಸಮಯವೆಂದೂ ಅದೇ ವಿಶೇಷ [illegible] ನಿಶ್ಚಯಿಸಿದರು, ಮತ್ತು [illegible] ಸಮೀಪದಲ್ಲಿ ಪಟ್ಟಕಟ್ಟಿದರು. ಮುಸಲ್ಮಾನರ ಅಧಿಕಾರವನ್ನು ಬಿಡಿಸಲೋಸುಗ ಹುಕ್ಕನೂ ಬುಕ್ಕನೂ ತಕ್ಕ ಎಲ್ಲಾ ಪ್ರಯತ್ನಗಳನ್ನು ಮಾಡಿ, ಸುತ್ತಮುತ್ತಲಿನ ಎಲ್ಲಾ ರಾಜ್ಯಗಳನ್ನು ಸಂಪಾದಿಸಿದರು; ಎಲ್ಲಾ ಜನರ ದೃಷ್ಟಿಯು ಅತ್ತಕಡೆ ಹರಿಯಿತು. ಶ್ರೀ ವಿದ್ಯಾರಣ್ಯರು ಹಂಪೆಯಲ್ಲಿ ಚಿನ್ನದಮಳೆಯನ್ನು ಸುರಿಸಿದರು; ಆಗ ಹುಕ್ಕನರಾಜ್ಯವು ಪ್ರಬಲ್ಯವಾಗುತ್ತಾ ಬಂತು.

ಶ್ರೀ ವಿದ್ಯಾರಣ್ಯರು ತಮ್ಮ ರಾಜಧಾನಿಯನ್ನು ಕ್ರಿ ೧೩೩೬ ರಲ್ಲಿ ಹಂಪೆಯಲ್ಲಿ ಸ್ಥಾಪಿಸಿ, ಸುವರ್ಣವೃಷ್ಟಿಯಿಂದ ತಮ್ಮ ಸಂಸ್ಥಾನವನ್ನು ಹಿಂದಿನಂತೆ ಕಾವೇರಿಯಿಂದ ಗೋದಾವರಿಯವರೆಗ ಬೇಸಿ ಬಲಪಡಿಸಿ ಹಂಪೆಯನ್ನು ವಿಸ್ತಾರಗೊಳಿಸಿ ಆ ಪಟ್ಟಣಕ್ಕೆ ವಿಜಯನಗರವೆಂದು ಹೆಸರಿಟ್ಟರು ಮತ್ತು ಅವರೊಳಗೆ ಐಕಮತ್ಯವನ್ನು ಬೆಳಸಿ, ಕರ್ನಾಟಕನ್ನರಿಗೆ ಸ್ವರಾಜ್ಯವನ್ನೊದಗಿಸಿಕೊಟ್ಟರು. ಶ್ರೀ ವಿದ್ಯಾರಣ್ಯರ [illegible] ಎಲ್ಲಾ ಸಂಘದವರೂ ರಾಜ್ಯದಲ್ಲಿ ದೊಡ್ಡ ಪದವಿಗಳನ್ನು ಹೊಂದಿದರು. ಇವೂ ಅಲ್ಲದೆ ಧರ್ಮಶಾಸ್ತ್ರವೇ ಮೊದಲಾದ ಎಲ್ಲಾ ವಿಷಯಗಳಲ್ಲಿ ಇವರು ಪಾರಂಗತರಾಗಿದ್ದರು. ಶೃಂಗೇರಿಯಲ್ಲಿ ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೆಂಬ ಬಿರುದು ಈಗಲೂ ಸುವರ್ಣಾಕ್ಷರದಲ್ಲಿದೆ. ಈ ರೀತಿಯಲ್ಲಿ ಅವರು ಐವತ್ತಾರುವರುಷಗಳವರೆಗೆ ರಾಜ್ಯಭಾರದಲ್ಲಿ ಸಹಾಯಕರಾಗಿದ್ದು, ಹುಕ್ಕನ ಮಗನಿಗೆ ರಾಜ್ಯವನ್ನು ಬಿಟ್ಟುಕೊಟ್ಟು ತಾವು ಕ್ರಿ ಶ ೧೩೮೬ ಕ್ಷಯ ಸಂವತ್ಸರ ಜ್ಯೇಷ್ಠ ಶುದ್ಧ ೧೩ ಶನಿವಾರ (ಕ್ರಿ ಶ ೧೩೮೬) ಮಹಾಸಮಾಧಿಯನ್ನು ಹೊಂದಿದರು.

ಆಗಿನ ವಿಜಯನಗರದ ರಾಜನು ಶ್ರೀ ವಿದ್ಯಾರಣ್ಯರ ಜ್ಞಾಪಕಾರ್ಥವಾಗಿ ಶೃಂಗೇರಿಯ ಹತ್ತಿರ ಒಂದು ಅಗ್ರಹಾರವನ್ನು ಕಟ್ಟಿಸಿ ಅದಕ್ಕೆ ವಿದ್ಯಾರಣ್ಯಪುರವೆಂದು ಹೆಸರಿಟ್ಟು ಬ್ರಾಹ್ಮಣರಿಗೆ ದಾನಕೊಟ್ಟನು. ಹಾಳುಬಿದ್ದಿರುವ ಹಂಪೆಯೇ ಇವರ ಕೆಲಸಗಳಿಗೆ ಸಾಕ್ಷಿಯಾಗಿದೆ. ದೇಹವು ಮಾಯವಾದರೂ, ಅವರ ಕೀರ್ತಿಯು ಸೂರ್ಯಚಂದ್ರರ ಪರಿಯಂತರ ಇರುವುದು.

ಈ ವರ್ಷ ಇವರ ಪುಣ್ಯದಿನವು ಜ್ಯೇಷ್ಠ ಶುದ್ಧ ೧೩ (ಜೂನ್ ೨೯) ಕ್ಕೆ ಆಗುವುದು. ಅಂದು ಪ್ರತಿಯೊಬ್ಬ ಕನ್ನಡಿಗನೂ ಅವರ ಪುಣ್ಯದಿನವನ್ನಾಚರಿಸಿ ಧನ್ಯರಾಗಬೇಕು. ಅಂದು ದೇವರ ಭಜನೆಯನ್ನು ಮಾಡಿ ಶ್ರೀ ವಿದ್ಯಾರಣ್ಯರ ಚರಿತ್ರೆಯನ್ನು ಪಠನಮಾಡಬೇಕು. ನಮ್ಮ ಕೊಡಗಿನ ಎಲ್ಲಾ ಸಂಸ್ಥೆಯವರೂ ಆ ದಿನವನ್ನಾಚರಿಸಿ ಕರ್ನಾಟಕ ಮಾತೆಯ ಪ್ರೀತಿಗೆ ಪಾತ್ರರಾಗಬೇಕೆಂದು ಬಯಕೆ.

ಜಯಕರ್ನಾಟಕ ॥ "ಸಿರಿಗನ್ನಡಂಗೆಲ್ಗೆ"

ಹಿಂದುಮುಸಲ್ಮಾನ ಮನಸ್ತಾಪ ಅದರ ಕಾರಣ ಮತ್ತು ಪರಿಹಾರ ಮಹಾತ್ಮಾಗಾಂಧಿಯವರ ಲೇಖನದ ಸಾರ

ಮಾಪಿಳ್ಳೆಯರ ಮಲಬಾರ್ ದಂಗೆಗಾ ಮತ್ತು [illegible] ಲ್ಲಿ ಹಿಂದುಗಳಿಗೆ ಮುಸಲ್ಮಾನರಿಂದ ಹಿಂಸೆಯಾಯಿತೋ ಅದಕ್ಕೆಲ್ಲಾ ನಾನೇ ಕಾರಣನೆಂದು ಕೆಲವು ಹಿಂದು ಸ್ನೇಹಿತರು ನನಗೆ ಬರೆದಿದ್ದಾರೆ. ಮುಸಲ್ಮಾನರ ಖಿಲಾಫತ್ ಚಳವಳಿಗೆ ನಾನು ಸಹಾಯಕೊಟ್ಟದ್ದರಿಂದ ಮುಸಲ್ಮಾನರಿಗೆ ಬಹಳ ಪ್ರಾಮುಖ್ಯತೆ ಬಂದದ್ದರಿಂದ ಪ್ರಳಯ ನಡಿಸುತ್ತಾರೆಂತ ಮೊದಲಾಗಿ ಬರೆಯುತ್ತಾರೆ.

ಮುಸಲ್ಮಾನ್ ಸ್ನೇಹಿತರು ಬರೆಯುವದೇನೆಂದರೆ "ನಿಂಮ ಸಹಾಯಕರು ನಮ್ಮವರು ಬಾಯಿಗೆ ಕೆಲಸವನ್ನು ಸ್ಕೂಲುಗಳನ್ನೂ ಆಸ್ಪತ್ರೆಗಳನ್ನು ಹಿಂದುಗಳ

ಗಿಂತ ಬೇರಾಗಿ ಬಿಟ್ಟಿರು. ಟಿಪ್ಪುಸುಲ್ತಾನ್ ಮುಂತಾದ ನಟ್ಟಗಳಲ್ಲಿ ಹಿಂದುಗಳು ಸ್ವಂತ ನಡಿಸಿ ಮುಸಲ್ಮಾನರು ಹಿಂಸೆಗೆ ಗುರಿಯಾದದ್ದು ಯಾಕೆಂದ ನಿಸ್ಸ ಮಾತುಕೇಳ ಜಗಟ್ಟನಲ್ಲಿ ನಂಬಿಬಿಟ್ಟದ್ದರು. ಹಿಂದೂ ಮುಂದಾಳುಗಳು ಶುದ್ಧಿ ಸಂಗಠನ ಸಂಸ್ಥೆಗಳನ್ನು ನಿರ್ಮಿಸಿಕೊಂಡು ಮುಸಲ್ಮಾನ್ ಜಾತಿಗೆ ಅಭದ್ರತೆಯನ್ನು ಉಂಟುಮಾಡುತ್ತಾರೆ."

ಈ ಎರಡು ಆಕ್ಷೇಪಗಳೂ ನಾನು ತಪ್ಪುತಸ್ಥನಲ್ಲವೆಂತ ಹೇಳುತ್ತೇನೆ. ಖಿಲಾಫತ್ ಚಳವಳದಿಂದ ಜನಸಮುದಾಯಕ್ಕೆ ಎಚ್ಚರವಾಯಿತು. ಇದು ಬಹಳ ಅವಶ್ಯವಿತ್ತು. ಪ್ರಜೆಗೆ ಜನರಿಗೆ ಸಿದ್ಧ ಹಕ್ಕಿಲಿಕ್ಕೆ ಬಿಡಬಾರದು. ಅವರ ಶಕ್ತಿಯನ್ನು ಸರಿಯಾಗಿ ದಾರಿಗೆ ತಿರುಗಿಸಿಕೊಳ್ಳಬೇಕಷ್ಟೆ. ಮಾಪಿಳ್ಳೆಯರಿಂದ ಹಿಂದುಗಳಿಗೆ ಆಯಿತೆಂತ ಹೇಳುವ ಹಿಂಸೆಗಳು ಬಹಳ ಉತ್ಪ್ರೇಕ್ಷಿಸಲ್ಪಟ್ಟವೆ ಯೆಂತ ಮುಸಲ್ಮಾನರು ಹೇಳುತ್ತಾರೆ. ಸತ್ಯ ಕಂಡುಹಿಡಿಯುವದು ಕಷ್ಟವಾಗಿದೆ. ಅದು ಮುಂದಿನ ಕಾರ್ಯಕ್ಕೆ ಅವಶ್ಯವೂ ಇಲ್ಲ. ಬೇರೆಬೇರೆ ಕಡೆಗಳಲ್ಲಿ ಆದ ದಂಗೆಗಳಲ್ಲಿ ಕೆಲವುಕಡೆ ಹಿಂದುಗಳಿಗೂ ಕೆಲವುಕಡೆ ಮುಸಲ್ಮಾನರಿಗೂ ಹೆಚ್ಚಿಗೆ ಹಿಂಸೆ ಮತ್ತು ನಷ್ಟವಾಗಿದೆ. ದ್ವೇಷ ಹೆಚ್ಚಿದಾಗ ಹಿಂದುವಾಗಲೀ ಮುಸಲ್ಮಾನನಾಗಲೀ ಮನುಷ್ಯನು ಮೃಗದಂತೆ ವರ್ತಿಸುತ್ತಾನೆ.

ಇದಕ್ಕೆ ಕಾರಣವೇನೆಂದರೆ ಜನರಿಗೆ ಅಹಿಂಸೆಯಲ್ಲಿ ನಂಬಿಕೆ ಕಟ್ಟುಹೋಗಿದೆ. ಅಹಿಂಸೆಯಲ್ಲಿ ನಂಬಿಕೆಯು ಚರ್ಮದಲ್ಲಿ ಮಾತ್ರ ಇತ್ತು. ಕೆಲವು ಹಿಂದುಗಳು ನನ್ನನ್ನು ಕ್ರಿಶ್ಚನ್ ಎಂತ ಹೇಳುತ್ತಾರೆ. ಗೀತೆಯಲ್ಲಿ ಅಹಿಂಸೆಯೇ ಬೋಧಿಸಲ್ಪಟ್ಟದೆಯೆಂತ ನಾನು ಅರ್ಥಮಾಡಿದ್ದಕ್ಕೆ ನಾನು ತಪ್ಪುಅರ್ಥ ಮಾಡಿದ್ದೆನ್ನುತ್ತಾರೆ. ಹೇಗೂ ಹಿಂದೂ ಮುಸಲ್ಮಾನರ ಜಗಳಗಳಿಗೆ ಅಹಿಂಸೆಯಲ್ಲಿ ನಂಬಿಗೆ ಕೆಟ್ಟದ್ದೇ ಕಾರಣ. ನಾನು ಅಹಿಂಸೆಯೇ ಸರ್ವಮತಗಳ ಉದ್ದೇಶವೆಂತ ಹೇಳುತ್ತೇನೆ. ಅದು ನನ್ನ ಸ್ವಂತ ಮತ. ಹಿಂದುಗಳೆಲ್ಲರೂ ನನ್ನನ್ನು ಬಿಟ್ಟರೂ ನಾನು ಹಿಂದುವಾಗಿಯೇ ಉಳಿದಿರುತ್ತೇನೆ.

ಆದರೆ ಅಂಥ ಸಂಪೂರ್ಣ ಅಹಿಂಸೆಯನ್ನು ಈಗ ಬೋಧಿಸುವದಿಲ್ಲ. ಪುರಾತನರ ಶುದ್ಧ ಅಹಿಂಸೆಯನ್ನು ಬೋಧಿಸಲಿಕ್ಕೆ ನಾನು ಇನ್ನೂ ಅರ್ಹನಲ್ಲ. ಆದರೆ ನನಗೆ ಅನುಭವ ಸಿದ್ಧವಾದಷ್ಟನ್ನು ನಾನು ಬೋಧಿಸುವದರಲ್ಲೇ ನನ್ನ ಬಲ. ವಿಧವಿಧದ ಜಾತಿಗಳು ಬೆರೆತು ಇಲ್ಲಿಕ್ಕೆ ಸ್ವರಾಜ್ಯ ಪಡೆಯಲಿಕ್ಕೂ ಅಹಿಂಸೆಯನ್ನು ಅವಲಂಬಿಸಬೇಕೆಂತ ಹೇಳುವದಾಗಿದೆ. ಜಾತಿಗಳೊಳಗೆ ಇರುವ ವ್ಯತ್ಯಾಸಗಳನ್ನು ಹಿಂಸೆಯಿಂದ ತೀರಿಸಿಕೊಳ್ಳಬಾರದು. ಹಿಂದುಗಳು ಮುಸಲ್ಮಾನರೂ ಸಹ ಜಾತಿಯಲ್ಲಿ ಜುಲುಂ ಇಲ್ಲವೆನ್ನುತ್ತಾರೆ. ಹಸದ ಪ್ರಾಣ ಉಳಿಸಲಿಕ್ಕಾಗಿ ಮುಸಲ್ಮಾನನ ಪ್ರಾಣ ತೆಗೆದರೆ ಜುಲುಂ ಅಲ್ಲವೇ? ಮಸೀದಿ ಮುಂದೆ ವಾದ್ಯ ನಾಡಬಾರದೆಂತ ಬಲವದ್ಬಂದಿ ನಡಿಸಿದರೆ ಜುಲುಂ ಅಲ್ಲವೇ? ಗದ್ದಲದಲ್ಲೂ ಪ್ರಾರ್ಥನೆಯಲ್ಲಿ ಮಗ್ನರಾಗಿರುವದು ಬಹಳ ವಿಶೇಷ. ನಮ್ಮ ಮತ ಸಂಬಂಧದ ಅಭಿಪ್ರಾಯಗಳಿಗೆ ಬೇರೆ ಮತದವರನ್ನು ಒಪ್ಪಿಸಲಿಕ್ಕೆ ಜುಲುಂ ನಡಿಸಿದರೆ ನಾವು ಮೃಗಗಳಿಗೆ ಸಮಾನರೆಂತ ನಮ್ಮ ಪೂರ್ವಿಕರು ಹೇಳಿಯರು. 30 ಕೋಟಿ ಹಿಂದುಸ್ಥಾನದ ಜನರು ಒಂದು ಲಕ್ಷ ಯೂರೋಪಿಯನ್ ಜನರನ್ನು ಸೋಲಿಸಲಿಕ್ಕೆ ಹಿಂಸೆಯನ್ನು ಉಪಯೋಗಿಸಿದರೆ ನಾಚಿಕೆಗೇಡಲ್ಲವೇ! ಅವರನ್ನು ನಂಮತೆ ತಿರುಗಿಸಿಕೊಳ್ಳಲಿಕ್ಕೆ ಅಥವಾ ಅವರನ್ನು ಇಲ್ಲಿಂದ ಓಡಿಸಿಬಿಡಲಿಕ್ಕಾದರೂ ನಮಗೆ ಆಯುಧ ಶಕ್ತಿ ಬೇಕಾಗಿಲ್ಲ. ಮನಶ್ಶಕ್ತಿ ಇದ್ದರೆ ಸಾಕಾಗಿದೆ. ಮನಶ್ಶಕ್ತಿ ಇಲ್ಲದೆ ಇದ್ದರೆ ಆಯುಧ ಶಕ್ತಿ ಎಂದೂ ಬರುವದಿಲ್ಲ.

ಆದ್ದರಿಂದ ಅಹಿಂಸೆಯು ಸ್ವಾಭಾವಿಕವಾದ ಅವಶ್ಯಕವಾಗಿದೆ. ಅದರಿಂದ ನಮ್ಮ ಶಕ್ತಿಯನ್ನು ಸಧ್ಯಯಮಾಡಬಹುದು. ಬಿಟ್ಟು ಜನಾಂಗದ ವಿಶ್ವಾಸ ಇಲ್ಲದೆ ಪ್ರುಂಡೆದ್ದರೆ ಹುಚ್ಚುತನವೇ. ಸರಿ ಅಸಹಕಾರದ ಎಲ್ಲಾ ಕಾರ್ಯಗಳನ್ನು ಬಿಟ್ಟು ಜನಾಂಗದ ವಿಶ್ವಾಸದಿಂದ ಸಾಧಿಸಿದರೆ ಬಂದುತೊಟ್ಟು ರಕ್ತವನ್ನಾದರೂ ಚೆಲ್ಲದೆ ನಮ್ಮ ಉದ್ದೇಶವನ್ನು ಸಾಧಿಸಿಕೊಳ್ಳಬಹುದು. ಕಳ್ಳರ ಮೇಲೆಯಾಗಲೀ ಇಂಡಿಯವನ್ನು ಮುತ್ತುವವರ ಮೇಲೆಯಾಗಲೀ ಹಿಂಸೆ ಮಾಡಬಾರದೆಂತ ನಾನು ಹೇಳುವದಿಲ್ಲ. ಆದರೆ ಅಂಥವರಮೇಲೆ ಹಿಂಸೆ ನಡಿಸಬೇಕಾದರೆ ನಮ್ಮ ಹಿಂಸೆಯ ಆತುರವನ್ನು ತಡೆದುಕೊಳ್ಳಬೇಕು. ಸ್ವಲ್ಪ ಕಾರಣಕ್ಕೇನೇ ಪಿಸ್ತೂಲ್ ತೆಗೆದುಕೊಳ್ಳುವದು ಶಕ್ತಿಯಲ್ಲ. ಹೇಡಿತನ. ನನ್ನ ಅಹಿಂಸೆಯಿಂದ ಹೇಡಿತನ ಬರುವದಿಲ್ಲ. ಶೌರ್ಯದ ಅಭ್ಯಾಸದಿಂದಲೇ ಅವಶ್ಯವಿದ್ದಾಗ ಅಗತ್ಯಕ್ಕಾಗಿ ಹಿಂಸೆಯನ್ನು ಅವಲಂಬಿಸಬಹುದು.

ಅಹಿಂಸಾ ತತ್ವವನ್ನು ಅವಲಂಬಿಸಿದ್ದರಿಂದ ನಾವು ಬಲಹೀನರು ಮತ್ತು ಹೇಡಿಗಳು ಆಗಿ ಹೋಗಿದ್ದೇವೆಂತ ಹೇಳುವವರು ಸ್ವಲ್ಪ ಆಲೋಚಿಸಿ ನೋಡಿದರೆ ನಿಜವಾಗಿಯೂ ಅಹಿಂಸೆಯನ್ನು ಅವಲಂಬಿಸಲಿಲ್ಲವೆಂಬುದು ಗೊತ್ತಾಗುತ್ತೆ. ಶೌರ್ಯದಿಂದ ಹಿಂಸಿಸದಿದ್ದರೂ ಮನಸ್ಸಿನಲ್ಲಿ ಹಿಂಸೆಯನ್ನು ಇಟ್ಟುಕೊಂಡೇ ಇದ್ದೆವು. ಮನೋಮಿಂತ್ರಾ ಯುಗಳಲ್ಲಿ ನಾವು ಅಹಿಂಸಾ ತತ್ವವನ್ನು ಅವಲಂಬಿಸಿದ್ದರೆ ಇಷ್ಟು ಸಮಯದ ವರೆಗೆ ನಂಬಿ ಒಬ್ಬರಾಗುತ್ತಿದ್ದೆವು.

ಮೇಲೆ ಬರೆದಮೇರೆ ಎರಡು ಸಂದರ್ಭಗಳಲ್ಲಿ ಅಹಿಂಸಾ ತತ್ವವನ್ನು ಅವಲಂಬಿಸಿದರೆ ಹಿಂದೂಮುಸಲ್ಮಾನರೊಳಗೆ ಮನಸ್ತಾಪವು ಕಡಿಮೆಯಾಗುವದರಲ್ಲಿ ಸಂಶಯವಿಲ್ಲ. ಎರಡು ಜಾತಿಯವರು ತಮ್ಮೊಳಗಿನ ಜಗಳಗಳನ್ನು ಪಂಚಾಯ್ತರ ಮೂಲಕವಾಗಿಯಾಗಲೀ ಕೋರ್ಟಿನಲ್ಲಾಗಲೀ ತೀರಿಸಿಕೊಳ್ಳಬೇಕೆಂತ ನಿಶ್ಚೈಸುವದರಿಂದಲೇ ಅಹಿಂಸೆಯನ್ನು ಅವಲಂಬಿಸಿದಂತೆ ಆಯಿತು. ಈ ಅನ್ಯೋನ್ಯ ಸಪ್ರೇಮವಾಯಿತೆಂತಾದರೆ ಬೇರೆ ಎಲ್ಲಾ ಅನುಕೂಲಗಳು ತಾವಾಗಿಯೇ ಬರುತ್ತವೆ. ಈ ಒಪ್ಪಂದವಾದ ವಿನಹ ಬೇರೆ ಗತ್ಯಂತರಗಳನ್ನು ಯೋಚಿಸುವದೇ ಸಾಧ್ಯವಿಲ್ಲ. ಈ ಒಪ್ಪಂದವಾಯಿತೆಂತ ಇಟ್ಟುಕೊಂಡು ಮನಸ್ತಾಪದ ಕಾರಣಗಳನ್ನು ಅಜಮಾಯಿಸುವ. ಎಲ್ಲಾ ಜಗಳಗಳಲ್ಲೂ ಹಿಂದುಗಳೇ ಹಿಂದೆ ಬೀಳುತ್ತಾರೆ. ಮುಸಲ್ಮಾನರು ಧೈರ್ಯಶಾಲಿಗಳೂ ಹಿಂದೂಗಳು ಹೇಡಿಗಳೂ ಆದಂತೆ ಎಲ್ಲೆಲ್ಲಿಯೂ ಕಂಡುಬರುತ್ತದೆ. ಹಿಂದುಗಳು ಹೇಡಿಗಳಾದ್ದಕ್ಕೆ ಮುಸಲ್ಮಾನರನ್ನು ದೂರಿದರೆ ಆದೀತೋ? ಹೇಡಿಗಳಿದ್ದಲ್ಲಿ ತೊಂದರೆ ಕೊಡುವವರು ಇದ್ದೇ ಇರುತ್ತಾರೆ. ಸಹರಾನ್‌ಪುರದಲ್ಲಿ ಮುಸಲ್ಮಾನರು ಹಿಂದುಗಳ ಮನೆಸುರಿದು ಧರೋಡೆ ಮಾಡಿದ್ದಲ್ಲದೆ ಬಹು ಹಿಂದೂಹೆಂಗಸಿನ ಮಾನಭಂಗ ಸಹ ಮಾಡಿದರೆಂತ ಹೇಳುತ್ತಾರೆ. ಹಿಂದುವಾದ ನನಗೆ ಮುಸಲ್ಮಾನರಮೇಲೆ ಸಿಟ್ಟು ಬರುವದಕ್ಕಿಂತ ಹೆಚ್ಚಾಗಿ ಹಿಂದುಗಳ ಹೇಡಿತನ ನೋಡಿ ನಾಚಿಕೆಯಾಗುತ್ತದೆ. ತಮ್ಮ ಸೊತ್ತನ್ನು ಧರೋಡೆ ಮಾಡುತ್ತಿರುವಾಗ ಅದನ್ನು ಉಳಿಸಲಿಕ್ಕೆ ಹಿಂದೂಮಾಲೀಕರು ಪ್ರಾಣಬಿಟ್ಟರೇ? ಮಾನಭಂಗಕ್ಕೆ ಗುರಿಯಾದ ಹಿಂದೂ ಭಗಿನಿಯ ಸಹೋದರರಲ್ಲಿದ್ದರು? ನಂನ ಅಹಿಂಸೆಯನ್ನು ಅನುಸರಿಸಿದರೆ ಅವಶ್ಯಬಂದಾಗ ಬಾಬೇಕೆಂತಲೂ ನನ್ನ ಅಹಿಂಸಾ ಮಾನಭಂಗ ಮಾಡುವಾಗ ತಡೆಯಬೇಕೆನ್ನುವದಿಲ್ಲ. ಹಿಂಸೆಯೂ ಹೇಡಿತನಕ್ಕೂ ಹೋಲಿಸಿದರೆ ಹಿಂಸೆಯೇ ಉತ್ತಮವೆನ್ನುತ್ತೇನೆ. ಹೇಡಿಗೆ ಅಹಿಂಸೆಯನ್ನು ಬೋಧಿಸುವ ಬದಲಿಗೆ ಕುರುಡನಿಗೆ ಸುಂದರ ನೋಟಗಳನ್ನು ನೋಡು ಎಂತ ಹೇಳುವದು ಉತ್ತಮ. ಅಹಿಂಸೆಯು ಧೈರ್ಯದ ಶಿಖರವಾಗಿರಬೇಕು. ನಾನು ಹೇಡಿಯಾಗಿದ್ದಾಗ ಹಿಂಸೆಯನ್ನು ಪೋಷಿಸುತ್ತಿದ್ದೆ. ಹೇಡಿತನವನ್ನು ನೀಗಿದ ನಂತರ ಅಹಿಂಸೆಯ ಬೆಲೆ ಗೊತ್ತಾಯಿತು. ಅಪಾಯಬಂದಾಗ ಓಡಿಬಿಟ್ಟ ಹಿಂದುಗಳು ಅಹಿಂಸಾ ತತ್ವವನ್ನು ಅನುಸರಿಸಿ ಓಡಿದಲ್ಲ. ತಾವು ಹಿಂಸೆ ಪಡಿಸಿಕೊಳ್ಳಲು ತಯಾರಿಲ್ಲದ್ದಕ್ಕಾಗಿ ಓಡಿಹೋದರು. ಓಡಿಹೋದ ಹಿಂದುಗಳು ನಗುಮುಖದಿಂದ ಅಪಾಯಕ್ಕೆ ಎದೆಬಡ್ಡಿ ಪ್ರಾಣಬಿಟ್ಟಿದ್ದರೆ ಯಶಸ್ಸನ್ನು ಪಡೆಯುತ್ತಿದ್ದರು ಮತ್ತು ಮೇಲೆ ಬೀಳುವ ಮುಸಲ್ಮಾನರ ಸ್ನೇಹವನ್ನು ಸಂಪಾದಿಸುತ್ತಿದ್ದರು. ತಮ್ಮ ಸ್ಥಳದಲ್ಲೇ ಇದ್ದು ಏಟಿಗೆ ಏಟು ಕೊಟ್ಟಿದ್ದರೂ ಆತ್ಮೀಯ ತ್ತಮವಲ್ಲದಿದ್ದರೂ ಉತ್ತಮವಾಗುತ್ತಿತ್ತು. ಹಿಂಸಿಸುವ ಮುಸಲ್ಮಾನನನ್ನು ಸ್ನೇಹಿತನನ್ನಾಗಿ ಮಾಡಿಕೊಳ್ಳಬೇಕಾದರೆ ಎಂಥಾ ಶತ್ರುವಿನ ಹೊಡೆತಕ್ಕಾದರೂ ಎದುರು ನಿಲ್ಲಲಿಕ್ಕೆ ತಯಾರಾಗಬೇಕು.

ದೇಹಶಕ್ತಿ ಬೆಳೆಸುವದರಿಂದ ಈ ಧೈರ್ಯವು ಬರುವದಿಲ್ಲ. ದೇಹಶಕ್ತಿ ಬೆಳೆಸಬೇಡವೆನ್ನುವದಿಲ್ಲ. ಆದರೆ ಮುಸಲ್ಮಾನರು ಮೇಲೆ ಬೀಳುವಾಗ ಆತ್ಮಸಂರಕ್ಷಣೆ ಮಾಡಿಕೊಳ್ಳಲಿಕ್ಕಾಗಿ ದೇಹಶಕ್ತಿ ಬೆಳೆಸಬೇಕೆನ್ನುವದಾದರೆ ಅದರಿಂದ ಹಾನಿಯೇ. ಮುಸಲ್ಮಾನರೂ ಹಾಗೆಯೇ ತಯಾರಾಗುತ್ತಾರೆ. ಆಗ ಅನ್ಯೋನ್ಯ ಅಪನಂಬಿಕೆ ಹೆಚ್ಚುತ್ತಾ ಹೋಗುತ್ತೆ. ಆದ್ದರಿಂದ ತಿಳಿದವರು ರಾಜಿಯಲ್ಲಿ ತೀರ್ಮಾನಿಸಿಕೊಳ್ಳಲೇ ಬೇಕೆಂತ ದೃಢಮನಸ್ಸು ಮಾಡಬೇಕು. ಹೇಡಿತನಕ್ಕೆ ದೇಹಶಕ್ತಿ ಬೆಳೆಸುವದು ಚಿಕಿತ್ಸೆಯಲ್ಲ. ಅಪಾಯಗಳಿಗೆ ಎದುರಾಗುವದೇ ಚಿಕಿತ್ಸೆ. ಮಧ್ಯವರ್ಗದ ಹಿಂದುಗಳು ತಮ್ಮ ಮಕ್ಕಳನ್ನು ಅಪಾಯಕ್ಕೆ ಬಿಡದೆ ಎಚ್ಚರದಿಂದ ಸಾಕುತ್ತಿರುವಷ್ಟುಕಾಲ ಹೇಡಿತನ ಹೋಗುವದಿಲ್ಲ. ಹುಡುಗರನ್ನು ತಮ್ಮ ಮನಸೋ ಇಚ್ಛೆ ಇರಲಿಕ್ಕೆ ಬಿಡಬೇಕು. ಹಾಗೆ ಆಡುವಾಗ ಸಣ್ಣದೂ ಚಿಂತೆಯಿಲ್ಲ. ದೇಹಶಕ್ತಿ ಏನು ಇಲ್ಲದವನಲ್ಲಿ ಮನೋಧೈರ್ಯ ತುಂಬಾ ಇರಬಹುದು.

ಹಿಂದುಗಳಲ್ಲಿ ಮದನಮೋಹನ ಮಾಳವೀಯರು, ಲಾಲಾಲಜಪತರಾಯರೂ ಶ್ರದ್ಧಾನಂದಸ್ವಾಮಿಗಳು ಜೆಂದಾಸ್. ಜೊಯತ್‌ರಾವ್ ಈ ಜನರನ್ನು ನಂಬಬೇಡ ಇವರು ಮುಸಲ್ಮಾನರ ಶತ್ರುಗಳೆಂತ ನನಗೆ ತಿಳಿಸುತ್ತಾರೆ. ಆದರೆ ಇವರೆಲ್ಲಾ ಮುಸಲ್ಮಾನ ದ್ವೇಷಿಗಳಲ್ಲ. ಅವರ ನಡೆನುಡಿಗಳಿಂದ ಈ ಸಂಶಯಕ್ಕೆ ಕಾರಣವಿದೆಯಷ್ಟೆ ಎಂಬ ಅಭಿಪ್ರಾಯವಾಗುವ ಮಾತುಗಳನ್ನು ಕಪಶೀಲವಾಗಿ ಬರೆದಿದ್ದಾರೆ. ಮುಸಲ್ಮಾನರಲ್ಲಿ ಮೌಲಾನಾ ಅಬ್ದುಲ್‌ಬಾರೀ ಸಾಹೇಬರಲ್ಲೀ ಬಂದಿಗೆ ... ನನ್ನ ಸತ ನಂಬಬೇಡವೆಂತ ಹೇಳುತ್ತಾರೆ. ಆದರೆ ಇವರನ್ನು ನಂಬದೆ ಇರಲಿಕ್ಕೆ ಏನು ಕಾರಣವೆಂತ ವಿವರಿಸಿದ್ದಾರೆ. ಶುದ್ಧಿ ಕಾರ್ಯವನ್ನು ಅವಶ್ಯವೆಂತ ಆಕ್ಷೇಪಿಸಿ ಬರೆದಿದ್ದಾರೆ. ಗೋರಕ್ಷಣೆಗಾಗಿ ಮುಸಲ್ಮಾನರನ್ನು ದ್ವೇಷಿಸುವದರಲ್ಲಿ ನ್ಯಾಯವಿಲ್ಲ. ಇಂಗ್ಲಿಷರು ಆಹಾರಕ್ಕಾಗಿ ಕೊಲ್ಲುತ್ತಿಲ್ಲವೇ. ಹಿಂದುಗಳೇ ದನಗಳನ್ನು ನಾಗಿ ನೋಡಿಕೊಳ್ಳದೆ ಹಿಂಸಿಸುತ್ತಿಲವೇ? ಗೋಪ್ರಾಣ ಉಳಿಸಲಿಕ್ಕಾಗಿ ಮುಸಲ್ಮಾನರ ಸಂಗಡ ಜಗಳವಾಡುವವರು ಬಹಳ ಪಾಪಕ್ಕೆ ಗುರಿಯಾಗುತ್ತಾರೆ. ಮಸೀದಿ ಮುಂದೆ ವಾದ್ಯಮಾಡಬಾರದೆಂತ ಮುಸಲ್ಮಾನರು ಹಿಂದುಗಳನ್ನು ಹಿಂಸಿಸುವದು ಅನ್ಯಾಯ. ಹಿಂದುಗಳು ಮುಸಲ್ಮಾನರ ಮನಸ್ಸು ನೋಯಿಸಬಾರದೆಂತ ಮಸೀದಿಮುಂದೆ ವಾದ್ಯ ಮಾಡಬಾರದೆಂತ ಹಿಂದುಗಳನ್ನು ಕೇಳಿಕೊಳ್ಳುತ್ತೇನೆ. ಮುಂದೆ ಕದರಿ ವಾದ್ಯ ನಿಲ್ಲಿಸುವದರಲ್ಲಿ ಆತ್ಮಗೌರವ ಹಾನಿಯಾಗುತ್ತೆ. ಆದರೆ ಜುಲುಂ ನಡಿಸಲು ಕಾರಣವೆಂತೆ ಮಾಡುವದೇ ಉತ್ತಮ.

ಇಸ್ಲಾಮ್ ಧರ್ಮವನ್ನು ಅಜಮಾಯಿಸಿ ನೋಡಿದರೆ ಅದನ್ನು ಪ್ರೀತಿಸದೆ ಇರಲಾರರು. ಆ ಧರ್ಮದಲ್ಲಿ ಮತಭಕ್ತಿಯಿಂದ ಹಿಂಸೆಯಾಗುತ್ತೆ. ಅದಕ್ಕೆ ಕೆಲವು ಮಟ್ಟಿಗೆ ಹಿಂದುಗಳು ಕಾರಣರೇ. ಹಿಂದುಗಳು ನಾವು ನಮ್ಮ ಮನಸ್ಸನ್ನು ಸಂಪಡಿಸಿಕೊಂಡರೆ ಮುಸಲ್ಮಾನರು ಸಹಾನುಭೂತಿ ತೋರಿಸದೆ ಇರಲಾರರು.

ವರ್ತಮಾನ ಸಂಗ್ರಹ

ಒಳದೇಶ

ಕಳೆದವಾರದ ಪತ್ರಿಕೆಯಲ್ಲಿ ಅನೇಕ ಪ್ರಿಂಟ್ ತಪ್ಪುಬಿದ್ದದ್ದಕ್ಕೆ ವಿಷಾದಿಸುತ್ತೇವೆ. ಅಗ್ರಲೇಖನದ ಹೆಸರು "ವಿಷಯ" ಎಂತ ಇರಬೇಕಾದ್ದನ್ನು "ಸ್ವೀಕಾರ" ಎಂತ ಬರೆದಿದೆ. ಒಳದೇಶ ವರ್ತಮಾನದಲ್ಲಿ 2 ನೇ ಕಲಂನ ಎರಡನೇ ವರ್ತಮಾನವು "ಬಿರ್ನಾಣಿರ ಸಂಘದ ಹುಬ್ಬಳ್ಳಿ ಮಹಾಸಭೆಯಲ್ಲಿ ಮಹಾತ್ಮಾ ಗಾಂಧಿಯವರನ್ನು" ಅಧ್ಯಕ್ಷತೆಯಿಂದ ಪಡೆದುದೆ ಮಾಡಿದ್ದಕ್ಕೆ ಎಂತ ಮುಂತಾಗಿ ಇರಬೇಕಿತ್ತು. ಈ ಮಾತುಗಳು ತಪ್ಪಿನಿಂದ 8 ನೇ ವರ್ತಮಾನಕ್ಕೆ ಸೇರಿಹೋಗಿದೆ. ನಮ್ಮ ಆಫೀಸಿನಲ್ಲೇ ಅಚ್ಚುಗಳು ಪ್ರಾಪ್ತವಾದರೆ ಇಂಥಾ ತಪ್ಪುಗಳಿಗೆ ಎಡೆ ಇರಲಾರದೆಂತ ಊಹಿಸುತ್ತೇವೆ. ವಾಚಕರು ಮನ್ನಿಸಬೇಕಾಗಿ ಕೋರುತ್ತೇವೆ.

ಕಳೆದ ವಾರದಲ್ಲಿ ಮಳೆಗಾಲ ಹಿಡಿದಂತೆ ಕಂಡರೂ ವಾರ ಬೇಸಿಗೆಕಾಲದಂತೆಯೇ ಕಾಣುತ್ತೆ.

ನಾಣಮಂಡ ಕುಶಾಲಪ್ಪನವರ ಮತ್ತು ಈ ಯ... ಮಾಚೈಯ್ಯನಂಬವರ ಬಾತ್ಮಿಗಳು ಪ್ರಕಟಣೆಗಳಾಗಿದುದರಿಂದ ಅದಕ್ಕೆ ನ್ಯಾಯವಾದ ಚಾರ್ಜುಕೊಟ್ಟ ವಿನಹ ಪ್ರಕಟವಾಗುವುದಿಲ್ಲವಾಗಿ ಅಲ್ಲಯಿದ ತಿಳಿಸಲಾಗಿದೆ.

ಸಾಪೋಕ್ಲು ಮೋಡೆಲ್ ಸ್ಕೂಲ 8 ನೇ ಸ್ಟೇಂಡಾರ್ಡಿನಲ್ಲಿ ಓದುವ ಮೂರು ಮಕ್ಕಳನ್ನು ವೀರರಾಜೇಂದ್ರಪೇಟೆ ಇಂಗ್ಲೀಷ್ ಸ್ಕೂಲ್‌ಗೆ ಕಳುಹಿಸಿದಲ್ಲು ಅವರನ್ನು ಪರೀಕ್ಷೆ ಮಾಡಿ ಫೋರ್ತ್ (IV th.) ಫಾರಂಗೆ ಪ್ರವೇಶ ಕೊಟ್ಟಿರುವುದಾಗಿ ತಿಳಿಯುತ್ತೇವೆ.

ಮೆ|| ಪಟ್ಟಮಾಡ ಪಿ. ಚಂಗಪ್ಪನವರು ಇಂಜನೀರಿಂಗ್ ಬಿ ಇ. ಎಂಬ (Bachalor of Engineerin... ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ. ಕೊಡಗಿನಲ್ಲಿ ಇದರಿಗಿಂತ ಯಾರೂ ಮೊದಲು ಈ ಡಿಗ್ರಿ ಪಡೆದವರು ಇರುವುದಿಲ್ಲ.

ತಾವುನಾಡು ಪಾರುಪತ್ಯಗಾರರು ಮೆ|| ಕಂಡ್ರತಂಡ ಪೊನ್ನಪ್ಪನವರನ್ನು ಎಗ್ರಿಕಲ್ಚರಲ್ ಇನ್‌ಸ್ಪೆಕ್ಟರಾಗಿ ನೇಮಿಸಿ ಅವರ ಜಾಗೆಗೆ ಮೆ|| ಪೆಮ್ಮಂಡ ಪೊಣ್ಣಪ್ಪನವರನ್ನು ನೇಮಿಸಿರುವರು.

ಕೊಡಗು ಸೆಂಟ್ರಲ್ ಬ್ಯಾಂಕಿನ ಜನರಲ್ ಮೀಟಿಂಗು ಇದೇ ತಾರೀಖು 8 ರಲ್ಲು ಬೆಳಗ್ಗೆ 9 ಗಂಟೆಗೆ ಮಡಿಕೇರಿ ಮೆರ್ಕೇರಿ ಹಾಲಿನಲ್ಲಿ ನಡೆದು 1924 ನೇ ಸಂವತ್ಸರಕ್ಕೆ ಡೈರೆಕ್ಟರುಗಳ ಹೊಸ ಚುನಾವಣೆ ನಡೆಯಿತು.

ಕಳೆದವಾರ ಪ್ರಕಟಿಸಿದಮೇರೆ ಮಡಿಕೇರಿ ವ್ಯಾಪಾರಿಗಳಾದ ವೈಶ್ಯರ ಲಿಂಗಣ್ಣಶೆಟ್ರು ಮಂಗಳೂರಿನಲ್ಲಿ ಕಳಕೊಂಡ ನಾಲ್ಕು ಸಾವಿರ ರೂಪಾಯಿಗಳನ್ನು ಕದ್ದ ಕಳ್ಳರು ಪತ್ತೆಯಾಗಿದ್ದಾರೆಂತ ತಿಳಿಯುತ್ತೆ.

ಕೊಡಗು ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗ್ ಇದೇ ತಾರೀಖು 8 ನೇ ದಿನ ಮಡಿಕೇರಿ ಮರ್ಕೇರಿ ಹಾಲ್‌ನಲ್ಲಿ ಬೆಳಗ್ಗೆ 10 ಗಂಟೆಗೆ ನಡೆದು ಈ ಕೆಳಗಿನ ಸೊಸೈಟಿಗಳಿಗೆ ಸಾಲದ ಮೊಬಲಗು ಮಂಜೂರಾಗಿದೆ —

(೧) ಕಾರ್ತ್ಮಾಡು ಸೊಸೈಟಿಗೆ ೧೦೦೦ ರೂಪಾಯಿ,
(೨) ಮರನಾಡು ಸೊಸೈಟಿಗೆ ೧೦೦೦ ರೂಪಾಯಿ,
(೩) ಬಾಳೆ-ಗೋಣಕು ಸೊಸೈಟಿಗೆ ೧೦೦೦ ರೂಪಾಯಿ.

ಅಂತು ಜುಮ್ಲಾ ೩೦೦೦ ರೂಪಾಯಿ ಮಂಜೂರಾದ್ದದ್ದು. ಹೊದ್ದೂರು ಸೊಸೈಟಿಯ ಆಡಳಿತ ನಿಗ್ಗರೆ ಮೆ|| ಕೋಳೇರ ಚಿಣ್ಣಪ್ಪನವರು ಇನ್‌ಸ್ಪೆಕ್ಷನ್ ಮಾಡಿ ಕೊಡಬೇಕಾದ ಅವರು ಪತ್ರ ಬರೆದರೆ ೫೦೦ ರೂಪಾಯಿ ಕೊಡಲು ಮಂಜೂರಾಯಿತು. ಸದರಿ ಬ್ಯಾಂಕಿನಲ್ಲು ಅಮಾನತ್ತು ...

ರೂಪಾಯಿಗಳಷ್ಟಕ್ಕೆ ೫೦೦೦ ರೂಪಾಯಿಗಳನ್ನು ಮದ್ರಾಸು ಸೆಂಟ್ರಲ್ ಅರ್ಬನ್ ಕಂಪೆನಿಯಲ್ಲಿ ೧ ವರ್ಷದವರೆಗೆ ಫಿಕ್ಸೆಡ್ (Fixed) ಡಿಪಾಜಿಟ್ಟು ಆಗಿ ಇಡುವಂತೆ ತೀರ್ಮಾನವಾಯ್ತು.

ಮೆ|| ಗೌಡುಗಳ ಸಿದ್ಧಯ್ಯನವರ [illegible]ಪ್ಪನವರು ಬಿ ಎಲ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುತ್ತಾರೆಂತ ತಿಳಿದು ಸಂತೋಷಪಡುತ್ತೇವೆ

ಕೊಡಗು ಕಂಪೆನಿಯ ಪೇಪರ್ ಚಂದಾ ಹಣ ವಗೈರೆ ಹಣ ವಸೂಲಾತಿಬಗ್ಗೆ ಸದರಿ ಕಂಪೆನಿಯ ಏಜೆಂಟರು ಮೆ|| ಕೋಟೇರ ಚಿಣ್ಣಪ್ಪನವರು ಅವರ ಅಸ್ವಸ್ಥತೆಗಾಗಿ ಇನ್ನೊಂದುಕಡೆ ಪ್ರಕಟಿಸಿದಮೇರೆ ದಿನ ಮತ್ತು ಸ್ಥಳ ಮೊಕಾಮಿನಿಂದ ಕ್ಯಾಂಪುಮಾಡುವ ಜಿಲ್ಲೆಯ ಎಲ್ಲರೂ ತಮ್ಮ ಬಾಕಿ ಮೊಬಲಗನ್ನು ಪಾವತಿಯಿಂದ ರಸೀತಿ ಪಡಕೊಳ್ಳಬೇಕಾಗಿ ಕೋರುತ್ತೇವೆ

ಬೊಂಬಾಯಿ ಪ್ರಾಂತ್ಯದ ಕೊಲಬಾ ಡಿಸ್ಟ್ರಿಕ್ಟಿನಲ್ಲಿ ಟಾಟಾ ಪವರ್ ಕಂಪೆನಿಯಲ್ಲಿ ಓವರ್ಸಿಯರ್ ಆಫೀಸರಾಗಿರುವ ಮೆ|| ಕೋದಂಡ ಮುತ್ತಣ್ಣನವರು ತನ್ನ ಕಾಯಿಲೆ ಬದಲೆಯಿಂದ ಮೂರು ತಿಂಗಳು ರಜದಲ್ಲಿ ಮಡಿಕೇರಿಗೆ ಬಂದಿರುವರು

ಪೊನ್ನಂಪೇಟೆಯ ಸೇವಾಸದನದಲ್ಲಿ ಲೇಡಿ ಸೂಪರಿಂಟೆಂಡೆಂಟ್ ಆಗಿರುವ ಕೋದಂಡ ಬೊಳ್ಳವ್ವ ಬಿ ಎ ಯವರು ರಜದಲ್ಲಿ ಕೊಡಗಿಗೆ ಬಂದು ಇದೇ ತಾರೀಖು 9 ರಲ್ಲಿ ಹಿಂತಿರುಗಿ ವಾಪ್ಸು ಹೋದರು

ಮ|| ಪಾಂಡಂಡ ಅಪ್ಪಣ್ಣನವರಿಗೆ ಚಕ್ರವರ್ತಿಯವರ ವರ್ಧಂತಿ ಮೇ ತಾ|| 23 ರಲ್ಲಿ ರಾವು ಸಾಹೇಬ ಎಂಬ ಟೈಟಲ ಬಂದಿದೆ

ಕೊಡಗು ಕಮಿಷನರ್ ಸಾಹೇಬರು ದಕ್ಷಿಣಕೊಡಗಿಗೆ ದಯಮಾಡಿಸಿ ಮರೆನಾಡು ವಗೈರೆ ಎಲ್ಲಾ ಭಾಗಗಳಿಗೂ ಹೋಗಿ ರೈತರ ನಾನಾ ತವಾಲ್‌ಗಳನ್ನು ಕೇಳಿಕೊಂಡು ವಾಪ್ಸು ಬಂದಿರುವರು

ಕೊಡಗು ಚೀಫ್ ಕಮಿಷನರ್ ಸಾಹೇಬರು 1 ತಿಂಗಳವರೆಗೆ ಮಡಿಕೇರಿಯಲ್ಲಿದ್ದು ತಾ|| 7 ರಲ್ಲು ವಾಪ್ಸು ಬೆಂಗಳೂರಿಗೆ ಹೋದರು

ಕಾಸ್ಮೋಪಾಲಿಟನ್ ಕ್ಲಬ್ಬಿನವರು ಕಳದವಾರ ಪ್ರಕಟಿಸಿದಮೇರೆ ಕ್ಲಬ್ಬಿನ ಕೌನ್ಸಿಲ್ ಮೆಂಬರುಗಳಾದ ಮೆ|| ಎನ ವೆಂಕಪ್ಪಯ್ಯ ಬಿ ಎ ಬಿ ಎಲ್ ರವರು, ಮೆ|| ಯಂ ಯಂ ಚಿಣ್ಣಪ್ಪನವರು ಮೆ|| ಯಸ ಯಂ ಪಿಂಟೋರವರು ಈ ಮೂರು ಜನರಿಗೆ ತಾರೀಖು 8 ನೇ ದಿನ ಸಾಯಂಕಾಲ ೪ ಗಂಟೆಯ ಸಮಯಕ್ಕೆ ಫಳಾಹಾರ ಕೊಟ್ಟರು ಅದರೆ ಅದರಲ್ಲಿ [illegible] ಸೇವನೆಯು ಇರಲಿಲ್ಲ ಮೇಲ್ಕಂಡ ಕ್ಲಬ್ಬಿನ ಮೆಂಬರುಗಳಷ್ಟಕ್ಕೆ ಮೆ|| ಸಿದ್ದಂದ ಸುಬ್ಬಯ್ಯನವರು ಎ ತ್ರ ಮೆ|| ಬಿ ಶ್ರೀಪತಿರಾಯರು ಹಾಜರು ಇರಲಿಲ್ಲ

ಮೆ|| ಪಂದಿಕುತಿರ ಜಂಗಪ್ಪನವರು ಎಕನಾಮಿಕ್ಸ ಅರ್ಥಶಾಸ್ತ್ರ 1 ನೇ ತರಗತಿಯಲ್ಲಿ ಪಾಸಾಗಿರುತ್ತಾರೆ

ನಮ್ಮ ಪತ್ರಿಕೆಯನ್ನು ವಿ ಪಿ ಪಿ ಮಾಡುವಾಗ ಚಂದಾ ಮೊಬಲಗು ಸಹ ಸೇರಿ ೩-೧೧-೦ ಆಣೆ ನಮಗೆ ಖರ್ಚು ಬೀಳುತ್ತೆ ಅದ್ದರಿಂದ ಇನ್ನುಮುಂದೆ ಈ ಮೊಬಲಗಿಗೆ ವಿ ಪಿ ಮಾಡಬೇಕಾಗುತ್ತೆ ಇದರಮೇಲೆ ಪೋಸ್ಟಾಫೀಸಿನವರು ಎರಡಾಣೆ ಮಣಿಯಾರ್ಡರ್ ಕಮಿಷನ್ ತೆಗೆದುಕೊಳ್ಳುತ್ತಾರೆ ಆದ್ದರಿಂದ ಈ ನಷ್ಟವನ್ನು ತಪ್ಪಿಸಿಕೊಂಡು ನಮ್ಮ ಏಜಂಟರಿಗೆ ಚಂದಾ ಮೊಬಲಗನ್ನು ಪಾವತಿ ಮಾಡಿ ನಮಗೆ ತಿಳಿಸುವುದು ಉತ್ತಮ ಅಥವಾ ಎರಡಾಣೆ ಖರ್ಚುಮಾಡಿ ಚಂದಾ ಮೊಬಲಗನ್ನು ಮಣಿಯಾರ್ಡರ್ ಮಾಡಿ ಕಳುಹಿಸಿದರೆ ಚಂದಾದಾರರಿಗೆ ಲಾಭವೇ

ಹಿಂದೂದೇಶ.

ವೈಸ್‌ರಾಯರಾದ ರೀಡಿಂಗ್ ಪ್ರಭುಗಳು 3 ತಿಂಗಳು ರಜದಲ್ಲಿ ಇಂಗ್ಲೆಂಡಿಗೆ ಹೋಗುತ್ತಾರೆಂತ ಒಂದು ಪತ್ರಿಕೆಯು ಬರೆದಿದೆ ಹಿಂದುಸ್ಥಾನಕ್ಕೆ ರಾಜಕೀಯಸುಧಾರಣೆಯನ್ನು ಎಷ್ಟರಮಟ್ಟಿಗೆ ಹೆಚ್ಚಿಸಬಹುದೆಂಬದನ್ನು ಯೋಚಿಸಲಿಕ್ಕೆ ಹೋಗುವದೆಂತ ತೋರುತ್ತೆ

ಬಂಗಾಳದ ಪ್ರಾಂತೀಕ ಪರಿಷತ್ತಿನಲ್ಲಿ ಮೆ|| ಡೆ ಎಂಬ ಯೂರೋಪಿಯನನ್ನು ಕೊಂದ ಗೋಪೀನಾಥ ಸಹ ಎಂಬ ಯುವಕನ ದೇಶಭಕ್ತಿಯನ್ನು ಶ್ಲಾಘಿಸುವ ಠರಾವು ಪಾಸಾಯಿತು. ಈ ಠರಾವಿನ ಪರವಾಗಿ ಮೆ|| ಸಿ ಆರ್ ದಾಸರು ಸಹ ಓಟ್ ಮಾಡಿದರು ಇದರಮೇಲೆ ಮಹಾತ್ಮಾ ಗಾಂಧಿಯವರು ಬರೆದಿರುವದೇನೆಂದರೆ—ಈ ಕೊಲೆಪಾತಕ ಮಾಡಿದ ಯುವಕನಲ್ಲಿ ದೇಶಭಕ್ತಿ ಮರಣಕ್ಕೆ ಹೆದರದೆ ಇರುವಿಕೆ ಮುಂತಾದ ಗುಣಗಳಿದ್ದರೂ ಕೊಲೆಪಾತಕಮಾಡಿದ್ದರಿಂದ ಶ್ಲಾಘನೀಯವಲ್ಲವೆಂತ ಬರೆದಿರುತ್ತಾರೆ

ಈ ಠರಾವು ಪಾಸಾದ್ದರಿಂದ ಕಲ್ಕತ್ತಾದ ಯೂರೋಪಿಯನರ ಸಂಘದಲ್ಲಿ ಬಹಳ ಕೋಪವೆದ್ದಿದೆ. ಈ ಠರಾವಿನ ವಿಷಯವನ್ನು ಇಂಗ್ಲೆಂಡಿನಲ್ಲೂ ಇಂಡಿಯಾದಲ್ಲೂ ಕುವಾ[illegible] ಪ್ರಕಟಿಸಿ ಸರಕಾರಕ್ಕೂ ಸಹ ಬರಕೊಳ್ಳಬೇಕೆಂತ ತೀರ್ಮಾನಿಸುತ್ತಾರೆ ರಾಜಕೀಯ ಉದ್ದೇಶದಿಂದ ಕೊಲೆಪಾತಕಕ್ಕೆ ಪ್ರೋತ್ಸಾಹಕೊಟ್ಟಂತಾಯಿತೆಂತ ಇವರ ವಾದವಾಗಿದೆ

ಬಳ್ಳಾರಿ ಮತ್ತು ಅನಂತಪುರ ಜಿಲ್ಲೆಗಳಲ್ಲಿ ಬರಗಾಲ ಬಂದು ದನಗಳಿಗೆ ಮೇವಿಲ್ಲದ್ದರಿಂದ ಸರಕಾರದ ರಿಜರ್ವ ಹುಲ್ಲು ಕಾವಲಿನಿಂದ ಅತಿ ಬಡವರಿಗೂ ಸಿಕ್ಕುವಂತೆ ಚಾರಾಯಿಗೆ ಹುಲ್ಲನ್ನು ಮಾರಲು ಏರ್ಪಾಡುಮಾಡಿದ್ದಾರೆ

ಅಖಿಲ ಭಾರತೀಯ ಕಾಂಗ್ರೆಸ್ ಕಮಿಟಿ ಮೆಂಬರಾಗಿ ಇರಬೇಕಾದರೆ ತಿಂಗಳು ಒಂದು ಹತ್ತುಕೊಟಿ ನೂಲಾದರೂ ಕಯ್ಯಾರೆ ನೂತು ಭಂಡಾರಕ್ಕೆ ಕಳುಹಿಸಬೇಕು ಇದಕ್ಕೆ ಸರಿಯಾದ ಹತ್ತಿಬಿಡಿಸುವದು ಹೊಸೆಯುವದು ಮುಂತಾದ ಕೆಲಸ ಸಹ ಮಾಡಿರಬೇಕು ಈ ಕೆಲಸವನ್ನು ಮಾಡದೆ ಇದ್ದವರು ಕಮಿಟಿಗೆ ರಾಜಿನಾಮೆ ಕೊಟ್ಟರೆಂತಲೇ ಭಾವಿಸಬಹುದು ಎಂತ ತಮ್ಮ ಅಭಿಪ್ರಾಯವನ್ನು ಮಹಾತ್ಮರು ಯಂಗ್ ಇಂಡಿಯಾದಲ್ಲಿ ಬರೆದಿದ್ದಾರೆ

ಕರಾಚಿಯಲ್ಲಿ ಶಾ ವಾಲ್ಲೇಸ್ ಕಂಪೆನಿಯಲ್ಲಿ ಕೆಲಸದಲ್ಲಿದ್ದ ಮೆ|| ಬಾಟ್ ಎಂಬವನು ಕಾಣಿಸದೆಹೋಗಿದ್ದಾನೆ ಇವನ ಮೋಟಾರ್ ಸೈಕಲ್ ಪಟ್ಣದಿಂದ ಸ್ವಲ್ಪ ದೂರದಲ್ಲಿ ಒಂದು ಜರಂಡಿಯಲ್ಲಿ ಬಿದ್ದಿತ್ತು ಬುದ್ಧಿ ಕೆಟ್ಟುಹೋದ ಕಾಲದಲ್ಲಿ ಎಲ್ಲಿಯೋ ಹೊರಟುಹೋಗಿಬಿಟ್ಟಿರಬೇಕೆಂತ ಊಹಿಸುತ್ತಾರೆ

ಪೂನಾದಿಂದ ಮಹಾಬಲೇಶ್ವರಕ್ಕೆ ಹೋಗುವ ದಾರಿಯಲ್ಲಿ ಒಂದು ಮೋಟಾರ್ ಬಸ್ ಬಿದ್ದು ಮುಕ್ಕಾಲು ಘಂಟೆಯಾಗಿತ್ತೆಂತಲೂ ಅದರಲ್ಲಿ ಇದ್ದವರು ತುಂಬಾ ಘಾಯಪಟ್ಟಿದ್ದರೆಂತಲೂ ಆ ದಾರಿಗಾಗಿ ಬಸ್ ಬಿದ್ದ ನಂತರ ಅರ್ಧ ಡಜನ್ ಕಾರ್‌ಗಳು ದಾಟಿದರೂ ಸಹಾಯವನ್ನು ಕೊಡಲಿಲ್ಲವೆಂತಲೂ ಪೊಲೀಸಿನವರು ಬಹಳ ಅಜಾಗರೂಕರಾಗಿದ್ದರೆಂತಲೂ ಮುಂತಾಗಿ ಹೆಚ್ ಯಂ ಮೆಹ್ತಾ ಎಂಬವರು ಬೊಂಬಾಯಿ ಪತ್ರಿಕೆಯೊಂದಕ್ಕೆ ಬರೆದಿದ್ದಾರೆ

ಮದ್ರಾಸ್ ಪಟ್ಟಣದಲ್ಲಿ ರಾಜಮಾಣಿಕಂ ಎಂಬವನನ್ನು ಒಬ್ಬ ಸ್ತ್ರೀ ಮತ್ತು ಮನುಷ್ಯನು ಕೊಂದದ್ದಾಗಿ ಅವನಮೇಲೆ ಮೊಕದ್ದಮೆ ವಿಚಾರ ಪ್ರಾರಂಭವಾಗಿದೆ

ಕೂನೂರಿನಲ್ಲಿ ಜಾನ್ ಎಂಬವನು ಕುದುರೆ ಶರತ್ತಿನ ಪ್ರಾರಂಭದಲ್ಲೆ ಒಂದು ಕಂಭಕ್ಕೆ ತನ್ನ ಕಾಲು ತಗಲಿ ಮುರಿದುಹೋದರೂ ಸಹ ಶರತ್ತಿನಲ್ಲಿ ಸವಾರಿಮಾಡಿ ಎರಡನೇ ಬಂದನು ತನ್ನ ಕುದುರೆಯಮೇಲೆ ಜೂಜು ಕಟ್ಟಿದವರಿಗೆ ಆಶಾಭಂಗವಾಗಬೇಕಲ್ಲಾ ಎಂತ ಕಾಲು ಮುರಿದರೂ ಸಹ ಶರತ್ತಿಗೆ ಸೇರಿದನಂತೆ

ಲೀ ಕಮಿಶನ್‌ನ ಕೆಲವು ಭಾಗಗಳಮೇಲೆ ಸ್ಟೇಟ್ ಸೆಕ್ರೆಟರಿಯವರು ಕೂಡಲೇ ಆರ್ಡರ್ ಮಾಡುತ್ತಾರೆಂತಲೂ ಕೆಲವು ಭಾಗಗಳನ್ನು ಅಸೆಂಬ್ಲಿಯ ಚರ್ಚೆಗೆ ಬಿಡಲಾಗುತ್ತೆಂತಲೂ ಸರಕಾರದ ಅಧಿಕಾರಿಗಳು ಅಸೆಂಬ್ಲಿಯಲ್ಲಿ ಜವಾಬು ಕೊಟ್ಟಿದ್ದಾರೆ ಇದನ್ನು ಚರ್ಚಿಸಲು ಈಗ ಸಮಯ ಸಾಲದರಿಂದ ೨ ತಿಂಗಳು ವಾಯಿದೆ ಕೊಡಬೇಕೆಂಬ ಠರಾವನ್ನು ಸರ್ ಶಿವಸ್ವಾಮಿ ಅಯ್ಯರವರು ತರುತ್ತೇನೆಂತ ತಿಳಿಸಿದ್ದಾರೆ

ರಾಮೇಶ್ವರ ದೇವಸ್ಥಾನದಲ್ಲಿ ಅಬ್ರಾಹ್ಮಣರನ್ನು ತಪ್ಪಿಸಿದ್ದಕ್ಕಾಗಿ ಸತ್ಯಾಗ್ರಹ ನಡೆಸುತ್ತಿರುವದು ಸರಿಯಷ್ಟೆ [illegible] ಗೃಹಿಗಳಲ್ಲಿ ಕೆಲವು ಪೂಜೆ ನಡಿಸಲು ಮುಂದರಿದು ಹೋಗುವಾಗ ಯಾರೋ ಹೊಡೆದು ಸಚ್ಚಿದಾನಂದಸ್ವಾಮಿಗಳಿಗೆ ತಲೆಗೆ ಘಾಯಮಾಡಿದ್ದಾರೆ

ಕಂಚೀಪೀಠದ ಶ್ರೀ ಶಂಕರಾಚಾರ್ಯರು ಹಿಂದೂ ಮತರಕ್ಷಣೆಯು ಅವಶ್ಯವಿದೆಯೆಂತ ಒಂದು ಉಪನ್ಯಾಸ ಕೊಟ್ಟಿದ್ದಾರೆ ಹಿಂದೂ ಧರ್ಮಕ್ಕೆ ಸೇರಿದವರು ಬೇರೆ ಮತಗಳಮೇಲೆ ಪೂರ್ಣ ಸಹಾನುಭೂತಿ ತೋರಿಸುತ್ತಾರಾದ್ದರಿಂದ ಹಿಂದೂಗಳೆಲ್ಲಾ ಬೇರೆ ಜಾತಿಗೆ ಸೇರಿಯೇ ಯಾಕೆ ಮೋಕ್ಷ ಪಡೆಯಬಾರದೆಂಬ ಪ್ರಶ್ನೆ ಕೇಳುವಕಾಲ ಬಂದಿದೆ ಬೇರೆ ಜಾತಿಗಳಲ್ಲಿ ಇರುವವರಿಗೆ ಅವರ ಧರ್ಮದಿಂದ ಮೋಕ್ಷವಾಗಬಹುದೆಂತ ಹಿಂದೂಧರ್ಮ ಹೇಳುತ್ತೆಯೇ ಹೊರತು ಹಿಂದುಗಳು ಸ್ವಧರ್ಮವನ್ನು ಬಿಡಬೇಕೆಂತ ಹೇಳುವದಿಲ್ಲ ಬೇರೆ ಮತಗಳಿಂದಲೂ ಮೋಕ್ಷವಾಗಬಹುದೆಂತ ಹಿಂದೂ ಶಾಸ್ತ್ರ ಹೇಳುತ್ತಾದ್ದರಿಂದ ಹಿಂದೂ ಮತವು ಬಹಳ ದೊಡ್ಡದು ಆ ಧರ್ಮವನ್ನು ಕಾಪಾಡಲು ಸಂಘಟನಾ ಚಳವಳಿಕ್ಕೆ ಎಲ್ಲರೂ ಸಹಾಯಕರಾಗಬೇಕೆಂತ ಹೇಳಿದರು

ಉಕ್ಕಿನ ಸಾಮಾನುಗಳನ್ನು ಪರದೇಶದಿಂದ ಇಂಡಿಯಾದೇಶಕ್ಕೆ ತರಬಾರದೆಂತಲೂ ದೇಶೀಯ ಉಕ್ಕಿನ ಕಾರ್ಖಾನೆಗಳಿಗೆ ಸರಕಾರದವರ ಧನಸಹಾಯ ಕೊಡಬೇಕೆಂತ ಮುಂತಾದ ಶರತ್ತುಗಳಿರುವ ಒಂದು ಮಸೂದೆ ಅಸೆಂಬ್ಲಿಯಲ್ಲಿ ಚರ್ಚೆ ನಡೆಯುತ್ತಿರುವಾಗ ಮೆ|| ಪಟೇಲರು ಟಾಟಾ ಕಾರ್ಖಾನೆಗೆ ಸರ್ಕಾರದ ಧನಸಹಾಯ ಕೊಡಬೇಕಾದರೆ ಅಂಥ ಕಂಪೆನಿಯ ಬಂಡವಾಳದ ಮೂರನೇ ಎರಡು ಭಾಗವಾದರೂ ದೇಶೀಯರದ್ದಾಗಿರಬೇಕೆಂತ ಒಂದು ತಿದ್ದುಪಡಿ ಸೂಚಿಸಬೇಕೆಂತ ವಾದಮಾಡಿದರು. ಇದರಮೇಲೆ ಒಂದು ವಾದಾ ನಡೆದು ಇನ್ನೊಂದು ದಿವಸ ಪುನಃ ಚರ್ಚೆಗೆ ಇಟ್ಟುಕೊಂಡಿದ್ದಾರೆ ಈ ವಿಷಯವು ಮಸೂದೆ ಪಾಸಾಗಲಿಕ್ಕೆ ಸಂಬಂಧವೇ ಇಲ್ಲದ್ದರಿಂದ ಚರ್ಚೆಗೆ ತರಕೂಡದೆಂತ [illegible] ಎಂಬ ದೇಶೀಯ ಅಧ್ಯಕ್ಷರು ಅಭಿಪ್ರಾಯ ಕೊಟ್ಟರೂ ಸಹ ಮೆ|| ಮದನಮೋಹನ ಮಾಳವೀಯರು ಈ ಶರತ್ತನ್ನು ಸೇರಿಸಿಕೊಳ್ಳಲು ಒಪ್ಪದೆಹೋದರೆ ಬಿಲ್ಲು ಪಾಸಾಗಲಿಕ್ಕೇನೇ ಅಡ್ಡಿಮಾಡುವದು ಖಂಡಿತವೆಂತ ಹೇಳಿದಮೇಲೆ ಚರ್ಚೆಗೆ ಬಿಟ್ಟದ್ದಾಗಿದೆ

ಕಾಂಗ್ರೆಸ್ ಸಮಿತಿ ಕಾರ್ಯಕಾರೀ ಮಂಡಳಿಗಳಲ್ಲಿ ಅಸಹಕಾರವನ್ನು ನಂಬಿದವರು ಇರಕೂಡದೆಂತ ಬರೆದದ್ದರಿಂದ ಅವರ ಪ್ರಖ್ಯಾತಿಯು ಇನ್ನು ಇಳಿತರವಾಗುವದೇ ಸರಿಯೆಂತ ಅನೇಕ ಪತ್ರಿಕೆಗಳು ಬರೆದರು ಇದಕ್ಕೆ ತನ್ನ ಮತವು ಬಹುಮತಕ್ಕೆ ವಿರೋಧವಾದರೂ ಸಹ ಪಕ್ಷಕಡ್ಡಿ ತನ್ನ ಮನಸ್ಸಾಕ್ಷಿಗೂ ತಕ್ಕ ನಡಿಯುವವನಲ್ಲವೆಂತ ಬರೆದುಕೊಂಡಿದ್ದಾರೆ

ಬಂಗಾಳ ಪ್ರಾಂತೀಯ ಸಭೆಯಲ್ಲಿ [illegible] ಎಂಬವರು ಮಹಾತ್ಮಾ ಗಾಂಧಿಯವರ ಹೆಸರು ಹೇಳುವಾಗ ಮಹಾತ್ಮಾ ಎಂತ ಸೇರಿಸಿಕೊಳ್ಳಲಿಲ್ಲವೆಂಬ ಕಾರಣದಿಂದ ಒಬ್ಬ ಸಭಿಕರು ಜುಲುಂ ನಡಿಸುವ ವಿರೋಧ ತೋರಿಸಿದರು ಇನ್ನೊಬ್ಬರು ಅವರ ಕಾಲಿನಮೇಲೆ ಎದ್ದು ಬೀಳಿಸಿದರು ಸಭೆಯು ೨೦ ನಿಮಿಷದವರೆಗೆ ಕೆಲಸ ನಿಲ್ಲಿಸಬೇಕಾಗಿ ಬಂತು ಈ ಭಾಷಣಮಾಡುವವರು ಮಹಾತ್ಮ ಹೇಳಲು ಆಗದಿದ್ದರೆ ಅವರನ್ನು ಮಾತಾಡುವದಕ್ಕೆ ಬಿಡುವದೇ ಇಲ್ಲವೆಂತ ಅಧ್ಯಕ್ಷರು ತೀರ್ಮಾನಿಸಿದರು

ಬಂಗಾಳದ ಸಿರಾಜಗಂಜ ಎಂಬಲ್ಲಿ ನಡೆದ ಹಿಂದೂ ಸಭೆಯಲ್ಲಿ ಅಸ್ಪೃಶ್ಯತೆಯನ್ನು ನಾಶಪಡಿಸುವದನ್ನು ಪ್ರತ್ಯಕ್ಷ ತೋರಿಸಬೇಕೆಂತ ಅಧ್ಯಕ್ಷರು ಹೇಳಿದಮೇರೆ ತಿಂಡಿತೀರ್ಥಗಳನ್ನು ಅಸ್ಪೃಶ್ಯರು ಬಡಿಸಿದ್ದನ್ನು ಎಲ್ಲರೂ ಸ್ವೀಕರಿಸಿದರು

ಡಿಲ್ಲಿಯ ಒಂದು ಬಟ್ಟೆ ಕಾರ್ಖಾನೆಯಲ್ಲಿ ಇಂಜಿನ್ ಇದ್ದ ಕೋಣೆಯಲ್ಲಿ ಒಂದು ಆವಿಯ ಕೊಳವೆ ಒಡೆದುಹೋಗಿ ಆವಿ ತುಂಬಿ ಆ ಕೋಣೆಯಲ್ಲಿದ್ದ 18 ಜನರು ಮೃತರಾದರು.

ಚಕ್ರವರ್ತಿಯವರ ವರ್ಧಂತಿ ದಿವಸ ವೈಸರಾಯರು ಚಕ್ರವರ್ತಿಯವರಿಗೆ ತಾನೂ ಹಿಂದುಸ್ಥಾನದವರೆಲ್ಲರೂ ಶುಭವಾಗಲೆಂತ ಹಾರೈಸುತ್ತೇವೆಂತ ಟೆಲಿಗ್ರಾಂ ಕಳುಹಿಸಿದ್ದಕ್ಕೆ ನಿಮ್ಮ ಅಭಿವಂದನಕ್ಕೆ ತಾನು ತುಂಬಾ ಸಂತೋಷಪಡುತ್ತೇನೆಂತ ಚಕ್ರವರ್ತಿಯವರ ಜವಾಬು ಬಂದಿದೆ

ನಾಗಪುರ ಮುಂತಾದ ಸ್ಥಳಗಳಲ್ಲಿ ನಡೆದ ರೈಲ್ವೇ ಸ್ಟ್ರೈಕಿನಿಂದ ಕಂಪೆನಿಗೆ ದಿನ ಒಂದರ 3 ಲಕ್ಷದಮೇಲೆ ನಷ್ಟವಾಯಿತಂತೆ ಕೆಲಸಗಾರರಿಗೂ ಏಜೆಂಟರಿಗೂ ರಾಜಿಯಾಗಿ ಕೆಲಸಕ್ಕೆ ಹೋಗಿದ್ದಾರೆ

ವೈಕಮಿನಲ್ಲಿ ಸತ್ಯಾಗ್ರಹ ನಡಿಯುತ್ತಲೇ ಇದೆ ಶ್ರೀಯುತ ರಾಜಗೋಪಾಲಾಚಾರ್ಯರಿಗೂ ದಿವಾನರಿಗೂ ಸಂಭಾಷಣೆ ನಡಿಯಿತು ಫಲಿತಾಂಶವೇನೆಂತ ಗೊತ್ತಿಲ್ಲ

ಅಮೃತಸರದಲ್ಲಿ ಒಬ್ಬ ತೋಟಿಯ ಹೆಂಗಸನ್ನು ಯಾರೋ ಮುಸಲ್ಮಾನನೊಬ್ಬನು ಹಾರಿಸಿಕೊಂಡುಹೋದನೆಂಬ ಕಾರಣದಿಂದ ಎಲ್ಲಾ ತೋಟಿಗಳೂ ಕೆಲಸಬಿಟ್ಟಿದ್ದಾರೆ

ಸೂರತ್ ಮುನಿಸಿಪಾಲಿಟಿಯು ರಾಷ್ಟ್ರೀಯ ವಿದ್ಯಾಭ್ಯಾಸಕ್ಕೆ ಹಣ ಖರ್ಚುಮಾಡಿದ್ದರಿಂದ ಸರಕಾರದವರು ಮುನಿಸಿಪಲ್ ಮೆಂಬರುಗಳಮೇಲೆ ೧,೦೭,೦೦೦ ರೂ ಗೆ ದಾವಾ ಮಾಡಿತು ಇದರಲ್ಲಿ ೪೦೦೦೦ ರೂ ಗೆ ಡಿಕ್ರಿಯಾಗಿದೆ

ಮಧ್ಯಪ್ರಾಂತ್ಯದಲ್ಲಿ ಸ್ವರಾಜ್ಯಪಕ್ಷದವರಮೇಲೆ ಆರೋಪಣೆಗಳನ್ನು ಹೊರಿಸುವ ಹೆಸರಿಲ್ಲದ ಹಸ್ತಪತ್ರಿಕೆಗಳನ್ನು ಯಾರೋ ಪ್ರಕಟಿಸಿದ್ದಾರೆ ಇವನ್ನು ಸರಕಾರದವರೇ ಪೊಲೀಸಿನವರ ಹಂಚಿಸುತ್ತಿರುವದಾಗಿ ಬಂದಿದೆಯೆಂತ ಹಿಂದು ಪತ್ರಿಕೆಯಲ್ಲಿ ಬರೆದಿದೆ

ವೈಕಮಿನಲ್ಲಿ ಅಕಾಲಿಯರು ಸ್ವಯಂಸೇವಕರ ಪ್ರಯೋಜನಕ್ಕಾಗಿ ಇಟ್ಟಿದ್ದ ಅಡಿಗೆ ಏರ್ಪಾಡನ್ನು ತೆಗೆದುಬಿಟ್ಟು ಅಕಾಲಿಯರು ಅಮೃತಸರಕ್ಕೆ ಹೊರಟುಹೋದರು ಈ ಅಡಿಗೆ ಏರ್ಪಾಡಿಗೆ ಮಹಾತ್ಮರು ಆಕ್ಷೇಪಿಸಿದ್ದರು.

ಕಲ್ಲಿಕೋಟೆಗೆ ಸೇರಿದ ಒಂದು ಹಳ್ಳಿಯಲ್ಲಿ ಒಬ್ಬ ಅ[illegible]ನು ಒಂದು ಕೊಡೆಯನ್ನು ಹಿಡಿದಿದ್ದನು ಅವನು ಒಂದು [illegible]ಗಳಿಗೆ ಪಂಗಡಕ್ಕೆ ಸೇರಿದವನಾದ್ದರಿಂದ ಅವನು ಹಿಡಿಯಕೂಡದೆಂತ ಹೇಳಿ ಜುಲುಂನಿಂದ ಅವನ ಕೈಯಿಂದ ಅದನ್ನು ಒಬ್ಬ ನಾಯರ ಯುವಕನು ಕಿತ್ತುಬಿಟ್ಟನು ಈ ಜುಲುಂ ನಡಿಸಿದ್ದಕ್ಕಾಗಿ ಮೇಜಿಸ್ಟ್ರೇಟರು ಯುವಕನಿಗೆ ಮೂರು ತಿಂಗಳು ಕಠಿಣಶಿಕ್ಷೆ ವಿಧಿಸಿದ್ದಾರೆ

ಗ್ರಾಮ ಪಂಚಾಯ್ತಿಗಳಿಗೆ ಗ್ರಾಮಾಭಿವೃದ್ಧಿ ಕೆಲಸವನ್ನೂ ಕೈಗಾರಿಕೆ ಕೆಲಸಗಳನ್ನು ಬೋಧಿಸಿ ಸ್ಥಾಪಿಸುವ ಕೆಲಸವನ್ನೂ ಕೊಟ್ಟು ಗ್ರಾಮವಾಸಿಗಳಿಗೆ ವೈದ್ಯಸಹಾಯ ಕೊಡುವ ಏರ್ಪಾಡನ್ನೂ ಸ್ಥಳೀಯ ಸ್ವರಾಜ್ಯಮಂತ್ರಿಯು ಏರ್ಪಾಡಿನಲ್ಲಿದ್ದಾರೆಂತಲೂ ಶೀಘ್ರದಲ್ಲೇ ಈ ಭಾಗದಲ್ಲಿ ತನ್ನ ಕಾರ್ಯವನ್ನು ಪ್ರಕಟಿಸುತ್ತಾರೆಂತಲೂ ತಿಳಿದಿದೆ

ವಿದೇಶ.

ಸರ್ ಮೈಕೇಲ್ ಓಡ್ವೈಯರು ಸರ್ ಸಿ ಶಂಕರನಾಯರಮೇಲೆ ಮಾಡಿದ ಸಿವಿಲ್ ದಾವಾದಲ್ಲಿ ೫೦೦ ಪೌಂಡು ಮತ್ತು ಕೋರ್ಟ ಖರ್ಚು ಕೊಡುವಂತೆ ಡಿಕ್ರಿಯಾಗಿದೆ. ಜಡ್ಜಿಯು ಮೊಕದ್ದಮ್ಮೆ ನಡೆಯುತ್ತಿದ್ದಾಗ ಆಡುತ್ತಿದ್ದ ಮಾತುಗಳಿಂದಲೂ ಸಾಕ್ಷಿಗಳನ್ನು ಕೇಳುತ್ತಿದ್ದ ಸವಾಲಗಳಿಂದಲೂ ಹೀಗಾಗುತ್ತೆಂತ ಇಂಡಿಯಾದಲ್ಲಿ ಅನೇಕರು ಊಹಿಸಿದ್ದರು

ಶ್ರೀಯುತ ಸಕ್ಲತ್‌ವಾಲಾರಿಗೆ ಸ್ಟೇಟ ಸೆಕ್ರೆಟರಿಯವರು ಕೋನ ವಾರು ಚುನಾವಣೆಗೆ ಆಕ್ಷೇಪಿಸಿ ಬರೆದ ಕಾಗದದ ವೇಳೆ ಪಾರ್ಲಿಮೆಂಟಿನಲ್ಲಿ ಸವಾಲ್‌ಜವಾಬ್‌ಗಳು ನಡೆದು ಅವನ್ನು ಎತ್ತಿದ್ದರಿಂದ ಬ್ರಿಟಿಷ್ ಸರಕಾರದ ಕೆಲಸಗಳು ಸ್ಥಿರವಲ್ಲದವೆಂಬ ಭಾವ ಹುಟ್ಟಬಹುದೆಂತ ಒಂದು ಪತ್ರವೂ ಈ ಕಾಗದಕ್ಕೆ ಇಷ್ಟು ಬೆಲೆ ಕೊಡಬಾರದಿತ್ತೆಂತ ಇನ್ನೊಂದು ಪತ್ರವೂ ಬರೆದಿವೆ

ಇಟಲಿ ರಾಜರು ಸ್ಪೇನ್ ದೇಶಕ್ಕೆ ಹೋಗಿದ್ದಾರೆ

ಪಾರ್ಲಿಮೆಂಟಿನ [illegible] ಕಮಿಟಿಯವರು ಗಂಡಸರಂತೆ ಹೆಂಗಸರಿಗೂ ಓಟ್ ಕೊಡುವ ಹಕ್ಕನ್ನು [illegible]ಕೆಂತ ತೀರ್ಮಾನಿಸಿದ್ದಾರೆ.

ವಸಾಹತುಗಳ ಮಂತ್ರಿ ಮೆ॥ ಥೋಮಸ್‌ರ ಖಾಯಿಲೆ ವಾಸಿಯಾಗಿದೆ

ಇಂಗ್ಲೆಂಡಿನಲ್ಲಿ ಲಾರ್ಡ್ ಆಂಪ್ಟ್‌ಹಿಲ್ ಎಂಬವರ ಸೊಸೆಗೆ ಹುಟ್ಟಿದ ಮಗು ಅವಳ ಗಂಡನಿಗೆ ಹುಟ್ಟಿದ್ದಲ್ಲ ಎಂಬದಾಗಿ ಗಂಡನು ಮಾಡಿದ ವ್ಯಾಜ್ಯದಲ್ಲಿ ಕೆಳಕೋರ್ಟಿನಲ್ಲಿ ಗಂಡನಿಗೆ ಡಿಕ್ರಿಯಾಯಿತು ಅಪ್ಪೀಲಿನಲ್ಲಿ ಹೆಂಡತಿಗೆ ಗುಣವಾಯಿತು

ಟರ್ಕಿಯವರಿಗೂ ಇಟಲಿಯವರಿಗೂ ಸ್ವಲ್ಪ ಮನಸ್ತಾಪ ಬೆಳೆದಿದೆ ಸ್ಮರ್ನಾದ ಮಿಲಿಟರಿಯವರು ಎಚ್ಚರವಾಗಿರುವಂತೆ ಟರ್ಕಿ ಸರ್ಕಾರದ ಹುಕುಂ ಆಗಿದೆ

ಇಂಡಿಯಾದೇಶದ ಟೀ ಪ್ಲಾಂಟರ್‌ಗಳ [illegible] ಘಾಯಿಡೆ ಇದುವರೆಗೂ ಟೀಗೆ ಇನ್ನ [illegible] ಮಾಡಿದ್ದರಿಂದ ಇಂಗ್ಲೆಂಡಿನಲ್ಲಿ ಟೀ ಹೆಚ್ಚು ಖರ್ಚಾಗದು ದೆಂತಲೂ ರಶ್ಯಾದೇಶದವರೊಂದಿಗೆ ಸ್ನೇಹವೆಳೆಸುವದರಿಂದಲೂ ರಶ್ಯಾದಲ್ಲಿ ಇಂಡಿಯಾದ ಟೀ [illegible] ಕುಂಟಾ ಅಪೇಕ್ಷಿಸುವದರಿಂದಲೂ ಟೀ ಪ್ಲಾಂಟರುಗಳಿಗೆ ಚೆನ್ನಾಗಿ ಕ್ರಯ ದೊರೆಯುವುದೆಂತ ಒಂದು ಊಟದ ಭಾಷಣದಲ್ಲಿ ಸ್ಟೇಟ ಸೆಕ್ರಿಟರಿಯವರು ಹೇಳಿದರು

ಅಮೇರಿಕಾದಲ್ಲಿ ನಿಷಿದ್ಧ ಪದಾರ್ಥವನ್ನು ಸಮುದ್ರದ ಹಡಗುಗಳಮೂಲಕ ಕಳ್ಳ ಮಾರಲಿಕ್ಕೆ ಪ್ರಯತ್ನಮಾಡುವವರು ದಂಗೆಖೋರರೆಂತ ಭಾವಿಸಲ್ಪಟ್ಟು [illegible] ವರ್ಷ ಸಜಾಕ್ಕೆ ಗುರಿಯಾಗಬೇಕೆಂಬ ಖಾನೂನು ಮಾಡುವ ಏರ್ಪಾಡಿನಲ್ಲಿದ್ದಾರೆ

ಅಮೇರಿಕಾದಲ್ಲಿ ಕಳೆದ ಒಂದು ವರ್ಷದಲ್ಲಿ ೧೦೦೦೦ ಖೂನಿ ಮೊಕದ್ದಮೆಗಳಾದವು

ಇಂಗ್ಲೆಂಡಿನಲ್ಲಿ ರೈಲ್ವೇ ಕೆಲಸಗಾರರ ಸಂಪು ನಡೆಯುತ್ತಿದೆ 55 ರೈಲ್ವೇ ಸ್ಟೇಶನ್‌ಗಳು ಮುಚ್ಚಲ್ಪಟ್ಟಿವೆ

ಅಲ್ಬೇನಿಯಾದಲ್ಲಿ ಜನರೊಳಗೇನೇ ಎರಡು ಪಂಗಡಗಳೊಳಗೆ ಯುದ್ಧ ನಡೆಯುತ್ತಿದೆ

ಸ್ಕೂಲ್‌ಫೈನಲ್ ರಿಸಲ್ಟ್

(ಮೆ॥ ಕೆ ಪಿ ಚಿಣ್ಣಪ್ಪನವರು)

40 (ಪ್ರ) (a) 1920 ರ ಪರೀಕ್ಷೆಯಲ್ಲಿ ಕೊಡಗಿನ ಡೆ ಯಾಟವರ ಶೇಕಡ ದರ ಎಷ್ಟು?

(b) ಯಾವ ಸಬ್ಜೆಕ್ಟಿನಲ್ಲಿ ಸೋತವರ ಸಂಖ್ಯೆ ಹೆಚ್ಚು? ಇದು ಯಾಕೆ? ಮತ್ತು ಈ ನ್ಯೂನತೆಯನ್ನು ಹೋಗಲಾಡಿಸುವದಕ್ಕೆ ಯಾವ ಏರ್ಪಾಡು ಮಾಡಿರುತ್ತೆ

40 (ಉ) (a) 28 3% (b) ಇಂಗ್ಲಿಷ್‌ನಲ್ಲಿ (c) ಇದರ ಕಾರಣಗಳು ಬಹಳ ಪುರಾತನವಾದುವು ಸ್ಥಳ ಸಂಕೋಚವೂ ಮತ್ತು ಕೆಳತರಗತಿಗಳಲ್ಲಿ ಕಲಿಸುವ ವಿಧಾನದ ನ್ಯೂನತೆಯೂ ಮುಖ್ಯ ಕಾರಣಗಳಾಗಿವೆ (d) ಬೋಧನಾಕ್ರಮವನ್ನು ಉತ್ತಮಪಡಿಸಲು ಯೋಗ್ಯ ಏರ್ಪಾಡು ಮಾಡುತ್ತಲಿದೆ

ಎ ದೈ

41 (ಪ್ರ) (a) ಮಡಿಕೇರಿ ಹೈಸ್ಕೂಲಿನ ಹಾಲಿ ಹೆಡ್ಮಾಸ್ಟರು ಯಾವ ದರ್ಜೆಯಲ್ಲಿ ಇದ್ದಾರೆ

(b) ಅವರಿಗಿರುವ ವಿಶೇಷ ಯೋಗ್ಯತೆಗಳಾವವು

(c) ಅವರಿಗೆ ಎಷ್ಟುವರ್ಷಗಳ ಹೈಸ್ಕೂಲ್ ಹೆಡ್ ಮಾಸ್ಟರ್ ಕೆಲಸದ ಅನುಭವವಿದೆ?

(d) ಅವರಿಗೆ ಸರ್ವಿಸು ಎಷ್ಟಾಗಿದೆ?

41 (ಉ) (a) ಹೈಸ್ಕೂಲ ಹೆಡ್ಮಾಸ್ಟರ ಪದವಿಯು ಇಂಡಿಯನ್ ಎಜ್ಯುಕೇಶನ ಸರ್ವಿಸ್‌ನಲ್ಲಿದೆ ಈಗಿನ ಹೆಡ್ಮಾಸ್ಟರು ಮದ್ರಾಸ್ ಎಜ್ಯುಕೇಷನಲ್ ಸರ್ವಿಸ್ಸಿಗೆ ಸೇರಿದವರು

(b) ಅವರು ಗ್ರ್ಯಾಜುಯೇಟರು ಮತ್ತು ಎಲ್ ಟಿ ಪರೀಕ್ಷೆ ಪಾಸಾಗಿದ್ದಾರೆ

(c) 1—4—1923 ರಿಂದ

(d) 28 ವರುಷ 8 ತಿಂಗಳು

42 (ಪ್ರ) (a) ಮಡಿಕೇರಿ ಮತ್ತು ವೀರಾಜಪೇಟೆ ಹೈಸ್ಕೂಲಗಳಲ್ಲಿ ಎಷ್ಟು ಗ್ರ್ಯಾಜುಯೇಟರುಗಳ ಕೆಲಸಗಳಿವೆ

(b) ಪ್ರತಿ ಶಾಲೆಯಲ್ಲಿ ತರಬೇತಾದ ಉಪಾಧ್ಯಾಯರು ಎಷ್ಟುಮಂದಿ?

(c) ಕೊಡಗೇತರರು ಎಷ್ಟು ಮಂದಿ ಇದ್ದಾರೆ?

42 (ಉ) (a) ಹೆಡ್ಮಾಸ್ಟರ್ ವಿನ ಎರಡುಶಾಲೆಗಳಲ್ಲಿ ಒಂದೇರೀತಿನ ಹನ್ನೊಂದು ಗ್ರ್ಯಾಜುಯೇಟ್ ಕೆಲಸಗಳಿವೆ ಏಳು ಮಡಿಕೇರಿಯಲ್ಲಿ ನಾಲ್ಕು ವೀರಾಜಪೇಟೆಯಲ್ಲಿ

(b) ತರಬೇತಾದವರು ಮಡಿಕೇರಿಯಲ್ಲಿ 5 ವೀರಾಜಪೇಟೆಯಲ್ಲಿ 2

(c) 5

43 (ಪ್ರ) (a) ಪ್ರೈಮರಿಶಾಲೆಗಳು ಯಾರ ಹತೋಟಿಯಲ್ಲಿವೆ?

(b) ಮಾಡೆಲ್‌ಸ್ಕೂಲ್‌ಗಳಿಗೂ ಮತ್ತು ಇತರ ಪ್ರೈಮರಿ ಸ್ಕೂಲ್‌ಗಳಿಗೂ ಇರುವ ವ್ಯತ್ಯಾಸವೇನು?

(c) ಮಡಿಕೇರಿ ಮಾಡೆಲ್‌ಸ್ಕೂಲ್ ಈಗ ಯಾರ ಕೈಕೆಳಗಿದೆ

43 (ಉ) (a) ಪಬ್ಲಿಕ ಶಾಲೆಗಳೆಲ್ಲಾ ಶಾಲಾ ಇನ್ಸ್ಪೆಕ್ಟರರ ಕೈಕೆಳಗಿವೆ ಖಾಸಗಿಶಾಲೆಗಳೆಲ್ಲಾ ಮ್ಯಾನೇಜರುಗಳಿಂದಾಗಲಿ ಅಥವಾ ಇತರ ಸಂಸ್ಥೆಗಳಿಂದಾಗಲಿ ನೋಡಿಕೊಳ್ಳಲ್ಪಡುತ್ತದೆ

(b) ಮಾಡೆಲ ಶಾಲೆಗಳು ಇತರ ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವ ಶಾ[illegible]ಗಳಿಗೆ ಮಾದರಿ ಶಾಲೆಗಳಾಗಿ ಸರ್ಕಾರದಿಂದ ನಡೆಸಲ್ಪಡುತ್ತವೆ

(c) ಮಡಿಕೇರಿ ಮಾಡೆಲ್‌ಸ್ಕೂಲ ಹೈಸ್ಕೂಲ ಹೆಡ್ಮಾಸ್ಟರ್ ಕೈಕೆಳಗಿದೆ

44 (ಪ್ರ) (a) ವೀರಾಜಪೇಟೆಯಲ್ಲಿರುವ ಬೋರ್ಡಿಂಗ್‌ಮನೆಯು ಮಡಿಕೇರಿಯ ದರದಂತೆಯೇ ಸರಕಾರದ ಆಡಳಿತದಲ್ಲಿದೆಯೋ?

(b) [illegible]ನೋ?

(c) [illegible]?

(d) ಈಗ ಬೋ[illegible] ವೃದ್ಧಿಯಾಗಿದೆಯೋ?

(e) [illegible]ದೆಯೋ?

44 (ಉ) (a) [illegible] ಬೋರ್ಡಿಂಗ ಹಾಸ್ಟೆಲ್ [illegible] 148 ಸಂಖ್ಯೆ [illegible] ಸರ್ಕಾರ ಸಂಸ್ಥೆ ಆಗಿದೆ

(b) [illegible] ಉಪಾಧ್ಯಾಯರ [illegible] ಪಾರ್ಟ್‌ಟೈಮ್‌ಗಾರರನ್ನಾಗಿ ನೇಮಿಸಿದೆ

(c) [illegible] ತಿಂಗಳೊಂದರ [illegible]

(d) [illegible] ಡಿಸಂಬರ್ 1921 ರಲ್ಲಿ 29 ಹುಡುಗರು [illegible] 1922 ರಲ್ಲಿ 43 ಹುಡುಗರು 1923 ನೇ ಇಸವಿಯಲ್ಲಿ 58 ಹುಡುಗರು ಮತ್ತು ಈಗ ಹಾಸ್ಟೆಲ್‌ನಲ್ಲಿ 19 ಹುಡುಗರು ಇದ್ದಾರೆ

(e) ಇಲ್ಲ (ಮುಂದುವರಿಯುವದು)

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪ್ರಕಾಶಕರು ಉತ್ತರವಾದಿಗಳಲ್ಲ [ಎಡಿಟರ್]

ಅಯ್ಯಾ ಎಡಿಟರವರೇ

[illegible]

ಮಾಡಲ್ಪಡುತ್ತೇವೆ

[illegible]

—

[illegible] ಅಧ್ಯಕ್ಷರಾದ ಮ॥ ರಾ॥ [illegible] ಊಟಪ್ರಕಾರವನ್ನು ಅತಿ ಸತ್ಕಾರದಿಂದ ನಡೆಸಿದರು ಮೊದಲೇ ಅಧ್ಯಕ್ಷರಾಗಿ [illegible] ಮ॥ ರಾ॥ [illegible] ಅವರಿಗೆ [illegible] ತಿಳಿಸಿದಕ್ಕೆ ತುಂಬಾ [illegible] ಹಾಜರಿದ್ದವ

—

ವೀರರಾಜಪೇಟೆ ಬೋರ್ಡ್ ಸ್ಕೂಲ್

ಈ ಶಾಲೆಗೆ ಬರುವಂಥ ಹುಡುಗರಲ್ಲಿ ಕೆಲವರು ೩-೪ ಮೈಲು ದೂರದ ಹಳ್ಳಿ ಹುಡುಗರು ಶಾಲೆಗೆ ಹೋಗುವಾಗ ಮಳೆಗಾಲದಲ್ಲಿ ಇವರು ಅನೇಕ ಹೊಳೆ ತೋಡುಗಳನ್ನು ದಾಟಿ ಬರುತ್ತಾರೆ ಮತ್ತು ಬೇಸಿಗೆ ಕಾಲದಲ್ಲಿ ಕೆಲವು ಸಮಯದಲ್ಲಿ ಬಿಸಿಲಿನಲ್ಲಿ ಬೇಯಬೇಕಾಗಿರುತ್ತೆ ಇದು ಬಹಳ ತೊಂದರೆಯಾದರೂ ಇವರು ಇಲ್ಲಿಯ ಹೈಸ್ಕೂಲ್ ಮತ್ತು ಗರ್ಲ್ಸ್ ಸ್ಕೂಲ್‌ಗಳಲ್ಲಿ ಇರುವ ಅಣ್ಣತಮ್ಮಂದಿರುಗಳು ಮತ್ತು ಅಕ್ಕತಂಗಿಯರೊಡನೆ ಬರುವುದರಿಂದ ಈ ಕಷ್ಟವು ಸ್ವಲ್ಪಮಟ್ಟಿಗೆ ಪರಿಹಾರವಾಗುತ್ತೆ ಆದರೆ ಪ್ರತಿ ಶನಿವಾರ ಮೇಲಿನ ಎರಡು ಶಾಲೆಯವರಿಗೂ ರಜ ಇರುವುದರಿಂದ ಬೋರ್ಡ್ ಸ್ಕೂಲಿಗೆ ಹೋಗುವಂಥ ಸಣ್ಣ ಹುಡುಗರು ಅವರ ಅಣ್ಣ ಅಕ್ಕಂದಿರುಗಳು ಜೊತೆಗೆ ಇಲ್ಲದಿರುವುದರಿಂದ ತಾವು ಸಹ ಶಾಲೆಗೆ ಹೋಗುವುದಿಲ್ಲವೆಂದೂ, ಅನೇಕ ತಂದೆತಾಯಿಗಳು ಅವರಿಗೆ ಬಲವಂತದಿಂದ ಶಾಲೆಗೆ ಹೋಗಬೇಕೆಂದೂ ಹೇಳುವುದು ಸಹಜವಾಗಿದೆ ಅಲ್ಲದೆ ಶನಿವಾರ ಹೋಗದೆ ಇರುವುದಕ್ಕೆ ಶಾಲೆ ಉಪಾಧ್ಯಾಯರಿಂದ ಶಿಕ್ಷೆ [illegible] ಮತ್ತು [illegible] ಹುಡುಗರು ತಂದೆತಾಯಿಗಳನ್ನು [illegible] ಕೊಡುತ್ತಾರೆ ಹೀಗಿರುವುದರಿಂದ ಆ ದಿನದಲಿ ಎಷ್ಟು ಮಕ್ಕಳು [illegible] ಬಿಟ್ಟಿರುತ್ತಾರಲ್ಲವೇ? ಅಲ್ಲದೆ ಹೋಗುವಂಥ ಸ್ವಲ್ಪ [illegible] ಕ್ಲಾಸು [illegible] 12½ [illegible] ಮಳೆಯ [illegible] ಮನೆಗೆ ಹೋಗಿ 1½ [illegible] 2 ಘಂಟೆಗೆ ಊಟಮಾಡು [illegible] ದೊಡ್ಡ [illegible] ಸಣ್ಣ ಹುಡುಗರಿಗೆ [illegible] ನಿಜವಾಗಿ [illegible] ಯಲ್ಲವೇ? [illegible] ತೊಂದರೆಗಳಿಗೆ ಗುರಿಪಡಿಸದಂತೆ ಈ ಶಾಲೆಯ ಹುಡುಗರಿಗೆ ಆದಿನಗಳಲ್ಲಿ ರಜಕೊಡುವುದರಿಂದ ಆಗುವ ನಷ್ಟವೇನು ? ಇದಕ್ಕೆ ಅಧಿಕಾರಿಗಳು ಸಮ್ಮತಿಸುವುದಿಲ್ಲವೇ?

ಮಕ್ಕಳ ಅಣ್ಣ

—

ಅಯ್ಯಾ ಎಡಿಟರವರೇ, ನನ್ನ ಒಂದು ವಿಜ್ಞಾಪನೆಯನ್ನು ಈ ಕೆಳಗೆ ವಿವರಿಸಿಕೊಂಡಿರುತ್ತೇನೆ ದಯವಿಟ್ಟು ಕೊಡಗು ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ವಂದನೆಪೂರ್ವಕ ಕೇಳಿಕೊಳ್ಳುತ್ತೇನೆ

ಐ ಎನ್ N ಚಿಣ್ಣಪ್ಪನವರು—ನೀವು ಕೊಡವ ಪಟ್ಟೋಲೆ ಪಳಮೆಯೆಂಬ ಪುಸ್ತಕವನ್ನು ಅನೇಕ ಕ್ರಮ [illegible] ಪ್ರಕಟಿಸಿದ್ದೀರಿ [illegible] ಸ್ವಲ್ಪವೇ ಸರಿ ಅವರೆ [illegible] ಆ ಪುಸ್ತಕವನ್ನು [illegible] ನೋಡಲಿಲ್ಲ [illegible] ಕೆಲವು ಸಂಗ್ತಿ ತಿಳಿದೂ ಇದು ಆ ವ್ಯಕ್ತಿ [illegible] ವಿವಾದವಾಗಿದ್ದಾರೆಂದು [illegible] ಕಲ್ಲನ್ನು [illegible] ಯಳೆಯುವುದು ಇದರ [illegible] ಪ್ರಾರಂಭವಾಗಿದೆ [illegible] ಇದೆ ಎಲ್ಲವನ್ನೂ [illegible] ತಿಳಿಯದಲ್ಲ ಇದನ್ನು ದಿಕ್ಕಿಗೆ [illegible] ಇರುವುದಿಲ್ಲ ಈ ಕೆಳಗಿನ [illegible] ಕೊಡಗು ಪತ್ರಿಕೆಯಲ್ಲಿ ಎಲ್ಲ [illegible] ಪ್ರಕಟಿಸಬೇಕಾಗಿ [illegible] ಇದ್ದೇನೆ

[illegible] ತಳರಾದ ತೇಲಪಂಡ ಮನೆಯವರು, ೧ ನೇ [illegible] ಪಟ್ಟಮಾಡ ಮನೆಯವ, ೩ ನೇ ತಕ್ಕರಾದ [illegible] ಗಾಡಂಡ ಮನೆಯವರು ಎಂದು ಈಗಲೂ ಸಹ ನಾಡ[illegible]ನಲ್ಲಿ ಮತ್ತು ಊರು ಮಂದಿನಲ್ಲಿ ಸಹ ನಡವಳಿಕೆ ನಡೆಯುತ್ತಾ ಇದೆ ಈಗ ತಾವು ಸ್ಥಾಪಿಸಿದ ಒಕ್ಕಿನಲ್ಲಿ [illegible] ಪಟ್ಟಮಾಡ ಮನೆಯವರು, ೨ ನೇ ಕಲ್ಲುಮಾಡಂಡ [illegible] ಮನೆಯವರು, ೩ ನೇ ತೇಲಪಂಡ ಮನೆಯವರು ಎಂದು ಬರೆದಿಯಾದ್ದರಿಂದ ಇದು ಕೈತಪ್ಪಿನಿಂದ ಬರೆದಿರಬಹುದಾಗಿ ನಂಬುತ್ತೇನೆ ಹಾಗೆ ಕೈತಪ್ಪು ಆಗಿದ್ದಪಕ್ಷದಲ್ಲಿ ತಿದ್ದುಪಡಿಮಾಡಬೇಕಾಗಿ ಕೋರುತ್ತೇನೆ ಅಥವ ನೀವು ಬರೆದದ್ದು ನ್ಯಾಯವಾದ ಸಂಗ್ತಿಗಳಾದಪಕ್ಷದಲ್ಲಿ ಪಟ್ಟಮಾಡ ಮನೆಯವರ ಐನ್‌ಮನೆ ಭೂಮಿಯಲ್ಲಿ ಅವರಿಗೆ ಹ್ಯಾಗೆ ತಕ್ಕಾಮೆ ದೊರಕಿದ್ದು ಅವರು ಬಂದಕಾಲವೊ, ಬೇಂಗೂರುನಲ್ಲಿ ಬಂದು ನಿಂತಕಾಲವೊ ಪೂರ್ವರಾಜರ ಕಾಲದಲ್ಲಿ ಬೇಂಗು ನಾಡಿನಲ್ಲಿ ಹಳೆ ಪ್ರೊಕ್ಕಲಾಗಿ ಯಾರ್ಯಾರ ಮನೆಗಳದ್ದವು ತಕ್ಕಾಮೆಗಳು ಯಾವಲ್ಲಿಂದ ಬಂದ್ದುದವು ಇಷ್ಟು ಸಂಗ್ತಿಗಳನ್ನು ತಿಳಿಯಲು ನಾನು ಬಹಳ ಕುತೂಹಲವುಳ್ಳವನಾಗಿ ಇದ್ದೇನೆ ತಕ್ಕಾಮೆಂಬುದು ಬ್ರಿಟಿಷ್ ಗವರ್ನ್ಮೆಂಟಿನವರ ಕಾಲದಲ್ಲಿ ಆದದ್ದಲ್ಲ, ರಾಜರ ಕಾಲದಲ್ಲಿ ಆದಂತಹದ್ದಾಗಿದೆ ತಕ್ಕಾಮೆಯನ್ನು ಬಿದ್ದುಹೋಗಿ ಮುಖ್ಯವೂ ಸಾಮಾನ್ಯವಾದದಲ್ಲ ಬಾಕಿ ಸಂಗ್ತಿಗಳಿಗೆ ಹೆಚ್ಚು ವಿವರವನ್ನು ತಿಳಿದು ಬರಕೊಳ್ಳುತ್ತೇನೆ

ಟಿ ಮಾಚಯ್ಯ

"ಸೇಗು ಅರ್ಜಿ"

ಬೆಳೆಯು ಸೇಗು ಬೇದರೆ ರೈತರು ಕಂದಾಯ ಮಾಫಿಗಾಗಿ ಅರ್ಜಿ ಜಮಾಬಂದಿ ಅಧೀಸರುಗಳಿಗೆ ಬರ ಕೊಳ್ಳುವುದು ಸರಿಯಷ್ಟೆ

ಆದರೆ ಅರ್ಜಿಯನ್ನು ತನಿಖೆ ವಿಚಾರಮಾಡಿ ಆರ್ಡರ ಸಿಕ್ಕಬೇಕಾದರೆ ಕೆಲವುಕಾಲ ವಿಳಂಬವಾಗುತ್ತ ಅಷ್ಟರವಳಗೆ ನಾಡು ಕಚೇರಿಯಿಂದ ಕಂದಾಯಕ್ಕೆ ಪ್ರೋಸೆಸ್, ವಾರಂಟು ನೋಟೀಸು ದಿನಂಪ್ರತಿ ಬಿಡಾಡುತ್ತಾಯಿರುತ್ತೆ ಇದರ ಹಾವಳಿಯನ್ನು ತಪ್ಪಿಸಲಿಕ್ಕೆ ಮನೆಯೂ ಭೂಮಿಯೂ, ಸಾಮಾನುಗಳೂ ಜಪ್ತಿಯಾಗುತ್ತದೆಂಬ ಹೆದರಿಕೆಯಿಂದಲೂ, ವಾರಂಟು ಚಾರ್ಜ್, ಪ್ರೋಸೆಸ್ ೦-೪-೦ ಯನ್ನು ಸಹ ತೆರಬೇಕಾಗುತ್ತದೆಂಬ ಹೆದರಿಕೆಯಿಂದ ಕಂದಾಯವನ್ನು ಮಾಮೂಲುಮೇರೆ ಕಟ್ಟಿಬಿಡುತ್ತಾರೆ. ಕ್ಯಾಸುಭೋಗರುಗಳನ್ನು ಊರ ಗೌಡರನ್ನು (ಪಟೇಲರುಗಳು) ಕೇಳಿದರೆ ಹೇಳುವುದೇನಂದರೆ—ಈಗ ಕಂದಾಯ ಕಟ್ಟಿಬಿಡಿ ನಿಮಗೆ ಕಂದಾಯ ಮಾಫಿಯಾಗಿ ಬಂದರೆ ನಿಮ್ಮ ಕಂದಾಯವನ್ನು ವಾಪಸು ಕೊಡುತ್ತೇವೆಂಬದಾಗಿ ಹೇಳುತ್ತಾರೆ. ಈ ಭಾವನೆಯಿಂದ ಕಂದಾಯ ಕಟ್ಟಿಬಿಡುತ್ತೇವೆ. ಹಿಂದೆ ಕಚೇರಿಗಳಿಗೆ ಎಷ್ಟು ಓಡಾಡಿದರೂ ಜವಾಬಿಯಿಲ್ಲ. ಪಟೇಲರುಗಳನ್ನು ನನ್ನ ಅರ್ಜಿಯೇನಾಯ್ತು ಎಂದು ಕೇಳಿದರೆ "ಹೋಗಿ, ಹೋಗಿ, ಮಾತಾಡಬೇಡಿ, ಊರಿಗೆ ಬಂದರೆ ಒಂದು ಗ್ಲಾಸು ಕಾಫಿ, ಹಾಲು, ಅನ್ನ ಕೊಡುವವರು ಯಾರೂ ಇಲ್ಲ. ಕೊತ್ತಿಯು ಕಣ್ಣು ಮುಚ್ಚಿಕೊಂಡು ಹಾಲು ಕುಡಿಯುವರೀತಿ" ನೀವು ಮನೆಯೊಳಗೆ ಅವಿತುಕೊಂಡು ಊಟಮಾಡುತ್ತೀರಿಯೆಂದು ಹೇಳುತ್ತಾರೆ ಮತ್ತು ಶಾಗಾರರಿಗೂ ಸಹ ನಿಮ್ಮ ಮೇಲೆ ಸಿಟ್ಟುಯೆಂದು ಹೇಳುತ್ತಾರೆ ಯಾಕೆಂದು ಕೇಳಿದರೆ, ಅವರು ಊರಿಗೆ ಬಂದರೆ ನಿಮ್ಮ ಊರಲ್ಲಿ ಯಾರೂ ಸತ್ಕಾರಮಾಡುವವರೂಯಿಲ್ಲ ನಿಮ್ಮಗಳಿಗೆಲ್ಲಾ ಕಂದಾಯ ಹೇಗೆ ಮಾಫಿ ಸಿಕ್ಕುತ್ತೆಯೆಂದು ಹೇಳುತ್ತಾರೆ. ಶಾಗಾರರ ಜೊತೆಯಲ್ಲಿ ಸುಮಾರು ೪ ಜನರು ಇರುತ್ತಾರೆ. ಗರೀಬನು ಏನು ಕೊಟ್ಟಾನು ಸಾಲಮಾಡಿ ಊಟ ಉಪಚಾರ ಕೊಟ್ಟರೂ ತೃಪ್ತಿಯಿಲ್ಲ. ಕಡೆಗೆ "ದರ್ವೇಶಾನು" ಎಂದು ರಿಮಾರ್ಕ್ಸ್ ಹೇಳುತ್ತಾರೆ ಕಾನೂನುಗಾರರಿಗೆ ಕಂದಾಯ ಮಾಫಿ ಸಿಕ್ಕುತ್ತೆ ವಿದ್ಯೆ ಇಲ್ಲದವರಿಗೆ ಇಲ್ಲವೇಯಿಲ್ಲ ಈ ವರ್ಷ ಎಷ್ಟೋ ಜನರಿಗೆ ಕಂದಾಯ ಮಾಫಿಯಾಯಿತು ಎಷ್ಟೋ ಜನರಿಗೆ ಸಿಕ್ಕಲಿಲ್ಲ ಮಾಫಿಯಾಗಿ ಬಂದ ಕಂದಾಯವನ್ನು ಸಹ ರೈತರಿಗೆ ಪಹ ಕೊಡದೆ ಹಿಂದಕ್ಕೆ ವಾಪಸುಮಾಡುತ್ತಾರೆಂಬ ವರ್ತಮಾನ ಇದರಿಂದ ರೈತರ ಅರ್ಜಿಗೆ ಹುಕುಂ ಸಿಕ್ಕುವವರೆಗೆ ಪ್ರೋಸೆಸ್, ವಾರಂಟು, ಬಡ್ಡಿ ಇತ್ಯಾದಿಗಳನ್ನು ನಿಲ್ಲಿಸಬೇಕಾಗಿಯೂ, ಇದರ ವಿಷಯ ರೈತರಿಗೆ ಯಾವದೊಂದೂ ತೊಂದರೆ ಬಾರದಂತೆ ತಕ್ಕ ಬಂದೋಬಸ್ತು ಮಾಡಬೇಕಾಗಿ ಘನ ಸರಕಾರದವರನ್ನು ಬೇಡಿಕೊಳ್ಳುತ್ತೇವೆ

ಮಲಚೀಳರ ಯಸ್. ಬೆಳ್ಯಪ್ಪ

N. B.—ಕೌನ್ಸಿಲ್ ಮೆಂಬರುಗಳು ಸಹ ಇದನ್ನು ಗಮನಕ್ಕೆ ತಂದುಕೊಂಡು ಬಡರೈತರಿಗೆ ಅನುಕೂಲವಾಗಿ ಅರ್ಜಿಗೆ ಹುಕುಂ ಬರುವವರೆಗೆ ಯಾವದೊಂದೂ ತೊಂದರೆ ಬಾರದಂತೆ ಪಕ್ಕ ಏರ್ಪಾಡುಮಾಡಬೇಕಾಗಿ ವಂದನೆ.

M. N. B.

ದೇಶಬಾಂಧವರೇ,

ಮೆ|| ನಡಿಕೇರಿಯಂಡ ಚಿಣ್ಣಪ್ಪನವರು ತನ್ನ ಬುದ್ಧಿಶಕ್ತಿಯಿಂದ ಪ್ರಿಂಟುಮಾಡಿಸಿದ "ಪಟ್ಟೋಲೆ ಪಳಮೆ" ಎಂಬ ಬುಕ್ಕನ್ನು ನಾನು ಓದಿ ನೋಡಿದ್ದಲ್ಲು ಕೊಡಗರ ಆಚಾರ ವಗೈರೆ ಎಲ್ಲಾ ಸಂಗ್ತಿಗಳಲ್ಲಿಯೂ ತೃಪ್ತಿಕರವಾಗಿ ಬರೆದದ್ದನ್ನು ನೋಡಿ ನಾನು ಬಹಳ ಸಂತೋಷಿಸುತ್ತೇನೆ. ನಾನು ಚಿಕ್ಕವಯಸ್ಸಿನವನಾದುದರಿಂದ ಸದರಿ ಚಿಣ್ಣಪ್ಪನವರು ಬರೆದದ್ದೆಲ್ಲಾ ನಮ್ಮ ಕೊಡಗು ಪದ್ಧತಿಗೆ ಸರಿಯಾಗಿದೆಯೋ ಎಂಬುದು ನನಗೆ ಚೆನ್ನಾಗಿ ಗೊತ್ತಾಗುತ್ತಿಲ್ಲ. ಆದ್ದರಿಂದ ಈ ಕೊಡಗು ಪತ್ರಿಕೆ ಮೂಲಕ ಮಹಾನುಭಾವರುಗಳಲ್ಲಿ ಯಾರಾದರೂ ಕೊಡಗು ಪದ್ಧತಿ ಚೆನ್ನಾಗಿ ಬಲ್ಲವರು ಈ ಪುಸ್ತಕವನ್ನು ಓದಿ ತಪ್ಪೋ ಅಲ್ಲವೇ ಸರಿಯೋ ಎಂಬುದನ್ನು ಇದೇ ಅಮೂಲ್ಯವಾದ ಪತ್ರಿಕೆಯಲ್ಲಿ ಬರೆಯುವರಾಗಿ ನಂಬುತ್ತೇನೆ ಮೆ|| ಚಿಣ್ಣಪ್ಪನವರು ಈ ಪುಸ್ತಕದಲ್ಲಿ ಪ್ರಿಂಟುಮಾಡಿಸಿದ ಆಚಾರ ವಗೈರೆಗಳನ್ನೆಲ್ಲಾ ಕಂಡುಹಿಡಿದು ತೊಂದ್ರೆ ತೆಗೆದುಕೊಂಡ ಬಾಬಿನಲ್ಲಿ ಅವರಿಗೆ ಎಷ್ಟು ವಂದಿಸಿದರೂ ಸಾಲದು.

ಎ. ಬಿ. ಸೋಮಯ್ಯ.
ಬೇರ್‌ಲ್ಯಾಂಡ್ ಸಿದ್ದಾಪುರ

ಅಯ್ಯಾ ಪೊನ್ನಪ್ಪನವರೇ,

ನೀವು ಕಳೆದವಾರದ ಪತ್ರಿಕೆಯಲ್ಲಿ ಬರೆದಂತ ಬಾತ್ಮಿ ನೋಡಲಾಯಿತು ಆದರೆ ಅದರಲ್ಲಿ ನಮೂದಿಸಿರುವ ಮೇರೆ ಈಗ ದೊರೆತಿರುವ ಕೌನ್ಸಿಲಿಗೆ ಅಷ್ಟೇನೂ ದೊಡ್ಡ ಗೌರವವಿರುವುದಿಲ್ಲ. ಕೊಡಗು ಜಮೀನ್ದಾರರ ಸಂಘದ ಮೇನತ್ತಿನಿಂದ ಸದರಿ ಕೌನ್ಸಿಲ್ ದೊರೆಯುತ್ತೆಂಬದಾಗಿ ಈಗಿನ ಪ್ರೆಸಿಡೆಂಟರು ಮೆ|| ರಾಯಬಹದ್ದೂರ್ ಕೋದಂಡ ಅಪ್ಪಯ್ಯನವರ ಹೇಳಿಕೆಮೇರೆ ಕೌನ್ಸಿಲ್ ಮೆಂಬರುಗಳಿಗೆ ಪ್ರತ್ಯೇಕ ಕುರ್ಚಿಗಳಿಗೆ ಚೀಟಿ ಹತ್ತಿಸಿ ಕಳೆದ ಕಾನ್ಫರೆನ್ಸಿನಲ್ಲಿ ಹುದಿಕೇರಿಯಲ್ಲಿ ಆಲಾಯಿದ ಇಟ್ಟಿದ್ದದ್ದೇ ಶಿವಾಯಿ ಅನ್ಯಥಾ ಬೇರೆಯೊಂದೂ ಅಲ್ಲ. ಈ ಬಾಬಿನಲ್ಲಿ ನೀವು ಕೆ. ಚಂಗಪ್ಪನವರ ಬಾತ್ಮಿಗೆ ಆರೋಪಿಸಿ ಅವರು ಬರೆದ ಬಾತ್ಮಿ ಪೂರಾ ತಪ್ಪೆಂತಲೂ, ತನ್ನ ಮನಸ್ಸಿನಲ್ಲಿರ್ವ ಕ್ಲೇಶವನ್ನು ಹೋಗಲಾಡಿಸುವ ಉದ್ದೇಶ್ಯ ಬರೆದದ್ದೆಂತಲೂ ಓದಿನೋಡಿ ನನ್ನ ಮನಸ್ಸಿಗೂ ಸಹ ಬೇಜಾರವಾಯಿತು. ಅಂಥಾ ಮನ ಕ್ಲೇಶದಿಂದ ಸದರಿ ಚಂಗಪ್ಪನವರು ಎಂದಿಗೂ ಬರೆದಿರಲಿಕ್ಕಿಲ್ಲ. ಹ್ಯಾಗೂ ಜಮೀನ್ದಾರರ ಸಂಘದ ಮೂಲಕವೇ ಸದ್ರಿ ಕೌನ್ಸಿಲ್ ದೊರೆತು ಸದರಿ ಸಂಘದಲ್ಲಿ ಮುತುವರ್ಜಿ ಇಟ್ಟು ಕೆಲಸಮಾಡಿದವರಿಗೆ ಕೌನ್ಸಿಲ್ ಮೆಂಬರುತನ ಸಿಕ್ಕಿದ್ದರಿಂದ ಆಲಾಯಿದ ಚೀಟಿ ವಗೈರೆ ಹತ್ತಿಸಿ ಕುರ್ಚಿಗಳನ್ನು ಪ್ರತ್ಯೇಕ ಇಡಬೇಕಾದ ಆವಶ್ಯವಿರಲಿಲ್ಲವೆಂಬ ಭಾವನೆಯಿಂದ ಬರೆದದ್ದಾಗಿದೆಂತ ನಾನು ಸಹ ನಂಬುತ್ತೇನೆ ಈಗ ದೊರೆತಿರುವ ಕೌನ್ಸಿಲಿನಿಂದ ಇಂತಿಷ್ಟೇ ಪ್ರಯೋಜನವು ನಮ್ಮ ದೇಶಕ್ಕೆ ಉಂಟಾದೀತೆಂತ ಪ್ರತಿಯೊಬ್ಬರಿಗೂ ಗೊತ್ತೇ ಇದೆ ಈ ಕೌನ್ಸಿಲ್ ಕೊಡಗು ಜಮೀನ್ದಾರರ ಸಂಘಕ್ಕಿಂತ ಸ್ವಲ್ಪ ಮೇಲುತರದಲ್ಲಿದೆಯೇ ಶಿವಾಯಿ, ಇದರಲ್ಲಿ ದೇಶದವರ ತಕರಾರುಗಳನ್ನು ಎಂದಿಗೂ ತೀರಿಸಲಿಕ್ಕಾಗಲಿಕ್ಕಿಲ್ಲ. ಜಮೀನ್ದಾರರ ಸಂಘದವರು ನಮ್ಮ ಸರ್ಕಾರದವರ ಜೊತೆಯಲ್ಲಿ ಎಷ್ಟರಮಟ್ಟಿಗೆ ಹೋರ್‍ಯಾಡಿ ಏನೊಂದೂ ಪ್ರಯೋಜನ ದೊರೆಯುವುದಿಲ್ಲವೋ, ತದ್ರೀತಿ ಈ ಕೌನ್ಸಿಲಿನಿಂದಲೂ ಸಹ ನಮಗೆ ಉಪಕಾರ ದೊರೆಯಲಿಕ್ಕಿಲ್ಲವೆಂತ ಚೆನ್ನಾಗಿ ನಂಬಿಕೊಳ್ಳಿ, ಇದಕ್ಕಾಗಿ ಈ ಕೌನ್ಸಿಲನ್ನು ತಲೆಮೇಲೆತ್ತಿಕೊಂಡು ಒಬ್ಬೊಬ್ಬರನ್ನು ಪತ್ರಿಕೆಯ ಮೂಲಕ ಅಲಗಳೆಯುವುದನ್ನು ಇನ್ನಾದರೂ ಬಾಕಿ ಮಾಡುವಿರಾಗಿ ನಂಬುತ್ತೇನೆ "ಮನನೊಂದವ"

ಮಹನೀಯರೇ,

ನಮ್ಮ ಈ ದೇಶದಲ್ಲಿ ಜನಸಂಖ್ಯೆಯು ವರ್ಷವರ್ಷ ಯಾತಕ್ಕಾಗಿ ಕಮ್ಮಿ ಕಮ್ಮಿಯಾಗುತ್ತಾ ಬರುತ್ತದೆಯೆಂದು ಕೇಳುವಿರಾ, ದೇಶದ ಬಡತನವೇ ಕಾರಣವೆಂದು ಕಂಡುಬರುತ್ತದೆ. ನಮ್ಮ ಕೊಡಗರ ಮದುವೆಗಳಲ್ಲಿ, ಒಂದು ಹುಡಿಗಿಯನ್ನು ಮದುವೆಮಾಡಬೇಕಾದರೆ ಕಮ್ಮಿಪಕ್ಷ 400-500 ರೂಪಾಯಿಗಳು ಬೇಕಾಗುತ್ತವೆ ಗರೀಬರಾದ ತಂದೆತಾಯಿಗಳು ಈ ರುಪಾಯಿಗಳನ್ನು ಸಂಪಾದನೆಮಾಡಲಾರದೆ ತಮ್ಮ ಮಕ್ಕಳಿಗೆ ಸರಿಯಾದ ಕಾಲದಲ್ಲಿ ವಿವಾಹವನ್ನು ಮಾಡದೆ ತಮ್ಮ ಮನೆಗಳಲ್ಲಿಯೇಯಿಟ್ಟಿರುತ್ತಾರೆ. ದೊಡ್ಡದಾದ ಹುಡಿಗಿಯನ್ನು ಇಟ್ಟಲ್ಲಿ ಆ ಕುಳಕ್ಕೆ ನಾಶವಲ್ಲವೇ? ಈ ಮೇಲಿನ ಯೆಲ್ಲಾ ಕಾರಣಗಳಿಗೂ ಅನುಕೂಲಸ್ತರೇ ಮೆಟ್ಟಿಲುಗಳಾಗಿರುತ್ತಾರೆ ಇವರೇ ಯೆಲ್ಲಾ ದಾರಿಯನ್ನು ಮೇಲುಪಂಕ್ತಿಯಾಗಿ ತೋರಿಸಿಕೊಡುತ್ತಾರೆ ಲೋಕದಲ್ಲಿ ಕೆಲವು ಯುವತಿಯರು ವ್ರತವನ್ನು ಕೈ ಬಿಟ್ಟಂತೆ ಕಾಣಬರುತ್ತದೆ, ಆದ್ದರಿಂದಲೇ, ಆರು ತಿಂಗಳಾದರೂ ಮಳೆಯು ಹೊಡೆಯದೆ, ಲೋಕದಲ್ಲಿ ನಡೆಯುವ ಅನ್ಯಾಯವನ್ನು ಭೂಮಿತಾಯಿಯು ಸೈರಿಸಲಾರದೆ, ಪಾತಾಳಲೋಕಕ್ಕೆ ಪಯಣ ಹೋದಂತೆ ಕಾಣುತ್ತೆ. ಇನ್ನುಮುಂದೆಯಾದರೂ ದೇಶದ ಮುಖ್ಯಸ್ಥರೆಲ್ಲರೂ ಕೊಡಗಿನ ಮುಖ್ಯ ಮುಖ್ಯ ಸ್ಥಳಗಳಲ್ಲಿ ಮೀಟಿಂಗುಮಾಡಿ, ಮದುವೆಯ ಖರ್ಚನ್ನು ಕೋತಮಾಡಿ, ಒಂದೇ ಪೆಟ್ಟಿಗೆ 5 ಸೀರೆ ಮಾತ್ರ ಪ್ರತಿಯೊಬ್ಬನು ಕೊಡಬೇಕು. ಅದರಮೇಲೆ ಅವರವರ ಇಷ್ಟದಂತೆ ಮದುವೆಯಾದಮೇಲೆ ತಮ್ಮ ಮಗಳಿಗೆ ಬೇಕಾದದ್ದನ್ನು ಕೊಡಲಿ, ಯೆಂದು ಯೇರ್ಪಾಡುಗಳನ್ನು ಕೂಡ್ಲೆ ಮಾಡಿದಲ್ಲಿ ದೇಶವು ಎಷ್ಟು ಉದ್ಧಾರವಾದೀತು ಯೆಂದು ಯೆಷ್ಟುವರ್ಣಿಸಿದರೂ ಸಾಲದು ಇದು ಅಲ್ಲದೆ ಯುವಕರುಯರು ತಮ್ಮ ತಾಯಿತಂದೆಗಳ ಮರ್ಯಾದೆಗಳನ್ನು ಕಾಪಾಡಿದಂತಾಗುವುದು. ಈ ಮೇಲಿನ ಕೆಲಸಗಳನ್ನು ನೆರವೇರಿಸುವುದಕ್ಕೆ ಯಾರು ಕೈಗೊಳ್ಳುವರೋ ಅವರನ್ನು ಆ ಕಾವೇರಮ್ಮ ದೇವಿಯು ಚಿರಂಜೀವಿಯಾಗಿ ಮಾಡಲೆಂದು ನಾನು ಅನುದಿನವೂ ಪ್ರಾರ್ಥಿಸುವೆನು.

ಬಿ. ಕೆ. ಯಸ್.

ತಾರೀಖು ೨೩-೫-೪೯ ರ ನಾಡಿನ ರೈತ ಎಂಬವರ ಲೇಖನದಲ್ಲಿ ನಮೂದಿಸಿದ ಸರ್ಕೀಟು ಡಾಕ್ಟರುಗಳ ಕುರಿತು ಬಾತ್ಮಿ.

೧ ಕೊಡಗಿಗೆ ಸರ್ಕೀಟು ಡಾಕ್ಟರುಗಳು ಬೇಕಾಗಿಯೂ, ಇದಕ್ಕೆ ನಮ್ಮ ಘನ ಸರಕಾರದವರು ಒಪ್ಪಿರುವದಾಗಿಯೂ ಕಂಡುಬರುವ ತಮ್ಮ ಲೇಖನವನ್ನು ಮೇಲ್ಕಂಡ ತಾರೀಖಿನ ಪ್ರಕಟದಲ್ಲಿ ನೋಡಲಾಯಿತು. ಆದರೆ ಎಲ್ಲಾ ವ್ಯಾಕ್ಸಿನೇಟರುಗಳು ಜ್ವರ ವಗೈರೆಗೆ ಔಷಧಿ ಕೊಡಲು ಶಕ್ತರಾಗಿರುವದಾಗಿಯೂ ಇಂಥವರನ್ನು ಕೆಲವು ದಿನಗಳ ಪರಿಯಂತರ ಟ್ರೈನಿಂಗ್ ಕೊಟ್ಟಲ್ಲಿ ಸದ್ರಿಯವರು ಸರ್ಕೀಟ್ ಡಾಕ್ಟರ್ ಕೆಲಸಕ್ಕೆ ಯೋಗ್ಯರೆಂತಲೂ ತಾವು ಬರೆದಿರುವುದು, ಮತ್ತು ವ್ಯಾಕ್ಸಿನೇಟರುಗಳಿಗೆ ಸರ್ಕೀಟ್ ಡಾಕ್ಟರ್ ಕೆಲಸ ಕೊಡಬೇಕಾಗಿ ಕೇಳುವುದು ಸಹ ಪೂರ ತಪ್ಪರ್ಥ. ಅಲ್ಲದೆ ಈ ರೀತಿ ಡಾಕ್ಟರ್‌ಗಳು ಸಿಕ್ಕುವಂಥದಕ್ಕೆ ಸರಕಾರದವರು ಮೂರು ನಾಲ್ಕು ವರ್ಷ ಓದತಕ್ಕಬಗ್ಗೆ ಮೆಡಿಕಲ್ ಶಾಲೆಗಳಿಗೆ ಇಷ್ಟು ಜನರನ್ನು ಓದಿಸಲಿಕ್ಕೆ ಬಿಡುತ್ತಿರಲಿಲ್ಲ. ಅಂಥಾದ್ದರಲ್ಲಿ ಓದಿ ಪಾಸುಮಾಡಿ ಬಂದರೂ ಕೂಡ ಕೆಲವು ಡಾಕ್ಟರುಗಳಿಗೆ ಆಯಾಯ ಕಾಯಿಲಕ್ಕೆ ಸರಿಯಾದ ಔಷಧಿ ಕೊಡಬೇಕಾದಲ್ಲಿ ಪೂರಾ ಯೋಚನೆ ಮಾಡಬೇಕಾಗಿರುವ ಸಂಗ್ತಿ ತಮಗಳಿಗೆ ತಿಳಿಯದ್ದಲ್ಲ.

೨ ವ್ಯಾಕ್ಸಿನೇಟ್ರುಗಳು ಜ್ವರ ವಗೈರೆಗೆ ಔಷಧಿ ಕೊಡುವದನ್ನುಯಾರಾದರೂ ಪರೀಕ್ಷೆಮಾಡಿದ್ದುಂಟೋ? ಯಾ ತಾವೇ ಊಹನೆಮಾಡಿಕೊಂಡಿರುವುದೋ? ತಮ್ಮ ಲೇಖನದಮೇರೆ ವ್ಯಾಕ್ಸಿನೇಟ್ರುಗಳಿಗೆ ಸರ್ಕೀಟು ಡಾಕ್ಟರ್ ಕೆಲಸ ಕೊಟ್ಟಲ್ಲಿ ಆದರಿಂದ ಬರುವ ಪ್ರಯೋಜನವೇನು? ಪ್ರಯೋಜನದ ಬದಲಿಗೆ ಈಗ ವರ್ಷಕ್ಕೆ ಕಮ್ಮಿಪಕ್ಷ ಒಂದುದಫವಾದರೂ ಗ್ರಾಮಗಳಮೇಲೆ ತಿರುಗಾಡುವದನ್ನು ನಿಲ್ಲಿಸಬೇಕೆಂಬ ತಮ್ಮ ಇರಾದೆಯೋ? ಅಲ್ಲದೆ ವ್ಯಾಕ್ಸಿನೇಟರ್ ಎಂಬ ಹೆಸರು ಹಿಡಿದರೂ ಸಾಲದು. ಎಷ್ಟೋ ಜನರಿಗೆ ಹ್ಯಾಗೆ ಮಕ್ಕಳಿಗೆ ವ್ಯಾಕ್ಸಿನೇಶನ್ ಮಾಡಬೇಕೆಂಬ ವಿಧಾನ ಸಹ ಗೊತ್ತಿರಲಿಕ್ಕಿಲ್ಲವಾದ ಸಂಗ್ತಿ ಎಲ್ಲರಿಗೂ ತಿಳಿಯದ್ದಲ್ಲ. ಇತರ ಪ್ರಾಂತ್ಯಗಳಲ್ಲಿ ಕೆಲವುಮಟ್ಟಿಗೆ ಸ್ಕೂಲ್ ಫೈನಲ್ ಆದ ಹೊರತು ವ್ಯಾಕ್ಸಿನೇಟರ್ ಕೆಲಸಕ್ಕೆ ಸೇರಿಸಿಕೊಳ್ಳುವುದಿಲ್ಲವಾದ ಸಂಗ್ತಿ ಎಲ್ಲವರಿಗೂ ತಿಳಿಯದಲ್ಲ. ಅಲ್ಲದೆ ಅಂತವರು ಕಮ್ಮಿಪಕ್ಷ ೨೦ ವರ್ಷ ವ್ಯಾಕ್ಸಿನೇಟರ್ ಆಗಿ ಕೆಲಸ ನೋಡಿದನಂತರ ಡಿಪ್ಯುಟಿ ವ್ಯಾಕ್ಸಿನೇಶನ್ ಇನ್ಸ್‌ಪೆಕ್ಟರ್ ಕೆಲಸಕ್ಕೆ ಚುನಾವಣೆಗೆ ನಿಲ್ಲುತ್ತಾರೆ ಆದರೂ ಅವರಿಗೂ ಸಹ ನ್ಯಾಯವಾದ ಯೋಗ್ಯತೆಪತ್ರ ಇಲ್ಲದಿದ್ದಪಕ್ಷ ಸಾಧ್ಯವಿಲ್ಲದ ಸಂಗ್ತಿ ತಮಗಳಿಗೆ ತಿಳಿಯದಲ್ಲ. ಅಂಥಾದರಲ್ಲಿ ನಮ್ಮ ಈ ದೇಶದಲ್ಲಿ ಈಗಿನ ವ್ಯಾಕ್ಸಿನೇಶನ್ ಇನ್ಸ್‌ಪೆಕ್ಟರುಗಳಿಗೆ ಎಷ್ಟರಮಟ್ಟಿಗೆ ಸರ್ಕೀಟ್ ವಗೈರೆ ಇರುತ್ತದೆಂತಲೂ ಮತ್ತು ಇವರಿಗೆ ಕೆಲಸದ ವಿವರಗ ತಿಳುವಳಿಕೆ ಇದೆ ಎಂಬದನ್ನು ಮತ್ತು ಇಂಥವರ ತಾಬೆಯಲ್ಲು ಇರತಕ್ಕ ವ್ಯಾಕ್ಸಿನೇಟ್ರುಗಳಿಗೆ ಕೆಲವರಿಗೆ ಎಷ್ಟರಮಟ್ಟಿಗೆ ಕೆಲಸದ ವಿಷಯ ತಿಳುವಳಿಕೆ ಇರಬಹುದು ಎಂಬದನ್ನೂ ಇವರುಗಳು ಸರ್ಕೀಟ್ ಡಾಕ್ಟರ್ ಕೆಲಸಕ್ಕೆ ನೇಮಕವಾದಲ್ಲಿ ಜನರಿಗೆ ಎಷ್ಟರಮಟ್ಟಿಗೆ ಅನುಕೂಲವಿರಬಹುದೆಂಬದನ್ನೂ ಎಲ್ಲಾವರೂ ಪೂರಾ ಯೋಚನೆ ಮಾಡಬೇಕಾಗಿದೆ.

೩. ಅಲ್ಲದೆ ಈ ದೇಶದಲ್ಲಿ ವ್ಯಾಕ್ಸಿನೇಟರ್ ಕೆಲಸಕ್ಕೆ ಓದಿ ತರಬೇತಾದ ಜನರಿಗೆ ಕೆಲಸಕೊಡುವುದನ್ನು ಬಿಟ್ಟು ಈಚೆಗೆ ಬೇರೆಯವರಿಗೆ ಕೊಟ್ಟದ್ದು ಬಹಳ ಅನ್ಯಾಯ ಮತ್ತು ಆಶ್ಚರ್ಯಕರವಾದ ಸಂಗ್ತಿಯಾಗಿದೆ. ಅಲ್ಲದೆ ವ್ಯಾಕ್ಸಿನೇಶನ್ ಇನ್ಸ್‌ಪೆಕ್ಟರ್ ಕೆಲಸಕ್ಕೆ ಯೋಗ್ಯರಾದವರು ಮೊದಲು ಸ್ಯಾನಿಟರಿ ಕೆಲಸ ತರಬೇತಾಗುವುದಲ್ಲದೆ ಕೆಲವು ವಾರಗಳವರೆಗೆ ವ್ಯಾಕ್ಸಿನೇಟರ್ ಕೆಲಸವೂ ತರಬೇತಾದಬಳಿಕ ಅಂಥವರಿಗೆ ಕೆಲಸ ಕೊಡುವದು ನ್ಯಾಯವಾದ ಸಂಗ್ತಿಯಾಗಿದೆ ಅಲ್ಲದೆ ಈಗಿನ ಕಾಲದಲ್ಲಿ ಬೇಕಾದಷ್ಟು ಸ್ಕೂಲ್ ಫೈನಲ್ ಆದವರು ದೊರೆಯುವಕಾರಣ ನಮ್ಮ ಘನಸರಕಾರದವರು ಮತ್ತು ಕೌನ್ಸಿಲ್ ಮೆಂಬರುಗಳು ಮತ್ತು ಡಿಪಾರ್ಟ್‌ಮೆಂಟಿನವರು ಪೂರ ತೊಂದರೆ ತೆಗೆದುಕೊಂಡು ಮುಂದಕ್ಕೆ ಈ ಡಿಪಾರ್ಟ್‌ಮೆಂಟನ್ನು ನ್ಯಾಯವಾದಸ್ಥಿತಿಗೆ ತರಲು ಯೋಗ್ಯರಾದವರನ್ನು ಚುನಾಯಿಸಬೇಕಾಗಿ ಕೇಳಿಕೊಳ್ಳುವುದು ಅಲ್ಲದೆ ಇತರ ಎಲ್ಲಾ ಡಿಪಾರ್ಟ್‌ಮೆಂಟ್‌ಗಳು ರಿಫಾರ್ಮಿಗೆ ಬಂದರೀತಿ ಈ ಡಿಪಾರ್ಟ್‌ಮೆಂಟನ್ನು ಸಹ ತಂದರೆ ಕೊಡಗಿಗೆ ವಿಶೇಷವಾದ ಉಪಕಾರ ಮತ್ತು ಪ್ರಯೋಜನವಾಗುತ್ತಿತ್ತು.

ಶಾ|| ೧-೬-೪೯. ಪಟ್ಟಣಿಗ

ಭಾಗಮಂಡ್ಲ ಪೇಟೆ

ಈ ಭಾಗಮಂಡ್ಲ ಪೇಟೆಯಲ್ಲಿ ಸಂತೆಯಿಂದ ಬಂದ ಗಾಡಿಗಳಾಗಲಿ ಸಾದೆ ಗಾಡಿಗಳಾಗಲಿ ಇತರ ಯಾವದೊಂದು ಗಾಡಿಗಳಾಗಲಿ ಬೇರೆ ವಾಹನಗಳಾಗಲಿ ರೋಡಿನಲ್ಲಿ ನಿಂತು ೫ ನಿಮಿಷವಾದರೆ ಇಲ್ಲಿಯ ಆಲಾಖೆಯವರು ಗಾಡಿಗಳನ್ನು ಜಾರ್ನವಾಗುತ್ತಲೂ ದಾಸುಗಳನ್ನು ದೊಡ್ಡಿಗೆ ಹಾಕಿ ಪ್ರಾಸಿಕ್ಯೂಷನ್ ನಡಿಸಿ ಜುಲ್ಮಾನೆ ನಡಿಸುತ್ತಲೂ ಇರುತ್ತಾರೆ. ಈಗ ಸಾಧಾರಣ ಒಂದು ತಿಂಗಳಿನಿಂದ ಪೇಟೆ ಬೀಳ ಸವಿಾಪ ೧೦ ಮಾರುದ್ದಕ್ಕೆ ಅರ್ಧರಸ್ತೆವರೆಗೆ ಇಟ್ಟಿಗೆ ಹಾಕಿ ಜನರಿಗೆ ತಿರುಗಾಡಲಿಕ್ಕು ಗಾಡಿಗಳು ತಿರುಗಲಿಕ್ಕು ತೊಂದರೆ ಆಗುವದಲ್ಲದೆ ರಾತ್ರಿ ಹೊತ್ತು ಕತ್ತಲೆಯಲ್ಲಿ ಹೋಗುವ ಬರುವ ಜನರಿಗೆ ಕಾಣದೆ ಎಡವಿ ಬಿದ್ದು ಕೈ ಕಾಲು ಮೊಂಡ ಸಹ ಗಾಯ ಮಾಡಿಕೊಳ್ಳುವದಾಗಿದೆ. ಇನ್ನಾದರೂ ಸಮ್ಮಂದಪಟ್ಟ ಇಲಾಖೆಯವರು ಕೂಡಲೆ ವಿಚಾರಿಸಿ ಇಟ್ಟಿಗೆ ತೆಗಿಸುವದಲ್ಲದೆ ಇನ್ನು ಮುಂದಕ್ಕು ಜನರಿಗೆ ಗಾಡಿಗಳು ವಗೈರೆ ತಿರುಗಲಿಕ್ಕೆ ತೊಂದರೆಯಿಲ್ಲದಂತೆ ಮಾಡಿಸುವದಲ್ಲದೆ ಪಕ್ಷಪಾತವಿಲ್ಲದೆ ಎಲ್ಲರಿಗೂ ಒಂದೇರೀತಿ ನಡಿಸಿ ತಕ್ಕ ಬಂದೋಬಸ್ತು ಮಾಡಬೇಕಾಗಿ ಕೇಳಿಕೊಳ್ಳುವ

ಪಟ್ಟೇಗ

ಒಕ್ಕಲಿಗರಿಗೆ

ಇದೊಂದು ಸಂಧಿಯು.



ನಮ್ಮ ಕಾರ್ಖಾನೆಯಲ್ಲಿ ಎರಡು ಮಾದರಿಯ ಕಣಿಕೆ ಕೊರೆಯುವ ಯಂತ್ರಗಳು ದೊರೆಯುತ್ತವೆ. ಈ ಯಂತ್ರಗಳಲ್ಲಿ ಒಂದನ್ನು ತರಿಸಿಕೊಂಡು ನಿಮ್ಮ ಮೇವಿನಲ್ಲಿ ವಿನಿಮಯ ಮಾಡಿಕೊಳ್ಳಿರಿ. ಮೇವು ಸಣ್ಣಾಗಿ ಕತ್ತರಿಸಿ ಬೀಳುವದರಿಂದ ದನಗಳು ನಿರಾಯಾಸವಾಗಿ ತಿನ್ನುತ್ತವೆ. ಬೆಲೆ ಅಗ್ಗ.

'ಕೊ' ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್,

[[16-16] ಕಿರ್ಲೋಸ್ಕರವಾಡಿ, ಜಿಲ್ಲಾ-ಸಾತಾರಾ.

WANTED.

Two Second-hand Motor Bicycles

M M. SIDDEEK,

22—70 MERCARA.

ನೋಟೀಸ್.

ಕೊಡಗು ಕಂಪೆನಿಯ ಏಜಂಟರು, ಷೇರುದಾರರ ಮತ್ತು ಚಂದಾದಾರರ ಅನುಕೂಲತೆಗಾಗಿ ಇನ್ನು ಮುಂದ ಪ್ರತಿ ವಾರದಲ್ಲಿಯೂ ಈ ಕೆಳಗಿನ ಸ್ಥಳಗಳಲ್ಲಿರುತ್ತಾರೆ.

ಬುಧವಾರ ಮತ್ತು ಶನಿವಾರ	ವಿರಾಜಪೇಟೆ
ಗುರುವಾರ	ಪೊನ್ನಂಪೇಟೆ
ಆದಿತ್ಯವಾರ	ಗೋಣಿಕೊಪ್ಪಲು
ಸೋಮವಾರ	ಪೊನ್ನಂಪೇಟೆ, ಹುದಿಕೇರಿ

ಚಂದಾದಾರರು ದಯವಿಟ್ಟು ವಾರ್ಷಿಕಚಂದಾ 3-8-0 ಮತ್ತು ಷೇರ್ ಹಣವನ್ನು ನಮ್ಮ ಏಜಂಟರು ಕೆ. ಪಿ. ಚಿಣ್ಣಪ್ಪನವರಿಗೆ ಪಾವತಿಮಾಡಿ ರಶೀತಿ ಪಡೆಯಬೇಕಾಗಿ ವಿಜ್ಞಾಪಿಸಿಕೊಳ್ಳುತ್ತೇವೆ.

ತಾ|| 7—6—24 ಮೇನೇಜರ್,

"ಕೊಡಗು"

ಆರೋಗ್ಯ ಚಂದ್ರಿಕೆ.

ಇದು ಪ್ರಜಾಕ್ಷೇಮಕ್ಕಾಗಿ ಆರೋಗ್ಯಮಾರ್ಗವನ್ನೂ ಚಿಕಿತ್ಸೆಯನ್ನೂ ಬೋಧಿಸುವ ಒಂದು ಮಾಸಪತ್ರಿಕೆ. ಇದರ ಸಂಪಾದಕರು ಮದ್ರಾಸಿನ ಪ್ರಸಿದ್ಧರಾದ ಡಾಕ್ಟರ್ ಯು. ರಾ[illegible] ಇದರಲ್ಲಿ ಅನೇಕ ಪ್ರಸಿದ್ಧ ಡಾಕ್ಟ[illegible] ಬರೆದ ಪಂಡಿತರುಗಳ ಲೇಖನಗಳು ಆರೋಗ್ಯ ಪ್ರಕಟವಾಗುವವು.

ಟಪಾಲುಹಾಸಲು ಸೇರಿ ಈ ಪತ್ರಿಕೆಯ ವಾರ್ಷಿಕ ಚಂದ 1—8—0 ರೂ ಮಾತ್ರ. ಬಿಡಿ ಪತ್ರಿಕೆ ಒಂದಕ್ಕೆ 0—2—0 ಆಣೆ

ಏಜೆಂಟರು —	ವಿಳಾಸ —
ಮ|| ರಾ|| ರಾ|| ಎಸ್. ಕೆ.	ಮೇನೇಜರ್,
ಈಶ್ವರಪ್ಪ,	ಆರೋಗ್ಯಚಂದ್ರಿಕೆ ಆಫೀಸು,
ಭಾಗಮಂಡ್ಲ,	[illegible]ಚೆಟ್ಟಿಬೀದಿ,
ಕೊಡಗು	ಮದ್ರಾಸ

[12—17]

ಮಾರಾಟಕ್ಕೆ.

I ಕಡಂಗಮರೂರು ಗ್ರಾಮದ ಸರ್ವೆನಂಬರು 64 ರ 2 77 ಎಕರೆ ಭೂಮಿ ಒಂದು

II ಡಿಟೋ ಸರ್ವೆನಂಬರು 69 ರ 0 39 ಎಕರೆಯಾದ ಭೂಮಿ ಒಂದು

III ಡಿಟೋ ಸರ್ವೆನಂಬರು [illegible] ರ 7 48 ಎಕರೆಯಾದ ಬಾಣೆ

IV ಡಿಟೋ ಸರ್ವೆನಂಬರು [illegible] ರ 0 11 ಎಕರೆಯಾದ ಕೆರೆ ಮತ್ತು ಬಾಣೆ ಸಹ ಇದರಲ್ಲಿ ದಾಖಲಾಯಿಪ್ರಕಾರ

V ಅರಮೇರಿ ಗ್ರಾಮದಲ್ಲಿ ಸ. ನಂ. 33[illegible] ರ 0 [illegible]4 ಎಕರೆಯಾದ ಪರಾದೀನದ ಬಾಗ [illegible] ಅಂಗಳದ ಮಲ್ಲಿಗೆ [illegible] ಗಳ ಮತ್ತು ಕಿಲ್ಲೆ ತೋಟ [illegible]

ಇಂತಿಷ್ಟು ಆಸ್ತಿಗಳು, ಎರಡ ಸಾವಿರ ರೂಪಾಯಿ ಗಳಿಗೆ ಮಾರಾಟವಾಗಲ್ಪಡುತ್ತವೆ. [illegible] ಇರುವವರ [illegible] ಈ ಕೆಳಗಿನ ವಿಳಾಸಕ್ಕೆ [illegible] ಬೇಕಾಗಿದೆ

ವಿಳಾಸ—ಕೆ. ಕೆ. ಮುತ್ತಣ್ಣ K K Muttanna

ಕಾಟ್ಟಪ ಕೋರ್ಟ ಸಿದ್ದಾಪುರ ಪೋಸ್ಟು

ತಾ|| 27—5—24 [3—2]

Two Days Grand Auction Sale.

To be held at the HUNSUR WORKS, HUNSUR commencing at 1 P.M. on Thursday June 19th and Friday the 20th June 1924. Many bargains, including one 1912 Model 15.9 H.P. Arrol Johnston Motor Car, converted into 10 seater Motor Bus, complete with its 5 seater Body in perfect running order.

One 1916 Model 2 seater FORD Car very smart and in perfect running order.

One 4½ H.P. Priestman Oil Engine,
One Birch Oil Press,
One Sawing, planing and grooving Machine,
Steam Pump with Horizontal Boiler,
Old 'Rover' Car, car direlect, but Engine in excellent working order,
Two Hand Pumps
and a vast amount of General Stores, scrap iron, tools, timber and second-hand Corrugated Iron Sheets.

The successful bidders must immediately place 25% of their bid and make payment in full before taking delivery, which must be done within three days of the close of the Auction, failing which the deposit amount will be forfeited.

The under-signed reserves the right to withdraw any of the lots if the bidding does not reach a satisfactory level.

The goods may be seen the previous day by appointment.

HUNSUR, MANAGER,
20th May 1924 The Hunsur Works,
4—3 Hunsur.

ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಜೀವವಿಮೆಯ ಕಂಪನಿ, ಲಿಮಿಟೆಡ್,

(ಹೆಡ್ಡು ಆಫೀಸು ಬೊಂಬಾಯಿ)

ಹಿಂದೂಸ್ಥಾನದಲ್ಲಿ ಕಳೆದ ಐವತ್ತುವರ್ಷಗಳಿಂದಲೂ ಜೀವವಿಮೆಯ ಅನುಭವವನ್ನು ಪಡೆದಿರುವ ದೇಶೀಯ ಜೀವವಿಮೆ ಸಂಘಗಳಲ್ಲಿ ಅತ್ಯಂತ ದೊಡ್ಡದೂ ಮತ್ತು ಭದ್ರವಾದದ್ದೂ ಆದ "ಓರಿಯಂಟಲ್" ನ ಜೀವವಿಮೆ ಪತ್ರಗಳು ಉತ್ತಮವಾದ ಆಸ್ತಿ ಬೇರೆ ದೊರೆಯಲಾರದು

ಈಗಾಗಲೇ ವಿಮೆಸಂದಾಯಕವಾದ ಮೊತ್ತ 8 00,00 000

ಕೈಯಲ್ಲಿ ಮುಂದೆ ಬರತಕ್ಕ ಬಾಧ್ಯತೆಗಳಿಗಾಗಿ ಶೇಖರಿಸಲ್ಪಟ್ಟಿರುವ ಹಣ 6,00,00,000

ವಾರ್ಷಿಕ ಉತ್ಪತ್ತಿ 1 00,00,000

ಇಷ್ಟು ಭದ್ರತೆಯುಳ್ಳ ಕಂಪನಿಯಲ್ಲಿ ಜೀವವಿಮೆ ಪತ್ರ ತೆಗೆದುಕೊಳ್ಳಲಿಷ್ಟಪಡುವವರು ಯಾ, ಇದರ ವಿಷಯ ಹೆಚ್ಚಿನ ಸಂಗತಿ ತಿಳಿಯಬೇಕೆಂದಿರುವವರು ದಯವಿಟ್ಟು ಈ ಕೆಳಗಿನವರಿಗೆ ಬರೆದುಕೊಳ್ಳುವುದು

ಕೆ. ಪಿ. ಚಿಣ್ಣಪ್ಪನವರು,

ಓರಿಯಂಟಲ್ ಏಜನ್ಸೀ ಆಫೀಸು,

[24—1] ವಿರಾಜಪೇಟೆ, ದಕ್ಷಿಣಕೊಡಗು

ಅತ್ಯದ್ಭುತಗುಣಕಾರಿಯಾದ ಚೇಳಿನ ಔಷಧ.

ಪ್ರತಿ ಮನೆಯಲ್ಲಿ ಖಂಡಿತ ಇರತಕ್ಕದ್ದು

ಗುಣವಾಗದಿದ್ದರೆ ಖಂಡಿತ ಹಣ ವಪಸು ಕಳುಹಿಸುತ್ತೇವೆ

ಒಂದುಸಾರಿ ತರಿಸಿ ಪರೀಕ್ಷಿಸಿರಿ

ಯಾವ ಚೇಳು ಆದರೂ ಕಚ್ಚಿದಕೂಡಲೆ ಈ ಔಷಧವನ್ನು ಹಾಕಿದ ತಕ್ಷಣವೇ ಏರಿದ್ದು ಇಳಿದು ಒಂದು ಘಳಿಗೆಯ ಗುಣವಾಗುವದು. ಅನುಪಾನಪತ್ರಿಕೆಯನ್ನು ಬಾಟ್ಲಿ ಸಂಗಡ ಕಳುಹಿಸುತ್ತೇವೆ. ಬಾಟ್ಲಿ 1 ಕ್ಕೆ 0—8—0 ಆಣೆ. ಆರು ಬಾಟ್ಲಿಗಳನ್ನು ತರಿಸಿಕೊಂಡರೆ 1 ಬಾಟ್ಲಿ ಕಮಿಷನ. ಹನ್ನೆರಡು ಬಾಟ್ಲಿಗಳನ್ನು ತರಿಸಿಕೊಂಡರೆ 3 ಬಾಟ್ಲಿ ಕಮಿಷನ ಕೊಡುತ್ತೇವೆ

ನಮ್ಮ ವಿಳಾಸ —

ಬಾಲಪ್ಪದೇವರ ಮಠದ ಸಿದ್ಧಾಂತಿಗಳು,

ಹರಪನಹಳ್ಳಿ, ಜಿಲ್ಲಾ ಬಳ್ಳಾರಿ

[12—5]

ಜೀವವಿಮೆ.

[illegible] ಕಾಲಗಳಲ್ಲಿ ಸಂಪಾದನೆಯ ಬಹುಭಾಗ [illegible] ಉಪಯೋಗಪಡುವಾದ ತೊಂದರೆಗಳನ್ನು [illegible] ಸುವುದೇ ಜೀವವಿಮೆ.

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬದ ಜೀವನಾಧಾರಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ.

ಅತಿ ಕಡಿಮೆ ದರದಲ್ಲಿ ಆ[illegible]ವ ಲೋಪವೂ ಬಾರದಂತೆ ಕ್ಷಿಪ್ರದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ಮೈಸೂರಿನ ಸರಕಾರದ ಭದ್ರತೆಯ[illegible] ಜೀವವಿಮೆ ಕಂಪನಿ.

ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ಸಾಲವಾಗಿ ಹಣವನ್ನು ಒದಗಿಸಿ ಸ್ವಿಂರಾಸ್ತಿ ಗಳನ್ನೂ ಕೊಂಡುಕೆಟ್ಟು ದೇಶದ ಆರ್ಥಿಕ ಸಂಪತ್ತನ್ನು (Economic Condition) ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೆ!

ಲೈಫ್ ಇನ್ಸೂರೆನ್ಸ್ ಆಕ್ಟಿನ ಮೇರೆ ಇಂಡಿಯಾ ಗವರ್ನಮೆಂಟ್ ಸೆಕ್ಯೂರಿಟಿಗಾಗಿ ಸಲ್ಲಬೇಕಾದ 12 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿಗೆ ಸಲ್ಲಬೇಕಾದ 1 ಲಕ್ಷರೂಪಾಯಿ ಸೆಕ್ಯೂರಿಟಿಗಾಗಿಯೂ ಇಂಪೀರಿಯಲ್ ಬ್ಯಾಂಕ ಆಫ್ ಇಂಡಿಯಾ ಬ್ರಾಂಚಿ, ಮದ್ರಾಸಿನ ಶಾಖೆಯಲ್ಲು 1 ಲಕ್ಷ ಗವರ್ನಮೆಂಟ್ ಆಫ್ ಇಂಡಿಯ ಸೆಕ್ಯೂರಿಟಿಯನ್ನು ಅರ್ಧಲಕ್ಷ ಮೈಸೂರು ಸೆಕ್ಯೂರಿಟಿಯನ್ನು ಡಿಪಾಜಿಟ್ಟಾಗಿ ಇಟ್ಟಿರುತ್ತೆ ಬಾಕಿ ಒಂದು ಲಕ್ಷ ಇಂಡಿಯಾ ಗವರ್ನಮೆಂಟ್ ಸೆಕ್ಯೂರಿಟಿಗೆ ಬ್ಯಾಂಕಿನ ಮೂಲಕ ಏರ್ಪಾಡು ಮಾಡಿರುತ್ತೆ.

ಬಿ. ಎಸ್. ಅರಾಪ್ಪ,

ರಿಕ್ರೂಟ್ ಅಂಡ್ ಪರ್ಚೇಸ್ ಆಫೀಸ್ ಮಡಿಕೇರಿ.

Printed & Published by D S. Krishnaswamiengar Proprietor, at Sreenivas Electric Press, Mysore "for Kodagu" Ltd., Mercara—13 6 1924

If not delivered please return to "Kodagu" Office, Mercara.

Regd. No. M. 1550.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾನೀತಿ ಪ್ರಯತ್ನತಃ । [illegible] ॥

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು. ಎಡಿಟರ್ [illegible]

ಸಂಪುಟ ೬] ಕೊಡಗು, ಸನ ೧೯೨೪ ನೇ ಇಸವಿ ಜೂನ್, ತಾರೀಖು ೨೦ ನೇ ಶುಕ್ರವಾರ. [ಸಂಚಿಕೆ ೩

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನ್ನಡ ಪ್ರಿಂಟಿಂಗ್ ರೂಲಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ಇದ್ದರೂ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ಹಂತೆ ಜಾಗ್ರತೆಯಾಗಿಯೂ ಸುಲಭಬೆಲೆಗೂ ಮಾಡಿ ಕಳುಹಿಸುತ್ತೇವೆ.

Srinivas Electric Press, MYSORE.

The Saraswathi Publishing Company

ಶಾರದಾಗ್ರಂಥಮಾಲಾ.

ಈ ಗ್ರಂಥಮಾಲೆಯಲ್ಲಿ ಭಾರತಮಹಿಳೆಯರ [illegible] ಗ್ರಂಥಗಳು ಈಗಾಗಲೆ ಪ್ರಕಟವಾಗಿರುವ ಗ್ರಂಥಗಳು :—

	ರೂ.	ಆ.	ಪೈ.
ಪ್ರಿಯಂವದೆ (ವರದಕ್ಷಿಣೆಯಿಂದಾಗುವ ಕಷ್ಟ ನಷ್ಟಗಳು)	0	6	0
ಸ್ನೇಹಲತೆ (ವಂಗಕನ್ಯೆಯ ಚರಿತ್ರೆ)	0	10	0
ಸೌಭಾಗ್ಯವತಿ (ಹಿಂದೂವಿವಾಹದ ಕರ್ತವ್ಯ [illegible])	0	12	0
ಪಿತೂರಿ (ಸಾಮಾಜಿಕ ಸುಧಾರಣೆಯ ನಾಟಕ)	0	8	0
ಹಿಂದೂಭಾಗ್ಯೋದಯ (ನಾಟಕ)	0	4	0
ಸ್ವರಾಜ್ಯಸಾಧನ (ನಾಟಕ)	0	4	0
ಹುಡುಗರು ಹುಡುಗಿಯರು (ನಾಟಕ)	0	4	0

ಈ ಎಲ್ಲಾ ಶಾಖೆಗಳನ್ನು ಒಟ್ಟಾಗಿ ಕೊಳ್ಳುವವರಿಗೆ ಒಟ್ಟು ರೂಪಾಯಿ 2—12—0 ಗೆ ವಿ. ಪಿ. ಹಾಸಲು ಇಲ್ಲದೆ ಕೊಡಲಾಗುವುದು. [illegible]

ಸರಸ್ವತಿ.

ಉತ್ತಮವರ್ಗದ ಶ್ರೇಷ್ಠವಾದ ಕನ್ನಡ ಮಾಸಪತ್ರಿಕೆ.

[illegible]

ವಾರ್ಷಿಕ ಚಂದಾ ರೂಪಾಯಿ 3—0—0 ಮಾತ್ರ.

SARASWATHI PUBLISHING Co.,
Post Box No. 57. Bangalore City

HEALTH IS WEALTH.

WANTED [illegible] health [illegible] ength and vitality [illegible] tion from physical [illegible]. Send [illegible]-anna stamp and get 13 specimen otographs with full [illegible] from

Director Physical Culture,
P.O. Basavanagudi,
BANGALORE CITY.

For your requirements of high grade Arms, Ammunition, Wine and Spirits,

APPLY TO:-

DOWELL & Co., Ltd.,
MERCARA.

ಇನ್ನು ಮುಂದೆ ದಾಯಿ [illegible] ಏಜಂಟರಲ್ಲದೆ ಬೇರೆ ಬಂದಿದೆ ಸ್ಪೆನ್ಸರ್ ಕಂಪೆನಿಯ [illegible]

SPENCER & Co., Ltd.,
Mercara and Pollibetta, Coorg

[24—10]

When you think of going to Bomby
THINK OF

THE WELCOME HOTEL.

Girgaum Back Road, BOMBAY.

Most airy accomodation—Most Central situation—Excellent Meals Every Convenience.

ವೆಲ್ಕಂ ಹೋಟೇಲ್.

ಗಿರ್‌ಗಾಂವ್ ಬ್ಯಾಕ್‌ರೋಡ್, ಬೊಂಬಾಯಿ.

ರೈಲ್ವೆಯಿಂದಿಳಿದೊಡನೆಯೇ ಇಲ್ಲಿ ಇಳಿಯಬಹುದು. ಉತ್ಕೃಷ್ಟವಾದ ಊಟ ಮತ್ತು ವಾಸಕ್ಕೆ ಯೋಗ್ಯವಾದ ಕೊಠಡಿಗಳು ಬೇಕೆಂದಿದ್ದರೆ ಬೊಂಬಾಯಿಪಟ್ಟಣದ ಮಧ್ಯಸ್ಥಳದಲ್ಲಿರುವ ಮೇಲ್ಕಂಡ ಹೋಟೇಲಿನಲ್ಲಿಳಿಯಬಹುದು. [illegible] 15 ನಿಮಿಷಗಳೊಳ್ಳಗೆ [illegible] ಅನುಕೂಲವಾದ [illegible] ಬ್ರಾಹ್ಮಣರ ಭೋಜನಶಾಲೆಯ.

ಪಿ. ಶ್ರೀನಿವಾಸರಾವ್,
ಮೇನೇಜರ್.

[24—2]

BUMPER CROPS

Always follow on application of our fertilisers

ದೊಡ್ಡ ಕಾಫಿ ಫಸಲು.

[illegible] ಉಪಯೋಗಿಸಿರಿ.

[illegible] fresh) [illegible]

Siddeek [illegible] Manure Works [illegible] MERCARA

21—23

ಪುಲ್ಲಿಂಗಾ [illegible]

[illegible]

ನಾರಾಯಣ [illegible]

[illegible]

52—22

ಪ್ರಕಟನೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್.

[illegible]

	ರೂ
ಶೇರ್ ಬಂಡವಾಳ	50,00?
ವಸೂಲಾದ ಶೇರ್ ಬಂಡವಾಳ	6,82?
ಜಮಾ [illegible]	47,99?

[illegible]

ಪ್ರೆಸಿಡೆಂಟರು — ಸೈಕ್ರೆಟರಿ.

[illegible] — [illegible]

[illegible] 22—2—1924.

"ಕೊಡಗು"

೧೯೨೪ ನೇ ಇಸವಿ ಜೂನ್ ತಾ|| ೨೦ ನೇ ಶುಕ್ರವಾರ.

ದೇಶದ ಆರೋಗ್ಯಸ್ಥಿತಿ.

ಇನ್‌ಫ್ಲುವೆನ್ಸ ವರ್ಷವಾದ 1918 ರ ನಂತರ ಈ ವರೆಗೆ ಈ ದೇಶದ ಆರೋಗ್ಯಸ್ಥಿತಿಯು ಈ ವರ್ಷದಷ್ಟು ಎಂದಿಗೂ ಕೆಟ್ಟಿರಲಿಲ್ಲವೆಂಬುದು ಎಲ್ಲರೂ ತಿಳಿದ ಸಂಗತಿಯಾಗಿದೆ. ಕಳೆದ ಫೆಬ್ರವರಿ ತಿಂಗಳಿಂದ ಈ ವರೆಗೂ ಎಲ್ಲಿ ಕೇಳಿದರೂ ಕಾಯಿಲೆಗಳ ಸುದ್ದಿಯು, ಎತ್ತ ನೋಡಿದರೂ ಮರಣಗಳ ವಾರ್ತೆಯೇ. ಆಸ್ಪತ್ರೆಗಳಲ್ಲೆಲ್ಲಾ ಕಾಯಿಲೆಯವರು ತುಂಬಿ ಸ್ಥಳವೇ ಇಲ್ಲ. ಕೆಲವು ವೇಳೆಗಳಲ್ಲಿ ಸಾಕಷ್ಟು ಔಷಧಿ ದೊರೆಯುವುದೂ ಕಷ್ಟವಾಗುತ್ತಿತ್ತು. ಕಾಯಿಲೆಯಿಲ್ಲದ ಮನೆಯೇ ಅಪರೂಪವಾಗಿತ್ತು. ಆಗಾಗ್ಗೆ ಸಂಭವಿಸುತ್ತಿದ್ದ ಮರಣಗಳಿಂದ ನಿಶ್ಚಯಿಸಿದ ಅನೇಕರ ಲಗ್ನಗಳಿಗೆ ಅಡ್ಡಿಯಾಗಿ ಕಾಲಕ್ಕೆ ಸರಿಯಾಗಿ ನಡೆಯಲಾಗದೆ ಬಹಳ ನಷ್ಟವುಂಟಾಗಿದೆ. ಮದುವೆ ಮನೆಯೇ ಸಾವಿನ ಮನೆಯಾದದ್ದು ಎಷ್ಟೋ ಇದೆ. ಕಳೆದ ತಿಂಗಳಲ್ಲಿ ಜನನಕ್ಕಿಂತ ಮರಣ ಎರಡರಷ್ಟು ಹೆಚ್ಚೆಂದು ತಿಳಿಯಬರುತ್ತದೆ. ಆಸ್ಪತ್ರೆಗಳು ಹೆಚ್ಚುತ್ತಾ ಬಂದ ಹಾಗೆ ದೇಶದಲ್ಲಿ ರೋಗಗಳು ಹೆಚ್ಚುತ್ತಾ ಬರುತ್ತವೋ ಎಂಬ ಭಯವು ಅನೇಕರಿಗೆ ತೋರಲಾರಂಭಿಸಿತು. ಮಾರ್ಚ ಎಪ್ರಿಲ ತಿಂಗಳುಗಳಲ್ಲಿ [illegible] ಕಾಯಿಲೆಯು ಬಹು ಪ್ರಬಲವಾಗಿದ್ದು ಅನೇಕರನ್ನು ಬಲಿಗೊಳಿಸಿತು. ಈ ಕಾಯಿಲೆಯ ನಿಜಸ್ಥಿತಿಯನ್ನು ಅರಿಯದ ಗ್ರಾಮವಾಸಿಗಳ ರೋಗಿಗಳನ್ನು ಕಾಯಿಲೆಯು ಉಲ್ಬಣಿಸಿದ ನಂತರ ಗಾಡಿಗಳಲ್ಲಿ ದೂರದಲ್ಲಿರುವ ಆಸ್ಪತ್ರೆಗಳಿಗೆ ತರುತ್ತಿದ್ದುದರಿಂದ ಅಂಥಾ ರೋಗಿಗಳನ್ನು ವಾಸಿಮಾಡುವುದು ಸಾಧ್ಯವಿಲ್ಲವೆಂದು ಆಸ್ಪತ್ರೆಯವರು ಹೇಳುತ್ತಿದ್ದರು. ಪಾಶ್ಚಿಮಾತ್ಯರ ಔಷಧಿಕ್ರಮವು ನಮ್ಮ ಭರತಖಂಡದಲ್ಲಿ ಜಾರಿಗೆ ಬಂದಂದಿನಿಂದ ಅದು ಪ್ರಬಲವಾಗುತ್ತಾ ಬಂದು ನಮ್ಮ ದೇಶದ ಹವಾಗುಣಕ್ಕೆ ಯೋಗ್ಯವಾದ ಮತ್ತು ನಮ್ಮ ಮನೆಗಳ ಹತ್ತಿರ ಸುಲಭದಲ್ಲಿ ದೊರೆಯುವಂತ ಆಯುರ್ವೇದಿಕ್ ಮತ್ತು ಯುನಾನಿ ಔಷಧಿಗಳಲ್ಲಿ ದೇಶೀಯರಿಗೆ ವಿಶ್ವಾಸವಿಲ್ಲದಂತೆ ಮಾಡಿ ಅವುಗಳ ಉಪಯೋಗವನ್ನೇ ಮರೆಸಿರುವುದರಿಂದ ರೋಗಪೀಡಿತರಾದ ಗ್ರಾಮಸ್ಥರು ಕಾಯಿಲೆಯು ಜೋರಾದ ನಂತರ ಆಸ್ಪತ್ರೆಗೆ ತಾರದೆ ಮತ್ತೇನು ಮಾಡಾರು? ಆರೋಗ್ಯಕ್ರಮದ ಪ್ರಥಮ ಕ್ರಮಗಳನ್ನೇ ಅರಿಯದೆ ಇರುವಂಥ ಊರು ನಿವಾಸಿಗಳನ್ನು ದೂರಿ ಫಲವೇನು? ಪಟ್ಟಣವಾಸಿಗಳಿಗಲ್ಲಾ ಈಗಿರುವ ಆಸ್ಪತ್ರೆಗಳ ಪ್ರಯೋಜನ ದೊರೆಯುವಂತೆ ಸರ್ಕಾರದವರು ಏರ್ಪಾಡುಮಾಡಿರುವಂತೆಯೇ ಗ್ರಾಮದವರಿಗೂ ಕೂಡ ಈ ಅನುಕೂಲಗಳನ್ನು ಕಲ್ಪಿಸಬೇಕು. ಇಲ್ಲವಾದರೆ ಪೂರ್ವದಲ್ಲಿ ಜಾರಿಯಲ್ಲಿದ್ದ ನಮ್ಮ ದೇಶೀಯ ಔಷಧಿಗಳನ್ನೇ ಪುನರ್ಜೀವಕ್ಕೆ ತರಬೇಕು. ಆಯುರ್ವೇದಿಕ್ ಮತ್ತು ಯುನಾನಿ ಔಷಧಿಗಳಲ್ಲಿ ತಜ್ಞತೆ ಹೊಂದಲಿಕ್ಕಾಗಿ ಸರ್ಕಾರದವರು ವೇತನಗಳನ್ನು ಕೊಟ್ಟು ಉತ್ತೇಜನ ಕೊಡತಕ್ಕದ್ದು.

ಈಗಿನ ಸರ್ಕಾರದವರು ಈ ಕಡೆ ಗಮನಕೊಡಲಿಕ್ಕಿಲ್ಲವಾದರೆ ಜಾರಿಯಲ್ಲಿರುವ ಔಷಧಿ ಕ್ರಮವಾದರೂ ಎಲ್ಲರಿಗೂ ಪ್ರಯೋಜನವಾಗುವಂತೆ ತಕ್ಕ ಏರ್ಪಾಡುಗಳನ್ನು ಮಾಡುವುದು ಅವಶ್ಯ. ಪಟ್ಟಣಗಳಿಂದ ದೂರದಲ್ಲಿದ್ದು ರಸ್ತೆಗಳ ಅನುಕೂಲಗಳು ಸಹ ಇಲ್ಲದೆಯಿರುವ ಊರುಗಳಲ್ಲಿರುವ ರೈತರಿಗೆ ಆರೋಗ್ಯದ ವಿಷಯ ಬೋಧನೆ ಕೂಡ ಸಿಕ್ಕದಾಗಿಯೂ, ಅವರು ರೋಗದಿಂದ ಪೀಡಿತರಾದಾಗ್ಗೆ ಅದಷ್ಟು ಶೀಘ್ರದಲ್ಲಿ ಔಷಧಿಯ ಸಹಾಯ ದೊರೆಯುವಂತೆ ಮಾಡುವುದಕ್ಕಾಗಿಯೂ ಜನರು ಹಲವು ಉಪಾಯಗಳನ್ನು ಆಗಿಂದಾಗ್ಗೆ ಸೂಚಿಸುತ್ತಾ ಬರುತ್ತಿದ್ದಾರೆ. ಆದರೆ ಇದುವರೆಗೆ ಅಧಿಕಾರಿಗಳು ಇವರ ಅಭಿಪ್ರಾಯಗಳಿಗೆ ಗಮನ ಕೊಟ್ಟಂತೆ ಕಾಣುವುದಿಲ್ಲ. ಶಿಶುಮರಣವು ಹೆಚ್ಚಾಗಿರುವ ಈ ದೇಶದಲ್ಲಿ ಪಟ್ಟಣಗಳಲ್ಲಿರುವಂತೆಯೇ ಗ್ರಾಮಗಳಲ್ಲಿಯೂ ಸಂಚರಿಸುವಂತ ನರ್ಸುಗಳನ್ನು ನೇಮಿಸುವುದು ಅಗತ್ಯವಾಗಿದೆ. ಒಂದು ಕಡೆಯೇ ಸ್ಥಿರವಾಗಿರದೆ ಊರುಕೇರಿಗಳಲ್ಲಿ ಸಂಚರಿಸುತ್ತಾ ಇರುವಂತ ಜಂಗಮ ಆಸ್ಪತ್ರೆಗಳನ್ನು ಏರ್ಪಡಿಸುವುದು ಉತ್ತಮವೆಂದು ಹಲವರ ಅಭಿಪ್ರಾಯ. ಗ್ರಾಮಾಂತರಗಳಲ್ಲಿ ತಿರುಗಾಡುತ್ತಿರುವ ವೇಕ್ಸಿನೇಟರುಗಳಿಗೆ ಆರೋಗ್ಯಕ್ರಮದಲ್ಲಿ ತಕ್ಕಮಟ್ಟಿಗೆ ತರಬೇತುಕೊಟ್ಟು ಅವರು ಗ್ರಾಮಸ್ಥರಿಗೆ ಬೋಧಿಸಿಕೊಡಬೇಕು. ಖಾಸಗಿ ಶಾಲೆಗಳಲ್ಲಿ ಅಲ್ಲಿಯ ಉಪಾಧ್ಯಾಯರಿಗೂ [illegible]ಗಳಿಗೂ ಅವಶ್ಯವಿರುವ ಸಾಧಾರಣ ಔಷಧಿಗಳನ್ನು ತ[illegible] ಇಲಾಖೆಯ ಉದ್ಯೋಗಸ್ಥರ ಮೂಲಕ ಹಂಚಿಕೆ ಮಾಡುತ್ತಿರುವುದು ಬಹು ಸಹಕಾರಿಯೆಂದು [illegible]. ಇದೇ ರೀತಿ ಗ್ರಾಮಸ್ಥರ ಉಪಯೋಗಕ್ಕಾಗಿ ಗ್ರಾಮಶಾಲೆಗಳಲ್ಲಿ, ಸಾಧಾರಣವಾಗಿ ಊರಲ್ಲಿ ಇದ್ದೇ ಇರುವ ಮಲೇರಿಯಜ್ವರ, ಕೆಮ್ಮಲು, ಆಮಶಂಕೆಯ ಔಷಧಿಗಳನ್ನು ಆಗಾಗ್ಗೆ ಬೇಕಾಗುವ ಟಿಂಚರಿನ ಎಣ್ಣೆಯ ಮಾತ್ರೆಗಳನ್ನು ಇಟ್ಟು ಕಾಯಿಲೆಯವರಿಗೆ ಹಂಚಿದರೆ ಜನರ ಕಷ್ಟವು ಸ್ವಲ್ಪಮಟ್ಟಿಗಾದರೂ ನಿವಾರಣೆಯಾಗಬಹುದು. ಶಾಲೆಗಳಿಗೆ ಸಾಧಾರಣವಾಗಿ ಎಲ್ಲಾ ಮನೆಗಳಿಂದಲೂ ಯಾವಾಗಲೂ ಮಕ್ಕಳು ಹೋಗುತ್ತಿರುವುದರಿಂದ ರೈತರು ಉದಾಸೀನರಾಗದೆ ಪ್ರಾರಂಭದಲ್ಲಿಯೇ ಕಾಯಿಲೆಗೆ ಔಷಧಿಯನ್ನು ಉಪಯೋಗಿಸುವಂತೆ ಅನುಕೂಲವಾಗುವುದು.

ಇವುಗಳಿಗೆಲ್ಲಾ ಹಣದ ಅವಶ್ಯಕತೆಯೇ ಮುಖ್ಯ. ಸಾಕಷ್ಟು ಹಣವಿಲ್ಲದೆ ಏನೂ ಮಾಡಲಿಕ್ಕಾಗುವುದಿಲ್ಲವೆಂದು ಔಷಧಿ ಇಲಾಖೆಯ ಅಧಿಕಾರಿಗಳು ಹೇಳುತ್ತಿರುವುದೇನೊ ಸಹಜ. ಆರೋಗ್ಯಭಾಗ್ಯವೇ ಭಾಗ್ಯವು. ಆರೋಗ್ಯವಿಲ್ಲದ ಮನುಷ್ಯನಿಂದ ಏನೊಂದೂ ಪ್ರಯೋಜನವಿಲ್ಲವೆಂದಿರುವಾಗ್ಗೆ ದೇಶದ ಆರೋಗ್ಯಸ್ಥಿತಿಗೆ ತಕ್ಕಷ್ಟು ಹಣ ಖರ್ಚುಮಾಡುವುದರ ಬದಲು ಸಾಲದೆಂದು ಜನರು ಬಾಯಿಬಡಿಯುತ್ತಿರುವ ಖರ್ಚಿನಲ್ಲಿ ಹತ್ತು ಸಾವಿರ ರೂಪಾಯಿ ಕಡಿಮೆ ಮಾಡಬೇಕೆಂದು ಇಂಚ್‌ಕೇಪ್ (ರಿಟ್ರೆಂಚ್‌ಮೆಂಟ್) ಕಮಿಟಿಯವರು ಮಾಡಿದ ತೀರ್ಮಾನಗಳ ವಿಷಯ ಎಷ್ಟು ವಿಷಾದಿಸಿದರೂ ಸಾಲದು. ಅದರಲ್ಲೂ ಸ್ಥಳೀಯ ಸರ್ಕಾರದವರು ಸಿಬ್ಬಂದಿಯ ಖರ್ಚನ್ನು ಕಡಿಮೆಮಾಡಿ ಆ ಹಣವನ್ನು ಉಳಿಸುವುದರ ಬದಲು ಔಷಧಿಯ ಖರ್ಚನ್ನೇ ಕಡಿಮೆಮಾಡಿದ್ದು ಮತ್ತಷ್ಟು ವ್ಯಸನಕರ. ಈ ವರ್ಷ ಕೌನ್ಸಿಲಿನವರು ಔಷಧಿ ಖರ್ಚಿಗಾಗಿ ಅಲ್ಪಸ್ವಲ್ಪ ಹಣವನ್ನೇನೋ ಹೆಚ್ಚಿಗೆ ಕೊಡಬೇಕೆಂದು ಸಿಫಾರಸ್ಸು ಮಾಡಿರುವರು. ಈ ಸಿಫಾರಸ್ಸಿನ ಫಲವೇನೋ ಇನ್ನೂ ತಿಳಿಯದು. ಆ ಸ್ವಲ್ಪ ಹಣವೆಂದಿಗೂ ಸಾಲದು. ಈ ಮುಖ್ಯ ಇಲಾಖೆಗೆ ಯಥೇಚ್ಛವಾಗಿ ಹಣ ಮಂಜೂರು ಮಾಡುವಂತೆ ಕೌನ್ಸಿಲಿನವರು ಹೋರಾಡಬೇಕಾದದ್ದು, ಕೌನ್ಸಿಲಿನ ತೀರ್ಮಾನಗಳನ್ನು ಸ್ಥಳೀಯ ಸರ್ಕಾರವು ಜಾರಿಗೆ ತರಬೇಕಾದದ್ದು ಅವರವರ ಕರ್ತವ್ಯವಾಗಿದೆ.

ಬ್ರಿಟಿಷ್ ನ್ಯಾಯಮೈಸರಿನ ಮಾದರಿ.

("ಫಾರ್‌ವರ್ಡ್" ನಿಂದ)

"ಹಿಂದುಸ್ಥಾನದ ಅಶಾಂತಿ" ಎಂಬ ಹೆಸರಿನಿಂದ ಸರ್ ವೇಲೆಂಟೈನ್ ಚಿರೋಲ್‌ರವರು ಬರೆದ ಪುಸ್ತಕದಲ್ಲಿ ತಿಲಕರ ವಿಷಯದಲ್ಲಿ [illegible] ಸುಳ್ಳು ಸಂಗತಿಗಳನು ಬರೆದರು. ಲೋಕಮಾನ್ಯ ತಿಲಕರು ಇಂಗ್ಲೆಂಡಿಗೆ ಹೋಗಿ ಗ್ರಂಥಕರ್ತರಮೇಲೆ ಮೊಕದ್ದಮೆ ಹೂಡಿದರು. ಮೊಕದ್ದಮೆಯು [illegible] ಮಿಸೆಸ್ ಬೆಸೆಂಟರವರನ್ನು [illegible] ಒಂದು ಪತ್ರಿಕೆಯು ಆಕ್ಷೇಪಿಸಿತು. ಅದರಮೇಲೆ ಕೇಸು ನಡೆದು ಪರಿಹಾರ ಸಿಕ್ಕಲಿಲ್ಲ. ನಮ್ಮ ನ್ಯಾಯಾಧೀಶರು ತಿಲಕರನ್ನು ಕ್ರಾಂತಿಕಾರಕರೆಂದು ಭಾವಿಸಿದ್ದರು. ದೇಶದಲ್ಲಿ ಶಾಂತತೆ ಸುಳಿವಿಲ್ಲದ ಸಮಯದಲ್ಲಾಗಿದ್ದರೆ ತಿಲಕರು ಒಂದು ರಾಜ್ಯಭಾವವನ್ನೇ ಸ್ವಂತವಾಗಿ ಸಾಧಿಸಲು ಶಕ್ತಿಯುಳ್ಳವರಾಗಿದ್ದರು. [illegible] ಅವರಿಗೆ ಸರಿಯಾಗಿ [illegible] ಬ್ರಿಟಿಷ್ ನ್ಯಾಯದ ಒಂದು [illegible] ಬಹಿಷ್ಕರಿಸಿದರು.

ಸರ್ ಶಂಕರನ್‌ನಾಯರು [illegible] ಸಾಧಾರಣ [illegible] ಮದ್ರಾಸ ಹೈಕೋರ್ಟಿನ ಜಡ್ಜಿ ಆಗಿದ್ದರು. ಅವರನ್ನು ವೈಸ್‌ರಾಯರ ಕೌನ್ಸಿಲ್ ಪದವಿಗೆ ಏರಿಸಿದ್ದರು. ಇವರು ಆ ರಾಜಕೀಯ ವಿಷಯದಲ್ಲಿ ಎಷ್ಟು [illegible] ಕಲ್ಲದವರೆಂಬುದು ಗೊತ್ತಾಗುತ್ತದೆ. ಅವರು ಬಹಳ ಸಹನಶಕ್ತಿಯುಳ್ಳವರು. ಈವರೆಗೂ ಅವರ ಸೆಕ್ರೆಟರಿಗೂ ಭಿನ್ನಾಭಿಪ್ರಾಯವಾದಾಗ ಇವರನ್ನು [illegible] ಅಭಿಪ್ರಾಯ [illegible] ಪದ್ಧತಿಯನ್ನು ಇವರು ಸಹಿಸಿಕೊಂಡಿದ್ದರು. ಆದರೆ ಪಂಜಾಬಿನ ಅತ್ಯಾಚಾರಗಳನ್ನು ಸಹಿಸಲಾಗಲಿಲ್ಲ. [illegible] ಕಾರ್ಯಗಳನ್ನು ವಿರೋಧಿಸಲಿಕ್ಕಾಗಿ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟರು.

ಬಳಿಕ ಶಂಕರನ್! ಅಷ್ಟರಲ್ಲೇ ಬಿಟ್ಟಿದ್ದಿದ್ದರೆ [illegible] ಅವರನ್ನು ಬುದ್ಧಿವಂತರೆಂತಲೂ ಧೈರ್ಯವಿಲ್ಲದವರೆಂತಲೂ ತನ್ನ ದೇಶೀಯರಿಗಿಂತ 6000 ಮೈಲು ದೂರ ಇರುವ ಜನರಲ್ಲಿ ಇವರಿಗೆ ಹೆಚ್ಚಿಗೆ ನಂಬಿಕೆ ಇದೆ ಎಂತಲೂ ಭಾವಿಸಿ ಹಿಂದೀಯರು ಸುಮ್ಮನೆ ಇರುತ್ತಿದ್ದರು. ತನ್ನ ದೇಶೀಯರು ಸ್ವತಂತ್ರಕ್ಕಾಗಿ ಪಡುವ ಆಸೆಗಿಂತಲೂ, ಆ ಇಚ್ಛಾಪೂರ್ತಿಯನ್ನು ಪಡೆಯಲು ಮಾಡುವ ಹೋರಾಟಕ್ಕಿಂತಲೂ ಬ್ರಿಟಿಷ್ ಜನರಿಗೆ ಇಂಡಿಯಾವನ್ನು ಆಳುವದರಲ್ಲಿ ಇರುವ ಕಷ್ಟಗಳ ಮೇಲೆ ಇವರಿಗೆ ಹೆಚ್ಚಿಗೆ ಸಹಾನುಭೂತಿ ಇತ್ತು.

ಸರ್ ಶಂಕರನ್‌ನಾಯರು "ಗಾಂಧಿ ಮತ್ತು ಅನಾಯಕತ್ವ" ಎಂಬ ಪುಸ್ತಕವನ್ನು ಬರೆದರು. ಇದರಲ್ಲಿ 12 ಆಣೆ ಮಹಾತ್ಮರಿಗೆ ಬೈಗಳೂ, ಮೂರು ಆಣೆ ನಿಜವಲ್ಲದ ಸಂಗತಿಗಳೂ ಒಂದು ಆಣೆ ಸತ್ಯವೂ ಇತ್ತು. ಆ ಬಾಕಿ ಪಾಲಿನ ಸತ್ಯವು ಅವರನ್ನು ಘೋರ ಕಷ್ಟಕ್ಕೆ ಗುರಿಪಡಿಸಿದೆ. [illegible] ಪಂಜಾಬಿನಲ್ಲಿ ಓಡ್ವೈಯರು ಆಳಿಕೆ [illegible] ಜನ ಸೇರಿಸುವ ಕಾರ್ಯಗಳನ್ನು ಟೀಕಿಸುವಾಗ ಪಂಜಾಬಿನ ಮಾಜಿ [illegible] ಮನಸ್ಸನ್ನು ನೋಯಿಸಿದರು. ಅದಕ್ಕಾಗಿ ಇವರಮೇಲೆ ಇಂಗ್ಲೆಂಡಿನಲ್ಲಿ, ಪುಸ್ತಕವು ಬಹಳ ಪ್ರಚಾರವಾದ ಹಿಂದುಸ್ಥಾನದಲ್ಲಲ್ಲ, ಒಂದು ಕೇಸ್ ನಡಿಸಿದರು. ಈ ಕೇಸನ್ನು ನಡಿಸಲಿಕ್ಕೆ ಸರ್ ಶಂಕರನಾಯರಿಗೆ ವಿಪರೀತ ಖರ್ಚಾಯಿತು. ಆದರೆ ಮಾಜಿ ಲೆಫ್ಟಿನೆಂಟ್ ಗವರ್ನರಿಗೆ ಪಂಜಾಬಿನ ಆಫೀಸರೊಬ್ಬರು ರುಜುವಾತು ಒದಗಿಸಲಿಕ್ಕೆ ನೇಮಿಸಲ್ಪಟ್ಟಿದ್ದರು. ಆದರೆ ಆ ಆಫೀಸರು ತಮ್ಮ ವಿರಾಮಕಾಲದಲ್ಲಿ ಮಾತ್ರ ತನ್ನ ಬಾಕಿ ಕೆಲಸಗಳಿಗೆ ಅಡಚಣೆ ಇಲ್ಲದಂತೆ ಈ ಕೆಲಸ ಮಾಡಿದರು. ಪಂಜಾಬಿನಲ್ಲಿ ಕಮಿಶನ್ ಮೇಲೆ ಸಾಕ್ಷಿ ವಿಚಾರವಾಯಿತು. ಬ್ರಿಟಿಷ್ ಸಾಮ್ರಾಜ್ಯದ ಸಹಾಯಕ್ಕಾಗಿ ಫಿರಂಗಿ ಮೇವನ್ನು ಜಮಾಯಿಸುವ ಕಾರ್ಯದಲ್ಲಿ ಪಂಜಾಬಿನಲ್ಲಿ ಎಷ್ಟರ ಮಟ್ಟಿಗೆ ಬೆದರಿಕೆ ಹಾಕುತ್ತಿದ್ದರೆಂಬುದು ನಮ್ಮ ವಾಚಕರಿಗೆ ಗೊತ್ತಿದೆ.

ಈ ಮೊಕದ್ದಮೆಯನ್ನು ತನಿಖೆ ಮಾಡುವ ಸಮಯದಲ್ಲಿ ಜಡ್ಜಿಯವರು ಸಾಯುತ್ತಿರುವ ಜನರಲ್ ಡೈಯರಿಗೆ ನ್ಯಾಯಕೊಡಬೇಕೆಂಬ ಸದುದ್ದೇಶವನ್ನು ಮಾಡಿದರು. ಪಂಜಾಬಿನ ಪ್ರಜೆಗಳನ್ನು ನಿಗ್ರಹಿಸುವ ಕಾರ್ಯದಲ್ಲಿ ಅತ್ಯಾಚಾರಗಳು ನಡೆದವೋ, ಅಥವಾ ಗದ್ದಲವೆಬ್ಬಿಸುತ್ತಿದ್ದ ಜನರಮೇಲೆ ಆಕಾಶವಿಮಾನದಿಂದ ಬಾಂಬ್ ಹಾಕಿದ್ದರಲ್ಲಿ ನ್ಯಾಯವಿದೆಯೋ ಎಂಬುದನ್ನು ನಿಶ್ಚಯಿಸುವಾಗ ಒಂದೇ ಸಂಗತಿ ನೋಡಿದರೆ ಸಾಕಾಗಿದೆ. ಏನೆಂದರೆ ಈ ಕಾರ್ಯಗಳಿಂದ ಬ್ರಿಟಿಷ್ ಸಾಮ್ರಾಜ್ಯವು ಕಳೆದುಹೋಗುತ್ತಿದ್ದದ್ದು ಉಳಿಯಿತೋ ಎಂಬುದನ್ನು ನೋಡಿದರೆ ಸಾಕಾಯಿತು. ಜನರಲ್ ಡೈಯರ ಕಾರ್ಯಗಳಿಗೆ ಸರ್ ಓಡ್ವೈಯರ್ ಒಪ್ಪಿಗೆ ಕೊಟ್ಟಿದ್ದರಿಂದ ಆಯುಧಧಾರಿಗಳಲ್ಲದ ಶಾಂತಿಯುಕ್ತ ಜನರಮೇಲೆ ಗುಂಡು ಹೊಡೆದು ಅನೇಕರನ್ನು ಕೊಂದು ಅನೇಕರನ್ನು ಅಂಗಹೀನರನ್ನು ಮಾಡಿದ ಕಾರ್ಯಗಳಲ್ಲಿ ಸರ ಓಡ್ವೈಯರ್ ಭಾಗಿಗಳಾದರೋ ಎಂಬುದನ್ನು ಬ್ರಿಟಿಷ್ ನ್ಯಾಯತೀರ್ಪನ್ನು ಕೊಡಲು ಕೂತ ಮಿಸ್ಟರ್ ಮೆಕಾರ್ಡಿಯವರು [illegible]ಲಾಗಲಿಲ್ಲ. ಆದರೆ "ಚೆನ್ನಾಗಿ ಯೋಚಿಸಿ [illegible]ವನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ನೋಡಿದರೆ ಆಪಾಯಕರವಾದ ವಿಶೇಷ ಸಂದರ್ಭದ ಸಮಯದಲ್ಲಿ ನ್ಯಾಯವಾಗಿ ವರ್ತಿಸಿದವು. ಅವರಿಗೆ ಸ್ಟೇಟ್ ಸೆಕ್ರೆಟರಿಯವರು ಅನ್ಯಾಯವಾಗಿ ಶಿಕ್ಷಿಸಿದರು." ಹಂಟರ್ ಕಮಿಟಿಯ [illegible] ಎಲ್ಲಾ ಆಫೀಸರು [illegible] ತೀರ್ಮಾನವು [illegible] ಈ ಆಫೀಸರುಗಳನ್ನು [illegible] ಸಾಮ್ರಾಜ್ಯವು [illegible] ಗೊತ್ತೇ ಇಲ್ಲ.

[illegible] ಪತ್ರಿಕೆಗಳಲ್ಲಿ [illegible] ಸಹ ನಡೆ[illegible] ಅಸ್ವಸ್ಥ [illegible] ಬಿಳೀ [illegible] ನೋಡಿದ್ದೇವೆ. [illegible] ನಡಿಸಿ [illegible] ನ್ಯಾಯ [illegible] ಕೆಲ[illegible] ಸರ್ ಮೈಕೆಲ್‌ರಿಗೆ ಗೌರವ ಉಳಿಯಿತು. ಅವರ ಗೌರವದ ಬೆಲೆಯಾ 500 ಪೌಂಡುಗಳೂ ಸಿಕ್ಕಿರವು. ಸಾಮ್ರಾಜ್ಯವನ್ನು ಉಳಿಸಿದ ಸಾಯುತ್ತಿರುವ ಜನರಲ್ ಡೈಯರು ತನ್ನ ದೇ[illegible] ಇನ್ನು ಬೇಕಾಗಿಲ್ಲದೆ [illegible]. ಆದರೆ ಸರ್ ಶಂಕರನಾಯರ ವಿಷಯವೇನು? ಅವರು ವ್ಯಸನಪಡುತ್ತಿರಬಹುದು. ಆಗಲೆ ಇನ್ನಾದರೂ ಬುದ್ಧಿ ಬಂತೋ ಎಂದು ಬಯಸುತ್ತೇವೆ.

ದ್ವಿಜೇಂದ್ರನಾಥ ಟಾಗೋರರು ಮಹಾತ್ಮ ಗಾಂಧಿಯವರಿಗೆ ಬರೆದ ಪತ್ರದಿಂದ.

(ಬರೆದುಬಂದದ್ದು)

ಕಾಂಗ್ರೆಸ್ಸಿನಲ್ಲಿ ತೀರ್ಮಾನವಾದ ಕಾರ್ಯಕ್ರಮವನ್ನು ಸಾಗಿಸಬೇಕೆಂತ ನೀವು ಕೇಳುವದು ಯಾಕೆಂದ

ಜೀವನಕ್ಕೆ ಅವಶ್ಯವಿರುವ ವಸ್ತುಗಳನ್ನು ನಾವು ಕೈಯಿಂದಲೇ ಮಾಡಿಕೊಂಡು ಶಕ್ತಿ ಪಡೆಯಬೇಕೆಂಬುದೇ ಕಾರಣ. ಬರೇ ಜೀವವನ್ನು ಇಟ್ಟುಕೊಳ್ಳಲಿಕ್ಕೆ ಶಕ್ತಿ ಬಂದರೆ ಕ್ರಮೇಣ ಅನುಕೂಲದಿಂದ ಜೀವಿಸುವ ಶಕ್ತಿಯನ್ನು ಪಡೆಯಬಹುದು. ಆದರೆ ಸರಕಾರದವರು ಕೊಡುವದನ್ನು ಮಾತ್ರ ನಾವು ತೆಗೆದುಕೊಳ್ಳುತ್ತಾ ಹೋದರೆ, ನಮಗೇನೋ ಸಿಕ್ಕುತ್ತೆ, ಹಂಡಿಕ. ಆದರೆ ಶಕ್ತಿ ಮಾತ್ರ ಬರುವದಿಲ್ಲ. ದಿನದಿನಕ್ಕೆ ಅಬಲರಾಗುತ್ತಾ ಬರುತ್ತೇವೆ. ಸರಕಾರದಲ್ಲಿ ಶಕ್ತಿಯೆಲ್ಲಾ ಉಳಿದಿರುವಷ್ಟು ಕಾಲ ನಾವು ಅದರ ಇಷ್ಟದಂತೆ ಇರಬೇಕಾಗುತ್ತೆ. ಸರಕಾರವು ತನ್ನ ಕ್ಷೇಮವನ್ನು ಕಾಪಾಡಿಕೊಳ್ಳುತ್ತಾ ಇರುತ್ತೆ. ನಾವು ನಮ್ಮ ಕ್ಷೇಮವನ್ನು ಆಲೋಚಿಸುತ್ತಿರುತ್ತೇವೆ. ಸರಕಾರಕ್ಕೆ ಮನಸ್ಸು ಬಂದಂತೆ ಮಾಡಲಿಕ್ಕೆ ಇರುವ ಶಕ್ತಿಯನ್ನು ಹಾಳುಮಾಡುವದಕ್ಕೆ ನಮಗೆ ಸಂಕಲ್ಪ ಶಕ್ತಿ ಕೊಟ್ಟೀತೆಂತ ನಿರೀಕ್ಷಿಸುವದು ಹುಚ್ಚುತನವೆ. ಜನಸಮುದಾಯದ ಹೆಚ್ಚಿನಭಾಗದವರು ಹೊಟ್ಟೆಗೂ ಬಟ್ಟೆಗೂ ಇಲ್ಲದೆ ಕಷ್ಟಪಡುತ್ತಿರುವಾಗ ನಾವು ಭೋಗಪಡಲು ಸಾಮಗ್ರಿಗಳನ್ನು ಸರಕಾರವು ಒದಗಿಸಿಕೊಡುತ್ತದೆ. ಸಂದರ್ಭಗಳಿಂದ ಬಲುಂ ಮಾಡಲ್ಪಡದಿದ್ದರೆ ತನ್ನ ಶಕ್ತಿಗಳಲ್ಲಿ ಸ್ವಲ್ಪವನ್ನೂ ಅದು ಬಿಟ್ಟುಕೊಡುವದಿಲ್ಲ. ಅದರ ಶಕ್ತಿಯನ್ನು ತನ್ನ ಕ್ಷೇಮಕ್ಕಾಗಿ ಉಪಯೋಗಿಸಲ್ಪಡುತ್ತಿಯೇ ಹೊರತು ಹಿಂದುಸ್ಥಾನದ ಸಮುದಾಯದ ಪ್ರಯೋಜನಕ್ಕಾಗಿ ಉಪಯೋಗಿಸಲ್ಪಡುವದಿಲ್ಲ.

ಲಾಲಾ ಲಜಪತರಾಯರು ಲಂಡನ್ನಿನಲ್ಲಿ ಹಿಂದುಸ್ಥಾನದ ವಿದ್ಯಾರ್ಥಿಗಳ ಸಭೆಯಲ್ಲಿ "ಹಿಂದುಸ್ಥಾನದ ಸ್ಥಿತಿ" ಯ ಮೇಲೆ ಮಾಡಿದ ಭಾಷಣದ ಸಾರಾಂಶ

(ಬರೆದುಬಂದದ್ದು)

ಹಿಂದುಸ್ಥಾನದಲ್ಲಿ ಒಗ್ಗಟ್ಟಿಲ್ಲ. ಆದರೆ ಮುಖ್ಯವಿಷಯಗಳಲ್ಲಿ ಹಿಂದುಸ್ಥಾನದಲ್ಲಿ ಇರುವಷ್ಟು ಒಗ್ಗಟ್ಟು ಬೇರೆ ಯಾವ ದೇಶದಲ್ಲಿ ಇದೆ ತೋರಿಸಿ. ಈಗ ಮೂರು ನಾಲ್ಕು ವರ್ಷಗಳಿಂದ ಮಹತ್ವವಾದ ಬದಲಾವಣೆಯಾಗಿದೆ. ಇಷ್ಟು ಸ್ವಲ್ಪಕಾಲದಲ್ಲೇ ಇಷ್ಟು ಬಳೇ ಬದಲಾವಣೆಯಾಯಿತಲ್ಲ ಎಂಬದಕ್ಕೆ ನಾನು ತುಂಬಾ ಸಂತೋಷಪಡುತ್ತೇನೆ.

ಪರರ ಆಳ್ವಿಕೆಯಲ್ಲಿ ಸ್ವಾರ್ಥತೆ ಇಲ್ಲದೆ ಇರುವದಿಲ್ಲ. ಆ ಅಧೀನದಲ್ಲಿರುವ ಜನಾಂಗವು ಆಳುವ ಜನಾಂಗದ ವಿಷಯದಲ್ಲಿ ಮಾಯೆಯಿಂದ ಮುಚ್ಚಲ್ಪಟ್ಟಿದ್ದರೆ ಆಳುವವರು ತಪ್ಪುದಾರಿಯಲ್ಲೇ ಹೋಗುತ್ತಾರೆ. ಇಂಡಿಯಾದಲ್ಲಿ ಬ್ರಿಟಿಷರ ಆಳ್ವಿಕೆಯು ಕೆಟ್ಟದ್ದೇನಲ್ಲ. ಅವರ ಆಳ್ವಿಕೆಯಲ್ಲಿ ಪರರ ಆಳಿಕೆಯಲ್ಲಿ ಪರರ ಆಳಿಕೆಯ ಕೆಡಕುಗಳೆಲ್ಲವೂ, ಬ್ರಿಟಿಷ್ ಆಳ್ವಿಕೆಯ ಸ್ವಲ್ಪಗುಣವೂ ಇದೆ. ಅವರಲ್ಲಿಗೆ ಡೆಪ್ಯುಟೇಶನ್ ಹೋಗುತ್ತಲೂ ದೂರುಗಳನ್ನು ಕಳುಹಿಸುತ್ತಲೂ ಇರುವವರೆಗೆ ಅವರು ನಮ್ಮ ಮೇಲೆ ದಯಾಳುಗಳಾಗಿಯೇ ಇರುತ್ತಾರೆ. ಅದು ಬಿಟ್ಟು ಅವರ ಆಳ್ವಿಕೆಯ ಮೂಲಕ್ಕೇ ಹೋಗಿ ಅವರ ರಾಜ್ಯಭಾರವನ್ನೂ ಅವರ ಲಾಭವನ್ನೂ ಮುರಿಯಲಿಕ್ಕೆ ಪ್ರಯತ್ನಿಸಿದ ಕೂಡಲೇ ಅವರ ದಯಾಳುತನವೆಲ್ಲಾ ಮಾಯವಾಗಿಹೋಗುತ್ತೆ.

ಬ್ರಿಟಿಷರ ಆಳ್ವಿಕೆಯು ಹಿಂದುಸ್ಥಾನದಲ್ಲಿ ಮೊದಲನೇ ಪರರ ಆಳ್ವಿಕೆಯಾಗಿದೆ. ವಿಧವಿಧದ ಜನಾಂಗದವರು ನಮ್ಮನ್ನು ಜಯಿಸಿದರು. ಆದರೆ ಅವರೆಲ್ಲರೂ ದೇಶದಲ್ಲೇ ನಿಂತು ದೇಶೀಯರಾಗಿ ಹೋಗಿ, ದೇಶದ ಜನರೊಂದಿಗೆ ಮಿಳಿತವಾಗಿಹೋದರು. ಹಿಂದುಸ್ಥಾನದ ನಾಗರೀಕತೆಯು ಹಿಂದೂ ಮತ್ತು ಮುಸಲ್ಮಾನ ಧರ್ಮದ ಬೆರಿಕೆಯ ಸಾರವಾಗಿದೆ. ಮುಸಲ್ಮಾನರು ಹಿಂದುಸ್ಥಾನವನ್ನು ಅರೆಬೀಯರಾಗಿಯಾಗಲೀ, ಟರ್ಕಿಯವರಾಗಿಯಾಗಲೀ ಆಳಲಿಲ್ಲ. ಅವರು ಹಿಂದೀಯರಾಗಿಯೇ ಆಳಿದರು. ಅವರ ಸರಕಾರದ ಉತ್ಪತ್ತಿಯಲ್ಲಿ ಒಂದು ಕಾಸಾದರೂ ದೇಶದ ಹೊರಗೆ ಹೋಗುತ್ತಿದ್ದಿಲ್ಲ. ಅವರಿಗೆ ವೈಟ್‌ಹಾಲ್ (ಲಂಡನಿನಲ್ಲಿರುವ ಇಂಡಿಯಾ ಆಫೀಸ್) ಲಂಕೇಶೈರ್, ಕೆನಾ, ಎಂಬವು ಇತ್ತಿಲ್ಲ. ಇಂಗ್ಲಿಷರ ಆಳಿಕೆಯಲ್ಲಿ ಹಾಗಲ್ಲ. ಅವರ ಆಳ್ವಿಕೆಯು ಹಿಂದುಸ್ಥಾನದ ಪ್ರಜೆಗಳ ಪ್ರಯೋಜನಕ್ಕಲ್ಲ. ಆದರೆ ಹಿಂದುಸ್ಥಾನದ ಹೊರಗಿರುವ ಜನರ ಪ್ರಯೋಜನಕ್ಕಾಗಿದೆ.

ಹಿಂದುಸ್ಥಾನವು ಒಂದು ಜನಾಂಗವೆನಿಸಿಕೊಂಡು ಇದ್ದದ್ದನ್ನು ತಪ್ಪಿಸಿಕೊಳ್ಳಬೇಕೋ. ನಾವು ಹಿಂದೀಯರಾಗಿಯೇ ಇರುತ್ತೇವೆ. ಹಿಂದೀಯರಾಗಿ ಉಳಿಯಲಿಕ್ಕೆ ಪ್ರಯತ್ನಿಸುವದರಲ್ಲಿ ನಾವು ನಾಶವಾಗಿಹೋದರೂ ಚಿಂತೆಯಿಲ್ಲ. ನಾವು ಇಂಗ್ಲೀಷರಾಗಲೀ, ಫ್ರೆಂಚರಾಗಲೀ, ಜಪಾನೀ ಜನರಾಗಲೀ ಆಗಲಿಕ್ಕೆ ಎಂದೂ ಒಪ್ಪುವದಿಲ್ಲ. ನಮ್ಮ ಭವಿಷ್ಯತ್ತನ್ನು ನಾವೇ ಒಪ್ಪಿಕೊಳ್ಳುತ್ತೇವೆ. ನಮ್ಮೊಳಗೆ ಇರುವ ವ್ಯತ್ಯಾಸಗಳನ್ನು ನಾವೇ ಸರಿಪಡಿಸು[illegible] ನಮಗೆ [illegible] ಬೇಕೆಂಬುದನ್ನು ನಾವೇ ನಿಶ್ಚಯಿಸಿಕೊಳ್ಳುತ್ತೇವೆ. ಬೇರೆಯವರಿಗೆ ಎಷ್ಟೇ [illegible] ಅವರಿಂದ ಇದು ಸಾಧ್ಯ [illegible] ಆಡಳಿತಕ್ಕಾ [illegible] ತಿಂಸ್ಥರಿಸಬೇಕು. 1919 ನೇ ಇಸ್ವಿಯ ಆಕ್ಟಿನಿಂದ ಬಂದ ಸುಧಾರಣೆಯನ್ನು ನಾವು ಒಪ್ಪಿಕೊಳ್ಳುವದೂ ಇಲ್ಲ. ಅದನ್ನು ಉಪಯೋಗಿಸಿಕೊಳ್ಳುವದೂ ಇಲ್ಲ.

ಹಿಂದುಸ್ಥಾನದಲ್ಲಿ ಇರುವ ಜಾತಿಭೇದ, ಅಸ್ಪೃಶ್ಯತೆ ಹಿಂದೂ ಮುಸಲ್ಮಾನರ ಹೋರಾಟಗಳನ್ನು ನಮಗೆ ಸ್ವರಾಜ್ಯ ಕೊಡಲು ಅಡ್ಡಿಗಳಾಗಿ ತೋರಿಸುತ್ತಾರೆ. ಅಸ್ಪೃಶ್ಯತೆಯೊಂದು ಹಿಂದುಸ್ಥಾನದಲ್ಲಿ ಇರುವದಕ್ಕೆ ನನಗೆ ನಾಚಿಕೆಯಾಗುತ್ತದೆ. ನಮ್ಮ ಜನರಿಗೇನೇ ನಾವು ನ್ಯಾಯ ಕೊಡಬೇಕಾಗಿತ್ತು. ನಮ್ಮ ಅಭಿವೃದ್ಧಿಗೆ ಕುಂದಕವಾಗಿರುವ ಅಸ್ಪೃಶ್ಯತೆಯನ್ನು ಈ ಮೊದಲೇ ದೂರಮಾಡಬೇಕಿತ್ತು. ಆದರೆ ಬ್ರಿಟಿಷರು ಏನುಮಾಡಿದ್ದಾರೆ. ಈ ವಿಷಯದಲ್ಲಿ ಕಷ್ಟಪಡದಿದ್ದರೂ ಅಸ್ಪೃಶ್ಯರ ವಿದ್ಯಾಭಿವೃದ್ಧಿಗೂ ಅರ್ಥಿಕ ಏಳಿಗೆಗೂ ಏನಾದರೂ ಮಾಡಿದ್ದಿಲ್ಲ. ಅವಕ್ಕೆ ಮನಸ್ಸೇ ಇದ್ದಿರಲಿಲ್ಲ. ಈ ಕೆಡಕನ್ನು ನಾವೇ ಹೋಗಲಾಡಿಸಿಕೊಳ್ಳಬೇಕು. ಪರಕೀಯರಿಗಿಂತ ಚೆನ್ನಾಗಿ ನಮ್ಮ ಕುಂದುಕೊರತೆಗಳನ್ನು ತಿಳಿಕೊಳ್ಳಲಿಕ್ಕೆ ನಮಗೇನೇ ಶಕ್ತಿಯಿದೆ. ಸಾಧಾರಣ ಜನಸಮುದಾಯವನ್ನು ಕಾಪಾಡುತ್ತಿರುವರು ಬ್ರಿಟಿಷರಲ್ಲ, ವಿದ್ಯಾವಂತರಾದ ತಿಳುವಳಿಕೆಯುಳ್ಳ ದೇಶೀಯರೇ. ಬ್ರಿಟಿಷರು ದಯಾಳುಗಳಲ್ಲವೆಂತ ಮುಂಚಾಗಿ ಹೇಳುವದರಿಂದ ಪ್ರಯೋಜನವಿಲ್ಲ. ನಮ್ಮ ಮನೆಯಲ್ಲಿ ನಾವೇ ಯಜಮಾನರಾಗಿರುತ್ತೇವೆಂತ ಹೇಳುತ್ತೇವಷ್ಟೆ. ನಮಗೆ ಮೋಕ್ಷವಾಗಬೇಕಾದರೆ ನಮ್ಮ ಜನರಿಂದಲೇ ಬರಬೇಕಾದರೆ ನಮ್ಮ ಜನರಿಂದಲೇ ಬರಬೇಕಾಗಿದೆ. "ಇಂಡಿಯಾದಲ್ಲಿ ಈಗಿನ ಆಡಳಿತ ಪದ್ಧತಿಯು ನಡಿಯುವದು ಅಸಾಧ್ಯವಾಗುವಂತೆ ಮಾಡಿ" ಎಂತ ನಮ್ಮ ಜನರನ್ನೇ ಕೇಳಿಕೊಳ್ಳುತ್ತೇವೆ. ನಾವು ಹಿಂಸೆಯಲ್ಲಿ ನಂಬಿಕೆ ಇಡಲಿಲ್ಲ. ಹಿಂಸಾಮಯ ಕ್ರಾಂತಿಯಿಂದ ಹಿಂದುಸ್ಥಾನಕ್ಕೆ ಸ್ವತಂತ್ರ ಪ್ರಾಪ್ತಿಯಾದೀತೆಂತ ಯೋಚಿಸುವದು ಈಗಿನ ಸ್ಥಿತಿಯಲ್ಲಿ ಹುಚ್ಚುತನವೇ. ಈಗ ಇರುವ ಸರಕಾರವನ್ನೂ ಅದರ ಕಾನೂನನ್ನೂ ಒಪ್ಪಿಕೊಳ್ಳುತ್ತೇವೆ. ಈ ಸರಕಾರಕ್ಕೆ ಹಿಂಸೆಯೊರಸೆ ಎದುರಾಗಿ ಹೋರಾಡುವದು ಅಸಾಧ್ಯ ಮಾತ್ರವಲ್ಲ. ನಮ್ಮ ಸ್ವತಂತ್ರಕ್ಕೆ ಅದರಿಂದ ಎಂದೆಂದೂ ಹಾನಿಯೇ. ಅಹಿಂಸೆಯನ್ನು ನಾನು ನನ್ನ ಮತಧರ್ಮವಾಗಿ ನಾನು ಇಟ್ಟುಕೊಂಡಿರುವದಿಲ್ಲ. ಆದರೆ ರಾಜನೀತಿಯಾಗಿ ಇಟ್ಟುಕೊಂಡಿದ್ದೇನೆ. ಕ್ರಾಂತಿಯಿಂದ ಸ್ವತಂತ್ರ ಪಡೆಯಲು ನಡಿಸಿದ ಬೇರೆ ಜನಾಂಗಗಳಿಗೆ ಆಗಿರುವ ನಷ್ಟವನ್ನು ನೋಡಿ ಇಂಡಿಯಾಕ್ಕೆ ಆ ದಾರಿ ಬೇಡವೆಂತ ನಾನು ನಿರ್ಧರಿಸುವದಾಗಿದೆ. ಯುರೋಪ್ ದೇಶವು ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲಿಕ್ಕೆ ಪಟ್ಟ ನಷ್ಟಕ್ಕೆ ತಕ್ಕ ಪ್ರಯೋಜನವಾಗಿದೆಯೋ, ಇಲ್ಲ. ಯುರೋಪಿನ ಜನರು ಮನುಷ್ಯಸ್ವಭಾವವನ್ನೇ ಕಳಕೊಳ್ಳುತ್ತಿದ್ದಾರೆ. ನಮ್ಮನ್ನು ನಾವೇ ಆಳಿಕೊಳ್ಳುವಾಗ ತಪ್ಪುಗಳನ್ನು ಮಾಡಬಹುದು. ಅದನ್ನೂ ನಾವೇ ಸರಿಪಡಿಸಿಕೊಂಡು ನಮ್ಮ ಸಂಸ್ಕೃತಿಯನ್ನು ನಾವು ಉಳಿಸಿಕೊಳ್ಳುತ್ತೇವೆ.

ಮಹಾರಾಣಿ ಛತ್ರಿ, ಮಹಾರಾಜ ಜ್ಯೋತಿ ಇವರಿಬ್ಬರಿಗೂ ನಡೆದ ಸಂವಾದ.

ಜ್ಯೋತಿ—(ಮಹಾರಾಣಿ ಛತ್ರಿಯನ್ನು ಕುರಿತು) ಬಾ, ಛತ್ರಿ, ಇಲ್ಲಿ ಬಾ, ನಾವಿಬ್ಬರೂ ಸಿಂಹಾಧಾರಿಗಳು. ನಮ್ಮಿಬ್ಬರ ಕರ್ತವ್ಯ ಒಂದೇ. ಇಬ್ಬರ ಆದರ ಸನ್ಮಾನವೂ ಒಂದೇ. ಬಾ, ಇಲ್ಲಿ ಕೂರು.

ಛತ್ರಿ—(ಕೋಪದಿಂದ) ದೂರಹೋಗು, ದೂರಹೋಗು, ನೀನು ನೀಚ, ನನ್ನನ್ನು ಮುಟ್ಟಬಾರದು.

ಜ್ಯೋತಿ—ಎಲೌ ಶ್ರೀಮತಿ! ಕೋಪಗೊಳ್ಳಬೇಡ. ಮೊದಲು ನಾನು ನೀಚನು ಮತ್ತು ಅಸ್ಪೃಶ್ಯನು ಎಂಬುದನ್ನು ತೋರಿಸಿಕೊಡು. ಆಮೇಲೆ ನಿನ್ನ ಮಾತಿಗೊಪ್ಪುವೆನು.

ಛತ್ರಿ—ನೀನು ಸರ್ವರ ಪಾದಾಕ್ರಾಂತನಾಗಿದ್ದೀ. ನಾನಾದರೋ ಎಲ್ಲರ ಶಿರಸ್ಸಿನ ಮೇಲಿರುವವಳು. ನನಗೂ ನಿನಗೂ ಸಮಾನವೇ?

ಜ್ಯೋತಿ—ಎಲಾ ನಾರೀಮಣಿ! ನಿನ್ನ ಮಾತು ನಿಜವಿದೆ. ಆದರೆ ನಾನು ಸಾಕ್ಷಾತ್ ಗೋಪಾತೆ ಎಂಬುದು ನಿನಗೆ ತಿಳಿಯದೇ? ಪರಮಾತ್ಮನಂತೆ ನನಗೂ ಅವತಾರಗಳುಂಟು. ಈ ವಿಚಾರವು ನಿನಗಿನ್ನೂ ತಿಳಿಯದು. ನಾನು ಹೇಳುವುದನ್ನೆಲ್ಲಾ ಮನಗೊಟ್ಟು ಕೇಳು. ಗೋಲೋಕದಿಂದ ನಾನು ಕ್ಷೀರಸಮುದ್ರದಲ್ಲಿ ವಾಸಮಾಡುತ್ತೇನೆ. ಜನರಿಗೆ ಹಾಲು ತುಪ್ಪ ಕೊಡುತ್ತೇನೆ. ಜಾತಿಯು ಜನಕಾದಿಂದ ಭೃಗುಋಷಿಯ ಚರಣಕಮಲಗಳು ವಿರಾಜಿಸುವಂತೆ ಜೆಂಟ್ಲ್‌ಮ್ಯಾನ್‌ಗಳ ಚರಣಗಳಲ್ಲಿದ್ದು ಶೋಭಿಸುತ್ತೇನೆ. ಗೋಪಗಳ ಸಮೂಹದಲ್ಲಿ ಬಾಲಕೃಷ್ಣನಿರುವಂತೆ, ಜನರ ಸಂಘಗಳಲ್ಲಿ ಚಪ್ಪಲ ಅವತಾರಿಯಾಗಿ ತೋಳಯುತ್ತೇನೆ. ಶ್ರೀ ರಾಮಚಂದ್ರನಂತೆ ದೊಡ್ಡ ದೊಡ್ಡ ದೊರೆಗಳ ತಲೆಯಮೇಲೆ ಮುಕುಟಮಣಿಯ ಅವತಾರದಿಂದ ಪ್ರಕಾಶಿಸುತ್ತಿರುವೆನು. ಕಾಳಿಕಾದೇವಿಗೆ ಆಹಾರವಾಗಿರುವಂತೆ, ಅನೇಕ ಜನರಿಗೆ ಆಹಾರವಾಗಿ ಒದಗಿ, ಉಪಕಾರಿಯೆನಿಸಿಕೊಂಡಿದ್ದೇನೆ. ಪರಶುರಾಮನ ಅವತಾರವನ್ನು ತಾಳಿ ಅಸ್ಪೃಶ್ಯರ [illegible] ಬಿದ್ದಿದ್ದೇನೆ. ದುಷ್ಟನ ಚೇಲವಾಗಿ [illegible] ಎಲ್ಲರ ಕಾತ್ತಿಗೆಯಿಂದಿಳಿದು ಎದೆಯಮೇಲೆ ಓಡಾಡುತ್ತೇನೆ.

ಛತ್ರಿ—(ಸಿಡುಕಾಗಿ) ಹೌದು. ನೀನು ಈಗ ಹೇಳಿದ ಸಂಗತಿಯೆಲ್ಲವೂ ನಿಜ. ಆದರೂ ನಾನು ನಿನ್ನನ್ನು ಮುಟ್ಟಲಾರೆ.

ಇನ್ನೂ ಇನ್ನೂ ಅಸ್ಪೃಶ್ಯನು, ಅಸ್ಪೃಶ್ಯನು ಎಂಬ ಕಠೋರವಾದ ಮಾತನ್ನು ಕೇಳಿ ಕೇಳಿ, ಜ್ಯೋತಿಗೆ ಕೋಪವುಂಟಾಗಿ ಹೀಗೆಂದಿತು :— ಎಲೆ ಹೆಂಗಸೆ! ನೀನಾಡುವ ಮಾತು ಸಾಕು. ನಮ್ಮ ಜನರಿಗೆ ಇರುವಷ್ಟು ಮರ್ಯಾದೆಯು ಲೋಕದ ಇನ್ನಾವ ಜನರಿಗೂ ಇಲ್ಲ. ನಮ್ಮ ಮೇಲೆ ಮಹರ್ಷಿಗಳೆಲ್ಲರಿಗೂ ಬಹು ಪ್ರೇಮ. ಪಂಡಿತರೂ, ವೇದಪಾಠಿಗಳೂ, ನಮ್ಮ ಮೇಲೆ ಕಾಲಿಟ್ಟು ಭಗವಂತನನ್ನು ಆರಾಧಿಸುತ್ತಾರೆ. ಇನ್ನೆಷ್ಟು ಹೇಳಲಿ. ನಿನ್ನ ತಲೆಮೇಲೆ ಹುಡುಕಿ ನೋಡಿದರೆ, ಚಂದ್ರ (ಉರುಟಾದ ಸಣ್ಣ ಚಕ್ಕಳದ ತುಂಡು) ನಂತಿರುವ ನನ್ನನ್ನು ಗುರ್ತಿಸಬಹುದು.

ಹೀಗೆಂದ ಜ್ಯೋತಿಯ ಮಾತನ್ನು ಕೇಳಿ, ಛತ್ರಿಯು ನಿಸ್ತಬ್ಧಳಾದಳು. ಅವಳು ನಾಚಿಕೆಯಿಂದ ತಲೆ ಬಗ್ಗಿಸಿಕೊಂಡು ಅಲ್ಲಿ ನಿಲ್ಲದೆ ಹೊರಟುಹೋದಳು.

(ಈ ಕಥೆಯಿಂದ ನೀಚರೆಂದು ಹಿಂದುಬಿಟ್ಟ ಜನರನ್ನು ಹೀಯಾಳಿಸಬಾರದೆಂಬುದೂ, ಈ ಜನರಿಂದಲೇ ಲೋಕಕ್ಕೆ ಹೆಚ್ಚಿನ ಉಪಕಾರವಾಗುತ್ತಿದೆಂಬುದೂ ಕಂಡುಬರುವುದು.)

"ಹಿಂದ ಪ್ರಚಾರಕ"

ಮನುಷ್ಯರಿಗೆ ಹಾನಿಕರಗಳಾದ ಕ್ರಿಮಿ ಕೀಟಗಳು.

(ಮದರಾಸು ಪ್ರಕಟನಸಂಘದಿಂದ)

ಸಾಮಾನ್ಯವಾಗಿ ಮಲೆಜ್ವರ, ವಾಂತಿಭೇದಿ ಅನುಶಂಕೆ ಮುಂತಾಗಿ ಮನುಷ್ಯರಿಗೆ ಪ್ರಾಣಾಪಾಯವನ್ನುಂಟುಮಾಡುವ ರೋಗಗಳನ್ನು ಒಬ್ಬನಿಂದ ಮತ್ತೊಬ್ಬನಿಗೆ ಹರಡಿಸುವ ಕ್ರಿಮಿಗಳನ್ನು ಕುರಿತು ಸ್ವಲ್ಪಮಟ್ಟಿನ ತಿಳುವಳಿಕೆ ಇರುವುದು ಎಲ್ಲರಿಗೂ ಅತ್ಯವಶ್ಯಕವಾಗಿರುವುದು.

ಮನುಷ್ಯರಿಗೆ ಅಪಾಯವನ್ನುಂಟುಮಾಡುವ ಕ್ರಿಮಿಗಳಲ್ಲಿ (1) ಹೇನು, (2) ತಗಣೆ, (3) ಚಿಗಟ (Flea), (4) ನೊಣ, (5) ಸೊಳ್ಳೆ. ಇವೈದೂ ಈ ದೇಶದಲ್ಲಿ ಮುಖ್ಯವಾದುವು.

(1) ಹೇನು.

ಮೂರು ಜಾತಿಯ ಹೇನುಗಳಿವೆ. ತಲೆಕೂದಲಲ್ಲಿರುವುದು ಒಂದು ಜಾತಿಯದು. ಬಟ್ಟೆಗಳಲ್ಲಿ ಇನ್ನೊಂದು ಜಾತಿಯದು ಇರುವುದು. ದೇಹದ ಕೆಲಭಾಗಗಳ ರೋಮಗಳಲ್ಲಿ ಇರುವುದು ಮೂರನೆ ಜಾತಿಯದು. ಮೊದಲನೇ ಜಾತಿಯ ಹೇನು ೫೦-೬೦ ತತ್ತಿಗಳನ್ನೂ, ಎರಡನೆಯದು ೭೦-೮೦ ತತ್ತಿಗಳನ್ನೂ, ಮೂರನೆ ಜಾತಿಯದು ೧೦—೧೫ ನ್ನೂ ಇಡುವುವು. ಮೊದಲನೇ ಮೂರನೇ ಜಾತಿಯ ಹೇನುಗಳಿಡುವ ತತ್ತಿಗಳು, ಆಯಾ ಭಾಗದ ಕೂದಲುಗಳಿಗೆ ಅಂಟಿಕೊಂಡೇ ಇರುವುವು. ಎರಡನೇ ಜಾತಿಯ ಹೇನಿನ ಮೊಟ್ಟೆಗಳು ಬಟ್ಟೆಗಳ ಎಳೆಗಳಿಗೆ ಅಂಟಿಕೊಳ್ಳುವುವು. ರೋಮಗಳಲ್ಲಿರುವ ತತ್ತಿಗಳು ೬—೭ ದಿನಗಳಲ್ಲಿ ಒಡೆದು ಮರಿಗಳು ಹೊರಡುವುವು. ಬಟ್ಟೆಯೆಳೆಗಳಲ್ಲಿನ ತತ್ತಿಗಳು ೭—೮ ದಿನಗಳಲ್ಲಿ ಒಡೆದು ಮರಿಗಳು ಹೊರಡುವುವು. ಮರಿಗಳೂ ತಾಯಿಯನ್ನೇ ಬಹಳಮಟ್ಟಿಗೆ ಬಲವಾಗಿ ಹೋಲುವುವು. ಅವು ಯಾವನ ಕೂದಲಲ್ಲಿ ಅಥವಾ ಬಟ್ಟೆಗಳಲ್ಲಿ ಇರುವುವೋ, ಅವನ ನೆತ್ತರನ್ನು ಹೀರಿ ಪ್ರಾಯಸ್ಥವಾಗಿ ಬೆಳೆದು, ತಾವೂ ತತ್ತಿಗಳನ್ನು ಇಡಲು ಉಪಕ್ರಮಿಸುವುವು. ಜನರು ಒಟ್ಟಾಗಿ ನೆರೆ ನಿದ್ದೆಹೋಗುವಲ್ಲಿ, ಅಥವಾ ಒಂದೇ ಕಡೆ ತಮ್ಮ ವಸ್ತ್ರಗಳನ್ನು ಮಡಗುವಲ್ಲಿ, ಒಬ್ಬನಿಂದ ಮತ್ತೊಬ್ಬನಿಗೂ, ಒಬ್ಬನ ವಸ್ತ್ರದಿಂದ ಮತ್ತೊಬ್ಬನ ವಸ್ತ್ರಕ್ಕೂ ಹೇನುಗಳು ಸಾಗುವುವೆಂದು ತಿಳಿದುಬಂದಿದೆ. ಈ ರೀತಿಯಾಗಿ ಅವುಗಳು ಬಹು

ನಿಂದ ಮತ್ತೊಬ್ಬನಿಗೆ ರೋಗವನ್ನೂ ಒಯ್ಯುವುವು ಏಕೆಂದರೆ ರೋಗದಿಂದ ಪೀಡಿತನಾಗಿದ್ದವನ ನೆತ್ತರನ್ನು ಹೀರಿ ಬೆಳೆದ ಹೇನುಗಳು ಮತ್ತೊಬ್ಬನ ದೇಹವನ್ನು ಸೇರಿ ಅವನನ್ನು ಕಚ್ಚಲು, ಅವನಿಗೂ ಅದೇ ರೋಗವು ತಗಲುವಂತೆ ಮಾಡುವುವು ಹೇನಿನ ಮೂಲಕವಾಗಿ ಹೀಗೆ ಒಬ್ಬನಿಂದ ಮತ್ತೊಬ್ಬನಿಗೆ ಅಂಟುವ ರೋಗಗಳಲ್ಲಿ ಅಕಾಲಜ್ವರ, ಸನ್ನಿಪಾತಜ್ವರ, ಮರುಕೊಳಿಸುವ ಜ್ವರ ಮೊದಲಾದುವು ಮುಖ್ಯವಾಗಿವೆ

ನಿವಾರಣೆ ಕ್ರಮ.

ಹೇನು ಅಂಟಿರುವ ದೇಹಭಾಗವನ್ನು ಚಿಮ್ನಿಯೆಣ್ಣೆಯಿಂದ ಸವರಿದರೆ ಹೇನು ಕೂಡಲೆ ಅಲ್ಲಿಂದ ತೊಲಗುವುದು. ಇದರಿಂದ ಹೇನು ಸಾಯುವುದು ಮಾತ್ರವಲ್ಲ ಅದರ ತತ್ತಿಗಳು ಕೂದಲುಗಳಲ್ಲಿ ಅಂಟುವಂತೆ ಮಾಡುವ ಅಂಟುಪದಾರ್ಥವೂ ಸಡಿಲಾಗುವಕಾರಣ, ಬಾಚಣಿಗೆಯಿಂದ ತತ್ತಿಗಳನ್ನೆಲ್ಲ ಸುಲಭವಾಗಿ ಬಾಚಿ ತೆಗೆಯಬಹುದಾಗಿದೆ ಬಟ್ಟೆಗಳನ್ನು ಚೆನ್ನಾಗಿ ನೀರಲ್ಲಿ ಕುದಿಸಿದರೆ ಬಟ್ಟೆಯೊಳಗಣ ಹೇನುಗಳು ಮಡಿಯುವುವು. ಇದೇ ಸಾಧಾರಣ ಫಲಕಾರಿಯಾದ ಉಪಾಯವು.

ಮಕ್ಕಳ ಶರೀರದಮೇಲೆ ಅಥವಾ ಬಟ್ಟೆಗಳಮೇಲೆ ಯಾವ ಜಾತಿಯ ಹೇನಾಗಲಿ ಇಲ್ಲದಂತೆ ಮಕ್ಕಳನ್ನೂ, ಅವುಗಳ ಬಟ್ಟೆಗಳನ್ನೂ ನಿರ್ಮಲವಾಗಿ ಇರಿಸುವುದು ಹೆತ್ತವರ ಕರ್ತವ್ಯವಾಗಿರುವುದು.

(2) ತಗುಣೆ.

ಇವನ್ನು ಮೊದಲು "ಗೋಮೇಹೇನು" ಎನ್ನುತ್ತಿದ್ದರು ಇದು ಆಸಿಯಾ ಯೂರೋಪುಖಂಡಗಳಲ್ಲಿ ಎಲ್ಲೆಲ್ಲಿಯೂ ಹರಡಿದೆ ಇದರ ಬಣ್ಣವು ಕೆಂಪುಮಿಶ್ರವಾದ ಕಂದು ಎರಡು ಕಣ್ಣುಗಳೂ, ಎರಡು ಸ್ಪರ್ಶೇಂದ್ರಿಯ (ಕರಣ) ವೂ ಇವೆ ಇವು ಗೋಡೆಗಳ, ನೆಲದ ಅಥವಾ ಉಪಕರಣಗಳ ಬಿರುಕುಗಳಲ್ಲಿ ಅಡಗಿಕೊಂಡು, ರಾತ್ರಿಹೊತ್ತಿಗೆ ಹೊರಕ್ಕೆ ಬಂದು ಜನರ ನೆತ್ತರನ್ನು ಹೀರುವುವು ಅಗತ್ಯಬಿದ್ದಾಗ ಇವು ಒಂದು ಮನೆಯಿಂದ ಮತ್ತೊಂದು ಮನೆಗೂ ಆಹಾರ ಹುಡುಕುತ್ತ ಸಂಚರಿಸುವುದುಂಟು ಮನುಷ್ಯ ರಕ್ತವೇ ಇವುಗಳ ಆಹಾರವು ತನ್ನ ಸೂಕ್ಷ್ಮವಾದ ಮೂಸೆಯೆಂಬ ಸ್ಪರ್ಶಕರಣಗಳಿಂದ ಚರ್ಮವನ್ನು ಪರೀಕ್ಷಿಸುತ್ತ ಅನುಕೂಲವಾದ ಸ್ಥಳವನ್ನು ನೋಡಿಕೊಂಡು ತನ್ನ ಮುಳ್ಳಿನಾಲಗೆಯಿಂದ ಅದನ್ನು ಚುಚ್ಚಿ, ನೆತ್ತರು ಮೇಲಕ್ಕೇರಿಬರುವಹಾಗೆ ತನ್ನ ಉಗುಳನ್ನು ಆ ರಂಧ್ರದಲ್ಲಿ ಸುರಿದು, ಹಾಗೆ ದೊರೆತ ನೆತ್ತರನ್ನು ಹೀರಿಕೊಳ್ಳುವುದು ಹೆಣ್ಣು ತಗುಣೆಯು ಪ್ರತಿವರ್ಷವೂ ಮೂರು ನಾಲ್ಕುಸಾರಿ ಒಂದೊಂದ ಸಲಕ್ಕೆ ಸುಮಾರು ೫೦ ತತ್ತಿಗಳನ್ನು ಇಡುವುದು ಅಂಡಾಕಾರದ, ೧/೨೫ ನೇ ಅಂಗುಲ ಉದ್ದದ ಈ ಬಿಳೀ ತತ್ತಿಗಳು 7–8 ದಿನಗಳಲ್ಲಿ ಒಡೆದು ಮರಿಗಳು ಹೊರಡುವುವು ಎಳೇ ಮರಿಗಳು ತಾಯಿಯನ್ನು ಸ್ವಲ್ಪ ಮಾತ್ರವೂ ಹೋಲುವುದಿಲ್ಲ ಇವು ಹುಳುಗಳಂತಿದ್ದು ಮೆಲ್ಲನೆ ಬೆಳೆದು ಸುಮಾರು ಎಂಟುದಿನಗಳಿಗೊಮ್ಮೆ ತಮ್ಮ ಹೊರಗಿನ ಚರ್ಮವನ್ನು ಸುಲಿಯುತ್ತ ಐದುಬಾರಿ ಇಂಥ ಕೀಟಾವಸ್ಥೆಯನ್ನು ಕಳೆದು ದೊಡ್ಡದಾಗುವುವು ಕೊನೆಗೆ ಅವು ತಾಯಿಯ ದೇಹಾಕಾರವನ್ನು ತಳೆಯುವುವು ತಗುಣೆಗೆ ವಿಶೇಷವಾಗ ಒಂದುಬಗೆಯ ವಾಸನೆ ಇರುವುದೆಂದು ನೀವು ಬಲ್ಲಿರಷ್ಟೆ? ಇದು ಅದರ ದೇಹರಕ್ಷಣೆಗೆ ಉಪಾಯವಾದ ವಾಸನೆಯಾಗಿದೆ, ಅದರ ಜಾತಿವೈರಿಗಳಾದ ಕೀಟಗಳಿಂದ ತನ್ನನ್ನು ಕಾಪಾಡಿಕೊಳ್ಳಲು, ಈ ವಾಸನೆಯನ್ನು ತಗುಣೆಯು ಹರಡುವುದು

ಹೇನಿನಂತೆಯೇ ತಗುಣೆಯು. ಕ್ರಮತಪ್ಪಿ ಪದೇಪದೇ ಬರುವ ಜ್ವರವನ್ನೂ, ಕರೀಜ್ವರ, ಕುಷ್ಠ ಇವನ್ನೂ ಇದು ಹರಡಿಸುವುದಾಗಿ ಊಹೆಯುಂಟು

ಮನೆಯ ಗೋಡೆ ನೆಲ ಮುಂತಾದವುಗಳಲ್ಲಿ ಬಿರುಕುಗಳೇನೂ ಇಲ್ಲದಂತೆ ಮಾಡುವುದು ಈ ಕ್ರಿಮಿಬಾಧೆಯ ನಿವಾರಣೆಗೆ ಮುಖ್ಯ ಉಪಾಯವು ಚಿಮ್ನಿ ಎಣ್ಣೆಯಮೂಲಕ ಈ ಕ್ರಿಮಿಗಳನ್ನು ನಿವಾರಿಸುವುದರಲ್ಲಿ ಫಲವುಂಟು ಎಸಿಟಿಕ್ ಆಸಿಡ್‍ನ್ನು ಈ ಕ್ರಿಮಿ ಇರುವ ಬಿರುಕುಗಳಲ್ಲಿ ಸುರಿದರೆ, ಅಲ್ಲಿ ಅಡಗಿಕೊಂಡಿರುವ ತಗುಣೆಗಳು ಮಡಿಯುವುವು ಕೋಣೆಗಳಲ್ಲಿ ಹೊಗೆ ಹಾಯಿಸುವುದರಿಂದಲೂ ಇವುಗಳನ್ನು ತೊಲಗಿಸಬಹುದಾಗಿದೆ ಕಿಟಕಿ ಬಾಗಿಲುಗಳನ್ನು ಮುಚ್ಚಿ, ಸಾಧ್ಯವಾದ ಸಂದುಗೊಂದುಗಳಿಂದಾದರೂ ಗಾಳಿಯು ಒಳಕ್ಕೆ ಹರಿಯದಂತೆ ಮಾಡಿ, ೧೦೦೦ ಘನ ಅಡಿಗೆ ೪ ಔನ್ಸು ಗಂಧಕದಂತೆ ಆ ಕೋಣೆಯಲ್ಲಿ ಸುಟ್ಟರೆ ಸಾಕಾಗುವುದು ಈ ಗಂಧಕವನ್ನು ಸುಡುವಾಗಮಾತ್ರ ಆ ಕೋಣೆಯಲ್ಲಿ ಯಾರೂ ಇರಕೂಡದು ಐದುಗಂಟೆಗಳವರೆಗೆ ಕೋಣೆಯನ್ನು ಮುಚ್ಚಿಯೇ ಇರಬೇಕು ಅನಂತರ ತೆರೆದರೆ ಅಷ್ಟರಲ್ಲಿ ಎಲ್ಲ ತಗುಣೆಗಳೂ ಸತ್ತುಬೀಳುವುದನ್ನು ನೋಡಬಹುದು ಒಳಕಲ್ಲ ಬಿರುಕುಗಳನ್ನೂ ಸಂದುಗಳನ್ನೂ ಮುಚ್ಚಿ ಸುಣ್ಣ ಬಳಿಯಬೇಕು

ಚಿಗಟಗಳು.

ಇವುಗಳಲ್ಲಿ ಹಲವು ಜಾತಿಗಳು ಇವೆ ಕೆಲವು ನಾಯಿಗಳಮೇಲೂ, ಕೆಲವು ಇಲಿಹೆಗ್ಗಣಗಳ ಮೈಮೇಲೂ ಕೆಲವು ಬೆಕ್ಕು ಮೊದಲಾದ ಇತರ ಪ್ರಾಣಿಗಳಮೇಲೂ, ಬೇರೊಂದು ಜಾತಿಯವು ಮನುಷ್ಯದೇಹದ ಮೇಲೂ ಇವೆ. ಹಿಂದೂದೇಶದಲ್ಲಿ ಇಲಿ ಹೆಗ್ಗಣಗಳಮೇಲೆ ಇರುವ ಕೀಟಗಳೇ ತುಂಬ ವಿಶೇಷವಾದುವು ಏಕೆಂದರೆ, ಇವು ಪ್ಲೇಗ್‍ರೋಗದ ಬೀಜಗಳನ್ನು ಒಂದು ಇಲಿಯಿಂದ ಮತ್ತೊಂದು ಇಲಿಗೂ, ಮನುಷ್ಯನಿಗೂ ಉಯ್ಯುತ್ತವೆ ಮೊದಲು ಈ ಜಂತುಗಳು ನೀಲ ನದಿಯ ಬಯಲುಪ್ರದೇಶದಿಂದ ಒಂದಾಗಿ ತಿಳಿದಿದೆ ಆದರೆ ಈಗ ಅವು ಜಗತ್ತಿನ ಎಲ್ಲ ಪ್ರದೇಶಗಳಲ್ಲೂ ಹರಡಿವೆ ಹೆಣ್ಣುಕೀಟವು ಪ್ರತಿಸಾರಿಗೆ ೧೨ರಿಂದ ೫ ಮೊಟ್ಟೆಗಳನ್ನಿಡುವುದು ಇವು ಮೇಣದ ಅಥವಾ ಮುತ್ತಿನ ಬಣ್ಣವೂ, ೧/೫೫ ಇಂಚು ಗಾತ್ರವೂ ಉಳ್ಳದು ಮೊಟ್ಟೆಗಳು ಎರಡು ದಿನಗಳಲ್ಲಿ ಒಡೆದು ಮರಿಗಳು ಹೊರಕ್ಕೆ ಬರುವುವು ಇವು ಚುರುಕಾದುವು ಸೂರ್ಯನ ಕಿರಣಗಳಿಂದ ಕೂಡಲೆ ಮರೆಯಾಗಿ ಅಡಗುವುವು ನಂತರ, ಅವು ಅಲಸವಾಗಿ ಆಹಾರವನ್ನು ವರ್ಜಿಸಿ, ಬಿಳೇಪಟ್ಟೆಯನೂಲಿನ ಕೋಶಗಳನ್ನು ನೂತುಕೊಳ್ಳುವುವು. ಶೀತವು ಈ ಕೀಟಗಳಿಗೆ ಹಾನಿಕರವಾಗಿದೆ ಎಳೆಯ ಕೀಟಕ್ಕೆ ನೆತ್ತರೇ ಆಹಾರವು ಯೋಗ್ಯವಾದ ಆಹಾರವನ್ನೀವ ಪ್ರಾಣಿಯು ದೊರೆಯದಿದ್ದಲ್ಲಿ ಕೀಟವು ಸಾಯುವುದು ಇಲಿಯ ಮೇಲಿರುವ ಕೀಟವೇ ಪ್ಲೇಗ್ ರೋಗವನ್ನು ಹರಡುವಂಥದ್ದಾಗಿದೆ.

ಇವುಗಳ ಕಾಟದಿಂದ ತಪ್ಪಿಸಬೇಕಾಗಿದ್ದರೆ ಮನೆಗಳಲ್ಲಿ ಕಸಗೊಳೆಗಳೂ ಇಲಿಗಳೂ ಇರಬಾರದು ಇದು ಸಾಧ್ಯವಾದರೆ, ಪ್ಲೇಗ್‍ರೋಗವು ಬಂದೀತೆಂಬ ಹೆದರಿಕೆಗೇ ಅವಕಾಶವಿಲ್ಲ ಇವು ಮನೆಯಲ್ಲಿರದಂತೆ ಸಾಧಿಸುವುದಕ್ಕೆ ಅಂಥ ಮನೆಯ ಒಳಭಾಗಗಳನ್ನು ಆರುಗಂಟೆಗಳ ಕಾಲಕ್ಕೆ ನೆಟ್ಟಗೆ ಸೂರ್ಯಪ್ರಕಾಶದಲ್ಲಿ ಇರಗೊಳಿಸಬೇಕಾಗಿದೆ. ತುಂಬ ಹೊದಿಸಿರುವ ಮನೆಗಳ ಹಂಚನ್ನೇ ಕೊಂಚಕಾಲಕ್ಕೆ ಎತ್ತಿಡುವುದು ಲೇಸು ಹಲಗೆಮುಚ್ಚಿದ ಕೋಣೆಗಳಲ್ಲಿ ಇದು ಸಾಧ್ಯವಲ್ಲವಾದಕಾರಣ, ಚಿಮ್ನಿಯೆಣ್ಣೆ ಮಿಶ್ರಣದ ನೀರನ್ನು ಗೋಡೆಗಳಮೇಲೂ ಮುಚ್ಚಿಗೆಯಮೇಲೂ ಚೆನ್ನಾಗಿ ಚಿಮುಕಿಸುವುದು ಅವಶ್ಯಕವಾಗಿದೆ ಇಲಿಗಳು ಒಳಕ್ಕೆ ಬಾರದಂತೆ ಮಾಡುವುದರಿಂದ, ಈ ಕೀಟಗಳ ಬಾಧೆಯು ಉಂಟಾಗದಂತೆ ಮಾಡಬಹುದು ಇಲಿಗಳು ಆಹಾರವನ್ನು ಹುಡುಕಿಕೊಂಡೇ ಒಳಕ್ಕೆ ಬರುವುವು ಕಸವೂ ಕೊಳೆಯೂ, ಆಹಾರ ಪದಾರ್ಥಗಳೂ ಇಲ್ಲದಿರುವಲ್ಲಿ ಇಲಿಗಳು ಸುಳಿಯುವಂತಿಲ್ಲ

ನೊಣಗಳು

ಕೆಲವು ರಕ್ತಹೀರುವ ಕಾರಣ ಕಚ್ಚುವ ನೊಣಗಳೆಂದೂ ಬೇರೆಕೆಲವು ರಕ್ತಹೀರದುವಾದಕಾರಣ ಕಚ್ಚದ ನೊಣಗಳೆಂದೂ ನೊಣಗಳಲ್ಲಿ ಎರಡುಜಾತಿಗಳಿವೆ ರಕ್ತಹೀರುವ ನೊಣಗಳಲ್ಲಿ ಸುಮಾರು ೩೦೦೦ ಜಾತಿಗಳಿಗೆ ಮರಳುನೊಣ ಮತ್ತು ಮನೆಯ ನೊಣಗಳೆಂಬ ಎರಡುಬಗೆಯ ನೊಣಗಳು ಮದ್ರಾಸಿನಲ್ಲಿ ವಿಶೇಷವಾಗಿವೆ

ಮರಳು ನೊಣ

ಇದು ಬಲು ಚಿಕ್ಕದು; ಸೊಳ್ಳೆ ಪರದೆಗಳ ಎಡೆಗಳಿಂದಲಾದರೂ ಇದು ನುಸುಳಬಲ್ಲುದು ಇದು ರಾತ್ರಿಕಾಲದಲ್ಲೇ ಸುಳಿಯುವುದು; ಹಗಲುಹೊತ್ತಿನಲ್ಲಿ, ಮನೆಗಳ ತಂಪು ಮೂಲೆಗಳಲ್ಲೂ ಇಟ್ಟಿಗೆಗಳ ಎಡೆಯಲ್ಲೂ ಮರಗಳ ಪೊಟರೆಗಳಲ್ಲೂ ಬಾಗಿಲು ಪುಸ್ತಕ ಚಿತ್ರಪಟಗಳ ಹಿಂದೆಯೂ ವಾಯುಬಾನೆಗಳಲ್ಲೂ ತಲೆ ಮರೆಸಿಕೊಂಡಿರುವುವು ಮನುಷ್ಯನು ದೊರೆತಾಗ ಅವನ ನೆತ್ತರನ್ನೂ ಇಲ್ಲದಿದ್ದಲ್ಲಿ ಜಾನುವಾರು ನಾಯಿ, ಕಪ್ಪೆ, ಹಲ್ಲಿಗಳ ನೆತ್ತರನ್ನೂ ಹೀರಿಕೊಂಡು ತೃಪ್ತಿ ಹೊಂದುವುದು ಅದು ಹಾರಾಡುವಾಗ ಸದ್ದಿರುವುದಿಲ್ಲ, ಸುಮಾರು ೩೬-೪೦ ಘಂಟೆಗಳಿಗೊಮ್ಮೆ ಅದಕ್ಕೆ ಆಹಾರವು ಬೇಕಾಗುವುದು

ತತ್ತಿಗಳು ಕೊಂಚ ಉದ್ದವಾದುವು, ಅಂಡಾಕಾರದುವು, ಉದ್ದಕ್ಕೆ ಕರಿಯ ಗುರುತುಗಳಿವೆ; ಇವು ಗೋಡೆಯ ಅಥವಾ ಕಲ್ಲುಗಳ ಬಿರುಕುಸಂದುಗಳಲ್ಲಿ ಒಂದೊಂದಾಗಿ ಇಡಲ್ಪಡುವುವು ಸೆಕೆ ಕಾಲದಲ್ಲಿ ೪-೬ ದಿನಗಳಲ್ಲೇ ತತ್ತಿಗಳೊಡೆವುವು ಚಳಿಗಾಲದಲ್ಲಿ ೧೪ ದಿನಗಳ ಕಾಲವು ಬೇಕಾಗುವುದು ಹುಟ್ಟಿದ ಕ್ರಿಮಿಗಳು ಬಹು ಚಿಕ್ಕವಾದಕಾರಣ ಕಣ್ಣಿಗೆ ಬೀಳುವುದೇ ಕಡಿಮೆ ಈ ನೊಣವು, ಒಂದು ಬಗೆಯ ಜ್ವರವನ್ನು ಹರಡುವಂಥದಾಗಿದೆ

ಇವುಗಳನ್ನು ನಿರ್ಮೂಲಿಸುವುದು ಸುಲಭವಲ್ಲ ಅವು ಅಡಗಿಕೊಂಡಿದ್ದ ಕಡೆಯಲ್ಲಿ, ಅಥವಾ ಅವು ತತ್ತಿಗಳನ್ನಿಟ್ಟಿರಬಹುದಾದ ಸ್ಥಳದಲ್ಲಿ (Informaline) ಔಷಧ ಬೆರಸಿದ ನೀರನಿಂದ ಚಿಮುಕಿಸುವುದೇ ಉತ್ತಮೋಪಾಯವೆನ್ನಬಹುದಾಗಿದೆ

[ಮುಂದುವರಿಯುವುದು]

ವರ್ತಮಾನ ಸಂಗ್ರಹ

ಒಳದೇಶ.

ಮೆ|| ಆಳಮೆಂಗಡ ಬಿಯ್ಯಪ್ಪನವರು ಮೈಸೂರು ಯುನಿವರ್ಸಿಟಿಯ ಬಿ ಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವುದನ್ನು ತಿಳಿಸಲು ಸಂತೋಷಪಡುತ್ತೇವೆ.

ಮೈಸೂರಿನಿಂದ ಮಿಕೇನಿಕರು ಬಂದು "ಕೊಡಗು" ಕಂಪೆನಿಯ ಪ್ರಿಂಟಿಂಗ್‍ಮಿಶನನ್ನು ಸರಿಯಾಗಿ ಜೋಡಿಸುತ್ತಿರುವರು. ಪ್ರಿಂಟಿಂಗ್ ಸಾಮಾನುಗಳೆಲ್ಲಾ ಬಂದು ತಲುಪಿವೆ "ಇನ್ನು ಬೇಗನೆ ಮಡಿಕೇರಿ "ಕೊಡಗು" ಆಫೀಸಿನಲ್ಲಿಯೇ ಪ್ರಿಂಟಿಂಗ್ ಪ್ರಾರಂಭವಾಗುವುದು ಈ ಕೆಲಸಕ್ಕೆ ಸರಾಗವಾಗಿ ನಡೆಯುವಂತೆ ನಮ್ಮ ಶೇರುದಾರರು ತಮ್ಮ ಬಾಕಿಯಾಗಿರುವ ಶೇರುಮೊಬಲಗನ್ನು, ಚಂದಾದಾರರು ತಮ್ಮ ಈ ವರ್ಷದ ಬಾಕಿಯಾದ ಚಂದಾ ಮೊಬಲಗನ್ನು ಒಡನೆ ಪಾವತಿಮಾಡಿ ಕಂಪೆನಿ ಕೆಲಸಕ್ಕೆ ಉತ್ತೇಜನ ಕೊಡಬೇಕಾಗಿ ಕೋರಿಕೆ.

ಕಳೆದ ಶುಕ್ರವಾರ ದೇಶದಲ್ಲಿ ಮಳೆಯು ಬಹಳ ಜೋರಾಗಿ ಹೊಡೆಯಿತು ಅಂದಿನಿಂದೀಚೆಗೆ ನ್ಯಾಯವಾದ ಮಳೆಗಾಲವು ಪ್ರಾರಂಭವಾಗಿದೆ ಮಡಿಕೇರಿಯ ಸ್ವಭಾವಗುಣವಾದ ಗಾಳಿ ಚಳಿಯೂ ಮಳೆಗೆ ಹಿಂದೆ ಬಿದ್ದಿರುವುದಿಲ್ಲ

ಜೂಲೈ ಒಂದರಿಂದ ಹುಣಸೂರು ವರ್ಕ್‍ನವರು ಸಿದ್ದಾಪುರದಿಂದ ಯಡತೊರೆಗೆ ಪ್ರಯಾಣದ ಮೋಟಾರು ಬಸ್ಸುಗಳನ್ನು ನಡಿಸುವರು. ಇದರ ಸಮಯದ ಪಟ್ಟಿಯನ್ನು ಇನ್ನೊಂದುಕಡೆ ಪ್ರಕಟಿಸಿರುವೆವು

ತಾರೀಕು 13 ರಲ್ಲು ಮೆ|| ಪಾಲೇಕಂಡ ಬೋಪಣ್ಣನವರು ತಮ್ಮ ವೃದ್ಧಾಪ್ಯದಲ್ಲಿ ಶಿವಾಧೀನರಾದರು.

ಈ ವರ್ಷ ಸ್ಕೂಲ್‍ಫೈನಲ್ ಪರೀಕ್ಷೆಯಲ್ಲಿ ಮಡಿಕೇರಿ ಹೈಸ್ಕೂಲಿನಿಂದ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳ ಹೆಸರು :—

ಗಣಿತಶಾಸ್ತ್ರದಲ್ಲಿ—1 ಹೆಚ್ ಬಿ ರುದ್ರಪ್ಪ, 2. ಕೆ. ಎಸ್ ಮಂಜೈಯ್ಯ 3. ಬಿ. ಶ್ರೀನಿವಾಸಮೂರ್ತಿ, 4. ಎ ವೆಂಕಟರಾಮೈಯ್ಯ, 5. ಹೆಚ್ ಹನುಮಂತರಾವು, 6. ಕೆ. ಎನ್ ಸೀತಾರಾಮು, 7 ಕಂಬೇಯಂಡ ಮುದ್ದೈಯ್ಯ, 8 ಮಂಡೇಪಂಡ ಕಾಳಪ್ಪ, 9. ಚೇಂದಿರ ಕಾರ್ಯಪ್ಪ, 10 ಮಂಡೇಪಂಡ ಚಿಣ್ಣಪ್ಪ, 11 ಯಂ ಸೀತಾರಾಮರಾವು, 12. ಹೆಚ್ ಬಿ ಮಂಜಪ್ಪ, 13 ಟಿ ಬಿ ಮರ್ಕ ಸ್ವಾಮಿ, ಚರಿತ್ರೆಯಲ್ಲಿ, 14 ಸಿ. ಎ ಸದಾಶಿವ, 15 ಯಂ ಎಸ್. ನಾರಾಯಣರಾವು, 16. ಹೆಚ್ ಜೆ ರುದ್ರಪ್ಪ, 17. ನೆರವಂಡ ಪೊನ್ನಪ್ಪ, 18 ಎ ಆರ್ ಡೇವ್‍ಟಿಸ್ 19 ಚೇಯಕಪೂವಂಡ ಭೀಮೈಯ್ಯ 46 ವಿದ್ಯಾರ್ಥಿಗಳ ಪೈಕಿ 19 ವಿದ್ಯಾರ್ಥಿಗಳು ಕಾಲೇಜುಕ್ಲಾಸಿಗೆ ಸೇರಲು ಅರ್ಹರಾಗಿರುವರು

ತಾ|| 16 – 6—24ರಲ್ಲು ಟೌನ್‍ಕಮಿಟಿಯ ಮೀಟಿಂಗು ಓಂಕಾರೇಶ್ವರದೇವಸ್ಥಾನದ ಹಾಲಿನಲ್ಲಿ ನಡೆಯಿತು.

ವರ್ಕ್‍ಮೆನ್ಸ್ ಕಂಪೆನ್ಸೇಶನ್ ಆಕ್ಟಿನ (VIII of 1923) 33ನೇ ಸೆಕ್ಷನ್‍ಮೇರೆ ಮಸೂದೆರೂಲ್‍ಗಳನ್ನು ಗಜೆಟಿನಲ್ಲಿ ಪ್ರಕಟಿಸಿರುತ್ತಾರೆ. ಇದಕ್ಕೆ ಆಕ್ಷೇಪಣೆ ಇದ್ದರೆ ಜೂಲೈ ತಾರೀಕು 10 ವಳಗೆ ಚೀಫ್‍ಕಮಿಶನರಿಗೆ ಬರಕೊಳ್ಳಬೇಕೆಂತ ನೋಟಿಫಿಕೇಶನ್ ಆಗಿದೆ

ಇಂಡಿಯನ್ ಆರ್ಮ್ಸ್ ಆಕ್ಟ್ ರೂಲ್ಸ್‍ಗಳ ಮೇರೆ ಲೈಸೆನ್ಸು ಪಡೆಯಲು ಅಥವ ಹಳೆ ಲೈಸೆನ್ಸನ್ನು ಹೊಸದುಮಾಡಿಕೊಳ್ಳಲು ಸಹ ಬರಕೊಳ್ಳುವ ಅರ್ಜಿಗಳಿಗೆ ಕೋರ್ಟುಸ್ಟ್ಯಾಂಪು ಬೇಡವೆಂತಲೂ ಲೈಸನ್ಸು ಸಂಬಂಧ ಬರಕೊಳ್ಳುವ ಇತರ ಎಲ್ಲಾ ಅರ್ಜಿಗಳ ಒಂದಾಣೆ ಸ್ಟ್ಯಾಂಪು ಸಾಕೆಂತಲೂ ಚೀಫ್‍ಕಮಿಶನರು ರೂಲ್ ಮಾಡಿದ್ದಾರೆ

ಟಕಾವಿ ಸಾಲಗಳನ್ನು 2500 ರೂ. ವರೆಗೆ ಕಮಿಶನರೂ 1000 ರೂ ವರೆಗೆ ಅಸಿಸ್ಟೆಂಟ್ ಕಮಿಷನರೂ 500 ರೂ ವರೆಗೆ ಸುಬೇದಾರರು ಕೊಡಬಹುದೆಂತ ಹೊಸ ರೂಲ್ ಆಗಿದೆ ಈವರೆಗೆ ಕಮಿಶನರಿಗೆ 1000 ರೂ ವರೆಗೂ ಅಸಿಸ್ಟೆಂಟ ಕಮಿಶನರಿಗೆ 500 ರೂ ವರೆಗೂ ಸುಬೇದಾರರಿಗೆ 100 ರೂ ವರೆಗೂ ಮಾತ್ರ ಇತ್ತು ಅಲ್ಲದೆ ಪಸಲು ಕೆಟ್ಟು ಹೋದ ಕಾರಣದಿಂದ ಹಳೆ ಟಕಾವಿ ಸಾಲಗಳಿಗೆ ವಾಯಿದೆ ಕೊಡುವ ಹಕ್ಕು 1000 ರೂ ವರೆಗೆ ಅಸಿಸ್ಟೆಂಟ್‍ಕಮಿಶನರಿಗೆ ಹೆಚ್ಚಿನ ಮೊಬಲಗುಗಳಿಗೆ ಕಮಿಶನರಿಗೂ ಕೊಡಲ್ಪಟ್ಟಿದೆ

ನೆಲ್ಲಿಹುದಿಕೇರಿ ಗ್ರಾಮದ ಬ್ರೀಚ್‍ಅಫ್‍ಕಂಟ್ರಾಕ್ಟ್ ಮೇರೆ ಆಗುವ ಕೇಸ್‍ಗಳನ್ನು ವೀರರಾಜಪೇಟೆ ಪಾರುಪತ್ತೆಗಾರ್ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ದಾಖಲ್‍ಮಾಡಬೇಕೆಂತ ಡಿಸ್ಟ್ರಿಕ್ಟ್‍ಮೇಜಿಸ್ಟ್ರೇಟರು ಹುಕ್ಕುಂಮಾಡಿದ್ದಾರೆ

ಹಿಂದೂದೇಶ

ಕಾಂಗ್ರೆಸ್ಸಿನ ಎಗ್ಸಿಕ್ಯುಟಿವ್ ಕಮಿಟಿಯ ಮೆಂಬರುಗಳು ಎಂಥಾವರಾಗಬೇಕೆಂದು ಮಹಾತ್ಮ ಗಾಂಧಿಯವರು ಸೂಚಿಸಿರುವುದರ ಮೇಲೆ ಕಾಂಗ್ರೆಸ್ಸಿನ ಮುಂದಿನ ಕೆಲಸವು ಹ್ಯಾಗೆ ನಡೆಯಬೇಕೆಂಬುದನ್ನು ತೀರ್ಮಾನಿಸಲು ಬೇಗನೆ ಕಾಂಗ್ರೆಸ್ಸಿನ ಒಂದು ವಿಶೇಷ ಸಭೆಸೇರುವಂತೆ ತೀರ್ಮಾನಿಸಲು ಒಂದು ಠರಾವನ್ನು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಬರುವ ಮೀಟಿಂಗಿನ ಮುಂದೆ ಇಡುವರಾಗಿ ಮೆ|| ಪಟ್ಟಾಭಿ ಸೀತಾರಾಮೈಯ್ಯನವರು ಸೂಚಿಸಿರುವರು

ತಾರೀಕು 10 ರಲ್ಲು ಬೌದ್ಧರ ದೊಡ್ಡಗುರುಗಳಾದ ರೆವರೆಂಡ್ ಯು ಒಟ್ಟಾಮರವರು ರಂಗೂನಿನಿಂದ ಪೆನ್ನಾಂಡ ತೀರಕ್ಕೆ ಹೋದಾಗ ಅಲ್ಲಿ ಸಾವಿರಾರು ಜನರು ಸೇರಿದು ಅವರಿಗೆ ಸ್ವಾಗತವನ್ನಿತ್ತರು, ಉತ್ತರವಾಗಿ ಅವರು ಎಲ್ಲರೂ ಸ್ವದೇಶಿ ಪ್ರೇಮವನ್ನು ಬೆಳಸಬೇಕೆಂದೂ ಸಾಮಾನುಗಳನ್ನೇ ಉಪಯೋಗಿಸಬೇಕೆಂದೂ ಹಿಂದೂದೇಶದಿಂದ ಬರ್ಮಾವನ್ನು ವಿಂಗಡ ಮಾಡುವುದಕ್ಕೆ ಎಲ್ಲರೂ ವಿರೋಧಿಸಬೇಕೆಂದೂ ಹೇಳಿದರು.

ತಾರಕೇಶ್ವರದೇವಸ್ಥಾನದ ಸತ್ಯಾಗ್ರಹದಲ್ಲಿ ಜೂನ್ 10ರಲ್ಲಿ ಸ್ವಾಮಿಸಚಿದಾನಂದರವರನ್ನೂ 35 ಸ್ತ್ರೀಯರನ್ನು ಸೇರಿಸಿ 111 ಜನರನ್ನು ಸೆರೆಹಿಡಿದಿರುವರು ಏಪ್ರಿಲ್ 20 ರಿಂದ ಈವರೆಗೆ 350 ಕ್ಕಿಂತ ಸ್ವಲ್ಪ ಹೆಚ್ಚು ಜನರು ಸೆರೆಹಿಡಿಯಲ್ಪಟ್ಟಿರುವರು.

ಪಂಜಾಬಿನ ಹೊಸ ಗವರ್ನರಾದ ಸರ್ ಮಾಲ್ಕೊಮ್ ಹೈಲಿಯವರು ಅಲ್ಲಿಯವರ ಕಷ್ಟಗಳನ್ನು ಪರಿಹರಿಸುವರೆಂಬ ನಂಬಿಗೆಮೇಲೆ ಪಂಜಾಬಿನ ಯುನಿಯನಿಸ್ಟ್ ಮಹಾಮಂಡಲಿಯವರು ಅವರಿಗೆ ಸ್ವಾಗತವನ್ನೀಯಲು ತೀರ್ಮಾನಿಸಿರುವರು.

ಅಕಾಲಿ ಸತ್ಯಾಗ್ರಹದ ವಿಷಯ ಅಧಿಕಾರಿಗಳಿಗೂ ಸತ್ಯಾಗ್ರಹಿಗಳಿಗೂ ರಾಜಿಮಾಡಬೇಕೆಂದು ಕೆಲವು ದಿವಸಗಳಿಂದ ಪ್ರಯತ್ನಗಳು ನಡೆಯುತ್ತಿದ್ದವು ಆದರೆ ಅದು ಸಫಲವಾಗುವಂತೆ ಕಾಣುವುದಿಲ್ಲ ಇದರಿಂದ ಅಕಾಲಿಗಳೇನೂ ಧೈರ್ಯ ಕುಂದಿರುವುದಿಲ್ಲ ಮುಂದಿನಂತೆಯೇ ಜಟವನ್ನು ಕಳುಹಿಸಲು ತಯಾರಾಗಿರುವರು. ಇಷ್ಟರವರೆಗೆ ಐನೂರರಂತೆ ಜನರಿರುವ 5 ಜಟವು ಸೆರೆಹಿಡಿಯಲ್ಪಟ್ಟಿದೆ 6 ನೇ ಜಟವು ಹೊರಟಿದೆ. 7 ನೇಯದು ತಯಾರಾಗುತ್ತಾ ಇದೆ.

ಬಂಗಾಳ ಲೆಜಿಸ್ಲೇಟಿವ್ ಕೌನ್ಸಿಲಿನವರು ಮಂತ್ರಿಗಳಿಗೆ ಸಂಬಳಕೊಡಲಿಕ್ಕಾಗುವುದಿಲ್ಲವೆಂದು ತೀರ್ಮಾನಿಸಿದ ನಂತರ ಗವರ್ನ್‌ಮೆಂಟ್ ಆಫ್ 'ಇಂಡಿಯಾ ಆಕ್ಟ್ ಪ್ರಕಾರ ಆ ಮಂತ್ರಿಗಳು ಉದ್ಯೋಗದಲ್ಲಿರಬಹುದೊ, ಮತ್ತು ಅವರ ಸಂಬಳದ ವಿಷಯ ಕೌನ್ಸಿಲಿನಲ್ಲಿ ಚರ್ಚೆಗೆ ತರಬಹುದೋ ಎಂದು ಬಂಗಾಳ ಸರ್ಕಾರವು ಇಂಗ್ಲೆಂಡಿನ ಸೊಲಿಸಿಟರ್ ಜನರಲ್‌ರವರನ್ನು ಕೇಳಿದಕ್ಕೆ ಆಗುವುದಿಲ್ಲವೆಂದು ಜವಾಬು ಕೊಟ್ಟಿರುವರಂತೆ,

ಬೊಂಬಾಯಿ ಮುನ್ಸಿಪಾಲಿಟಿಯು ಹೊಸ ಶರತ್ತುಗಳ ಮೇರೆ ಲೈಸನ್ಸು ತೆಗೆದುಕೊಳ್ಳಲು ಕೂಡದೆಂದು ಅಲ್ಲಿಯ ಕ್ಯಾರಿಕರು ಕೆಲಸಮಾಡದೆ ಮುಷ್ಕರ ಹಿಡಿದಿರುವರು ಅದುದರಿಂದ ಆಫೀಸುಗಳಿಗೆ ಹೋಗುವ ಜನರಿಗೆ ತೊಂದರೆಯುಂಟಾಗಿದೆ.

ಕಿದ್ದರ್ ಪುರದಲ್ಲಿ ಕಟ್ಟಲ್ಪಡುತ್ತಿರುವ ಕಿಂಗ್ ಜಾರ್ಜ್ ಡಾಕ್ಸ್‌ನ್ನು ನಿಲ್ಲಿಸಲಿಕ್ಕೆ ನರಬಲಿ ಕೊಡಬೇಕೆಂತಲೂ, ಅದಕ್ಕಾಗಿ ಮಕ್ಕಳನ್ನು ಉಪಾಯದಿಂದ ಮೋಸಗೊಳಿಸಿ ಹಿಡಕೊಂಡು ಹೋಗುತ್ತಿರುವರೆಂಬ ವರ್ತಮಾನವು ಕಲ್ಕತ ಪಟ್ಟದಲ್ಲಿ ಹರಡಿ ದಂಗೆಯು ಪ್ರಾರಂಭವಾಯಿತು. ಸಿಕ್ಕರಿಗೂ ಪಂಜಾಬಿಗಳಿಗೂ ಬಂಗಾಳದವರಿಗೂ ಅನೇಕಕಡೆ ಹೊಡೆದಾಟವಾಯಿತು ಮೂವರು ಪಂಜಾಬಿಗಳು ಕೊಲ್ಲಲ್ಪಟ್ಟಿರುವರು. ಈ ವರ್ತಮಾನವು ಸುಳ್ಳೆಂದು ಅಧಿಕಾರಿಗಳು ಜನರಿಗೆ ಬೋಧಿಸಿಕೊಡುತ್ತಿರುವರು

ಕೊಯಿಮತ್ತೂರು, ಪೋದನೂರು ಮುಂತಾದಕಡೆಗಳಲ್ಲಿ ಉಂಟಾದ ರೈಲ್ವೆ ಕೆಲಸದವರ ಸಂಘ ಇನ್ನೂ ಕೊನೆಗಂಡಿರುವದಿಲ್ಲ ಸಂಘಗಾರರಿಗೆ ಡಾ|| ವರ್ದರಾಜುಲು ನಾಯುಡುರವರು ಸಹಾಯಕೊಡಲು ಒಪ್ಪಿರುವರು

ಹಿಂದೂದೇಶಕ್ಕೆ ಕೊಟ್ಟಿರುವ ಮೂರ್ಪಾಡುಗಳ ವಿಷಯ ವಿಚಾರಿಸಲು ವೈಸರಾಯರು ಏರ್ಪಡಿಸಿರುವ ಕಮಿಟಿಗೆ ಕೆಳಗಿನ ಮೆಂಬರುಗಳನ್ನು ನೇಮಿಸಿರುವರು ಮೂರು ಉದ್ಯೋಗಸ್ಥರು ಸರ್ ಮಹ್ಮದ್ ಶಾಫಿ ಸರ್ ಅಲೆಕ್ಸಾಂಡರ್ ಮುಡ್ಡಿಮೇನ್ ಸರ್. ಹೆನ್ರಿ ಮೊಂಕ್ರೀಫ್, ಎಳು ಉದ್ಯೋಗಸ್ಥರಲ್ಲದವರ ಪೈಕಿ ಯುರೋಪಿಯನರ ಒಬ್ಬ ಪ್ರತಿನಿಧಿ ಅರ್ಲ್ ಆಫ್ ಫುವಿನ್ (ಬೊಂಬಾಯಿ) ಉದ್ಯೋಗಸ್ಥ ಇಂಡಿಯನರು ಸರ್ ತೇಜ್‌ಬಹದ್ದೂರ್ ಸಪ್ರು, ಬರ್ದ್ವಾನ್ ಮಹರಾಜರು ಡಾಕ್ಟರ್ ಪರಾಂಜಪ್ಯೆ ಸರ್. ಸ್ವಾಮಿ ಅಯ್ಯರ್, ಮತ್ತು ಮೆ|| ಜಿನ್ನರವರು, ಪಂಡಿತ ಮೋತಿಲಾಲ್ ನೆಹರುರವರು ಈ ಕಮಿಟಿಯಲ್ಲಿರಲು ತಿರಸ್ಕರಿಸಿದ್ದರಿಂದ ಅವರ ಬದಲು ಇನ್ನೊಬ್ಬರನ್ನು ನೇಮಿಸಬೇಕಾಗಿದೆ ಮೆ|| ಜಿನ್ನರವರು ಇನ್ನು ತನ್ನ ಒಪ್ಪಿಗೆಯನ್ನು ಕೊಟ್ಟಿರುವುದಿಲ್ಲ

ತಾರಕೇಶ್ವರ ದೇವಸ್ಥಾನದ ಸತ್ಯಾಗ್ರಹದಲ್ಲಿ ಸೆರೆಹಿಡಿಯಲ್ಪಟ್ಟ ತ್ಯಾಗ ಸ್ವಾಮಿ ಸಚಿದಾನಂದರವರು ಮೂರ್ಷಿದಾಬಾದ್ ಜೈಲಿನಲ್ಲಿ ಉಪವಾಸಮಾಡುವರಂತೆ ಈ ಜೇಲಿಗೆ ತನ್ನನ್ನು ಕಳುಹಿಸುತ್ತೇನೆಂದು ಮೆ|| ಸಿ. ಆರ್. ದಾಸರವರು ಹೇಳಿರುವರು

ದರ್ಬಾಂಗ್ಸ್ರ ಡಿಸ್ಟ್ರಿಕ್ಟಿನ ಜಮಾಲ್ಪುರದಲ್ಲಿ ಆಕಸ್ಮಿಕವಾದ್ದು ೨೦೦ ಗುಡಿಸಲುಗಳೂ ಕೆಲವು ಮನೆಗಳೂ ಬೆಂಕಿಯಿಂದವಲ್ಲದೆ ಆರುಜನರು ಮತ್ತು ಮಕ್ಕಳು ಜೀವದಹನ ಹೊಂದಿದರೆಂಬ ಘೋರ ವರ್ತಮಾನವು ಡೆಲ್ಲಿಗೆ ತಲಪಿದೆ

ಗೂನದ ಮೈಸೂರ್ ಮಾರ್ಕೆಟ್ಟಿನ ಹತ್ತಿರ ಒಂದುದಿನ ಯಾತ್ರಿಕರು ಬಂದಿಳಿದರು ಅವರೊಳಗೆ ಪೂರ್ಣಗರ್ಭಿಣಿಯಾದ ಒಬ್ಬ ಸ್ತ್ರೀಯಿದ್ದಳು. ಆ ಸ್ತ್ರೀಗೆ ಅಲ್ಲಿ ಪ್ರಸವವೇದನೆಯಾಗಲು ಕೂಡಲೆ ಜನರವಳ ಆಸ್ಪತ್ರೆಗೆ ಒಯ್ಯಲು ಅಲ್ಲಿ ಒಂದರ ಹಿಂದೆ ಮತ್ತೊಂದು ಈ ಪ್ರಕಾರ ಆರು ಶಿಶುಗಳನ್ನು ಹೆತ್ತಳು. ಇವುಗಳಲ್ಲಿ ಮೂರು ಮತ್ತು ಮೂರುಹೆಣ್ಣು ಶಿಶುಗಳಾಗಿರುವವು. ಅವು ಬೇರೆ ಬೇರೆ ಬಣ್ಣವಿವೆ. ಪ್ರತಿಯೊಂದು ಶಿಶುವಿನ ಬೆರಳುಗಳೂ ಬಾಯಲ್ಲಿ ಹಲ್ಲುಗಳೂ ಇರುವುದಲ್ಲದೆ ತಲೆಯಮೇಲೂ ಸರ್ಪದ ಚಿಹ್ನೆಯಿರುತ್ತದೆ ಸೃಷ್ಟಿಯಲ್ಲಿ ಇದಕ್ಕಿಂತಲೂ ಆಶ್ಚರ್ಯಕರವಾದದ್ದು. [ಮೈ. ಕ್ರಾನಿಕಲ್ ಮ. ನ]

ವಯಕಮಿನಲ್ಲಿ ಅಸ್ಪೃಶ್ಯತೆಯ ಸತ್ಯಾಗ್ರಹವು ನಡೆಯುತ್ತಲೇ ಇದೆ ರಾಜಗೋಪಾಲ ಚಾರ್ಯರಿಗೂ ದಿವಾನರಿಗೂ ನಡೆದ ಸಂಭಾಷಣೆಯಿಂದ ಏನೊಂದೂ ಫಲವುಂಟಾಗಿರುವುದಿಲ್ಲ ರಾಜಗೋಪಾಲ ಚಾರ್ಯರೂ, ಮೆ|| ಟಿ ವಿ. ಶೇಷಗಿರಿಅಯ್ಯರವರೂ ಈ ಚಳವಳಿಕ್ಕೆ ದ್ರವ್ಯಸಹಾಯ ಮಾಡಬೇಕೆಂದು ಅಪೀಲು ಮಾಡಿರುವರು.

ಕುಂಭಕೋಣದಲ್ಲಿ ಒಬ್ಬ ಪೊಲೀಸಿನವನು ಇನ್ನೊಬ್ಬ ಪೊಲೀಸಿನವನನ್ನು ಹೊಡೆದನೆಂಬ ತಪ್ಪಿಕಕ್ಕೆ ಜೈಲಿನಲ್ಲಿರಿಸಿದಕ್ಕೆ ಅಲ್ಲಿಯ ೩೨ ಪೊಲೀಸಿನವರೂ ಮುಷ್ಕರಹಿಡಿದರು ಅವರೆಲ್ಲರನ್ನೂ ಸುಪರಿಂಟೆಂಡೆಂಟರು ಸಸ್ಪೆಂಡ್ ಮಾಡಿರುವರು

ಕಳೆದ ಎಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಮತಾಂತರ ಹೊಂದಿದ ೪೮೧ ಮಂದಿ ಹಿಂದುಗಳನ್ನು ಮುಂಬಯಿಯ ಹಿಂದೂ ಸಭೆಯವರು ಶುದ್ಧೀಕರಿಸಿ ಹಿಂದೂಮತಕ್ಕೆ ಸೇರಿಸಿಕೊಂಡಿರುವರು.

ವಿದೇಶ

ಫ್ರೆಂಚ್ ರಿಪಬ್ಲಿಕಿನ ಅಧ್ಯಕ್ಷರಮೇಲೆ ವಿಶ್ವಾಸವಿಲ್ಲವೆಂಬ ಲೆಪ್ಟಿಸ್ಟರ ಠರಾವನ್ನು ಆ ಸಭೆಯು ಪಾಸ ಮಾಡಿರುವುದರಿಂದ ಅಧ್ಯಕ್ಷರಾಗಿರುವ ಮೆ|| ಮಿಲ್ಲರೇಂಡರವರು ತಮ್ಮ ಪದವಿಗೆ ರಾಜಿನಾಮೆ ಕೊಟ್ಟಿರುವರು.

ಇಂಗ್ಲೆಂಡಿನ ರೈಲ್ವೆ ಸ್ಟ್ರೈಕ್ ಕಮಿಟಿಯು ಪ್ರತಿನಿಧಿಗಳು ಕೆಲಸಕ್ಕೆ ಹೋಗದೆ ಮುಷ್ಕರವನ್ನು ಮುಂದರಿಸಬೇಕೆಂದು ತೀರ್ಮಾನಿಸಿರುವರು.

ಅಮೇರಿಕದ ಬೋರ್ನಿಯೋ ಎಂಬ ಪ್ರದೇಶದಲ್ಲಿರುವ ಒಂದುಜಾತಿಯ ಕಾಡುನಿವಾಸಿಗಳಿಗೆ ಬಾಲಗಳಿವೆಯೆಂದು ಕಂಡು ಹಿಡಿಯಲ್ಪಟ್ಟಿದೆ ಅವರ ಮೈಮೇಲೆ ರೇಷ್ಮೆಯಂತಿರುವ ಉದ್ದ ರೋಮವಿದೆಯೆಂದೂ ಅವರ ಪಾದಗಳು ಒಂದರಿಂದ ಒಂದೂವರೆ ಅಡಿಯವರೆಗೆ ಉದ್ದವಿದೆಯೆಂದೂ ತಿಳಿಯಬಂದಿದೆ. ಅವರಿಗೆ ವಸ್ತ್ರ ನೇಯಲು ಮತ್ತು ಮಣ್ಣಿನ ಪಾತ್ರೆಗಳನ್ನು ಮಾಡಲು ಗೊತ್ತಿದೆಯಂತೆ. ಬಾಲಗಳು 4 ಇಂಚು ಉದ್ದವಾಗಿಯೂ ಗಟ್ಟಿಯಾಗಿಯೂ ಇರುವುದರಿಂದ ಅವರು ಕೂರುವ ಸಾಮಾನುಗಳಿಗೆ ಬಾಲಗಳು ನಿಲ್ಲಲು ತೂತಗಳನ್ನು ಮಾಡಿಕೊಳ್ಳುವರೆಂದೂ ತಿಳಿಯಬರುತ್ತದೆ.

ಫ್ರೆಂಚ್ ರಿಪಬ್ಲಿಕಿನ ಅಧ್ಯಕ್ಷಪದವಿಗೆ ಸೆನೇಟಿನ ಪ್ರೆಸಿಡೆಂಟರಾದ ಡೌಮರ್ಗ್‌ರವರಿಗೂ, ಚೇಂಬರಿನ ಅಧ್ಯಕ್ಷರಾದ ಪೈನ್‌ಲೀವ್‌ರವರಿಗೂ ಸ್ಪರ್ಧೆ ನಡೆಯುತ್ತಿದೆ

ರಾಷ್ಟ್ರೀಯ ಸಭೆಯು ಸಮೀಪಿಸುತ್ತಾ ಬಂದಿತು!

ದೇಶಬಂಧುಗಳೇ,

ಕಳೆದ ಕೋಕನಾಡಾ ಕಾಂಗ್ರೇಸದಲ್ಲಿ ಕರ್ನಾಟಕವು ಈ ವರ್ಷದ ರಾಷ್ಟ್ರೀಯ ಸಭೆಗೆ ಆಮಂತ್ರಣವನ್ನಿತ್ತು ಎಂಥಾ ಜವಾಬ್ದಾರಿಯ ಕೆಲಸವನ್ನು ವಹಿಸಿಕೊಂಡಿರುವುದೆಂದು ತಮಗೆಲ್ಲ ತಿಳಿದ ವಿಷಯವಾಗಿದೆ ಈ ಸಾರಿ ಕರ್ನಾಟಕದಲ್ಲಿ ಕೂಡಲಿಕ್ಕಿರುವ ರಾಷ್ಟ್ರೀಯ ಸಭೆಯನ್ನು ಯಶಸ್ವಿಯಾಗಿ ಮಾಡುವ ಕರ್ತವ್ಯವು ಪ್ರತಿಯೊಬ್ಬ ಕರ್ನಾಟಕಸ್ಥನಿಗೂ ಸೇರಿದ್ದಾಗಿರುತ್ತದೆ. ಆದುದರಿಂದ ಈಗಿನಿಂದಲೂ ನಾವುಗಳೆಲ್ಲರೂ ರಾಷ್ಟ್ರೀಯ ಸಭೆಯನ್ನು ಯಶಸ್ವಿಯಾಗಿ ಮಾಡಲು ಅದಕ್ಕೆ ಬೇಕಾದ ಉಪಕರಣಗಳನ್ನು ಸಿದ್ಧಪಡಿಸಿಕೊಳ್ಳಲು ಈಗಿನಿಂದಲೂ ತಯಾರಿಯನ್ನು ಮಾಡಬೇಕಾಗಿದೆ ಇದಕ್ಕಾಗಿ ಮೇ ತಿಂಗಳ ೧೮—೧೯ ನೆಯ ತಾರೀಖಿನ ದಿನಗಳಲ್ಲಿ ಬೆಳಗಾಂವಿಯಲ್ಲಿ ಕೂಡಿದ್ದ, ಕರ್ನಾಟಕದ ಎಲ್ಲ ಭಾಗಗಳ ಪ್ರತಿನಿಧಿಗಳನ್ನೊಳಗೊಂಡಿದ್ದ ಸ್ವಾಗತಮಂಡಲದ ಕಾರ್ಯಕಾರಿ ಸಭೆಯಲ್ಲಿ ಕರ್ನಾಟಕದ ಕಾಂಗ್ರೇಸು ಯಶಸ್ವಿಯಾಗಬೇಕಾದರೆ ಸುಮಾರು ರೂ ೨,೪೦,೦೦೦ ಬೇಕಾದಾವೆಂದು ಅಂದಾಜ ಮಾಡಲ್ಪಟ್ಟಿದೆ ಈ ಧನಸಾಹಾಯ್ಯವನ್ನು ಪೂರೈಸುವದಕ್ಕೆ ಕರ್ನಾಟಕದೊಳಗಿನ ಎಲ್ಲ ಜಿಲ್ಲೆಗಳವರೂ ಸಂಸ್ಥಾನಸ್ಥ ಕನ್ನಡಿಗರೂ ಸಹಾಯಮಾಡಬೇಕಾಗಿದೆ. ಇಲ್ಲಿ (ಬೆಳಗಾಂವಿಯಲ್ಲಿ) ರಾಷ್ಟ್ರೀಯ ಸಭೆಗಾಗಿ ಬೇಕಾಗುವ ಕಟ್ಟೋಣಗಳ ಸಾಮಾನುಗಳ ಸಂಗ್ರಹ, ಬಾವಿ ತೆಗೆಯುವುದು ಇವೆ ಮೊದಲಾದ ಕೆಲಸಕ್ಕೆ ಪ್ರಾರಂಭವಾಗಿ ಬಹಳ ಜೋರಿನಿಂದ ಮುಂದರಿಯುತ್ತಲಿವೆ. ಇವುಗಳಲ್ಲದೆ ಶೀಘ್ರದಲ್ಲಿ ಪ್ರತಿನಿಧಿಗಳು ಉಳಕೊಳ್ಳುವ ಗುಡಿಸಲು, ಚಪ್ಪರ ಮೊದಲಾದವೂ ಪ್ರದರ್ಶನಾಲಯಗಳೂ ತಯಾರಾಗತಕ್ಕವಿವೆ. ನಾವು ಎಷ್ಟೆಷ್ಟು ಜೋರಿನಿಂದ ಧನಸಂಗ್ರಹ ಮಾಡತಕ್ಕುವೆವೋ, ಅಷ್ಟಷ್ಟು ಜೋರಿನಿಂದ ಈ ಕೆಲಸಗಳು ಆಗತಕ್ಕವಿವೆ ಅದ್ದರಿಂದ ಈಗಿನಿಂದ ಕರ್ನಾಟಕದ ಎಲ್ಲಾ ಭಾಗಗಳೂ ಜಿಲ್ಲೆಗಳೂ, ತಮ್ಮಿಂದ ಸಾಧ್ಯವಿದ್ದಮಟ್ಟಿಗೆ ತಮ್ಮ ಪಾಲಿಗೆ ಬರುವ ಭಾಗಕ್ಕಿಂತಲೂ ಹೆಚ್ಚಿನ ಅಂಶದ ಹಣವನ್ನು ಕೂಡಿಸಲಿಕ್ಕೆ ಈಗಿನಿಂದಲೂ, ಇವತ್ತಿನಿಂದಲೂ, ಪ್ರಯತ್ನಮಾಡ ಆರಂಭಿಸಬೇಕೆಂದು ಈ ಮೂಲಕ ವಿನಂತಿಮಾಡಿಕೊಳ್ಳುತ್ತೇನೆ

ಮೇಲೆ ಹೇಳಿದ ಧನಸಂಗ್ರಹಕ್ಕಾಗಿ ಶ್ರೀ ಶ್ರೀನಿವಾಸರಾವ ಕೌಜಲಗಿಯವರೂ' ಡಾ. ಹರಡೀಕರರೂ ನಾನೂ ಸದ್ಯದಲ್ಲಿ ಸಂಚಾರಕ್ಕೆ ಹೊರಡುವವರಿದ್ದೇವೆ. ನಾವು ಎಲ್ಲೆಲ್ಲಿಗೆ, ಯಾವ್ಯಾವ ತಾರೀಖಿನ ದಿವಸ ಬರುವೆವೆಂದು ಮುಂದೆ ತಿಳಿಸುವೆವು. ನಮಗೆ ಇರುವ ಅವಕಾಶದಲ್ಲಿ ಎಲ್ಲ ಕಡೆಗೂ ನಾವೇ ಬರಬೇಕೆಂದು ಹೇಳಲಾಗುವದಿಲ್ಲ. ಆದ್ದರಿಂದ ನಮ್ಮ ಹಾದಿಯನ್ನು ನಿರೀಕ್ಷಿಸದೇ, ಆಯಾ ಜಿಲ್ಲೆಯವರೂ, ಸ್ವಾಗತಮಂಡಳದ ಕಚೇರಿಯಿಂದ ಸ್ವಾ|| ಮಾ|| ಸಭಾಸದರ ಪಾವತಿ ಪುಸ್ತಕಗಳನ್ನು ತರಿಸಿಕೊಂಡು ಕೂಡಲೆ ಕೆಲಸಕ್ಕೆ ಪ್ರಾರಂಭಿಸಬೇಕೆಂದು ಮತ್ತೊಮ್ಮೆ ಕರ್ನಾಟಕದ ಎಲ್ಲ ಜವಾಬ್ದಾರ ಕೆಲಸಗಾರರಿಗೂ, ಕಾಂಗ್ರೇಸ ಭಕ್ತರಿಗೂ ವಿನಂತಿಮಾಡಿಕೊಳ್ಳುತ್ತೇನೆ.

ಕರ್ನಾಟಕದಲ್ಲಿ ರಾಷ್ಟ್ರೀಯ ಸಭೆಯು ಸೇರುವುದು ಇದೇ ಮೊದಲನೆಯಸಾರಿ. ಇನ್ನು ಈ ಭಾಗ್ಯವು ಮತ್ತೆ ಕರ್ನಾಟಕಕ್ಕೆ ಯಾವಾಗ ಬರುವುದೊ ಹೇಳಲಿಕ್ಕಾಗುವದಿಲ್ಲ ಅದ್ದರಿಂದ ಕರ್ನಾಟಕದಲ್ಲಿ ಇರುವ ಎಲ್ಲ ಭಿನ್ನ ಭಿನ್ನ ಮತಗಳವರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಒದಗಿಟ್ಟು, ಐಕ್ಯಮತದಿಂದ ಕೆಲಸಮಾಡಿ ಕಾಂಗ್ರೇಸನ್ನು ಯಶಸ್ವಿಯಾಗಿ ಮಾಡುವುದು ಕರ್ನಾಟಕದ ಎಲ್ಲ ಜಾತಿಯ, ಮತ್ತು ಪಂಥಗಳವರ ಪವಿತ್ರ ಕರ್ತವ್ಯವಾಗಿದೆ. ಈಗ ಈ ಐಕ್ಯಮತಕ್ಕಾಗಿ ಪ್ರಯತ್ನಗಳು ನಡೆಯುತ್ತಲಿವೆ. ಈ ಪ್ರಯತ್ನಗಳು ಸಫಲಗೊಂಡು, ಕರ್ನಾಟಕದಲ್ಲಿ ಭಿನ್ನ ಭಿನ್ನ ಪಥಗಳಿದ್ದಾಗ್ಯೂ ಕಾಂಗ್ರೇಸದಂತಹ ರಾಷ್ಟ್ರಕಾರ್ಯವು ಬಂದಾಗ, ಎಲ್ಲರೂ ಐಕ್ಯಮತದಿಂದ ಕೆಲಸಮಾಡಿ, ಹಿಡಿದ ಕೆಲಸವನ್ನು ಯಶಸ್ವಿಯಾಗಿ ಮಾಡುವುದೇ ಕರ್ನಾಟಕದ ವೈಶಿಷ್ಟ್ಯವೆಂದು ಇತರ ಪ್ರಾಂತಗಳವರಿಗೆ ತೋರಿಸಲು ಇಡೀ ಕರ್ನಾಟಕವು ಒಟ್ಟಾಗುವುದೆಂದು ನನ್ನ ಪೂರ್ಣ ವಿಶ್ವಾಸವಿದೆ ಮತ್ತೆ ರಾಜಕೀಯ ಕಾರಣಗಳಿಂದ ಬಾಡಬಾಡವಾಗಿ, ಅತ್ತಿಷ್ಟು ಇತ್ತಿಷ್ಟು ಹಂಚಲ್ಪಟ್ಟಿರುವ ಕರ್ನಾಟಕದ ಎಲ್ಲ ಭಾಗಗಳವರೂ ಈ ಸಂದರ್ಭದಲ್ಲಿ ಬೆರೆತು, ಕರ್ನಾಟಕದ ಏಕೀಕರಣವನ್ನು ಸಾಧಿಸಲು ಇದೇ ಸುಸಮಯವೆಂಬುದನ್ನು ಕರ್ನಾಟಕಸ್ಥರು ಮರೆಯಬಾರದು.

ಕಾಂಗ್ರೇಸ ಸ್ವಾಗತಮಂಡಳ ಕಚೇರಿ,	ಗಂಗಾಧರಬಾಲಕೃಷ್ಣ
ಬೆಳಗಾಂವಿ ೫-೬-೨೪.	ದೇಶಪಾಂಡೆ ಅಧ್ಯಕ್ಷ.

ಸ್ಮಾಲ್ ಫೈನಲ್ ರಿಸಲ್ಟ್.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ರಿಟ್ರೆಂಚ್‌ಮೆಂಟ್.

(ಮೆ|| ಎಂ ಎಂ ಚಿಣ್ಣಪ್ಪನವರು)

45. ಸ. (a) ಮೆ|| ಕ್ಯಾಂಬಲ್ ಸಾಹೇಬರ ಸಿಬ್ಬಂದಿ ಕೋಶಿಯ ವರದಿಮೇರೆ ಹಲವೊಂದು ಇಲಾಖೆಗಳ ಕುರಿತು ಸರ್ಕಾರದವರು ಜಾರಿಗೆ ತಂದ ಸ್ಟೇಟ್‌ಮೆಂಟನ್ನು ಸಭೆಯ ಮುಂದೆ ಇರಿಸಬಹುದೋ ?

45 (ಉ) (a) ನಂ. 53 ರ ಸವಾಲಿಗೆ ಕೊಟ್ಟ ಜವಾಬನ್ನು ಮೆಂಬರುಗಳು ನೋಡುವದು.

ಫಾರೆಸ್ಟ್.

(ಮೆ|| ಪಿ. ಟಿ. ಕುಶಾಲಪ್ಪನವರು)

46. ಸ (a) ಮಿಸ್ಟರ್ ಟುಪ್ಪ ಇವರಿಗೆ ಯಾವ ಕೆಲಸ ಕೊಟ್ಟಿದೆ ?

(b) ಇವರು ಕುಪ್ಪ ಮರವನ್ನು ಫಾರೆಸ್ಟ್ ಇಲಾಖೆಯಿಂದ ಪಬ್ಲಿಕ್ ಮಾರಾಟದಲ್ಲಿಯ ಇನ್ನಾವ ರೀತಿಯಲ್ಲಿ ಕೊಳ್ಳುತ್ತಾರೆ ?

(c) ಬೇರೆ ರೀತಿಯಲ್ಲಾದರೆ ಅದರ ಶರತ್ತುಗಳಾವವು ?

(d) ಅವರು ಕೊಡತಕ್ಕ ಜಾಗದಲ್ಲಿ ಮರದ ಬೆಲೆ ಎಷ್ಟು?

(e) ಅವರಿಂದ ಪಡಕೊಂಡ ಮಾರಾಟದ ದರಗಳೆಷ್ಟು?

46 (ಉ) (a) ಚೀಫ್ ಫಾರೆಸ್ಟ್ ಆಫೀಸರರಿಗೂ ಮತ್ತು ಕಂಟ್ರಾಕ್ಟರಾದ ಮೆ|| ಟುಪ್ಪ ಸಾಹೇಬರಿಗೂ ಸ್ಲೀಪರ್‌ಗಳನ್ನು ತಯಾರುಮಾಡಲಿಕ್ಕೆ ಒಪ್ಪಂದ ನಡೆದಿದೆ ಬಂದ ಲಾಭವನ್ನು ಇಬ್ಬರೂ ಹಂಚಿಕೊಳ್ಳುವದು ಈ ಕರಾರಿನ ಕ್ರಮ ಪರೀಕ್ಷಾರ್ಥವಾಗಿ ರೈಲ್ವೇ ಕಂಪೆನಿಯವರಿಗೆ ಅವರು ಕೇಳಿಕೊಂಡಮೇರೆ ಮಾಲನ್ನು ಮಾರಾಟಮಾಡುವರು ರೈಲ್ವೆ ಕಂಪೆನಿಯವರು ಹಣ ಪಾವತಿಮಾಡಿದನಂತರ ಲೆಕ್ಕಾಚಾರ ನೋಡಿದರೆ ಸರ್ಕಾರಕ್ಕೆ ಕ್ಯುಬಿಕ್‌ಫೂಟ್ 1 ರ ರೂ. 1-10-0 ಲಾಭ ದೊರೆಯುವದು ಹಾಗಾದರೆ ನಿಳದ ಲಾಭ ಕ್ಕಿಂತಲೂ ಹೆಚ್ಚುಕಡಿಮೆ ಶೇಕಡ 15 ಎನ್ನಬಹುದು.

ಲಾಟರಿ.

47 ಸ (a) ಅಮ್ಮತ್ತಿ ದೇಶೀಯ ಶಾಲೆ ಪರವಾಗಿ ಲಾಟರಿ ಹಾಕಲು ಅನುಮತಿಗಾಗಿ ಅರ್ಜಿ ಬಂದಿದೆಯೋ ?

(b) ಅನುಮತಿ ಕೊಟ್ಟದ್ದುಂಟೋ ಇಲ್ಲವೋ?

(c) ಕೊಡದೆ ಇದ್ದರೆ ಅರ್ಜಿ ತಿರಸ್ಕರಿಸಲು ಕಾರಣವೇನು ?

(d) ಇತರ ಸಂಸ್ಥೆಗಳು ಲಾಟರಿಗಳನ್ನು ಹಾಕಲಿಕ್ಕೆ ಬಿಟ್ಟಿದೆಯೋ ?

(e) ಇಂಥಾ ಸಂದರ್ಭಗಳಲ್ಲಿ ಅನುಸರಿಸಬೇಕಾದ ರೀತಿ ಯಾವದು ?

(f) ಅಮ್ಮತ್ತಿ ದೇಶೀಯ ಶಾಲೆಯು ಕೊಡಗಿನಲ್ಲಿ ವಿದ್ಯಾಭಿವೃದ್ಧಿಗೆ ಸಹಾಯಕವಾಗಿದೆಯೋ ಇಲ್ಲವೋ ?

47 (ಉ) (a, b & c) ಅಂಥಾ ಒಂದು ಅರ್ಜಿಯು ಬಂದಿತ್ತು, ಅದನ್ನು ಇಂಡಿಯಾ ಸರ್ಕಾರದವರ ಅಭಿಪ್ರಾಯಕ್ಕನುಸಾರವಾಗಿ ತಿರಸ್ಕರಿಸಲಾಯಿತು

(d) 1921 ರಲ್ಲಿ ಗೌಡುಗಳ ಜನಾಂಗಕ್ಕೆ ಕೆಲವು ಷರತ್ತುಗಳಮೇಲೆ ಒಂದು ಲಾಟರಿಯನ್ನು ಹಾಕಲು ಕಮಿಷನರು ಹುಕುಂ ಕೊಟ್ಟಂತೆ ತೋರುತ್ತದೆ 1917 ರಲ್ಲಿ ವಾರ್ ಲೋನ್ ಲಾಟರಿ ಅವರ್ಡ್ ಕಮಿಟಿಯವರಿಂದ ಮರಿಸ್ಟ ಸರ್ಕಾರದವರ ಅನುಮತಿಮೇರೆ ಹಾಕಿದ್ದಿತು ಆದರೆ ಇದನ್ನು ಉದಾಹರಣೆಯನ್ನಾಗಿ ತೆಗೆದುಕೊಳ್ಳಲಾಗದು

(e) ಲಾಟರಿಗಳಿಗೆ ಯಾವ ತರದ ಉತ್ತೇಜನವನ್ನು ಕೊಡಬಾರದೆಂಬುದೇ ಸರ್ಕಾರದ ನಿಯಮ

(f) ಈ ಪ್ರಶ್ನೆಗೆ ಇಲ್ಲಿ ಅಸ್ಪದವಿಲ್ಲ

ಪ್ರೈವೆಟ್ ಟೂಶನ್

(ಮ|| ಕೆ ಯಂ ಮಂದಣ್ಣನವರು)

48. ಸ (a) ಮಡಿಕೇರಿ ಹೈಸ್ಕೂಲ್ ಮತ್ತು ಇತರ ಶಾಲೆಗಳ ಉಪಾಧ್ಯಾಯರಿಗೆ ಸಂಬಳದಮೇಲೆ ಖಾಸಗಿ ಪಾಠಹೇಳಲಿಕ್ಕೆ ಹುಕುಂ ಕೊಟ್ಟದ್ದುಂಟೋ ?

(b) ಹಾಗಿದ್ದರೆ ಎಷ್ಟು ಜನರಿಗೆ ಅಂಥಾ ಹುಕುಂ ಕೊಟ್ಟಿದೆ

(c) ಹೀಗೆ ಪಾಠಹೇಳಲಿಕ್ಕೆ ಹುಕುಂ ಕೊಡುವದರಿಂದ ಉಪಾಧ್ಯಾಯರ ದಿನಗಟ್ಲೆ ಕೆಲಸಕ್ಕೆ ಕುಂದುಬರುತ್ತೆಂದು ಸರ್ಕಾರಕ್ಕೆ ತಿಳಿದಿಲ್ಲವೋ ?

48 ಉ (a & c) ಹೌದು

(b) ಮೂರು ಮಂದಿ ಉಪಾಧ್ಯಾಯರಿಗೆ ಖಾಸಗಿ ಪಾಠಹೇಳಲಿಕ್ಕೆ ಹುಕುಂ ಕೊಟ್ಟಿದೆ ಒಬ್ಬರು ಹೈಸ್ಕೂಲಿನವರು ಇನ್ನಿಬ್ಬರು ಮೊಡೆಲ್ ಸ್ಕೂಲಿನವರು

ವಿದ್ಯಾ ಇಲಾಖೆಯ ಉಪಾಧ್ಯಾಯರ ಸಂಬಳ

(ಮ|| ಪಿ. ಬಿ ಮೇದಪ್ಪನವರು)

49. ಸ (a) ಮಡಿಕೇರಿ ಮತ್ತು ವೀರಾಜಪೇಟೆ ಹೈಸ್ಕೂಲ್ ಹೆಡ್ಮಾಸ್ಟರುಗಳ ಸಂಬಳದ ದರವೆಷ್ಟು?

(b) ಎರಡು ಶಾಲೆಗಳಲ್ಲಿ ತರಬೇತಾದ ಮತ್ತು ತರಬೇತಾಗದ ಉಪಾಧ್ಯಾಯರುಗಳೆಷ್ಟು?

(c) ಮಡಿಕೇರಿ ಮತ್ತು ವೀರಾಜಪೇಟೆ ಬೋರ್ಡಿಂಗ್ ಮನೆಗಳಿಗೆ 1923-24 ರಲ್ಲಿ ಮೆಡಿಕಲ್ ಆಫೀಸರುಗಳು ಎಷ್ಟಾವರ್ತಿ ಹೋಗಿದ್ದರು ?

(d) ಎರಡು ಬೋರ್ಡಿಂಗ್ ಮನೆಗಳಿಗೂ ಬೋರ್ಡ್ ಆಫ್ ವಿಸಿಟರ್ಸ್ ಇದ್ದಾರೋ ? ಇದ್ದರೆ 1923-24 ರಲ್ಲಿ ಅವರು ರಿಪೋರ್ಟುಗಳನ್ನಾಗಲಿ ಅಥವಾ ಸೂಚನೆಗಳನ್ನಾಗಲಿ ಮಾಡಿದ್ದುಂಟೋ ?

(e) ಈ ಬೋರ್ಡಿಂಗ್ ಮನೆಗಳಲ್ಲಿ ಎಷ್ಟು ಮಂದಿ ರೆಸಿಡೆಂಟ್ ಮಾಸ್ಟರುಗಳು ಇದ್ದಾರೆ ಮತ್ತು ಅವರ ಕೆಲಸಗಳಾವವು ?

49 ಉ (a) ಸೆಂಟ್ರಲ್ ಹೈಸ್ಕೂಲ್ ಹೆಡ್ಮಾಸ್ಟರ ಹುದ್ದೆಯು ಇಂಡಿಯನ್ ಎಜ್ಯುಕೇಶನಲ್ ಸರ್ವಿಸ್ ಗ್ರೇಡಿನಲ್ಲಿದೆ ಮತ್ತು ಅವನ ಸಂಬಳ 400—50—1250 100—250 ಓವರ್ಸಿ ಪೆ 100 ರೂಪಾಯಿ ಲೋಕಲ್ ಎಲೌವೆನ್ಸ್ ವೀರಾಜಪೇಟೆಯ ಹೆಡ್ಮಾಸ್ಟರ ದರ 200—10—300

(b) ತರಬೇತಾದ ಗ್ರ್ಯಾಜುಯೇಟುಗಳು ಮಡಿಕೇರಿಯಲ್ಲಿ 5, ವೀರಾಜಪೇಟೆಯಲ್ಲಿ 2 ತರಬೇತಾಗದವರು ಮಡಿಕೇರಿ 2, ವೀರಾಜಪೇಟೆ 2.

(c) ಕಾಗದಪತ್ರಗಳಲ್ಲಿ ಅಸಿಸ್ಟೆಂಟ್ ಸರ್ಜನರು ಮಡಿಕೇರಿ ಬೋರ್ಡಿಂಗನ್ನು ವಾರಕ್ಕೊಮ್ಮೆ ಸಂದರ್ಶಿಸುತ್ತಾರೆ ವೀರಾಜಪೇಟೆಯಲ್ಲಿ ಮೆಡಿಕಲ್ ಆಫೀಸರುಗಳು ಅವಶ್ಯವಿದ್ದಾಗ ಬೋರ್ಡಿಂಗನ್ನು ನೋಡುತ್ತಾರೆ.

(d) ಹೌದು, ವೀರಾಜಪೇಟೆ ಬೋರ್ಡ್‌ನವರು ಈ ವರುಷ ಬೋರ್ಡಿಂಗನ್ನು ನೋಡಿರುವದಿಲ್ಲ ಮಡಿಕೇರಿ ಬೋರ್ಡ್‌ನವರು ಅನೇಕ ಉತ್ತಮಸೂಚನೆಗಳನ್ನು ಮಾಡಿರುವರು

(e) ಮಡಿಕೇರಿ ಬೋರ್ಡಿಂಗಿನಲ್ಲಿ 3 ರೆಸಿಡೆಂಟ್ ಮಾಸ್ಟರುಗಳಿದ್ದಾರೆ ಮಕ್ಕಳ ಆರೋಗ್ಯ, ಅಧ್ಯಯನ ಮತ್ತು ಶಿಕ್ಷಣ ಇವುಗಳ ವಿಷಯ ಎಚ್ಚರಿಕೆ ತೆಗೆದುಕೊಳ್ಳುವದೇ ರೆಸಿಡೆಂಟ್ ಮಾಸ್ಟರುಗಳ ಕೆಲಸಗಳು. ವೀರಾಜಪೇಟೆಯ ಶಾಲೆಯಲ್ಲಿ ರೆಸಿಡೆಂಟ್ ಮಾಸ್ಟರು ಬೋರ್ಡಿಂಗನ್ನು ನಡೆಸುವದಲ್ಲದೆ ಶಿಕ್ಷಣದ ವಿಷಯಕ್ಕೂ ಗಮನ ಕೊಡುತ್ತಾರೆ

50. ಸ (a) ಮಡಿಕೇರಿ ಜೈಲಿನಲ್ಲಿ ಸಧ್ಯಕ್ಕೆ ಎಷ್ಟು ಮಂದಿ ವಾರ್ಡರುಗಳು ಮತ್ತು ಕೈದಿಗಳು ಇರುತ್ತಾರೆ 1920ರಲ್ಲಿ ಇದ್ದವರೆಷ್ಟು ?

(b) 1920—21—22 ಮತ್ತು 23—24 ಈ ವರುಷಗಳಲ್ಲಿ ಪ್ರತಿ ಒಬ್ಬ ಕೈದಿಗೆ ಸರಾಸರಿ ಖರ್ಚೆಷ್ಟು ? ಈ ಖರ್ಚಿನಲ್ಲಿ ಕೈದಿಯನ್ನು ಸಾಗಿಸುವ ಮತ್ತು ಪೋಲೀಸಿನವರಿಗೆ ಕೊಡುವ ಒಟ್ಟು ಖರ್ಚು ಸೇರಿರಬೇಕು.

(c) ಮಡಿಕೇರಿ ಜೈಲಿನಲ್ಲಿ ಕೈದಿಗಳಿಗೆ ಆದಿತ್ಯವಾರ ರಜಾದಿನವೋ ?

(d) ಹಾಗಿದ್ದರೆ ಕೈದಿಗಳು ರಜವನ್ನು ಅನುಭವಿಸುವರೋ ?

50 ಉ (a) 1920 ರಲ್ಲಿ 26 ಮಂದಿಯೂ 1923 ರಲ್ಲಿ 13 ಮಂದಿ ವಾರ್ಡರುಗಳೂ ಇದ್ದರು. ಈ ವರುಷಗಳಲ್ಲಿ ಸರಾಸರಿ ಕೈದಿಗಳ ಸಂಖ್ಯೆ 74 ಮತ್ತು 28.

(b) ಮಡಿಕೇರಿ ಜೈಲಿನಲ್ಲಿ 1920 ಕ್ಕೆ 259 ರೂಪಾಯಿ 1921 ಕ್ಕೆ 2 7 ರೂ 1922 ಕ್ಕೆ 237 ರೂ 1923 ಕ್ಕೆ 243 ರೂ ಸರಾಸರಿ ಖರ್ಚು ಬಿದ್ದಿತು ಕೈದಿಗಳನ್ನು ಸಾಗಿಸುವ ಸಮ್ಮಂಧ ಲೆಕ್ಕಾಚಾರ ದೊರೆಯಲಾರದು

(c) ಕೊಡಗಿನಲ್ಲಿ ಜಾರಿಯಾಗಿದ್ದ ಹಳೆ ಮೈಸೂರು ಜೈಲ್ ಮ್ಯಾನ್ಯುಅಲ್ ಪ್ರಕಾರ ಆದಿತ್ಯವಾರವೂ ರಜ ದಿನವಾಗಿ ತೋರುವದಿಲ್ಲ ಇನ್ನೊಂದು ರೂಲ್ಸಿನ ಪುಸ್ತಕವು ತಯಾರಾಗುವವರೆಗೆ ಸಾಧ್ಯವಾದಷ್ಟು ಮದ್ರಾಸಿನ ರೂಲ್ಸುಗಳೇ ಜಾರಿಯಲ್ಲಿರಬೇಕೆಂದು ಹುಕುಂ ಆಗಿದೆ ಮದ್ರಾಸ್ ಜೈಲ್ ಮ್ಯಾನ್ಯುವಲಿನ ರೂಲ್ 289 ಹೀಗೆ ಹೇಳುತ್ತದೆ ಜೈಲಿನ ಒಳವಿಚಾರಕ್ಕೆ ಸಂಬಂಧಪಟ್ಟ ಕೆಲಸದ ವಿನಹ ಬೇರೆ ಯಾವ ಕೆಲಸವನ್ನು ಅಥವಾ ಜಸತ್ ಕೆಲಸವನ್ನು ಕೈದಿಯು ಆದಿತ್ಯವಾರ ಮಾಡಬಾರದು.

(d) ಅತ್ಯಾತುರವಾಗಿ ಕೆಲಸ ಒಗಿದ ಎರಡು ಸಂದರ್ಭಗಳಲ್ಲಲ್ಲದೆ ಇತರ ಸಂದರ್ಭದಲ್ಲಿ ಕೈದಿಯನ್ನು ಆದಿತ್ಯವಾರಗಳಲ್ಲಿ ಜಲಗಕ್ಕೆ ಕಳುಹಿಸಿದ್ದಿಲ್ಲ ಸ್ಪೆಷಲ್ ಗ್ಯಾಂಗ್ (ಗುಡಿಸುವವರ) ಸಂಬಂಧ ಫೆಬ್ರವರಿ ತಿಂಗಳಲ್ಲಿ ಸೂಪರೆಂಟರಿಗೆ ತಿಳಿಸಿದೆ

(ಮ|| ಎಸ್. ಯಂ ಪಿಂಟೊ)

ಲೈಸೆನ್ಸ್

51 ಸ (a) ಖಾಯಂ ಲೈಸನ್ಸ್ ಮೇರೆ ಎಷ್ಟು ಕೋವಿಗಳು ಬಾರಿಯಲ್ಲಿದ್ದವು ಮತ್ತು ಹಂಗಾಮಿ ಲೈಸೆನ್ಸ್ ಮೇರೆ ಎಷ್ಟು ?

(b) ಅನೇಕ ಜಮ್ಮೇತರ ರೈತರಿಗೆ ತಮ್ಮ ಭೂಮಿಯನ್ನು ಕಾಡುಪ್ರಾಣಿಗಳ ಬಾಧೆಯಿಂದ ತಪ್ಪಿಸಲು ಕೋವಿ ಹಿಡಿಯಲಿಕ್ಕೆ ಲೈಸನ್ಸ್ ಇಲ್ಲದಿರುವ ಸಂಗತಿ ಸರ್ಕಾರದವರಿಗೆ ಗೊತ್ತುಂಟೋ ?

(c) ಇಂಥಾ ರೈತರಿಗೆ ಲೈಸನ್ಸುಗಳನ್ನು ಹೆಚ್ಚಾಗಿ ಕೊಡಲು ಸರ್ಕಾರದವರು ಯತ್ನಿಸುವರೋ ?

51 ಉ (a) ಈ ಸಂಬಂಧ ಒಂದು ಸ್ಟೇಟ್‌ಮೆಂಟ್ ನಿಮ್ಮ ಮುಂದೆ ಇರಿಸಿದೆ

(b) ಇಲ್ಲ

(c) 1922 ರಲ್ಲಿ 1628 ಲೈಸನ್ಸುಗಳು ಇದ್ದದ್ದು 1923 ರಲ್ಲಿ 1933 ಆಗಿದೆ ಯೋಗ್ಯರಾದವರಿಗೆ ಸುಲಭವಾಗಿ ಲೈಸನ್ಸ್ ಕೊಡುತ್ತಲೇ ಇದೆ.

52 ಸ ಹಾರಂಗಿನಾಲೆಯ ಸಂಬಂಧ ಎಲ್ಲಾ ಪತ್ರಗಳನ್ನೂ ಮೇಜದಮೇಲೆ ಇಡಬಹುದೋ ಈ ನಾಲೆಯಿಂದ ಎಷ್ಟು ಗ್ರಾಮಗಳಿಗೆ ಪ್ರಯೋಜನವಿದೆ, ಖರ್ಚುಮಾಡುವ ಹಣಕ್ಕೆ ಎಷ್ಟು ಬಡ್ಡಿ ದೊರೆಯಬಹುದು ಇತ್ಯಾದಿ ಎಲ್ಲಾ ಸಂಗತಿ ತಿಳಿಸಬೇಕು

52 ಉ ಪತ್ರಗಳು ತುಂಬಾ ಇರುವದರಿಂದ ಮೇಜದ ಮೇಲೆ ನಕಲು ಇಡಲು ಸಾಧ್ಯವಿಲ್ಲ ಅವಶ್ಯವಿದ್ದವರಿಗೆ ತೋರಿಸಬಹುದು ಯಾವುದೇದೂ ಕೆಲವು ಪತ್ರಗಳ ನಕಲು ಬೇಕಾದರೂ ಕೊಡಬಹುದು ಪ್ರಯೋಜನ ಹೊಂದುವ ಗ್ರಾಮಗಳ ಪಟ್ಟಿ ಜೋಡಿಸಿದೆ ನೀರು ಕಂದಾಯದಿಂದ ಶೇಕಡ 2.2 ರ ಬಡ್ಡಿ ಗಿಟ್ಟಬಹುದೆಂತ ಅಂದಾಜು ಮಾಡಲಾಗಿದೆ

ಸಿಬ್ಬಂದಿಬೋತೆ

ಮ|| ಬಿ ಶ್ರೀಪತಿರಾಯರು

53. ಸ ಮ|| ಕ್ಯಾಂಬೆಲ್ ಸಾಹೇಬರ ಸಿಬ್ಬಂದಿ ಬೋತೆಯ ರಿಪೋರ್ಟು ಮೇಜದಮೇಲೆ ಇಡುವುದೋ ಅದರ ಶಿಫಾರಸ್ ಮೇರೆ ಎಷ್ಟು ಹುದ್ದೆಗಳು ತೆಗೆದು ಹಾಕಲಾಯಿತು. ಎಷ್ಟು ಹೊಸದಾಗಿ ಏರ್ಪಾಡಾಯಿತು ?

53 ಉ ರಿಪೋರ್ಟಿನ ನಕಲು ತಯಾರಿಸಿ ಇಡಲು ಸಾಧ್ಯವಿಲ್ಲ ಅವಶ್ಯವಿದ್ದರೆ ಮೆಂಬರಿಗೆ ತೋರಿಸಬಹುದು ಸವಾಲಿನಲ್ಲಿ ಕೇಳುವ ಪಟ್ಟಿ ತಯಾರಿಸುತ್ತಾ ಇದ್ದೇವೆ

ಟ್ರಾಮ್‌ವೇ.

54 ಸ (a) ಟ್ರಾಂವೇಗಾಗಿ ಖರ್ಚಾದ ಹಣವೆಷ್ಟು ಅದರಪೈಕಿ ಕಟ್ಟಿದ ಕಂಪನಿಗಳಿಗೆ ಎಷ್ಟು, ಇಂಜನಿಗೆ ಎಷ್ಟು ಮೇಲ್ವಿಚಾರಕ್ಕೆ ಎಷ್ಟು ?

(b) ಈಗ ಟ್ರಾಂವೇಗೆ ವರ್ಷಾವಧಿ ಎಷ್ಟು ಖರ್ಚಾಗುತ್ತೆ ? ವರ್ಷದಲ್ಲಿ ಟ್ರಾಂ ಲೈನಿನ ಮೂಲಕ ಮಾಡುವ ಕೆಲಸದ ಬೆಲೆಯೆಷ್ಟು ?

(c) ಒಟ್ಟು ಪುರಗಾದು ಎಷ್ಟು ?

(d) ಈ ಟ್ರಾಂವೆಯು ಹದಡಿಕೊಂಡಿರುವ ವಿಸ್ತೀರ್ಣವು ಉದ್ದೇಶಿಸಿದ ಕೆಲಸಕ್ಕಾಗಿ ಎಷ್ಟುಕಾಲ ಬರಬಹುದು ?

54. ಉ (a, b, c & d) ಈ ಸಂಗತಿಯ ಕುರಿತು ಎಲ್ಲಾ ವಿಷಯಗಳನ್ನು ಒಳಗೊಂಡ ಒಂದು ಪತ್ರವು ಮೆಂಬರಿಗೆ ಕೊಡಲಾಗುವದು

(ನಿಡ್ತಡ ಸುಬ್ಬಣ್ಣಯ್ಯ)

55. ಸ (a) ಸಂಜರಾಜಪಟ್ಣ ತಾಲ್ಲೋಕಿನಲ್ಲಿರುವ ಕೆರೆಕಟ್ಟೆಗಳ ವಿಷಯದಲ್ಲಿ ಸರ್ಕಾರದವರು ಎಷ್ಟು ವರ್ಷಗಳಿಂದ ಗಮನ ಕೊಡುತ್ತಿದ್ದಾರೆ.

(b) ಸಂಜರಾಜಪಟ್ಣ ತಾಲ್ಲೋಕಿನ ಕೆರೆ ಮತ್ತು ನಾಲೆಗಳ ಪೈಕಿ ಯಾವುವು ಸರ್ಕಾರಕ್ಕೆ ಸೇರಿದವುಗಳು.

(c) ಕೆರೆಗಳ ರಿಪೇರಿಗಾಗಿ ಎಸ್ಟಿಮೇಟ್ ತಯಾರಿಸಿದ್ದು ಯಾವಾಗ ? ಮತ್ತು ಪ್ರತಿ ಒಂದು ಕೆರೆಗೆ ತಗಲಿದ ಖರ್ಚೆಷ್ಟು ?

(d) ಪ್ರತಿ ವರ್ಷವೂ ಕೆರೆಗಳಿಗೆ ತಗಲುವ ಖರ್ಚೆಷ್ಟು ? ಮತ್ತು ಯಾವ ತರದ ಕೆಲಸ ನಡೆದಿರುತ್ತದೆ ?

(e) ಕೆರೆಯಿಂದ ನೀರನ್ನು ಉಪಯೋಗಿಸುವ ಬಗ್ಗೆ ಸರ್ಕಾರದವರು ಕಂದಾಯ ಹಾಕಿದ್ದುಂಟೋ ? ಹಾಕಿದ್ದಲ್ಲಿ ಈ ತರದ ಉತ್ಪತ್ತಿಯು ಎಷ್ಟು ?

(f) ಸರ್ಕಾರದವರು ನೀರು ಕಂದಾಯ ವಸೂಲಿಮಾಡುತ್ತಿದ್ದಪಕ್ಷದಲ್ಲಿ ಪ್ರಜೆಗಳಿಗೆ ನೀರು ಸಿಕ್ಕುತ್ತದೆಂಬ ನಂಬಿಕೆ ಸರ್ಕಾರಕ್ಕೆ ಇದೆಯೋ ?

(g) 1919 ರಲ್ಲಿ ಕಾಗೋಡು ಕೆರೆಯ ಕುರಿತು ಎಗ್ಜಿಕ್ಯೂಟಿವ್ ಇಂಜಿನಿಯರು ತಯಾರು ಮಾಡಿದ ರಿಪೋರ್ಟ್ ಏನು ? ಸರ್ಕಾರದವರು ಈ ಕೆರೆಯ ರಿಪೇರಿಬಗ್ಗೆ ಗಮನ ಕೊಟ್ಟಿರುತ್ತಾರೋ ?

55 ಉ (a, b & c) ಸಾಧ್ಯವಾದಷ್ಟು ವಿಷಯವನ್ನೊಳಗೊಂಡ ಒಂದು ಸ್ಟೇಟ್‌ಮೆಂಟ್ ಸಭೆಯ ಮುಂದೆ ಇರಿಸಲಾಗಿದೆ

(d) ಸಮರ್ಪಕ ಜವಾಬು ಕೊಡಲಿಕ್ಕೆ ಸಾಧ್ಯವಿಲ್ಲ. ಕೆರೆಗಳಮೇಲೆ ಪ್ರತಿವರ್ಷವೂ ತಗಲುವ ಖರ್ಚನ್ನು ತೋರಿಸುವ ಒಂದು ಸ್ಟೇಟ್‌ಮೆಂಟನ್ನು ಎಗ್ಜಿಕ್ಯೂಟಿವ್ ಇಂಜಿನಿಯರು ಘನಮೆಂಬರಿಗೆ ಕೊಡುವರು

(e) ಮಣ್ಣುಗಂದಾಯಕ್ಕಿಂತ ಎಕರೆ 8 ಆಣೆಯ ದರದ ಕಂದಾಯ ಹಾಕಿದೆ ಒಟ್ಟಿಗೆ ಎಷ್ಟು ಉತ್ಪತ್ತಿಯಾಯಿತೆಂದು ಹೇಳಲು ಸಾಧ್ಯವಿಲ್ಲ ಆದರೆ ಅದನ್ನು ಒದಗಿಸಬಹುದು

(f) ನೀರಿನ ಅಭಾವವು ನೋಡಿಬಂದಲ್ಲಿ ಸಾಧ್ಯವಾದಷ್ಟು ವಿಲೇವಾರಿಮಾಡಿದೆ

(g) ರಿಪೇರಿಯಬಗ್ಗೆ 1650 ರೂಪಾಯಿಗಳು 1919 ರಲ್ಲಿ ಬೇಕಾಗುವದೆಂದು ಮ|| ವೈಟ್ ಸಾಹೇಬರವರು ಸೂಚಿಸಿದರು 1924-25 ರ ಬಜೆಟ್ಟಿನಲ್ಲಿ ಈ ಹಣಕ್ಕೆ ಏರ್ಪಾಡುಮಾಡಿದೆ

56 ಸ (a) ಹಾರಂಗಿ ನಾಲೆಯ ಎಸ್ಟಿಮೇಟು ತಯಾರಾದದ್ದು ಯಾವಾಗ ಮತ್ತು ಎಸ್ಟಿಮೇಟಿನ ಮೊಬಲಗು ಎಷ್ಟು ?

56 ಉ (a) 1910 ರಲ್ಲಿ ಎಸ್ಟಿಮೇಟಿನ ಬೆಲೆ 45778 ರೂಪಾಯಿಗಳು

ಫಾರೆಸ್ಟ್

(ಮ|| ಸಿ ಎನ್ ವೆಂಕಪ್ಪಯ್ಯನವರು)

57 ಸ ಮಡಿಕೇರಿ ಬಳಿ ಇರುವ ಸಾದೆ ಫಾರೆಸ್ಟ್ ಕಳೆದ ಮುವ್ವತ್ತು ವರ್ಷಗಳಿಗಾಗಿ ತಗಲಿದ ಖರ್ಚೆಷ್ಟು ? ಮುವ್ವತ್ತು ವರ್ಷಗಳಲ್ಲಿ ಇವುಗಳಿಂದ ಬಂದ ಲಾಭವೆಷ್ಟು

57 ಉ ಈ ವಿಚಾರದಲ್ಲಿ ತಕ್ಷಣ ಉತ್ತರ ದೊರೆಲಾರದು ಸಾಧ್ಯವಾದಷ್ಟು ಬೇಗನೆ ವಿಷಯಸಂಗ್ರಹವು ಘನ ಮೆಂಬರರಿಗೆ ಕೊಡಲಾಗುವದು.

ಹಾರಂಗಿನಾಲೆಯ ಸಂಬಂಧ ನೀರಾವರಿಗೆ ಯೋಗ್ಯ ಹಳ್ಳಿಗಳ ಹೆಸರುಗಳು

ಮಲ್ಲಿನಹಳ್ಳಿ ಶಿರಹೊಳಲು ಬೆಡಗೋಟೆ, ಹೆಗ್ಗಡೆ ಭುವನಗಿರಿ ಹುಲುಸೆ, ಕೂಡ್ಲೆ, ರಾಮಪುರ, ಚಿನ್ನೇಗದ್ದೆ ಹೊಸಳ್ಳಿ ಹೆಬ್ಬಾಲೆ, ಮರೂರು, ತೊರೆನೂರು, ಶಿ[illegible]ಬೂರ ಚಿಕ್ಕನಾಯಕನಹಳ್ಳಿ ಶಿರಂಗಾಲ, ಹುಲುಗು ಕಾನಬೈಲು ಹುದುಗೂರು ಕಲ್ಲದೇವರ ಹೊಸ ಹಾರಂಗಿ, ಮೊರವಳ್ಳಿ, ನಲ್ಲೂರು

(1) ಈ ವರ್ಷದಲ್ಲಿ ಲೈಸನ್ಸ್ ಮೇರೆ ಹಿಡಿದು ಕೋವಿ ಸಂಖ್ಯೆಯನ್ನು ತೋರಿಸುವಪಟ್ಟಿ (Forms XVI &)

ಮಡಿಕೇರಿ ಟವನ್ ಪೋಲೀಸ್ ಸ್ಟೇಷನ್

ಮಡಿಕೇರಿ ತಾಲೋಕು ,,

ಸುಂಟಿಕೊಪ್ಪ ,,

ಸೋಮವಾರಪೇಟೆ ,,

ವೀರಾಜಪೇಟೆ ,,

ಸಿದ್ದಾಪುರ ,,

ನಾಪೋಕ್ಲು ,,

ಪೊನ್ನಂಪೇಟೆ ,,

ಜುಮ್ಲ

(2) ಹಂಗಾಮಿನಲ್ಲಿ ಲೈಸನ್ಸ್ ಮೇರೆ ಉಪಯೋಗಿಸಿದ್ದ ಕೋವಿಗಳ ತಖ್ತೆ (Form XIX)

ಮಡಿಕೇರಿ ಟವನ್ ಪೋಲೀಸ್

,, ತಾಲೋಕು ಪೋಲೀಸ್

ಸುಂಟಿಕೊಪ್ಪ

ಸೋಮವಾರಪೇಟೆ

ವೀರಾಜಪೇಟೆ

ಸಿದ್ದಾಪುರ

ನಾಪೋಕ್ಲು

ಪೊನ್ನಂಪೇಟೆ

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. [ಎಡಿಟರ್]

ಗ್ರಾಮಶಾಲೆಗಳು.

ಕೊಡಗುದೇಶದಲ್ಲಿ ಅನೇಕ ಪ್ರೈಮರಿ ಶಾಲೆಗಳು ಗ್ರಾಮಾಂತರಗಳಲ್ಲಿ ಇರುವುದು ಸರ್ವರಿಗೂ ವೇದ್ಯ ಇರುತದಷ್ಟೆ. ಈ ಶಾಲೆಗಳು ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳ ಮತ್ತು ಸ್ಕೂಲ್ ಪಂಚಾಯಿತಸ್ತರ ಅಧೀನದಲ್ಲಿ ಇರುತ್ತ. ಕಳೆದ ಸಲದಲ್ಲೀ ಈ ಸಮ್ಮತಿತ್ರಿಕೆಯಲ್ಲಿ ಈ ಶಾಲೆಗಳಲ್ಲಿ ನಡೆಯುವ ಅಕ್ರಮಗಳನ್ನು ವಿದ್ಯಾ ಇಲಾಖೆಯ ಮುಖಂಡರಿಗೂ ಸಹ ತಿಳಿಸಿರುವರು. ಈಗ ಸ್ಕೂಲ್ ಪಂಚಾಯಿತಸ್ತರ ಚುನಾವಣೆಯು ಈ ತಿಂಗಳಲ್ಲಿ ಇಲಾಖದಾರರು ಏರ್ಪಡಿಸುವದಾಗಿರುತ್ತೆ. ಈ ಸಂದರ್ಭದಲ್ಲಾದರೂ ಇಲಾಖದಾರು (ನಾಗಾರು) ಸುಬೇದಾರು, ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳು, ಪ್ರೆಸಿಡೆಂಟರುಗಳು ಸಹ ಪ್ರತಿ ಶಾಲೆಯಲ್ಲಿ ಇಟ್ಟಿರುವ ಪಂಚಾಯಿತ್ದಾರರ ವಿಜಿಟ್ಟಿಂಗ್ ಬುಕ್ಕಿನಲ್ಲಿ ಯಾವ್ಯಾವ ಮೆಂಬರುಗಳು ವರ್ಷ ಒಂದರ ಎಷ್ಟೆಷ್ಟು ಸಲ ಶಾಲೆಗಳಿಗೆ ಹೋಗಿರುತ್ತಾರೆಂಬ ದಾಖ್ಲೆ ತರ್ಕಿಸಿನೋಡಿ ಎಂದೂ ಶಾಲೆಯನ್ನೇ ಕಾಣದಂತ ಮೆಂಬರುಗಳ ಹೆಸರು ನಾಡುಕಚೇರಿಯಲ್ಲಿ ಶಾಲೆಗಳಲ್ಲಿ ಕಸ್ತೂರಿ ಬಿಟ್ಟು ಇದುವರೆ ಐವಾಹು ಅಂತಾವರ ಹೆಸರನ್ನು ವಜಾಮಾಡಿ ನ್ಯಾಯವಾಗಿ ಶಾಲೆಗಳ ಬಾಬಿನಲ್ಲಿ ತೊಂದರೆ ತೆಗೆದುಕೊಳ್ಳುವಂತಾ ಮಹಾಶಯರುಗಳನ್ನು ಚುನಾವಣೆ ಮಾಡುವಂತೆ ಮಾಡಬೇಕಲ್ಲದೆ; ಈಗ ಶಾಲಾ ಮಾಸ್ತರುಗಳಿಗೆ ನ್ಯಾಯವಾದ ಸಂಬಳ ಒಡ್ಡಿಯಾಗಿರುವುದರಿಂದ ಪ್ರತಿ ಶಾಲೆಯು ಹೆಡ ಮಾಸ್ತರುಗಳು ಶಾಲೆಯು ಒಳಯುಳ್ಳೀಯೂ, ಶಾಲೆಯಿರುವ ಗ್ರಾಮದಲ್ಲಾದರು ಒಂದು ಮನೆ ಮಾಡಿಕೊಂಡು ವಾಸಮಾಡುವಂತೆ ಪರವಾಡಿನವರೆನ್ನೇ ಹೆಡಮಾಸ್ತರಾಗಿ ನೇಮಕಮಾಡಬೇಕಾಗಿ ವಾಲಾ ಇಲಾಖೆಯ ಮುಖಂಡರನ್ನು ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳು ಕೇಳಿಕೊಳ್ಳದಿದ್ದರೆ, ಒಡಕ್ಕೈತರು ಹಣವೆಲ್ಲ ವ್ಯರ್ಥವಾಗುತ್ತೆ, ಮಕ್ಕಳು ಯುವಕರಿಗೆ ನ್ಯಾಯವಾದ ವಿದ್ಯೆಯೂ ಇಲ್ಲದಾಗುತ್ತೆ. ಅಂದರೆ ಮಕ್ಕಳಿಗೆ ನರ್ಷಕೊಂಡು ಹೊಸ ಪುಸ್ತಕ ಉಪಾಧ್ಯಾಯರು ಮಕ್ಕಳಿಗೆ ಮುಂಚೆ ದಿನಚರಿ ಪಾಠವನ್ನು ತಾವು ಕಲಿತುಬಂದು ಪಾಠ ಹೇಳಲು ತನ್ನ ಸ್ವಂತಮನೆಯಿಂದ ಬಂದು ಪಾಠ ಹೇಳಲು ಮಾಸ್ತರುಗಳಿಗೆ ಸಾಧ್ಯವಿಲ್ಲ. ಯಾಕೆಂದರೆ ಯಾಂತಾವನೆ ... ಬಂದರೆ ದೊಡ್ಡದು, ಅದನ್ನು ಪ್ರತ್ಯೇಕ ... ಮಕ್ಕಳಿಗೆ ... ಕಾರಣಗಳನ್ನು ... ಈ ವಿಷಯದಲ್ಲಿ ಮಾಸ್ತರುಗಳು ಬಾಧ್ಯರು ... ಇಲಾಖ ನಾರು ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರು, ಮೆಂಬರುಗಳು ದೇಶದ ಯುವಕ ವಿದ್ಯಾಭ್ಯಾಸದ ಮೇಲೆ ದೃಷ್ಟಿ ಇಡಬೇಕಾಗಿ ವಿನಂತಿ

"ವಕ್ಕಳತಂದೆ"

ರಾಮಚಂದ್ರಾಪುರಮಠವೂ, ಅವರ ಶಿಷ್ಯಮಂಡಳಿಗಳೂ.

... ಹಿಂದಿನ ಲೇಖ... ರಾಮಚಂದ್ರಾಪುರ ಮಠ ... ದೇವ ... ಗಳ ... ಕಾಲದಲ್ಲಿ ನಡೆದ ಸ... ಸಂಬಂಧ ... ಕಾಣೆ ... ಮುಲ್ಲಿ ತೋರ್ಪಡಿಸಿ ... ವನ್ನು ಹೋಗಲಾಡಿಸುವ ... ಸಭೆಯೊಂದನ್ನು ಏರ್ಪಡಿಸುವುದು ... ಸಂದರ್ಭ ... ಮಠದ ಬೇಡನ್ನವವರ ಅಭಿಪ್ರಾಯ ... ಸಭೆಯನ್ನು ... ವಿಚಾರವು ಹೀಗಿರುತ್ತೆ ... ಪುಕವು ದೊರಕಬಹುದೆಂದು ನಿರೀಕ್ಷಿಸಿದ್ದೆನು. ಆದರೆ ಸನಗೊಂದು ಉತ್ತರವಿಲ್ಲ.

ಮಹಾಸಭೆಯನ್ನು ಕರಿಸುವ ವಿಷಯದಲ್ಲಿ ಕೆಲವು ವಿಚಾರತರಂಗಗಳು ಮೇಲಿಂದ ಮೇಲೆ ಏಳುತ್ತಿರುವವು. ಅವುಗಳ ಸೈಕಿ ಮುಖ್ಯವಾದವುಗಳನ್ನು ಕುರಿತು ಪ್ರಸ್ತಾಪಿಸುವೆನು. (1) ರಾಮಚಂದ್ರಾಪುರ ಮಠಕ್ಕೆ ಸೇರಿಕೊಂಡಾಗ, ಎಲ್ಲರೂ ಸೇರಿ ಹೋದರೆ? ಇಲ್ಲವೆ, ಯಾರಾದರೂ ಉಳಿದುಹೋದರೋ? (2) ಮೇಲಿನ ಮಠದವರಿಗೆ ಶಿಷ್ಯರಾದ ಕೂಡಲೆ ಮತದವರೂ ಸಭಾಸನರೂ ಒಟ್ಟುಗೂಡಿ, ಆಡಳಿತ ನಿಬಂಧನೆಗಳನ್ನು ತಯಾರಿಸಿದ್ದುದು ಸಹಜವೋ? (3) ಮಠಬೇಕೆಂಬ ವಾದ ವ್ಯಕ್ತಿಗತವಾದದ್ದೋ? ಅಥವಾ ಕೂಟಗತವಾದದ್ದೋ? (4) ಮಠಬೇಕೋ ಬೇಡವೋ? ಇಲ್ಲವೆ ಆದಿಯಿಂದ ಗುರದಿಂದ ನಡೆದುಕೊಂಡು ಬಂದಿರುವ ಆಡಳಿತ ಪಂಚಾಯತಿ ಸಭೆಯು ಸುಧಾರಣೆಯಾದರೆ ಸಾಲದೋ? ಹೀಗಾಗಬೇಕಾದರೆ ಉಪಾಯವೇನು?

ಮೇಲಿನ ಪಶ್ನೆಗಳನ್ನು ಒಂದೊಂದಾಗಿ ಸೂಕ್ಷ್ಮರೀತಿಯಲ್ಲಿ ವಿಚಾರ ಮಾಡೋಣ. (1) ರಾಮಚಂದ್ರಾಪುರ ಮಠಕ್ಕೆ ಆದಿಯಲ್ಲಿ ಶಿಷ್ಯರಾಗಿ ನಮ್ಮ ಜನರು ಒಟ್ಟಾಗಿಯೇ ಸೇರಿಹೋಗಿರಬೇಕು. ಹೀಗಲ್ಲದೆ, ಒಂದೆರಡು ಮನೆಗಳು ಸೇರದೆ ಪ್ರತ್ಯೇಕವಾಗಿ ನಿಂತು ಹೋಗಿದ್ದರೆ, ಹಿಂದೆ ಮಠದ ಪಕ್ಷದವರಿಗೂ, ಅವರ ತಾತ್ಕಾಲಿಕ ವಿರೋಧಿಗಳಿಗೂ ನಡೆದ ಮೊಕದ್ದಮೆಗಳಲ್ಲಿ, ಕೋರ್ಟ್ ತೀರ್ಪುಗಳೆಲ್ಲಾ ಮಠದ ಪಕ್ಷದವರನ್ನೇ ವಹಿಸಿರದೆ, ವಿರೋಧಪಕ್ಷದವರ ಕಡೆಗೂ ಆಗಬಹುದಿತ್ತು. ಈ ಕಾರಣದಿಂದ ಎಲ್ಲ ದೇವಾಂಗದವರೂ ಮಠಕ್ಕೊಳಪಟ್ಟವರೆಂದೂ ಹಿಂದೆ ನಡೆದ ಕಲಹಗಳು ವ್ಯಕ್ತಿಗತ ಕಲಹಗಳೆಂದೂ ಸಿದ್ಧಾಂತವಾಗಿಹೋಗಿದೆ. (2) ನಿಬಂಧಗಳನ್ನು ತಯಾರಿಸಿದ್ದುಂಟು. ಈ ನಿಬಂಧನೆಗಳೇ ಇಂದಿನವರೆಗೂ ಜಾರಿಯಲ್ಲಿವೆ. (3) ಮಠಬೇಡೆಂದು ಹೇಳುವ ವಿಚಾರವು ವ್ಯಕ್ತಿಗತವಾದದ್ದೇ ಹೊರತು ಕೂಟಗತವಾದದ್ದಲ್ಲವೇ ಅಲ್ಲ. ಕೂಟಗತವಾಗಿದ್ದರೆ, ಅಂಥ ಕೂಟವು ಮರದಿಂದ ಹೊರಬೀಳಲಿಕ್ಕೆ ಕಷ್ಟವೇನಿತ್ತು? ಹೀಗಾಗಲಿಕ್ಕೆ ಯೋಗ್ಯ ಚಳವಳ ಮಾತ್ರ ನಡೆಯಬೇಕಿತ್ತು. (4) ಮಠಬೇಕೆನ್ನುವವರ ಸಂಖ್ಯೆ ಅತ್ಯಂತ ಹೆಚ್ಚಾದು. ಮಠಬೇಕು ಎನ್ನುವವರ ಸಮೂಹವೇ ದೊಡ್ಡದು. ಹಾಗಾದರೆ ... ಮಠ ಬೇಡವೆಂದು ಹೇಳುವುದು ನೆವದ ಮಾತಾಗಿದೆ. ಈಗಿನ ಸದಸ್ಯರ ಕೈಕೆಳಗೆ ಸಭೆಯ ಬೇಡ ಎಂಬುದೇ ಮುಖ್ಯ ಮಾತಾಗಿ ತೋರುತ್ತದೆ. ಹಾಗಾದರೆ ಆಡಳಿತ ಸಭೆಯು ಸುಧಾರಣೆಯಾಗಬೇಕು. ಇದಕ್ಕೆ ಉಪಾಯ? ಆಕ್ಷೇಪಿಸುವ ವಿರೋಧಪಕ್ಷದವರು ವಿಧಾಯಕ ರೀತಿಯಲ್ಲಿ ಚಳವಳ ನಡೆಸಬೇಕಾದುದು ಸಹಜ. ಗರೀಬರ ... ಅಂಥ ಕಲಹಗಳನ್ನು ಒಡ್ಡಿಕೊಂಡು, ... ಕಷ್ಟನಷ್ಟಗಳಿಗೆ ಗುರಿಮಾಡುವುದು ನೀತಿಧರ್ಮಕ್ಕೆ ವಿರೋಧ. ಮತದ ವಿಚಾರದಲ್ಲಿ ಆಸಂತುಷ್ಟರಾದ ... ಎಲ್ಲರೂ ಸಮಗೆ ಇಂತಿಂಥ ಕಾರಣಗಳಿಂದ ಮಠದ ಮೇಲೆ ... ಆಡಳಿತ ಸಭೆಯ ಸುಧಾರಣೆ ..., ಮಠಕ್ಕೆ ಅರ್ಜಿದಾಖಲು ಮಾಡಬೇಕು. ... ಆಡಳಿತ ಸದಸ್ಯರು ಮಹಾಸಭೆಯನ್ನು ಕರೆಯಬಹುದಾಗಿದೆ. ... ಈ ವಿಚಾರವನ್ನು ... ಮಾಡಿಕೊಂಡ, ಯೋಗ್ಯ ತೋರಿದ ರೀತಿ ... ಪ್ರಾರ್ಥನೆ.

"ಅನುಭವಿ"

ಅಯ್ಯಾ,

ಕಳೆದ ವಾರದ ಪತ್ರಿಕೆಯಲ್ಲಿ 'ಹಾಜರಿ' ಎಂಬುವರು ಮ|| ದೇವಯ್ಯನವರ ಮಗನ ಮದುವೆಯ ವಿಷಯ ಬರೆದದ್ದನ್ನು ನೋಡಿ ... ಕಾಲವು ಕಳೆಯುತ್ತ ಹೋದಹಾಗೆ ನಮ್ಮ ... ನ್ನು ನವಗೆ ಅನುಕೂಲವಾಗುವ ರೀತಿ ... ಮಾಡು ಅವಶ್ಯವಾಗಿದೆ. ಇದು ಬಿಟ್ಟು ಪೂರ್ವದ ... ಪದ್ಧತಿಯನ್ನೇ ನಡೆಸುತಾ ಬಂದರೆ ಅದು ... (Old order must change giving place to new) ಪೂರ್ವದ ... ಈಗಿನ ಕಾಲದ ಜಾರಿಗೆ ... ಇದನ್ನೇ ಈಗಿನ ನವನಾಗರಿಕತೆಯ (Civilized) ಜನರು ಸಹ ಅನುಸರಿಸ ವದೆಂದರೆ ಕಷ್ಟ.

ಈಗಿನ ಕಾಲದಲ್ಲಿ ... ಖರ್ಚಿನ ಬಾಬು ಹೆಚ್ಚಾಗುತ್ತ ... ಎಲ್ಲರೂ ಅರಿಕೆಯಾಗುವುದು ಮಾಡಿಕೆಯಾಗಿದೆ. ಹೀಗಿರುವಾಗ ನಮ್ಮ ಖರ್ಚನ್ನು ಪ್ರತಿಯೊಂದು ಬಾಬಿನಲ್ಲಿಯೂ ಕಡಿಮೆಮಾಡಿ ನಮ್ಮ ಉತ್ಪತ್ತಿಗಳಿಗೆ ಒಟ್ಟುಕೊಳ್ಳಬೇಕಾದದ್ದು ಅವಶ್ಯವಾಗಿದೆ. ಅದಕ್ಕಾಗಿಯೇ ಸರ್ಕಾರದವರು ಸಹ ಎಷ್ಟೋ ನೌಕರರನ್ನು ತೆಗೆದು ಬಿಟ್ಟು ಕಡಿಮೆ ಜನಸಂಖ್ಯೆಯಿಂದ ಅವರ ಕೆಲಸವನ್ನು ನೆರವೇರಿಸಿಕೊಂಡು ಹೋಗುವುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಹೀಗಿರುವಾಗ ಪ್ರತಿಯೊಬ್ಬನೂ ತನ್ನ ಖರ್ಚನ್ನು ಕಡಿಮೆ ಮಾಡಲು ಪ್ರಯತ್ನಿಸಿ ಸಾಧ್ಯವಾಗುವ ದಾರಿಯನ್ನು ಕಂಡು ಹಿಡಿಯುವುದು ಅವಶ್ಯವಾಗಿದೆ. ಹೀಗಿರುವಾಗ ಮ|| ದೇವಯ್ಯನವರು ತನ್ನ ಮಗನ ಮದುವೆಯನ್ನು ಮಾಡಿದ್ದು ಈ ವಿಷಯಕ್ಕೆ ಒಂದು ಮೊದಲನೆಯುದಾಹರಣೆಯಾಗಿದೆ. ಇಂಥಾ ಒಂದು ಒಳ್ಳೆಯ ವಿಧಾನವನ್ನು ಅನುಸರಿಸಿದ್ದಕ್ಕೆ ಎಲ್ಲರೂ ಮ|| ದೇವಯ್ಯನವರಿಗೆ ಎಷ್ಟೋ ವಂದಿಸಬೇಕಾಗಿದೆ. ಅವರು ಮದುವೆಯಲ್ಲಿ ಎರಡುಭಾಗದವರು ಮಾಡಬೇಕಾದ ಕ್ರಿಯೆಗಳೆಲ್ಲವನ್ನೂ ಮಾಡಿರಬಹುದಾಗಿ ನಂಬುತ್ತೇನೆ. ಆದರೆ ಎಲ್ಲರೂ ಅತಿ ವಿಳಂಬದಿಂದ ಎರಡುದಿನ ಮಾಡುವ ಕೆಲಸವನ್ನು ಅವರು ಒಂದೇ ದಿನದಲ್ಲಿ ತೀರಿಸಿದರು. ಇದರಿಂದ ಅವರು ಒಂದು ದಿನದ ಖರ್ಚನ್ನು ಪೂರ್ತಿಯಾಗಿ ಕಡಿಮೆ ಮಾಡಿದಂತೆ ಆಯಿತು. ಇದುಮಾತ್ರವಲ್ಲ. ಮದುವಣಿಗನು ತನ್ನ ಮನೆಯಿಂದ ರಾತ್ರಿವೇಳೆ ಹೊರಟು ರಾತ್ರಿಯೇ ನಿದ್ರೆ ಇಲ್ಲದೆ ಶ್ರಮಪಟ್ಟುಹೋಗಿ ತನಗೂ ತನ್ನ ಜೊತೆಯವರಿಗೂ ಶರೀರದ ಸೌಖ್ಯವನ್ನು ಕಡಿಮೆಮಾಡದಂತೆ ಆಯಿತು.

ಇದಲ್ಲದೆ ನಮ್ಮ ಮದುವೆಯನ್ನು ಈ ಕೆಳಗಿನ ರೀತಿ ನಡಿಸಿಕೊಂಡು ಬಂದರೆ ಎರಡು ಭಾಗದವರಿಗೂ ಸರಿಹೋಗುವಂತೆಯೂ ಖರ್ಚಿನ ಬಾಬನ್ನು ಸಹ ಒಂದು ಕಳವುಟ್ಟಿಗೆ ಕಡಿಮೆಮಾಡಿದಂತೆ ಆಗುವುದು. ಆದುದರಿಂದ ಈ ವಿಷಯವನ್ನು ಕುರಿತು ನಮ್ಮ ದೇಶದ ಮುಂದಾಳುಗಳೂ, ಬಲ್ಲವರೂ ವಿದ್ಯಾವಂತರೂ, ಬದ್ಧಿವಂತರೂ, ತಕ್ಕ ಮುಖ್ಯಸ್ಥರೂ ಮತ್ತು ಇತರರೂ ಸೇರಿ ಒಂದು ಮೀಟಿಂಗಿನಲ್ಲಿ ಚರ್ಚಿಸಿ ಎಲ್ಲರಿಗೂ ಸರಿಯೆಂದು ತೋರಿದರೆ ಇನ್ನು ಮುಂದಕ್ಕೆ ಆರೀತಿ ಇರಬೇಕೆಂದು ಒಂದು ಕಟ್ಟಳೆ ಮಾಡಬೇಕಾಗಿ ನೆನಸಿ ನನ್ನದೊಂದು ಸಲಹೆ ಇರಾದೆಯನ್ನು ಇಲ್ಲಿ ಕೊಡುತ್ತೇನೆ. ಅದೇನಂದರೆ

ನಮ್ಮ ಮದುವೆಯ ಹುಡುಗನ ಮತ್ತು ಹುಡುಗಿಯ ಮೊದಲಿನ ಮುಹೂರ್ತವನ್ನು ಈಗಿನಂತೆ ಬೇರೆಬೇರೆ ಮನೆಯಲ್ಲಿ ಬೇರೆಬೇರೆ ಮಾಡುವ ಬದಲು ಮೊದಲಿನ ಮುಹೂರ್ತದ ಸಮಯಕ್ಕೆ ಮುಂಚೆತವಾಗಿಯೇ ಹುಡುಗನು ತನ್ನ ಅಪ್ಪದ ಬಂಧುಮಿತ್ರರೊಡನೆ ಹುಡಿಗಿಯ ಮನೆಗೆ ಹೋಗಿ ಅಲ್ಲಿ ಸಮಯಕ್ಕೆ ಸರಿಯಾಗಿ ದಂಪತಿಗಳ ಮುಹೂರ್ತವನ್ನು ಮಾಡಿ ಊಟಉಪಚಾರಗಳನ್ನು ಮಾಡಿಕೊಂಡು ಅಲ್ಲಿಂದಹುಡಿಗಿಯನ್ನು ಕರೆದುಕೊಂಡು ಸದ್ರಿದಿನ ಸಾಯಂಕಾಲದೊಳಗೆ ತನ್ನ ಮನೆಗೆ ಬರುವುದು. ಅವನಿಗೆ ಬೇಕಾದ ಜನರೆಲ್ಲಾ ಸದ್ರಿದಿನ ಅಲ್ಲಿರುತ್ತಾರಷ್ಟೆ. ಅವರಿಗೆಲ್ಲಾ ಅದಿನ ರಾತ್ರಿ, ಹುಡುಗನ ಖರ್ಚಿಯಿಂದಲೇ ಊಟಉಪಚಾರಗಳಾಗುತ್ತವೆಯಷ್ಟೆ. ಇದಾದಮೇಲೆ ಪದ್ಧತಿಮೇರೆ ಮದುವಣಿಗನನ್ನು ... ಸೇರಿಸಬಹುದು. ಇದರಿಂದ ಒಂದೇ ದಿನದಲ್ಲಿ ಮದುವೆಯು ಕಳೆಯುವದಲ್ಲದೆ ಪ್ರತಿ ಒಂದು ಭಾಗಕ್ಕೂ ಒಂದೊಂದು ಊಟದ ಖರ್ಚಿನಲ್ಲಿ ಮದುವೆಯು ಕಳೆಯುತ್ತದೆ.

... ಮದುವೆಯು ... ನಾವು ... ಅವಶ್ಯಕತೆ ... ಮಾಡು ... ಆದಕ್ಕೆ ನಾನು ಹೇಳುವದೇನೆಂದರೆ — ... ಮಾಡಿದರೆ ಅದರಿಂದ ಉತ್ಪತ್ತಿ ಹೆಚ್ಚುತ್ತದೆ. ... ಮದುವೆ ಮಾಡಿಕೊಳ್ಳಲು ಮನೆ ಕಟ್ಟಲಿಕ್ಕೂ ... ಕಾಲದಲ್ಲಿ ಉತ್ಪತ್ತಿ ಹೆಚ್ಚಾದುದರಿಂದ ಈ ... ಆರ್ಥಿಕ ... ಮಾಡುವುದು ಅತಿ ಉತ್ತಮವಾಗಿದೆ.

ಹೀಗೆ ಆಲೋಚಿಸಿದರೆ ನಮ್ಮ ... ಎಲ್ಲಾ ಪದ್ಧತಿಗಳಲ್ಲಿ ... ಅವಶ್ಯಕವಾಗಿದೆ. ಆದುದರಿಂದ ನಮ್ಮ ದೇಶದ ಮುಂದಾಳುಗಳು ಇಂಥಾ ವಿಷಯಕ್ಕೆ ... ಸರಿಹೋಗುವಂತ ಒಂದು ಒಳ್ಳೆಯ ಪದ್ಧತಿಯನ್ನು ಜಾರಿಗೆ ತರುವರಾಗಿ ನಾನು ನಂಬುತ್ತೇನೆ.

"ಸುಧಾರಕ"

ದೇಶಬಾಂಧವರುಗಳಿರಾ,

ನಾನು ಈಗ ಸುಮಾರು ೩ ತಿಂಗಳು ಹಿಂದೆ ... ನಿವಾರಣಂತೆ ಹೋಗುವ ಮಾಲಂಬಿ ಎಂಬ ಗ್ರಾಮದಿಂದ ... ಕೊಂಡುಕೊಂಡೆನು. ಈ ಎಮ್ಮೆಯು ನನ್ನಲ್ಲಿ ೧ ತಿಂಗಳು ಇದ್ದಮೇಲೆ ... ಒಂದು ಗೊಡ್ಡು ಎಮ್ಮೆಯ ಜೊತೆಯಲ್ಲಿ ಮೇಯಲು ಬಿಟ್ಟಿರುತ್ತಿದೆ. ಈ ಎಮ್ಮೆಯು ಕಂದಿದ ಗಬ್ಬ ಒಂದು ಯಾರಾದರೂ ತಿಂಗಳೊಳಗೆ ಕರಹಾಕಬಹುದು. ತೋಡುಗಳು ಹಿಂಬಾಗ ... ಉಬ್ಬಿಕೊಂಡಿರುತ್ತದೆ. ವಿಶೇಷ ಉದ್ದವಿರುವುದಿಲ್ಲ. ಎಮ್ಮೆಯು ಬಹಳ ಪುಷ್ಟಿಯುಳ್ಳದ್ದಾಗಿರುತ್ತದೆ. ಅದರ ಮುಖದ ... ಒಂದು ... ದಿಂದ ಹೊಡೆದ ಹಾಗೆ ... ತೋಡುಗಳಿಗೆ ಸೇರಿಸಿ ಕಟ್ಟಿಸಿದ್ದೆ. ಅದು ಇವತ್ತು ದಿವಸದವರೆಗೆ ಇರುವ ಭಾವನೆಯು ಚೆನ್ನಾಗಿ ಇರುವುದಿಲ್ಲ. ಇರಲೂಬಹುದು. ಯಾರಾದರೂ ಹಿಡಿದಿಟ್ಟಿರಲೂ

ಬಹುದು ಎಮ್ಮೆಯು ಸುಮಾರು ೪ ಅಡಿ ಎತ್ತರವಿರು ತ್ತದೆ ಗಿಡ್ಡತರದಂತಲೇ ಹೇಳಬಹುದು ಸುಮಾರು ಒಂದರ್ವಣ್ ಎಳೆಯ ಎಮ್ಮೆ ಇದರ ಜೊತೆಯಲ್ಲಿ ಬಿಳಿಯಾದ ಗೊಡ್ಡು ಎಮ್ಮೆಯು ಸಹ ಗಿಡ್ಡತರದಂತಲೇ ಹೇಳಬಹುದು ಮುಂಚೆ ವಣೆ ಸಿಲುವ ಎಮ್ಮೆಯು ವ್ರಷ್ಟಿಯಲ್ಲಿ ರುವ್ರದಿಲ್ಲ ಕೋಡುಗಳು ... ಜಾಡೆಗೆಂಡಿರುವ್ರದಿಲ್ಲ ... ಹೆಜ್ಜೆನ ಉದ್ದವಿರುವ್ರದಿಲ್ಲ ಈ ಮೊಲ್ಕಂಡ ಎಮ್ಮೆಗಳು ದೇಶಬಾಂಧವರುಗಳಾದ ನಿಮ್ಮಗಳಲ್ಲಿ ಯಾರಾದರು ಕೊಟ್ಟಿಗೆಗೆ ಬಂದು ಸೇರಿರುವುದಾಗಲೀ ಯಾ ಇತರರಿಂದ ಸುದ್ದಿಯು ಕೇಳಬಂದದಾಗಲೀ ಇದ್ದಪಕ್ಷದಲ್ಲಿ ನನ್ನ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಕೊಟ್ಟರೆ ಅವರಿಗೆ ತುಂಬಾ ವಂದಿಸುವೆನಲ್ಲದೆ ಈ ಎಮ್ಮೆಗಳನ್ನ ಪತ್ತೆಮಾಡಿ ತೋರಿಸಿ ಕೊಟ್ಟವರಿಗೆ ಐದು ರೂಪಾಯಿ ಬಹುಮಾನ ಕೊಡುವೆನೆಂದು ಈ ಮೂಲಕ ತಿಳಿಸಿದೆ

ನನ್ನ ವಿಳಾಸ,

ಕೆ. ಯಂ. ಮಾಚಯ್ಯ,

ಸ್ಕೂಲ್‌ಫೈನಲ್ ವಿದ್ಯಾರ್ಥಿ,

ವಿರಾಜಪೇಂಟ

NOTICE.

We have pleasure in informing the Travelling Public that on and from the 1st July 1924, we[illegible] running Motar Bus service from Sidap[illegible] to Yedatore, as per the following time Table —

(1)	Hunsur Departure	at 8-30 A M
(2)	Yedatore arrive	at 9 40 A M
(3)	Do Depart	at 9 50 A M
(4)	Hunsur arrive	at 11 0 A M
(5)	Do Depart	at 11-15 A M
(6)	Sidapur arrive	at 1-45 P M.
(7)	Do Depart	at 2 30 P.M
(8)	Hunsur arrive	at 5 0 P M
(9)	Do Depart	at 5-10 P M
(10)	Yedatore arrive	at 6 20 P M
(11)	Do Depart	at 6 30 P M.
(12)	Hunsur arrive	at 7 40 P M,

The charge per ticket will be as follows —

Hunsur to Yedatore	@	As 12/
Do to Periyapatam	@	As 12/-
Do to Sidapur	@	Rs 2/

Your patronage is solicited,

Hunsur, **Manager,**

15-6 24 *The Hunsur Works, Hunsur*

[4—1]

ಬಿ ಕ್ಕ ಅ ಗ ರಿ ಗ್

ಇದೊಂದು ಸಂಧಿಯು.

ನಮ್ಮ ಕಾರ್ಖಾನೆಯಲ್ಲಿ ಎರಡು ನೂರರಿಯು ಕಣಿಕೆ ಒಡೆಯುವ ಯಂತ್ರಗಳು ದೊರೆಯುತ್ತವೆ ... ಯಂತ್ರಗಳಲ್ಲಿ ಒಂದನ್ನು ತರಿಸಿಕೊಂಡು ನಿಮ್ಮ ಮೇವಿನಲ್ಲಿ ಪಸಿಮಯ ಮಾಡಿಕೊಳ್ಳಿರಿ ಮೇವು ನಣ್ಣಗಾಗಿ ಕತ್ತರಿಸಿ ಬೀಳುವದರಿಂದ ದನಗಳು ಸಿರಾಯಾಸವಾಗಿ ತಿನ್ನುತ್ತವೆ ಬೆಲೆ ಬಗ್ಗೆ

'ಕೆ' ಕ್ಯಾಟಲಾಗನ್ನು ತರಿಸಿಕೊಳ್ಳಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್,

[16-17] ಕಿರ್ಲೋಸ್ಕರವಾಡಿ ಜಿಲ್ಲಾ-ಸಾತಾರಾ,

ನೋಟೀಸು

ಇದೇ ಜೂನ್ ತಾರೀಖು 27 ನೇ ಶುಕ್ರವಾರ ದಿನ ಹಗಲು 12 ಘಂಟೆಗೆ ಸರಿಯಾಗಿ ಕೊಡಗು ಸಬಾರ್ಡಿನೇಟ್ ಜಡ್ಜಿಯವರ ಕೋರ್ಟಿನಲ್ಲಿ ... ವರ್ಷದ ... ಪರ್ಯಾವಧಿ ... ಎಲ್ಲರೂ ದಯಮಾಡಿಸಬೇಕಾಗಿ ಕೇಳಿಕೊಳ್ಳಲಾಗಿದೆ

ತಾ|| 15 6 24 (Sd) A B Cariapa

ಗೌರವಕಾರ್ಯದರ್ಶಿ.

WANTED.

Two Second-hand Motor Bicycles

M M SIDDEEK,

22—21 MERCARA.

ಮಾರಾಟಕ್ಕೆ.

I ಕಡಂಗಮುರೂರು ಗ್ರಾಮದ ಸರ್ವೆನಂಬರು 64 ರ 2 77 ಎಕರೆಯಾದ ಭೂಮಿ ಒಂದು

II ಡಿಟೋ ಸರ್ವೆನಂಬರು 69 ರ 0.39 ಎಕರೆಯಾದ ಭೂಮಿ ಒಂದು

III ಡಿಟೋ ಸರ್ವೆನಂಬರು ½ ರ 7 48 ಎಕರೆಯಾದ ಬಾಣೆ

IV ಡಿಟೋ ಸರ್ವೆನಂಬರು ½ ರ 0 11 ಎಕರೆಯಾದ ಕೆರೆ ಮತ್ತು ಬಾಗ ಸಹ ಇದರಲ್ಲಿ ದಾಮುಕಾಯಿಪ್ರಕಾರ

V ಅರಮೇರಿ ಗ್ರಾಮದಲ್ಲಿ ಸ ನಂ 337 ರ 0 34 ಎಕರೆಯಾದ ಪರಾದೀನದ ಬಾಗ ಇದರಲ್ಲಿ ಇರುವ ಮೂಲು ಅಂಕಣದ ಹುಲ್ಲು ಚಾವಣಿಮನೆ ಎರಡು ಕೊಟ್ಟಿಗೆಗಳು ಮತ್ತು ಕಿತ್ತಳೆ ತೋಟ ಸಹ ಇರುವ ಆಸ್ತಿ ಒಂದು

ಇಂತಿಷ್ಟು ಆಸ್ತಿಗಳು ಎರಡುಸಾವಿರ ರೂಪಾಯಿಗಳಿಗೆ ಮಾರಾಟಮಾಡಲ್ಪಡುತ್ತವೆ ಖಾಯಿಷ್ ಇರುವವರು ಅವರ ಇರಾದೆ ಕುರಿತು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಬೇಕಾಗಿದೆ

ವಿಳಾಸ—ಕೆ ಕೆ ಮುತ್ತಣ್ಣ K K Muttanna

ಕಾಟ್ಟಬಾಣೆತೋಟ ಸಿದ್ದಾಪುರ ಪೋಸ್ಟು

ತಾ|| 27—5—24 [3—2]

Two Days Grand Auction Sale.

To be held at the HUNSUR WORKS HUNSUR, commencing at 1 P M on Thursday June 19th and Friday the 20th June 1924 Many bargains, including one 1912 Model 15 9 H P Arrol Johnston Motor Car, converted into 10 seater Motor Bus complete with its 5 seater Body in perfect running order

One 1916 Model 2 seater F O R D Car, very smart and in perfect running order

One [illegible] H P Priestman Oil Engine

One Bench Oil Press,

One Sawing planing and [illegible] Machine

Steam Pump with Horizontal Boiler

Old [illegible] Car, car direlect but Engine in [illegible] working order

Two Hand Pumps

and a vast amount of General Stores, scrap iron, [illegible] and second hand Corrugated Iron Sheets

The successful bidders must immediately place 25 % of their bid and make payment in full before taking delivery, which must be done within three days of the close of the Auction, failing which the deposit amount will be forfeited

The undersigned reserves the right to withdraw any of the lots if the bidding does not reach a satisfactory level

The goods may be seen the previous day by appointment

HUNSUR, MANAGER,

20th May 1924 The Hunsur Works,

4—4 Hunsur

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವವಿಮೆಯ ಕಂಪನಿ, ಲಿಮಿಟೆಡ್,

(ಹೆಡ್ಡು ಆಫೀಸು ಬೊಂಬಾಯಿ)

ಹಿಂದೂಸ್ಥಾನದಲ್ಲಿ ಕಳೆದ ಐವತ್ತುವರ್ಷಗಳಿಂದಲೂ ಜೀವವಿಮೆಯ ಅನುಭವವನ್ನು ಪಡೆದಿರುವ ದೇಶೀಯ ಜೀವವಿಮೆ ಸಂಘಗಳಲ್ಲಿ ... ಮತ್ತು ಭದ್ರವಾದದ್ದೂ ಆದ ... ಪತ್ರಕ್ಕೆಂತಲೂ ಉತ್ತಮವಾದ ಆಸ್ತಿ ಬೇರೆ ದೊರೆಯಲಾರದು.

ಈಗಾಗಲೇ ವಿಮೆ ಸಂಬಂಧ ಪೊತ್ತ 8 00 00,000	
ಕೈಯಲ್ಲಿ ಮುಂದೆ ಒದಗಬಹುದಾದ ಕಗಾದಿಗಳ	
ನ್ನು ಪೂರೈಸುವುದಕ್ಕೆ ಇಟ್ಟುಕೊಂಡಿರುವ ಹಣ	6 00,00,000
ವಾರ್ಷಿಕ ಉತ್ಪತ್ತಿ	1 00,00,000

ಇಷ್ಟು ಭದ್ರತೆಯುಳ್ಳ ಕಂಪೆನಿಯಲ್ಲಿ ಜೀವವಿಮೆಯ ಪತ್ರ ತೆಗೆದುಕೊಳ್ಳಲಿಚ್ಛಿಸುವವರು ಯಾ, ಇದರ ವಿಷಯ ಹೆಚ್ಚಿನ ಸಂಗತಿ ತಿಳಿಯಬೇಕೆಂದಿರುವವರು ದಯವಿಟ್ಟು ಈ ಕೆಳಗಿನವರಿಗೆ ಬರೆದುಕೊಳ್ಳಬಹುದು

ಕೆ ಪಿ ಚಿಣ್ಣಪ್ಪನವರು,

ಓರಿಯಂಟಲ್ ಏಜನ್ಸೀ ಆಫೀಸು,

[24—2] ವಿರಾಜಪೇಟೆ ದಕ್ಷಿಣಕೊಡಗು

ಅತ್ಯದ್ಭುತಗುಣಕಾರಿಯಾದ ಚೇಳಿನ ಔಷದ.

ಪ್ರತಿ ಮನೆಯಲ್ಲಿ ಒಂದಿಕ ಇರತಕ್ಕದ್ದು

ಗುಣವಾಗದಿದ್ದರೆ ಒಂದಿಕ ಹಣ ಮರಕು ಕಳುಹಿಸುತ್ತೇವೆ.

ಒಂದುಸಾರಿ ತರಿಸಿ ಪರೀಕ್ಷಿಸಿರಿ

ಯಾವ ಚೇಳು ಆದರೂ ಕಚ್ಚಿದಕೂಡಲೆ ಈ ಔಷಧವನ್ನು ಹಾಕಿದ ಕ್ಷಣವೇ ಏರಿದ್ದು ಇಳಿದು ಉರಿ ಬಳುತು ಗುಣವಾಗುವದು. ಅನುಮಾನಪತ್ರ ಕೆಯನ್ನು ಬಾಟ್ಲಿ ಸಂಗಡ ಕಳುಹಿಸುತ್ತೇವೆ ಬಾಟ್ಲಿ 1 ಕ್ಕೆ 0—8—0 ಆಣೆ ಆರು ಬಾಟ್ಲಿಗಳನ್ನು ತರಿಸಿಕೊಂಡರೆ 1 ಬಾಟ್ಲಿ ಕಮಿಷನ್ ಹನ್ನೆರಡು ಬಾಟ್ಲಿಗಳನ್ನು ತರಿಸಿಕೊಂಡರೆ 3 ಬಾಟ್ಲಿ ಕಮಿಷನ್ ಕೊಡುತ್ತೇವೆ

ನಮ್ಮ ವಿಳಾಸ —

ಹಾಲಪ್ಪದೇವರ ಮಠದ ಸಿದ್ಧಾಂತಿಗಳು,

ಕುರವನಹಳ್ಳಿ, ಜಿಲ್ಲಾ ಬಳ್ಳಾರಿ.

[12—0]

ಜೀವವಿಮೆ.

ಸಾವಿರಾರು ಕುಟುಂಬಗಳಲ್ಲಿ ಸಂಪಾದನೆಯ ಯಜಮಾನನು ಮೃತಪಟ್ಟರೆ ಬರಬಹುದಾದ ತೊಂದರೆಗಳನ್ನು ನಿವಾರಿಸುವುದೇ ಜೀವವಿಮೆ

ವೃದ್ಧಾಪ್ಯಕಾಲದಲ್ಲ ... ಕುಟುಂಬದ ಜೀವನಾಧಾರಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ

ಅತಿ ಅಡಮೆ ದರದಲ್ಲಿ ಯಾವ ಲೋಪವೂ ಬಾರದಂತೆ ಕ್ಲಪ್ತದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ... ಸರಕಾರದ ಜವಾಬ್ದಾರಿಯ ... ಜೀವವಿಮೆ ಕಂಪೆನಿ

ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ... ಹಣವನ್ನು ಒದಗಿಸಿ ... ಗಳನ್ನೂ ಕೊಂಡು ... ದೇಶದ ... (Economic ...) ವೃದ್ಧಿ ... ಸಂಸ್ಥೆಯಾದರೂ ಇದೊಂದೇ

... ಅಕ್ಷಿನ ಮೇರೆ ಇಂಡಿಯಾ ಗವರ್ನಮೆಂಟು ... 12 ಲಕ್ಷ ರೂಪಾಯಿ ... ಮೈಸೂರು ಗವರ್ನಮೆಂಟ್ ... ಸಲ್ಲಬೇಕಾದ 1 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಇಂಪೀರಿಯಲ್ ಬ್ಯಾಂಕ ಆಫ್ ಇಂಡಿಯಾ ಬ್ಯಾಂಕಿನ ... ಶಾಖೆಯಲ್ಲಿ 1 ಲಕ್ಷ ಗವರ್ನಮೆಂಟ್ ಆಫ್ ಇಂಡಿಯಾ ಸೆಕ್ಯೂರಿಟಿಯನ್ನು ಅರ್ಧಲಕ್ಷ ಮೈಸೂರು ಸೆಕ್ಯೂರಿಟಿಯನ್ನು ಡಿಪಾಜಿಟಾಗಿ ಇಟ್ಟಿರುತ್ತೆ ಬಾಕಿ ಒಂದು ಲಕ್ಷ ಇಂಡಿಯಾ ಗವರ್ನಮೆಂಟು ... ಬ್ಯಾಂಕ್ ಮೂಲಕ ಏರ್ಪಾಡು ಮಾಡಿರುತ್ತೆ.

ಬಿ. ಎಸ್. ಆರಾಧ್ಯ,

ರಿಪ್ರೆಸೆಂಟೇಟಿವ್ ಆಫೀಸ್ ಮಡಿಕೇರಿ

Printed & Published by D S Krishna Iyengar Proprietor, at Sreenivas Electric Press, Mysore for Kodagu Ltd., Mercara—20 6 1924

If not delivered please return to
"Kodagu Office, Mercara"
Reg. No. M. 1550.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾನೀತಿ ಪ್ರಯತ್ನತಃ । ಏಕವಾಕ್ಯೇನದೇಶಾನಾಂ ಸುಸ್ಥಿರಾ ರಾಜ್ಯಸಂಪದ ॥

ಪ್ರತಿ ಶುಕ್ರವಾರ ಮಾತ್ರಿಕೊಡು ಪ್ರಕಟಿಸಲ್ಪಡುವುದು.   "ಎಡಿಟರ್" ಪಂದ್ಯಂಡ ಐ. ಬೆಳ್ಯಪ್ಪ

ಸಂಪುಟ ೪]   ಕೊಡಗು ಸರ್ಕಾರ ೧೯೨೪ ನೇ ಇಸವಿ ಜೂನ್, ತಾರೀಖು ೨೭ ನೇಯ ಶುಕ್ರವಾರ.   [ಸಂಚಿಕೆ ೪

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನಡಾ ಪ್ರಿಂಟಿಂಗ್ ರೂಲಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವವೇ ಇದ್ದರೂ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ಕಂಡ ಜಾಗ್ರತೆಯಾಗಿಯೂ ಸುಲಭಬೆಲೆಗೂ ಮಾಡಿ ಕೊಡುತ್ತೇವೆ.

Srinivas Electric Press,
MYSORE.

The Saraswathi Publishing Company
ಶಾರದಾಗ್ರಂಥಮಾಲಾ.

ಈ ಗ್ರಂಥಮಾಲೆಯಲ್ಲಿ ಭಾರತಮಹಿಳೆಯರ ಆಚಾರ ವಿಚಾರಗಳು ತಿಳುಗಳನ್ನು ಬೋಧಿಸತಕ್ಕ ಗ್ರಂಥಗಳು ಆಗಾಗ್ಗೆ ಪ್ರಕಟಿಸಲ್ಪಡುವವು ಇದುವರೆಗೆ ಪ್ರಕಟವಾಗಿರುವ ಗ್ರಂಥಗಳು —

		ರೂ	ಆ	ಪೈ
1	ಪ್ರಿಯಂವದೆ (ವರದಕ್ಷಿಣೆಯಿಂದಾಗುವ ಕಷ್ಟ ನಷ್ಟಗಳು)	0	6	0
2	ಸ್ನೇಹಲತೆ (ಬಂಗಕನ್ಯೆಯ ಚರಿತ್ರೆ)	0	10	0
3	ಸೌಭಾಗ್ಯವತಿ (ಹಿಂದೂವಿತಂತುವಿನ ಪೋಲೀಸ ಕೋರ್ಟಿಯಾವಸ್ಥೆ)	0	12	0
4	ಸುಮತಿ (ಸಾಮಾಜಿಕ ಸುಧಾರಣೆಯ ನಾಟಕ)	0	8	0
5	ಹಿಂದೂಭಾಗ್ಯೋದಯ (ನಾಟಕ)	0	4	0
6	ದುರ್ಜನಸಾಧ್ಯಂಗ (ನಾಟಕ)	[illegible]	4	0
7	ಹುಡುಗರು ಹುಡುಗಿಯರು (ನಾಟಕ) ...	[illegible]	4	0

ಈ ಎಲ್ಲಾ ಕಾದಂಬರಿಗಳನ್ನು ಒಟ್ಟಾಗಿ ತರಿಸಿಕೊಳ್ಳುವವರಿಗೆ ಒಟ್ಟು ರೂಪಾಯಿ 2—12—0 ಗೆ ವಿ. ಪಿ. ಹಾಸಲು ಇಲ್ಲದೆ ಕೊಡಲ್ಪಡುವುದು ಪ್ರಿಂಟಿನಲ್ಲಿರತಕ್ಕ ಗ್ರಂಥಗಳು ಬೇಗ ಹೊರಬೀಳುವುವು.

ಸರಸ್ವತಿ.

ಉತ್ತಮವರ್ಗದ ಶ್ರೇಷ್ಠವಾದ ಕನ್ನಡ ಮಾಸಪತ್ರಿಕೆ.

ನಾಲ್ಕನೆಯ ಸಂಪುಟದ ಪ್ರಥಮ ಸಂಚಿಕೆಯು ಈ ತಿಂಗಳ ಮೊದಲನೇ ತಾರೀಖಿನಿಂದ ಪ್ರಾರಂಭವಾಗಿರುವುದು. ಇದರಲ್ಲಿ ಬಾಲಕ ಬಾಲಕಿಯರಿಗೂ ಸ್ತ್ರೀಯರಿಗೂ ತಿಳಿಯುವಂತಹ ಸುಲಭವಾದ ಶೈಲಿಯಲ್ಲಿ ಸ್ವಾರಸ್ಯವಾದ ನಾಟಕ ಕಾದಂಬರಿಗಳೂ ಮತ್ತು ಅನೇಕ ಉತ್ತಮ ಲೇಖನಗಳೂ ಪ್ರಕಟಿಸಲ್ಪಡುವವು. ಹೊಸದಾಗಿ ಚಂದಾದಾರರಾಗತಕ್ಕವರು ಚಂದಾಹಣವನ್ನು ಮುಂಗಡವಾಗಿ ಕಳುಹಿಸಿದರೆ ಶಾರದಾ ಗ್ರಂಥಮಾಲೆಯ ಪ್ರಕಟನೆಯಲ್ಲಿ ಒಂದು ಪುಸ್ತಕವು ಬಹುಮಾನವಾಗಿ ಕೊಡಲ್ಪಡುವುದು. ಇಷ್ಟಪಟ್ಟವರಿಗೆ ಮಾದರಿ ಸಂಚಿಕೆಯು ಉಚಿತವಾಗಿ ಕಳುಹಿಸಲ್ಪಡುವುದು.

ವಾರ್ಷಿಕ ಚಂದಾ ರೂಪಾಯಿ 3—0—0 ಮಾತ್ರ.

SARASWATHI PUBLISHING Co.,
Post box No. [illegible] [illegible] City

HEALTH IS WEALTH

WANTED all to improve health strength and vitality and thus save our nation from physical degeneracy. Send half-anna stamp and get 13 specimen photographs with full particulars from

Director Physical Culture,
P.O Basavanagudi,
BANGALORE CITY.

For your requirements of high grade Arms, Ammunition, Wine and Spirits,

APPLY TO:-

Mc. DOWELL & Co., Ltd.,
24—11   **MERCARA.**

ಐಸ್ಕ್ರಿಮ್ ಪುಡಿ ಮಾಡಾಯಿತ್ತಾ ಸ್ವಿಜರ್ಲ್ಯಾಂಡ್ ನೆಸ್ಲೇ ಚಾಕ್ಲೇಟ್ ಒಪ್ಪಂತ್ತೇ ಕೊಡೆ ಸ್ಪೆನ್ಸರ್ ಕಂಪೆನಿಲ್ ಬಂದಿತ್.

SPENCER & Co., Ltd.,
Mercara and Pollibetta, Coorg   [24—11]

When you think of going to Bomby
THINK OF

THE WELCOME HOTEL.

Girgaum Back Road, BOMBAY.

Most airy accomodation—Most Central situation—Excellent Meals
Every Convenience.

ವೆಲ್ಕಂ ಹೋಟೇಲ್.

ಗಿರ್ಗಾಂವ ಬ್ಯಾಕ್‌ರೋಡ್, ಬೊಂಬಾಯಿ

ರೈಲಿನಿಂದಿಳಿದೊಡನೆಯೇ ಅಲ್ಲಿ ಇಲ್ಲಿಯೆಂದು ಸುತ್ತದೆ, ಉತ್ಕೃಷ್ಟವಾದ ತಿಂಡಿ ಮತ್ತು ವಾಸಕ್ಕೆ ಯೋಗ್ಯವಾದ ಕೋಣೆಗಳು ಬೇಕಾದಿದ್ದರೆ ಬೊಂಬಾಯಿಪಟ್ಟಣದ ಮಧ್ಯಸ್ಥಳದಲ್ಲಿರುವ ವೆಲ್ಕಂ ಹೋಟೇಲಿನಲ್ಲಿಳಿಯಿರಿ. ಮದರಾಸಿ ಮೋಹನ ಊಟ, ಗಾಳಿಗನುಕೂಲವಾದ ಕೊಠಡಿ 15 ನಿಮಿಷಗಳಲ್ಲಿ ತಿರುಗುವ ಟ್ರಾಮಿನ ಸೌಕರ್ಯ, ಇಂತೂ ಪ್ರಯಾಣಿಕರಿಗೆ ಇಳಿದುಕೊಳ್ಳಲು ಅನುಕೂಲವಾದ ಉಡುಪಿ ಬ್ರಾಹ್ಮಣರ ಭೋಜನಾಲಯ.

ಬಿ. ಶ್ರೀನಿವಾಸರಾವ್,
ಪ್ರೊಪ್ರೈಟರ್,
[24—3]

BUMPER CROPS.
Always follow on application of our fertilisers

ದೊಡ್ಡ ಕಾಫಿ ಫಸಲು
ಸಿಕ್ಕಬೇಕಾದರೆ ನಮ್ಮ ಕಾಫಿ ಫರ್ಟಿಲೈಸರುಗಳನ್ನು ಉಪಯೋಗಿಸಿರಿ.

ನಮ್ಮ ಕಾರ್ಖಾನೆಯಲ್ಲಿ ಎಲ್ಲಾ ತರಹದ ಹೊಸದಾದ ಹೊಸ (fresh) ಗೊಬ್ಬರ ತಯಾರಾಗುತ್ತದೆ.

Siddeek's Mannure Works,
24—24   MERCARA.

ಮಲೆಯಾಳ ವೈದ್ಯಶಾಲೆ

ಮಲಬಾರಿನ ನಂಬೀಶನ್ ಮತ್ತು ಗಂಪತಿ ಎಂಬ ಆಯುರ್ವೇದ ವೈದ್ಯಶಾಲೆಯಲ್ಲಿ ಒಂದು ಶಾಖೆಯು ವೀರರಾಜೇಂದ್ರಪೇಟೆಯಲ್ಲಿ ತೆರೆದಿರುತ್ತೆ. ಇಲ್ಲಿ ಯಾವವಿಧದ ಖಾಯಿಲೆಯಾಗಿದ್ದರೂ ನಾಡಿಯಿಂದ ಪರೀಕ್ಷಿಸಿ ಔಷಧಿ ಕೊಟ್ಟು ಗುಣಪಡಿಸಲ್ಪಡುತ್ತೆ. ಔಷಧದ ಚಾರ್ಜ ಬಹಳ ಕಡಿಮೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ವಿವರವನ್ನು ತಿಳಿದುಕೊಳ್ಳಬಹುದು

ನಾರಾಯಣನಂಬೀಶನ್,
ಆಯುರ್ವೇದ ವೈದ್ಯರು,
52—23   ವೀರರಾಜೇಂದ್ರಪೇಟೆ

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್
ಲಿಮಿಟೆಡ್

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ   ರೂ.

ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	6,824
ಜಮಾ ಬಂದ ಠೇವಣಾತಿ	47,990

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರುಷ ವಾಯಿದೆ ಅಥವಾ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 6—4—0ರ ಬಡ್ಡಿದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದೊರೆಯುತ್ತೆ.

ಮರ್ಕೆರ ಕ್ಲೋಂಡಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

ಪ್ರೆಸಿಡೆಂಟರು.   ಟ್ರೆಜರ್,
ಕೊಡಂದೆರ ಕುಟ್ಟಯ್ಯನವರ ಯಚ್ಚ, ಘುಬಂಗರಾಯರ.
ರಾಯ್ ಬಹದ್ದೂರ್   ಬಿ. ಎ. ಬಿ. ಎಲ್
ಸೆಕ್ರೆಟರಿ.
ಸಿ. ಮಲ್ಯ ವೆಂಕಪ್ಪಯ್ಯನವರು ಬಿ. ಎ. ಬಿ. ಎಲ್
ತಾರೀಖು 22—2—1924.

"ಕೊಡಗು"

೧೯೨೮ ನೇ ಇಸವಿ ಜೂನ್ ತಾ॥ ೨೮ ನೇ
ಶುಕ್ರವಾರ

ಸಹಕಾರಿ ಚಳವಳಿ.

ಕೊಡಗಿನಲ್ಲಿ ಸಹಕಾರಿ ಚಳವಳಿಕ್ಕೆ ಸರ್ಕಾರದವರು ಬೇರೆ ಕಡೆಗಳಂತೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿರಲಿಲ್ಲವೆಂದೂ ಸಹಕಾರಿ ಸಂಘಗಳ ಮೇಲ್ವಿಚಾರಕ್ಕೆ ಸಾಕಷ್ಟು ಸಿಬ್ಬಂದಿಯನ್ನು ಏರ್ಪಡಿಸಲಿಲ್ಲವೆಂತಲೂ ಸಹಕಾರಿ ತತ್ವಗಳನ್ನು ರೈತರಿಗೆ ಬೋಧಿಸಲು ನ್ಯಾಯವಾದ ಏರ್ಪಾಡನ್ನು ಮಾಡಲಿಲ್ಲವೆಂತಲೂ ದೇಶದಲ್ಲೆಲ್ಲಾ ಪ್ರಕಾರಗಳಿದ್ದವು. ದೇಶದವರ ಹವಾಲುಗಳನ್ನು ನ್ಯಾಯವಾದ ರೀತಿಯಲ್ಲಿ ಹೇಳಲು ಅನುಕೂಲವಾಗಿರುವ ಕೌನ್ಸಿಲಿನಲ್ಲಿ ಈ ವಿಷಯ ಚರ್ಚಿಸಲ್ಪಟ್ಟದಕ್ಕೆ ಸರ್ಕಾರದವರು ಕೊನೆಯವರೆಗೆ ಗಮನಕೊಟ್ಟು ಒಬ್ಬ ಕೋ ಆಪರೇಟಿವ್ ಇನ್ಸ್‌ಪೆಕ್ಟರನ್ನು ನೇಮಿಸಿ ಸ್ವಲ್ಪಕಾಲದೊಳಗೇನೇ ದಕ್ಷಿಣ ಕೊಡಗಿಗೆ (ಬಳಲೇಕವರ್ತಮಾನದಲ್ಲಿ ಬರೆದಂತೆ) ಒಬ್ಬ ಗೌರವ ಆರ್ಗನೈಜರನ್ನು ನೇಮಿಸಿದ್ದಾರೆ. ಉತ್ತರ ಕೊಡಗಿಗೂ ಒಬ್ಬ ಗೌ. ಆರ್ಗನೈಜರನ್ನೂ ಇನ್ನೊಬ್ಬ ಸಹಕಾರಿ ಇನ್ಸ್‌ಪೆಕ್ಟರನ್ನೂ ಬೇಗನೆ ನೇಮಿಸುವ ಏರ್ಪಾಡಿನಲ್ಲಿದ್ದಾರೆಂತ ತಿಳಿಯಲು ಸಂತೋಷಪಡುತ್ತೇವೆ. ಕೌನ್ಸಿಲಿನಲ್ಲಿ ಚರ್ಚೆಯಾದಾಗ ಈ ಉದ್ಯೋಗಸ್ಥರ ಅವಶ್ಯಕತೆಯು ಬಹಳವಾಗಿಯೂ ತುರ್ತಾಗಿಯೂ ಇದೆ ಎಂಬುದಕ್ಕೆ ಸಂಶಯವಿಲ್ಲ. ಸಹಕಾರಸಂಘಗಳೇ ನೇಮಿಸಿಕೊಂಡಿರುವ ಸೂಪರ್‌ವೈಜರುಗಳೂ ಸಹ ಕೆಲಸಮಾಡುತ್ತಿದ್ದಾರೆ. ಆದುದರಿಂದ, ಸಂಘಗಳ ಮೇಲ್ವಿಚಾರಕ್ಕೂ ಸಹಕಾರತತ್ವಗಳ ಬೋಧನೆಗೂ ಸದ್ಯಕ್ಕೆ ಸಾಕಷ್ಟು ಸಿಬ್ಬಂದಿಯಾದಂತೆ ಆಯಿತು.

ಸಹಕಾರಿ ಚಳವಳಿದ ಮುಖ್ಯರೂಪವಾದ ಲೇವಾದೇವಿ ಸಂಘಗಳಿಗೆ ಭಂಡವಾಳವನ್ನು ಒದಗಿಸಿಕೊಡಲಿಕ್ಕೆ ಸೆಂಟ್ರಲ್ ಬ್ಯಾಂಕು ಸ್ಥಾಪಿತವಾಗಿ ತಕ್ಕಷ್ಟು ಸಹಾಯಕೊಡುತ್ತಾ ಇದೆ. ಬ್ಯಾಂಕು ಸ್ಥಾಪಿತವಾಗಿ ಎರಡೂವರೆ ವರ್ಷದೊಳಗೇನೇ ಅದರ ಭಂಡವಾಳವು ಸುಮಾರು ಎಪ್ಪತ್ತು ಸಾವಿರಕ್ಕೆ ತಲಪಿದೆಯೆಂತ ತಿಳಿದುಬರುತ್ತದೆ. ಇಂತಿಷ್ಟು ಮೊಬಲಗು ಪೂರ್ತಿ ದೇಶದ ಜನರಿಂದಲೇ ಶೇರು ಹಣದ ರೂಪದಿಂದಲೂ ಠೇವಣಾತಿರೂಪದಿಂದಲೂ ಬಮೆಯಾಯಿತೆಂದರೆ ಅದು ದೇಶದ ಜನರಿಗೆ ಸಹಕಾರದಮೇಲಿರುವ ವಿಶ್ವಾಸದ ನಿದರ್ಶನವಾಗಿದೆ. ಅನೇಕ ಸಂಘಗಳು ಇನ್ನೂ ಬ್ಯಾಂಕಿಗೆ ಸೇರಿರುವುದಿಲ್ಲವೆಂದು ತಿಳಿಯಲು ವ್ಯಸನಪಡುತ್ತೇವೆ. ಹೀಗೆ ಸೇರದಿರುವ ಸಂಘಗಳಿಗೆ ಪತ್ತಿನ ಅವಶ್ಯವಿಲ್ಲವೆಂತ ನಾವು ನಂಬುವುದಿಲ್ಲ. ಅವಶ್ಯವಿಲ್ಲವೆಂತಾದರೂ ಅವಶ್ಯವಿರುವ ಸಂಘಗಳಿಗೆ ಸಹಾಯಮಾಡಲು ಅವು ಸೇರಲೇಬೇಕು. ಇನ್ನಾದರೂ ತಡಮಾಡದೆ ಬ್ಯಾಂಕಿನಿಂದಾಗುವ ಪ್ರಯೋಜನವನ್ನು ಅರಿತುಕೊಂಡು ಒಂದಾದರೂ ಬಾಕಿ ಇಲ್ಲದೆ ಎಲ್ಲಾ ಸಂಘಗಳು ಬ್ಯಾಂಕಿನಲ್ಲಿ ಶೇರು ತೆಗೆದುಕೊಂಡು ಮೆಂಬರುಗಳಾಗಬೇಕೆಂತ ಆಶಿಸುತ್ತೇವೆ. ಬ್ಯಾಂಕ್ ಅಂದರೆ ಸಹಕಾರ ಸಂಘಗಳ ಪ್ರತಿನಿಧಿಗಳ ಗುಂಪೇ ಆಗಿದೆ. ಆದುದರಿಂದ ಯಾವ ಸಂಘವಾದರೂ ಬ್ಯಾಂಕೆಂಬುದು ಪರಕೀಯ ಸಂಸ್ಥೆಯೆಂದು ಭಾವಿಸಲು ಕಾರಣವಿಲ್ಲ. ಗ್ರಾಮದ ಮೆಂಬರುಗಳು ಸೇರಿ ಹೇಗೆ ಸಂಘವಾಗಿದೆಯೋ ಹಾಗೆಯೇ ದೇಶದ ಸಂಘಗಳು ಸೇರಿ ಬ್ಯಾಂಕ್ ಆಗಿದೆ. ಇಂಥಾ ಸಹಕಾರಿಸಂಸ್ಥೆಯನ್ನು ಬೆಳೆಸುವುದು ಎಲ್ಲಾ ಸಹಕಾರಿಗಳ ಕರ್ತವ್ಯವಾಗಿದೆ.

ಸೂಪರ್‌ವೈಜರುಗಳ ಸಂಬಳಕ್ಕಾಗಿ ವಂತಿಗೆ ವಿಧಿಸಿದನ್ನು ಕೆಲವು ಸಂಘಗಳು ಕೊಡಲಿಲ್ಲವೆಂಬುದು ವಿಷಾದಕರವಾಗಿದೆ. ಸೂಪರ್‌ವಿಜನ್ ಫಂಡಿನಲ್ಲಿ ಹಣವಿಲ್ಲದೆ ಸೂಪರ್‌ವೈಜರುಗಳ ಕಳೆದ ತಿಂಗಳ ಸಂಬಳವನ್ನು ಇನ್ನೂ ಕೊಟ್ಟಿರುವುದಿಲ್ಲವಂತೆ. ರಿಜಿಸ್ಟ್ರಾರವರ ಒತ್ತಾಯದಿಂದ ಒಂದು ತಿಂಗಳಿಂದ ತಕ್ಕಷ್ಟು ಚೆನ್ನಾಗಿ ವಸೂಲಿಯಾಗುತ್ತಿದೆಯೆಂದು ತಿಳಿಯುತ್ತೇವೆ. ತಮ್ಮ ಒಂದು ಸಂಘಕ್ಕೆ ಮೇಲ್ವಿಚಾರ ಅವಶ್ಯವಿಲ್ಲವೆಂಬ ಕಾರಣದಿಂದ ಈ ವಂತಿಕೆಯನ್ನು ಕೊಡದೆ ಇರುವುದು ಸಹಕಾರವಲ್ಲ. ಗ್ರಾಮದ ಅನುಕೂಲಕ್ಕಾಗಿ ಪತ್ತಿನ ಅವಶ್ಯವಿಲ್ಲದಿದ್ದರೂ ಸಂಘಕ್ಕೆ ಸೇರಿ ಅವಶ್ಯವಿರುವ ರೈತರಿಗೆ ಸಹಾಯಮಾಡುವಂತೆಯೇ ಮೇಲ್ವಿಚಾರ ಅವಶ್ಯವಿಲ್ಲದ ಸಂಘಗಳು ಈ ಧನಸಹಾಯ ಮಾಡಲೇಬೇಕು. ಸಂಘದ ಪ್ರೆಸಿಡೆಂಟರಿಗೆ ಅಥವಾ ಕಮಿಟಿ ಮೆಂಬರುಗಳಿಗೆ ಸಹಕಾರತತ್ವ ತಿಳಿದಿದೆಯಾದರೂ ಪ್ರತಿಯೊಬ್ಬ ಮೆಂಬರನಿಗೂ ಇವುಗಳನ್ನು ಕಲಿಸಿಕೊಡುವುದು ಅವಶ್ಯಕವಾಗಿದೆ. ಬಿಡುವಿಲ್ಲದೆ ಇರುವ ಪ್ರೆಸಿಡೆಂಟರಿಗೆ ಈ ಕೆಲಸವನ್ನು ಕೈಕೊಳ್ಳಲು ಸಾಧ್ಯವಾಗಲಿಕ್ಕಿಲ್ಲ. ಆದುದರಿಂದ ಸೂಪರ್‌ವೈಜರುಗಳು ಬೇಗನೆಂತ ಹೇಳುವ ಮಾತು ನ್ಯಾಯವಾದದ್ದಲ್ಲ.

ಮೇಲೆ ಬರೆದಂತೆ ಸಿಬ್ಬಂದಿ ಹೆಚ್ಚಿದ್ದರಿಂದ ಇರುವ ಸಂಘಗಳು ಭದ್ರವಾದಾವೆಂತಲೂ, ಹೊಸ ಹೊಸ ತಂದ ಸಂಘಗಳು ಸ್ಥಾಪಿತವಾದಾವೆಂತಲೂ ಎದುರುನೋಡುತ್ತೇವೆ. ಸಿಬ್ಬಂದಿ ಎಷ್ಟು ಬೆಳೆದರೂ ಸಹಕಾರಿ ಗಿಡವು ಮೊಳೆಯು ಗ್ರಾಮದಲ್ಲೇ ಒಡೆಯಬೇಕು. ಸಹಕಾರತತ್ವವನ್ನು ತಿಳಿಯುವ ಆಶೆಯು ಗ್ರಾಮವಾಸಿಗಳಿಗೆ ಹುಟ್ಟಬೇಕು. ಸಿಬ್ಬಂದಿಯನ್ನು ತಕ್ಕ ರೀತಿಯಲ್ಲಿ ಉಪಯೋಗಿಸಿಕೊಳ್ಳುವ ಜಾಣರವು ಬರುವವರೆಗೆ ಸೈತರವೋ ಇದೆ ... ಗಣನೆಗೆ ತೆಗೆದುಕೊಳ್ಳದೆ ತಿಳುವಳಿಕೆ ಇರುವ ಸಂಘಗಳ ಬೆಳವಣಿಗೆಯನ್ನು ಮಾತ್ರ ನೋಡಬಾರದು. ತಿಳುವಳಿಕೆ ಇರುವ ಸಂಘಗಳನ್ನು ಸಹಕಾರತತ್ವ ತಿಳಿದಂತ ಗ್ರಾಮಸ್ಥರಿಗೆ ಬಿಟ್ಟು ಹಿಂದುಳಿದ ಸಂಘಗಳಿಗೆ ದಾರಿತೋರಿಸಿಕೊಟ್ಟ ... ತಂದಾರೆಂತ ಆಶಿಸುತ್ತೇವೆ.

ಕಾಫಿ ತೋಟಗಾರರ ಸಂಘ ಒಂದು ನಿರ್ಧರಿಸುತ್ತಿರುವುದನ್ನು ಎಚ್ಚರಿಸಿ ತೋಟಗಾರರಿಗೆ ಅವಶ್ಯವಿರುವ ಸಹಾಯ ಮಾಡಿಕೊಟ್ಟಾರೆಂತ ನಂಬುತ್ತೇವೆ. ಈ ಸಂಘದ ಕೆಲಸವು ತೋಟಗಾರರಿಗೆ ಪತ್ತನ್ನು ಒದಗಿಸಿಕೊಡುವುದೊಂದೇ ಅಲ್ಲ. ಅವರ ಉತ್ಪತ್ತಿಯನ್ನು ಶೇಖರಿಸಿ ಧಾರಣೆ ಬರುವಂತೆ ಮಾಡುವ ಉದ್ದೇಶವು ಸಹ ಅವರ ಬೈಲಾದಲ್ಲಿದೆ. ಈ ಸಂಘದ ಕೆಲಸಕ್ಕೆ ಅರ್ಹರಾದವರು ತೋಟಗಾರರಲ್ಲಿ ಇಲ್ಲವೆಂತ ಹೇಳಲಿಕ್ಕಾಗುವುದಿಲ್ಲ. ಸಂಬಂಧಪಟ್ಟ ಇನ್ಸ್‌ಪೆಕ್ಟರು ಮತ್ತು ಆರ್ಗನೈಜರು ಈ ಸಂಘದಕಡೆಗೆ ತಮ್ಮ ದೃಷ್ಟಿಯನ್ನು ಶೀಘ್ರದಲ್ಲೇ ಕೊಡಬೇಕೆಂತ ಹಾರೈಸುತ್ತೇವೆ.

ಸ್ಕೂಲ್ ಫೈನಲ್ ಪರೀಕ್ಷೆ.

ಈ ವರ್ಷದ ಸ್ಕೂಲ್ ಫೈನಲ್ ಪರೀಕ್ಷೆಯ ಫಲಿತಾಂಶವು ಕಳೆದವಾರ ತಿಳಿಯಲಾಯಿತು. ಮಡಿಕೇರಿ ಹೈಸ್ಕೂಲಿನಲ್ಲಿ ೪೭ ವಿದ್ಯಾರ್ಥಿಗಳಲ್ಲಿ ೧೯ ಜನರೂ, ವೀರರಾಜಪೇಟೆ ಹೈಸ್ಕೂಲಿನಲ್ಲಿ ೨೨ ವಿದ್ಯಾರ್ಥಿಗಳಲ್ಲಿ ಇಬ್ಬರು ಮಾತ್ರವೂ ಕಾಲೇಜು ಕ್ಲಾಸಿಗೆ ಸೇರಿಸಲ್ಪಡಲು ಅರ್ಹರೆಂದು ಪ್ರಕಟವಾಗಿದೆ. ಒಟ್ಟು ಕೊಡಗಿನಲ್ಲಿ ೬೯ ವಿದ್ಯಾರ್ಥಿಗಳಲ್ಲಿ ೨೧ ವಿದ್ಯಾರ್ಥಿಗಳು ಅಂದರೆ ೩೦% ತೇರ್ಗಡೆಯಾದದ್ದು ಅಷ್ಟು ಒಳ್ಳೇ ಫಲಿತಾಂಶವಲ್ಲದಿದ್ದರೂ ಇಡೀ ಮದ್ರಾಸು ಪ್ರಾಂತದ ಫಲಿತಾಂಶದೊಂದಿಗೆ ಹೋಲಿಸಿದರೆ ಇಲ್ಲಿಯ ಫಲಿತಾಂಶವು ಒಳ್ಳೆಯದೆಂದೇ ಹೇಳಬೇಕಾಗಿದೆ. ಅವರಲ್ಲೂ ೪೦.೪ ರಷ್ಟು ತೇರ್ಗಡೆ ಹೊಂದಿರುವ ಮಡಿಕೇರಿ ಹೈಸ್ಕೂಲಿನ ಫಲಿತಾಂಶವು ಬಹಳಮಟ್ಟಿಗೆ ಒಳ್ಳೆಯದಾಗಿದೆ. ತೇರ್ಗಡೆ ಹೊಂದಿದ ಎಲ್ಲಾ ವಿದ್ಯಾರ್ಥಿಗಳಿಗೆ ನಾವು ಅಭಿನಂದಿಸುವುದಲ್ಲದೆ, ಮಡಿಕೇರಿ ಹೈಸ್ಕೂಲಿನ ಹೆಡ ಮಾಸ್ಟರು ಮತ್ತು ಉಪಾಧ್ಯಾಯರುಗಳಿಗೂ ನಮ್ಮ ಅಭಿವಂದನೆ ಇದೆ. ಈ ಶಾಲೆಯ ಸಿಬ್ಬಂದಿಯವರಿಗೆ ಕಳೆದವರ್ಷದ ಫಲಿತಾಂಶದಿಂದ ಉಂಟಾಗಿದ್ದ ಬೇಸರಿಕೆಯು ಈ ವರ್ಷದ ಒಳ್ಳೇ ಫಲಿತಾಂಶದಿಂದ ನೀಗುವುದರಲ್ಲಿ ಸಂದೇಹವಿಲ್ಲ. ಆದರೆ ಇದರಿಂದ ಹಿಗ್ಗಿ ತೃಪ್ತರಾಗಿ ಕುಳಿತುಕೊಳ್ಳುವ ಬದಲು ವರ್ಷವರ್ಷವೂ ಫಲಿತಾಂಶಗಳು ಏಣಿಯ ಮೆಟ್ಟಗಳನ್ನು ಏರಿದಂತೆ ಉತ್ತಮವಾಗುತ್ತಾ ಬರುವಂತೆ ಮಾಡಿ ಸ್ಕೂಲಿನ ಶ್ರೇಯಸ್ಸನ್ನು ಹೆಚ್ಚಿಸಿಕೊಳ್ಳುವರಾಗಿ ನಂಬುತ್ತೇವೆ.

ವೀರರಾಜಪೇಟೆ ಶಾಲೆಯಲ್ಲಿ ಶೇಕಡ ೯ ರಷ್ಟು ಮಾತ್ರ ತೇರ್ಗಡೆಯಾದದ್ದು ವ್ಯಸನಕರವೆ. ಆದರೆ ಸ್ಕೂಲು ಪ್ರಾರಂಭಿಸಿ ಸ್ಕೂಲ್ ಫೈನಲ್ ಪರೀಕ್ಷೆಗೆ ವಿದ್ಯಾರ್ಥಿಗಳು ಹೋದದ್ದು ಇದೇ ಮೊಟ್ಟಮೊದಲು. ಅಲ್ಲದೆ ಅಲ್ಲಿ ಗಣಿತಶಾಸ್ತ್ರವಿಲ್ಲದೆ ಚರಿತ್ರೆ ಭೂಗೋಳ ಮಾತ್ರ ಕಲಿಸಲ್ಪಡುತ್ತದೆ. ಮಡಿಕೇರಿ ಸ್ಕೂಲಿನಲ್ಲೂ ಕೂಡ ಚರಿತ್ರೆಯಲ್ಲಿ ೨೦ ರಲ್ಲಿ ಆರು ವಿದ್ಯಾರ್ಥಿಗಳು ಪಾಸಾಗಿರುವರು. ಗಣಿತಶಾಸ್ತ್ರದಲ್ಲಿ ತೇರ್ಗಡೆಯಾದ ೧೩ ವಿದ್ಯಾರ್ಥಿಗಳ ದೆಸೆಯಿಂದ ಮಡಿಕೇರಿ ಶಾಲೆಗೆ ಒಳ್ಳೇ ಫಲಿತಾಂಶವು ದೊರೆಯಲು ಕಾರಣವಾಯಿತು. ವೀರರಾಜಪೇಟೆಯವರಿಗೆ ಈ ಅನುಕೂಲವು ದೊರೆಯಲಿಲ್ಲ. ಇದರಿಂದ ವೀರರಾಜಪೇಟೆ ಶಾಲೆಯ ಸಿಬ್ಬಂದಿಯವರ ಜವಾಬ್ದಾರಿಕೆಯು ಕಡಿಮೆಯೆಂದಲ್ಲ. ಅವರು ಈ ವರ್ಷ ತಮಗೆ ದೊರೆತಿರುವ ಕಮ್ಮಿ ಫಲಿತಾಂಶವನ್ನು ಜ್ಞಾಪಕದಲ್ಲಿಟ್ಟುಕೊಂಡು ಬರುವ ವರ್ಷ ಉತ್ತಮವಾದ ಫಲಿತಾಂಶವು ದೊರೆಯುವಂತೆ ಇಮ್ಮಡಿ ಮುತುವರ್ಜಿಯಿಂದ ಕಲಿಸುವರಾಗಿ ನಂಬುತ್ತೇವೆ. ಮಾತ್ರವಲ್ಲ, ಮೂಲಗಣಿತಶಾಸ್ತ್ರ (ಎಲಿಮೆಂಟರಿ ಮೆತ್ಮೆಟಿಕ್ಸ್) ದಲ್ಲಿ ಮಾತ್ರ ಅನೇಕ ಹುಡುಗರ ಸೋತಿರುವರೆಂದು ತಿಳಿದುಬರುವುದರಿಂದ ಈ ವಿಷಯದಲ್ಲಿ ಇನ್ನು ಮುಂದೆ ಹೆಚ್ಚು ನಿಗವಿಡುವರೆಂದು ನಂಬಲಾಗಿದೆ. ಒಟ್ಟಾರೆ ವೀರರಾಜಪೇಟೆ ಶಾಲೆಯು ತನ್ನ ಶಿಶುತ್ವದಲ್ಲಿರುವುದರಿಂದ, ಈ ವರ್ಷದ ಫಲಿತಾಂಶದಿಂದ ಧೈರ್ಯ ಕುಂದದೆ ಇನ್ನು ಮುಂದೆ ಬಹು ಮುತುವರ್ಜಿಯಿಂದ ಕೆಲಸಮಾಡಬೇಕಾಗಿ ನಮ್ಮ ಅಭಿಲಾಷೆ.

ಮಡಿಕೇರಿ ಶಾಲೆಯಲ್ಲಿ ಒಂದನೇಯದಾಗಿ ಬಂದ ಕೆ. ಎಸ. ಮಂಜ್ಯೆಯ್ಯನವರು ಕೆಲವು ಭಾಗಗಳಲ್ಲಿ ಶೇಕಡ ನೂರರಂತೆಯೂ ಬಾಕಿಯವುಗಳಲ್ಲಿ ಒಳ್ಳೇ ನಂಬರುಗಳನ್ನೂ ತೆಗೆದದ್ದು ಬಹಳ ಶ್ಲಾಘನೀಯವಾಗಿದೆ. ಸ್ತ್ರೀ ಪ್ರೌಢವಿದ್ಯಾಭ್ಯಾಸವು ಕಡಿಮೆಯಾಗಿರುವ ನಮ್ಮ ಈ ದೇಶದಲ್ಲಿ ಈವರ್ಷದ ಪರೀಕ್ಷೆಯಲ್ಲಿ ಒಳ್ಳೇ ನಂಬರುಗಳನ್ನು ತೆಗೆದು ಎರಡನೇಯದಾಗಿ ಬಂದಿರುವ ನೆಗವಾಡಿ ... ನವರ ... ದೇಶದವರೆಲ್ಲರೂ ... ಹಿಂದೆಬಿದ್ದಿರುವ ... ಸೇರಿದವರ ಪೈಕಿ ಮೂರು ವಿದ್ಯಾರ್ಥಿಗಳು ... ಹೆಚ್. ಬಿ. ಮುಂಡಪ್ಪನವರು ... ಇನ್ನು ಮುಂದಾದರೂ ಆ ... ಜನರಿಗೆ ವಿದ್ಯಾಭ್ಯಾಸದಲ್ಲಿ ಉತ್ತೇಜನವನ್ನು ಹುಟ್ಟಿಸೀತೆಂತ ಹಾರೈಸುತ್ತೇವೆ.

ಟೈಟಲ್ ಬೇಕೆ !!

ವಿಕ್ಟೋರಿಯ ಮಹಾರಾಣಿಯು ಸ್ವರ್ಗವಾಸಿಯಾಗಿ ಹೆಚ್ಚು ಕಾಲವೇನು ಆಗಲಿಲ್ಲ. ಇವಳನಂತರ ಇವಳ ಪುತ್ರ ಎಡ್ವರ್ಡ್ ದೊರೆಯು ಇಂಗ್ಲಂಡದ ಸಿಂಹಾಸನಾರೂಢನಾದನು. ಆಗ ಹಿಂದುಸ್ಥಾನದಲ್ಲಿಯೂ ಸಹ ಪಟ್ಟಾಭಿಷೇಕವು ಅತಿ ಸಮಾರಂಭದಿಂದ ನಡೆಯಿತು. ಎಡ್ವರ್ಡ್ ದೊರೆಯ ಚಿತ್ರಸರದ ಮೆರವಣಿಗೆಯೂ ಸಮರ್ಪಕ ರೀತಿಯಲ್ಲಿ ಮುಗಿಯಿತು. ಆಕಾಲದಲ್ಲಿ ಕೃಷ್ಣಾ ಜಿಲ್ಲೆಯ ನರಸಾಪುರವೆಂಬ ಊರಿನಲ್ಲಿ ಒಬ್ಬ ಶೆಟ್ಟಿಯು ಇರುತ್ತಿದ್ದನು. ಇವನಿಗೆ ದೊಡ್ಡದೊಂದು ಬಂಗಲೆಯೂ ಬೇಕಾದಷ್ಟು ಜಮೀನೂ, ಅಡಿಕೆ ಮತ್ತು ತೆಂಗಿನತೋಟಗಳೂ ಕುದುರೆಗಾಡಿಗಳೂ, ಅಪರಿಮಿತ ಸಗನಾಣ್ಯಗಳೂ, ಮೋಟಾರು ಬಂಡಿಯೂ, ಇದ್ದುವು. ತನ್ನ ಕೆಲಸಕ್ಕೆ ಅನೇಕ ಚಾಕರರು ಇದ್ದರು. ದೇವರದಯದಿಂದ ರಾಮಸ್ವಾಮಿಶೆಟ್ಟಿಗೆ ಯಾವ ಬಾಬಿನಲ್ಲಿಯೂ ಕಡಿಮೆ ಇರಲಿಲ್ಲ. ಆದರೆ ಇವನಿಗೆ ಒಂದು ತರದ ರಾಜರೋಗವಿದ್ದುದರಿಂದ, ಇವನು ಯಾವಾಗಲೂ ಮನೋವ್ಯಥೆಯಲ್ಲಿರುತ್ತಿದ್ದನು. ರೋಗವು ಹಣವಂತರನ್ನೂ, ಗರೀಬರನ್ನೂ, ಏಕರೀತಿಯಲ್ಲೇ ಬಾಧಿಸುವುದು. ಶೆಟ್ಟಿಗೆ ಇತ್ತಲಾಗೆ ಚಿಂತೆಯು ಏರುತ್ತಾ ಬಂತು. ವೃತ್ತಪತ್ರಗಳ ಮೇಲೆ ಶೆಟ್ಟಿಗೆ ಅತಿಪ್ರೇಮ. ಅವನ ಡ್ರಾಯಿಂಗರೂಮಿನಲ್ಲಿದ್ದ ಮೇಜದ ಮೇಲೆ ಮದ್ರಾಸ್ ಮೇಲ್, ಡೈಲಿ ಎಕ್ಸ್‌ಪ್ರೆಸ್, ಹಿಂದೂ, ಸ್ವದೇಶಮಿತ್ರನ್, ಆಂಧ್ರಪತ್ರಿಕಾ, ಭಾರತಮಿತ್ರ ಇತ್ಯಾದಿ ವೃತ್ತಪತ್ರಗಳು ಇದ್ದುವು. ಶೆಟ್ಟಿಯು ಪತ್ರಗಳನ್ನು ಕೈಯಲ್ಲಿ ಹಿಡಿದ ಕೂಡಲೆ ಔಷಧಿಯ ಪ್ರಕಟಣೆಗಳನ್ನೇ ಮೊದಲು ಓದುವದು. ಅವನ ಪದ್ಧತಿ. ಕಲಕತ್ತಾ, ಮದ್ರಾಸ್ ಮುಂತಾದ ದೊಡ್ಡ ಪಟ್ಟಣಗಳಲ್ಲಿನ ಔಷದಾಲಯಗಳ ಪ್ರಕಟಣೆಗಳನ್ನು ಓದುತ್ತಾ, ತನಗೆ ಬೇಕಾದ ಹೆಸರುಗಳನ್ನು ಬರೆದುಕೊಳ್ಳುತ್ತಿದ್ದನು. ಇವನಿಗೆ ನಮ್ಮಂತೆ ಎರಡು ಕಣ್ಣುಗಳಲ್ಲ, ದೇವರು ಕೊಟ್ಟ ಕಣ್ಣುಗಳಲ್ಲದೆ, ಕೃತ್ರಿಮ ಕಣ್ಣುಗಳು ಬೇರೆ. ಆದುದರಿಂದ ಪತ್ರಿಕೆಯಲ್ಲಿ ಹೊಸಪ್ರಕಟಣೆ ಇದ್ದರೆ, ಅದು ಇವನ ನಾಲ್ಕು ಕಣ್ಣುಗಳಿಗೂ ತಟ್ಟನೆ ಬೀಳುವುದು.

ಒಂದುದಿನ ಶೆಟ್ಟಿಯು ತನ್ನ ಆಪ್ತ ಸ್ನೇಹಿತನಾದ ಕೂರ್ಮಶಾಸ್ತ್ರಿ, ಬ್ಯಾರಿಸ್ಟರ್, ನ್ಯಾಯವಿಧಾಯಕ ಸಭೆಯ ಮೆಂಬರ್, ಇವನನ್ನು ತನ್ನ ಮನೆಗೆ ಬರಮಾಡಿಕೊಂಡು ಅವನಿಗೆ ಹೀಗೆ ಹೇಳಿದನು "ಶಾಸ್ತ್ರಿಗಳೇ! ನಾನೇನು ಹೇಳಲಿ. ಈಗೀಗ ನನ್ನ ಮನೋವ್ಯಥೆಯು ವಿಪರೀತವಾಗುತ್ತಿದೆ. ಯಾವಾಗಲೂ ನನ್ನ ಎದೆಯು ಧಡಧಡ ಎಂದು ಒಡೆಯುತ್ತದೆ. ಯಾವ ಕೆಲಸವನ್ನು ಮಾಡಲಿಕ್ಕೂ ನನಗೆ ಸಮಾಧಾನವಿಲ್ಲ" ಇದಕ್ಕೆ ಶಾಸ್ತ್ರಿಯು—"ಶೆಟ್ಟರೇ! ಹೆದರಬೇಡಿ. ದೇವರು ನಿಮಗೆ ಒಳ್ಳೇದನ್ನು ಮಾಡಲಿ. ಒಂದು ವೇಳೆ ಸಾರ್ವಭೌಮರ ವರ್ಧಂತಿಯ ಸಂಬಂಧವಾಗಿ ಟೈಟಲ್ ಬರಬಹುದು. ಹೀಗಾದರೆ ನಿಮ್ಮ ರೋಗ ದೂರವಾಗುವುದು" ಎಂದು ಹೇಳಿ ಹೊರಟುಹೋದನು.

ಶೆಟ್ಟಿಯು ತನ್ನೊಳಗೆ "ನನಗೆ ಮತ್ತೇನು ಬೇಡ ರಾವ್‌ಸಾಹೇಬ್ ಟೈಟಲ್ ಒಂದರೆ ಸಾಕು" ಎಂದು ಯೋಚಿಸಿಕೊಂಡು ಇದನ್ನು ಪಡೆಯುವ ರೀತಿಯನ್ನು ತಿಳಿಯಲಿಕ್ಕಾಗಿ ಒಬ್ಬ ಹಕೀಮನನ್ನು ಬರಮಾಡಿಕೊಂಡನು. ಹಕೀಮನು ಬಂದಕೂಡಲೆ ಅವನನ್ನು ಕುರ್ಚಿಯ ಮೇಲೆ ಕುಳ್ಳಿರಿಸಿದನು. ಶೆಟ್ಟಿಯು ತನ್ನ ಎದಳ್ಳೆಯಿಂದ ವೀಸೆಯನ್ನು ತಿರುವುತ್ತಾ, ತನ್ನ ರೋಗದ ಚರಿತ್ರೆಯನ್ನು ಹಕೀಮನಿಗೆ ವಿವರಿಸಿದನು. ಆಗ ಹಕೀಮನು—"ಶೆಟ್ಟರೇ! ನಾನು ಹೇಳುವಮೇರೆ ಔಷಧಿಯನ್ನು ಎಂಟು ದಿವಸಗಳ ಪಥ್ಯದಿಂದ ಸೇವಿಸಿದರೆ ನಿಮ್ಮ ರೋಗವು ನಿರ್ಮೂಲವಾಗುವುದು" ಎಂದು ಹೇಳಿದನು. ಅದಕ್ಕೆ ಶೆಟ್ಟಿಯು—"ಹಕೀಮರೆ! ಕೂಡಲೆ ವೈದ್ಯ ಆರಂಭಿಸಿರಿ. ರೋಗ ಪ್ರಬಲವಾದಂತೆ ನೋಡಿಕೊಳ್ಳಿರಿ" ಎಂದನು.

ಈ ಮಾತನ್ನು ಕೇಳಿ ಹಕೀಮನು ಪ್ರಸನ್ನನಾಗಿ ಶೆಟ್ಟಿಯನ್ನು ಕುರಿತು—, ಶೆಟ್ಟರೆ! ಔಷಧಿಯನ್ನು ಕೊಡಲು ನಾನು ತಯಾರಿದ್ದೇನೆ. ನನ್ನಿಂದ ತಡವೇನಿಲ್ಲ. ಆದರೆ ನನ್ನ ಔಷದಿಯು ಬಹು ಬೆಲೆಯುಳ್ಳದ್ದು. ಇದು ಸಿಕ್ಕುವುದೇ ಮಹಾಕಷ್ಟ. ಇದನ್ನು ಸಂಪಾದಿಸಲಿಕ್ಕಾಗಿ

ಸಸಗೆ ತಗಲಿರುವ ಖರ್ಚನ್ನು ಮಾತ್ರ ತುಂಬ್ಬಿರಿ ಸಾ ಕು. ಚಿಂತೆಯಿಲ್ಲ ತಮಗೆ ಯಾವ ಪದವಿ ಬೇಕು, ಬ ಯುವನಾಟಕಪೇಳಿ. ಮುನಿಸಿಪಲ್ ಕೌನ್ಸಿಲ್‌ಮೆಂಬರರೋ? ಅಥವಾ ಚೇರ್‌ಮ್ಯಾನರೋ? ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರ ಕೆಲಸವೋ? ಇಲ್ಲವೆ ಯಂ. ಯಲ್. ಸಿ ಕೆಲಸವೋ? ರಾವ್‌ಸಾಹೇಬ್ ಯಾ ದಿವಾನ ಬಹದ್ದೂ ರ್ ಆಗಬೇಕೋ? ಯಾವ ಪಟ್ಟ (ಬಿ)ರುದ್ಬೇ ಕು?

ಶೆಟ್ಟಿ— ಬೇರೆ ಯಾವುದೂ ಬೇಡ ರಾವ್‌ಸಾ ಹೇಬ್ ಪಟ್ಟ ಸಾಕು. ಇದಕ್ಕೆಷ್ಟು ಬೇಕೆ" ಹಣವು ಈ ವಾ ... ಇದಕ್ಕಾಗಿ ಹತ್ತು ಸಾವಿರ ಗುಡುವು ... ಗ ... ದೆ.

ಶೆಟ್ಟಿಯು ಕೂಡಲೆ ಎರಡು ಸಾವಿರ ರೂಪಾಯಿ ನೋಟ್‌ಗಳನ್ನು ರಾಮನಿಗೆ ಕೊಟ್ಟನು. ರಶೀದಿಯು ... ...

... ಬೆಳಗಿನ ಜಾವದಲ್ಲಿ ... ... ಒಂದು ಚೀಟಿಯನ್ನು ಕೊಟ್ಟನು ... ಮೇಲೆ ... ... ಶೆಟ್ಟಿ ... ಸಮಾಧಾನದಿಂದ ಆ ಪತ್ರವನ್ನು ಒಡೆದು ನೋಡಲು ಹೀಗೆ ಬರೆದಿತ್ತು.

ಪ್ರಿಯ ಶೆಟ್ಟರೇ!

ಇದರಲ್ಲಿ ... ... ಕೂಡಲೆ ಪಾಸಾದ ... ... ಸಾಮಾನುಗಳನ್ನು ತರಿಸಿ ಪ್ರತಿ ... ... ಲ್ಲಿಯೇ ನಿಮಗೆ ರಾವಸಾಹೇಬ ಪಟ್ಟವು ... ... ಕುರಿತ ಕೆಲಸದ ಮೇಲೆ ... ... ಟನ್ನೇ ... ... ಪತ್ರದಲ್ಲಿ ... ... ಮ್ಮನ್ನು ... ... ನಿಮ್ಮ ರೋಗ ವನ್ನು ಜಾಗ್ರತೆಯಾಗಿ ದೂರಮಾಡಲಿ

ನಮ್ಮ ... ...

. . . .

(ಇಲ್ಲಿ ಪಟ್ಟ ಓರೆದಿದೆ)

... ...

ವರ್ತಮಾನ ಸಂಗ್ರಹ

ಒಳದೇಶ

ಈ ವರ್ಷದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ವೀರಾ ಜಪೇಟೆ ಹೈಸ್ಕೂಲಿನಿಂದ ಪರೀಕ್ಷೆಗೆ ಹೋದ 22 ವಿದ್ಯಾ ರ್ಥಿಗಳ ಪೈಕಿ ಪಟ್ಟದ ಪೆಮ್ಮಯ್ಯ ಮತ್ತು ಪುದಿಯಂಡ ಪ ಯ್ಯಪ್ಪ, ಇವರಿಬ್ಬರು ಮಾತ್ರ ತೇರ್ಗಡೆಹೊಂದಿರುತ್ತಾರೆ

ಮಡಿಕೇರಿಯಲ್ಲಿದ್ದ ಟೀಚರ್ಸ್ ಕೋ ಆಪರೇಟಿವ ಸ್ಟೋರ್ಸ್ ಈಗ ವೀರಾಜಪೇಟೆಗೆ ವರ್ಗಾಯಿಸಲ್ಪಡುವ

ಮೆ|| ಪೂಜಾರಿಮಾಡ ಮುತ್ತಣ್ಣನವರು ಎಫ಼. ಎಲ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವುದನ್ನು ಕೇಳಲು ಸಂ ತೋಷಪಡುತ್ತೇವೆ

ಕಮೀಷನರ್‌ರವರು ತಾ|| 19 ರಿಂದ 27 ರವರೆಗೆ ಸ್ರೀಜ ರ್‌ಪೇಟೆಗೆ ಕ್ಯಾಂಪಿಂಗ್ ಹೋಗಿದರು. ಅವರು ಹಾರಂ ಗಿನಾಲೆಯ ವಿಷಯ ವಿಚಾರಿಸಲು ಹೋಗಿದ್ದರೆಂದು ವರ್ತ ಮಾನ

ಇದೇ ತಾರೀಕು 28 ರಲ್ಲು ಮಧ್ಯಾಹ್ನ ಕೊಡಗು ಕೊ ಪೆಸಿಯ ಡೈರೆಕ್ಟರುಗಳ ಮೀಟಿಂಗು ವೀರಾಜಪೇಟೆಯಲ್ಲಿ ನಡೆ ಯುವುದು.

ಡೆಲ್ಲಿ ಲೇಡಿ ಹಾರ್ಡಿಂಜ್ ಕಾಲೇಜಿನಲ್ಲಿ ಓದುತ್ತಿರುವ ಆ|| ಕಮೀಷನರ್ ಮೆ|| ಕೋರಂಡ ಅಪ್ಪಯ್ಯನವರ ಪುತ್ರಿ ಶ್ರೀಮತಿ ಅಕ್ಕಮ್ಮನವರು 5 ನೇ ವರ್ಷದ ಯಂ. ಬಿ. ಬಿ. ಯಸ್ ಪರೀಕ್ಷೆಯಲ್ಲಿ ಎಲ್ಲಾ ಸಬ್‌ಜೆಕ್ಟ್‌ಗಳಲ್ಲಿಯೂ ಶೇಕ ಡ 50 ಕ್ಕಿಂತ ಹೆಚ್ಚಾಗಿ ನಂಬರು ತೆಗೆದು ತೇರ್ಗಡೆಯಾಗಿ ರುವದು ಶ್ಲಾಘನೀಯವೇ. ಇವರ ಫೈನಲ್ ಪರೀಕ್ಷೆಗೆ ಇನ್ನೂ ಎರಡುವರ್ಷ ಓದಬೇಕಾಗಿದೆ.

ದಕ್ಷಿಣಕೊಡಗಿನ ಸಹಕಾರಿ ಸಂಘಗಳ ಗೌರವ ಆರ್ಗ ನೈಜರಾಗಿ ಮೆ|| ಕೋಟೆರ ಚಣ್ಣಪ್ಪ, ಯಂ. ಎಲ್. ಸಿ. ಯವ ರನ್ನು ನೇಮಿಸಿರುವರು.

ತಾ|| 18 ರಲ್ಲು ಕೊಡಗು ವಿದ್ಯಾಭಿವೃದ್ಧಿ ಫಂಡ್ ಕಮಿ ಟಿಯ ಮೀಟಿಂಗು ಮಡಿಕೇರಿ ದೇವಸ್ಥಾನದ ಹಾಲಿನಲ್ಲಿ ನಡೆದು ಎಂಟು ವಿದ್ಯಾರ್ಥಿಗಳಿಗೆ ವೇತನಗಳು ಮಂಜೂರು ಮಾಡಲ್ಪಟ್ಟವು.

"ಕೊಡಗು" ಪತ್ರಿಕೆಯ ಪ್ರಿಂಟಿಗಾಗಿ ಅವಶ್ಯವಿರುವ ಅಕ್ಷರಗಳು ವಗೈರೆ ಸಾಮಾನುಗಳಲ್ಲಿ ಹೆಚ್ಚಿನವೆಲ್ಲಾ ಮಡಿ ಕೇರಿ ಆಫೀಸಿಗೆ ಬಂದು ತಲಪಿದೆ. ಪ್ರಿಂಟಿಂಗ್ ಪ್ರೆಸ್ಸು ಕಕ್ಕಪಾಸ್ತಿಗೆ ಸರಿಯಾಗಿ ಜೋಡಿಸಲ್ಪಟ್ಟಿದೆ. ಪ್ರಿಂಟಿಂಗಿಗ ನಗತ್ಯವಿರುವ ಇನ್ನು ಕೆಲವು ಸಾಮಾನುಗಳು ಮಾತ್ರ ಬರ ಲ್ಲಿ ಬಾಕಿ ಇವೆ. ಇವುಗಳು ಒಡನೆ ಬಂದು ತಲಪಿದರೆ ಏಪ್ರಿಲ್ 4 ರ ಸಂಚಿಕೆಯನ್ನು ಮಡಿಕೇರಿಯಲ್ಲಿಯೇ ಪ್ರಿಂಟು ಮಾಡುವ ಪ್ರಯತ್ನಗಳು ನಡೆಯುತ್ತಿವೆ

ಕೊಡಗು ಜಮೀನ್ದಾರರ ಸಂಘದ ಎಗ್ಜಿಕ್ಯೂಟಿವ್ ಕಮಿಟಿ ಮೀಟಿಂಗು ತಾ|| 28 ರಲ್ಲು ವೀರಾಜಪೇಟೆಯಲ್ಲು ನಡೆಯಲಿಕ್ಕಿದೆ.

ಕಾಕೋಟುಮನೆ ತ್ಯಾಂಪರ್ಕೆಯವರ ಮಗ ಟಿ. ಯಸ್. ರಾಯ ಎಂಬವರು ಬೊಂಬಾಯಿಯ ಇಂಪ್ರೂವ್ಮೆಂಟ್ ಟ್ರ ಸ್ಟಿನಲ್ಲಿ ಎರಡು ವರ್ಷಗಳಿಂದ ಸಾಧಾರಣದ ಒಂದು ಕೆಲಸ ದಲ್ಲಿದ್ದು ಅವರು ಸಾಧಾರಣದ ವಿದ್ಯಾವಂತರಾದರೂ ತಮ್ಮ ಎಡೆಬಿಡದ ಪ್ರಯತ್ನದಿಂದ ಬೊಂಬಾಯಿಯ ಸಿವಿಲ ಇಂ ಜಿನೀಯರಿಂಗ್‌ನಲ್ಲಿ ಬಿ. ಇ. ಡಿಗ್ರಿ ಪಡೆದವರಿಗೆ ದೊರಕುವ ಸೀನಿಯರ್ ಓವರ್‌ಸೀಯರ್ ಕೆಲಸವನ್ನು ಪಡೆದಿರುವುದು ಸಂತೋಷಕರವೇ ಎಂದು ಒಂದು ಬೊಂಬಾಯಿ ವಾರ್ತೆ.

ಈ ತಿಂಗಳ ಪ್ರಾರಂಭದಲ್ಲಿ ಬೆಂಗಳೂರಿನಲ್ಲಿ ನಡೆದ ಟೆಂ ಟೋರಿಯಲ್ ಮೇಳದಲ್ಲಿ ಮೆ|| ಮುತ್ತರಂಡ ಬಿದ್ದಯ್ಯನವ ರಿಂದ ನಡೆಸಲ್ಪಟ್ಟ 14/3 ಬೆಟಾಲಿಯನಿಗೆ ಗುಂಡು ಗುಂಡು ಹೊಡೆಯುವುದರಲ್ಲಿ (ಮಸ್ಕೆಟರಿ) ಒಂದು ಬಹುಮಾನ, ಆವ ರೆಂಟುಬನಿರಿಗೂ ಒಂದೊಂದು ಮೆಡಲೂ, ನೂರುಗಜದ ಆ ಫೀಸರುಗಳ ಓಟದಲ್ಲಿ ಮೆ|| ಸಿರಂಜೆ ರಾಮಪ್ಪನವರಿಗೆ ಒಂದು ಬಟ್ಟಲೂ, ಕಾಲುಮೈಲು ಓಟದಲ್ಲಿ ನೆಲ್ಲಮಕ್ಕಳ ಮುದ್ದಪ್ಪ ನವರಿಗೆ ಒಂದು ಮೆಡಲೂ ಇನಾಮಾಗಿ ದೊರೆತಿವೆ.

ಈ ವಾರ ಬೇರೊಂದು ಕಡೆ ಪ್ರಕಟಿಸಿರುವ ಕನ್ನಡ ಧು ರೀಣ ಪತ್ರಿಕೆಯ "ಕೊಡಗು ಕನ್ನಡವೂ" ಎಂಬ ಲೇಖನ ದಲ್ಲಿರುವ ಅಭಿಪ್ರಾಯಗಳಿಗೆ ನಾವು ಒಪ್ಪುದಿಲ್ಲವಾದರೂ ನಮ್ಮ ದೇಶದ ವಿಷಯ ಬೇರೆ ಪತ್ರಿಕೆಗಳ ಅಭಿಪ್ರಾಯವು ಹೇಗಿದೆ ಎಂಬುದನ್ನು ನಮ್ಮ ವಾಚಕರಿಗೆ ತಿಳಿಸಲಿಕ್ಕಾಗಿ ಅದನ್ನು ನಾವು ಎತ್ತಿ ಪ್ರಕಟಿಸಿದ್ದಾಗಿದೆ

ಹಿಂದೂದೇಶ

ಹಿಂದೂಸ್ತಾನದ ವಿಶ್ವವಿದ್ಯಾಲಯದ ಕಾನ್ಫರೆನ್ಸು ಪೂನಾದಲ್ಲಿ ತಾ|| 15ರಲ್ಲು ಬೊಂಬಾಯಿಯ ದಿವಾನ್ ಬ ಹದ್ದೂರ್ ಜೆ ಯಸ್ ರಾಮರಾಯರ ಅಧ್ಯಕ್ಷತೆಯಲ್ಲಿ ನಡೆ ಯಿತು. ಗ್ರಾಹಿಕ ಆಗುವುದೆಂದು ನೀರು ... ಹೆಂಗಸು ಗ್ರ್ಯಾಜ್ಯುವೇಟುಗಳಿಗೆ ಹುದ್ದೆ ಬಿಟ್ಟಿತು.

ವೆಂಕಟಗಿರಿಯಲ್ಲಿ ಒಪ್ಪೊಂದು ಕಡ ನಮಯದಲ್ಲಿ ಕಾಂ ಗ್ರೆಸಿನವರು ಒಂದು ಚಪ್ಪರವನ್ನು ಕಟ್ಟಿ ನೀರು ಹಂಚುತ್ತಿ ದ್ದರು. ಚಪ್ಪರದ ಮುಂಭಾಗದಲ್ಲಿ ತೋರಣ ಕಟ್ಟಿದ್ದನ್ನು ತೆಗೆಯಬೇಕೆಂದು ಅಲ್ಲಿಯ ರಾಜರ ರಾಜಭಟರುಗಳು ಹುಕುಂ ಮಾಡಿದರು. ಕಾಂಗ್ರೆಸಿನವರು ತೆಗೆಯದ್ದರಿಂದ ಪೋಲೀಸಿ ನವರು ಒಂದು ತೋರಣವನ್ನು ಕಿತ್ತುಹಾಕಿ ರಾಷ್ಟ್ರೀಯ ಧ್ವಜವನ್ನು ಸುಟ್ಟು ಮಹಾತ್ಮ ಗಾಂಧಿಯವರ ಪಟವನ್ನು ... ... ಕಾಂಗ್ರೆಸಿನವರು ಪುನಹ ಕಟ್ಟಿ ದರು. ಪೋಲೀಸಿನವರು ಕಿತ್ತರು ಹೀಗೆ ಅನೇಕಸಾರಿ ನಡೆದ ನಂತರ ತೋರಣವನ್ನು ಹಾಗೆಯೇ ಬಿಟ್ಟರಂತೆ

ಕಾಶೀದಿ ಜಟಿಲ ಕೆಲಸದಲ್ಲಿ ಭಾಗಿಗಳಾದದ್ದಕ್ಕೆ ಪಂಜಾ ಬು ಲೆಜಿಸ್ಲೇಟಿವ್ ಕೌನ್ಸಿಲಿನ ಮುಂಚಿನಾದ ಸರ್ದಾರ್ ಬೊ ಹಿಂದ್ರಸಿಂಗ್‌ರವರಿಗೆ ಎರಡೂವರೆ ವರ್ಷ ಕಠಿಣ ಸಜೆಯೂ 1500 ರೂ ಜುಲ್ಮಾನೆಯೂ ವಿಧಿಸಲ್ಪಟ್ಟಿದೆ. ಅವರೆ ಅವ ರನ್ನು ಜೇಲಿನಿಂದ ಪ್ರತ್ಯೇಕ ಜೈಲಿನಲ್ಲಿರುವರಂತೆ

ಸ್ವಾಮಿ ಸಚ್ಚಿದಾನಂದರವರನ್ನು ಜೈಲಿಗೆ ತಗೆದುಕೊಂ ಡು ಹೋಗುತ್ತಿರುವಾಗ ಸೆರಾಂಪುರದಲ್ಲಿ ಜನರು ದಂಗೆ ಎ ದ್ದು ಪೋಲೀಸು ಅಧಿಕಾರಿಗಳಿಗೆ ತೊಂದರೆ ಕೊಟ್ಟರೆಂದು 26 ಹೆಂಗಸರನ್ನೂ 4 ಗಂಡಸರನ್ನೂ ದಸ್ತಗಿರಿ ಮಾಡಿರು ವರು

ಕಳೆದವಾರದಲ್ಲಿ ಬೊಂಬಾಯಿಯಲ್ಲಿ ಮಳೆಯು ಬಹಳ ಜೋರಾಗಿ ಬಿದ್ದಿನಾಗಲ್ಲಿ ನೀರು ತುಂಬಿಕೊಂಡು ಕೆಲವು ರಾಸ್ತೆ ಗಳಲ್ಲಿ ವ್ಯಾಪಾರದ ನಿಂತುಹೋಗಿತ್ತು.

ಸರ್ಕಾರದವರಿಗೂ ಸಿಮ್ ಪ್ರತಿನಿಧಿಗಳಿಗೂ ಬೇಕಾದ ... ... ಎಲ್ಲಾ ವಿಷಯಗಳಲ್ಲಿ ಒಪ್ಪಿಗೆಯಿದ್ದರೂ ಕೂಡ, ಒಪ್ಪದ ಮುಖ್ಯವಾದ ಒಂದು ಸಂಗತಿಯ ಕೈದಿಗಳನ್ನು ಬಿಡುಗಡೆ ಮಾಡಲೂ, ಗುರುದ್ವಾರಾ ಪ್ರಬಂಧಕ ಕಮಿಟಿಯವರ ನಂತರ ಮಠ ಸಂಬಂಧದ ಎಲ್ಲಾ ಕೈದಿಗಳನ್ನು ಬಿಡುಗಡೆ ಮಾಡುವುದಂತೆ ಭಾವಿಸಿ ಕೊಡಲಿಕ್ಕೂ ಸರ್ಕಾರದವರು ಒಪ್ಪದ್ದ ರಿಂದ ಮಾತ್ರ ಅಕಾಲಿಗಳಿಗೂ ಸರ್ಕಾರದವರಿಗೂ ರಾಜಿ ಮಾಡಲು ಪ್ರಯತ್ನ ಸುಸ್ಥಿರ್ವ ಒರ್ಡನ್ನು ಕಮಿಟಿಯವರ ಪ್ರಯತ್ನವು ಸಫಲವಾಗಲಿಲ್ಲವೆಂದು ಎಸ್. ಜಿ. ಪಿ. ಸಿ. ಕಮಿ ಟಿಯವರು ತಿಳಿಸುತ್ತಾರೆ.

ಲೆಜಿಸ್ಲೇಟಿವ್ ಎಸೆಂಬ್ಲಿಯ ಆಕ್ಟಿಂಗ್ ಅಧ್ಯಕ್ಷ ಪದವಿ ಗೆ ಸರ್ ಜಮಶೇಜಿ ಜೀಜಿಭಾಯ್‌ರವರು ರಾಜೀನಾಮೆ ಕೊಟ್ಟಿರುವರು. ಅದು ಅಂಗೀಕರಿಸಲ್ಪಟ್ಟಿದೆ.

ಇನ್ನುಮುಂದೆ ಮುನ್ಸಿಪಾಲಿಟಿಯವರಿಗೆ ಫೀಸ್‌ಕೊ ಟ್ಟು ಲೈಸನ್ಸ್ ಪಡೆದ ವಿನಹ ಗೋಡೆಗಳಮೇಲೆ ಪ್ಲಾಕಾರ್ಡ ಗಳನ್ನು ಹಚ್ಚಕೂಡದೆಂದು ಬೊಂಬಾಯಿ ಮುನ್ಸಿಪಾಲಿಟಿಯ ವರು ಕಾನೂನುಮಾಡಿರುವರು.

ಮದ್ರಾಸು ಸರ್ಕಾರದ ಒಬ್ಬ ಮಂತ್ರಿಯಾದ ಪಟ್ರೋ ರವರು ತಂಜಾವೂರಿನ ಕಂದಾಯ ಕೊಡದೆ ಮುಷ್ಕರ ಹಿಡಿ ದಿರುವ ಮಿರಾಸುದಾರರಿಗೆ ಸೂಚಿಸಿರುವ ಕರಾರ್ಗಳಿಗೆ ಮಿ ರಾಸ್‌ದಾರರು ಒಪ್ಪದಿರುವುದಲ್ಲ ಮಾತ್ರವಲ್ಲ ಅವುಗಳ ಸೆನೆ ಯಿಂದ ಮಿರಾಸ್‌ದಾರರ ಚಳವಳವು ಪ್ರಬಲವಾಗುತ್ತಿಗಿದೆ ಯಂತೆ.

ಮಾಜಿ ನಿಲೀಘರಾದ ಅಬ್ದುಲ್ ಮಜೀದ್‌ಖಾನ್‌ರವ ರಿಗೆ ಹೈದರಾಬಾದಿನ ನೈಜಾಮರು 1924 ಏಪ್ರಿಲ್ ರಿಂದ ತಿಂಗಳಿಗೆ 300 ಪೌನುಗಳಂತೆ ಪೆನ್ಶನ್ ಮಂಜೂರು ಮಾಡಿ ರುವರು.

ತಮಿಳು ಪ್ರಾಂತ್ಯದ ಕಾಂಗ್ರೆಸ್ ಕಮಿಟಿಯ ಮದ್ರಾಸ್ ಯಲ್ಲಿ ತಾ|| 20ರಲ್ಲು ನಡೆದ ತಮ್ಮ ಮೀಟಿಂಗಿನಲ್ಲಿ ಈ ವರ್ಷ ಬೆಳ್ಗಾಮಿನಲ್ಲಿ ನಡೆಯುವ ಕಾಂಗ್ರೆಸ್ಸಿಗೆ ಮಹಾತ್ಮ ಗಾಂಧಿ ಯವರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದೂ, ಮಹಾತ್ಮರು ಆಲ್ ಇಂಡಿಯಾ ಕಾಂಗ್ರೆಸ್‌ಕಮಿಟಿಯ ತಾ|| 27 ರ ಮೀ ಟಿಂಗಿನಲ್ಲಿ ಚರ್ಚಿಸಲು ಸೂಚಿಸಿರುವ ಠರಾವುಗಳಿಗೆ ಒಪ್ಪ ಬೇಕೆಂತಲೂ, ಠರಾವುಗಳನ್ನು ಮಂಜೂರು ಮಾಡಿರುವರು.

ವಯಕಮಿನಲ್ಲಿ ಸತ್ಯಾಗ್ರಹವು ಮುಂದುವರಿಯುತ್ತಲೇ ಇದೆ. ಎಲ್ಲಾ ಕಡೆಗಳಿಂದಲೂ ಸ್ವಯಂಸೇವಕರು ಅಲ್ಲಿಗೆ ಬರುತ್ತಲಿದ್ದಾರೆ ಮಧಿರಾಸದ ಸ್ತ್ರೀಯರೂ ಕೂಡ ಸ್ವಯಂಸೇವಕರಾಗಿ ಸತ್ಯಾಗ್ರಹವನ್ನು ಆಚರಿಸಲು ಅಲ್ಲಿಗೆ ಬರುತ್ತಿರುವರು. ತಮಿಳುನಾಡು ಬ್ರಾಹ್ಮಣೇತರರು, ಈ ಸತ್ಯಾಗ್ರಹಿಗಳಿಗೆ 200 ಧೋತಿಗಳನ್ನು ಕಳುಹಿಸಿಕೊಡಲು ತೀರ್ಮಾನಿಸಿರುವರು

ಹೈದರಾಬಾದಿನ ನೈಜಾಮರ ಅಧಿಕಾರಿಯೊಂದ ವೇರಾ ರನ್ನು ನೈಜಾಮರಿಗೆ ಬಿಟ್ಟುಕೊಡುವುದು ಒಳ್ಳೇಯದೆಂತಲೂ ಹಾಗೆ ಮಾಡಲು ಕಾಂಗ್ರೆಸ್ಸಿನವರೆಲ್ಲರೂ ಸಹಾಯಮಾಡ ಬೇಕೆಂತಲೂ ಹಕೀಮ್ ಅಜ್ಮಲ್ ಖಾನ್‌ರವರು ಅಭಿಪ್ರಾ ಯ ಕೊಟ್ಟಿರುವರು.

ಬರುವ ಕಾಂಗ್ರೆಸ್ಸಿನ ಅಧ್ಯಕ್ಷ ಪದವಿಯನ್ನು ಮಹಾತ್ಮ ಗಾಂಧಿಯವರು ವಹಿಸಿಕೊಳ್ಳದೆ ಹೋದರೆ, ಆ ಪದವಿಗೆ ಕತ್ತಾಲಕ್ಕೆ ಹಿಂದೂ ಮುಸಲ್ಮಾನರ ಒಗ್ಗಟ್ಟನ್ನು ಭದ್ರಪಡಿ ಸಲು ಶ್ರೀಮತಿ ಸರೋಜಿನಿದೇವಿಯವರನ್ನು ಯೋಗ್ಯರಾದ ವರು ಬೇರೆ ಯಾರೂ ಇಲ್ಲದ್ದರಿಂದ ಅವರನ್ನು ಚುನಾಯಿಸು ವುದು ಉತ್ತಮವೆಂದು "ಬೊಂಬಾಯಿ ಕ್ರಾನಿಕಲ್" ಪ ತ್ರಿಕೆಯು ಸೂಚಿಸುತ್ತದೆ

"ಅಕಾಲಿ" ಎಂಬ ಉರುದು ಪತ್ರಿಕೆಯ ಸಂಪಾದಕ ರಿಗೆ ರಾಜದ್ರೋಹಕರ ಲೇಖನವನ್ನು ಪ್ರಕಟಿಸಿದ ತಪ್ಪಿಗೆಕ್ಕಾಗಿ ಎರಡು ವರ್ಷ ಕಠಿಣ ಸಜೆಯೂ 200 ರೂ ಜುಲ್ಮಾನೆ ಯೂ ವಿಧಿಸಲ್ಪಟ್ಟಿದೆ.

ಸೆಂಟ್ರಲ್ ಖಿಲಾಫತ್ ಕಮಿಟಿಯ ಮೀಟಿಂಗು ಬರುವ ವಾರ ಡೆಲ್ಲಿ ಪಟ್ಟಣದಲ್ಲಿ ನಡೆಯುವುದಕ್ಕೆ ಏರ್ಪಾಡುಗಳು ಮಾಡಲ್ಪಡುತ್ತಿವೆ.

ವಯಕಮಿನಲ್ಲಿ ಸತ್ಯಾಗ್ರಹವನ್ನು ಪ್ರೋತ್ಸಾಹಿಸುವುದಕ್ಕಾಗಿ ಡೆಲ್ಲಿಯಿಂದ ಬಂದ ಮೆ|| ಭಾಸ್ಕರ ರಾವನ್ನು ಸರಹದ್ದಿನಿಂದ ... ಅವರು ಉತ್ತರ ಹಿಂದೂಸ್ಥಾನದಲ್ಲಿ ಎಲ್ಲೆಲ್ಲಾ ಹಣ ತೆಗೆದುಕೊಂಡು ಮೋಸಮಾಡಿ ಬಂದರೆಂದು ... ಕಾರ ಣವಂತೆ

ವಿದೇಶ

ಪೇಸ್ತೈನಿನ ಅರಸರಾದ ಹುಸ್ಸೇನರವರು ಬರಹಿಗೆ ಕಳುಹಿಸಿದ್ದ ರಾಯಭಾರಿಯಾದ ಡಾಕ್ಟರ್ ನಾಜಿ ಅ ಎಸಿಲ್‌ರವರು ಇಂಗ್ಲೆಂಡಿಗೂ ಪೇಲೆಸ್ತೈನಿಗೂ ಆಗಬೇಕಾದ ಕರಾರಿನ ಕರಡಿಗಳಿಗಾಗಿ ಮೊಕ್ಕಕ್ಕೆ ವಾಪಾಸು ಬಂದಿರು ವರು ಅದರಲ್ಲಿ ಹುಸ್ಸೇನ್‌ರಾಜರ ಸರ್ಕಾರದ ಸ್ವಾತಂತ್ರ್ಯ ವನ್ನು ಪೂರ್ತಿ ಒಪ್ಪಿರುವುದರಿಂದ ಇದಕ್ಕೆ ರಾಜರು ಸುಮ್ಮ ದಲ್ಲೇ ಸಮ್ಮತಿಸ ಬಹುದೆಂದು ಡಾ ನಾಜಿಯವರ ಅಭಿಪ್ರಾಯ.

ಡಾಯರ್ ಒಡ್ವಯರ್ ಕೇಸಿನಲ್ಲಿ ಜಸ್ಟಿಸ್ ಮೆಕಾರ್ಡಿ ... ರವರು ಜನರಲ್ ಡಯರರವರ ಮಾಡಿದ್ದು ಸರಿ, ಅವರ ನ್ನು ಸೆಕ್ರಟರಿ ಆಫ್ ಸ್ಟೇಟಿನವರು ಶಿಕ್ಷಿಸಿದ್ದು ತಪ್ಪೆಂದು ಹೇಳಿದಕ್ಕೆ ಅವರು ಜಸ್ಟಿಸ್ ಆಗಿರಲು ಯೋಗ್ಯರಲ್ಲವಾದ್ದರಿಂ ದರಿಂದ ಅವರನ್ನು ಆ ಪದವಿಯಿಂದ ತೆಗೆದುಹಾಕಬೇಕೆಂತ ರಾಜ ರಿಗೆ ಒಂದು ಅರ್ಜಿ ಬರೆಯುವಂತೆ ಠರಾವನ್ನು ಪಾರ್ಲಿಮೆಂ ಟಿನ ಮುಂದೆ ತರುವೆನೆಂದು ಮೆ|| ಲೇನ್ಸ್‌ಬರಿ ಯವರು ಸೂ ಚಿಸಿರುವರು.

ಈಜಿಪ್ಟ್ ದೇಶದಲ್ಲಿ ಕೈರೋನ್ ಎಂಬೊಬ್ಬ ಸಾರ್ವಜನ ಲಿಕರನ್ನು ಕೊಲೆಮಾಡಿದ್ದಕ್ಕಾಗಿ ಇಬ್ಬರು ವಿದ್ಯಾರ್ಥಿಗಳು ವಿಚಾ ರಿಸಲ್ಪಟ್ಟು ಒಬ್ಬನು ಬಿಡುಗಡೆಯಾಗಿ ಇನ್ನೊಬ್ಬನಿಗೆ 15 ವರ್ಷ ಕಠಿಣ ಸಜೆ ವಿಧಿಸಲಾಯಿತು. ಮಾಷ್ಕರ್ ಜಾ ಕೆಗೆದುಹಾಕಿದಂದಿನಿಂದ ಅಲ್ಲಿ ರಾಜದ್ರೋಹದ ಕೊಲೆಗಳಾಕ ಕಕ್ಕೆ ಶಿಕ್ಷೆಯಾದದ್ದು ಇದೇ ಮೊದಲು.

ಸಿವಿಲ್ ಸರ್ವಿಸ್ ಕಮಿಷನಿನವರು ತೀರ್ಮಾನಿಸಿರುವ ತೀರ್ಪಿನಿಂದ ಸಂಬಳವು ತೃಪ್ತಿಕರವಲ್ಲವೆಂದು ಕೆನಡಾದೇಶದ ಹಿಟ್ಟಾವದಲ್ಲಿದ್ದ ಪೋಸ್ಟಲ್ ಉದ್ಯೋಗಸ್ಥರೆಲ್ಲಾ ಜನರಲ್ ಮುಷ್ಕರ ಹಿಡಿದಿರುವರು.

2000 ನೇ ಇಸವಿಯಲ್ಲಿ ಅಮೇರಿಕದಲ್ಲಿರುವ ನ್ಯೂಯೋರ್ಕ್ ಪಟ್ಟಣದ ಮತ್ತು ಅದರ ಸುತ್ತಮುತ್ತಲಿನ ಜನಸಂಖ್ಯೆಯು 9,000,000 ದಿಂದ 29,000,000 ಕ್ಕೆ ಅಂದರೆ ಮೂರರಷ್ಟು ಹೆಚ್ಚುವುದೆಂದು ಪ್ರೊಫೆಸರ್ ಪರ್ಲ್ ಮತ್ತು ರೀಡ್‌ರವರು ಅಂದಾಜು ಮಾಡಿರುವರು.

ಜಪಾನಿನವರಿಂದ ನಾವು ಕಲಿಯಬಹುದಾದ ಕೆಲವು ಆರೋಗ್ಯ ವಿಧಿಗಳು.

ನಿದ್ರೆಯ ವಿಚಾರದಲ್ಲಿ ಅಲ್ಲಿನ ಸ್ತ್ರೀಯರ ನಡವಳಿಕೆ.

ಕಾಲಕಾಲಕ್ಕೆ ಸರಿಯಾಗಿ ನಿದ್ರೆಮಾಡಬೇಕಾದುದು ನಮ್ಮ ದೇಹಾರೋಗ್ಯಕ್ಕೆ ಅತ್ಯವಶ್ಯವೆಂಬುದನ್ನು ಕುರಿತು ನಾವು ಹೆಚ್ಚಾಗಿ ಹೇಳಬೇಕಾದ ಅವಶ್ಯವಿಲ್ಲ. ಜಪಾನ್ ದೇಶದವರು ಕ್ಲುಪ್ತಕಾಲಕ್ಕೆ ಮಲಗಿ, ಬೆಳಗಿನ ಜಾವದಲ್ಲೇ ಎಚ್ಚರಗೊಳ್ಳುವ ಪದ್ಧತಿಯನ್ನು ಬಹಳ ನಿರ್ಣಯವಾಗಿ ನಡೆಸುತ್ತಿರುವರು. ನಿದ್ರೆಮಾಡುವುದಕ್ಕೆ ಉಚಿತಕಾಲವಾವುದೆಂಬುದು ಅವರವರ ಶರೀರ ಪ್ರಕೃತಿಯನ್ನು ಅನುಸರಿಸಿದೆ. ಜಪಾನಿನಲ್ಲಿ ಸಾಧಾರಣವಾಗಿ ಜನರು ರಾತ್ರಿ ಒಂಭತ್ತು ಘಂಟೆಗೆ ಸರಿಯಾಗಿ ಮಲಗಿ ಬೆಳಗ್ಗೆ ಐದುಘಂಟೆಗೆ ಸರಿಯಾಗಿ ಏಳುವರು. ಇದರಿಂದ ದಿನವೊಂದಕ್ಕೆ ಎಂದರೆ, ಇಪ್ಪತ್ತುನಾಲ್ಕು ಘಂಟೆಗಳಲ್ಲಿ, ಕೊನೆಯಪಕ್ಷ ಎಂಟುಘಂಟೆಗಳ ಕಾಲವಾದರೂ ನಿದ್ರೆಯು ಅವಶ್ಯವೆಂದು ಸಿದ್ಧವಾಗುವುದು. ಹಗಲಿನಲ್ಲಿ ಮಾತ್ರವೇ ತಕ್ಕಷ್ಟು ವಿಶ್ರಾಂತಿ ಹೊಂದುವುದಕ್ಕೆ ಅವಕಾಶವುಳ್ಳವರು ಆ ವಿಶ್ರಾಂತಿಕಾಲವನ್ನು ಹಾಸಿಗೆಯಲ್ಲಿ ಕಳೆಯುವುದು ಮೇಲು.

ವಿಶ್ರಾಂತಿ ವಿಷಯವಾಗಿ ಹೀಗೆಯೇ ನಡೆಯಬೇಕೆಂದು ನಿಯಮವನ್ನು ಕಲ್ಪಿಸುವುದು ಕಷ್ಟ. ಈ ಭಾಗದಲ್ಲಿ ಅವರವರು ತಮ್ಮ ತಮ್ಮ ಅನುಭವದಿಂದಲೂ, ಬುದ್ಧಿವಂತಿಕೆಯಿಂದಲೂ ಉಚಿತವಾಗಿ ತೋರಿದಂತೆ ನಡೆದುಕೊಳ್ಳಬೇಕು. ಕೆಲಸಮಾಡಿ ಕಂದಿದ ನಮ್ಮ ಶರೀರಕ್ಕೆ ವಿಶ್ರಾಂತಿಯನ್ನು ಕೊಡತಕ್ಕ ನಿದ್ರೆಯ ವಿಷಯದಲ್ಲಿ ಸರ್ವಸಾಧಾರಣವಾದ ನಿಯಮವನ್ನು ಕಲ್ಪಿಸಿದರೂ, ಅದು ಗುಣಕಾರಿಯಾಗುವುದಿಲ್ಲ. ಆ ನಿಯಮದಿಂದ ನಡೆಯುವದಕ್ಕೆ ಎಲ್ಲರಿಗೂ ಸಾಧ್ಯವೂ ಅಲ್ಲ! ಜಪಾನ್ ಹೆಂಗಸರಲ್ಲಿ ಕೆಲವರಿಗೆ ಆರುಘಂಟೆಗಳ ಕಾಲದ ನಿದ್ರೆಯು ಸಾಕಾಗುವುದು. ಬೇರೆ ಕೆಲವು ಹೆಂಗಸರಿಗೆ 8-10 ಘಂಟೆಗಳ ಕಾಲ ಮಲಗಿದರೂ ಸಾಲದು. ತೆಳ್ಳಗಿರುವ ಹೆಂಗಸರಿಗೆ ಸಾಧಾರಣವಾಗಿ ನಿದ್ರೆ ಹೆಚ್ಚು. ಕೊನೇಪಕ್ಷ ಅವರಿಗೆ ದಿನವಹಿ 8-10 ಘಂಟೆಗಳ ಕಾಲ ನಿದ್ರೆಯಿಲ್ಲದಿದ್ದರೆ ಕಷ್ಟ. ಅನೇಕರಿಗೆ ದಿನವೊಂದಕ್ಕೆ ತಕ್ಕಷ್ಟು ನಿದ್ರೆಮಾಡಲು ಅವಕಾಶವು ಸಾಲದುದರಿಂದಲೇ, ಅವರ ದೇಹದಲ್ಲಿ ಅನೇಕ ತರದ ತೊಂದರೆಗಳು ತಲೆದೋರುತ್ತಿರುವುವು. ಉಬ್ಬಿದ ಮೈಯುಳ್ಳ ಹೆಂಗಸರಿಗೆ 6 ಗಂಟೆಗಳ ನಿದ್ರೆಯಾದರೆ ಸಾಕು. ಆದರೆ ಅಂತವರಿಗೆ ಅದರಲ್ಲಿ ತೃಪ್ತಿಯಿಲ್ಲದೆ ಇನ್ನೂ ಹೆಚ್ಚು ಕಾಲ ಮಲಗುತ್ತ ಬರುವುದರಿಂದ, ಅವರ ದೇಹವು ಮೇಲೆ ಮೇಲೆ ದಪ್ಪನಾಗಿ ಉಬ್ಬುವುದಕ್ಕೆ ಕಾರಣವಾಗುವುದು. ನಮ್ಮ ದೇಹವು ತೆಳ್ಳಗಿರುವುದಕ್ಕೂ, ದಪ್ಪನಾಗಿ ಉಬ್ಬುವುದಕ್ಕೂ, ನಾವು ಉಪಯೋಗಿಸುವ ಆಹಾರಭೇದಗಳೂ, ತೆಗೆದುಕೊಳ್ಳುವ ವಿಶ್ರಾಂತಿಯ ಪ್ರಮಾಣವೂ ಕಾರಣಗಳಾಗಿವೆ.

ಇದರಿಂದ ನಾವು ತಿಳಿಯಬೇಕಾದುದೇನೆಂದರೆ, ಬಹಳ ಉಬ್ಬಿನ ಮೈಯುಳ್ಳ ಹೆಂಗಸರು ಆಹಾರದಲ್ಲಿಯೂ ವಿಶ್ರಾಂತಿಯಲ್ಲಿಯೂ ಮಿತವಾಗಿರಬೇಕು. ತೆಳುವಾದ ಮೈಯುಳ್ಳ ಹೆಂಗಸರು ಹೆಚ್ಚು ಕಾಲ ವಿಶ್ರಾಂತಿ ತೆಗೆದುಕೊಂಡು ಜಿಡ್ಡಿನ ಅಂಶವುಳ್ಳ ಪದಾರ್ಥಗಳನ್ನು ಹೆಚ್ಚಾಗಿ ಭುಜಿಸಬೇಕು.

ಹೆಚ್ಚು ಕಾಲ ನಿದ್ರೆಮಾಡಬೇಕಾದ ಅವಶ್ಯಕತೆಯಿದ್ದಾಗ್ಯೂ ನಿದ್ರೆಮಾಡಲು ಅಭ್ಯಾಸವಿಲ್ಲದವರು, ಹಾಸಿಗೆಯ ಮೇಲೆ ಸುಮ್ಮನೆ ಅಂಗಾತನಾಗಿ ಮಲಗಿದ್ದರೂ ಅದರಲ್ಲಿ ಗುಣವುಂಟು. ಆದರೆ, ಬೆಳಗ್ಗೆ ಹಾಸಿಗೆಯಿಂದೇಳುವ ಕಾಲವನ್ನು ಮಾತ್ರ ಕ್ಲುಪ್ತವಾಗಿಟ್ಟುಕೊಳ್ಳಬೇಕು.

ಈ ನಿದ್ರೆಯ ವಿಚಾರದಲ್ಲಿ ಜಪಾನ್ ಜನರಿಂದ ನಾವು ಕಲಿಯಬಹುದಾದ ಒಂದು ಮುಖ್ಯ ವಿಚಾರವೇನೆಂದರೆ, ನಿದ್ರೆಯಿಂದ ತೂಕಡಿಸುವ ಸ್ಥಿತಿಯಲ್ಲಿ ಅವರು ಆಹಾರವನ್ನು ತೆಗೆದುಕೊಳ್ಳುವುದೇ ಇಲ್ಲ. ಮೈಗೆ ಆಯಾಸವಾಗಿದ್ದಾಗ ಕಣ್ಣಿಗೆ ನಿದ್ರೆಹತ್ತಿದ್ದರೂ ಅವರು ಹಾಸಿಗೆಯಮೇಲೆ ಮಲಗದೇ ಇರುವುದಿಲ್ಲ.

ಕಾಲಕಾಲಕ್ಕೆ ಸರಿಯಾಗಿ ನಿದ್ರಿಸುವ ಮಕ್ಕಳು ಒಳ್ಳೇ ದೇಹಾರೋಗ್ಯದಲ್ಲಿರುವುವು. ಕತ್ತಲಾಗುವಾಗಲೇ ಮಕ್ಕಳನ್ನು ಮಲಗಿಸಿ, ಬೆಳಗಾಗುವ ಮೊದಲು ಹಾಸಿಗೆಯಿಂದ ಎಬ್ಬಿಸುವ ವಾಡಿಕೆಯನ್ನು ಮಾಡಬೇಕು. ಇದು ಜಪಾನಿನವರ ಪದ್ಧತಿ. ಹೆಚ್ಚಾಗಿ ನಿದ್ರಿಸುವುದೇ ಆರೋಗ್ಯವುಳ್ಳ ಮಕ್ಕಳ ಲಕ್ಷಣವು. ನಿಶ್ಚಿಂತೆಯಿಂದ ಸುಖನಿದ್ರೆ ಮಾಡುವುದೂ ಮಕ್ಕಳ ಸ್ವಭಾವವು. ಜಪಾನಿನಲ್ಲಿ ನಿದ್ರಾಭಾವದಿಂದ ಬರುವ ವ್ಯಾಧಿಯು ಮಕ್ಕಳಿಗೆ ಬರುವುದು ಅಪೂರ್ವವು. ಏಕೆಂದರೆ, ಅವರು ನಿರ್ಬಂಧಪೂರ್ವಕವಾಗಿ ಕತ್ತಲೆಗೆ ಮೊದಲೇ ಮಕ್ಕಳನ್ನು ಮಲಗಿಸಿ ಬಿಡುವರು.

ದೊಡ್ಡವರಿಗಾದರೋ ನಾನಾವಿಧವಾದ ಕುಟುಂಬ ಚಿಂತೆಯಿಂದ ಸಕಾಲಕ್ಕೆ ನಿದ್ರೆಬರುವುದೇನೋ ಕಷ್ಟವೇ. ಹಾಗಿದ್ದರೂ ಅವರು ಕ್ಲುಪ್ತಕಾಲಕ್ಕೆ ಸರಿಯಾಗಿ ಹಾಸಿಗೆಯಲ್ಲಿ ಮಲಗಿ ಅಲ್ಲಿಯೇ ಹೊರಳಾಡುತ್ತಿರುವುದನ್ನು ವಾಡಿಕೆಯಲ್ಲಿ ತರುವುದು ಆವಶ್ಯವು. ಹಗಲುಹೊತ್ತಿನಲ್ಲಿ ಕೊನೇಪಕ್ಷ ಒಂದುಘಂಟೆಯ ಕಾಲವಾದರೂ ವಿಶ್ರಾಂತಿಯಿದ್ದರೆ ಅನುಕೂಲವುಂಟು.

ಜಪಾನೀ ಹೆಂಗಸರು, ಸುಖನಿದ್ರೆಯನ್ನನುಭವಿಸುತ್ತ ಹೆಚ್ಚು ಆರೋಗ್ಯವಂತರಾಗಿರುವುದಕ್ಕೆ ಮತ್ತೊಂದು ಮುಖ್ಯ ಕಾರಣವುಂಟು. ಅವರು ಕುಟುಂಬಕೃತ್ಯಗಳನ್ನು ಎಂದಿಗೂ ಅಸಡ್ಡೆಮಾಡುವವರಲ್ಲ. ಮನಸ್ಸಿಗೆ ಉಲ್ಲಾಸಕರವಾದ ಆಟಪಾಟಗಳಲ್ಲಿಯೂ ಅವರು ದಿನವಹಿ ಸ್ವಲ್ಪ ಹೊತ್ತನ್ನು ಕಳೆಯದೆ ಬಿಡುವುದಿಲ್ಲ. ಹಗಲೆಲ್ಲಾ ಅವರು ಗಂಡಸರ ಸಂಗಡ ಸೇರಿ ದುಡಿದು ಕಷ್ಟಪಟ್ಟು ಬಂದಮೇಲೆ, ಸಂಜೆಯಲ್ಲಿ ಮೈತೊಳೆದು ಸ್ನಾನಮಾಡಿ ದೇಹವನ್ನು ಶುಚಿಮಾಡಿಕೊಳ್ಳುವರು. ಶುಚಿಯಾದ ಉಡುಪುಗಳನ್ನುಟ್ಟುಕೊಂಡು ರಾತ್ರಿ ಭೋಜನವಾದಕೂಡಲೆ, ತಮ್ಮ ಮಿತ್ರವರ್ಗದೊಡನೆ ವಿನೋದಗೋಷ್ಠಿಯಲ್ಲಿ ಕೆಲವುಹೊತ್ತು ಕಳೆಯುವರು. ಆಗ ತಮ್ಮ ತಮ್ಮ ಪುರುಷರನ್ನೂ ಸಂಗಡ ಕರೆತರುವರು. ಬೇಸಗೆಕಾಲಗಳಲ್ಲಿ, ಅವರು ಬೀದಿಬೀದಿಗಳಲ್ಲೆಲ್ಲಾ ತಮ್ಮ ಮಿತ್ರರೊಡನೆ ಮಾತಾಡುತ್ತಿರುವುದನ್ನು ಹೇರಳವಾಗಿ ನೋಡಬಹುದು. ಬೀದಿಯಲ್ಲಿ ಹೊರಟಾಗ ಒಬ್ಬೊಬ್ಬರೂ ನಾನಾಬಣ್ಣದ ಕಾಗದದ ಲಾಂದ್ರಗಳನ್ನು ಹಿಡಿದುಕೊಂಡು, ಅದರ ಬೆಳಕಿನಲ್ಲಿ ಒಬ್ಬರೊಡನೊಬ್ಬರು ಸಂಭಾಷಿಸುತ್ತಿರುವುದನ್ನು ನೋಡುವುದು ಮನಸ್ಸಿಗೆ ಬಹಳ ವಿನೋದಕರವಾಗಿದೆ. ಜಪಾನೀ ಹೆಂಗಸರು ಒಬ್ಬರನ್ನೊಬ್ಬರು ಕಂಡಾಗ ಚೆನ್ನಾಗಿ ತಲೆಬಗ್ಗಿ ವಂದನೆಮಾಡುವ ಪದ್ಧತಿಯುಂಟು. ಒಬ್ಬ ಹೆಂಗಸು ತನ್ನ ಪರಿಚಿತೆಯೊಬ್ಬಳನ್ನು ಸಂಧಿಸಿ ಅವಳೊಡನೆ ಮಾತುಕಥೆಗಳನ್ನು ಮುಗಿಸಿಕೊಂಡು ಮುಂದೆ ಹೊರಡುವಷ್ಟರಲ್ಲಿ, ಕೊನೇಪಕ್ಷ 15-20 ಸಲಕ್ಕೆ ಕಡಿಮೆಯಿಲ್ಲದೆ ಈ ವಂದನಕಾರ್ಯವು ನಡೆಯಬೇಕಾಗುವುದು. ಬೀದಿಯಲ್ಲಿ ಹೊರಟಾಗ ಒಬ್ಬರು ಇಂತಹ ಅನೇಕ ಮಂದಿ ಸಖಿಯರನ್ನು ಕಂಡು ಸಂಭಾಷಿಸಬೇಕಾಗಿರುವುದರಿಂದ, ಒಬ್ಬೊಬ್ಬರ ಮುಂದೆಯೂ ಅನ್ಯೋನ್ಯ ವಂದನಕಾರ್ಯಗಳನ್ನು ಮುಗಿಸಿಕೊಂಡು ಹೋಗುವಷ್ಟರಲ್ಲಿ ಅವಳ ಮೈಗೆ ಎಷ್ಟರಮಟ್ಟಿನ ವ್ಯಾಯಾಮದ ಫಲವು ದೊರೆಯಬಹುದೆಂದು ಊಹಿಸಿನೋಡಿರಿ.

ಹೀಗೆ ಸುತ್ತಿಬಂದಮೇಲೆ, ತಮ್ಮ ಮನೆಯನ್ನು ಸೇರಿ ಒಡನೆಯೇ ಮಲಗುವರು. ಟೋಕಿಯೋನಗರದಲ್ಲಿ ರಾತ್ರಿ 10 ಘಂಟೆಗೆಮೇಲೆ ಬೀದಿಯಲ್ಲಿ ಹೆಂಗಸರನ್ನು ಕಾಣುವುದೇ ಅಪೂರ್ವವು. ಈ ಸಮಯದಲ್ಲಿ ಅಲ್ಲಿನ ಸ್ತ್ರೀಯರೆಲ್ಲರೂ ಎಳೆಮಕ್ಕಳ ಹಾಗೆ ಮೈಮರೆತು ನಿದ್ರಿಸುತ್ತಿರುವರು.

ಡಾಕ್ಟರುಗಳೂ, ಸಾಮಾನ್ಯಜನರೂ.

ಈ ಕಾಲದಲ್ಲಿ ವೈದ್ಯರಿಗೂ, ಇತರ ಸಾಮಾನ್ಯಜನಗಳಿಗೂ ಸಾಧಾರಣವಾಗಿ ಅನ್ಯೋನ್ಯಭಾವವಿರುವುದು ಕಡಿಮೆ! ಏಕೆಂದರೆ:—ಜನರ ಮನಸ್ಸಿನಲ್ಲಿ, ಡಾಕ್ಟರುಗಳು ತಮಗೆ ವ್ಯಾಧಿಯು ಬರುವುದನ್ನೇ ಕಾದಿರುವರೆಂದೂ ಅದರಿಂದ ಅವರು ಲಾಭವನ್ನು ಪಡೆಯುವುದಕ್ಕೆ ಆತುರಗೊಂಡಿರುವರೆಂದೂ ಭಾವಿಸುವರು. ಅದಕ್ಕೆ ತಕ್ಕಂತೆ ಡಾಕ್ಟರುಗಳಲ್ಲಿಯೂ ಕೆಲವರು, ತಾವು ನಡೆಯತಕ್ಕ ಮಾರ್ಗದಲ್ಲಿ ಜನಗಳಿಗೆ ಆ ತಪ್ಪುತಿಳುವಳಿಕೆಯು ಇನ್ನೂ ಹೆಚ್ಚುವಂತೆ ಮಾಡುವರೇ ಹೊರತು, ಜನಗಳ ಮನಸ್ಸಿನಿಂದ ಆ ಭ್ರಾಂತಿಯನ್ನು ನೀಗಿಸುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುವುದಿಲ್ಲ. ಕೆಲವು ವೈದ್ಯರು, ತಮ್ಮಲ್ಲಿ ಚಿಕಿತ್ಸೆಗಾಗಿ ಬಂದ ರೋಗಿಗಳಿಂದ ಆದಷ್ಟು ಹಣವನ್ನು ಸುಲಿಯುವುದು ತಮಗೆ ಅಧರ್ಮವಲ್ಲವೆಂದು ಭಾವಿಸಿ, ಯಾವಯಾವ ವಿಧದಿಂದ ಹಣವನ್ನು ಸಂಗ್ರಹಿಸಬಹುದೋ ಆಯಾ ವಿಧದಿಂದ ಹಣವನ್ನು ಸುಲಿಯುವರು. ವ್ಯಾಧಿಗಳು ಊರಲ್ಲಿ ಹೆಚ್ಚಬೇಕೆಂದು ಡಾಕ್ಟರುಗಳು ತಮ್ಮ ಬಾಯಿಂದ ಸ್ಪಷ್ಟವಾಗಿ ಹೇಳದಿದ್ದರೂ ಅವರ ಅಂತರಂಗವಾದ ಅಭಿಪ್ರಾಯವು ಹಾಗೆಯೇ ಇರಬೇಕೆಂದು ಜನರೆಲ್ಲರಿಗೂ ದೃಢವಾದ ತಿಳುವಳಿಕೆಯುಂಟು.

ಈ ವಿಧವಾದ ಸ್ಥಿತಿಗೆ ಜನಸಾಮಾನ್ಯದ ಅಜ್ಞತೆಯೂ ಸ್ವಲ್ಪಮಟ್ಟಿಗೆ ಕಾರಣವೆಂದು ಹೇಳಬೇಕಾಗಿದೆ. ಏಕೆಂದರೆ:—ಚಿಕಿತ್ಸೆ ಮಾಡಿದರೆ ಮಾತ್ರವೇ ಡಾಕ್ಟರಿಗೆ ನಾವು ಹಣವನ್ನು ಕೊಡಬೇಕೇ ಹೊರತು, ಸುಮ್ಮನೆ ಯಾವೂ ಕೊಡುವುದಿಲ್ಲ. ಮತ್ತು ಮನುಷ್ಯನಿಗೆ ರೋಗ ಬಂದರೆ ಮಾತ್ರ ಡಾಕ್ಟರಬಳಿಗೆ ಹೋಗುವರೇ ಹೊರತು, ರೋಗವಿಲ್ಲದವರು ಡಾಕ್ಟರಬಳಿಗೆ ಹೋಗಬೇಕಾದ ಅವಶ್ಯಕವಿಲ್ಲ. ಆದುದರಿಂದ ಜನಗಳು ಆರೋಗ್ಯವನ್ನು ಕಾಪಾಡಿಕೊಳ್ಳುವುದಾದರೆ, ಅವರಿಗೆ ಡಾಕ್ಟರ ಅವಶ್ಯಕತೆಯೇ ಇರುವುದಿಲ್ಲ. ಊರುಗಳಲ್ಲಿ ಶುಚಿತ್ವದ, ಮತ್ತು ಆರೋಗ್ಯದ ನಿಯಮಗಳನ್ನು ದೃಢವಾಗಿ ಹಿಡಿದು ನಡೆಯುವುದರಲ್ಲಿ ಡಾಕ್ಟರುಗಳ ವರಮಾನಕ್ಕೆ ಅಡ್ಡಿಯಾಗುವುದರಿಂದ, ಅವರು ಮೇಲ್ಕಂಡ ಆರೋಗ್ಯ ಶುಚಿತ್ವ ನಿಯಮಗಳಿಗೆ ಮನಃಪೂರ್ವಕವಾಗಿ ತಾವು ಪ್ರೋತ್ಸಾಹವನ್ನು ಕೊಡುವುದಕ್ಕೆ ಇಷ್ಟವಿಲ್ಲದೆ ತಟಸ್ಥರಾಗಿರಬಹುದು. ಆದರೆ ಜನಗಳು ಆ ವಿಷಯದಲ್ಲಿ ತಮ್ಮ ಎಚ್ಚರಿಕೆಯನ್ನು ಅಲ್ಪ ಬಿಡದಿದ್ದರೆ ಅದನ್ನು ತಪ್ಪಿಸುವುದಕ್ಕೆ ಮಾತ್ರ ಡಾಕ್ಟರು ಧೈರ್ಯದಿಂದ ಮುಂದೆ ಬರಲಾರರು.

ಮೇಲೆ ಹೇಳಿದಂತೆ ಡಾಕ್ಟರುಗಳಿಗೂ, ಜನಗಳಿಗೂ ಅನ್ಯೋನ್ಯವಾಗಿಲ್ಲದ ಸೌಹಾರ್ದವನ್ನು ಉಂಟುಮಾಡುವುದಕ್ಕೆ ಉತ್ತಮವಾದ ಮಾರ್ಗವೊಂದು ಆಚರಣೆಯಲ್ಲಿದೆ. ಅಮೇರಿಕಾದೇಶದ ಸಾಮ್ಯುಯಲ್. ಯಂ. ವಾಕ್ಲೈನ್ ಎಂಬವನೊಬ್ಬನು ತನಗೆ ಸಂವತ್ಸರಾಂತದವರೆಗೂ, ದೇಹದಲ್ಲಿ ವ್ಯಾಧಿಯೇನೂ ಬಾರದಂತೆ ನೋಡಿಕೊಂಡರೆ, ಆಗ ತಾನು ಈ ವರುಷದ ಕೊನೆಯಲ್ಲಿ ವರ್ಷಾಶನದಂತೆ ಕ್ಲುಪ್ತವಾದ ಒಂದು ಮೊತ್ತವನ್ನು ಕೊಡುವುದಾಗಿ ತನ್ನ ಡಾಕ್ಟರೊಡನೆ ಒಪ್ಪಂದಮಾಡಿಕೊಂಡನು. ಆ ಡಾಕ್ಟರು ವಾರಕ್ಕೆ ಒಂದೆರಡು ಸಾರಿ ಬಂದು, ಅವನ ದೇಹಸ್ಥಿತಿಯನ್ನು ಪರೀಕ್ಷಿಸಿ, ಏನಾದರೂ ಲೋಪವು ಕಂಡುಬರುವ ಹಾಗಿದ್ದರೆ ಎಚ್ಚರಿಕೆಕೊಟ್ಟು ಅದನ್ನು ತಪ್ಪಿಸುವುದಕ್ಕೆ ಉಪಾಯವನ್ನು ಹೇಳಿ ಹೋಗುವುದಾಗಿಯೂ, ನಡುವೆ ಎಂದಾದರೂ ಅವನು ಅಸ್ವಸ್ಥನಾಗಿ ಮಲಗಿದ್ದರೆ, ರೋಗದಲ್ಲಿ ನರಳುತಿದ್ದ ಕಾಲಪ್ರಮಾಣಕ್ಕೆ ತಕ್ಕಂತೆ, ಡಾಕ್ಟರಿಗೆ ಕೊಡುವ ವರ್ಷಾಶನದಲ್ಲಿ ಕಡಿಮೆಮಾಡುವುದಾಗಿಯೂ ಒಪ್ಪಂದದಲ್ಲಿ ಕಾಣಿಸಿತ್ತು.

ಹೀಗೆ ನಡೆಸಿಕೊಂಡು ಬಂದ ಅನುಭವದಮೇಲೆ ಆ ಮೆಕ್ಲೈನ್ ಎಂಬವನು ತನ್ನ 67 ನೇ ವರ್ಷದಲ್ಲಿ ತನ್ನ ಯೌವನಾರಂಭದಲ್ಲಿದ್ದುದಕ್ಕಿಂತ ಹೆಚ್ಚು ಬಲವೂ, ಚಟುವಟಿಕೆಯೂ, ದೇಹಪುಷ್ಟಿಯೂ ಉಳ್ಳವನಾಗಿ, ಮೊದಲಿಗಿಂತಲೂ ತನಗೆ ಕೆಲಸಮಾಡುವ ಸಾಮರ್ಥ್ಯವು ಹೆಚ್ಚಾಗಿತ್ತೆಂದೂ ಹೇಳಿರುವನು. ಅದರಂತೆಯೇ ಊರಿನ ಜನರೆಲ್ಲರಿಗೂ ಕೂಡ ಆತನು, ಇಪ್ಪತ್ತು ಅಥವಾ ಮೂವತ್ತು ಕುಟುಂಬಗಳು ಒಂದಾಗಿ ಸೇರಿ ಸಮರ್ಥರಾದ ಒಬ್ಬ ಡಾಕ್ಟರೊಡನೆ ಮೇಲ್ಕಂಡಂತೆ ಒಪ್ಪಂದವನ್ನು ಮಾಡಿಕೊಂಡರೆ ಕಷ್ಟವೂ, ನಷ್ಟವೂ ಬಹಳ ಮಟ್ಟಿಗೆ ಕಡಿಮೆಯಾಗುವುದೆಂದು ಬೋಧಿಸುತ್ತಾ ಬಂದನು. ಆ ಒಂದೊಂದು ಕುಟುಂಬದವರೂ ತಮ್ಮ ಯೋಗ್ಯತಾನುಸಾರವಾಗಿ ಕ್ಲುಪ್ತವಾದ ವರ್ಷಾಶನವನ್ನು ಕೊಡುವಂತೆ ಒಪ್ಪಂದವನ್ನು ಮಾಡಿಕೊಳ್ಳುವುದರಿಂದ, ಆ ಕುಟುಂಬದ ಮೊತ್ತವನ್ನು ಆರೋಗ್ಯದಿಂದ ಕಾಪಾಡಿಕೊಳ್ಳುವ ಭಾರವು ಡಾಕ್ಟರಮೇಲೆ ಬೀಳುವುದು. ಡಾಕ್ಟರು ಆಗಾಗ ಮನೆಗೆ ಬಂದು, ಕುಟುಂಬಕ್ಕೆ ಸೇರಿದವರೆಲ್ಲರ ಮೈಯನ್ನೂ ಪರೀಕ್ಷಿಸಿ ಅವಶ್ಯವಾದ ಔಷಧಗಳನ್ನಾಗಲಿ, ಆರೋಗ್ಯನಿಯಮವನ್ನು ಕುರಿತ ಸೂಚನೆಗಳನ್ನಾಗಲಿ ಕೊಟ್ಟು ಹೋಗುವನು. ಈ ಏರ್ಪಾಡಿನಿಂದ ಜನಗಳ ಆರೋಗ್ಯವು ಬಹಳ ಮಟ್ಟಿಗೆ ಅಭಿವೃದ್ಧಿಹೊಂದುವುದು. ಆದರೆ ಇದರಲ್ಲಿ ಕೆಲವು ಸಂಕಟಗಳೂ ಏರ್ಪಡಬಹುದು. ಆ ತೊಂದರೆಗಳನ್ನು ತಪ್ಪಿಸುವುದೇನೂ ಅಷ್ಟು ಕಷ್ಟವಿಲ್ಲ.

ಸುಮಾರು ಒಂದು ಸಾವಿರ ಜನಸಂಖ್ಯೆಯುಳ್ಳ ಅಲ್ಲಿನ ಒಂದು ಗ್ರಾಮದಲ್ಲಿ, ಒಂದೊಂದು ಕುಟುಂಬದವರೂ ವರ್ಷವೊಂದಕ್ಕೆ ಹದಿನೈದು ಡಾಲರುಗಳಂತೆ ಕೊಡುವುದಾಗಿ ಒಪ್ಪಂದ ಮಾಡಿಕೊಂಡು, ಒಬ್ಬ ಡಾಕ್ಟರನ್ನು ನಿಯಮಿಸಿದರು. ಕೆಲವು ಕಾಲದಮೇಲೆ ನೋಡಿದ್ದರಲ್ಲಿ ಈ ಒಪ್ಪಂದಕ್ಕೆ ಮೊದಲು ಅವರಿಂದ ಅದೇ ಡಾಕ್ಟರಿಗೆ ಸಲ್ಲುತಿದ್ದ ಬಿಲ್ಲಿನ ಹಣಕ್ಕಿಂತ ಈಗ ಸಲ್ಲುವ ಹಣವು ಬಹಳ ಕಡಿಮೆಯಾಗಿದ್ದುದಲ್ಲದೆ ಆ ಊರಿನ ಆರೋಗ್ಯಸ್ಥಿತಿಯು ಮೊದಲಿಗಿಂತ ಉತ್ತಮವಾಯಿತು. ಮರಣಸಂಖ್ಯೆಯೂ ಬಹಳ ಮಟ್ಟಿಗೆ ತಗ್ಗಿತು. ಈ ಮೇಲಿನ ಏರ್ಪಾಡು ಕೇವಲ ಬಡವರಿಗೆ ಸಾಧ್ಯವಿಲ್ಲದಿದ್ದರೂ ಕೊನೆಗೆ ಶ್ರೀಮಂತರೂ, ನಡುತರದ ಸ್ಥಿತಿಯಲ್ಲಿರುವಂತವರೂ ಈ ಮೇಲ್ಕಂಡ ಕಟ್ಟುಪಾಡಿನಂತೆ ನಡೆದರೆ, ಅದರಿಂದ ಡಾಕ್ಟರುಗಳ ಸಂಪಾದನೆಯು ಸ್ವಲ್ಪ ತಗ್ಗಬಹುದು. ಆದಗ್ಯೂ ಅವರಿಗೆ ಒಂದು ಸ್ಥಿರವಾದ ವರ್ಷಾಶನವು ಏರ್ಪಡುವುದಲ್ಲದೆ, ಲೋಕೋಪಕಾರ ಮಾಡಿದ ಪುಣ್ಯಕ್ಕೂ ಅವರು ಭಾಗಿಗಳಾಗುವರು. ಊರಿನ ಆರೋಗ್ಯವನ್ನು ಸರಿಯಾಗಿ ನೋಡಿಕೊಳ್ಳತಕ್ಕ ಭಾರವೂ ಅವರ ಮೇಲೆ ಬೀಳುವುದು. ಮೊದಲಿಂದಲೂ ಎಚ್ಚರ ತೆಗೆದುಕೊಳ್ಳುವುದರಲ್ಲಿ, ಒಂದುವೇಳೆ ಆಕಸ್ಮಾತ್ತಾಗಿ ವ್ಯಾಧಿಯು ಬಂದರೂ ಅದರಲ್ಲಿ ಅಷ್ಟು ಕ್ರೌರ್ಯವು ಇಲ್ಲದುದರಿಂದ ಆ ರೋಗವನ್ನು ಗುಣಪಡಿಸುವುದರಲ್ಲಿ ಡಾಕ್ಟರಿಗೆ ಅಷ್ಟು ಶ್ರಮವೂ ತೋರಲಾರದು.

ಕರ್ನಾಟಕಸ್ಥರು ಕಾರ್ಯೋನ್ಮುಖರಾಗಬೇಕು.

ವಿಜಯನಗರದ ಸಾಮ್ರಾಜ್ಯವು ಅಳಿಯುವ ಪೂರ್ವದ ಕರ್ನಾಟಕದ ಭರಭರಾಟೆಯನ್ನು ಓದಿಗರಿಸಿ ಆ ಮೇಲಿನ ನಮ್ಮ ಪ್ರಾಂತದ ಪ್ರಗತಿಯನ್ನು ನಿರೀಕ್ಷಿಸುವ ಪ್ರತಿಯೊಬ್ಬ ಕರ್ನಾಟಕಸ್ಥ ಬಂಧು ಭಗಿನಿಯರಿಗೆ ನಮ್ಮ ನಿದ್ರಾವಸ್ಥೆಯನ್ನು ಕುರಿತು ಅತ್ಯಂತ ವಿಷಾದವಾಗದಿರದು. ಬ್ರಿಟಿಶರ ಆಳಿಕವು ಹಿಂದುಸ್ಥಾನದಲ್ಲಿ ಸನ್ನ ಗಲಿಗಲಿಯಲ್ಲಿ ಒಳ್ಳೇ ನಿಶ್ಚಿತವಾಗಿ ಪ್ರಾರಂಭವಾದಮೇಲೆ, ಸುಮಾರು ಕಾಲು ಶತಮಾನದವರೆಗೆ ಇಂಗ್ಲಿಶರ ಸುಧಾರಣೆ ಸಂಸ್ಕೃತಿಗಳಿಗೆ ನಾವು ಬೆರಗಾಗಿ, ಅವರು ಮಾಡುವದೆಲ್ಲವೂ ಒಳಿತೆಂದು ಅವರ ಅನು

ಕರ್ನಾಟಕೀಯ ಮಹಾಶಕ್ತಿಯು ದ ಎಂದೆ ಸಾಧಾರಣವಾಗಿ ಗಲಭಿಸಿದ್ದ ರಾಷ್ಟ್ರೀಯ ಮಹಾಸಭೆಯು ಸ್ಥಾಪಿತವಾದಂದಿನಿಂದ ಮಾತ್ರ ನಮಗೆ ಸ್ವದೇಶ ಸ್ವಸಂಸ್ಕೃತಿ ಅಭಿಮಾನ ಮೊದಲಾದವುಗಳ ಅರಿವು ಹುಟ್ಟಿ ಆ ಮೇರೆಗೆ ನಾವ ಹಿಂದೂಸ್ಥಾನದಲ್ಲಿಯ ಬಹುತರ ಎಲ್ಲ ಪ್ರಾಂತೀಯರೂ ಸಮ್ಮ ಶಕ್ತ್ಯನುಸಾರವಾಗಿ ಕೆಲಸ ಮಾಡತೊಡಗಿದೆವು ಈ ಅರಿವು ಹುಟ್ಟಿ ಕೆಲಸ ಮಾಡುವದರಲ್ಲಿ ನಮ್ಮ ದೇಶದಲ್ಲಿಯ ಕೆಲಪ್ರಾಂತಗಳು ಹಿಂದುಳಿದವು ಕಾಲಮಾನದಿಂದ ನಮ್ಮ ಸ್ವಸಂಸ್ಕೃತಿ ಸ್ವಾಭಿಮಾನಗಳಿಗನುಸಾರವಾಗಿ ತಮ್ಮ ತಮ್ಮ ಪ್ರಗತಿಯನ್ನು ಹೆಚ್ಚಿಸುವ ಈ ಮೇಲಾಟದಲ್ಲಿ ಬಂಗಾಲ ಪ್ರಾಂತವು ಮುಂದೆ ಎದ್ದು ನಮ್ಮ ನೆರೆಯ ಪ್ರಾಂತವಾದ ಮಹಾರಾಷ್ಟ್ರವಾದರೂ ವಿಷ್ಣು ಶಾಸ್ತ್ರಿ ಚಿಪಳೂಣಕರ ನ್ಯಾಯಮೂರ್ತಿ ರಾನಡೆ ಲೋಕಮಾನ್ಯ ಟಿಳಕ ಹಾಗೂ ಗೋಪಾಳಕೃಷ್ಣ ಗೋಖಲೆ ಮುಂತಾದ ವಿದ್ವನ್ಮಣಿ ಹಾಗೂ ಕಾರ್ಯತತ್ಪರರಾದ ಮಹಾಪುರುಷರ ಪ್ರಭಾವದ ಕೆಳಗೆ ಬಂಗಾಲದ ಕೂಡಲೇ ತನ್ನ ಸಾಮಾಜಿಕ ರಾಜಕೀಯ ನೈತಿಕ ಸುಧಾರಣೆಗಳ ಮೇಲಾಟದಲ್ಲಿ ಹೆಣಗಾಡತೊಡಗಿತು ಉತ್ತರಹಿಂದೂಸ್ಥಾನದ ಮುಖ್ಯ ಪ್ರಾಂತಗಳೂ ದಕ್ಷಿಣದಲ್ಲಿಯ ಮದ್ರಾಸ ಆಂಧ್ರಗಳೂ ಇದೇ ಅಖಿಲ ಹಿಂದುಸ್ಥಾನದಲ್ಲಿಯೂ ಹಾಯ್ದು ತೆರೆಯ ಸೊಂಕನ್ನು ತಗಲಿಸಿಕೊಂಡು, ತಮ್ಮ ತಮ್ಮ ಸಾಮರ್ಥ್ಯಾನುಸಾರವಾಗಿ ಸಮಾಜದ ಎಲ್ಲ ಅಂಗಗಳಲ್ಲಿಯೂ ಪ್ರಗತಿಯನ್ನು ಮಾಡಲಾರಂಭಿಸಿದವು ಈ ಪ್ರಗತಿಯ ತೆರೆಯಲ್ಲಿ ನಮ್ಮ ಕರ್ನಾಟಕವು ಮಾತ್ರ ಹೇಗೆ ಅಲಿಪ್ತವಾಗಿ ಉಳಿಯಿತೋ ತೋರದಂತಾಗಿದೆ ಅಥವಾ ಕರ್ನಾಟಕವು ಹಿಂದುಳಿಯಲು ಕಾರಣಗಳಿದ್ದರೂ ನಮ್ಮಲ್ಲಿಯ ಬೇರೆ ಬೇರೆ ಅಂಗಗಳಲ್ಲಿಯ ಪ್ರಗತಿಯಾಗದಿದ್ದುದಕ್ಕೆ ಅವು ಸಮಾಧಾನವಾಗಲಾರವು ವಿಶೇಷವಾಗಿ ಮಹಾರಾಷ್ಟ್ರ ಬಂಗಾಳಗಳಲ್ಲಿ ಆದ ಪ್ರಗತಿಯ ಮೂಲ ಗುಟ್ಟೆಂದರೆ ಆ ಪ್ರಾಂತಗಳಲ್ಲಿಯ ಸ್ವಾಭಿಮಾನ ಹಾಗೂ ಕಾರ್ಯತತ್ಪರತೆಗಳಿಂದುಂಟಾದ ಪ್ರತಿಯೊಬ್ಬ ಪ್ರಾಂತೀಯ ಬಂಧುಭಗಿನಿಯಲ್ಲಿಯೂ, ತನ್ನ ಸಾಮರ್ಥ್ಯವಿದ್ದಷ್ಟರ ಮಟ್ಟಿಗಾದರೂ ನನ್ನ ಪ್ರಾಂತದ ಅನೇಕ ಅಂಗಗಳಲ್ಲಿಯ ಏಳ್ಗೆಗೆ ನಾನು ಪ್ರಯತ್ನಪಡುವೆನೆಂಬ ಭಾವವೇ ಎಂದು ಹೇಳಬೇಕಾಗಿದೆ ಮತ್ತು ಈ ಭಾವವಿಲ್ಲದ ವಿನಃ ಯಾವ ಪ್ರಾಂತದ ಅಥವಾ ದೇಶದ ಏಳ್ಗೆಯೂ ಶಕ್ಯವಲ್ಲೆಂದು ಬೇರೆ ಹೇಳಬೇಕಾಗಿಲ್ಲ ಪಾಶ್ಚಾತ್ಯ ರಾಷ್ಟ್ರಗಳಲ್ಲಿಯ ಕಣ್ಣು ಕುಕ್ಕಿಸುವಂಥ ಆಶ್ಚರ್ಯ ಪ್ರಗತಿಯ ಕಾರಣವಾದರೂ ಇದೇ ಆಗಿದೆ ಆ ರಾಷ್ಟ್ರಗಳಲ್ಲಿ ತಮ್ಮ ತಮ್ಮ ಭೌಗೋಲಿಕ ಸ್ಥಿತಿ ಹಾಗೂ ಅದರಿಂದುಂಟಾದ ಅವರ ಭಿನ್ನ ಸಂಸ್ಕೃತಿಗತಿಗಳಿಗನುಸಾರವಾಗಿ ಭಿನ್ನ ಸುಧಾರಣೆಗಳು ನಡೆದಿದ್ದರೂ, ಆ ಸುಧಾರಣೆಗಳು ಒದಗಿ ಬರಬೇಕಾದ ಮೂಲ ಭಾವವೂ ಕಾರಣವೂ ಮಾತ್ರ ಜಗತ್ತಿನಲ್ಲಿಯ ಯಾವ ದೇಶದಲ್ಲಿಯಾದರೂ ಒಂದೇಯಾಗಿರುವದು ಸರ್ವಸಿದ್ಧವಾಗಿ ಮಾತು ಆ ಪ್ರಾಂತ ಅಥವಾ ದೇಶದ ಪ್ರತಿಯೊಬ್ಬ ಪುರುಷ ಸ್ತ್ರೀಯರೂ ಅಲ್ಲಿ ಅಲ್ಲಿಯ ಪ್ರಗತಿಗೆ ತಮ್ಮ ತಮ್ಮ ಕೈಲಾದ ಮಟ್ಟಿಗೆ ನೆರವಾಗದ ಹೊರತು ಆ ದೇಶ ಅಥವಾ ಪ್ರಾಂತದ ಪ್ರಗತಿಯು ಆ ಇಡೀ ಪ್ರಾಂತದ ಪ್ರಗತಿಯೆಂದಾದರೂ ಹೇಗೆ ಹೇಳಬೇಕು? ಹಾಗೂ ರಾಷ್ಟ್ರದ ಬೇರೆಬೇರೆ ವ್ಯಕ್ತಿ ಅಥವಾ ವ್ಯಕ್ತಿ ಸಮೂಹಗಳಲ್ಲಿ ಅವರವರಿಗೆ ವಿಶಿಷ್ಟವಾದ ಪ್ರೇರಕ ಗುಣಗಳಿರುತ್ತಿರಲು ಆ ಜನಾಂಗದ ಕೆಲವು ವ್ಯಕ್ತಿಗಳಿಂದಲೇ ಅಲ್ಲಿಯ ಪ್ರಗತಿಯು ಆಗುವದಾದರೂ ಹೇಗೆ? ಒಂದುವೇಳೆ ಪ್ರಗತಿಯೆನಿಸುವ ಯಾವದೊಂದು ಕಾರ್ಯವು ಆದರೂ ಅದು ನಿಜವಾದ ಪ್ರಗತಿಯಾಗಲಾರದೆಂಬುದು ಯಾವ ವಿಚಾರವಂತನಿಗೂ ತಿಳಿಯತಕ್ಕುದು ಒಂದು ರಾಷ್ಟ್ರ ಇಲ್ಲವೆ ಜನಾಂಗಕ್ಕೆ ಅನೇಕ ಅಂಗಗಳಿದ್ದು ಆಯಾ ಅಂಗಗಳಲ್ಲಿಯ ಪ್ರಗತಿಯಾಗಲು ಆ ಜನಾಂಗದಲ್ಲಿಯ ಎಲ್ಲ ವ್ಯಕ್ತಿಗಳೂ ತಮ್ಮ ತಮ್ಮ ಗುಣಗಳಿಗನುಸಾರವಾಗಿ ಸಹಾಯ ಮಾಡಿದರೇ ಆ ಜನಾಂಗದ ಎಲ್ಲ ಅಂಗಗಳನ್ನೂ ಒಳಗೊಂಡ ಪ್ರಗತಿಯು ಸಾಧಿಸುವದು ಶಕ್ಯವು ಈ ಮಾತನ್ನು ಕರ್ನಾಟಕಸ್ಥರು ಎಷ್ಟು ನೆನೆದರೂ ಕಮಿಯೇ!

ನಮ್ಮ ಪ್ರಾಂತದಲ್ಲಿ, ಕರ್ನಾಟಕದ ಬೇರೆಬೇರೆ ಅಂಗಗಳ ಉರ್ಜಿತಾವಸ್ಥೆಗಾಗಿ ಕೆಲಸ ಮಾಡುವವರು ತೀರ ಕಡಿಮೆ ಜನರಿದ್ದಾರೆ ಸಮಾಜದ ಬೇರೆಬೇರೆ ಅಂಗಗಳ ಪ್ರಗತಿಯೂ ಪ್ರಾಂತೀಯ ಉನ್ನತಿಗಾಗಿಯ ಆ ಪ್ರಗತಿಯ ಮಹತ್ವವೂ ನಮ್ಮಲ್ಲಿಯ ಸ್ವಲ್ಪ ಜನರಿಗೇ ತೋರುತ್ತದೆಂದು ಕಾಣುತ್ತದೆ ಸಮಾಜ ಸುಧಾರಣೆಯ ಸಲುವಾಗಿ ಅವಶ್ಯಕವಿದ್ದ ಭಿನ್ನ ಭಿನ್ನ ಸಂಸ್ಥೆಗಳು ನಮ್ಮಲ್ಲಿ ಈ ವರೆಗೂ ತಲೆದೋರುವದಿಲ್ಲವಲ್ಲ! ಇಂಥ ಸಂಸ್ಥೆಗಳು ನಡೆಯುವದಕ್ಕೆ ಅವಶ್ಯಕವಾದ ನಿರಾಲಸ್ಯ ಕಾರ್ಯತತ್ಪರತೆ ಹಾಗೂ ಕಾರ್ಯದ ಮಹತ್ವದ ಅರಿವು ಇವುಗಳಾದರೂ ಕಡಿಮೆಯೇ ಇವೆ ಆದರೆ ಕರ್ನಾಟಕವು ಉರ್ಜಿತಾವಸ್ಥೆಯನ್ನು ಹೊಂದಬೇಕಲ್ಲವೇ? ನಮ್ಮ ಪ್ರಾಂತವು ಅಖಿಲ ಹಿಂದುಸ್ಥಾನದ ಪ್ರಗತಿಯಲ್ಲಿ ಹಿಂದುಳಿದು ಭಾರತಮಾತೆಯ ಉರ್ಜಿತಾವಸ್ಥೆಗೆ ಕಾಲುತೊಡಕಾಗಬಾರದಷ್ಟೇ? ನಮ್ಮಲ್ಲಿಯ ಅಜ್ಞಾನವೂ ಅಂಧಶ್ರದ್ಧೆಯೂ ಅಳಿಯಕೂಡದೇ? ಹಿಂದುಸ್ಥಾನದ ಹಿಂದಿನ ಎಲ್ಲ ಪ್ರಾಂತಗಳಲ್ಲಿಯಂತೆಯಾದರೂ ವಿಶೇಷವಾಗಿ ಈ ಪ್ರಾಂತದಲ್ಲಿಯ ತುದ್ಧ ಕಪ್ಪುತಿಳುವಳಿಕೆಗಳಿಂದುಂಟಾದ ಅನೇಕವಾದ ಸಾಮಾಜಿಕ ರಾಜಕೀಯ ನೈತಿಕ ನಿರ್ಬಂಧನೆಗಳು ಇಲ್ಲದಂತಾಗಿ ನಮ್ಮಲ್ಲಿಯ ವಿದ್ಯಾಪ್ರಸಾರವು ಬೆಳೆದು, ನಿಜವಾದ ಮಾನಸಿಕ ಉನ್ನತಿಯುಂಟಾಗಬೇಕಾದರೆ ಕರ್ನಾಟಕಸ್ಥರಲ್ಲಿಯ ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಅನುಗುಣವಾದ ಕರ್ನಾಟಕದ ಉರ್ಜಿತಾವಸ್ಥೆಗೆ ಕಾರಣವಾಗುವ ಕಾರ್ಯವನ್ನು ತನ್ನ ಶಕ್ತಿಯ ಮಟ್ಟಿಗೆ ಮಾಡಲು ಟೊಂಕಕಟ್ಟಬಾರದೇ? ಇಂಥ ಸಂದರ್ಭದಲ್ಲಿ ಈಗಲೇ ನಮ್ಮ ಕೈಯಲ್ಲಿ ಬಿದ್ದ ಪುಣೆಯ ಭಾರತ ಸೇವಕಸಂಘ (Servants of India Society) ದ ಕಳೆದ ಸುಮಾರು ೬ ವರ್ಷಗಳ ಕಾರ್ಯದ ಅಹವಾಲವಾದರೂ ಕರ್ನಾಟಕಸ್ಥರು ಮನನ ಮಾಡುವಂತಹದಿದೆ ಭಾರತ ಸೇವಕ ಸಂಘದವರು ಸಮಾಜದ ಎಲ್ಲ ಅಂಗಗಳ ಪ್ರಗತಿಗಾಗಿಯೂ, ಸಾಹಸಪಡುತ್ತಿರುವದು ಕೌತುಕಾಸ್ಪದವಾಗಿದೆ ಈ ಸಂಘದ ಸಭಾಸದರಲ್ಲಿಯ, ಶ್ರೀ ದೇವಧರರು ಪುಣೆಯ ಸೇವಾಸದನದ ಸಲುವಾಗಿ ಸೂತಿಕಾಗೃಹ ಹಾಗೂ ಮಕ್ಕಳ ಆರೋಗ್ಯಗಳ ಸಲುವಾಗಿ ಮಾಡಿದ ಪ್ರಯತ್ನಗಳೂ ಶ್ರೀ. ಠಕ್ಕರರೆಂಬವರು ಗುಜರಾಥದಲ್ಲಿಯ ಪಂಚಮಹಾಲದ ಭಿಲ್ಲರಲ್ಲಿ ಐದು ವಿಭಾಗಗಳನ್ನಾಗಿ ಮಾಡಿಕೊಂಡು ಪ್ರತಿಯೊಂದು ವಿಭಾಗದಲ್ಲಿಯೂ ಒಂದು ಪಾಠಶಾಲೆ, ಒಂದು ಔಷಧಾಲಯ ಪ್ರಾಥಮಿಕ ವರ್ಗದ ವಿದ್ಯಾರ್ಥಿಗಳಿಗಾಗಿ ಒಂದು ಪುಕ್ಕಟೆಯಾದ ಭೋಜನಗೃಹ ಮೊದಲಾದವುಗಳಿಂದ ಅವರಲ್ಲಿ ಸಹಕಾರಿತೆಯ ಪ್ರಚಾರವಾಗಿ ಮದ್ಯ ಸೇವನೆಯನ್ನು ಹೊರದೂಡುವ ಪ್ರಯತ್ನಗಳೂ, ಶ್ರೀ ಚಿತಾಲಿಯಾ ಎಂಬವರು ಮುಂಬಯಿಯಲ್ಲಿಯ ನಮ್ಮ ಭಗಿನಿಯರಲ್ಲಿ ವಿದ್ಯಾಪ್ರಸಾರಣೆಗಾಗಿ ಪ್ರಯತ್ನ ಪಡುತ್ತಿರುವದೂ, ಮದ್ರಾಸ ಸಂಘದವರು ಮಜ್ದೂರರ ಉನ್ನತಿಗಾಗಿ ಮಾಡುವ ಪ್ರಯತ್ನಗಳೂ ನಿಜವಾಗಿಯೂ ಅನುಕರಣೀಯವಾಗಿವೆ ಸಂಘದವರು ಪಿಡುಗುಗಳಲ್ಲಿಯೂ ಬರಗಳಲ್ಲಿಯೂ ಮಲಬಾರದಲ್ಲಿಯ ಮಾಪಿಳ್ಳೆ ಜನರ ಬಂಡು ಮುಂತಾದವುಗಳಲ್ಲಿಯೂ ನಿಸ್ವಾರ್ಥವಾಗಿ ದೇಶಕಲ್ಯಾಣವನ್ನು ಮಾಡುವದೂ ಅನುಕರಣೀಯವಲ್ಲದೆ ಮತ್ತೇನು? ಸಂಘದವರು ತಮ್ಮ ಮತಪ್ರಚಾರಣೆಗಾಗಿ ೩ ಇಂಗ್ಲಿಷ ವಾರಪತ್ರಗಳನ್ನೂ ಒಂದು ಮರಾಠೀ ದೈನಿಕವನ್ನೂ ಹೊರಡಿಸುತ್ತಿದ್ದಾರೆ ಇದೆಲ್ಲವೂ ಸಾಮಾಜಿಕ ಕಾರ್ಯವೇ ಆದರೂ, ಕರ್ನಾಟಕಸ್ಥರು ಇದರಿಂದ ಕಲಿಯಬೇಕಾದ ಪಾಠವನ್ನು ಕಲಿತು ಕರ್ನಾಟಕ ಮಾತೆಯ ರಾಜಕೀಯ ನೈತಿಕ ಉನ್ನತಿಗಾಗಿಯೂ ಯಥಾಶಕ್ತಿ ಪ್ರಯತ್ನಪಡುವೆವೆಂದು ಆಣೆಯನ್ನು ಕೊಡಬಾರದೇ?

ನಮ್ಮ ಪ್ರಾಂತದಲ್ಲಿ ರಾಜಕೀಯ ಕಾರ್ಯವನ್ನು ಮಾಡಬೇಕಾದುದನ್ನು ಒದಗಿಸಿದರೂ ಭಾಷಾಸೇವೆ, ಸಮಾಜಸೇವೆಗಳ ಅವಶ್ಯಕತೆಯನ್ನು ಯಾರಾದರೂ ಕಂಡು ಹಿಡಿಯಬಹುದು ಧಾರವಾಡದಲ್ಲಿಯ ವಿದ್ಯಾವರ್ಧಕ ಸಂಘದ ಕಾರ್ಯವು ಕೆಲಸಗಾರರಿಲ್ಲೆಂದು ಹಿಂದುಳಿದಿದೆ ಇಲ್ಲಿಯ ಮಹಿಳಾ ವಿದ್ಯಾಲಯವೂ ಕಾರ್ಯವಾಹಕರ ತುಟಾಗ್ರತೆಯಿಂದಲೇ ಮುರಿದು ಬೀಳುವ ಸಂಭವವಿದೆ ಕರ್ನಾಟಕ ಪ್ರಾಂತದಲ್ಲಿ ಒಂದು ಅನಾಥ ಗೃಹದ ಅವಶ್ಯತೆಯಿಲ್ಲವೇ? ಇವೇ ಮುಂತಾದ ಉದಾಹರಣೆಗಳನ್ನು ಎಷ್ಟಾದರೂ ಹೇಳಬಹುದು ಇಂಥ ಸಾಮಾಜಿಕ ಶೈಕ್ಷಣಿಕ ಕಾರ್ಯದ ಅವಶ್ಯಕತೆಯು ಕರ್ನಾಟಕದ ಪ್ರತಿಯೊಂದು ಹಳ್ಳಿ ಪಟ್ಟಣಗಳಲ್ಲಿಯೂ ಇರುವದು ಸಹಜವು ರಾಜಕೀಯ ಕಾರ್ಯವನ್ನು ಮಾಡಲಾರದ ಕರ್ನಾಟಕಾಭಿಮಾನಿಗಳು ಇಂಥ ರಾಜಕೀಯವಲ್ಲದ ಸಂದರ್ಭದಲ್ಲಿಯಾದರೂ ತಮ್ಮ ತನುಮನಧನಗಳಿಂದ ಕರ್ನಾಟಕದ ಉನ್ನತಿಗಾಗಿ ಮನಃಪೂರ್ವಕವಾಗಿ ಪ್ರಯತ್ನ ಮಾಡಬೇಕೆಂಬುದೇ ಅಖಿಲ ಕರ್ನಾಟಕಸ್ಥರಿಗೂ ನಮ್ಮ ವಿನಯ ಪ್ರಾರ್ಥನೆಯು

"ಕರ್ಮವೀರ"

ಮನುಷ್ಯರಿಗೆ ಹಾನಿಕರಗಳಾದ ಕ್ರಿಮಿಕೀಟಗಳು.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಮನೆಯ ನೊಣ

ಈ ಅಲ್ಪವಾದ ಪೀಡೆಯನ್ನುಂಟುಮಾಡುವ ಪ್ರಾಣಿಗಳನ್ನು ಎಲ್ಲರೂ ಬಲ್ಲರು ಇವು ಯುಗಯುಗಾಂತರಗಳಿಂದಲೂ ಇವು ಮನುಷ್ಯನ ಸಹವಾಸದಲ್ಲೇ ಇರುವಂಥವು

ಹೆಣ್ಣು ನೊಣವು ದಿನಕ್ಕೆ ೧೨೦-೫೦ ರಂತೆ ತತ್ತಿಗಳನ್ನಿಡುವುದು ತನ್ನ ಜೀವಕಾಲದಲ್ಲಿ ಒಂದು ನೊಣವು ನಾಲ್ಕು ಸಾರಿ ತತ್ತಿಗಳನ್ನಿಡಬಹುದು ಒಂದೊಂದು ನೊಣವು ಸರಾಸರಿಯಾಗಿ ೧೨೦ ತತ್ತಿಗಳನ್ನೇ ಇಟ್ಟರೂ, ಒಂದು ವರ್ಷದೊಳಗೆ (ಅವುಗಳ ಜಾತಿಯ ಆದ ಕೋಳಿ, ಗುಬ್ಬಚ್ಚಿ ಹಲ್ಲಿ, ಕಪ್ಪೆ ಮುಂತಾದವು ಇವನ್ನು ರುಚಿಕರವಾದ ಆಹಾರವೆಂದು ಕೊಲ್ಲದಿದ್ದಲ್ಲಿ) ಸುಮಾರು ಐದು ಸಹಸ್ರ ಕೋಟಿ ನೊಣಗಳು ಹುಟ್ಟುವಂತಾಗುವುದೆಂದು ಸುಲಭವಾಗಿ ಲೆಕ್ಕ ಹಾಕಿ ಹೇಳಬಹುದು ತತ್ತಿಗಳೊಡೆದು ಮರಿಗಳು ಹೊರಡುವಾಗಲೇ, ಅವುಗಳಿಗೆ ಯೋಗ್ಯವಾದ ಆಹಾರವು ಎಲ್ಲಿ ಸಿಕ್ಕುವುದೋ ಅಂಥ ಸ್ಥಳಗಳಲ್ಲೇ ತತ್ತಿಗಳು ಇಡಲ್ಪಡುವುವು ಮರಿಗಳಾದರೋ ಸಸ್ಯಾಹಾರಿಗಳು ಅಮುಕ್ತಾಂಶ ಕೊಳೆವ ಸಸ್ಯಪದಾರ್ಥಗಳಲ್ಲಿಯೇ ತಾಯಿಯು ತತ್ತಿಗಳನ್ನಿಡುವುದು, ಗೊಬ್ಬರದ ರಾಶಿ, ಕುದುರೆ ಜಾನುವಾರುಗಳು, ಆಡು, ಕುರಿ, ಕೋಳಿ, ಮನುಷ್ಯ ಮುಂತಾದವರ ಮಲಮೂತ್ರಗಳು, ಕೊಳೆ ಪದಾರ್ಥಗಳು ಹುಲ್ಲು ಹಂದಲು ಸಿಪ್ಪೆ ಮಾವು, ಬಾಳೆ ಮುಂತಾದ ಹಣ್ಣುಗಳು, ಇವೆಲ್ಲಾ ತತ್ತಿಗಳನ್ನಿಡುವ ಸ್ಥಾನಗಳು ತತ್ತಿಯು ಬೇಸಗೆಯಲ್ಲಾದರೆ ಒಂದೇ ದಿನದಲ್ಲೂ ಚಳಿಗಾಲದಲ್ಲಾದರೆ ಎರಡು ದಿನಗಳಲ್ಲೂ ಒಡೆದು ಮರಿಹೊರಡುವುದು ಹೊರಟ ಕ್ರಿಮಿಗಳ ಎರಡು ದಿನಗಳಲ್ಲೂ ಒಡೆದು ಮರಿ ಹೊರಡುವದು ಹೊರಟ ಕ್ರಿಮಿಗಳು 2 ದಿನಗಳೊಳಗೆ ಬೇಕಾದಂತ ಗಬಗಬನೆ ತಿಂದು ದೇಹದಲ್ಲಿ ನಾನಾಬಗೆಯ ಮಾರ್ಪಾಟುಗಳನ್ನು ಹೊಂದಿ, ಮೂರು ನಾಲ್ಕು ದಿನಗಳು ಬಳೆದು ಕೋಶಾವಸ್ಥೆಯಲ್ಲಿ ಆಲಸ್ಯವನ್ನು ಹೊಂದಿ, ಮೆಲ್ಲನೆ ಹಳದಿ ಅಥವಾ ಕಡುಕಂದುಬಣ್ಣವನ್ನು ತಳೆವುವು ಸಗಣಿಯ ಅಥವಾ ಗೊಬ್ಬರದ ರಾಶಿಯನ್ನು ಅಡಿಮಗುಚಿದರೆ, ಹುಳುಗಳಾಗಿ ಕಾಣುವಂಥವು ನೊಣಗಳ ಮರಿಗಳೇ ಅಲ್ಲದೆ ಬೇರೆ ಅಲ್ಲ ಕೋಶದಿಂದ ಹೊರಟ ನೊಣವು ಮೊದಲು ತಾನು ಹುಟ್ಟಿದಲ್ಲಿರುವ ಮಣ್ಣಿನ ಅಥವಾ ಗೊಬ್ಬರದ ರಾಶಿಯಲ್ಲೇ ಮುಚ್ಚಲ್ಪಟ್ಟು ಕ್ರಮೇಣ ಮೆಲ್ಲನೆ ಮೇಲಕ್ಕೆ ಬಂದು ಅಲ್ಲಿಂದ ಹಾರಿಹೋಗುವುದು ವಾಂತಿ ಭೇದಿಯಿಂದ ಪೀಡಿತನಾದ ರೋಗಿಯ ವಾಕರಿಕೆ, ಮಲ, ಮುಂತಾದುವನ್ನೂ ಪೇಟೆಯಲ್ಲಿ ಸಿಕ್ಕುವ ಮಿಠಾಯಿ ಮೊದಲಾದ ಆಹಾರ ಪದಾರ್ಥಗಳನ್ನೂ ಇದು ಉಣ್ಣುತ್ತಿರುವುದು ಇದರಿಂದ ಒಂದು ಬಗೆಯ ಪದಾರ್ಥದೊಳಗಿಂದ ಮತ್ತೊಂದುಬಗೆಯ ಪದಾರ್ಥಕ್ಕೆ ಅದು ರೋಗಬೀಜಗಳನ್ನು ಕೊಂಡೊಯ್ಯುವುದಾದ ಕಾರಣ, ಜನಗಳಿಗೆ ಇಲ್ಲದ ರೋಗ ಬರುವುದು

ಆದುದರಿಂದ ನೊಣವು ಕುಳಿತುಕೊಂಡ ಯಾವ ಆಹಾರ ಪದಾರ್ಥವಾದರೂ ಮನುಷ್ಯರಿಗೆ ಹಾನಿಯನ್ನುಂಟುಮಾಡುವುದು ನೊಣದ ಪಾದದಲ್ಲಿ ಇರುವ ಮೃದುವಾದ ಭಾಗವು ಇಂಥ ಹಾನಿಕರವಾದ ಪದಾರ್ಥಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಒಯ್ದು ಅಂಟಿಸಿ ಹರಡಿಸುವುದು. ಈ ರೀತಿಯಾಗಿ, ಮನೆಯ ನೊಣವು ಹರಡಿಸುವ ರೋಗಗಳಲ್ಲಿ ಸನ್ನಿಪಾತ, ವಾಂತಿಭೇದಿ, ಆಮಶಂಕೆ, ಅತಿಸಾರ, ಕ್ಷಯ, ಬಗೆಬಗೆಯ ಹುಣ್ಣುಗಳು, ಮತ್ತು ಕಣ್ಣಿನ ರೋಗಗಳು ಮುಖ್ಯವಾದುವು —

ದೇಹದ ಮತ್ತು ಊರಿನ ನಿರ್ಮಲತೆಯೇ, ನೊಣಗಳು ನಿರ್ಮೂಲ ಹೊಂದುವಂತೆ ಮಾಡುವ ಸುಲಭೋಪಾಯವು ಶುಚಿತ್ವವಿರುವಲ್ಲಿ ನೊಣಕ್ಕೆ ತತ್ತಿಯಿಟ್ಟು ಮರಿಮಾಡುವುದಕ್ಕೆ ಅವಕಾಶವೇ ಇರಲಾರದು ಎಲ್ಲರೂ ಈ ರೀತಿಯಲ್ಲಿ ಶುಚಿತ್ವದ ಆದರ್ಶವನ್ನು ಅಭ್ಯಾಸ ಮಾಡುವವರಲ್ಲವಾದ ಕಾರಣ ನೊಣಗಳನ್ನು ಅಣಗಿಸಲು ಬೇರೆ ಉಪಾಯಗಳಲ್ಲಿ ಮುಖ್ಯವಾದುವು ಯಾವುವೆಂದರೆ —

(1) ಕಿಟಕಿಯ ದ್ವಾರಗಳನ್ನು ಅಡ್ಡಕಟ್ಟುವುದು, ಕಿಟಕಿಗಳಿಗೆ ನೀಲ ಬಣ್ಣದ ಗಾಜನ್ನು ಇಡುವುದರಿಂದ ನೀಲ ಬಣ್ಣದ ಬೆಳಕನ್ನು ನೋಡಲು ನೊಣವು ಮೆಚ್ಚುವುದಿಲ್ಲ

(2) ನೊಣಗಳಿಗಾಗಿ ವಿಷವನ್ನು ಸಿಹಿಯೊಡನೆ ಬೆರಸಿ ಕಾಗದಗಳಿಗೆ ಲೇಪಿಸುವುದರಿಂದ, ನೊಣಗಳು ಸಿಹಿ ಪದಾರ್ಥವನ್ನು ತಿನ್ನುವುದಕ್ಕೆ ಬಂದು, ವಿಷವನ್ನು ತಿಂದು ಸಾಯುವುವು

(3) ಮನೆಯ ಸಮೀಪದಿಂದ ಗೊಬ್ಬರವನ್ನು 24 ತಾಸುಗಳೊಳಗೆ ದೂರಕ್ಕೆ ಸಾಗಿಸುವುದು

(4) ಮಲಮೂತ್ರಗಳನ್ನು ಬೇಗನೆ ದೂರಕ್ಕೆ ಕೊಂಡುಯ್ಯುವುದು ಶೌಚಸ್ಥಾನಗಳಲ್ಲಿ ಕ್ರಿಮಿನಾಶಕ ದ್ರವಗಳನ್ನು ಉಪಯೋಗಿಸುವುದು

(5) ತತ್ತಿಗಳನ್ನು ಇಟ್ಟ ಸ್ಥಳಗಳನ್ನು ಸುಡುವುದು, ಪ್ರತಿ ಮೂರು ದಿನಗಳಿಗೊಂದು ಸಾರಿ ಹೀಗೆ ಸುಡುವುದರಿಂದ, ತತ್ತಿಯೊಡೆದುಂಟಾದ ಮರಿಗಳು ಸಾಯುವುವು

(6) ಮಾರಾಟಕ್ಕೆ ಮಡುಗುವ ಅಥವಾ ಆಹಾರಕ್ಕೆ ಉಪಯೋಗಿಸುವ ಪದಾರ್ಥಗಳನ್ನು ಮಸ್ಲಿನಿನಿಂದ ಅಥವಾ ಗ್ಲಾಸಿನಿಂದ ಮುಚ್ಚಿಡುವುದು.

ಸೊಳ್ಳೆ

ಮನುಷ್ಯರಿಗೆ ಗಂಡಾಂತರವನ್ನುಂಟುಮಾಡುವ ಮುಖ್ಯ ಇರುವರೆಗೆ ಗಂಡಾಂತರಕ್ಕೆ ಕಾರಣವೆಂದು ತಿಳಿಯಲಾದ, ನಾನಾಜಾತಿಯ ಸೊಳ್ಳೆಗಳವೆ ಅಪಾಯಕರವಾದುವುಗಳಲ್ಲಿ ಎನೊಫಿಲಿ ಎಂಬ ಮಲೇರಿಯಾದ ಸೊಳ್ಳೆಗಳೂ, ಆನೆಕಾಲುರೋಗವನ್ನುಂಟುಮಾಡುವ ಸೊಳ್ಳೆಗಳೂ ಮುಖ್ಯವಾಗಿವೆ

ಅದರ ಜೀವನಕ್ರಮವು ಸಾಧಾರಣವಾಗಿ ಸೊಳ್ಳೆಯದರಂತೆಯೇ [illegible] ನೀರಿನ ಮೇಲೆ [illegible] ಹುಟ್ಟುವ [illegible] ಸೊಳ್ಳೆಗಳಲ್ಲಿ [illegible] ಇಷ್ಟೇ ಭೇದವು ಹೆಣ್ಣು ಸೊಳ್ಳೆಯು ಹುಟ್ಟಿ ಕೆಲವು ದಿನ ಹೊತ್ತಿನಲ್ಲೇ ಗರ್ಭ ಧರಿಸಿ ಕತ್ತಿ ಇಡಲು ಸಿದ್ಧವಾಗುವುದು, ಆದರೆ [illegible] ತತ್ತಿಗಳನ್ನು [illegible] ಮನುಷ್ಯನ ಅಥವಾ ಇತರ [illegible] ರಕ್ತವನ್ನು ಹೀರಿಕೊಂಡಾಗ ಮಾತ್ರ [illegible] ಸ್ಥಿತಿಯು [illegible] ತತ್ತಿಗಳನ್ನು ನೀರಿನ ಮೇಲ್ಭಾಗದಲ್ಲೇ ಇಡುವುದು [illegible] ಪ್ರತಿಯೊಂದು [illegible] ಸೊಳ್ಳೆ ಹುಟ್ಟಿ ಬೆಳೆ[illegible] ಸಾಗೆ [illegible] ಒಗೆಯ [illegible] ಅವುಗಳ ವೈರಿಗಳು [illegible] ವಿಘ್ನಗಳೊಂದೂ ಇಲ್ಲದ [illegible] ಳೆಯು [illegible] ಸೊಳ್ಳೆ [illegible] ತ್ತಿ [illegible] ಅದರಿಂದ [illegible] ಬೆಳೆದ ಹೊಳೆಯ [illegible] ಗಳಲ್ಲಿ ಕಾಣಬಹುದು [illegible] ಜಾತಿಯ (ಕ್ಯೂಲೆಕ್ಸ್) ಸೊಳ್ಳೆಯು ಸೇರಿದ್ದರೆ [illegible] ತತ್ತಿಗಳನ್ನಿಡುವುದು ಚಿಕ್ಕ ದೊಡ್ಡ [illegible] ರುನಿಂತ [illegible], ಒಡೆದ [illegible], [illegible], ಚಿಪ್ಪು, ಮರದ ಪೊಟರೆ, ಬಿದಿರು [illegible], [illegible] ಕೂಡಿರಬಹುದಾದ ನೀರೇ ಇಂಥ ಸೊಳ್ಳೆಗಳ [illegible] ನಗಳೆಂದು ಧಾರಾಳವಾಗಿ ಹೇಳಬಹುದು. ಸೊಳ್ಳೆಗಳ ಹುಟ್ಟನ್ನು ಅಡಗಿಸಬೇಕೆಂದರೆ ಒಡೆದ ಬಾಟಲಿ, [illegible] ಮುಂತಾದುವನ್ನು ಸಿಕ್ಕಿದ ಸ್ಥಳದಲ್ಲಿ ಬಿಸಾಡಬಾರದು. ಕೆರೆ ಹೊಳೆಗಳ ಒಳಿಯ [illegible] ಅವುಗಳ ತಳವು [illegible] ಮಾಡಿದರೆ, ನೀರು ಹರಿದುಹೋಗಿ, ಸೊಳ್ಳೆಗಳು ತತ್ತಿ ಇಡಲು ಅವಕಾಶವಿರುವದು. ಬಾರದು.

ನೀರಿನಮೇಲೆ ಚಿಮ್ಮಿಎಣ್ಣೆಯ ಮಿಶ್ರಣವನ್ನು ಚಿಮುಕಿಸುವುದರಿಂದ ಹುಳುಗಳು ನಾಶವಾಗುವವು ಅದಲ್ಲದೆ, ಇದರಿಂದ, ಈ ಮರಿಸೊಳ್ಳೆಗಳನ್ನು ತಿನ್ನುವ ಚಿಕ್ಕ ಮೀನುಗಳೂ ನಾಶವಾಗುತ್ತವೆಯೆಂಬ ಅಕ್ಷೇಪವೂ [illegible] ರುವುದು.

ಸೊಳ್ಳೆಗಳಿಂದುಂಟಾಗುವ ರೋಗಗಳನ್ನು ತಪ್ಪಿಸಲು ಸೊಳ್ಳೆಯ ಪರದೆಗಳನ್ನು ಉಪಯೋಗಿಸುವುದು ಉತ್ತಮೋಪಾಯವು.

ಆರೋಗ್ಯಸಂಬಂಧವಾದ ಪತ್ರ್ಯ ಸೂತ್ರಗಳು.

(1) ಕಾಲಕ್ರಮದಿಂದ ಬೆಳಗ್ಗೆ ಎದ್ದು ತಣ್ಣೀರಿನಲ್ಲಿ ಅಥವಾ ಉಗುರುಬೆಚ್ಚಗಿರುವ ನೀರಿನಲ್ಲಿ ಮೈಯನ್ನು ಚೆನ್ನಾಗಿ ತಿಕ್ಕಿ ಸ್ನಾನಮಾಡುವುದು.

(2) ಸಾವಧಾನವಾಗಿ ಉಡುಪನ್ನು ಹಾಕಿಕೊಳ್ಳುವುದು ಮತ್ತು ದಿನವೂ ಉದ್ಯೋಗಕ್ಕೆ ಹೋಗುವುದಕ್ಕೆ ಮೊದಲು ಮಿತಾಹಾರವನ್ನು ತೆಗೆದುಕೊಳ್ಳುವುದು.

(3) ಕಾಲಕ್ರಮದಿಂದ ಭೋಜನಮಾಡುವುದು ಊಟದಲ್ಲಿ ಯಾವುದಾದರೂ ಒಂದೆರಡು ಜಾತಿಯ ಸೊಪ್ಪಿನ ಪಲ್ಯಗಳನ್ನೂ, ಹಣ್ಣುಗಳನ್ನು ಅಥವಾ ಹಣ್ಣಿನ ರಸವನ್ನೂ ಸೇರಿಸುವುದು. ಇಂತಹ ಭೋಜನವು ದಿನಕ್ಕೆ ಎರಡುಸಾರಿ ನಡೆಯಬೇಕು. ಹಗಲಿನ ಊಟದಲ್ಲಿ ಕೂನೆಗೆ ಒಂದು ಚಟಾಕಿನಷ್ಟು ಹಾಲನ್ನಾದರೂ ತೆಗೆದುಕೊಳ್ಳಬೇಕು.

(4) ಕ್ಲಿಪ್ತಕಾಲಕ್ಕೆ ಬಲಾತ್ಕಾರದಿಂದಲಾದರೂ ಮಲವಿಸರ್ಜನೆಗೆ ಹೋಗಿ ಬರಬೇಕು.

(5) ದಿನವೊಂದಕ್ಕೆ ಎಂಟು ಅಥವಾ ಆರು ಲೋಟಾ ನೀರಿಗೆ ಕಡಿಮೆ ಇಲ್ಲದೆ ಕುಡಿಯಬೇಕು.

(6) ಶೀತದ ಗಾಳಿಯಲ್ಲಿ ತಿರುಗುವಾಗ ದೇಹದ ಉಷ್ಣವನ್ನು ಕಾಪಾಡುವುದಕ್ಕೆ ಬೆಚ್ಚನ್ನು ಉಡುಪನ್ನು ಹಾಕಿಕೊಳ್ಳಬೇಕು. ದೇಹದ ಎಲ್ಲಾ ಅವಯವಗಳಿಗೂ ಧಾರಾಳವಾಗಿ ರಕ್ತಚಲನವಾಗಲು ಅಡೆಯಾಗದಂತೆ ಉಡುಪನ್ನು ಹಾಕಿಕೊಳ್ಳಬೇಕು.

(7) ಹೃದಯದ ಕಾರ್ಯಕ್ಕೆ ಉತ್ತೇಜನಕೊಡುವುದಕ್ಕೂ, ರಕ್ತಸಂಚಾರವನ್ನು ಚುರುಕಾಗಿಸುವುದಕ್ಕೂ ಪ್ರತಿದಿನವೂ ಮೈದಾನದಲ್ಲಿ ವ್ಯಾಯಾಮವನ್ನು ತೆಗೆದುಕೊಳ್ಳಬೇಕು.

(8) ಮನಸ್ಸಿನಲ್ಲಿ ಉಲ್ಲಾಸಕರವಾದ ಸದ್ವಿಷಯಗಳನ್ನೇ ಆಲೋಚಿಸುವ ಅಭ್ಯಾಸವನ್ನು ಒಳಕೆಗೆ ತಂದು ಕಟ್ಟ ಆಲೋಚನೆಗಳನ್ನು ಮನಸ್ಸಿಗೆ ಬಾರದಂತೆ ಮಾಡಬೇಕು.

(9) ಕುಳಿತಿರುವಾಗಲೂ, ನಿಂತಿರುವಾಗಲೂ, ಯಾವ ವಿಧವಾದ ವಕ್ರತೆಯಿಲ್ಲದೆ ನೆಟ್ಟಗಿರುವ ಅಭ್ಯಾಸವನ್ನು ಮಾಡಬೇಕು.

(10) ದಿನವೂ ರಾತ್ರಿಯಲ್ಲಿ ಎಂಟು ಒಂಬತ್ತು ಗಂಟೆಗಳ ಕಾಲಕ್ಕೆ ತಡವೆಯಿಲ್ಲದೆ ಕಿಟಕಿಗಳನ್ನು ತೆರೆದ ಕೋಣೆಯಲ್ಲಿ ನಿದ್ರಿಸಬೇಕು.

ಸುರಧೇನು.

ತಂನ ಜನನಿಯ ಮೇಲೆ ಪ್ರೀತಿಯುಳ್ಳವ ಸುತನು |
ತಂನ ಜನನಿಯ ಸುಖಕೆ ಪ್ರಾಣವೀಯುವನವನು |
ತಂನ ಜನನಿಯೆ ತಾನು ತಂನ ಸುಖವೆಲ್ಲ ಸುಖವೆಂದೆಣಿಸಿ
ಶ್ರಮಪಡುವನು ||

ತಂನ ಜನನಿಯು ದರಿದ್ರ ದುಃಖದಲಿ ಬಿದ್ದಿರಲು |
ತಂನವರ ಮಾನಸಂಬ್ರಮಗಳೆಲ್ಲ ಕೆಡಲು |
ತಂನವರ ಮಾನವದು ಸ್ವಾತಂತ್ರ್ಯದಲ್ಲಿರುವುದೆಂಬ ನಿಜವನು ತಿಳಿವನು ||೧||

ಮಾನಹೋದರೆ ಪ್ರಾಣ [illegible] ಫಲವಿಹುದು |
ಮಾನದ [illegible] |
[illegible] ಜಗದೊಳಗೆ ಗತಿಶೂನ್ಯನು ||

ಮಾನವಿಲ್ಲದ ಜ್ಞಾನ (ಬುದ್ಧಿ) [illegible] |
ಮಾನವನ [illegible]
ಕಾನನದ [illegible] ಮಿತ ಪಾಪಾತ್ಮನು ||೨||

ಪರತಂತ್ರವನು ನೀಗಿ ಸ್ವಾತಂತ್ರ್ಯ ಸಾಧನೆಗೆ |
ಹರುಷದಲಿ ದುಡಿಯುವವ ಮಾನವನೆನಿಸುವನು |
ಮರೆಯದಿರು ಮಾನವನೆ ಜೀವನದ ಕಾರ್ಯವಿದು ಸಾರ್ಥಕತೆಯಿದರೊಳಿಹುದು ||

ಪರತ ಜನನಿಯು ಅಖಿಲ ಬಾಂಧವರ ಪಡೆದವಳ |
ಪರದಾಸ್ಯ [illegible] ಸಂಬಂಧೊದಗುವದು
ಸರಕಾರ [illegible] ಪರವು ಪದವಿಯು ಪಡೆವೆವ ||೩||

ಸ್ವಾತಂತ್ರ್ಯವಿಲ್ಲದಿರೆ [illegible] ದಕಿವದು
ಸ್ವಾತಂತ್ರ್ಯವಿಲ್ಲದಿರೆ [illegible] |
ಸ್ವಾತಂತ್ರ್ಯವಿಲ್ಲದಿರೆ ರಾಜಸಿಗೆ ಸುಖ ಸಿಗದು [illegible] ಮಾತೇಕದು? ||

ಸ್ವಾತಂತ್ರ್ಯವಿಲ್ಲದವ ವರಭೋಗಿಯಾಗಿರಲಿ |
ಸ್ವಾತಂತ್ರ್ಯವಿಲ್ಲದವ ಒಡಯೋಗಿಯಾಗಿರಲಿ
ಸ್ವಾತಂತ್ರ್ಯವಿಲ್ಲದವ ವೇದಾಂತಿಯಾಗಿರಲಿ ನಿಜಸುಖವ ಕಾಣನವನು ||೪||

ಪರದಾಸ್ಯದಲಿ ಕೂಡಿ ಪರಸೇವೆಯನುವಮಾಳ್ಪ |
ನರನವನು ಸೃಷ್ಟಿಯೊಳ ಪಶುತುಲ್ಯನಾಗಿಹನು |
ಭರತ ಜನನಿಗೆ ಹೊರಲು ಭಾರವಾಗಿಹನವನು ನಿಜದ್ರೋಹಿಯು ಮೂರ್ಖನು ||

ಧರೆಯೊಳಗೆ ಪಥಬಿಟ್ಟು ಅಶನವಸನಕ್ಕಾಗಿ
ಪರಸೇವೆಯನು ಕೊಂಡು ಜನ್ಮವನು ವಿಕ್ರಯಿಸಿ
ಮರೆದು ಪರಮಾತ್ಮನನು ಜೀವಿಸುವ [illegible] ಸೇರುವದುಚಿತವೆ ||೫||

ಸರಜಾತ ಬಾಂಧವನೆ [illegible] |
ಪರಮ ಶಾಂತಿಯೊಳಗಿರುವ ಜನ್ಮವನು |
ಭರತ ಜನನಿಯ ಪಾರತಂತ್ರ್ಯ ಮೋಚನೆಗಾಗಿ ಸದ್ಮಾರ್ಗದಲಿ ಸವೆಸುತ ||

ಸುರಧೇನುವಂತಿರುವ ಸ್ವಾತಂತ್ರ್ಯವರ್ಗಗಳಿಸಿ |
ಕರೆದುಣ್ಣು ಭಾಗ್ಯವನು ಭೋಗಿಸೈ ಸೌಖ್ಯವನು |
ಪರತಂತ್ರ [illegible] ನಮಗೆ ಮಹಿಳಿದಿಸುವದು ||೬||

([illegible]) —[illegible]

ಕೊಡಗೂ ಕನ್ನಡವೂ.

(ಕನ್ನಡಾಭಿಮಾನಿಯಿಂದ)

ಕೊಡಗು ಎನ್ನಿರ ಪದೆಂದು ನಮ್ಮ ಕರ್ನಾಟಕಸ್ಥರಲ್ಲಿ ಬಹಳ ಮಂದಿಗೆ ಗೊತ್ತಿಲ್ಲದಿದ್ದರೂ ಅದು ಒಚ್ಚ ಕನ್ನಡ ದೇಶ, ಕರ್ನಾಟಕದ ಒಂದು ಭಾಗ, ಒಂದು ಕಾಲದಲ್ಲಿ ರಾಜ್ಯಕಾರಭಾರವನು ನಡೆಸಿದ ಪ್ರಾಂತ. ಅದೀಗ ಬ್ರಿಟಿಷರ ಸತ್ತೆಯ [illegible] ಗಿದ್ದು ಮದ್ರಾಸ, ಮುಂಬಯಿ ಸ್ವಾಧೀನದಲ್ಲಿರುವದು. ಅದಕ್ಕೇ ಒಂದು ಬೇರೆ ಚಿಕ್ಕ ವಿಧಾಯಕವನ್ನು ಕಟ್ಟಿಕೊಡುವದಕ್ಕಾಗಿ ಒಂದು ಕಾಯಿದೆ ಕೌನ್ಸಿಲನ್ನೂ ಸರಕಾರವು ಕೊಟ್ಟಿರುವರು. ಅದರಿಂದ ಕೊಡಗು ಬಾಂಧವರ ನಿಜವಾದ ಕಲ್ಯಾಣವಾಗುತ್ತಿರುವಂತಿದ್ದರೆ ನಾವು ಆನಂದಪಡುತ್ತಿದ್ದೆವು. ಆದರೆ ಕೊಡಗಿನವರಿಗೆ ಈ ಕೌನ್ಸಿಲು ನಮನಾದಾನಕರವಾಗಿಲ್ಲದ್ದು ಸ್ಪಷ್ಟವಾಗಿ ಕಂಡುಬರುತ್ತಿದೆ. ಕೊಡಗಿನಲ್ಲಿ ಅಸಹಕಾರದ ವಿಶೇಷ ಪ್ರಾಬಲ್ಯವಿಲ್ಲದಿದ್ದರೂ ಜನರಲ್ಲಿ ಈ ಕೌನ್ಸಿಲಿನ ಬಗ್ಗೆ ಉದಾಸೀನತೆಯು ವ್ಯಕ್ತವಾಗುತ್ತಿದ್ದುದರಿಂದ ಹೊಸ ಸಂಸ್ಥೆಯು ಕೊಡಗಿನವರ ಕುತ್ತಿಗೆಯಲ್ಲಿ ಕಟ್ಟಿದ ಒಂದು ಕುಂಟೆಯೆಂದೇ ಅನ್ನಬೇಕಾಗುತ್ತದೆ. ಇರಲಿ, ಕೊಡಗು ಅಚ್ಚ ಕನ್ನಡ ಪ್ರಾಂತವಾದ್ದರಿಂದ ಕೌನ್ಸಿಲಿನ ವ್ಯವಹಾರವೆಲ್ಲವೂ ಕನ್ನಡದಿಂದಲೇ ನಡೆಯುವದು ಯುಕ್ತವು. ಆದರೆ ಅದೂ ಇಲ್ಲ ಇಂಗ್ಲಿಷಿನಿಂದ ವ್ಯವಹಾರ. ಕಾಫೀ ತೋಟದ ಬಿಳೇ ಮಾಲಿಕರ ೪—೫ ಪ್ರತಿನಿಧಿಗಳಿಗಾಗಿ ಮತ್ತು ಕಮಿಷನರೊಬ್ಬರಿಗಾಗಿ ಕೌನ್ಸಿಲ ಕಾರಭಾರವೆಲ್ಲವೂ ಇಂಗ್ಲಿಷಿನಿಂದ ಸಾಗಬೇಕು. ಇದೊಂದು ವಿಚಿತ್ರಕ್ರಮವಲ್ಲವೇ? 'ಕೊಡಗು' ಪತ್ರಿಕೆಯು ಅನ್ನುವಂತೆ ಪರಭಾಷೆಯಲ್ಲಾಗುವ ರಾಜ್ಯದಾಡಳಿತವು ಜನಸಮುದಾಯಕ್ಕೆ ತಿಳಿಯುವಬಗೆಯೆಂತು? ಕೈಬೆರಳೆಣಿಕೆಯಷ್ಟು ವಿದೇಶೀ ಜನರಿಗಾಗಿ ಲಕ್ಷಗಟ್ಟಲೆ ದೇಶೀಯ ಕನ್ನಡ ಬಂಧುಗಳು ಪರಭಾಷೆಯಲ್ಲಿ ವ್ಯವಹಾರ ಮಾಡಬೇಕೆಂದು ಸಾರಾಸಾರ ವಿಚಾರವುಳ್ಳ ಯಾವ ಸರಕಾರವೂ ಅನ್ನಲಾರದು. ಜರ್ಮನಿಯು ಅಲ್ಸೇಸ್ ಮತ್ತು ಲಾರೇನ್ ಪ್ರಾಂತಗಳನ್ನು ಫ್ರೆಂಚರಿಂದ ಸೆಳೆದುಕೊಂಡರೂ ಅಲ್ಲಿಯ ಕಾರಭಾರವನ್ನು ಮಾತ್ರ ಫ್ರೆಂಚಭಾಷೆಯಲ್ಲಿ ನಡೆಸುವ ಉದಾರಧೋರಣವನ್ನು ಜರ್ಮನಿಯು ಕೈಕೊಂಡಿತು. ಆದರೆ ಹಿಂದುಸ್ಥಾನದಲ್ಲಿ ೩೩ ಕೋಟಿ ಜನರಿದ್ದರೂ ಒಂದೆರಡು ಲಕ್ಷ ಬಿಳೇ ಜನರಿಗಾಗಿ ಇಡೀ ಹಿಂದುಸ್ಥಾನದ ಕಾರಭಾರ ಯಂತ್ರವನ್ನು ಇಂಗ್ಲಿಷಿನಲ್ಲಿ ನಡೆಸಲಾಗಿದೆ. ಇದು ಪಾರತಂತ್ರ್ಯದ ಲಕ್ಷಣ. ಭಾರತ ಸ್ವರಾಜ್ಯ ಒಮ್ಮೆ ಬಂತೆಂದರೆ ಅದು ದೇಶ ಭಾಷೆ, ಆಚಾರ [illegible] ಕೆಲ್ಲವನ್ನೂ ಸ್ವತಂತ್ರವನ್ನಾಗಿ ಮಾಡಿ ಗಳಿಗಳಿಸದ ಕೊಡಗು ಪ್ರಾಂತಕ್ಕೂ ಆಗುವುದಾದರೆ [illegible] ಆದುದರಿಂದ ಈ ದಾಸ್ಯವೃತ್ತಿಯನ್ನು ಅಟ್ಟುವದಕ್ಕೆ ಕೊಡಗಿನವರು ಸಿದ್ಧರಾಗಬೇಕು.

"ವೀರರಾಜಪೇಟೆ ಮಹಿಳಾಸಭಾ."

ವೀರರಾಜಪೇಟೆ

ಜೂನ್ ತಾರೀಖು ೧ನೇ ಆದಿತ್ಯವಾರ ಮಹಿಳಾ ಸಮಾಜದ ಸಮ್ಮೇಳನವೊಂದು ನಡೆಯಿತು. ಸಭಾಧ್ಯಕ್ಷರು ಶ್ರೀಮತಿ ಕೊಳುವಂಡ್ರ ಅಕ್ಕವ್ವನವರು ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು.

ದೇವರ ಪ್ರಾರ್ಥನೆಯನಂತರ ಕಾರ್ಯದರ್ಶಿಯವರು ಕಳೆದ ಸಮ್ಮೇಳನದ ವರದಿಯನ್ನು ಓದಿದರು. ಆ ನಂತರದಲ್ಲಿ ಮಾ॥ ಶ್ರೀ. ಸಿ. ಯಂ. ರಾಮರಾವ್, ಬಿ.ಎ. ಎಲ್. ಟಿ. ಯವರು ರಸಭರಿತವಾಗಿಯೂ ನೀತಿಬೋಧಕವಾಗಿಯೂ ಸ್ತ್ರೀ ವಿದ್ಯಾಭ್ಯಾಸದ ವಿಷಯ ಭಾಷಣವನ್ನು ಕೊಟ್ಟರು.

ಅವರ ಅಭಿಪ್ರಾಯವೇನೆಂದರೆ — ಮನುಷ್ಯನ ಮನಸಿಗೆ ಸ್ವಾಭಾವಿಕವಾಗಿರುವ ಸದ್ಗುಣಗಳನ್ನು ಪ್ರಕಾಶಪಡಿಸಿ ಅದಕ್ಕೆ ಪ್ರಪಂಚ ಸಂಬಂಧದಿಂದ ಅಂಟಿಕೊಂಡಿರುವ ದುರ್ಗುಣಗಳನ್ನು ನಿರ್ಮೂಲಮಾಡಿ ದೂರೀಕರಿಸುವದಕ್ಕೆ ವಿದ್ಯಾಭ್ಯಾಸವೆಂದು ಹೇಳಬಹುದು. ಸ್ತ್ರೀಪುರುಷರಿಗೆ ಮನಸ್ಸೆಂಬುದು ಒಂದೇ ರೀತಿಯದಾದರೂ, ಪರಸ್ಪರರ ಸ್ವಾಭಾವಿಕ ಗುಣಗಳಲ್ಲಿ ಅಂತರವಿರುವುದು ಸ್ವಾಭಾವಿಕ. ಅವರವರಿಗೆ ವಿವಿಧರೀತಿಯ ವಿದ್ಯಾಭ್ಯಾಸವು ಅಗತ್ಯವಾಗಿದೆ. ಆದರೆ ಈಗಿನ ಕಾಲದಲ್ಲಿ ಆ ವ್ಯತ್ಯಾಸವನ್ನು ಮನಸ್ಸಿಗೆ ತಾರದೆ ಸ್ತ್ರೀಪುರುಷರಿಗೆ ಏಕರೀತಿಯ ಶಿಕ್ಷಣವನ್ನು ಕೊಡುತ್ತಿದ್ದಾರೆ. ಆದರಿಂದ ನ್ಯಾಯವಾದ ಶಿಕ್ಷಣವು ದೊರೆಯದೆ ವಿದ್ಯಾವಂತರೆನಿಸಿಕೊಳ್ಳುವ ಸ್ತ್ರೀಪುರುಷರು ಸತಿಪತಿಗಳಾಗಿರುವ ಕಡೆ ಸಂಸಾರ ಸುಖಕ್ಕೆ ನೆಮ್ಮದಿಯಿಲ್ಲವೆಂಬವಕ್ಕೆ ನಿದರ್ಶನಗಳೆಷ್ಟೋ ಇವೆ.

ಪುರುಷರಿಗೆ ಸಂಸಾರಭರಣಕ್ಕೆ ಅನುಕೂಲವಾಗುವ ದ್ರವ್ಯ ಸಂಪಾದನೆಗೆ ಬೇಕಾದಂಥ ಶಿಕ್ಷಣವೇ ಹೆಚ್ಚಿನ ಅವಶ್ಯವಿರುತ್ತದೆ. ಆದರೆ ಸ್ತ್ರೀಯರಿಗೆ ಮುಖ್ಯವಾಗಿ ಗಾಯನಕಲೆ ಚಿತ್ರಕಲೆ [illegible] ಪಾಕ ಮತ್ತು ಸಂಸಾರಿಕ ಸಂಬಂಧವಾದ ಇತರ ನಾ[illegible] ವಿದ್ಯೆಗಳು ಕಲಿಸಲ್ಪಡಬೇಕು. ಪ್ರಾಚೀನ ಭಾರತ [illegible] ಯಲ್ಲನೇಕರು ವಿದ್ಯಾವಂತೆಯರು. ಅವರಿಗೆ [illegible] ಕೊಡಲು ಯಾವ ಸಂಸ್ಥೆಯು ಪ್ರಾಕಾರದಲ್ಲಿತ್ತೆಂದು ತಿಳಿಯದಿದ್ದರೂ, ಅವರ ದಿವ್ಯಜ್ಞಾನದ ವಿಷಯಕ್ಕೆ ಅನೇಕ ನಿದರ್ಶನಗಳಿವೆ. ನೀಲಕಂಠದೀಕ್ಷಿತರ ಚಂಪೂವನ್ನು ತಿದ್ದಿದವಳು ಬಬ್ಬಳು; ಸೌಧ್ವೀಮಣಿ ಶ್ರೀ ರಾಮನಿಗೆ ರಾವಣವಧೆಯ ವಿಧಾನವನ್ನು ಜ್ಞಾನದಿಂದ ತಂದವಳು ಭಾರ್ಯೆಯಾದ ಸೀತೆ, ಜೀಮೂತವಾಹನನ ಪ್ರತ್ಯಕ್ಷದರ್ಶನವಿಲ್ಲದೆಯೇ ಅತನ ಚಿತ್ರವನ್ನು ಬರೆದವಳು ಮಲಯವತಿಯೆಂಬ ನಾರೀಮಣಿ. ಸ್ತ್ರೀಯರ ಮನೋಭಾವಕ್ಕೆ ಅನುಕೂಲರೀತಿ ಅವರ ಶಿಕ್ಷಣದ ನಿರ್ಬಂಧವನ್ನು ನಡೆಸಿದರೆ ಅವರು ಉನ್ನತ ಜ್ಞಾನಿಗಳಾಗಲು ಸಂಶಯವಿಲ್ಲ.

ತದನಂತರ „ಮಹಿಳಾಸಭೆ"ಯ ಪರವಾಗಿ ವೀರರಾಜಪೇಟೆಯಲ್ಲಿ ಶಾಲಾ ಬಾಲಕಿಯರ ಭೋಜನ ಶಾಲೆಯೊಂದನ್ನು ಏರ್ಪಡಿಸಬೇಕಾಗಿ ಠರಾವು ತಂದು ಅನುಮೋದಿಸಲಾಯಿತು. ಸಭಿಕರು ಅದಕ್ಕೆ ಸಮ್ಮತಿಸಿದರು. ಇದರ ಕಾರ್ಯನಿರ್ವಾಹಕ್ಕಾಗಿ ಹತ್ತು ಜನ ಸದಸ್ಯರಿರುವ ಕಾರ್ಯನಿರ್ವಾಹಕ ಸಭೆಯೊಂದು ಏರ್ಪಡಿಸಿದರು. ಈ ಸದಸ್ಯರ ಸಮ್ಮೇಳನವು ಜೂನ್ 2೯ಕ್ಕೆ ನಡೆಯಬೇಕೆಂದು ನಿಶ್ಚಯವಾಯಿತು.

ಶ್ರೀಮತಿ ಕೋಳುವಂಡ ಅಕ್ಕಮ್ಮನವರು ಭೋಜನಶಾಲೆಗಾಗಿ ತನ್ನ ಛತ್ರದ ಕಟ್ಟಡವನ್ನೂ ಅವಶ್ಯ ಬೇಕಾದ ಪಾತ್ರೆಗಳನ್ನು ಕೊಡುವುದಾಗಿ ಹೇಳಿದರು

ಸೆಕ್ರೆಟರಿಯವರು, ಶ್ರೀಮತಿ ಅಪ್ಪಾರಂಡ್ರ ಪೊನ್ನಮ್ಮನವರು ಸಭೆಗೆ ಉಚಿತವಾಗಿ ಬೇಡ್‌ಮಿಂಟನ್ ಸೆಟ್ಟ್ ಒಂದನ್ನು ಕೊಟ್ಟವಕ್ಕೂ, ಶ್ರೀಮತಿ ಕೆ ಅಕ್ಕಮ್ಮನವರ ಭೋಜನಶಾಲೆಯ ಪ್ರೋತ್ಸಾಹಕ್ಕೂ ವಂದನೆಯನ್ನು ಅರ್ಪಿಸಿದರು,

ಮಳೆಗಾಲವಾದ ಕಾರಣ ಸಭೆಯು ಮುಂದಿನ ಸಮ್ಮೇಳನವು ಸೆಪ್ಟಂಬರ್ ತಿಂಗಳಲ್ಲಿ ನಡೆಯಲೆಂದು ತೀರ್ಮಾನವಾಯಿತು.

ತರುವಾಯ ಅಧ್ಯಕ್ಷರಿಗೂ ಭಾಷಣಕರ್ತರಿಗೂ ಸೆಕ್ರೆಟರಿಯವರು ವಂದಿಸಲು ಮಂಗಳಂ ಹಾಡಿ ಅಂದಿನ ಸಮ್ಮೇಳನವು ಮುಕ್ತಾಯವಾಯಿತು.

ಸಿ. ಮುತ್ತಪ್ಪಯ್ಯ,
ಗೌ ಕಾರ್ಯದರ್ಶಿ.

17_5-24ರಲ್ಲು ವೀರರಾಜಪೇಟೆಯಲ್ಲಿ ನಡೆದ „ಕೊಡಗು ಉಪಾಧ್ಯಾಯರ ಸಹಕಾರಿ ಸ್ಟೋರ್ಸ್" ಮೀಟಿಂಗಿನ ವರದಿ

ಸಂಘದ ಪ್ರೆಸಿಡೆಂಟರು ಅಧ್ಯಕ್ಷರಾಗಿ 1922ನೇ ಜೂನ್ ೧ರಿಂದ ೧೯೨೩ನೆ ಜೂನ್ ೩೦ಕ್ಕೆ ಅಂತ್ಯವಾಗುವ ಆದಾಯ ಖರ್ಚಿನ ಲೆಕ್ಕವನ್ನು ಓದಿ, ಈ ವರ್ಷದ ಲಾಭ ೨೦೪೫ ರೂಪಾಯಿ ಬೆಲೆಯನ್ನು ಶೇರ್ ಹಣಕ್ಕೆ ಅವರವರ ಶೇರ್ ಹಣದಂತೆ ವಿಭಾಗಿಸಿ ಕೊಡಿಸುವಂತೆ ಸರ್ವರೂ ಒಪ್ಪಿದಮೇಲೆ ಮ, ಎ ಮಂಜುನಾಥರಾಯರು—„ ನಮ್ಮ ಸಂಘಕ್ಕೆ ಮಡಿಕೇರಿಯನ್ನು ಹೆಡ್ಡಾಫೀಸು ಮಾಡಿ ಅಲ್ಲಿ ವರ್ಷವರ್ಷ ಚುನಾಯಿಸಲ್ಪಡುವ ಕಮಿಟಿ ಮೆಂಬರುಗಳು ಮುತುವರ್ಜಿಯಿಂದ ಕೆಲಸಮಾಡದಿರುವುದು ಕಂಡುಬರುವುದರಿಂದ ಕೊಡಗಿಗೆ ಮುಖ್ಯವಾಸ್ಥಳವಾದ ವೀರರಾಜಪೇಟೆಗೆ ಸಂಘದ ಹೆಡ್ಡಾಫೀಸನ್ನು ರಿಜಿಸ್ಟ್ರಾರರವರ ಅನುಮತಿಪಡೆದು ಬದಲಾಯಿಸಬೇಕೆಂದು ತಂದ ಠರಾವನ್ನು ಕೆ. ಪಿ ನಂಜುಂಡನವರು ಅನುಮೋದಿಸಿ ಸರ್ವರ ಸಮ್ಮತದಿಂದ ಮಂಜೂರಾಯಿತು

ಮೊದಲು ತೀರ್ಮಾನಿಸಿದಂತೆ ಮಡಿಕೇರಿ, ಸೋಮವಾರಪೇಟೆ, ಕೊಡ್ಲಿಪೇಟೆ, ಪೊನ್ನಂಪೇಟೆ, ಫ್ರೇಜರ್‌ಪೇಟೆ ನಾಪೋಕ್ಲು, ಹುದಿಕೇರಿಯಲ್ಲಿ ಏಜನ್ಸಿಗಳನ್ನು ಸ್ಥಾಪಿಸುವುದೆಂದು ಎಲ್ಲರೂ ಒಪ್ಪಿದರು,

ಸಂಘದ ಲೆಕ್ಕಗಳನ್ನು ಆಡಿಟುಮಾಡಲಿಕ್ಕೆ ಕಮಿಟಿಯಿಂದ ಇಬ್ಬರನ್ನು (ಯಸ್. ಚೆಣ್ಣಪ್ಪನವರನ್ನು ಮತ್ತು ಎ. ಮಂಜುನಾಥರಾಯರನ್ನು ನೇಮಿಸಿದರು ಸಂಘದ ಆಯ್ದಾದಿನದ ಜಮವನ್ನು ವಾರಕ್ಕೊಂದಾವರ್ತಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಪಬ್ಲಿಕ್ ಎಕೌಂಟಾಗಿ ಇಡಬೇಕೆಂದು ಯನ್. ಸಿ ಚೆಣ್ಣಪ್ಪನವರು ತಂದ ಠರಾವನ್ನು ಕೆ ಸುಬ್ರಾಯರು ಅನುಮೋದಿಸಿ ಮಂಜೂರಾಯಿತು

ಕೈಗಾರಿಕೆ ಸಾಲೆಯಲ್ಲಿರುವ ಸಾಮಾನುಗಳನ್ನು ಸಂಘದ ಏಜಂಟರುಗಳ ಮೂಲಕ ಮಾರಬೇಕೆಂಬದಾಗಿ ಯನ್. ಸಿ ಚೆಣ್ಣಪ್ಪನವರು ತಂದ ಠರಾವನ್ನು ಮ॥ ಚೆನ್ನಬಸಪ್ಪನವರು ಅನುಮೋದಿಸಿ, ಪಾಸಾಯಿತು

ಸ್ಟೋರ್‌ನ ಗುಮಾಸ್ತರ ಸಂಬಳವನ್ನು ಹದಿನೈದು ರೂಪಾಯಿ ಮಾಡಬೇಕೆಂದು ತಂದ ಯನ್ ಸಿ ಚೆಣ್ಣಪ್ಪನವರ ಠರಾವನ್ನು ಯಂ ಕಾಶಾಲಪ್ಪನವರು ಅನುಮೋದಿಸಿ ಎಲ್ಲರ ಒಪ್ಪಿಗೆಯಿಂದ ಪಾಸಾಯಿತು

ನಂತರ ಈ ಕೆಳಗಿನವರನ್ನು ಮುಂದಿನ ಕೆಲಸಕ್ಕೆ ಚುನಾವಣೆಮಾಡಿದರು.

ಮ। ಪಿ ಸಿ ಉತ್ತಯ್ಯನವರು, ಪ್ರೆಸಿಡೆಂಟರು.
ಮ॥ ಯಂ. ಯಸ್. ಮಾದಪ್ಪ, ಸೆಕ್ರೆಟರಿ.

ಕಮಿಟಿಮೆಂಬರುಗಳು

1. ಮ। ಎ ಕಾಳಮ್ಮನವರು,
2. ,, ಗುಂಡಪ್ಪನವರು.
3. ,, ಎ ಮಂಜುನಾಥರಾವ್.
4. ,, ಸಿ. ಯಂ ರಾಮರಾವ್.
5 ,, ಸಿ ಯಂ. ಸುಬ್ರಾಯರವರು
6 ,, ಆರ್ ಎಚ್ ಕಣ್ಣಾಯಿಯವರು.
7. ,, ಕೆ ಯಸ್. ನಂಜುಂಡನವರು.
8. ,, ಯನ್ ಸಿ. ಚೆಣ್ಣಪ್ಪನವರು.

ಯಂ. ಯಸ್. ಮಾದಪ್ಪ
ಸೆಕ್ರೆಟರಿ.

ಪತ್ರಪ್ರವಹಾರಗಳು.

ಬಾತ್ಮಿದಾರರು ಕಳುಹಿದ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. [ಎಡಿಟರ್]

ಪಟ್ಟೋಲೆಪಳಮ.

ಈ ಪುಸ್ತಕವನ್ನು ಸ್ವಲ್ಪ ನೋಡಿದೆ ಕೊಡಗರಿಗೆ ಬೇಕಾದ ಪ್ರತಿಯೊಂದೂ ವಿಷಯವು ಅಡಕವಾಗಿದೆ ಕೊಡಗರನ್ನು ತಿಳಿಯಲು ಅಪೇಕ್ಷಿಸುವವರಿಗೆ ಬೇಕಾದ ವಿಷಯಗಳೂ ಇವೆ ಬಹಳ ಪ್ರಯೋಜನಕ್ಕೆ ಬಂಬಹುದೆಂದೇ ಕೊಡಗಿನ ಹಲವು ಮಹನೀಯರ ಕೋರಿಕೆಯಿಂದ ಸರಕಾರದವರಿಂದ ಸ್ವಲ್ಪ ದ್ರವ್ಯಸಹಾಯ ಸಿಕ್ಕಿ ಮುದ್ರಿಸಲ್ಪಟ್ಟಿದೆ. ಆದರೆ ವಂದನೆಗಳೆಲ್ಲವೂ ಗ್ರಂಥಕರ್ತರಿಗೆ ಹೋಗಬೇಕೆಂಬುವುದರಲ್ಲಿ ಸಂಶಯವಿಲ್ಲ, ಕೆಲವು ಹಾಳೆಗಳನ್ನು ಮಗುಚಿದಕೂಡ್ಲೆ ಸ್ವಲ್ಪಸ್ವಲ್ಪವಾಗಿ ಗೊತ್ತಿರುವ ಸಂಗ್ತಿಗಳೆಲ್ಲವೂ ಹೊಳೆಯುತ್ತವೆ ಇದರಲ್ಲಿನ ವಿಚಾರಗಳು ಗೊತ್ತಿಲ್ಲದವರಿಗೆ ತಿಳಿದುಕೊಳ್ಳಲಿಕ್ಕೂ ಸ್ವಲ್ಪ ಗೊತ್ತಿರುವವರಿಗೆ ಮರೆತಾಗ ಓದಿಕೊಳ್ಳಲಿಕ್ಕೂ ಇರುವಂತೆ ಪ್ರತಿ ಕೊಡಗರಿಗೆ ಮುಂದಾಗಿ, ಕೊಡಗೇತರರಿಗೆ ನಂತರವೂ ಇರಬೇಕಾದ ಕಟ್ಟಳೆಯ ಪದ್ಧತಿಯು ಗಂಟು ಇದು ಎಲ್ಲರಿಗೂ ತೆಗೆದುಕೊಳ್ಳಬೇಕೆಂಬ ಆಸೆ ಇದೆ ನನಗೂ ಇದೆ ಆದರೆ ಕ್ರಯ ನೋಡಿದಾಗ ಬೇಡವೆಂದಾಗುತ್ತ ಒಂದು ಸಾವಿರ ಪ್ರಸ್ತಕಕ್ಕಿಂತ ಹೆಚ್ಚು ಪುಸ್ತಕ ಖರ್ಚಾಗುವಂತೆಯೂ, ಎಲ್ಲರ ಕೈಗೆ ಸಿಕ್ಕುವಂತೆಯೂ, ಪಟ್ಟ ಪ್ರಯತ್ನ ಸಫಲವಾಗುವಂತೆಯೂ ಮಾಡಬೇಕಾದರೆ, ಕ್ರಯವು ಖಂಡಿತವಾಗಿ $2\frac{1}{2}$ ರೂಪಾಯಿಂದ $1\frac{1}{2}$ ಗೆ ಇಳಿಯಬೇಕಾಗಿದೆ

"ಪುಸ್ತಕ ಬೇಕೆನ್ನುವವ"

ಮಹನೀಯರೆ,

ಮಳೆಗಾಲ ಸುರುವಾಯಿತ್ತು, ದೋಣಿ ಕಡುವಿನಲ್ಲಿ ಪ್ರಯಾಣಿಕರಿಗೆ ಎಷ್ಟು ತೊಂದರೆಯೆಂಬದನ್ನು ಅರಿಯಿರಾ—ಈ ತಾರೀಕು ೮ ನೆ ಆದಿತ್ಯವಾರ ನಾನು ವೀರರಾಜಪೇಟೆಯಿಂದ ಮಡಿಕೇರಿಗೆ ಹೋಗುವಾಗ ಬೇತರಿಯಲ್ಲಿ ದೋಣಿಯವನು ಹೊಳೆಯನ್ನು ದಾಟಿಸಿ, ದಾಟಿಸಿದ ಚಾರ್ಜು ನನಗೂ ಮತ್ತು ನನ್ನ ಬೈಸಿಕಲಿಗೂ ೦-೨-೩ ಕೊಡಬೇಕೆಂದು ಕೇಳಿದನು. ಇದು ನ್ಯಾಯವಾದ ಚಾರ್ಜು ಅಲ್ಲದ್ದರಿಂದ ಇಷ್ಟು ಕೊಡುವುದಿಲ್ಲವೆಂದು ಹೇಳಿ ಅಲ್ಲಿಯ ಬೋರ್ಡನ್ನು ಅವನ ಮಾತಿನಂತೆ ಹೋಗಿ ನೋಡಿದೆನು. ಆದರೆ ಅದರಲ್ಲಿ ಏನೊಂದು ಕಾಣಲಿಲ್ಲ. ಪುನಃ ಅವನು ಇದೇ ನ್ಯಾಯವಾದ ಚಾರ್ಜು ಇಷ್ಟು ಕೊಟ್ಟು ಹೋಗಬೇಕೆಂದು ಹೇಳಿ ನನ್ನನ್ನು ಸುಮಾರು ೨೦ ನಿಮಿಷಗಳವರೆಗೆ ತಡೆದುಹಾಕಿದ್ದರಿಂದ ನನ್ನ ಕೆಲಸಕ್ಕೆ ಬಹಳ ತೊಂದರೆಯಾಯಿತು ಅಂತು ಹೋಗುವಾಗ ಇವನಿಗೆ ಏನೂ ಕೊಡದೆ ಹಿಂತಿರುಗಿ ಬರುವಾಗ ೦-೨-೦ ಕೊಡಲಾಯಿತು ಇವನನ್ನು ಪ್ರಶ್ನಿಸಿದಾಗ ತಾನೆ ಕಂಟ್ರಾಕ್ಟುದಾರನೆಂದೂ, ತನ್ನ ಹೆಸರು ಮಮ್ಮದೆ ಎಂದೂ, ಹೇಳಿದನಲ್ಲದೆ ಬೇತರಿಯಲ್ಲಿ ಬೇರೆ ಕಡೆಗಳಿಗಿಂತ ಹೆಚ್ಚು ಚಾರ್ಜೆಂದೂ ಹಣ ಕೇಳಿದಕ್ಕೆ ಕಾರಣ ಏನೆಂಬದು ಗೊತ್ತಾಗದು ಹೀಗೆ ಪ್ರಯಾಣಿಕರಿಗೆ ತೊಂದರೆ ಕೊಡುವುದಕ್ಕೆ ಸಾಕ್ಷಿ ರುಜುವಾತುಗಳು ಬೇಕಾಗಿವೆಯೇ ? ಜೊತೆಗ್ಯಾರು ಇಲ್ಲದೆಹೋದರೆ ಯಾರಿಂದ ಸಾಕ್ಷಿಹೇಳಿಸುವುದು ? ಇಷ್ಟು ತೊಂದರೆಗೆ ಗುರಿಯಾಗದಂತೆ ಬೋರ್ಡಿನಮೇಲಿನ ದರಗಳು ಯಾವಾಗಲೂ ಇರುವಂತೆ ಏರ್ಪಡಿಸಿದರೆ ಉತ್ತಮವಲ್ಲವೇ ? ಇದಕ್ಕೆ ತಕ್ಕ ಏರ್ಪಾಡುಮಾಡುವರೆಂದು ನಂಬಿರುವ,

"ಯಂ ಮಾದಪ್ಪ"

ವೀರರಾಜಪೇಟೆ ಆಸ್ಪತ್ರೆ

ಇಲ್ಲಿ ಅನೇಕ ವರ್ಷಗಳಿಂದ ಇಬ್ಬರು ಡಾಕ್ಟರುಗಳು ಕೆಲಸ ನೋಡುವಂತೆ ನಮ್ಮ ಘನ ಸರಕಾರದವರು ನೇಮಿಸಿದ್ದಾರೆ, ಆದರೆ ಈ ವರ್ಷದಲ್ಲಿ ಆಸ್ಪತ್ರೆಗೆ ಕಾಯಿಲಸ್ತರು ವಿಪರೀತ ಹೋಗುವುದನ್ನೂ ಮತ್ತು ಇಬ್ಬರು ಡಾಕ್ಟರುಗಳ ಕಷ್ಟವನ್ನೂ ತಿಳಿದು ನಮ್ಮ ಸರಕಾರದವರು ಇನ್ನೊಬ್ಬರನ್ನು ಕಳುಹಿಸಿರುವುದು ತುಂಬಾ ಸಂತೋಷವೇ ಸರಿ ಆದರೆ ಒಂದು ವಿಷಯ—ವೀರರಾಜಪೇಟೆಯು ಕೊಡಗಿನ ಮುಖ್ಯಸ್ಥಳ, ಎಂದರೆ ತುಂಬಾ ಕೊಡಗರಿರುವಸ್ಥಳ ಇಲ್ಲಿಯ ಸುತ್ತುಮುತ್ತಲಿನ ಜನರಿಗೆ ಕೊಡಗು ಭಾಷೆಯೇ ಭಾಷೆಯಾಗಿರುವುದಲ್ಲದೆ ಕನ್ನಡ ಮತ್ತು ಇಂಗ್ಲಿಷ್ ತಿಳಿದವರು ಕಮ್ಮಿಯಾಗಿರುತ್ತಾರೆ ಇಲ್ಲಿ ಕೊಡಗರಲ್ಲದ ಇತರ ಜಾತಿಯವರೂ ಇದ್ದಾರೆ ಇವರಲ್ಲಿ ಅನೇಕರು ಕೊಡಗು ಭಾಷೆಯನ್ನು ತಿಳಿದವರಾಗಿರುತ್ತಾರೆ ಅನೇಕರು ಆಸ್ಪತ್ರೆಯಲ್ಲಿ ಕೊಡಗು ಭಾಷೆಯನ್ನು ಅರಿಯದ ಮೂವರು ಕೊಡಗೇತರ ಡಾಕ್ಟರುಗಳಲ್ಲಿ ತಮ್ಮ ಕಾಯಿಲವನ್ನು ಪೂರ್ತಿ ಹೇಳಲಿಕ್ಕೆ ಬಾರದಿರುವುದನ್ನು ಕಂಡರೆ ಇದಕ್ಕೆ ಏನುಕಾರಣವೆಂಬುದು ಎಲ್ಲರಿಗೂ ಗೊತ್ತೇ ಇದೆ ಎಂದರೆ ಇವರಿಗೆ ಡಾಕ್ಟರಭಾಷೆ ಗೊತ್ತಿಲ್ಲ. ಡಾಕ್ಟರಿಗೆ ಇವರ ಭಾಷೆ ಗೊತ್ತಿಲ್ಲ. ಆದರೆ ಈ ಕಷ್ಟವನ್ನು ನಮ್ಮ ಸರಕಾರದವರು ಏನೊಂದು ತೊಂದರೆ ಇಲ್ಲದೆ ತಪ್ಪಿಸಲಿಕ್ಕಾಗುವುದಿಲ್ಲವೇ ? ಮಡಿಕೇರಿಯಲ್ಲಿರುವ ಮೂರುಕೊಡಗು ಡಾಕ್ಟರ ಪೈಕಿ ಒಬ್ಬನನ್ನು ಇಲ್ಲಿಗೆ ಕಳುಹಿಸಿದ್ದಲ್ಲಿ ಜನರಿಗೆಷ್ಟು ಉಪಕಾರವಾಗುತ್ತಿತ್ತು. ಕಾಯಿಲಸ್ತರು ಎಷ್ಟು ಸಂತೋಷಿಸುವರು ಈ ಕಷ್ಟವನ್ನು ಘನ ಸರಕಾರದವರು ಪರಿಹರಿಸಲಿಕ್ಕಿಲ್ಲವೇ ?

„ಕಾಯಿಲಸ್ತ''

ಗಣಪತಿಬೀದಿ ಮಾಘಿ ವಾಚನಾಲಯ.

ಹಿಂದುದೇಶದ ಎಲ್ಲ ಭಾಗಗಳಲ್ಲಿಯೂ ನವಜೀವನದ ಕಳೆಯು ಕಂಗೊಳಿಸುತ್ತಿರುವುದು. ಪ್ರಜಾಹಿತಕ್ಕಾಗಿ ಭಿನ್ನಭಿನ್ನ ಸಂಸ್ಥೆಗಳು ತಮಗೆ ತಕ್ಕುದಾಗಿ ತೋರುವ ರೀತಿಯಲ್ಲಿ ಕೆಲಸಮಾಡುತ್ತಿವೆ. ಜನರು ಅಕ್ಷರಸ್ಥರಾಗಿರಬೇಕಾದುದು ಪ್ರಭುತ್ವದ ಮುಖ್ಯಕಾರ್ಯ. ಜನರು ಬರೇ ಅಕ್ಷರಸ್ಥರಾದಮಾತ್ರಕ್ಕೆ ದೇಶಕ್ಕೆ ಏಳ್ಗೆಯುಂಟಾಯಿತೆಂದು ತಿಳಿಯಬಾರದು. ಪ್ರತಿ ಪ್ರಜೆಯು ತನ್ನ ಸ್ಥಾನವನ್ನು ಅರಿತುಕೊಂಡು, ತನ್ನ ವೃತ್ತಿಯಿಂದ ಹೆಚ್ಚು ಪ್ರಯೋಜನದರೆಯಬೇಕಾದರೆ, ಅಂಥ ಮನುಷ್ಯನು ತನಗಿಂತಲೂ ಹೆಚ್ಚು ಅನುಭವವಿರುವವರ ಜತೆಯಲ್ಲಿರಬೇಕು ಇಂಥ ಅನುಭವಶಾಲಿಗಳು ನಮ್ಮೊಳಗಿರುವುದು ಅತಿ ಕಡಿಮೆ ಆದರೆ ಹೆಚ್ಚಿನ ಲೋಕಾನುಭವವನ್ನೂ, ತನ್ನ ವೃತ್ತಿಯ ಕುರಿತು ಅನುಭವವನ್ನೂ ಪಡೆಯಲಿಕ್ಕೆ ಮನುಷ್ಯನಿಗೆ ಬೇರೆ ಅನುಕೂಲವೂ ಇದೆ.

ವಾಚಕಮಂದಿರದಲ್ಲಿ ಅನೇಕ ವೃತ್ತಾಂತಪತ್ರಿಕೆಗಳು, ಮಾಸಪತ್ರಿಕೆಗಳು ಇರುವಾಗ ಜನರು ಇವುಗಳನ್ನು ಓದಿಕೊಂಡು ಬುದ್ಧಿಶಾಲಿಗಳಾಗಲು ಅನುಕೂಲವಿಲ್ಲವೇ ? ಬರೋಡ ಮತ್ತು ಮೈಸೂರು ಸೀಮೆಗಳಲ್ಲಿ ಸಾಮಾನ್ಯಜನರಲ್ಲಿ ವಾಚನಾಭಿರುಚಿಯನ್ನು ಹುಟ್ಟಿಸುವುದಕ್ಕಾಗಿ ಪ್ರತಿಯೊಂದು ಹಳ್ಳಿಯಲ್ಲಿ ಒಂದೊಂದು ಸಣ್ಣ ವಾಚನಾಲಯವನ್ನು ಸ್ಥಾಪಿಸಿರುವರು ಜನರು ವಿದ್ಯಾವಂತರೂ, ಬುದ್ಧಿವಂತರೂ ಆದರೆ ದೇಶದ ಆರ್ಥಿಕ ಸ್ಥಿತಿಯು ಉತ್ತಮವಾಗುವುದು ಆದುದರಿಂದಲೇ ವಿವೇಕಶಾಲಿಗಳಾದ ಉಪಕಾರಕರು ಅನೇಕ ವಾಚನಾಲಯಗಳನ್ನು ಸ್ಥಾಪಿಸಿ ಯಶಸ್ವಿಗಳಾಗಿರುವರು

ಶಾಲೆಯಲ್ಲಿದ್ದ ಬಿಡುಗಡೆಯಾದಕೂಡಲೆ ಒಬ್ಬನ ವಿದ್ಯಾಭ್ಯಾಸವು ಮುಗಿಯಿತೆಂದು ತಪ್ಪು ತಿಳಿಯಬಾರದು. ನಿಜವಾದ ವಿದ್ಯಾಭ್ಯಾಸವು ಆರಂಭವಾಗುವುದು ಶಾಲೆ ಬಿಟ್ಟನಂತರವೇ ಅನೇಕ ಪದವೀಧರರಿಗಿಂತಲೂ ಸಾಮಾನ್ಯವಿದ್ಯೆಯನ್ನು ಪಡೆದವರೊಳಗೆ ಹಲಕೆಲವರು ಹೆಚ್ಚು ಬುದ್ಧಿವಂತರಾಗಿಯೂ, ಐಶ್ವರ್ಯವಂತರಾಗಿಯೂ, ನಾಮಧಾರಿಗಳಾಗಿಯೂ ಇರುವ ಸಂಗತಿಯು ನಮಗೆ ತಿಳಿದಿದೆ ಅನುಭವವನ್ನು ಪಡೆಯಲಿಕ್ಕೆ ಪುಸ್ತಕಗಳಷ್ಟು ಅನುಕೂಲ ಹೆಚ್ಚು ಒಬ್ಬೊಬ್ಬನೇ ಅನೇಕ ಪತ್ರಗಳನ್ನೂ ತರಿಸಲಿಕ್ಕೂ, ಅನೇಕ ಪುಸ್ತಕಗಳನ್ನು ಕೊಂಡು ಇಟ್ಟುಕೊಳ್ಳಲಿಕ್ಕೂ ಸಾಧ್ಯವಿಲ್ಲ. ಆದುದರಿಂದ ಹತ್ತು ಮಂದಿಗಳು ಸೇರಿ ಇಂಥ ಭಾರವಾದ ಕೆಲಸವನ್ನು ಕೈಗೊಳ್ಳುವುದು

ಮಡಿಕೇರಿಯಲ್ಲಿ ವಾಚನಾಶಾಲೆಯೊಂದು ಇಲ್ಲದಿರುವುದು ವ್ಯಸನಕರವಾದ ಮಾತೇ ಸರಿ ಜನರ ಉಪಕಾರಾರ್ಥವಾಗಿ ಮುನಿಸಿಪಾಲ್ಟಿಯವರು ಒಂದು ವಾಚನಾಲಯವನ್ನು ತೆರೆಯಬಹುದಿತ್ತು ಆದರೆ ಯಾವ ಮೆಂಬರಿಗೂ ಈ ವಿಚಾರವು ಹೊಳೆಯದೇ ಇದ್ದದ್ದು ಮತ್ತೂ ವಿಷಾದಕರ ಆಗಲಿ ಇವರ ಬದಲಿಗೆ ಇತರ ಪ್ರಜೆಗಳೇ ಹೆಚ್ಚು ಮನನತ್ತಿನಿಂದ ಗಣಪತಿಬೀದಿಯಲ್ಲಿ ಒಂದು ವಾಚನಾಲಯವನ್ನು ಸ್ಥಾಪಿಸಿರುವರು ಇದನ್ನು ಸುಸೂತ್ರವಾಗಿ ನಡೆಸುವ ಭಾರವು ಮಹಾಜನರಮೇಲೇ ಅಲ್ಲ, ಮುನಿಸಿಪಲ್ ಮೆಂಬರರಮೇಲೂ ಬಿದ್ದಿದೆ ಈ ವಾಚನಾಲಯಕ್ಕೆ ಮೊದಲು ಮುನಿಸಿಪಾಲಿಟಿಯವರು ಗ್ರಾಂಟು ಕೊಡುವಂತೆ ಮೆಂಬರರು ಪ್ರಯತ್ನಿಸಬೇಕು. ಹಣವಂತರಿಂದ ದ್ರವ್ಯಸಹಾಯವನ್ನು ಕೋರುವುದು. ಹಣ ಕೇರಿದಂತೆ ಪುಸ್ತಕಗಳನ್ನು ತರಿಸಿ ಮಂದಿರದಲ್ಲಿ ಓದಲಿಕ್ಕಿಡುವುದು

ಈಗ ಮಂದಿರಕ್ಕೆ ಕೊಡಗು ಅಫೀಸಿನವರು ಕೆಲ ಕನ್ನಡ ಮತ್ತು ಇಂಗ್ಲಿಷ್ ಪತ್ರಗಳನ್ನು ಕಳುಹಿಸುತ್ತಿರುವರಲ್ಲದೆ, ಇತರ ಕೆಲ ಉದಾರಿಗಳು ಇದೇ ತರದ ಸಹಾಯವನ್ನೀಯುತ್ತಿರುವರು ವಾಚನಾಲಯವು ಇವರೆಲ್ಲರಿಗೂ ತುಂಬಾ ರುಣಿಯಾಗಿದೆ.

„ ಹಿತೈಷಿ „

ಅಯ್ಯಾ, ಕೊಡಗು ಸಂಪಾದಕರೇ, ದಯವಿಟ್ಟು ನಿಮ್ಮ ಅನುಕೂಲ್ಯವಾದ ಪತ್ರಿಕೆಯಲ್ಲಿ ಸ್ವಲ್ಪ ಸ್ಥಳ ಕೊಟ್ಟು ಈ ಕೆಳಗಿನದನ್ನು ಮ|| C K Kuttapa ನವರು "ಕೊಡಗು" ೨೧-೩-೨೪ ರಲ್ಲಿ ಬರೆದ ಲೇಖನಕ್ಕೆ ನನ್ನ ಅಭಿಪ್ರಾಯಗಳಾಗಿ ಬರೆಯಬೇಕಾಗಿ ಬೇಡುತ್ತೇನೆ. ಇವರ ಈ ಮೇಲೆ ಹೇಳಿದ ಲೇಖನಕ್ಕೆ ಅನೇಕ ಜನರು ಮಹನೀಯರು ಉತ್ತರಗಳನ್ನು ಬರೆಯುತಿರಲಾರರು. ಆದರೆ ನನ್ನದನ್ನು ಅವರ ಜೊತೆಯಲ್ಲಿ ಒಂದು ಚಿಕ್ಕ ಉತ್ತರವಾಗಿ "ತುಂತುರುತುಂತುರು ನೀರು ಸೇರಿ ಮಹಾ ಸಾಗರವಾಗುವುದು" ಎಂಬ ನಾಣ್ನುಡಿಯೋಪಾದಿ ನಡಿಸಿಕೊಳ್ಳಬೇಕಾಗಿ ಬೇಡುತ್ತೇನೆ.

ನಮ್ಮ ಈ ವರ್ಷದ ಕೊಡಗು ಪೇಪರಿನಲ್ಲಿ "ಕೊಡಗರು ಯಾರು" ಎಂಬುವುದನ್ನು ಕಂಡುಹಿಡಿಯಲಿಕ್ಕಾಗಿ ಬರೆದ ಒಂದು ಲೇಖನವನ್ನು ನಾವೆಲ್ಲರೂ ಓದಿರುತ್ತೇವೆ. ಇದರ ಒಂದು ಭಾಗದಲ್ಲಿ ಹೇಳುವುದೇನೆಂದರೆ "ಕೊಡಗರೇ ಕೊಡಗಿನ ಮೂಲನಿವಾಸಿಗಳು" ಬೇರೆ ಜನರು ನಮ್ಮ ಅಕ್ಕಪಕ್ಕ ದೇಶಗಳಿಂದ ಈಚೆಗೆ ಬಂದವರು. ಹೀಗಿರುವಾಗ ಕೊಡಗರಲ್ಲದವರನ್ನು ನಮ್ಮ ಪದ್ಧತಿಗಳಿಗೆ ವಿರೋಧವಾಗಿ ವಿವಾಹಮಾಡಿಕೊಂಡು ನಮ್ಮ ಪಿತ್ರಾರ್ಜಿತ ಆಸ್ತಿಗಳನ್ನು ವಾರಿಸ'ದಾರರಿದ್ದಹಾಗೆ ಇತರ ಜಾತಿಯ ಹೆಂಗಸರಿಂದ ಹುಟ್ಟಿದ ಮಕ್ಕಳಿಗೆ ಬಹಳ ಸ್ವಲ್ಪ ಜನರು ಕೊಡುವರೆಂಬುವುದು ನನ್ನ ಅಭಿಪ್ರಾಯ. ಆದರೆ ಇತರ ಜಾತಿಯವರನ್ನು ನಮ್ಮ ಕೊಡಗು ಜಾತಿಗೆ ಸೇರಿಸಿಕೊಂಡು ವಿವಾಹ ಮೊದಲಾದವುಗಳನ್ನು ಬೆಳಸುವುದಕ್ಕೆ ನಮ್ಮಲ್ಲಿ ಅಡ್ಡಿ ಇರಲಿಲ್ಲವೆಂದು ನನ್ನ ಅಭಿಪ್ರಾಯ.

ಯಾಕೆಂದರೆ ಈಗೀಗ ಎಷ್ಟೆಷ್ಟೋ ಹಿಂದು ಕ್ರಿಸ್ತರನ್ನು ಮತ್ತು ಇತರ ಮತದವರನ್ನು ಪುನಹ ನಮ್ಮ ಹಿಂದೂ ಮತಕ್ಕೆ ಹಿಂದೂ ಪಂಡಿತರು ಶಾಸ್ತ್ರ ವೆತಿರಿಕ್ತವಾಗಿ ತೆಗೆದುಕೊಂಡಿರುತ್ತಾರೆ.

ದೂರದಲ್ಲಿರುವ ಕೊಡಗ

ತಾರೀಕು ೨೧-೩-೨೪ ಕೊಡಗು ಪತ್ರಿಕೆಯಲ್ಲಿ ಮ. ಸಿ. ಕೆ. ಕುಟ್ಟಪ್ಪನವರು ಕೇಳಿಕೊಂಡ ಕೊಡಗರಾದ ನಮ್ಮ ಪದ್ಧತಿ ಬಲ್ಲವರು ಪತ್ರಿಕೆಯಮೂಲಕ ಜವಾಬನ್ನು ಎಲ್ಲರಿಗೂ ತಿಳಿಯುವಂತೆ ಬರೆಯಬೇಕಾಗಿ ಕೇಳಿಕೊಂಡ ಪ್ರಶ್ನೆಗಳಿಗೆ ದೇಶಸ್ಥರಾದ, ಅನುಭವಿಕರಾದ, ಬಲ್ಲವರು ಈವರೆಗೂ ಜವಾಬು ಕೊಡದೆ ಇರುವುದು ವಿಷಾದಕರವೇ ಸರಿ. ಆದರೆ ಸದರಿ ಕುಟ್ಟಪ್ಪನವರ ಪ್ರಶ್ನೆಗಳಲ್ಲಿ ಕೊಡಗರು ಇತರ ಜಾತಿಗೆ ಸೇರಿದವರನ್ನು ಪುನಃ ಕೊಡಗರಜಾತಿಗೆ ಸೇರಿಸಿಕೊಳ್ಳಬಹುದೋ ಎಂಬ ದೊಡ್ಡ ಮಹತ್ವದಾಗಿದೆ. ದೇಶದವರು ಜವಾಬುಕೊಡದಿರುವ ಪ್ರಸಮ್ಮತದ ಸೂಚನೆಯೆಂದೆ ನಂಬಿಕೆ. ಬದಲೂ ಪ್ರಕಟಿಸಬೇಕಾದ್ದೇ ಹೆಚ್ಚು ಅವಶ್ಯವಾಗಿತ್ತು. ಉಳಿದ ಪ್ರಶ್ನೆಗಳಲ್ಲಿ ನಮ್ಮ ಜಾತಿಗೆ ಬ್ರಾಹ್ಮಣ ಮತ್ತು ಇತರ ಸರಿಸಮಾನ ಗೌಡ, ಒಕ್ಕಲಿಗ, ಅಮ್ಮ ಇತ್ಯಾದಿ ಜಾತಿಯವರನ್ನು ನಮ್ಮಂಥಕ್ಕೆ ತೆಗೆದುಕೊಂಡು ವಿವಾಹ ಬೆಳೆಯಿಸಬಹುದೋಯೆಂಬುದು. ಈ ಪ್ರಶ್ನೆಗಳು ಇತ್ಯರ್ಥವಾಗೆ ಪಕ್ಕಿನ ಆಸ್ತಿಯ ವಿಲೆವಾರಿಯಾಗುವದಾದ್ದರಿಂದ ಆಸ್ತಿ ವಿಷಯ ಹಾಗಿರಲಿ. ಮೇಲ್ಕಂಡ ಪ್ರಶ್ನೆಗಳಲ್ಲಿ ಜಾತಿಯಿಂದ ತೊಲಗಿದವನನ್ನು ಪುನಃ ನಮ್ಮ ಪುರಾತನ ಪದ್ಧತಿಗನುಸಾರವಾಗಿ ಪುನಿತನನ್ನಾಗಿ ಮಾಡಿ ತೆಗೆದುಕೊಳ್ಳುವಲ್ಲಿ ಯಾವ ಅಭ್ಯಂತರವು ಕಾಣುವುದಿಲ್ಲ. ಇದರಿಂದ ನಮ್ಮ ಮತಾಭಿವೃದ್ಧಿಯು ಶ್ರೇಯಸ್ಸು ಉಂಟಾಗುವಲ್ಲಿ ಸಂಶಯವಿಲ್ಲ. ಅಲ್ಲದೆ ಹಿಂದೂ ಧರ್ಮಶಾಸ್ತ್ರರೀತ್ಯಾ ಸ್ವಾಮಿ ಶ್ರದ್ಧಾನಂದರವರು ಎಷ್ಟೋ ಜನರನ್ನು ಈ ರೀತಿ ಉದ್ಧಾರವಮಾಡುವಲ್ಲಿ ಹಿಂದುಮತಕೊಳಪಟ್ಟ ವೇದಬಾಹಿರರಲ್ಲದ ನಮ್ಮಲ್ಲಿ ಖಂಡಿತವಾಗಿ ಸ್ವೀಕರಿಸಿದಲ್ಲಿ ಕಲಂಕವುಂಟಾದರು ಅಡ್ಡಿ ಕಾಣುವುದಿಲ್ಲ.

ಈ ಮೇಲ್ಕಂಡ ವಿಷಯಗಳು ಲೋಕಸಮ್ಮತ ನ್ಯಾಯಸಮ್ಮತ ಧರ್ಮಮಾರ್ಗವಾಗಿರುವುದರಿಂದ ಪ್ರತಿಯೊಬ್ಬನು ಇದಕ್ಕೆ ಅಭಿಮಾನವಿಟ್ಟು ಈ ಕ್ಷಯಿಸಿಕೊಂಡಿರುವ ಸಮಾಜವನ್ನು ವೃದ್ಧಿಗೊಳಿಸಿ ಇಹದಲ್ಲಿ ಕೀರ್ತಿಯನ್ನೂ ಪರದಲ್ಲಿ ಪುಣ್ಯವನ್ನೂ ಸಂಪಾದಿಸುವಲ್ಲಿ ಸಂದೇಹವಿಲ್ಲ.

ಕೆ. ಯಂ. ಮಂದಣ್ಣ, ಬಿ. ಎ., ಯಂ. ಎಲ್. ಸಿ.

WANTED.

Two Second-hand Motor Bicycles

M. M. SIDDEEK,

22—22 MERCARA.

ಮಾರಾಟಕ್ಕೆ.

I ಕಡಂಗಮರೂರು ಗ್ರಾಮದ ಸರ್ವೆನಂಬರು 64 ರ 2 77 ಎಕರೆಯಾದ ಭೂಮಿ ಒಂದು

II ಡಿಟ್ಟೋ ಸರ್ವೆನಂಬರು 69 ರ 0 39 ಎಕರೆಯಾದ ಜಮೀನು ಒಂದು

III ಡಿಟ್ಟೋ ಸರ್ವೆ ರ 7 48 ಎಕರೆಯಾದ ಬಾಣೆ

IV ಡಿಟ್ಟೋ ಸರ್ವೆನಂಬರು 1 ರ 0 11 ಎಕರೆಯಾದ ಕೆರೆ ಮತ್ತು ಬಾಗ ಸಹ ಇದರಲ್ಲಿ ದಾಮಾಶಾಯಪ್ರಕಾರ

V ಅರಮೇರಿ ಗ್ರಾಮದಲ್ಲಿ ಸ. ನಂ. 337 ರ 0 34 ಎಕರೆಯಾದ ಪರಾಧೀನದ ಬಾಗ ಇದರಲ್ಲಿ ಇರುವ ಮೂರಂಕಣದ ಹುಲ್ಲು ಚಾವಣಿಮನೆ, ಎರಡು ಕೊಟ್ಟಿಗೆ ಮತ್ತು ಕಿತ್ತಳೆ ತೋಟ ಸಹ ಇರುವ ಆಸ್ತಿ ಒಂದು

ಇಂತಿಷ್ಟು ಆಸ್ತಿಗಳು ಎರಡುಸಾವಿರ ರೂಪಾಯಿಗಳಿಗೆ ಮಾರಾಟವಾಗಲ್ಪಡುತ್ತವೆ. ಖರೀದಿಸುವವರು ಅವರ ಇರಾದೆ ಖರೀದು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಬೇಕಾಗಿದೆ.

ವಿಳಾಸ—ಕೆ. ಕೆ. ಮುತ್ತಣ್ಣ, K K Muttanna

ಕಾಟ್ಟಬಾಣೆತೋಟ ಸಿದ್ದಾಪುರ ಪೋಸ್ಟು

ತಾ|| 27—5—24 [3—3]

NOTICE.

We have pleasure in informing the Travelling Public that on and from the 1st July 1924, we running Motar Bus service from Sidapur to Yedatore, as per the following time Table —

(1)	Hunsur Departure	at 8-30 A M
(2)	Yedatore arrive	at 9 40 A.M
(3)	Do Depart	at 9 50 A M
(4)	Hunsur arrive	at 11 0 A M
(5)	Do Depart	at 11 15 A M
(6)	Sidapur arrive	at 1 45 P M
(7)	Do Depart	at 2 30 P M
(8)	Hunsur arrive	at 5 0 P M
(9)	Do Depart	at 5 10 P M
(10)	Yedatore arrive	at 6 20 P M
(11)	Do Depart	at 6 30 P M
(12)	Hunsur arrive	at 7 40 P M

The charge per ticket will be as follows —

Hunsur to Yedatore @ As 12/-

Do to Periyapatam @ As 12/

Do to Sidapur @ Rs 2 -

Your patronage is solicited,

Manager,

15 6-24 *The Hunsur Works, Hunsur*

[4—2]

ಬಿಕ್ಕಲಗರಿಗ

ಇದೊಂದು ಸಂದರ್ಭ



ನಮ್ಮ ಕಾರ್ಖಾನೆಯಲ್ಲಿ ಎರಡು ಮಾದರಿಯ ಕಣಕ ಕೊರೆಯುವ ಯಂತ್ರಗಳು ದೊರೆಯುತ್ತವೆ. ಈ ಯಂತ್ರಗಳಲ್ಲಿ ಒಂದನ್ನು ತರಿಸಿಕೊಂಡು ನಿಮ್ಮ ಮೇವಿನಲ್ಲಿ ಉಳಿತಾಯ ಮಾಡಿಕೊಳ್ಳಿರಿ. ಮೇವು ಸಣ್ಣಗೆ ಕತ್ತರಿಸಿ ಬೀಳುವದರಿಂದ ದನಗಳು ನಿರಾಯಾಸವಾಗಿ ತಿನ್ನುತ್ತವೆ. ಬೆಲೆ ಅಗ್ಗ.

'ಕೊ' ಕ್ಯಾಟಲಾಗನ್ನು ತರಿಸಿಕೊಳ್ಳಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್,

[16—18] ಕಿರ್ಲೋಸ್ಕರವಾಡಿ ಜಿಲ್ಲಾ-ಸಾತಾರಾ.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವವಿಮೆಯ ಕಂಪನಿ, ಲಿಮಿಟೆಡ್,

(ಹೆಡ್ಡ್ ಆಫೀಸು ಬೊಂಬಾಯಿ)

ಹಿಂದೂಸ್ತಾನದಲ್ಲಿ ಕಳೆದ ಐವತ್ತು ವರ್ಷಗಳಿಂದಲೂ ಜೀವವಿಮೆಯ ಅನುಭವವನ್ನು ಪಡೆದಿರುವ ದೇಶೀಯ ಜೀವವಿಮೆ ಸಂಘಗಳಲ್ಲಿ ಅತ್ಯಂತ ದೊಡ್ಡದೂ ಮತ್ತು ಭದ್ರವಾದದ್ದೂ ಆದ "ಓರಿಯಂಟಲ್" ನ ಜೀವವಿಮೆ ಪತ್ರಕ್ಕಿಂತಲೂ ಉತ್ತಮವಾದ ಆಸ್ತಿ ಬೇರೆ ದೊರೆಯಲಾರದು

ಈಗಾಗಲೇ ವಿಮೆಸಂದಾಯಕವಾದ ಮೊತ್ತ 8 00 00,000

ಕೈಯಲ್ಲಿ ಮುಂದೆ ಬರಬಹುದಾದ ಬಾಕಿದಗಳ

ನ್ನು ಸುದಾರಿಸಲಿಕ್ಕಿಟ್ಟುಕೊಂಡಿರುವ ಹಣ 6 00 00 000

ವಾರ್ಷಿಕ ಉತ್ಪತ್ತಿ 1 60 00 000

ಇಷ್ಟು ಭದ್ರತೆಯುಳ್ಳ ಕಂಪನಿಯಲ್ಲಿ ಜೀವವಿಮೆಯ ಪತ್ರ ತೆಗೆದುಕೊಳ್ಳಬಿಚ್ಛಿಸುವವರು ಯಾ, ಇದರ ವಿಷಯ ಹೆಚ್ಚಿನ ಸಂಗತಿ ತಿಳಿಯಬೇಕೆಂದಿರುವವರು ದಯವಿಟ್ಟು ಈ ಕೆಳಗಿನವರಿಗೆ ಬರೆದುಕೊಳ್ಳುವುದು.

ಕೆ. ಪಿ. ಚಿಣ್ಣಪ್ಪನವರು,

ಓರಿಯಂಟಲ್ ಏಜನ್ಸೀ ಆಫೀಸು

[24—3] ವಿರಾಜಪೇಟೆ ದಕ್ಷಿಣಕೊಡಗು

ಅತ್ಯದ್ಭುತಗುಣಕಾರಿಯಾದ ಚೇಳಿನ ಔಷಧ.

ಪ್ರತಿ ಮನೆಯಲ್ಲಿ ಖಂಡಿತ ಇರತಕ್ಕದ್ದು

ಗುಣವಾಗದಿದ್ದರೆ ಖಂಡಿತ ಹಣ ವಾಪಸು ಕಳುಹಿಸುತ್ತೇವೆ.

ಒಂದುಸಾರಿ ತರಿಸಿ ಪರೀಕ್ಷಿಸಿರಿ

ಯಾವ ಚೇಳು ಆದರೂ ಕಚ್ಚಿದಕೂಡಲೆ ಈ ಔಷಧವನ್ನು ಹಾಕಿದ ತಕ್ಷಣವೇ ವಿಂದ್ದು ಇಳಿದು ಉರಿ ಚಳುಕು ಗುಣವಾಗುವದು. ಅನುಭವಸಪತ್ರಿಕೆಯನ್ನು ಬಾಟ್ಲಿ ಸಂಗಡ ಕಳುಹಿಸುತ್ತೇವೆ. ಬಾಟ್ಲಿ 1 ಕ್ಕೆ 0—8—0 ಆಣೆ. ಆರು ಬಾಟ್ಲಿಗಳನ್ನು ತರಿಸಿಕೊಂಡರೆ 1 ಬಾಟ್ಲಿ ಕಮಿಷನ್. ಹನ್ನೆರಡು ಬಾಟ್ಲಿಗಳನ್ನು ತರಿಸಿಕೊಂಡರೆ 3 ಬಾಟ್ಲಿ ಕಮಿಷನ್ ಕೊಡುತ್ತೇವೆ

ನಮ್ಮ ವಿಳಾಸ —

ಜಾಲಪ್ಪದೇವರ ಮಠದ ಸಿದ್ಧಾಂತಿಗಳು

ಹರಪನಹಳ್ಳಿ, ಜಿಲ್ಲಾ ಬಳ್ಳಾರಿ

[12—7]

ಜೀವವಿಮೆ.

ಸಾವಿರಾರು ಕುಂಟುಂಬಗಳಲ್ಲಿ ಸಂಪಾದನೆಯ ಯಜಮಾನನು ಮೃತಪಟ್ಟರೆ ಉಂಟಾಗಬಹುದಾದ ತೊಂದರೆಗಳನ್ನು ನಿವಾರಿಸುವುದೇ ಜೀವವಿಮೆ

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬದ ಜೀವನಾಧಾರಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ

ಅತಿ ಕಡಮೆ ದರದಲ್ಲಿ ಯಾವ ಲೋಪವೂ ಬಾರದಂತೆ ಕ್ಷಿಪ್ರದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ಮೈಸೂರಿನ ಸರಕಾರದ ಭದ್ರತೆಯುಳ್ಳ ಜೀವವಿಮೆ ಕಂಪನಿ.

ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ಕಾಲವರಿಗೆ ಹಣವನ್ನು ಒದಗಿಸಿ ಸ್ವರಾಜ್ಯಗಳನ್ನೂ ಕೊಂಡುಕಟ್ಟಿ ದೇಶದ ಆರ್ಥಿಕ ಸಂಪತ್ತನ್ನು (Economic Condition) ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೆ!

ಲೈಫ್ ಇನ್ಸೂರೆನ್ಸು ಆಕ್ಟಿನ ಮೇರೆ ಇಂಡಿಯಾ ಗವರ್ನಮೆಂಟ್ ಸೆಕ್ಯೂರಿಟಿಗಾಗಿ ಸಲ್ಲಬೇಕಾದ 12 ಲಕ್ಷರೂಪಾಯಿ ಸೆಕ್ಯೂರಿಟಿಗಾಗಿಯೂ ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿಗೆ ಸಲ್ಲಬೇಕಾದ 1 ಲಕ್ಷರೂಪಾಯಿ ಸೆಕ್ಯೂರಿಟಿಗಾಗಿಯೂ ಇಂಪೀರಿಯಲ್ ಬ್ಯಾಂಕ ಆಫ್ ಇಂಡಿಯಾ ಬ್ಯಾಂಕಿನ ಮದ್ರಾಸಿನ ಶಾಖೆಯಲ್ಲು 1 ಲಕ್ಷ ಗವರ್ನಮೆಂಟ್ ಆಫ್ ಇಂಡಿಯ ಸೆಕ್ಯೂರಿಟಿಯನ್ನು ಅರ್ಧಲಕ್ಷ ಮೈಸೂರು ಸೆಕ್ಯೂರಿಟಿಯನ್ನು ಡಿಪಾಜಿಟ್ಟಾಗಿ ಇಟ್ಟಿರುತ್ತೆ. ಬಾಕಿ ಒಂದು ಲಕ್ಷ ಇಂಡಿಯ್ಯ ಗವರ್ನಮೆಂಟ್ ಸೆಕ್ಯೂರಿಟಿಗೆ ಬ್ಯಾಂಕ್ ಮೂಲಕ ಏರ್ಪಾಡು ಮಾಡುತ್ತೆ.

ಬಿ. ಎನ್. ಆರಾಧ್ಯ,

ರಿಲೈಫ್ ಅಂಡ್ ಮ್ಯಾರೇಜ ಆಫೀಸ್ ಮಡಿಕೇರಿ

Printed & Published by D S Krishnaswamiengar Proprietor, at Sreenivas Electric Press, Mysore "for Kodagu" Ltd., Mercara—27 6 1924

Reg. No. M. 1550.

If not delivered please return to "KODAGU" OFFICE MERCARA."

ಕೊಡಗು.

[illegible]

[illegible]

THE MANAGER,
"KODAGU" Ltd., MERCARA.

The Saraswathi Publishing Company.

[illegible]

1. [illegible]		0 6 0
2. [illegible]		0 10 0
3. [illegible]		0 12 0
4. [illegible]		0 8 0
5. [illegible]		0 1 0
6. [illegible]		0 4 0
7. [illegible]		0 4 0

[illegible]

SARASWATHI PUBLISHING Co.,
Post Box No. 57, Bangalore City.

Health is Wealth.

WANTED all to improve health strength and vitality and thus save our nation from physical degeneracy. Send half-anna stamp and get 25 specimen photographs with full particulars from

Director, Physical Culture,
P. O. P[illegible]
[illegible]

[illegible]

SPENCER & Co., Ltd.

Mercara, and Polibetta, Coorg.

[24—12]

When you think of going to Bombay
THINK OF

THE WELCOME HOTEL
Girgaum Back Road, BOMBAY.

M[illegible] accomodation—Most central situation—Excellent Meals
Every convenience

[illegible]

[24—4]

For your requirements of high grade Arms, Ammunition, Wine and spirits

APPLY TO

M[illegible] Dov[illegible]ll & Co., Ltd.
[illegible]MERCAR[illegible]

[illegible]

Apply to—
A. B. CHENGAPA,
[illegible] Virajpet.
C. [illegible]AYA,
[illegible]

ಪ್ರಕಟನೆ.

[illegible]

[illegible]	59,000
[illegible]	6,820
[illegible]	61,200

[illegible]